ಪ್ರೊ. ಸಾ. ಕೃ. ರಾಮಚಂದ್ರ ರಾವ್

ಮೂರ್ತಿ ಶಿಲ್ಪ
ನೆಲೆ-ಹಿನ್ನೆಲೆ

ಸುರಮಾ ಪ್ರಕಾಶನ
ಬೆಂಗಳೂರು

ಮೂರ್ತಿ ಶಿಲ್ಪ
ನೆಲೆ-ಹಿನ್ನೆಲೆ

ವಿದ್ಯಾಲಂಕಾರ
ಪ್ರೊ. ಸಾ. ಕೃ. ರಾಮಚಂದ್ರರಾವ್

ಸುರಮಾ ಪ್ರಕಾಶನ
ಪ್ರೊ. ಸಾ. ಕೃ. ರಾಮಚಂದ್ರ ರಾವ್ ಸ್ಮಾರಕ ನಿಧಿ,
ಬೆಂಗಳೂರು-೧೧

Murti shilpa, Nela-hinnele, by Prof S. K. Ramachandra Rao, reprinted by Dr. S. R. Sudarshan for Surama Prakashana, the publication wing of the **Prof S. K. Ramachandra Rao Memorial Trust** ®, 305, 6th cross, I Block, Jayanagar, Bangalore 560011
Phone: 080-26563957
Website: www.profskr.com

First Edition: 1975
Second Edition: 2013

ಚಿತ್ರಗಳು: ಪ್ರೊ. ಸಾ. ಕೃ. ರಾಮಚಂದ್ರರಾವ್.

Cover page: Dancing Krishna, Prince of Wales Museum.

ಪ್ರಕಾಶಕರ ಮಾತು

ನನ್ನ ತಂದೆಯವರ **‘ಮೂರ್ತಿ ಶಿಲ್ಪ, ನೆಲೆ-ಹಿನ್ನೆಲೆ’** ಎಂಬ ಪುಸ್ತಕವನ್ನು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದವರು ೧೯೭೫ ರಲ್ಲಿ ಪ್ರಕಟಿಸಿದರು. ಕಲಾಸಕ್ತರಿಗೆ, ಸಂಶೋಧಕರಿಗೆ ಮತ್ತು ವಿದ್ವಾಂಸರಿಗೆ ಅತ್ಯುಪಯುಕ್ತವಾದ ಈ ಗ್ರಂಥಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಯು ದೊರಕಿತು.

ಈ ಪುಸ್ತಕ ಹಲವಾರು ವರ್ಷಗಳಿಂದ ಉಪಲಬ್ಧವಾಗಿಲ್ಲದ ಕಾರಣ ನಾವು ಈ ಪುಸ್ತಕವನ್ನು ಮರುಮುದ್ರಣಮಾಡಬೇಕೆಂದು ಪ್ರಸಾರಾಂಗದ ಅನುಮತಿಯನ್ನು ಕೋರಿ ೨೦೧೨ ರಲ್ಲಿ ಒಂದು ಪತ್ರವನ್ನು ಬರೆದವು. ಅವರಿಂದ ಶೀಘ್ರವೆ ಒಂದು ಪ್ರತ್ಯುತ್ತರ ಬಂತು-ಅವರಲ್ಲಿ ಈ ಗ್ರಂಥದ ಒಂದು ಪ್ರತಿಯೂ ಇಲ್ಲ, ನಾವು ಇದರ ಪ್ರತಿಯನ್ನು, ಅಥವಾ ಅದರ ಟ್ರೇಸಿಂಗ್/ಸ್ಕ್ಯಾನಿಂಗ್ ಪುಟಗಳನ್ನು ಕಳುಹಿಸಿಕೊಟ್ಟರೆ, ಅವರು ಕೆಲವೇ ತಿಂಗಳುಗಳಲ್ಲಿ ಈ ಪುಸ್ತಕವನ್ನು ಮರುಮುದ್ರಣ ಮಾಡುತ್ತೇವೆ, ಎಂದು. ನಾವು ನಮ್ಮಲ್ಲಿದ್ದ ಪ್ರತಿಯನ್ನು ಮತ್ತು ಅದರ pdf ಅನ್ನು ಅವರಿಗೆ ಕೊಟ್ಟೆವು. ಆದರೆ ಸುಮಾರು ಒಂದು ವರ್ಷವಾದರೂ ಈ ಗ್ರಂಥ ಹೊರಬಂದಿಲ್ಲ. ಆದುದರಿಂದ ನಾವೇ ಇದನ್ನು ಮರು ಮುದ್ರಿಸುತ್ತಿದ್ದೇವೆ.

ಈ ಪುಸ್ತಕದ ಸ್ಕ್ಯಾನಿಂಗ್ ಮಾಡಿಸಿದ ಓಂಕಾರ್ offsets ನ ಶ್ರೀ ವೆಂಕಟೇಶ ಬಾಬು ಅವರಿಗೂ ಹಾಗೂ ಅಂದವಾಗಿ ಮುದ್ರಣ ಮಾಡಿದ ಭವಿಷ್ ಗ್ರಾಫಿಕ್ಸ್ ಅವರಿಗೂ ನಮ್ಮ ವಂದನೆಗಳು. ಮುಖಪುಟವನ್ನು ಸುಂದರವಾಗಿ ರೂಪಿಸಿದ ಶ್ರೀ ಮೈತ್ರೇಯ ಜಗಳೂರ್ ಅವರಿಗೆ ನಮ್ಮ ಕೃತಜ್ಞತೆಗಳು.

೦೯-೦೮-೨೦೧೩ ಸಾ. ರಾ. ಸುದರ್ಶನ,
ವಿಜಯ ಸಂವತ್ಸರ, ಶ್ರಾವಣ, ನಿರ್ವಾಹಕ,
ಶುಕ್ಲ, ತೃತೀಯ ಪ್ರೊ. ಸಾ. ಕೃ. ರಾಮಚಂದ್ರ ರಾವ್ ಸ್ಮಾರಕ ನಿಧಿ.

ಮುನ್ನುಡಿ

ಆದಿಕಾಲದಿಂದ ಇಂದಿನವರೆಗೂ ವಾಸ್ತುಶಿಲ್ಪ—ಮೂರ್ತಿಶಿಲ್ಪಗಳ ಪ್ರಭಾವ ಬಿಡದೆ ಮೂಡಿಬಂದಿದೆ. ಅವುಗಳ ಅಧ್ಯಯನವನ್ನು ಉಚ್ಚಮಟ್ಟದಲ್ಲಿ, ವಿಮರ್ಶೆ—ಸಂಶೋಧನಗಳಿಂದ ಕೂಡಿದಂತೆ ನಡೆಸುವುದು ವಿಶ್ವವಿದ್ಯಾಲಯದ ಕೆಲಸಗಳಲ್ಲಿ ಒಂದು. ಈ ವಿಷಯಕ್ಕೆ ಸಂಬಂಧಿಸಿದ ಕೃತಿಯೊಂದನ್ನು ನಮ್ಮ ವಿಶ್ವ ವಿದ್ಯಾಲಯವು ಇದೀಗ ಹೊರತರುತ್ತಿದೆ. ಅಂತೆಯೇ ಲಲಿತ ಕಲೆಗಳ ಹಾಗೂ ಉಪಯುಕ್ತ ಕಲೆಗಳ ವಿಚಾರವಾಗಿ ಇನ್ನೂ ಇಂಥಹ ಹಲವಾರು ಕೃತಿಗಳನ್ನು ಪ್ರಕಟಿಸುವ ಯೋಜನೆ ವಿಶ್ವವಿದ್ಯಾಲಯಕ್ಕಿದೆ.

ದೇಶದ ಸಂಸ್ಕೃತಿಯನ್ನು ಧರ್ಮ ಮತ್ತು ಕಲೆಗಳ ದೃಷ್ಟಿಯಿಂದ ಅಧ್ಯಯನ ಮಾಡುವ ಕಾರ್ಯ ಈಗಾಗಲೇ ಸಾಕಷ್ಟು ನಡೆದಿದೆ. ಆದರೆ ಅದರ ಸಾಮಾಜಿಕ ಹಿನ್ನೆಲೆ ಮತ್ತು ಮನೋವೈಜ್ಞಾನಿಕ ನೆಲೆ ಗಳನ್ನು ಪರಿಶೀಲಿಸುವ ಪ್ರಯತ್ನ ಮುಂದುವರಿಯಬೇಕಾಗಿದೆ. ಈ ದಿಸೆಯಲ್ಲಿ ಪ್ರೊ॥ ಎಸ್. ಕೆ. ರಾಮಚಂದ್ರ ರಾವ್ ಅವರ "ಮೂರ್ತಿಶಿಲ್ಪ: ನೆಲೆ ಮತ್ತು ಹಿನ್ನೆಲೆ" ಒಂದು ಸಾರ್ಥಕ ಪ್ರೌಢ ಕೃತಿ. ಈ ಗ್ರಂಥದಲ್ಲಿ ಕಾಣಬಹುದಾದ ಒಂದು ವಿಶಿಷ್ಟ ಅಂಶವೆಂದರೆ: ಹಲವು ಶಾಸ್ತ್ರ—ಪ್ರಕಾರಗಳ ಮೇಳನ. ವಾಸ್ತು, ಶಿಲ್ಪ, ಕಲೆ ಇವು ಮಾತ್ರವಲ್ಲದೆ, ಧರ್ಮ, ದರ್ಶನ, ಮನೋವಿಜ್ಞಾನ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಪ್ರಾಕ್ತನ-ಪ್ರಾಚ್ಯ ಸಂಶೋಧನೆ ಇವುಗಳ ಸಂವಿಧಾನಗಳೂ ವಿವರಗಳೂ ಈ ಕೃತಿಯಲ್ಲಿ ಕಲೆತು ಬಂದಿವೆ.

ಸಾಂಪ್ರದಾಯಿಕ ಮೂರ್ತಿಶಿಲ್ಪದ ಆಧಾರ—ವಿವರಗಳು, ಪ್ರಪಂಚದಲ್ಲೆಲ್ಲ ಕಾಣಬರುವ ಮೂಲಭೂತ ಜಾನಪದ ಪ್ರಕಾರಗಳ ಹಿನ್ನೆಲೆ, ಭಾರತದ ಕೆಲವೆಡೆ ಬಳಕೆಯಲ್ಲಿರುವ ಧಾರ್ಮಿಕ ವಿಧಿಗಳ ವಿಶ್ಲೇಷಣೆ—ಇವೆಲ್ಲ ಈ ಕೃತಿಯಲ್ಲಿ ವಿವರವಾಗಿ ನಿರೂಪಿತವಾಗಿವೆ. ಮೂರ್ತಿಶಿಲ್ಪ ಬೆಳೆದುಬಂದ ಬೇರೆಬೇರೆ ಬಗೆ ಗಳನ್ನು ನಾವಿಲ್ಲಿ ಕಾಣಬಹುದು.

ಮೂರ್ತಿಶಿಲ್ಪದಲ್ಲಿ ಜಾನಪದ ಸಮೀಕ್ಷೆ ಎಷ್ಟು ಪ್ರಮುಖವಾದುದು, ಸಂಸ್ಕೃತಿಗಳು ಕಲೆತಾಗ ಒಂದು ನೆಲೆಯ ವಿವರಗಳು ಇನ್ನೊಂದು ನೆಲೆಗೆ ಹೇಗೆ ಸಾಗುತ್ತವೆ, ಕಲ್ಪನೆಗಳ ಹಿಂದೆ ಅಗತ್ಯಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತವೆ— ಈ ಎಲ್ಲ ಅಂಶಗಳನ್ನು ತೂಗಿನೋಡಿ, ಪರಿಚಯ ಮಾಡಿಕೊಡುವ ಯತ್ನ ಈ ಕೃತಿಯಲ್ಲಿ ನಡೆದಿದೆ. ಈ ಪುಸ್ತಕದ ಅಧ್ಯಯನದ ವ್ಯಾಪ್ತಿ ದೊಡ್ಡದು. ಅದರಲ್ಲಿ ಅಡಕ ವಾಗಿರುವ ಸಂಗತಿಗಳು ಮೂಲಭೂತವಾದುವು. ಸಂಶೋಧನೆ, ವಿಮರ್ಶೆ, ಪರಿಶೀಲನೆ—ಇವು ಕೂಡಿ ಬಂದಿರುವ ಕೃತಿ "ಮೂರ್ತಿಶಿಲ್ಪ: ನೆಲೆ ಮತ್ತು ಹಿನ್ನೆಲೆ".

ಇಂತಹ ವಿದ್ವತ್ಪೂರ್ಣ ಕೃತಿಯನ್ನು ರಚಿಸಿ, ಪ್ರಕಟಣೆಗೆ ಅನುವು ಮಾಡಿಕೊಟ್ಟಿದ್ದಾರೆ ಪ್ರೊ॥ ಎಸ್. ಕೆ. ರಾಮಚಂದ್ರ ರಾವ್ ಅವರು. ಅವರಿಗೆ ವಿಶ್ವವಿದ್ಯಾಲಯವು ತುಂಬ ಋಣಿ. ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಶ್ರೀ ಎಂ. ಎಸ್. ಚಿಂತಾಮಣಿ ಅವರಿಗೆ ನನ್ನ ವಂದನೆಗಳು.

ಎಚ್. ನರಸಿಂಹಯ್ಯ
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ಮೊದಲ ಮಾತು

ನಮ್ಮ ದೇಶದಲ್ಲಿ ಮೂರ್ತಿಶಿಲ್ಪ ಬೆಳೆದಂತೆ ಬೇರೆ ಯಾವ ದೇಶದಲ್ಲಿಯೂ ಬೆಳೆಯಲಿಲ್ಲ. ನಮ್ಮಲ್ಲಿರುವಷ್ಟು ಗುಡಿಗಳು ತಾನೆ ಎಲ್ಲಿವೆ? ಎಷ್ಟು ಸಣ್ಣ ಊರಾಗಲಿ, ಮೂರಾದರೂ ಗುಡಿಗಳಿದ್ದೇ ಇರುತ್ತವೆ. ಪೂಜೆಯಿಲ್ಲದೆ ಪಾಳು ಬಿದ್ದ ಗುಡಿಯಾದರೂ ಶಿಲ್ಪ ಸೊಗಸಾಗಿಯೇ ಇರುತ್ತದೆ. ಪೂಜೆ ಮಾಡದಿದ್ದರೂ ಪ್ರತಿಮೆಗಳನ್ನಾದರೂ ಇರಿಸಿಕೊಂಡಿರದ ಹಿಂದೂ ಮನೆಗಳಿರುತ್ತವೆಯೆ? ಈ ವ್ಯಾಪ್ತಿಗೆ ಕಾರಣ ನಂಬಿಕೆಗಳೇ ಅಲ್ಲ, ಅದಕ್ಕಿಂತ ಹೆಚ್ಚಾಗಿ ಕಲ್ಪನೆಗಳು. ಯಾವ ದೇಶದ ಜನಜೀವನ ದಲ್ಲಾಗಲೀ ನಂಬಿಕೆಗಳಿಗೆ ನಡವಳಿಕೆಗಳಿಗೆ ತಳಹದಿಯಾಗಿ ಕಲ್ಪನೆಗಳು ಇರುತ್ತವೆ. ಎಚ್ಚರವಾಗಿರದೆ ಅರಿವಿನ ನೆಲೆಗೆ ಬರದೆ ಒಳಗೇ ಅಡಗಿಕೊಂಡಿರುವ ಕಲ್ಪನೆಗಳೂ ಕೆಲಸಮಾಡುತ್ತವೆ.

ಒಬ್ಬ ವ್ಯಕ್ತಿಯು ಪಡೆದುಕೊಂಡ, ಅವನ ಅನುಭವದಲ್ಲಿ ಬಂದ, ಕಲ್ಪನೆಗಳಿಗಿಂತ ಇಡೀ ಸಮುದಾಯವು ಒಟ್ಟಾರೆ ಗಳಿಸಿಕೊಂಡ ಕಲ್ಪನೆಗಳು ಒಬ್ಬೊಬ್ಬ ವ್ಯಕ್ತಿಯಲ್ಲಿಯೂ ಅಡಗಿ ಕೊಂಡು ಕೆಲಸಮಾಡುವುದು ಮುಖ್ಯ. ಮನೋವಿಜ್ಞಾನ ಇದನ್ನು 'ಸಾಮುದಾಯಿಕ–ಸುಪ್ತಪ್ರಜ್ಞೆ' (Collective Unconscious) ಎಂದು ನಿರ್ದೇಶಿಸುತ್ತದೆ; ನಮ್ಮೆಲ್ಲರ ದಿನದಿನದ ವ್ಯವಹಾರ ದಲ್ಲಿ ಇದರ ಪಾತ್ರ ಎಷ್ಟು ಹಿರಿದೆಂಬುದನ್ನು ಮನವರಿಕೆಮಾಡಿಕೊಡುತ್ತದೆ. ನಮ್ಮ ಧಾರ್ಮಿಕ ವಿಧಿಗಳು ಮಾತ್ರವಲ್ಲ, ಸಾಮಾಜಿಕ ಕಟ್ಟು ಕಟ್ಟಳೆಗಳೂ, ನೀತಿನಿಯಮಗಳೂ, ಆಟಪಾಟಗಳೂ, ಬಯಕೆಬಿಂಕಗಳೂ ಈ ತೆರೆಯ ಮರೆಯ ಕಲ್ಪನೆಗಳಿಂದ ಪ್ರಭಾವಿತವಾಗುತ್ತವೆ. ಕಲ್ಪನೆಗಳು ಪ್ರತಿಮೆ (image) ಗಳಂತೆ ಮೈದಳೆದು ಮನಸ್ಸಿನ ಪ್ರವೃತ್ತಿಗಳಿಗೆ ದಾರಿತೋರಿಸುತ್ತವೆ, ನಡೆನುಡಿಗಳಲ್ಲಿ ಮೂಡಿ ಬರುತ್ತವೆ.

ನಮ್ಮ ಧಾರ್ಮಿಕ, ಕಲಾತ್ಮಕ ವ್ಯವಹಾರಗಳು ಕೂಡಿಕೊಂಡಿರುವ ದೇವತಾಮೂರ್ತಿ ನಿರ್ಮಾಣ ದಲ್ಲಿ ಈ ಪ್ರತಿಮೆಗಳ ಪ್ರಭಾವವನ್ನು ಗುರುತಿಸಬಹುದು. ಮೂರ್ತಿಶಿಲ್ಪಗಳನ್ನು ಕಲ್ಪಿಸಿಕೊಳ್ಳುವಾಗ ಜನರ ಬಯಕೆಗಳಿಂದ, ಭಯಗಳಿಂದ, ಅಗತ್ಯಗಳಿಂದ ನಿಶ್ಚಯಿಸಲ್ಪಟ್ಟ ಪ್ರತಿಮೆಗಳ ಪಾತ್ರ ದೊಡ್ಡದು; ನಾಡಿನ ವಿಚಾರಧಾರೆಯಲ್ಲಿಯೂ ಇವು ಸೇರಿಯೇ ಬರುತ್ತವೆಯಲ್ಲವೇ? ಮೂರ್ತಿಶಿಲ್ಪದಲ್ಲಿ ಪ್ರಾಚೀನ ಪ್ರತಿಮೆಗಳನ್ನು ಕಾಣುವ, ಕಾಣಿಸುವ ಪ್ರಯತ್ನ ಇಲ್ಲಿ ನಡೆದಿದೆ. ವೇದ, ಆಗಮ, ಪುರಾಣ, ಶಿಲ್ಪಶಾಸ್ತ್ರ, ಕಲಾಶೈಲಿಗಳ ಜೊತೆಜೊತೆಯಲ್ಲಿಯೇ ಜಾನಪದ ಪ್ರತಿಮೆಗಳೂ ಕೆಲಸಮಾಡುವುದನ್ನು ಓದುಗರು ಕಂಡುಕೊಳ್ಳುವುದಾದರೆ ಕೈಗೊಂಡ ಕೆಲಸ ಮುಗಿಯಿತು.

ಈ ಕೆಲಸಕ್ಕೆ ನನ್ನನ್ನು ಉಜ್ಜುಗಿಸಿದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನನ್ನ ಕೃತಜ್ಞತೆ ಸಲ್ಲಬೇಕು; ಪ್ರಕಟನವಿಭಾಗದ ಉಪ-ನಿರ್ದೇಶಕರಾಗಿರುವ ನನ್ನ ಗೆಳೆಯ ಶ್ರೀ ಕೆ. ಸಿ. ಶಿವಪ್ಪನವರಿಗೇ ಅದರ ಬಹುಪಾಲು ಸೇರಬೇಕು. ಅವರ ಪ್ರೀತಿಯ ಒತ್ತಾಯವಿರದಿದ್ದರೆ ಇಷ್ಟು ಕಷ್ಟದ ಕೆಲಸಕ್ಕೆ ಕೈ ಹಾಕುತ್ತಿದ್ದೆನೋ ಇಲ್ಲವೋ !

ಮುದ್ರಣದ ಕೆಲಸ ಎಷ್ಟು ಸೊಗಸಾಗಿ ನಡೆದಿದೆಯೆನ್ನುವುದು ನಿಮ್ಮೆದುರೇ ಇರುವ ವಿಚಾರ. ಅದಕ್ಕೆ ನೆರವಾದವರಿಗೆಲ್ಲ ನಾನು ಋಣಿ. ಈಸ್ಟರ್ನ್ ಪ್ರೆಸ್‌ನ ಮಾಲೀಕರಾದ ಶ್ರೀ ಎಂ. ಎಸ್. ಚಿಂತಾಮಣಿ ಅವರಿಗೆ ನನ್ನ ವಂದನೆಗಳು.

ಎಸ್. ಕೆ. ರಾಮಚಂದ್ರ ರಾವ್

ಪರಿವಿಡಿ

1. ಬದುಕಿನ ಬಯಕೆ

ಸಮುದಾಯದ ಸಂಕೋಲೆ 1
ಅದ್ಭುತ ಸನ್ನಿಧಾನ 4
ಯುಗಳ ಸಂಪ್ರದಾಯ 8
ಸಮನ್ವಯದ ದಾರಿಯಲ್ಲಿ 11
ಪ್ರಾಚೀನ ಪದ್ಧತಿಗಳು 15
ನಾಗ-ಯಕ್ಷ ಸಮುದಾಯ 19

2. ಪೂಜೆ ಪುನಸ್ಕಾರಗಳು

ಗುಡಿಗುಂಡಾರಗಳು 26
ವಾಸ್ತುವಿದ್ಯೆಯ ವೇದಿಕೆ 31
ಉಪಾಸನೆಯ ಆಲಂಬನೆ 37
ಮೂರ್ತಿ ಪೂಜೆ 39
ಪ್ರತಿಮೆಯ ಪ್ರಯೋಜನ 44

3. ಪ್ರತಿಮಾಲಕ್ಷಣ

ಪಿಂಡೀಕರಣ 50
ದೇವ-ಶಿಲ್ಪ, ಭಾವ-ಶಿಲ್ಪ 55
ಮುದ್ರಿಕಾ ದೀಪಿಕೆ 57
ಆಯುಧಮೀಮಾಂಸೆ 64
ಭೂಷಣಭೂಷ್ಯಭಾವ 69

4. ಗಣಪತಿಯ ಗುಟ್ಟು
ವಿನಾಯಕ–ನಯ 75
ಯಕ್ಷಸ್ವರೂಪ 81
ರುದ್ರಗಣ–ಪತಿ 86
ಶಿಲ್ಪ ಪ್ರಶಸ್ತಿ 89
ಮೂರ್ತಿ ಭೇದ 95

5. ಶಿವನ ಸ್ವಾರಸ್ಯ
ವ್ರಾತ್ಯ ವೀರ 98
ಸ್ಕಂಭ–ಲಿಂಗ 103
ಶ್ಮಶಾನೇಶ್ವರ 108
ಭಾರಶಿವಲಿಂಗ 111
ಶಿವಲೀಲೆ 116

6. ವಿಷ್ಣುವಿನ ವೈಶಿಷ್ಟ್ಯ
ಶಿವ ವಿಷ್ಣು 130
ಭಾಗವತ ಪಂಥದ ಹಂತ 134
ವ್ಯೂಹಾವತಾರವೈಭವ 140
ಅರ್ಚಾಮೂರ್ತಿಗಳು 144

7. ಗ್ರಾಮದೇವತೆಗಳು ಸರ್ವಶಕ್ತಿಯರಾದಾಗ
ಮಾತೃಮರ್ಯಾದೆ 161
ಗ್ರಾಮಶಕ್ತಿಯರ ಗೌರವ 167
ಏಕಾ ಮಾತಾ 172
ಕೆಲವು ಶಕ್ತಿಪೀಠಗಳು 176
ಶಕ್ತಿಯ ಅಭಿವ್ಯಕ್ತಿ 181

8. ಸ್ವಯಂಪ್ರಧಾನರಾದ ಪಾರ್ಶ್ವದೇವತೆಗಳು
ಸುಬ್ರಹ್ಮಣ್ಯ–ಸ್ಕಂದ 190
ಶಾಸ್ತ–ಅಯ್ಯಪ್ಪ 199
ಮಲ್ಲಾರಿ–ಖಂಡೋಬ 206

9. ಆಗಮಗಳ ಆದೇಶ
ಪೂಜೆಯ ಪದ್ಧತಿ 210
ಅರ್ಚಕರ ಅಗತ್ಯ 214
ಆಗಮವಾಙ್ಮಯ 218
ಅಂತರ್ಯಾಗ 223

10. ಅನುಬಂಧಗಳು

ಆದಿವಾಸಿಗಳ ಆಲಂಬನೆ	...	...	227
ಮುಖವಾಡಗಳ ಮೋಡಿ	...	...	231
ಮೆಲನೇಶಿಯನ್ ನಿದರ್ಶನ	...	...	236
ಶಬರಿಮಲೆಯ ಶಾಸ್ತ	...	...	241
ಅಷ್ಟದಿಕ್ಪಾಲಕರು	...	...	256
ನವಗ್ರಹಗಳು	...	...	272
ತುಳುನಾಡಿನ ದೈವಗಳು	...	...	275
ಕೃಷ್ಣನ ಕಲ್ಪನೆ	...	...	290
ಬೌದ್ಧರಲ್ಲಿ ಮೂರ್ತಿಶಿಲ್ಪ	...	...	299
ದೇವತಾಕೋಟಿ	...	...	313
ಹನುಮದ್ವಿಲಾಸ	...	...	323
ಕಳಿಯಾಟ್ಟದ ತೆಯ್ಯಕೋಲಗಳು	...	...	327
ಜೈನರ ಕೊಡುಗೆ	...	...	331
ಜಗನ್ನಾಥ ಮೂರ್ತಿಗಳು	...	...	335
ಕಾಳೀಪೂಜೆಯ ಹಿನ್ನೆಲೆ	...	...	341
ಮಹಾಶಿಲ್ಪೋಪನಿಷತ್ತು	...	...	345
ಸಾರಸ್ವತ ಋಣ	...	...	348

ಬದುಕಿನ ಬಯಕೆ

ಸಮುದಾಯದ ಸಂಕೋಲೆ

ಮನುಷ್ಯನ ಬಯಕೆಗಳಲ್ಲಿ ನೆಮ್ಮದಿಯಿಂದ ಇರುವುದು ಮುಖ್ಯವಾದುದು. ನೆಮ್ಮದಿಯೆಂದರೆ ನಿರ್ದಿಷ್ಟವಾಗಿ ಇದೇ ಎಂದು ಹೇಳಲು ಬಾರದಿರುವುದು ಸ್ವಾರಸ್ಯ. ಬೆಳವಣಿಗೆಯೂ ಅನುಭವಗಳೂ ನೆಮ್ಮದಿಯ ನೆಲೆಯನ್ನು ಪ್ರತಿವ್ಯಕ್ತಿಗೂ ವಿಶಿಷ್ಟವಾಗಿಯೇ ಅಳವಡಿಸುತ್ತವೆ; ಬಾಳಿನುದ್ದಕ್ಕೂ ಈ ನೆಲೆಯೇ ಕಂಬದಂತೆ ನಿಲ್ಲದೆ ಅಡಿಗಡಿಗೆ ಮಾರ್ಪಡುವುದೂ ಉಂಟು. ಶಂಕರಾಚಾರ್ಯರದೆಂದು ಹೇಳುವ 'ದ್ವಾದಶ ಪಂಜರಿಕೆ'ಯಲ್ಲಿ ಬಂದಿರುವ ಈ ಮಾತು ನೆಮ್ಮದಿಯ ನೆಲೆಯು ಬದಲಾಗುವುದನ್ನೂ ನೆಮ್ಮದಿಯು ದೂರವಾಗಿಯೇ ಇರುವುದನ್ನೂ ಸ್ವಾರಸ್ಯವಾಗಿ ಮೂಡಿಸಿದೆ:

ಬಾಲಸ್ತಾವತ್ ಕ್ರೀಡಾಸಕ್ತಃ
ತರುಣಸ್ತಾವತ್ ತರುಣೀರಕ್ತಃ ।
ವೃದ್ಧಸ್ತಾವಚ್ ಚಿಂತಾಸಕ್ತಃ
ಪರೇ ಬ್ರಹ್ಮಣಿ ಕೋಽಪಿ ನ ಸಕ್ತಃ ॥

ಎಳೆತನದಲ್ಲಿ ಆಟ–ಪಾಟ, ಹರೆಯದಲ್ಲಿ ನಗು–ನಲಿವು, ಮುಪ್ಪಿನಲ್ಲಿ ಚಿಂತೆ–ಇವೆಲ್ಲ ನೆಮ್ಮದಿಯ ನೆಲೆಗಳೇ. ಗೆಳೆಯರೊಂದಿಗಿರುವ ಬಯಕೆ, ಹೆಂಗಳೆಯರೊಡನೆ ಕೂಡಿಕೊಂಡಿರುವ ಬಯಕೆ, ಗಳಿಕೆಗಾಗಿ ದುಡಿಯುವ ಬಯಕೆ, ಗಳಿಸಿದ್ದನ್ನು ಉಳಿಸಿಕೊಳ್ಳುವ ಬೆಳೆಸಿಕೊಳ್ಳುವ ಬಯಕೆ, ತಾನೂ ತನ್ನವರೂ ತನ್ನದೂ ಎಂದೆಂದೂ ಅಳಿಯದೆ ಉಳಿಯುವ ಬಯಕೆ, ಇಂಥ ಬಯಕೆಗಳ ಹಿನ್ನೆಲೆಯಲ್ಲಿ ನೆಮ್ಮದಿಯ ಕಲ್ಪನೆ,

ಕಾತರಗಳು ಇದ್ದೇ ಇರುತ್ತವೆ. ನಿಮಿಷ–ನಿಮಿಷವೂ ವರುಷ–ವರುಷವೂ ಬದಲಾಗುತ್ತಿರುವ ಮನುಷ್ಯ-ತನ್ನ ಬಯಕೆಗಳನ್ನು ತೀರಿಸಿಕೊಂಡಂತೆಲ್ಲ, ತೀರದ ಬಯಕೆಗಳಿಂದ ನಿರಾಶನಾದಂತೆಲ್ಲ, ಅವರಿವರೊಡನೆ ಓಡಾಡಿ ಒಡನಾಡಿದಂತೆಲ್ಲ, ಅಲ್ಲಲ್ಲಿ ತಿರುಗಾಡಿ ನೋಡಿದಂತೆಲ್ಲ, ತನ್ನ ನೆಮ್ಮದಿಯ ನೆಲೆಯನ್ನು ಬದಲಿಸಿ ಕೊಳ್ಳುತ್ತಿರುತ್ತಾನೆ. ಮೈಯ ಬಲ, ಮನಸ್ಸಿನ ಗೆಲವು, ನೆರೆಹೊರೆಯವರ ನೆರವು, ಊರಿನ ಪರಿಷೆ, ಬಯಸದಿದ್ದರೂ ಒದಗಿಬರುವ ರೋಗ–ರುಜಿನೆ, ಆಕಸ್ಮಿಕ–ಅಪಘಾತಗಳು ಇವೆಲ್ಲವೂ ಈ ಬದಲಿಕೆಯಲ್ಲಿ ಕಾರಣಗಳಾಗಿ ಕರಣಗಳಾಗಿ ಸೇರಿಕೊಳ್ಳುತ್ತವೆ.

ಮನುಷ್ಯನ ಬದುಕಿನಲ್ಲಿ ಬಯಕೆಗಳನ್ನೂ ಬಿಡುವಹಾಗಿಲ್ಲ, ನೆಮ್ಮದಿಯನ್ನೂ ಪಡೆಯುವ ಹಾಗಿಲ್ಲ. ಬಯಕೆಗಳನ್ನು ತೀರಿಸಿಕೊಳ್ಳಲು ಅಭಿಲಾಷೆಯೊಂದೇ ಇದ್ದರೆ ಸಾಲದು; ಅವಕಾಶ, ಅನುಕೂಲ, ಆರೋಗ್ಯ, ಒತ್ತಾಸೆ ಇಂಥ ನೂರಾರು ಪರಿಕರಗಳು ಅಗತ್ಯವಾಗುತ್ತವೆ. ಇವುಗಳಲ್ಲಿ ಒಂದೊಂದೂ ಆಯಾ ಕಾಲಕ್ಕೆ, ಆಯಾ ಸಂದರ್ಭದಲ್ಲಿ ನೆಮ್ಮದಿಯ ನೆಲೆಯನ್ನೇರುತ್ತದೆ. ಒಮ್ಮೊಮ್ಮೆ ಆರೋಗ್ಯವೇ ಭಾಗ್ಯ ಎನಿಸುತ್ತದೆ, ಇನ್ನೊಮ್ಮೆ ಬಡತನದಂಥ ಬೇನೆ ಇಲ್ಲ ಎನಿಸುತ್ತದೆ, ಮತ್ತೊಮ್ಮೆ ಯಶಸ್ಸು ಪಡೆಯಲೂ ಪುಣ್ಯವಿರಬೇಕು ಎನಿಸುತ್ತದೆ, ಹೀಗೆ. ಅಭಿಲಾಷೆಯೇನೋ ಎಲ್ಲರಿಗೂ ಇರುತ್ತದೆ; ಪರಿಕರಗಳು ಮಾತ್ರ ಹಾಗಿರಲಾರವು, ಒಮ್ಮೆ ಕೈಗೆಟುಕಿದ ಪರಿಕರ ಹಾಗೆಯೇ ತನ್ನನ್ನಂಟಿಕೊಂಡಿರುವುದೆಂದು ಯಾರು ನಂಬಿಯಾರು? ಅದು ತನ್ನ ಕೈಬಿಟ್ಟು ಹೋಗಲು ನೂರಾರು ದಾರಿಗಳಿವೆ; ಈ ದಾರಿಗಳನ್ನೆಲ್ಲ ಎಚ್ಚರದಿಂದ ಕಾಯುವುದೂ ಸಾಧ್ಯವಿಲ್ಲ. ಬೀಸುವ ಗಾಳಿಯನ್ನು ಹಿಡಿಯಬಲ್ಲವರಾರು? ಮನುಷ್ಯನಿಗೆ ಈ ಆತಂಕ ತಪ್ಪಿದ್ದಲ್ಲ. ಬಯಕೆ–ನೆಮ್ಮದಿಗಳ ನಡುವೆ ತೂರಾಡುವುದು ಅವನ ಬದುಕು.

ಮನುಷ್ಯನಿಗೆ ಇರಲು ಮನೆ ಬೇಕು, ಹೊಟ್ಟೆಹೊರೆದುಕೊಳ್ಳಲು ಉದ್ಯೋಗ ಬೇಕು, ಮೈಯ ಮನಸ್ಸಿನ ಆಸೆಗಳನ್ನು ಪೂರೈಸಿಕೊಳ್ಳಲು ಹೆಂಡತಿ–ಮಕ್ಕಳು ಬೇಕು, ನೆರೆಹೊರೆಯವರ ನಡುವೆ ಕಾಣು ವಂತಿರಲು ಹಣ ಬೇಕು ಹೆಸರು ಬೇಕು, ವ್ಯವಹಾರದಲ್ಲಿ ಮುಂದಿರಲು ಓದು ಬೇಕು ಜಾಣತನ ಬೇಕು. ಇವೆಲ್ಲ ಇದ್ದರೂ ಬೇರೆಯವರು ಆಡಿಕೊಳ್ಳದಂತೆ ಗುಣವೂ ಬೇಕು. ಬಿಡುವಿದ್ದಾಗ, ಬೇಕೆಂದಾಗ ಆಟ–ಓಲಾಟಗಳು ಬೇಡವೆ? ಮನುಷ್ಯಪ್ರಾಣಿ ಒಂಟಿಯಾಗಿ ಇದನ್ನೆಲ್ಲಾ ಸಾಧಿಸಿಕೊಳ್ಳಲಾರ; ಪ್ರಕೃತಿಯು ಅವನನ್ನು ಹಾಗೆ ಮಾಡಿಲ್ಲ. ತನ್ನ ಬಯಕೆಗಳನ್ನು ತೀರಿಸಿಕೊಳ್ಳಲು ಮನುಷ್ಯ ಇತರರೊಂದಿಗೆ ಸೇರಲೇಬೇಕಾಗುತ್ತದೆ, ಹೊಂದಿಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಮನುಷ್ಯ ಸಂಘಜೀವಿ. ಸಂಘದಲ್ಲಿ ಸೇರಿಕೊಂಡು ಬಾಳುವಾಗ ಕೆಲವಾರು ಕಟ್ಟು–ಪಾಡುಗಳನ್ನು ನಿಶ್ಚಯಿಸಿಕೊಳ್ಳುವುದು ಅನಿವಾರ್ಯ. ಆಡಳಿತ–ಅಂಕೆ, ಕಾನೂನು–ಕಟ್ಟಳೆ, ಆಚಾರ–ವಿಚಾರ, ಆಹಾರ–ವಿಹಾರ, ಸಾಹಿತ್ಯ–ಸಂಸ್ಕೃತಿ, ಧರ್ಮ–ಕರ್ಮ ಎಲ್ಲವೂ ಸಾಂಘಿಕಜೀವನದ ಅಗತ್ಯದಿಂದಲೇ ಹೊರಹೊಮ್ಮಿದ ವಿವರಗಳು.

ವ್ಯಕ್ತಿಯು ತನ್ನ ಸುಖ–ಸಂತೋಷಗಳಿಗೆ ಸಂಘವನ್ನು ಸಾಧನವನ್ನಾಗಿ ಬಳಸಿಕೊಳ್ಳಲೆಂದು ನಿಸರ್ಗದ ನಿಯಮ. ಆದರೆ ಸಂಘ ಒಮ್ಮೆ ಮೈದಳೆದು ನಿಂತಿತೆಂದರೆ ವ್ಯಕ್ತಿಯ ಸ್ವಾತಂತ್ರ್ಯ ಮೊಟ ಕಾಗಿಬಿಡುತ್ತದೆ. ವ್ಯಕ್ತಿಗಾಗಿ ಸಂಘವೋ, ಸಂಘಕ್ಕಾಗಿ ವ್ಯಕ್ತಿಯೋ ಹೇಳುವುದು ಕಷ್ಟವಾಗುತ್ತದೆ. ವ್ಯಕ್ತಿಗಿಂತ ಮಿಗಿಲಾದ, ಬೇರೆಯಾದ, ತನ್ನದೇ ಆದ ಇರವನ್ನು ಪಡೆದುಕೊಳ್ಳಲು ಸಂಘ ಹೆಣಗಾಡುತ್ತದೆ; ತನ್ನ ಹಿಡಿತದಲ್ಲಿ ವ್ಯಕ್ತಿಯನ್ನು ಇರಿಸಿಕೊಳ್ಳಲು ಯತ್ನಿಸುತ್ತದೆ. ಜನರೂ ತಮಗೊದಗುವ ಪ್ರಯೋಜನ ವನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಘದ ಈ ಅಗತ್ಯಕ್ಕೆ ನೆರವಾಗುತ್ತಾರೆ; ಸಂಘದ ನೀತಿನಿಯಮಗಳಿಗೆ

ತಗ್ಗಿ, ಬಗ್ಗಿ ನಡೆದುಕೊಳ್ಳುತ್ತಾರೆ. ತಮ್ಮ ಕೈಕಟ್ಟಲೆತ್ನಿಸುವ ಸಂಘದ ಕೈಯನ್ನು ಬಲಪಡಿಸುವುದು ಜನರಿಗೆ ಅಷ್ಟೇನು ಹಿತವೆನಿಸುವ ಕೆಲಸವಲ್ಲವಾದರೂ ಹಾಗೆ ಮಾಡದೆ ವಿಧಿಯಿಲ್ಲ! ಇದು ಬಂಗಾರದ ಸಂಕೋಲೆಯ ಮಾತು, ನುಂಗಲೂ ಉಗುಳಲೂ ಆಗದ ಬಿಸಿ ತುಪ್ಪದ ಮಾತು. ಈ ಬೇಕು–ಬೇಡಗಳ ತುಮುಲದಲ್ಲಿ ಸಂಕೇತಗಳ ಬಲೆ ಸಿದ್ಧವಾಗುತ್ತದೆ. ಈ ಬಲೆಯ ಹರವಿನಲ್ಲಿ ನಮ್ಮೆಲ್ಲ ವ್ಯವಹಾರಗಳೂ ನಡೆಯಬೇಕು. ಈ ಸಂಕೇತಗಳನ್ನು ಸೃಷ್ಟಿಮಾಡುವ, ಕಲಿಯುವ, ಕಲಿಸುವ ಮತ್ತು ವ್ಯವಹರಿಸುವ ಕೌಶಲ ಮನುಷ್ಯನಿಗೆ ನಿಸರ್ಗಸಿದ್ಧವಾಗಿಯೇ ಬಂದಿದೆ. ಅವನ ಬುದ್ಧಿಶಕ್ತಿಯೂ ಭಾವನಾ ಪ್ರೌಢಿಮೆಯೂ ಈ ಕೌಶಲಕ್ಕೆ ಮೂಲಸಾಮಗ್ರಿಗಳು. ಭಾಷೆ, ಮದುವೆ, ನಾಣ್ಯ, ವಿದ್ಯಾಭ್ಯಾಸ, ನ್ಯಾಯ, ಧರ್ಮ, ಸರಕಾರ, ವಿಜ್ಞಾನ, ಸಾಹಿತ್ಯ ಎಲ್ಲವೂ ಸಂಕೇತದ ಬಲೆಯ ವಿವರಗಳೇ.

ಕೆಲವು ಕಟ್ಟಳೆಗಳು ಮೂಡಿಕೊಂಡೊಡನೆ ಬೇರೂರಿಬಿಡುತ್ತವೆ; ದಿನದಿನದ ವ್ಯವಹಾರದಲ್ಲಿ ಅವುಗಳ ಉಪಯೋಗವಿದ್ದು ಅವು ಪದ್ಧತಿಗಳಾಗಿಬಿಡುತ್ತವೆ. ಪದ್ಧತಿಗಳೂ, ಅವುಗಳ ಹಿನ್ನೆಲೆಯಲ್ಲಿರುವ ಕಲ್ಪನೆಗಳೂ, ಉದ್ದೇಶಗಳೂ ಕಲೆತು ಸಂಪ್ರದಾಯವಾಗಿ ರೂಪ ತಳೆಯುತ್ತವೆ. ನಿತ್ಯಜೀವನದಲ್ಲಿ ಒದಗುತ್ತಲೇ ಇರುವ ಸಮಸ್ಯೆಗಳಿಗೆ ಸಂಪ್ರದಾಯದಲ್ಲಿ ಪರಿಹಾರವು ಸುಲಭವಾಗಿ, ಸರ್ವಸಮ್ಮತವಾಗಿ ದೊರೆಯುವುದು ಸಂಪ್ರದಾಯದ ಪ್ರಾಬಲ್ಯಕ್ಕೆ ಕಾರಣ. ತಲೆಮಾರುಗಳಿಂದ, ಸಾವಿರಾರು ಜನರ ಬಳಕೆಯಿಂದ ಸಿದ್ಧವಾದ ಸಂಪ್ರದಾಯವಿದ್ದರೆ ವ್ಯಕ್ತಿ ಹೊಸದಾಗಿ ಆಲೋಚನೆ ಮಾಡಬೇಕಾಗಿಲ್ಲ, ತಲೆಕೆಡಿಸಿಕೊಳ್ಳಬೇಕಾಗಿಲ್ಲ, ಹೊಸ ಉಪಾಯ ಹುಡುಕಬೇಕಾಗಿಲ್ಲ. ಸಂಪ್ರದಾಯ ಅವನಿಗೆ ನೆರವಾಗಿ ನಿಲ್ಲುತ್ತದೆ, ಅವನನ್ನು ಕಾಯುತ್ತದೆ. ಹೊಸ ಸಂಶೋಧನೆಗಳೂ, ಹೊಸ ಅನುಭವಗಳೂ, ಸುಧಾರಣೆಗಳೂ, ಹೊರಗಿನ ಸಂಪರ್ಕಗಳೂ, ಕಷ್ಟಕಾರ್ಪಣ್ಯಗಳೂ ಸಂಪ್ರದಾಯವನ್ನು ಬದಲಾಯಿಸುತ್ತವೆ, ನಿಜ. ಆದರೆ ಈ ಬದಲಾವಣೆಯ ಗತಿ ನಿಧಾನವಾದುದು, ಅದರ ವ್ಯಾಪ್ತಿ ಸಂಕುಚಿತವಾದುದು. ಹಾಗಿಲ್ಲವಾದರೆ ಸಂಘಕ್ಕೆ ಸಂಪ್ರದಾಯದ ಬಲವಿಲ್ಲವಾಗುತ್ತದೆ; ಸಂಘ ಉಂಡೆಯಾಗಿ ಉಳಿಯುವುದು ಕಷ್ಟವಾಗುತ್ತದೆ. ಬಹುಮಂದಿ ಸಂಪ್ರದಾಯಕ್ಕಂಟಿಕೊಂಡಿರುವುದು ಸಂಘದ ಸ್ಥೈರ್ಯಕ್ಕೆ ಕಾರಣವಾಗಿದೆಯೆಂದು ಮಾನವವಿಜ್ಞಾನಿಗಳು ತಿಳಿದುಕೊಂಡಿದ್ದಾರೆ. ಸಂಪ್ರದಾಯಕ್ಕೆ ಜನ ಅಂಟಿಕೊಳ್ಳಲು ಕಾರಣ ಹೊಸದಾಗಿ ಯೋಚನೆಮಾಡಲಾರದ ಅಲಸಿಕೆ (ಸೈಕಲಾಜಿಕಲ್ ಇನರ್ಷಿಯ) ಅಥವಾ ಅಂಜಿಕೆ. ಸಿದ್ಧವಾದ, ಜನಗಳು ಬಳಸಿ ಉಪಯೋಗಕಂಡ, ಉಪಾಯಗಳಿದ್ದರೆ ಅದನ್ನು ಪಡೆದುಕೊಂಡರಾಯಿತು; ಒಂದೊಂದು ಸಮಸ್ಯೆಗೂ ಒಬ್ಬೊಬ್ಬ ವ್ಯಕ್ತಿಯೂ ಪರಿಹಾರವನ್ನು ಹೊಸದಾಗಿ ಹುಡುಕುವ ಅಗತ್ಯವೇನು? ಅಷ್ಟುಮಾತ್ರವಲ್ಲದೆ, ಎಳೆತನದಿಂದಲೂ ಈ ವಿವರಗಳನ್ನು ಮನೆಯಲ್ಲಿಯೂ ಶಾಲೆಯಲ್ಲಿಯೂ ಬೀದಿಯಲ್ಲಿಯೂ ಕಲಿತೇ ಇರುತ್ತೇವೆ. ಅವನ್ನೇ, ಅಷ್ಟಿಷ್ಟು ಮಾರ್ಪಡಿಸಿ, ಅಳವಡಿಸಿಕೊಂಡರಾಯಿತು, ಅನುಸರಿಸಿದರಾಯಿತು. ಹೇಗೂ ನೆರೆಯವರೂ ಊರವರೂ ಇವನ್ನೇ ತಾನೆ ಅನುಸರಿಸುವುದು? ಸಾರ್ವಜನಿಕ ಅಭಿಪ್ರಾಯ (ಪಬ್ಲಿಕ್ ಒಪೀನಿಯನ್) ಇಲ್ಲಿ ಕೆಲಸ ಮಾಡುತ್ತದೆ. ಇದು ಒಂದು ಸಾಮಾಜಿಕ ಅಂಕೆಯೂ (ಸೋಶಿಯಲ್ ಕಂಟ್ರೋಲ್) ಹೌದು.

ಒಂದು ದೇಶದ ಜನರಲ್ಲಿ ಈ ಅಂಕೆ ಕೆಲಸಮಾಡುತ್ತಿದ್ದರೆ ಸಂಘಟನೆ ಸುಲಭ; ಸಂಘದಲ್ಲಿ ಸಂಘಟನೆಯಿದ್ದರೆ ಬಲ ಹೆಚ್ಚು. ತುಂಬ ಪ್ರಾಚೀನ ಜನಾಂಗಗಳಲ್ಲಿ ಅಂಕೆಗಳ ಪಾತ್ರ ಹಿರಿದಾಗಿದ್ದುದನ್ನು ಕಾಣುತ್ತೇವೆ. 'ಸಂಘೇ ಶಕ್ತಿಃ' ಎನ್ನುವ ಮಾತನ್ನು ಅವರು ದೃಢವಾಗಿ ನಂಬಿದ್ದವರು. ಸಮುದಾಯವನ್ನು ಬಿಟ್ಟ ಅಥವಾ ಎದುರಿಸಿದ ವ್ಯಕ್ತಿಗೆ ಉಳಿಗಾಲವೇ ಇರಲಿಲ್ಲ. ಮಾನವ ವಿಜ್ಞಾನದಿಂದ ತಿಳಿದುಬರುವ ಟೋಟೆಮ್ (ಕುಲದೈವ) ಮತ್ತು ಟಾಬು (ವಿಧಿ – ನಿಷೇಧ) ಇವು ಕಟ್ಟುನಿಟ್ಟಾದ ಅಂಕೆಗಳೇ;

ಸುಗ್ರೀವಾಜ್ಞೆಗಳೇ. ಜನಾಂಗದಲ್ಲಿ ಬಂದ ಸಂಪ್ರದಾಯವನ್ನು ವ್ಯಕ್ತಿಯು ಚಕ–ಚು ತಪ್ಪದೆ ಪಾಲಿಸಬೇಕೆನ್ನುವ ಮನೋವೃತ್ತಿಗೆ ಧಾರ್ಮಿಕ ಕಲ್ಪನೆಗಳು ಆಸರೆಯಾದುವು. ಬುಡಕಟ್ಟಿನ ಹಿರಿಯರು, ಜನಾಂಗದ ನಾಯಕರು ಸಮುದಾಯದ ಹಿತವನ್ನು ಕಾಯುವವರು; ಸಮಾಜ ಉಳಿಯಬೇಕೆಂಬ ಕಾತರ ಇರುವವರು. ಸಮುದಾಯದ ಜನರನ್ನೆಲ್ಲ ಒಟ್ಟಿಗೆ ಕೂಡಿಸುವುದು, ಒಂದು ಕೆಲಸದಲ್ಲಿ ಅವರನ್ನೆಲ್ಲ ಸೇರಿಸುವುದು ಧಾರ್ಮಿಕ ವಿಧಿಗಳ ಉದ್ದೇಶ. ಧಾರ್ಮಿಕ ವಿಧಿಗಳಿಗೆ ಪ್ರಾಚೀನ ಜನಾಂಗಗಳು ವಿಶೇಷವಾದ ಪ್ರಾಶಸ್ತ್ಯ ಕೊಟ್ಟದ್ದು ಸಹಜವೇ; ಹಿರಿಯರ, ನಾಯಕರ ಹೊಣೆಗಾರಿಕೆ ಈ ವಿಧಿಗಳು ಯಥಾವತ್ತಾಗಿ ನಡೆಯುವಂತೆ ನೋಡಿ ಕೊಳ್ಳುವುದು. ಹಾಗೆಂದೇ ಅವರಿಗೆ ಹೆಚ್ಚಿನ ಮನ್ನಣೆ.

ವ್ಯಕ್ತಿಯ ಬಯಕೆಗಳು ಸಮುದಾಯದ ಸಂಪ್ರದಾಯದಿಂದಲೇ ಕಾಣಿಸಿಕೊಳ್ಳುತ್ತವೆ, ಕೆಲಸಮಾಡು ತ್ತವೆ, ಪೂರಯಿಸುತ್ತವೆ. ಒಡಲಿಂದ ಮೇಲೇಳುವ ಬಯಕೆಗಳಿಗೂ ಸಾಂಘಿಕ ಅಂಕೆಯಿದ್ದೇ ಇರುವುದು ಸ್ವಾರಸ್ಯ. ಮನುಷ್ಯನ ಇತಿಹಾಸದ ಆರಂಭ ದೆಶೆಯಲ್ಲಿ ಧಾರ್ಮಿಕ ವಿಧಿಗಳು ಸಾಂಘಿಕ ಅಂಕೆಯ ಹೆಚ್ಚಿನ ಭಾಗವಾಗಿದ್ದುವು. ಸಮುದಾಯ ಕಲಿಸಿಕೊಟ್ಟಂತೆ ವ್ಯಕ್ತಿ ನಡೆಯುವುದೇ ಒಳಿತು, ಅದರ ಆಗು–ಹೋಗುಗಳಲ್ಲಿ ತನ್ನ ಬೇಕು–ಬೇಡಗಳನ್ನು ಅಳವಡಿಸಿಕೊಳ್ಳುವುದೇ ಹಿತ ಎಂದು ನಿಶ್ಚಯಿಸಿಕೊಂಡಾಗ ತನ್ನ ಬಯಕೆಗಳಿಗೆಲ್ಲ ಧಾರ್ಮಿಕ ಸಂಸ್ಕಾರವನ್ನು ಒದಗಿಸಿಕೊಳ್ಳುತ್ತಾನೆ, ಧರ್ಮದ ನೆಲೆಯಲ್ಲಿ ನೆಮ್ಮದಿಯನ್ನು ಕಾಣುತ್ತಾನೆ. ಹೀಗೆ ಸಮಾಜದ ಆಯಕಟ್ಟಿನಲ್ಲಿ ನಿಂತ ಮನುಷ್ಯ ಬಯಕೆ–ನೆಮ್ಮದಿಗಳ ನಡುವೆ ಸೇತುವೆಯೊಂದನ್ನು ಕಟ್ಟಿಕೊಳ್ಳುವನು.

ಅದ್ಭುತ ಸನ್ನಿಧಾನ

ಧಾರ್ಮಿಕ ವಿಧಿಗಳೇನು ನೆನ್ನೆ ಮೊನ್ನೆಯವಲ್ಲ. ಮನುಷ್ಯನು ಭೂಮಿಯ ಮೇಲೆ ವಾಸಿಸಲು ಆರಂಭಿಸಿದ ಹೊಸತರಲ್ಲಿಯೇ, ಎಂದರೆ ಹಳೆಯ ಶಿಲಾಯುಗದಲ್ಲಿಯೇ, 350,000 ವರ್ಷಗಳ ಹಿಂದೆಯೇ, ಧಾರ್ಮಿಕ ವಿಧಿಗಳನ್ನು ಮನುಷ್ಯ ಕಂಡುಕೊಂಡುದು ತಿಳಿದುಬರುತ್ತದೆ. ಪಿಕಿಂಗ್, ಸ್ವ್ಯಾನ್‌ಹೀಮ್ ಮತ್ತು ನಿಯಂಡರ್‌ತಲ್ ಮಾನವರ ತಲೆಯೋಡೆಗಳು ದೊರೆತಾಗ ಸ್ವಾರಸ್ಯವಾದ ಪದ್ಧತಿಯೊಂದು ಬೆಳಕಿಗೆ ಬಂದಿತು; ಈ ಪದ್ಧತಿ ಬೋರ್ನಿಯೋ ಮತ್ತು ಮೆಲನೀಶಯದ ತಲೆಗಡುಕರಲ್ಲಿಯೂ ಮೊನ್ನೆಮೊನ್ನೆಯ ವರೆಗೆ ಬಳಕೆಯಲ್ಲಿದ್ದಿತು. ಹುಟ್ಟಿದ ಮಗುವಿಗೆ ಹೆಸರಿಡಬೇಕಾದಾಗ, ಹೆಸರಿರುವ ಮನುಷ್ಯನೊಬ್ಬನನ್ನು ಕೊಂದು ಅವನ ತಲೆಯೋಡೆಯನ್ನು ಸೀಳಿ ಒಳಗಿರುವ ಮಿದುಳನ್ನು ಅಡುಗೆಯಲ್ಲಿ ಸೇರಿಸಿ ತಂದೆ ತಿಂದ ನಂತರವೇ ಮಗುವಿಗೆ ಹೆಸರು ದೊರೆಯುತ್ತಿದ್ದಿತು; ಮಿದುಳಿಲ್ಲದ ತಲೆಯೋಡೆಯನ್ನು ಪವಿತ್ರ ವಸ್ತುವೆಂದು ಮನೆಯಲ್ಲಿರಿಸಿಕೊಳ್ಳುತ್ತಿದ್ದರು. ಹೊಸದಾಗಿ ಹೆಸರನ್ನು ಪಡೆದ ಮಗು ತೀರಿಕೊಂಡರೆ ಈ ತಲೆಯೋಡೆಯನ್ನೂ ಬಿಸಾಡುತ್ತಿದ್ದರು. ಇದು ಒಂದು ಬಗೆಯ ಕಾಪಾಲಿಕ ವಿಧಿ! ಈ ಯುಗದ ಜನರು ಬೇಟೆಗೆ ಹೊರಡುವ ಮೊದಲು ಪ್ರಾಣಿಗಳ ಚಿತ್ರಗಳನ್ನು ಬರೆದು ಅವಕ್ಕೆ ಬಾಣ ತಾಕಿದಂತೆ, ಅವು ಸತ್ತಂತೆ, ಕಾಣಿಸಿ ಹೊರಡು ತ್ತಿದ್ದರು. ಇದೊಂದು ಬಗೆಯ ಮಾಂತ್ರಿಕ ಕಲ್ಪ. ಇಂಥ ಧಾರ್ಮಿಕ ವಿಧಿಗಳು ಬರುಬರುತ್ತ ಹೆಚ್ಚಿ ಸಂಸ್ಕೃತಿಯು ಬಲಗೊಂಡಂತೆಲ್ಲ ಧರ್ಮದ ಬೇರೂ ಬೆಳೆಯುತ್ತ ಹೋಯಿತು.

ಪ್ರಪಂಚದಲ್ಲಿ ಕಣ್ಣಿಗೆ ಕಾಣದೆ, ಕೈಗೆ ಎಟುಕದೆ ಇದ್ದರೂ ಪ್ರಬಲವಾದ ಶಕ್ತಿಗಳು ತುಂಬಿವೆಯೆನ್ನು ವುದು ತುಂಬ ಪುರಾತನ ಕಲ್ಪನೆ. ಈ ಶಕ್ತಿ ಇಲ್ಲಿಯೇ ಅಲ್ಲಿಯೇ ಈಗಲೇ ಆಗಲೇ ಇರುವುದೆನ್ನುವ ನಿಯಮ

ವಿಲ್ಲ; ಎಲ್ಲಿಯಾದರೂ ಇದ್ದೀತು, ಯಾವಾಗಲಾದರೂ ಒದಗೀತು. ಇದ್ದಾಗ ಮಾತ್ರ ಅದರ ಸಾಮರ್ಥ್ಯವನ್ನು ಕಾಣದಿರುವುದು ಸಾಧ್ಯವಿಲ್ಲ. ಇದನ್ನು ಮನುಷ್ಯನಲ್ಲಿ ಮೂಡಿಸಬಹುದು, ಪದಾರ್ಥದಲ್ಲಿ ಮೂಡಿಸಬಹುದು; ಹರಿವ ನೀರಿನಲ್ಲಿ, ಎತ್ತರಕ್ಕೆ ನಿಂತ ಬೆಟ್ಟದಲ್ಲಂತೂ ಈ ಅದ್ಭುತಶಕ್ತಿ ಇದ್ದೇ ಇರುತ್ತದೆ. ಇದು ಒದಗಿಬಂದ ಪದಾರ್ಥ ಸುಂದರವಾಗಿ ಕಾಣುತ್ತದೆ, ಆಕರ್ಷಿಸುತ್ತದೆ, ಫಲಕಾರಿಯಾಗುತ್ತದೆ, ಬಯಕೆಗಳನ್ನು ಈಡೇರಿಸುತ್ತದೆ; ಇದು ಮನುಷ್ಯನಲ್ಲಿ ಸೇರಿಕೊಂಡರೆ ಮನುಷ್ಯ ತುಂಬ ಬಲಶಾಲಿಯಾಗುತ್ತಾನೆ, ಪ್ರಭಾವಶಾಲಿಯಾಗುತ್ತಾನೆ, ಪ್ರತಿಭಾಶಾಲಿಯಾಗುತ್ತಾನೆ. ಬುಡಕಟ್ಟಿನ ಹಿರಿಯನಲ್ಲಿ, ಪುರೋಹಿತನಲ್ಲಿ ಇದು ಇರುವುದರಿಂದಲೇ ಅವರನ್ನು ಜನ ಅಷ್ಟು ಆದರಿಸುತ್ತಾರೆ, ಅವರಿಗೆ ಹೆದರುತ್ತಾರೆ. ಮಾನವ ವಿಜ್ಞಾನಿಗಳು ಈ ಶಕ್ತಿಯನ್ನು 'ಮ್ಯಾನಾ' ಎಂದು ಗುರುತಿಸಿದರು. ಪೆಸಿಫಿಕ್ ದ್ವೀಪಗಳ ನಿವಾಸಿಗಳಾದ ಮೆಲನೀಶಿಯನ್ ಮತ್ತು ಪಾಲಿನೀಶಿಯನ್ ಜನರ ಮಾತು ಇದು. ಇದನ್ನೇ ನಮ್ಮವರು 'ಬ್ರಹ್ಮ', 'ಕ್ಷತ್ರ', 'ಭೂತ', 'ಸನ್ನಿಧಾನ' ಎಂದು ಮೊದಲಾಗಿ ಕರೆದರು.

ಯಾವ ವಸ್ತುವಾಗಲೀ ಅದರ ಸಹಜ ಸ್ವಭಾವವನ್ನೂ ಮೀರಿ ವಿಶಿಷ್ಟವಾದ ಗುಣವನ್ನು ಪಡೆದಿರುವುದು ಈ ಅದ್ಭುತ ಶಕ್ತಿಯಿಂದಲೇ ಎಂದು ಪ್ರಾಚೀನರ ಕಲ್ಪನೆ. ನಮ್ಮ ಶಾಲಗ್ರಾಮಶಿಲೆ, ಬಾಣಲಿಂಗ, ತುಳಸೀಮಣಿ ಮೊದಲಾದುವನ್ನು ಇಲ್ಲಿ ನೆನಸಿಕೊಳ್ಳಬಹುದು. ಇಂಥ ವಿಶಿಷ್ಟ ಪ್ರಭಾವದ ಪದಾರ್ಥವನ್ನು ಮೈಮೇಲಿರಿಸಿಕೊಂಡರೆ ವ್ಯಕ್ತಿಗೂ ವಿಶೇಷವಾದ ಗುಣ ಒದಗಿಬರುತ್ತದೆ; ಅದರ ಬಗ್ಗೆ ಅನುಕೂಲವಾಗಿ ನಡೆದುಕೊಂಡರೆ ಬಯಕೆಗಳು ಈಡೇರುತ್ತವೆ, ಆರೋಗ್ಯ ದೃಢವಾಗಿರುತ್ತದೆ, ಅಪಘಾತಗಳು ತಪ್ಪುತ್ತವೆ. ಎಂದಮೇಲೆ, ಶಕ್ತಿ-ವಿಶಿಷ್ಟ ಪದಾರ್ಥಗಳನ್ನು ಪಡೆಯುವ ವಿಧಿಗಳನ್ನು ನಿಶ್ಚಯಿಸಿಕೊಳ್ಳಲು ಮನುಷ್ಯ ಹಾತೊರೆಯುತ್ತಿದ್ದುದು ಸಹಜವೇ. ಎಲ್ಲ ಧಾರ್ಮಿಕವಿಧಿಗಳೂ ಈ ನೆಲೆಯಲ್ಲಿ ಸಿದ್ಧವಾದುವೇ.

ಪ್ರಕೃತಿಯ ಪ್ರಕೋಪದ ಮುಂದೆ ಮನುಷ್ಯ ನಿಃಸಹಾಯಕನಾಗಿ ನಿಂತು ವಿಚಿತ್ರಾದ್ಭುತ ಶಕ್ತಿಯನ್ನು ಅಂಗಲಾಚಿ ಬೇಡುತ್ತಿದ್ದ ದೃಶ್ಯವನ್ನು ಸುಲಭವಾಗಿ ಕಲ್ಪಿಸಿಕೊಳ್ಳಬಹುದು. ಮಳೆ-ಗಾಳಿ, ಗುಡುಗು-ಸಿಡಿಲು, ಕಗ್ಗತ್ತಲೆ, ಬಿಸಿಲಿನ ಬೇಗೆ, ಮಂಜು-ಚಳಿ ಇವನ್ನು ತಡೆಯುವ ಸಾಧನಗಳು ಇನ್ನೂ ಮೈದುಂಬಿ ಬರದಿದ್ದಾಗ ಆದಿವಾಸಿಯು ಅಧೀರನಾಗಿ ತನ್ನ ನೆರವಿಗೆ ಶಕ್ತಿಗಳನ್ನು ಕರೆಯಲು ಮನಸ್ಸು ಮಾಡಿದುದು ಸಹಜವೇ. ತನ್ನ ನೆರವಿಗೆ ಇವು ಬಂದೇ ಬರುವುವೆಂಬ ಧೈರ್ಯವನ್ನು ಅವನು ತಳೆದುದೂ ಸಹಜವೇ. ದೈವವನ್ನೇ ನಂಬಿ ಕೈಕಟ್ಟಿಕೊಂಡು ಕೂಡಲಿಲ್ಲವೆನ್ನಿ; ತನ್ನ ಬುದ್ಧಿ ಶಕ್ತಿ, ಕೈಚಳಕಗಳನ್ನು ಬಳಸಿಕೊಂಡು ದೊಡ್ಡ ಸಂಸ್ಕೃತಿಯನ್ನೇ ಕಟ್ಟಿದ. ಮಾನವನ ಇತಿಹಾಸವೆಲ್ಲ ಅವನ ಧೈರ್ಯ, ಸ್ಥೈರ್ಯ, ಸಾಹಸದ ಕಥೆಯೇ. ಆದರೂ ಹಿನ್ನೆಲೆಯಲ್ಲಿ ಅಜ್ಞಾತ ಶಕ್ತಿಗಳ ವಿಚಾರವಾಗಿ ಆತಂಕ ಇದ್ದೇ ಇದ್ದಿತು; ಅವನ್ನು ಹೇಗಾದರೂ ಒಲಿಸಿಕೊಳ್ಳಬೇಕೆಂಬ ತವಕವೂ ಇದ್ದಿತು. ಬೇಟೆಗೆ ಹೊರಡುವಾಗ, ಗುಡಿಸಲನ್ನು ಕಟ್ಟಿಕೊಳ್ಳುವಾಗ, ನದಿಯನ್ನು ದಾಟುವಾಗ, ಮಳೆ ಬಾರದಿದ್ದಾಗ, ಬಿರುಗಾಳಿ ಎದ್ದಾಗ, ಕಾಡುಪ್ರಾಣಿ ಬೆನ್ನಟ್ಟಿದಾಗ, ಬೇನೆಯಿಂದ ನರಳುವಾಗ, ಈ ಪ್ರಕೃತಿಯ ಅಚಿಂತ್ಯಾದ್ಭುತ ಶಕ್ತಿಗಳನ್ನು ತನಗೆ ಅನುಕೂಲವಾಗಿ ಒಲಿಸಿಕೊಂಡು ಬಳಸಿಕೊಳ್ಳುವ ವಿಧಿಗಳನ್ನು ಆದಿಮಾನವನೇ ಏರ್ಪಡಿಸಿಕೊಂಡ. ದೇವರೆಂಬ ಕಲ್ಪನೆ ಅವನಿಗಿದ್ದಿತೋ ಇಲ್ಲವೋ ತಿಳಿಯದು; ಭೂಮಿಯಲ್ಲೆಲ್ಲ ವಿಚಿತ್ರ ಅದ್ಭುತ ಶಕ್ತಿಗಳು ಪರದಾಡುತ್ತಿರುವ ಕಲ್ಪನೆಯಂತೂ ಇದ್ದಿತು. ಜಗತ್ತಿನ ಎಲ್ಲ ಪ್ರಾಚೀನ ಜನಾಂಗಗಳಲ್ಲಿಯೂ ಈ ಕಲ್ಪನೆಯನ್ನವಲಂಬಿಸಿದ ವಿಧಿಗಳು ಕಾಣಸಿಗುತ್ತವೆ.

ಸರಳವಾದ ಬೇಡಿಕೆ (ಪ್ರಾರ್ಥನೆ), ಹೊಗಳಿಕೆ (ಸ್ತವನ, ಸ್ತುತಿ, ಸ್ತೋತ್ರ), ಕೊಡುಗೆ (ಬಲಿ,

ಅರ್ಘ್ಯ, ಹೋಮ, ಹವನ), ಮಾಟ–ಮಂತ್ರ (ಯಾತು, ಯಕ್ಷಿಣಿ), ಇಂದ್ರಜಾಲ (ಅಭಿಚಾರ) ಮೊದಲಾದ ವಿಧಿಗಳು ಈ ನೆಲೆಯಲ್ಲಿ ಮೈದಳೆದವು. ತಾವು ನೆನೆದ ಶಕ್ತಿ ಒಲಿಯಿತೆಂದು ಬಗೆದು ಆವೇಶದಲ್ಲಿ ಕುಣಿಯುವುದು, ಹಾಡುವುದು ಕೂಡ ಕಾಣಿಸಿಕೊಂಡವು. ಶಕ್ತಿ ಒಲಿದಾಗ ಮನಸ್ಸಿನ ಸ್ಥಿತಿ ಬದಲಾಗುವುದೆಂದು ಊಹಿಸಿ ಮನಸ್ಸಿನ ಮಾರ್ಪಾಟಿಗೆಂದೇ ಕೆಲವು ಬೇರು, ನಾರು, ಸೊಪ್ಪು, ರಸಗಳನ್ನು ಹುಡುಕಿ ಅವನ್ನು ಇಂಥ ಸಂದರ್ಭಗಳಲ್ಲಿ ಬಳಸುತ್ತಿದ್ದುದೂ ಉಂಟು. ರಾಮರಸ, ಸೋಮ, ಸುರೆ, ಗಾಂಜಾ, ಮರಿಯ್ವಾನಾ, ಪೈನ್ ಮೊದಲಾದ ಮದ್ದುಗಳ, ಹೆಂಡಗಳ ಬಳಕೆ ಹೊಸದೇನಲ್ಲ.

ಆದಿಮಾನವರ ಆಸಕ್ತಿಯನ್ನೂ ಆತಂಕವನ್ನೂ ವಿಶೇಷವಾಗಿ ಸೆಳೆದ ವಿವರವೆಂದರೆ ಸಾವು.ಬದುಕಿದ್ದವರಿಗೆ ಸಾವು ಸೋಜಿಗವೇ. ಮರದಂತೆ ಜಡವಾಗಿ ಮೈ ಬಿದ್ದುಕೊಂಡುದನ್ನು ಕಂಡು ಜೀವವಿದ್ದವರು ಬೆದರಿದರು, ಭೂತಚೇಷ್ಟೆಯೆಂದರು, ಈ ಗತಿ ತಮಗೆ ಬಾರದಿರುವ ಉಪಾಯವೇನೆಂದು ಹಲುಬಿದರು. ಸತ್ತು ದೇಹವನ್ನು ಇಲ್ಲಿಯೇ ಬಿಟ್ಟವನು ಎಲ್ಲಿಗೆ ಹೋದ? ಹಿಂದೆಲ್ಲ ಸತ್ತವರು ಈಗ ಏನಾಗಿದ್ದಾರೆ? ಇವನೂ ಅವರನ್ನು ಸೇರುವುದುಂಟೆ? ಅವರಿಗೂ ನಮಗೂ ನೆಂಟು ಕಡಿದು ಹೋಯಿತೆ? ಈ ಮೊದಲಾಗಿ ಆದಿಮಾನವ ನಿಬ್ಬೆರಗಾಗಿ ಯೋಚಿಸುತ್ತ ಪಿತೃದೇವತೆಯ ಕಲ್ಪನೆಯನ್ನು ಮೂಡಿಸಿಕೊಂಡ. ತನ್ನ ಬುಡಕಟ್ಟು ಆರಂಭವಾದುದೇ ಅವನಿಂದ, ಕಣ್ಣಿಗೆ ಕಾಣದಿದ್ದರೂ ಅವನು ಉಳಿದಿದ್ದಾನೆ, ಬದುಕಿರುವವರನ್ನೆಲ್ಲ ಸಲಹುತ್ತಾನೆ, ಸತ್ತವರನ್ನೆಲ್ಲ ತನ್ನಲ್ಲಿ ಸೇರಿಸಿಕೊಳ್ಳುತ್ತಾನೆ. ಅವನ ಅನುಗ್ರಹವನ್ನು ಪಡೆದುಕೊಳ್ಳುವ ಅಗತ್ಯವಿದೆ, ಅವನಿಗೂ ಬೇಡಿಕೆ ಕೊಡುಗೆ ಹೊಗಳಿಕೆ ಮೊದಲಾದುವು ಬೇಕು. ಕಣ್ಣಿಗೆ ಕಾಣದ ಅವನನ್ನು ಪ್ರತಿನಿಧಿಸಲು ಒಂದು ನೆಲೆಯನ್ನೋ, ಒಂದು ವಸ್ತುವನ್ನೋ, ಒಂದು ಗೊಂಬೆಯನ್ನೋ ಮಾಡಿಕೊಳ್ಳುವ ಹವ್ಯಾಸವೂ ಬೆಳೆಯಿತು. ಆದಿವಾಸಿ ಜನಾಂಗಗಳಲ್ಲಿ ವಿಶೇಷವಾಗಿ ಕಂಡು ಬರುವುದು ಪಿತೃದೇವತೆಗಳ ಪುತ್ಥಳಿಗಳೇ. ಮರದಲ್ಲಿ, ಮಣ್ಣಿನಲ್ಲಿ ಮಾಡಿದ ಮೂರ್ತಿಗಳೇ ಹೆಚ್ಚು; ಕೆಲವೊಮ್ಮೆ ಕಲ್ಲಿನಲ್ಲಿ ಕಡೆದಿರುವುದೂ ಉಂಟು.

ಇಂಥದೇ ಪುತ್ಥಳಿಗಳನ್ನು ಇತರ ಸಂದರ್ಭಗಳಲ್ಲಿಯೂ ಬಳಸುತ್ತಿದ್ದರು, ಬೇಟೆಗೆ, ಹಗರಣಕ್ಕೆ, ಅಲೆದಾಟಕ್ಕೆ ಹೊರಡುವ ಮೊದಲು ಮರದಲ್ಲಿ ಒರಟು ಒರಟಾಗಿ ಕಡೆದ, ಮಣ್ಣಿನಲ್ಲಿ ಮುದ್ದೆಮುದ್ದೆಯಾಗಿ ಮಾಡಿದ ಮೂರ್ತಿಗಳನ್ನು ಪೂಜಿಸುತ್ತಿದ್ದರು. ಎಲ್ಲ ಹಳೆಯ ಜನಾಂಗಗಳಲ್ಲೂ ಸಮರದೈವಗಳ ಮೂರ್ತಿಶಿಲ್ಪವಿರುತ್ತದೆ. ಕೆಲವರಲ್ಲಿ ಇಂಥದೇ ಮರವನ್ನು ಶಿಲ್ಪಕ್ಕೆ ಬಳಸಬೇಕೆನ್ನುವ ನಿರ್ಬಂಧವುಂಟು. ನಮ್ಮಲ್ಲಿಯೂ ಶಿಲ್ಪಶಾಸ್ತ್ರಗಳಲ್ಲಿ ದಾರುಸಂಗ್ರಹ, ಶಿಲಾಶೋಧನೆ ಮೊದಲಾದುವು ಬರುವುದಿಲ್ಲವೆ? ನ್ಯೂ ಮೆಕ್ಸಿಕೋದ ಜೂನಿ ಜನರು ತಮ್ಮ ಸಮರದೈವದ ಮೂರ್ತಿಯನ್ನು ಮಾಡಲು ಸಿಡಿಲು ಬಡಿದ ಪೈನ್ ಮರದ ದಿಮ್ಮಿಯನ್ನೇ ಬಳಸುತ್ತಾರೆ (ಚಿತ್ರ 1). ಜಗನ್ನಾಥ ಪುರಿಯಲ್ಲಿ ಜಗನ್ನಾಥನ ವಿಗ್ರಹವನ್ನು ಕಡೆಯಲೂ ನಿರ್ದಿಷ್ಟವಾದ ಮರವನ್ನೇ ಬಳಸುವುದಿಲ್ಲವೇ? ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಬಗೆಯ ಮೂರ್ತಿಗಳನ್ನು ಪೂಜಿಸುವ ಪದ್ಧತಿಯೂ ಎಲ್ಲ ಜನರಲ್ಲಿಯೂ ಇದ್ದಿತು (ಚಿತ್ರಗಳು 2–5). ಆದಿವಾಸಿ ಜನರು ಮಾತ್ರವಲ್ಲ, ಸುಸಂಸ್ಕೃತರೆನಿಸಿಕೊಂಡ ಗ್ರೀಕ್, ರೋಮನ್, ಯೂರೋಪಿಯನ್, ಚೀನೀ, ಜಪಾನೀ ಜನರಲ್ಲಿಯೂ ಸಂಪತ್ತಿಗೆ ಆರೋಗ್ಯಕ್ಕೆ ಸುಖಕ್ಕೆ ಸಂತಾನಕ್ಕೆ ವಿಜಯಕ್ಕೆ ವಿದ್ಯೆಗೆ ಕೌಶಲಕ್ಕೆ ಅಭಿಮಾನಿ ದೇವತೆಗಳಿರುತ್ತಿದ್ದರು. ಅವರನ್ನು ವಿಧವಿಧವಾಗಿ ಚಿತ್ರಿಸುತ್ತಲೂ ಇದ್ದರು. ಅವರ ಸುತ್ತ ಸ್ವಾರಸ್ಯವಾದ ಕಥೆಗಳನ್ನು ಹೆಣೆಯುತ್ತಿದ್ದರು, ಸಂಸ್ಕೃತಿಯ ಪ್ರೌಢಿಮೆ ಮೂಡಿದಂತೆಲ್ಲ ಆಧ್ಯಾತ್ಮಿಕ ವಿವರಗಳನ್ನೂ ಮೂಡಿಸಿ ಕೊಂಡರು. ಹೀಗೆ ಪ್ರತಿಯೊಂದು ಜನಾಂಗದಲ್ಲಿಯೂ ಅದಕ್ಕೆ ವಿಶಿಷ್ಟವಾದ ದೇವತಾ ಕಲ್ಪನೆ, ಮೂರ್ತಿಶಿಲ್ಪ,



ಚಿತ್ರ 1

ನ್ಯೂಮೆಕ್ಸಿಕೋ ಆದಿವಾಸಿಗಳಾದ ಜೂನಿ ಜನಾಂಗದವರ ಸಮರದೇವತೆ



ಚಿತ್ರ 2

ಹವಾಯ್ ದ್ವೀಪದ ಜನರ ಸಮರದೇವತೆ

ಚಿತ್ರ 3

ಆಫ್ರಿಕಾಖಂಡದ ಆದಿವಾಸಿಗಳ ಧಾನ್ಯದೇವತೆ

ಚಿತ್ರ 4

ಈಜಿಪ್ಟ್ ದೇಶದ ಬೇಸ್ ಎಂಬ ಹೆಸರಿನ ಯಕ್ಷ. ಭಯಾನಕವಾದ ಮುಖ, ಕುಳ್ಳ ಮೈ, ಕುರೂಪಿ; ಮೈಮೇಲೆ ಚಿರತೆಯ ಚರ್ಮವನ್ನು ಹೊದ್ದಿದ್ದಾನೆ. ಪ್ರಾಣಿಗಳಿಗೆಲ್ಲ ಅವನು ಒಡೆಯ, ಅಲ್ಲಿನ ಪಶುಪತಿ



ಚಿತ್ರ 5

ಸಿರಿಯಾದ ದ್ವಬೋಲ್‌ನಲ್ಲಿ ದೊರೆತ ಎಲ್ ದೇವತೆಯ ಶಿಲ್ಪ. ಸೆಮಿಟಿಕ್ ಸಂಪ್ರದಾಯದ ಮಹೇಶ್ವರ ಇವನು; ಗೂಳಿಗಳಿಗೂ ಇವನಿಗೂ ಸಂಬಂಧವಿರುವುದು ಸ್ವಾರಸ್ಯ. ನಮ್ಮ ದೇಶದ ಶಿವನಿಗೂ ವೃಷಭಕ್ಕೂ ನೆಂಟನ್ನು ಇದು ನೆನಪು ಮಾಡಿಕೊಡುತ್ತದೆ. ಮುಖಲಿಂಗದಂತೆಯೇ ಇರುವ ಈ ಮೂರ್ತಿ ಶಿಲ್ಪದಲ್ಲಿ ತಲೆಯ ಮೇಲಿರುವುದು ಬಸವನ ಕೊಂಬುಗಳು; ಸೆಮಿಟಿಕ್ ಜನ ಇವನನ್ನು 'ಶೃಂಗೇಶ್ವರ' ಎನ್ನುವ ಅರ್ಥ ಇರುವ ಹೆಸರಿನಿಂದ ಕರೆಯುವುದೂ ಉಂಟು

ವಿಧಿನಿಯಮಗಳು, ಪುರಾಣಕಥೆಗಳು, ತಾತ್ತ್ವಿಕ ತಾತ್ಪರ್ಯಗಳು ಇವೆ. ಬದುಕಿನ ಬಯಕೆಗೆ, ನೆಮ್ಮದಿಯ ಗಳಿಕೆಗೆ ಇವೆಲ್ಲ ಸಂಬಂಧಿಸಿದುದರಿಂದ ಸಂಪ್ರದಾಯ ಅವನ್ನು ಉಳಿಸಿತು, ಬೆಳೆಸಿತು.

ಯಜ್ಞಗಳ ಸಂಪ್ರದಾಯ

ನಮ್ಮ ದೇಶದ ಇತಿಹಾಸದಲ್ಲಿ ಆರಂಭದೆಶೆಯಲ್ಲಿಯೇ ಸೈಂಧವಸಂಸ್ಕೃತಿ ವೈದಿಕಸಂಸ್ಕೃತಿಗಳೆಂದು ಎರಡು ಹೋಳುಗಳು; ಎರಡರ ಹಿನ್ನೆಲೆಯೂ ಮಂಜುಮಂಜೇ. ವೈದಿಕ ಯುಗವಂತೂ ದೇಶದಲ್ಲಿ ಎಲ್ಲ ವಿವರಗಳಿಗೂ ಮೂಲವೆಂದೇ ನಮ್ಮ ಎಣಿಕೆಯಲ್ಲವೇ ? ಸಾಹಿತ್ಯ, ಸಂಸ್ಕೃತಿ, ವೇದಾಂತ, ವಿಜ್ಞಾನ ಎಲ್ಲದರ ಉಗಮವನ್ನೂ ಅಲ್ಲಿಯೇ ಕಾಣುವವರಿದ್ದಾರೆ. ಕ್ರಿಸ್ತಪೂರ್ವ ಎರಡುಮೂರು ಸಾವಿರ ವರ್ಷಗಳಷ್ಟು ಹಿಂದೆ ಇಲ್ಲಿಗೆ ಬಂದು ಋಗ್ವೇದವನ್ನು ರಚಿಸಿದ ಆರ್ಯರು ಮರಗೆಲಸವನ್ನು ಚೆನ್ನಾಗಿ ಬಲ್ಲವರು. ಮನೆಗಳನ್ನೂ ರಥಗಳನ್ನೂ ಮರದಲ್ಲಿಯೇ ಅಚ್ಚುಕಟ್ಟಾಗಿ ಕಟ್ಟುವ ಜಾಣರು. ತಾಮ್ರದಿಂದ ಪಾತ್ರೆಪಡಗಗಳನ್ನೂ ಮಾಡಿಕೊಳ್ಳುತ್ತಿದ್ದರು; ಬಟ್ಟೆ ಹೊಲಿದುಕೊಳ್ಳುತ್ತಿದ್ದರು ; ಚರ್ಮ ಹದಮಾಡಿ ಬಳಸುತ್ತಿದ್ದರು. ಆದರೆ ಮೂರ್ತಿಗಳನ್ನು ಮಾಡಿ ಅವರು ಪೂಜಿಸುತ್ತಿದ್ದರೆಂದು ವೈದಿಕವಾಙ್ಮಯದಿಂದ ತಿಳಿದು ಬರುವುದಿಲ್ಲ. ಅವರು ಆರಾಧಿಸುತ್ತಿದ್ದ ದೈವಗಳೆಲ್ಲ ಪ್ರಕೃತಿವ್ಯಾಪಾರಕ್ಕೆ ಸಂಬಂಧಪಟ್ಟವರು; ಅಗ್ನಿ (ಬೆಂಕಿ), ವಾಯು (ಗಾಳಿ), ಸೂರ್ಯ (ಬಿಸಿಲು), ವರುಣ (ಮಳೆ, ನೀರು, ಸಮುದ್ರ), ಇಂದ್ರ (ಗುಡುಗು, ಮಳೆ), ರುದ್ರ (ಸಿಡಿಲು), ದ್ಯಾವಾಪೃಥಿವೀ (ಆಕಾಶ–ಭೂಮಿ) ಮೊದಲಾದವರು. ದೇವತೆಗಳ ಸಂಖ್ಯೆಯೇನೋ ಸಣ್ಣದಲ್ಲ. ಕನಿಷ್ಠ ಪಕ್ಷ, ಮೂವತ್ತ ಮೂರು (ತ್ರಯಶ್ಚತ್ರಿಂಶಚ್ಚ ಮನೋರ್ದೇವಾಃ). ಇವರ ನೆರವನ್ನು ತಮ್ಮ ನಿತ್ಯ ಜೀವನದಲ್ಲಿ ಪಡೆಯಲು ಈ ದೇವತೆಗಳನ್ನು ಬೇಡಿಕೊಂಡರು, ಅವರಲ್ಲಿ ಹರಕೆ ಹೊತ್ತುಕೊಂಡರು, ಬಲಿಯನ್ನು ಒಪ್ಪಿಸಿದರು; ದೇವತೆಗಳಿಗೆ ಒಡೆಯನಾದ ಇಂದ್ರನನ್ನೇ "ನೀನು ನಮ್ಮವನು, ನಾವು ನಿನ್ನವರು" (ತ್ವಂ ಅಸ್ಮಾಕಂ ತವ ಸ್ಮಾಸಿ, ಋಗ್ವೇದ 8, 81,32) ಎಂದು ಪುಸಲಾಯಿಸಿದರು. ದೇವತೆಗಳನ್ನು ಒಲಿಸಿಕೊಳ್ಳುವ ಉಪಾಯ ಗಳಲ್ಲೆಲ್ಲ ಯಜ್ಞ ಉತ್ತಮವಾದುದೆಂದು ಕಂಡುಕೊಂಡರು. ದೇವತೆಗಳು ಯಜ್ಞದಿಂದಲೇ ಯಜ್ಞವನ್ನು ಮಾಡಿ ತಾನೆ ಆರಂಭದ ನಿಯಮವನ್ನು ಮೇಲ್ಪಂಕ್ತಿಯಾಗಿ ಹಾಕಿ ಕೊಟ್ಟರು? (ಯಜ್ಞೇನ ಯಜ್ಞಂ ಅಯಜಂತ ದೇವಾಃ ತಾನಿ ಧರ್ಮಾಣಿ ಪ್ರಥಮಾನ್ಯಾಸನ್, ಋಗ್ವೇದ 1, 64, 50). ಯಜ್ಞವನ್ನು ಮಾಡಲು ಅಲಸಿಕನಾದವನಿಗೆ ದೇವತೆಗಳ ಸ್ನೇಹ ದೊರೆಯಲಾರದು (ನ ಋತೇ ಶ್ರಾಂತಸ್ಯ ಸಖ್ಯಾಯ ದೇವಾಃ, ಋಗ್ವೇದ 4, 33, 11) ಎಂದು ನಿಶ್ಚಯಿಸಿಕೊಂಡರು.

ಯಜ್ಞವೆಂದರೆ ಬೆಂಕಿಯನ್ನು ಹೊತ್ತಿಸಿ ಅದರಲ್ಲಿ ಅಗ್ನಿಯನ್ನೂ ಅವನ ಮೂಲಕ ಇತರ ದೇವತೆ ಗಳನ್ನೂ ಕರೆದು ಅವರಿಗೆ ಇಷ್ಟವೆನಿಸಿದ್ದನ್ನು ಸಲ್ಲಿಸಿ ಪ್ರೀತಿ ಪಡಿಸುವ ವಿಧಾನ. ಇಲ್ಲಿ ಪ್ರತಿಮೆಗಳ, ಮೂರ್ತಿಗಳ ಗೊಂದಲವಿಲ್ಲ. ದೇವತೆಯಾದವನಿಗೆ ಪ್ರತಿಮೆಯಿರದು (ನ ತಸ್ಯ ಪ್ರತಿಮಾ ಭವತಿ) ಎಂದೇ ಅವರ ಆಗ್ರಹ. ಯಜ್ಞದ ಸಂದರ್ಭದಲ್ಲಿಯೇ ಹೊತ್ತಿಸುವ ಬೆಂಕಿ, ಅದನ್ನು ಹೊತ್ತಿಸಲು ನೆರವಾಗುವ ಕಟ್ಟಿಗೆ ಕಡ್ಡಿಗಳು, ಅದನ್ನು ಉರಿಸುವಂಥ ತುಪ್ಪ, ಅರಳು ಮೊದಲಾದುವು, ಅಗ್ನಿಯನ್ನು ಇಡಲು ಕಟ್ಟಿದ ಕಟ್ಟೆ (ವೇದಿ) ಅಥವಾ ಉಪಯೋಗಿಸಿದ ಮಡಕೆ (ಕುಂಡ) ಇಷ್ಟು ಅಲ್ಲಿ ಪ್ರಮುಖವಾಗಿರುತ್ತಿದ್ದ ವಿವರಗಳು. ಬಲಿಕೊಡುವ ಸಂದರ್ಭದಲ್ಲಿ ಒಂದು ಮರದ ಕೊಂಟನ್ನು ಭೂಮಿಯಲ್ಲಿ ನೆಟ್ಟು ಅದರ ಮೇಲೆ ಪಶುಘಾತ ಮಾಡುತ್ತಿದ್ದರು; ಈ ಮರದ ಕೊಂಟಿಗೆ ಯೂಪ ಎಂದು ಹೆಸರು, ಒಂದು ಬಗೆಯ ಪ್ರಾಚೀನ ಬಲಿಪೀಠ. ಇಷ್ಟನ್ನು ಬಿಟ್ಟು

ದೇವತಾಮೂರ್ತಿಗಳಾಗಲೀ, ಅವಕ್ಕೆ ಗುಡಿಗುಂಡಾರಗಳಾಗಲೀ ಇದ್ದ ಉಲ್ಲೇಖ ಋಗ್ವೇದ ವಾಙ್ಮಯದಲ್ಲಂತೂ ಬರುವುದಿಲ್ಲ.

ಯಜ್ಞದ ಸ್ವಾರಸ್ಯವೆಂದರೆ ಇಡೀ ಸಮುದಾಯ ಕಲೆತು ಮಾಡುವ ಕೆಲಸ; ಒಬ್ಬನು ಏಕಾಕಿಯಾಗಿ ಮಾಡುವುದಲ್ಲ. ವೈದಿಕ ಆರ್ಯರ ಮನೋಧರ್ಮದಲ್ಲಿ ಈ ಸಾಂಘಿಕ ಪ್ರವೃತ್ತಿ ಪ್ರಬಲವಾಗಿಯೇ ಇದ್ದಿತು. ಅವರು ಗಣಗಳಲ್ಲಿ, ವ್ರಾತಗಳಲ್ಲಿ ಬದುಕುತ್ತಿದ್ದವರು. ಅಲೆದಾಡುವುದೂ ಒಟ್ಟಿಗೆ, ಕಾದಾಡುವುದೂ ಒಟ್ಟಿಗೆ, ದನಕರುಗಳನ್ನು ಮೇಯಿಸುವುದೂ ಒಟ್ಟಿಗೆ, ನಲಿದಾಡುವುದೂ ಒಟ್ಟಿಗೆ, ದೇವರನ್ನು ಒಲಿಸಿಕೊಳ್ಳುವುದೂ ಒಟ್ಟಿಗೆ. ಅವರ ಆರ್ಥಿಕವ್ಯವಸ್ಥೆಯಲ್ಲಿ ಕೂಡ, ದನಕುರಿಗಳನ್ನೆಲ್ಲ ಅವರು ಒಟ್ಟಾಗಿಯೇ ಇಟ್ಟುಕೊಂಡಿರುತ್ತಿದ್ದರು. ವ್ಯಕ್ತಿಯ ಆಸ್ತಿ ಎನ್ನುವುದಿರಲಿಲ್ಲ ('ಸಮಾನೇ ಉರ್ವೇ'; ಸಾಯಣಾಚಾರ್ಯರ ಮಾತಿನಲ್ಲಿ 'ಸರ್ವೇಷಾಂ ಸಾಧಾರಣೇ ಗೋಸಮೂಹೇ'). ಅವರ ಶ್ರಮದಲ್ಲಿಯೂ ಪ್ರವಾಸದಲ್ಲಿಯೂ ಇದೇ ಮನೋಭಾವವಿದ್ದಿತು (ನ ಯತಂತೇ ಮಿಥತೇ, ವಸುಭಿಃ ಯದಮಾನಾಃ). ಹಿಂದಿನಿಂದಲೂ ಅಗ್ನಿಯು ಅವರಿಗೆ ಎಲ್ಲರೂ ಒಟ್ಟಿಗೆ ಅನುಭವಿಸಬಹುದಾದ ಸಂಪತ್ತನ್ನೇ (ಸಮಾನಂ ಧನಂ) ಕೊಟ್ಟಿದ್ದಾನೆಂದು ನಂಬಿದ್ದರು (ಋಗ್ವೇದ, 3, 2, 12); ಇಂದ್ರನು ಈ ಸಮಾನ ಧನವನ್ನು ಕಾಪಾಡುವವನು ಎಂದೂ ಅವರ ನಂಬಿಕೆಯಿದ್ದಿತು (ಋಗ್ವೇದ, 8, 99, 8). ಆಹಾರವನ್ನೂ ಅಗ್ನಿಯು ಅವರವರಿಗೆ ಅಗತ್ಯವಾದುದನ್ನೂ ಹಂಚಿಕೊಡುತ್ತಾನಲ್ಲವೇ (ಋಗ್ವೇದ, 10, 11, 8)? ಈ ನೆಲೆಯಲ್ಲಿ ಯಜ್ಞವು ಒಂದು ಸಾಮೂಹಿಕ ವಿಧಿಯಾದುದರಲ್ಲಿ ಆಶ್ಚರ್ಯವೇನಿಲ್ಲ. ಇಡೀ ಸಮಾಜವೇ ಇದನ್ನು ಎತ್ತಿಹಿಡಿಯಿತು; ಇದರಿಂದಾಗಿ ಸಮಾಜದ ಕಟ್ಟು-ಕಟ್ಟಳೆಗಳೇ ಅದಕ್ಕನುಸಾರವಾಗಿ ಮಾರ್ಪಟ್ಟುವು.

ಇಲ್ಲಿ ನಮಗೆ ಮುಖ್ಯವಾದುದು ಶಿಲ್ಪದ ಮಾತು. ದೇವತೆಗಳನ್ನು ಅವರು ಹೆಚ್ಚುಕಡಮೆ ಮನುಷ್ಯರಂತೆಯೇ ಕಂಡರೂ ಅವರಿಗೆ ಮೂರ್ತರೂಪವನ್ನು ಒದಗಿಸಲು ಹೊರಡಲಿಲ್ಲ. ಅವರ ಧಾರ್ಮಿಕ ವಿಧಿಗಳಲ್ಲಿ ಸ್ಪಷ್ಟವಾದ ಆಕಾರವನ್ನು ತಳೆದಿದ್ದುವೆಂದರೆ ಎರಡೇ – ವೇದಿ (ಸ್ಥಂಡಿಲ, ಪೀಠ, ಪೀಠಿಕಾ) ಮತ್ತು ಯೂಪ (ಸ್ಥಾಣು, ಸ್ಕಂಭ, ಲಿಂಗ, ವೃಷಭ). ಇವೆರಡನ್ನೂ ಬೇರೆ ಬೇರೆಯಾಗಿಯೂ ಒಟ್ಟಿಗೂ ಇಟ್ಟು ಗೌರವಿಸುತ್ತಿದ್ದರು ; ಅವುಗಳ ಸುತ್ತ ಕಥೆಗಳನ್ನೂ ಕಲ್ಪನೆಗಳನ್ನೂ ಸಂಕೇತಗಳನ್ನೂ ಹೆಣೆದರು.

ಆದರೆ ಶುದ್ಧ ವೈದಿಕವೆನ್ನಬಹುದಾದ ಈ ಸಂಸ್ಕೃತಿಗೆ ಮೊದಲೇ ಇನ್ನೊಂದು ಸಂಸ್ಕೃತಿ ಇದ್ದುದು ಸಿಂದ್‌ನ ಮೊಹೆನ್‌ಜೊದಾರೋ ಮತ್ತು ಪಂಜಾಬಿನ ಹರಪ್ಪಾಗಳಲ್ಲಿ ನಡೆಸಿದ ಪ್ರಾಕ್ತನ ಅನ್ವೇಷಣೆಗಳಿಂದ ಸ್ಪಷ್ಟವಾಯಿತು. ಇದು ಮುಖ್ಯವಾಗಿ ನಾಗರಿಕ ಸಂಸ್ಕೃತಿ; ಸಿಂಧೂ ನದಿಯ ದಂಡೆಯ ಮೇಲೇ ಬೆಳೆದುದರಿಂದ ಇದನ್ನು ಸೈಂಧವ ಸಂಸ್ಕೃತಿ ಎಂದು ಕರೆಯುತ್ತಾರೆ. ಕ್ರಿಸ್ತಪೂರ್ವ ಮೂರು ನಾಲ್ಕು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಈ ಸಂಸ್ಕೃತಿಯ ಅವಶೇಷಗಳು ಹೇರಳವಾಗಿ ದೊರೆತಿದ್ದು ಆ ಕಾಲದ ಆ ಜನರ ಮನೋಧರ್ಮವನ್ನು ಸುಮಾರಾಗಿ ಗುರುತಿಸುವುದು ಸಾಧ್ಯವಾಗಿದೆ. ನಮಗೆ ಇಲ್ಲಿ ಪ್ರಸಕ್ತವಾಗಿರುವ ವಿವರವೆಂದರೆ ಆ ಜನರಲ್ಲಿ ಮೂರ್ತಿಶಿಲ್ಪ ಬೆಳೆದಿದ್ದುದು. ವೈದಿಕ ಸಂಸ್ಕೃತಿಯ ಆರಂಭದೆಶೆಯಲ್ಲಿ ಕಾಣದ ಈ ವಿವರ ಮುಂದೆ ಅದರಲ್ಲಿಯೂ ಒದಗಿಬಂದುದು ಸೈಂಧವ ಸಂಸ್ಕೃತಿಯ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವದಿಂದಲೇ. ಮೇಲೆ ಹೇಳಿದ ವೇದಿ-ಯೂಪಗಳೂ ಈ ಪ್ರಭಾವದಿಂದಲೇ ಮೈದಳೆದುವೋ ಎಂಬ ಸಂಶಯವೂ ಇದೆ.

ಸೈಂಧವ ಸಂಸ್ಕೃತಿಯು ಪಸರಿಸಿದ್ದ ಸ್ಥಳಗಳಲ್ಲಿ ಎಲ್ಲಿಯೂ ಗುಡಿಯೆಂದು ಗುರುತಿಸಬಹುದಾದ ಅವಶೇಷವೊಂದೂ ದೊರೆತಿಲ್ಲ; ಸಾರ್ವಜನಿಕ ಪೂಜಾಸ್ಥಾನವಿದ್ದ ಸೂಚನೆ ಕಂಡುಬರುವುದಿಲ್ಲ. ಆದರೆ ಮನೆಗಳಿದ್ದ ಸ್ಥಳಗಳಲ್ಲಿ ಜೇಡಿಮಣ್ಣಿನ, ಸುಣ್ಣಕಲ್ಲಿನ ಸಣ್ಣ ಸಣ್ಣ ವಿಗ್ರಹಗಳು ಹಲವಾರು ದೊರೆತಿವೆ. ಇವು ದೇವತಾಮೂರ್ತಿಗಳೇ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಮನೆಗಳಲ್ಲಿ ಇವುಗಳನ್ನು ಜನ ಪೂಜೆ ಮಾಡುತ್ತಿದ್ದಿರಬಹುದು. ಯಜ್ಞದಂಥ ಸಾಮುದಾಯಿಕ ಧಾರ್ಮಿಕವಿಧಿ ವೈದಿಕ ಸಂಸ್ಕೃತಿಯ ವೈಶಿಷ್ಟ್ಯವಾದರೆ ವೈಯಕ್ತಿಕವಾದ ಪೂಜಾವಿಧಿ ಸೈಂಧವ ಸಂಸ್ಕೃತಿಯ ವೈಶಿಷ್ಟ್ಯವಾಗಿದ್ದಿತೆನ್ನಬಹುದು. ಈ ಗೃಹದೇವತಾ ಮೂರ್ತಿಗಳಲ್ಲಿ ಲಿಂಗ, ಮಾತೃದೇವತೆ ಮುಖ್ಯವಾದುವು. ಈ ವಿಗ್ರಹಗಳಲ್ಲದೆ ದೇವತಾಚಿತ್ರಗಳನ್ನೂ ಪ್ರಾಣಿಗಳ ಚಿತ್ರವನ್ನೂ ಕೆತ್ತಿರುವ ಸಣ್ಣ ಸಣ್ಣ ಸ್ಟಿಯಟೈಟ್ ಮುದ್ರೆ (ಸೀಲ್) ಗಳು ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ಸೇರಿವೆ. ಇವುಗಳಲ್ಲಿ 'ಪಶುಪತಿ'ಯ ಮುದ್ರೆ ಪ್ರಖ್ಯಾತವಾದುದು. ವೃಕ್ಷಪೂಜೆ, ನಾಗಪೂಜೆಗಳು ಆಗಲೂ ಬಳಕೆಯಲ್ಲಿದ್ದುವು ಎನ್ನುವುದು ಸ್ಪಷ್ಟವಾಗುತ್ತದೆ; ಯೋಗದ ಪ್ರಕ್ರಿಯೆಯೂ ಇದ್ದಿತೆಂದು ತೋರುತ್ತದೆ. ಅಂತೂ ಪೂಜಾವಿಧಾನ ಹೇಗಿದ್ದಿತೆಂದು ತಿಳಿದುಬರುವುದಿಲ್ಲವಾದರೂ ಮೂರ್ತಿಪೂಜೆ ಇದ್ದುದು ಕಂಡುಬರುತ್ತದೆ.

ವೈದಿಕ ಸಂಸ್ಕೃತಿಯಲ್ಲಿ ಪ್ರತಿಮೆಯಿರಲಿಲ್ಲ; ಸೈಂಧವ ಸಂಸ್ಕೃತಿಯಲ್ಲಿ ಪ್ರತಿಮೆಯೇ ಪ್ರಧಾನವಾಗಿದ್ದಿತು. ವೈದಿಕ ಸಂಸ್ಕೃತಿಯನ್ನು ನಿರೂಪಿಸಿದ ಜನರನ್ನೇನೋ ಆರ್ಯರೆಂದು ನಿರ್ದೇಶಿಸಿದ್ದೇವೆ; ಎಲ್ಲಿಂದಲೋ ಇಲ್ಲಿಗೆ ಬಂದ ಜನ ಅವರು ಎಂದು ತಜ್ಞರು ನಿರ್ಧರಿಸಿದ್ದಾರೆ. ಆದರೆ ಸೈಂಧವ ಸಂಸ್ಕೃತಿಯನ್ನು ಕಟ್ಟಿದ, ಅನುಸರಿಸುತ್ತಿದ್ದ ಜನ ಯಾರು ಎಂದು ನಿಶ್ಚಯವಿಲ್ಲ. ಆರ್ಯರು ಬರುವುದಕ್ಕೂ ಮೊದಲು ಇಲ್ಲೇ ಇದ್ದ ಜನ ಎನ್ನುವುದೇನೋ ಕಂಡಿತ. ದ್ರಾವಿಡರು ಎಂದು ಗುರುತಿಸಿರುವುದಿದೆ; ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಅಂತೂ ಇಲ್ಲಿಯೇ ಇದ್ದ ಜನಕ್ಕೂ ಹೊರಗಿನಿಂದ ಬಂದ ಆರ್ಯರಿಗೂ ತಿಕ್ಕಾಟಗಳಾಗುತ್ತಿದ್ದುದು ಋಗ್ವೇದದ ಪ್ರಸ್ತಾಪಗಳಿಂದ ಖಚಿತವಾಗುತ್ತದೆ. ಅನಾರ್ಯರಾದ ಜನರನ್ನು ಆರ್ಯರು ದಸ್ಯುಗಳೆಂದೂ, ದಾಸವರ್ಣದವರೆಂದೂ, ಅವ್ರತ, ಅಕ್ರತು (ಯಜ್ಞಯಾಗಾದಿಗಳನ್ನು ಮಾಡದವರು), ಶಿಶ್ನದೇವ (ಸಂಯಮವಿಲ್ಲದವ) ರೆಂದೂ ಮೂದಲಿಸಿದರು. ಆರ್ಯವರ್ಣದವರು ದಾಸವರ್ಣದವರನ್ನು ಸದೆಬಡೆಯಲು ಇಂದ್ರನ ನೆರವನ್ನು ಕೋರಿರುವ ಋಗ್ವೇದ ಮಂತ್ರಗಳಿವೆ.

ಹಲವಾರು ಬಾಗಿಲುಗಳಿರುತ್ತಿದ್ದ ಪಟ್ಟಣಗಳಲ್ಲಿ ವಾಸಮಾಡುತ್ತಿದ್ದ ಅನಾರ್ಯ ಜನ ಇಟ್ಟಿಗೆಯ ಕಟ್ಟಡಗಳನ್ನು ಕಟ್ಟಲು ಕಲಿತಿದ್ದರು; ಒಂದೆಡೆ ನೆಲೆಯಾಗಿ ನಿಲ್ಲಲು ಅನುಕೂಲವಾದ ಸಂಸ್ಕೃತಿ ಅವರದ್ದು. ಮನೆಗಳನ್ನು ಅಚ್ಚುಕಟ್ಟಾಗಿ ಕಟ್ಟಿಕೊಂಡು, ತಮ್ಮಷ್ಟಕ್ಕೆ ತಾವು ನೆಮ್ಮದಿಯಾಗಿದ್ದುಕೊಂಡು ಸಂದರ್ಭ ಬಿದ್ದಂತೆ, ಅಗತ್ಯ ತೋರಿದಂತೆ ಸಮುದಾಯದಲ್ಲಿ ಸೇರುವ ಜನರಾಗಿದ್ದಂತೆ ತೋರುತ್ತದೆ. ಮನೆಗಳಲ್ಲಿಯೇ ದೇವತಾಮೂರ್ತಿಗಳನ್ನಿರಿಸಿಕೊಂಡು ತಮ್ಮ ವೈಯಕ್ತಿಕ ನೆಮ್ಮದಿಯನ್ನು ಬಯಸಿ ಪೂಜೆಮಾಡುತ್ತಿದ್ದಿರಬಹುದು. ಅಲೆಮಾರಿ ಹಿನ್ನೆಲೆಯ ಆರ್ಯಜನರಾದರೋ ಮರದ ಮನೆಗಳನ್ನು ಕಟ್ಟಿಕೊಂಡರೂ ಹೆಚ್ಚಾಗಿ ಸಂಘವಾಸಿಗಳೇ. ಅವರಿಗೆ ವೈಯಕ್ತಿಕ ಜೀವನವು ಸಾಮುದಾಯಿಕ ಜೀವನದ ಒಂದು ಮುಖವಷ್ಟೆ. ಅವರ ಧಾರ್ಮಿಕ ವಿಧಿಗಳು ಅಷ್ಟಾಗಿ ಮನೆಯಲ್ಲಿ ನಡೆಯುವ ಹಾಗಿರಲಿಲ್ಲ; ಪರಿಷದವು ಇಂಥ ವಿಧಿಗಳಿಗೆ ಅಗತ್ಯವಾಗಿರುತ್ತಿದ್ದಿತು. ಹೀಗೆ ವಿಭಿನ್ನ, ಪರಸ್ಪರ ವಿರುದ್ಧ ಮನೋವೃತ್ತಿಗಳ, ಪ್ರವೃತ್ತಿಗಳ, ಪದ್ಧತಿಗಳ ಜನರು ಒಂದುಗೂಡಿದಾಗ ಎರಡೂ ಮನೋವೃತ್ತಿಗಳನ್ನೂ ಪ್ರವೃತ್ತಿಗಳನ್ನೂ ಪದ್ಧತಿಗಳನ್ನೂ ಅಳವಡಿಸಿಕೊಂಡ ಹೊಸದೊಂದು ಮನೋವೃತ್ತಿ, ಪ್ರವೃತ್ತಿ ಮತ್ತು ಪದ್ಧತಿ ಮೈದುಂಬಿದುದು ಸಹಜವೇ.

ಆರ್ಯಜನರು ಮೂರ್ತಿಪೂಜೆಯ ಅಗತ್ಯವನ್ನೂ ಅದರ ಗುಣವನ್ನೂ ಕಂಡುಕೊಂಡರು; ಅನಾರ್ಯಜನರು ಸಾಮುದಾಯಿಕ ಪೂಜೆಯ ಅಗತ್ಯವನ್ನೂ ಗುಣವನ್ನೂ ಅರ್ಥಮಾಡಿಕೊಂಡರು. ಗೃಹದೇವತೆಗಳಿರುವಂತೆ ಸಾಮುದಾಯಿಕ ದೇವತೆಗಳೂ ಕಾಣಿಸಿಕೊಳ್ಳತೊಡಗಿದರು. ಮನೆಗಳಲ್ಲಿ ಪೂಜಾಸ್ಥಾನವಿದ್ದಂತೆಯೇ ಸಂಘಕ್ಕೂ ಒಂದು ಪೂಜಾಸ್ಥಾನವನ್ನು ಒದಗಿಸಿಕೊಡುವ ಅಭಿಲಾಷೆ ಮೂಡಿತು. ಸಾರ್ವಜನಿಕ ಪೂಜಾಮಂದಿರವನ್ನು ಸಾಧ್ಯವಾದಷ್ಟು ಸ್ಥಿರವಾಗಿ, ಸುಂದರವಾಗಿ, ಸುಭದ್ರವಾಗಿ ಮಾಡಬೇಕೆಂಬ ತವಕವಿದ್ದುದು ಸರಿಯೇ. ಊರಿನ ಗುಡಿ ಊರಿನವರ ಆದರಕ್ಕೆ ಅಭಿಮಾನಕ್ಕೆ ಗೌರವಕ್ಕೆ ಪಾತ್ರವಾಗುವಂತಿರಬೇಕಲ್ಲವೇ? ಮನೆದೇವರು ಹೇಗಾದರೂ ಇರಲಿ, ಊರದೇವರು ಎಲ್ಲರ ಮನಸ್ಸನ್ನೂ ಸೆಳೆಯುವಂತಿರಬೇಡವೇ? ಊರಿನ ಹೆಸರನ್ನು ಹೆಚ್ಚಿಸುವಂತಿರಬೇಡವೇ? ಬೇಕಿದ್ದರೆ ಯಜ್ಞಯಾಗಾದಿಗಳನ್ನು ಗುಡಿಯ ಬಳಿಯೇ, ಅದರ ಅಂಗಳದಲ್ಲಿಯೇ, ಮಾಡಿದರಾಯಿತು. ಊರದೇವರಿಗೂ ಯಜ್ಞಯಾಗಾದಿಗಳಿಗೂ ವಿರಸವೇಕೆ? ದಿನದಿನದ ನೆಮ್ಮದಿಗೆ ಊರದೇವರು; ವಿಶೇಷ ಸಂದರ್ಭಗಳಲ್ಲಿ ಎಲ್ಲರ ರಕ್ಷಣೆಗೆ, ಯಶಸ್ಸಿಗೆ, ಅಭ್ಯುದಯಕ್ಕೆ ಯಜ್ಞಯಾಗಗಳು.

ಸಮನ್ವಯದ ದಾರಿಯಲ್ಲಿ

ಈ ಸಮನ್ವಯಬುದ್ಧಿ ನಮ್ಮ ದೇಶದ ಜನಜೀವನದಲ್ಲಿ ಎಂದಿನಿಂದಲೂ ಹಾಸು ಹೊಕ್ಕಾಗಿ ಸೇರಿಬಂದಿದೆ. ಅದರಿಂದಲೇ ವೈದಿಕ ಸಂಸ್ಕೃತಿ–ಸೈಂಧವ ಸಂಸ್ಕೃತಿಗಳು ಒಂದು ನೆಲೆಯಲ್ಲಿ ಕಲೆಯುವುದು ಸಾಧ್ಯವಾಯಿತು. ಅದರ ಫಲವೇ ಹಿಂದೂಧರ್ಮ. ಈ ಧರ್ಮದಲ್ಲಿ ದೇವತಾಕಲ್ಪನೆಯೂ, ಮೂರ್ತಿಶಿಲ್ಪವೂ ಪೂಜಾವಿಧಾನಗಳೂ ಈ ಸಮನ್ವಯ ಸೂತ್ರವನ್ನು ಧಾರಾಳವಾಗಿ ಬಳಸಿವೆ. ನಮ್ಮ ದೇಶದ ಯಾವ ದೇವತೆಯನ್ನು ಪರಿಶೀಲಿಸಲೆತ್ತಿಕೊಂಡರೂ ಅದರಲ್ಲಿ ಈ ಸಮನ್ವಯವನ್ನು ಕಾಣಬಹುದು. ಇದು ಶುದ್ಧ ಆರ್ಯ, ಇದು ಶುದ್ಧ ಅನಾರ್ಯ ಎಂದು ಎಲ್ಲಿಯೂ ಹೇಳಬರುವುದಿಲ್ಲ.

ಅನಾರ್ಯರ ದೈವಗಳನ್ನು ಆರ್ಯರು ಪರಿಗ್ರಹಿಸಿ ಅವಕ್ಕೆಲ್ಲ ಒಂದೊಂದು ಸ್ಥಾನವನ್ನೂ, ನಿತ್ಯಜೀವನದಲ್ಲಿ ಒಂದೊಂದು ಪಾತ್ರವನ್ನೂ ವಹಿಸಿಕೊಟ್ಟರು. ಎಳೆಯ ಮಕ್ಕಳನ್ನು ಕಾಪಿಡುವ ಮತ್ತು ಕಾಡುವ ವಿನಾಯಕರು, ಬಾಲಗ್ರಹಗಳು, ಬಸುರಿ ಬಾಣಂತಿಯರನ್ನು ಬವಣೆಗೊಳಿಸುವ ಶಾಕಿನಿ ಡಾಕಿನಿಯರು. ಒಂದೊಂದು ರೋಗಕ್ಕೆ ಒಂದೊಂದು ದೈವ, ಹಾವು ಕಚ್ಚಿದ ಪ್ರಸಂಗಕ್ಕೆ ಮತ್ತು ಹುಲಿ ಹಸುವನ್ನು ಎತ್ತಿಕೊಂಡು ಹೋದುದಕ್ಕೆ ಮನಸಾ, ವ್ಯಾಘ್ರಮುಖೀ ಮೊದಲಾದ ದೈವಗಳು, ಬಡತನವನ್ನು ತಂದೊದಗಿಸುವ ಮೂದೇವಿ (ಜ್ಯೇಷ್ಠಾಲಕ್ಷ್ಮಿ) ಮೊದಲಾದುವು ಈ ಹಿನ್ನೆಲೆಯಲ್ಲಿಯೇ ಅವತರಿಸಿದ ಅನಾರ್ಯ ದೈವಗಳು. ಇವಕ್ಕೆ ಆರ್ಯ ತಾತ್ಪರ್ಯವನ್ನೂ, ಪುರಾಣಗೌರವವನ್ನೂ ಕಾಲಕ್ರಮದಲ್ಲಿ ಒದಗಿಸಿದರು. ವೈದಿಕ ಪ್ರಭಾವವನ್ನೇ ಅಳವಡಿಸಿಕೊಂಡ ಶಿಲ್ಪ ಶಾಸ್ತ್ರಗಳು ಕೂಡ ಈ ದೇವತೆಗಳನ್ನು ಆರ್ಯದೇವತೆಗಳ ಪರಿವಾರ ದೇವತೆಗಳೆಂದು ಒಪ್ಪಿಕೊಂಡು ಅವುಗಳನ್ನು ಸಿದ್ಧಪಡಿಸುವ ವಿಧಿಗಳನ್ನು ನಿರೂಪಿಸಿದರು. ಇವನ್ನು ಕ್ಷುದ್ರ ದೇವತೆಗಳೆಂದು ವೈದಿಕನಿಷ್ಠರು ಹಳಿದರೂ, ಇವನ್ನು ಪೂಜಿಸುವ ಪದ್ಧತಿಯೇನು ಮರೆಯಾಗಲಿಲ್ಲ. ಯಜ್ಞಯಾಗಾದಿಗಳನ್ನು ಮಾಡುವಾಗಲೂ ಈ ದೇವತೆಗಳನ್ನು ತಣಿಸುವ ಪದ್ಧತಿ ಒದಗಿಬಂದಿತು! ಮನುಷ್ಯನ ಪ್ರಾಕೃತ ಸ್ವಭಾವದ ಬಯಕೆ–ಬೆದರಿಕೆಗಳಿಂದಲೇ ಎದ್ದುಬಂದ ಈ ದೇವತೆಗಳಿಗೆ ಆಧ್ಯಾತ್ಮಿಕವಾದ ಅರ್ಥವನ್ನು ಅಳವಡಿಸಿ, ಅವನ್ನು ಸಾಂಕೇತಿಕ ಮೇಲ್ಮೆಯ ನೆಲೆಗೇರಿಸಿದುದು ಈ ಸಮನ್ವಯ ಬುದ್ಧಿಯ ನಿದರ್ಶನವೆನ್ನಬಹುದು. ಶಬರಿಮಲೆಯ ಶಾಸ್ತ, ಧರ್ಮಸ್ಥಳದ ಮಂಜುನಾಥ,

ಪುರಿಯ ಜಗನ್ನಾಥ ಮೊದಲಾದ ಪ್ರಸಿದ್ಧ ದೇವತೆಗಳ ಇತಿಹಾಸವನ್ನು ಗಮನಿಸಿದರೆ ಇದು ಚೆನ್ನಾಗಿ ಅರ್ಥವಾದೀತು.

ಮನುಷ್ಯನ ಸುತ್ತಮುತ್ತ, ಮೇಲೆ ಕೆಳಗೆ, ಗಾಳಿಯಲ್ಲಿ ಸುಳಿದಾಡುತ್ತ ಕಣ್ಣಿಗೆ ಕಾಣದಂತೆ, ಮುಟ್ಟಲಾರದಂತೆ ಎಣಿಕೆಯಿಲ್ಲದಷ್ಟು ಚೈತನ್ಯಕಣಗಳು ಇರುವುವೆಂಬ ಕಲ್ಪನೆ ಎಲ್ಲ ಪ್ರಾಚೀನ ಜನರಲ್ಲಿಯೂ ಇದ್ದಿತು. ಒಂದೊಂದು ಕಣವೂ ಶಕ್ತಿಯ ಮುದ್ದೆ. ನಮಗೆ ಕೇಡನ್ನೂ ಮಾಡಬಹುದು, ಒಳಿತನ್ನೂ ಒದಗಿಸಬಹುದು. ನಮ್ಮಂತೆ ಅವಕ್ಕೂ ಹಸಿವೆಯುಂಟು, ಬಯಕೆಯುಂಟು, ಕೋಪತಾಪಗಳುಂಟು; ಅವು ಒಲಿಯುವುದೂ ಸಾಧ್ಯ, ಮುನಿಯುವುದೂ ಸಾಧ್ಯ. ಅವು ಒಲಿದರೆ ನಮಗೆ ಒಳಿತು ಎನ್ನುವ ಭಾವನೆಯಿಂದ ಅವುಗಳ ಹಸಿವನ್ನು ನೀಗಿಸಬೇಕು, ಬಯಕೆಗಳನ್ನು ತೀರಿಸಬೇಕು, ಕೋಪತಾಪಗಳನ್ನು ಇಳಿಸಬೇಕು ಎನ್ನುವ ತವಕ ಮೂಡುವುದು ಸರಿಯೇ. ಭಾರತದಲ್ಲಿ ಮೊದಲಿಗೆ ಇಂಥ ಭಾವನೆ ಎಲ್ಲೆಲ್ಲಿಯೂ ಪ್ರಚಲಿತವಾಗಿದ್ದಿತೆಂದು ತೋರುತ್ತದೆ. ಗೃಹ್ಯಸೂತ್ರಗಳಲ್ಲಿ ಬರುವ ವಿನಾಯಕರು, ಅಸುರರು, ಯಕ್ಷರು, ಯಕ್ಷಿಣಿಯರು, ಭೂತ ಪಿಶಾಚರು, ಗಂಧರ್ವರು, ಕಿನ್ನರರು, ನಾಗರು, ಶಾಕಿನಿ–ಡಾಕಿನಿಯರು, ಗ್ರಾಮದೈವಗಳು, ಗ್ರಹಗಳು ಇವೆಲ್ಲವೂ ಮೇಲೆ ಹೇಳಿದ ಚೈತನ್ಯಕಣಗಳೇ. ಇವುಗಳನ್ನು ಒಲಿಸಿಕೊಳ್ಳುವ ಕಾತರ ಒಂದಲ್ಲ ಒಂದು ಬಗೆಯಲ್ಲಿ ಇಂದಿಗೂ ಹಳ್ಳಿಗಾಡಿನಲ್ಲಿ, ಆದಿವಾಸಿ ಜನರಲ್ಲಿ ಉಳಿದುಬಂದಿದೆ. ಸಾಂಚಿ, ಬಾರ್ಹುತ್ ಸ್ತೂಪಶಿಲ್ಪಗಳಲ್ಲಿ ಕಂಡುಬರುವ ಯಕ್ಷ ಯಕ್ಷಿಣಿಯರು, ನಾಗದೇವತೆಗಳು, ವೃಕ್ಷದೇವತೆಗಳು, ಎಲ್ಲೋರ ಮೊದಲಾದ ದೇಗುಲಗಳಲ್ಲಿ ಕಡೆದಿರುವ ಗಣಗಳು ಇವೆಲ್ಲವೂ ಈ ಪ್ರಾಚೀನ ಕಲ್ಪನೆಯನ್ನು ಪ್ರತಿಬಿಂಬಿಸುವುವೇ. ಗ್ರಾಮದೇವತೆಗಳ ಮೂರ್ತಿಗಳನ್ನು ಮರದಲ್ಲಿ, ಮಣ್ಣಿನಲ್ಲಿ, ಕಲ್ಲಿನಲ್ಲಿ ಮಾಡಿ ಪೂಜಿಸುವುದನ್ನು ಇಂದಿಗೂ ಎಲ್ಲೆಲ್ಲಿಯೂ ಕಾಣಬಹುದು.

ಈ ಹಳೆಯ ದೈವಗಳನ್ನು ಶಿಲ್ಪದಲ್ಲಿ ಮೂಡಿಸುವಾಗ ವಿಚಿತ್ರವಾದ ಕಲ್ಪನೆಗಳನ್ನು ಬಳಸಿದ್ದಾರೆ. ಮನುಷ್ಯರ ಭಾವ–ಭೀತಿಗಳನ್ನು ಪ್ರತಿಬಿಂಬಿಸಲು ಹೆಚ್ಚೂ ಕಡಮೆ ಮನುಷ್ಯಾಕಾರವನ್ನೇ ಮೂಡಿಸುತ್ತಿದ್ದರು. ಆದರೆ ಸಾಮಾನ್ಯವಾದ ಮನುಷ್ಯಾಕಾರವಲ್ಲ ಅದು. ತಾಯ್ತನದ ಹಿರಿಮೆಯನ್ನು ನಿರೂಪಿಸಬೇಕೆಂದರೆ ಹೆಣ್ಣುಮೂರ್ತಿಗೆ ವಿಶಾಲವಾದ ವಕ್ಷಸ್ಥಲ, ಉತ್ಪ್ರೇಕ್ಷಿತ ಸ್ತನಗಳು, ದೊಡ್ಡ ನಡು, ಕಣ್ಣಿಗೆ ಕಾಣುವಂಥ ಯೋನಿಪ್ರದೇಶ ಇವನ್ನು ಅಳವಡಿಸುತ್ತಿದ್ದರು.

ಪ್ರಾಚೀನ ಮಾತೃದೇವತೆಗಳ ಶಿಲ್ಪಕೃತಿಗಳನ್ನು ನೋಡಿದರೆ ಈ ಕಲಾಪ್ರವೃತ್ತಿ ಅರ್ಥವಾದೀತು (ಚಿತ್ರಗಳು 6 ರಿಂದ 11). ಮನುಷ್ಯನನ್ನು ಬೆದರಿಸುವಂಥ ಬರಗಾಲ, ಬೇನೆ, ಸಾವು, ನೋವುಗಳಿಗೆ ಕಾರಣರೆನಿಸಿದ ದೇವತೆಗಳನ್ನು ನಿರೂಪಿಸಲು ಉಗ್ರಮೂರ್ತಿಗಳಿರುತ್ತಿದ್ದುವು. ಭಾರತದ ಕಾಳಿ, ಚಂಡಿ, ದುರ್ಗೆ, ಸಪ್ತಮಾತೃಕೆಯರು ಇವರ ಪುತ್ಥಳಿಗಳನ್ನು ನೋಡಿದರೆ ಇದು ಅರ್ಥವಾದೀತು. ವಿಕಟಾಟ್ಟಹಾಸದಲ್ಲಿ ಕರಾಳ ಮುಖದ ಮುದಿಗೊಡ್ಡು ಬಾಯಿತೆರೆದು ನಾಲಗೆಯನ್ನು ಹೊರಚಾಚಿರುವ ಕಾಳಿಕಾ ಮೂರ್ತಿಯ ಚಿತ್ರವೊಂದನ್ನು ಇಲ್ಲಿ ಕೊಟ್ಟಿದೆ. ಮನುಷ್ಯರಲ್ಲಿ ದೈವದ ಬಗ್ಗೆ ಭೀತಿಯನ್ನು ಹುಟ್ಟಿಸುವುದೇ ಇಂಥ ಶಿಲ್ಪಗಳ ಪ್ರಯೋಜನವೆಂದು ತೋರುತ್ತದೆ. ಧಾರ್ಮಿಕ ಪ್ರವೃತ್ತಿಗಳಲ್ಲಿ ಭಯದ ಪಾತ್ರ ಹೆಚ್ಚೇ ಅಲ್ಲವೇ?

ಕೆಲವು ದೈವಗಳ ವಿಶಿಷ್ಟ ಗುಣಗಳನ್ನು ಎತ್ತಿ ತೋರಿಸಲು ಭಂಗಿಗಳನ್ನೂ ಆಯುಧಗಳನ್ನೂ ಮುದ್ರೆಗಳನ್ನೂ ಬಳಸಿರುವುದುಂಟು. ದಕ್ಷಿಣ ಕನ್ನಡ ಜಿಲ್ಲೆಯ ಭೂತದ ವಿಗ್ರಹಗಳು ಇದಕ್ಕೆ ನಿದರ್ಶನ.



ಚಿತ್ರ 6

ಈಜಿಪ್ಟ್ ದೇಶದ ಮಾತೃ ದೇವತೆ, ಶಕ್ತಿ, ಇದನ್ನು ನೈಲ್ ನದಿಯ ತೀರದ ಮಣ್ಣಿನಿಂದಲೇ ಮಾಡಿದ್ದಾರೆ. ಹತ್ತು ಸಾವಿರ ವರ್ಷಗಳಷ್ಟು ಹಳೆಯದು ಈ ಮೂರ್ತಿಶಿಲ್ಪ!



ಚಿತ್ರ 7

ಅಸ್ಸಿರೋ – ಬೇಬಿಲಾನ್ ಧರ್ಮದ ಮಾತೃದೇವತೆ, ಇಷ್ಟಾರ್. ಈಕೆ ಸಂಧ್ಯಾ ದೇವತೆ; ಆದರೂ ಉಗ್ರ ರೂಪಿಣಿ, ನಮ್ಮ ದುರ್ಗೆಯಂತೆ. ಅಲ್ಲಿ ದೇವದಾಸಿಯರಿಗೆ ಅಭಿಮಾನದೇವತೆ; ಪ್ರೇಮ, ಸಂತಾನ ಎರಡನ್ನೂ ನೋಡಿಕೊಳ್ಳುವ-ವಳು ಅವಳು



ಚಿತ್ರ 8

ಮಥುರಾದಲ್ಲಿ ದೊರೆತ ಮಾತೃ ದೇವತೆಯ ಮಣ್ಣಿನ ಮೂರ್ತಿ. ಇದು ಮೌರ್ಯರ ಕಾಲಕ್ಕೂ ಹಿಂದಿನದು

ಚಿತ್ರ 9

ಸುಟ್ಟಮಣ್ಣಿನಿಂದ ಮಾಡಿದ ಮಾತೃದೇವತೆ. ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ದೊರೆತುದು

ಕೆಲವೊಮ್ಮೆ ಆ ಗುಣಗಳಿಗೆ ಅನುರೂಪವಾದ ಅಭಿವ್ಯಂಜಕವಾದ ಪ್ರಾಣಿಗಳನ್ನೂ ದೈವಗಳೊಂದಿಗೆ ವಾಹನಗಳಾಗಿ, ಲಾಂಛನಗಳಾಗಿ ಸೇರಿಸುತ್ತಾರೆ. ಎಮ್ಮೆಯ ಮೇಲೆ ಕುಳಿತ ಕುಟ್ಟಿಚಾತ್ತ, ಆನೆಯ ಮೇಲೆ ಕುಳಿತ ಅಯ್ಯಪ್ಪ, ಕುದುರೆಯ ಮೇಲೆ ಸವಾರಿಮಾಡುವ ರಾವುಲ ಅಥವಾ ಬೇಟೆರಾಯ. ನಾಯಿಗಳೊಂದಿಗಿರುವ ಭೈರವ, ಹುಲಿಯ ಮೇಲೆ ಅಡ್ಡಾಡುವ ಹುಲಿಗಮ್ಮ (ದುರ್ಗೀ) ಮೊದಲಾದುವು ಪ್ರಸಿದ್ಧವಲ್ಲವೇ? ದೇವತೆಗಳ ದೇಹದಲ್ಲಿಯೇ ಪ್ರಾಣಿಗಳಿಗೆ ಎಡೆಮಾಡಿಕೊಟ್ಟಿರುವುದೂ ಇದೆ. ಗಜಮುಖ, ನರಸಿಂಹ, ಹಯಗ್ರೀವ, ನರವರಾಹ, ವ್ಯಾಘ್ರಪಾದ, ನಾಗಪುಚ್ಛ, ಮಹಿಷಾಸುರ, ನಂದಿಮುಖ, ಗಂಡಭೇರುಂಡ, ಶರಭೇಶ್ವರ, ಗರುಡ, ಹನುಮಂತ ಮೊದಲಾದ ದೇವತೆಗಳ ಹಿನ್ನೆಲೆಯನ್ನು ವಿಚಾರಮಾಡಬೇಕು.

ಹಿಂದೂ ಧರ್ಮದಲ್ಲಿ 330,000,003 ದೇವತೆಗಳಿದ್ದಾರೆಂದು ಪ್ರತೀತಿ. ವೈದಿಕ ಸಾಹಿತ್ಯಕ್ಕೆ ಪರಿಚಿತರು ಮೂವತ್ತುಮೂರು ಮಂದಿ ಅಷ್ಟೆ (ತ್ರಯತ್ರಿಂಶತ್): ಎಂಟು ವಸುಗಳು, ಹನ್ನೊಂದು ಮಂದಿ ರುದ್ರರು, ಹನ್ನೆರಡು ಆದಿತ್ಯರು, ದ್ಯೌ ಮತ್ತು ಪೃಥಿವೀ. ಉಳಿದ ದೇವತೆಗಳು ವೈದಿಕವಲ್ಲದ ಇನ್ನೊಂದು ಸಂಪ್ರದಾಯಕ್ಕೆ ಸೇರಿದವರು. ಇವರಲ್ಲಿ ಕೆಲವರು ಮನುಷ್ಯರಾಗಿದ್ದು ತಮ್ಮ ವೀರ್ಯದಿಂದಲೂ ಚಾತುರ್ಯದಿಂದಲೂ ತಪಸ್ಸಿದ್ಧಿಯಿಂದಲೂ ದೇವತೆಗಳೆಂದು ಪರಿಗಣಿತರಾದವರು; ಕೆಲವರು ವಿಚಿತ್ರ ಸಂದರ್ಭಗಳಿಂದ ದೇವತೆಗಳ ನೆಲೆಯನ್ನು ಮುಟ್ಟಿದವರು. ಹಳೆಯ ವಾಙ್ಮಯದಲ್ಲಿಯೇ ಶಿವನ ಪರಿಚಾರಕರಾದ ಗಣಗಳು, ಕುಬೇರಯಕ್ಷನ ಅನುಚರರಾದ ಗುಹ್ಯಕರು, ಶಿವನ ಗಣಕ್ಕೆ ಸೇರಿದ ಕೂಷ್ಮಾಂಡರು, 220 (ಅಥವಾ 236) ಮಂದಿ ಮಹಾರಾಜಿಕರು, ದಿತಿಯ ಮಕ್ಕಳೂ ರುದ್ರನ ಸಹಚರರೂ ಆದ ಮರುತ್ತುಗಳು, ಮಂತ್ರಮೂರ್ತಿ



ಚಿತ್ರ, 10
ದಕ್ಷಿಣ ಕನ್ನಡ ಜಿಲ್ಲೆಯ ಅಂಬಲಪಾಡಿಯಲ್ಲಿರುವ ಕಾಳಿಕಾಮೂರ್ತಿ. ಮರದಿಂದ ಮಾಡಿದುದು; ಈ ದೇವತೆಯ ಮುಂದೆ 'ದರ್ಶನ' ಇಂದಿಗೂ ನಡೆಯುತ್ತದೆ

ಚಿತ್ರ 11
ತಮಿಳುದೇಶದ ಕಾಳಿಯ ವಿಗ್ರಹ

ಗಳಾದ ಸಾಧ್ಯರು, 12 (ಅಥವಾ 36) ಮಂದಿ ತುಷಿತರು, ಕ್ರತುಮಹರ್ಷಿಯ ಮಕ್ಕಳಾದ ವಾಲಖಿಲ್ಯರು, ಗಂಗೆಯ ಮಕ್ಕಳಾದ ವಸುಗಳು, ಇಂದ್ರನ ಬಂಟರಾದ ವಿದ್ಯಾಧರರು ಇವರೆಲ್ಲರ ಉಲ್ಲೇಖವಿದೆ. ಇವರ ಸಂಪರ್ಕ ವೈದಿಕ ಋಷಿಗಳಿಗೂ ಗೃಹ್ಯಸೂತ್ರವನ್ನು ಅನುಸರಿಸುತ್ತಿದ್ದ ಜನಕ್ಕೂ ಇದ್ದಿತು. ಇವರಿಗೆಲ್ಲ ಮೂರ್ತಿ ನಿರ್ದೇಶನವಿರಲಿಲ್ಲ; ಶಿಲ್ಪಶಾಸ್ತ್ರಗಳು ಇವರ ಪ್ರಸ್ತಾಪ ಮಾಡುವುದಿಲ್ಲ.

ಈ ದೇವತೆಗಳಲ್ಲದೆ ಹಳ್ಳಿಹಳ್ಳಿಗಳಲ್ಲಿ ವಿಶಿಷ್ಟರಾದ ದೇವತೆಗಳೂ ಎಣಿಕೆಯಿಲ್ಲದಷ್ಟು ಇದ್ದಾರೆ. ಗ್ರಾಮದೇವತೆಗಳೆಂದು ಇವರನ್ನೆಲ್ಲ ಒಟ್ಟಾಗಿ ವ್ಯವಹರಿಸುವ ವಾಡಿಕೆಯಿದೆ. ಬಹುಮಟ್ಟಿಗೆ ಇವರಲ್ಲಿ ಹೆಣ್ಣು ದೇವತೆಗಳೇ ಹೆಚ್ಚು. ಅಮ್ಮ (ಅಂಬಿಕೆ, ಮಾತೆ), ದೊಡ್ಡಮ್ಮ (ಮಹಾಂಬಾ, ಮುಂಬಾ, ಇದರಿಂದಲೇ ಮುಂಬಯಿ ಅಥವಾ ಬೊಂಬಾಯಿ ಆದದ್ದು), ಮೀನ್‌ಕಣ್ಣು (ಮೀನಾಕ್ಷಿ), ಸಿನೀವಾಲಿ (ಮಕ್ಕಳು ಹುಟ್ಟುವಾಗ ತಾಯಿಯನ್ನು ವಶಪಡಿಸಿಕೊಂಡಿರುವವಳು), ಯೆಲ್ಲಮ್ಮ (ಬ್ರಾಹ್ಮಣನ ರುಂಡವನ್ನು ಕೈಯಲ್ಲಿ ಹಿಡಿದವಳು), ತಿಪ್ಪಮ್ಮ, ಹುಲಿಗಮ್ಮ, ಕೊಟ್ಟವಿ, ಮಾರಿಯಮ್ಮ (ಸಾವಿನ ದೇವತೆ), ಮಾತಂಗಿ (ಆನೆಕಾಲಿನವಳು, ಆ ಹೆಸರಿನ ರೋಗದ ದೇವತೆ), ಘಂಟಿಕು (ಬಂಗಾಳದ ಕಡೆ ಕಜ್ಜಿ–ತುರಿ ಕಾಯಿಲೆಗಳ ದೇವತೆ), ಮಾನಸಾ (ಬಂಗಾಳದ ಕಡೆಯೇ ಹಾವಿನ ದೇವತೆ), ದಕ್ಷಣೇರಾಯಿ (ಹುಲಿದೇವತೆ), ವಿಷಹರಾ (ಕ್ರಿಮಿಕೀಟ, ಸರೀಸೃಪಗಳ ಬಾಧೆಯ ದೇವತೆ), ಶೀತಲಾ (ಸಿಡುಬಿನ ದೇವತೆ, ಕತ್ತೆಯ ಮೇಲೆ ಕೂತವಳು), ಹಾರೀತಿ, ಪೋಲೇರಮ್ಮ, ಡಾಕಿನೀ (ಮನುಷ್ಯರ ಮಾಂಸವನ್ನು ತಿನ್ನುವ ದೇವತೆ, ಕಾಳಿಯ ಊಳಿಗದವಳು) ಮೊದಲಾದವರು ನಾಡಜನಕ್ಕೆ ಪರಿಚಿತರೇ. ಗಂಡು ದೈವಗಳಲ್ಲಿ ಖಂಡೋಬಾ, ಹಯಗ್ರೀವ (ಜ್ವರದೇವತೆ), ಕ್ಷೇತ್ರಪಾಲ, ವೀರಭದ್ರ, ಅಯ್ಯನಾರ್, ಪೋತರಾಜು (ಸಾಮಾನ್ಯವಾಗಿ ಗ್ರಾಮದೇವತೆಗಳ ಸೋದರ) ಇವರನ್ನು ಹೆಸರಿಸಬಹುದು.

ಪ್ರಾಚೀನ ಪದ್ಧತಿಗಳು

ಇವರು ಬದುಕಿನ ಬಯಕೆಗಳಿಂದಲೇ ಮೈತುಂಬಿ ಬಂದವರೆಂಬುದು ಸ್ಪಷ್ಟವಾಗಿದೆ. ಬಯಕೆಗಳಿಗೆ ಅಡ್ಡಿ–ಆತಂಕಗಳು ಎಡರು–ತೊಡರುಗಳು ಕಾಣಿಸಿಕೊಂಡಾಗ ಅವೆಲ್ಲ ಈ ದೇವತೆಗಳ ಮುನಿಸು ಎಂದುಕೊಂಡು ಅವರನ್ನು ಒಲಿಸುವ ಯತ್ನಮಾಡುವುದು ಇಂದಿಗೂ ಇದೆ. ಜಗತ್ತಿನ ಸೃಷ್ಟಿ–ಸ್ಥಿತಿ–ವಿಲಯಗಳಿಗೂ ಈ ದೇವತೆಗಳಿಗೂ ಸಂಬಂಧವಿರದು, ಜನಕ್ಕೂ ಅದರ ಗೊಡವೆಯೇಕೆ? ದಿನದಿನದ ಕಷ್ಟ–ಕಾರ್ಪಣ್ಯ–ನಿಷ್ಠುರಗಳು ಹರಿದರೆ ಸಾಕು. ಆಧ್ಯಾತ್ಮಿಕವಾದ ನೆಲೆಗಿಂತಲೂ ವ್ಯವಹಾರ ಸುಖದ ನೆಲೆ ಹೆಚ್ಚು ಅಗತ್ಯವಾದುದಲ್ಲವೇ? ಹೀಗಾಗಿ ಗ್ರಾಮದೇವತೆಗಳೆಲ್ಲ ಬೇಸಾಯಕ್ಕೆ, ಬಡತನಕ್ಕೆ, ದನಕರುಗಳಿಗೆ, ಬೇನೆಗಳಿಗೆ ಸಂಬಂಧಿಸಿದುವೇ. ಇವರಿಗೆ ಪರಿಷ್ಕಾರವಾದ ಆರಾಧನೆಯ ಅಗತ್ಯವೂ ಇಲ್ಲ, ದೊಡ್ಡ ದೊಡ್ಡ ಗುಡಿಗಳ ಗೊಂದಲವೂ ಇಲ್ಲ. ದಾರಿಯ ಪಕ್ಕದಲ್ಲೇ ಕೆಲವು ಕಲ್ಲುಗಳನ್ನು ಕಲೆಹಾಕಿ, ಸಣ್ಣದೊಂದು ಗೂಡನ್ನು ಮಾಡಿ ಅದರೊಳಗೆ ಒಂದು ಕಲ್ಲುಗುಂಡನ್ನೋ, ಒರಟಾಗಿ ಕಡೆದ ಮೂರ್ತಿಯನ್ನೋ ಇರಿಸಿ ಕೈಮುಗಿದರೆ ತೀರಿತು. ವಿಶೇಷ ಸಂದರ್ಭಗಳಲ್ಲಿ ಕುರಿ, ಕೋಳಿ, ಆಡು, ಎಮ್ಮೆಗಳನ್ನು ಒಪ್ಪಿಸಬೇಕಾದೀತು; ಸಾಮಾನ್ಯವಾಗಿ ಕುಂಕುಮ ಅರಶಿನ, ಅಕ್ಕಿಕಾಳು, ಪುರಿ, ಬಾಳೆಹಣ್ಣು, ಮೊಸರು ಆದರೆ ಸಾಕು. ಪೂಜೆಗೆ ಬ್ರಾಹ್ಮಣ ಪೂಜಾರಿಯೂ ಇರುವುದಿಲ್ಲ, ಸಂಸ್ಕೃತ ಮಂತ್ರಗಳೂ ಇರುವುದಿಲ್ಲ. ಕೆಲವು ಹಳ್ಳಿಗಳಲ್ಲಿ ಹಾಡುಗಳನ್ನು ಬಳಸುವುದುಂಟು; ಆದರೆ ಇದೇನು ನಿಯಮವಲ್ಲ. ಕರ್ಪೂರದ ಆರತಿಯನ್ನು ಬೆಳಗುವುದು ವಾಡಿಕೆ; ಎಣ್ಣೆದೀಪವನ್ನೂ ಇಡುತ್ತಾರೆ.

ಗುಡಿಯಾಗಲೀ ಗೂಡಾಗಲೀ ಇಲ್ಲದ ದೈವಗಳೂ ಇವೆ. ಕಲ್ಲುಕಂಬವನ್ನು ಹಾಗೆಯೇ, ಅಥವಾ ಅದರಲ್ಲಿ ಚಿತ್ರವನ್ನು ಕಂಡರಿಸಿ, ಒಂದು ಕಟ್ಟೆಯ ಮೇಲೆ ನಿಲ್ಲಿಸುತ್ತಾರೆ, ಕಲ್ಲಿಲ್ಲದಿದ್ದರೆ ಮರದ ಕೊಂಟೇ ದೈವದ ಸಂಕೇತವಾಯಿತು; ಅದೂ ಇಲ್ಲದಿದ್ದರೆ ಬರಿಯ ಕಟ್ಟೆಯೇ ಸಾಕು! ಆದರೆ ಅದನ್ನು ತುಳಿಯದಂತೆ, ಕಡೆಗಾಣಿಸದಂತೆ, ಮರೆಯದಂತೆ ನೋಡಿಕೊಳ್ಳಲು ಅದರ ಸುತ್ತ ಒಂದು ಮೋಟುಗೋಡೆಯನ್ನು ಕಟ್ಟುವುದಿದೆ. ತುಳು ದೇಶದಲ್ಲಿ ಬರಿಯ ಕಟ್ಟೆಯನ್ನೇ ಅಥವಾ ತೂಗುಮಣೆಯನ್ನೇ ದೈವದ ಮಂಚವೆಂದು ಕರೆದು ಅದರ ಮೇಲೆ ಗುಡಿಗಳನ್ನೂ ಕಟ್ಟುತ್ತಾರೆ; ಇವಕ್ಕೆ ದೈವದ ಸಾನಗಳೆಂದು ಹೆಸರು.

ತುಳು ದೇಶದ ಪ್ರಸ್ತಾಪಮಾಡುವಾಗ ಅಲ್ಲಿನ ಭೂತಾರಾಧನೆಯನ್ನು ಉಲ್ಲೇಖಿಸಬೇಕು. ಸಾಗರದ ತೀರದಲ್ಲಿ ಕೇರಳಕ್ಕೆ ಸೇರಿಕೊಂಡಿರುವ ಈ ನಾಡಿನಲ್ಲಿ ಹಲವಾರು ಸಂಪ್ರದಾಯಗಳೂ ಕಲ್ಪನೆಗಳೂ ಸಮಾನವಾಗಿಯೇ ಉಳಿದುಬಂದಿವೆ. ಅಲ್ಲಿನ ಬಿಲ್ಲವರು, ಬಂಟರು, ಮೊಗವೀರರು, ಕೊರಗರು, ಓವದರಿಗಳು, ಪೂಂಬಡರು ಮೊದಲಾದ ಪಂಗಡಗಳವರೆಲ್ಲ ಭೂತಗಳನ್ನು (ದೈವಗಳನ್ನು) ನಂಬಿ, ಅದರ ನೇಮಕ್ಕೆ ಸರಿಯಾಗಿ ನಡೆದುಕೊಳ್ಳುತ್ತಾರೆ. ಭೂತವೆಂದರೆ ಮೊದಲಿಗೆ ಶಿವನ ಗಣದಲ್ಲಿಯೇ ಸೇರಿದ್ದು ಶಿವನ ಶಾಪದಿಂದ ಇಲ್ಲಿಗಿಳಿದು ಅಲೆದಾಡುತ್ತಾ, ಮನುಷ್ಯರನ್ನು ಕಾಡಿ ಬೇಡಿ ಅವರಿಂದ ಕಾಣಿಕೆ–ಕೊಡುಗೆಗಳನ್ನು ಪಡೆದು, ಅವರನ್ನು ಕಾಪಿಡುವ ಚೈತನ್ಯಗಳು. ಭೂತವಲ್ಲದೆ ಪ್ರೇತ (ಅಕಾಲ ಮರಣಕ್ಕೆ ತುತ್ತಾದ ಜೀವಗಳು. ಹೀನ ಕೆಲಸಮಾಡಿ 'ಕುಲೆ' ಯಾದವರು, ಜನರನ್ನು ಹಿಡಿದು, ಕೋಳಿಗಳ ರಕ್ತಕುಡಿಯುವುವು), ಪಿಶಾಚ (ಆಕಸ್ಮಿಕ, ಅಪಘಾತ, ಆತ್ಮಹತ್ಯೆ ಇದರಿಂದ ಸತ್ತವರು, ಅಪರಕರ್ಮ ಕಾಣದಿದ್ದವರು, ಮದುವೆಯಾಗದೆ ತೀರಿಕೊಂಡವರು, ಇವರ ಜೀವಗಳು; ಗಾಳಿಯಾಗಿ, ಬೆಂಕಿಯಾಗಿ ಜನರ ನಡುವ ಕಾಣಿಸಿಕೊಂಡು ಅವರನ್ನು ಹಿಂಸಿಸುವುವು) ಮತ್ತು ರಾವು (ಯಕ್ಷಿಣಿಯಿಂದ, ಆಭಿಚಾರದಿಂದ ಸತ್ತವರ ಜೀವಗಳು; ನೆರಳಿನಂತೆ ಮೈದಳೆದು ಮನುಷ್ಯರನ್ನೂ ದನಕರುಗಳನ್ನೂ ಕೊಂದು ಅವರ ರಕ್ತ ಹೀರುವ ಹೊಟ್ಟೆಬಾಕರು) ಎನ್ನುವ ಭೇದವೂ ಅಲ್ಲಿ ಉಂಟು. ಇವರಲ್ಲದೆ ಮಾರಿ, ನಾಗ ಈ ದೇವತೆಗಳ ಪೂಜೆಯೂ ಇದೆ. ಮನೆಗಳ ಹಿಂದೆ ನಾಗಬನಗಳು (ಕಾವು) ಇದ್ದು ಅಲ್ಲಿ ಸರ್ಪಾರಾಧನೆ ನಡೆಯುವ ಪದ್ಧತಿಯಿದೆ; ಶಾಸ್ತ (ಕುಟ್ಟಿಚಾತ್ತ)ನ ಪೂಜೆಯೂ ನಡೆಯುತ್ತದೆ.

ಭೂತಗಳ ಸಂಖ್ಯೆಯನ್ನು ಎಣಿಸುವುದಾಗದು. ಆದರೂ ಸುಮಾರು ನೂರ ಮೂವತ್ತು ಬೇರೆ ಬೇರೆ ಭೂತಗಳನ್ನು ನಿರ್ದೇಶಿಸಿದ್ದಾರೆ. ಇವರಲ್ಲಿ ಅಣ್ಣಪ್ಪ, ಬೆರ್ಮ, ಚಾಮುಂಡಿ, ದೂಮಾವತಿ, ದೇಯಿ ಬೈದ್ಯೇದಿ, ದುರ್ಗಿ, ಪಂಜುರ್ಲಿ, ನಂದಿ ಗೋಣ, ಪಿಲಿಚಾವುಂಡಿ, ರಕ್ತೇಶ್ವರಿ (ಲೆಕ್ಕೆಸಿರಿ), ಕಾಳರಾತ್ರಿ, ಕಲ್ಕುಡೆ, ಕಲ್ಲುರ್ಟಾಯೆ, ಮಹಮ್ಮಾಯಿ, ಉಳ್ಳಾಳ್ತಿ, ದುಗ್ಗಿಲ್ಲಾಯೆ, ಜರಂದಾಯೆ, ಕುಮಾರಸ್ವಾಮಿ, ಜೋಗಿಪುರುಷೆ, ಕೋಟಿ–ಚೆನ್ನಯ, ಸರಲು ಜುಮಾದಿ ಇವರೆಲ್ಲ ತುಂಬ ಜನಪ್ರಿಯ ದೈವಗಳು. ಇವರಿಗೆ ನಾಡಿನಲ್ಲೆಲ್ಲ ಗುಡಿಗಳಿದ್ದು ಕೋಲ, ಬಂಡಿ, ನೇಮ, ಅಗೇಲುತಂಬಿಲ ಎನ್ನುವ ಹರಕೆ ಉತ್ಸವಗಳು ನಡೆಯುವುವು. ಸಾಮಾನ್ಯವಾಗಿ ಭೂತಗಳ ಮೂರ್ತಿಗಳನ್ನು ಮರದಲ್ಲಿಯೇ ಮಾಡಿಡುವ ವಾಡಿಕೆ; ಈ ಮರದ ಮೂರ್ತಿಗಳು ಅಗಾಧಪ್ರಮಾಣದಲ್ಲಿದ್ದು ಅದ್ಭುತ ಭಯಾನಕವಾಗಿರುವುದನ್ನು ಕಾಣಬಹುದು. ಮೆಕ್ಕೆಕಟ್ಟೆಯ ವಿಗ್ರಹಗಳು ಪ್ರಸಿದ್ಧವಾಗಿವೆ. ಮೂರ್ತಿಗಳ ಸ್ವಾರಸ್ಯವೆಂದರೆ ಮುಖದ ಮತ್ತು ಅಂಗಭಂಗಿಗಳ ವಿಚಿತ್ರ ವಿನ್ಯಾಸ. ಇವುಗಳಲ್ಲಿ ಪ್ರಾಣಿಗಳನ್ನು ಅಳವಡಿಸಿಕೊಂಡ ಮೂರ್ತಿಗಳೇ ಹೆಚ್ಚು. ಪಂಜುರ್ಲಿ (ಹಂದಿ), ನಂದಿಗೋಣ (ಎತ್ತು), ಮಹಿಸಂದಾಯೆ (ಎಮ್ಮೆ ಅಥವಾ ಎತ್ತು), ಜರಂದಾಯೆ (ಕುದುರೆ), ಪಿಲಿಭೂತ (ಹುಲಿ) ಮೊದಲಾದುವು ನಿದರ್ಶನಗಳು. ಪ್ರಾಣಿಗಳನ್ನು ವಾಹನಗಳಾಗಿಯೂ ಇರಿಸುವುದುಂಟು. ಸಣ್ಣದೊಂದು

ಮಣೆಯನ್ನು ಗುಡಿಯ ಒಂದು ಗೋಡೆಗೆ ಸಿಕ್ಕಿಸಿ, ಅಥವಾ ಅದನ್ನು ತೂಗಿಬಿಟ್ಟು ಅದರ ಮೇಲೆ ದೈವಗಳ ಸಣ್ಣ ಸಣ್ಣ ಲೋಹಮೂರ್ತಿಗಳನ್ನಿರಿಸುತ್ತಾರೆ. ಹಿತ್ತಾಳೆಯ ನೀರುಗಿಂಡಿಯನ್ನೂ, ಗಂಟೆಯನ್ನೂ ಕತ್ತಿಯನ್ನೂ ಮಣೆಯ ಮೇಲಿರಿಸುವುದುಂಟು. ಭೂತಾರಾಧನೆಯ ಮಡಿಲಿಂದಲೇ ಎದ್ದ ಧರ್ಮದ ಸ್ವಾರಸ್ಯವನ್ನು ಮುಂದೆ ವಿವರವಾಗಿ ಕೊಟ್ಟಿದೆ. ಇವೆಲ್ಲ ಗ್ರಾಮಭೂತಗಳಾದರೆ, ಕಾಡಿನ ನಡುವೆ ನೆಲೆಸಿರುವ ಬೆರ್ಮೆ (ಬ್ರಹ್ಮರಾಕ್ಷಸ)ನೂ ಕಾಲಕಾಲಕ್ಕೆ ಪೂಜೆಗೊಳ್ಳುತ್ತಾನೆ. ಇಲ್ಲಿ ಆರ್ಯಸಂಸ್ಕೃತಿಯ ಪ್ರಭಾವ ಬೇರೆ ಬೇರೆ ಹಂತಗಳಲ್ಲಿ, ಬೇರೆ ಬೇರೆ ಪ್ರಮಾಣಗಳಲ್ಲಿ ಮೂಡಿಬಂದಿರುವುದು ಸ್ಪಷ್ಟವಾಗಿದೆ.

ಮನುಷ್ಯರೇ ಆಗಿದ್ದವರು ದೇವತೆಗಳೆಂದು ಪೂಜೆಗೊಳ್ಳುತ್ತಿದ್ದುದು ಹೊಸ ವಿಚಾರವೇನಲ್ಲ. ಋಗ್ವೇದದಲ್ಲಿಯೇ ಇಂದ್ರನನ್ನು ಹಲವಾರು ಬಾರಿ ಮನುಷ್ಯರಲ್ಲಿ ಮನುಷ್ಯನೆಂದೇ ನಿರ್ದೇಶಿಸಿದ್ದಾರೆ (ಸವಿಷ್ಟಂ ನೃಣಾಂ ನರಂ 8,40,2; ನರಂ 1,30,9; ನೃಣಾಂ ನೃತಮಂ 1, 178, 3; ನೃತಮಃ 1, 178, 4 ಇತ್ಯಾದಿ). ಹೀಗೆಯೇ ಅಗ್ನಿಯೂ ಮನುಷ್ಯನೇ (ನೃಣಾಂ ನೃತಮಃ; ನೃಣಾ ನೃಪತೇ; ನೃವತ್ ಸಖಾ ಸಭಾವಾನ್ 1,77,4). ಇಂದ್ರನಿಗೆ ನೆರವಾದ ಮರುತ್ತುಗಳು ಮೊದಲಿಗೆ ಮನುಷ್ಯರೇ (ಋಗ್ವೇದ 1,129,2, ಸಾಯಣಾಚಾರ್ಯರ ಭಾಷ್ಯ – ನೃಭಿಃ ಮನುಷ್ಯೈಃ ಏವ ಸದ್ಭಿಃ, ಪಶ್ಚಾತ್ ದೇವತ್ವಂ ಆಪನ್ನೈಃ ಮರುದ್ಭಿಃ); ವಹ್ನಿಗಳೂ, ಋಭುಗಳೂ ಅಂಥವರೇ (ಋಗ್ವೇದ 1,20,8, ಸಾಯಣ ಭಾಷ್ಯ – ಪೂರ್ವಂ ಮನುಷ್ಯತ್ವೇನ ಮರಣಯೋಗ್ಯಃ ಅಪಿ ಅಮೃತತ್ವಲಾಭೇನ ಪ್ರಾಣಾನ್ ಧಾರಿತವಂತಃ). ಇವರೆಲ್ಲ ತಂತಮ್ಮ ಗುಣ ವಿಶೇಷಗಳಿಂದ ಅಮರರಾದವರು. ಈ ಹಿನ್ನೆಲೆಯಲ್ಲಿಯೇ ರಾಮ, ಕೃಷ್ಣ, ಹನುಮಂತ, ಅರ್ಜುನ, ಭೀಮ, ವಿಟ್ಠಲ, ಬುದ್ಧ, ಶಾಸ್ತ, ಮೀನಾಕ್ಷಿ ಮೊದಲಾದ ದೇವತೆಗಳ ಬೆಳವಣಿಗೆಯನ್ನು ಗುರುತಿಸಬಹುದು. ಹಳ್ಳಿಗಳ ಕಡೆ ಪೂಜೆಗೊಳ್ಳುವ ಹಲವಾರು ಹೆಣ್ಣು ದೇವತೆಗಳಂತೂ ತಮ್ಮ ಬದುಕಿನಲ್ಲಿ ಹಿರಿಮೆಯನ್ನು ಗಳಿಸಿಕೊಂಡು ದೇವತೆಗಳಾದ ಕಥೆಗಳೇ ಇವೆ. ಕೆರೆ ಒಡೆದು ಹಳ್ಳಿ ಹಾಳಾಗುವುದನ್ನು ತಪ್ಪಿಸಲು ಒಬ್ಬಾಕೆ ನೀರಿನಲ್ಲಿ ಹಾರಿ ಶೀರಿಕೊಂಡಳು; ಕೆರೆಗೆ ನೀರು ಬಾರದಿರಲು ಇನ್ನೊಬ್ಬಳು ಬಲಿಯಾದಳು; ಊರನ್ನು ಕಾಡುವ ಹಗೆಗಳನ್ನು ಓಡಿಸಲು ಕತ್ತಿಹಿರಿದು ಹೆಣಗಾಟದಲ್ಲಿ ದೇಹವಿಟ್ಟವಳು ಇನ್ನೊಬ್ಬಳು; ತನ್ನ ಶೀಲವನ್ನು ಉಳಿಸಿಕೊಳ್ಳಲು ಪ್ರಾಣವನ್ನೇ ಬಿಟ್ಟವಳು ಮತ್ತೊಬ್ಬಳು; ಊರ ಹಿರಿಯರು ಸಮರದಲ್ಲಿ ತೀರಿಕೊಂಡಾಗ ಸತಿಯಾದವರಂತೂ ಲೆಕ್ಕವಿಲ್ಲದಷ್ಟು ಮಂದಿ!

ಇಂಥವರಿಗೆಲ್ಲ ಕಟ್ಟೆಗಳನ್ನೂ, ಕಲ್ಲುಗಳನ್ನೂ, ಕಲ್ಲಿನಲ್ಲಿ ಕಂಡರಿಸಿದ ಪುತ್ಥಳಿಗಳನ್ನೂ ಊರವರು ಏರ್ಪಡಿಸಿ ಕಾಲಕಾಲಕ್ಕೆ ಅವರನ್ನು ನೆನೆಸಿಕೊಂಡು ಗೌರವ ಸಲ್ಲಿಸುತ್ತಿದ್ದರು. ಮೈಸೂರು, ಮದ್ರಾಸು ಪ್ರಾಂತ್ಯಗಳಲ್ಲಿ ಮಾಸ್ತಿಕಲ್ಲುಗಳನ್ನು ವಿಶೇಷವಾಗಿ ಹಳ್ಳಿಹಳ್ಳಿಗಳಲ್ಲಿಯೂ ಕಾಣಬಹುದು. ಮಾಸ್ತಿಕಲ್ಲು ಎನ್ನುವುದು ಮಹಾಸತಿ ಕಲ್ಲು ಎನ್ನುವುದರ ರೂಪಾಂತರ. ಗಂಡನನ್ನೇ ನಂಬಿ, ತನ್ನ ಬಾಳನ್ನು ಅವನಿಗೆ ಅನುಕೂಲವಾಗಿ ಮುಡಿಪಿಡುವ, ಊರಿನ ಹಿತಕ್ಕೆ ತನ್ನ ಬದುಕನ್ನೇ ಬಲಿಕೊಡುವ, ಗುಣಶೀಲಸಾಹಸಗಳಿಂದ ಹೆಸರಾದ ಹೆಂಡತಿಯೇ ಮಹಾಸತಿ. ಇವಳ ನೆನಪನ್ನು ಉಳಿಸುವ ಕಲ್ಲು ಮಾಸ್ತಿಕಲ್ಲು. ಇಂಥ ಹೆಂಗಳೆಯರು ತೀರಿಕೊಳ್ಳುವ ಸಂದರ್ಭವೇನು ಸಾಮಾನ್ಯವಾದುದಲ್ಲ. ಈ ಸಂದರ್ಭವನ್ನೂ ಕಲ್ಲಿನಲ್ಲೇ ಕಡೆದು ಸ್ಮಾರಕದೊಂದಿಗೆ ಶಿಲ್ಪವನ್ನೂ ಮೂಡಿಸುವುದು ಈ ಕಲ್ಲುಗಳ ಸ್ವಾರಸ್ಯ. ಹಲವು ವೇಳೆ ಮಾಸ್ತಿಕಲ್ಲುಗಳ ಮೇಲೆ ಶಾಸನವೂ ಇರುತ್ತದೆ.

ಬಹುಮಟ್ಟಿಗೆ ಮಾಸ್ತಿಕಲ್ಲುಗಳು ಸಹಗಮನದ ಸಂದರ್ಭವನ್ನು ಸೂಚಿಸುತ್ತವೆ. ವೀರನಾದ ಗಂಡನು ಕಾದಾಡಿ ರಣರಂಗದಲ್ಲಿ ಮಡಿದರೆ ಅಥವಾ ದುಷ್ಟ ಪ್ರಾಣಿಗಳೊಂದಿಗೆ ಸೆಣಸಿ ಸತ್ತರೆ ಅವನು

ವೀರಸ್ವರ್ಗವನ್ನು ಸೇರುತ್ತಾನೆಂಬ ನಂಬಿಕೆಯಿಂದ ಹೆಂಡತಿ ಅಥವಾ ಹೆಂಡತಿಯರು ಅವನೊಂದಿಗೆ ತಾವೂ ತೀರಿಕೊಂಡರೆ ಅಂಥವರ ನೆನಪಿಗಾಗಿ ಮಾಸ್ತಿಕಲ್ಲುಗಳು ಸಿದ್ಧವಾಗುತ್ತಿದ್ದುವು. ಈ ಕಲ್ಲುಗಳಲ್ಲಿ ತೀರಿಕೊಂಡ ಗಂಡ ಬದ್ಧಾಂಜಲಿಯಾಗಿ ನಿಂತಿರುವಂತೆಯೂ ಪಕ್ಕದಲ್ಲಿ ಅವನ ಹೆಂಡತಿ (ಅಥವಾ ಹೆಂಡತಿಯರು) ಬಲಗೈಯೆತ್ತಿ ನಿಂತಿರುವಂತೆಯೂ ಶಿಲ್ಪವನ್ನು ಕಂಡರಿಸುತ್ತಾರೆ. ಒಮ್ಮೊಮ್ಮೆ ಎತ್ತಿದ ಕೈಬೆರಳುಗಳ ನಡುವೆ ನಿಂಬೆಹಣ್ಣನ್ನು ಮೂಡಿಸುವುದೂ ಉಂಟು. ಚಿತೆಗೆ ಹಾರುವಾಗ ಸತಿ ಈ ಭಂಗಿಯಲ್ಲಿರುತ್ತಿದ್ದುದು ವಾಡಿಕೆ. ತನ್ನ ಪಾತಿವ್ರತ್ಯವನ್ನೂ ದೃಢ ನಿಶ್ಚಯವನ್ನೂ ಶಪಥಮಾಡಿ ನೆರೆದವರ ಮುಂದೆ ಸಾರುವುದು ಇಂಥ ಶಿಲಾಫಲಕಗಳ ಉದ್ದೇಶ. ಅವರು ಪರಮಪದಕ್ಕೆ ಸಂದರೆಂದು ತೋರಿಸಲು ದೇವರ ಮುಂದೆ ಗಂಡ ಹೆಂಡಿರು ಬದ್ಧಾಂಜಲಿಗಳಾಗಿ ನಿಂತಿರುವಂತೆ, ಅಥವಾ ಕುಳಿತಿರುವಂತೆ ಚಿತ್ರಿಸುವ ಪದ್ಧತಿಯೂ ಇದ್ದಿತು. ಸತ್ತವರು ಶೈವಧರ್ಮದವರಾದರೆ ಲಿಂಗವನ್ನೂ, ವೈಷ್ಣವರಾದರೆ ಶಂಖಚಕ್ರಗಳನ್ನೂ ಗರುಡಾಂಜನೇಯರನ್ನೂ ಮೂಡಿಸಿ ಪರಮಪದವನ್ನು ಸಂಕೇತಿಸುತ್ತಿದ್ದರು.

ಮಾಸ್ತಿಕಲ್ಲುಗಳಲ್ಲಿ ಪರಮಪದವನ್ನು ಸೂಚಿಸುವಾಗ ಸೂರ್ಯ ಚಂದ್ರರನ್ನೂ ನಿರ್ದೇಶಿಸುವುದುಂಟು. ಸೂರ್ಯ ಚಂದ್ರರು ಎಲ್ಲ ವ್ಯವಹಾರಕ್ಕೂ ಧರ್ಮಸಾಕ್ಷಿಗಳಲ್ಲವೇ? ಶಾಸನಗಳಲ್ಲಿ ಸಾಮಾನ್ಯವಾಗಿ ಬರುವ ಈ ಶ್ಲೋಕ ಇದರ ಮರ್ಮವನ್ನು ವಿವರಿಸುತ್ತದೆ:

ಆದಿತ್ಯಚಂದ್ರಾವನಿಲಾನಲೌ ಚ
ದ್ಯೌರ್ಭೂಮಿರಾಪೋ ಹೃದಯಂ ಮನಶ್ಚ ।
ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯೇ
ಧರ್ಮಶ್ಚ ಜಾನಾತಿ ನರಸ್ಯ ವೃತ್ತಂ ॥

ಸೂರ್ಯಚಂದ್ರರಿರುವವರೆಗೂ ವೀರನ ಮತ್ತು ಅವನ ಸತಿಯ ಕೀರ್ತಿ ಉಳಿಯಲಿ ಎನ್ನುವುದು ಶಿಲ್ಪಿಯ ಬಯಕೆ. ತೀರಿಕೊಂಡ ವೀರನು ಸಿರಿವಂತನೆಂದೂ ಹಿರಿಯ ಅಧಿಕಾರಿಯೆಂದೂ ಊರಿನ ಒಡೆಯನೆಂದೂ ಸೂಚಿಸಲು ಹಲವಾರು ಸಂಕೇತಗಳನ್ನೂ (ಕುದುರೆ, ಛತ್ರಿ, ಆನೆ, ಸೇವಕರು) ಬಳಸುತ್ತಿದ್ದರು. ಮಾಸ್ತಿಕಲ್ಲುಗಳು ಸಾಮಾನ್ಯವಾಗಿ ಮೇಲ್ಭಾಗದಲ್ಲಿ ಕೋಣಾಕೃತಿಯಲ್ಲಿದ್ದು ಚಿತ್ರವಿರುವ ಫಲಕ ಕಂಬದಂತೆ ನೆಟ್ಟಗೆ ನಿಂತಿರುತ್ತದೆ. ಇಲ್ಲಿ ಕಾಣಿಸಿದ ದಂಪತಿಗಳನ್ನು ಸರ್ವಾಭರಣಭೂಷಿತರಾಗಿ, ಧೀರ ಗಂಭೀರ ಮುದ್ರೆಯಲ್ಲಿ ಚಿತ್ರಿಸಿರುತ್ತಾರೆ. ಪ್ರತಿಕೃತಿಗಳು ವ್ಯಕ್ತಿಚಿತ್ರಗಳೆನ್ನುವಷ್ಟು ನೈಜವಾಗಿರುವುದಿಲ್ಲವಾದರೂ ಸಂದರ್ಭದ ವೈಶಿಷ್ಟ್ಯವನ್ನು ಚೆನ್ನಾಗಿ ಮೂಡಿಸುತ್ತವೆ. ಶಾಸನವಿರುವ ಕಲ್ಲುಗಳಲ್ಲೇನೋ ವೀರ ಯಾರು ಅವನ ಸತಿ ಯಾರು ಎನ್ನುವ ನಿರ್ದೇಶನ ಇರುತ್ತದೆ.

ಸಹಗಮನದ ಪದ್ಧತಿ ವಿಜಯನಗರ ಸಾಮ್ರಾಜ್ಯ ಜೀವಂತವಾಗಿದ್ದಾಗಲೂ ಅಲ್ಲಲ್ಲಿ ಬಳಕೆಯಲ್ಲಿದ್ದಿತು. ನಮ್ಮ ಕಡೆ ದೊರೆಯುವ ಮಾಸ್ತಿಕಲ್ಲುಗಳು ಬಹುಮಟ್ಟಿಗೆ ಈ ಕಾಲದವೇ. ಪದ್ಧತಿಯೇನೋ ಅಷ್ಟಾಗಿ ಪ್ರಚಲಿತವಾಗಿರಲಿಲ್ಲ; ಆದರೆ ಅಪುರೂಪದ ಪ್ರಸಂಗವಾದುದರಿಂದಲೇ ಇಂಥ ಸ್ಮಾರಕ ಸ್ತಂಭಗಳನ್ನು ನಿಲ್ಲಿಸುತ್ತಿದ್ದರು. ಗಂಡ ತೀರಿಕೊಂಡಾಗ ಅವನ ಶ್ಮಶಾನಯಾತ್ರೆಯಲ್ಲಿ ಹೆಂಡತಿಯೂ ತನ್ನ ವಿಶಿಷ್ಟ ಆಭರಣಗಳನ್ನೆಲ್ಲಾ ಧರಿಸಿ ಮದುಮಗಳಂತೆ ಅಲಂಕೃತಳಾಗಿ ಕುದುರೆಯೇರಿ ಹೊರಟು, ಅವನ ದೇಹವನ್ನು ಬೆಂಕಿಗಿಟ್ಟ ಸಮಯದಲ್ಲಿ ತಾನೂ ಚಿತೆಗೆ ಮೂರುಬಾರಿ ಪ್ರದಕ್ಷಿಣೆ ಮಾಡಿ, ತನ್ನ ಆಭರಣಗಳನ್ನೆಲ್ಲ ಕಳಚಿ ನೆರೆದವರಿಗೆ ಹಂಚಿ, ಹಳದಿ ಸೀರೆಯನ್ನುಟ್ಟು ಚಿತೆಯೊಳಗೆ ಹಾರುತ್ತಿದ್ದಳು. ಗಂಡಹೆಂಡತಿಯರಿಬ್ಬರೂ ಒಟ್ಟಿಗೆ

ಸ್ವರ್ಗ ಸೇರುವರೆಂದು ನಂಬಿಕೆಯಿದ್ದಿತು. ಮಾಸ್ತಿ ಕಲ್ಲಿನ ಶಿಲ್ಪ ಈ ಸಂದರ್ಭವನ್ನು ಊರವರ ನೆನಪಿನಲ್ಲಿ ಉಳಿಸುತ್ತದೆ.

ನಾಗ-ಯಕ್ಷ ಸಮುದಾಯ

ವೃಕ್ಷಪೂಜೆಯ ಸಂದರ್ಭದಲ್ಲಿ ನಾಗಪೂಜೆಯ ಪ್ರಸ್ತಾಪವೂ ಆಗಲೇ ಬಂದಿತು. ಇದು ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿ ಒಂದು ಕಾಲಕ್ಕೆ ಹರಡಿದ್ದ ಪದ್ಧತಿ; ಪ್ರಾಚೀನ ಗ್ರೀಸ್, ರೋಮ್, ಈಜಿಪ್ಟ್, ಇಂಕ–ಪೆರು ಮೊದಲಾದ ಸಂಸ್ಕೃತಿಗಳಲ್ಲೆಲ್ಲ ಇದ್ದಿತು. ಹಾವಿನ ಕಲ್ಪನೆ ಎಲ್ಲ ದೇಶಗಳ ವೀರಗಾಥೆಗಳಲ್ಲಿಯೂ ಪುರಾಣಗಳಲ್ಲಿಯೂ ಹಾಸುಹೊಕ್ಕಾಗಿ ಬರುತ್ತದೆ. ವೇದದ ವೃತ್ರ, ಪುರಾಣದ ಆದಿಶೇಷ, ಕ್ರೈಸ್ತಪುರಾಣಗಳಲ್ಲಿ ಆದಿದಂಪತಿಗಳಿಗೆ ಆದಿಮ ಪಾಪವನ್ನು ಕಟ್ಟಲು ಕಾರಣವಾದ ಸರ್ಪ ಇವೆಲ್ಲ ಪ್ರಸಿದ್ಧವಷ್ಟೆ. ಮನೋವೈಜ್ಞಾನಿಕ ನೆಲೆಯಲ್ಲಿ ಸಿಗ್ಮಂಡ್ ಫ್ರಾಯ್ಡನ ವಿಶ್ಲೇಷಣ ಪದ್ಧತಿಯು ಹಾವಿನ ಸಂಕೇತವನ್ನು ಹಿರಿದಾಗಿ ಹಿಗ್ಗಿಸಿದೆ; ನಾಗಕ್ಕೂ ಕಾಮಕ್ಕೂ ಇರುವ ಸಂಬಂಧವನ್ನು ಸ್ಪಷ್ಟಪಡಿಸಿದೆ. ಕಾರ್ಲ್ ಯೂಂಗನ ವಿಶ್ಲೇಷಣ ಸಂಪ್ರದಾಯದಲ್ಲಿ ನಾಗವು ಪ್ರಾಚೀನ ಚೇತನದ ಅವಶ್ಯ ಪ್ರತೀಕ. ಈ ಕಾರಣದಿಂದಲೇ ತಂತ್ರ, ಯೋಗ ಪ್ರಕ್ರಿಯೆಗಳಲ್ಲಿ ನಾಗಮಂಡಲ, ಕುಂಡಲಿನಿಗಳ ಕಲ್ಪನೆ ವಿಶೇಷವಾಗಿ ಉಳಿದಿದೆ.

ನಮ್ಮ ದೇಶದಲ್ಲಿ, ಅದರಲ್ಲಿಯೂ ದಕ್ಷಿಣ ದೇಶದಲ್ಲಿ ನಾಗಪೂಜೆ ಹರಡಿರುವ ಹಾಗೆ ಬೇರೆಲ್ಲಿಯೂ ಕಾಣಸಿಗದು. ಹಾವಿನ ಹುತ್ತಕ್ಕೆ ಹಾಲೆರೆಯುವುದು, ಅರಳಿ ಮರದಡಿ ನಾಗರಕಲ್ಲುಗಳನ್ನು ನೆಡುವುದು, ಮಕ್ಕಳು ಬೆದರಿದರೆ ಅದರ ಪರಿಹಾರಕ್ಕೆ ನಾಗಬಂಧ ಮಾಡಿಸುವುದು, ತುಳುದೇಶದಲ್ಲಿ ಮನೆಯ ಹಿಂಬದಿ ನಾಗಬನ(ಕಾವು)ಗಳನ್ನು ಬಿಡುವುದು, ಕಾಲಕಾಲಕ್ಕೆ ನಾಗಮಂಡಲಗಳನ್ನು ನಡೆಸುವುದು ಇವೆಲ್ಲ ಬಳಕೆಯಲ್ಲಿವೆ. ನಮ್ಮವರ ಹೆಸರುಗಳಲ್ಲಿಯೇ ಸುಬ್ಬ, ನಾಗ, ಶೇಷ, ಸುಬ್ರಹ್ಮಣ್ಯಗಳು ಎಷ್ಟೊಂದು ಬರುತ್ತವೆ? ಸುಬ್ರಹ್ಮಣ್ಯ ನಾಗರೂಪಿಯೇ; ಚಂಪಾಷಷ್ಟಿಯ ದಿನವನ್ನು ಸುಬ್ಬರಾಯ ಷಷ್ಟಿಯೆಂದೇ ಕರೆದು ಅಂದು ನಾಗಪೂಜೆಯನ್ನು ಮಾಡುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಕೇರಳದಲ್ಲಿ ನಾಗಾರಾಧನೆ ಜನಜೀವನದ ಅವಶ್ಯ ಅಂಗವಾಗಿದೆ. ಸುಬ್ರಹ್ಮಣ್ಯ, ಬಳ್ಳಮಂಜೆ, ಕಾಡುಕುಕ್ಕೆ, ಕುಡುಪು, ಮಂಜೇಶ್ವರ, ವಿಟ್ಲ, ಕಟ್ಟಿಂಗೆರೆ ಮೊದಲಾದ ಕ್ಷೇತ್ರಗಳು ನಾಗಪೂಜೆಗೆ ಮೀಸಲಾದುವು. ಉಡುಪಿ ತಾಲ್ಲೂಕಿನ ಸುರಾಲುವಿನ ಸುತ್ತಮುತ್ತ ಇರುವ ಡಕ್ಕೆಯರು (ವೈದ್ಯರು) ಸರ್ಪವಿದ್ಯೆಯಲ್ಲಿ ನಿಪುಣರು; ಅವರಿಂದ ನಡೆಯುವ ನಾಗಮಂಡಲ ನೃತ್ಯ ತುಂಬ ಅದ್ಭುತವಾಗಿರುತ್ತದೆ.

ಊರ ಬಾಗಿಲ ಬಳಿ, ಅರಳಿಮರ ಬೇವಿನ ಮರಗಳ ಕೆಳಗೆ, ಕೆರೆ ಕೊಳಗಳ ದಂಡೆಯ ಮೇಲೆ, ಗುಡಿಯ ಅಕ್ಕಪಕ್ಕದಲ್ಲಿ ನಾಗಕಲ್ಲುಗಳನ್ನು ಕಾಣಬಹುದು (ಚಿತ್ರಗಳು 12, 13, 14). ಮಕ್ಕಳಿಲ್ಲದವರು ನಾಗಪ್ರತಿಷ್ಠೆ ಮಾಡಿದರೆ, ಅಥವಾ ಪ್ರತಿಷ್ಠಿತ ನಾಗಕಲ್ಲುಗಳನ್ನು ಸೇವೆ ಮಾಡಿದರೆ ಮಕ್ಕಳಾಗುತ್ತಾರೆಂದು ನಂಬಿಕೆಯಿದೆಯಲ್ಲವೇ? ಹಾವಿಗೂ ಜೀವಕ್ಕೂ ತೀರದ ನೆಂಟು; ಸಂತಾನಕ್ಕೂ ಹಾವೇ ಸಂಕೇತ. ನಾಗಮಿಥುನದ ಶಿಲ್ಪಗಳಂತೂ ಎಲ್ಲೆಲ್ಲಿಯೂ ಇವೆ. ನಮ್ಮಲ್ಲಿ ಮಾತ್ರವಲ್ಲ, ಕ್ರಿಸ್ತಪೂರ್ವ 2600 ವರ್ಷಗಳಷ್ಟು ಹಿಂದೆಯೇ ಸುಮೇರಿಯನ್ ದೊರೆ ಗುದಿಯನ ಸುರಾಪಾತ್ರೆಯ ಮೇಲೆ ನಾಗಮಿಥುನದ ಸ್ವಾರಸ್ಯವಾದ ಚಿತ್ರಣವಿದೆ. ಗ್ರೀಕರ ವೈದ್ಯದೇವತೆ ಈಸ್ಕುಲೇಪಿಯಸ್ ಹಿಡಿದಿರುವ ದಂಡದ ಸುತ್ತ ನಾಗಮಿಥುನವಿದ್ದು, ಅದನ್ನೇ ಈಗ

ಚಿತ್ರ 12
ನಾಗಯಕ್ಷಿಣಿ



ಚಿತ್ರ 13
ನಾಗ–ನಾಗಿನಿಯರು



ಚಿತ್ರ 14
ನಾಗರ ಕಲ್ಲು

ಪಾಶ್ಚಾತ್ಯ ವೈದ್ಯದ ಲಾಂಛನವಾಗಿ ಬಳಸುತ್ತಾರೆ. ಯೋಗಶಾಸ್ತ್ರದಲ್ಲಿಯೂ ನಾಗಕಲ್ಪನೆ ದೃಢವಾಗಿದೆ. ಮನುಷ್ಯನ ಸತ್ತ್ವಸ್ವರೂಪವಾದ ಶಕ್ತಿಯನ್ನು ಸರ್ಪದಂತೆ ಚಿತ್ರಿಸಿ, ಅದನ್ನು ನಿದ್ರೆಯಿಂದ ಎಚ್ಚರಗೊಳಿಸುವುದೇ ಕುಂಡಲಿನಿಯೋಗವೆಂದು ವ್ಯವಹರಿಸುತ್ತಾರೆ. ಮೂಲಾಧಾರ ಚಕ್ರದಲ್ಲಿ ಸ್ವಯಂಭುಲಿಂಗವನ್ನು ಕುಂಡಲದಂತೆ ಸುತ್ತಿಕೊಂಡಿರುವ ಕಾರಣ ಇದು ಕುಂಡಲಿನಿಯಾಯಿತು. ಮಲಗಿರುವ ಈ ಹಾವಿಗೆ ಭುಜಂಗಿಯೆಂದೂ ಹೆಸರಿದೆ. ಯೋಗವಿಧಿಯಿಂದ ಅದನ್ನು ಎಬ್ಬಿಸಿದಾಗ ಅದು ಶಕ್ತಿಯಾಗಿ ಆರೂ ಚಕ್ರಗಳನ್ನು ಭೇದಿಸಿಕೊಂಡು ಸಹಸ್ರಾರ ಚಕ್ರದಲ್ಲಿರುವ ಶತದಲ ಕಮಲವನ್ನು ಮುಟ್ಟಿ ಅಲ್ಲಿ ಶುದ್ಧ ಸಂವಿತ್‌ಸ್ವರೂಪನಾದ ಶಿವನೊಂದಿಗೆ ಬೆರೆಯುತ್ತದೆ. ಇದೇ ಮಿಥುನ ಅಥವಾ ಯೋಗ; ಸರ್ಪವಿದ್ಯೆ. ಥಿಯಾಸಫಿ ಅಥವಾ ದಿವ್ಯಜ್ಞಾನ ಸಮಾಜದವರು ಶಕ್ತಿಯನ್ನು ಸರ್ಪಜ್ವಾಲೆ (ಸರ್‌ಪೆಂಟ್ ಫೈರ್) ಎಂದು ಕರೆಯುತ್ತಾರೆ.

ಯೋಗವಿಚಾರ ಹಾಗಿರಲಿ, ದಿನದಿನದ ದೇವತೆಗಳ ಕಲ್ಪನೆಯಲ್ಲಿಯೂ ಹಾವು ಹೀಗೇ ಬರುತ್ತದೆ. ಶಿವನಿಗೆ ಹಾವೇ ಆಭರಣ; ಅವನು ನಾಗಭೂಷಣ. ವಿಷ್ಣು ಪವಡಿಸಿರುವುದು ಹಾವಿನ ಮೇಲೆ; ಅವನು ಭೋಗಿಶಯನ. ಗಣೇಶನಿಗೆ ಹಾವೇ ಉಪವೀತ; ಅವನು ಸರ್ಪಯಜ್ಞೋಪವೀತಿ. ನಮ್ಮವರು ಮಾತ್ರವಲ್ಲ, ಬೌದ್ಧರೂ ಜೈನರೂ ಇದನ್ನು ಅಳವಡಿಸಿಕೊಂಡಿದ್ದಾರೆ. ಮುಚಲಿಂದ ಬುದ್ಧನ ಮೂರ್ತಿ, ಪಾರ್ಶ್ವನಾಥ ತೀರ್ಥಂಕರನ ಮೂರ್ತಿ ಇವುಗಳಲ್ಲಿ ತಲೆಯ ಮೇಲೆ ಏಳುಹೆಡೆ ಹಾವಿರುತ್ತದೆ. ದೇವತಾಮೂರ್ತಿಗಳ ಪ್ರಭಾವಳಿಯಲ್ಲಿ, ದ್ವಾರಪಾಲಕರ ಮುದ್ರೆಗಳಲ್ಲಿ ಹಾವಿರುವುದನ್ನು ನೋಡಬಹುದು. ಶಿಲ್ಪದಲ್ಲಿ ಹಾವನ್ನು ದೇವತಾಕಲ್ಪನೆಗೆ ಅಳವಡಿಸಿಕೊಂಡಿರುವುದು ಸೈಂಧವ ಸಂಸ್ಕೃತಿಯ ಕಾಲದಿಂದಲೂ ಸಾಗಿ ಬಂದಿದೆ.

ಕಶ್ಯಪಋಷಿಯ ಹೆಂಡತಿ ಕದ್ರು ಎಂಬಾಕೆ ಒಂದು ಸಾವಿರ ಹಾವುಗಳಿಗೆ ಜನ್ಮವಿತ್ತಳಂತೆ; ಈ ಸಾವಿರ ಸಂತತಿಯೇ ಇಂದಿನ ಹಾವುಗಳಿಗೆಲ್ಲ ಮೂಲವೆಂದು ಪ್ರತೀತಿಯಿದೆ. ನಾಗಗಳ ವಸತಿ ಪಾತಾಳ

ದಲ್ಲಿರುವ ಭೋಗವತಿಯೆನ್ನುವ ನಾಗಲೋಕ. ನಾಗರಾಜನ ಶಿಲ್ಪ ಪ್ರಾಚೀನ ದೇವಾಲಯ, ಸ್ತೂಪ, ಚೈತ್ಯಗಳಲ್ಲಿ ಇದ್ದೇ ಇರುತ್ತಿದ್ದಿತು. ಯಕ್ಷ, ರಾಕ್ಷಸ, ಪಿಶಾಚ, ಗಂಧರ್ವ, ಅಪ್ಸರೆಯರಂತೆ ನಾಗಗಳೂ ದಶಪ್ರಜಾಪತಿ ಸೃಷ್ಟಿಗೆ ಸೇರಿದವರು. ಸೃಷ್ಟಿಕ್ರಮದಲ್ಲಿ ಮೊಟ್ಟಮೊದಲು ಹುಟ್ಟಿಕೊಂಡವನು ಆದಿಶೇಷ; ನಿರವಧಿಯಾದ ಕಾಲತತ್ತ್ವದ ಸಂಕೇತ. ವಾಸುಕಿಯೇ ನಾಗರಾಜ; ಸಮುದ್ರಮಂಥನ ಕಾಲದಲ್ಲಿ ಮಂದರ ಪರ್ವತಕ್ಕೆ ಸುತ್ತಿಕೊಂಡು ದೇವಾಸುರರು ಕಡೆಯಲು ಎಡೆಮಾಡಿಕೊಟ್ಟ ದೊಡ್ಡ ಹಾವು. ನಾಗಕುಲವನ್ನು ನಾಶಮಾಡಲು ಸರ್ಪಯಾಗವನ್ನು ಮಾಡಿದ ಜನಮೇಜಯರಾಯನ ಹಿಡಿತದಿಂದ ತಪ್ಪಿಸಿಕೊಂಡ ತಕ್ಷಕ ಈಗ ಜೀವಂತವಾಗಿರುವ ಹಾವುಗಳಿಗೆಲ್ಲ ಮೂಲಪುರುಷ.

ನಾಗಪ್ರತೀಕ (ಟೋಟೆಮ್) ಇದ್ದ ಜನಾಂಗಗಳೂ ವೇದಕಾಲದಲ್ಲಿಯೇ ಇದ್ದಂತೆ ತಿಳಿದುಬರುತ್ತದೆ. ಚಾಳುಕ್ಯ ಸೀಮೆಯಲ್ಲಿಯೂ ನಾಗರೆಂಬ ಜನರಿದ್ದರು; ಇವರಿಂದ ಒಂದು ಪಂಗಡವಾಗಿ ಒಡೆದು ಬಂದ ಆಳುಪರು ತುಳುದೇಶದಲ್ಲಿ ಪ್ರಖ್ಯಾತರಾದರು, 'ಆಳುಪ' ಎನ್ನುವ ಮಾತು ಶೇಷನಿಗೆ ಪರ್ಯಾಯಪದವಾದ ಆಲುಕ ಎನ್ನುವುದರ ತದ್ಭವವೆಂದು ಹೇಳುತ್ತಾರೆ. ಆಫ್ರಿಕದಲ್ಲಿಯೂ ಆಸ್ಟ್ರೇಲಿಯದಲ್ಲಿಯೂ ನಾಗಪ್ರತೀಕದ ಜನರಿದ್ದಾರೆ. ಎತ್ತು, ಎಮ್ಮೆ, ಆನೆ, ಹದ್ದು ಇವು ದೇವತಾ ಕಲ್ಪನೆಗೆ ಹಿನ್ನೆಲೆಯಲ್ಲಿದ್ದಂತೆ ಹಾವೂ ಇದೆ.

ಶಿಲ್ಪದಲ್ಲಿ ಹಾವನ್ನು ದೇವತೆಗಳಿಗೆ ಅದರಲ್ಲಿಯೂ ಶಿವನಿಗೆ ಆಭರಣವಾಗಿ, ಅಲಂಕರಣವಾಗಿ, ಆಯುಧವಾಗಿ, ವಾಹನವಾಗಿ ಬಳಸಿದ್ದಾರೆ; ಸ್ವತಂತ್ರವಾಗಿಯೂ ಹಾವಿನ ಮೂರ್ತಿಗಳನ್ನು ವಿವಿಧ ವಿನ್ಯಾಸಗಳಲ್ಲಿ ಕಡೆದು ಇಡುವ ಪದ್ಧತಿಯೂ ಇದೆ. ನಾಗ–ನಾಗಿನಿಯರ ಜೋಡಿಶಿಲ್ಪ, ನಾಗಮಿಥುನ, ಏಳುಹೆಡೆ ಹಾವು, ಹಾವಿನ ಹೆಡೆಯ ನೆಳಲಲ್ಲಿ ಕುಳಿತ ವಿಷ್ಣು, ಕೃಷ್ಣ, ಶಿವಲಿಂಗ ಇವೂ ಶಿಲ್ಪದಲ್ಲಿ ಬರುತ್ತವೆ. ದೇವಾಲಯದ ಸುಖನಾಸಿ ವಿನ್ಯಾಸದಲ್ಲಿ ನಾಗಮಂಡಲದ ಶಿಲ್ಪ ಸ್ವಾರಸ್ಯವಾದುದು. ವೈದಿಕ ಯಜ್ಞದ ಸಂದರ್ಭದಲ್ಲಿ ಪಶುವನ್ನು ಕಟ್ಟುವ ಹಗ್ಗಕ್ಕೆ 'ನಾಗಪಾಶ' ಅಥವಾ 'ನಾಗಬಂಧ'ವೆನ್ನುವ ಹೆಸರಿದ್ದಿತು (ಚಿತ್ರಗಳು 15, 16). ಯಜುರ್ವೇದದ ವಾಜಸನೇಯಿ ಸಂಹಿತೆಯಲ್ಲಿ 'ಋತಸ್ಯ ತ್ವಾ ದೇವ ಹವಿಃ ಪಾಶೇನ ಪ್ರತಿ–



ಚಿತ್ರ 15
ನಾಗಬಂಧ



ಚಿತ್ರ 16
ನಾಗಬಂಧ

ಮುಂಚಾಮಿ' (6, 8)ಎಂದು ದೇವತೆಗೆ ಒಪ್ಪಿಸಲ್ಪಟ್ಟ ಬಲಿಯನ್ನು ಹಗ್ಗದಿಂದ ಕಟ್ಟುವ ಮಾತು ಬಂದಾಗ ಮಹೀಧರನು ಪಾಶವೆಂದರೆ ನಾಗಪಾಶವೆಂದೇ ಅರ್ಥಮಾಡಿದ್ದಾನೆ. ಕುಶ ಹುಲ್ಲಿನಿಂದ ಎರಡು ಎಳೆಗಳಲ್ಲಿ ಹೊಸೆದು ಪ್ರಾಣಿಯ ಕೊಂಬುಗಳ ನಡುವೆ (ಅಂತರಾಶೃಂಗಂ) ಕಟ್ಟಿದಾಗ ಹಾವಿನ ಕಟ್ಟಿನಂತೆಯೇ ಕಾಣಬೇಕೆಂಬ ವಿಧಿಯಿದ್ದಿತು. ನಾಗಪಾಶವೆಂದರೆ ಬಿಗಿಯಾದ, ಬಿಡಿಸಿಕೊಳ್ಳಲಾರದ ಕಟ್ಟು. ದಾರ್ಢ್ಯಕ್ಕೂ ಸೌಂದರ್ಯಕ್ಕೂ ಹೆಸರಾದ ನಾಗಬಂಧವನ್ನು ನಮ್ಮ ದೇಶದ ವಾಸ್ತುವಿದ್ಯೆಯಲ್ಲಿ ವಿಶೇಷವಾಗಿ ಬಳಸಿ ಕೊಂಡಿದ್ದಾರೆ.

ನಮ್ಮ ದೇಶದ ಮೂರ್ತಿಶಿಲ್ಪದಲ್ಲಿ ತುಂಬ ಪ್ರಾಚೀನವಾದುದೆಂದರೆ ಯಕ್ಷಯಕ್ಷಿಯರ ಚಿತ್ರಣ. ಕ್ರಿಸ್ತಪೂರ್ವ 200ರಷ್ಟು ಹಿಂದೆಯೇ ಸಾಂಚಿ, ಬಾರ್ಹುತ್, ಬುದ್ಧಗಯಾ ಮೊದಲಾದ ಬೌದ್ಧ ಸ್ತೂಪಗಳಲ್ಲಿ ಕಾಣಬರುವ ಈ ಚಿತ್ರಣ ಸ್ವಾರಸ್ಯವಾದುದು.

ಮಥುರಾ ನಗರದಲ್ಲಿ ಬೆಳೆದು ಬಂದ ಶಿಲ್ಪ ಪದ್ಧತಿಯಲ್ಲಂತೂ ಯಕ್ಷ ಯಕ್ಷಿಯರ ಪಾತ್ರ ಹಿರಿದೇ. ಮೌರ್ಯ ಮತ್ತು ಶುಂಗ ಅರಸರ ಪ್ರೋತ್ಸಾಹದಿಂದ ಬೆಳೆದ ಈ ಪದ್ಧತಿಯ ಶಿಲ್ಪದಲ್ಲಿ ಯಕ್ಷಯಕ್ಷಿಯರೊಂದಿಗೆ ವೃಕ್ಷದೇವತೆಗಳು, ನಾಗಗಳು, ಅಪ್ಸರೆಯರು, ಕಿನ್ನರರು ಮೊದಲಾದ ದೇವತೆಗಳೂ ಮೂಡಿ ಬಂದಿದ್ದಾರೆ (ಚಿತ್ರಗಳು 17, 18). ನಿತ್ಯಜೀವನದ ಸಾಮಾನ್ಯ ಧರ್ಮದ ನೆಲೆಯ ಜನರ ಕಲ್ಪನೆಯಲ್ಲಿ ನಂಬಿಕೆಯಲ್ಲಿ, ಆಶೋತ್ತರಗಳಲ್ಲಿ ಒದಗಿ ಬಂದ ದೇವತೆಗಳು ಇವು.

ಚಿತ್ರ 17
ಗಾಂಗೇಯ–ಯಕ್ಷ–ಬಾರ್ಹುತ್
ಸ್ತೂಪದ ಸ್ತಂಭಶಿಲ್ಪ



ಚಿತ್ರ 18
ಸಿರಿಮಾ ದೇವತೆ. ಬಾರ್ಹುತ್ ಸ್ತೂಪದ ಸ್ತಂಭಶಿಲ್ಪ.
ಲಕ್ಷ್ಮೀದೇವಿ(ಶ್ರೀ)ಯ ಹಿನ್ನೆಲೆಯಲ್ಲಿರುವ ದೇವತೆ
ಇವಳು; ಇಲ್ಲಿ ಯಕ್ಷಿ

ಯಕ್ಷರು ಯಾರು ? ಈ ಮೊದಲೇ ಹೇಳಿದಂತೆ ದೇವತಾ ಯೋನಿಯಲ್ಲಿ ಸೇರಿದವರು: ಯಕ್ಷ–ರಕ್ಷ–ಗಂಧರ್ವ–ಕಿನ್ನರರ ಸಾಲಿನಲ್ಲಿ ಮೊದಲನೆಯವರು. ಮುಂದೆ ಪುರಾಣಯುಗದ ಕಲ್ಪನೆಯಲ್ಲಿ ಕೈಲಾಸ ಪರ್ವತದಲ್ಲಿ ವಾಸಿಸುವವರು. ಕುಬೇರನ ಅನುಚರರು, ಬೆಟ್ಟಗುಡ್ಡಗಳ ಮೇಲೂ ಇರುತ್ತ ಭೂಮಿಯೊಳಗೆ ಅಡಗಿರುವ ವಜ್ರ, ರತ್ನ ಮೊದಲಾದ ನಿಧಿಯನ್ನು ಕಾಪಿಡುವವರು ಎನ್ನುವ ಪ್ರಸಿದ್ಧಿ ಬಂದಿತು. ಶಿವನ ಪರಿವಾರದಲ್ಲಿ ಸೇರಿದ ಕುಬೇರ 'ರಾಜಾಧಿರಾಜ', ಧನಪತಿ, ವೈಶ್ರವಣ. ಅವನು ನರವಾಹನ, ಎಂದರೆ ಯಕ್ಷನೊಬ್ಬನ ಮೇಲೆ ಕುಳಿತು ಅಡ್ಡಾಡುವವನು. ಆದರೆ ಶಿಲ್ಪದಲ್ಲಿ ಬಹುಮಟ್ಟಿಗೆ ಸುಖಾಸೀನನಾಗಿ ಕುಳಿತಿರುತ್ತಾನೆ (ಚಿತ್ರ 19). ಬಾರ್ಹುತ್ ಸ್ಮಾರಕದ ಕಂಬವೊಂದರ ಮೇಲೆ ಕುಬೇರನ ಚಿತ್ರಣವಿದ್ದು ಆ ಕಾಲದ ಭಾಷೆಯಲ್ಲಿ 'ಕುಪಿರೋ ಯಕ್ಖೋ' ಎನ್ನುವ ಬರಹವೂ ಇದೆ. (ಚಿತ್ರ 20).

ಚಿತ್ರ 19
ಸುಖಾಸೀನ ಕುಬೇರ ಯಕ್ಷ–ಹೊಯ್ಸಳ ಶಿಲ್ಪ

ಪುರಾಣಕಾಲಕ್ಕಿಂತ ಮೊದಲೂ ಯಕ್ಷರನ್ನು ಒಲಿಸಿಕೊಳ್ಳಲು ಜನ ಶ್ರಮಿಸುತ್ತಿದ್ದರು. ಅವರು ಒಲಿದರೆ ಅಷ್ಟೈಶ್ವರ್ಯವನ್ನೂ ಅನುಗ್ರಹಿಸುತ್ತಾರೆ ಅಲ್ಲವೇ? ಮನೆಯ ತಲೆಬಾಗಿಲಿನಲ್ಲಿ ದ್ವಾರಪಾಲಕರಾಗಿ, ಗೃಹರಕ್ಷಕರಾಗಿ, ಗೃಹಾಭಿಮಾನಿ ದೇವತೆಗಳಾಗಿ ಅವರನ್ನು ನಿಲ್ಲಿಸುವ ವಾಡಿಕೆಯಿದ್ದಿತು. ಮನೆಯಂಗಳದಲ್ಲಿ ಯಕ್ಷರ ಪ್ರತಿಕೃತಿಗಳನ್ನು ಮಾಡಿಟ್ಟುಕೊಂಡು ಪೂಜಿಸುತ್ತಿದ್ದುದೂ ಉಂಟು. ಶ್ರೀಮಂತರು ವರ್ತಕರಿಗಂತೂ ಅವರು ಕುಲದೇವತೆಗಳೇ; ಸಾಂಚಿ, ಬಾರ್ಹುತ್ ಸ್ತೂಪಗಳ ತೋರಣಗಳ ಮೇಲೆ ಕಂಬಗಳ ಮೇಲೆ ಫಲಕಗಳಂತೆ ಇವರ ಆಕೃತಿಗಳನ್ನು ಕಡೆದಿರುವಾಗ ಅವರು ಸ್ತೂಪಗಳ ರಕ್ಷಕರೆಂದೇ ಕಲ್ಪನೆ. ಕುಷಾಣ, ಗುಪ್ತರಾಜರ ಕಾಲದಲ್ಲಿ ಮಥುರಾನಗರಿ ಹಿಂದೂ, ಬೌದ್ಧ, ಜೈನಕಲೆಗಳ ಸಂಗಮಸ್ಥಾನವಾಯಿತಷ್ಟೆ. ಆಗ ಆ ಪ್ರದೇಶದ ಧನಿಕರೂ ವರ್ತಕರೂ ದಾನದತ್ತಿಗಳನ್ನು ಕೊಟ್ಟು ಹಲವಾರು ದೇಗುಲಗಳನ್ನೂ ಚೈತ್ಯ ಮಂದಿರಗಳನ್ನೂ ಬಸದಿಗಳನ್ನೂ ಕಟ್ಟಿಸಿದರು. ಈ ಕಟ್ಟಡಗಳಲ್ಲೆಲ್ಲ ಶ್ರೇಷ್ಠಿಗಳ ಅಭಿಮಾನಿ ದೇವತೆಗಳಾದ ಯಕ್ಷ–ಯಕ್ಷಿಯರ ಚಿತ್ರಣವಿದೆ.

ಚಿತ್ರ 20
ಕುಬೇರಯಕ್ಷ–
ಬಾರ್ಹುತ್‌ಸ್ತೂಪದ
ಸ್ತಂಭಶಿಲ್ಪ

ಯಕ್ಷ–ಯಕ್ಷಿಯರ ಶಿಲ್ಪದಲ್ಲಿ ಸೊಗಸಾದ ನಿದರ್ಶನಗಳನ್ನು ಕಾಣಬೇಕೆಂದರೆ ಪಾರ್ಖಂನಲ್ಲಿರುವ ಯಕ್ಷ, ಮಗಧದ ಪಾಟಲಿಪುತ್ರದ ಇಬ್ಬರು ಯಕ್ಷರು, ಬೇಸ್‌ನಗರದ ಯಕ್ಷಿ, ದೀದರ್‌ಗಂಜಿನ ಚಾಮರಗ್ರಾಹಿಣಿ ಯಕ್ಷಿ ಇವುಗಳನ್ನು ಕಾಣಬೇಕು. ವೃಕ್ಷದೇವತೆಗಳಂತೆ, ದೇವಕನ್ನಿಕೆಯರಂತೆ, ಸಾಲಭಂಜಿಕೆ (ಮದನಿಕೆ) ಯರಂತೆ ಯಕ್ಷಿಯರ ಚಿತ್ರಣವಿರುತ್ತಿದ್ದಿತು. ಯಕ್ಷಯಕ್ಷಿಯರು ಜನರ ನಂಬಿಕೆಯಲ್ಲಿ ಕಾಮರೂಪಿಗಳು; ತಮಗೆ ಬೇಕಾದ ರೂಪ ತಳೆಯಬಲ್ಲವರು. ಜನರ ಕಣ್ಣುಮರೆಸಿ, ಸಾವಿರಾರು ರೂಪಗಳಲ್ಲಿ ಮನುಷ್ಯ ರೊಡನೆ ಸೇರಿ, ವ್ಯವಹರಿಸಿ ಅವರಿಗೆ ಒಲಿದು ಅನುಕೂಲವಾಗಿಯೂ, ಮುನಿದು ಪ್ರತಿಕೂಲವಾಗಿಯೂ ನಡೆದುಕೊಳ್ಳುವರು. ಈ ವಿವಿಧ ರೂಪಗಳಲ್ಲಿ ಅವರಿಗೇ ತುಂಬ ಪ್ರಿಯವಾದುದು ಚೆಲುವಾದ ಹೆಂಗಳೆಯರ ರೂಪ.

ಶಿಲ್ಪಿಗಳು ಈ ಕಲ್ಪನೆಯನ್ನು ತಮಗೆ ಅನುಕೂಲವಾಗಿ ಬಳಸಿಕೊಂಡರು. ತಾವು ನಿರ್ಮಿಸಿದ ದೇವತಾಮಂದಿರಗಳಲ್ಲಿ ಈ ಅಭಿಮಾನಿದೇವತೆಗಳನ್ನು ಹಲವಾರು ಭಂಗಿಗಳಲ್ಲಿ, ಹಲವಾರು ಸಂದರ್ಭಗಳಲ್ಲಿ ತಮ್ಮ ನೈಪುಣ್ಯವನ್ನೆಲ್ಲ ಉಪಯೋಗಿಸಿ ನಿಲ್ಲಿಸುತ್ತಿದ್ದರು. ಯಕ್ಷಿಯರನ್ನು ನೀರಿನಲ್ಲಿ ಆಟವಾಡುತ್ತಿರುವಂತೆ, ತಲೆಗೂದಲಿನಿಂದ ನೀರನ್ನು ಹಿಂಡುತ್ತಿರುವಂತೆ ಚಿತ್ರಿಸಿದ್ದಿದೆ. ಮಥುರಾದ ಶಿಲ್ಪವೊಂದರಲ್ಲಿ ಸ್ನಾನವಾದ ನಂತರ ತರುಣಿಯೊಬ್ಬಳು ತಲೆಗೂದಲನ್ನು ಹಿಂಡುತ್ತಿದ್ದಾಳೆ; ಅದರಿಂದ ಹನಿಹನಿಯಾಗಿ ಬೀಳುತ್ತಿರುವ ನೀರನ್ನು ಚಾತಕಪಕ್ಷಿಯೊಂದು ಬಾಯ್ದೆರೆದು ಕುಡಿಯುತ್ತಿದೆ. ಇಲ್ಲಿನ ಕವಿಸಮಯ ಬರಿಯ ಮಳೆಯ ನೀರಿಗೇ ಬಾಯಿಬಿಡುವ ಚಾತಕಪಕ್ಷಿ ಈಕೆಯ ತಲೆಗೂದಲನ್ನು ಕಾರ್ಮೋಡವೆಂದು ಭ್ರಮಿಸಿ ಅದರಿಂದ ಬೀಳುವ ನೀರನ್ನು ಮಳೆನೀರೆಂದು ಬಗೆಯುವುದು.

ನೀರಿಗೂ ಯಕ್ಷಿಗೂ ಇರುವ ಸಂಬಂಧ ನಿಕಟವಾದುದು. ಬಂಜರು ಭೂಮಿಗೆ ನೀರು ಹರಿದರೆ ಭೂಮಿ ಫಲವತ್ತಾಗುತ್ತದೆ ಹೀಗೆ ನೀರು ಪೂರ್ಣತತ್ತ್ವವೆಂದು ಇದರಿಂದ ಸಿದ್ಧವಾಗುತ್ತದೆ. ನಮ್ಮ ದೇಶದಲ್ಲಿ ಉಷ್ಣಾಧಿಕ್ಯ ಇರುವೆಡೆ ನೀರಿನ ಅಗತ್ಯ ತಿಳಿಯುತ್ತದೆ; ನಮ್ಮ ಬೆಳೆಗೆ ನೀರು ಬೇಕೇ ಬೇಕು. ನೀರನ್ನು ಸುರಿಯುವುದು ಗರ್ಭಾಧಾನಕಲ್ಪ. ವೃಕ್ಷದೇವತೆಗೂ ಯಕ್ಷಿಗೂ ಇರುವ ನಂಟೂ ಈ ನೆಲೆಯಲ್ಲಿಯೇ. ಮಳೆ ನೀರಿನಿಂದ ಭೂಮಿ ಸಿದ್ಧವಾಗುವಂತೆ, ಒದ್ದೆಯಾದ ಬೀಜ ಮೊಳಕೆಯಾಗುವಂತೆ, ಶಿಲ್ಪದಲ್ಲಿನ ಚಾತಕಪಕ್ಷಿಯ ಬಾಯೊಳಗೆ ನೀರು ಬಿದ್ದೊಡನೆ ಅದರ ಬಸಿರು ಮೂಡುತ್ತದೆ. ಫಲಪುಷ್ಪಸಮೃದ್ಧವಾದ ಗಿಡಮರ, ಬಂಡೆಗಳ ಪದರದೊಳಗಿಂದ ಧಾರೆಧಾರೆಯಾಗಿ ಹರಿದು ಬರುವ ನೀರು ಮಥುರಾಶಿಲ್ಪಗಳಲ್ಲಿ ಮತ್ತೆ ಮತ್ತೆ ಬರುತ್ತದೆ.

ಯಕ್ಷಿಯೆನ್ನುವುದು ಹೆಣ್ಣುತನದ ಪ್ರತೀಕ. ಹೆಂಗಸಿನ ಸ್ವಭಾವಕ್ಕೆ, ಪ್ರಕೃತಿಗೆ ಸಹಜವಾದುದು ಮತ್ತು ವಿಶಿಷ್ಟವಾದುದು ತಾಯ್ತನ, ಗರ್ಭಧಾರಣೆ. ಇದನ್ನು ಗಮನಿಸಿಯೇ ಮಾತೃದೇವತೆಯ ಕಲ್ಪನೆಯನ್ನು ಜನ ರೂಢಿಸಿಕೊಂಡು ಬಂದರು. ತಾಯ್ತನವೆಂದರೆ ಪ್ರಸವಸಾಮರ್ಥ್ಯ ಫಲವತ್ತಾಗಿರುವುದು. ಪುಷ್ಟವಾದ ಮೈಕಟ್ಟು, ಉನ್ನತ ಸ್ತನಗಳು, ಪೂರ್ಣೋದರ, ನಗುಮೊಗ ಇವೆಲ್ಲ ದೋಹದಶಂಕಿನಿಯಾದ ಹೆಂಗಸಿನ ಲಕ್ಷಣಗಳೇ. ಪ್ರಾಚೀನ ಧರ್ಮದಲ್ಲಿ ಅವಂಧ್ಯತೆಯ ಕಲ್ಪಗಳು (ಫರ್ಟಿಲಿಟಿ ರೈಟ್ಸ್) ತುಂಬ ಮುಖ್ಯ ವಾಗಿದ್ದುವು. ಅದೂ ಬೇಸಾಯವೇ ಪ್ರಮುಖವಾಗಿದ್ದ ನಮ್ಮ ಸಮಾಜದಲ್ಲಿ ಈ ಕಲ್ಪಗಳು ಬಹು ಬಗೆಗಳಲ್ಲಿ ಬೆಳೆದು ಬಂದುವು. ಪೂರ್ಣಕುಂಭ, ಕಲಶ, ವೃಕ್ಷಪೂಜೆ, ನಾಗಾರಾಧನೆ, ಯಕ್ಷಿಯರ ಪೂಜೆ

ಇವೆಲ್ಲವೂ ಇದರ ಫಲಗಳೇ. ಶ್ರೀದೇವಿ (ಸಿರಿದೇವತೆ), ಲಕ್ಷ್ಮಿ, ವೃಕ್ಷಸುಂದರಿ ಇವರ ಕಲ್ಪನೆಗಳು ಬಸುರಿಯಾದ ಹೆಣ್ಣಿನ ಸೌಭಾಗ್ಯವನ್ನೂ ಸಂಪತ್ತನ್ನೂ ಫಲವಂತಿಕೆಯನ್ನೂ ನೆನಪಿಗೆ ತರುವಂಥವು.

ಯಕ್ಷಿಯರ ಜನಪ್ರೀತಿಯ ಗುಟ್ಟು ಇದು. ಬೌದ್ಧ, ಜೈನ ಧರ್ಮಗಳು ವಿರಕ್ತಿಗೆ ಹೆಚ್ಚು ಬೆಲೆ, ಕೊಡುವ ಧರ್ಮಗಳು. ಸಾಲಂಕೃತ ಯಕ್ಷಿಯರನ್ನು ಬೆತ್ತಲೆ, ಅರೆಬೆತ್ತಲೆಯಾಗಿ ತೋರಿಸಿ, ಜಾಣತನದಿಂದ ಅವರ ಸ್ತನಗಳನ್ನು ಬಿಡಿಸಿ, ನೀವೀಬಂಧ, ಒಡ್ಯಾಣ, ಕಂಠಾಭರಣಗಳನ್ನು ಕಾಣಿಸಿ ಸ್ತೂಪಗಳಲ್ಲಿ, ಚೈತ್ಯಗಳಲ್ಲಿ, ಬಸದಿಗಳಲ್ಲಿ ನಿಲ್ಲಿಸುವ ಔಚಿತ್ಯವೇನು? ಇವು ಲೈಂಗಿಕ, ಕಾಮುಕ ಎಂದೂ ಯಾರೂ ಬಗೆಯಲಾರರು. ಜನಪ್ರೀತಿ ಅಲ್ಲಿದ್ದುದೇ ತಾತ್ಪರ್ಯ. ಬೋಧಿಸತ್ತ್ವರ ವ್ಯವಹಾರ ಯಕ್ಷರ ಯಕ್ಷಿಯರ ನಡುವೆ ನಡೆಯುತ್ತದೆ; ತೀರ್ಥಂಕರರಲ್ಲಿ ಒಬ್ಬೊಬ್ಬರಿಗೂ ಯಕ್ಷ–ಯಕ್ಷಿಯರಿರುತ್ತಾರೆ. ಜೈನರಲ್ಲಿ ಧರಣೇಂದ್ರಯಕ್ಷ, ಅಂಬಿಕಾ ಯಕ್ಷಿಯ ಪೂಜೆ ತುಂಬ ಬಳಕೆಯಲ್ಲಿದೆ. ಬೌದ್ಧರ ನಾಗರಾಜ, ಕುಬೇರ ಇವರು ಯಕ್ಷರೇ; ಅವರ ಪೂಜೆ ಪ್ರಮುಖವಾಗಿದ್ದಿತು. ಹಿಂದೂ ಧರ್ಮದ ದೇವಾಲಯಗಳಲ್ಲಿ ನವರಂಗದ ಸಾಲಭಂಜಿಕೆಯರು ದಿಟವಾಗಿ ಯಕ್ಷಿಯರೇ; ದ್ವಾರಪಾಲಕರು ಯಕ್ಷರ ವಂಶದವರೇ! ಗಣೇಶ, ಚಂಡೇಶ, ಸ್ಕಂದ, ಶಾಸ್ತ, ಆಧಾರಶಕ್ತಿ, ಆವರಣ ದೇವತೆಗಳು, ಆಯುಧ ದೇವತೆಗಳು ಇವರೆಲ್ಲ ಯಕ್ಷಕಲ್ಪನೆಯ ಮಡಿಲಿಂದಲೇ ಎದ್ದವರು.

ಆರ್ಯ ಸಂಸ್ಕೃತಿಯ ಪ್ರಭಾವ ಬಲವಾದಮೇಲೂ ಯಕ್ಷಪೂಜೆಯ ಪ್ರಾಚುರ್ಯದಲ್ಲೇನೂ ಇಳಿಮುಖವಾಗಲಿಲ್ಲ. ಯಕ್ಷ–ಯಕ್ಷಿಯರಿಗೆ ವಿಧ್ಯುಕ್ತವಾದ ಮಂತ್ರಗಳೂ ಪೂಜಾವಿಧಿಗಳೂ ಮೂಡಿಕೊಂಡವು. ಪ್ರಪಂಚಸಾರಸಂಗ್ರಹದಲ್ಲಿ ಯಕ್ಷ–ಯಕ್ಷೀ ಪ್ರಯೋಗಗಳು ಹಲವಾರು ಬರುತ್ತವೆ. ಕೇಳಿದ್ದನ್ನು ಕಿವಿಯಲ್ಲಿ ಗುಟ್ಟಾಗಿ ಹೇಳುವ ಕಂಬಳಕ–ಪಿಶಾಚಿನೀ (ಕರ್ಣೇ ಕಥಯತಿ ಕ್ಷಿಪ್ರಂ ಯದ್ಯತ್ಪೃಚ್ಛತ್ಯಸೌ), ದಿನಕ್ಕೆ ಸಾವಿರ ದೀನಾರಗಳನ್ನು ಕೊಡುವ ಚಂದ್ರಾಸುಮತಿ, ಬಡತನವನ್ನು ನೀಗಿಸುವ ಸುರಸುಂದರಿ, ಮೈಥುನಪ್ರಿಯೆಯಾದ ಅನುರಾಗಿಣಿ, ಸರ್ವಕಾಮದೆಯಾದ ಮನೋಹರೆ, ಶಂಖಚಾರಿಣಿ, ಒಲಿದರೆ ನಡುರಾತ್ರಿಯಲ್ಲಿ ಬಂದು ರಸಾಯನವನ್ನು ಕೊಡುವ ಸ್ವಾಮಿಶ್ವರಿ, ಸಾಧಕನಿಗೆ ದಿವ್ಯಾಂಜನವನ್ನು ಕೊಡುವ ವಟವಾಸಿನಿ, ಚಂದ್ರಿಕೆ, ಮುಪ್ಪನ್ನೂ ಸಾವನ್ನೂ ಎದುರಿಸಬಲ್ಲ ಯೋಗವನ್ನು ಕೊಡುವ ಹಂಸಿ–ಚೇಟಿ, ಕೇಳಿದ್ದನ್ನು ಕೊಡುವ ವಿಚಿತ್ರೆ ಇವರೆಲ್ಲ ಯಕ್ಷಿಯರೇ. ಇದೇ ಸಂದರ್ಭದಲ್ಲಿಯೇ ಈ ಪುಸ್ತಕದಲ್ಲಿ ಮಹಾ ಯಕ್ಷಸೇನಾಧಿಪತಿಯಾದ ಮಣಿಭದ್ರ–ಯಕ್ಷ, ಅಮೃತಾಕರ್ಷಣ ದಕ್ಷಿಣಾಮೂರ್ತಿ, ಸ್ಕಂದ (ಸುಬ್ರಹ್ಮಣ್ಯ), ಗೋರಕ್ಷಾಕರ–ಕೃಷ್ಣ ಇವರನ್ನೂ ಉಲ್ಲೇಖಿಸಿರುವುದು ನಮ್ಮ ದೇವತಾ ಮೂರ್ತಿಗಳಲ್ಲಿ ಯಕ್ಷರ ಹಿನ್ನೆಲೆ ಎಷ್ಟು ಇದ್ದಿತು ಎನ್ನುವುದನ್ನು ತೋರಿಸುತ್ತದೆ. ಸುಸಂಸ್ಕೃತವಾದ ದೇವತಾರ್ಚನೆಯಲ್ಲಿಯೂ ಪೀಠ ಪೂಜೆ, ಆವರಣ ಪೂಜೆಗಳನ್ನು ಮಾಡುವಾಗ ಬರುವ ಹೆಸರುಗಳೆಲ್ಲಾ ಬಹುಮಟ್ಟಿಗೆ ಯಕ್ಷರವೇ ಎಂದು ತೋರುತ್ತದೆ. ಜೈನರ ಮೂರ್ತಿಪೂಜೆಯಲ್ಲಿ ಬರುವ ಪದ್ಮಾವತಿ, ಅಂಬಿಕೆ, ಚಕ್ರೇಶ್ವರಿ, ಜ್ವಾಲಾಮಾಲಿನಿ ಮೊದಲಾದ ಯಕ್ಷಿಯರು ಈ ಹಿನ್ನೆಲೆಯಿಂದಲೇ ಬಂದವರು.

ಪೂಜೆ ಪುನಸ್ಕಾರಗಳು

ಗುಡಿಗುಂಡಾರಗಳು

ಈಗ ನಮ್ಮಲ್ಲಿ ಊರಿಗೊಂದು ಗುಡಿಯಿರುವುದಿಲ್ಲವೇ? ಒಂದಾದರೂ ಇದ್ದೇ ಇರುತ್ತದೆ;
ಬೀದಿಗೊಂದು ಇರುವುದೂ ಉಂಟು. ಚಾವಡಿಯಿಲ್ಲದಿದ್ದರೂ ಅಂಗಡಿಯಿಲ್ಲದಿದ್ದರೂ ಗುಡಿಗೇನು ಕೊರತೆ
ಯಿಲ್ಲ. ಹಿಂದೂ ಜನರಲ್ಲಿ ಗುಡಿಗೆ ಆಗಾಗ ಹೋಗಿಬರುವ ವಾಡಿಕೆಯಿದ್ದರೂ ಮನೆಮನೆಯಲ್ಲೇ ದೇವತಾ
ಮೂರ್ತಿಗಳನ್ನಿರಿಸಿಕೊಂಡು ಪೂಜಿಸುವ ಪದ್ಧತಿಯಿದೆ. ಅನುಕೂಲವಿದ್ದವರು ಮನೆಯ ಒಂದು ಕೋಣೆ
ಯನ್ನೇ ಗುಡಿಯಂತೆ ಮಾಡಿಕೊಂಡಿರುತ್ತಾರೆ, ಅನುಕೂಲ ಸಾಲದವರು ಒಂದು ಗೂಡನ್ನೋ ಮಾಡ
ವನ್ನೋ ಕಟ್ಟೆಯನ್ನೋ ದೇವರಿಗೆಂದು ಬಿಟ್ಟಿರುತ್ತಾರೆ. ಹೀಗೆ ಒಂದೊಂದು ಮನೆಯಲ್ಲಿಯೂ ಗುಡಿಯಿದ್ದ
ಮೇಲೆ ಊರಿಗೊಂದು ಗುಡಿಯೇಕೆ? ಹಳ್ಳಿಯ ಸಾಮುದಾಯಿಕ ಜೀವನದಲ್ಲಿ ಇಂಥದೊಂದು ಸಾರ್ವಜನಿ
ಸ್ಥಳದ ಅಗತ್ಯವಿದೆ; ಹಲವಾರು ಸಾಮಾಜಿಕ, ಆರ್ಥಿಕ, ಧಾರ್ಮಿಕ ಪ್ರಯೋಜನಗಳಿಗೆ ಇದು ನೆರವಾಗುತ್ತದೆ
ಮದುವೆ, ಮುಂಜಿ, ಸಂತೆ, ಸಭೆ, ಸಮಾರಾಧನೆ, ಜಾತ್ರೆ, ಜಾಗರಣೆ, ಓಲಗ, ಓಲಾಟ ಎಲ್ಲಕ್ಕೂ ಗುಡಿಯೇ
ಗತಿ. ಗುಡಿಯೇನು ಯಾರೊಬ್ಬರದ್ದೂ ಅಲ್ಲ; ಯಾರೊಬ್ಬರು ಕಟ್ಟಿಸಿದರೂ ಕಟ್ಟಿಮುಗಿದೊಡನೆ ಗು
ಊರವರಿಗೆಲ್ಲ ಸೇರಿದ್ದು, ಕಟ್ಟಿಸಿದವನ ಒಡೆತನ ಅಲ್ಲಿಗೆ ಮುಗಿಯಿತು. ಗುಡಿಗೆ ಈ ಗುಣ ಇರುವು
ರಿಂದಲೇ ಊರ ಹಿರಿಯರು ಅದನ್ನು ಓರಣವಾಗಿರಿಸಿಕೊಳ್ಳಲು ಹವಣಿಸುತ್ತಾರೆ, ಪೂಜೆ ಪುನಸ್ಕಾರಗಳ
ತಪ್ಪದೆ ನಡೆಯಲು ಯತ್ನಿಸುತ್ತಾರೆ, ಕಾಲಕಾಲಕ್ಕೆ ಉತ್ಸವ–ಜಾತ್ರೆಗಳನ್ನು ನಡೆಸುತ್ತಾರೆ. ಇವೆಲ್ಲ ಊರವ

ಹೋಣೆಯೇ; ಎಲ್ಲರೂ ನೆರವಾಗುತ್ತಾರೆ. ದೇವರ ಉತ್ಸವ ಹೊರಟರೆ ಎಲ್ಲರೂ ಹೆಗಲು ಕೊಡುವು ದಿಲ್ಲವೆ? ಮನೆಮನೆಯಲ್ಲಿಯೂ ಮಂಗಳಾರತಿ ಮಾಡಿಸುವುದಿಲ್ಲವೇ? ಮನೆಯ ಪೂಜೆ 'ಆತ್ಮಾರ್ಥ'; ಗುಡಿಯ ಪೂಜೆ 'ಪರಾರ್ಥ'.

ಆದರೆ ಊರಿಗೊಂದು ಗುಡಿ ಎಲ್ಲ ಕಾಲದಲ್ಲಿಯೂ ಇದ್ದಿತೆ? ವೇದಕಾಲದಲ್ಲಿ ಗುಡಿಗಳಿದ್ದುವೆ? ಇದ್ದುವಾದರೆ ಯಾವುದೂ ಈವರೆಗೆ ಉಳಿದುಬಂದಿಲ್ಲ. ಇದ್ದ ಉಲ್ಲೇಖವೂ ವೇದ ವಾಙ್ಮಯದಲ್ಲಿ ಎಲ್ಲಿಯೂ ಬರುವುದಿಲ್ಲ. ಪ್ರತಿಮಾಪೂಜೆಯನ್ನೇ ವೈದಿಕ ಜನ ಒಪ್ಪಿರಲಿಲ್ಲವೆಂದಮೇಲೆ ಗುಡಿಯೆಲ್ಲಿ ಬರಬೇಕು? ಹೋಗಲಿ, ಮೊಹೆನ್‌ಜೊದಾರೋ ಹರಪ್ಪಾಗಳ ಅವಶೇಷಗಳಲ್ಲಿ ದೇವತಾಮೂರ್ತಿಗಳಿರುವ ಮುದ್ರೆಗಳು ದೊರೆತಿಲ್ಲವೇ? ಸೈಂಧವ ಸಂಸ್ಕೃತಿಯಲ್ಲಾದರೂ ಗುಡಿಗಳಿದ್ದುವೆ? ಅದಕ್ಕೂ ನಿದರ್ಶನಗಳಿಲ್ಲ. ಅಲ್ಲಿ ದೊರೆತಿರುವ ಮೂರ್ತಿಗಳು ಮನೆಯಲ್ಲಿ ಪೂಜೆಗಿದ್ದುವೆಂದೇ ಊಹಿಸಿಕೊಳ್ಳಬಹುದು; ಅದನ್ನೂ ಖಚಿತ ವಾಗಿ ಹೇಳುವುದು ಕಷ್ಟ. ಧಾರ್ಮಿಕ ಕಲ್ಪನೆಗಳಿದ್ದ ಮಾತ್ರಕ್ಕೆ ಗುಡಿಗಳೂ ಇರುವುವೆಂಬ ನಿಯಮವಿಲ್ಲ.

ಗುಡಿಯೆಂದು ಕರೆಯಬಹುದಾದ ಕಟ್ಟಡಗಳಲ್ಲಿ ತುಂಬ ಹಳೆಯದೆಂದರೆ ಬೌದ್ಧ ಸಂಪ್ರದಾಯಕ್ಕೆ ಸೇರಿದ ಸ್ತೂಪ. ಸ್ತೂಪವೆಂದರೆ ಸತ್ತವರ ಸ್ಮಾರಕಕ್ಕೆಂದು ಭೂಗತ ಮಾಡಿದ ಕಳೇಬರದ ಮೇಲೆ ಕಟ್ಟುವ ಗೋಳಾಕಾರದ ಗುಡ್ಡ. ರಾಜಮಹಾರಾಜರ, ಪ್ರಸಿದ್ಧರಾದ ಸಾಧುಸಂತರ ಸ್ಮಾರಕಕ್ಕಾಗಿ ಕಟ್ಟಿಸಿದ ಸ್ತೂಪದಲ್ಲಿ ಪ್ರದಕ್ಷಿಣಾಪಥ, ಮಹಾದ್ವಾರ ತೋರಣ, ಶಿಲ್ಪಾಲಂಕರಣ ಮೊದಲಾದುವಿದ್ದು ನಾಲ್ಕುಕಾಲ ಉಳಿಯುತ್ತದೆ; ಸಾಮಾನ್ಯ ಮನುಷ್ಯರ ಸಮಾಧಿಗುಡ್ಡವಾದರೆ ನಿಸರ್ಗದ ಅಬ್ಬರದ ಮುಂದೆ ಕರಗಿಹೋಗುತ್ತದೆ. ಸ್ತೂಪವೆಂದರೆ ಬೌದ್ಧಪದ್ಧತಿಯ ಕಟ್ಟಡವೆಂದೇ ನಮ್ಮೆಲ್ಲರ ಎಣಿಕೆ. ಹಾಗೇನೂ ವ್ಯಾಪ್ತಿಯ ಸಂಕೋಚಕ್ಕೆ ಕಾರಣವಿಲ್ಲ.

ಸಮಾಧಿಗುಡ್ಡಗಳು, ಗದ್ದುಗೆಗಳು ದಕ್ಷಿಣದೇಶದಲ್ಲಂತೂ ವಿಶೇಷವಾಗಿಯೇ ಇವೆ, ಇಲ್ಲಿ ಹಲವಾರು ಪ್ರಾಚೀನ ಜನಾಂಗಗಳಲ್ಲಿ ಸತ್ತವರನ್ನು ಮಲಗಿಸಿ ಸಮಾಧಿಮಾಡಿದನಂತರ, ಮೇಲ್ಭಾಗದಲ್ಲಿ ಕಟ್ಟೆಯೊಂದನ್ನು ಕಟ್ಟಿ, ಶವದ ತಲೆಯಿರುವ ಕಡೆ ಸಣ್ಣ ಕಂಬವೊಂದನ್ನು ನೆಟ್ಟು, ಕಾಲುಗಳ ಕಡೆ ಬಸವಣ್ಣನ ಮೂರ್ತಿ ಯನ್ನಿರಿಸಿ, ನಡುವೆ ಬಲಿಪೀಠವನ್ನು ಅಳವಡಿಸುವ ಪದ್ಧತಿಯಿದ್ದಿತು (ಚಿತ್ರ 21). ಬಲಿಪೀಠದ ಮೇಲೇ ಸತ್ತವನಿಗಾಗಿ ಎಡೆಯಿಡುವುದೂ, ಕೋಳಿಗಳನ್ನು ಕೊಲ್ಲುವುದೂ ನಡೆಯುತ್ತಿದ್ದುವು. ಈ ಕಟ್ಟಡದ



ಚಿತ್ರ 21
ಸಮಾಧಿಗದ್ದುಗೆ ಪ್ರಾಚೀನಗದ್ದುಗೆಯೊಂದರ ರೇಖಾಚಿತ್ರ

ಮೇಲ್ಭಾಗದಲ್ಲಿ ಏನೂ ಇರುತ್ತಿರಲಿಲ್ಲ. ಕೆಲವೊಮ್ಮೆ ಸುತ್ತಲೂ ಕಟಕಟೆಯನ್ನೋ ಬೇಲಿಯನ್ನೋ ಹಾಕಿ, ಗದ್ದುಗೆಯ ಮೇಲೆ ಪ್ರಾಣಿಗಳೂ ಮನುಷ್ಯರೂ ಓಡಾಡದಿರುವಂತೆ ನೋಡಿಕೊಳ್ಳುತ್ತಿದ್ದರು. ಶವಸಂಸ್ಕಾರದ ಸಮಯದಲ್ಲಿ ಅಥವಾ ವಾರ್ಷಿಕ ಶ್ರಾದ್ಧದ ಸಂದರ್ಭದಲ್ಲಿ ಗದ್ದುಗೆಯ ಸುತ್ತಲೂ ಪ್ರದಕ್ಷಿಣೆ ಬರುವ ವಿಧಿಯಿದ್ದು ದಾಗಿ, ಅದಕ್ಕೆ ಅನುಕೂಲವಾಗುವಂತೆ ಸುತ್ತಲೂ ಇಕ್ಕಟ್ಟಾದ ದಾರಿಯನ್ನು ಬಿಟ್ಟೇ ಬೇಲಿ ಹಾಕುತ್ತಿದ್ದರು. ಸ್ತೂಪದಲ್ಲಿ ಕಾಣಬರುವ ಮೇಧಿ, ಪ್ರದಕ್ಷಿಣಾಪಥ, ಪ್ರಾಕಾರಗಳ ಹಿನ್ನೆಲೆ ಇದೇ. ಮುಂದೆ ದೇವಾಲಯ ಗಳಲ್ಲಿಯೂ ಈ ವ್ಯವಸ್ಥೆ ಉಳಿದುಬಂದಿತು. ಸ್ತೂಪದಲ್ಲಿ ಅಂಡಾಕಾರದ ಕಟ್ಟಡದ ಮೇಲ್ಭಾಗದಲ್ಲಿ 'ಹರ್ಮ್ರಿಕಾ' (ಅಥವಾ ದೇವಕೋಟ್ಟ) ಎಂಬ ಮಂಟಪವೂ ಇರುತ್ತಿದ್ದುದನ್ನು ಗಮನಿಸಬೇಕು. ಪ್ರಾಚೀನ ಗದ್ದುಗೆಗಳಲ್ಲಿ ಇರಿಸುವ ಕಂಬ, ಬಲಿಪೀಠ, ನಂದಿಗಳೂ ಮುಂದಿನ ಗುಡಿಗಳಲ್ಲಿ ಉಳಿದುಬಂದುವು. ಕಂಬವೇ ಲಿಂಗವಾಯಿತು, ಇಲ್ಲವೇ ಧ್ವಜಸ್ತಂಭವಾಯಿತು. ಬೌದ್ಧ ಸ್ತೂಪಗಳ ಬಳಿಯೂ ಕಂಬಗಳಿರುವುದು ಗಮನಾರ್ಹವಾದ ವಿವರ. ವೈದಿಕ ಯಜ್ಞದ ಪ್ರಸಂಗದಲ್ಲಿಯೂ ಯೂಪದ ಪಾತ್ರವಿದೆಯಲ್ಲವೇ ?

ಗದ್ದುಗೆಯ ಕಟ್ಟೆ ಅಧಿಷ್ಠಾನ ಅಥವಾ ಜಗತೀ ಎನಿಸಿಕೊಂಡಿತು. ಮೇಲಿನ ವ್ಯವಸ್ಥೆಯನ್ನು ಮಳೆಗಾಳಿಗಳಿಂದ ಕಾಪಾಡಲು ಸಣ್ಣದೊಂದು ಕೋಣೆಯನ್ನೂ ಕಟ್ಟುವ ಪದ್ಧತಿ ಹೊಸದೇನಲ್ಲ. ನಮ್ಮ ಕಡೆ ಮಾತ್ರವಲ್ಲ, ಬಂಗಾಳದ ಕಡೆಯೂ ಸತ್ತವರನ್ನು ಸುಟ್ಟ ಕಡೆ 'ಮಠ'ವನ್ನು ಕಟ್ಟುವ ವಾಡಿಕೆಯಿದೆ; ಈ ಮಠದೊಳಗೆ ಶಿವಲಿಂಗವನ್ನೂ ಇರಿಸುತ್ತಾರೆ (ತಾರಾಪದ ಭಟ್ಟಾಚಾರ್ಯ, Canons of Indian Art, ಪು 272). ಕಳೇಬರವನ್ನು ಚಿತೆಗೆ ಒಪ್ಪಿಸಿದ ಜಾಗದಲ್ಲಿ ಕಟ್ಟಿದ ಕಟ್ಟಡ ಚೈತ್ಯವೆನಿಸಿಕೊಂಡಿತು. ಬೌದ್ಧ ಚೈತ್ಯಗಳು ಮೂಡಿಬಂದುದೂ ಹೀಗೆಯೇ. 'ಮಠ' ಕಟ್ಟಲು ಅನುಕೂಲವಿಲ್ಲದವರು ಅಲ್ಲಿ ಮರವೊಂದನ್ನು ಬೆಳೆಸುತ್ತಿದ್ದರು; ಇದೇ ಸ್ಥಳವೃಕ್ಷ ಅಥವಾ ಚೈತ್ಯವೃಕ್ಷ. ಪಿತೃದೇವತೆಗಳು ಮರದಲ್ಲಿ ವಾಸಿಸುತ್ತಾರೆಂದೇ ಯಕ್ಷಪೂಜೆ, ವೃಕ್ಷಪೂಜೆ, ನಾಗಪೂಜೆಗಳು ಬಳಕೆಗೆ ಬಂದುವು. ಗುಡಿಗಳೂ ಪಿತೃದೇವತೆಗಳ ಆರಾಧನೆಗೆಂದು ಮೀಸಲಾದ ಗದ್ದುಗೆಗಳಿಂದಲೇ ಬೆಳೆದು ಬಂದ ಕಟ್ಟಡಗಳು. 'ಚೈತ್ಯಪ್ರಾಸಾದ' ಎನ್ನುವ ಹಳೆಯ ಪ್ರಯೋಗ ವನ್ನೂ ಈ ಸಂದರ್ಭದಲ್ಲಿ ನೆನಸಿಕೊಳ್ಳಬಹುದು.

ತಮಿಳಿನಲ್ಲಿ ಪಳ್ಳಿ ಅಥವಾ ಪಾಳಿ ಎನ್ನುವ ಮಾತು ಬರುತ್ತದೆ. ಪಳ್ಳಿಯೆಂದರೆ ತಿರುಕ್ಕುರಳ್ ಹಾಸಿಗೆಯೆಂದೂ, ಕಲಿತ್ತೊಗೈ ನಿದ್ರೆಯೆಂದೂ ಅರ್ಥಮಾಡಿದೆ. ನಿದ್ರೆಮಾಡುವ ಎಡೆಯೆಂದು ತಾತ್ಪರ್ಯ. ಆದರೆ ಗುದ್ದುಗೆಯೆನ್ನುವ ಅರ್ಥದಲ್ಲಿ ಈ ಪದವನ್ನು ಉಪಯೋಗಿಸುವುದಿದೆ. ದೀರ್ಘ ನಿದ್ರೆಮಾಡುವ ಸ್ಥಳ ಅಥವಾ ಶ್ಮಶಾನ ಎಂದು ಸೂಚನೆ. ಈ ವಿಚಾರ ಶಿವನ ಸ್ವಾರಸ್ಯವನ್ನು ವಿವರಿಸುವಾಗ ಮತ್ತೆ ಬರುತ್ತದೆ. ಇಲ್ಲಿ ಪಳ್ಳಿಯೆಂಬ ಮಾತನ್ನು ಸಮಾಧಿ ಗದ್ದುಗೆ ಎಂಬರ್ಥದಲ್ಲಿ ಮಾತ್ರವಲ್ಲದೆ ಸಂನ್ಯಾಸಿಗಳು ಇರುತ್ತಿದ್ದ ಬೀಡು ಅಥವಾ ಮಠ ಎನ್ನುವ ಅರ್ಥದಲ್ಲಿಯೂ, ಜನರು ಪೂಜೆಗಾಗಿ ಹೋಗುವ ಗುಡಿ ಎನ್ನುವ ಅರ್ಥ ದಲ್ಲಿಯೂ ಬಳಸಿರುವ ನಿದರ್ಶನಗಳಿವೆ. ಎಂದರೆ ಗುಡಿಯ ಹಿನ್ನೆಲೆ ಇದು.

ತಮಿಳಿನಲ್ಲಿ ಮೊದಲಿಗೆ ಗುಡಿಯನ್ನು ನಿರ್ದೇಶಿಸುವ ಪದ 'ಕೋಟ್ಟಂ' ಎಂಬುದು. 'ಕೋಯಿಲ್' ಎಂದರೆ ಮೊದಲಿಗೆ ಅರಮನೆ, 'ಮಾಡಂ' ಎಂದರೆ ದೊಡ್ಡ ಮನೆ; ಕಾಲಕ್ರಮದಲ್ಲಿ ಈ ಮಾತುಗಳಿಗೆ ದೇವಾಲಯವೆಂಬ ಅರ್ಥ ಬಂದಿತು. 'ಕೋಟ್ಟಂ' ಎನ್ನುವ ಪದವು ಸಂಸ್ಕೃತದ 'ಕೋಷ್ಠ'ದ (ಎಂದರೆ ಒಂದು ಮಾದರಿಯ ಗುಡಿಯ) ತದ್ಭವವೆಂದು ಹೇಳುತ್ತಾರೆ; ಆದರೆ ಇದು ತಿರುಗುಮುರುಗು ವ್ಯವಹಾರ ಅಷ್ಟೆ. ಕೋಟ್ಟಂ ಎಂದರೆ ಸಣ್ಣಗುಡಿ; ಕನ್ನಡದಲ್ಲಿಯೂ ಕೋಟ ಎನ್ನುವ ಮಾತಿಗೆ ಗುಡಿಸಲು ಎನ್ನುವ

ಅರ್ಥವಿದೆ. ತೋಡರ ಗುಡಿಸಲುಗಳೇ ಗುಡಿಗೆ ಸ್ಫೂರ್ತಿಯನ್ನು ನೀಡಿದುವು ಎನ್ನುವ ಒಂದು ವಾದವೂ ಇದೆ. ಇದು ಹೇಗಾದರೂ ಇರಲಿ, ಕೋಟಕ್ಕೂ ಗುಡಿಗೂ ಇರುವ ನೆಂಟನ್ನು ಗಮನಿಸಬೇಕು. ಪಿತೃ ದೇವತೆಗಳಿಗೆ ಎಡೆಯಿಡುವ ಸಲುವಾಗಿ ಮಸಾಣದಲ್ಲಿ ಗದ್ದುಗೆಯನ್ನು ಮುಚ್ಚಿ ತರಗೆಲೆಗಳ ಗುಡಿಸಲನ್ನು, ಜೋಪಡಿಯನ್ನು ಏರ್ಪಡಿಸುವ ಪದ್ಧತಿ ಇಂದಿಗೂ ಹಲವಾರು ಆದಿವಾಸಿ ಜನಾಂಗಗಳಲ್ಲಿದೆ.

ಈ ವಿಚಾರವನ್ನು ಇಲ್ಲಿಗೆ ಬಿಟ್ಟು ಸಾಧ್ಯವಾದಷ್ಟು ಸ್ತೂಪಗಳ ಹಿನ್ನೆಲೆಯ ಬೆನ್ನಟ್ಟಿ ಹೋಗೋಣ. ಸ್ತೂಪಗಳಿಗಿಂತ ಹಳೆಯದೆನಿಸಿದ ಕಟ್ಟಡಗಳೇನು ಉಳಿದಿಲ್ಲವೆಂದು ಹೇಳಿದೆವಲ್ಲ. ಉಳಿದಿರಲು ಸಾಧ್ಯವೂ ಇಲ್ಲ. ಆದರೆ ಬಿಹಾರ ಪ್ರಾಂತ್ಯದ ನಂದನಘಡ ಎಂಬಲ್ಲಿದ್ದ ಸಮಾಧಿ ದಿಬ್ಬಗಳನ್ನು ಪರಿಶೀಲಿಸಿದ ಡಾ॥ ಬ್ಲಾಚ್ ಇವು ವೇದಯುಗದವೆಂದೂ, ಕ್ರಿಸ್ತಪೂರ್ವ ಏಳು–ಎಂಟನೆಯ ಶತಮಾನದವೆಂದೂ ನಿರ್ದೇಶಿಸಿದರು. ವೇದಯುಗದಲ್ಲಿ ಸತ್ತವರ ಸ್ಮಾರಕಕ್ಕೆ 'ಮೃಣ್ಮಯ ಗೃಹ'ಗಳನ್ನು ಕಟ್ಟುತ್ತಿದ್ದುದೂ ಅವು ಗೋಳಾಕಾರದಲ್ಲಿ (ಪರಿಧಿ) ಇರುತ್ತಿದ್ದುದೂ ತಿಳಿದುಬರುತ್ತದೆ (ಋಗ್ವೇದ 7, 89; 10, 18). ಶತಪಥ ಬ್ರಾಹ್ಮಣದಲ್ಲಿ ಇಂಥ ಸಮಾಧಿಗದ್ದುಗೆಗಳಿಗೇ 'ಶ್ಮಶಾನ'ವೆಂದು ಹೆಸರಿದ್ದಿತೆನ್ನುವ ಉಲ್ಲೇಖವಿದೆ (1,3, 8. 1, 4). ಕಾಲಕ್ರಮದಲ್ಲಿ ಈ ಮಾತು ಇಡೀ ಒಂದು ಪ್ರದೇಶಕ್ಕೆ ಅನ್ವಯವಾದಂತೆ ರೂಢಿಗೆ ಬಂದಿತು. ರಾಮಾಯಣ ಮಹಾ–ಭಾರತಗಳಲ್ಲಿ ಮನೆಗಳೂ ಅರಮನೆಗಳೂ (ಪ್ರಾಸಾದ, ವಿಮಾನ, ಹರ್ಮ್ಯ, ಸೌಧ), ಸಭಾ ಮಂಟಪಗಳೂ, ದೇವಾಯತನಗಳೂ (ದೇವಕುಲ, ಈ ಮಾತೇ ಬಂಗಾಳಿಯಲ್ಲಿ ದೇವುಲ್ ಎಂದಾಗಿದೆ), ಚೈತ್ಯಗಳೂ ಇದ್ದ ಪ್ರಸ್ತಾಪವಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ವಾಸ್ತು' ಎನ್ನುವ ಮಾತು ಮನೆಗಳು, ಆರಾಮ (ಉದ್ಯಾನ)ಗಳು, ಸೇತುಬಂಧ (ಸೇತುವೆ, ಅಣೆಕಟ್ಟು), ಕೊಳಗಳು ಎಲ್ಲಕ್ಕೂ ಅನ್ವಯಿಸುತ್ತದೆ. ಇವಲ್ಲದೆ 'ಕೋಷ್ಠಕಾಲಯ' ವನ್ನೂ ಕೌಟಿಲ್ಯ ಪ್ರಸ್ತಾಪಿಸಿದ್ದಾನೆ; ಅಪರಾಜಿತಾ, ಜಯಂತ, ಶಿವ, ವೈಶ್ರವಣ ಇವರಿಗೆ ಗುಡಿಗಳಿದ್ದುದೂ ತಿಳಿದುಬರುತ್ತದೆ (3, 8).

ಗುಪ್ತರ ಕಾಲಕ್ಕೆ ಮೊದಲು ಗುಡಿಗಳಿದ್ದುವೆಂಬುದು ದಿಟ; ಮರದ, ಮಣ್ಣಿನ ಕಟ್ಟಡಗಳಾದುದರಿಂದ ಉಳಿದು ಬರಲಿಲ್ಲ ಅಷ್ಟೆ. ಕ್ರಿಸ್ತಾಬ್ದ ಎರಡನೆಯ ಶತಮಾನದ ಸುಮಾರಿಗೇ ನಾಗರಶೈಲಿಯ ದೇವಾಲಯ ಮೈದಳೆಯಿತೆಂದು ಹೇಳುತ್ತಾರೆ. ಕ್ರಿಸ್ತಾಬ್ದ 437ರಲ್ಲಂತೂ ಗುಜರಾತಿನ ರೇಷ್ಮೆನೇಕಾರರು ಮಂದಸ್ಸೂರಿನಲ್ಲಿ ಸೂರ್ಯ ದೇವಾಲಯವೊಂದನ್ನು ಕಟ್ಟಿಸಿದ ಸ್ಪಷ್ಟ ಉಲ್ಲೇಖವಿದೆ. ಮೊದಲಿನ ಗುಡಿಗಳೆಲ್ಲ ಬಹುಮಟ್ಟಿಗೆ ಸ್ತೂಪಗಳ ಮಾದರಿಯಲ್ಲೇ ಇರುತ್ತಿದ್ದು ಯಕ್ಷರ ಪ್ರತಿಕೃತಿಗಳನ್ನು ಹೊಂದಿದ್ದು ಜನರ ಹರಕೆಗೆ ಪೂಜೆಗೆ ಅನುಕೂಲವಾಗಿರುತ್ತಿದ್ದುವು. ಸ್ತೂಪಗಳಲ್ಲಿ ಇದೇ ಪ್ರಯೋಜನವಲ್ಲವೆ? ಮಥುರಾದ ಬಳಿ ಜಮಲಾಪುರ ದಿಬ್ಬದಲ್ಲಿ ದೊರೆತ ಅವಶೇಷಗಳಿಂದ ದಧಿಕರ್ಣ, ಮಣಿಭದ್ರ ಮೊದಲಾದ ಯಕ್ಷರ ಗುಡಿಗಳಿದ್ದ ಸೂಚನೆ ಇದೆ. ಚೈತ್ಯ ಅಥವಾ ಆಯತನಗಳಲ್ಲಿ ದೇವತಾಮೂರ್ತಿಗಳಿದ್ದುದೂ ರಾಮಾಯಣದ ಪ್ರಸ್ತಾಪಗಳಿಂದ ತಿಳಿದುಬರುತ್ತದೆ. ಕ್ರಿಸ್ತಪೂರ್ವ 350–250 ಸುಮಾರಿನ ನಗರೀ (ಚಿತ್ತೂರು) ಶಾಸನದಿಂದ ಸಂಕರ್ಷಣ–ವಾಸುದೇವರಿಗೆ ಗುಡಿಯಿದ್ದುದು ಸ್ಪಷ್ಟವಾಗುತ್ತದೆ. ಕ್ರಿಸ್ತಯುಗದ ಆರಂಭದಲ್ಲಿಯೇ ದಕ್ಷಿಣದೇಶದಲ್ಲಿ ಕೆರೆಗಳ, ನದಿಗಳ ದಂಡೆಯ ಮೇಲೆ ಕಾರ್ತಿಕೇಯನ ಗುಡಿಗಳಿದ್ದುದನ್ನು ಹಲವಾರು ಶಾಸನಗಳು ಹೇಳುತ್ತವೆ.

ನಾಗಾರ್ಜುನಕೊಂಡದಲ್ಲಿ ದೊರೆತ ಒಂದು ಸಂಸ್ಕೃತ ಶಾಸನ, ಮೂರನೆಯ ಶತಮಾನದ್ದು, ಸ್ವಾರಸ್ಯವಾದುದು. ಇದು ಇಕ್ಷ್ವಾಕು ವಂಶದ ಎಹುವಲ–ಚಾಂತಮೂಲನ ಮಗ ಇಮ್ಮಡಿ ವೀರ

ಪುರುಷದತ್ತನ ಹೆಸರನ್ನು ಹೇಳುತ್ತದೆ. ಪುಷ್ಪಭದ್ರಸ್ವಾಮಿಯೆಂಬ ಹೆಸರಿನಿಂದ ಮಹಾದೇವ ಆಲಯವೊಂದನ್ನು ಕಟ್ಟಿಸಿ, ಧ್ವಜಸ್ತಂಭವೊಂದನ್ನು ನಿಲ್ಲಿಸಿ, ಆಲಯದ ಅನುದಿನದ ನಿರ್ವಹಣೆಗೆಂದು ಗ್ರಾಮವೊಂದನ್ನು ದತ್ತಿ ಬಿಟ್ಟುದನ್ನು ಈ ಶಾಸನ ಮೂಡಿಸಿದೆ. ಇಲ್ಲಿ ಉಲ್ಲೇಖಕ್ಕೆ ಬಂದ ಪುಷ್ಪಭದ್ರ ಯಕ್ಷನೊಬ್ಬನೋ ಶಿವನೋ ತಿಳಿಯುವುದಿಲ್ಲ. ಇದೇ ಕಾಲದ ಇನ್ನೊಂದು ಶಾಸನ ಭಗೇಶ್ವರನೆಂಬ ಇನ್ನೊಬ್ಬ ದೇವತೆಯನ್ನು ನಿರ್ದೇಶಿಸುತ್ತದೆ. ಇದೇ ಶತಮಾನದ ಕಡೆಯ ಸುಮಾರಿಗೆ ಸಿದ್ಧವಾದ, ಶಿಲಾಶಾಸನವೊಂದು ಆಭೀರರಾಜ ವಸುಷೇಣನ ಕಾಲದಲ್ಲಿ 'ಅಷ್ಟಭುಜಸ್ವಾಮಿ'ಯ ಮರದ ಮೂರ್ತಿಯನ್ನು ಆಲಯದಲ್ಲಿ ಪ್ರತಿಷ್ಠೆ ಮಾಡಿದುದನ್ನು ವಿವರಿಸಿದೆ. ಈ ದಾರುಮಯ ಮೂರ್ತಿಯು ತ್ರಿವಿಕ್ರಮ--ವಿಷ್ಣುವಿನ ಉಗ್ರರೂಪವೆಂದು ಪ್ರತೀತಿ; ಔದುಂಬರ ಮರದಲ್ಲಿ ಮಾಡಿದ ಮೂರ್ತಿಯಂತೆ ಇದು. ಇಲ್ಲಿಂದ ಮುಂದೆ ಶಿವದೇವಾಲಯಗಳೂ ವಿಷ್ಣುದೇವಾಲಯಗಳೂ ವಿಶೇಷವಾಗಿ ಬೆಳೆದು ಬಂದುವು.

ಆರನೆಯ ಶತಮಾನದ ಬೃಹತ್‌ಸಂಹಿತೆ (ವರಾಹಮಿಹಿರ ಬರೆದದ್ದು) ದೇವಾಲಯಗಳಲ್ಲಿ ನಾಗರ–ದ್ರಾವಿಡ ಎಂಬ ಭೇದವಿದ್ದುದನ್ನು ಸ್ಪಷ್ಟವಾಗಿ ಹೇಳಿದೆ. ನಾಗರ ಪದ್ಧತಿಯಲ್ಲಿ ಮೊದಲಿಗೆ ಇಪ್ಪತ್ತು ಬೇರೆ ಬೇರೆ ಬಗೆಯ ಗುಡಿಗಳಿದ್ದುವೆಂದೂ (ಪುರಾಣಗಳು), ದ್ರಾವಿಡ ಪದ್ಧತಿಯಲ್ಲಿ ಹನ್ನೆರಡು ಬಗೆಗಳಿದ್ದುವೆಂದೂ (ಸುಪ್ರಭೇದಾಗಮ) ವಿವರವಿದೆ. ನಾಗರ ಪದ್ಧತಿಯಲ್ಲಿ ಸಾಮಾನ್ಯವಾಗಿ ವೈರಾಜ, ಪುಷ್ಪಕ, ಕೈಲಾಸ, ಮಣಿಕ, ಮಾಲಿಕ, ತ್ರಿವಿಷ್ಟಪ ಎಂಬ ಮುಖ್ಯ ಪ್ರಭೇದಗಳನ್ನೂ ದ್ರಾವಿಡ ಸಂಪ್ರದಾಯದವರು ನಾಗರ, ವೇಸರ, ದ್ರಾವಿಡ ಎಂಬ ಮೂರು ಮುಖ್ಯ ಪ್ರಭೇದಗಳನ್ನೂ ಗುರುತಿಸಿದ್ದಾರೆ. ಇವು ಆರೇಳನೆಯ ಶತಮಾನದ ಮೊದಲೇ ಮೈದಳೆದ ಕಲ್ಪನೆಯಿದ್ದೀತು. ಕಾಲಕ್ರಮದಲ್ಲಿ, ಎಂದರೆ ಎಂಟನೆಯ ಶತಮಾನದ ಸುಮಾರಿಗೆ, ದೇವಾಲಯ ಪ್ರಭೇದಗಳು ಇಪ್ಪತ್ತು (ಈಶಾನ ಶಿವಗುರುದೇವ ಪದ್ಧತಿ), ತೊಂಬತ್ತಾರು (ವೈಖಾನಸಾಗಮ), ನೂರು (ವಿಷ್ಣುಧರ್ಮೋತ್ತರ) ಎಂಬ ಕಲ್ಪನೆಗಳು ಕಂಡುಬಂದುವು.

ಅಯ್ಯಡಿಕಳ್–ಕಡವರ್ಕೋನ್ ಎನ್ನುವ ಪಲ್ಲವರಾಜ 'ಕ್ಷೇತ್ರವೆಂಬು' ಎನ್ನುವ ಪದ್ಯಸಂಗ್ರಹವನ್ನು ರಚಿಸಿದ್ದಾನೆ. ತಮಿಳು ಸಾಹಿತ್ಯದಲ್ಲಿ ಅಪ್ಪರ್ ಮತ್ತು ಸಂಬಂದರ್ ಇವರಿಬ್ಬರಿಗಿಂತಲೂ ಪ್ರಾಚೀನ ಇವನು; ಎಂದರೆ ಕ್ರಿಸ್ತಾಬ್ದ ಏಳನೆಯ ಶತಮಾನಕ್ಕೆ ಮುಂಚಿನವನು. ಇವನು ತನ್ನ ಕೃತಿಯಲ್ಲಿ ತಾನು ಸಂದರ್ಶಿಸಿದ ಇಪ್ಪತ್ತೆರಡು ಗುಡಿಗಳ ಹಿರಿಮೆಯನ್ನು ಹೊಗಳಿದ್ದಾನೆ. ಪಲ್ಲವರು ಗುಡಿಗಳನ್ನು ತುಂಬ ಮೆಚ್ಚಿಕೊಂಡವರು. ದಕ್ಷಿಣ ದೇಶದಲ್ಲಿ ಅವರು ಕಟ್ಟಿದ ಕಲ್ಲುಗುಡಿಗಳು ದೇವಾಲಯ ನಿರ್ಮಾಣದಲ್ಲಿ ಒಂದು ಕ್ರಾಂತಿಯನ್ನು ಒದಗಿಸಿದುವು. ಮೊದಲಿನ ಚಾಳುಕ್ಯರು ಗುಡಿಗಳನ್ನು ಇಟ್ಟಿಗೆಯಲ್ಲಿ ಕಟ್ಟಿಸುತ್ತಿದ್ದರು; ತೆರ್‌ನಲ್ಲಿರುವ ಉತ್ತರೇಶ್ವರ, ತಾರಕೇಶ್ವರ ಗುಡಿಗಳೂ ಐಹೊಳೆ, ಪಟ್ಟದಕಲ್ಲು, ಬಾದಾಮಿ ಗುಡಿಗಳೂ ನಿದರ್ಶನಗಳು. ಪಲ್ಲವರಾಜನಾದ ಮಹೇಂದ್ರವರ್ಮ (600–625) ಇಟ್ಟಿಗೆ, ಮರ, ಕಲ್ಲು, ಗಾರೆಗಳ ಗುಡಿಯನ್ನು ಕಟ್ಟಿದವರಲ್ಲಿ ಮೊದಲಿಗ; ದಕ್ಷಿಣ ಆರ್ಕಾಡು ಜಿಲ್ಲೆಯ ಮಂಡಗಪತ್ತು ಎಂಬಲ್ಲಿರುವ ಅವನ ಗುಹಾಶಾಸನ ಇದನ್ನು ಹೇಳುತ್ತದೆ. ಅವನ ನಂತರ ರಾಜನಾದ ನರಸಿಂಹವರ್ಮ – ಮಾಮಲ್ಲ (625–645) ಮಾಮಲ್ಲಪುರದ 'ರಥ'ಗಳನ್ನು ಬಂಡೆಗಳಲ್ಲಿಯೇ ಕಡೆಯಿಸಿದ. ಜಗತ್ಪ್ರಸಿದ್ಧವಾದ ಈ 'ರಥ'ಗಳು ದಿಟವಾಗಿ ಗುಡಿಗಳೇ; 'ರಥ' ಎನ್ನುವುದು ಉತ್ತರ ಶೈಲಿಯ ದೇವಾಲಯಕ್ಕೆ ಹೆಸರಷ್ಟೆ.

ಚೋಳರಾಜರ ಕಾಲದಲ್ಲಿ ಗುಡಿಗಳು ವಿಶೇಷವಾಗಿ ಕಾಣಿಸಿಕೊಂಡವು. ಆದೂ ಪರಾಂತಕ (ಮದಿರೈಕೊಂಡ – ಪರಕೇಸರಿ 907–955), ರಾಜರಾಜ (985–1014), ಕುಲೋತ್ತುಂಗ ರಾಜೇಂದ್ರ

(1070–1120) ಇವರ ಕಾಲದಲ್ಲಂತೂ ದಕ್ಷಿಣದ ದೇಗುಲಗಳು ಕಣ್ಣು ಕೋರೈಸುವಂತೆ, ರಸಿಕರು ಮೆಚ್ಚುವಂತೆ ಮೂಡಿಕೊಂಡವು. ಊರಿಗೆಲ್ಲ ಗುಡಿಯೇ ಮುಖ್ಯವಾಗಿ ಕಾಣತೊಡಗಿತು. ಸೊಗಸಾದ ವಿಮಾನಗಳು ಎದ್ದುದು ಆಗಲೇ. ಮುಂದೆ ಪಾಂಡ್ಯರಾಜರ ಪ್ರೋತ್ಸಾಹದಲ್ಲಿ (1100ರಿಂದ 1350ರ ವರೆಗೆ) ಗುಡಿಗಳ ಗೋಪುರಗಳು ಆಕಾಶದುದ್ದಕ್ಕೂ ಎದ್ದು ನಿಂತುವು. ತಿರುವಣ್ಣಾಮಲೈ, ಮಧುರೈ, ಚಿದಂಬರಂ ಮೊದಲಾದ ಕ್ಷೇತ್ರಗಳ ಗುಡಿಗಳನ್ನು ನೋಡಿದರೆ ವಿಮಾನಗಳ ವೈಭವ, ಗೋಪುರಗಳ ಗಾಂಭೀರ್ಯ ಅರ್ಥವಾಗುತ್ತದೆ. ಊರೂರಿಗೂ ಗುಡಿ ಮುಖ್ಯವಾಗಿ ಒದಗಿದುದು ಚೋಳರ ಕಾಲದಲ್ಲಿ.

ವಾಸ್ತುವಿದ್ಯೆಯ ವೇದಿಕೆ

ಗುಡಿಗಳನ್ನು ಕಟ್ಟಿಸಬೇಕೆಂಬ ಹಂಬಲವೇನೋ ಹರಡಿತು. ಹಲವಾರು ಧಾರ್ಮಿಕ ಸಂಪ್ರದಾಯಗಳೂ ಮೂಡಿಕೊಂಡು ಬಂದು ಮತಪ್ರಕ್ರಿಯೆಗಳೂ ಮೈದಳೆದವು. ಮನಸ್ಸಿಗೆ ಬಂದಂತೆ ಗುಡಿಗಳನ್ನು ಕಟ್ಟುವುದು ಸಲ್ಲದು; ಅದಕ್ಕೊಂದು ಕಟ್ಟಳೆಯಿರಬೇಕು, ಕಲ್ಪನೆಯಿರಬೇಕು ಎನ್ನುವುದರ ಅರಿವು ಹಿರಿಯರಿಗೆಲ್ಲ ಆಯಿತು. ಗುಡಿಯನ್ನು ಎಲ್ಲಿ ಕಟ್ಟಬೇಕು, ಹೇಗೆ ಕಟ್ಟಬೇಕು, ಯಾವ ಯಾವ ವಿಭಾಗಗಳಿರಬೇಕು, ಪೂಜೆಗೆಂದು ಮೂರ್ತಿಯನ್ನು ಎಲ್ಲಿಡಬೇಕು, ಪ್ರತಿಷ್ಠೆ ಹೇಗೆ ಮಾಡಬೇಕು, ಪರಿವಾರದೇವತೆಗಳನ್ನು ಯಾವ ಕ್ರಮದಲ್ಲಿ ಎಲ್ಲೆಲ್ಲಿ ಇಡಬೇಕು, ಮೂರ್ತಿಗಳನ್ನು ಮಾಡುವ ಕ್ರಮ ಏನು – ಈ ಎಲ್ಲ ವಿವರಗಳನ್ನೂ ಕುರಿತು ವಿಧಿ–ನಿಷೇಧಗಳನ್ನು ಹೇಳುವ ಶಾಸ್ತ್ರವೇ ಒಂದು ಸಿದ್ಧವಾಯಿತು. ಇದಕ್ಕೆ ಸಂಸ್ಕೃತದಲ್ಲಿ ವಾಸ್ತುವಿದ್ಯೆ ಯೆಂದು ಹೆಸರು. ವಾಸ್ತುವಿದ್ಯೆಯಲ್ಲಿ ಗುಡಿಯ ವಿಚಾರ ಮಾತ್ರವಲ್ಲದೆ ಎಲ್ಲ ಬಗೆಯ ಕಟ್ಟಡಗಳ ವಿಚಾರವೂ ಬರುತ್ತದೆ; (ಗುಡಿಯ ವಿಚಾರವೇನೋ ಮುಖ್ಯವಾದ, ವಿಸ್ತಾರವಾದ ಭಾಗವೇ.

ಕಟ್ಟಡವನ್ನು ಕಟ್ಟುವ ಮೊದಲು ವಾಸ್ತುಪೂಜೆಯನ್ನು ನಡೆಸುವುದು ಪದ್ಧತಿ. ಋಗ್ವೇದದಲ್ಲಿಯೇ ವಾಸ್ತೋಷ್ಪತಿಯ ಸ್ತುತಿ ಬರುತ್ತದೆ (7, 54, 1); ಸಾಯಣರು ವಾಸ್ತೋಷ್ಪತಿಯೆನ್ನುವ ಮಾತಿಗೆ ಮನೆಯನ್ನು ಕಾಪಾಡುವ ದೇವತೆ (ಗೃಹಸ್ಯಪಾಲಯಿತೃದೇವ) ಎಂದು ಅರ್ಥಮಾಡಿದ್ದಾರೆ. ಮನೆಯನ್ನು ಕಟ್ಟಿರುವ ಸ್ಥಳದ ಒಡೆಯ, ಆಶ್ರಯ (ಗೃಹಕ್ಷೇತ್ರಸ್ಯ ಪತಿರಧಿಷ್ಠಾತಾ) ಎಂದೂ ಅರ್ಥವಿದೆ. ಇಂದ್ರನಿಗೆ ಈ ಹೆಸರಿದ್ದಿತು; ದೇವರಾಜ ಯಜ್ವನು ವಾಸ್ತು ಎಂದರೆ ಅಂತರಿಕ್ಷವೆಂದೂ, ವಾಸ್ತೋಷ್ಪತಿಯು ಎಲ್ಲ ಅಂತರಿಕ್ಷ ದೇವತೆಗಳನ್ನೂ ಕಾಪಿಡುವವನು ಎಂದೂ ವಿವರಿಸಿರುವುದು ಈ ನೆಲೆಯಲ್ಲಿಯೇ. ಬ್ರಹ್ಮನೆಂದೂ ಶಿವನೆಂದೂ ನಿರ್ದೇಶಿಸಿರುವುದೂ ಇದೆ. ಮುಂದೆ ಕೌಟಿಲ್ಯನ ಕಾಲದಲ್ಲಿಯೂ ಶಿಲ್ಪಶಾಸ್ತ್ರಗಳ ಕಾಲದಲ್ಲಿಯೂ ವಾಸ್ತು ವೆಂದರೆ ಕಟ್ಟಡ ಅಷ್ಟೆ. ಆದರೆ ಪೂಜೆ ಮಾಡುವಾಗ ದೇವತೆಯೊಂದರ ಅಥವಾ ಚೈತನ್ಯವೊಂದರ ಕಲ್ಪನೆಯಿರುವುದು ಸ್ವಾರಸ್ಯ.

ಭೂಮಿಯನ್ನು ಹಲವಾರು (81 ಅಥವಾ 64) ಚಚ್ಚೌಕಗಳಾಗಿ ವಿಭಾಗಮಾಡಿ ನಡುವಣ ಚಚ್ಚೌಕದಲ್ಲಿ (ಈ ಚೌಕಕ್ಕೆ ಬ್ರಹ್ಮಸ್ಥಾನವೆಂದು ಹೆಸರು; 'ವಾಸ್ತುಮಧ್ಯೇತು ಮರ್ಮಾಣಿ ಬ್ರಹ್ಮಾ ಹೃದಯ ಮುಚ್ಯತೆ', ಮಯಮತ) ಕಂಬವನ್ನು ನೆಟ್ಟೋ, ಬೆಂಕಿಯನ್ನು ಹೊತ್ತಿಸಿಯೋ ಪೂಜೆಮಾಡುತ್ತಾರೆ (ಚಿತ್ರ 22).

ಒಂದೊಂದು ಚೌಕದಲ್ಲಿಯೂ ಒಬ್ಬೊಬ್ಬ ದೇವತೆಯನ್ನು ಆವಾಹನೆ ಮಾಡುವುದು ವಾಸ್ತುದೈತ್ಯ ಮೇಲೇಳದಿರದಂತೆ ಮಾಡಲು; ನಡುವಣ ಚೌಕವೇ ವಾಸ್ತುವಿನ ಕೇಂದ್ರಸ್ಥಾನ. ಇಲ್ಲಿಯೇ ವಾಸ್ತುಪುರುಷ ಅಥವಾ ವಾಸ್ತುನರ ಇರುವುದು. ವಾಸ್ತು ಎನ್ನುವುದು ಒಬ್ಬ ದೈತ್ಯನ ಹೆಸರೆಂದು ಕಥೆಯಿದೆ. ಶಿವನೊಂದಿಗೆ



ಚಿತ್ರ 22
ಶಿವಲಿಂಗಪ್ರತಿಷ್ಠಾವಿಧಿಯಲ್ಲಿ ಬರುವ ವಾಸ್ತುಲಿಂಗ ಮಂಡಲ

ಕಾದಾಡಿದ ಅಂಧಕಾಸುರನ ಬೆವರಿನಿಂದ ಹುಟ್ಟಿಕೊಂಡ ಈ ದೈತ್ಯನು ಅಂಧಕನ ರಕ್ತವನ್ನು ಕುಡಿದು ಇನ್ನೂ ಹಸಿವು ಇಂಗದಿರಲು ಶಿವನನ್ನು ಕುರಿತು ತಪಸ್ಸು ಮಾಡಿ, ವರವನ್ನು ಪಡೆದುಕೊಂಡು ಮೂರೂ ಲೋಕಗಳನ್ನು ತಿನ್ನತೊಡಗಿದ. ಮೂರು ಲೋಕಗಳು ಅವನ ಮೈಯಲ್ಲಿ ಅಡಗಿಕೊಂಡವು. ಇದನ್ನು ಕಂಡು ಬೆದರಿದ ದೇವತೆಗಳೂ,ದಾನವರೂ,ಅಸುರರೂ ರಾಕ್ಷಸರೂ ಇವನನ್ನು ಸುತ್ತುಗಟ್ಟಿ ಕೆಳಕ್ಕೆ ಬೀಳಿಸಿ ಅವನು ಮೇಲೇಳದಂತೆ, ಒಬ್ಬೊಬ್ಬ ದೇವತೆಯೂ ಅವನ ದೇಹದ ಒಂದೊಂದು ಭಾಗವನ್ನು ಅದುಮಿ ಹಿಡಿದರಂತೆ. ದೇವತೆಗಳೂ ಮನುಷ್ಯರೂ ಅವನ ಮೈಮೇಲೆ ವಾಸಮಾಡುವುದರಿಂದ ಅವನಿಗೆ 'ವಾಸ್ತು' ಎನ್ನುವ ಹೆಸರಾಯಿತು. ಬ್ರಹ್ಮನು ಅವನಿಗೆ ವರವೊಂದನ್ನು ಕೊಟ್ಟು ಯಾರಾಗಲೀ ಕಟ್ಟಡವನ್ನು ಕಟ್ಟುವ ಮೊದಲು ಯಜ್ಞ (ಹೋಮ) ಮಾಡಬೇಕೆಂದೂ ಈ ಯಜ್ಞವೇ ವಾಸ್ತುನರನ ಆಹಾರವೆಂದೂ ವಿಧಿಸಿದನು. ಇದು ಮತ್ಸ್ಯಪುರಾಣದಲ್ಲಿ ಬರುವ ಕಥೆ. ವಾಸ್ತು ಕರ್ಮ, ವಾಸ್ತು ಮಂಗಳ, ವಾಸ್ತು ಶಮನ, ವಾಸ್ತು ಯಾಗ, ವಾಸ್ತು ಹೋಮಗಳನ್ನು ಮಾಡುವುದು ಪುರಾಣಗಳಲ್ಲಿಯೂ ಗೃಹ್ಯಸೂತ್ರಗಳಲ್ಲಿಯೂ ಬರುತ್ತದೆ. ಪಾಳಿಜಾತಕಗಳಲ್ಲಿಯೂ ಪ್ರಾಸಾದಮಂಗಳ ಎನ್ನುವ ಹೆಸರಿನ ವಿಧಿಯಿದ್ದುದು ತಿಳಿದುಬರುತ್ತದೆ.

ವಾಸ್ತುವಿದ್ಯೆ ಯಾವಾಗ ಮೈದಳೆಯಿತೋ ಹೇಳುವುದು ಕಷ್ಟ. ಆದರೆ ತುಂಬ ಹಿಂದಿನಿಂದಲೂ ಇದು ಒಂದಲ್ಲ ಒಂದು ಬಗೆಯಾಗಿ ಇದ್ದಿರಬೇಕು. ಮೇಲೆ ಕಾಣಿಸಿದ ಕಥೆ ಜನರ ಪ್ರಾಚೀನ ಸುಪ್ತಚೇತನದ ಸ್ಮರಕ್ಕೆ ಸೇರಿದ್ದು ಎನ್ನುವುದು ಸ್ಪಷ್ಟವಾಗಿದೆ. ವೇದಯುಗದಲ್ಲಿಯೂ ವಾಸ್ತುಶಾಸ್ತ್ರವಿದ್ದಿತು; ಅದೇ ಕಾಲದಲ್ಲಿ 'ದಾಕ್ಷಿಣಾತ್ಯವಾಸ್ತುಶಾಸ್ತ್ರ' (ದ್ರಾವಿಡವಾಸ್ತುವಿದ್ಯೆ) ಎಂಬುದೂ ಇದ್ದಿತೆಂದು ಬ್ರಾಹ್ಮಣಗಳಿಂದ ತಿಳಿದು ಬರುತ್ತದೆ. ವಿಶ್ವಕರ್ಮ, ಮಯ, ನಗ್ನಜಿತ್, ನಾರದ, ಪುರಂದರ, ಗರ್ಗ, ಶುಕ್ರ, ಬೃಹಸ್ಪತಿ ಮೊದಲಾದ ಹದಿನೆಂಟು ಋಷಿಗಳು ವಾಸ್ತುವಿದ್ಯೆಯ ಪ್ರವರ್ತಕರೆಂದೂ ಇವರಲ್ಲಿ ಒಬ್ಬೊಬ್ಬರೂ ಒಂದೊಂದು ಶಾಸ್ತ್ರವನ್ನು ಸಿದ್ಧಪಡಿಸಿದರೆಂದೂ ಪ್ರತೀತಿಯಿದೆ. ವಿಶ್ವಕರ್ಮಪ್ರಕಾಶ', 'ಮಯಮತ' ಇವು ಇಂದಿಗೂ ಬಳಕೆಯಲ್ಲಿವೆ. ಮೊದಲನೆಯದು ಉತ್ತರಭಾರತದಲ್ಲಿ ಪ್ರಮಾಣಗ್ರಂಥ; ಎರಡನೆಯದು ದಕ್ಷಿಣದ್ದು. ಮಯನೆನ್ನುವವನು ದಾನವನೆಂದೂ, ಶುಕ್ರಾಚಾರ್ಯರ ಶಿಷ್ಯನೆಂದೂ, ವಿಂಧ್ಯೆಯ ದಕ್ಷಿಣದಲ್ಲಿ ವಾಸಮಾಡುತ್ತಾ ಹಲವಾರು ಲೋಕಪ್ರಸಿದ್ಧ ಕಟ್ಟಡಗಳನ್ನು ಕಟ್ಟಿದನೆಂದೂ ಹೇಳುತ್ತಾರೆ. ಇವನಲ್ಲದೆ ನಗ್ನಜಿತ್, ನಾರದ, ಭೃಗು ಇವರೂ ದಾಕ್ಷಿಣಾತ್ಯ ವಾಸ್ತುವಿದ್ಯೆಯನ್ನು ಖಚಿತಗೊಳಿಸಿದವರು. ಇವರೆಲ್ಲರೂ

ನಾಲ್ಕೈದನೆಯ ಶತಮಾನಗಳಿಗೆ ಮೊದಲೇ ಇದ್ದವರು, ವರಾಹಮಿಹಿರನ ಬೃಹತ್‌ಸಂಹಿತೆ, ಮತ್ಸ್ಯ ಪುರಾಣಗಳ ಕಾಲಕ್ಕೆ ವಾಸ್ತುವಿದ್ಯೆ ವಿಶಿಷ್ಟವಾಗಿ ಬೆಳೆದಿದ್ದಿತು.

ವಾಸ್ತುವಿದ್ಯೆಯಲ್ಲಿ ಮೂರು ವಿಭಾಗಗಳನ್ನು ಮಾಡುವ ವಾಡಿಕೆಯಿದೆ – ವಾಸ್ತುಶಾಸ್ತ್ರ, ಶಿಲ್ಪಶಾಸ್ತ್ರ ಮತ್ತು ಚಿತ್ರಸೂತ್ರ ಎಂದು. ಕಟ್ಟಡಗಳನ್ನು ಕಟ್ಟುವುದು (ಎಂದರೆ ಸ್ಥಾಪತ್ಯ) ಮೊದಲನೆಯ ವಿಭಾಗದಲ್ಲಿ ಪ್ರಮುಖವಾಗಿ ಬರುವ ವಿವರ. ಸರಿಯಾದ ಭೂಮಿಯನ್ನು ಹುಡುಕುವುದು, ನೆಲವನ್ನು ಶುದ್ಧಿಮಾಡುವುದು, ಕಟ್ಟಡಕ್ಕೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸುವುದು, ತಲವಿನ್ಯಾಸವನ್ನು ಸಿದ್ಧಪಡಿಸುವುದು, ಅಳತೆಗಳನ್ನು ಅಳವಡಿಸಿಕೊಳ್ಳುವುದು, ಬಾಗಿಲನ್ನು ಇಡುವುದು, ಮಂಡಪ–ಗೋಪುರಗಳನ್ನು ಕಟ್ಟುವುದು, ಇಟ್ಟಿಗೆಗಳನ್ನು ಪರೀಕ್ಷಿಸುವುದು, ಬಂಧೋದಕ (ವಜ್ರಲೇಪ, ಗಾರೆಗಚ್ಚು), ನಗರ ರಚನೆ ಮೊದಲಾದುವೆಲ್ಲ ಇಲ್ಲಿ ಬರುತ್ತವೆ. ವಾಸ್ತುವಿದ್ಯೆ, ಮನುಷ್ಯಾಲಯಚಂದ್ರಿಕೆ, ಮಯಮತ, ಶಿಲ್ಪರತ್ನ, ಬೃಹತ್‌ಸಂಹಿತೆ (ಪರಿಚ್ಛೇದ 53 ಮತ್ತು 54), ಸಮರಾಂಗಣಸೂತ್ರಧಾರ, ವಿಶ್ವಕರ್ಮಪ್ರಕಾಶ ಮೊದಲಾದುವು ಈ ವಿಭಾಗದಲ್ಲಿ ಸುಪ್ರಸಿದ್ಧವಾದ, ಪ್ರಭಾವವನ್ನು ಬೀರಿದ ಶಾಸ್ತ್ರಗ್ರಂಥಗಳು. ಎರಡನೆಯ ವಿಭಾಗ ಗುಡಿಗಳಲ್ಲಿರಿಸಬೇಕಾದ ಮೂರ್ತಿಗಳನ್ನೂ, ಗೋಡೆಗಳ ಮೇಲೂ ನವರಂಗದ ಮೇಲೂ ಮಂಟಪಗಳಲ್ಲಿಯೂ ಕಡೆದಿರಿಸಬೇಕಾದ ಪುತ್ಥಳಿಗಳನ್ನೂ ಇತರ ಶಿಲ್ಪಗಳನ್ನೂ ವಿವರಿಸುತ್ತದೆ. ಬೃಹತ್‌ಸಂಹಿತೆ (ಪ. 58 ಪ್ರತಿಮಾಲಕ್ಷಣ), ಶುಕ್ರನೀತಿ (ತಾಳಮಾನಗಳನ್ನು ಕುರಿತ ಗ್ರಂಥ), ವಿಷ್ಣುಧರ್ಮೋತ್ತರಪುರಾಣ (ಮೂರನೆಯ ಭಾಗ), ಮತ್ಸ್ಯ ಪುರಾಣ (ಪ. 259), ಅಗ್ನಿಪುರಾಣ (ಪ. 49), ಮಾರ್ಕಂಡೇಯಮತವಾಸ್ತುಶಾಸ್ತ್ರ (ದೇವಾಲಯವಿಧಿ, ಪ್ರತಿಮಾಲಕ್ಷಣ), ಮಯವಾಸ್ತು, ಪ್ರತಿಮಾಮಾನಲಕ್ಷಣ ಮೊದಲಾದುವು ಶಿಲ್ಪಶಾಸ್ತ್ರವನ್ನು ಕುರಿತವು. ಕಡೆಯ ವಿಭಾಗದಲ್ಲಿ ಹೆಚ್ಚು ಬರಹಗಳಿಲ್ಲ; ವಿಷ್ಣುಧರ್ಮೋತ್ತರ ಪುರಾಣದ ಚಿತ್ರಸೂತ್ರವೆಂಬ ಪರಿಚ್ಛೇದ, ಶಿಲ್ಪರತ್ನದ ಕಡೆಯ ಪರಿಚ್ಛೇದವಾದ ಚಿತ್ರಲಕ್ಷಣ ಇವೆರಡೂ ಮುಖ್ಯವಾದುವು. ದೇವಾಲಯದ ಗೋಡೆಗಳ ಮೇಲೆ ಬಣ್ಣಬಣ್ಣದ ಚಿತ್ರಗಳನ್ನು ಮೂಡಿಸುವ ಕಲೆ ಈ ವಿಭಾಗದ ವಸ್ತು.

ಎಂದರೆ ಗುಡಿಯನ್ನು ಹೇಗೆ ಕಟ್ಟಬೇಕು, ಗುಡಿಯಲ್ಲಿನ ಪ್ರತಿಮೆಗಳನ್ನು ಹೇಗೆ ಕಂಡರಿಸಬೇಕು, ಎಲ್ಲೆಲ್ಲಿ ಇರಿಸಬೇಕು ಎನ್ನುವ ವಿವರಗಳೆಲ್ಲವನ್ನೂ ಶಾಸ್ತ್ರಕಾರರು ಕರಾರುವಕ್ಕಾಗಿ ನಿರ್ಧರಿಸಿದರು; ಸ್ಥಪತಿಗಳು ಶಾಸ್ತ್ರವನ್ನು ತಿಳಿಬರಬೇಕೆಂಬ ನಿಯಮವೂ ಇದ್ದಿತು. ಆದರೆ ಮೂಡಿಬಂದ ಎಲ್ಲ ಗುಡಿಗಳೂ ಇದೇ ನಿಯಮವನ್ನು ಚು–ಚು ತಪ್ಪದೆ ಅನುಸರಿಸುತ್ತಿದ್ದುವು ಎಂದು ಹೇಳಲಾಗದು. ಶಿಲ್ಪಶಾಸ್ತ್ರಗಳಲ್ಲಿಯೇ 'ಯಥಾರುಚಿ', 'ಯಥಾ ಶೋಭಂ' ಎನ್ನುವ ಮಾತುಗಳಿವೆ; ಶಿಲ್ಪಿಯು ತನ್ನ ಅಭಿರುಚಿಗೆ ಅನುಗುಣವಾಗಿ, ಚೆನ್ನಾಗಿರುವುದೆಂದು ತಾನು ಭಾವಿಸಿದಂತೆ ಮಾಡುವ ಸ್ವಾಂತಂತ್ರ್ಯವಿದ್ದೇ ಇದ್ದಿತು. ಗುಡಿಗಳನ್ನು ಕಟ್ಟಿದ ಮೇಲೇ ವಾಸ್ತುವಿದ್ಯೆ ಮೈದಳೆಯಿತು ಎನ್ನುವುದನ್ನು ಮರೆಯಬಾರದು. ದೊಡ್ಡ ದೊಡ್ಡ ಗುಡಿಗಳನ್ನು ನೋಡಿಯೇ, ಅಲ್ಲಿನ ವಿವರಗಳನ್ನು ಪರಿಶೀಲಿಸಿಯೇ ಶಾಸ್ತ್ರಗಳನ್ನು ಸಿದ್ಧಮಾಡಿದರು. ಒಮ್ಮೆ ಶಾಸ್ತ್ರಗಳನ್ನು ರಚಿಸಿದ ನಂತರ ಅವು ಪ್ರಮಾಣಭೂತವಾದುವು; ಮುಂದಿನ ಶಿಲ್ಪಿಗಳು, ಸ್ಥಪತಿಗಳು ಶಾಸ್ತ್ರ ನಿಯಮವನ್ನು ಅನುಸರಿಸತೊಡಗಿದರು. ಶಾಸ್ತ್ರಮರ್ಯಾದೆಯನ್ನು ಆಗಮವೂ ಒಪ್ಪಿಕೊಂಡಿತು. ಹೀಗೆ ವಾಸ್ತುವಿದ್ಯೆಯು ಮೂರ್ತಿಪೂಜೆಗೆ ವೇದಿಕೆಯೊಂದನ್ನು ಸಿದ್ಧಪಡಿಸಿಕೊಟ್ಟಿತು.

ವಾಸ್ತುವಿದ್ಯೆಯ ನೆಲೆಯಲ್ಲಿ ಗುಡಿಗೇ ಒಂದು ವಿಶಿಷ್ಟವಾದ ವ್ಯಕ್ತಿತ್ವವಿರುತ್ತದೆ. ಗುಡಿಯೇ ಒಬ್ಬ ಮನುಷ್ಯನಂತೆ, ಗುಡಿಯ ರಚನೆಯೂ ಮನುಷ್ಯನ ದೇಹರಚನೆಯಂತೆಯೇ. 'ಪ್ರಾಸಾದ ಪುರುಷ' ಎನ್ನುವ

ಮಾತು ಈ ಸಂದರ್ಭದಲ್ಲಿ ಬಳಕೆಗೆ ಬಂದಿತು. ಆಧ್ಯಾತ್ಮಿಕ ನೆಲೆಯಲ್ಲಿಯೂ ಮೈಯೇ ಗುಡಿ, ಜೀವವೇ ಶಿವ—

ದೇಹೋ ದೇವಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ

ಎಂಬ ಕಲ್ಪನೆ ಕಾಣಿಸಿಕೊಂಡಿತು. ಗುಡಿಯ ವಿವಿಧ ಭಾಗಗಳನ್ನು ದೇಹದ ವಿವಿಧ ಅವಯವಗಳಿಗೆ ಹೊಂದಿಸತೊಡಗಿದರು. ಗುಡಿಯನ್ನು ಕಟ್ಟುವ ಮೊದಲು 'ಗರ್ಭವಿನ್ಯಾಸ' ಎಂಬ ವಿಧಿಯನ್ನೂ, ಮನುಷ್ಯರಲ್ಲಿ 'ಗರ್ಭಾಧಾನ'ಕ್ಕೆ ಸಮನಾಗಿ ವಿಧಿಸಿದರು. ಈಶಾನ ಶಿವಗುರುದೇವಪದ್ಧತಿ, ತಂತ್ರಸಮುಚ್ಚಯ, ಶಿಲ್ಪರತ್ನ ಮೊದಲಾದ ಶಾಸ್ತ್ರಗ್ರಂಥಗಳಲ್ಲಿ ಇದರ ವರ್ಣನೆಯಿದೆ. ದೇವಾಲಯವನ್ನು ಕಟ್ಟಲಿರುವ ಸ್ಥಳದಲ್ಲಿ ಗುಂಡಿಯನ್ನು ತೋಡಿ ಇಟ್ಟಿಗೆಗಳಿಂದ ಸುತ್ತಲೂ ಗೋಡೆ ಕಟ್ಟಿ ಗುಂಡಿಯೊಳಗೆ ಮಣ್ಣು, ಬೇರು-ನಾರು, ಬೀಜಗಳು, ಧಾನ್ಯ, ಮುತ್ತುರತ್ನಗಳು, ಲೋಹಧಾತುಗಳು ಇವುಗಳನ್ನಿರಿಸಿ, ಬಳಿಯಲ್ಲೇ ಯಾಗವಮಾಡಬೇಕು. ಅನಂತರ ಗುಡಿಯೊಳಗಿದ್ದ ಪದಾರ್ಥಗಳನ್ನೆಲ್ಲ ತೆಗೆದು ಶುದ್ಧಿಮಾಡಬೇಕು. ಗುಂಡಿಯೊಳಗೆ ವೇದಿಕೆಯೊಂದನ್ನು ನಿರ್ಮಿಸಿ, ಅದರಲ್ಲಿ ಶಕ್ತಿಯನ್ನು ಆವಾಹನೆಮಾಡಿ, ಪೂಜಿಸಬೇಕು. ಪೂರ್ವದಿಕ್ಕಿಗೆ ಮುಖಮಾಡಿ ನಿಂತ ಯಜಮಾನನು ಗರ್ಭಪಾತ್ರೆಯನ್ನು ಎರಡೂ ಕೈಗಳಲ್ಲಿ ಹಿಡಿದು ದೇವತೆಗೆ ಸಂಬಂಧಿಸಿದ ಬೀಜಾಕ್ಷರವನ್ನೋ ಮೂಲಮಂತ್ರವನ್ನೋ ನೂರು ಬಾರಿ ಜಪಿಸಬೇಕು. ಮೊದಲೇ ಗೊತ್ತುಮಾಡಿಕೊಂಡ ಶುಭ ಲಗ್ನದಲ್ಲಿ ವಾದ್ಯಗಳು ಮೊಳಗುತ್ತಿರಲು, ವೇದಘೋಷ ನಡೆಯುತ್ತಿರಲು ಯಜಮಾನನು ಗರ್ಭಪಾತ್ರೆಯನ್ನು ಧ್ಯಾನಿಸಿ, ಮೆಲ್ಲನೆ ಗುಂಡಿಯೊಳಗೆ ಇಳಿಸಬೇಕು. ಇದು ಗರ್ಭವಿನ್ಯಾಸದ ವಿಧಿ. ಇದಾದ ಬಳಿಕ ಪ್ರಾಸಾದವು ಪುರುಷಾಕಾರವನ್ನು ತಳೆದು ಮೇಲೇಳುವುದೆಂದು ಕಲ್ಪನೆ. ಗುಡಿಯ ಬೇರೆ ಬೇರೆ ಭಾಗಗಳಿಗಿರುವ ಹೆಸರುಗಳನ್ನು ನೋಡಿದರೆ ಮನುಷ್ಯ ಸಾದೃಶ್ಯವು ಹೊಳೆಯುತ್ತದೆ—ಪಾದುಕೆ, ಚರಣ, ಅಂಘ್ರಿ, ಜಂಘೆ, ಊರ್ಣ, ಕಟಿ, ಕುಕ್ಷಿ, ಪಾರ್ಶ್ವ, ಗಳ, ಗ್ರೀವ, ಕಂಧರ, ಕಂಠ, ಶಿಖರ, ಶೀರ್ಷ, ಮುಖ, ಕೂಟ, ಕರ್ಣ, ನಾಸಿಕಾ ಇತ್ಯಾದಿ.

ಗುಡಿಯು ಒಂದು ದೇವತೆಯ ಹೆಸರಿನಲ್ಲೇ ಇರುವುದು ವಾಡಿಕೆ. ಈ ದೇವತೆಯ ಮೂರ್ತಿಯನ್ನು (ಶಿವನಾದರೆ ಲಿಂಗವನ್ನು) ಇರಿಸುವ ಭಾಗಕ್ಕೆ 'ಗರ್ಭಗೃಹ' (ಅಥವಾ ಗರ್ಭಗುಡಿ, ಗುಡಿಯೊಳಗಿನ ಗುಡಿ) ಎಂದು ಹೆಸರು; ಇದೇ ಗುಡಿಯ ಮುಖ್ಯ ಭಾಗ, ತುಂಬ ಪವಿತ್ರವೆನಿಸುವ ಭಾಗ. ಅದರ ಒಳಗೋಡೆ ಸಾಮಾನ್ಯವಾಗಿ ಬರಿದಾಗಿರುತ್ತದೆ; ಕೆಲವು ಪಲ್ಲವ ದೇವಾಲಯಗಳಲ್ಲಿ ಮಾತ್ರ ಇಲ್ಲಿಯೂ ಶಿಲ್ಪವಿರುತ್ತದೆ. ಹೊರ ಗೋಡೆಯ ಮೇಲೆ ತೋರಣಗಳಿಂದ ಕೂಡಿದ ದೇವಕೋಷ್ಠಗಳಿರುವುದು ವಾಡಿಕೆ. ಶಿವದೇವಾಲಯವಾದರೆ ಪೂರ್ವದಿಕ್ಕಿನ ದೇವಕೋಷ್ಠದಲ್ಲಿ ನಂದೀಕೇಶ್ವರ, ಕಾಲ, ಪಶ್ಚಿಮದಲ್ಲಿ ಮಹಾವಿಷ್ಣು, ಲಿಂಗೋದ್ಭವಮೂರ್ತಿ, ಉತ್ತರದಲ್ಲಿ ಬ್ರಹ್ಮ, ದಕ್ಷಿಣದಲ್ಲಿ ದಕ್ಷಿಣಾಮೂರ್ತಿ ಹೀಗೆ ವಿವಿಧ ದೇವತಾಮೂರ್ತಿಗಳನ್ನು ಕಡೆದಿಡುತ್ತಾರೆ. ಗರ್ಭ ಗುಡಿಯ ಎದುರಿಗಿರುವ ಅರ್ಧಮಂಟಪದಲ್ಲಿ ವಿನಾಯಕನೂ ಈಶಾನ್ಯ ಮೂಲೆಯಲ್ಲಿ ಕ್ಷೇತ್ರಪಾಲನೂ ಇರಬೇಕೆಂದು ಈಶಾನ ಶಿವಗುರು ದೇವಪದ್ಧತಿ ವಿಧಿಸುತ್ತದೆ.

ಅರ್ಧಮಂಟಪವು ಗರ್ಭಗುಡಿಗೆ ಹೊಂದಿಕೊಂಡಂತೆಯೇ ಇರುವುದು ಈಗಿನ ಪದ್ಧತಿಯಾದರೂ ಮೊದಲಿಗೆ ಬೇರೆಯಾಗಿಯೇ ಇರುತ್ತಿದ್ದಿತು; ಎರಡೂ ಭಾಗಗಳನ್ನು ಸೇರಿಸುವ 'ಅಂತರಾಳ'ವೂ, ಗರ್ಭಗುಡಿಯ ಸುತ್ತ ಪ್ರದಕ್ಷಿಣೆ ಹೋಗಿ ಬರಲು ದಾರಿಯೂ ಇರುತ್ತಿದ್ದುವು. ಮಳೆಯಲ್ಲಿ, ಬಿಸಿಲಿನಲ್ಲಿ ಪ್ರದಕ್ಷಿಣೆ

ಮಾಡುವವರಿಗೆ ಅನುಕೂಲವಾಗುವಂತೆ ಸುತ್ತಲೂ ಮಾಳಿಗೆಯನ್ನು ಅಳವಡಿಸುತ್ತಿದ್ದರು; ತಮಿಳುನಾಡಿನಲ್ಲಿ ಇದಕ್ಕೆ ತಿರುನಡೈ ಮಾಳಿಗೆಯೆಂದು ಹೆಸರು. ಅಂತೂ ಇಲ್ಲಿ ನಡೆದಾಡುವ ಭಕ್ತರಿಗೆ ಕಾಣುವಂತೆ ದೇವ ಕೋಷ್ಠಗಳ ಮೂರ್ತಿಗಳೂ, ಇವಕ್ಕೆ ಅನುರೂಪವಾದ ತೋರಣಗಳೂ ಸೊಗಸಾಗಿರಬೇಕೆಂಬ ನಿಯಮವಿದೆ. ಮಾನಸಾರದಲ್ಲಿ ಪತ್ರತೋರಣ, ಪುಷ್ಪತೋರಣ, ರತ್ನ ತೋರಣ, ಚಿತ್ರ ತೋರಣಗಳ ವಿಭಾಗವೂ ವಿವರಣೆಯೂ ಇವೆ. ಈ ವಿಭಾಗಗಳಲ್ಲಿ ಮೊಸಳೆಗಳ ವಿನ್ಯಾಸವೂ ಸೇರಿಕೊಂಡಿರುವುದು ವಾಡಿಕೆ. ಹೀಗಿದ್ದಾಗ ಇದು ಮಕರ ತೋರಣವೆನಿಸಿಕೊಳ್ಳುತ್ತದೆ.

ಗರ್ಭಗುಡಿಯ ಮೇಲ್ಭಾಗದಲ್ಲಿ ಕಟ್ಟುವ ವಿಮಾನವು ಸುಂದರವಾಗಿರಬೇಕೆನ್ನುವ ಬಯಕೆ ಸ್ಥಪತಿಗಳಿಗಿದ್ದುದು ಸಹಜವೇ. ದೇವಾಲಯದ ವೈಭವಕ್ಕೆ ಇದೇ ನಿದರ್ಶನವಲ್ಲವೆ? ಮೊದಲಿಗೆ ಇಡೀ ದೇವಾಲಯವನ್ನೇ ವಿಮಾನವೆಂದು ವ್ಯವಹರಿಸುತ್ತಿದ್ದರು; ಅನಂತರ, ಅಧಿಷ್ಠಾನವೆಂಬ ಜಗುಲಿಯನ್ನು ಬಿಟ್ಟು ಉಪಾನದಿಂದ ಸ್ತೂಪಿ (ಮೇಲಿನ ತುದಿ)ಯವರೆಗೂ ಇರುವ ಇಡೀ ಗರ್ಭಗುಡಿಗೆ ವಿಮಾನವೆಂದು ಹೆಸರು ಬಂದಿತು(ಚಿತ್ರ 23). ಶ್ರೀನಿವಾಸನನ್ನು 'ಆನಂದನಿಲಯ ವಿಮಾನವಾಸಃ' ಎಂದು ಕರೆದಿರುವುದೂ, 'ಜಂಗಮ ಶ್ರೀ ವಿಮಾನಾನಿ ಹೃದಯಾನಿ ಮನೀಷಿಣಃ' ಎಂದು ವೈಖಾನಸಾಗಮ ಹೇಳಿರುವುದೂ ಇದೇ ಅರ್ಥದಲ್ಲಿ. ಕಾಲಕ್ರಮದಲ್ಲಿ ಗುಡಿಯ ಮೇಲ್ಭಾಗದ ಕಟ್ಟಡಕ್ಕೆ ಮಾತ್ರ ವಿಮಾನವೆನ್ನುವ ಹೆಸರು ನಿಂತಿತು. ಇಲ್ಲಿಯೂ ದೇವಕೋಷ್ಠಗಳ ಎಣಿಕೆ ಇದ್ದು ಅಲ್ಲಲ್ಲಿ ವಿಮಾನ ದೇವತೆಗಳನ್ನು ಮೂಡಿಸುವ ವಾಡಿಕೆಯಿದೆ. ಪಾಂಚರಾತ್ರಾಗಮದ ಪ್ರಕಾರ ಏಳು ತಳಗಳ ವಿಮಾನವಿರಬೇಕು; ಮೊದಲನೆಯದರಲ್ಲಿ ಕುಮುದ, ಉಪೇಂದ್ರ ಮೊದಲಾದ ಗಣ ದೇವತೆಗಳೂ, ಎರಡನೆಯದರಲ್ಲಿ ನರ, ನಾರಾಯಣ, ಹರಿ, ಕೃಷ್ಣ, ಕೇಶವಾದಿ ದ್ವಾದಶರೂಪಗಳೂ, ಮೂರನೆಯದರಲ್ಲಿ ಪುರುಷ, ಸತ್ಯ, ಅಚ್ಯುತ, ಅನಂತ, ಅಷ್ಟದಿಕ್ಪಾಲಕರು, ದ್ವಾದಶಾದಿತ್ಯರು, ಗಂಧರ್ವರು, ಅಪ್ಸರೆಯರು, ಕಿನ್ನರರೂ; ಹೀಗೆಯೇ ಇತರ ತಳಗಳಲ್ಲಿ ಇರಬೇಕು. ಶಾಸ್ತ್ರ ಏನೇ ಹೇಳಿದರೂ, ಈ ವಿಮಾನ ದೇವತೆಗಳನ್ನೆಲ್ಲ ಮೂಡಿಸಿಕೊಂಡಿರುವ ವಿಮಾನಗಳು ತೀರ ಅಪುರೂಪವೇ.



ಚಿತ್ರ 23
ವಿಮಾನದ ಭಾಗಗಳು

ಗರ್ಭಗುಡಿಯನ್ನೂ ಅರ್ಧಮಂಟಪ ಮುಖಮಂಟಪಗಳನ್ನೂ ಸುತ್ತುವರಿದ ಪ್ರಾಕಾರದಲ್ಲಿ ಅಷ್ಟ ಪರಿವಾರ ದೇವತೆಗಳ ಸಣ್ಣ ಸಣ್ಣ ಗೂಡುಗಳೋ ಗುಡಿಗಳೋ ಇರುತ್ತವೆ, ಇರಬೇಕು. ಶಿವ ದೇವಾಲಯವಾದರೆ ಮಯಮತದ ಪ್ರಕಾರ ವೃಷಭ (ನಂದಿ), ಗಣಪತಿ, ಬ್ರಹ್ಮ, ಸಪ್ತಮಾತೃಕೆಯರು, ಸುಬ್ರಹ್ಮಣ್ಯ, ವಿಷ್ಣು, ಆರ್ಯ ಮತ್ತು ಚಂಡೇಶ (ಚಂಡಿಕೇಶ್ವರ). ಹಳೆಯ ಚೋಳ ಶಿವಾಲಯಗಳಲ್ಲಿ ಬ್ರಹ್ಮನಾಗಲೀ ವಿಷ್ಣುವಾಗಲೀ ಪರಿವಾರದೇವತೆಗಳಲ್ಲಿ ಕಾಣಸಿಗುವುದಿಲ್ಲ. ಕೆಲವೊಮ್ಮೆ ಜ್ಯೇಷ್ಠಾ ಲಕ್ಷ್ಮಿ, ಸೂರ್ಯ, ಚಂದ್ರ, ಭೈರವ ಇವರೂ ಪರಿವಾರದಲ್ಲಿ ಸೇರುವುದುಂಟು.

ದಕ್ಷಿಣದ ದೇವಾಲಯಗಳಲ್ಲಿ ಗೋಪುರವೇ ಎದ್ದುಕಾಣುವ ವಿವರ; ಪ್ರಾಕಾರದ ಮಹಾದ್ವಾರದ ಮೇಲ್ಭಾಗದಲ್ಲಿ ಹಲವಾರು ಮಾಳಿಗೆಗಳ ಗೋಪುರ ತುಂಬ ಕಲಾಪೂರ್ಣವಾಗಿ, ಆಕಾಶದುದ್ದಕ್ಕೂ ಎದ್ದು ನಿಂತಿರುವುದೇ ವೈಶಿಷ್ಟ್ಯ. ಬಾಗಿಲಿನ ಮೇಲ್ಭಾಗದಲ್ಲಿ ದ್ವಾರಶಾಲೆಯಿದ್ದುದೂ ಅದಕ್ಕೊಂದು ಶಿಖರವಿರುತ್ತಿದ್ದುದೂ ಕಾಂಚೀಪುರದ ಕೈಲಾಸನಾಥಾಲಯ, ಮಹಾಬಲಿಪುರದ ಕಡಲತೀರದ ಗುಡಿ ಮೊದಲಾದ ಹಳೆಯ ದೇವಾಲಯಗಳಲ್ಲಿ ಕಾಣಸಿಗುತ್ತದೆ. ವೈಖಾನಸಾಗಮ, ಮಯಮತ, ಈಶಾನಶಿವ ಗುರುದೇವ ಪದ್ಧತಿ ಮೊದಲಾದ ಪ್ರಾಚೀನ ವಾಸ್ತುಶಾಸ್ತ್ರಗ್ರಂಥಗಳಲ್ಲಿ ಗೋಪುರದ ಹೆಸರಿದ್ದರೂ ಅದಕ್ಕೆ ಅಷ್ಟಾಗಿ ಪ್ರಾಶಸ್ತ್ಯವನ್ನು ಕೊಟ್ಟಿಲ್ಲ. ಪುರಾತನ ದೇವಾಲಯಗಳಲ್ಲಿ ಗೋಪುರವೇನೂ ಎದ್ದು ಕಾಣುವ ಭಾಗವಲ್ಲ. ಚೋಳರಾಜರಿಗೆ ಗೋಪುರದ ಮೇಲಿನ ಒಲುವು ಹೆಚ್ಚಾಗಿದ್ದಿತು. ತಿರುಚಿ ಜಿಲ್ಲೆಯ ಕಿಳೈಯೂರಿನ ಅವನಿಕಂದರ್ಪೇಶ್ವರ ಗೃಹದ ಗೋಪುರ ಈ ಹೊಸ ಒಲುವಿನ ಹೊಸ್ತಿಲಲ್ಲಿಯೇ ಮೂಡಿಬಂದುದು. ಗೋಪುರದಲ್ಲಿಯೇ ಬಾಗಿಲನ್ನು ಅಳವಡಿಸಿ ಅದನ್ನು ಗೋಪುರದ್ವಾರ (ತಿರುವಾಶಲ್) ಎನ್ನುತ್ತಿದ್ದರು. ಬಾಗಿಲಿನ ಎರಡೂ ಕಡೆ ದ್ವಾರಪಾಲಕರ ಮೂರ್ತಿಗಳಿರುವುದು ಸ್ವಾರಸ್ಯ. ಗುಡಿಗೊಂದು ಗೋಪುರವಾಗಿ ಆರಂಭವಾದುದು ಒಂದೇ ಗುಡಿಯಲ್ಲಿ ಹಲವಾರು ಗೋಪುರಗಳಾಗಿ ಪರಿಣಮಿಸಿತು. ತಿರುವಣ್ಣಾಮಲೆಯ ಗುಡಿಗೆ ನಾಲ್ಕು ಪ್ರಾಕಾರಗಳಿದ್ದು ಎತ್ತರವಾದ ನಾಲ್ಕು ಗೋಪುರಗಳಿವೆ.

ಗೋಪುರಗಳಲ್ಲಿ ದ್ವಾರಪಾಲಕರಲ್ಲದೆ ಇತರ ವಿಗ್ರಹಗಳೂ ಇರುತ್ತವೆ. ಇಲ್ಲಿಯೂ ದೇವಕೋಷ್ಠಗಳ ಗಣನೆಯಿದ್ದು ದೇವತಾ ಪ್ರಪಂಚದ ಬೇರೆ ಬೇರೆ ದೇವತೆಗಳಿಗೆ ಅವರವರ ತಾರತಮ್ಯಕ್ರಮದಿಂದ ಇಲ್ಲಿ ಸ್ಥಾನ ಒದಗಿಸಿದ್ದಾರೆ. ದಾರಾಶುರಂ ಮತ್ತು ಚಿದಂಬರಂ ಗೋಪುರ ದೇವತೆಗಳಿಗೆ ಹೆಸರುಗಳನ್ನೂ ಅಲ್ಲಲ್ಲಿಯೇ ನಿರ್ದೇಶಿಸಿದ್ದಾರೆ. ಅಗ್ನಿ, ಅಗಸ್ತ್ಯ, ಶ್ರೀದೇವಿ, ದುರ್ಗೆ, ದೇವೇಂದ್ರ, ಪದ್ಮನಿಧಿ, ಸೂರ್ಯ, ಸುಬ್ರಹ್ಮಣ್ಯ, ಕ್ಷೇತ್ರಪಾಲ, ಸರಸ್ವತಿ, ವಿಶ್ವಕರ್ಮ, ಈಶಾನ, ಆದಿಚಂಡೇಶ, ಗಂಗೆ, ವೈಶ್ರವಣ, ದಕ್ಷಪ್ರಜಾಪತಿ, ಯಮುನೆ, ಕಾಮದೇವ–ರತಿ, ರುದ್ರಾಣಿ, ವೈಷ್ಣವಿ, ಬ್ರಹ್ಮಾಣಿ, ವರುಣ, ನಂದಿಕೇಶ್ವರ, ಶಾಂತ್ಯಾತೀತಶಕ್ತಿ, ಶಾಂತಿಶಕ್ತಿ, ವಿದ್ಯಾಶಕ್ತಿ, ಪ್ರತಿಷ್ಠಾಶಕ್ತಿ, ನಿವೃತ್ತಿಶಕ್ತಿ, ಮಹಾಶಕ್ತಿ, ನಾಗರಾಜ...... ಈ ಹೆಸರುಗಳನ್ನು ದಾರಾಶುರಂ ಗೋಪುರದಲ್ಲಿ ಕಾಣಬಹುದು (ಟಿ.ವಿ. ಮಹಾಲಿಂಗಂ ಅವರ Studies in South Indian Temple Complex, 1970. ಪು. 54). ವಿಷ್ಣುದೇವಾಲಯಗಳಲ್ಲಿಯೂ ಹಲವಾರು ವೈಷ್ಣವ ದೇವತೆಗಳನ್ನೂ ಪಂಚವೀರರನ್ನೂ ವ್ಯೂಹ ಮೂರ್ತಿಗಳನ್ನೂ ದಶಾವತಾರಮೂರ್ತಿಗಳನ್ನೂ ಗೋಪುರದಲ್ಲಿ ಕಾಣಬಹುದು.

ಒಂದು ದೇವತೆಗೇ ಮೀಸಲಾದ ಗುಡಿಯಲ್ಲಿಯೂ ಇತರ ಗುಡಿಗಳಿರುವ ವಾಡಿಕೆಯಿದೆ. ಶಿವದೇವಾಲಯಗಳಲ್ಲಿ ವಿಷ್ಣುವಿನ ಸನ್ನಿಧಿಯೂ ಇರುತ್ತದೆ. ಹೀಗಿದ್ದಾಗ ಶಿವನ ಗುಡಿ ಊರ ಹೊರಗೆ ಮುಖಮಾಡಿಕೊಂಡಂತೆಯೂ ವಿಷ್ಣುವಿನ ಗುಡಿ ಊರೊಳಗೆ ಮುಖಮಾಡಿಕೊಂಡಂತೆಯೂ ಇರಬೇಕೆಂದು ಶಾಸ್ತ್ರ ಹೇಳುತ್ತದೆ. ಕೆಲವು ಕಡೆ ಈ ನಿಯಮವನ್ನು ಅನುಸರಿಸಿದ್ದಾರೆ, ಹಲವೆಡೆ ಇಲ್ಲ. ಶಿವನ ದೇವಾಲಯ ದಲ್ಲಿ ದೇವಿಗೆ ಬೇರೆ ಒಂದು ಗುಡಿಯನ್ನು ಕಟ್ಟುವುದು ಪಲ್ಲವರ ಕಾಲದಿಂದಲೂ ಬಂದಿದೆ. ದೇವೀಗುಡಿಯು ತಮಿಳು ದೇಶದಲ್ಲಿ 'ತಿರುಕ್ಕಾಮಕೋಟ್ಟಂ' ಎನಿಸಿಕೊಳ್ಳುತ್ತದೆ; ಸಾಮಾನ್ಯವಾಗಿ 'ಅಮ್ಮನ್ ಸನ್ನಿಧಿ' (ಅಮ್ಮನವರ ಸನ್ನಿಧಿ) ಎನ್ನುತ್ತಾರೆ. ವಿಷ್ಣುವಿನ ದೇವಾಲಯವಾದರೆ 'ತಾಯಾರ್ ಸನ್ನಿಧಿ' ಎನ್ನುವುದು ಹೆಚ್ಚು ಬಳಕೆಯಲ್ಲಿದೆ. ಇದಕ್ಕೂ ಬೇರೆ ವಿಮಾನವಿರುವುದು ವಾಡಿಕೆ; ಇಲ್ಲಿಯೂ ಗರ್ಭಗುಡಿಯಲ್ಲಿಯೂ ವಿಮಾನದಲ್ಲಿಯೂ ದೇವಕೋಷ್ಠಗಳಿದ್ದು ಕೋಷ್ಠಪಂಜರಗಳಲ್ಲಿ ಹಲವಾರು ಮೂರ್ತಿಗಳನ್ನು ಇರಿಸುವುದುಂಟು.

ಅಂತೂ ವಾಸ್ತುವಿದ್ಯೆಯು ಗುಡಿಯಲ್ಲಿ ಹಲವಾರು ಬಗೆಯ ಮೂರ್ತಿಗಳನ್ನೂ ಶಿಲ್ಪಗಳನ್ನೂ ಅಳವಡಿಸುವ ಪದ್ಧತಿಯನ್ನು ಬೆಳೆಸಿತು.

ಉಪಾಸನೆಯ ಆಲಂಬನೆ

ಮನುಷ್ಯನ ನೂರಾರು ಬಯಕೆಗಳನ್ನು ನಮ್ಮ ಹಿಂದಿನವರು ನಾಲ್ಕು ನೆಲೆಗಳಲ್ಲಿ ಅಳವಡಿಸಿ, ಅವಕ್ಕೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು ಹೆಸರಿಟ್ಟರು; ಇವು ಪುರುಷಾರ್ಥಗಳೆಂದು ಪ್ರಸಿದ್ಧವಾಗಿವೆ. ಮೋಕ್ಷವೆಂಬುದು ತಾತ್ತ್ವಿಕವಾಗಿ ಪರಮಪುರುಷಾರ್ಥವಾದರೂ ಜನಗಳಿಗೆ ಅರ್ಥ-ಕಾಮಗಳ ತೃಪ್ತಿಯೇ ಅಗತ್ಯವಾದುದಲ್ಲವೆ? ಇವುಗಳನ್ನು ಒದಗಿಸತಕ್ಕವರು ದೇವತೆಗಳು ಎನ್ನುವ ಕಾರಣದಿಂದ "ತಸ್ಮಾತ್ ಸರ್ವಪ್ರಯತ್ನೇನ ನೃಣಾಂ ಪೂಜ್ಯಾ ದಿವೌಕಸಃ" (ವಿಷ್ಣುಧರ್ಮೋತ್ತರ) ಎನ್ನುವ ವಿಧಿ ಮೈದಳೆಯಿತು. ದೇವಪೂಜೆಯನ್ನು ದುರಿತಕ್ಷಯಕ್ಕಾಗಿಯೂ ಪುಣ್ಯಸಂಚಯನಕ್ಕಾಗಿಯೂ ಜನ ಕೈಗೊಂಡುದು ಸಹಜವೇ. ನಾಗಪೂಜೆ, ಯಕ್ಷಪೂಜೆ, ವೃಕ್ಷಪೂಜೆ, ಪಿತೃಪೂಜೆ ಎಲ್ಲವೂ ಬಯಕೆಗಳನ್ನು ತೀರಿಸಿಕೊಳ್ಳಲೆಂದೇ ಅಲ್ಲವೆ? ಸಂಸ್ಕೃತಿ ಮುಂವರಿದಂತೆ, ಆಧ್ಯಾತ್ಮಿಕ ಪ್ರಸಕ್ತಿ ಒದಗಿದಂತೆ, ಮುಕ್ತಿಯ ಕಲ್ಪನೆಯೂ ಸೇರಿಕೊಂಡಿತು. ಆದರೆ ಇದರ ಆಕರ್ಷಣೆ ಕೆಲವರಿಗೆ ಮಾತ್ರ ಇದ್ದಿತು, ಇದೆ ಎಂದರೆ ಉತ್ಪ್ರೇಕ್ಷೆಯೆ? ಮುಕ್ತಿ ದೊರೆತರೆ ಬೇಡವೆನ್ನುವರಾರು? ಆದರೆ ಸದ್ಯಕ್ಕೆ ಬೇಕಾದುದು ಭುಕ್ತಿ. ದೇವರನ್ನು ಪ್ರಾರ್ಥಿಸುವಾಗ 'ಸರ್ವಾಭೀಷ್ಟಪ್ರದೋ ಭವ' ಎಂದೇ ಎಲ್ಲರೂ ಹೇಳುವುದು. ಇದನ್ನೇ ಕ್ರಿಯಾಯೋಗದ ನೆಲೆಯಲ್ಲಿಯೂ ನಿಲ್ಲಿಸಿದರು. ಮತ್ಸ್ಯ ಪುರಾಣದಲ್ಲಿ ಬರುವ ಈ ಮಾತು ದೇವತಾರ್ಚನೆಯ ಹಿಂದಿರುವ ಮನೋಧರ್ಮವನ್ನು ಸ್ಪಷ್ಟಪಡಿಸುತ್ತದೆ:

ಕ್ರಿಯಾಯೋಗಂ ಪ್ರವಕ್ಷ್ಯಾಮಿ ದೇವತಾರ್ಚಾನುಕೀರ್ತನಂ ।
ಭುಕ್ತಿಮುಕ್ತಿಪ್ರದಂ ಯಸ್ಮಾತ್ ನಾನ್ಯಲ್ಲೋಕೇಷು ವಿದ್ಯತೇ ॥

ಕೊಡುವವರು ದೇವತೆಗಳು, ಬೇಡುವವರು ನಾವು, ಬೇಡುವುದಕ್ಕೂ ಒಂದು ಬಗೆಯುಂಟು, ಬಿನ್ನಾಣವುಂಟು. ಇದನ್ನು ಉಪಾಸನೆಯೆಂದು ಕರೆದು ಹಿರಿಯರು ಅದರ ಗೊತ್ತುಗುರಿಗಳನ್ನು ನಿಶ್ಚಯಿಸಿದರು; ವೈದಿಕ ಸಾಹಿತ್ಯದಲ್ಲಿಯೂ ಇತರ ಸಾಹಿತ್ಯಗಳಲ್ಲಿಯೂ ಇದು ಬೆಳೆದು ಬಂದಿತು.

ಯಾವುದಾದರೂ ವಸ್ತುವನ್ನು ಕುರಿತು ಆಳವಾಗಿ ಚಿಂತಿಸಿ, ಅದರಲ್ಲಿಯೇ ಏಕಾಗ್ರ ಚಿತ್ತವನ್ನು ನಿಲ್ಲಿಸುವುದು ಉಪಾಸನೆ. ಬ್ರಹ್ಮಸೂತ್ರಗಳಲ್ಲಿಯೂ "ಯತ್ರ ಏಕಾಗ್ರತಾ ತತ್ರ ಅವಿಶೇಷಾತ್" ಎನ್ನುವ ಮಾತಿದೆ (4,1,11). ಮನಸ್ಸು ಒಂದೆಡೆ ನಿಲ್ಲಬೇಕೆಂದರೆ, ಹರಿದಾಡುವ ಅದರ ಪ್ರವೃತ್ತಿ ಮುಗಿಯಬೇಕೆಂದರೆ ಧ್ಯಾನವೊಂದು ಉಪಾಯ; ತೈಲಧಾರೆಯಂತೆ ಮನಸ್ಸು ವಿಕಾರವಿಲ್ಲದೆ ಹರಿಯುವುದು ಧ್ಯಾನ. ಯಾವ ಆಸರೆಯನ್ನು ಹಿಡಿದರೆ ಮನಸ್ಸು ನಿಲ್ಲಬಲ್ಲದು ಎನ್ನುವುದನ್ನು ಶಾಸ್ತ್ರಕಾರರು ನಿರ್ಧರಿಸಿ ದೇವತಾಮೂರ್ತಿಗಳನ್ನು ನಿರ್ಮಿಸಿದರು. ಶಂಕರಾಚಾರ್ಯರು ನಿರ್ಗುಣ ಬ್ರಹ್ಮವೇ ನಮ್ಮೆಲ್ಲರ ಗಮ್ಯ ಸ್ಥಾನವೆಂದು ಪ್ರತಿಪಾದಿಸಿದರೂ "ಯಥಾಶಾಸ್ತ್ರಸಮರ್ಥಿತಂ ಕಿಂಚಿದಾಲಂಬನಂ ಉಪಾದಾಯ" ಆಗುವ ಉಪಾಸನೆಯ ಪ್ರಯೋಜನವನ್ನು ವಿವರಿಸಿದರು (ಛಾಂದೋಗ್ಯೋಪನಿಷದ್ಭಾಷ್ಯಭೂಮಿಕಾ). ದೇವತಾ ಮೂರ್ತಿಯನ್ನು ಅನನ್ಯ ಚಿಂತನೆಯಿಂದ ಭಜಿಸುವುದು, ಸೇವಿಸುವುದು, ಪೂಜಿಸುವುದು ಭಕ್ತಿಮಾರ್ಗದ ಪ್ರಕಾರಗಳು. ಪೂಜೆ ಮೊದಲಾದುವುಗಳಲ್ಲಿ ಆಶೆಯಿರುವುದೇ ಭಕ್ತಿಯೆನ್ನುವ ವಿವರಣೆಯೂ ಇದೆ (ಪೂಜಾದಿಷ್ವನುರಾಗೋ ಭಕ್ತಿಃ). ಉತ್ತರೋತ್ತರ ಇದು ಮೋಕ್ಷಕ್ಕೆ ದಾರಿಮಾಡಿಕೊಡುವುದಲ್ಲದೆ, ಸದ್ಯದ ಬಯಕೆಗಳನ್ನು ತೀರಿಸಿಕೊಳ್ಳಲೂ ನೆರವಾಗುತ್ತದೆ ಎನ್ನುವ ಕಾರಣದಿಂದ ಜನಪ್ರಿಯವಾಯಿತು.

ಪೂಜೆ, ಅರ್ಚನೆ, ಉಪಾಸನೆ, ಸೇವೆ, ಶುಶ್ರೂಷೆ, ಸಪರ್ಯೆ, ಆರಾಧನೆ, ಪರಿಚರ್ಯೆ, ವರಿವಸ್ಯಾ ಇವೆಲ್ಲ ಸಮಾನಾರ್ಥದ ಪದಗಳೇ. ಇದರಲ್ಲಿ ಪೂಜೆ ಮಾಡುವವನು (ಪೂಜಕ, ಉಪಾಸಕ), ಪೂಜೆ ಮಾಡಿಸಿಕೊಳ್ಳುವ ದೇವತೆ (ಪೂಜ್ಯ, ಉಪಾಸ್ಯ), ಮತ್ತು ಪೂಜೆ ಮಾಡುವ ಬಗೆ (ಪೂಜನ, ಉಪಾಸನೆ) ಎನ್ನುವ ಭೇದವಿದೆ. ತಾನು ಆಶ್ರಯಿಸಿದ ದೇವತೆಯೇ ಉಪಾಸ್ಯ; ಅದೇ ಆಲಂಬನೆ. ಅದು ಫಲಕಾರಿಯಾಗುವಂತೆ ಮಾಡಲು ಉಪಾಸಕನಿಗೆ ಉಪಾಸನೆಯ ಮರ್ಮ ತಿಳಿಯಬೇಕು. ತಿಳಿದವರಿಂದ ಇದನ್ನು ತಿಳಿಯುವುದು ದೀಕ್ಷೆ; ಉಪಾಸನೆಗೆ ಅಧಿಕಾರವನ್ನು ಪಡೆಯುವುದು ಎಂದರ್ಥ. ಹೀಗೆ ದೀಕ್ಷೆಯನ್ನು ಪಡೆಯದವನು ಮಾಡುವ ಪೂಜೆ, ಜಪ ಎಲ್ಲವೂ ಕಲ್ಲಿನಲ್ಲಿ ಬಿತ್ತಿದ ಬೀಜದಂತೆ ವ್ಯರ್ಥವಾಗುವುದೆನ್ನುವ ಮಾತು ಆಗಮದಲ್ಲಿದೆ. ಉಪಾಸನೆಯಲ್ಲಿ ದೀಕ್ಷೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ.

ಉಪಾಸನೆಯಲ್ಲಿ ಪ್ರತೀಕೋಪಾಸನೆ, ಪ್ರತಿರೂಪ ಪ್ರತಿಮೋಪಾಸನೆ, ಭಾವ ಪ್ರತಿಮೋಪಾಸನೆ, ನಿದಾನೋಪಾಸನೆ ಎಂದು ನಾಲ್ಕು ಬಗೆಗಳುಂಟು. ವೇದಾಂತ ಗ್ರಂಥಗಳಲ್ಲಿ ಅಹಂಗ್ರಹೋಪಾಸನೆ ಮತ್ತು ಪ್ರತೀಕೋಪಾಸನೆ ಎಂದು ಎರಡು ಬಗೆಗಳನ್ನು ಹೇಳಿದ್ದಾರೆ. ಇಲ್ಲಿ ನಮಗೆ ಪ್ರತೀಕೋಪಾಸನೆ ಪ್ರಸಕ್ತವಾದುದು. ಇಲ್ಲಿ ಆಲಂಬನೆಯ ಹಿರಿಮೆಯಿಂದ ಧ್ಯಾನಕ್ಕೆ ಅನುಕೂಲವಾಗುವುದು ಮುಖ್ಯ. ಆಲಂಬನೆಯನ್ನೇ ಪಾತಂಜಲಯೋಗಸೂತ್ರ "ಈಶ್ವರ ಪ್ರಣಿಧಾನ" ವೆಂದು ಹೇಳಿದೆ. ಕಣ್ಣಿಗೆ ಕಾಣುವ, ಕೈಯಿಂದ ಮುಟ್ಟಬಹುದಾದ ಯಾವುದಾದರೊಂದು ಪದಾರ್ಥದಲ್ಲಿ ದೇವತೆಯ ಕಲ್ಪನೆಯನ್ನು ಆರೋಪಮಾಡಿ, ಅದರಲ್ಲಿಯೇ ಸತತವಾದ ಮನೋವ್ಯಾಪಾರವನ್ನು ನಿಲ್ಲಿಸಿದರೆ ಅದು ಆಲಂಬನೆಯಾಗುತ್ತದೆ. ಶಾಲಗ್ರಾಮಶಿಲೆ, ಬಾಣಲಿಂಗ ಮೊದಲಾದುವನ್ನು ನಾವು ಪೂಜಿಸುತ್ತೇವಲ್ಲವೆ? ಇದರಲ್ಲಿ ಸ್ಪಷ್ಟವಾದ, ಮನಸ್ಸು ಹಿಡಿಯಬಹುದಾದ ಯಾವ ರೂಪವೂ ಇರದು; ಆದುದರಿಂದ ಇದು ಅವ್ಯಕ್ತಾಲಂಬನೆ. ದೇವರ ಪ್ರತಿಮೆಗಳನ್ನು ಮನಸ್ಸಾಕಾರದಲ್ಲಿಯೇ ಮಾಡಿ, ಸಂಕೇತಗಳಿಂದ ನಿರ್ದಿಷ್ಟವಾದ ಆಭರಣ, ಆಯುಧಗಳನ್ನು ಅಳವಡಿಸುವುದು ವ್ಯಕ್ತಾಲಂಬನೆ; ಮನಸ್ಸು ತಟ್ಟನೆ ಹಿಡಿಯಬಹುದಾದ ರೂಪ ಅಲ್ಲಿದೆ. ಇನ್ನು ಶಿವಲಿಂಗದಂಥ ಪ್ರತೀಕಗಳು ವ್ಯಕ್ತಾವ್ಯಕ್ತವೆನಿಸಿಕೊಳ್ಳುತ್ತವೆ; ಅದರಲ್ಲಿ ಎರಡೂ ಗುಣಗಳುಂಟು, ಯಾವುದೂ ಪೂರ್ಣವಾಗಿರುವುದಿಲ್ಲ. ಮೂರೂ ಬಗೆಯ ಪ್ರತೀಕಗಳು ಪ್ರತಿಕೃತಿಪ್ರತಿಮೆಗಳು ಎನಿಸಿಕೊಳ್ಳುತ್ತವೆ. ಒಂದೊಂದು ಪ್ರತಿಕೃತಿಪ್ರತಿಮೆಗೂ ನಿರ್ದಿಷ್ಟವಾದ ಧ್ಯಾನಶ್ಲೋಕವಿದ್ದು, ಆ ಧ್ಯಾನಶ್ಲೋಕದಿಂದಲೇ ದೇವತೆಯ ಆಕಾರವನ್ನು ಚಿತ್ರಿಸಿಕೊಳ್ಳುವುದು ಭಾವಪ್ರತಿಮೋಪಾಸನೆ.

ಅಂತೂ ಪೂಜೆಗೆ ಪ್ರತಿಮೆಗಳನ್ನು ಮಾಡಿಟ್ಟುಕೊಂಡು ಮನಸ್ಸನ್ನು ಅದರಲ್ಲಿ ನಿಲ್ಲಿಸುವುದು ಎಲ್ಲ ಸಂಪ್ರದಾಯಗಳಲ್ಲಿಯೂ ಸಗುಣೋಪಾಸನೆಯೆನ್ನುವ ಹೆಸರಿನಿಂದ ಸಮ್ಮಾನ್ಯವಾಗಿದೆ. ನಮ್ಮ ದೇಶದ ಎಲ್ಲ ಧರ್ಮಗಳಲ್ಲಿಯೂ ಈ ರೀತಿಯ ಮೂರ್ತಿಪೂಜೆ ಬಳಕೆಯಲ್ಲಿದ್ದೇ ಇದೆ. ದೇವರಿಗೆ ಪ್ರತಿಮೆಯಿಲ್ಲವೆಂದು ಭಾವಿಸುವ ನಿರ್ಗುಣೋಪಾಸಕರೂ, ಅನಿರ್ವಾಚ್ಯ–ಅನಿರ್ದೇಶ್ಯ ಪರಬ್ರಹ್ಮವನ್ನು ಅನುಸಂಧಾನಮಾಡಬೇಕಾದ ಅದ್ವೈತಿಗಳೂ ವ್ಯವಹಾರದಲ್ಲಿ ಮೂರ್ತಿಪೂಜಕರೇ; ಮೂರ್ತಿಪೂಜೆಯನ್ನು ವಿರೋಧಿಸಿ ಹೊರಟ ಆರ್ಯಸಮಾಜ, ಕೆಲವು ಜೈನ ಸಂಪ್ರದಾಯಗಳು, ಸ್ಥವಿರವಾದೀ ಬೌದ್ಧರು ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಮೂರ್ತಿಪೂಜೆಯ ಸುಳಿಗೆ ಸಿಕ್ಕಿಕೊಂಡರು. ಮೊಹೆನ್‌ಜೊದಾರೋ–ಹರಪ್ಪಾ ಅವಶೇಷಗಳಲ್ಲಿ ಕಾಣಸಿಗುವ ಪ್ರತಿಮೆಗಳ ಹಿನ್ನೆಲೆಯಲ್ಲಿದ್ದ ಮನೋಧರ್ಮ ನಮ್ಮ ಕಾಲದವರೆಗೂ ಅಚ್ಚಳಿಯದೆ ಉಳಿದುಬಂದಿದೆ; ಅಷ್ಟುಮಾತ್ರವಲ್ಲ, ಹಿರಿದಾಗಿ ಹಬ್ಬಿ ಬೆಳೆದಿದೆ. ಸೈಂಧವ ಸಂಸ್ಕೃತಿಗಿಂತ ವಿಭಿನ್ನ ಮನೋವೃತ್ತಿಯ ವೈದಿಕ ಸಂಸ್ಕೃತಿಯ ಮೇಲೂ ಅದು ತನ್ನ ಪ್ರಭಾವವನ್ನು ಬೀರಿತು.

ಕ್ರಿಸ್ತಪೂರ್ವ ಏಳನೆಯ ಶತಮಾನದ ಸುಮಾರಿಗೆ ಭಾರತದ ವಾಯವ್ಯ ಪ್ರದೇಶದಲ್ಲಿ ಜೀವಿಸಿದ್ದ ಸುಪ್ರಸಿದ್ಧ ವೈಯಾಕರಣ ಪಾಣಿನಿಯೇ ಮಾರಾಟಕ್ಕೆ ತಕ್ಕುದಲ್ಲದ (ವಿಕ್ರಯನಿಷಿದ್ಧ) ದೇವತಾ'ಪ್ರತಿಕೃತಿ'ಗಳನ್ನು ಉಲ್ಲೇಖಿಸಿದ್ದಾನೆ. ಯಾಸ್ಕನ ನಿರುಕ್ತದಲ್ಲಿ ಮನುಷ್ಯರಂತೆಯೇ ಆಕಾರವುಳ್ಳ, ಮತ್ತು ಜೀವಂತರೆಂದು ಬಗೆದ ಮೂರ್ತಿಗಳ ಪ್ರಸ್ತಾಪ ಬರುತ್ತದೆ. ಪಾಣಿನಿಗೆ ಭಾಷ್ಯಕಾರನಾಗಿ ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿದ್ದ ಪತಂಜಲಿ ತನ್ನ ಕಾಲದಲ್ಲಿ ವಿಶೇಷವಾದ ಪೂಜೆಗೆ ಪಾತ್ರರಾಗಿದ್ದ ಶಿವ, ಸ್ಕಂದ, ವಿಶಾಖ ದೇವತೆಗಳ ಪ್ರತಿಕೃತಿಗಳನ್ನು ಹೆಸರಿಸಿದ್ದಾನೆ. ಬೌದ್ಧಯುಗದ ಪ್ರಭಾವದಿಂದಲೇ ಮೂರ್ತಿಪೂಜೆ ನಮ್ಮಲ್ಲಿ ಬೇರೂರಿತು ಎಂದು ವಾದಿಸುವವರು ಈ ನಿದರ್ಶನಗಳನ್ನು ಗಮನಿಸಬೇಕು. ಬುದ್ಧನ ಮಾನುಷೀ ವಿಗ್ರಹಗಳನ್ನು ಗಂಧಾರ ಶಿಲ್ಪ ಕಾಣಿಸುವ ಮೊದಲೇ ಬೌದ್ಧ ಸಂಪ್ರದಾಯದಲ್ಲಿ ಯಕ್ಷಪೂಜೆ ಪ್ರಬಲವಾಗಿದ್ದಿತು; ಯಕ್ಷಪೂಜೆಯು ಮೂರ್ತಿಪೂಜೆಯ ಮೊದಲಹಂತಗಳಲ್ಲಿ ಒಂದು.

ಮೂರ್ತಿ ಪೂಜೆ

ಸೈಂಧವ–ವೈದಿಕ ಸಂಸ್ಕೃತಿಗಳ ಸಮನ್ವಯ ಸಿದ್ಧವಾದಮೇಲೆ ಮನೆಗಳಲ್ಲಿ ಪ್ರತ್ಯೇಕವಾಗಿ, ಊರಿನಲ್ಲಿ ಒಟ್ಟಾಗಿ ಮೂರ್ತಿ ಪೂಜೆಯನ್ನು ಮಾಡುವ ಪದ್ಧತಿ ಒದಗಿಬಂದಿತು. ಆಗಮಗಳು ಗೃಹಾರ್ಚನೆ, ಆಲಯಾರ್ಚನೆ ಎಂದು ಎರಡು ಬಗೆಯ ಪೂಜೆಗಳನ್ನು ಪರಿಗಣಿಸಿವೆ; ಎರಡಕ್ಕೂ ಮೂರ್ತಿಗಳ ಅಗತ್ಯವಿದೆ. ಮನೆಯಲ್ಲಿ ಮಾಡುವ ಪೂಜೆಗೆ ಸಣ್ಣ ಸಣ್ಣ ಲೋಹದ ಮೂರ್ತಿಗಳು ಸಾಕು, ಮುಷ್ಟಿಗಿಂತ ಮೀರಿದ ಪ್ರತಿಮೆಗಳನ್ನು ಮನೆಯಲ್ಲಿ ಪೂಜಿಸಬಾರದೆಂಬ ನಿಯಮವೂ ಇದೆ. ಮಯಶಾಸ್ತ್ರವು (2,4–5) ಪೂಜೆಮಾಡುವವನ ಕೈಬೆರಳು ಗಳ ಮಾನದಿಂದಲೇ ಮೂರರಿಂದ ಹದಿನೈದು ಅಂಗುಲಗಳವರೆಗಿರುವ ಮೂರ್ತಿಗಳನ್ನೇ ಮನೆಯಲ್ಲಿ ಪೂಜಿಸಬೇಕೆಂದು ವಿಧಿಸುತ್ತದೆ. ಇವಕ್ಕೆ ಕ್ಷುದ್ರ ಪ್ರತಿಮೆಗಳೆಂದು ಹೆಸರು. 'ಅಂಗುಷ್ಠ ಪರ್ವಾದಾರಭ್ಯ ವಿತಸ್ತಿ, ಯಾವದೇವ ತು, ಗೃಹೇಷು ಪ್ರತಿಮಾ ಕಾರ್ಯಾ, ನಾಧಿಕಂ ಶಸ್ಯತೇ ಬುಧೈಃ' ಎಂದು ಇನ್ನೊಂದು ಅಭಿಪ್ರಾಯ. ಶೈವರಾದರೆ ಶಿವಲಿಂಗ, ಬಾಣಲಿಂಗ, ಸ್ಫಟಿಕಲಿಂಗ ಮೊದಲಾದುವನ್ನು ಸಂಪುಟಗಳಲ್ಲಿಟ್ಟು ಪೂಜಿಸುತ್ತಾರೆ. ಈ ಲಿಂಗಗಳು ಸಾಮಾನ್ಯವಾಗಿ ಮನುಷ್ಯರು ಕೈಯಿಂದ ಕಡೆದುವಲ್ಲ. ನೇಪಾಳದ ಅಮರೇಶ್ವರ ಎಂಬೆಡೆಯೂ ಮಹೇಂದ್ರ ಪರ್ವತದ ಮೇಲೂ ನರ್ಮದಾ ನದಿಯಲ್ಲೂ ಬಾಣಲಿಂಗಗಳು ಸಿಗುತ್ತವೆಂದು ಪ್ರತೀತಿ. ಶ್ರೀಮಂತರಾದವರು ಪುಷ್ಯ, ಮರಕತ, ಪದ್ಮರಾಗ ಮೊದಲಾದ ಬೆಲೆಬಾಳುವ ಕಲ್ಲುಹರಳುಗಳಿಂದ ಕಡೆದ ಲಿಂಗವನ್ನು ಪೂಜೆಮಾಡುತ್ತಾರೆ.

ಮೊದಲಿಗೆ ಹಲವಾರು ದೇವತೆಗಳನ್ನು ಪೂಜಿಸುವ ಪರಿಪಾಟಿಯಿದ್ದಿತು. ಬರುಬರುತ್ತ ಒಂದೇ ದೇವತೆಯ ಹಲವಾರು ರೂಪಗಳು ಇವೆಂದು, ಶಕ್ತಿಗಳು ಇವೆಂದು ತಿಳುವಳಿಕೆ ಬಂದಿತು. ಯಾಸ್ಕನ ನಿರುಕ್ತದಲ್ಲಿ "ಮಹಾಭಾಗ್ಯಾದ್ದೇವತಾಯಾ ಏಕ ಆತ್ಮಾ ಬಹುಧಾ ಸ್ತೂಯತೇ" (7,1,4), "ತಾಸಾ ಮಹಾಭಾಗ್ಯಾದೇಕೈಕಸ್ಯಾ ಅಪಿ ಬಹೂನಿ ನಾಮಧೇಯಾನಿ ಭವಂತಿ" (7,2,2) ಎನ್ನುವ ಮಾತುಗಳನ್ನು ಗಮನಿಸಬೇಕು. ವೇದಕಾಲದ ತ್ರಿದೇವರು (ಅಗ್ನಿ, ವಾಯು, ಸೂರ್ಯ) ಮುಂದೆ ಪೌರಾಣಿಕ ಯುಗದ ತ್ರಿಮೂರ್ತಿಗಳೆಂದು (ಬ್ರಹ್ಮ, ವಿಷ್ಣು, ಶಿವ) ಮಾರ್ಪಟ್ಟರು. ಕಾಲಕ್ರಮದಲ್ಲಿ ಸ್ಮಾರ್ತ ಸಂಪ್ರದಾಯದವರು 'ಪಂಚಾಯತನಪೂಜೆ' (ಐದು ದೇವತೆಗಳ ಪೂಜೆ)ಯನ್ನು ಮಾಡತೊಡಗಿದರು. ಸೂರ್ಯ, ಗಣೇಶ, ಶಿವ, ವಿಷ್ಣು, ದೇವಿ ಇವರೇ ಈ ಐವರು—

ಆದಿತ್ಯಂ ಗಣನಾಥಂ ಚ ದೇವೀಂ ರುದ್ರಂ ಚ ಕೇಶವಂ ।
ಪಂಚದೇವತಮಿತ್ಯುಕ್ತಂ ಸರ್ವಕರ್ಮಸು ಪೂಜಯೇತ್ ॥

ಈ ಪಂಚ ದೇವತೆಗಳು ಪಂಚಭೂತಗಳಿಗೆ ಸಂಕೇತವೆಂದು ಹೇಳುವುದಿದೆ: ಆಕಾಶಕ್ಕೆ ವಿಷ್ಣು, ಬೆಂಕಿಗೆ ದೇವಿ, ಗಾಳಿಗೆ ಸೂರ್ಯ, ಭೂಮಿಗೆ ಶಿವ, ನೀರಿಗೆ ಗಣೇಶ—

ಆಕಾಶಸ್ಯಾಧಿಪೋ ವಿಷ್ಣುಃ ಅಗ್ನೇಶ್ಚೈವ ಮಹೇಶ್ವರೀ ।
ವಾಯೋಃ ಸೂರ್ಯಃ ಕ್ಷಿತೇರೀಶೋ ಜೀವನಸ್ಯ ಗಣಾಧಿಪಃ ॥

ಇವರನ್ನು ನಿಶ್ಚಿತ ಕ್ರಮದಲ್ಲಿ ಗಣೇಶ, ದೇವಿ, ಶಿವ, ವಿಷ್ಣು, ಸೂರ್ಯ ಎಂದು ಎಣಿಸುತ್ತಾರೆ, ಇದಕ್ಕೆ ಸೃಷ್ಟಿಕ್ರಮವೆಂದೂ ಹೆಸರಿದೆ. ನಿತ್ಯಾರ್ಚನೆಯಲ್ಲಿ ಒಂದೇ ಪೀಠದ ಮೇಲೆ ಐವರು ದೇವತೆಗಳ ಮೂರ್ತಿಗಳನ್ನು ವ್ಯವಸ್ಥೆಮಾಡಿರುತ್ತಾರೆ. ಯಾರಿಗೆ ಯಾವುದು ಇಷ್ಟದೈವವೋ ಅದು ನಡುವೆ ಇದ್ದು ಉಳಿದ ನಾಲ್ಕೂ ನಾಲ್ಕು ಮೂಲೆಗಳಲ್ಲಿರುತ್ತವೆ; ಪಂಚಾಯತನವನ್ನು ಇಷ್ಟದೈವದಿಂದಲೇ ಹೆಸರಿಸುತ್ತಾರೆ – ಗಣೇಶ ಪಂಚಾಯತನ, ಶಿವ ಪಂಚಾಯತನ, ಹೀಗೆ (ಚಿತ್ರ 24). ಪಂಚಾಯತನ ಪೂಜೆ ಶಂಕರಾಚಾರ್ಯರ ಕಾಲದಿಂದ ಬಂದಿತು ಎಂದು ಹೇಳುವುದಿದೆ.



ಚಿತ್ರ 24
ಗಣೇಶಪಂಚಾಯತನದ ನಕ್ಷೆ

ವೈದಿಕ ಸಂಪ್ರದಾಯದ ಶೈವರಾಗಲಿ ವೈಷ್ಣವರಾಗಲೀ ನಿತ್ಯ ಪೂಜೆಯಲ್ಲಿ ಶಿವನಿಗೂ ವಿಷ್ಣುವಿಗೂ ಭೇದವನ್ನೆಣಿಸುವುದಿಲ್ಲ; ಶಿವರೂಪದ ವಿಷ್ಣುವಿಗೂ ವಿಷ್ಣುರೂಪದ ಶಿವನಿಗೂ ಸಮಾನವಾಗಿಯೇ ಪೂಜೆ ಸಲ್ಲುತ್ತದೆ. ಶೈವಸ್ಮಾರ್ತ ಸಂಪ್ರದಾಯದವರೂ ಮನೆಗಳಲ್ಲಿ ಶಾಲಗ್ರಾಮವನ್ನಿಟ್ಟುಕೊಂಡು ಅರ್ಚನೆ ನಡೆಸುತ್ತಾರೆ; ಶಿವಲಿಂಗವನ್ನು ಪೂಜೆ ಮಾಡುವಾಗಲೂ ಕೆಳಗಿನ ಚಚ್ಚೌಕನಾದ ಪೀಠ ಬ್ರಹ್ಮ ಭಾಗವೆಂದೂ (ಚತುರ್ಮುಖ), ನಡುವಣ ಅಷ್ಟಭುಜಾಕೃತಿಯ ಪಾಣಿವಟ್ಟು ವಿಷ್ಣುಭಾಗವೆಂದೂ (ಅಷ್ಟಭುಜಗಳ ತ್ರಿವಿಕ್ರಮ), ಮೇಲಿನ ವರ್ತುಲಾಕೃತಿಯ ಲಿಂಗ ಶಿವಭಾಗವೆಂದೂ ಕಲ್ಪನೆಯಿದೆ. ವೈಷ್ಣವರೂ ರುದ್ರಾರ್ಚನೆಮಾಡುತ್ತಾರೆ; ಶಿವರಾತ್ರಿ ಮೊದಲಾದ ವಿಶೇಷ ದಿನಗಳಲ್ಲಿ ಶಿವದೇವಾಲಯಕ್ಕೆ ಹೋಗಿಬರುತ್ತಾರೆ. ಸ್ವಾರಸ್ಯವಾದ ಚಮತ್ಕಾರದ ನಿರೂಪಣೆಯೊಂದಿದೆ—ಹರಿ, ಹರ ಇವರಲ್ಲಿ (ಎರಡೂ ಪದಗಳಲ್ಲಿ) ಪ್ರಕೃತಿ (ಧಾತು, ಹೃ) ಒಂದೇ; ಪ್ರತ್ಯಯಗಳು (ಯೋಗಗಳು) ರೂಪಭೇದಕ್ಕೆ ಕಾರಣವಾಗುತ್ತವೆ (ಹರಿಹರಯೋಃ ಪ್ರಕೃತಿರೇಕಾ, ಪ್ರತ್ಯಯಭೇದೇನ ರೂಪಭೇದೋಽಯಂ). ವ್ಯಾಕರಣ, ಅಧ್ಯಾತ್ಮ ಎರಡರ ನೆಲೆಗಳನ್ನೂ ಕಲಸಿ ಹೇಳಿದ ಮಾತಿದು. ಸರ್ಜನ, ಪಾಲನ, ಸಂಹರಣ ಎನ್ನುವ ಮೂರೂ ಅವಶ್ಯ ಕ್ರಿಯೆಗಳಿಗೆ ಅಧಿನಾಯಕರೆಂದು ತ್ರಿಮೂರ್ತಿಗಳನ್ನು ತಾತ್ತ್ವಿಕವಾಗಿ ಒಪ್ಪಿಕೊಂಡಿದ್ದರೂ, ವ್ಯವಹಾರದಲ್ಲಿ 'ಇಷ್ಟದೈವ', 'ಕುಲದೈವ'ಗಳಿಗೆ ಪ್ರಾಮುಖ್ಯವಿದೆ. ಪ್ರತಿಯೊಬ್ಬನೂ ತನಗೆ ರುಚಿಕಂಡ ದೇವತಾಮೂರ್ತಿಯನ್ನು ಪೂಜೆಮಾಡಿಕೊಳ್ಳಲು ಯಾವ ಶಾಸ್ತ್ರವೂ ಸಂಪ್ರದಾಯವೂ ಅಡ್ಡಿಬರುವುದಿಲ್ಲ. ಒಂದೊಂದು ಮನೆತನಕ್ಕೂ ಪರಂಪರೆಯಲ್ಲಿ ಬಂದ ಕುಲದೇವತೆ ಇರುತ್ತದೆ; ಕಾಲಕಾಲಕ್ಕೆ ಈ ಕುಲದೇವತೆಯ ಪೂಜೆಯೂ ನಡೆಯಬೇಕು. ಕುಲದೇವತೆ, ಇಷ್ಟದೇವತೆ ಒಂದೇ ಆಗಿರಬೇಕೆನ್ನುವ ನಿಯಮವೇನಿಲ್ಲ; ಹಾಗಿರುವುದು ವಾಡಿಕೆಯೂ ಅಲ್ಲ. ಕುಲದೇವತೆಗಳಿಗೂ ಕ್ಷೇತ್ರಗಳಿಗೂ ಸಂಬಂಧವಿರುವುದನ್ನು ಕಾಣಬಹುದು—ತಿರುಪತಿಯ ಶ್ರೀನಿವಾಸ, ಕೊಲ್ಲಾಪುರದ

ಲಕ್ಷ್ಮಿ, ಸಿಂಹಾಚಲದ ನರಸಿಂಹ, ತುಳಜಾಪುರದ ಅಂಬಾಭವಾನಿ, ಇತ್ಯಾದಿ. ಸಾಮಾನ್ಯವಾಗಿ ಕುಲದೇವತೆಗಳು ಸ್ತ್ರೀಮೂರ್ತಿಗಳಾಗಿರುವುದು ಸ್ವಾರಸ್ಯವಾದುದು.

ಮೇಲೆ ಕಾಣಿಸಿದ ಮೂರ್ತಿಗಳಲ್ಲದೆ ಹನುಮಂತ, ಗಣೇಶ, ಸರಸ್ವತಿ, ಲಕ್ಷ್ಮಿ, ಹಯಗ್ರೀವ, ಸುಬ್ರಹ್ಮಣ್ಯ, ಕೃಷ್ಣ, ರಾಮ, ನರಸಿಂಹ, ಮಂಜುನಾಥ, ದತ್ತಾತ್ರೇಯ ಮೊದಲಾದ ದೇವತಾಮೂರ್ತಿಗಳನ್ನು ಮನೆಗಳಲ್ಲಿ ಪೂಜಿಸುತ್ತಾರೆ. ದೇವರ ಕೋಣೆಯಲ್ಲಿ ಈ ದೇವತೆಗಳ ಚಿತ್ರಪಟಗಳನ್ನೋ ಸಣ್ಣಸಣ್ಣ ಲೋಹಮೂರ್ತಿಗಳನ್ನೋ ಇರಿಸಿಕೊಳ್ಳುತ್ತಾರೆ. ವಿಶೇಷ ದಿನಗಳಲ್ಲಿ ವಿಶೇಷ ದೇವತೆಗಳ ಪೂಜೆಯೂ ನಡೆಯುತ್ತದೆ—ರಾಮನವಮಿ, ಕೃಷ್ಣಾಷ್ಟಮಿ, ಗಣೇಶಚೌತಿ, ಶಿವರಾತ್ರಿ, ಹನುಮಜ್ಜಯಂತಿ, ದತ್ತ ಜಯಂತಿ, ನರಸಿಂಹಜಯಂತಿ, ಚಂಪಾಷಷ್ಠಿ, ಶ್ರಾವಣ ಹುಣ್ಣಿಮೆ (ವರಲಕ್ಷ್ಮಿ) ಮೊದಲಾದುವು. ಈ ದೇವತೆಗಳಿಗೆಲ್ಲ ಮೂರ್ತಿಕಲ್ಪನೆ ನಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿಯೇ ಮೂಡಿರುವುದು ಸಂಪ್ರದಾಯದ ಬಲವನ್ನು ತೋರಿಸುತ್ತದೆ.

ಮನೆಯಲ್ಲಿ ಪೂಜೆಮಾಡುವಾಗ ದೇಹಶುದ್ಧಿ, ಭೂತಶುದ್ಧಿ, ಭೂತೋಚ್ಚಾಟನ, ನಿರ್ಮಾಲ್ಯವಿಸರ್ಜನ, ಸಂಕಲ್ಪ, ಕಳಶಪೂಜೆ, ಪೀಠಪೂಜೆ, ಅಭಿಷೇಕ, ನೈವೇದ್ಯ ಸಮರ್ಪಣ, ನೀರಾಜನ, ಮಂತ್ರಪುಷ್ಪ ಮೊದಲಾದ ಕಲಾಪಗಳು ಸೇರುತ್ತವೆ. ವೈದಿಕ ಮಂತ್ರಗಳನ್ನು ಧಾರಾಳವಾಗಿ ಬಳಸಿಕೊಂಡರೂ ತಾಂತ್ರಿಕ ಮುದ್ರೆಗಳ ಹೆಚ್ಚಳವಿರುವುದು ನಿತ್ಯಾರ್ಚನೆಯ ಮೂಲ ಎಲ್ಲಿಯದು ಎನ್ನುವ ಜಿಜ್ಞಾಸೆಗೆ ಕಾರಣವಾಗುತ್ತದೆ. ಮುದ್ರೆ ಎನ್ನುವ ಮಾತಿಗೆ ದೇವತೆಗಳನ್ನು ಸಂತೋಷಪಡಿಸುವ, ಅಸುರರನ್ನು ಓಡಿಸುವ ವಿಧಾನವೆಂದು ತಂತ್ರಶಾಸ್ತ್ರ ಹೇಳುತ್ತದೆ—

ಮುದಂ ಕರೋತಿ ದೇವಾನಾಂ ದ್ರಾವಯತ್ಯಸುರಾಂಸ್ತಥಾ ।
ಮೋದನಾ ದ್ದ್ರಾವಣಾಚ್ಚೈವ ಮುದ್ರೇತಿ ಪರಿಕೀರ್ತಿತಾ ॥

ಅರ್ಚನೆಮಾಡುವಾಗ, ಜಪಮಾಡುವಾಗ, ಧ್ಯಾನಮಾಡುವಾಗ, ಕಾಮ್ಯಕರ್ಮಗಳನ್ನು ಮಾಡುವಾಗ, ಎಡೆಯಿಡುವಾಗ ಮುದ್ರೆಗಳನ್ನು ತೋರಿಸಬೇಕೆನ್ನುವ ನಿಯಮವಿದೆ; ಮುದ್ರೆಗಳನ್ನು ತೋರಿಸದಿದ್ದರೆ ಪೂಜೆ ವ್ಯರ್ಥವೆಂದೂ ಹೇಳುತ್ತಾರೆ (ಮುದ್ರಾ ನ ದರ್ಶಿತಾ ಯಸ್ಯಾಂ ಸಾ ಪೂಜಾ ನಿಷ್ಫಲಾ ಭವೇತ್). ಮುದ್ರೆಗಳಲ್ಲಿ ವಿಘ್ನರಾಜಮುದ್ರೆ, ಗುರುಪಾದಕಾಮುದ್ರೆ, ಘಂಟಾಮುದ್ರೆ, ಚತುರಸ್ರಮುದ್ರೆ, ಸಂಕಲ್ಪಮುದ್ರೆ, ಶಂಖಮುದ್ರೆ, ತಾರ್ಕ್ಷ್ಯಮುದ್ರೆ, ಧೇನುಮುದ್ರೆ, ಸುರಭೀಮುದ್ರೆ, ಮಹಾಮುದ್ರೆ, ಪದ್ಮಮುದ್ರೆ, ಶಕ್ತಿಮುದ್ರೆ, ಬಿಂಬಮುದ್ರೆ, ಅಂಕುಶಮುದ್ರೆ, ಬೀಜಮುದ್ರೆ ಮೊದಲಾದುವನ್ನು ಆಗಮಗ್ರಂಥಗಳು ವಿವರಿಸುತ್ತವೆ. ದೇವತೆಗಳ ಕೈಯಲ್ಲಿರುವ ಆಯುಧಗಳನ್ನೂ ಕೈಬೆರಳುಗಳ ವಿನ್ಯಾಸದಿಂದ ತೋರಿಸುತ್ತಾರೆ; ದೇವರನ್ನು ಆವಾಹನೆ ಮಾಡುವಾಗ ಆವಾಹನ, ಸ್ಥಾಪನ, ಸಂನಿಧಾನ, ಸನ್ನಿರೋಧ, ಸ್ವಾಭಿಮುಖ, ಸಕಲೀಕರಣ, ಅವಕುಂಠನ ಮೊದಲಾದ ಕ್ರಿಯೆಗಳಿಗೆ ಅನುರೂಪವಾದ ಮುದ್ರೆಗಳೂ ಬಳಕೆಗೆ ಬರುತ್ತವೆ. ಮೂರ್ತಿಶಿಲ್ಪದ ವಿವರಗಳನ್ನು ಖಚಿತಗೊಳಿಸಿಕೊಳ್ಳುವಲ್ಲಿ ಈ ಮುದ್ರೆಗಳ ಪಾತ್ರ ಹಿರಿದಾದುದು (ಚಿತ್ರ 25).

ಮುದ್ರೆಯೊಂದಿಗೆ ಮಂತ್ರಗಳ, ಮಂಡಲಗಳ ಬಳಕೆಯೂ ತಂತ್ರಸಂಪ್ರದಾಯದ ನೆಲೆಯಿಂದಲೇ ಬಂದಿತು. ಮಂತ್ರವಿದ್ಯೆ ವಿಪುಲವಾಗಿ ಬೆಳೆದು ಬಂದಿತು; ಅದನ್ನು ಬೇರೊಂದೆಡೆ ವಿಚಾರಮಾಡೋಣ. ದೇವತೆಯ ವೈಭವವನ್ನು ಮನನ ಮಾಡಲು, ಸಂಸಾರದ ಕೋಟಲೆಗಳಿಂದ ಪಾರಾಗಲು ನೆರವಾಗುವುದೇ

ಮಂತ್ರವೆನಿಸಿಕೊಳ್ಳುತ್ತದೆ (ಮನನಂ ವಿಶ್ವವಿಜ್ಞಾನಂ ತ್ರಾಣಂ ಸಂಸಾರಬಂಧನಾತ್ । ಯತಃ ಕರೋತಿ ಸಂಸಿದ್ಧೋ ಮಂತ್ರ ಇತ್ಯುಚ್ಯತೇ ಬುಧೈಃ ॥ ಪಿಂಗಳಾಮತ). ದೇವತೆಯ ಸ್ವರೂಪವನ್ನೂ ಸ್ವಭಾವವನ್ನೂ ಸ್ಪಷ್ಟಪಡಿಸುವುದೇ ಇದರ ಪ್ರಯೋಜನ. ಒಂದೊಂದು ದೇವತೆಗೂ ವಿಶಿಷ್ಟವಾದ ಮಂತ್ರಗಳಿವೆ—ಶಿವನಿಗೆ ಪಂಚಾಕ್ಷರೀಮಂತ್ರ(ಓಂನಮಃಶಿವಾಯ), ವಿಷ್ಣುವಿಗೆ ಅಷ್ಟಾಕ್ಷರ ಮಂತ್ರ (ಓಂ ನಮೋ ನಾರಾಯಣಾಯ), ದ್ವಾದಶಾಕ್ಷರದ ಸುದರ್ಶನ ಮಂತ್ರ (ಓಂ ನಮಃ ಸುದರ್ಶನಾಯ ಅಸ್ತ್ರಾಯ ಫಟ್), ಗಾಯತ್ರೀ ಛಂದಸ್ಸಿನ ಸೌರಮಂತ್ರ (ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ, ಧಿಯೋ ಯೋ ನಃ ಪ್ರಚೋದಯಾತ್), ಗಣೇಶಗಾಯತ್ರಿ (ಓಂ ಏಕ ದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ, ತನ್ನೋದಂತಿಃ ಪ್ರಚೋದಯಾತ್), ವಜ್ರಯಾನದ 'ಓಂ ಮಣಿ ಪದ್ಮೇ ಹುಂ', ಜೈನರ 'ಓಂ ಹ್ರೀಂ ಪಾರ್ಶ್ವನಾಥಾಯ ಹ್ರೀಂ ನಮಃ' ಇತ್ಯಾದಿ. ಮಂತ್ರವನ್ನು ಗುರುವೇ ಉಪದೇಶಮಾಡಬೇಕೆಂಬ ವಿಧಿಯಿದೆ. ಒಟ್ಟು ಏಳುಕೋಟಿ ಮಂತ್ರಗಳಿರುವುದಾಗಿ ತಿಳಿದುಬಂದಿದೆ. ಇವೆಲ್ಲವೂ ಬಳಕೆಯಲ್ಲಿಲ್ಲದಿರುವುದು ದಿಟ.



ಚಿತ್ರ 25
ಪೂಜಾಮುದ್ರೆಗಳು

ಮಂತ್ರದಲ್ಲಿ ಬೀಜಾಕ್ಷರಗಳ ಪ್ರಯೋಗ ಮುಖ್ಯವಾದುದು. ಮಂತ್ರವೆಂದರೆ ಸಾಮಾನ್ಯವಾಗಿ ಜಪನೀಯವಾದ ಒಂದು ವಾಕ್ಯ; ಅದರಲ್ಲಿ ಹತ್ತು ಅಕ್ಷರಗಳಿಂದ ಇಪ್ಪತ್ತು ಅಕ್ಷರಗಳವರೆಗಿದ್ದರೆ ಮಂತ್ರವೆಂದೂ ಇಪ್ಪತ್ತಕ್ಕೆ ಮೀರಿದರೆ ಮಾಲಾಮಂತ್ರವೆಂದೂ ಹೇಳುತ್ತಾರೆ. ಮೂರರಿಂದ ಒಂಬತ್ತು ಅಕ್ಷರಗಳಿದ್ದರೆ ಅದು ಬೀಜವೆನಿಸಿಕೊಳ್ಳುತ್ತದೆ; ಎರಡಕ್ಷರಗಳಿದ್ದರೆ ಅದು ಕರ್ತರೀ; ಒಂದೇ ಅಕ್ಷರವಿದ್ದರೆ ಪಿಂಡ. ಓಂ, ಹ್ರೀಂ, ಗಂ, ಶ್ರೀಂ ಮೊದಲಾದುವೆಲ್ಲ ಏಕಾಕ್ಷರ ಮಂತ್ರಗಳು. ಇಡೀ ಮಂತ್ರವೇ ಅದರಿಂದ ಹೊರ ಹೊಮ್ಮುವುದರಿಂದ ಅದನ್ನು ಮಂತ್ರಬೀಜ, ಅಥವಾ ಬೀಜಾಕ್ಷರ ಎನ್ನುತ್ತಾರೆ. ದೇವತಾಮೂರ್ತಿಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಶಿಲ್ಪಿಗೆ ಧ್ಯಾನಶ್ಲೋಕ ನೆರವಾದಂತೆಯೇ ಸಾಧಕನಿಗೆ ಮಂತ್ರಜಪ ಅಥವಾ ಬೀಜಾಕ್ಷರಗಳ ಪುರಶ್ಚರಣ ನೆರವಾಗುತ್ತದೆ. ಮನೆಯಲ್ಲಿ ಮಾಡುವ ನಿತ್ಯಾರ್ಚನೆಯಲ್ಲಿ ಇದು ಸೇರಿಬರುತ್ತದೆ. ಮಂತ್ರದಲ್ಲಿ ಎಷ್ಟು ಅಕ್ಷರವಿದೆಯೋ ಅಷ್ಟು ಲಕ್ಷ ಬಾರಿ ಜಪಮಾಡಿದರೆ ಸಿದ್ಧಿಯಾಗುವುದೆಂಬ ನಂಬಿಕೆಯಿದೆ. ಜಪಕ್ಕಾಗಿ ರುದ್ರಾಕ್ಷ, ತುಳಸೀಮಣಿ, ಸ್ಫಟಿಕಮಣಿ, ಕಮಲದ ಬೀಜ, ಶಂಖಮಣಿ ಇವುಗಳ ಮಾಲೆಯನ್ನು ಬಳಸುತ್ತಾರೆ ; ಮಾಲೆಯಿಲ್ಲದೆ ಬರಿಯ ಕೈಬೆರಳುಗಳಿಂದಲೇ ಎಣಿಕೆಮಾಡಿಕೊಂಡು ಜಪಮಾಡುವುದೂ ಉಂಟು.



ಚಿತ್ರ 26

ಶ್ರೀಚಕ್ರ



ಚಿತ್ರ 27

ಕೆಲವು ಯಂತ್ರಗಳು



ಚಿತ್ರ 28

ಕೆಲವು ಯಂತ್ರಗಳು



ಚಿತ್ರ 29

ಯಂತ್ರರಾಜ (ಸಿದ್ಧಿಗಳನ್ನು ಪಡೆಯುವ ಸಲುವಾಗಿ)

ಮಂತ್ರಕ್ಕೆ ರೂಪವನ್ನು ಕೊಡುವುದಾದರೆ ಅದು ಮಂಡಲವಾಗುತ್ತದೆ; ರೇಖೆಗಳು, ವೃತ್ತಗಳು ತ್ರಿಕೋಣಗಳು ಇವುಗಳಿಂದ ರಚಿಸಿದ ಜ್ಯಾಮಿತೀಯಚಿತ್ರ ಮಂಡಲ ಅಥವಾ ಚಕ್ರ ಎನಿಸಿಕೊಳ್ಳುತ್ತದೆ; ಇದಕ್ಕೆ ಯಂತ್ರ ಎನ್ನುವುದೂ ಉಂಟು. ಕೆಲವು ಸಂಪ್ರದಾಯಸ್ಥ ಮನೆಗಳಲ್ಲಿ ಶ್ರೀಚಕ್ರದ ಪೂಜೆಯಿರುತ್ತದೆ; ಈ ಚಕ್ರವು ಲಲಿತಾ ಪರಮೇಶ್ವರೀದೇವಿಯ ರೂಪವೆಂದು ಕಲ್ಪನೆ. ಈ ಪೂಜೆಯ ಆಧ್ಯಾತ್ಮಿಕ ನೆಲೆಯನ್ನೂ ತಾಂತ್ರಿಕ ವಿಧಿಗಳನ್ನೂ ಸ್ಪಷ್ಟಪಡಿಸುವ ದೊಡ್ಡದೊಂದು ಶಾಸ್ತ್ರವೇ ಬೆಳೆದಿದೆ; ಇದಕ್ಕೆ ಶ್ರೀವಿದ್ಯೆಯೆಂದು ಹೆಸರು. ಶ್ರೀಚಕ್ರವನ್ನು ಕಲ್ಲುಹಲಗೆಯಮೇಲೆ, ತಾಮ್ರದ ತಗಡಿನ ಮೇಲೆ, ಬಂಗಾರದ ತಟ್ಟೆಯಮೇಲೆ ಕೊರೆಯಿಸಿಟ್ಟುಕೊಳ್ಳುತ್ತಾರೆ (ಚಿತ್ರ 26). ವೈಷ್ಣವರು ಷಾಡ್ಗುಣ್ಯ ಯಂತ್ರವನ್ನು ಪೂಜಿಸುತ್ತಾರೆ. ಇದಲ್ಲದೆ ಬೇರೆಬೇರೆ ಸಿದ್ಧಿಗಳಿಗಾಗಿ ಬೇರೆಬೇರೆ ಆಕಾರದ ಯಂತ್ರಗಳನ್ನು ಬರೆಯುವುದೂ ಉಂಟು (ಚಿತ್ರಗಳು 27, 28, 29, 30, 31, 32.) ಯಂತ್ರಗಳ ರಚನೆಯಲ್ಲಿ ಹಲವಾರು ಜ್ಯಾಮಿತೀಯ ಆಕೃತಿಗಳ ಬಳಕೆಯಿದೆ (ಚಿತ್ರ 33). ಇದೇ ಆಕೃತಿಗಳನ್ನು ದೇವಾಲಯದ ವಿಮಾನ ರಚನೆ ಯಲ್ಲಿಯೂ ಬಳಸಿರುವುದನ್ನು ಕಾಣಬಹುದು,



ಚಿತ್ರ 30
ರಕ್ಷಾ ಯಂತ್ರ



ಚಿತ್ರ 31
ಮುಕ್ತಿ ಯಂತ್ರ



ಚಿತ್ರ 32
ವೆಂಕಟೇಶ ಗಾಯತ್ರೀ ಯಂತ್ರ

ದೇವತಾ ವಿಗ್ರಹಗಳನ್ನು ಪೂಜೆಗೆ ಇಟ್ಟುಕೊಳ್ಳುವಾಗ ಅಡಿಯಲ್ಲಿ ಕೆಲವು ಯಂತ್ರ ಗಳನ್ನು ಚಂದನದಲ್ಲಿ, ಕುಂಕುಮದಲ್ಲಿ, ಕೇಸರದಿಂದ ಬರೆದಿಡುವುದೂ ವಾಡಿಕೆ. ಬರಿಯ ಮೂರ್ತಿಪೂಜೆಗಿಂತ ಈ ಮಂಡಲಗಳ ಅಥವಾ ಯಂತ್ರಗಳ ಜೊತೆಗೆ ಮೂರ್ತಿಯಿದ್ದಾಗ ಪೂಜಿಸುವುದು ಹೆಚ್ಚು ಫಲಕಾರಿಯೆನ್ನುವ ಭಾವನೆಯಿದೆ. ಮೂರ್ತಿಗಳನ್ನು ಜನ ಮಾಡಿಟ್ಟುಕೊಳ್ಳುವ ಮೊದಲು ಯಂತ್ರಗಳನ್ನು ಬರೆದಿಟ್ಟುಕೊಳ್ಳುತ್ತಿದ್ದುದು ವಾಡಿಕೆಯಲ್ಲಿದ್ದಿತು. ಆದಿವಾಸಿ ಜನರಲ್ಲಿಯೂ ಯಂತ್ರಗಳ ಬಳಕೆಯಿದೆ; ದೇವತೆಗಳನ್ನೂ ಭೂತಗಳನ್ನೂ ಅವರು ರೇಖಾಚಿತ್ರಗಳಲ್ಲಿಯೇ ಮೂಡಿಸುತ್ತಾರೆ. ಕೇರಳದ ಕಡೆಯಿರುವ ಆದಿವಾಸಿಗಳಾದ 'ಇರುವ' ಜನಾಂಗದವರು ಉಪಯೋಗಿಸುವ ಕೆಲವು ಚಿತ್ರಗಳು ಯಂತ್ರಗಳಂತೆಯೇ ಇವೆ (ಚಿತ್ರ 34). ಕೆಲವು ಕಾಮ್ಯಕರ್ಮಗಳಿಗಾಗಿ ಹಳೆಯ ಈ ಯಂತ್ರಗಳನ್ನು ಇಂದಿಗೂ ಮಂತ್ರವಾದಿಗಳು ಬಳಸುತ್ತಾರೆ.

ಪ್ರತಿಮೆಯ ಪ್ರಯೋಜನ

ಗುಡಿಗಳಲ್ಲಿ ಮೂರ್ತಿಪೂಜೆ ಮೂಡಿಕೊಂಡು ಬಂದಾಗಲೇ ವಾಸ್ತುಶಿಲ್ಪ, ಶಿಲ್ಪ ಶಾಸ್ತ್ರ, ವಿಗ್ರಹ ಪ್ರತಿಷ್ಠಾಪನಾ ವಿಧಿ, ಪೂಜಾವಿಧಿಗಳು ಹುಟ್ಟಿಕೊಂಡವು. ಕ್ರಿಸ್ತಾಬ್ದ ಆರನೆಯ ಶತಮಾನಕ್ಕೆ ಮೊದಲೇ



ಚಿತ್ರ 33
ಯಂತ್ರಗಳಲ್ಲಿ ಬರುವ ಆಕೃತಿಗಳು



ಚಿತ್ರ 34
ಕೇರಳದ 'ಇರುವ' ಆದಿವಾಸಿಗಳು ಬಳಸುವ ಯಂತ್ರಗಳು.
ಮೊದಲನೆಯದು ಜ್ವರ ಪುರುಷ; ಎರಡನೆಯದು
ಮುಕ್ಕನ್-ಚಾತ್ತನ್ ಎಂಬ ದೇವತೆಯ ಮಂಡಲ ಚಿತ್ರ.

ಇವನ್ನೆಲ್ಲ ಒಳಗೊಂಡ ಆಗಮಭಾಗ ಸಿದ್ಧವಾಗಿದ್ದಿತು. ನಗ್ನಜಿತ್ ಎಂಬುವ ಪ್ರಮಾಣಪುರುಷ ದಕ್ಷಿಣದೇಶದ ಆಗಮಭಾಗವನ್ನು ಸ್ಪಷ್ಟಪಡಿಸಿದ. ಇವನು ಗಂಧಾರ ದೇಶದವನೆಂದೂ, ನಾರದನೆಂಬ ವಾಸ್ತು ವಿದ್ಯಾಚಾರ್ಯನ ಶಿಷ್ಯನೆಂದೂ, ಅಸುರ ಸಂಪ್ರದಾಯಕ್ಕೆ ಸೇರಿದವನೆಂದೂ ತಿಳಿದುಬರುತ್ತದೆ. ಇವನ ಉಲ್ಲೇಖವನ್ನು ಮತ್ಸ್ಯಪುರಾಣ, ವರಾಹಮಿಹಿರನ ಬೃಹತ್ಸಂಹಿತೆ, ಭಟ್ಟೋತ್ಪಲನ ಟೀಕೆ ಇವುಗಳಲ್ಲೆಲ್ಲ ಕಾಣಬಹುದು. ಅಂತೂ ಅವನ ಕಾಲದಿಂದ ಮುಂದಕ್ಕೆ ಈ ಶಾಸ್ತ್ರ ಸಮುದಾಯ ಸಮೃದ್ಧವಾಗಿ ಬೆಳೆಯಿತು. ಕಾಮಿಕಾಗಮ ಮೊದಲಾದ ಶೈವಾಗಮ ಗ್ರಂಥಗಳೂ ವೈಖಾನಸಾಗಮ ಮೊದಲಾದ ವೈಷ್ಣವ ಗ್ರಂಥಗಳೂ ಒಂಬತ್ತು–ಹತ್ತನೆಯ ಶತಮಾನಗಳ ವೇಳೆಗಾಗಲೇ ಸಿದ್ಧವಾಗಿದ್ದುವು. ಗುಡಿಯ ಸಂದರ್ಭದಲ್ಲಿ ಮೂರ್ತಿ; ಪೂಜೆಯ ಇತಿಮಿತಿಗಳನ್ನೂ ಗೊತ್ತುಗುರಿಗಳನ್ನೂ ಇವು ಸ್ಪಷ್ಟಪಡಿಸಿದುವು.

ಹೀಗೆ ಶಾಸ್ತ್ರಶುದ್ಧವಾಗಿ ಪೂಜೆಗೆಂದು ಗುಡಿಯಲ್ಲಿ ಸಿದ್ಧಪಡಿಸಿದ ಮೂರ್ತಿಗಳಲ್ಲಿ ಚಲ, ಅಚಲ ಎಂಬ ಭೇದವಿದೆ. ಅಚಲವೆಂದರೆ ಅಲ್ಲಾಡದೆ, ಗರ್ಭಗುಡಿಯಲ್ಲಿಯೇ ನೆಲೆಯಾಗಿ ನಿಂತಿರುವ ಮೂರ್ತಿ; ಸಾಮಾನ್ಯವಾಗಿ ಇದು ದೊಡ್ಡ ಪ್ರಮಾಣದಲ್ಲಿರುತ್ತದೆ. ಇದನ್ನು ಧ್ರುವಮೂರ್ತಿಯೆಂದೂ ಮೂಲ ಮೂರ್ತಿಯೆಂದೂ ಕರೆಯುತ್ತಾರೆ; ಧ್ರುವಬೇರ ಎನ್ನುವ ಹೆಸರೂ ದಕ್ಷಿಣ ದೇಶದಲ್ಲಿ ವಾಡಿಕೆಯಿದೆ. ಭಾಗವತವು ಮೂರ್ತಿಗಳು ಕಲ್ಲಿನವು, ಮರದವು, ಲೋಹದವು, ಗಾರೆಗಚ್ಚಿನವು, ಚಿತ್ರದಲ್ಲಿ ಬಿಡಿಸಿದುವು, ಮರಳಿನವು, ಮನಸ್ಸಿನಿಂದಲೇ ಮಾಡಿದವು, ಮಣಿಯಿಂದ ಮಾಡಿದವು ಹೀಗೆ ಎಂಟು ಬಗೆಗಳೆಂದು ಹೇಳುತ್ತದೆ :—

> ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ।
> ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ॥

ಮೊದಲಿಗೆ ಈ ಮೂರ್ತಿಗಳನ್ನು ಮರದಲ್ಲಿ ಮಾಡಿಡುತ್ತಿದ್ದರು; ಇಂಥ ದಾರುಮಯ ಮೂರ್ತಿಗಳನ್ನು

ಸ್ನಾನವನ್ನು ವಿಧಿಸದಿದ್ದಾಗ, ದಿನವೂ ಹಲವುಬಾರಿ ಸ್ನಾನಮಾಡಿಸುವ ಸಲುವಾಗಿಯೇ 'ಸ್ನಪನ ಬೇರ'ವೂ ಇರುತ್ತದೆ. ಸ್ನಾನಕ್ಕೆಂದೇ ಪ್ರತ್ಯೇಕವಾದ ಸ್ಥಳವನ್ನೂ ದೇವಾಲಯಗಳಲ್ಲಿ ನಿರ್ದೇಶಿಸಿ ಇದನ್ನು ಸ್ನಪನ ಮಂಡಪವೆಂದು ಕರೆಯುತ್ತಾರೆ. ಪರಿವಾರ ದೇವತೆಗಳಿಗೆ ಬಲಿಹರಣಕ್ಕಾಗಿ 'ಬಲಿಬೇರ'ವೂ ಬಳಕೆಗೆ ಬರುತ್ತದೆ. ವೈಖಾನಸ–ಪಾಂಚರಾತ್ರ ಸಂಪ್ರದಾಯಗಳಲ್ಲಿ ಪಂಚಬೇರವಿಧಿ ಅಗತ್ಯವಾಗುತ್ತದೆ. ಆದರೆ ಬಹುಮಟ್ಟಿಗೆ ಗುಡಿಗಳಲ್ಲಿ ಮೂಲಮೂರ್ತಿ, ಉತ್ಸವಮೂರ್ತಿ ಇವೆರಡೇ ಇರುವುದು ವಾಡಿಕೆ; ದೇವಾಲಯದ ಆರ್ಥಿಕ ಸೌಲಭ್ಯ, ಪರಂಪರೆ ಎರಡೂ ಕಾರಣವಾಗುತ್ತವೆ.

ಮೂರ್ತಿಗಳನ್ನು ಮಾಡಿ ಪೂಜಿಸುವಾಗ ಫಲದ ದೃಷ್ಟಿಯಿಂದ ಕೆಲವು ವಿವರಗಳನ್ನು ಹೇಳಿದ್ದಾರೆ. ವರಾಹಮಿಹಿರನ ಬೃಹತ್ಸಂಹಿತೆಯಲ್ಲಿ:

> ಆಯುಃಶ್ರೀಬಲಜಯದಾ ದಾರುಮಯೀ ಮೃಣ್ಮಯೀ ತಥಾ ಪ್ರತಿಮಾ ।
> ಲೋಕಹಿತಾಯ ಮಣಿಮಯೀ ಸೌವರ್ಣೀ ಪುಷ್ಟಿದಾ ಭವತಿ ॥
> ರಜತಕರೀ ಕೀರ್ತಿಕರೀ ಪ್ರಜಾವಿವೃದ್ಧಿಂ ಕರೋತಿ ತಾಮ್ರಮಯೀ ।
> ಭೂಲಾಭಂತು ಮಹಾಂತಂ ಶೈಲೋ ಪ್ರತಿಮಾಥವಾ ಲಿಂಗಂ ॥

ಎಂದು ಹೇಳಿದೆ. ಮರದಿಂದ ಅಥವಾ ಮಣ್ಣಿನಿಂದ ಮಾಡಿದ ಮೂರ್ತಿಯನ್ನು ಅಥವಾ ಲಿಂಗವನ್ನು ಪೂಜಿಸಿದರೆ ಆಯುಸ್ಸು, ಐಶ್ವರ್ಯ, ಬಲ, ಜಯ, ಒದಗುತ್ತದೆ; ಮಣಿಯ ಮೂರ್ತಿ ಲೋಕಹಿತವನ್ನೂ ಬಂಗಾರದ್ದು ಪುಷ್ಟಿಯನ್ನೂ, ಬೆಳ್ಳಿಯದು ಯಶಸ್ಸನ್ನೂ, ತಾಮ್ರದ್ದು ಸಂತಾನವನ್ನೂ ಕಲ್ಲಿನದು ಹೆಚ್ಚಿನ ಭೂಮಿಯನ್ನೂ ಒದಗಿಸುತ್ತದೆಯೆಂದರ್ಥ. ಶುಕ್ರನೀತಿಸಾರದಲ್ಲಿ ಸತ್ಯಯುಗದಲ್ಲಿ ಬಂಗಾರದ ಮೂರ್ತಿಯನ್ನೂ, ತ್ರೇತಾಯುಗದಲ್ಲಿ ಬೆಳ್ಳಿಯದನ್ನೂ, ದ್ವಾಪರಯುಗದಲ್ಲಿ ತಾಮ್ರದ್ದನ್ನೂ, ಕಲಿಯುಗದಲ್ಲಿ ಹಿತ್ತಾಳೆಯದನ್ನೂ ಪೂಜಿಸಬೇಕೆನ್ನುವ ಮಾತಿದೆ (4, 8, 314). ಬೌದ್ಧರೂ ಜೈನರೂ ಬಂಗಾರದ ಪ್ರತಿಮೆಗಳನ್ನು ವಿಶೇಷವಾಗಿ ಬಳಸುತ್ತಿದ್ದ ಉಲ್ಲೇಖವಿದೆ. ಹಲವಾರು ಬಂಗಾರದ ತೀರ್ಥಂಕರ ವಿಗ್ರಹಗಳೂ ಬುದ್ಧನ ಮೂರ್ತಿಗಳೂ ದೊರೆತಿವೆ. ಕ್ರಿಸ್ತಾಬ್ದ 500ರ ಸುಮಾರಿಗೆ ಮಾಡಿದ ಬುದ್ಧನ ಬಂಗಾರದ ಪುತ್ಥಳಿಯೊಂದು ಈಗ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿದೆ. ಸಿಂಹಳದ ಧಾತುಗರ್ಭಗಳಲ್ಲಿ (ದಗೋಬಗಳಲ್ಲಿ) ನೂರಾರು ಬಂಗಾರ, ಬೆಳ್ಳಿಯ ಬುದ್ಧಪ್ರತಿಮೆಗಳು ದೊರೆತಿವೆ. ಕಾಶಿಯಲ್ಲಿರುವ ಅನ್ನಪೂರ್ಣಾ ವಿಗ್ರಹ ಬಂಗಾರದ್ದು, ಶನಿಯದು ಬೆಳ್ಳಿಯದು. ಕಬ್ಬಿಣದಲ್ಲಿಯೂ ಮೂರ್ತಿಗಳನ್ನು ಮಾಡುತ್ತಿದ್ದ ಉಲ್ಲೇಖವಿದೆ; ಆದರೆ ಇವು ಅಪುರೂಪ. ಗುಡಿಗಳಲ್ಲಿರುವ ಚಲಬೇರಗಳು ಕಂಚು, ಹಿತ್ತಾಳೆ, ಪಂಚಲೋಹಗಳವೇ ಹೆಚ್ಚು. ಕಾಂಸ್ಯಶಿಲ್ಪವನ್ನು ಕುರಿತ ವಿವರಣೆ ಬೇರೊಂದೆಡೆ ಬರುತ್ತದೆ.

ಶಿಲ್ಪಿಯು ದೇವಾಲಯಕ್ಕೆ ಬೇಕಾಗುವ ಮೂರ್ತಿಯನ್ನು ಮಾಡುವ ಮೊದಲು ಭೂ ಶೋಧನ ಮಾಡಿ, ಯೋಗ್ಯವಾದ ಶಿಲಾಸಂಗ್ರಹವನ್ನು ಮಾಡಿಕೊಂಡು ಶುಭದಿನದಲ್ಲಿ, ಸ್ನಾನಮಾಡಿ, ಮಡಿಯುಟ್ಟು ರೂಪಾಧಿಪತಿಯಾದ ತ್ವಷ್ಟಾರನನ್ನು ಧ್ಯಾನಿಸಿ ಕಡೆಯಲು ತೊಡಗಬೇಕು. ಇದಕ್ಕೆ ಹತ್ತಾರು ವಿಧಿಗಳನ್ನು ಆಗಮ ಹೇಳುತ್ತದೆ. ಶಿಲೆಯಲ್ಲಿ ದೇವತಾಮೂರ್ತಿಯನ್ನು ಕಡೆದನಂತರ ಅದನ್ನು ಗುಡಿಯಲ್ಲಿ ಪ್ರತಿಷ್ಠೆ ಮಾಡುವುದು ತುಂಬ ಸಡಗರದಿಂದ ನಡೆಯುವ ಉತ್ಸವ. ಇದಕ್ಕೆ ಪೂರ್ವಭಾವಿಯಾಗಿ ಯಾಗ ನಡೆಯಬೇಕು; ಮಾಡಿದ ವಿಗ್ರಹವನ್ನು ಜಲಾಧಿವಾಸ, ಕ್ಷೀರಾಧಿವಾಸ, ಧಾನ್ಯಾಧಿವಾಸ ಶಯ್ಯಾಧಿವಾಸ ಮಾಡಿಸಿದನಂತರ (ಎಂದರೆ ವಿಗ್ರಹವನ್ನು ನೀರಿನಲ್ಲಿ, ಹಾಲಿನಲ್ಲಿ, ಭತ್ತದಲ್ಲಿ, ಕೃಷ್ಣಾಜಿನದ ಮೇಲೆ ಮಲಗಿಸಿದ ನಂತರ), ಕಳಶಸ್ಥಾಪನೆ

ಮಾಡಿ ವಾಸ್ತುಹೋಮ, ಗೃಹಯಜ್ಞಗಳನ್ನು ಮುಗಿಸಿ, ದೇವಾಲಯಕ್ಕೆಅಭಿಷೇಕ ಅಥವಾ ಸಂಪ್ರೋಕ್ಷಣೆಯನ್ನು ಮಾಡಿ, ದೇವಾಲಯ ಶುದ್ಧಿಯಾದ ನಂತರ ಪೀಠಬಂಧ ಮಾಡುತ್ತಾರೆ. ಗರ್ಭಗುಡಿಯ ನಡುವೆ ಚತುರಸ್ರವಾಗಿ ಅಗೆಸಿ, ಪಂಚಗವ್ಯ (ಹಸುವಿನಿಂದ ಬಂದ ಐದು ಪದಾರ್ಥಗಳು-ಹಾಲು, ಮೊಸರು, ತುಪ್ಪ, ಗಂಜಳ, ಸಗಣಿ) ದಿಂದ ಪ್ರೋಕ್ಷಿಸಿ, ಗುಂಡಿಯಲ್ಲಿ ಪಂಚಲೋಹಗಳನ್ನಿರಿಸಿ ಮಣ್ಣಿನಿಂದ ಮುಚ್ಚಿ ಆಧಾರಶಿಲೆಯನ್ನಿಳಿಸುತ್ತಾರೆ. ಅನಂತರ ಪ್ರತಿಷ್ಠೆಯಾಗಬೇಕಾಗಿರುವ ಪ್ರತಿಮೆಯನ್ನು ದೇವಾಲಯಕ್ಕೆ ಪ್ರದಕ್ಷಿಣೆಯಾಗಿ ಪೂರ್ವದ ಬಾಗಿಲಿನಿಂದ ತಂದು ಆಧಾರ ಪೀಠದ ಮೇಲಿರಿಸುತ್ತಾರೆ. ದೇವತಾಯಂತ್ರವನ್ನು ಆ ಸಮಯದಲ್ಲಿ ಪೀಠದಲ್ಲಿ ಅಥವಾ ಪೀಠದ ಮುಂಭಾಗದಲ್ಲಿ ಮೂಡಿಸುವುದುಂಟು. ಆಮೇಲೆ ಅಷ್ಟಬಂಧನ, ಪೀಠಬಂಧನ, ನೇತ್ರೋನ್ಮೀಲನ, ತತ್ತ್ವನ್ಯಾಸಾದಿಗಳು ನಡೆದು ಮೂರ್ತಿಗೆ ಜೀವಕಳೆಯನ್ನು ಆವಾಹಿಸುತ್ತಾರೆ. ಮುಂದೆ ಪ್ರಾಣಪ್ರತಿಷ್ಠೆ ನಡೆದು ಕುಂಭಾಭಿಷೇಕದಿಂದ ಉತ್ಸವ ಮುಗಿಯುತ್ತದೆ. ನೇತ್ರೋನ್ಮೀಲನ ಮತ್ತು ಪ್ರಾಣಪ್ರತಿಷ್ಠೆ ಎರಡೂ ಪ್ರತಿಮಾ ಸ್ಥಾಪನೆಯಲ್ಲಿ ತುಂಬ ಮುಖ್ಯವಾದ ಘಟ್ಟಗಳು. ಇಲ್ಲಿ ಮಂತ್ರಗಳೂ ತಂತ್ರಗಳೂ ನಿಷ್ಠೆಯಿಂದ ಸೇರುತ್ತವೆ. ಮಯಶಾಸ್ತ್ರವು

ದೃಷ್ಟಿನಿರ್ಮಾಣ ಕಾಲೇ ಚ ಪ್ರಾಣಸಂಸ್ಥಾಪನೇऽಪಿ ಚ ।
ಮಂತ್ರತಂತ್ರಪ್ರಭಾವಜ್ಞಃ ಕಾರಯೇಚ್ಛಿಲ್ಪಿಕೋತ್ತಮಃ ॥

ಎಂದು ಹೇಳಿರುವುದು ಈ ದೃಷ್ಟಿಯಿಂದಲೇ.

ಹೀಗೆ ಶಿಲ್ಪಿಯು ಸಿದ್ಧಪಡಿಸಿದ ಪ್ರತಿಮೆಗೆ ಪ್ರಾಣಪ್ರತಿಷ್ಠೆಮಾಡದಿದ್ದರೆ ಅದು ಬರಿಯ ಗೊಂಬೆ; ಅದು ಪೂಜಾಯೋಗ್ಯವಾಗಲಾರದು, ಅದನ್ನು ಪೂಜಿಸಿದರೆ ಯಾವ ಪ್ರಯೋಜನವೂ ಇರಲಾರದು. ಆಧಾರ ಪೀಠವನ್ನು ಪ್ರಕೃತಿಯೆಂದೂ ಮೇಲಿಡುವ ಪ್ರತಿಮೆಯನ್ನು ಪುರುಷನೆಂದೂ ಬಗೆದು, ವಿಧ್ಯುಕ್ತವಾಗಿ ಪ್ರತಿಮೆಯನ್ನು ಪೀಠದ ಮೇಲೆ ಪ್ರತಿಷ್ಠೆ ಮಾಡುವುದೇ ಯೋಗವೆಂದು ತಿಳುವಳಿಕೆಯಿದೆ.

ಅರ್ಚಾಮೂರ್ತಿಃ ಸ್ಮೃತಃ ಕೃಷ್ಣಃ ಪಿಂಡಿಕಾ ಕಮಲಾಲಯಾ ।
ತಯೋರ್ಯೋ ವಿಧಿನಾ ಯೋಗಃ ಸಾ ಪ್ರತಿಷ್ಠಾ ಪ್ರಕೀರ್ತಿತಾ ॥
[ಹಯಶೀರ್ಷಪಾಂಚರಾತ್ರ, ವಿಲಾಸ 18]

ಇದರಿಂದಾಗಿ ಪ್ರತಿಮೆಯಲ್ಲಿ ವಿಶೇಷವಾಗಿ ಶಕ್ತಿ ಒದಗಿಬರುವುದೆಂದು ನಂಬಿಕೆ. ಆದರೂ ಪೂಜೆಮಾಡುವಾಗ ಸಾಧಕನ ಸಂಸ್ಕಾರವೂ ಇದಕ್ಕೆ ಪೂರಕವಾಗಬೇಕು. ಪ್ರತಿಮಾ ಪೂಜೆಯನ್ನು ಸಾಧನೆಯ ದಾರಿಯಲ್ಲಿ ಒಂದು ನೆರವು ಎಂದೇ ಹೇಳಿದ್ದಾರೆ. ಜಾಬಾಲೋಪನಿಷತ್ತಿನಲ್ಲಿ

ಅಜ್ಞಾನಾಂ ಭಾವನಾರ್ಥಾಯ ಪ್ರತಿಮಾಃ ಪರಿಕಲ್ಪಿತಾಃ

ಎಂದರೆ ತಿಳುವಳಿಕೆ ಇಲ್ಲದವರ ಮನಸ್ಸನ್ನು ನಿಲ್ಲಿಸಲು ಪ್ರತಿಮೆ ಎಂದು ಹೇಳಿರುವುದನ್ನು ಗಮನಿಸಬೇಕು. ಏಕೆಂದರೆ ದಿಟವಾಗಿ ದೇವತೆ ಇರುವುದು ನಮ್ಮೊಳಗೇ ಅಲ್ಲವೇ? ಯೋಗಿಗಳಾದವರು ದೇವರನ್ನು ತಮ್ಮಲ್ಲಿಯೇ ಕಾಣುತ್ತಾರೆ, ಪ್ರತಿಮೆಯಲ್ಲಲ್ಲ (ಶಿವಮಾತ್ಮನಿ ಪಶ್ಯಂತಿ ಪ್ರತಿಮಾಸು ನ ಯೋಗಿನಃ). ಪ್ರತಿಮೆಯೆನ್ನುವುದು ಬರಿಯ ಒಂದು ಆಸರೆ (ಅಧಿಷ್ಠಾನ) ಅಷ್ಟೆ; ಅದಕ್ಕಿಂತ ಉತ್ಕೃಷ್ಟವಾದುದು ಅದರಲ್ಲಿ ನಾವು ದೇವರನ್ನು ಆರೋಪಮಾಡುವುದು; ದೇವತೆ ಆರೋಪ್ಯ. ಎರಡೂ ಬೇರೆಬೇರೆಯೇ ದಿಟ; ಆದರೆ ಅಧಿಷ್ಠಾನವು ಬೋಧಕವಾದುದರಿಂದಲೇ ಅದು ಪ್ರತೀಕವೆನಿಸಿಕೊಳ್ಳುತ್ತದೆ. ಪ್ರತೀಕೋಪಾಸನೆಯಲ್ಲಿ

ಧ್ಯಾನವು ಪ್ರತೀಕವನ್ನೇ ಅವಲಂಬಿಸಿರುತ್ತದೆಯಲ್ಲವೇ? (ಆಲಂಬನಸ್ಯ ಪ್ರಾಧಾನ್ಯೇನ ಧ್ಯಾನಂ ಪ್ರತೀಕೋಪಾಸ್ತಿಃ). ಹೀಗಿದ್ದರೂ ಪ್ರತೀಕವನ್ನೇ ದೇವತೆಯ ಅಧಿಷ್ಠಾನವೆಂದು ಪೂಜೆಮಾಡುವಾಗಲೂ, ಸಾಧಕನು ಪೂಜೆ ಮಾಡುವಾಗಲಾದರೂ ದೇವತೆಯನ್ನು ತನ್ನೊಳಗೇ ಅಳವಡಿಸಿಕೊಳ್ಳಬೇಕು. ದೇವತೆಯಾಗದವನು ದೇವತೆಯನ್ನು ಪೂಜೆಮಾಡಬಾರದೆನ್ನುವ ನಿಯಮ ಸ್ವಾರಸ್ಯವಾದುದು—

ದೇವೋ ಭೂತ್ವಾ ಯಜೇದ್ದೇವಾನ್
ನಾದೇವೋ ದೇವಮರ್ಚಯೇತ್

ಪ್ರತಿಮೆಯು ಸಾಧಕನಿಗೆ ಈ ಪ್ರಯೋಜನವನ್ನು ಒದಗಿಸಲು ಅದು ಸಾಧ್ಯವಾದಷ್ಟೂ ಸುಂದರವಾಗಿರಬೇಕು, ಪ್ರಭಾವಶಾಲಿಯಾಗಿರಬೇಕು, ಆಕರ್ಷಕವಾಗಿರಬೇಕು; ಹೃದಯವೂ ಮನಸ್ಸೂ ಪ್ರತಿಮೆಯಲ್ಲಿ ಬೇರೂರುವಂತಿರಬೇಕು. ಈ ಕಾರಣದಿಂದಲೇ ಶಿಲ್ಪಿಗೆ ಆಗಮಶಾಸ್ತ್ರವು ನಿರ್ಬಂಧಗಳನ್ನು ಬೇಕಾದಷ್ಟು ಹೇಳಿದೆ.

ಗುಣದೋಷೌ ಚ ವಿಜ್ಞಾಯ ಶಿಲ್ಪೀ ಕುರ್ವೀತ ಬುದ್ಧಿಮಾನ್
ಅನ್ಯಥಾ ಯದಿ ಕುರ್ವೀತ ಕರ್ತಾ ಭರ್ತಾ ವಿನಶ್ಯತಿ ॥

ಇದು ಮಯಶಾಸ್ತ್ರದಲ್ಲಿ ಬರುವ ಮಾತು. ಪ್ರತಿಮೆಯಲ್ಲಿ ಯಾವುದು ಗುಣ, ಯಾವುದು ದೋಷ ಎನ್ನುವುದನ್ನು ಬುದ್ಧಿವಂತನಾದವನು ತಿಳಿದು ಮಾಡಬೇಕು; ಇಲ್ಲವಾದರೆ ಮಾಡಿದವನೂ ಕೆಡುತ್ತಾನೆ, ಮಾಡಿಸಿದ ಒಡೆಯನೂ ಕೆಡುತ್ತಾನೆ. ಶಿಲ್ಪಿಯ ಕೆಲಸ ಇಷ್ಟು ಪ್ರಭಾವಶಾಲಿಯಾಗಬೇಕಾದರೆ ಅವನ ಸಂಸ್ಕಾರದ ಹಿರಿಮೆ ಎಷ್ಟಿರಬೇಕು? ಹಾಗಿಲ್ಲದೆ ಶಾಸ್ತ್ರದಲ್ಲಿ 'ಶಿಲ್ಪಿಯನ್ನೇ ಮೊದಲು ಪೂಜಿಸಬೇಕು' (ಶಿಲ್ಪಿನಂ ಪೂಜಯೇತ್ ಪೂರ್ವಂ) ಎಂದು ಹೇಳುತ್ತಿದ್ದರೆ?

ಪ್ರತಿಮಾ ಲಕ್ಷಣ

ಪಿಂಡೀಕರಣ

ನಮ್ಮ ದೇಶದ ದೇವತಾ ಮೂರ್ತಿಯಲ್ಲಿ ಎದ್ದುಕಾಣುವ ವಿವರವೆಂದರೆ ಅವುಗಳ ಅಪ್ರಾಕೃತ ಮತ್ತು ಅಸ್ವಾಭಾವಿಕ ಸ್ವರೂಪ. ಪ್ರಾಣಿಯ ತಲೆ, ಮನುಷ್ಯನ ಮೈ, ಅನೇಕ ಕೈಗಳು, ಹಲವಾರು ತಲೆಗಳು; ಚಿತ್ರವಿಚಿತ್ರ-ಭಂಗಿಗಳು; ಅಸಂಗತವೆನಿಸುವ ವಾಹನಗಳು, ಅರ್ಥವಿಲ್ಲದ ಆಯುಧಗಳು, ಅತಿರೇಕ ಆಭರಣಗಳು, ವಿಕಾರ ರೂಪಗಳು ಇವೆಲ್ಲವನ್ನೂ ನಮ್ಮ ಪ್ರತಿಮೆಗಳಲ್ಲಿ ಕಾಣಬಹುದು. ಇದನ್ನು ಕಂಡು ಬೆರಗಾದ, ಹೇಸಿದ ಪರದೇಶದ ಪಂಡಿತರಿದ್ದಾರೆ, ನಾಚಿಕೊಂಡ ದೇಶೀಯರಿದ್ದಾರೆ. ಇದನ್ನು ಕಲೆಯ ಅತಿಮಾರ್ಗ ಪ್ರವೃತ್ತಿ ಎನ್ನುವುದೇ? ಧಾರ್ಮಿಕ ಮನೋವೃತ್ತಿಯ ಅಭಿವ್ಯಕ್ತಿ ಎನ್ನುವುದೇ? ಬರಿಯ ಆಭಾಸವಾಗಿದ್ದರೆ, ಏನೊಂದೂ ಅರ್ಥವಾಗಲೀ ಪ್ರಯೋಜನವಾಗಲೀ ಇಲ್ಲದಿದ್ದರೆ ಈ ಪ್ರತಿಮಾಪದ್ಧತಿ ಇಷ್ಟುಕಾಲ ಉಳಿಯುತ್ತಿತ್ತೇ?

ಇಂಥ ವಿಚಿತ್ರ ಚಿತ್ರಣ ಹೊಸದೇನು ಅಲ್ಲ. ಮೊಹೆನ್‌ಜೊದಾರೋ ಮತ್ತು ಹರಪ್ಪಾಗಳಲ್ಲಿ ದೊರೆತ ಸೈಂಧವ ಮುದ್ರೆಗಳಲ್ಲೇ ಮೂರುತಲೆಯ ಪಶುಪತಿ, ಪಶು–ಮನುಷ್ಯರ ದೇಹಗಳ ಸಂಯೋಗ, ಮರ – ಮನುಷ್ಯರ ಮೂರ್ತಿಗಳು ಇವನ್ನು ಕಾಣಬಹುದು. ವೈದಿಕ ಸಾಹಿತ್ಯದಲ್ಲಿ ಅಗ್ನಿಗೆ ಎರಡು ತಲೆ, ನಾಲ್ಕು ಕೊಂಬು, ಮೂರುಕಾಲು, ಏಳು ಕೈ! ಆಗಿನಿಂದಲೂ ಈ ಪ್ರವೃತ್ತಿ ಇದ್ದೇ ಇದೆ. ಇದರ ಸ್ವಾರಸ್ಯ ವೇನು? ಹಲವಾರು ಊಹೆಗಳೂ ಅನುಮಾನಗಳೂ ಬೆಳಕಿಗೆ ಬಂದಿವೆ. ನೂರಾರು ದೇವತೆಗಳನ್ನು

ಸಮಪಾಗಿಯೋ ನಂಬಿದ್ದ, ನಂಬುವ, ಜನ ನಮ್ಮ ನಡುವೆ ಹೆಚ್ಚು ಮಂದಿ ಇದ್ದಾರಲ್ಲವೇ? ಆದರೆ ವ್ಯವಹಾರದಲ್ಲಿ ಇಷ್ಟೂ ದೇವತೆಗಳನ್ನು ಒಟ್ಟಿಗೆ ಇಟ್ಟುಕೊಳ್ಳುವುದು ಕಷ್ಟ. ಹೀಗಾಗಿ ಕೆಲವೇ ದೇವತೆಗಳು ಉಳಿದುಕೊಂಡುದು ಸಹಜವೇ. ನಂಬಿಕೆಗೆ ಸಾವಿರಾರು ದೇವತೆಗಳು,-ಪೂಜೆಗೆ ಕೆಲವೇ ದೇವತೆಗಳು. ಆದರೆ ಈ ಕೆಲವು ದೇವತೆಗಳನ್ನು ಪೂಜಿಸುವಾಗ ಉಳಿದೆಲ್ಲ ದೇವತೆಗಳ ನಿರಾಕರಣವಿಲ್ಲ. ತಾರತಮ್ಯದ ಭಾವನೆಯೇನೋ ಅಲ್ಲಲ್ಲಿ, ಆಗಾಗ ಬಂದಿದೆ. ಆದರೆ ಎಲ್ಲವನ್ನೂ ಉಳಿಸಿಕೊಂಡು ಹೋಗುವ ಮನೋಧರ್ಮ ನಮ್ಮದು. ಹೀಗಾಗಿ ಕೆಲವು ದೇವತೆಗಳನ್ನು ಪೂಜಿಸುವಾಗ ನಮ್ಮ ಕಲ್ಪನೆಯ ಎಲ್ಲ ದೇವತೆಗಳ ಸಮಾವೇಶವೂ ಅಲ್ಲಿರಬೇಕೆಂಬ ಹಂಬಲ ಇರುವುದು ಸಹಜವೇ. ಒಂದೊಂದು ದೇವತೆಯೂ ಹಲವಾರು ದೇವತೆಗಳ ಪಿಂಡೀಕರಣ. ಈ ದೇವತೆಯಲ್ಲಿ ಉಳಿದ ಎಲ್ಲ ದೇವತೆಗಳೂ ಸೇರಿಬರುತ್ತಾರೆ. ಸೇರ್ಪಡೆ ಸಾಂಕೇತಿಕವಾದುದು.

ದೇವತೆಗಳು ಬೆಳೆದುಬಂದ ದಾರಿಯೇ ಇದನ್ನು ಸ್ಪಷ್ಟಪಡಿಸುತ್ತದೆ. ಹಲವಾರು ವಿನಾಯಕರು ಕಲೆತು ಒಬ್ಬ ವಿನಾಯಕ ಗಣಪತಿಗೆ ಎಡೆಮಾಡಿಕೊಟ್ಟರು. ಹತ್ತಾರು ಯಕ್ಷರೂ ರುದ್ರರೂ ಸೇರಿ ಒಬ್ಬ ಶಿವನಾದ. ಸಾವಿರಾರು ತಾಯಿ–ಚೈತನ್ಯಗಳು ಕೂಡಿಕೊಂಡು ಒಬ್ಬಳು ಮಾತೃಶಕ್ತಿಯಾದಳು. ಈ ಪ್ರವೃತ್ತಿಯು ವೇದ ಯುಗದಿಂದಲೂ ಬೆಳೆದು ಬಂದಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ವಿದಗ್ಧ ಶಾಕಲ್ಯನು ಯಾಜ್ಞವಲ್ಕ್ಯನನ್ನು ಕುರಿತು "ದೇವತೆಗಳೆಷ್ಟು ಮಂದಿ?" ಎಂದು ಕೇಳಿದಾಗ "ಶಾಸ್ತ್ರಗ್ರಂಥಗಳಲ್ಲಿ ಎಣಿಕೆ (ನಿವಿದಾ) ಎಷ್ಟೋ ಅಷ್ಟು" ಎಂದು ಉತ್ತರ ಬಂದಿತು (ಅಧ್ಯಾಯ 3, ಬ್ರಾಹ್ಮಣ 9, 1). ಎಣಿಕೆ ಎಷ್ಟು ಎಂದಾಗ 3306 ಎಂದು ಯಾಜ್ಞವಲ್ಕ್ಯ ಹೇಳಿ ದೇವತೆಗಳು ಆರು, ಮೂರು, ಎರಡು, ಒಂದೂವರೆ, ಒಂದು ಎಂದೂ ಸೇರಿಸಿದ. ಮೂರುಸಾವಿರದ ಮುನ್ನೂರು ಆರು ದೇವತೆಗಳನ್ನು ಎಣಿಸಿದರೂ ಮೂವತ್ತುಮೂರು ದೇವತೆಗಳದ್ದೇ ಪ್ರಸ್ತಾಪ ಉಳಿಯಿತು. (ಎಂಟು ವಸುಗಳು, ಹನ್ನೊಂದು ರುದ್ರರು, ಹನ್ನೆರಡು ಆದಿತ್ಯರು, ಇಂದ್ರನೊಬ್ಬ, ಪ್ರಜಾಪತಿಯಿನ್ನೊಬ್ಬ). ಕಡೆಗೆ ಈ ಮೂವತ್ತುಮೂರು ದೇವತೆಗಳೂ ಸ್ಕಂಭದಲ್ಲಿ ಅಡಗಿಹೋದರಲ್ಲವೆ? ಗಾಲಿಯಲ್ಲಿ ಅರಗಳು ಸೇರಿದಂತೆ ದೇವತೆಗಳು ಈ ಸ್ಕಂಭದಲ್ಲಿ ಸೇರಿದರು ('ಅರಾಃ ನಾಭೌ ಇವ ಶ್ರಿತಾಃ', ಅಥರ್ವವೇದ 10, 8, 34). ದಾರದಲ್ಲಿ ಎಲ್ಲರನ್ನೂ ಪೋಣಿಸಿದಂತಾದರು ('ಸೂತ್ರಂ ವಿತತಂ ಯಸ್ಮಿನ್ ಓತಾಃ'). 'ಏಕಂ ಸತ್, ವಿಪ್ರಾ ಬಹುಧಾ ವದಂತಿ' ಎನ್ನುವ ಅಭಿಪ್ರಾಯವೂ ರೂಢಮೂಲವಾಯಿತಲ್ಲವೇ? ಇದು ವಾಸ್ತವವಾಗಿ ಬೆಳೆದು ಬಂದ ದಾರಿ. ಹಗಲಿನ ಬೇರೆ ಬೇರೆ ಕಾಲಗಳಿಗೇ ಹಲವಾರು ದೇವತೆಗಳಿದ್ದು (ಮಿತ್ರ, ಅರ್ಯಮನ್, ಭಗ, ತ್ವಷ್ಟೃ, ಪೂಷನ್, ವಿವಸ್ವತ್, ಸೂರ್ಯ, ಸವಿತೃ, ವಿಷ್ಣು) ಕಡೆಗೆ ಅವರೆಲ್ಲ ಸೂರ್ಯನಲ್ಲಿ ಬೆರೆತುಹೋದರು. ಉಳಿದುಕೊಂಡವನು ಸೂರ್ಯನೊಬ್ಬನೇ, ಅವನಿಗೇ ಈ ಹೆಸರುಗಳೆಲ್ಲ ಪರ್ಯಾಯವಾಚಿಗಳಾದುವು. ಶತಪಥ ಬ್ರಾಹ್ಮಣದಲ್ಲಿ ಒಂದು ವಿವೇಚನೆ ಬರುತ್ತದೆ (11, 3, 3, 1): ಬ್ರಹ್ಮನಿಗೆ ಎರಡು ದೊಡ್ಡ ವಿಭಾಗಗಳು (ಬ್ರಹ್ಮಣೋ ಮಹತೀ ಅಭ್ವೇ), ಹೆಸರು (ನಾಮ) ಮತ್ತು ಆಕಾರ (ರೂಪ) ಎಂದು. ಹೆಸರಿಗಿಂತಲೂ ಆಕಾರ ದೊಡ್ಡದು, ಎಂದರೆ ಮುಖ್ಯವಾದುದು (ತಯೋಃ ಅನ್ಯತರಜ್ಜ್ಯಾಯೋ, ರೂಪಂ ಏವ ತತ್). ಆಕಾರದಲ್ಲಿ ಹಲವಾರು ಅಂಶಗಳನ್ನು ಸೇರಿಸಿ, ಸಾಧಾರಣೀಕರಣಮಾಡುವುದು ತಿಳುವಳಿಕೆಯ, ನಿರೂಪಣೆಯ ದೃಷ್ಟಿಯಿಂದ ಅವಶ್ಯವಾಗುತ್ತದೆ. ನೂರು ವಿವರಗಳು ಹತ್ತು ವಿವರಗಳಲ್ಲಿ ಸೇರದಿದ್ದರೆ, ಹತ್ತು ವಿವರಗಳು ಎರಡು – ಮೂರು ವಿವರಗಳಲ್ಲಿ ಅಡಗದಿದ್ದರೆ ವ್ಯವಹಾರ ನಡೆಯುವುದು ಹೇಗೆ? ಬುದ್ಧಿ ಭ್ರಮಿಸಿ ಹೋಗುವುದಿಲ್ಲವೆ? ಜ್ಞಾನ ಮುಂದರಿಯುವುದು ಹೇಗೆ? ಆಕೃತಿಸಾಮ್ಯದಿಂದಲೂ ವ್ಯಾಪಾರಸಾದೃಶ್ಯದಿಂದಲೂ ಪಿಂಡೀಕರಣ ಸಾಧ್ಯವಾಯಿತು.

ಒಂದೊಂದು ಊರಿನಲ್ಲಿಯೂ ಹಲವಾರು ದೇವತೆಗಳಿದ್ದರೂ, ಮನೆಮನೆಗೆ ಬೇರೆ ಬೇರೆ ದೇವರುಗಳಿದ್ದರೂ ಊರಿಗೊಂದು ಗ್ರಾಮದೇವತೆಯಾಯಿತು; ಒಬ್ಬೊಬ್ಬರಿಗೂ ವಿಶಿಷ್ಟವಾದ ಇಷ್ಟ ದೈವವಿದ್ದರೂ ಮನೆಗೆ ಸೇರಿದವರಿಗೆಲ್ಲ ಒಂದು ಕುಲದೇವತೆಯಾಯಿತು. ಇದು ಸಹಜವಾಗಿಯೇ ನಡೆದ ಮಾರ್ಪಾಟು. ಇದರಲ್ಲಿ ಯಾವ ಸುಧಾರಕನ ನೆರವೂ ಬೇಕಾಗಿರಲಿಲ್ಲ, ಯಾವ ವಿಚಾರ ಕ್ರಾಂತಿಯ ಅಗತ್ಯವೂ ಇರಲಿಲ್ಲ.

ಶಿಲ್ಪದಲ್ಲಂತೂ ಇದರ ಅಗತ್ಯ ಹೆಚ್ಚಾಗಿಯೇ ಇದ್ದಿತು. ಮನಸ್ಸಿನಲ್ಲಿ ಹೆಸರಿಗೊಂದು ಆಕಾರವನ್ನು ಕಲ್ಪಿಸಿಕೊಳ್ಳಬಹುದು; ಆದರೆ ಕೈಯಿಂದ ಅದನ್ನು ಮಾಡಿಡುವುದು ಕಷ್ಟ. ಭಾವನೆಯಲ್ಲಿ ಎಷ್ಟೋ ದೇವತಾಮೂರ್ತಿಗಳಿರಬಹುದು, ಶಿಲ್ಪದಲ್ಲಿ ಇಳಿಯುವುವು ಮಾತ್ರ ಕೆಲವೇ. ಬರಿಯ ಕಲ್ಲುಗುಂಡುಗಳನ್ನೇ, ಬಂಡೆಗಳನ್ನೇ ಪೂಜೆಮಾಡುವುದಾದರೆ ಈ ತೊಂದರೆಯಿಲ್ಲ. ಆಕಾರಕ್ಕೆ ಅರ್ಥವನ್ನೂ ಭಾವವನ್ನೂ ಚೆಲುವನ್ನೂ ಸೇರಿಸಬೇಕೆಂದರೆ ಸುಲಭವಲ್ಲ. ಕೈಕೆಲಸಕ್ಕೆ ಮಿತಿಯಿಲ್ಲವೇ? ಕಲೆಗೊಂದು ಖಚಿತವಾದ ಚೌಕಟ್ಟು ಇರಬೇಡವೇ? ಶಿಲ್ಪಕಲೆಯೂ ಶಿಲ್ಪಶಾಸ್ತ್ರವೂ ಮೈದಳೆದು ಬೆಳೆಯತೊಡಗಿದಾಗ ದೇವತೆಗಳ ಸಂಖ್ಯೆ ಕಡಿಮೆಯಾಗಬೇಕಾಯಿತು; ಉಳಿದುಕೊಂಡ ದೇವತೆಗಳ ಸ್ವರೂಪ ನಿರ್ದಿಷ್ಟವಾಗಬೇಕಾಯಿತು. ಹೀಗೆ ಮಾಡುವಾಗ ಸಹಜವಾಗಿಯೇ ನೂರಾರು ದೇವತೆಗಳ ವೈಯಕ್ತಿಕ ಗುಣಧರ್ಮಗಳು ಕೆಲವು 'ಪ್ರತಿಮೆ' (ಮಾಡಲ್) ಗಳಲ್ಲಿ ಅಡಗಬೇಕಾಯಿತು.

ಸೃಷ್ಟಿಗೆ, ಸ್ಥಿತಿಗೆ, ಸಂಹಾರಕ್ಕೆ ಮೂವರು ದೇವತೆಗಳೆಂದೂ ಬ್ರಹ್ಮ, ವಿಷ್ಣು, ರುದ್ರರು ಒಂದು ಕಾಲಕ್ಕೆ ಕಾಣಿಸಿಕೊಂಡರಷ್ಟೆ. ಈ ತ್ರಿಮೂರ್ತಿಗಳಿಗೂ ಬೇರೆ ಬೇರೆ ಆಕಾರಗಳಿವೆ. ಆದರೆ ಮೂರನ್ನೂ ಸೇರಿಸುವ ಪ್ರವೃತ್ತಿ ಕೆಲಸಮಾಡಿತು, ಎಲಿಫೆಂಟಾ ಗುಹಾಂತರ್ದೇವಾಲಯದ ತ್ರಿಶೀರ್ಷ ಮಹಾದೇವನ ಸುಂದರಶಿಲ್ಪ ಮೈದುಂಬಿ ಬಂದಿತು, (ಚಿತ್ರ 35). ದೇಶದಲ್ಲಿ ತ್ರಿಮೂರ್ತಿಗಳ ಸಂಯುಕ್ತ ಶಿಲ್ಪಗಳು ಹಲವಾರಿವೆ.

ಚಿತ್ರ 35
ಎಲಿಫೆಂಟಾ ಗುಹಾಂತರ್ದೇವಾಲಯದಲ್ಲಿರುವ
ತ್ರಿಶೀರ್ಷ ಮಹಾದೇವನ ಅದ್ಭುತ ಶಿಲ್ಪ



ಚಿತ್ರ 36
ಕಂಬೋಡಿಯದಲ್ಲಿ
ದೊರೆತ ಹರಿಹರ
ಮೂರ್ತಿ
(ಆರನೆಯ
ಶತಮಾನವು)

ತ್ರಿಮೂರ್ತಿಗಳೂ ಕಲೆತು ಏಕಪಾದಮೂರ್ತಿಯಾಗಿರುವುದೂ ಉಂಟು. ಹಾಗೆಯೇ ಶಿವ – ವಿಷ್ಣು ಇವರು ಸೇರಿದ ಹರಿಹರ (ಶಂಕರನಾರಾಯಣ) (ಚಿತ್ರ 36, 37) ಶಿವ–ಪಾರ್ವತಿಯರು ಸೇರಿದ ಅರ್ಧನಾರೀಶ್ವರ (ಚಿತ್ರ 38, 39), ಸೂರ್ಯ–ವಿಷ್ಣು ಸೇರಿದ ಸೂರ್ಯನಾರಾಯಣ, ಬುದ್ಧ–ಗಣಪತಿ ಸೇರಿದ ಬುದ್ಧಗಣಪತಿ ಇವೆಲ್ಲ ಇದೇ ಪ್ರವೃತ್ತಿಯ ಅಭಿವ್ಯಕ್ತಿಗಳು. ಈ ನಿದರ್ಶನಗಳು ಮುಂದಿನ ಒಂದು ಯುಗಕ್ಕೆ ಸೇರಿದುವು. ತ್ರಿಮೂರ್ತಿಗಳು ಮೈದಳೆಯುವ ವೇಳೆಗೇ ಈ ಪ್ರವೃತ್ತಿ ಎಷ್ಟು ಕೆಲಸ ಮಾಡಿರಬಹುದೋ ಊಹಿಸಿಕೊಳ್ಳಬಹುದು.

ಆಕಾರಗಳನ್ನು ಸೇರಿಸುವ, ಕಲೆಸುವ, ಜೋಡಿಸುವ ಪದ್ಧತಿ ಭಾರತೀಯ ಶಿಲ್ಪದಲ್ಲಿ ತುಂಬ ಹಳೆಯದು; ಸೈಂಧವ ಸಂಸ್ಕೃತಿಯಲ್ಲಿಯೇ ಇದ್ದಿತು. ನಾಗ–ವೃಕ್ಷ, ವೃಕ್ಷ–ಯಕ್ಷಿ, ನಾಗ–ನರ, ನರ–ಸಿಂಹ, ಶರಭ (ಹುಲಿ–ಆನೆ), ಕುಕ್ಕುಟಸರ್ಪ (ಹುಂಜ–ಹಾವು) ಕಿಂನರ (ಮನುಷ್ಯ–ಹಂಸ), ಗಜಮುಖ (ಆನೆ–ಮನುಷ್ಯ), ನಂದಿ (ಮನುಷ್ಯ–ಬಸವ), ಗರುಡ (ಪಕ್ಷಿ–ಮನುಷ್ಯ) ಇವೇ ಮೊದಲಾದುವು ಎಲ್ಲರಿಗೂ ತಿಳಿದಿವೆಯಷ್ಟೆ. ಇದೇ ಪ್ರವೃತ್ತಿ ಆಯುಧಗಳಲ್ಲಿಯೂ ಅಲಂಕರಣಗಳಲ್ಲಿಯೂ ಕಾಣಸಿಗುತ್ತದೆ. ವಜ್ರಘಂಟೆ (ಚಿತ್ರ 40), ತ್ರಿಶೂಲ–ಘಂಟೆ, ಶೂಲ–ಪರಶು, ಪರಶು–ಅಂಕುಶ, ದಂಡ-ಶೂಲ, ದಂಡ–ಪಾಶ ಮೊದಲಾದುವು ಸಂಯುಕ್ತಾಯುಧಗಳು; ಜಟಾಮುಕುಟ, ಶಿರಶ್ಚಕ್ರ, ಮಕರಕುಂಡಲ, ಪತ್ರಕುಂಡಲ, ಸರ್ಪಯಜ್ಞೋಪವೀತ, ನಾಗೋದರಬಂಧ ಮೊದಲಾದುವು ಸಂಯುಕ್ತಾಭರಣಗಳು. ಬ್ರಹ್ಮನ ಸ್ರುಕ್ಕು, ಶಿವನ ಶಕ್ತಿ (ಶೂಲ), ಮತ್ತು ವಿಷ್ಣುವಿನ ಗದೆ ಒಂದೇ ಆಕಾರವನ್ನು ತಳೆದುದು, ವರದಮುದ್ರೆಯಲ್ಲಿ ಪುಸ್ತಕವನ್ನೂ ಅಭಯ ಅಥವಾ ವ್ಯಾಖ್ಯಾನ ಮುದ್ರೆಯಲ್ಲಿ ಅಕ್ಷಮಾಲೆಯನ್ನೂ ಸೇರಿಸಿದುದು, ಗಣಪತಿಯ ಬಲಗೈಯಲ್ಲಿರುವ ಭಗ್ನದಂತ, ಮೋದಕ, ಮೂಲಂಗಿ ಒಂದೇ ಆಕಾರವನ್ನು ತಳೆದುದು ಇದೇ ನೆಲೆಯಲ್ಲಿಯೇ.

ಚಿತ್ರ 37
ಹರಿಹರದಲ್ಲಿರುವ
ಹರಿಹರೇಶ್ವರ



ಚಿತ್ರ 38
ಸಾರ್ಧನಾರೀಮೂರ್ತಿ (ಅರ್ಧನಾರೀಶ್ವರ)
ದಕ್ಷಿಣದೇಶದ ಶಿಲ್ಪ

ಚಿತ್ರ 39
ಅರ್ಧನಾರೀಶ್ವರ – ಮಧ್ಯಭಾರತದ ಶಿಲ್ಪ
ಹನ್ನೊಂದನೆಯ ಶತಮಾನದ ಕೃತಿ

ಚಿತ್ರ 40
ಸಂಯುಕ್ತ ಉಪಕರಣಗಳು
ತ್ರಿಶೂಲ ಘಂಟೆ ಮತ್ತು ವಜ್ರ ಘಂಟೆ

ನರ-ಸಿಂಹ

ದ್ವಾದಶಾದಿತ್ಯರು ಒಬ್ಬ ಸೂರ್ಯನಲ್ಲಿ, ಏಕಾದಶರುದ್ರರು ಒಬ್ಬ ಶಿವನಲ್ಲಿ, ಚತುರ್ವಿಂಶತಿ ವ್ಯೂಹಮೂರ್ತಿಗಳು ಒಬ್ಬ ವಿಷ್ಣುವಿನಲ್ಲಿ ಕೊನೆಗೊಂಡರು; ಜೈನರ ಚತುರ್ವಿಂಶತಿ (ಚೌವೀಸ) ತೀರ್ಥಂಕರರು ಒಬ್ಬ ಜಿನನಲ್ಲಿ ಅಡಗಿದರು; ವಿಷ್ಣುವಿನ ದಶಾವತಾರಗಳು ಪ್ರಭಾವಳಿಯಲ್ಲಿ ಸೇರಿಕೊಂಡು ಬಂದುವು; ನವಗ್ರಹಗಳು ಒಂದೆಡೆ ಕಲೆತರು; ಅಷ್ಟದಿಕ್ಪಾಲಕರು ನವರಂಗದಲ್ಲಿ ಒಂದೇ ಫಲಕದಲ್ಲಿ ಮೂಡಿಕೊಂಡುಬಂದರು, ಒಂದೇ ಲಿಂಗದ ಕೆಳಭಾಗ ಬ್ರಹ್ಮಭಾಗವಾಯಿತು, ನಡುವಣ ಭಾಗ ವಿಷ್ಣುಭಾಗವಾಯಿತು, ಮೇಲ್ಭಾಗ ರುದ್ರಭಾಗವಾಯಿತು; ಲಕ್ಷ್ಮಿ ವಿಷ್ಣುವಿನ ವಕ್ಷಃಸ್ಥಳದಲ್ಲಿಯೇ ಅಡಗಿಹೋದಳು.

'ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ', 'ಏಕೋ ದೇವಃ ಕೇಶವೋ ವಾ ಶಿವೋ ವಾ', ಮೊದಲಾದ ಕಲ್ಪನೆಗಳು ಜನರ ಭಾವನೆಯಲ್ಲಿ ಮಾತ್ರವಲ್ಲದೆ ಶಿಲ್ಪದಲ್ಲಿಯೂ ಒದಗಿಬಂದುವು. ಪಿಂಡೀ ಕರಣದ ಪ್ರವೃತ್ತಿ ಅನಿವಾರ್ಯವಾಗಿ ಎಲ್ಲೆಲ್ಲಿಯೂ ಪಸರಿಸಿತು.

ದೇವಶಿಲ್ಪ-ಭಾವಶಿಲ್ಪ

ಶಿಲ್ಪಶಾಸ್ತ್ರದಲ್ಲಿ ಪ್ರತಿಮೆಗಿಂತಲೂ ಪ್ರಮುಖವಾದುದು ಧ್ಯಾನಶ್ಲೋಕ. ಯಾವುದಾದರೊಂದು ದೇವತೆಯನ್ನು ಕುರಿತು ಸಿದ್ಧವಾದ ಈ ಶ್ಲೋಕದಲ್ಲಿ ದೇವತೆಯ ರೂಪದ ನಿರ್ದೇಶನವಿರುತ್ತದೆ; ಭಂಗಿಯ, ಆಯುಧಗಳ ವಿವರವೂ ಇರುತ್ತದೆ. ಈ ಧ್ಯಾನಶ್ಲೋಕ ಶಿಲ್ಪಿಗೂ ಮುಖ್ಯ, ಭಕ್ತನಿಗೂ ಮುಖ್ಯ. ಶಿಲ್ಪಿಯಾದವನು ಪಡೆಯುವ ಶಿಕ್ಷಣದಲ್ಲಿ ಪ್ರತಿಮಾಲಕ್ಷಣವನ್ನು ಅಗತ್ಯವೆಂದು ಪರಿಗಣಿಸುತ್ತಾರೆ. ಶಿಲ್ಪಶಾಸ್ತ್ರಗಳಲ್ಲಿ ಹಲವಾರು, ವಾಸ್ತುವಿದ್ಯೆಯಲ್ಲಿ ಕೆಲವು, ಆಗಮಗಳಿಂದ ಒಂದೆರಡು ಗ್ರಂಥಗಳು ಶಿಲ್ಪಿಗೆ ತಿಳಿದಿರಬೇಕೆಂಬ ನಿರೀಕ್ಷೆಯಿದ್ದರೂ, ಬಹುಮಟ್ಟಿಗೆ ಶಿಲ್ಪವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ಶಿಕ್ಷಣ ದೊರೆಯುವುದಿಲ್ಲ; ಅದಕ್ಕೆ ಬೇಕಾಗುವಷ್ಟು ಸಂಸ್ಕೃತ ಜ್ಞಾನವೂ ಇರುವುದಿಲ್ಲ. ಆದರೆ ಹಲವಾರು ಬೇರೆ ಬೇರೆ ಮೂರ್ತಿಗಳ ಧ್ಯಾನ ಶ್ಲೋಕಗಳನ್ನು ಬಾಯಿಪಾಠ ಮಾಡಿಸುವುದುಂಟು. ಅವರ ಪಾಲಿಗೆ ಇವು ನಿರ್ದೇಶಕ ಸೂತ್ರಗಳಿದ್ದಂತೆ. ಶಿಲ್ಪಿಯಾಗತಕ್ಕವನು ದೇವಾಲಯಗಳಿಗೆ ಹೋಗಿ ಮೂರ್ತಿಗಳನ್ನು ಪರಿಶೀಲನೆ ಮಾಡುತ್ತಾನೆ, ದಿಟ; ಆದರೆ ಅದಕ್ಕಿಂತ ಹೆಚ್ಚಾಗಿ ಧ್ಯಾನಶ್ಲೋಕಗಳನ್ನು ಮನನಮಾಡುತ್ತಾನೆ. ಧ್ಯಾನ ಶ್ಲೋಕದಲ್ಲಿ ಬರುವ ಮೂರ್ತಿಯ ವರ್ಣನೆ, ಪೂಜೆಯಿಂದ ಒದಗುವ ತಾತ್ವಿಕ ಪ್ರಯೋಜನ, ಫಲ ಇವೆಲ್ಲವನ್ನೂ ಅವನು ನೆನಪಿನಲ್ಲಿರಿಸಿಕೊಳ್ಳಬೇಕು. ಶಿಲ್ಪಿಯು ಯಾವುದಾದರೊಂದು ಮೂರ್ತಿಯನ್ನು ಸಿದ್ಧಪಡಿಸಬೇಕೆಂದು ತೊಡಗಿದಾಗ, ಧ್ಯಾನ ಶ್ಲೋಕದ ಅಗತ್ಯ ಸ್ಪಷ್ಟವಾಗಿ ಕಂಡುಬರುತ್ತದೆ.

ಶಾಸ್ತ್ರಗಳಲ್ಲಿ ಸೂಚಿಸಿರುವ ವಿಧಾನ ಸ್ವಾರಸ್ಯವಾದುದು. ಪ್ರಾಚೀನ ಪರಂಪರೆಗೆ ಸೇರಿದ ಶಿಲ್ಪಿಗಳು ಈಗಲೂ ಈ ಕ್ರಮವನ್ನು ಅನುಸರಿಸುತ್ತಾರೆಂದು ಕೇಳಿದ್ದೇನೆ. ಆದರೆ ಈ ಕಾಲದಲ್ಲಿ ಇದು ವಿರಳವಾದ ಪ್ರಯೋಗವೆಂದು ಒಪ್ಪಿಕೊಳ್ಳಬೇಕು. ಶಿಲ್ಪಿಯು ತಾನು ಯಾವ ಮೂರ್ತಿಯನ್ನು ನಿರ್ಮಾಣ ಮಾಡಬೇಕೋ ಆ ಮೂರ್ತಿಗೆ ಸಂಬಂಧಿಸಿದ ಧ್ಯಾನಶ್ಲೋಕವನ್ನು ವಿಧ್ಯುಕ್ತವಾಗಿ ಪಠಿಸುತ್ತ, ಆ ದೇವತೆಗೆ ವಿಶಿಷ್ಟವಾದ ಮಂತ್ರವನ್ನು ಪುರಶ್ಚರಣೆ ಮಾಡುತ್ತಿದ್ದಂತೆ ಮನಸ್ಸಿನಲ್ಲಿ ಆ ದೇವತಾಮೂರ್ತಿ ಕ್ರಮಕ್ರಮವಾಗಿ ಮೈದಳೆಯುತ್ತದೆ. ಇದನ್ನೇ ಮಂತ್ರಮೂರ್ತಿಯೆಂದು ಕರೆಯುವುದು. ಧ್ಯಾನದಿಂದಲೇ ಈ ರೂಪವನ್ನು ಶಿಲ್ಪಿಗಳು ಕಾಣುತ್ತಾರೆ (ಧ್ಯಾನೇನೈವ ಪಶ್ಯಂತಿ ತದ್ರೂಪಂ); ಹೀಗೆ ಶಿಲ್ಪಿಯು ತನ್ನೊಳಗೆ ಸ್ಫುಟವಾಗಿ ಕಂಡ ಆಕಾರವನ್ನೇ

ಮರದಲ್ಲೋ ಕಲ್ಲಿನಲ್ಲೋ ಕಡೆಯುತ್ತಾನೆ, ಮೇಣದಲ್ಲಿ ಮಾಡುತ್ತಾನೆ, ಅನಂತರ ಲೋಹದಲ್ಲಿ ಎರಕ ಹುಯ್ಯು ತ್ತಾನೆ. ನಿದರ್ಶನಕ್ಕೆ ಗಣಪತಿಯ ಮೂರ್ತಿಧ್ಯಾನ ಇದು—

ನಾಗಾನನಂ ಚತುರ್ಬಾಹುಂ ತ್ರಿನೇತ್ರಂ ಮುಕುಟೋಜ್ವಲಂ ।
ಕರ್ಣ ಚಾಮರ ಸಂಯುಕ್ತಂ ಇಕ್ಷುದಂಡ ಸಮೋದಕಂ ।
ಲಂಬೋದರಂ ಶೂಲಪಾಶಂ ಮೌಂಜೀಯಜ್ಞೋಪವೀತಿನಂ ।
ಉದರೇ ನಾಗಬಂಧಂ ಚ ಏಕದಂತಮುಪಾಸ್ಮಹೇ ॥

ಗಣಪತಿಗೆ ಸಾಮಾನ್ಯವಾಗಿ ಇದ್ದೇ ಇರಬೇಕಾದ ವಿವರಗಳೆಲ್ಲ ಇಲ್ಲಿವೆ. ಶಿಲ್ಪಿಯು ಈ ವಿವರಗಳನ್ನು ಮನದಟ್ಟುಮಾಡಿಕೊಂಡು ಗಣಪತಿಯನ್ನು ಮಾಡಲು ತೊಡಗಿದಾಗ ಒಂದೊಂದು ಮೂರ್ತಿಯಲ್ಲಿಯೂ ವೈಯಕ್ತಿಕವೆನ್ನಬಹುದಾದ ವೈಶಿಷ್ಟ್ಯವಿರುತ್ತದೆ. ಕಣ್ಣಿಗೆ ಕಾಣುವ, ಎಲ್ಲರೂ ನೋಡಬಹುದಾದ, ಯಾವ ಕಾಲಕ್ಕೂ ಇರುವ ಯಾವ ಮೂಲಾಕೃತಿಯೂ (ಮಾಡಲ್) ಶಿಲ್ಪಿಯ ಮುಂದೆ ಇಲ್ಲದಿರುವುದೇ ಕಾರಣ. ಪ್ರತಿಯೊಬ್ಬ ಶಿಲ್ಪಿಗೂ ದೊರೆಯುವುದು ತನ್ನದೇ ಆದ, ಅದೂ ಬಾಹ್ಯ ಆಕಾರವಿಲ್ಲದ, ಮನಸ್ಸಿನ ಮೊದಲಚ್ಚು. ಪ್ರತಿಮೆಯೆನ್ನುವ ಮಾತಿಗೆ ಮೂಲಾರ್ಥದಲ್ಲಿ ಇದೇ ಧ್ವನಿಯಿದೆ. ಶಿಲ್ಪಕೃತಿ ಅಥವಾ ಮೂರ್ತಿ ನಿರ್ಮಾಣವೆಂದರೆ ಮನಸ್ಸಿನಲ್ಲಿ ಧ್ಯಾನದಿಂದಾಗಿ ಮೈದಳೆದ ಪ್ರತಿಮೆಯನ್ನು ಹೊರಹೊಮ್ಮಿಸುವು ದಷ್ಟೇ. ಶಿಲ್ಪಿಯೊಳಗೇ ದೇವತಾಮೂರ್ತಿ; ಧ್ಯಾನದ ಫಲವಾಗಿ ದೇವತಾಮೂರ್ತಿಯೊಳಗೇ ಶಿಲ್ಪಿ, ಎಂದರೆ ಅಷ್ಟು ತನ್ಮಯತೆ. ಸ್ಕಂದಪುರಾಣದ ಪ್ರತಿಷ್ಠಾಖಂಡದಲ್ಲಿ ಶಿವನು ಪಾರ್ವತಿಗೆ ಹೇಳಿದಂತೆ ಈ ಮಾತು ಬರುತ್ತದೆ—

ಶಿಲ್ಪಿಗರ್ಭಾಣಿ ಲಿಂಗಾನಿ ಲಿಂಗಗರ್ಭಾಶ್ಚ ಶಿಲ್ಪಿನಃ ।
ಶಿಲ್ಪಿರೂಪಂ ತು ಮದ್ರೂಪಂ ನ ಭೇದಃ ಶೃಣು ಪಾರ್ವತಿ ॥

ಶಿಲ್ಪಿಯೊಳಗೆ ಲಿಂಗ ಅಡಗಿದೆ, ಲಿಂಗದೊಳಗೆ ಶಿಲ್ಪಿ ಅಡಗಿದ್ದಾನೆ; ಇಬ್ಬರಿಗೂ ಯಾವ ಭೇದವೂ ಇರದು. ಶಿಲ್ಪಿ ತಾನೇ ದೇವತಾ ಮೂರ್ತಿಯಾದರೆ ಮಾತ್ರ ದೇವತಾ ಮೂರ್ತಿಯನ್ನು ಮಾಡುವುದು ಸಾಧ್ಯ. ಪೂಜೆಮಾಡುವವನಿಗೂ ಇದೇ ಪ್ರಮಾಣವನ್ನು ಹೇಳಿರುವುದನ್ನು ನೆನಸಿಕೊಳ್ಳಬೇಕು; ದೇವತೆಯಾಗದೆ ದೇವ ತೆಯನ್ನು ಪೂಜೆಮಾಡಬಾರದು (ವಾಯುವೀಯ ಸಂಹಿತೆಯಲ್ಲಿ "ನಾಶಿವಃ ಶಿವಮಭ್ಯಸ್ಯೇನ್ನಾಶಿವಃ ಶಿವ ಮರ್ಚಯೇತ್ ! ನಾಶಿವಸ್ತು ಶಿವಂ ಧ್ಯಾಯೇನ್ನಾಶಿವಃ ಶಿವಮಾಪ್ನುಯಾತ್" ಎಂದಿದೆ). ಈ ಕಾರಣದಿಂದಲೇ ಧ್ಯಾನ ಶ್ಲೋಕವು ಶಿಲ್ಪಿಗೆಷ್ಟು ಮುಖ್ಯವೋ ಪೂಜಕನಿಗೂ ಅಷ್ಟೇ ಮುಖ್ಯ. 'ಧ್ಯಾನೇನೈವ ಪಶ್ಯಂತಿ ತದ್ರೂಪಂ' ಎನ್ನುವ ಮಾತು ಶಿಲ್ಪಿಯನ್ನು ಕುರಿತು ಹೇಳಿದ್ದಾದರೆ ಪೂಜಕನನ್ನು ಕುರಿತು 'ರೂಪೇಣೈವ ಧ್ಯಾಯಂತೆ. ತದ್ದೇವತಂ' (ಶಿಲ್ಪಿ ಸಿದ್ಧಪಡಿಸಿದ ರೂಪದಿಂದಲೇ ದೇವತೆಯನ್ನು ಧ್ಯಾನಿಸುತ್ತಾರೆ) ಎಂದು ಹೇಳಿದೆ.

ಅಂತೂ ಶಿಲ್ಪಿಯು ತನ್ನೊಳಗೆ ಹೇಗೆ ದೇವತಾ ಮೂರ್ತಿಯನ್ನು ಮೂಡಿಸಿಕೊಳ್ಳುತ್ತಾನೋ ಹಾಗೆಯೇ ಅದನ್ನು ಭೌತಿಕ ನೆಲೆಯಲ್ಲಿ ಸ್ಫುಟಗೊಳಿಸುತ್ತಾನೆ. ಶಿಲ್ಪಶಾಸ್ತ್ರ ಗ್ರಂಥಗಳು ಪ್ರತಿಮಾ ಲಕ್ಷಣವನ್ನು ಹೇಳುವುವೇ ಹೊರತು ಆಕೃತಿ ಲಕ್ಷಣವನ್ನು ಹೇಳಲಾರವು. ಆಕೃತಿ ಶಿಲ್ಪಿನಿಷ್ಠವಾದುದು, ಅವನ ಧ್ಯಾನತಂತ್ರವಾದುದು. ಅದನ್ನು ನಿರ್ದೇಶಿಸುವುದು ಸಾಧ್ಯವಾಗದು. ಯಾವುದೇ ಮೂರ್ತಿಯ ಎರಡು ಪ್ರತಿಕೃತಿಗಳು ಪಡಿಯಚ್ಚುಗಳಂತೆ ಸಮಾನವಾಗಿರುವುದಿಲ್ಲ; ಒಂದೊಂದು ಆಕಾರವೂ ಶಿಲ್ಪಿಯ ಒಳಗಿನ ಅನುಭವ, ಆ ಕಾಲದ ಅನುಭವವನ್ನು ಅನುಸರಿಸಿದ್ದು. ಭಾಗವತ ಪುರಾಣದ ಶ್ರೀಧರೀಯ ವ್ಯಾಖ್ಯಾನದಲ್ಲಿ

ಇದನ್ನು ಸ್ವಾರಸ್ಯವಾಗಿ ಸೂಚಿಸಿ ಶಿಲ್ಪಿಯನ್ನು ಆಕಾರದ ಒಡೆಯ (ಆಕೃತೀಪತಿಃ ಶಿಲ್ಪಾಚಾರ್ಯಃ) ಎಂದಿದ್ದಾರೆ.

ಶಿಲ್ಪಶಾಸ್ತ್ರದಲ್ಲಿ ದೀಕ್ಷೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿರುವುದು ಈ ಕಾರಣದಿಂದಲೇ. ಕೆಲಸವನ್ನು ಆರಂಭಿಸುವ ಮೊದಲು ಮಾತ್ರವಲ್ಲದೆ, ಕೆಲಸ ನಡೆಯುತ್ತಿರುವಾಗಲೂ ಶಿಲ್ಪಿಯು ತನ್ಮಯನಾಗಿ ಮಂತ್ರವನ್ನು ಪುರಶ್ಚರಣೆ ಮಾಡುತ್ತಲೇ ಇರಬೇಕೆಂದು ವಿಧಿಯಿದೆ; ಇದಕ್ಕೆ ಬೇಕಾಗುವ ಮಾನಸಿಕ ಸಂಸ್ಕಾರ, ವ್ರತಗ್ರಹಣ ಎರಡೂ ದೀಕ್ಷೆಯಿಂದ ಒದಗುತ್ತವೆ. ಕಶ್ಯಪ ಶಿಲ್ಪದಲ್ಲಿ ಹೇಳಿರುವುದನ್ನು ನೋಡಿ—

ಸಂಪೂರ್ಣದೀಕ್ಷಿತಾಂ ಕುರ್ಯಾತ್ತತ್ತದಂಗ ಪ್ರಕಲ್ಪನಂ ।
ತತ್ತನ್ಮಂತ್ರೋಚ್ಚಾರಣೇನ ಕುರ್ಯಾಲ್ಲಿಂಗಾಧಿಕಂ ಭುವಿ ॥

ಮೂರ್ತಿಶಿಲ್ಪಕ್ಕೆ ಪೂರ್ವಸಿದ್ಧತೆಯಾಗಿ ದೇವಶಿಲ್ಪ, ಭಾವಶಿಲ್ಪಗಳಿರಬೇಕು. ಹೀಗಿಲ್ಲವಾದರೆ ಶಿಲ್ಪಿಯು ಕೈಗೊಂಡ ಕೆಲಸ ಊರ್ಜಿತವಾಗದು; ಅನುಭವದಿಂದಲೂ ಪರಿಶ್ರಮದಿಂದಲೂ ಜಾಣತನದಿಂದಲೂ ಪ್ರತಿಮೆ ಲಕ್ಷಣವಾಗಿ ಮುಗಿದರೂ ಅದರಲ್ಲಿ ಕಳೆ ಕೂಡಲಾರದು.

ದೀಕ್ಷೆಯಲ್ಲಿ ಇನ್ನೊಂದು ಸ್ವಾರಸ್ಯವಿದೆ. ಒಂದು ಮೂರ್ತಿಯನ್ನು ಮಾಡಲು ಹಲವಾರು ದಿನಗಳು ಹಿಡಿಯಬಹುದು; ಹಲವಾರು ತೊಂದರೆಗಳು ಅಡ್ಡಗಿಸಬಹುದು. ಕೆಲಸವನ್ನು ಒಂದೇ ಪಟ್ಟಿನಲ್ಲಿ ಮಾಡಿ ಮುಗಿಸದೆ ನಿಲ್ಲಿಸಿ, ನಿಲ್ಲಿಸಿ ನಿದಾನವಾಗಿ ಮುಗಿಸಬೇಕಾಗಬಹುದು. ಆಗ ದೀಕ್ಷೆಯ ಗತಿಯೇನು? ಏಕಾಂಡದೀಕ್ಷೆ ಸಾಧ್ಯವಿಲ್ಲದಾಗ 'ಪಕ್ಷದೀಕ್ಷೆ'ಯನ್ನು ಶಿಲ್ಪಶಾಸ್ತ್ರ ವಿಧಿಸುತ್ತದೆ. ಭಾಗಭಾಗಗಳಾಗಿ ಕೆಲಸಮಾಡುವಾಗ ಆಯಾ ಭಾಗಗಳಲ್ಲಿ ದೀಕ್ಷೆಯಿದ್ದೇ ಇರಬೇಕು. ಆದರೆ ದೀಕ್ಷೆಯನ್ನು ಬಿಟ್ಟ ವೇಳೆಯಲ್ಲಿ ಮನಸ್ಸಿನ ಪರಿಣಾಮಗಳಿಗೆ ನಿರ್ಬಂಧವಿರುತ್ತದೆಯೇ? ರುದ್ರಯಾಮಳದ ವಾಸ್ತುತಂತ್ರವೆಂಬ ಭಾಗವು ಶಿಲ್ಪಿಯು ಇಂಥ ಪರಿಣಾಮಗಳಿಗೆ ಒಳಗಾಗದಿದ್ದರೆ ಮಾತ್ರ ಜಡವಾದ ಕಲ್ಲು, ಮಣ್ಣು, ಮರ ಇವುಗಳಲ್ಲಿ ಜೀವಕಳೆಯನ್ನು ತುಂಬಿಸಿಯಾನು (ಅಚೇತನಂ ಚೇತನಕಾರ್ಯಕಾರಿ ಕುರ್ವಂತಿ ಯಂತ್ರಪ್ರತಿಮಾದಿಕಂ) ಎಂದು ವಿವರಿಸಿದೆ. ಜಡವಾದ ಸಾಮಗ್ರಿಗಳಲ್ಲಿ ಹಲವಾರು ರೂಪಗಳನ್ನು ಉಂಟುಮಾಡುವ ಶಿಲ್ಪಿಯನ್ನು ಧೀರನೆಂದಿದ್ದಾರೆ: ಧೀರನೆಂದರೆ ಧ್ಯಾನಶೀಲ.

ಮುದ್ರಿಕಾ ದೀಪಿಕೆ

ಮೂರ್ತಿಶಿಲ್ಪದಲ್ಲಿ ಮುಖ್ಯವಾದ ವಿವರಗಳು ಮೂರು – ಭಂಗಿ, ಮುದ್ರೆ, ಆಯುಧ. ಇವುಗಳಲ್ಲಿ ಮುಖ್ಯವಾದುದು ಮುದ್ರೆ. ಏಕೆಂದರೆ ಭಂಗಿಯನ್ನೂ ಆಯುಧಗಳನ್ನೂ ಮುದ್ರೆಗಳಲ್ಲಿಯೇ ನಿರ್ದೇಶಿಸುವ ಪದ್ಧತಿಯಿದೆ (ಚಿತ್ರ 41). ಶಿಲ್ಪಶಾಸ್ತ್ರಗಳ ಮುದ್ರೆಗಳನ್ನು ನಾಟ್ಯಶಾಸ್ತ್ರದಿಂದ ತೆಗೆದುಕೊಂಡಂತೆ ತೋರುತ್ತದೆ. ವಿಷ್ಣುಧರ್ಮೋತ್ತರ ಪುರಾಣದಲ್ಲಿ (3, 26) ಮೂವತ್ತು ನಾಟ್ಯ ಮುದ್ರೆಗಳನ್ನು ಹೇಳಿ ಅನಂತರ ಹದಿಮೂರು ಸಂಯುಕ್ತ (ಎರಡೂ ಕೈಗಳು ಕೂಡಿದ) ಮುದ್ರೆಗಳನ್ನೂ ಇಪ್ಪತ್ತೆರಡು ಅಸಂಯುಕ್ತ (ಒಂದೇ ಕೈಯಿನ ಬಿಡಿಯಾದ) ಮುದ್ರೆಗಳನ್ನೂ ಹೇಳಿದ್ದಾರೆ. ಸಮರಾಂಗಣ ಸೂತ್ರಧಾರದಲ್ಲಿಯೂ ಇಪ್ಪತ್ತೆಂಟು ನೃತ್ಯಮುದ್ರೆಗಳನ್ನು ಹೇಳಿಯೇ ಇಪ್ಪತ್ತನಾಲ್ಕು ಅಸಂಯುಕ್ತ, ಹದಿನೈದು ಸಂಯುಕ್ತ ಮುದ್ರೆಗಳನ್ನು ಹೇಳಿದೆ. ಮಂಡನಸೂತ್ರಧಾರನ ದೇವತಾಮೂರ್ತಿಪ್ರಕರಣದಲ್ಲಿ ಕೂಡ ನೃತ್ಯಮುದ್ರೆಗಳನ್ನೇ ಹೇಳಿ ಶಿಲ್ಪ ಮುದ್ರೆಗಳನ್ನು ವಿವರಿಸಿದ್ದಾರೆ. ಕೈಯೆಲ್ಲಿದೆಯೋ ಅಲ್ಲಿ ದೃಷ್ಟಿ, ದೃಷ್ಟಿ ಎಲ್ಲಿದೆಯೋ ಅಲ್ಲಿ ಮನಸ್ಸು,



ಚಿತ್ರ 41

1 ಅಭಯ ಮುದ್ರೆ
2 ವರದ ಮುದ್ರೆ
3 ಸೂಚೀ ಮುದ್ರೆ
4 ವ್ಯಾಖ್ಯಾನ ಮುದ್ರೆ
5 ಕಟ್ಯವಲಂಬಿತ ಮುದ್ರೆ
6 ಕಟಕ ಮುದ್ರೆ
7 ನಮಸ್ಕಾರ ಮುದ್ರೆ
8 ಧ್ಯಾನ ಮುದ್ರೆ

ಮನಸ್ಸು ಎಲ್ಲಿದೆಯೋ ಅಲ್ಲಿ ಭಾವ, ಭಾವವಿದ್ದಲ್ಲಿ ರಸ ಎನ್ನುವ ನಾಟ್ಯ ಪದ್ಧತಿಯ ಸೂತ್ರವನ್ನೂ ಈ ಗ್ರಂಥ ಎತ್ತಿಹಿಡಿದಿದೆ.

ಮುದ್ರೆ ಒಂದು ಭಾಷೆ. ಅದಕ್ಕೂ ಬೇರೆ ಭಾಷೆಗಳಂತೆ ಸಾಂಪ್ರದಾಯಿಕವಾದ ಸುವ್ಯವಸ್ಥಿತವಾದ ಸಾಂಕೇತಿಕ ಚೌಕಟ್ಟಿದೆ. ದಿಟವಾಗಿ ಮಾತನಾಡುವ ಭಾಷೆಗಿಂತಲೂ ಮುದ್ರೆಯ, ಎಂದರೆ ಅಭಿನಯದ, ಭಾಷೆ ಪ್ರಾಚೀನವಾದುದು; ಮನುಷ್ಯನಿಗೆ ಸಹಜವಾದುದು. ನಾವು ಮಾತನಾಡುವ ಭಾಷೆಯಲ್ಲಿ ಮಾತು ಹೇಗೋ ಹಾಗೆ ಈ ಭಾಷೆಯಲ್ಲಿ ಕೈಗಳ, ಬೆರಳುಗಳ ಆಟ, ಹಸ್ತವಿನ್ಯಾಸ. ಭಾವಗಳನ್ನು, ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಒಂದು ಸಾರ್ವತ್ರಿಕವಾದ ವಿಧಾನ ಇದು. ಮನುಷ್ಯರು ಪದಗಳನ್ನು ಬಳಸಿ ವ್ಯವಹಾರಮಾಡಲು ಕಲಿಯುವ ಮೊದಲು ಅಂಗಭಂಗಿ, ಹಸ್ತವಿನ್ಯಾಸಗಳಿಂದಲೇ ತಮ್ಮ ಅಭಿಪ್ರಾಯಗಳನ್ನು ಇತರರಿಗೆ ತಿಳಿಸಬೇಕಾಗಿದ್ದಿತು. ಭಾಷೆ ಚೆನ್ನಾಗಿ ಬೇರೂರಿದ ಮೇಲೂ ಮನುಷ್ಯ ಇದನ್ನು ಬಿಡಲಿಲ್ಲ; ಮಾತಿನ ಧೋರಣೆಯನ್ನು ಇನ್ನಷ್ಟು ಸ್ಪಷ್ಟಪಡಿಸಲು ಈ ಪರಿಕರಗಳು ನೆರವಾದುವು. ಪೂಜೆಪುನಸ್ಕಾರ, ನೃತ್ಯ, ನಾಟಕ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಅರ್ಥವನ್ನು ಪ್ರಬಲವಾಗಿ ಪ್ರತಿಪಾದಿಸಲು ಹಸ್ತವಿನ್ಯಾಸಗಳನ್ನು ವಿಧ್ಯುಕ್ತವಾದ ಬಗೆಯಲ್ಲಿ ಬಳಸತೊಡಗಿದರು; ಮಾತಿನ ಪ್ರಕಾರಗಳಿಗೆ ಹೆಚ್ಚಿನ ಸಾಮರ್ಥ್ಯ ಒದಗಿಸಲೆತ್ನಿಸಿದರು. ಇದೇ ಮುದ್ರೆಗಳ ಹಿನ್ನೆಲೆ. ಮುದ್ರೆಗಳ ಪ್ರಯೋಜನವೂ ಇಲ್ಲಿಯೇ ಅಡಗಿದೆ.

ಇದು ಎಲ್ಲ ದೇಶಗಳಲ್ಲಿಯೂ ನಡೆದ ಪ್ರಸಂಗವೇ. ಆದರೆ ಮುದ್ರೆಗಳ ವಿಚಾರವಾಗಿ ಒಂದು ದೊಡ್ಡ ಶಾಸ್ತ್ರವನ್ನೇ ಸಿದ್ಧಪಡಿಸಿದ ಯಶಸ್ಸು ಭಾರತೀಯರಿಗೆ ಸಲ್ಲಬೇಕು. ಪ್ರಪಂಚದ ಉಳಿದ ದೇಶಗಳಲ್ಲಿ ಮುದ್ರೆಗಳು ಈ ವೈಜ್ಞಾನಿಕ ನೆಲೆಯನ್ನು ಮುಟ್ಟಲಿಲ್ಲ. ಚೀಣಾ ಮತ್ತು ಜಪಾನ್ ದೇಶಗಳ ಶಿಲ್ಪ ಮತ್ತು ಧರ್ಮಗಳೆರಡರಲ್ಲಿಯೂ ಮುದ್ರೆಗಳ ಧಾರಾಳವಾದ ಬಳಕೆಯಿದೆ; ಇದು ಭಾರತೀಯ ಪ್ರಭಾವದಿಂದಲೇ ಒದಗಿಬಂದುದು. ನಮ್ಮಲ್ಲಿ ನಾಟ್ಯ, ದೇವತಾಶಿಲ್ಪ, ಪೂಜಾಪದ್ಧತಿ ಈ ಕ್ಷೇತ್ರಗಳಲ್ಲಿ ಮುದ್ರೆಯ ಪಾತ್ರ ಹಿರಿದಾಗಿ ಕಾಣಿಸಿಕೊಂಡಿತು. ಮುದ್ರೆಯು ಶಾಸ್ತ್ರವಾಗಿ ಪರಿಣಮಿಸಿದುದು ಹೀಗೆ.

ಪ್ರತಿಯೊಂದು ಮಾತಿನಲ್ಲಿಯೂ ಧ್ವನಿತವಾಗುವ ಪದಶಕ್ತಿಯಿರುವಂತೆಯೇ ಮುದ್ರೆಯೊಂದೊಂದರಲ್ಲಿಯೂ ಶಕ್ತಿಯಿರುತ್ತದೆ. ಪೂಜೆಯಲ್ಲಿ ಮಂತ್ರ, ತಂತ್ರ, ಕಲಾಪ ಎನ್ನುವ ಭೇದವಿದೆಯಷ್ಟೆ. ಇಲ್ಲಿ ಮಂತ್ರವೆಂದರೆ ಮಾತು, ತಂತ್ರವೆಂದರೆ ಮುದ್ರೆ, ಕಲಾಪವೆಂದರೆ ಕೆಲಸ. ಮುದ್ರೆಯೆನ್ನುವ ಮಾತಿಗೆ ಅಧಿಕಾರದ ಅಂಗೀಕರಣ ಎನ್ನುವುದೇ ಮೊದಲಿನ ಅರ್ಥವಾಗಿದ್ದಿತು. ರಾಜರೂ ಮಠಾಧಿಪತಿಗಳೂ ತಂತಮ್ಮ ನಿರೂಪಗಳಿಗೆ ಮುದ್ರೆಯನ್ನು ಒತ್ತುತ್ತಿದ್ದರು. ರಾಜನ ಪರವಾಗಿ ಕೆಲಸವನ್ನು ನಡೆಸುವವರು ರಾಜನ ಮುದ್ರೆಯುಂಗುರವನ್ನು ಒಯ್ಯುತ್ತಿದ್ದರು; ಅವರಿಗೆ ಮುದ್ರಾಧಾರಕರೆಂದು ಹೆಸರೂ ಇದ್ದಿತು. ಮುದ್ರೆಯೆಂದರೆ ಅಧಿಕಾರದ ಸಂಕೇತ. ಶಾಸನಗಳಲ್ಲಿಯೂ ದಾನಪತ್ರಗಳಲ್ಲಿಯೂ ರಾಜಮುದ್ರೆಯಿದ್ದರೆ ಮಾತ್ರ ಊರ್ಜಿತವಾಗುವುವೆಂಬ ಕಲ್ಪನೆಯೂ ಇದ್ದಿತು. ಮೊಹೆನ್‌ಜೊದಾರೋ ಮತ್ತು ಹರಪ್ಪಾಗಳಲ್ಲಿ ದೊರೆತಿರುವ ಮುದ್ರೆಗಳಿಗೂ ಇದೇ ಪ್ರಯೋಜನವಿದ್ದಿತೆಂದು ತೋರುತ್ತದೆ. ಇಂದಿಗೂ ಶ್ರೀಮಂತರ, ಸುಪ್ರತಿಷ್ಠಿತರ ಮನೆಗಳಲ್ಲಿ ಪರಂಪರೆಯಿಂದ ಬಂದ ಮುದ್ರೆಯುಂಗುರವೊಂದು ಇರುತ್ತದೆ. ಹಾಗೆಯೇ ಧರ್ಮದ ಸಮ್ಮತಿ, ಪೂಜೆಗೆ ಅಧಿಕಾರ ಪಡೆಯಲೆಂದೇ ತಂತ್ರದಲ್ಲಿ ಮುದ್ರೆಗಳ ಬಳಕೆಯಿದ್ದಿತು. ತಂತ್ರದ ನೆಲೆಯಲ್ಲಿ ಮೈದಳೆದ ಈ ಪ್ರಕ್ರಿಯೆ ಮುಂದೆ ನೃತ್ಯಕ್ಕೂ ಶಿಲ್ಪಕ್ಕೂ ಕೈಚಾಚಿತು.

ನಾವು ನಮಸ್ಕಾರ ಮಾಡುವಾಗ ಕೈಗಳನ್ನು ಜೋಡಿಸುತ್ತೇವಲ್ಲವೆ? ಇದು ಮುದ್ರೆಯೇ. ಪೂಜೆ ಮಾಡುವಾಗ, ಹೀಗೆಯೇ ಹಲವಾರು ಕೆಲಸಗಳನ್ನು ಮಾಡುವಾಗ ಬೇರೆ ಬೇರೆ ಮುದ್ರೆಗಳಿರುತ್ತವೆ. ಪೂಜೆಮಾಡುವ ಮೊದಲಲ್ಲಿಯೇ ಮೂರ್ತಿಯಲ್ಲಿ ಪ್ರಾಣಪ್ರತಿಷ್ಠೆಮಾಡಬೇಕು, ಇಲ್ಲವಾದರೆ ಪೂಜೆ ಸಾರ್ಥಕವಾಗುವುದಿಲ್ಲ. ಪ್ರಾಣಶಕ್ತಿಯ ಆವಾಹನೆ ಮಾಡುವಾಗ 'ಆವಾಹನೀಯ ಮುದ್ರೆ': ದೇವರನ್ನು ಬಿಂಬದಲ್ಲಿ ಬಾರೆಂದು ಕರೆಯುವ ಸಂಕೇತವಿದು. ಹಾಗೆಯೇ ಸಂಸ್ಥಾಪನೆ, ಸನ್ನಿಧಾನ, ಸಂನಿರೋಧ, ಸಮ್ಮುಖಿ, ಅವಗುಂಠನ, ಸುಪ್ರಸಾದ ಇವೆಲ್ಲವೂ ಮುದ್ರೆಗಳಿಂದ ತೋರಿಸಲ್ಪಡುತ್ತವೆ. ದೇವತೆ ಪ್ರತಿಮೆಯಲ್ಲಿ ಬರಬೇಕು, ಇರಬೇಕು, ಅಲ್ಲಿ ಪ್ರಭಾವವನ್ನು ಮೂಡಿಸಬೇಕು, ಅಲ್ಲಿಂದ ಹೊರಗೆ ಹೋಗದಿರಬೇಕು, ಪೂಜೆಮಾಡುವವನ ಮುಂದೆ ಬರಬೇಕು, ಅವನಿಗೆ ಒಲಿಯಬೇಕು, ಇವೇ ಈ ಮುದ್ರೆಗಳ ತಾತ್ಪರ್ಯ.

ಪೂಜೆಮಾಡುವ ಆರಂಭದಲ್ಲಿ ಕಳಶಪೂಜೆ ಮಾಡುತ್ತಾರಷ್ಟೆ. ಕಳಶಕ್ಕೆ ಪೀಠಪೂಜೆ ನಡೆಯುವಾಗ ತಾರ್ಕ್ಷ್ಯ (ಗರುಡ) ಮುದ್ರೆ, ಧೇನು (ಆಕಳು) ಮುದ್ರೆ, ಶಂಖಮುದ್ರೆ, ಗದಾಮುದ್ರೆ, ಸುದರ್ಶನ (ಚಕ್ರ) ಮುದ್ರೆಗಳನ್ನು ಬಳಸುವ ಸಂಪ್ರದಾಯವಿದೆ. ಇವಕ್ಕೆ 'ತಾರ್ಕ್ಷ್ಯಾದಿ ಸುದರ್ಶನಾಂತ' ಮುದ್ರೆಗಳೆಂದು ಹೆಸರು. ನೀರಿನಲ್ಲಿ ವಿಷ ಹೋಗಬೇಕೆನ್ನಲು ತಾರ್ಕ್ಷ್ಯಮುದ್ರೆ; ಗರುಡ ವಿಷಾಪಹರಣಕ್ಕೆ ದೇವತೆ. ನೀರು ಅಮೃತ ವಾಗಬೇಕೆನ್ನಲು ಧೇನು ಮುದ್ರೆ; ಆಕಳ ಹಾಲು ಅಮೃತವೇ ಅಲ್ಲವೆ? ಪವಿತ್ರಮಾಡಲು ಶಂಖಮುದ್ರೆ; ದಿಗ್ಬಂಧಕ್ಕಾಗಿ ಗದಾಮುದ್ರೆ, ಸಂರಕ್ಷಣೆಗೆಂದು ಸುದರ್ಶನ ಮುದ್ರೆ. ಇವನ್ನು ಕ್ರಮವಾಗಿ 'ತೋರಿಸಿ' (ಪ್ರದರ್ಶ್ಯ) ಮೂಲಮಂತ್ರವನ್ನು ಹನ್ನೆರಡಾವರ್ತಿ ಜಪಿಸಿ, ಕಳಶವನ್ನು ಮುಟ್ಟುತ್ತಾರೆ.

ತಾಂತ್ರಿಕ ಕ್ರಿಯೆಗಳಲ್ಲಿ ಇನ್ನೂ ಸೂಕ್ಷ್ಮವಾದ ಪ್ರಭೇದಗಳನ್ನು ಅಳವಡಿಸಿಕೊಂಡಿದ್ದಾರೆ. ಅವರ ಪಂಚ 'ಮ'ಕಾರಗಳಲ್ಲಿ ಮುದ್ರೆ ಒಂದು. ಒಂದು ನಿದರ್ಶನವನ್ನು ಪರಿಶೀಲಿಸೋಣ. ನಮಸ್ಕಾರ ಮಾಡಲು ಎರಡೂ ಕೈ ಜೋಡಿಸುತ್ತೇವಲ್ಲವೆ? ಇದು 'ಪ್ರಣಾಮ' ಮುದ್ರೆಯೆನಿಸಿಕೊಳ್ಳುತ್ತದೆ. ಇದರಲ್ಲಿ ತಂತ್ರಶಾಸ್ತ್ರವು ಹನ್ನೆರಡು ಬಗೆಗಳನ್ನು ಹೇಳುತ್ತದೆ. ಒಂದೊಂದು ಬಯಕೆಗೆ, ಒಂದೊಂದು ಪ್ರಯೋಜನಕ್ಕೆ ಒಂದೊಂದು ಪ್ರಣಾಮದ ಬಗೆ. 'ಬದ್ಧಾಂಜಲಿಪುಟ' ಎನ್ನುವುದು ಸ್ಥೂಲವಾದ ನಿರ್ದೇಶನ. ಇದರಲ್ಲಿ 'ಸಂಪುಟ', 'ಕಮಲ', 'ಸಂಪೂರ್ಣ', 'ಉತ್ತಾನಜ', 'ಆಧಾರ', 'ವಿಪರೀತ', 'ವಿಪರ್ಯಸ್ತ' ಮೊದಲಾದ ಪ್ರಕಾರಗಳಿವೆ. ಈ ಸೂಕ್ಷ್ಮ ಪ್ರಭೇದದ ಮುದ್ರೆಗಳನ್ನು ತೋರಿಸುವಾಗ ಕೆಲವು ಪ್ರಣಿಧಿಗಳೂ (ಹೇಳುವ ಮಾತು) ನಿರ್ದಿಷ್ಟವಾಗಿವೆ.

ನಮ್ಮ ತಾಂತ್ರಿಕ ಪಂಥಗಳಲ್ಲಿರುವಂತೆ ಮಹಾಯಾನ ಬೌದ್ಧಪಂಥದ ವಜ್ರಯಾನ ಮೊದಲಾದ ಶಾಖೆಗಳಲ್ಲಿಯೂ ಮುದ್ರೆಗಳ ಬಳಕೆ ಹೆಚ್ಚು. ಅವರಲ್ಲಿರುವ ಮುದ್ರಾ ವೈವಿಧ್ಯ ಆಶ್ಚರ್ಯವನ್ನುಂಟು ಮಾಡುತ್ತದೆ. ಜಪಾನ್ ದೇಶದಲ್ಲಿ ಬೆಳೆದು ಬಂದ ಬೌದ್ಧ ಸಂಪ್ರದಾಯದಲ್ಲಿಯೂ ಮುದ್ರೆಗಳ ಈ ಪ್ರಾಶಸ್ತ್ಯವೂ ವೈವಿಧ್ಯವೂ ಉಳಿದುಬಂದವು. 'ದರನಿಜಿಕ್ಯೊ' ಎನ್ನುವ ಜಪಾನೀ ಗ್ರಂಥದಲ್ಲಿ ಮುನ್ನೂರಕ್ಕೂ ಮೇಲ್ಪಟ್ಟು ಮುದ್ರೆಗಳ ವಿವರಣೆಯಿದೆ; ಆದರೆ ಇಷ್ಟೂ ಅಲ್ಲಿ ಬಳಕೆಯಲ್ಲೇನೋ ಇಲ್ಲ. ನಮ್ಮ 'ಜಯಾಖ್ಯ ಸಂಹಿತೆ'ಯಲ್ಲಿಯೂ ಐವತ್ತು ಮುದ್ರೆಗಳ ಉಲ್ಲೇಖವಿದ್ದರೂ ಪ್ರಯೋಗದಲ್ಲಿರುವುದು ಇಪ್ಪತ್ತಕ್ಕಿಂತ ಹೆಚ್ಚಿಲ್ಲವಷ್ಟೆ. ಹಾಗೆಯೇ ಜಪಾನಿನ ತಾಂತ್ರಿಕ ಕಲ್ಪಗಳಲ್ಲಿಯೂ ಶಿಲ್ಪಗಳಲ್ಲಿಯೂ ಎಂಟು ಪ್ರಮುಖ ಮತ್ತು ಆರು ಗೌಣ ಮುದ್ರೆಗಳನ್ನು ಹೆಚ್ಚಾಗಿ ಬಳಸುತ್ತಾರೆ. ಟೆಂಡಾಯ್, ಸೋಟೋ – ಜೆನ್, ಜೋಡೋ, ಷಿನ್ ಪಂಗಡಗಳಲ್ಲಿಯೇ ವಿಶೇಷವಾಗಿ ಮುದ್ರೆಗಳನ್ನು ಬಳಸುವುದು.

ಇಜಿಪ್ಟ್ ದೇಶದಲ್ಲಿ ಕೂಡ ಮುದ್ರೆಗಳಿಗೆ ಧಾರ್ಮಿಕ ಪ್ರಯೋಜನವಿದ್ದಿತು. ಮುದ್ರೆಗಳು ಆರಂಭವಾದುದೇ ಈ ದೇಶದಲ್ಲೆಂದೂ, ಮುದ್ರೆಯೆನ್ನುವ ಮಾತು ಆ ದೇಶದ ಭಾಷೆಯದೇ ಎಂದೂ ಒಂದು ವಾದವಿದೆ. ಅವರ ದೇವತಾ ಚಿತ್ರಣದಲ್ಲಿ ಅಂಗಭಂಗಿಗಳ ನಿರೂಪಣೆ ಅಷ್ಟಾಗಿ ಕಾಣಬರದಿದ್ದರೂ ಹಸ್ತವಿನ್ಯಾಸಗಳೇನೋ ಸ್ಪಷ್ಟವಾಗಿವೆ. ಪ್ರಾಚೀನ ಪರ್ಷಿಯದಲ್ಲಿಯೂ ಮುದ್ರೆಗಳನ್ನು ಧರ್ಮಗುರುಗಳು ಬಳಸುತ್ತಿದ್ದರು. 'ಮುದ್ರಾಯ' ಎನ್ನುವ ಪರ್ಷಿಯಾ ಭಾಷೆಯ ಪದವೂ ಇದೆ. ಇದಕ್ಕೆ ಇಜಿಪ್ಟ್ ಎಂದೇ ಅರ್ಥ. ಹಿಬ್ರೂ ಭಾಷೆಯಲ್ಲಿಯೂ ಇಜಿಪ್ಟ್ ದೇಶಕ್ಕೆ 'ಮಿಸ್ರಾಯಿಂ' ಎಂದು ಹೆಸರು. ಈ ಮಾತುಗಳಿಂದ ಮುದ್ರೆಗೂ ಇಜಿಪ್ಟ್ ದೇಶಕ್ಕೂ ವಿಶೇಷ ಸಂಬಂಧವಿದ್ದುದು ಸ್ಪಷ್ಟವಾಗುತ್ತದೆ. ಇಜಿಪ್ಟ್ ದೇಶದ ಮುದ್ರೆ 'ಸೀಲ್' ಎನ್ನುವ ಅರ್ಥದಲ್ಲಿ ರಹಸ್ಯ ಅಧಿಕಾರದ ಸೂಚನೆ. ಬಂಗಾರದ ನಾಣ್ಯಕ್ಕೆ 'ಮೊಹರು' ಎನ್ನುವುದನ್ನು ಕೇಳಿದ್ದೀರಲ್ಲವೆ? ಭದ್ರಪಡಿಸುವುದೂ 'ಮೊಹರು ಮಾಡುವುದೇ'. ಈ 'ಮೊಹರ್' ಪರ್ಷಿಯಾ ದೇಶದ ಮಾತು. ಖೋಟಾನೀಸ್ ಭಾಷೆಯಲ್ಲಿ ಕೂಡ 'ಮೂರ' ಎಂದರೆ ನಾಣ್ಯ. ಈ ಮಾತುಗಳೆಲ್ಲ ಮೂಲ ಸಂಸ್ಕೃತದ 'ಮುದ್ರೆ'ಯೇ.

ಕೈಬೆರಳುಗಳ ವಿನ್ಯಾಸ ಹೀಗೆ ಸಾಂಕೇತಿಕವಾಗಿ, ಅರ್ಥನಿಷ್ಪತ್ತಿಗೆ ಮಾತ್ರವಲ್ಲ. ಎಣಿಸುವಾಗಲೂ ಬೆರಳುಗಳನ್ನು ಬಳಸುತ್ತೇವೆ. ಮುದ್ರೆ ಎನ್ನುವ ಮಾತು ಮೊದಲಿಗೆ ಎಣಿಕೆಯೆಂದೂ ಅರ್ಥಕೊಡುತ್ತಿದ್ದಿತು. ಪಾಳಿ ಗ್ರಂಥಗಳಲ್ಲಿ 'ಮುದ್ದಿಕ' (ಮುದ್ರಿಕ) ಎಂದರೆ 'ತಪ್ಪಿಲ್ಲದೆ ಎಣಿಸುವವನು'; ಬೆರಳುಗಳ ಸಂಕೇತವನ್ನು ತಿಳಿದವನು. ಎಣಿಕೆಗೆಂದು ಆರಂಭವಾದುದು ವಿನ್ಯಾಸದ ವೈವಿಧ್ಯದಿಂದ ಸಂಕೇತ ಪ್ರಮುಖವಾಯಿತು. ಕ್ರಿಸ್ತಪೂರ್ವ ಕೆಲವಾರು ಶತಮಾನಗಳ ಮೊದಲೇ ವಿಶೇಷಾರ್ಥದಲ್ಲಿ ಮೈದಳೆದ ಮುದ್ರೆ ತಂತ್ರದಲ್ಲಿಯೂ ನೃತ್ಯದಲ್ಲಿಯೂ ಶಾಸ್ತ್ರವಾಗಿ ಪರಿಣಮಿಸಿತು. ಗಾಂಧಾರ ಕಲೆ ನಮ್ಮ ದೇಶದಲ್ಲಿ ಪ್ರಭಾವಶಾಲಿಯಾದುದು ಶಿಲ್ಪದಲ್ಲಿಯೂ ಇದರ ಪಾತ್ರ ಹಿರಿದಾಯಿತು.

ಗಾಂಧಾರ ಕಲೆಯಲ್ಲಿ ಬುದ್ಧನನ್ನು ಮನುಷ್ಯಾಕಾರದಲ್ಲಿ ಮೂಡಿಸುವ ಪದ್ಧತಿ ಮೊದಲಾಯಿತು. ಬುದ್ಧನ ಪ್ರತಿಮೆಗಳಲ್ಲಿ ಧ್ಯಾನ, ಭೂಮಿಸ್ಪರ್ಶ, ಧರ್ಮಚಕ್ರ ಪ್ರವರ್ತನ ಮೊದಲಾದ ಮುದ್ರೆಗಳನ್ನು ಅವರು ಬಳಕೆಗೆ ತಂದರು. ಬೋಧಿದರ್ಶನಕ್ಕ ಮೊದಲು ತಾನು ಎಲ್ಲ ಪ್ರಣಿಧಿಗಳನ್ನೂ ತ್ರಿಕರಣಪೂರ್ವಕವಾಗಿ ನಿರ್ವಹಿಸಿದ್ದೇನೆಂದು ಬುದ್ಧ (ಎಂದರೆ ಗೌತಮ – ಸಿದ್ಧಾರ್ಥ) ಹೇಳಿ ಭೂಮಿಯನ್ನು ಸಾಕ್ಷಿಯಾಗಿ ತೋರಿಸುವುದು, ಭೂಮಿಸ್ಪರ್ಶಮುದ್ರೆಯ ತಾತ್ಪರ್ಯ. ಧರ್ಮಚಕ್ರವನ್ನು ಎರಡೂ ಕೈಬೆರಳುಗಳ ವಿನ್ಯಾಸದಿಂದ ಅದು ತಿರುಗುತ್ತಿರುವ ಭಂಗಿಯನ್ನು ಸೂಚಿಸುವುದು ಧರ್ಮಚಕ್ರ ಪ್ರವರ್ತನ ಮುದ್ರೆ. ಇವಲ್ಲದೆ ಬುದ್ಧನಿಗೆ ಅಭಯ, ವರದ, ವ್ಯಾಖ್ಯಾನ ಮುದ್ರೆಗಳನ್ನೂ ಸೇರಿಸಿದರು. ಇವು ಎಲ್ಲ ಶಿಲ್ಪಶೈಲಿಗಳಲ್ಲಿಯೂ ಉಳಿದುಕೊಂಡು ಬಂದುವು.

ನಮ್ಮ ಶಿಲ್ಪದಲ್ಲಿ ಮುದ್ರೆ ಯಾವಾಗ ಮೈದಳೆಯಿತೋ ಹೇಳುವುದು ಕಷ್ಟ. ತುಂಬ ಪ್ರಾಚೀನ ಮೂರ್ತಿಗಳಲ್ಲೇನೋ ಮುದ್ರೆಗಳಿಲ್ಲ. ಗುಡಿಮಲ್ಲದ ಪರಶುರಾಮೇಶ್ವರನಲ್ಲಾಗಲೀ, ಸಾಂಚೀ – ಬಾರ್ಹುತ್ ಸ್ತೂಪದ ಯಕ್ಷ – ಯಕ್ಷಿಯರಲ್ಲಾಗಲೀ ಮುದ್ರೆಗಳು ಕಂಡುಬರುವುದಿಲ್ಲ. ಬಹುಮಟ್ಟಿಗೆ ಗಾಂಧಾರಕಲೆಯ ಪ್ರಭಾವದಿಂದಲೇ ಎಂದು ತೋರುತ್ತದೆ, ಕ್ರಿಸ್ತಾಬ್ದ ಎರಡು ಮೂರು ಶತಮಾನಗಳಷ್ಟರಲ್ಲಿ ಮುದ್ರೆಯ ಬಳಕೆ ಹೆಚ್ಚಾಯಿತು, ಅದೂ ದಕ್ಷಿಣ ದೇಶದ ಮೂರ್ತಿಶಿಲ್ಪದಲ್ಲಿ ವಿಶೇಷವಾಗಿಯೇ ಹರಡಿತು. ನಾಟ್ಯಶಾಸ್ತ್ರದಿಂದಲೂ ತಂತ್ರ ಪ್ರಕ್ರಿಯೆಯಿಂದಲೂ ಎತ್ತಿಕೊಂಡ ಹಲವಾರು ಮುದ್ರೆಗಳು ಇಲ್ಲಿನ ಮೂರ್ತಿಶಿಲ್ಪದಲ್ಲಿ ಕಂಡುಬರುತ್ತವೆ.

ಇವುಗಳಲ್ಲಿ ಪ್ರಮುಖವಾದುವು, ಎಂದರೆ ಮತ್ತೆ ಮತ್ತೆ ಕಾಣಸಿಗುವಂಥವು, ಅಭಯ, ವರದ, ಕಟಕ, ಸೂಚೀ, ತರ್ಜನೀ, ಕಟ್ಯವಲಂಬಿತ, ದಂಡ, ವಿಸ್ಮಯ, ಧ್ಯಾನ, ವ್ಯಾಖ್ಯಾನ. ಇವನ್ನು ಹಸ್ತಗಳೆಂದೂ ನಿರ್ದೇಶಿಸುವು–ದುಂಟು; ಹಸ್ತಮುದ್ರೆ ಎನ್ನುವುದರ ಸಂಕೋಚ ಅಷ್ಟೇ ಇದು. ನಾಟ್ಯಶಾಸ್ತ್ರದಲ್ಲಿಯೂ ಇದೇ ಮಾತಿನ ಬಳಕೆಯಿದೆ.

ಅ–ಭಯವೆಂದರೆ ದೇವತಾಮೂರ್ತಿಯು ತನ್ನ ಭಕ್ತನಿಗೆ, 'ಹೆದರಬೇಡ, ನಾನು ನಿನ್ನನ್ನು ಕಾಪಿಡುತ್ತೇನೆ' ಎಂದು ಭರವಸೆ ನೀಡುವ ಮುದ್ರೆ. ವರವನ್ನು ನೀಡುವಂತೆ ಕೈಯನ್ನು ಇರಿಸಿಕೊಂಡಿರುವುದು ವರ–ದ. ಇವೆರಡೂ ಸಾಮಾನ್ಯವಾಗಿ ಪುರುಷ ವಿಗ್ರಹಗಳಲ್ಲಿ ಕಾಣುವುದಾದರೆ ಸ್ತ್ರೀ ವಿಗ್ರಹಗಳಲ್ಲಿ ಕಟಕಮುದ್ರೆ ವಿಶೇಷವಾದುದು. ದೇವೀಮೂರ್ತಿಗಳಲ್ಲಿ ಕೈಬೆರಳುಗಳನ್ನು ಹೆಬ್ಬೆರಳಿನತ್ತ ತಿರುಗಿಸಿ ತಾಕಿಸಿ ವೃತ್ತಾಕಾರವನ್ನು ರಚಿಸಿರುವುದನ್ನು ಕಾಣಬಹುದು. ಇದನ್ನು ಸಿಂಹದ ಕಿವಿ (ಸಿಂಹಕರ್ಣ) ಎಂದೂ ಕರೆಯುವುದುಂಟು. ಈ ಕೈವಿನ್ಯಾಸದಲ್ಲಿ ತಾವರೆ ಹೂವನ್ನೋ (ಕಮಲ), ನೈದಿಲೆಯನ್ನೋ (ನೀಲೋತ್ಪಲ), ಗಿಳಿಯನ್ನೋ (ಲೀಲಾಶುಕ) ಸೇರಿಸುವುದೂ ಉಂಟು. ಸೂಚೀಮುದ್ರೆಯೆನ್ನುವುದು ಯಾವುದಾದರೂ ಪದಾರ್ಥದ ಕಡೆ ತೋರುಬೆರಳನ್ನಿಟ್ಟು ಸೂಚಿಸುವ ಹಸ್ತವಿನ್ಯಾಸ. ಕೆಳಭಾಗದಲ್ಲಿರುವ ಪದಾರ್ಥವನ್ನು ತೋರಿಸುವಂತೆ ತೋರುಬೆರಳುಗಳನ್ನು ಕೆಳಗೆ ತೋರಿಸುವುದು ಸೂಚೀ ಹಸ್ತವೆಂದೂ, ಬೆದರಿಕೆಯನ್ನು ತೋರಿಸುವಂತೆ ಅಥವಾ ದಂಡಿಸುವಂತೆ ಅದೇ ಬೆರಳನ್ನು ಮೇಲೆ ತೋರಿಸುವುದು ತರ್ಜನೀಹಸ್ತವೆಂದೂ ಗೋಪೀನಾಥರಾಯರು ಸೂಚಿಸಿದ್ದಾರೆ (Elements of Hindu Iconography, Vol. I, pt. 1, ಪು. 17 Description of Terms). 'ತರ್ಜ್' ಎನ್ನುವ ಧಾತುವಿಗೆ ಬೆದರಿಸುವುದು, ಬಯ್ಯುವುದು ಎಂದೇನೋ ಅರ್ಥವಿದೆ; ಶಾಕುಂತಲ ನಾಟಕದಲ್ಲಿ 'ಸಖೀಮಂಗುಲ್ಯಾ ತರ್ಜಯತಿ' ಎಂದು ಬರುವ ಹಾಗೆ. ಆದರೆ ಇದು ಮೂರ್ತಿಶಿಲ್ಪದಲ್ಲಿ ಪ್ರಸಕ್ತವೇ ಎನ್ನುವುದು ಗಮನಿಸಬೇಕಾದ ವಿಚಾರ. ಬೆದರಿಕೆಗಿಂತ ಹೆಚ್ಚಾಗಿ ನಿಯಮವನ್ನು ವಿಧಿಸುವುದು, ಶಾಸನವನ್ನು ಮಾಡುವುದು, ಎಚ್ಚರಿಕೆ ಹೇಳುವುದು ಇಲ್ಲಿ ಹೊಂದಿಕೊಳ್ಳುತ್ತದೆ. ತರ್ಜನಿ ಯೆಂದರೆ ತೋರುಬೆರಳಷ್ಟೆ; ಏಕಾಂಗುಲಿ ಸಂಜ್ಞೆ. ಕುಮಾರ ಸಂಭವ ಕಾವ್ಯದಲ್ಲಿ ಕಾಮನ ಬರುವಿಕೆಯಿಂದ ಚಪಲರಾದ ಶಿವಗಣಗಳಿಗೆ ನಂದಿಯು ಮಾಡಿದ ಶಾಸನವನ್ನು ವರ್ಣಿಸುವಾಗ ಕವಿಯು 'ಮುಖಾರ್ಪಿತೈಕಾಂಗುಲಿ ಸಂಜ್ಞಯೈವ' ಎಂದೇ ಹೇಳಿದ್ದಾನೆ. ಸೂಚೀಹಸ್ತವು ತರ್ಜನಿಯ ಇನ್ನೊಂದು ಪ್ರಕಾರವಷ್ಟೆ. ತರ್ಜನಿ ನಿರ್ದೇಶಕವಾದರೆ ಸೂಚಿ ನಿದರ್ಶಕ. ಇಲ್ಲಿ ಯಾವ ಪದಾರ್ಥವನ್ನೂ ತೋರಿಸುವ ಪ್ರಶ್ನೆ ಬರುವುದಿಲ್ಲ.

ಕಟ್ಯವಲಂಬಿತ ಮುದ್ರೆಯಲ್ಲಿ ನಿಂತಾಗ ಕೈಯನ್ನು ಇಳಿಬಿಟ್ಟು ನಡುವಿನ ಬಳಿ ಆನಿಸಿಕೊಂಡಿರುವುದು ವಿಶೇಷ. ಇದನ್ನೂ ಗೋಪೀನಾಥರಾಯರು ಸುಖಭಂಗಿಯನ್ನು ಸೂಚಿಸುವ ಮುದ್ರೆ (ಅಲ್ಲಿಯೇ, ಪು. 16) ಎಂದು ಹೇಳಿದ್ದಾರೆ. ಟೊಂಕದ ಮೇಲೆ ಕೈಯಿಟ್ಟು ನಿಂತಿರುವುದೂ, ಕೈಯನ್ನು ಕಟಿಸೂತ್ರದ ಮೇಲೆ ಅಥವಾ ನಡುಪಟ್ಟಿಯಮೇಲೆ ಇಟ್ಟು ಪೀತಾಂಬರದ ಕುಚ್ಚನ್ನು ಹಿಡಿದಿರುವುದೂ, ಏನನ್ನೂ ಆನಿಸಿಕೊಳ್ಳದೆ ನೀಳವಾಗಿ ಬಿಗಿಯಾಗಿ ಕೈಯನ್ನು ಹಿಡಿದಿರುವುದು ಎಲ್ಲವೂ ಈ ಮುದ್ರೆಯಲ್ಲಿಯೇ ಸೇರುತ್ತವೆ. ಪ್ರಾಚೀನ ವಿಷ್ಣುವಿಗ್ರಹಗಳಲ್ಲಿ ನಡುವಿಗೆ ಕಟ್ಟಿಕೊಂಡ ಉತ್ತರೀಯದ ಕುಚ್ಚನ್ನು ಹಿಡಿದಿರುವಂತೆ ಬಿಡಿಸಿರುತ್ತಾರೆ; ಗದೆಯಿರಬೇಕಾದೆಡೆ ಕೈಯನ್ನು ಇದೇ ಮುದ್ರೆಯಲ್ಲಿ ಮುಂದೆಚಾಚಿ, ಅಥವಾ ಪಕ್ಕಕ್ಕೆ ತಿರುಗಿಸಿಯೇ ಇರಿಸಿಕೊಂಡಿರುವುದೂ ಉಂಟು. ಇಲ್ಲಿ ಸುಖಭಂಗಿಯೆನ್ನುವುದು ತಪ್ಪಾಗುತ್ತದೆ. ಕಾಪಾಡುವನೆಂಬ ದೃಢನಿಶ್ಚಯದ ಕುರುಹು ಇಲ್ಲಿ ಕಾಣಿಸುತ್ತದೆ. ಸೊಂಟದ ಮೇಲೆ ಕೈಯಿರಿಸಿಕೊಂಡಿರುವುದು ಅಲಸಿಕೆಯ

ಸೂಚನೆಯಲ್ಲ (ಸುಖಭಂಗಿಯೆಂದರೆ ಇನ್ನೇನು?), ಕಾರ್ಯತತ್ಪರತೆಯ ಸೂಚನೆ. ಅಭಯ ಹಸ್ತದೊಂದಿಗೆ ಅಥವಾ ವರದ ಹಸ್ತದೊಂದಿಗೆ ಈ ಮುದ್ರೆಯಿರುವುದು ಸಾಮಾನ್ಯ. ಇಲ್ಲಿ ಪ್ರಪನ್ನರಾದವರನ್ನು ಕಾಪಿಡುತ್ತೇನೆ ಎನ್ನುವ ಭಗವತ್ಸಂಕಲ್ಪವನ್ನು ಹೇಳುವುದೇ ತಾತ್ಪರ್ಯ. ಇದನ್ನು ಕಟಿಹಸ್ತ ಎಂದೂ ಕರೆಯುತ್ತಾರೆ.

ದಂಡಹಸ್ತ ವಿಶೇಷವಾಗಿ ನಾಟ್ಯಭಂಗಿಯಲ್ಲಿರುವ ಮೂರ್ತಿಗಳಲ್ಲಿ ಮಾತ್ರ ಕಾಣಸಿಗುತ್ತದೆ. ನಟರಾಜ ಮೂರ್ತಿಯಲ್ಲಿ ಎಡತೋಳನ್ನು ಬಲಗಡೆ ಚಾಚಿರುವುದು, ಅಥವಾ ಮುಂದಕ್ಕೆ ಚಾಚಿರುವುದು, ನೃತ್ಯಗಣಪತಿ ಅಥವಾ ನಾಟ್ಯಕೃಷ್ಣಮೂರ್ತಿಗಳಲ್ಲಿ ಎಡತೋಳನ್ನು ಪಕ್ಕಕ್ಕೆ ಚಾಚಿರುವುದು ದಂಡಹಸ್ತದ ನಿದರ್ಶನಗಳು. ಆನೆಯ ಸೊಂಡಿಲಿನಂತೆ ಕಾಣುವುದರಿಂದ ಇದನ್ನು ಗಜಹಸ್ತವೆಂದೂ ಕರೆಯುತ್ತಾರೆ; ಕಡ್ಡಿಯಂತೆ ನೀಟಾಗಿ ಇರುವುದರಿಂದ ಇದು ದಂಡಹಸ್ತವೆನಿಸಿಕೊಳ್ಳುತ್ತದೆ. ಈ ತೋಳಿನ ಭಂಗಿಯಲ್ಲಿ ಕೈ ಇಳಿಬಿದ್ದ (ಲೋಲಂಬ) ಮುದ್ರೆಯಲ್ಲಿರಬಹುದು, ಸೂಚೀಮುದ್ರೆಯಲ್ಲಿರಬಹುದು. ಗಣಪತಿಯು ನಾಟ್ಯವಾಡುತ್ತಿರುವ ಭಂಗಿಯಲ್ಲಿ ದಂಡಹಸ್ತದಲ್ಲಿ ಪಾಶವನ್ನೂ ಹಿಡಿದಿರುತ್ತಾನೆ. ನಾಟ್ಯಕೃಷ್ಣನು ಕಾಳಿಂಗ ಮರ್ದನನೂ ಆಗಿದ್ದರೆ ಕಾಳಿಂಗ ಸರ್ಪದ ಬಾಲದ ತುದಿಯನ್ನು ಹಿಡಿದಿರುತ್ತಾನೆ.

ದಕ್ಷಿಣಾಮೂರ್ತಿಯ ಬಲಗೈಯಲ್ಲಿ ವಿಶೇಷವಾಗಿ ಕಾಣುವುದು ಚಿನ್ಮುದ್ರೆ; ಇದನ್ನು ಜ್ಞಾನಮುದ್ರೆ ಅಥವಾ ವ್ಯಾಖ್ಯಾನ ಮುದ್ರೆ ಎಂದೂ ಕರೆಯುತ್ತಾರೆ. ಅದ್ವೈತವನ್ನು ಬೋಧಿಸುವ ಈ ಹಸ್ತವಿನ್ಯಾಸದಲ್ಲಿ ತೋರುಬೆರಳೂ ಹೆಬ್ಬೆರಳೂ ತುದಿಗಳಲ್ಲಿ ಕೂಡಿರುತ್ತವೆ; ಉಳಿದ ಬೆರಳುಗಳು ನೀಳವಾಗಿ ನಿಂತಿರುತ್ತವೆ, ಇಲ್ಲವೆ ಕಟಕಾಕಾರದಲ್ಲಿ ಬಾಗಿಕೊಂಡಿರುತ್ತವೆ. ದಕ್ಷಿಣಾಮೂರ್ತಿಯು ಸನಕಸನಂದನಾದಿ ಶಿಷ್ಯರಿಗೆ ಪಾಠಹೇಳುತ್ತ ಯೋಗಪಟ್ಟದಲ್ಲಿರುವ ಹಿನ್ನೆಲೆಯಲ್ಲಿ ವ್ಯಾಖ್ಯಾನಮುದ್ರೆ. ಹೆಬ್ಬೆರಳು ಪರಬ್ರಹ್ಮನೆಂದೂ ತೋರುಬೆರಳು ಜೀವಾತ್ಮನೆಂದೂ ಇವೆರಡರ ಸಂಯೋಗವನ್ನು ಸೂಚಿಸುವ ಮುದ್ರೆಯಿದೆಂದೂ ವಿವರಣೆಯಿದೆ. ಪರತತ್ತ್ವವನ್ನು ಸೂಚಿಸುವುದರಿಂದ ಇದು ಸಂದರ್ಶನಮುದ್ರೆಯೆಂದೂ ಎನಿಸಿಕೊಳ್ಳುತ್ತದೆ. ಈ ಮುದ್ರೆಯಲ್ಲಿಯೇ ಅಕ್ಷಮಾಲೆಯನ್ನೂ ಸೇರಿಸುವ ವಾಡಿಕೆಯುಂಟು. ಶಂಕರ, ರಾಮಾನುಜ, ಮಧ್ವ ಮೊದಲಾದ ಆಚಾರ್ಯರ ಅರ್ಚಾಮೂರ್ತಿಗಳಲ್ಲಿಯೂ ಈ ವ್ಯಾಖ್ಯಾನಮುದ್ರೆಗಳನ್ನು ಕಾಣಬಹುದು; ಕೆಲವೊಮ್ಮೆ ಅಕ್ಷಮಾಲೆಯೂ ಇರುತ್ತದೆ.

ಪರಿವಾರ ದೇವತೆಗಳಲ್ಲಿ ಅಂಜಲಿಹಸ್ತವಿರುವುದು ವಾಡಿಕೆ. ಎರಡೂ ಕೈಗಳನ್ನು ಜೋಡಿಸಿ ಎದೆಯ ಮೇಲಿರಿಸಿಕೊಂಡಿರುವ ಈ ಪ್ರಣಾಮಮುದ್ರೆಯನ್ನು ಹನುಮಂತ, ಗರುಡ, ನಂದಿಕೇಶ್ವರ, ಆಳ್ವಾರುಗಳು, ನಾಯನ್ಮಾರರು, ಗುಡಿಗಳನ್ನು ಕಟ್ಟಿಸಿದ ವ್ಯಕ್ತಿಗಳು ಮೊದಲಾದ ಭಕ್ತ ವಿಗ್ರಹಗಳಲ್ಲಿಯೂ ಕಾಣಬಹುದು. ಏಕಪಾದಮೂರ್ತಿಯಲ್ಲಿ ಶಿವನ ಇಕ್ಕೆಲಗಳಲ್ಲಿರುವ ಬ್ರಹ್ಮ ಮತ್ತು ವಿಷ್ಣು ಇವರೂ ಅಂಜಲಿಬದ್ಧರಾಗಿರುತ್ತಾರೆ. ಆಶ್ಚರ್ಯವನ್ನು ಸೂಚಿಸುವುದು ವಿಸ್ಮಯಮುದ್ರೆ.

ಬಿಡಿಯಾದ ಮುದ್ರೆಗಳಲ್ಲದೆ ಆಯುಧಗಳನ್ನು ಅಳವಡಿಸಿದ ಮುದ್ರೆಗಳೂ ಇವೆ. ಶಂಖ, ಚಕ್ರ, ಪರಶು, ಮೃಗಗಳನ್ನು ಧರಿಸಿರುವ ವಿಷ್ಣು, ಶಿವ ಮೂರ್ತಿಗಳಲ್ಲಿ ಧಾರಕಮುದ್ರೆ; ಮೋದಕ, ಬೀಜಪೂರಗಳನ್ನು ಹಿಡಿದ ಗಣಪತಿ ಮೂರ್ತಿಗಳ ಕೈಯಲ್ಲಿ ವರದ ಮುದ್ರೆ; ಗಣಪತಿಯಲ್ಲಿ ಮೋದಕ (ಎಂದರೆ ಸಂತೋಷವನ್ನು ಉಂಟುಮಾಡುವ ಜ್ಞಾನ)ವನ್ನು ಹಿಡಿದ ಅಭಯಮುದ್ರೆ, ಬೀಜಪೂರ (ಎಂದರೆ ಲೌಕಿಕ ಸಂಪತ್ಸಮೃದ್ಧಿ)

ವನ್ನು ಹಿಡಿದ ವರದಾನಮುದ್ರೆ; ರಾಮನಲ್ಲಿ ಧನುಸ್ಸನ್ನು ಹಿಡಿದ ಧಾರಕಮುದ್ರೆ, ಬಾಣವನ್ನು ಹಿಡಿದ ಕಟಕ ಅಥವಾ ಅರ್ಧದಂಡಹಸ್ತ; ವಿಷ್ಣುಮೂರ್ತಿಗಳಲ್ಲಿ ಗದೆಯನ್ನು ಹಿಡಿದ ಕಟ್ಯವಲಂಬಿತ ಹಸ್ತ ಮೊದಲಾದುವು ನಿದರ್ಶನಗಳು.

ಮೂರ್ತಿಶಿಲ್ಪದಲ್ಲಿ ಸ್ಥಾನಕ (ನಿಂತಿರುವುದು), ಆಸೀನ (ಕುಳಿತಿರುವುದು) ಮತ್ತು ಶಯಾನ (ಮಲಗಿರುವುದು) ಎಂಬ ಭೇದವನ್ನು ದಕ್ಷಿಣದೇಶದ ಶಿಲ್ಪಗ್ರಂಥಗಳು ಮಾಡುತ್ತವೆ. ಇವಕ್ಕೆ ಯಾನಕ (ವಾಹನವನ್ನೇರಿ ಹೋಗುತ್ತಿರುವುದು, ಅಥವಾ ನಡೆಯುತ್ತಿರುವುದು) ಎಂಬ ಪ್ರಭೇದವನ್ನು ಸೇರಿಸಬಹುದು. ನೃತ್ಯಮೂರ್ತಿಯೆನ್ನುವುದು ಸ್ಥಾನಕದಲ್ಲಿ ಒಂದು ಪ್ರಭೇದವೇ. ಶಿವಮೂರ್ತಿಗಳಲ್ಲಿ ವಿಷಕಂಠ, ಚಂದ್ರಶೇಖರ, ಚಕ್ರಪ್ರದಾನ, ವೈವಾಹಿಕ, ವೀರಭದ್ರ, ಭೈರವ ಮೊದಲಾದ ಮೂರ್ತಿಗಳೂ, ಬಹುಮಟ್ಟಿಗೆ ವಿಷ್ಣುಮೂರ್ತಿಗಳೂ, ದೇವೀಮೂರ್ತಿಗಳೂ, ಭಕ್ತವಿಗ್ರಹಗಳೂ ಸ್ಥಾನಕಕ್ಕೆ ನಿದರ್ಶನಗಳು; ದಕ್ಷಿಣಾಮೂರ್ತಿ, ಅರುಣಾಚಲೇಶ್ವರ, ಸೋಮಾಸ್ಕಂದ, ಸದಾಶಿವ, ಆಲಿಂಗನ ಮೊದಲಾದ ಶಿವಮೂರ್ತಿಗಳೂ ನರಸಿಂಹ, ಲಕ್ಷ್ಮೀನಾರಾಯಣ, ಪಟ್ಟಾಭಿರಾಮ, ಯೋಗನಾರಾಯಣ ಮೊದಲಾದ ವಿಷ್ಣುಮೂರ್ತಿಗಳೂ ಬಹುಮಟ್ಟಿಗೆ ಗಣಪತಿಮೂರ್ತಿಗಳೂ, ಗಜಲಕ್ಷ್ಮಿ, ಸಪ್ತಮಾತೃಕೆಯರು, ಸರಸ್ವತಿ ಮೊದಲಾದ ದೇವೀಮೂರ್ತಿಯರೂ ಆಸೀನಮೂರ್ತಿಗಳ ಉದಾಹರಣೆಗಳು. ಶಯಾನಮೂರ್ತಿಗಳು ವಿಶೇಷವಾಗಿ ವಿಷ್ಣುಮೂರ್ತಿಗಳೇ; ಭೋಗಿಶಯನ, ಅನಂತಶಯನ ಎನ್ನುತ್ತಾರೆ. ಕುಳಿತಿರುವ ಮೂರ್ತಿಗಳಲ್ಲಿ ಯೋಗಾಸನ, ವೀರಾಸನ, ಸುಖಾಸನ ಮೊದಲಾದ ಪ್ರಭೇದಗಳಿವೆ. ಅಹಿರ್ಬುಧ್ನ್ಯಸಂಹಿತೆ ಚಕ್ರಾಸನ, ಕೂರ್ಮಾಸನ, ಪದ್ಮಾಸನ, ಮಯೂರಾಸನ, ಭದ್ರಾಸನ, ಸಿಂಹಾಸನ, ಸ್ವಸ್ತಿಕ, ಮುಕ್ತಾಸನ, ಗೋಮುಖ ಮೊದಲಾದ ಇತರ ಆಸನಗಳನ್ನೂ ವಿವರಿಸುತ್ತದೆ. ಇವಲ್ಲದೆ, ತ್ರಿಪುರಸಂಹಾರಮೂರ್ತಿ (ಶಿವ) ಬಾಣವನ್ನು ಹೊಡೆಯುವಾಗ ಬಲಗಾಲನ್ನು ಮುಂದೆಮಾಡಿ ನಿಂತಿರುವುದು ಆಲೀಢಾಸನ ಎನಿಸಿಕೊಳ್ಳುತ್ತದೆ.

ಆಯುಧ ಮೀಮಾಂಸೆ

ದೇವತಾ ಮೂರ್ತಿಗಳಲ್ಲಿ ಎರಡು ಕೈಗಳಿರುವುದೂ ಉಂಟು, ನಾಲ್ಕು ಕೈಗಳಿರುವುದೂ ಉಂಟು. ಇವು ಸಾತ್ತ್ವಿಕ, ವೀರ, ಶಾಂತ ಮೂರ್ತಿಗಳಲ್ಲಿ ಸಾಮಾನ್ಯವಾದ ವಿವರ. ಕೆಲವೊಮ್ಮೆ ಆರು ಕೈಗಳ ಗಣಪತಿ (ಷಡ್ಬಾಹು ವಿನಾಯಕ), ಎಂಟು ಕೈಗಳ ದುರ್ಗೆ, ತ್ರಿವಿಕ್ರಮ (ಅಷ್ಟಭುಜ) ಮೂರ್ತಿ, ನರಸಿಂಹಮೂರ್ತಿಗಳೂ ಇರುತ್ತವೆ; ಇವು ರಾಜಸ, ತಾಮಸ ಪ್ರತಿಮೆಗಳೆಂದು ಕಲ್ಪನೆ. ಹತ್ತು, ಹನ್ನೆರಡು, ಹದಿನಾರು, ನೂರು, ಸಾವಿರ ಕೈಗಳಿರುವ ಮೂರ್ತಿಗಳೂ ಇವೆ. ಇವೆಲ್ಲ ಉಗ್ರ, ಸಂಹಾರ, ತಾಮಸ ಮೂರ್ತಿಗಳು. ದೇವತೆಗಳಿಗೆ ಹಲವಾರು ಕೈಗಳನ್ನು ಅಳವಡಿಸಿರುವುದು ಅನೇಕ ಊಹೆಗಳಿಗೆ ಎಡೆ ಮಾಡಿಕೊಟ್ಟಿದೆ. ಮನುಷ್ಯರಂತೆಯೇ ದೇವತೆಗಳನ್ನು ಕಲ್ಪಿಸಿಕೊಂಡಾಗ, ಆಕಾರಸಾಮ್ಯವಿದ್ದರೂ ವೈಶಿಷ್ಟ್ಯ ಇರಬೇಕಲ್ಲವೇ? ಕಾಲುಗಳಲ್ಲಿ ವೈಶಿಷ್ಟ್ಯ ತೋರಿಸುವುದು ಚೆಲುವಿನ ದೃಷ್ಟಿಯಿಂದ ಅಷ್ಟು ಸಮರ್ಪಕವೆನಿಸುವುದಿಲ್ಲ. ಒಂದೇ ಕಾಲಿನ ಏಕಪಾದ ಮೂರ್ತಿ, ಮೂರು ಕಾಲುಗಳ ಭೃಂಗಿಮೂರ್ತಿ ಇರುವುವಾದರೂ ಇವು ಅಪವಾದಗಳು. ಸಾಮಾನ್ಯವಾಗಿ ಕೆಳಭಾಗ ಸ್ಥಿರವಾಗಿ ಎರಡುಕಾಲುಗಳ ಮೇಲೇ ನಿಂತಿರುತ್ತವೆ. ತಲೆಗಳಲ್ಲಿ ಸಂಖ್ಯೆಯನ್ನು ಬೆಳೆಸಿಕೊಳ್ಳಬಹುದಾದರೂ ಅದಕ್ಕೆ ಸಂಕೋಚವಿದೆ. ಐದು ತಲೆಗಳಿದ್ದ ಬ್ರಹ್ಮನ ಒಂದು ತಲೆಯನ್ನು ಚಿವುಟಿಹಾಕಿದ ಶಿವನಿಗೆ ಬ್ರಹ್ಮಹತ್ಯಾದೋಷ ಬಂದಿತಾದರೂ ಬ್ರಹ್ಮನು ಒರಣವಾಗಿ ಚತುರ್ಮುಖನಾದ; ನಾಲ್ಕು ದಿಕ್ಕುಗಳಿಗೆ ಮುಖಮಾಡಿದ ನಾಲ್ಕು ತಲೆಗಳು ಸಾಕು ಅಲ್ಲವೆ? ಶಿವನಿಗೇನೋ ಐದು ತಲೆಗಳೆಂದು

ಪ್ರತೀತಿಯಿದ್ದರೂ ಬಹುಮಟ್ಟಿಗೆ ಕಾಣಿಸಿಕೊಳ್ಳುವುದು ಒಂದೇ ತಲೆಯಿಂದಲೇ. ಹೇರಂಬ ಗಣಪತಿಯೂ ಪಂಚವಕ್ತ್ರನೇ; ಆದರೆ ಅವನೇನು ಜನಪ್ರಿಯನಾಗಲಿಲ್ಲ; ಒಂಟಿಮುಖದವನೇ ಉಳಿದದ್ದು! ಕೈಗಳನ್ನು ಮಾತ್ರವೇ ಬೇಕಾದಷ್ಟು ಬೆಳೆಸಿಕೊಳ್ಳಬಹುದೆಂಬ ಕಾರಣದಿಂದ ಅನೇಕ ಬಾಹುಗಳ ಮೂರ್ತಿಗಳು ಮೈದಳೆದುವು.

ಇಲ್ಲಿ ಇನ್ನೂ ಒಂದು ಸ್ವಾರಸ್ಯವಿದೆ. ಮನುಷ್ಯನ ದೇಹಕ್ಕೂ ಮರಕ್ಕೂ ಇರುವ ಸಾಮ್ಯ ನಮ್ಮ ಸಾಹಿತ್ಯದಲ್ಲಿ ಹಲವೆಡೆ ಬರುತ್ತದೆ. ವೃಕ್ಷಪೂಜೆಯಂತೂ ಪ್ರಾಚೀನವಾದ, ಸ್ಥಿರವಾದ ಪದ್ಧತಿಯಷ್ಟೆ. ಕಾಂಡವು ಮನುಷ್ಯನ ಟೊಂಕದಿಂದ ಕೆಳಭಾಗವನ್ನು ಸೂಚಿಸಿದರೆ ಅವನ ಕೈಗಳು ಶಾಖೆಗಳನ್ನು, ಎಂದರೆ ರೆಂಬೆಗಳನ್ನು ಪ್ರತಿನಿಧಿಸುತ್ತವೆ; ಹರಡಿಕೊಂಡಿರುವುದೇ ಇದರ ಲಕ್ಷಣ. ಸಹಸ್ರಬಾಹು ಕಾರ್ತವೀರ್ಯ, ಶತಬಾಹು ಭೈರವ, ದ್ವಾದಶಬಾಹು ದುರ್ಗೆ, ಅಷ್ಟಭುಜ ತ್ರಿವಿಕ್ರಮ ಮೊದಲಾದ ಮೂರ್ತಿಗಳನ್ನು ನೋಡಿದರೆ ಮಹಾವೃಕ್ಷದ ಕಲ್ಪನೆ ಮೂಡುವುದು ಸಹಜವೇ. 'ಅಹಂ ವೃಕ್ಷಸ್ಯರೇರಿವ, ಕೀರ್ತಿಃ ಪೃಷ್ಠಂ ಗಿರೇರಿವ' ಎನ್ನುವ ಉಪನಿಷದ್ವಾಕ್ಯವನ್ನು ನೆನೆಸಿಕೊಂಡರೆ ಸಾಧನೆಯಲ್ಲಿ ಮರದ ಸಂಕೇತ ಎಷ್ಟು ಮುಖ್ಯವಾದುದೆಂದು ತಿಳಿಯುತ್ತದೆ. ಜಡವಾದ ಪರ್ವತ, ಚೇತನಾತ್ಮಕವಾದ ವೃಕ್ಷ ಎರಡೂ ದೇವತಾ ಕಲ್ಪನೆಯಲ್ಲಿ ಹಿನ್ನೆಲೆಯ ವಿವರಗಳೆಂದು ಆಗಲೇ ನೋಡಿದೆವಷ್ಟೆ.

ಕೈಗಳು ಹಲವಾರು ಇದ್ದಾಗ ಬರಿದಾಗಿಯೇ ಇರುವುದು ಏನು ಚೆನ್ನು? ಕೈಗಳಲ್ಲಿ ಮುದ್ರೆಗಳನ್ನಾದರೂ ಎಷ್ಟು ಅಳವಡಿಸಬಹುದು? ದೇವತೆಯ ಅನಂತಗುಣ-ವಿಶೇಷಗಳನ್ನು ಭಾವದಲ್ಲಿ, ಭಂಗಿಯಲ್ಲಿ, ಮುದ್ರೆಗಳಲ್ಲಿ ಮೂಡಿಸುವುದಕ್ಕಿಂತಲೂ ಆಯುಧಗಳಿಂದ ನಿರ್ದೇಶಿಸುವ ಪರಿಪಾಟಿ ಒದಗಿಬಂದುದು ಹೀಗೆ. ಒಂದೊಂದು ದೇವತೆಗೂ ನಿರ್ದಿಷ್ಟವಾದ ಆಯುಧಗಳಿರುವುದೂ, ಒಂದೊಂದು ಆಯುಧಕ್ಕೂ ಒಂದೊಂದು ಸಂಕೇತವಿರುವುದೂ ನಮ್ಮ ಶಿಲ್ಪಶಾಸ್ತ್ರದ ವೈಶಿಷ್ಟ್ಯ. ವಿಷ್ಣುಮೂರ್ತಿಗೆ ಶಂಖ, ಚಕ್ರ, ಗದೆ (ದುರ್ಗಾಮೂರ್ತಿಗೂ ಇದೇ ಆಯುಧಗಳು); ಶಿವನಿಗೆ ತ್ರಿಶೂಲ, ಡಮರು, ಅಗ್ನಿ; ಗಣಪತಿಗೆ ಪಾಶ, ಅಂಕುಶ; ಲಕ್ಷ್ಮಿಗೆ ಕಮಲ; ಪಾರ್ವತಿಗೆ ನೀಲೋತ್ಪಲ; ಬಲರಾಮನಿಗೆ ನೇಗಿಲು; ಪರಶುರಾಮನಿಗೆ ಕೊಡಲಿ; ರಾಮನಿಗೆ ಬಿಲ್ಲು, ಬಾಣ; ಸುಬ್ರಹ್ಮಣ್ಯನಿಗೆ ಶೂಲ, ಟಂಕ, ವಜ್ರ; ಬ್ರಹ್ಮನಿಗೆ ಕಮಂಡಲು, ಸ್ರುಕ್ಕು, ಅಕ್ಷಮಾಲೆ; ಸರಸ್ವತಿಗೆ ವೀಣೆ, ಅಕ್ಷಮಾಲೆ, ಪುಸ್ತಕ, ಹೀಗೆ. ದೇವತೆಯನ್ನು ಇದೇ ದೇವತೆಯೆಂದು ತಟ್ಟನೆ ಗುರುತಿಸಲು ನೆರವಾಗುವುದೇ ಆಯುಧಗಳ ಉದ್ದೇಶ. ವಾಹನಗಳು (ಶಿವನಿಗೆ ಬಸವ, ಬ್ರಹ್ಮನಿಗೆ ಹಂಸ, ವಿಷ್ಣುವಿಗೆ ಗರುಡ, ಗಣಪತಿಗೆ ಇಲಿ, ದೇವಿಗೆ ಸಿಂಹ, ಸುಬ್ರಹ್ಮಣ್ಯನಿಗೆ ನವಿಲು ಇತ್ಯಾದಿ), ಲಾಂಛನಗಳು (ವಿಷ್ಣುವಿಗೆ ಶ್ರೀವತ್ಸ, ಶಿವನಿಗೆ ಜಟಾಮಂಡಲ ಮತ್ತು ಚಂದ್ರ ಇತ್ಯಾದಿ) ಇವು ನಿರ್ದೇಶನಕ್ಕೆ ನೆರವಾಗುವುವಾದರೂ ಆಯುಧಗಳಲ್ಲಿರುವ ಸೌಲಭ್ಯ ಗಮನಾರ್ಹವಾದುದು.

ದೇವತಾಮೂರ್ತಿಗಳಲ್ಲಿ ಕಾಣಸಿಗುವ ಆಯುಧಗಳಲ್ಲಿ ಪ್ರಮುಖವಾದುವು ಶಂಖ, ಚಕ್ರ, ಗದೆ, ತ್ರಿಶೂಲ, ಡಮರು, ಶೂಲ, ಟಂಕ, ಪಾಶ, ಖಟ್ವಾಂಗ, ಖಡ್ಗ, ಧನುಸ್ಸು, ಬಾಣ, ಅಂಕುಶ, ವಜ್ರ, ಶಕ್ತಿ, ಪರಶು (ಕೊಡಲಿ), ಮುಸಲ, ಹಲ (ನೇಗಿಲು), ಅಗ್ನಿ. ಇವುಗಳನ್ನು ಶಿಲ್ಪದಲ್ಲಿ ಚಿತ್ರಿಸುವಾಗ ತುಂಬ ಕಲಾತ್ಮಕವಾಗಿ, ಅಲಂಕಾರಯುತವಾಗಿ ಬಿಡಿಸುವ ಪದ್ಧತಿಯುಂಟು (ಚಿತ್ರ 42). ಪ್ರಾಚೀನ ಶಿಲ್ಪಗಳಲ್ಲಿ ಸರಳವಾಗಿ ಬಂದ ಆಯುಧಗಳು ಬರುಬರುತ್ತಾ ಗುರುತು ಸಿಗದಷ್ಟು ಜಟಿಲವಾಗಿರುವುದು ಶೈಲಿಗಳನ್ನು ಅವಲಂಬಿಸಿದೆ. ಹೊಯ್ಸಳ ಶಿಲ್ಪದಲ್ಲಿ ಮೂಡಿಬಂದಿರುವ ಆಯುಧಗಳು ತಟ್ಟನೆ ಏನೆಂದು ತಿಳಿಯುವುದೇ ಕಷ್ಟ; ಸೂಕ್ಷ್ಮವಾದ, ವಿಪುಲವಾದ ಅಲಂಕರಣದಲ್ಲಿ ಆಯುಧದ ಮುಖ್ಯ ಲಕ್ಷಣ ಮುಳುಗಿ ಹೋಗಿರುತ್ತದೆ.



ಚಿತ್ರ 42

ಆಯುಧಗಳು

1 ತ್ರಿಶೂಲ 2 ಶೂಲ 3 ವಜ್ರ 4 ಅಂಕುಶ 5 ಪಾಶ 6 ಡಮರು 7 ದರ್ಪಣ 8 ಘಂಟೆ

9 ಅಕ್ಷಮಾಲ 10 ಖಟ್ವಾಂಗ 11 ಟಂಕ 12 ಪರಶು 13 ಶಂಖ 14 ಸ್ಥಿತಿಚಕ್ರ

15 ಪ್ರಯೋಗಚಕ್ರ 16 ಗದೆ

ಅದೇ, ಪಲ್ಲವ ಶಿಲ್ಪದಲ್ಲಿ ಆಯುಧನಿರೂಪಣೆ ಸರಳವಾಗಿರುತ್ತದೆ. ಕೆಲವೊಮ್ಮೆ ಆಯುಧಗಳಲ್ಲಿ ಆಗಂತುಕ ವಿವರಗಳು ಬೆರೆತು ಬರುವುದೂ ಇದೆ. ವಿಷ್ಣುವಿನ ಶಂಖ–ಚಕ್ರಗಳು ಉದಾಹರಣೆ. ಪಲ್ಲವಕಾಲದ ಚಕ್ರ ಶಂಖಗಳು ತುಂಬ ಸರಳವಾದುವು; ಮುಂದೆ ಚೋಳರ ಕಾಲದಲ್ಲಿ ಇವಕ್ಕೆ ಜ್ವಾಲೆಗಳನ್ನು ಅಳವಡಿಸುವ ಪದ್ಧತಿ ಬಂದಿತು. ಅವನ್ನು ಹಿಡಿದಿರುವ ಹಸ್ತವಿನ್ಯಾಸದಲ್ಲಿಯೂ ಕಾಲಕ್ರಮದಲ್ಲಿ ಮಾರ್ಪಾಟು ಒದಗಿತು. ಇಲ್ಲಿ ಶೈಲೀಕರಣ ಕೆಲಸಮಾಡುತ್ತದೆ.

ಕೈಗಳಲ್ಲಿ ಆಯುಧಗಳನ್ನು ಕೊಟ್ಟಾಗ ಅವು ಚಿಹ್ನೆಗಳಂತೆ ಮಾತ್ರ ಇರುವುದು ವಾಡಿಕೆ. ಸ್ಥಾನಕ ಮೂರ್ತಿಗಳಲ್ಲಿಯೂ, ಸೌಮ್ಯ ಮೂರ್ತಿಗಳಲ್ಲಿಯೂ ಆಸೀನ–ಶಯಾನ ಮೂರ್ತಿಗಳಲ್ಲಿಯೂ ಆಯುಧಗಳು ಲಾಂಛನಗಳಷ್ಟೇ. ಕೆಲವೊಮ್ಮೆ ಇವನ್ನು ಕ್ರಿಯಾಶೀಲವಾಗಿ ಮಾಡುವುದೂ ಉಂಟು. ಮಹಿಷಾಸುರಮರ್ದಿನಿ ತ್ರಿಶೂಲವನ್ನು ಹಿಡಿದಿರುವ ಭಂಗಿ, ತ್ರಿಪುರಾಂತಕ–ಶಿವ ಧನುಸ್ಸನ್ನು ಹಿಡಿದಿರುವ ರೀತಿ, ವೀರಭದ್ರ ಕತ್ತಿಯನ್ನು ಹಿರಿದು ನಿಂತಿರುವ ಭಂಗಿ ಇವನ್ನು ನೋಡಬೇಕು. ಪ್ರಾಚೀನ ವಿಷ್ಣು ಮೂರ್ತಿಗಳಲ್ಲಿ ಪ್ರಯೋಗಚಕ್ರವನ್ನು ಬಳಸುತ್ತಿದ್ದರೆಂದೂ, ಅನಂತರ ಅದು ಸ್ಥಿತಿ ಚಕ್ರವಾಯಿತೆಂದೂ ಒಂದು ಊಹೆಯಿದೆ. ಪ್ರಯೋಗಚಕ್ರವೆಂದರೆ ಚಕ್ರವನ್ನು ಎಸೆಯಲು ಸಿದ್ಧವಾಗಿ ಹಿಡಿದಿರುವಂತೆ ಕಾಣುತ್ತದೆ; ಚಕ್ರದ ಗಾಲಿ ನಮ್ಮ ಕಡೆ ಮುಖ ಮಾಡಿರುತ್ತದೆ. ಸ್ಥಿತಿಚಕ್ರದಲ್ಲಿ ಚಕ್ರದ ಅರಗಳೆಲ್ಲ ನಮ್ಮ ಕಡೆಗೆ ತಿರುಗಿರುತ್ತವೆ. ಸಾಮಾನ್ಯ ಮನುಷ್ಯರು ಆಯುಧಗಳನ್ನು ಹಿಡಿದಾಗ ಹಸ್ತವಿನ್ಯಾಸ ಇರುವಂತೆಯೇ ಮೊದಲಿನ ಶಿಲ್ಪಗಳಲ್ಲಿದ್ದಿತು. ಆದರೆ ಕಾಲಕ್ರಮದಲ್ಲಿ ಆಯುಧಧಾರಣಮುದ್ರೆಯನ್ನು ಖಚಿತವಾಗಿ ತೋರುಬೆರಳು–ನಡುಬೆರಳುಗಳ ನಡುವೆ ಆಯುಧವನ್ನು ಹಿಡಿದಿರುವಂತೆ ಚಿತ್ರಿಸತೊಡಗಿದರು. ಶಿವನು ಮೃಗವನ್ನು ಹಿಡಿದಾಗಲೂ, ವಿಷ್ಣುವು ಶಂಖವನ್ನು ಹಿಡಿದಾಗಲೂ, ಬ್ರಹ್ಮನು ಕಮಂಡಲುವನ್ನು ಹಿಡಿದಾಗಲೂ, ಗಣಪತಿಯು ಪರಶುವನ್ನು ಹಿಡಿದಾಗಲೂ ಇದೇ ಮುದ್ರೆ ! ಈ ಆಯುಧಗಳನ್ನು ಹೀಗೆ ಹಿಡಿಯುವುದು ಅಸ್ವಾಭಾವಿಕವೆನಿಸಿದರೂ, ಮೂರ್ತಿಲಕ್ಷಣದಲ್ಲಿ ಈ ಲೀಲಾವಿನ್ಯಾಸವು ಸಮಂಜಸವಾಗಿಯೇ ಕಾಣುತ್ತದೆ.

ಭೈರವನ ಕೈಯಲ್ಲಿರುವ ಕಪಾಲ, ದಕ್ಷಿಣಾಮೂರ್ತಿಯ ಅಕ್ಷಮಾಲೆ, ಸರಸ್ವತಿಯ ಪುಸ್ತಕ, ಶಿವನ ಕೈಯಲ್ಲಿರುವ ನಾಗಪಾಶ, ಗಣಪತಿಯ ಕೈಯಲ್ಲಿರುವ ಚಿಂತಾಮಣಿ ಅಥವಾ ಬೀಜಪೂರ ಅಥವಾ ಭಗ್ನದಂತ, ದೇವಿಯು ಕೈಯಲ್ಲಿ ಹಿಡಿದಿರುವ ಕನ್ನಡಿ (ದರ್ಪಣ), ಅನ್ನಪೂರ್ಣೆಯ ಕೈಯಲ್ಲಿರುವ ಸೌಟು (ಸ್ರುಕ್ಕು), ನಟರಾಜನ ಡಮರುಗ, ವೀರಭದ್ರ ಅಥವಾ ಕಾಳಿ ಹಿಡಿದಿರುವ ಘಂಟೆ ಇವನ್ನೂ ಆಯುಧಗಳಲ್ಲಿಯೇ ಪರಿಗಣಿಸಬೇಕು.

ಆಯುಧಗಳಿಗೇ ಪ್ರತ್ಯೇಕವಾದ ಮೂರ್ತಿರೂಪವನ್ನು ಕೊಟ್ಟು ಸ್ವತಂತ್ರವಾಗಿ ದೇವಾಲಯಗಳಲ್ಲಿ ಇರಿಸುವ ವಾಡಿಕೆಯಿದೆ. ಇವಕ್ಕೆ ಆಯುಧ ಪುರುಷರೆಂದು ಹೆಸರು (ಚಿತ್ರ 43). ಪುರುಷ ಎನ್ನುವುದು ಸ್ವರೂಪವಾಚಿ ಅಷ್ಟೆ; ಕೆಲವು ಆಯುಧಗಳು ಸ್ತ್ರೀಯರಂತೆ ಇರುವುದಿದೆ. ಗದೆ, ಶಕ್ತಿ ಇವು ನಿದರ್ಶನಗಳು. ಖಡ್ಗ, ಶೂಲ, ಪಾಶ, ದಂಡ ಮೊದಲಾದುವೆಲ್ಲ ಪುರುಷರೇ. ಚಕ್ರ, ಪದ್ಮಗಳಿಗೆ ನಪುಂಸಕಲಿಂಗವನ್ನು ಹೇಳಿದ್ದಾರೆ; ಆದರೆ ಚಕ್ರವನ್ನು ಆಯುಧಪುರುಷವಾಗಿ ಚಿತ್ರಿಸಿದಾಗ ಅದರ ಪೌರುಷ ಬೆರಗುಗೊಳಿಸುವಂಥದೇ! ಆಯುಧಗಳಲ್ಲಿಯೇ ಮನುಷ್ಯಾಕಾರದ ಸಣ್ಣ (ಅಷ್ಟತಾಳದ) ಪ್ರತಿಮೆಗಳನ್ನು ಅಳವಡಿಸಿದಾಗಲೂ ಆಯುಧಪುರುಷರೆನಿಸಿಕೊಳ್ಳುತ್ತಾರೆ. ಕತ್ತಿಯ ಮೇಲಿರುವ ಪುರುಷ ಸಿಟ್ಟುಗೊಂಡಂತೆ, ದಂಡದ ಮೇಲಿರುವಾತ



ಗದಾಪುರುಷ ಚಕ್ರಪುರುಷ

ಆಯುಧಪುರುಷರು



ಚಿತ್ರ 43

ಚಕ್ರಪುರುಷ

ಬಿಹಾರ ಪ್ರಾಂತ್ಯದ್ದು. ಏಳನೆಯ ಶತಮಾನದ ಶಿಲ್ಪ

ಬೆದರಿಸುವಂತೆ, ತ್ರಿಶೂಲದ ಮೇಲಿರುವವನು ಸುಂದರ ಯುವಕನಂತೆ, ಶಕ್ತಿಯ ಮೇಲಿರುವ ಹೆಂಗಸು ತೋಳವನ್ನೇರಿ ಕುಳಿತಂತೆ ಕಾಣಬೇಕೆಂದು ವಿಧಿಯಿದೆ.

ಆಯುಧ ಪುರುಷರಾಗಿ ದೇವಾಲಯದ ಪೂಜಾ ವಿಧಿಯಲ್ಲಿ ಪಾಲ್ಗೊಳ್ಳುವುವು ಚಕ್ರ, ತ್ರಿಶೂಲ, ಶಕ್ತಿ ಇಷ್ಟೆ. ವಿಷ್ಣುದೇವಾಲಯಗಳಲ್ಲಿ ಚಕ್ರವನ್ನು ಚಕ್ರತ್ತಾಳ್ವಾರ್ ಎಂದು ಕರೆದು ಸೊಗಸಾಗಿ ಶಿಲ್ಪದಲ್ಲಿ ಮೂಡಿಸಿರುತ್ತಾರೆ; ಶಿವದೇವಾಲಯಗಳಲ್ಲಿ ತ್ರಿಶೂಲವೂ ಹಾಗೆಯೇ; ಸುಬ್ರಹ್ಮಣ್ಯನ ಗುಡಿಯಾದರೆ ಶಕ್ತಿ. ಈ ಆಯುಧ ಪುರುಷರನ್ನು ಸ್ನಪನ ಬೇರ, ಬಲಿಬೇರಗಳಾಗಿ ಬಳಸುವುದೂ ಉಂಟು. ಚಕ್ರವನ್ನು ಸುದರ್ಶನಚಕ್ರವೆಂದು ಕರೆದು ಒಂದು ಕಡೆ ತ್ರಿಕೋಣಯಂತ್ರದ ನಡುವೆ ಯೋಗಾನರಸಿಂಹ ಕುಳಿತಂತೆ, ಇನ್ನೊಂದು ಕಡೆ ಷಟ್‌ಕೋಣ ಯಂತ್ರದ ನಡುವೆ ಉಗ್ರರೂಪದ ಪುರುಷ ಯಾನಕಭಂಗಿಯಲ್ಲಿರುವಂತೆ, ಎಂಟು ಕೈಗಳಲ್ಲಿ ಗದೆ, ಹಾವು, ಕಮಲ, ಮುಸಲ, ತ್ರಿಂಶ, ಪಾಶ, ಅಂಕುಶಗಳನ್ನು ಹಿಡಿದಿರುವಂತೆ, ಭಯಾನಕವಾದ ಮುಖದಲ್ಲಿ ಕೋರೆದಾಡೆಗಳು ಮೂಡಿದಂತೆ ಚಿತ್ರಿಸಿರುತ್ತಾರೆ; ಇವನನ್ನು ಚಕ್ರರೂಪೀ ವಿಷ್ಣು ಎಂದು ಕರೆದು 'ರಿಪುಜನ ಪ್ರಾಣಸಂಹಾರಕ'ನೆಂದು ಬಣ್ಣಿಸುತ್ತಾರೆ.

ಆಯುಧಗಳಿಗೆ ಆಧ್ಯಾತ್ಮಿಕ ಅರ್ಥವನ್ನು ಒದಗಿಸಿರುವುದೂ ಗಮನಾರ್ಹವಾದ ವಿವರ. ವಿಷ್ಣುವಿನ ಆಯುಧವಾದ ಶಂಖ (ಪಾಂಚಜನ್ಯ) 'ಭೂತಾದ್ಯಹಂಕಾರಾತ್ಮಕ'ವೆಂದೂ, ಷಡರ (ಆರುದಳದ) ಸುದರ್ಶನ–ಚಕ್ರ ಮನಸ್ಸೆಂದೂ (ವಿಷ್ಣುಪುರಾಣ) ಅಥವಾ 'ಬಹುಸ್ಯಾಮಿತಿ ಸಂಕಲ್ಪ'ವೆಂದೂ (ಅಹಿರ್ಬುಧ್ನ್ಯಸಂಹಿತೆ), ಕೌಮೋದಕೀ–ಗದೆಯು ಬುದ್ಧಿರೂಪವೆಂದೂ ವೈಷ್ಣವಾಗಮಗಳು ವಿವರಿಸು

ತ್ತವೆ. ಹಾಗೆಯೇ ಶಿವನ ತ್ರಿಶೂಲವು ಸತ್ತ್ವ–ರಜ–ಸ್ತಮೋಗುಣಗಳನ್ನೂ, ಪರಶುವು ದೈವೀ ಶಕ್ತಿಯನ್ನೂ, ಖಡ್ಗವು ಶೌರ್ಯವನ್ನೂ, ಅಗ್ನಿಯು ಸಂಹಾರಶಕ್ತಿಯನ್ನೂ, ಪಾಶವು ಕಾರ್ಮಣವಾಯಾಮಲವನ್ನೂ, ಘಂಟೆಯು ಸೃಷ್ಟಿಯನ್ನೂ ಸೂಚಿಸುವುವೆಂದು ಕಾಮಿಕಾಗಮ ಮೊದಲಾದ ಶೈವಾಗಮಗಳು ಹೇಳಿವೆ. ದೇವತೆಗಳು ಸಂದರ್ಭೋಚಿತವಾಗಿ ಅವತಾರಮಾಡುವಾಗ, ಆಯುಧಗಳೂ ಅಂಶಾವತಾರಗಳಾಗಿ ಅವರನ್ನು ಸೇರಿರುತ್ತವೆ ಎನ್ನುವ ಪ್ರತೀತಿಯಿದೆ.

ಭೂಷಣಭೂಷ್ಯಭಾವ

ಅರ್ಚನೆಗೆಂದು ಇರಿಸಿಕೊಂಡ ಮೂರ್ತಿಯನ್ನು ಕಣ್ಣಿಗೆ ಅಂದವಾಗಿ ಕಾಣುವಂತೆ, ಮನಸ್ಸಿಗೆ ಒಪ್ಪುವಂತೆ, ಭಕ್ತಿಭಾವ ಬೇರೂರಿಸುವಂತೆ ಅಲಂಕರಿಸುವುದು ಎಲ್ಲರಲ್ಲಿಯೂ ಇರುವ ಬಯಕೆಯೇ. ಬೆತ್ತಲೆಯಾಗಿರುವ ತೀರ್ಥಂಕರರನ್ನು ಪೂಜಿಸುವ ಜೈನರು ಕೂಡ ಮಹಾವೀರನನ್ನು ರಾಜಕುಮಾರನಂತೆ ಸಿಂಗರಿಸಿ ಜೀವಂತಸ್ವಾಮಿ ಎನ್ನುವ ಹೆಸರಿನಿಂದ ಪೂಜಿಸುವ ಪದ್ಧತಿಯಿದೆ. ಹಳೆಯ, ಹಿಂದುಳಿದ, ಹಳಸಿದ ಧಾರ್ಮಿಕ ವಿಧಿಗಳಲ್ಲಿ ಕೂಡ ಇದು ಎದ್ದು ಕಾಣುತ್ತದೆ. ಟೋಟೆಮ್ ಕಂಬಗಳನ್ನು ಹಲವಾರು ಚಿತ್ರವಿಚಿತ್ರ ಆಕಾರಗಳಿಂದ ಕಡೆದಿರುವುದನ್ನೂ, ಭೂತಗಳನ್ನು ಪೂಜಿಸುವವರು ಭೂತದ ಪ್ರತಿಕೃತಿಗಳಿಗೆ ಅಥವಾ ಆವೇಶಗೊಂಡ ಪಾತ್ರಿಗೆ, ನೋಡಿದವರು ಬೆದರುವಂತೆ ಅಲಂಕರಿಸುವುದನ್ನೂ, ತೀರಿಕೊಂಡ ವೀರರಿಗೆ ಊರಬಾಗಿಲಲ್ಲಿ ಮಣ್ಣಿನ ದೈತ್ಯಾಕಾರದ ಪ್ರತಿಮೆಗಳನ್ನು ಮಾಡಿಡುವಾಗ ಮೂಡಿಸುವ ಉಡುಗೆ ತೊಡುಗೆಗಳನ್ನೂ, ಕಡೆಗೆ ಅಯ್ಯಪ್ಪನಿಗೋ ಶಿವಬಂಟನಿಗೋ ಕಾಳರಾತ್ರಿಗೋ ಮಾಡಿಟ್ಟ ಮಣ್ಣಿನ ಅಥವಾ ಮರದ ದೊಡ್ಡ ದೊಡ್ಡ ಕುದುರೆಗಳಲ್ಲಿರುವ ಅಲಂಕರಣವನ್ನೂ ನೋಡಿದಾಗ ಈ ಪ್ರವೃತ್ತಿ ಎಷ್ಟು ಸ್ಥಿರವಾದುದೆಂಬ ಅರಿವಾಗುತ್ತದೆ. ಮನುಷ್ಯ ಅಲಂಕಾರಪ್ರಿಯನೇ ಅಲ್ಲವೇ? ಕಾಡಿನಲ್ಲಿ ಬೆತ್ತಲೆ ಅಲ್ದಾಡುವ ಬೇಟೆಗಾರ ಆದಿವಾಸಿಗಳೂ ಮೈಯನ್ನು ಸಿಂಗರಿಸಿಕೊಳ್ಳುವುದಿದೆ, ಗುಡಿಸಲನ್ನು ಓರಣವಾಗಿ ಸಿಂಗರಿಸಿ ಇರಿಸಿಕೊಳ್ಳುವುದಿದೆ, ಬಳಸುವ ಬಿಲ್ಲು ಬಾಣಗಳನ್ನೂ ಕವಣೆಕಲ್ಲುಗಳನ್ನೂ ಚೂರಿಚಾಕುಗಳನ್ನೂ ಅಂದವಾಗಿ ಕಾಣುವಂತೆ ಮಾಡಿಕೊಳ್ಳುವುದಿದೆ.

ಇದು ಸೌಂದರ್ಯಾಭಿರುಚಿ ಎಂದಷ್ಟೇ ಹೇಳಿ ಮುಗಿಸುವ ಹಾಗಿಲ್ಲ. ಚೆಲುವು ಜೀವನದಲ್ಲಿ ದೊಡ್ಡದೇ, ಅಡ್ಡಿಯಿಲ್ಲ. ಆದರೆ ಅಲಂಕರಿಸಿದರೆ ಅಸಾಧಾರಣವಾದ ಶಕ್ತಿಯೊಂದು ಒದಗಿಬರುತ್ತದೆಯೆನ್ನುವ ಭಾವನೆ ಹಿಂದಿನಿಂದಲೂ ಇದೆ. ಚೆಲುವಾದ ಮನುಷ್ಯ, ಮೃಗ, ಮರ, ಮನೆ ಎಲ್ಲದರಲ್ಲಿಯೂ ಒಂದು 'ಕಳೆ', ಅಲೌಕಿಕ ಚೈತನ್ಯವೊಂದು ಅಡಗಿರುತ್ತದೆ; ತೀರ ಕುರೂಪಿಯಲ್ಲಿಯೂ ಹಾಗೆಯೇ. ಸಾಮಾನ್ಯ ನೆಲೆಯಿಂದ ಯಾವುದು ಕೆಳಕ್ಕೆ ಜಾರಿದರೂ ಮೇಲಕ್ಕೆ ಏರಿದರೂ ಅದರಲ್ಲೊಂದು ವಿಶೇಷ ಗುಣ. ಹಾಗಿಲ್ಲದೆ ಜನರ ಗಮನವನ್ನು ಸೆಳೆಯುವುದು ಸಾಧ್ಯವಿಲ್ಲ. ಪಂಗಡದಲ್ಲಿ ತೀರ ಸುಂದರವಾದ ಮಗು ಹುಟ್ಟಿದರೂ, ವಿಕಾರವಾದ ಮಗು ಹುಟ್ಟಿದರೂ, ಹುಟ್ಟಿದ ಮಗು ವಿಕಲಾಂಗವಾದರೂ ಜನ ಸಮವಾಗಿಯೇ ಬೆದರುತ್ತಿದ್ದರು; ಇದೇನು ಸಾಮಾನ್ಯವಾದ ಮಗುವಲ್ಲವೆಂದು ನಿಶ್ಚಯಿಸಿಕೊಳ್ಳುತ್ತಿದ್ದರು, ಚೆಲುವನ್ನೂ ವಿಕಾರವನ್ನೂ ಕಡಮೆ ಮಾಡಲು ಸಾಧ್ಯವಾದಷ್ಟು ಪ್ರಯತ್ನಪಡುತ್ತಿದ್ದರು. ದೇವತಾಮೂರ್ತಿಗಳಲ್ಲಿ ಮಾತ್ರ ಈ ಸಾಧಾರಣ ನೆಲೆಯನ್ನು ಮೀರಿದ ವಿಶೇಷಗುಣವಿದ್ದೇ ಇರಬೇಕೆಂಬ ಆಗ್ರಹ ಇರುತ್ತಿದ್ದುದು ಸಹಜವೇ. ಅದ್ಭುತ ಕಳೆ ಅಲ್ಲಿರಬೇಡವೇ? ಅದರ ಪ್ರಭಾವ ಊರಿನಲ್ಲಿ ಹರಡಬೇಡವೇ? ದೇವತಾಮೂರ್ತಿಯಷ್ಟೇ ಅಲ್ಲ, ಪಂಗಡದ ಹಿರಿಯನೂ ಪೂಜಾರಿಯೂ ಸಾಮಾನ್ಯರಂತೆ ಇರುತ್ತಿರಲಿಲ್ಲವಷ್ಟೆ. ಅವನ ಕಾರ್ಯಗೌರವಕ್ಕೆ

ಸರಿಯಾದ ಉಡುಗೆ ತೊಡುಗೆಗಳೂ ಹಾರತುರಾಯಿಗಳೂ ಬಳೆಬಿಚ್ಚೋಲೆಗಳೂ ಇರುತ್ತಿದ್ದುವು; ಅವನು ಇರುವ ಠೀವಿ, ಬರುವ ಗತ್ತನ್ನು ನೋಡಿಯೇ ಅವನು ಇತರರಂತೆ ಅಲ್ಲ ಎಂದು ಗುರುತಿಸಬೇಕು. ರಾಜನ ಕೈಯಲ್ಲಿ ಕತ್ತಿ, ಪಂಗಡದ ಯಜಮಾನನ ಕೈಯಲ್ಲಿ ದೊಣ್ಣೆ, ಪೂಜಾರಿಯ ಕೈಯಲ್ಲಿ ಬೆತ್ತ ಕೆಲಸಕ್ಕೆ ಬರುವ ಆಯುಧಗಳಲ್ಲ; ಭೂಷಣಗಳಷ್ಟೇ. ತಲೆಯ ಮೇಲಿನ ದೊಡ್ಡ ಮುಂಡಾಸು, ಹೊದ್ದಿರುವ ಸರಿಗೆಯಂಚಿನ ಧೋತರ ಅಥವಾ ಚೌಕಳಿಯ ಕಂಬಳಿ, ಕೈಗಳಲ್ಲಿರುವ ಬಂಗಾರದ ತೋಡಾ ಇವನ್ನು ನೋಡಿ ದೊಡನೆ ಜನ ದಾರಿಮಾಡಿಕೊಟ್ಟು ದೂರ ಸರಿಯಬೇಕು. ಇದು ಭೂಷಣಭೂಷ್ಯಭಾವ.

ದೇವತಾಮೂರ್ತಿಗಳು ಸರ್ವಾಂಗಸುಂದರವಾಗಿ, ಸರ್ವಾಭರಣ ಭೂಷಾಢ್ಯವಾಗಿ, 'ಪುಂಸಾಂದೃಷ್ಟಿ ಚಿತ್ತಾಪಹಾರಕ'ವಾಗಿ ಇರತಕ್ಕದ್ದೆಂದು ಶಿಲ್ಪಶಾಸ್ತ್ರಗಳು ವಿಧಿಸುತ್ತವೆ; ಎಲ್ಲ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿಯೂ ಆಭರಣ–ಭೂಷಣಗಳ ದೊಡ್ಡ ಪಟ್ಟಿಯೇ ಇರುತ್ತದೆ. ಚಂದ್ರಮಂಡಲದಂತೆ ಮುಖ, ಹವಳದಂತೆ ತುಟಿ ಗಳು, ಎಳ್ಳಿನ ಹೂವಿನಂತೆ ಮೂಗು, ಕಮಲದಳಗಳಂತೆ ಕಣ್ಣುಗಳು, ಕತ್ತಿನಲ್ಲಿ ರೇಖೆಗಳು; ಇಷ್ಟಿದ್ದರೆ ಸಾಲದು. ತಲೆಯ ಮೇಲೆ ರತ್ನಕಿರೀಟವಿರಬೇಕು; ಕಿವಿಯಲ್ಲಿ ಮಕರಕುಂಡಲವಿರಬೇಕು; ಕೊರಳಲ್ಲಿ ರತ್ನಮಾಲೆ ಹಾರ ವಿರಬೇಕು; ಎದೆಯಮೇಲೆ ಶ್ರೀವತ್ಸ ಚಿಹ್ನೆಯಿರಬೇಕು; ನಡುವಿಗೆ ಉದರಬಂಧ, ಕಟಿಸೂತ್ರ ಪ್ರಲಂಬ ಸೂತ್ರಗಳು; ತೋಳಿನಲ್ಲಿ ಬಾಹುಬಂಧ, ಅಂಗದ, ಕೇಯೂರಗಳು; ಕೈಮಣಿಕಟ್ಟಿನಲ್ಲಿ ಕಂಕಣ, ಮಣಿಬಂಧ; ಕೈಬೆರಳುಗಳಲ್ಲಿ ರತ್ನಾಂಗುಲೀಯಕಗಳು; ಕಾಲುಬೆರಳುಗಳಲ್ಲಿ ಪೀತಕಾರ್ಪಾಟ, ನೂಪುರ, ಪಾದಜಾಲಕಗಳು; ತಲೆಯ ಹಿಂಬದಿಯಲ್ಲಿ ಶಿರಶ್ಚಕ್ರ, ಪ್ರಭಾಮಂಡಲಗಳು. ಸ್ತ್ರೀಮೂರ್ತಿಗಾದರೆ ತಲೆಗೂದಲನ್ನು ಕಟ್ಟುವ ಧಮ್ಮಿಲ್ಲಯೋಜನೆ, ಮುಂಗುರುಳನ್ನು ಓರಣವಾಗಿರಿಸಿಕೊಳ್ಳುವ ಅಲಕರಚನೆ, ಹುಬ್ಬನ್ನು ನೀಟಾಗಿರಿಸಿ ಕೊಳ್ಳುವ ಭ್ರೂಘಟನೆ, ಸ್ತನಗಳನ್ನು ಕಟ್ಟುವ ಕುಚಬಂಧ, ಘಮಘಮಿಸುವ ಮಂಡನದ್ರವ್ಯಗಳು (ಕಸ್ತೂರಿ, ಕುಂಕುಮ, ಚಂದನ, ಕರ್ಪೂರ, ಅಗರು, ಪಟವಾಸ ಎಂದರೆ ಪುಡಿ, ತೈಲ, ತಾಂಬೂಲ, ಗೋರೋಚನ ಮುಂತಾದುವು), ಕೊರಳಸರಗಳು (ಮುಕ್ತಾವಲಿ, ಹರ್ಷಕ, ಸೂತ್ರ), ಬೆರಳುಂಗುರಗಳು (ವರಿಕೆ, ಅಂಗುಲಿ ಮುದ್ರೆ) ಮೊದಲಾದುವಿರಬೇಕು. ನಡುವಿಗೆ ಕಟ್ಟಿಕೊಂಡ ಬಟ್ಟೆ ರೇಷ್ಮೆಯದಾಗಿರಬಹುದು (ಕ್ಷೌಮ), ರೇಷ್ಮೆ–ಹತ್ತಿ ಎರಡೂ ಸೇರಿದ್ದಾಗಿರಬಹುದು (ಕೌಶೇಯ), ಬರಿಯ ಹತ್ತಿಯದೇ ಆಗಿರಬಹುದು (ಕಾರ್ಪಾಸ), ಉಣ್ಣೆಯದಾಗಿರಬಹುದು (ರಾಂಕವಾ). ಹೊಲಿದ ಬಟ್ಟೆಗಳನ್ನು ಬಳಸಬಾರದೆಂಬ ವಾಗತ್ಯ ಹಿಂದಿನ ಕಾಲದಲ್ಲಿದ್ದಿತು. ಹೀಗಾಗಿ ತುಂಡುಬಟ್ಟೆಗಳನ್ನೇ ಕಟ್ಟಿಕೊಳ್ಳುವ ವಾಡಿಕೆಯಿದ್ದು ಅದನ್ನೇ ಶಿಲ್ಪದಲ್ಲಿಯೂ ಬಿಡಿಸಿರುತ್ತಾರೆ. ಬಟ್ಟೆಯನ್ನು ಎದ್ದು ಕಾಣದಂತೆ ಚಿತ್ರಿಸಿರುತ್ತಾರೆ; ಮೈಗೇ ಹೊಂದಿಕೊಂಡಂತೆ ಗೆರೆಗಳಲ್ಲಿ ಮಾತ್ರವೇ ನೆರಿಗೆಯನ್ನು ಕಾಣಿಸುತ್ತಾರೆ. ಕುಚಬಂಧವೂ ಇದೇ ರೀತಿ ಇರುತ್ತಿದ್ದಿತು; ಸ್ಪಷ್ಟಪ್ರದರ್ಶ ನಕ್ಕಿಂತ ಧ್ವನಿಸುವುದು ಇಲ್ಲಿನ ಉದ್ದೇಶ. ಆದರೆ ಮೊದಲಿಗೆ, ಸಾಂಚಿ ಮೊದಲಾದೆಡೆಯ ಶಿಲ್ಪಗಳನ್ನು ನೋಡಿದರೆ ವಸ್ತ್ರಗಳನ್ನು ವಿರಳವಾಗಿಯೇ, ಸ್ಪಷ್ಟವಾಗಿಯೇ ಬಿಡಿಸುತ್ತಿದ್ದ ಪದ್ಧತಿಯಿದ್ದಿತು. ಉದ್ದದ ಧೋತರಗಳನ್ನೂ ಮೇಲುತ್ತರೀಯಗಳನ್ನೂ ಓರಣವಾಗಿ, ನೆರಿಗೆನೆರಿಗೆಗಳಲ್ಲಿ ಜೋಡಿಸುತ್ತಿದ್ದುದೂ, ತಲೆಯ ಮೇಲಿನ ಮುಂಡಾಸನ್ನು ಬಗೆಬಗೆಯ ವಿನ್ಯಾಸಗಳಲ್ಲಿ ಕಟ್ಟಿಕೊಳ್ಳುತ್ತಿದ್ದುದೂ ಕಾಣಬರುತ್ತದೆ. ಮುಂದಿನ ಯುಗಗಳಲ್ಲಿ ಉಡುಗೆಗಳನ್ನು ಅಷ್ಟು ಸ್ಪಷ್ಟವಾಗಿ ಕಾಣಿಸುವ ಪದ್ಧತಿ ತಪ್ಪಿಹೋಗಿ ಮೈಯ ಅಂಗ–ಭಂಗಿ ಗಳನ್ನೇ ಪ್ರಮುಖವಾಗಿ ತೋರಿಸಬೇಕೆನ್ನುವ ಕಾತರ ಒದಗಿತು. ಭೂಷಣಗಳೂ ಸಾಧ್ಯವಾದಷ್ಟು ಸೂಕ್ಷ್ಮ ವಾಗಿ, ನಾಜೂಕಾಗಿ ಇರತೊಡಗಿದುವು. ಸಾಂಚೀ, ಬಾರ್ಹುತ್ ಯಕ್ಷಯಕ್ಷಿಯರಲ್ಲಿಯೂ ನಾನಾಬಗೆಯ ಆಭರಣಗಳನ್ನು ಕಾಣಬಹುದು; ಇವೆಲ್ಲ ಎದ್ದು ಕಾಣುತ್ತವೆ. ಮುಂದೆ ಚೋಳ, ಚಾಳುಕ್ಯರ ಮೂರ್ತಿ

ಗಳಲ್ಲಿ ಇನ್ನೂ ಹೆಚ್ಚಿನ ವೈವಿಧ್ಯವುಳ್ಳ ಆಭರಣಗಳಿದ್ದರೂ ಎದ್ದುಕಾಣುವುದಿಲ್ಲ. ಮೈಗೇ ಹತ್ತಿಕೊಂಡಂತೆ, ನಿಲುವಿನಲ್ಲಿ ಅಡಗಿದಂತೆ ತೋರುತ್ತವೆ.

ಉಪವೀತವೊಂದು ವಿಶೇಷವಾದ ಆಭರಣ. ಇದರ ಬಗ್ಗೆ ಊಹಾಪೋಹಗಳು ಹಲವಾರು ಹೊರಟಿವೆ. ಆರ್ಯಸಂಸ್ಕೃತಿಯ ಪ್ರತೀಕವಾದ ಯಜ್ಞೋಪವೀತವೇ ಇದೆಂದು ಹೇಳುವವರೂ ಇದ್ದಾರೆ; ಬರಿಯ ಒಂದು ಆಭರಣವೆಂದು ಹೇಳುವವರೂ ಇದ್ದಾರೆ. ಮೌರ್ಯಕಾಲದ ಯಕ್ಷರ ಚಿತ್ರಣದಲ್ಲಿ ಉಪವೀತದಂತೆ ಉತ್ತರೀಯವನ್ನು ಹೊದ್ದಿರುವುದನ್ನು ಕಾಣಬಹುದು. ಪಲ್ಲವರ ಮೂರ್ತಿಶಿಲ್ಪದಲ್ಲಿ ಉಪವೀತ ಬಲಗೈಯನ್ನು ಹಾದು ಹಿಂದೆ ಹೋಗುತ್ತದೆ; ವಿಷ್ಣುಶಿಲ್ಪದಲ್ಲಿ ಉಪವೀತ ನಡುವಿಗೆ ಮಾತ್ರ ಮುಗಿಯದೆ ಬಲಗಾಲ ಹಿಮ್ಮಡಿಯವರೆಗೂ ಇಳಿಬಿದ್ದಿರುತ್ತದೆ. ಚೋಳರ ಶಿಲ್ಪ ಕೃತಿಗಳಲ್ಲಿ ಮಾತ್ರ ಉಪವೀತ ಈಗಿನ ಜನಿವಾರದಂತೆಯೇ ಕಾಣಿಸಿಕೊಳ್ಳುತ್ತದೆ. ಅಷ್ಟುಮಾತ್ರವಲ್ಲ, ಶಿಲ್ಪಿಗಳು ಎದೆಯ ಬಳಿ ಬ್ರಹ್ಮಗ್ರಂಥಿಯನ್ನೂ ತೋರಿಸಿ ಅದರಿಂದ ಇಳಿಬಿದ್ದ ಇನ್ನೊಂದು ಆರೋಪ್ಯ ಎಡಪಕ್ಕೆಯನ್ನು ಸುತ್ತುಗಿಯುವಂತೆ ಕಾಣಿಸುತ್ತಾರೆ. ಈ ಲಕ್ಷಣ ಸ್ತ್ರೀಮೂರ್ತಿಗಳಲ್ಲಿಯೂ ಪುರುಷಮೂರ್ತಿಗಳಲ್ಲಿಯೂ ಸಮವೇ. ಉಪವೀತವನ್ನು ದ್ವಿಜಾತಿಯ ಚಿಹ್ನೆ ಎನ್ನುವುದಕ್ಕಿಂತ ಭೂಷಣಗಳಲ್ಲಿ ಒಂದಾದ ಆರೋಪ್ಯಸೂತ್ರ ಎಂದರೇ ಸರಿ. ಆರೋಪ್ಯದಲ್ಲಿ ಪ್ರಾಲಂಬ ಮತ್ತು ಮಾಲಿಕಾಕಾರ ಎಂದೆರಡು ಬಗೆಗಳು. ಉಪವೀತ ಪ್ರಾಲಂಬವೆನ್ನುವ ಪ್ರಕಾರಕ್ಕೆ ಸೇರಿದ್ದು; ಅಪಸವ್ಯವಾಗಿ ತೋರುವ ಆರೋಪ್ಯ ಮಾಲಿಕಾಕಾರದ್ದು. ಇದು ಯಜ್ಞೋಪವೀತ ಎನ್ನುವುದು ಸಲ್ಲದು. ಯಕ್ಷರಿಗೆ, ದ್ವಾರಪಾಲಕರಿಗೆ, ಶಾಸ್ತನಿಗೆ, ಸ್ತ್ರೀಮೂರ್ತಿಗಳಿಗೆ ಎಲ್ಲರಿಗೂ ಇದನ್ನು ಅಳವಡಿಸುವುದಿದೆ; ಒಂದಲ್ಲದೆ ಎರಡು ಉಪವೀತಗಳಿರುವುದೂ ಉಂಟು; ಮಣಿಗಳನ್ನು ಪೋಣಿಸಿದಂತೆ ತೋರಿಸಿರುವುದೂ ಉಂಟು. ಚೋಳರ ಕಾಲದಲ್ಲೇನೋ ಬ್ರಹ್ಮ, ದಕ್ಷಿಣಾಮೂರ್ತಿ, ಅಗಸ್ತ್ಯ ಇವರ ವಿಗ್ರಹಗಳಲ್ಲಿ ಮೂರೆಳೆಯ ಉಪವೀತವನ್ನು ಸ್ಪಷ್ಟವಾಗಿ ಕಾಣಿಸುವ ಪದ್ಧತಿ ಬಂದಿತು. ಇದು ಕಾಲಕ್ರಮದ ಪರಿವರ್ತನೆ.

ಈ ಒಡವೆಗಳಲ್ಲಿ ವೈವಿಧ್ಯವೂ ಒದಗಿತು. ಕೊರಳಿನ ಹಾರಗಳಲ್ಲೇ ವೇಷ್ಟಿತ, ವಿತತ, ಗ್ರಂಥಿಮತ್, ಮುಕ್ತಕ, ಮಂಜರಿ, ಸ್ರವಕ ಮೊದಲಾದುವೂ, ಕಿವಿಯ ಓಲೆಗಳಲ್ಲೇ ಮಕರಕುಂಡಲ (ನಕ್ರಕುಂಡಲ), ಪತ್ರಕುಂಡಲ, ರತ್ನಕುಂಡಲ, ಶಂಖಪತ್ರಕುಂಡಲ, ಸರ್ಪಕುಂಡಲ ಮೊದಲಾದುವೂ ನಿದರ್ಶನಗಳು.

ಅವಯವಗಳಲ್ಲೆಲ್ಲ ಪ್ರಧಾನವಾದುದು ತಲೆಯಲ್ಲವೆ? ತಲೆಯ ಮೇಲಿನ ಕಿರೀಟ ಭೂಷಣಗಳಲ್ಲೆಲ್ಲ ಮುಖ್ಯವೆನಿಸಿದುದು ಸಹಜವೇ. ಮೂರ್ತಿಶಿಲ್ಪಗಳಲ್ಲೇನೋ ತುಂಬ ವಿಶಿಷ್ಟವಾದ ಭಾಗ ಇದು. ತಲೆಗೆ ಪಾಗನ್ನೋ ಟೋಪಿಯನ್ನೋ ಇಟ್ಟುಕೊಳ್ಳುವುದು ಬಿಸಿಲು ಹೆಚ್ಚಾದ ದೇಶಗಳಲ್ಲಿ ವಾಡಿಕೆಯೇ. ಈ ಶಿರಸ್ತ್ರಾಣವನ್ನು ಭೂಷಣವಾಗಿ ಮಾರ್ಪಡಿಸಿ ಶಿಲ್ಪಶಾಸ್ತ್ರವು ಹಲವಾರು ಬಗೆಗಳನ್ನು ಬಳಕೆಗೆ ತಂದಿತು. ಒಟ್ಟಾರೆ ಇದನ್ನು ಮೌಳಿ ಎಂದು ಕರೆಯುತ್ತಾರೆ. ಇದರ ಹಿನ್ನೆಲೆಯಲ್ಲಿ ಬುದ್ಧಮೂರ್ತಿಯಲ್ಲಿ ಕಾಣಸಿಗುವ ಉಷ್ಣೀಷವನ್ನೂ, ಲಿಂಗದ ಆಕಾರದಲ್ಲಿರುವ ಪ್ರಾಚೀನ ಟೋಪಿಗಳನ್ನೂ ಗಮನಿಸಬೇಕು. ತಲೆಗೂದಲನ್ನು ಜಟೆಯಂತೆ ಮೇಲೆತ್ತಿಕೊಂಡು ಕಟ್ಟುವ ಪದ್ಧತಿ ಜೋಗಿಗಳಲ್ಲಿ, ಬೈರಾಗಿಗಳಲ್ಲಿ, ಸೀಖಜನರಲ್ಲಿ ಇಂದಿಗೂ ಉಳಿದಿದೆ. ಇದರ ಶಿಲ್ಪ ಮಾದರಿಯೇ ಕಿರೀಟವಾಯಿತೋ ಏನೋ. ಅಂತೂ ಮೌಳಿಯಲ್ಲಿ ಜಟೆ ಮತ್ತು ಮಕುಟ ಎಂದು ಎರಡು ಬಗೆ. ಜಟೆಯನ್ನೂ ಮಕುಟವೆಂದೇ ಬಗೆದು ಜಟಾಮಕುಟವೆಂದು ವ್ಯವಹರಿಸುವುದೂ ಇದೆ. ಮಕುಟದಲ್ಲಿಯೇ ಜಟಾಮೌಳಿ, ಕಿರೀಟ, ಕರಂಡ ಮತ್ತು ಶಿರಸ್ತ್ರಕ ಎಂದು ವಿಭಾಗಗಳನ್ನು ಮಾನಸಾರ ಮಾಡು

ತ್ತದೆ. ಈ ದೃಷ್ಟಿಯಿಂದ ದೇವತಾಮೂರ್ತಿಗಳ ತಲೆಯಮೇಲಿನ ಭೂಷಣವನ್ನು ಜಟಾಮಕುಟ, ಕಿರೀಟ ಮಕುಟ, ಕರಂಡಮಕುಟ ಎಂದು ವಿಭಾಗಿಸುವುದು ವಾಡಿಕೆಯಾಗಿದೆ (ಚಿತ್ರ 44).



ಚಿತ್ರ 44

ಶಿರೋಭೂಷಣ

1. ಕಿರೀಟಮಕುಟ 2, 3. ಜಟಾಮಕುಟ 4. ಕರಂಡಮಕುಟ
5. ಜಟಾಬಂಧ 6. ಜಟಾಭಾರ

ಆದರೆ ಜಟೆಯಲ್ಲಿ ಮಕುಟವಲ್ಲದೆ ಜಟಾಭಾರ, ಜಟಾಮಂಡಲಗಳೂ ಇವೆ. ನಟರಾಜ ಶಿವನಲ್ಲಿ ತಲೆಯ ಪಕ್ಕಗಳಲ್ಲಿ ಅಡ್ಡಲಾಗಿ ಹರಡಿಕೊಂಡಿರುವ ಜಡೆಗಳಿವೆ; ಮೇಲೆ ಮಕುಟವೆನ್ನಬಹುದಾದ ಯಾವ ಭೂಷಣವೂ ಇರುವುದಿಲ್ಲ. ದಕ್ಷಿಣಾಮೂರ್ತಿ, ಭೈರವ, ಶಾಸ್ತ ಮೊದಲಾದ ಮೂರ್ತಿಗಳಲ್ಲಿಯೂ ತಲೆಯ ಸುತ್ತಲೂ ಪ್ರಭೆಯಂತೆ ಹರಡಿಕೊಂಡಿರುವ ಜಟಾಭಾರ ಅಥವಾ ಜಟಾಮಂಡಲಗಳಿರುತ್ತವೆ. ಇವನ್ನು ಜಟಾಮಕುಟ ಎಂದು ನಿರ್ದೇಶಿಸುವುದು ತಪ್ಪು. ಮೇಲೆ ಹೇಳಿದ ಪ್ರಭೇದಗಳಲ್ಲದ ಶಿವನ ಮೂರ್ತಿಗಳಲ್ಲಿ ಜಟೆಯನ್ನೇ ಮಕುಟದಂತೆ ಮೇಲೆತ್ತಿ ರತ್ನಗಳಿಂದ, ಸೂತ್ರಗಳಿಂದ ಕಟ್ಟಿಕೊಂಡಿರುವುದು ಜಟಾಮಕುಟ. ಇದನ್ನು ಉತ್ತರಕಾಮಿಕಾಗಮವು ಉಷ್ಣೀಷಭೂಷಣವೆಂದು ಕರೆದು ಅದರಲ್ಲಿ ರತ್ನಕೂಟ, ಪತ್ರಕೂಟಗಳಿರುವುದನ್ನು ಹೇಳುತ್ತದೆ. ತಲೆಗೂದಲನ್ನು ಐದು ಜಡೆಗಳಾಗಿ ವಿಂಗಡಿಸಿ ಮಕುಟದಂತೆ ಹೆಣೆದುಕೊಳ್ಳುವುದು ಇದು; ಕಟ್ಟಿದ ಕೂದಲನ್ನು ಬಿಗಿಯಾಗಿರಿಸುವುದು 'ಕೂಟ'. ಶಿವನ ಜಟಾಮಕುಟದಲ್ಲಿ ಅರ್ಧಚಂದ್ರ, ಹಾವು, ತಲೆಯೋಡು, ಗಂಗೆ ಇವೂ ಇರುತ್ತವೆ; ಆದರೆ ಇದು ತುಂಬ ಪ್ರಾಚೀನ ಪದ್ಧತಿಯೇನಲ್ಲ. ಬ್ರಹ್ಮನಿಗೂ ಜಟಾಮಕುಟವೇ ಇರಬೇಕೆಂದು ಶಿಲ್ಪಶಾಸ್ತ್ರ ವಿಧಿಸಿದೆ. ಜಟಾಮಕುಟದ ಮೇಲ್ಗಡೆ ಶಿಖಾಮಣಿಯನ್ನೂ ಇರಿಸಿರುವುದುಂಟು.

ಕಿರೀಟಮಕುಟ ವಿಷ್ಣುಮೂರ್ತಿಗಳಿಗೆ ಎತ್ತಿದ್ದು. ಮನುಷ್ಯರಲ್ಲಿ ರಾಜ–ಮಹಾರಾಜರು ಇದನ್ನು ಧರಿಸುವ ವಾಡಿಕೆಯಿದ್ದಿತು. ವಿಷ್ಣುವಿನ ಕಿರೀಟಮಕುಟದಲ್ಲಿಯೂ ಬೆಳವಣಿಗೆಯನ್ನು ಗುರುತಿಸಬಹುದು. ತುಂಬ ಹಳೆಯದೆನ್ನಬಹುದಾದ ಕಿರೀಟಮಕುಟ ಟೋಪಿಯಂತೆ ಸರಳವಾಗಿರುತ್ತದೆ; ಮೇಲ್ಭಾಗ ಸ್ವಲ್ಪ ಚಪ್ಪಟೆಯಾಗಿರುತ್ತದೆ; ನೀಳವಾಗಿ ಕೊಳಗದಂತೆ ಕಾಣಿಸುತ್ತದೆ. ಮೇಲ್ಭಾಗದಲ್ಲಿ ಶಿರೋರತ್ನ (ಶಿಖಾಮಣಿ)ವಾಗಲೀ, ನಡುವೆ ರತ್ನಪಟ್ಟವಾಗಲೀ ಪುಷ್ಪಪಟ್ಟವಾಗಲೀ ಛನ್ನವೀರವಾಗಲೀ ಇರುವುದಿಲ್ಲ. ಇವೆಲ್ಲ ಮುಂದೆ ಮೈದಳೆದ ವಿವರಗಳು. ಮಕುಟದ ಆಕಾರವೂ ಕೊಳಗದಂತೆ ಇದ್ದುದು ಬರುಬರುತ್ತ ಶಿಖರಾಕಾರವಾಯಿತು. ತಲೆಗೂದಲನ್ನು ಹಿಂದಕ್ಕೆ ಮಾಡಿ ಗಂಟುಹಾಕಿಕೊಳ್ಳುವುದನ್ನು ಇಲ್ಲಿ ಶಿರಶ್ಚಕ್ರವೆಂದು ಬಣ್ಣಿಸುತ್ತಾರೆ. ಶಿರಶ್ಚಕ್ರದಲ್ಲಿ ಹಲವಾರು ಬಗೆಗಳು ಬೆಳೆದುಬಂದವು; ಕೆಲವಂತೂ ಪ್ರಭಾಮಂಡಲಗಳಾದುವು.



ಚಿತ್ರ 44 ಅ

ದೇವಿಯ ಮೂರ್ತಿಶಿಲ್ಪದಲ್ಲಿ ಕಾಣುವುದು ಕರಂಡಮಕುಟವೆನಿಸಿಕೊಳ್ಳುತ್ತದೆ. ಕರಂಡವೆಂದರೆ ಅಗಲವಾದ ಬಾಯಿರುವ ಪಾತ್ರೆ. ಅದರ ಆಕಾರದಲ್ಲಿ ಮಕುಟವಿರುವುದರಿಂದ ಈ ಹೆಸರು. ಕಿರೀಟಮಕುಟದಷ್ಟು ಎತ್ತರವಾಗಿರದೆ ನೆಲೆನೆಲೆಯ ಪಟ್ಟಗಳಿಂದ ಕೂಡಿರುವ ಈ ಕರಂಡಮಕುಟವನ್ನು ಗಣಪತಿಗೂ ಇಡುವ ವಾಡಿಕೆಯಿದೆ. ದೇವೀಮೂರ್ತಿಗಳಲ್ಲಿ ಕರಂಡಮಕುಟವಲ್ಲದೆ ಕುಂತಲ, ಕೇಶಬಂಧ, ಧಮ್ಮಿಲ್ಲ,

ಅಲಕಚೂಡಕ ಎನ್ನುವ ಬಗೆಗಳನ್ನೂ ಕಾಣಬಹುದು. ಇವೆಲ್ಲ ಕೂದಲನ್ನು ಬೇರೆ ಬೇರೆ ವಿನ್ಯಾಸಗಳಲ್ಲಿ ಕಟ್ಟಿಕೊಳ್ಳುವುದು; ಕಟ್ಟಿಕೊಂಡಮೇಲೆ ಎಲೆಗಳಿಂದಲೋ (ಪತ್ರಪಟ್ಟ), ಹೂಗಳಿಂದಲೋ (ಪುಷ್ಪಪಟ್ಟ), ರತ್ನಗಳಿಂದಲೋ (ರತ್ನಪಟ್ಟ) ಭದ್ರಪಡಿಸುತ್ತಾರೆ. ಸರಸ್ವತಿಗೆ ಕೇಶಬಂಧ, ಲಕ್ಷ್ಮಿಗೆ ಕುಂತಲ, ಸಾಮಾನ್ಯ ಸ್ತ್ರೀಮೂರ್ತಿಗಳಿಗೆ ಧಮ್ಮಿಲ್ಲ, ಚಾಮರಗ್ರಾಹಿಣಿಯರಿಗೆ ಅಲಕಚೂಡಕ ಎಂದು ಹೇಳಿದೆ. ಪುರುಷಮೂರ್ತಿ ಗಳಲ್ಲಿ ದೇವತೆಗಳಲ್ಲದೆ ಇದ್ದವರಿಗೆ ಮುಂಡಾಸಿನಂತಿರುವ ಶಿರಸ್ತ್ರಕವಿರಬೇಕೆಂದು ಶಾಸ್ತ್ರ ಹೇಳುತ್ತದೆ.

ಹೀಗೆ ಆಭರಣಗಳನ್ನೂ ಭೂಷಣಗಳನ್ನೂ ಶಿಲ್ಪಪದ್ಧತಿಯಲ್ಲಿ ಬಳಕೆಗೆ ತಂದು ಅವುಗಳ ಆಕಾರ ವನ್ನು ಸ್ಥಿರಪಡಿಸಿದರು; ಯಾವ ದೇವತಾಮೂರ್ತಿಗಳಿಗೆ ಯಾವ ಬಗೆಯ ಭೂಷಣವಿರಬೇಕೆಂದೂ ವಿಧಿಸಿದರು. ದೇವತಾಮೂರ್ತಿಯ ಸ್ಪಷ್ಟನಿರ್ದೇಶನ ಇದರಿಂದ ಸುಲಭವಾಯಿತು, ಸುಕರವಾಯಿತು (ಚಿತ್ರ 44 ಅ).

ಗಣಪತಿಯ ಗುಟ್ಟು

ವಿನಾಯಕ - ನಯ

ಗಣಪತಿಯ ಪೂಜೆ ಎಷ್ಟು ಪ್ರಚಾರದಲ್ಲಿದೆಯೋ ಅವನ ವಿಚಾರ ಅಷ್ಟೇ ವಿಸ್ತಾರವಾಗಿದೆ. ಈ ದೇವತೆಯನ್ನು ಕುರಿತು ನಡೆದಿರುವ ಸಂಶೋಧನೆ ಅಷ್ಟಿಷ್ಟಲ್ಲ. ವಿಚಿತ್ರವಾದ ವಾದಗಳನ್ನು ಅವನ ಮಡಿಲಿಗೆ ಸುರಿದಿದ್ದಾಗಿದೆ; ಹತ್ತಾರು ವಿವರಣೆಗಳನ್ನು ಅವನ ಮೇಲೆ ಹೇರಿದ್ದಾಗಿದೆ. ಅವನು ವೇದಮೂರ್ತಿ ಯೆಂದು ಸಿದ್ಧಪಡಿಸಿಯಾಯಿತು; ಅನಾರ್ಯದೇವತೆಯೆಂದು ಸ್ಪಷ್ಟಪಡಿಸಿದ್ದಾಯಿತು. ಅವನಿಗೂ ಬೇಸಾಯಕ್ಕೂ ನಂಟನ್ನು ಏರ್ಪಡಿಸಿಯಾಯಿತು; ಬೇಟೆಯಾಡುವವರ ಒಡೆಯನೆಂದು ತೋರಿಸಿಯಾಯಿತು. ಅವನ ನೂರೆಂಟು ಹೆಸರುಗಳನ್ನೂ ಹಿಂಡಿದು ಒಳಗಿನ ಹುರುಳು ಏನೆಂದು ಹುಡುಕಿಯಾಯಿತು; ಪುರಾಣ ಕಥೆಗಳನ್ನೆಲ್ಲ ಕೆದಕಿ, ಒಡೆದು ಅರ್ಥವನ್ನು ಬಿಡಿಸಿಯಾಯಿತು. ಪ್ರಣವಸ್ವರೂಪಿಯೆಂದೂ ಆಧ್ಯಾತ್ಮಿಕ ತತ್ತ್ವದ ಪ್ರತೀಕವೆಂದೂ ವಿವರಿಸಿದ್ದಾಯಿತು; ಗಣರಾಜ್ಯತಂತ್ರದ ಪ್ರತಿಮೆಯೆಂದೂ ಸಮಾಜವಾದೀ ಆರ್ಥಿಕವ್ಯವಸ್ಥೆಯ ಸಂಕೇತವೆಂದೂ ಕಾಣಿಸಿಯಾಯಿತು.

ಇಷ್ಟೆಲ್ಲ ಆದರೂ ಸಮಸ್ಯೆಯೇನೋ ಹಾಗೆಯೇ ಉಳಿಯಿತು; ಗಣಪತಿಯ ಜನಪ್ರೀತಿಯೇನೋ ಎಂದಿನಂತೆಯೇ ಮುಂದುವರಿಯಿತು. ಅವನ ಪ್ರತಾಪ ಸಾಮಾನ್ಯವೇನಲ್ಲ! ಸಮಸ್ಯೆ ಬಗೆಹರಿಯಲಿಲ್ಲವೆಂದು ವಿಷಯವನ್ನು ಬಿಡುವುದಾದರೂ ಹೇಗೆ? ದೇವತೆಗೆ ಸ್ವಾರಸ್ಯವಿಲ್ಲವೆ? ಮೇಲಿಂದ ಮೇಲೆ ಪಂಡಿತರೂ ಸಂಶೋಧಕರೂ ಸಾಧಕರೂ ಭಾವುಕರೂ ಭಕ್ತರೂ ಒಗಟನ್ನು ಬಿಡಿಸುವ ಪ್ರಯತ್ನ ಮಾಡುತ್ತಲೇ ಇದ್ದಾರೆ.

ನಮ್ಮೆಲ್ಲರ ನಿತ್ಯವ್ಯವಹಾರದಲ್ಲಿ ಹಾಸುಹೊಕ್ಕಾಗಿ ಸೇರಿರುವ ದೇವರಲ್ಲವೇ? ಗಣಪತಿಯೇನು ಸಿದ್ಧಿಗೂ ಬೇಕು, ಬುದ್ಧಿಗೂ ಬೇಕು! ಯಾವುದಕ್ಕೂ ಅವನನ್ನು ಬಿಡುವಹಾಗಿಲ್ಲ. ನಮ್ಮವರು ಸತ್ಯಾನ್ವೇಷಣೆಗೆ ಕಂಕಣಕಟ್ಟಿಕೊಂಡಿರುವಂತೆಯೇ ಹಾಸ್ಯಕ್ಕೂ ಮನಸೋತಿರುವವರು. ಗಣಪತಿಯು ಪರಬ್ರಹ್ಮ ಹೌದೋ ಅಲ್ಲವೋ, 'ವಿಕಟ'ನಂತೂ ದಿಟವೇ. ಅವನ ಸ್ವರೂಪಕಲ್ಪನೆಯಲ್ಲಿರುವ ಸ್ವಾರಸ್ಯ ಬಹುಮಟ್ಟಿಗೆ ಇದೇ. ಪುರಾಣದಲ್ಲಿ ಕಥೆ ಬಗೆಬಗೆಯಾಗಿ ಬಂದಂತೆಯೇ ಶಿಲ್ಪದಲ್ಲಿಯೂ ವಿಧವಿಧವಾದ ಚಿತ್ರಣ ಕಾಣಸಿಕೊಳ್ಳುತ್ತದೆ. ಕಥನಕ್ಕೂ ಚಿತ್ರಣಕ್ಕೂ ಹೊಂದಾಣಿಕೆಯನ್ನು ಹುಡುಕುವುದೇ ಒಂದು ಸ್ವಾರಸ್ಯವಾದ ಹವ್ಯಾಸವಾಗುತ್ತದೆ.

ಈಗ ಗಣಪತಿಯನ್ನು ಪೂಜೆಮಾಡುವ ಜನರಲ್ಲಿ ಎಲ್ಲ ಜಾತಿಯವರೂ ಇದ್ದಾರೆ. ಎಲ್ಲ ಪ್ರಾಂತ್ಯದವರೂ ಇದ್ದಾರೆ. ಮನುವಿನ ಕಾಲಕ್ಕೆ ಶೂದ್ರರೇ ಮುಖ್ಯವಾಗಿ ಗಣಪತಿಯ ಭಕ್ತರೆನ್ನುವ ನಂಬಿಕೆಯಿದ್ದಂತೆ ತೋರುತ್ತದೆ; ಕಾಲಕ್ರಮದಲ್ಲಿ ಶೂದ್ರರಭಕ್ತಿ ಬ್ರಾಹ್ಮಣರಿಗೂ ಅಂಟಿಕೊಂಡಿತು! ಶಂಕರಾಚಾರ್ಯರ ಕಾಲದಲ್ಲಿ ಗಾಣಪತ್ಯರೆಂಬ ಉಗ್ರಪಂಥದವರು ಮಾತ್ರ ಗಣಪತಿಯ ಆರಾಧನೆಯಲ್ಲಿ ತೊಡಗಿದ್ದರಂತೆ; ಈಗ ನಾಡಿನವರೆಲ್ಲರೂ ಗಾಣಪತ್ಯರೇ! ಗಣಪತಿಯ ಗುಡಿಯಿಲ್ಲದ ಹಳ್ಳಿಯಿದೆಯೇ? ಗಣಪತಿಯ ಗೊಂಬೆಯಿರದ ಒಂದೂ ಮನೆಯಿದೆಯೆ? ಗಣಪತಿಯ ಪೂಜೆಯನ್ನು ಮಾಡದ ಹಿಂದು ಇದ್ದಾನೆಯೇ? ವೀರವೈಷ್ಣವರಿಗೆ ಶಿವನೆಂದರೆ ಆಗದಿದ್ದರೂ, ಶಿವನ ಮಗನೆನಿಸಿಕೊಂಡ ಗಣಪತಿ ಬೇಕಾದವನೇ. ಎಲ್ಲ ಪಂಥದವರೂ ಗಣಪತಿಯನ್ನು ನೆನಸಿಕೊಂಡೇ ಕೆಲಸಕ್ಕೆ ತೊಡಗುವುದು; ಆಸೆಯಿಟ್ಟು ಮಾಡುವ ಯತ್ನಕ್ಕಂತೂ ಗಣಪತಿಗೆ ಹರಕೆ ಹೊರುವುದು ತಪ್ಪಿದ್ದಲ್ಲ. ಮನೆಮನೆಗಳಲ್ಲಿ ಗುಡಿಗುಡಿಗಳಲ್ಲಿ ನಿತ್ಯವೂ ನಡೆಯುವ ಪೂಜೆಯಲ್ಲದೆ ಪ್ರತಿವರ್ಷವೂ ಭಾದ್ರಪದ ಮಾಸದ ಮೊದಲ ಚೌತಿಯಂದು ನಡೆಯುವ ಗಣೇಶೋತ್ಸವ ಎಲ್ಲ ಊರುಗಳಲ್ಲಿಯೂ ವಿಜೃಂಭಣೆಯಿಂದಲೇ ನಡೆಯುತ್ತದೆ; ಹಿರಿಯರು, ಕಿರಿಯರು, ಬಡವರು, ಬಲ್ಲಿದರು, ಪಂಡಿತರು, ಪಾಮರರು, ಆಸ್ತಿಕರು, ನಾಸ್ತಿಕರು ಎಲ್ಲರೂ ಇದರಲ್ಲಿ ಸೇರುತ್ತಾರೆ. ಧಾರ್ಮಿಕ ವಿಧಿಯಲ್ಲಿ ಸಾಂಘಿಕ ಪ್ರವೃತ್ತಿಯೂ ಸಾಮಾಜಿಕ ಪ್ರಯೋಜನವೂ ಬೆರೆತಿರುವ ನಿದರ್ಶನಗಳಲ್ಲಿ ಇದೊಂದು.

ಆದರೆ ಎಲ್ಲ ಕಾಲದಲ್ಲಿಯೂ ಗಣಪತಿಯ ಜನಪ್ರೀತಿ ಹೀಗೆಯೇ ಇದ್ದಿತೆಂದು ಬಗೆಯಬಾರದು. ಗಣಪತಿಯೆಂದರೆ ಅಂಜಿಕೆ, ಅಸಡ್ಡೆಗಳಿದ್ದ ಕಾಲವೂ ಇದ್ದಿತು; ಗಣಪತಿಯ ಪರಿಚಯವೇ ಇರದಿದ್ದ ಕಾಲವೂ ಒಂದಿದ್ದಿತು. ಗಣಪತಿಯ ಪೂಜೆಯ ಇತಿಹಾಸವನ್ನು ಹೆಜ್ಜೆಹೆಜ್ಜೆಗಳಲ್ಲಿ ನಿಶ್ಚಯಿಸುವುದು ಸಾಧ್ಯವಿಲ್ಲ, ನಿಜ; ಹಿಂದೆ ಹೋದಂತೆಲ್ಲ ಕಲ್ಪನೆಯ ಕಾಡು ದಟ್ಟವಾಗುತ್ತದೆ ಎನ್ನುವುದೂ ನಿಜ. ಆದರೆ ಬೆಳೆದು ಬಂದ ದಾರಿಯನ್ನು ದಪ್ಪದಪ್ಪನಾಗಿ ಗುರುತಿಸಬೇಕಾಗುತ್ತದೆ; ಇಲ್ಲವಾದರೆ ತಾತ್ಪರ್ಯ ತಿಳಿಯುವುದು ಕಷ್ಟ.

ನಮ್ಮಲ್ಲಿ ಎಲ್ಲವನ್ನೂ ವೇದಕ್ಕೆ ಹಿಂದಿರುಗಿಸುವ ವಾಡಿಕೆಯಿದೆಯಷ್ಟೆ. ಎಲ್ಲ ಆಚಾರವೂ ವೇದಮೂಲ, ಎಲ್ಲ ವಿಚಾರವೂ ವೇದಮೂಲ. ವೇದವಂತೂ ಅನಾದಿಯೆಂದಮೇಲೆ ಹೆಜ್ಜೆಗುರುತು ಹಿಡಿದು ಹುಡುಕುವವರ ಆಶೆಯೆಲ್ಲ ಅಲ್ಲಿಗೆ ಮುಗಿದಂತೆಯೇ ! ಅಂತೂ, ನಾವು ಮುಖ್ಯವೆಂದುಕೊಂಡುದನ್ನೆಲ್ಲ ವೇದದಲ್ಲಿ ಕಾಣ ಬಯಸುತ್ತೇವೆ. ವೇದ ಒಪ್ಪಿದೆಯೆಂದರೆ ನಮಗೆ ಏನೋ ನೆಮ್ಮದಿ ! ಗಣಪತಿ ವೇದದಲ್ಲಿ ಇಲ್ಲದೆ ಹೋದರೆ ಹೇಗೆ? ಕಾಲೂರಿ ನಿಂತ ನೆಲವೇ ಬಾಯ್ಬಿಟ್ಟಂತೆ ಅಲ್ಲವೇ? ಗಣಪತಿಯನ್ನು ಪೂಜೆಮಾಡುವಾಗ ವೇದಮಂತ್ರಗಳನ್ನೇ ಹೇಳುತ್ತೇವೆ; ಮನೆಗಳಲ್ಲಿ ನಮ್ಮಿಂದ ಗಣಪತಿಪೂಜೆಮಾಡಿಸುವ ಪುರೋಹಿತರೂ, ಗುಡಿಗಳಲ್ಲಿ ಗಣಪತಿ ಪೂಜೆಮಾಡುವ ಅರ್ಚಕರೂ ವೈದಿಕರೇ ಅಲ್ಲವೆ? ವೇದಗಳನ್ನು ಸಿದ್ಧಪಡಿಸಿದ ಋಷಿಗಳು ಗಣಪತಿಯನ್ನು ಕಂಡರಿಯರೆ?

ಋಗ್ವೇದದಲ್ಲಿ ಗಣಪತಿಯ ಪ್ರಸ್ತಾಪ ಬರುತ್ತದೆ, ನಿಜ; ಒಂದಲ್ಲ, ಎರಡು ಬಾರಿ. ಇಡೀ ಋಗ್ವೇದದಲ್ಲಿ ಎರಡೇ ಬಾರಿ ಎನ್ನುವುದೂ ನಿಜ! ಒಂದಂತೂ ಋಗ್ವೇದದಲ್ಲಿ ಅತಿ ಪ್ರಾಚೀನ ನೆಲೆಗೆ ಸೇರಿದ ಎರಡನೆಯ ಮಂಡಲದಲ್ಲಿ; ಇನ್ನೊಂದೇನೋ ಅಷ್ಟು ಹಳೆಯದಲ್ಲದ ಹತ್ತನೆಯ ಮಂಡಲದಲ್ಲಿ. ಮೊದಲ ಪ್ರಸ್ತಾಪದ ಸಂದರ್ಭವೇನು? ಆ ಮಂತ್ರವೇನೋ ಸಾಮಾನ್ಯವಾಗಿ ಎಲ್ಲರೂ ಕೇಳಿರುವುದೇ:—

ಗಣಾನಾಂ ತ್ವಾ ಗಣಪತಿಂ ಹವಾಮಹೇ
ಕವಿಃ ಕವೀನಾಂ ಉಪಮಶ್ರವಸ್ತಮಂ ।
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ
ಆ ನಃ ಶೃಣ್ವನ್ನೂತಿಭಿಃ ಸೀದಸಾದನಂ ॥ (೨, ೨೩-೧)

ಇದರ ಅರ್ಥವೇನು? "ಎಲೆ ಬ್ರಹ್ಮಣಸ್ಪತಿಯೇ, ಗಣಗಳಿಗೆ ಒಡೆಯನಾದ ನಿನ್ನನ್ನು ಬೇಡಿಕೊಳ್ಳುತ್ತೇವೆ. ಕವಿಗಳಲ್ಲಿ ಕವಿ ನೀನು (ದ್ರಷ್ಟಾರ ಎನ್ನುವ ಅರ್ಥದಲ್ಲಿ); ಎಣೆಯಿಲ್ಲದ ಅನ್ನ ನಿನ್ನದು! ಹಿರಿಯರಿಗೆಲ್ಲ ಹಿರಿಯ ದೊರೆ ನೀನು! ಯಜ್ಞಗಳನ್ನು ಮಾಡುತ್ತಿರುವೆಡೆ ನಿನ್ನ ಆಸನವಿದೆ, ಬಾ ಕುಳಿತುಕೋ!" ಈ ಮಂತ್ರದಲ್ಲಿ ಗಣಪತಿಯೆನ್ನುವ ಮಾತೇನೋ ಇದೆ; ಈ ಮಾತಿರುವುದರಿಂದಲೇ ಗಣಪತಿಯ ಪೂಜೆಯಲ್ಲಿ ಈ ಮಂತ್ರವನ್ನು ಬಳಸುತ್ತಾರೆನ್ನಿ. ಆದರೆ ಇಲ್ಲಿ ಬರುವ ಗಣಪತಿಯು ನಮ್ಮ ಗಣಪತಿಯೇ? ಐತರೇಯ ಬ್ರಾಹ್ಮಣ (4,4) ಅಲ್ಲವೆನ್ನುತ್ತದೆ. ಅದರ ಪ್ರಕಾರ ಇದು ಬೃಹಸ್ಪತಿಯನ್ನು ಕುರಿತ ಮಂತ್ರ. ಬ್ರಹ್ಮವೆಂದರೆ ಸ್ತವನ, ಸ್ತೋತ್ರ; ಅದಕ್ಕೆ ಒಡೆಯ ಬ್ರಹ್ಮಣಸ್ಪತಿ ಅಥವಾ ಬೃಹಸ್ಪತಿ. ವೇದಗಳಿಗೆ ಭಾಷ್ಯ ಬರೆದ ಸಾಯಣಾಚಾರ್ಯರು ಇಲ್ಲಿ ಬರುವ 'ಗಣಾನಾಂ' ಎನ್ನುವ ಮಾತಿಗೆ 'ದೇವಾದಿಗಣಾನಾಂ' ಎಂದು ಅರ್ಥಮಾಡಿದ್ದಾರೆ. ಎಂದರೆ, ಇಲ್ಲಿ ಗಣಪತಿಯೆಂದರೆ ದೇವಗಣಗಳಿಗೆ ಒಡೆಯನಾದ ಬೃಹಸ್ಪತಿ. ತುಂಬ ಹಳೆಯದೆನಿಸಿದ ಪ್ರಸ್ತಾಪದ ಸ್ವಾರಸ್ಯ ಇಷ್ಟೇ! ಇನ್ನು ಉಳಿದ ಉಲ್ಲೇಖವನ್ನು ನೋಡೋಣ. ಆ ಮಂತ್ರ ಹೀಗಿದೆ—

ನಿ ಷು ಸೀದ ಗಣಪತೇ ಗಣೇಷು
ತ್ವಾಮಾಹುರ್ವಿಪ್ರತಮಂ ಕವೀನಾಂ ।
ನ ಋತೇ ತ್ವತ್ ಕ್ರಿಯತೆ ಕಿಂಚನಾರೆ
ಮಹಾಂ ಅರ್ಕಂ ಮಘವಞ್ ಚಿತ್ರಮರ್ಚ ॥ (೧೦, ೧೧೨, ೯)

ಇದರ ಅರ್ಥ "ಗಣಪತಿಯೇ, ಗಣಗಳ ನಡುವೆ ಕೂಡು! ಕವಿಗಳಲ್ಲಿ (ಎಂದರೆ ದ್ರಷ್ಟಾರರಲ್ಲಿ) ನಿನ್ನನ್ನೇ ತುಂಬ ಬುದ್ಧಿವಂತನೆಂದು ಹೇಳುವರು. ಹತ್ತಿರವಾಗಲೀ ದೂರವಾಗಲೀ ನಿನ್ನನ್ನು ಬಿಟ್ಟು ನಡೆಯುವುದು ಯಾವುದೂ ಇರದು. ಸಂಪತ್ತನ್ನು ಪಡೆದವನೇ, ಮಹತ್ತಾದ, ಚಿತ್ರವಿಚಿತ್ರವಾದ ಸೂರ್ಯನನ್ನು ಹೊಗಳು!" ಇಲ್ಲಿ ಗಣಪತಿಯಾದರೂ ನಮ್ಮ ಗಣಪತಿಯೆ? ಸಾಯಣಾಚಾರ್ಯರು ಇಲ್ಲಿ 'ಗಣೇಷು' ಎಂದರೆ 'ಸ್ತೋತೃಗಣೇಷು' (ಯಜ್ಞಯಾಗಾದಿ ಸಂದರ್ಭದಲ್ಲಿ ಗುಂಪಾಗಿ ಹಾಡುವವರು) ಎಂದು ವಿವರಿಸಿದ್ದಾರೆ. ಮರುದ್ಗಣಗಳ ಒಡೆಯನಾದ ಇಂದ್ರನನ್ನು ಕುರಿತ ಮಂತ್ರ ಇದು ಎಂದು ಅವರ ಎಣಿಕೆ!

ಹೀಗೆ ಋಗ್ವೇದದಲ್ಲಿ ದೊರೆಯುವ ಎರಡೂ ಪ್ರಸ್ತಾಪಗಳಲ್ಲಿ 'ಗಣಪತಿ' ಯೆನ್ನುವ ಮಾತಿದ್ದರೂ ನಮ್ಮ ಗಣಪತಿ ಅಲ್ಲಿ ಸೇರುವಹಾಗಿಲ್ಲ. ವೇದಯುಗದಲ್ಲಿ ಗಣಗಳಿಗೆ ಹಿರಿಮೆಯಿದ್ದಿತು; ಗಣಗಳ ಉಲ್ಲೇಖವಂತೂ

ಋಗ್ವೇದದಲ್ಲಿ ಹಲವೆಡೆ ಬರುತ್ತದೆ. ಅಲ್ಲಿ ಗಣವೆಂದರೆ ಯಾವುದಾದರೊಂದು ಕಟ್ಟು–ಕಟ್ಟಳೆಯನ್ನು ಅನುಸರಿಸಿ ಅದರಂತೆ ನಡೆದುಕೊಳ್ಳುವ ಜನರ ಗುಂಪು ಅಷ್ಟೆ. 'ಮನುಷ್ಯರ ಗಣ', 'ಶ್ರೋತೃಗಳ ಗಣ', 'ಆಂಗಿರಸರ ಗಣ', 'ಮರುತ್ತುಗಳ ಗಣ' ಎಂದು ಮುಂತಾಗಿ ಉಲ್ಲೇಖಗಳಿವೆ. ಹೀಗಾಗಿ ಗಣಪತಿಯೆಂದರೆ ಯಾವೊಬ್ಬ ವ್ಯಕ್ತಿಯ, ದೇವತೆಯ ಹೆಸರಲ್ಲ; ಗುಂಪಿಗೆ ಒಡೆಯ ಎಂದಷ್ಟೇ ಅರ್ಥ.

ಋಗ್ವೇದದಲ್ಲಿ ಹೋಗಲಿ, ಅದರ ತರುವಾಯ ಸಿದ್ಧವಾದ ಸಾಹಿತ್ಯದಲ್ಲಿಯಾದರೂ ಗಣಪತಿ ಕಾಣಬರುತ್ತಾನೆಯೆ? ಯಜುರ್ವೇದದಲ್ಲಿ ಗಣಪತಿಯ ಪ್ರಸ್ತಾಪವೇನೋ ಇದೆ; ಆದರೆ ಇಲ್ಲಿ ಗಣಪತಿಯೆಂದರೆ ರುದ್ರ. ತೈತ್ತಿರೀಯಸಂಹಿತೆ (4, 1, 2, 2)ಯಲ್ಲಿ ಈ ಅರ್ಥವನ್ನು ಹೇಳುವ ಮಾತು ಹೀಗೆ ಬರುತ್ತದೆ—

ಪ್ರತೂರ್ವನ್ನೇಹ್ಯವಕ್ರಾಮನ್ನಶಸ್ತೀ ರುದ್ರಸ್ಯ ಗಾಣಪತ್ಯಾನ್ ಮಯೋಭೂರೇಹಿ,

ಇಲ್ಲಿ 'ಗಾಣಪತ್ಯ' ಎನ್ನುವುದಕ್ಕೆ ಸಾಯಣಾಚಾರ್ಯರ ವಿವರಣೆ "ಪಶುಸಮೂಹ ಪತಿತ್ವಂ" ಎಂದು; ಪಶುಗಳಿಗೆ ಒಡೆಯನಲ್ಲವೆ ರುದ್ರ? ಇದೇ ಅರ್ಥ ಬರುವ ಮಾತು ವಾಜಸನೇಯಿಸಂಹಿತೆಯಲ್ಲಿಯೂ ಬರುತ್ತದೆ. ಪಶುಪತಿ–ರುದ್ರನಿಗೂ ಗಣಪತಿಗೂ ಮುಂದೆ ಪುರಾಣಯುಗದಲ್ಲಿ ನೆಂಟು ಒದಗಿಬಂದಿತು, ದಿಟ. ಆದರೆ ಇಲ್ಲಿಯಂತೂ ನಮ್ಮ ಗಣಪತಿಯ ಉಲ್ಲೇಖವಿಲ್ಲ. ಶುಕ್ಲಯಜುರ್ವೇದದ ಹದಿನಾರನೆಯ ಅಧ್ಯಾಯದಲ್ಲಿ (ತೈತ್ತಿರೀಯ ಸಂಹಿತೆ, 4, 5, 4, 1) ಇನ್ನೂ ಒಂದು ಪ್ರಸ್ತಾಪವಿದೆ–

ನಮೋ ಗಣೇಭ್ಯೋ ಗಣಪತಿಭ್ಯಶ್ಚ ವೋ ನಮಃ

ಇಲ್ಲಿ ಗಣಪತಿಗಳೊಂದಿಗೆ ಗಣಗಳಿಗೂ ನಮಸ್ಕಾರವನ್ನು ಸಲ್ಲಿಸಿದ್ದಾರಲ್ಲ? ಇದೇ ಮಂತ್ರ ವಾಜಸನೇಯಿ ಸಂಹಿತೆಯಲ್ಲಿಯೂ ಬರುತ್ತದೆ. ತೈತ್ತಿರೀಯದ ಮಂತ್ರಕ್ಕೆ ಸಾಯಣಾಚಾರ್ಯರೂ ವಾಜಸನೇಯಿ ಮಂತ್ರಕ್ಕೆ ಮಹೀಧರನೂ ಭಾಷ್ಯ ಬರೆಯುವಾಗ ಗಣಗಳೆಂದರೆ ದೇವತೆಯ ಅನುಚರರಾದ ಭೂತವಿಶೇಷಗಳೆಂದೂ ಅವುಗಳ ಒಡೆಯರು ಗಣಪತಿಗಳೆಂದೂ ವಿವರಿಸಿದ್ದಾರೆ ("ದೇವಸ್ಯಾನುಚರಾ ಭೂತವಿಶೇಷಗಣಾಃ, ತೇಷಾಂ ಪಾಲಕಾ ಗಣಪತಯಃ").

ವೇದಯುಗದಲ್ಲಿ ಗಣಪತಿಯ ಪೂಜೆ ಇದ್ದಿತೋ ಇಲ್ಲವೋ ಎನ್ನುವುದು ಮೇಲಿನ ಪ್ರಸ್ತಾಪಗಳಿಂದ ಸಿದ್ಧವಾಗುವುದಿಲ್ಲ. ವೈದಿಕಸಂಪ್ರದಾಯದ ಮೊದಲ ಹೆಜ್ಜೆಗಳಲ್ಲಿ ಗಣಪತಿ ಕಾಣಿಸಿಕೊಳ್ಳಲಿಲ್ಲ, ಅಥವಾ ಕಾಣಿಸಿಕೊಂಡಿರಲಾರ ಎಂದಷ್ಟೇ ಇಲ್ಲಿ ಸೂಚನೆ. ಈ ಸಂಪ್ರದಾಯವನ್ನು ಯಾವ ಸಂಕರಕ್ಕೂ ಎಡೆಗೊಡದಂತೆ ಕಾಪಿಡುತ್ತಿದ್ದ 'ಆರ್ಯ' ಜನರು ಗಣಪತಿಯನ್ನು ದೈವವೆಂದು ಬಗೆದಿರಲಿಲ್ಲ. ಆದರೆ ಅದೇ ಕಾಲದಲ್ಲಿಯೇ, ಆ ಕಾಲಕ್ಕೆ ಇನ್ನೂ ಮೊದಲೇ, ಗಣಪತಿಯಂಥ ದೇವತೆಗಳನ್ನು ಆರಾಧಿಸುತ್ತಿದ್ದ ಜನರಿದ್ದರು. ಇವರ ಸಂಖ್ಯೆಯೂ ದೊಡ್ಡದಾಗಿದ್ದು, ಪ್ರಭಾವವೂ ಬರುಬರುತ್ತ ಪ್ರಬಲವಾದಂತೆ ತೋರುತ್ತದೆ. ವೈದಿಕ ಸಂಪ್ರದಾಯದಲ್ಲಿಯೇ ಹಟವಿದ್ದವರು ಕೂಡ ಈ ಪ್ರಭಾವದೊಳಗೆ ಸೇರಿಕೊಂಡುದು ಸಹಜವೇ. ಇಂದ್ರ, ಅಗ್ನಿ, ವರುಣ, ಬೃಹಸ್ಪತಿ ಮೊದಲಾದ ವೇದಯುಗದ ದೇವತೆಗಳು ಜನರ ವಿಶ್ವಾಸವನ್ನು ಉಳಿಸಿಕೊಳ್ಳಲಾರದೆ ಬಹುಜನರ ನಂಬಿಕೆಗಳ ಹೊರೆಯಲ್ಲಿ ಮರೆಯಾದರು.

ಇದಕ್ಕೆ ನಿದರ್ಶನವನ್ನು ಗೃಹ್ಯಸೂತ್ರಗಳಲ್ಲಿ ಕಾಣಬಹುದು. ವೈದಿಕ ಸಂಸ್ಕಾರಕ್ಕೆ ತೀರ ಒಗ್ಗಿಕೊಳ್ಳದ ಸಾಮಾನ್ಯಜನ ತಂತಮ್ಮ ಹಳೆಯ ನಂಬಿಕೆಗಳನ್ನೂ, ಕಟ್ಟಳೆಗಳನ್ನೂ ಉಳಿಸಿಕೊಂಡು ಬಂದಿದ್ದುದು ಇಲ್ಲಿ

ಕಾಣಸಿಗುತ್ತದೆ. ಇವನ್ನು ವೈದಿಕ ಉತ್ಸಾಹಿಗಳು ಒಪ್ಪಿಯೂ ಕೊಂಡರು; ಅದು ಸ್ವಾರಸ್ಯ. ಈ ಸಂದರ್ಭದಲ್ಲಿ ಗಣಪತಿಯ ಪೂಜೆಯ ಪ್ರಸ್ತಾಪ ಮುಖ್ಯವಾಗಿಯೇ ಬರುತ್ತದೆ. ಆದರೆ ಇಲ್ಲಿ 'ಗಣಪತಿ' ಎನ್ನುವ ಮಾತು ಬರುವುದಿಲ್ಲ; ಅಲ್ಲಿ ಬರುವುದು ಗಣಪತಿಯ ವಾಡಿಕೆಯ ಇನ್ನೊಂದು ಹೆಸರಾದ ವಿನಾಯಕ, ಅದೂ ಬಹುವಚನದಲ್ಲಿ. ಹಲವಾರು ವಿನಾಯಕರನ್ನು ಜನಸಾಮಾನ್ಯರು ಪೂಜೆಮಾಡುತ್ತಿದ್ದರು. 'ವಿನಾಯಕ' ಎಂದರೆ ವಿಶಿಷ್ಟನಾಯಕ, ವಿಶೇಷವಾಗಿ ಶಾಸನವನ್ನು ಮಾಡುವವನು ಎಂದರ್ಥ. ಆದರೆ ಇಲ್ಲಿ ವಿನಾಯಕರನ್ನು ದೇವತೆಗಳು ಎನ್ನುವುದಕ್ಕಿಂತ ಭೂತಗಳು ಎಂದರೆ ಒಪ್ಪುತ್ತದೆ; ಏಕೆಂದರೆ ಅವುಗಳಿಂದ ಅಡ್ಡಿ, ಅಡಚಣೆ, ಆತಂಕ, ಉಪದ್ರವ ಇವೇ ಹೆಚ್ಚು. ಮಹಾಭಾರತದಲ್ಲಿ ಯಾವುದೋ ಸ್ತವವನ್ನು ಹೇಳಿದರೆ ಇಂಥ ತೊಂದರೆಗಳಾಗುವುದಿಲ್ಲ ಎಂದು ಹೇಳುವಾಗ ವಿನಾಯಕ ಎಂಬ ಮಾತನ್ನು ರಾಕ್ಷಸ, ಪಿಶಾಚ, ಭೂತ ಗಳೊಂದಿಗೇ ಹೇಳಿದ್ದಾರೆ—

> ನ ರಾಕ್ಷಸಾ ನ ಪಿಶಾಚಾ ನ ಭೂತಾ ನ ವಿನಾಯಕಾಃ ।
> ವಿಘ್ನಂ ಕುರ್ಯುರ್ಗೃಹೇ ತಸ್ಯ ಯತ್ರಾಯಂ ಪಠ್ಯತೇ ಸ್ತವಃ ॥ (೧೨, ೨೮೪, ೧೩೧)

ಭಾಗವತದಲ್ಲಿ ಮಕ್ಕಳಿಗೆ ತೊಂದರೆಪಡಿಸುವ ಬಾಲಗ್ರಹಗಳ ಸಾಲಿನಲ್ಲಿ ವಿನಾಯಕರು ನಿಲ್ಲುತ್ತಾರೆ.

> ಡಾಕಿನ್ಯೋ ಯಾತುಧಾನ್ಯಶ್ಚ ಕೂಷ್ಮಾಂಡಾ ಯೇಽರ್ಭಕಗ್ರಹಾಃ ।
> ಭೂತಪ್ರೇತಪಿಶಾಚಾಶ್ಚ ಯಕ್ಷರಕ್ಷೋ ವಿನಾಯಕಾಃ ॥ (೧೦, ೬, ೨೮)

ಎಂಥ ಜೊತೆ ವಿನಾಯಕರಿಗೆ! ಹೀಗೆ ಆ ಕಾಲದವರಿಗೆ ವಿನಾಯಕರೆಂದರೆ ಅಂಜಿಕೆ.

ಮುಖ್ಯವಾಗಿ ಮಾನವಗೃಹ್ಯಸೂತ್ರ (2, 14) ಮತ್ತು ಅಪರಾರ್ಕಸಂಗ್ರಹದಲ್ಲಿ ಸೇರಿರುವ ಬೈಜವಾಪಗೃಹ್ಯದ ಭಾಗಗಳು, ಯಾಜ್ಞವಲ್ಕ್ಯಸ್ಮೃತಿಗೆ ಶೂಲಪಾಣಿ ಬರೆದಿರುವ ದೀಪಕಲಿಕಾ ಎನ್ನುವ ವ್ಯಾಖ್ಯಾನ ಇವುಗಳಲ್ಲಿ ವಿನಾಯಕರ ಪ್ರಸ್ತಾಪ ಬರುತ್ತದೆ. ವಿನಾಯಕರ ಸಂಖ್ಯೆ ದೊಡ್ಡದಾದರೂ ನಾಲ್ವರು ಪ್ರಮುಖರಾದ ವಿನಾಯಕರು ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಶಾಂತಿಮಯೂಖದಲ್ಲಿ ವಿನಾಯಕರ ಒಟ್ಟು ಸಂಖ್ಯೆ 281 ! ಮಾನವಗೃಹ್ಯಸೂತ್ರ ಇವರನ್ನು ಶಾಲಕಟಂಕಟ, ಕೂಷ್ಮಾಂಡರಾಜಪುತ್ರ, ಉಸ್ಮಿತ ಮತ್ತು ದೇವಯಜನ ಎಂದು ಕರೆದಿದೆ; ಬೈಜವಾಪ ಗೃಹ್ಯ ಇವರನ್ನು ಮಿತ, ಸಮ್ಮಿತ, ಶಾಲಕಟಂಕಟ, ಕೂಷ್ಮಾಂಡರಾಜ ಪುತ್ರ ಎಂದು ಹೆಸರಿಸಿದೆ. ಅಲ್ಲಿಯೂ ಇಲ್ಲಿಯೂ ನಾಲ್ವರೇ ವಿನಾಯಕರು ('ಅಥ ಚತ್ವಾರಃ ಖಲು ವಿನಾಯಕಾಃ ...'). ಇವರಲ್ಲದೆ ಹಲವಾರು ಇತರ ಉಪದ್ರವಕಾರಕ ದೈವಗಳೂ ಗೃಹ್ಯಸೂತ್ರಗಳ ಕಾಲದ ಜನರಿಗೆ ತಿಳಿದಿದ್ದುವು. ಮಾನವಗೃಹ್ಯಸೂತ್ರದಲ್ಲಿ ಸಣ್ಣದೊಂದು ಪಟ್ಟಿಯಿದೆ—ವಿಮುಖ, ಶ್ಯೇನ, ಬಕ, ಯಕ್ಷ, ಕಲಹ, ಭೀರು, ವಿನಾಯಕ, ಕೂಷ್ಮಾಂಡರಾಜಪುತ್ರ, ಯಕ್ಷವಿಕ್ಷೇಪಿ, ಕುಲಂಗಾಪಮಾರ, ಯೂಪಕೇಶಿ, ಸೂಪರಕ್ರೋಡಿ, ಹೈಮವತ, ಜಂಭಕ, ವಿರೂಪಾಕ್ಷ, ಲೋಹಿತಾಕ್ಷ, ವೈಶ್ರವಣ, ಮಹಾಸೇನ, ಮಹಾದೇವ, ಮಹಾರಾಜ. ಇವರ ಸ್ವರೂಪವೇನೋ, ಸ್ವಭಾವವೇನೋ, ಮುಂದೆ ಇವರ ಗತಿಯೇನಾಯಿತೋ ತಿಳಿಯದು. ಯಕ್ಷರು ಉಳಿದುಕೊಂಡರು; ವಿನಾಯಕ ಗಣಪತಿಯಾದನ್ನೆನ್ನೋಣ; ವಿರೂಪಾಕ್ಷನೇ ಶಿವನಿದ್ದೀತು; ವೈಶ್ರವಣನಂತೂ ಕುಬೇರ, ಒಬ್ಬ ಯಕ್ಷನೇ; ಮಹಾಸೇನನೆಂದರೆ ಮುಂದೆ ಸ್ಕಂದನಾದವನೆ? ಹೋಗಲಿ, ಇವರ ವಿಚಾರವಾಗಿ ವಿವರಗಳು ಸ್ಪಷ್ಟವಲ್ಲವೆಂದು ಬಿಟ್ಟರೂ, ವಿನಾಯಕರನ್ನು ಬಿಡುವಹಾಗಿಲ್ಲ:

ಈಗಲೂ ಮಹಾಗಣಪತಿ ಪೂಜೆಮಾಡುವಾಗ 'ವಿನಾಯಕಾದಿನ್ಯಾಸ' ಎಂಬ ವಿಧಿಯನ್ನು ಕೈಗೊಳ್ಳುತ್ತಾರೆ. ಗಣಪತಿಯ ಹತ್ತು ಅಂಗಗಳಲ್ಲಿ ವಿನಾಯಕರೆಂಬ ವಿಘ್ನೇಶ್ವರರನ್ನು ವಿನ್ಯಾಸಮಾಡುವ ವಿಧಿಯಿದು—

> ಮೂರ್ಧ್ನಿ ನೇತ್ರೇಚ ಜಿಹ್ವಾಯಾಂ ಹೃನ್ನಾಭಿಶಿವಜಾನುಷು ।
> ವಿನಾಯಕಾದಿ ವಿಘ್ನೇಶಾನ್ ಚರಣಾಗ್ರೇಷು ವಿನ್ಯಸೇತ್ ॥
> ವಿನಾಯಕೋ ವಿರೂಪಾಕ್ಷಃ ಕ್ರೂರಕರ್ಮಾsಪರಾಜಿತಃ ।
> ಚಂಡವೇಗೋ ಗಜಗ್ರೀವಃ ಕರಾಳಶ್ಚಂಡವಿಕ್ರಮಃ ॥

ವಿನಾಯಕರ ಸ್ವರೂಪ ಸ್ವಭಾವಗಳ ಸ್ಪಷ್ಟವರ್ಣನೆಯಲ್ಲವೆ ಇದು?

ನಮ್ಮ ಹಳ್ಳಿಗಳ ಕಡೆ 'ದೆವ್ವಹಿಡಿಯಿತು', 'ಭೂತದ ಆವೇಶವಾಗಿದೆ', 'ಪಿಶಾಚಿ ಮೆಟ್ಟಿತು' ಎಂದು ಹೇಳಿದ ಹಾಗೆಯೇ ಮೊದಲಿಗೆ 'ವಿನಾಯಕರು ಹಿಡಿದಿದ್ದಾರೆ' ಎನ್ನುವ ವಾಡಿಕೆಯಿದ್ದಿತು. ಹಾಗೆ ಹಿಡಿದವರು ಏನು ಮಾಡುತ್ತಿದ್ದರು? ಗೃಹ್ಯಸೂತ್ರಗಳಲ್ಲಿ ಈ ವಿವರವೂ ಇರುವುದು ಸ್ವಾರಸ್ಯ. "ವಿನಾಯಕರು ಮೆಟ್ಟಿದ ಮನುಷ್ಯ ಮಣ್ಣು ಹೆಂಟೆಗಳನ್ನು ಪುಡಿಮಾಡುತ್ತಾನೆ, ಹುಲ್ಲನ್ನು ಕೀಳುತ್ತಾನೆ, ತನ್ನ ಮೈ ಕೈಮೇಲೆ ಬರೆದು ಕೊಳ್ಳುತ್ತಾನೆ, ಕೆಟ್ಟ ಕನಸುಗಳನ್ನು ಕಾಣುತ್ತಾನೆ, ಗಾಳಿಯಲ್ಲಿ ಹಾರುತ್ತಿದ್ದೇನೆಂದುಕೊಳ್ಳುತ್ತಾನೆ, ದಾರಿಯಲ್ಲಿ ನಡೆಯುವಾಗ ಯಾರೋ ಆಗದವರು ತನ್ನನ್ನು ಹಿಂಬಾಲಿಸುತ್ತಿದ್ದಾರೆಂದು ಬಗೆಯುತ್ತಾನೆ. ವಿನಾಯಕ ಗ್ರಸ್ತರಾದ ರಾಜಪುತ್ರರು ಯೋಗ್ಯರಾದರೂ ಎಲ್ಲವೂ ಅನುಕೂಲವಾಗಿದ್ದರೂ ರಾಜ್ಯವನ್ನು ಕಳೆದುಕೊಳ್ಳುವರು ಲಕ್ಷಣವಾಗಿರುವ ಹೆಣ್ಣುಮಕ್ಕಳು ಮದುವೆಯಾಗದೆ ನಿಲ್ಲುವರು; ಮದುವೆಯಾದ ಹೆಂಗಸರು ಮಕ್ಕಳಾಗದೆ ಕೊರಗುವರು; ಮಕ್ಕಳು ಕಾರಣವಿಲ್ಲದೆ ತೀರಿಕೊಳ್ಳುವರು; ಎಷ್ಟು ಸಮರ್ಥನಾದ ಗುರುವಾದರೂ ಶಿಷ್ಯರು ಹತ್ತಿರ ಸುಳಿಯರು; ಓದು ನೂರೆಂಟು ತೊಂದರೆಗಳಿಂದ ಮುಗ್ಗರಿಸುವುದು, ವ್ಯಾಪಾರ ಕೆಡುವುದು ವ್ಯವಸಾಯದಿಂದ ಲಾಭಬಾರದು......" ಇತ್ಯಾದಿ. ಇದು ವಿನಾಯಕರ ಪ್ರತಾಪ!

ಹಲವಾರು ವಿನಾಯಕರಲ್ಲಿ ನಮ್ಮ ಗಣಪತಿಯಾದ ವಿನಾಯಕ ಒಬ್ಬನು ಮಾತ್ರ ಉಳಿದುಕೊಂಡುದು ಹೇಗೋ ತಿಳಿಯದು. ಈ ಆಯ್ಕೆ ಆದುದು ಎಂದು ಎಂಬುದೂ ತಿಳಿಯದು. ಯಾಜ್ಞವಲ್ಕ್ಯಸ್ಮೃತಿ ಯಲ್ಲೇನೋ ನಾಲ್ವರೂ ವಿನಾಯಕರು ದಿಟವಾಗಿ ಒಬ್ಬನೇ ವಿನಾಯಕನ ಹೆಸರುಗಳೆಂದೂ, ಅವನು ಅಂಬಿಕೆಯ ಮಗನೆಂದೂ ಹೇಳಿದೆ. ಇದು ಹೇಗಾದರೂ ಇರಲಿ, ಗಣಪತಿಯ ಸ್ವಭಾವವೂ ವಿನಾಯಕರ ಸ್ವಭಾವವೇ ಆಗಿದ್ದಿತು ಎನ್ನಲಡ್ಡಿಯಿಲ್ಲ. ಈಗಲೂ ಗಣಪತಿಯನ್ನು ವಿಘ್ನೇಶ್ವರ, ವಿಘ್ನರಾಜ ಎನ್ನುವುದಿಲ್ಲವೇ? ಹಾಗೆಂದರೆ ತೊಂದರೆಗಳ ಒಡೆಯ ಎಂದೇ ಅರ್ಥ. ಅವನ ಪೂಜೆಮಾಡುವಾಗಲೂ ಮೊದಲು ವಿಘ್ನಕರ್ತೃ (ಎಂದರೆ ತೊಂದರೆ ಮಾಡುವವನು) ಎಂದು ಕರೆದು ಅನಂತರ ವಿಘ್ನಹರ್ತೃ (ಎಂದರೆ ತೊಂದರೆಗಳನ್ನು ನೀಗಿಸುವವನು) ಎನ್ನುವುದಿದೆ. 'ವಿಘ್ನವಿನಾಯಕ' ಎನ್ನುವ ಹೆಸರೂ ಉಚಿತವೇ! ಗಣಪತಿಯನ್ನು ಬರಿಯ 'ವಿಘ್ನ' ವೆಂದೇ ಕರೆದಿರುವುದೂ ಉಂಟು. ಪುರಾಣಕಥೆಗಳಲ್ಲಿಯೂ ತಾಂತ್ರಿಕ ವಿವರಗಳಲ್ಲಿಯೂ ಹಲವಾರು ದೇವತೆಗಳು ಗಣಪತಿಯೊಂದಿಗೆ ಕಾದಾಡಿ ಅವನನ್ನು ನಿಗ್ರಹಿಸಿದ ಪ್ರಸ್ತಾಪಗಳಿವೆ. ಗಣಪತಿ ಸುಂದರ ಬಾಲಕನಾಗಿದ್ದಾಗ ಪಾರ್ವತಿ ಅವನನ್ನು ನೋಡಿ ಮುಗ್ಧಳಾದಳೆಂದು, ಶಿವ ಅಸೂಯೆಗೊಂಡು ಅವನನ್ನು ಡೊಳ್ಳುಹೊಟ್ಟೆ ಆನೆಯ ಮುಖದವನಾಗೆಂದು ಶಪಿಸಿದ ಕಥೆ ವರಾಹಪುರಾಣದಲ್ಲಿ ಬರುತ್ತದೆ ಪಾರ್ವತಿ ನೀರೆರೆದುಕೊಳ್ಳುತ್ತಿದ್ದಾಗ ಶಿವ ಒಳಗೆ ಹೋಗಲು ಅವನನ್ನು ಬಾಗಿಲಲ್ಲಿ ತಡೆದ ಗಣಪತಿಯ

ತಲೆಯನ್ನೇ ಶಿವ ಕತ್ತರಿಸಿದ ಕಥೆ ಬ್ರಹ್ಮವೈವರ್ತ ಪುರಾಣದಲ್ಲಿ ಬರುತ್ತದೆ. ಗಣಪತಿಯು ಹುಟ್ಟಿದ ಸಂದರ್ಭದಲ್ಲಿ ದೇವತೆಗಳೆಲ್ಲರೂ ಬಂದು ಮಗುವನ್ನು ನೋಡುತ್ತಿದ್ದಾಗ, ಶನಿಯೊಬ್ಬನು ಬೇರೆ ಕಡೆ ಮುಖಮಾಡಿ ನಿಂತಿರಲು, ತಾಯಿ ಪಾರ್ವತಿ ಮುನಿಸಿಕೊಳ್ಳಲು, ಶನಿ ಮಗುವಿನ ಕಡೆ ನೋಡಿದೊಡನೆ ಮಗುವಿನ ತಲೆ ಕಡಿದುಬಿದ್ದಿತೆನ್ನುವ ಕಥೆಯೂ ಅಲ್ಲಿಯೇ ಬರುತ್ತದೆ. ಗಣಪತಿಗೂ ಪರಶುರಾಮನಿಗೂ ಹಗರಣವಾಗಿ ಪರಶುರಾಮ ಗಣಪತಿಯು ಒಂದು ಕೊಂಬನ್ನು ತನ್ನ ಕೊಡಲಿಯಿಂದ ಕಡಿದುದೂ ಪುರಾಣದಲ್ಲಿ ಬರುವ ಕಥೆ.

ಯುಕ್ಷಸ್ವರೂಪ

ಗಣಪತಿಯು ಹುಟ್ಟೇ ತೊಂದರೆಯನ್ನು ಒದಗಿಸಲೆಂದು. ಸ್ಕಂದಪುರಾಣದ ಕಥೆ ಹೀಗಿದೆ. ದ್ವಾಪರ ಯುಗ ಕಳೆದು ಕಲಿಯುಗ ಆರಂಭವಾದಾಗ ಜನರೆಲ್ಲರೂ ಸೋಮನಾಥಲಿಂಗವನ್ನು ಪೂಜಿಸಿ ಸ್ವರ್ಗವನ್ನು ಸೇರತೊಡಗಿದರಂತೆ. ಸ್ವರ್ಗವೆಲ್ಲ ತುಂಬಿ, ಯಾರಿಗೂ ಎಡೆಯೇ ಇಲ್ಲದಾಗ ದೇವತೆಗಳೆಲ್ಲ ಇಂದ್ರನಲ್ಲಿ ಮೊರೆ ಯಿಡಲು, ಇಂದ್ರ ಪಾರ್ವತಿಯ ಬಳಿ ಬಂದನಂತೆ. ಆಕೆ ತನ್ನ ಮೈಕೊಳೆಯನ್ನು ಉಜ್ಜಿ ತೆಗೆದು ಅದರಿಂದ ನಾಲ್ಕು ಕೈ, ಆನೆಯ ಮೊಗದ ಗೊಂಬೆಯನ್ನು ಮಾಡಿ, ಜನರ ಒಳ್ಳೆಯ ಕೆಲಸಗಳಿಗೆ ಅಡ್ಡಿ ಆತಂಕಗಳನ್ನು ತಂದೊಡ್ಡುವಂತೆ ಅಪ್ಪಣೆ ಮಾಡಿ ಭೂಮಿಗೆ ಕಳುಹಿಸಿದಳಂತೆ. ಇದರಿಂದ ಜನಕ್ಕೆ ಸೋಮನಾಥ ಲಿಂಗ ವನ್ನು ಪೂಜಿಸುವ ಮನಸ್ಸೇ ಬಾರದೆ ಸ್ವರ್ಗದಲ್ಲಿ ತೆರವಾಯಿತಂತೆ. ಎಂದರೆ ಇಲ್ಲಿ ಗಣಪತಿ 'ವಿಘ್ನರಾಜ' ಮಾತ್ರನಲ್ಲ, ಶಿವಾರ್ಚನೆಗೆ ವಿರೋಧಿಯಾಗಿ ನಿಂತವನು. ಮತ್ಸ್ಯಪುರಾಣದಲ್ಲಿಯೂ ಶಿವಪೂಜೆಗೆ ಅಡ್ಡಿ ಯನ್ನು ತಂದೊಡ್ಡುವ ಕೆಲಸಕ್ಕಾಗಿಯೇ ಗಣಪತಿ ಮೈದುಂಬಿ ಬಂದ ಕಥೆಯಿದೆ.

ನೇಪಾಳೀ ಜನರಲ್ಲಿ ಬೌದ್ಧ ಸಂಪ್ರದಾಯಕ್ಕೆ ಸೇರಿದ ಕಥೆಯೊಂದಿದೆ. ಉಡ್ಡೀಯಾಣದ ಪಂಡಿತ ನೊಬ್ಬ ಖಟ್ಮಂಡುವಿನ ಬಳಿ ಬಾಗಮತೀನದಿಯ ದಂಡೆಯ ಮೇಲೆ ಕುಳಿತು, ಸಿದ್ಧಿಯನ್ನು ಪಡೆಯಲೆಂದು ತಪಸ್ಸು ಮಾಡತೊಡಗಿದ. ಇವನಿಗೆ ಸಿದ್ಧಿ ಕೈಗೂಡದಂತೆ ಗಣಪತಿ ಅಡ್ಡಿಗಳನ್ನು ಒಡ್ಡಲಾರಂಭಿಸಿದಾಗ ಪಂಡಿತ 'ವಿಘ್ನಾಂತಕ'ನೆಂಬ ದೇವತೆಯ ನೆರವನ್ನು ಬಯಸಿದ. ಈ ವಿಘ್ನಾಂತಕ ದೇವತೆಯು ಉಗ್ರರೂಪ ವನ್ನು ತಳೆದುಬಂದು ಗಣಪತಿಯನ್ನು ಓಡಿಸಿತು. ವಿಘ್ನಗಳನ್ನು ಕೊನೆಗಾಣಿಸಿದ ದೇವತೆ 'ವಿಘ್ನಾಂತಕ'. ವಿಘ್ನಾಂತಕ ಮೂರ್ತಿಯ ಶಿಲ್ಪಗಳು ಆ ಕಡೆ ಹಲವಾರು ಇವೆ. ನೇಪಾಳದಲ್ಲಿಯೂ ಟಿಬೆಟ್ಟಿನಲ್ಲಿಯೂ 'ಅಪರಾಜಿತೆ'ಯೆನ್ನುವ ದೇವತೆಯ ಶಿಲ್ಪಗಳಿವೆ; ಈ ಶಿಲ್ಪಗಳಿಗೆ ಧಾರಣೆಗಳೂ ಇವೆ. ದ್ವಿಭುಜ ದೇವತೆ ಯಾದ ಈಕೆ ಗಣಪತಿಯನ್ನು ತುಳಿಯುತ್ತ ಕುಳಿತಿರುತ್ತಾಳೆ. ಎಡಗಾಲಿನಿಂದ ಗಣಪತಿಯನ್ನು ತುಳಿಯುತ್ತ ನಿಂತ ಅಪರಾಜಿತೆಯನ್ನು ಸಾಧನಮಾಲೆ 'ಗಣಪತಿಸಮಾಕ್ರಾಂತೆ' ಯೆಂದೇ ಕರೆಯುತ್ತದೆ. ಹೀಗೆ ಅಪ ರಾಜಿತೆಯ ಕಾಲ ಕೆಳಗೆ ಬಿದ್ದ ಗಣಪತಿಯ ಕೈಯಲ್ಲಿ ಖಡ್ಗವೋ ಭರ್ಜಿಯೋ ಇರುತ್ತದೆ. ಹೀಗೆಯೇ ಮಹಾ ಕಾಲನ ಉಗ್ರರೂಪದ ಚಿತ್ರಣದಲ್ಲಿಯೂ ಗಣಪತಿಯ ದಮನವೇ ಮುಖ್ಯವಾದ ವಿವರ.

ಮಹಾಯಾನ ಬೌದ್ಧದೇವತೆಗಳು ಹಿಂದೂದೇವತೆಗಳನ್ನು ತುಳಿದು ತಮ್ಮ ಮೇಲ್ಮೆಯನ್ನು ತೋರಿಸಿಕೊಳ್ಳುವುದು ಈ ಶಿಲ್ಪಗಳ ಉದ್ದೇಶವೆಂದು ಕೆಲವರ ಊಹೆ. ಆದರೆ ಹಿಂದೂ ದೇವತೆಗಳು ನೂರಾರು ಇರುವಾಗ ಗಣಪತಿಯನ್ನು ಮಾತ್ರ ಈ ಬವಣೆಗೆ ಗುರಿಪಡಿಸುವುದು ಏಕೆ? ಇಷ್ಟಾಗಿ ಮಹಾ ಯಾನ ಬೌದ್ಧದೇವತೆಗಳು ಹಿಂದೂದೇವತೆಗಳನ್ನೇ ಅವಲಂಬಿಸಿ ಮೈದಳೆದವರು. 'ಕೃಷ್ಣಮಂಜುಶ್ರೀ' ಜ್ಞಾನಕ್ಕೆ, ಸಂಬೋಧಿಗೆ ಅಧಿದೇವತೆ. ಈ ದೇವತೆಯ ಕಾಲ ಕೆಳಗೆ ಬುದ್ಧಿಗೆ ಅಭಿಮಾನದೇವತೆಯಾದ ಗಣ

ಪತಿಯನ್ನು ಸಿಕ್ಕಿಸುವ ಔಚಿತ್ಯವೇನು? ಹಿಂದೂ ಧರ್ಮದ ಒಂದು ನೆಲೆಯಲ್ಲಿಯೂ ಗಣಪತಿಗೆ ಇದೇ ಪಾಡು ಒದಗಿದ್ದಿತೆಂದ ಮೇಲೆ ಗಣಪತಿಯ ಮೂಲರೂಪ 'ವಿಘ್ನ'ವೇ ಎನ್ನುವುದು ಸ್ಪಷ್ಟವಾಯಿತಲ್ಲವೆ? ಭವತೋಷ ಭಟ್ಟಾಚಾರ್ಯರು ಬೌದ್ಧಧರ್ಮದ ಪ್ರಚಾರಕ್ಕೆ ಗಣಪತಿಯೇ ಪ್ರಮುಖವಾಗಿ ಅಡ್ಡಿಯಾಗಿದ್ದನೆಂದು ವಾದಿಸಿದ್ದಾರೆ. ಆರ್ಯಧರ್ಮದ ಪ್ರಚಾರದಲ್ಲಿಯೂ ಗಣಪತಿ ಒಂದು ತೊಡಕಾಗಿಯೇ ಇರಲಿಲ್ಲವೇ? ಪುರಾಣ ಕಥೆಗಳಲ್ಲಿ ಶಿವ-ಗಣಪತಿಯರು ಕಾದಾಡುವುದು, ಪರುಶುರಾಮ-ಗಣಪತಿಗಳ ನಡುವೆ ನಡೆದ ಹಗರಣ, ಚಂದ್ರ ಗಣಪತಿಯನ್ನು ಹಾಸ್ಯಮಾಡುವುದು, ಮೊದಲಾದ ವಿವರಗಳು ಇದನ್ನೇ ಅಲ್ಲವೆ ಸೂಚಿಸುವುದು? ಆದರೆ ಆರ್ಯಧರ್ಮ ಗಣಪತಿಯನ್ನು ತನ್ನೊಡಲೊಳಗೆ ಅಳವಡಿಸಿಕೊಂಡಿತು.

ಅಂತೂ ಮೊದಲ ಹಂತದಲ್ಲಿ ಗಣಪತಿಯೆಂದರೆ 'ವಿಘ್ನ' ಎಂದಾಯಿತು. ಭೂತ, ಪ್ರೇತ, ಪಿಶಾಚಗಳ ಹಿಡಿತದಿಂದ ಜನರನ್ನು ತಪ್ಪಿಸಲು ಗೃಹ್ಯಸೂತ್ರಗಳು ಉಪಾಯಗಳನ್ನು ಸೂಚಿಸುವಂತೆಯೇ ವಿನಾಯಕರ ಬಾಧೆಯನ್ನು ತಪ್ಪಿಸಲು ಪ್ರಾಯಶ್ಚಿತ್ತಗಳನ್ನು ಹೇಳಿವೆ. ಮಾನವ ಗೃಹ್ಯಸೂತ್ರದ ಪ್ರಕಾರ ವಿನಾಯಕರಿಗೆ ಎಡೆಯನ್ನು ನಾಲ್ಕು ದಾರಿಗಳು ಸೇರುವ ಕಡೆ (ಚತುಷ್ಪಥ) ಇರಿಸಬೇಕು. ನಾಲ್ಕೂ ದಿಕ್ಕುಗಳಿಂದ ಬರುವ ಅಡ್ಡಿ ಆತಂಕಗಳನ್ನು ನಿವಾರಿಸುವುದು ಉದ್ದೇಶ. ಎಂದರೆ ನಾಲ್ಕು ದಿಕ್ಕುಗಳಲ್ಲಿ ನಾಲ್ವರು ವಿನಾಯಕರಿರುತ್ತಾರೆಂದು ಅರ್ಥವೆ? ಜೋಧಪುರದಿಂದ ಸುಮಾರು ಇಪ್ಪತ್ತು ಮೈಲಿ ದೂರದಲ್ಲಿರುವ ಘಟಿಯಾಲಾ ಎಂಬಲ್ಲಿ, ಪ್ರತೀಹಾರರಾಜ ಕುಕ್ಕುಕ ಎಂಬಾತ ಸಂವತ್ 918 ರಲ್ಲಿ (ಎಂದರೆ ಕ್ರಿಸ್ತಾಬ್ದ 862 ರಲ್ಲಿ) ನಿಲ್ಲಿಸಿದ ಕಲ್ಲುಕಂಬವೊಂದಿದೆ. ಇದರ ಮೇಲೆ ನಾಲ್ಕು ದಿಕ್ಕುಗಳಿಗೆ ಮುಖಮಾಡಿ ಕುಳಿತ ನಾಲ್ವರು ವಿನಾಯಕರ ಶಿಲ್ಪಗಳಿವೆ. ಇದು ಮೇಲಿನ ಅರ್ಥವನ್ನು ಪುಷ್ಟಿಮಾಡುವ ವಿವರ.

ಯಾಜ್ಞವಲ್ಕ್ಯಸ್ಮೃತಿ ಕ್ರಿಸ್ತಾಬ್ದ 300ರ ಸುಮಾರಿಗೆ ಸಿದ್ಧವಾದುದು. ಇದರಲ್ಲಿ ಮಿತ, ಸಮ್ಮಿತ, ಶಾಲಕಟಂಕಟ ಮತ್ತು ಕೂಷ್ಮಾಂಡರಾಜಪುತ್ರ ಈ ನಾಲ್ಕು ಹೆಸರುಗಳೂ ಒಬ್ಬನೇ ವಿನಾಯಕನವೆಂದು ಹೇಳಿದೆ (1, 271, 290). ಅಷ್ಟೇ ಅಲ್ಲದೆ ಜನರಿಗೆ ತೊಂದರೆಯನ್ನುಂಟುಮಾಡಲೂ, ತೊಂದರೆಗಳನ್ನು ನೀಗಿಸಿಕೊಂಡು ಗೆಲುವನ್ನು ಪಡೆಯುವಂತೆ ಮಾಡಲೂ ಈ ವಿನಾಯಕನನ್ನು ರುದ್ರ ಮತ್ತು ಬ್ರಹ್ಮ ಇವರು ನೇಮಿಸಿದರೆಂದೂ ವಿವರ ಅಲ್ಲಿಯೇ ಬರುತ್ತದೆ. ವಿಘ್ನಗಣಗಳಿಗೆ ಒಡೆಯನಾದ ಇವನನ್ನು ಗಣಪತಿಯೆಂದು ಕರೆದು, ಇವನ ತಾಯಿ ಅಂಬಿಕೆಯೆಂದು ಹೇಳಿ, ಇವನಿಗಾಗಿ ಇಡುವ ಎಡೆಯಲ್ಲಿ ಮೀನು, ಮಾಂಸ, ಮೂಲಂಗಿ, ಮೋದಕ, ಮದ್ಯಗಳು ಸೇರಿರಬೇಕೆನ್ನುತ್ತದೆ. ವಿಘ್ನರಾಜನು ವಿಘ್ನನಿವಾರಕನಾಗಿ, ಸಿದ್ಧಿದಾತನೆಂದು ಪ್ರಸಿದ್ಧನಾದುದನ್ನು ಯಾಜ್ಞವಲ್ಕ್ಯಸ್ಮೃತಿ ಸೂಚಿಸುತ್ತದೆ. ವಿಘ್ನಗಳನ್ನುಂಟುಮಾಡುವ ದೈವಗಳನ್ನು ಪ್ರೀತಿಬಡಿಸುವ ಉಪಾಯಗಳನ್ನು ಸ್ಮೃತಿಗ್ರಂಥಗಳು ಹೇಳುತ್ತವೆ. ಪೂಜೆಪುನಸ್ಕಾರಗಳನ್ನು ಮಾಡಿ ಅವರನ್ನು ಸುಮುಖಗೊಳಿಸುವ ಹವ್ಯಾಸ ಸಾಮಾನ್ಯಜನರ ನಿತ್ಯವ್ಯವಹಾರದಲ್ಲಿದ್ದಿತು. ಮಹಾಭಾರತದ ಕಾಲದಲ್ಲಿ ಕೂಡ ವಿನಾಯಕರು ತೊಂದರೆಗಳನ್ನು ತಂದೊಡ್ಡುವುದರಲ್ಲಿಯೇ ನಿಸ್ಸೀಮರೆಂದೂ ಅವರನ್ನು ಮೊದಲೇ ಪೂಜೆ ಮಾಡಿಬಿಟ್ಟರೆ ಒಳಿತೆಂದೂ ಕಲ್ಪನೆಯಿದ್ದಿತು. "ನ ಪೂಜಾ ವಿಘ್ನಕರ್ತ್ರೂಣಾಂ ಅಥವಾ ಪ್ರಥಮಂಕೃತ್ವಾ" ಎನ್ನುವ ಮಾತು ಮಹಾಭಾರತದಲ್ಲಿ ಬರುತ್ತದೆ (3, 65, 23). ಅಲ್ಲಿಯೇ ಇನ್ನೊಂದೆಡೆ ವಿನಾಯಕರನ್ನು ಗಣೇಶ್ವರರೆಂದೂ ಸ್ಪಷ್ಟವಾಗಿ ಉಲ್ಲೇಖಿಸಿರುವುದುಂಟು; ಇವರು ಎಲ್ಲ ಲೋಕಗಳಿಗೂ ಒಡೆಯರೆಂದು ಕೂಡ ಮಾತುಬಂದಿದೆ (ಈಶ್ವರಾಃ ಸರ್ವಲೋಕಾನಾಂ ಗಣೇಶ್ವರವಿನಾಯಕಾಃ, 3, 150, 125). ಇದು ಮಹಾಭಾರತದಲ್ಲಿ ಹಳೆಯದೆನ್ನಬಹುದಾದ ಭಾಗಗಳಲ್ಲಿ ಬರುವ ಪ್ರಸ್ತಾಪಗಳು.

ಬೌಧಾಯನಸ್ಮೃತಿಯು ವಿನಾಯಕರನ್ನು ವಿಘ್ನೇಶ್ವರರೆಂದು ಹೇಳಿರುವುದಲ್ಲದೆ ಅವರನ್ನು ಹಸ್ತಿಮುಖರೆಂದೂ ಕರೆದಿರುವುದು ಸ್ವಾರಸ್ಯವಾಗಿದೆ. ಇವರಿಗೆ ಆನೆಯ ಮುಖ ಬಂದುದು ಹೇಗೆಂದು ಬಿಡಿಸಲಾರದ ಒಗಟು; ಅದರ ಪರಿಶೀಲನೆಯನ್ನು ಮುಂದೆ ಮಾಡೋಣ. ಈಗ ಪ್ರಸಕ್ತವಾಗಿರುವ ವಿವರವೆಂದರೆ ಈ ವಿನಾಯಕರ ಪೂಜೆಯಲ್ಲಿ, ನೈವೇದ್ಯವಾಗಿ ಅಪೂಪವನ್ನೂ ಮೋದಕವನ್ನೂ ಇಡಬೇಕಂತೆ. ಗೋಭಿಲಸ್ಮೃತಿಯೂ ಗಣಾಧಿಪಪೂಜೆಯನ್ನು ಎಲ್ಲ ಕೆಲಸಗಳ, ಎಲ್ಲ ಧಾರ್ಮಿಕ ವಿಧಿಗಳ ಆರಂಭದಲ್ಲಿಯೂ ವಿಧಿಸುತ್ತದೆ; ಈ ಸ್ಮೃತಿಯ ಪ್ರಕಾರ ಗಣಾಧಿಪ ಪೂಜೆಯೊಂದಿಗೆ ಮಾತೃಕಾಪೂಜೆಯನ್ನೂ ನಡೆಸಬೇಕು. ಗಣಪತಿಗೂ ಮಾತೃಕೆಯರಿಗೂ ಇರುವ ಸಂಬಂಧ ಇಲ್ಲಿ ಧ್ವನಿತವಾಗಿದೆ. ಭಾದ್ರಪದ ಶುಕ್ಲ ಚೌತಿಯಂದು ನಾವು ಮಾಡುವ ಗಣೇಶ ಪೂಜೆಯಲ್ಲಿ ಗೌರಿಯೂ ಅವಶ್ಯವಾಗಿ ಇರಲೇ ಬೇಕಲ್ಲವೆ? ವಾಸ್ತವವಾಗಿ ನಾವು 'ಗೌರೀಗಣೇಶ' ಎಂದೇ ವ್ಯವಹರಿಸುವುದು.

ಇದು ಇನ್ನೊಂದು ಸಮಸ್ಯೆಗೆ ಎಡೆಮಾಡಿಕೊಟ್ಟಿದೆ. ದೇವಾಲಯಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿದ್ದಾಗ ಅವರ ಎಡ ಪಕ್ಕದಲ್ಲಿ ಗಣಪತಿಯನ್ನೂ ಕೂರಿಸುವುದು ವಾಡಿಕೆ. ಸಪ್ತಮಾತೃಕೆಯರು ಸ್ಥಾನಕಭಂಗಿಯಲ್ಲಿದ್ದಾಗ ಗಣಪತಿಯೂ ಸ್ಥಾನಕನಾಗಿಯೇ ಇರಬೇಕೆಂದು ಸುಪ್ರಭೇದಾಗಮ ಹೇಳುತ್ತದೆ. ಚಾಳುಕ್ಯ ದೇವಾಲಯಗಳಲ್ಲಿ ಸಪ್ತಮಾತೃಕೆಯರ ಮತ್ತು ಗಣಪತಿಯ ಮೂರ್ತಿಗಳು ಒಟ್ಟಿಗೆ ಇರುವುದನ್ನು ವಿಶೇಷವಾಗಿ ಕಾಣಬಹುದು. ನಮ್ಮ ದೇಶದಲ್ಲಿ ಮಾತೃಕಾಪೂಜೆ ತುಂಬ ಪುರಾತನವಾದುದು. ಮಕ್ಕಳನ್ನು ತಾಯಿಯರಂತೆಯೇ ಕಾಪಿಡುವುದು ಈ ಮಾತೃಕೆಯರು ನಿರ್ವಹಿಸುವ ಕೆಲಸ. ಇದಕ್ಕಾಗಿ ಮಾತೃಕಾಪೂಜೆ ಯನ್ನು ಮಾಡತೊಡಗುವಾಗ ಅಡ್ಡಿಬಾರದಿರಲೆಂದು ಗಣಪತಿಯನ್ನೂ ಪೂಜಿಸುವುದು ಪದ್ಧತಿ. ಈ ಸಪ್ತಮಾತೃಕೆಯರು ಶಿವನ ಮಗನಾದ ಸ್ಕಂದನನ್ನು ಸಲಹಿದರೆಂದು ಪುರಾಣಪ್ರತೀತಿಯಿದ್ದರೂ ಶಿಲ್ಪದಲ್ಲಿ ಇವರಿಗೂ ಅವನಿಗೂ ಯಾವ ನೆಂಟೂ ಉಳಿದುಬಂದಿಲ್ಲ.



ಚಿತ್ರ 45
ಗಣಪತಿ-ಯಕ್ಷ
ಭೂಮಾರದಲ್ಲಿ ದೊರೆತ
ಪ್ರಾಚೀನ ಶಿಲ್ಪ

ಹಲವಾರು ವಿನಾಯಕರಲ್ಲಿ ಒಬ್ಬನನ್ನು ಆರಿಸಿಕೊಂಡು ಅವನನ್ನು ಒಲಿಸಿ ಕೊಳ್ಳಲು ಜನ ಆರಂಭಿಸಿದ ತರುಣದಲ್ಲಿಯೇ ಅವನಿಗೆ ಆನೆಯ ತಲೆಯನ್ನು ಹಚ್ಚಿದಂತೆ ತೋರುತ್ತದೆ. ಕ್ರಿಸ್ತಾಬ್ದ ಆರನೆಯ ಶತಮಾನಕ್ಕೆ ಮೊದಲೇ ಅವನು 'ಗಜಮುಖ'ನಾಗಿದ್ದಂತೆ ತಿಳಿದು ಬರುತ್ತದೆ. ಭುಮಾರದ ಭಗ್ನ ಶಿಲಾಮೂರ್ತಿ ಯೊಂದು ಈಗ ಬೋಸ್ಟನ್ ಮ್ಯೂಸಿಯಂನಲ್ಲಿದೆ (ಚಿತ್ರ 45); ಅದು ಡಾ॥ ಆನಂದಕುಮಾರಸ್ವಾಮಿಗಳ ಸಂಗ್ರಹ. ನಿರ್ವಿವಾದವಾಗಿ ಅದು ಗಣಪತಿಯದೇ; ಸೊಂಡಿಲು ಮುರಿದುಹೋಗಿದೆ ಅಷ್ಟೆ. ಐದನೆಯ ಶತಮಾನದ ಕೃತಿ ಇದೆಂದು ಸಿದ್ಧವಾಗಿದೆ. ದ್ವಿಭುಜಮೂರ್ತಿಯಿರುವಂತಿದೆ; ಆದರೆ ಮುದ್ರೆಗಳಾಗಲೀ ಆಯುಧಗಳಾಗಲೀ ಉಳಿದುಬಂದಿಲ್ಲ. ಆನಂದಕುಮಾರಸ್ವಾಮಿಗಳು ಇದನ್ನು ಯಕ್ಷ-ಗಣಪತಿಯೆಂದು ನಿರ್ದೇಶಿಸಿದರು. ಈ ಶಿಲ್ಪದಲ್ಲಿ ಆಭರಣವಾಗಿ ಸಣ್ಣ ಸಣ್ಣ ಗಂಟೆಗಳಿವೆ; ದನಕರುಗಳ ಕೊರಳಿಗೆ ಹಳ್ಳಿಗಳಲ್ಲಿ ಕಟ್ಟುವಂಥವು. ಟಿಬೆಟ್ಟಿನ ಕಡೆ ಕಥೆಯೊಂದಿದೆಯಂತೆ. ವೈಶಾಲಿಯ ದ್ವಾರಪಾಲಕನೊಬ್ಬ ತೀರಿಕೊಂಡು ದೈವವಾದ. ವೈಶಾಲಿಯ ಜನ ತನ್ನ ಪ್ರತಿಮೆಯೊಂದನ್ನಿರಿಸಬೇಕೆಂದೂ, ಅದರ ಕೊರಳಿಗೆ ಗಂಟೆಗಳನ್ನು ಕಟ್ಟಬೇಕೆಂದೂ ತಮಗೆ ಶತ್ರುಗಳಿಂದ ಆತಂಕ

ಹೊದಗಿದಾಗ ಗಂಟೆಗಳನ್ನು ಬಾರಿಸಬೇಕೆಂದೂ ತಿಳಿಸಿದನು. ಅದರಂತೆಯೇ ಊರಿನವರು ಈ ಯಕ್ಷ ದ್ವಾರಪಾಲನ ಪ್ರತಿಮೆಯನ್ನು ಮಾಡಿಸಿಟ್ಟು ನೆಮ್ಮದಿಯಿಂದಿದ್ದರು. ಬದುಕಿದ್ದಾಗ ದ್ವಾರಪಾಲಕನಾಗಿದ್ದವನು ಯಕ್ಷನಾದಮೇಲೆ ರಕ್ಷಕನಾದ.

ದಕ್ಷಿಣ ದೇಶದಲ್ಲಿ ಬಹಳ ಹಿಂದಿನಿಂದ ಗಣಪತಿಯನ್ನು ದೇವಾಲಯಗಳಲ್ಲಿ ದ್ವಾರಪಾಲಕನ ಜಾಗದಲ್ಲಿ ಕುಳ್ಳಿರಿಸುವ ಪದ್ಧತಿಯಿದ್ದಿತು. ಮುಂದೆ ನೇಪಾಳ--ಟಿಬೆಟ್‌ಗಳಲ್ಲಿಯೂ ಗುಡಿ, ವಿಹಾರಗಳಲ್ಲಿ ಗಣಪತಿಯನ್ನು ಬಾಗಿಲಮುಂದೆ ಮಾಡಿಡುವ ಪದ್ಧತಿ ಬೆಳೆಯಿತು. ದ್ವಾರಪಾಲಕನೇದು ತಟ್ಟನೆ ತೋರಿದರೂ, ಹಿನ್ನೆಲೆಯ ಕಥೆಯಿದ್ದರೂ, ದಿಟವಾಗಿ ಕ್ಷೇತ್ರಪಾಲನಿರುವಂತೆ ಗಣಪತಿ ಕೆಲಸಮಾಡುತ್ತಾನೆ. ಗುಡಿಗುಂಡಾರಗಳನ್ನು ಕಾಪಿಡುವ ಹೊಣೆಯನ್ನು ಅವನ ಮೇಲೆ ಹೊರಿಸಿರುತ್ತಾರೆ. ಸಪ್ತಮಾತೃಕೆಯರ ಪಕ್ಕದಲ್ಲಿದ್ದಾಗಲೂ ಅವರ ರಕ್ಷಕನಂತೆಯೇ ಅವನ ಪಾತ್ರ ನಿರ್ವಹಣೆ; ನವಗ್ರಹಗಳ ಬಳಿಯಿದ್ದಾಗಲೂ ಹೀಗೆಯೇ. ಹಳ್ಳಿಯ ಮುಂದಿನ ಅರಳೀಮರದ ಕೆಳಗಿದ್ದಾಗಲೂ, ಊರಬಾಗಿಲ ಗುಡಿಯಲ್ಲಿದ್ದಾಗಲೂ ಗಣಪತಿ ಗ್ರಾಮದೇವತೆ, ಗ್ರಾಮ ರಕ್ಷಕ.

ಹೀಗೆ ಗಣಪತಿ ಜನರ ಇಷ್ಟಗಳಿಗೆ ಅಡ್ಡಿಬರುವ ಯಕ್ಷ, ಆದರೆ ಒಲಿಸಿಕೊಂಡರೆ ಅಡ್ಡಿಗಳನ್ನು ತೊಡೆದುಹಾಕುವ ರಕ್ಷಕ. ಈ ದೇವತೆಯ ವಿಶೇಷವಾದ ಜನಪ್ರೀತಿಗೆ ಇದೇ ಕಾರಣ. ಅವನ ಮೂರ್ತಿಗಳನ್ನೂ ಪುತ್ಥಳಿಗಳನ್ನೂ ಯಕ್ಷನಂತೆಯೇ ಸಿದ್ಧಗೊಳಿಸಿ ಗುಡಿಗಳಲ್ಲಿ, ಊರ ಚಾವಡಿಗಳಲ್ಲಿ, ನಡುಬೀದಿಗಳಲ್ಲಿ, ದೊಡ್ಡ ದೊಡ್ಡ ಮರಗಳಡಿಯಲ್ಲಿ, ಕೆರೆ ಕೊಳ ಬಾವಿಗಳ ದಂಡೆಯ ಮೇಲೆ, ಮನೆ ಮಾಡ ಗೂಡುಗಳಲ್ಲಿ ಇರಿಸಿಕೊಂಡು ಹರಕೆ ಹೊತ್ತುಕೊಳ್ಳುತ್ತಿದ್ದರು. ಕೆಲವೊಮ್ಮೆ ನಿಸರ್ಗಸಿದ್ಧವಾದ ಬಂಡೆ, ಕಲ್ಲುಗುಂಡುಗಳನ್ನೇ ಗಣಪತಿಯೆಂದು ಬಗೆದು ಪೂಜಿಸುತ್ತಿದ್ದುದೂ ಉಂಟು. ಇವಕ್ಕೆ 'ಸ್ವಯಂಭೂ' ಮೂರ್ತಿಗಳೆಂದು ಹೆಸರು, ಎಂದರೆ ತಾವಾಗಿಯೇ ಆದುವು ಎಂದರ್ಥ. ಕಾಶ್ಮೀರದಲ್ಲಿ ನದೀ ದಡಗಳ ಮೇಲೆ ಇಂಥವು ಬಹಳ ಇವೆಯಂತೆ. ಅವುಗಳಲ್ಲಿ ತುಂಬ ಪ್ರಸಿದ್ಧವಾದುದೆಂದರೆ ಗಣೇಶ್‌ಬಾಲ್ ಎಂಬ ಹಳ್ಳಿಯಲ್ಲಿ ಲೀದರ್ ನದಿಯ ಬಲದಂಡೆಯ ಮೇಲಿರುವ ಮೂರ್ತಿ. ದೊಡ್ಡದೊಂದು ಬಂಡೆ; ಯಾವುದೊಂದು ಶಿಲ್ಪವೂ ಇಲ್ಲ. ಅದರ ಮೇಲೆ ಕೆಂಪು ಬಣ್ಣ ಬಳಿದಿರುತ್ತಾರೆ. ಅದು ತುಂಬ ಜಾಗ್ರತವಾದ ಸ್ಥಳವೆಂದು ಪ್ರತೀತಿ; ಹಾಗೆಂದೇ ಅದು ಯಾತ್ರಾಸ್ಥಳವಾಗಿದೆ. ಹದಿನಾಲ್ಕನೆಯ ಶತಮಾನಕ್ಕೆ ಮೊದಲಿನಿಂದಲೂ ಅದರ ಪ್ರಸಿದ್ಧಿಯಿದೆ. ಶ್ರೀನಗರದ ಬಳಿ ಹರಿಪರ್ವತವೆಂಬ ಬೆಟ್ಟದ ತಪ್ಪಲಲ್ಲಿ 'ಭೀಮಸ್ವಾಮಿ' ಎನಿಸಿಕೊಳ್ಳುವ ದೊಡ್ಡದೊಂದು ಬಂಡೆಯಿದೆ. ಮೊದಲಿಗೆ ಇದರಲ್ಲಿ ಗಣೇಶನ ತಲೆಯ ಆಕೃತಿ ಸಹಜವಾಗಿಯೇ ಮೂಡಿದ್ದಿತಂತೆ: ಆದರೆ ಕೆಂಪುಬಣ್ಣ ನೂರಾರು ವರ್ಷಗಳಿಂದ ಅದರ ಮೇಲೆ ಪದರ ಪದರವಾಗಿ ಮೂಡಿಬಂದಿದ್ದು ಈಗ ಯಾವ ಆಕೃತಿಯೂ ಕಾಣುವುದಿಲ್ಲ. ಹೀಗೆಯೇ ಕಾಶ್ಮೀರದಲ್ಲಿ ಇನ್ನೊಂದು ಪ್ರಸಿದ್ಧವಾದ ಗಣೇಶ ಕ್ಷೇತ್ರವೆಂದರೆ ಗಣೇಶಘಾಟಿ ಎನ್ನುವ ಸ್ಥಳ. ಐವತ್ತು ಅಡಿ ಎತ್ತರ ನಿಂತ ಗುಡ್ಡದ ಒಂದು ಭಾಗದಲ್ಲಿ ಆನೆಯ ಸೊಂಡಿಲಿನಂತೆ ಮೈಚಾಚಿರುವ ಬಂಡೆಯಿದ್ದು ಗಣೇಶನ ಮುಖವನ್ನು ನೆನಪಿಗೆ ತರುತ್ತದೆ. ಇಲ್ಲಿಯೂ ಜನರು ಬಂಡೆಗೆ ಕೆಂಪುಬಣ್ಣವನ್ನು ಬಳಿದಿರುತ್ತಾರೆ.

ಗಣಪತಿಗೂ ಕೆಂಪುಬಣ್ಣಕ್ಕೂ ಮೊದಲಿನಿಂದ ಗಂಟು; ಕಾರಣ ಸ್ಪಷ್ಟವಾಗಿ ತಿಳಿಯುವುದಿಲ್ಲ. ಗಣಪತಿಯ ಗಜಮುಖವೂ ಹಾಗೆಯೇ ತುಂಬ ಹಳೆಯ ವಿವರ. ಕ್ರಿಸ್ತಾಬ್ದದ ಮೊದಲ ಶತಕಗಳಲ್ಲಿಯೇ ಈ ರೂಪ ಸಿದ್ಧವಾದಂತೆ ತಿಳಿದುಬರುತ್ತದೆ. ಐದಾರನೆಯ ಶತಕಗಳ ಸುಮಾರಿಗೆ ಈ ರೂಪ ಶಿಲ್ಪದಲ್ಲಿಯೂ ಮೂಡಿಬಂದಿತು. ಗಣಪತಿಯನ್ನು 'ಹಸ್ತಿವಕ್ತ್ರ'ನೆಂದೂ (ದಂಡಿಯ ದಶಕುಮಾರಚರಿತೆ), 'ವಕ್ರತುಂಡ'

ನೆಂದೂ (ನಾರಾಯಣೋಪನಿಷತ್), 'ಏಕದಂಷ್ಟ್ರ'ನೆಂದೂ (ಬಾಣನ ಹರ್ಷಚರಿತೆ), 'ಲಂಬೋದರ', 'ಸ್ಥೂಲದೇಹ'ನೆಂದೂ (ವರಾಹಮಿಹಿರನ ಬೃಹತ್ಸಂಹಿತೆ, ಉತ್ಪಲ ಭಟ್ಟನ ವ್ಯಾಖ್ಯಾನ), 'ಗಜರೂಪಧರ'ನೆಂದೂ (ವರದ ತಾಪನಿಯೋಪನಿಷತ್) ಮಾಡುವ ವರ್ಣನೆ ಪ್ರಾಚೀನವಾದುದು. ಕೆಲವು ವಿವರಗಳು ಯಕ್ಷನ ಆಕಾರಕ್ಕೆ ಅನುವಾದುವಾದರೂ ಗಜಮುಖನೆನ್ನುವುದು ಕೊಂಚ ವಿಚಾರಕ್ಕೆ ಎಡೆಮಾಡಿ ಕೊಡುತ್ತದೆ.

ಗಣೇಶ ಪುರಾಣದಲ್ಲಿ ಗಣೇಶನನ್ನು 'ಗಜಪತಿ'ಯೆಂದೂ 'ಹಸ್ತಿಪಿಶಾಚೀಶ'ನೆಂದೂ ಕರೆದಿದ್ದಾರೆ (1, 46, 21). ಆನೆಗೂ ಗಣಪತಿ ಯಕ್ಷನಿಗೂ ಇದರಿಂದ ಸಂಬಂಧ ಧ್ವನಿತವಾಗುತ್ತದೆ. ಇದಕ್ಕೆ ಪೂರಕವಾಗಿ, ಅದೇ ಪುರಾಣದಲ್ಲಿಯೇ, ಗಣಪತಿಯನ್ನು 'ಇಕ್ಷುಚಾಪಧರ' (ಕಬ್ಬನ್ನು ಬಿಲ್ಲಾಗಿ ಇರಿಸಿಕೊಂಡವನು), 'ಇಕ್ಷುಸಾಗರಮಧ್ಯಸ್ಥ' (ಕಬ್ಬಿನ ಮೆಳೆಯ ನಡುವೆ ಇರುವವನು), 'ಇಕ್ಷುಭಕ್ಷಣಲಾಲಸ' (ಕಬ್ಬನ್ನು ತಿನ್ನುವುದರಲ್ಲಿ ಆಶೆಯುಳ್ಳವನು) ಎಂದು ಮೊದಲಾಗಿ ಬಣ್ಣಿಸಿದ್ದಾರೆ. ಕಬ್ಬು ಬೆಳೆಯುವವರಿಗೆಲ್ಲ ಕಬ್ಬಿನ ಮೇಲೆ ಆನೆಗಿರುವ ಪ್ರೀತಿಯ ಪರಿಚಯವಿದ್ದೇ ಇರುತ್ತದೆ; ಈ ಹಾವಳಿಯನ್ನು ತಪ್ಪಿಸಲು ಆನೆಗಳ ಒಡೆಯನನ್ನೇ ಒಲಿಸಿಕೊಳ್ಳಲು ಹಿಂದಿನ ಜನ ಯತ್ನಿಸಿದ್ದರೆ ಸೋಜಿಗವೇನಲ್ಲ. ಆನೆಗಳ ಒಡೆಯನೆಂದರೆ ಅದೊಬ್ಬ ಯಕ್ಷನೆಂದೇ ಅವರು ಬಗೆದಿದ್ದರೂ ಆಶ್ಚರ್ಯವಲ್ಲ. ಅಂತೂ ಗಣಪತಿಯಕ್ಷ ಕಬ್ಬಿನ ಬೆಳೆಗಾರರ ದೈವವಾಗಿ ತನ್ನ ಇತಿಹಾಸವನ್ನು ಆರಂಭಿಸಿದ ಎಂದು ಒಂದು ವಾದವಿದೆ.

ಒಬ್ಬೊಬ್ಬ ಯಕ್ಷನೂ ಒಂದೊಂದು ಬುಡಕಟ್ಟಿನ 'ಟೋಟೆಮ್' ಆಗಿ ಮೈದಳೆದ ಎನ್ನುವ ಹಿನ್ನೆಲೆಯಲ್ಲಿ ಗಣಪತಿಯನ್ನು 'ಮತಂಗ'ರೆಂಬ ಆನೆಜನರ ಟೋಟೆಮ್ ಎಂದೂ ಕೆಲವರು ವಿವರಿಸಿದ್ದಾರೆ. ಮೌರ್ಯರ ಕಾಲಕ್ಕೂ ಹಿಂದೆ ಮತಂಗರೆಂಬ ಜನ ಇದ್ದುದೇನೋ ದಿಟವೇ; ಅವರ ನಾಣ್ಯಗಳೂ ದೊರೆತಿವೆ. ಗಣಪತಿಗೆ 'ಮತಂಗಧ್ವಜ' ಎನ್ನುವ ಹೆಸರೂ ಇರುವುದು ಈ ಸಂದರ್ಭದಲ್ಲಿ ಗಮನಾರ್ಹ. ಗಣಪತಿಗೂ ಇಲಿಗೂ ಸಂಬಂಧವಿಲ್ಲವೇ? ಗಣಪತಿಯನ್ನು 'ಮೂಷಕಧ್ವಜ', 'ಆಖುರಥ', 'ಮೂಷಕವಾಹನ' ಎಂದು ಮೊದಲಾಗಿ ಬಣ್ಣಿಸುತ್ತೇವಲ್ಲವೆ? ಗಣಪತ್ಯುಪನಿಷತ್ತಿನಲ್ಲೇನೋ ಒಂದು ಕಥೆ ಅಡಕವಾಗಿದೆ (2, 134, 6). ವಾಮದೇವ ಋಷಿಯ ಶಾಪದಿಂದ ಕ್ರೌಂಚನೆಂಬ ಗಂಧರ್ವ ಇಲಿಯಾಗಿ ಮಾರ್ಪಟ್ಟು ಹಾವಳಿ ಮಾಡತೊಡಗಿದನಂತೆ. ಪರಾಶರ ಮುನಿಯ ಅಣತಿಯಂತೆ ಗಜಾನನನು ಅವನನ್ನು ನಿಗ್ರಹಿಸಿ ಇಲಿಯನ್ನು ತನ್ನ ವಾಹನವನ್ನಾಗಿ ಇರಿಸಿಕೊಂಡನಂತೆ. ಬೇಸಾಯಗಾರರಿಗೆ ಇಲಿ ಶತ್ರುವೆಂದೂ, ಗಣಪತಿ ಬೇಸಾಯಗಾರರ ಅಭಿಮಾನಿ ದೇವತೆಯಾಗಿ ಇಲಿಯನ್ನು ತನ್ನ ವಶದಲ್ಲಿಟ್ಟುಕೊಳ್ಳುವುದು ಇಲ್ಲಿನ ತಾತ್ಪರ್ಯವೆಂದೂ ಕೆಲವರ ಸೂಚನೆ. ಗಣಪತಿ ಮತಂಗಜನರ 'ಟೋಟೆಮ್' ಆಗಿದ್ದಂತೆಯೇ ಇಲಿ 'ಮೂಷಕ' ಜನರ ಟೋಟೆಮ್ ಎಂದು ಭಾವಿಸುವ ಪಂಡಿತರೂ ಇದ್ದಾರೆ. ಮೌರ್ಯರ ಕಾಲಕ್ಕೂ ಮೊದಲು ಮೂಷಕರೆಂಬ ಜನ ಇದ್ದುದೇನೋ ದಿಟ. ಇವರು ದಕ್ಷಿಣದ ಜನರಂತೆ; ಕಳಿಂಗದೇಶದ ಹತ್ತಿರ ವನವಾಸಿಗಳೊಂದಿಗೆ ಇವರು ಇರುತ್ತಿದ್ದುದು ಮಹಾಭಾರತದಿಂದ ತಿಳಿದುಬರುತ್ತದೆ. ವಿಂಧ್ಯಪ್ರಾಂತ್ಯದಲ್ಲಿಯೂ ಇದ್ದರಂತೆ ಇವರು. ಕಳಿಂಗದ ದೊರೆ ಖಾರವೇಲ ಇವರನ್ನು ಸೋಲಿಸಿದ ಉಲ್ಲೇಖ ಆತನ 'ಹಾಥಿಗುಂಫ ಶಾಸನ' (ಕ್ರಿಸ್ತಪೂರ್ವ 160 ರ ಸುಮಾರಿನದು) ದಲ್ಲಿ ಬರುತ್ತದೆ. ಮತಂಗಜನರು ಹೀಗೆಯೇ ಮೂಷಕಜನರನ್ನು ಗೆದ್ದು ತಮ್ಮ ಅಧೀನವಾಗಿಸಿಕೊಂಡುದು ಗಣಪತಿಯ ವಾಹನ ಇಲಿಯೆಂಬ ಸಂಕೇತಕ್ಕೆ ಕಾರಣವಾಯಿತು ಎಂದು ಈ ವಾದದ ತಾತ್ಪರ್ಯ.

ಈ ವಾದದಲ್ಲಿ ದೋಷವೇನೂ ಇರದು. ಆದರೆ ನಮ್ಮ ದೇಶದಲ್ಲಿದ್ದ ಟೋಟೆಮ್ ಪದ್ಧತಿಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿಲ್ಲ; ನಮ್ಮ ಎಲ್ಲ ಪ್ರಾಚೀನ ಜನಾಂಗಗಳಲ್ಲಿಯೂ ಈ ಪದ್ಧತಿ ಇದ್ದಿತೇ ಎನ್ನು ವುದು ನಿಶ್ಚಯವಿಲ್ಲ. ದಕ್ಷಿಣ ದೇಶದಲ್ಲಿ ಗಣಪತಿಯನ್ನು 'ಪಿಳ್ಳೆಯಾರ್' ಎಂದು ಕರೆಯುತ್ತಾರೆ; ಪಿಳ್ಳೆ ಎಂದರೆ ಮಗು. ಆದರೆ ತಮಿಳಿನಲ್ಲಿ ಪಿಳ್ಳೆಯೆಂದರೆ 'ಆನೆಯ ಮರಿ' ಎಂದೂ ಅರ್ಥವಾಗುತ್ತದೆ. ಈ ಕಡೆ 'ಅರ್ಭಕಗಣಪತಿ'ಯ ಗುಡಿಗಳೂ ಹಲವಾರು ಇವೆ. ಇದೂ ಮೇಲಿನ ವಾದಕ್ಕೆ ಅಷ್ಟಿಷ್ಟು ಒತ್ತಾಸೆ ಯಾದೀತು. ಆದರೆ ಇದರ ಬೆನ್ನುಹಿಡಿದು ವಾದವನ್ನು ಸಮರ್ಥಿಸ ಹೊರಟರೆ ತಪ್ಪಾದೀತು. ಈ ಸಂದರ್ಭ ದಲ್ಲಿ ಇನ್ನೂ ಒಂದು ವಿವರವನ್ನು ಗಮನಿಸಬೇಕು. ಬೃಹಸ್ಪತಿಯನ್ನು ವೈದಿಕ ಸಾಹಿತ್ಯದಲ್ಲಿ ಗಣಪತಿಯೆಂದು ಕರೆದಿರುವುದನ್ನು ಆಗಲೇ ಪ್ರಸ್ತಾಪಿಸಿದ್ದೇವಷ್ಟೆ; ಅಗ್ನಿಗೂ ಬೃಹಸ್ಪತಿಗೂ ತಾದಾತ್ಮ್ಯವನ್ನು ಕಲ್ಪಿಸಿದ ನೆಲೆಯೂ ಇದ್ದಿತು. ಅಥರ್ವ ವೇದದಲ್ಲಿ ಅಗ್ನಿ-ಬೃಹಸ್ಪತಿಗೆ ಆನೆಯ ಕಳೆ (ಹಸ್ತೀವರ್ಚಸ್) ಇದೆಯೆಂದು ಹೇಳಿದೆ. ಇದರ ತಾತ್ಪರ್ಯವೇನು? ಆನೆಯ ಕಳೆ ಆನೆಯ ಮುಖವಾಗಿ ಪರಿಣಮಿಸಿತೆ? ದಂಡಿಯು ದಶಕುಮಾರ ಚರಿತೆಯಲ್ಲಿ 'ಹಸ್ತಿವಕ್ತ್ರೋ ಭಗವಾನ್' ಎಂದು ಹೇಳಿದ್ದಾನಲ್ಲವೆ? ಆನೆಯ ಮುಖವನ್ನು ಅಳವಡಿಸಿಕೊಂಡ ಭೂತಗಳೂ, ಯಕ್ಷರೂ ಒಂದು ಕಾಲಕ್ಕೆ ಜನರ ಕಲ್ಪನೆಯಲ್ಲಿ ಪ್ರಭಾವಶಾಲಿಗಳಾಗಿದ್ದಿರಬಹುದು. ಎಲ್ಲೋರ, ಮಿಹಿಂತಲೆ (ಸಿಂಹಳ), ಮೊದಲಾದೆಡೆ ಶಿಲ್ಪಗಳಲ್ಲಿ ಇಂಥ ಗಜಮುಖ ಯಕ್ಷನು ಯಕ್ಷರ ಸಾಲಿನಲ್ಲಿ ಅಥವಾ ಗಣಗಳ ಸಾಲಿನಲ್ಲಿ ಸೇರಿಕೊಂಡಿರುವುದನ್ನು ಕಾಣಬಹುದು. ಕುದುರೆಯ ಮುಖ (ಹಯಶೀರ್ಷ), ಹಂದಿಯ ಮೋರೆ (ವರಾಹ), ಸಿಂಹದ ಮುಖ (ನರಸಿಂಹ), ಬಸವನ ಮುಖ (ವೃಷಭ), ಎಮ್ಮೆಯ ತಲೆ (ಮಹಿಷ) ಮೊದಲಾದ ವಿಚಿತ್ರ ರೂಪವುಳ್ಳ ಯಕ್ಷರಿದ್ದುದು ತಿಳಿದುಬಂದಿದೆ; ಇವರಲ್ಲಿ ಕೆಲವರು ದೈವತ್ವವನ್ನೂ ಪ್ರಸಿದ್ಧಿ ಯನ್ನೂ ಪಡೆದರು. ಆನೆಯ ಮುಖವುಳ್ಳ ಯಕ್ಷನೂ ಕಾಲಾನುಕಾಲಕ್ಕೆ ಪ್ರಸಿದ್ಧಿಯನ್ನು ಪಡೆದನೆಂದರೆ ಸೋಜಿಗವಲ್ಲ.

ರುದ್ರಗಣ-ಪತಿ

ತಾತ್ಪರ್ಯವೇನೆಂದರೆ, ಗಣಪತಿಯ ಹಿನ್ನೆಲೆಯ ವಿಚಾರವಾಗಿ ಏನನ್ನೂ ಖಚಿತವಾಗಿ ಹೇಳುವುದು ಕಷ್ಟ. ಈ ಮಾತು ಎಲ್ಲ ದೇವತೆಗಳ ವಿಚಾರದಲ್ಲಿಯೂ ಸುಮಾರಾಗಿ ದಿಟವೇ ಆದರೂ ಗಣಪತಿಯ ಪ್ರಾಚೀನತೆಯ ದೃಷ್ಟಿಯಿಂದ ಕಷ್ಟ ಇನ್ನೂ ಹೆಚ್ಚು. ಇಷ್ಟಂತೂ ಹೇಳಬಹುದು. ಆರಂಭದಲ್ಲಿ ವೈದಿಕ ಸಂಸ್ಕೃತಿಗಿಂತ ಹಳಬನೂ, ಅದರ ವ್ಯಾಪ್ತಿಗೆ ಮೀರಿದವನೂ ಆಗಿದ್ದ ದೇವತೆ ಅನಾರ್ಯರೆನ್ನಬಹುದಾದ ಜನಾಂಗ ಗಳಲ್ಲಿ ಬಳಕೆಯಲ್ಲಿದ್ದು, ಈ ಜನಪ್ರೀತಿಯಿಂದಲೇ ವೈದಿಕಸಂಸ್ಕೃತಿಯೊಳಗೂ ನುಗ್ಗಿದ. ಪ್ರಾಚೀನ ಜನಾಂಗ ಗಳಿಗೂ ವೈದಿಕ ಸಂಸ್ಕೃತಿಯ ಜನರಿಗೂ ಸಮಾನವಾಗಿದ್ದ ಒಂದು ವಿವರ ಗಣಗಳ ಎಣಿಕೆ. ಬುಡಕಟ್ಟಿನ ಕಲ್ಪನೆ ಹಳೆಯ ಜನರಲ್ಲಿ ಬೇರೂರಿದ್ದುದು ಎಲ್ಲ ಸಮಾಜ ಶಾಸ್ತ್ರಜ್ಞರಿಗೂ ತಿಳಿದ ವಿಷಯವೇ. ವೇದಗಳನ್ನು ರಚಿ ಸಿದ ಜನರೂ 'ಸಮಿತಿ'ಯನ್ನು ನಂಬಿದ್ದವರು, ಅವರು 'ಸಮಾನಂ ಧನಂ' ಎಂಬ ಆರ್ಥಿಕ ವ್ಯವಸ್ಥೆಗೆ ಕಟ್ಟು ಬಿದ್ದವರು. ಒಟ್ಟಿಗೆ, ಒಟ್ಟಾದ ಧನದಿಂದ ಅಲೆದಾಡುತ್ತ, ಒಟ್ಟಿಗೆ ಪ್ರಯತ್ನ ಮಾಡುವ ಜನ (ನ ಯತಂತೇ ಮಿಥಃ ತೇ; ವಸುಭಿಃಯದನಾಃ), ಒಂದೇ ಮನಸ್ಸುಳ್ಳವರು (ತೇ ಸಂಜಾನತೆ, ಎಂದರೆ ಸಾಯಣರ ಪ್ರಕಾರ 'ತೇ ಏಕಬುದ್ಧ್ಯಗಃ ಭವಂತಿ'), ಒಗ್ಗಟ್ಟು ಮುಖ್ಯವೆಂದು ಬಗೆದವರು (ಅಧಿಸಂಗತಾಸಃ); 'ನಿಮ್ಮೆಲ್ಲರಿಗೂ ಒಟ್ಟಿಗೆ ಒಳ್ಳೆಯದಾಗುವಂತೆ ನಿಮ್ಮ ಯೋಜನೆಗಳು ಒಂದಾಗಿರಲಿ, ನಿಮ್ಮೆಲ್ಲರ ಹೃದಯಗಳು ಒಂದಾಗಿರಲಿ, ನಿಮ್ಮ ಮನಸ್ಸು ಒಂದಾಗಲಿ' (ಸಮಾನೀ ವ ಆಕೂತಿಃ, ಸಮಾನಾ ಹೃದಯಾನಿ ವಃ, ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ) ಎಂಬ ಕೋರಿಕೆಯನ್ನು ಸ್ಪಷ್ಟಪಡಿಸಿದವರು. ಇವೆಲ್ಲ ಋಗ್ವೇದದಲ್ಲಿ

ಕಂಡುಬರುವ ಭಾವನೆಗಳೇ. ಆ ಜನರ ಸಾಮಾಜಿಕ ವ್ಯವಸ್ಥೆಯೂ ಗಣ, ವ್ರಾತ, ಸಂಘ, ಸಮಿತಿಗಳನ್ನವಲಂಬಿಸಿಯೇ ಆಗಿದ್ದಿತು. ಗಣಗಳಿಗೆ ಒಡೆಯ ಅವರಲ್ಲಿಯೂ ಇವರಲ್ಲಿಯೂ ಮುಖ್ಯನಾದವನೇ. ಹೀಗಾಗಿ ಅನಾರ್ಯ ಪಂಗಡಗಳ ಗಣಪತಿ ಯಕ್ಷನನ್ನು ಆರ್ಯಜನರೂ ಪರಿಗ್ರಹಿಸಿದುದು ಆಶ್ಚರ್ಯವೇನಲ್ಲ.

ಗಣಪತಿಯನ್ನು ಬೃಹಸ್ಪತಿ, ಅಗ್ನಿ, ಇಂದ್ರ, ರುದ್ರ ಇವರೊಂದಿಗೆ ಸಮೀಕರಿಸಿರುವುದನ್ನು ಈ ನೆಲೆಯಲ್ಲಿ ಪರಿಶೀಲಿಸಬೇಕು. ಬೃಹಸ್ಪತಿಯೇ ಗಣಪತಿಯೆಂದು ಬಗೆದಾಗ ಗಣಪತಿ ಸುರಾಗ್ರಜನಾಗಿ ವಿದ್ಯಾಭಿಮಾನಿ ದೇವತೆಯಾದ. ಅಥರ್ವಶಿರೋಪನಿಷತ್ತಿನ ಭಾಗವಾದ ಗಣಪತ್ಯುಪನಿಷತ್ತಿನಲ್ಲಿ 'ಬ್ರಹ್ಮ ಬ್ರಹ್ಮಾರ್ಚಿತಪದೋ ಬ್ರಹ್ಮಚಾರೀ ಬೃಹಸ್ಪತಿಃ' (1, 46, 14) ಎಂದು ಮಾತಿದೆ. ಗಣಪತಿಯು ಬ್ರಹ್ಮಚಾರಿ, ವಟು, ಅವಿವಾಹಿತ ಎಂದಲ್ಲವೆ ನಮ್ಮ ಕಲ್ಪನೆ? ಗಣಪತಿಯನ್ನು ಪೂಜಿಸಲು ಋಗ್ವೇದದ 'ಗಣಾನಾಂ ತ್ವಾ ಗಣಪತಿಂ ಹವಾಮಹೇ' ಎಂದು ಮೊದಲಾಗುವ ಮಂತ್ರವನ್ನು ಗೃತ್ಸಮದ ಋಷಿಯೇ ಬಳಸಿದನೆಂದು ಗಣಪತ್ಯುಪನಿಷತ್ತು ಸೂಚಿಸುತ್ತದೆ (1, 36–37). ಅಗ್ನಿ–ಬೃಹಸ್ಪತಿಗೆ ಹಸ್ತೀವರ್ಚಸ್ಸು ಇದೆಯೆಂದು ವೈದಿಕ ಋಷಿಗಳೇ ಬಗೆದಿದ್ದರಲ್ಲವೆ? ಗಣಪತಿಯನ್ನು ಇಂದ್ರನೊಂದಿಗೆ ಸೇರಿಸಿದಾಗ ಇಂದ್ರನ ಕೈಯಲ್ಲಿರುವ ಅಂಕುಶ, ವಜ್ರ, ಪದ್ಮಗಳು ಗಣಪತಿಗೂ ಬಂದುವು. ದೇವೀಪುರಾಣ (114, 2-4) ದಲ್ಲಿ ಒಂದು ಕಥೆ ಬರುತ್ತದೆ. ವಿಘ್ನನೆಂಬ ರಾಕ್ಷಸನನ್ನು ಕೊಲ್ಲಲು ಗಣಪತಿ ಹೊರಟಾಗ ಶಿವ ಅವನಿಗೆ ತನ್ನ ಅರ್ಧಚಂದ್ರನನ್ನೂ, ಬ್ರಹ್ಮ ತನ್ನ ಬಳಿಯ ನಡುಪಟ್ಟಿಯನ್ನೂ, ಸೂರ್ಯ ತನ್ನ ಮಣಿಯನ್ನೂ, ವರುಣ ತನ್ನ ಪಾಶ ವಿಷ್ಣುವು ತನ್ನ ಶಂಖ ಮತ್ತು ಗದೆಗಳನ್ನೂ, ಇಂದ್ರನು ತನ್ನ ವಜ್ರವನ್ನೂ, ಯಮನು ತನ್ನ ದಂಡವನ್ನೂ ವನ್ನೂ, ಕೊಟ್ಟರಂತೆ. ಗಣಪತಿಯ ಮೂರ್ತಿಶಿಲ್ಪದಲ್ಲಿರುವ ಆಯುಧ–ಆಭರಣಗಳನ್ನು ವಿವರಿಸುವ ಕಥೆಯಿದು; ಆದರೆ ಎಲ್ಲ ವೈದಿಕ ದೇವತೆಗಳ ಸಮಾವೇಶ ಗಣಪತಿಯಲ್ಲಾಗಿದೆ ಎಂದು ಇದರ ಧ್ವನಿ.

ಶಿವನಿಗೂ ರುದ್ರನಿಗೂ ಇರುವ ಸಂಬಂಧ ವಿಶೇಷವಾದುದು. ವೈದಿಕರುದ್ರ ಶಿವನಾಗಿ ಮೈದಳೆದುದು ಬೇರೆಯ ಮಾತು. ಪುರಾಣಗಳಲ್ಲಿ ಬರುವ ಶಿವನ ಸಂಸಾರದಲ್ಲಿ ಗಣಪತಿ ಅವನ ಮಗ. ಹೇಗೆ ಮಗನಾದನೆಂದು ಒಮ್ಮತವಿಲ್ಲ. ಕೆಲವೊಮ್ಮೆ ಶಿವನ ಸಂಬಂಧವಿಲ್ಲದೆ ಪಾರ್ವತಿಯ ಮಗನಾಗಿದ್ದಾನೆ; ಅವನು ದಿಟವಾಗಿ 'ಉಮಾಸುತ'. ಆದರೆ ಪಾರ್ವತಿಯ ಗರ್ಭಸಂಭೂತನೇನಲ್ಲ; ಅವಳು ತನ್ನ ಮೈಕೊಳೆ, ಎಣ್ಣೆ ಜಿಡ್ಡು ಮೊದಲಾದ ಪದಾರ್ಥಗಳಿಂದ ಗೊಂಬೆಯನ್ನು ಮಾಡಿ ಅದಕ್ಕೆ ಜೀವಕಳೆ ತುಂಬಿಸಿದ ಕಥೆಗಳೇ ಇವೆ. ಪಾರ್ವತಿಯು ಒಮ್ಮೆ ಅಂಗರಾಗದೊಂದಿಗೆ ತನ್ನ ಮೈಕೊಳೆಯನ್ನು ಸೇರಿಸಿ ಉಂಡೆಮಾಡಿ, ಗಂಗಾನದಿಯ ಮೂಲದಲ್ಲಿ ವಾಸಮಾಡುತ್ತಿದ್ದ ಮಾಲಿನೀ ಎಂಬ ರಾಕ್ಷಸಿಗೆ ಕೊಟ್ಟಳಂತೆ; ಆಕೆ ಅದನ್ನು ತಿಂದೊಡನೆ ಗರ್ಭವತಿಯಾಗಿ ಐದು ಆನೆತಲೆಗಳ ಗಂಡುಮಗುವನ್ನು ಹೆತ್ತಳಂತೆ. ಪಾರ್ವತಿ ಅದನ್ನು ತನ್ನ ಮಗುವೆಂದು ತೆಗೆದುಕೊಂಡು ಹೋಗಿ ಶಿವನಿಗೆ ತೋರಿಸಲು ಅವನು ಒಪ್ಪಿಕೊಂಡನಂತೆ; ಐದು ತಲೆಗಳು ಕಲೆತು ಒಂದೇ ತಲೆಯಾಗಲಿ ಎಂದೂ ಬಯಸಿದನಂತೆ. ಐದುತಲೆಗಳ ಹೇರಂಬಗಣಪತಿಯ ಶಿಲ್ಪ ನೇಪಾಳ, ಟಿಬೆಟ್ಟುಗಳಲ್ಲಿ ವಿಶೇಷವಾಗಿದೆ; ನಮ್ಮ ಕಡೆಯೂ ಉಂಟು ಎನ್ನಿ, ಆದರೆ ಅಪುರೂಪ. ಈ ಗಣಪತಿ ಸಿಂಹವಾಹನ. ಸಿಂಹವು ಪಾರ್ವತಿಯ ವಾಹನವಲ್ಲವೆ? ತಾಯಿಯ ವಾಹನ ಮಗನಿಗೆ ಬಂದಿತು.

ಗೌರೀ–ಗಣೇಶ ಇವರ ತಾಯಿ–ಮಗ ಸಂಬಂಧ ತುಂಬ ಸ್ವಾರಸ್ಯವಾದುದು. ಪುರಾಣಕಥೆಗಳಲ್ಲಿ ಗಂಡಿನ ಸಂಪರ್ಕವಿಲ್ಲದೆ ಹೆಣ್ಣಿನ ಬಯಕೆಯಿಂದಲೇ ಹುಟ್ಟಿಕೊಂಡವನು ಇವನು; ಹಾಗೆಂದೇ ಅಪ್ರಾಕೃತ, ವಿಕಟ. ಹುಟ್ಟಿದೊಡನೆ ಗಂಡು ಇವನನ್ನು ಕಂಡು ಸಿಟ್ಟಾಯಿತು, ಅಸೂಯೆಗೊಂಡಿತು; ತಾಯಿಯ ಬಯಕೆಯಿಂದ

ಹುಟ್ಟಿದ ಮಗು ಗಂಡಿನೊಂದಿಗೆ ಸೆಣಸಬೇಕಾಯಿತು. ಆದರೆ ಹೇಗೋ, ಹೆಣ್ಣಿನ ನಿರ್ಬಂಧಕ್ಕೆ ಗಂಡನೂ ಮಗುವನ್ನು ಒಪ್ಪಿಕೊಳ್ಳಬೇಕಾಯಿತು. ಹೀಗಾದರೂ ಅವನು ತಾಯಿಯ ಮಗನೇ—ಉಮಾಪುತ್ರ, ಪಾರ್ವತೀ ನಂದನ. ಮುಂದೆ ಶಿವನ ಮಗನೆಂದೂ ಪುರಾಣಕಾರರು ಪರಿಗಣಿಸಿದರೆನ್ನಿ; ಭವಾತ್ಮಜ, ಹರಸೂನು, ಶಿವಪ್ರಿಯ ಆದ. ಒಂದು ಕಥೆಯಲ್ಲಿ ಅವನು ಪಾರ್ವತಿಯ ಸಂಬಂಧವಿಲ್ಲದೆ ಶಿವನ ಮುಖದಿಂದಲೇ ಹುಟ್ಟಿದ ಮಗು—ಹರವಕ್ತ್ರೋತ್ಥ. ಇಲ್ಲಿ ಪಾರ್ವತಿಯೇ ಕೋಪಗೊಂಡು 'ನಿನ್ನ ಮೋರೆ ಆನೆಯದಾಗಲಿ' ಎಂದು ಶಪಿಸುತ್ತಾಳೆ. ಅಂತೂ ದಂಪತಿಗಳ ಸಹಜ ಸಂಬಂಧದಿಂದ ಒದಗಿಬಂದವನಲ್ಲ ಗಣೇಶ.

ಇದೇ ಸಂದರ್ಭದಲ್ಲಿ ರುದ್ರ–ಗಣಪತಿಯರ ತಾದಾತ್ಮ್ಯವನ್ನು ನೋಡಿ. ವೈದಿಕ ರುದ್ರ ಮರುದ್ಗಣಗಳಿಗೆ ಒಡೆಯನಾಗಿ ಗಣಪತಿಯೇ; ಮುಂದಿನ ಪುರಾಣಕಲ್ಪನೆಯಲ್ಲಿಯೂ ಶಿವಗಣಗಳಿವೆ, ಶಿವ ಗಣನಾಥನೇ. ತೈತ್ತಿರೀಯ ಆರಣ್ಯಕದಲ್ಲಿ (10ನೇ ಪ್ರಪಾಠಕ) ಗಣೇಶಗಾಯತ್ರಿಯ ಪಾಠವಿದೆ; ಇದು ರುದ್ರಗಾಯತ್ರಿಯನ್ನು ಗಣೇಶನಿಗೆ ಅಳವಡಿಸಿಕೊಂಡುದು ಎನ್ನುವುದು ಸ್ಪಷ್ಟವಾಗಿದೆ. ''ತತ್ಪುರುಷಾಯ ವಿದ್ಮಹೇ, ವಕ್ರತುಂಡಾಯ ಧೀಮಹಿ, ತನ್ನೋ ದನ್ತಿಃ ಪ್ರಚೋದಯಾತ್'' ಇದು ಗಣೇಶ ಗಾಯತ್ರಿ; ''ತತ್ಪುರುಷಾಯ ವಿದ್ಮಹೇ, ಮಹಾದೇವಾಯ ಧೀಮಹಿ, ತನ್ನೋ ರುದ್ರಃ ಪ್ರಚೋದಯಾತ್'' ಇದು ರುದ್ರಗಾಯತ್ರಿ. ಎರಡರಲ್ಲಿಯೂ 'ತತ್ಪುರುಷ' ಎಂದಿರುವುದನ್ನು ಗಮನಿಸಿ. ಶಿವನ ಪಂಚಮುಖಗಳಲ್ಲಿ ಒಂದು ಇದು. ಈ ಗಾಯತ್ರಿ ಪುರಾಣಗಳಲ್ಲಿ ಬಂದಾಗ 'ತತ್ಪುರುಷಾಯ' ಎನ್ನುವುದರ ಬದಲು 'ಏಕದಂತಾಯ' ಅಥವಾ 'ಏಕದಂಷ್ಟ್ರಾಯ' ಎಂದೂ 'ದಂತಿಃ' ಎನ್ನುವುದರ ಬದಲು 'ವಿಘ್ನಃ' ಎಂದೂ ಸೇರಿಸಿಕೊಂಡರೆನ್ನಿ. ಆದರೂ ಆಕರವೇನೋ ನಿರ್ವಿವಾದ. ಗಣಪತಿಯೂ ಶಿವನಂತೆಯೇ ಫಾಲಚಂದ್ರ, ಮಹಾಬಲ, ತ್ರಿಣೇತ್ರ, ನಾಗಯಜ್ಞೋಪವೀತಿ, ಉನ್ಮತ್ತವೇಷ, ಜಿತಮನ್ಮಥ, ಪರಶುಧರ. ಗಣಪತಿಯ ವಾಹನವಾದ ಇಲಿಯ ಬಗ್ಗೆಯೂ ಒಂದು ಹಿನ್ನೆಲೆಯಿದೆ. ಯಜುರ್ವೇದದ ಮೂರನೆಯ ಅಧ್ಯಾಯದಲ್ಲಿ ಕಾಮ್ಯಕರ್ಮವೊಂದನ್ನು ಹೇಳುವಾಗ ಮಂತ್ರವೊಂದು (57) ಬರುತ್ತದೆ. ಪುರೋಡಾಶ ಇಲಿಯನ್ನು ಭೂಮಿಯಲ್ಲಿ ಹೂಳುವಾಗ, ರುದ್ರನನ್ನು ಕುರಿತು ಹೇಳಬೇಕಾದ ಮಂತ್ರ ಇದು—

> ಏಷ ತೇ ರುದ್ರ ಭಾಗಃ ಸಹ ಸ್ವಸ್ರಾಂಬಿಕಯಾ
> ತಂ ಜುಷಸ್ವ ಸ್ವಾಹೈಷ ತೇ ರುದ್ರ ಭಾಗ
> ಆಖುಸ್ತೇ ಪಶುಃ ।

''ರುದ್ರನೇ, ಇದು ನಿನ್ನಪಾಲು, ಈ ಇಲಿ ನಿನಗೆ ಬಲಿ (ಪಶು)! ನಿನ್ನ ಸೋದರಿಯಾದ ಅಂಬಿಕೆಯೊಂದಿಗೆ ಬಂದು ತೆಗೆದುಕೋ !'' ಎಂದು ಮಂತ್ರದ ಅರ್ಥ. ಇಲ್ಲಿ ಎರಡು ವಿಶಿಷ್ಟ ವಿವರಗಳು: ಒಂದು, ಅಂಬಿಕೆ ಶಿವನ ಸೋದರಿಯೆಂಬುದು; ಇನ್ನೊಂದು, ಶಿವನ ಬಲಿ ಇಲಿಯೆಂಬುದು. ತೈತ್ತಿರೀಯ ಸಂಹಿತೆಯಲ್ಲಿಯೂ ಶಿವನ ಸೋದರಿ ಅಂಬಿಕೆಯೆನ್ನುವ ಕಲ್ಪನೆಯಿದೆ; ಇಲ್ಲಿ ಸಾಯಣಾಚಾರ್ಯರೇನೋ ಸೋದರಿಯೆಂಬ ಮಾತಿಗೆ 'ಸೋದರಿಯಂತೆ ಹಿತಕಾರಿಣಿ' (ಸ್ವಸ್ರಾ ಸೋದರೀವದ್ಧಿತ ಕಾರಿಣ್ಯಾ) ಎಂದು ಅರ್ಥ ಮಾಡುತ್ತಾರೆ. ತೈತ್ತಿರೀಯ ಆರಣ್ಯಕದ ವೇಳೆಗೆ ಶಿವನ ಹೆಂಡತಿ ಅಂಬಿಕೆಯೆನ್ನುವ ಭಾವನೆ ಬೇರೂರಿತು; ಅಲ್ಲಿ 'ಅಂಬಿಕಾಪತಯ ಉಮಾಪತಯೇ ನಮೋ ನಮಃ' ಎನ್ನುವ ಮಾತಿದೆ. ಇದನ್ನು ಬೇರೆಡೆ ಪ್ರಸ್ತಾಪಮಾಡೋಣ. ಇಲ್ಲಿ ಗಮನಿಸಬೇಕಾದುದು ಇಲಿಯು ಶಿವನಿಗೂ ಪಶು, ಗಣಪತಿಗೂ ಪಶು ಎಂಬುದು. ರುದ್ರ–ಗಣಪತಿಯರ ತಾದಾತ್ಮ್ಯಕ್ಕೆ ಇದೂ ಸಹಕಾರಿಯಾಯಿತೆಂದು ತೋರುತ್ತದೆ.

ಇಲಿಯಿಂದ ವಿಷ ಒದಗಿ ರೋಗಾದಿ ಉಪದ್ರವಗಳಿಗೆ ಕಾರಣವಾಗುವುದೂ, ಇಲಿಯಿಂದ ಧಾನ್ಯದ್ರವ್ಯನಾಶವಾಗುವುದೂ ಹೆಚ್ಚಾಗಿದ್ದ ಕಾಲದಲ್ಲಿ 'ಮೂಷಕವಿನಾಶ'ಕ್ಕೆ ಯಂತ್ರತಂತ್ರಗಳನ್ನು ಮಾಡುತ್ತಿದ್ದುದು ಸಹಜವೇ. ಮೂಷಕ–ವಿಷದ ಬಾಧೆಯಿದ್ದಾಗ ಬಳಸುತ್ತಿದ್ದುದು 'ಭೂತನಿಗ್ರಹ–ಮೂಷಕವಿಷಾದಿ ಶಮನಕರವಾದ ವಿಘ್ನೇಶಮಂತ್ರ'ವನ್ನೇ. ಈ ಮಂತ್ರದೇವತೆಯಾದ ದಶಭುಜ-ಗಣಪತಿಯನ್ನು 'ರುದ್ರರೂಪ–ತ್ರಿಭುವನೇಶ್ವರ'ನೆಂದು ಮಂತ್ರವೇ ಹೇಳುತ್ತದೆ. ಮಂತ್ರಸಾರದಲ್ಲಿ ಮೂಷಕವಿನಾಶನ ಅಥವಾ ಮೂಷಕಾದ್ಯುಚ್ಚಾಟನ ಮಂತ್ರವನ್ನು ಹೇಳುವಾಗ 'ಮಾರ್ಜಾರರುದ್ರ' (ಬೆಕ್ಕು–ರುದ್ರ)ನ ಪ್ರಸ್ತಾಪ ಬರುತ್ತದೆ. "ಓಂ ನಮೋ ಭಗವತೇ ಮಾರ್ಜಾರ ರುದ್ರಾಯ ದುಷ್ಟಸತ್ತ್ವವಿನಾಶನಾಯ ನಖದಂಷ್ಟ್ರಾಯುಧಾಯ ಹುಂ ಫಟ್ ಸ್ವಾಹಾ" ಎಂದು ಮಂತ್ರ. ಬೆಕ್ಕನ್ನೇ ರುದ್ರನೆಂದು ಬಗೆದು ಹಲವಾರು ಬಗೆಯ ದುಷ್ಟಸತ್ತ್ವಗಳನ್ನು ನೀಗಿಸುವ ಮಂತ್ರ (ವ್ಯಾಘ್ರಾಹಿಮೂಷಕಮುಖದುಷ್ಟಸತ್ತ್ವವಿನಾಶನ ಪ್ರಧಾನೋಯಂ ಮಂತ್ರಃ). ಬೆಕ್ಕಿಗೆ ಇಲಿ ಪಶುವಷ್ಟೆ.

ಅದೂ ಅಲ್ಲದೆ ಶಿವಲಿಂಗಗಳಿರುವಂತೆ ಗಣಪತಿಲಿಂಗಗಳೂ ಇರುತ್ತವೆ. ಗಾಣಪತ್ಯರು ದಿಟವಾಗಿ ಲಿಂಗಪೂಜಕರೇ: ಅವರು ಶೈವರಲ್ಲಿ ಒಂದು ಪ್ರಭೇದವೆಂದೇ ಹೇಳಬಹುದು. ಜಾವಾ ದೇಶದಲ್ಲಿ ಗಣಪತಿಯನ್ನು 'ಕಾಲಾಂತಕ' ನೆಂದು ವ್ಯವಹರಿಸುತ್ತಾರೆ; ಕಾಲಾಂತಕನೆಂದರೆ ಶಿವನಲ್ಲವೆ? ಶಿವ ಪಂಚಮುಖಿನಾಗಿರುವಂತೆಯೇ ಹೇರಂಬ ಗಣಪತಿಯೂ ಪಂಚಮುಖಿ.

ಶಿಲ್ಪ ಪ್ರಶಸ್ತಿ

ಅಂತೂ ಶಿಲ್ಪದಲ್ಲಿ ಗಣಪತಿಯ ಆಕಾರವನ್ನು ಮೂಡಿಸುವಾಗ ಯಕ್ಷ, ಅಗ್ನಿ, ಬೃಹಸ್ಪತಿ, ರುದ್ರ ಎಲ್ಲ ದೇವತೆಗಳ ಆವೇಶವೂ ಒದಗಿತು. ನಮ್ಮ ದೇಶದಲ್ಲಿ ಫತೇಗಢ ಜಿಲ್ಲೆಯಲ್ಲಿ ದೊರೆತಿರುವ ಒಂದು ಶಿಲಾಫಲಕದಲ್ಲಿ ಸ್ಥಾನಕ ಗಣಪತಿಯ ಉಬ್ಬು ಶಿಲ್ಪವಿದೆ. ಕಲ್ಲು ಮಥುರಾ ಪ್ರಾಂತ್ಯದ್ದು; ಶಂಕಶಗುಡ್ಡದಿಂದ ಎತ್ತಲಾದ ಈ ಮೂರ್ತಿ ಈಗ ಮ್ಯೂನಿಕ್ ಜಾನಪದ ವಸ್ತುಸಂಗ್ರಹಾಲಯದಲ್ಲಿದೆ (ಚಿತ್ರ 46). ಇದರ ಕಾಲವನ್ನು ನಿಶ್ಚಯಿಸುವುದು ಕಷ್ಟವಾದರೂ ಈಗ ನಮ್ಮ ದೇಶದಲ್ಲಿ ದೊರೆತಿರುವ ಗಣಪತಿ ಶಿಲ್ಪಗಳಲ್ಲೆಲ್ಲ ತುಂಬ ಪುರಾತನವಾದುದು ಇದು. ಇಲ್ಲಿನ ಗಣಪತಿ ದ್ವಿಭುಜ, ಗಜಮುಖ, ಶೂರ್ಪಕರ್ಣ, ಲಂಬೋದರ, ನಿರಾಭರಣ. ಯಕ್ಷರಲ್ಲಿಯೂ ಪ್ರಾಚೀನ ಚಿತ್ರಣ ಇದು. ಮುಂದೆ ಸ್ವಲ್ಪವೇ ಸಮಯದ ತರುವಾಯ ಸಿದ್ಧವಾದ ಭುಮಾರದ ಗಣಪತಿ ಆಸೀನಮೂರ್ತಿ. ಇದೂ ದ್ವಿಭುಜವೇ, ಗಜಮುಖವೇ; ಆದರೆ ಸ್ವಲ್ಪ ಅಲಂಕರಣವಿದೆ. ಉಪವೀತದಂತೆ ಇಳಿಬಿದ್ದಿರುವ ಘಂಟಾಮಾಲೆ, ಕಾಲು ಕೈ ತೋಳುಗಳಲ್ಲಿಯೂ ಘಂಟೆಯ ನೂಪುರ ಕಂಕಣ ವಲಯಗಳು, ತಲೆಯ ಮೇಲೂ ಅಂಥದೇ ಆಭರಣ. ಯಕ್ಷರ ಆಕೃತಿ ಶಿಲ್ಪಸಿದ್ಧವಾಗಿ ಕೈಗೂಡಿದಾಗ, ಮೂಡಿಬಂದ ಶಿಲ್ಪ ಇದು. ಇವೆರಡೂ ಸುಮಾರು ಐದನೆಯ ಶತಮಾನದ ಕೃತಿಗಳೆಂದರೆ ಆರನೆಯ ಶತಮಾನದಲ್ಲಿ ಸಿದ್ಧವಾದ ಬಾದಾಮಿಯ ಶಿವಾಲಯದಲ್ಲಿ ತಾಂಡವಶಿವನ ಶಿಲ್ಪಚಿತ್ರದಲ್ಲಿ ಸ್ಥಾನಕ ಗಣಪತಿ



ಚಿತ್ರ 46
ಸ್ಥಾನಕ ಗಣಪತಿ

ಪರಿವಾರ ದೇವತೆಯಾಗಿ ಸೇರಿದ್ದಾನೆ. ಇಲ್ಲಿನ ಗಣಪತಿಗೆ ಆಗಲೇ ನಾಲ್ಕು ಕೈಗಳು, ಶಿವತಾಂಡವದ ಲಯವನ್ನನುಸರಿಸಿ ಬೀಸುತ್ತಿರುವ ಕೈಗಳಿವೆ. ನೃತ್ತಗಣಪತಿಯಲ್ಲದಿದ್ದರೂ ಭಂಗಿ ಅದನ್ನು ಸೂಚಿಸುತ್ತದೆ. ಶಿವತಾಂಡವಗಣದಲ್ಲಿಯೇ ಗಣಪತಿಯನ್ನು ಐಹೊಳೆಯ ಪ್ರಾಚೀನ ಶಿಲ್ಪದಲ್ಲಿಯೂ ಕಾಣಬಹುದು. ನೃತ್ತ ಗಣಪತಿಯ ಹಿನ್ನೆಲೆ ಹೀಗೆ ತುಂಬ ಹಳೆಯದು (ಚಿತ್ರ 47).

ಮುಂದೆ ಗಣಪತಿಯ ಆಕಾರ ಹೆಚ್ಚೂಕಡಮೆ ನಿರ್ದಿಷ್ಟವಾಗಿ ಬಂದಿತು. ಬಹುಮಟ್ಟಿಗೆ ಆಸೀನ ಎಂದರೆ ಕುಳಿತಿರುವ ಮೂರ್ತಿ; ಸುಖಾಸೀನನಾಗಿರುವುದೇ ಹೆಚ್ಚು. ಲಂಬೋದರನಾದ ಮೂರ್ತಿಗೆ ಅನುಕೂಲವಾದ ಭಂಗಿಯೇ ಇದು (ಚಿತ್ರ 48). ನಾಲ್ಕು ಕೈಗಳು ಸಾಮಾನ್ಯ. ಐದು ತಲೆಗಳ ಹೇರಂಬ ಗಣಪತಿಗೇನೋ ಹತ್ತು ಕೈಗಳು; ಶಕ್ತಿ ಸಹಿತ ಗಣಪತಿಗೆ ನಾಲ್ಕರಿಂದ ಹತ್ತು ಕೈಗಳಿರುವುದುಂಟು; ತಾಂಡವ

ಚಿತ್ರ 47
ನೃತ್ತ ಗಣಪತಿ



ಚಿತ್ರ 48
ಸುಖಾಸೀನ-ವರದ-ಗಣಪತಿ

ಗಣಪತಿಗೂ ಹತ್ತು ಕೈಗಳು. ಕೆಲವೊಮ್ಮೆ ಎರಡೇ ಕೈಗಳಿರುವ ಆಸೀನ ಗಣಪತಿಯೂ ಇರುತ್ತಾನೆ, ಗಣೇಶಪುರಾಣದಲ್ಲಿ ನಾಲ್ಕು ಯುಗಗಳಲ್ಲಿ ಗಣಪತಿಯನ್ನು ಕ್ರಮವಾಗಿ ಹತ್ತುಕೈಗಳು, ಆರುಕೈಗಳು, ನಾಲ್ಕುಕೈಗಳು, ಎರಡುಕೈಗಳು ಇರುವಂತೆ ಕಲ್ಪಿಸಿಕೊಳ್ಳಬೇಕೆಂದು ಹೇಳಿದೆ. ಕೃತಯುಗದಲ್ಲಿ ಸಿಂಹವಾಹನ; ತ್ರೇತಾಯುಗದಲ್ಲಿ ನವಿಲು ಅವನ ವಾಹನ; ದ್ವಾಪರದಲ್ಲಿ ಕೆಂಬಣ್ಣ ಅವನದು; ಕಲಿಯುಗದಲ್ಲಿ ಬಿಳಿಬಣ್ಣದವ.

ಧ್ಯಾಯೇತ್ಸಿಂಹಗತಂ ವಿನಾಯಕಮಮುಂ ದಿಗ್ಬಾಹುಮಾದ್ಯೇಯುಗೇ।
ತ್ರೇತಾಯಾಂ ತು ಮಯೂರವಾಹನಮಮುಂ ಷಡ್ಬಾಹುಕಂ ಸಿದ್ಧಿದಂ।
ದ್ವಾಪರೇತು ಗಜಾನನಂ ಯುಗಭುಜಂ ರಕ್ತಾಂಗರಾಗಂ ವಿಭುಂ।
ತುರ್ಯೇ ತು ದ್ವಿಭುಜಂ ಸಿತಾಂಗರುಚಿರಂ ಸರ್ವಾರ್ಥದಂ ಸರ್ವದಾ॥

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದ್ವಿಭುಜ–ಸ್ಥಾನಕ ಗಣಪತಿಗಳು ವಿಶೇಷ; ಗೋಕರ್ಣದ ಸುಪ್ರಸಿದ್ಧ ಗಣಪತಿ ಮೂರ್ತಿಯೂ ದ್ವಿಭುಜವೇ. ಇವೆಲ್ಲ ಯಕ್ಷಾಕೃತಿಗಳೇ. ಸ್ಥಾನಕ, ಎಂದರೆ ನಿಂತಿರುವ ಭಂಗಿಯಲ್ಲಿ (ಚಿತ್ರ 49, 50)

ಚಿತ್ರ 49
ಸ್ಥಾನಕ ಗಣಪತಿ,
ಸುಮಾರು ಎಂಟನೆಯ ಶತಮಾನದ ಶಿಲ್ಪ
ಈಗ ಬರೋಡ ವಸ್ತುಸಂಗ್ರಹಾಲಯದಲ್ಲಿದೆ

ಚಿತ್ರ 50
ಸ್ಥಾನಕ ಗಣಪತಿ

ಚಿತ್ರ 51
ಶಕ್ತಿ ಗಣಪತಿ
ಉತ್ತರ ಭಾರತದ್ದು

ಚಿತ್ರ 52
ಶಕ್ತಿ ಗಣಪತಿ, ಖಜುರಹೋ ಶಿಲ್ಪ

ಚಿತ್ರ 53
ಶಕ್ತಿ ಗಣಪತಿ- ದಕ್ಷಿಣ ಭಾರತದ್ದು

ಸಮಭಂಗ, ದ್ವಿಭಂಗ, ತ್ರಿಭಂಗಗಳೂ ಇರುತ್ತವೆ. ನೃತ್ತಭಂಗಿಯೂ ಇದರಲ್ಲಿ ಒಂದು ಭೇದ ಅಷ್ಟೆ. ಸಾಮಾನ್ಯವಾಗಿ ಗಣಪತಿಯದು ಏಕಮೂರ್ತಿ. ಅಪುರೂಪವಾಗಿ ಎಡತೊಡೆಯ ಮೇಲೆ ಶಕ್ತಿಯನ್ನು ಕುಳ್ಳಿರಿಸಿಕೊಂಡು ಸುಖಾಸೀನ ಭಂಗಿಯಲ್ಲಿರುವ ಮೂರ್ತಿಗಳನ್ನೂ ಕಾಣಬಹುದು (ಚಿತ್ರ 51,52, 53). ಈ ಶಕ್ತಿಗೆ ಶ್ಯಾಮಲಾಂಗಿ ಅಥವಾ ಜಯಂತಿ ಎಂದು ಹೆಸರು; ಈಕೆಯ ಕೈಯಲ್ಲಿ ಪದ್ಮವಿರುತ್ತದೆ. ಗಣೇಶ ಇವಳನ್ನು ಆಲಿಂಗಿಸಿಕೊಂಡಿರುತ್ತಾನೆ. ಇಬ್ಬರು ಶಕ್ತಿಯರೂ (ಋದ್ಧಿ–ಸಿದ್ಧಿಯರು) ಎಂಟುಮಂದಿ ಮಹಿಷಿಯರೂ (ಅಣಿಮಾದಿ ಅಷ್ಟ ಸಿದ್ಧಿಗಳು) ಗಣಪತಿಯೊಂದಿಗೆ ಇರುವುದೂ ತೀರ ಅಪುರೂಪವಾಗಿ ಕಾಣಸಿಗುತ್ತದೆ. ಶಕ್ತಿಗಣಪತಿಗಳಲ್ಲಿ ಉಚ್ಛಿಷ್ಟಗಣಪತಿ (ನಾಲ್ಕು ಕೈಗಳು, ಕೆಂಪುಬಣ್ಣ), ಲಕ್ಷ್ಮೀಗಣಪತಿ (ನಾಲ್ಕು ಅಥವಾ ಎಂಟು ಕೈಗಳು, ಬಿಳಿಬಣ್ಣ), ಊರ್ಧ್ವಗಣಪತಿ (ಆರುಕೈಗಳು, ಹಳದಿ ಬಣ್ಣ), ಪಿಂಗಳ ಗಣಪತಿ (ಆರು ಕೈಗಳು, ಹಳದಿ ಬಣ್ಣ), ಮಹಾಗಣಪತಿ (ಹತ್ತುಕೈಗಳು, ಕೆಂಪುಬಣ್ಣ) ಎಂಬ ಪ್ರಭೇದಗಳಿವೆ.

ಹೇರಂಬ ಗಣಪತಿ ಮೂರ್ತಿಯೊಂದು ಸಿಂಹದ ಮೇಲೆ ಕುಳಿತಂತೆ ಇರುತ್ತದೆ; ಉಳಿದ ಗಣಪತಿಗಳ ಬಳಿಯೆಲ್ಲ ಇಲಿಯಿರುವುದು ವಾಡಿಕೆ. ಆಸೀನಮೂರ್ತಿಯಾದರೆ ಸಿಂಹಾಸನ ಅಥವಾ ಭದ್ರಾಸನದಲ್ಲಿ ಲಾಂಛನದಂತೆ ಕಡೆದಿರುತ್ತಾರೆ; ನೃತ್ತಮೂರ್ತಿಯಾದರೆ ಒಮ್ಮೊಮ್ಮೆ ಇಲಿಯ ಮೇಲೇ ಕುಣಿಯುತ್ತಿರುವಂತೆ ಇರುತ್ತದೆ. ಸ್ಥಾನಕ ಮೂರ್ತಿಯ ಪಕ್ಕದಲ್ಲಿ ಇಲಿಯ ಸಣ್ಣ ಪುತ್ಥಳಿಯಿರಬಹುದು; ಆದರೆ ಇಲ್ಲದಿರುವುದೇ ವಾಡಿಕೆ. ಪ್ರಾಚೀನ ಗಣಪತಿಮೂರ್ತಿಗಳ ಬಳಿ ಇಲಿಯಿರುವುದಿಲ್ಲ.

ಗಣಪತಿಗೆ ಗಜಮುಖ, ಶೂರ್ಪಕರ್ಣ; ಆನೆಯ ತಲೆ, ಸಹಜವಾಗಿಯೇ ಮೊರದಂಥ ಕಿವಿಗಳು. ಹೇರಂಬ ಗಣಪತಿಗೆ ಐದು ಆನೆಯ ತಲೆಗಳು. ಗಣಪತಿ ಹುಟ್ಟುವಾಗ ನಾಲ್ಕು ದಿಕ್ಕುಗಳಿಗೂ ಮುಖಮಾಡಿ ನಾಲ್ಕು ತಲೆಗಳು, ಮೇಲೊಂದು ತಲೆ ಹೀಗೆ ಐದು ತಲೆಗಳಿದ್ದುವಂತೆ. ನೇಪಾಳದಲ್ಲಿಯೂ ದಕ್ಷಿಣ ಭಾರತದಲ್ಲಿಯೂ ಹೇರಂಬ ಗಣಪತಿಯ ಶಿಲ್ಪಗಳು ಹೀಗೆಯೇ ನಿರೂಪಿಸುತ್ತವೆ. ಅಪುರೂಪವಾಗಿ ಐದೂ ತಲೆಗಳೂ ಒಂದೇ ಸಾಲಿನಲ್ಲಿರುವುದೂ ಉಂಟು. ಸಾಮಾನ್ಯವಾಗಿ ಗಣಪತಿ ಒಂದೇ ತಲೆಯವನು. ಸೊಂಡಿಲ ವಿನ್ಯಾಸ ಸಾಮಾನ್ಯವಾಗಿ ಎಡಭಾಗಕ್ಕೆ ಬಾಗಿರುವಂತೆ ಇರುತ್ತದೆ; ಇದು ಎಡಮುರಿ (ತಮಿಳಿನಲ್ಲಿ ಇಡಂಬುರಿ). ಹಾಗೆ ಎಡಭಾಗಕ್ಕೆ ಬಂದಿರುವಾಗ ಎಡಗೈಯಲ್ಲಿ ಹಿಡಿದಿರುವ ಮೋದಕವನ್ನೋ, ಫಲವನ್ನೋ, ಮಿಷ್ಟಪಾತ್ರೆಯನ್ನೋ ಆನಿಸಿಕೊಂಡಿರುತ್ತದೆ. ಕೆಲವೊಮ್ಮೆ ಸೊಂಡಿಲು ಬಲಮುರಿಯಾಗಿರುವುದೂ ಉಂಟು. ಇದು ತಾಂತ್ರಿಕ ಪ್ರಭಾವವನ್ನು ತೋರಿಸುತ್ತದೆ. ಎಡಮುರಿಯಾಗಿದ್ದಾಗಲೂ ಸೊಂಡಿಲ ತುದಿ ತೊಡೆಯಮೇಲೆ ಕುಳಿತಿರುವ ಶಕ್ತಿಯ ಗುಹ್ಯಸ್ಥಾನವನ್ನು ಮುಟ್ಟುತ್ತಿರುವಂತೆ ಚಿತ್ರಣ ಉಚ್ಛಿಷ್ಟಗಣಪತಿ ಮೂರ್ತಿಯಲ್ಲಿ ಕಾಣಬರುತ್ತದೆ; ಇದೂ ತಾಂತ್ರಿಕಪ್ರಕಾರದ್ದು. ಸೊಂಡಿಲನ್ನು ಮೇಲಕ್ಕೆತ್ತಿ, ಅಥವಾ ಕೆಳಕ್ಕೆ ಇಳಿಬಿಟ್ಟು ಇರುವ ಮೂರ್ತಿಗಳೂ ಇವೆ. ಇಳಿಬಿಟ್ಟಾಗ ಸೊಂಡಿಲು ಪಾನಪಾತ್ರೆ (ಅಥವಾ ಅಮೃತಕಳಶ), ಇಲ್ಲವೇ ಜಂಬೂಫಲ ಇದನ್ನು ಹಿಡಿದಂತೆ ಚಿತ್ರಿಸಿರುತ್ತಾರೆ. ಏನನ್ನೂ ಹಿಡಿಯದೆ ಸುಮ್ಮನೆ ಸುತ್ತಿಕೊಂಡಿರುವುದೂ ಉಂಟು.

ಗಜಮುಖನಿಗೆ ಏಕದಂತವಿರುವುದು ವೈಶಿಷ್ಟ್ಯ. ಒಂದು ದಂತ ಮುರಿದಂತೆ ಕಾಣಿಸಿರುತ್ತಾರೆ. ಇದನ್ನು ವಿವರಿಸುವ ಪುರಾಣ ಕಥೆಗಳೂ ಕೆಲವಾರಿವೆ. ಗಜಮುಖಾಸುರನೊಂದಿಗೆ, ಅಥವಾ ಪರಶುರಾಮನೊಂದಿಗೆ, ಅಥವಾ ಚಂದ್ರನೊಂದಿಗೆ ಕಾದಾಡುವಾಗ ಈ ದಂತ ಮುರಿಯಿತೆಂದು ವಿವರಣೆ. ಏಕದಂತಕ್ಕೆ ತಾತ್ತ್ವಿಕ ಅರ್ಥವನ್ನು ಹೇಳುವುದೂ ಉಂಟು. ಪ್ರಾಚೀನ ಶಿಲ್ಪಗಳಲ್ಲಿ ದಂತಗಳೇ ಸ್ಪಷ್ಟವಾಗಿರುವುದಿಲ್ಲ.

ನೇಪಾಳ, ಕಂಬೋಡಿಯ, ಜಾವಾ, ಟಿಬೆಟ್ ದೇಶಗಳಲ್ಲಿ ದೊರೆತಿರುವ ಹಳೆಯ ಮೂರ್ತಿಗಳಲ್ಲಿ ಎರಡೂ ದಂತಗಳು ಸಮಾನವಾಗಿಯೇ ಇರುತ್ತವೆ. ದಕ್ಷಿಣ ಭಾರತದಲ್ಲೇನೋ ಗಣಪತಿಯ ಬಲದಂತ ಮುರಿದಂತೆ ತೋರಿಸುವುದು ನಿಯಮ. ಮುರಿದ ದಂತವನ್ನು ಬಲಗೈಯಲ್ಲಿ ಹಿಡಿದಿರುವಂತೆಯೂ ತೋರಿಸುತ್ತಾರೆ. ಈ ದಂತ ಲೇಖನಿಯಂತೆ ಕಂಡುಬಂದು, ಕಾಲಕ್ರಮದಲ್ಲಿ ವಿದ್ಯಾಭಿಮಾನಿ ದೇವತೆಯಾದ ಗಣಪತಿ ಬರವಣಿಗೆಯಲ್ಲಿ ನಿರತನಾದಂತೆ ಕಾಣಿಸುವ ಪದ್ಧತಿ ಬೆಳೆಯಿತು. ವ್ಯಾಸರು ಮಹಾ ಭಾರತವನ್ನು ಬರೆಯುವಾಗ ಗಣಪತಿಯನ್ನು ಲಿಪಿಕಾರನಾಗಿ ಆರಿಸಿಕೊಂಡರಲ್ಲವೆ? ಈ ಭಂಗಿಗೆ ಉತ್ತಮ ನಿದರ್ಶನವೆಂದರೆ ಸಯಾಂದೇಶದ ಬಾಂಗ್‌ಕಾಕ್‌ನ ಬ್ರಹ್ಮದೇವಾಲಯದಲ್ಲಿರುವ ಖ್ಮೇರ್‌ಗಣಪತಿ. ಆಸೀನನಾದ ಈ ಮೂರ್ತಿಯ ಬಲಗೈಯಲ್ಲಿ ಲೇಖನಿ (ಕಂಠ) ಇದೆ, ಎಡಗೈಯಲ್ಲಿ ಪತ್ರಗಳಿವೆ. ಸುಮಾರು ಹನ್ನೊಂದನೆಯ ಶತಮಾನದ ಕೃತಿಯಿದು (ಚಿತ್ರ 54). ಗಣಪತಿಯು ಮಹಾಭಾರತವನ್ನು ಬರೆದ ಕಥೆಯಲ್ಲದೆ. ಶಿವನು ಹೇಳುತ್ತಿರುವಾಗ ಗಣಪತಿಯು ತಂತ್ರಗಳನ್ನು ಬರೆದಿಟ್ಟನೆಂದು ಗಾಯತ್ರೀ ತಂತ್ರದಲ್ಲಿ ಬರುತ್ತದೆ. ಈ ಶೈವ ತಾಂತ್ರಿಕ ವಿವರ ಖ್ಮೇರ್‌ರಾಜವಂಶ ಆಳುತ್ತಿದ್ದಾಗ, ಒಂಬತ್ತನೆಯ ಶತಮಾನದಲ್ಲಿಯೇ, ಕಂಬೋಡಿಯವನ್ನು ಮುಟ್ಟಿದಂತೆ ತಿಳಿದುಬರುತ್ತದೆ. ಮುರಿದ ದಂತ ಮೂಲಂಗಿಯಾಗಿ ಮಾರ್ಪಟ್ಟಿರುವ ನಿದರ್ಶನಗಳೂ ಇವೆ! ಬಂಗಾಳದ ಕಡೆ ಇದರ ಚಿತ್ರಣ ಕಾಣಸಿಗುತ್ತದೆ. ಢಾಕಾ ವಸ್ತುಸಂಗ್ರಹಾಲಯದಲ್ಲೊಂದು ಸುಖಾಸೀನ ಗಣಪತಿಯ ಶಿಲ್ಪವಿದೆ; ಮೇಲಿನ ಎಡಗೈಯಲ್ಲಿ ಮೂಲಂಗಿ, ಮೇಲಿನ ಬಲಗೈಯಲ್ಲಿ ತ್ರಿಶೂಲ ಇವೆ. ಆದರೆ ಇಲ್ಲಿನ ಮೂಲಂಗಿ ಮುರಿದ ದಂತವಂತೂ ಕಂಡಿತ ಅಲ್ಲ; ಮುರಿದ ದಂತ ಸಾಮಾನ್ಯವಾಗಿ ಇರುವ ಕೈಯಲ್ಲಿಯೂ ಮೂಲಂಗಿಯಿಲ್ಲ. ಯಾಜ್ಞವಲ್ಕ್ಯಸ್ಮೃತಿಯಲ್ಲಿ ಗಣಪತಿಗಿಡಬೇಕಾದ ಎಡೆಯಲ್ಲಿ ಮೀನು, ಮಾಂಸ, ಮೋದಕಗಳೊಂದಿಗೆ ಮೂಲಂಗಿಯೂ ಸೇರಿದೆಯೆನ್ನುವುದನ್ನು ಇಲ್ಲಿ ನೆನಸಿಕೊಳ್ಳಬೇಕು.

ಚಿತ್ರ 54
ವಿದ್ಯಾಗಣಪತಿ
ಸಯಾಮಿನ ಬಾಂಗ್‌ಕಾಕ್‌ನ
ಬ್ರಹ್ಮದೇವಾಲಯದಲ್ಲಿರುವ
ಹಿತ್ತಾಳೆ ಶಿಲ್ಪ

ಗಣಪತಿಯ ಆಯುಧಗಳಲ್ಲಿ ಪಾಶ, ಅಂಕುಶ ವಿಶಿಷ್ಟವಾದುವು; ಎರಡೂ ಆನೆಗೆ ಸಂಬಂಧಿಸಿದುವೇ. ಬೇಸಾಯವು ಜನರಲ್ಲಿ ಬಳಕೆಗೆ ಬರುವ ಮೊದಲು ಬೇಟೆಯೇ ಮುಖ್ಯ ವೃತ್ತಿಯಾಗಿದ್ದಾಗ ಸೋಲಿಗರ ದೈವ ಗಣಪತಿಯಾಗಿದ್ದನೆಂದು ಒಂದು ವಿವರವಿದೆ. ಬೇಸಾಯಕ್ಕೆ ಮಾತೃದೇವತೆಯ ಪೂಜೆ ಮುಖ್ಯವಾಯಿತು; ಗೌರಿ ಇದನ್ನು ಪ್ರತಿನಿಧಿಸುತ್ತಾಳೆ. ಹಳೆಯ ಬೇಟೆಯನ್ನು ಗಣಪತಿ ಪ್ರತಿನಿಧಿಸುತ್ತಾನೆ. ನಾಡಿನ ಕೆಲವು ಕಡೆ ನಡೆಯುವ ಗೌರಿ ಗಣೇಶ ಪೂಜೆಯಲ್ಲಿ ಗಣೇಶನನ್ನು ಮೊದಲು ಪೂಜೆಮಾಡಿ ಕಳುಹಿಸಿ ಗೌರಿಯನ್ನು ಉಳಿಸಿಕೊಳ್ಳುವ ವಿಧಿಯಿದೆ. ನಮ್ಮಲ್ಲಿಯೂ ಗೌರೀಗಣೇಶ ಪೂಜೆಯಾದ ಮೇಲೆ ಗಣಪತಿಯನ್ನು ವಿಸರ್ಜನೆ ಮಾಡುತ್ತೇವೆ; ಗೌರಿಯನ್ನು ಇರಿಸಿಕೊಳ್ಳುತ್ತೇವೆ. ಸಮಾಜದಲ್ಲಿ ಬದಲಾದ ಪ್ರಾಚೀನ ಆರ್ಥಿಕ ವ್ಯವಸ್ಥೆಯನ್ನು ಈ ವಿಧಿ ಪ್ರತಿಬಿಂಬಿಸುತ್ತದೆ ಎಂದು ಮೇಲೆ ಹೇಳಿದ ವಾದ ವಿವರಿಸುತ್ತದೆ. ಗೌರಿಗೂ ಗಣೇಶನಿಗೂ ಇರುವ ನೆಂಟನ್ನೂ ಈ ಹಿನ್ನೆಲೆಯಲ್ಲಿಯೇ ಅವರು ಪರಿಶೀಲಿಸುತ್ತಾರೆ. ಗಣಪತಿಯ ಬಣ್ಣ ಕೆಂಪೇಕೆ? ಋತುನಿಯಮದಂತೆ

ಹೆಣ್ಣಿನ ಯೋನಿಯಿಂದ ರಕ್ತಸ್ರಾವವಾಗುವುದು ಆಕೆಯ ಸಾಫಲ್ಯವನ್ನು ಸೂಚಿಸುವುದೆಂದೂ (ಸುಮಂಗಲಿಯರ ಹಣೆಯಮೇಲಿನ ಕುಂಕುಮ ಇದರ ದ್ಯೋತಕ), ಗೌರಿಯ ಸಂಬಂಧವನ್ನು ಪಡೆದ ಗಣಪತಿಯು ಕೆಂಪು ಬಣ್ಣವನ್ನು ಇದೇ ಹಿನ್ನೆಲೆಯಲ್ಲಿ ಗಮನಿಸಬೇಕೆಂದೂ ಅವರ ವಾದ. ಈ ವಾದಕ್ಕೆ ಇಂಬುಕೊಡುವಂತೆ ಗಾಣಪತ್ಯರ ಧಾರ್ಮಿಕ ವಿಧಿಗಳಲ್ಲಿ ಯೋನಿಯಿಂದ ಸುರಿದ ರಕ್ತ ಪ್ರಮುಖವಾದ ಒಂದು ಸಾಮಗ್ರಿಯಾಗಿದೆ (ಶಂಕರವಿಜಯ, 17, ಪು. 115). ಇದು ಹೇಗಾದರೂ ಇರಲಿ, ಮೊದಲಿಗೆ ಗಣಪತಿಯು ಬೇಟೆಗಾರರ ದೈವವಾಗಿದ್ದನೆನ್ನುವುದು ದಿಟವಿದ್ದೀತು. ಪಾಶ ಅಂಕುಶಗಳಲ್ಲದೆ, ಗಣಪತಿಗೆ ಬಿಲ್ಲನ್ನೂ ಕೊಡಲಿಯನ್ನೂ ಆಯುಧಗಳಾಗಿ ಕೊಡುವುದುಂಟು; ಟೊಂಕಕ್ಕೆ ಹುಲಿಯ ಚರ್ಮವನ್ನು ವಿಧಿಸಿರುವುದುಂಟು; ಉಳಿದಂತೆ ಅವನು ಬೆತ್ತಲೆಯಾಗಿಯೇ ಇರುವನಷ್ಟೆ.

ಯಕ್ಷನ ಆಕೃತಿಯೂ ಈ ಪ್ರಾಚೀನ ಗಣವ್ಯವಸ್ಥೆಯ ಸಂಬಂಧವೂ ಆಕಸ್ಮಿಕವೇನಲ್ಲ. ಗಣವ್ಯವಸ್ಥೆಯಲ್ಲಿ ಅರ್ಥ–ಕಾಮಗಳೇ ಪ್ರಧಾನ; ವ್ರಾತದ ಪ್ರಸ್ತಾಪ ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಬಂದಾಗ ಅದರ ಮೇಲಿನ ಕಾಶಿಕೆ ಸ್ಪಷ್ಟವಾಗಿಯೇ 'ಅರ್ಥಕಾಮ ಪ್ರಧಾನತಃ' ಎಂದು ಹೇಳಿದೆ. ಕುಬೇರನು ಸಂಪತ್ತಿನ ಅಭಿಮಾನಿ ದೇವತೆ, ಯಕ್ಷರಾಜನಲ್ಲವೆ? ಕುಬೇರನನ್ನೂ ಗಣಪತಿಯಂತೆಯೇ ಡೊಳ್ಳುಹೊಟ್ಟೆಯ ಕುಳ್ಳ ಕುಳಿತಿರುವಂತೆ ಚಿತ್ರಿಸುತ್ತಾರೆ. ಕುಬೇರ ಅರ್ಥಪ್ರಧಾನ ಯಕ್ಷನಾದರೆ ಗಣಪತಿ ಕಾಮಪ್ರಧಾನಯಕ್ಷ; ಎಷ್ಟಾದರೂ ವರ–ಸಿದ್ಧಿ ವಿನಾಯಕ ಅಲ್ಲವೆ? ಅವನ ಅಷ್ಟೋತ್ತರಶತನಾಮಗಳಲ್ಲಿ ಅವನನ್ನು 'ಕಾಮಿ', 'ಶೃಂಗಾರಿ', 'ಸುಖನಿಧಿ', 'ಐಶ್ವರ್ಯಕಾರಣ', 'ಪ್ರಮೋದ', 'ಅಭೀಷ್ಟವರದ' ಎಂದು ಮೊದಲಾಗಿ ಬಣ್ಣಿಸಿರುವುದನ್ನು ಗಮನಿಸಬೇಕು. ಗಣೇಶನ ಕೈಯಲ್ಲಿ ಮೋದಕ ಅಥವಾ ಚಿಂತಾಮಣಿಯಿರುವುದೂ ಗಮನಾರ್ಹವಾದುದು. ಮಹಾನಿರ್ವಾಣತಂತ್ರದ ಪ್ರಕಾರ ಪಾನಪಾತ್ರೆಯೂ ಇರಬೇಕು; ನಮ್ಮಲ್ಲಿಯೂ ಅವನನ್ನು 'ಉನ್ಮತ್ತ', 'ಮದೋತ್ಕಟ', 'ಮದವಿಹ್ವಲ' ಎಂದು ಮುಂತಾಗಿ ಕರೆದಿಲ್ಲವೆ? ಗಣೇಶನನ್ನು 'ಶ್ರೀಗಣೇಶ' ಎಂದೇ ಕರೆಯುವುದು ವಾಡಿಕೆ; ಇನ್ನೂ ಸ್ಪಷ್ಟವಾಗಿ 'ಲಕ್ಷ್ಮೀಗಣೇಶ' ಮೂರ್ತಿಗಳಿವೆ. ಲಕ್ಷ್ಮಿ ಅಥವಾ ಶ್ರೀದೇವಿ (ಸಿರಿ) ಸಂಪತ್ತಿಗೆ ಅಭಿಮಾನಿನಿಯಾದ ಪ್ರಾಚೀನ ಯಕ್ಷಿ. ಬಾರ್ಹುತ್ ಮತ್ತು ಸಾಂಚಿ ಸ್ತೂಪಗಳಲ್ಲಿಯೂ ಸಿರಿಮಾ ದೇವತೆಯ ಶಿಲ್ಪಗಳಿವೆ. ಕೈಯಲ್ಲಿ ಕಮಲವನ್ನು ಹಿಡಿದ ಹೆಂಗಸು ಗಣಪತಿಯ ತೊಡೆಯ ಮೇಲೆ ಕುಳಿತಿರುವ ಶಿಲ್ಪ ಲಕ್ಷ್ಮೀಗಣಪತಿಯದು. ಬೌದ್ಧರ ಲಕ್ಷ್ಮಿಯಾದ ವಸುಧಾರೆಯು ಕುಬೇರಯಕ್ಷನ ಹೆಂಡತಿಯೆಂದು ಕಲ್ಪನೆಯಿದೆ; ಮಹಾಯಾನ ಪಂಥದವರಲ್ಲಿ ಈಕೆ ಸಂಪತ್ತಿನ ದೇವತೆ. ಲಕ್ಷ್ಮೀಗಣೇಶನೆಂದರೆ ಅರ್ಥ–ಕಾಮಗಳ ಸಂಯೋಗವೆಂದರ್ಥವಷ್ಟೆ. ಇದರ ಯಂತ್ರವನ್ನು ಸರ್ವಸೌಭಾಗ್ಯಯಂತ್ರವೆಂದೇ ವ್ಯವಹರಿಸುತ್ತಾರೆ. ಗಣಪತಿಯ ಪೂಜೆಯಲ್ಲಿ "ಓಂ ಶ್ರೀಂ ಹ್ರೀಂ ಕ್ಲೀಂ ಗ್ಲೌಂ ಗಂ ಗಣಪತಯೇ ವರ ವರದ ಸರ್ವಜನಂ ಮೇ ವಶಮಾನಯ ಸ್ವಾಹಾ" ಎನ್ನುವ ಮಂತ್ರವಿದೆಯಲ್ಲವೆ? ಅದನ್ನು "ಐಶ್ವರ್ಯಪ್ರಧಾನೋಯಂ ಮಂತ್ರಃ" ಎಂದು ವಿವರಿಸಿದ್ದಾರೆ. ಇಲ್ಲಿ ಶ್ರೀ ಬೀಜ ಸಂಪತ್ಕರವಾದುದು; ಇದಕ್ಕೆ ಲಕ್ಷ್ಮೀಬೀಜವೆಂದೂ ಹೆಸರು; ಹ್ರೀಂ ಎನ್ನುವುದು ಭುವನೇಶಿ ಬೀಜ; ಕ್ಲೀಂ ಕಾಮಬೀಜ, ಗ್ಲೌಂ ಭೂಮಿಬೀಜ; ಗಂ ಎನ್ನುವುದು ಗಣಪತಿ ಬೀಜ. ಹೀಗೆ ಸಂಪತ್ತು, ಕಾಮ ಎರಡೂ ಭೂತತ್ತ್ವದಲ್ಲಿಯೇ ಕಲೆತು ಭುವನೇಶ ಸಾಮರ್ಥ್ಯವನ್ನು ಒದಗಿಸುವುದು ಮಂತ್ರದ ತಾತ್ಪರ್ಯ. ಗಣಪತಿಪ್ರಭೇದಗಳಲ್ಲಿ ಭುವನೇಶಗಣಪತಿ, ಮದನಗಣಪತಿ, ಕ್ಷಿಪ್ರಪ್ರಸಾದನಗಣಪತಿ ಇವೆಲ್ಲವೂ ಲಕ್ಷ್ಮೀಗಣೇಶನ ಬೇರೆ ಬೇರೆ ಪ್ರಕಾರಗಳೇ.

ಪ್ರಾಚೀನ ಶಿಲ್ಪಗಳಲ್ಲಿ ಗಣಪತಿ ನಿರಾಭರಣ; ಬರುಬರುತ್ತ ಕೆಲವಾರು ಆಭರಣಗಳು ಒದಗಿ ಬಂದವು. ತಲೆಯ ಮೇಲೆ ಮೊದಲಿಗೆ ಯಾವ ಬಗೆಯ ತೊಡುಗೆಯೂ ಇರಲಿಲ್ಲ; ಅನಂತರ ಕರಂಡಮಕುಟ ಜಟಾಮಕುಟಗಳನ್ನು ಇರಿಸುವ ಪದ್ಧತಿ ಬಂದಿತು. ರತ್ನಹಾರಗಳು, ಕಂಕಣವಲಯಗಳು, ಉಪವೀತ, ಛನ್ನವೀರ ಗಳೂ ಒದಗಿ ಬಂದುವು. ತಲೆಯ ಮೇಲೆ ಚಂದ್ರನನ್ನೂ ಹಣೆಗಣ್ಣನ್ನೂ ಮೂಡಿಸುವುದಿದೆ. ಉಪವೀತಕ್ಕೆ ಹಾವನ್ನು ಅಳವಡಿಸುವುದೂ ಗಣಪತಿಯ ವೈಶಿಷ್ಟ್ಯ; ಇದು ನಾಗ ಯಜ್ಞೋಪವೀತವೆನಿಸಿಕೊಳ್ಳುತ್ತದೆ. ಹಾವನ್ನು ಉದರಬಂಧಕ್ಕೂ ಬಳಸಿರುತ್ತಾರೆ. ಒಮ್ಮೊಮ್ಮೆ ಗಣಪತಿಯು ಕೈಯಲ್ಲಿಯೂ ಹಾವನ್ನು ಹಿಡಿದಿರುವುದುಂಟು. ದುಷ್ಟ ಸತ್ತ್ವಗಳ ನಿವಾರಣೆಗೆಂದು ಗಣಪತಿ ಮಂತ್ರವನ್ನು ಬಳಸುತ್ತಿದ್ದುದು ಹಿಂದೆಯೇ ಬಂದಿತಷ್ಟೆ. 'ಮೂಷಕವಿಷಾದಿಶಮನಕರ ವಿಘ್ನೇಶಮಂತ್ರ'ದಲ್ಲಿ "ನಾಗಾನ್ ಮೋಟಯ ಮೋಟಯ" ಎಂದು ಬರುತ್ತದೆ; ಇಲ್ಲಿ ನಾಗಗಳೆಂದರೆ ಹಾವುಗಳು. ಸರ್ಪನಾಶನಕ್ಕೆಂದೇ ಗಣಪತಿ ಮಂತ್ರವನ್ನು ಹೇಳಿ ಕಾಕಮಾಚೀ ಹಿಟ್ಟಿನಿಂದ ಕೊಡಲಿಯ ಆಕಾರವನ್ನು ಮಾಡಿ, ಪೂಜಿಸಿ, ಹಾವಿನ ಬಿಲದ ಬಾಯ ಬಳಿ ಇಟ್ಟು, ಅನಂತರ ಆ ಕೊಡಲಿಯನ್ನು ತಲೆಯ ಮೇಲಿಟ್ಟುಕೊಂಡು ಹೊರಟೊಡನೆ ಹಿಂದೆಯೇ ಹಾವು ಬರುವುದೆಂದೂ, ಹಾಗೆ ಹಾವನ್ನು ದೇಶಾಂತರಕ್ಕೊಯ್ದು ಅಲ್ಲಿ ನೆಲದ ಮೇಲೆ ಹಿಟ್ಟಿನ ಕೊಡಲಿಯನ್ನಿಟ್ಟರೆ ಹಾವು ಅಲ್ಲಿಯೇ ಇರುವುದೆಂದೂ ಪ್ರತೀತಿಯಿದ್ದಿತು (ಪ್ರಪಂಚಸಾರಸಂಗ್ರಹ, 16ನೇ ಪಟಲ, ಪು. 456). ಗಣಪತಿಗೂ ಹಾವಿಗೂ ಇರುವ ಸಂಬಂಧಕ್ಕೆ ಇದೇ ಹಿನ್ನೆಲೆಯಿದ್ದೀತು.

ಮೂರ್ತಿಭೇದ

ಗಣಪತಿಮೂರ್ತಿಗಳಲ್ಲಿ ಹಲವಾರು ಪ್ರಭೇದಗಳನ್ನು ಕಲ್ಪಿಸಿಕೊಂಡಿದ್ದಾರೆ. ಬಹುಮಟ್ಟಿಗೆ ಇವು ತಾಂತ್ರಿಕ ಮನೋವೃತ್ತಿಯನ್ನವಲಂಬಿಸಿದುವು. ಮಹಾಗಣಪತಿ, ಲಕ್ಷ್ಮೀಗಣಪತಿ, ಪಿಂಗಳಗಣಪತಿ, ಹರಿದ್ರಾಗಣಪತಿ, ಶಕ್ತಿಗಣಪತಿ, ಉಚ್ಛಿಷ್ಟಗಣಪತಿ, ಅರ್ಕಗಣಪತಿ (ಬಿಳಿಯಕ್ಕದ ಬೇರಿನಲ್ಲಿ ಗಣಪತಿಯ ಆಕಾರ ತಾನೇ ಮೂಡಿಬಂದಿರುವುದು) ಮೊಲಾದದುವು ಕೇವಲ ತಾಂತ್ರಿಕ ಕಲ್ಪನೆಗಳು. ಇವಲ್ಲದೆ ವೀರಗಣಪತಿ, ಕ್ಷಿಪ್ರ ಪ್ರಸಾದನಗಣಪತಿ• ವಲ್ಲಭಗಣಪತಿ, ವರದಗಣಪತಿ, ಕುಕ್ಷಿಗಣಪತಿ ಮೊದಲಾದ ಪ್ರಕಾರಗಳಿವೆ. ತಾಂತ್ರಿಕ ಪ್ರಭಾವ ಪ್ರಬಲವಾಗಿರುವ ಗಣಪತಿ ಮೂರ್ತಿಗಳೊಡನೆ ಶಕ್ತಿಯರಿರುವುದು ವಾಡಿಕೆ; ಇಂಥ ಗಣಪತಿಗಳನ್ನು ಪೂಜಿಸುವಾಗ ತಾಂತ್ರಿಕ ಉದ್ದೇಶಗಳೂ ಇರುತ್ತವೆ. ನಿದರ್ಶನಕ್ಕೆ ಶಕ್ತಿಗಣಪತಿಯ ಪೂಜೆಯ ಪ್ರಯೋಜನ ಸರ್ವಜನವಶೀಕರಣ. "ಓಂ ಹ್ರೀಂ ಸಂ ವಿರಿವಿರಿಗಣಪತಿ ತೇ ವರ ವರದ ಸರ್ವಜನಂ ಮೇ ವಶಮಾನಯ ಸ್ವಾಹಾ" ಎನ್ನುವುದು ಮಂತ್ರ. ಧ್ಯಾನಶ್ಲೋಕದಲ್ಲಿ ದೇವಿಯನ್ನು ಅಪ್ಪಿಕೊಂಡು ಕುಳಿತ ಗಣಪತಿಯ ವರ್ಣನೆಯಿದೆ (ಆಲಿಂಗ್ಯ ದೇವೀಮುಭಿತೋ ನಿಷಣ್ಣಾಂ ಪರಸ್ಪರಾಸ್ಪಷ್ಟ ಕಟೀನಿವೇಶಂ). ಹಾಗೆಯೇ ಉಚ್ಛಿಷ್ಟಗಣಪತಿಯ ಪೂಜೆಯಲ್ಲಿ ವಿದ್ಯಾವಶ್ಯಪ್ರಧಾನವಾದ ಮಂತ್ರವಿದೆ. 'ನಗ್ನನಾರೀಮುಖಾ ತುರ'ನಾದ ಈ ಗಣಪತಿಯನ್ನು ಧ್ಯಾನಿಸಿಕೊಂಡಿರುವುದು ಹೀಗೆ—

ನಾರೀಯೋನಿಮುಖಾಸ್ವಾದಲೋಲುಪಂ ಕಾಮಮೋಹಿತಂ ।
ಸ್ವವಾಮಾಂಕಸ್ಥ ದಾರಾಣಾಂ ಗಾಢಾಲಿಂಗನತತ್ಪರಂ ॥

ಇದಕ್ಕೆ ಅರ್ಥವಿವರಣೆ ಅನಗತ್ಯ.

ತಾಂತ್ರಿಕ ನೆಲೆಯಲ್ಲಿ ಗಣಪತಿಗೆ ವಿಶೇಷವಾದ ಸಂಕೇತವನ್ನು ಅಳವಡಿಸಿದ್ದಾರೆ. ಕೈಗೊಂಡ ಕೆಲಸದಲ್ಲಿ ಗೆಲುವನ್ನು ಬಯಸುವುದು ಎಲ್ಲರ ಉದ್ದೇಶವಷ್ಟೆ; ಇದಕ್ಕೆ ಯಂತ್ರ–ಮಂತ್ರ–ತಂತ್ರಗಳನ್ನು ಬಳಸುವುದು

ಒಂದು ದಾರಿ. ಸಂಸ್ಕೃತದ ವರ್ಣಮಾಲೆಗೇ 'ಸಿದ್ಧಂ' ಎನ್ನುವ ಹೆಸರಿದ್ದಿತು. ಪತಂಜಲಿಯು ಇದನ್ನು ಪ್ರಮಾಣವೆನ್ನುವ ಅರ್ಥದಲ್ಲಿ ಬಳಸಿದ್ದಾನೆಂದು ಕೆಲವರ ಎಣಿಕೆ. ಪಾಠ ಕಲಿಯುವ ಮಕ್ಕಳು "ಓಂ ನಮಃ ಸಿದ್ಧಂ" ಎಂದು ಹೇಳುವ ಪದ್ಧತಿ ಒಂದು ಕಾಲಕ್ಕೆ ಇದ್ದಿತು. ಇದು ಬರುಬರುತ್ತ ಬಾಲಭಾಷೆಯಲ್ಲಿ 'ಓನಾಮಾಸೀದ' ವಾಯಿತು ! ಶಾಸನಗಳನ್ನು ಬರೆಯುವ ಮೊದಲೂ ಲಿಪಿಕಾರರು 'ಸಿದ್ಧಂ' ಎಂಬ ಮಾತನ್ನೋ ಅಥವಾ ಅದರ ಸಂಕೇತವನ್ನೋ ಬಳಸುತ್ತಿದ್ದುದು ತಿಳಿದುಬಂದಿದೆ. ಈ ಸಿದ್ಧಂ (ಅಥವಾ ಸ್ವಸ್ತಿ) ಎನ್ನುವುದೇ ಗಣಪತಿಯಂತ್ರವಾಗಿ ಮೈದಳೆಯಿತು. ಸ್ವಸ್ತಿಕದ ಆಕಾರ ಚತುಷ್ಕೋಣ. ಷಟ್ ಚಕ್ರನಿರೂಪಣೆಯ ಪ್ರಕಾರ ಚತುಷ್ಕೋಣವಾಗಿರುವುದು ಮೂಲಾಧಾರಚಕ್ರ. ಇದೇ ಗಣಪತಿಯ ಸ್ಥಾನ ವೆಂದು ಪ್ರತೀತಿ; ಗಣಪತಿ 'ಮೂಲಾಧಾರಕ್ಷೇತ್ರಸ್ಥಿತ'.

ಮೂಲಾಧಾರವು ಭೂತತ್ತ್ವದ ಕೇಂದ್ರ; ಈ ಕಾರಣದಿಂದಲೇ ಗಣಪತಿಯನ್ನು ಮಣ್ಣಿನಲ್ಲಿ ಮಾಡಿ ಪೂಜಿಸಬೇಕೆನ್ನುವ ನಿಯಮವಿರುವುದು. ಈ ಚಕ್ರದ ದಳಗಳು ಕೆಂಪು ಬಣ್ಣದವು. ಆದುದರಿಂದಲೇ ಗಣ ಪತಿಯ ಮೈಬಣ್ಣ ಕೆಂಪು. ಧ್ಯಾನಶ್ಲೋಕವೊಂದು ಗಣಪತಿಯು ಕುಂಕುಮದಂತೆ ಕೆಂಪೆಂದೂ, ಕೆಂಪುಬಣ್ಣದ ಬಟ್ಟೆಯುಟ್ಟವನೆಂದೂ, ಕೆಂಪು ಅಂಗರಾಗವನ್ನು ಮೈಗೆಲ್ಲ ಬಳಿದುಕೊಂಡವನೆಂದೂ ಬಣ್ಣಿಸುತ್ತದೆ. ಶಾರದಾತಿಲಕತಂತ್ರವು ಗಣಪತಿಯನ್ನು 'ಕೃತಾಂಗರಾಗಂ ನವಕುಂಕುಮೇನ' ಎಂದೇ ನಿರೂಪಿಸುತ್ತದೆ. ಗಣಪತಿಯ ಬೀಜಾಕ್ಷರ 'ಗಂ' ಎಂಬುದು; ಬಿಂದುವುಳ್ಳ ಗಕಾರವೇ ಗಣಪತಿಬೀಜವೆಂದು ಭೂತಡಾಮರತಂತ್ರ ಸ್ಪಷ್ಟಪಡಿಸಿದೆ (ಗಕಾರೋ ಬಿಂದುಮಾನ್ ವಿಘ್ನರಾಜಂ ಗಣೇಶಬೀಜಕಂ). ಗಣೇಶಮಂತ್ರಕ್ಕೆ ಗಣಕ ಋಷಿ, ನಿಚೃದ್ಗಾಯತ್ರೀ ಛಂದ, ವಿಘ್ನದೇವತೆಯೇ ದೇವತೆ, ವಿನಿಯೋಗ 'ವಿಘ್ನಶಾಂತ್ಯರ್ಥಂ'. ತೈಜಸಸ್ವರೂಪದ ತ್ರಿಕೋಣದ ಮಧ್ಯದಲ್ಲಿ 'ಗಂ' ಎಂಬ ಬೀಜವನ್ನು ಬರೆದು ಶ್ರೀಂ ಹ್ರೀಂ ಕ್ಲೀಂ ಗ್ಲೌಂ ಎಂಬಕ್ಷರಗಳಿಂದ ಸುತ್ತರಿಸಿ (ಸಂವೇಷ್ಟ್ಯ) ಗಣಪತಿಯನ್ನು ಆವಾಹನೆಮಾಡುತ್ತಾರೆ. ಪದನ್ಯಾಸಕ್ಕಾಗಿ 'ತತ್ಪುರುಷಾಯ ವಿದ್ಮಹೇ ವಕ್ರತುಂಡಾಯ ಧೀಮಹಿ, ತನ್ನೋ ದಂತಿಃ ಪ್ರಚೋದಯಾತ್' ಎನ್ನುವ ಗಣೇಶ ಗಾಯತ್ರಿಯನ್ನೂ, ಮಂತ್ರನ್ಯಾಸಕ್ಕಾಗಿ ಋಗ್ವೇದದ 'ಗಣಾನಾಂ ತ್ವಾ ಗಣಪತಿಂ ಹವಾಮಹೆ' ಎಂದು ಮೊದಲಾಗುವ ಮಂತ್ರವನ್ನೂ ಬಳಸಿಕೊಳ್ಳುತ್ತಾರೆ. 'ಶ್ರೀಂ ಶ್ರೀಂ ಹ್ರೀಂ ಕ್ಲೀಂ ಗ್ಲೌಂ ಗಂ ಗಣಪತಯೇ ವರ ವರದ ಸರ್ವಜನಂ ಮೇ ವಶಮಾನಯ ಸ್ವಾಹಾ' ಎನ್ನುವ ಇಪ್ಪತ್ತೆಂಟು ವರ್ಣಗಳ ಮಂತ್ರವನ್ನು ನಾಲ್ಕುಲಕ್ಷ ನಲವತ್ತುಸಾವಿರದ ನಾಲ್ಕು ಬಾರಿ ಜಪಿಸಬೇಕೆಂದು ಹೇಳುತ್ತಾರೆ; ಅಷ್ಟದ್ರವ್ಯಗಳಿಂದ ಕೂಡಿದ ದಶಾಂಶ ಹೋಮವೂ ಹೇಳಿದೆ.

ಗಣಪತಿಯು ಪಂಚಭೂತಗಳನ್ನೊಳಗೊಂಡ ವಿಶಿಷ್ಟಶಕ್ತಿಯೆಂದೂ ಕಲ್ಪನೆಯಿದೆ. ಪೃಥಿವೀತತ್ತ್ವವು ಚತುಷ್ಕೋಣದಂತೆಯೂ, ಅಪೋತತ್ತ್ವವು ವರ್ತುಲವಾಗಿಯೂ, ತೇಜೋತತ್ತ್ವವು ತ್ರಿಕೋಣವಾಗಿಯೂ, ವಾಯುತತ್ತ್ವವು ಅರ್ಧಚಂದ್ರರೂಪವಾಗಿಯೂ, ಆಕಾಶತತ್ತ್ವವು ಬಿಂದುವಿನಂತೆಯೂ ಮೈದಳೆದಿರುವುದೇ ದಿಟವಾಗಿ ಗಣಪತಿಯ ಸ್ವರೂಪವೆಂದು ಈ ಕಲ್ಪನೆ ವಿವರಿಸುತ್ತದೆ. ಗಣಪತಿಯ ವಕ್ರತುಂಡ (ಸುತ್ತಿದ ಸೊಂಡಿಲು) ಎಲ್ಲ ವೇದಗಳ ನೆಲೆಯಾದ, ಎಲ್ಲ ಸಾಧನೆಗಳ ಗುರಿಯಾದ ಪ್ರಣವದ ಪ್ರತೀಕ; ಅವನ ಮಹೋದರವು ಬ್ರಹ್ಮಾಂಡ ಗರ್ಭ. ಅದನ್ನು ಸುತ್ತರಿದು, ಕಟ್ಟಿ ಹಿಡಿದಿರುವ ಉದರಬಂಧ ಕುಂಡಲಿನೀಶಕ್ತಿ; ಹಾಗೆಂದೇ ಅದು ಹಾವು. ಎಡಬಿಡದೆ ಸುಳಿದಾಡುವ ಇಲಿ ರಜಸ್ಸಿನ ಸಂಕೇತ; ರಾತ್ರಿಯಲ್ಲಿಯೇ ಅದರ ಅಲೆದಾಟವಾದುದರಿಂದ ತಮಸ್ಸನ್ನೂ ಅದು ಸೂಚಿಸುತ್ತದೆ. ಎರಡೂ ಗುಣಗಳನ್ನು ಮೆಟ್ಟಿ, ಮೀರಿ ನಿಂತ

ಗಣಪತಿ ಸತ್ತ್ವೋತ್ಕರ್ಷವನ್ನು ಸಂಕೇತಿಸುತ್ತಾನೆ. ಅವನ ಕೈಯಲ್ಲಿರುವ ಮೋದ–ಕ ಮಹಾಬುದ್ಧಿಯ ಸಂಕೇತ; ಗಾಣಪತ್ಯರು ಅದನ್ನು ಪ್ರಾಣಗರ್ಭವೆಂದು ಬಗೆಯುತ್ತಾರೆ. ಮೋದಕದ ಬದಲು ಬಹುಬೀಜಫಲ (ದಾಳಿಂಬೆ) ಇದ್ದಾಗಲೂ ಅದು ವಿರಾಟ್ ಪ್ರಾಣಶಕ್ತಿಯ ಸಂಕೇತ, ಅನಂತವಸ್ತುವಿಶಿಷ್ಟವಾದ ಪ್ರಪಂಚವನ್ನೂ ಅದರೊಳಗೆ ಅಡಗಿರುವ ಅಪರಿಮಿತ ಚೈತನ್ಯವನ್ನೂ ಅದು ಸೂಚಿಸುತ್ತದೆ. ಅಥವಾ ಅದರ ಬದಲು ಚಿಂತಾಮಣಿಯಿದ್ದಾಗಲೂ ಇದೇ ತಾತ್ಪರ್ಯ. ಕಾಮಿತಾರ್ಥಪ್ರದವಾದ ಮಣಿವಿಶೇಷ ಇದು; ಅದರ ಗರ್ಭದಿಂದಲೇ ಪ್ರಾಣವು ಹೊರಹೊಮ್ಮುವುದೆಂದು ತಾಂತ್ರಿಕ ಕಲ್ಪನೆ. ಗಣಪತಿಯ ಆಯುಧಗಳಲ್ಲಿ ಅಂಕುಶವು ಮುಖ್ಯವಾದುದು. ಆನೆಯನ್ನು ವಶಪಡಿಸಿಕೊಳ್ಳಲು ಮಾವಟಿಗರು ಬಳಸುವ ಈ ಆಯುಧವನ್ನು ತಾತ್ತ್ವಿಕವಾಗಿ ಜ್ಞಾನಾಂಕುಶವೆಂದು ಬಗೆಯುತ್ತಾರೆ. ಅಜ್ಞಾನವೆಂಬ ಮದದಾನೆಯನ್ನು ನಿಗ್ರಹಿಸುವ ಜ್ಞಾನಾಂಕುಶ ಇದು. ಇನ್ನೊಂದು ಕೈಯಲ್ಲಿರುವ ಪಾಶ ಸಂಸಾರಬಂಧನದ ಸಂಕೇತ

ಶಿವನ ಸ್ವಾರಸ್ಯ

ವ್ರಾತ್ಯವೀರ

ನಮ್ಮ ದೇಶದ ದೇವತಾಮೂರ್ತಿಗಳಲ್ಲಿ ಬೇರೆಯವರ ಉಪಹಾಸ್ಯಕ್ಕೂ, ಅವಹೇಳನಕ್ಕೂ, ವಿಚಿತ್ರ ವಿಶ್ಲೇಷಣೆಗೂ ಶಿವಲಿಂಗ ಗುರಿಯಾದಂತೆ ಬೇರಾವ ಮೂರ್ತಿಯೂ ಆಗಿಲ್ಲ; ಲಿಂಗಪೂಜೆಯಲ್ಲಿ ಇರಬಹುದಾದ, ಇರುವ, ಇಲ್ಲದಿರುವ ಎಲ್ಲ ವಿವರಗಳನ್ನೂ ಬೆರೆಸಿ ಅದು ಕಾಮಚಾರ, ಲೈಂಗಿಕ ವ್ಯವಹಾರ ಎಂದು ಮೂಗೆಳೆಯುವ ಪಂಡಿತರು ನಮ್ಮಲ್ಲಿಯೂ ಇದ್ದಾರೆ, ಹೊರಗೂ ಇದ್ದಾರೆ. ಧರ್ಮಪ್ರಚಾರಕ್ಕೆಂದು ಇಲ್ಲಿಗೆ ಬಂದ ಕ್ರೈಸ್ತ ಪಾದ್ರಿಗಳೂ, ಅರ್ಥಸಂಗ್ರಹಕ್ಕೆಂದು ಬಂದ ಮುಸ್ಲಿಂ ದಂಡನಾಯಕರೂ ಈ ದೇಶದಲ್ಲೆಲ್ಲ ಸುಸಂಸ್ಕೃತರಿಂದಲೇ ನಡೆಯುತ್ತಿದ್ದ ಲಿಂಗಪೂಜೆಯನ್ನು ಕಂಡು ಬೆರಗಾದರು, ಜುಗುಪ್ಸೆಯಿಂದ ಮೂಗರಳಿಸಿ ಕೊಂಡರು. ಈ ಜನ ಆಫ್ರಿಕದ ಆದಿವಾಸಿಗಿಂತ ಕೀಳಾದ ಧಾರ್ಮಿಕ ನೆಲೆಯಲ್ಲಿದ್ದಾರೆಂದು ನಿಶ್ಚಯಮಾಡಿ ಕೊಂಡರು; ಸಾವಿರಾರು ವರ್ಷಗಳ ಹಿಂದೆಯೇ ಸಂಸ್ಕೃತಿಯು ಹೇಸಿಕೆಯಿಂದ ಹೊರಗೆಹಾಕಿದ ಈ ಕಾಮಪ್ರವೃತ್ತಿಯ ಮೇಲಾಟ ಈ ದೇಶದಲ್ಲಿ ಇನ್ನೂ ಪುರಸ್ಕೃತವಾಗಿದೆಯಲ್ಲ ಎಂದು ಆಶ್ಚರ್ಯಪಟ್ಟರು. ನಮ್ಮ ಪುರಾಣದ ಕಥೆಗಳನ್ನು ಕೇಳಿದಮೇಲಂತೂ ಅವರಿಗೆ ಅನುಮಾನವೇನೂ ಉಳಿಯಲಿಲ್ಲ!

ಲಿಂಗವೆಂದರೆ ಪುರುಷಜನನೇಂದ್ರಿಯ, ಯೋನಿಯೆಂದರೆ ಸ್ತ್ರೀಜನನಾಂಗ, ಶಿವಲಿಂಗದಲ್ಲಿ ಎರಡೂ ಇರುವುದೆಂದರೆ ಸ್ತ್ರೀಪುರುಷರ ಸಂಯೋಗ, ಸಂಭೋಗ. ಇದರಲ್ಲಿ ಧಾರ್ಮಿಕ ವಿಧಿಗಳನ್ನು ಅಳವಡಿಸಿಕೊಂಡ ತೀರ ಹಳೆಯ ಧಾರ್ಮಿಕ ನೆಲೆಯೊಂದಿದ್ದಿರಬಹುದು. ಆದರೆ ವಿಚಾರ, ಚಿಂತನೆಗಳು ಪ್ರೌಢವಾಗಿ ಬೆಳೆದ

ಈ ದೇಶದಲ್ಲಿ ಆ ನೆಲೆಯನ್ನು ಇನ್ನೂ ಉಳಿಸಿಕೊಂಡಿದ್ದಾರಲ್ಲವೆ? ತಾಂತ್ರಿಕ ಸಂಪ್ರದಾಯದಲ್ಲಿ ಯೋನಿ ಪೂಜೆಯಿರುವುದೂ ಶೈವರಲ್ಲಿ ಲಿಂಗಪೂಜೆಯಿರುವುದೂ ಅದೇ ಪುರಾತನ ನೆಲೆಯ ಅವಶೇಷಗಳೆಂದು ಈ ಪಂಡಿತರು ಬಗೆದು ಅದರ ಸಾಮಾಜಿಕ, ಮನಃಶಾಸ್ತ್ರೀಯ ತಾತ್ಪರ್ಯಗಳನ್ನು ವಿವರಿಸತೊಡಗಿದರು. ಶಿವಪೂಜೆಯಲ್ಲಿಯೇ ಪ್ರಸಕ್ತವಾಗುವ ಸರ್ಪಾರಾಧನೆ, ವೃಕ್ಷಪೂಜೆಗಳನ್ನೂ ಅವರು ಗಮನಿಸದಿರಲಿಲ್ಲ. ಮನಃಶಾಸ್ತ್ರಮೀಮಾಂಸೆಯಲ್ಲಿ ಜಾಣರೆನಿಸಿಕೊಂಡವರು ಇವನ್ನೆಲ್ಲ ಬಳಸಿಕೊಂಡರು. ಗ್ರೀಸ್, ರೋಮ್, ಇಜಿಪ್ಟ್, ಬೆಬಿಲೋನ್‌ಗಳಲ್ಲಿಯೂ ಇಂಥ ಬರ್ಬರ ಪದ್ಧತಿಗಳಿದ್ದುವೆಂದು ಅವರು ತೋರಿಸಿದರು. ಒಟ್ಟಿನಲ್ಲಿ ಈ ಪಂಡಿತರ ವಿಮರ್ಶೆಯ ಉಪಟಳದಿಂದ ಶಿವನಿಗೆ ಮರ್ಯಾದೆ ಉಳಿಯಲಿಲ್ಲ!

ವ್ಯಾಕರಣದಲ್ಲಿ ಲಿಂಗವೆಂದರೆ ಬೇಸರಪಡದ, ತರ್ಕದಲ್ಲಿ ಲಿಂಗದ ಪ್ರಕ್ರಿಯೆಯನ್ನು ಒಪ್ಪಿಕೊಂಡ ಪಂಡಿತರೂ ಧರ್ಮದಲ್ಲಿ ಲಿಂಗವೆಂದರೆ ಏಕೆ ಬೆದರಿದರೋ! ಲಿಂಗವೆಂದರೆ ಚಿಹ್ನೆ, ಲಾಂಛನ, ಸಂಕೇತ, ಗುರುತು ಎಂದೂ ಅರ್ಥವಿಲ್ಲವೆ? ಲಿಂಗಪೂಜೆಗೂ ಲಂಪಟತನಕ್ಕೂ ಭೇದವಿಲ್ಲವೆ? ಯೋನಿಪೂಜೆಯು ಶಾಕ್ತರಲ್ಲಿರುವುದು ದಿಟ; ಲಿಂಗಪೂಜೆಗೂ ಜನನ ವ್ಯಾಪಾರಕ್ಕೂ ನೆಂಟೂ ಇದ್ದೀತು. ಆದರೆ ಕುತ್ಸಿತ ಬುದ್ಧಿಯಿಂದ ಹೀನಾಯ ವಾಗಿಯೇ ಕಾಣಬೇಕಾದುದಿಲ್ಲ. ಶಿವಕಲ್ಪನೆಯ ಇತಿಹಾಸವಂತೂ ಇದನ್ನು ಸಮರ್ಥಿಸುವುದಿಲ್ಲ. ಲಿಂಗವನ್ನು ಅರ್ಚನೆಗೆಂದು ವಿಧಿಸಿದಾಗ ನಮ್ಮವರು ಉದಾತ್ತಭಾವನೆಗಳನ್ನೇ ಅಳವಡಿಸಿದರು. ಪುರಾಣ ಕಥೆಗಳ ತಾತ್ಪರ್ಯ ಏನಾದರೂ ಇರಲಿ; ಪೂಜಾ ಕಲ್ಪಗಳಲ್ಲಿ ಬರುವ ವಿವರಗಳನ್ನು ನಾವು ಗಮನಿಸಬೇಡವೆ? ಪೂಜೆ ಯನ್ನು ವಿಧಿಸಿದವರು, ಪೂಜೆಯನ್ನು ಮಾಡುವವರು ಯಾವ ಭಾವನೆಗಳನ್ನು ಮುಖ್ಯವೆಂದಿದ್ದಾರೆಯೋ ಅವನ್ನು ಪರಿಗ್ರಹಿಸಬೇಕಷ್ಟೆ.

ವೈದಿಕ ಸಾಹಿತ್ಯದಲ್ಲಿ 'ಶಿಶ್ನದೇವಾಃ' ಎನ್ನುವ ಮಾತು ಬಂದಿರುವುದನ್ನು ಕೆಲವರು ಹಿಗ್ಗಿಸಿ, ಎತ್ತಿ ತೋರಿಸುತ್ತಾರೆ. ಪುರುಷ ಜನನೇಂದ್ರಿಯವನ್ನೇ ದೇವರೆಂದು ಪೂಜೆ ಮಾಡುತ್ತಿದ್ದ ಜನರನ್ನು ಕುರಿತ ಉಲ್ಲೇಖವಿದೆಂದು ಅವರ ಎಣಿಕೆ. ಋಗ್ವೇದದಲ್ಲಿ 'ಶಿಶ್ನದೇವಾಃ' ಎನ್ನುವ ಮಾತು ಎರಡು ಸಂದರ್ಭಗಳಲ್ಲಿ ಬರುತ್ತದೆ. ಸಾಯಣಾಚಾರ್ಯರು ಈ ಮಾತಿಗೆ ವಿಷಯಲಂಪಟರು, ಬ್ರಹ್ಮಚರ್ಯದ ಎಂದರೆ ಸಂಯಮದ ಅರಿವಿಲ್ಲದಿದ್ದವರು ಎಂದು ಅರ್ಥ ಹೇಳಿದ್ದಾರೆ (ಶಿಶ್ನೇನ ದೀವ್ಯಂತಿ ಕ್ರೀಡಂತಿ ಇತಿ ಶಿಶ್ನದೇವಾಃ, ಅಬ್ರಹ್ಮಚರ್ಯಾ ಇತ್ಯರ್ಥಃ); ಯಾಸ್ಕನೂ ಇದೇ ಅರ್ಥವನ್ನೇ ಹೇಳಿದ್ದಾನೆಂದು ಉಲ್ಲೇಖಿಸಿದ್ದಾರೆ. ಒಂದು ಸಂದರ್ಭನಲ್ಲಿ ಇಂದ್ರನು ಯಾತುಗಳಾದ (ಯಾತವಃ) ಶಿಶ್ನದೇವರನ್ನು ಸದೆಬಡಿದು, ಅವರ ನೂರು ಬಾಗಿಲುಗಳ ಪಟ್ಟಣದಲ್ಲಿದ್ದ ಸಂಪತ್ತೆಲ್ಲವನ್ನೂ ಕೊಳ್ಳೆಹೊಡೆದನೆಂದು ಹೇಳಿದೆ. ಧರ್ಮಕ್ಕೆ ಅಷ್ಟಾಗಿ ಒಲಿಯದೆ ಸುಖವನ್ನೇ ಬಯಸುತ್ತಿದ್ದ ಜನರ ಸೂಚನೆ ಇಲ್ಲಿ ಬರುತ್ತದೆ ಅಷ್ಟೆ.

ಶಿವನ ಹಿನ್ನೆಲೆಯಲ್ಲಿ ವೈದಿಕರುದ್ರನನ್ನು ಕಾಣುತ್ತಾರೆ; ಅದಕ್ಕೂ ಮುಂಚಿನ ಯುಗದ ಸೈಂಧವಸಂಸ್ಕೃತಿಯ 'ಪಶುಪತಿ'ಯನ್ನೂ ಕಾಣುತ್ತಾರೆ. ಋಗ್ವೇದವನ್ನು ಸಿದ್ಧಪಡಿಸಿದ ಆರ್ಯರು ಇಲ್ಲಿಗೆ ಬರುವ ಮೊದಲೇ ಇಲ್ಲಿ ಬೇರೂರಿದ್ದ ಈ ಸೈಂಧವ ಸಂಸ್ಕೃತಿಯ ಮೊಹೆನ್‌ಜೊದಾರೋ ಅವಶೇಷಗಳಲ್ಲಿ ಚಿತ್ರಮುದ್ರೆಗಳು ಹಲವು ದೇವತಾಮೂರ್ತಿಗಳನ್ನು ಸೂಚಿಸುತ್ತವೆ. ಅವುಗಳಲ್ಲಿ ಒಂದನ್ನು ಸಾಮಾನ್ಯವಾಗಿ 'ಪಶುಪತಿ' ಶಿವ'ನೆಂದು ನಿರ್ದೇಶಿಸುತ್ತಾರೆ (ಚಿತ್ರ 55). ನಿರ್ದೇಶನದ ವಿಚಾರವಾಗಿಯೇನೋ ಒಮ್ಮತವಿಲ್ಲ; ಸಾಲೆತ್ತೂರರು ಇದನ್ನು ಅಗ್ನಿಯೆಂದರು, ಶ್ರೀಕಂಠಶಾಸ್ತ್ರಿಗಳು ತ್ವಷ್ಟೃ-ವಿಶ್ವರೂಪನೆಂದರು, ಆರಾವ ಮುದನ್ ವಿಷ್ಣುವೆಂದರು, ಶ್ರೇಡರ್ ಸೆರ್ನುನ್ನೋಸ್ ಎಂಬ ಕೆಲ್ಟಿಕ್ ದೇವತೆಯೆಂದರು, ಹ್ರಾಜ್ನಿ

ಪ್ರಳಯಕಾರಿಯಾದ ಕುಐಜಸ್ ಎಂದರು, ಹಿರಾಸ್ ಆಣ್ ಎಂಬ ಪ್ರಾಚೀನ ದ್ರಾವಿಡ ದೇವತೆಯೆಂದರು. ಕೆ. ಎನ್. ಶಾಸ್ತ್ರಿ ಮಹಿಷದೇವತೆಯೆಂದರು. ಆದರೆ ಬಹುಮಟ್ಟಿಗೆ ಇದನ್ನು ಶಿವನ ಪ್ರಾಚೀನ ರೂಪವೆಂದೇ ಪಂಡಿತರು ಬಗೆದಿದ್ದಾರೆ. ಈ ಮುದ್ರೆಯಲ್ಲಿ ನಡುವೆ ಆಸನವೊಂದರ ಮೇಲೆ ಪಾದಕ್ಕೆ ಪಾದ ತಾಕಿಸಿ ಯೋಗಿಯಂತೆ ಕುಳಿತ ಪುರುಷಾಕೃತಿಯೊಂದಿದೆ. ಮೂರು ಮುಖಗಳು (ತ್ರಿಶಿರಸ್), ಕೊಂಬುಗಳುಂಟು (ಶೃಂಗಿ), ಕೊಂಬುಗಳ ನಡುವೆ ಬೀಸಣಿಗೆಯಂಥ ಶಿರಸ್ತ್ರಾಣವಿದೆ (ಕಿರಾತರ ಶಿಖಂಡ ಅಥವಾ ಜಟೆ). ಕೊಂಬುಗಳೂ ಈ ಶಿರಸ್ತ್ರಾಣವೂ ಸೇರಿ ತ್ರಿಶೂಲದಂತೆ ಕಾಣುತ್ತದೆ. ಕುಳಿತಿರುವ ಮೂರ್ತಿಯ ಜನನೇಂದ್ರಿಯ ನಿಮಿರಿನಿಂತಿದೆ (ಬೃಹಚ್ಛೇಪಾಃ). ಆಸನವನ್ನು ವ್ರಾತ್ಯರ ಆಸಂದಿಯೆಂದು ಹೇಳಿರುವುದುಂಟು, ಕೂರ್ಮಾಸನವೆಂದೂ ಕರೆದವರಿದ್ದಾರೆ. ಮೈಯಲ್ಲಿ ಕವಚ ಕಾಣಸುತ್ತದೆ. ಸುತ್ತಲೂ ಆನೆ, ಹುಲಿ, ಎಮ್ಮೆ ಅಥವಾ ಖಡ್ಗಮೃಗ (ಆರಣ್ಯಾಃ ಪಶವಃ), ಆಸನದಡಿಯಲ್ಲಿ ಎರಡು ಜಿಂಕೆಗಳು (ಮೃಗ). ಇವಿರುವುದರಿಂದಲೇ ದೇವತೆಯನ್ನು 'ಪಶುಪತಿ'ಯೆಂದು ಕರೆದಿರುವುದು. ಮೂರ್ತಿ ನಗ್ನವಾಗಿಯೇ ಇದೆ. ಮುದ್ರೆಯ ಮೇಲ್ಭಾಗದಲ್ಲಿ ಆರೇಳು ಅಕ್ಷರಗಳ ಬರಹವೊಂದಿದೆ; ಇದರ ಒಗಟನ್ನು ಇನ್ನೂ ಬಿಡಿಸುವುದಾಗಿಲ್ಲ.

ಚಿತ್ರ 55
ಪಶುಪತಿ
ಮೊಹೆನ್‌ಜೊದಾರೋವಿನಲ್ಲಿ
ದೊರೆತ ಮುದ್ರಾಫಲಕ

ಇದನ್ನು ಶಿವನೆಂದು ನಿರ್ದೇಶಿಸುವವರು 'ತ್ರಿಶೀರ್ಷ ಮಹೇಶ'ನೆಂದು ಪ್ರಸಿದ್ಧವಾಗಿರುವ ಎಲಿಫೆಂಟಾ ಗುಹಾಂತರ್ದೇವಾಲಯದ ಮೂರ್ತಿಯನ್ನು ನೆನೆಸಿಕೊಂಡಿದ್ದಾರೆ. ರುದ್ರನಿಗೆ ಪಶುಗಳ ಮೇಲಿರುವ ಒಡೆತನವನ್ನು ಅಥರ್ವವೇದವೇ (11, 2, 24) ಪ್ರಸ್ತಾಪಿಸುತ್ತದೆ. ಪ್ರಜಾಪತಿಯು ತನ್ನ ಮಗಳಾದ ಉಷಸ್ಸಿನೊಂದಿಗೇ ಸಂಭೋಗ ಮಾಡಿದುದನ್ನು ನೋಡಿ ಕೆರಳಿದ ರುದ್ರ ಪ್ರಜಾಪತಿಯನ್ನು ಕೊಲ್ಲಲು ಧನುಸ್ಸನ್ನೆತ್ತಿಕೊಳ್ಳಲು ಪ್ರಜಾಪತಿ "ನನ್ನನ್ನು ಕೊಲ್ಲಬೇಡ, ನಿನ್ನನ್ನು ಪಶುಗಳಿಗೆ ಒಡೆಯನನ್ನಾಗಿ ನೇಮಿಸುತ್ತೇನೆ" ಎಂದು ಹೇಳಿದಂತೆ ಹಳೆಯ ಕಥೆಯೊಂದಿದೆ. ಶಿವನನ್ನು ಪಶುಪತಿಯೆಂದಿರುವುದೇನೋ ತುಂಬ ಪ್ರಾಚೀನ ಕಲ್ಪನೆ. ಮುದ್ರೆಯಲ್ಲಿರುವ ಆನೆ ಶಿವನು ಕೃತ್ತಿವಾಸನೆಂಬುದನ್ನೂ, ಹುಲಿ ದುರ್ಗೆಯೊಂದಿಗೆ ಅವನ ಸಂಬಂಧವಿರುವುದನ್ನೂ, ಎಮ್ಮೆ ಯಮನೊಂದಿಗೆ ನೆಂಟನ್ನೂ ತೋರಿಸುವುದೆಂದು ಹೇಳುತ್ತಾರೆ; ಶಿವನು ಮೃಗಧರನಲ್ಲವೇ? ಕೊಂಬನ್ನಳವಡಿಸಿಕೊಂಡ ತಲೆಪಾಗನ್ನು ಧರಿಸುವ ಪ್ರಾಚೀನ ಜನಾಂಗಗಳು ಋಗ್ವೇದ ಕಾಲದಲ್ಲಿಯೂ ಇದ್ದುವು; ಇವರನ್ನು 'ವಿಷಾಣಿನಃ' ಎಂದರೆ ಕೊಂಬಿನವರು ಎಂದು ಕರೆಯುತ್ತಿದ್ದರು (7, 18, 6). ಜಟೆಗಳಿಂದಲೂ ಶಿಖಂಡಗಳಿಂದಲೂ ವಿಶಿಷ್ಟರಾದ ಕಿರಾತರು ಆ ಕಾಲದಲ್ಲಿರುತ್ತಿದ್ದರು; ರುದ್ರನನ್ನು ಅಥರ್ವವೇದ ಕಿರಾತನೆಂದೇ ಕರೆದಿದೆ (11, 2, 24). ವಾಸ್ತವವಾಗಿ ಶಿವನು ಕಾಡುಮೇಡುಗಳಲ್ಲಿ ಅಲೆದಾಡುವ ಕಿರಾತನೆನ್ನುವ ಕಲ್ಪನೆ ಇಂದಿಗೂ ಮರೆಯಾಗಿಲ್ಲ.

ಋಗ್ವೇದದಲ್ಲಿ ಶಿವನ ಆರಾಧಕರಿದ್ದ ಉಲ್ಲೇಖವಿದೆ. ಶಿವನೆಂದರೆ ಮೊದಲಿನ ಅರ್ಥ ಒಳ್ಳೆಯ ದೇವತೆ; ಮುಂದೆ ಎಲ್ಲವೂ ಅವನಲ್ಲಿ ಅಡಗಿರುವುದರಿಂದ ಅವನು ಶಿವ ('ಶೇತೇऽಸ್ಮಿನ್ ಸರ್ವಮಿತಿ ಶಿವಃ'–

ಸಿದ್ಧಾಂತಕೌಮುದಿಯಲ್ಲಿ ಉಣಾದಿಸೂತ್ರ) ಎನ್ನುವ ಅರ್ಥವೂ ಒದಗಿಬಂದಿತು. ಈ ಅರ್ಥವೇ ಬೆಳೆಯಿತು. ಪ್ರಸಿದ್ಧವಾದ ಹತ್ತು ದೊರೆಗಳ ಹಗರಣದಲ್ಲಿ ಸುದಾಸ – ಭರತರ ಎದುರಾಳಿಗಳಾಗಿ ನಿಂತು ಹೋರಾಡಿದ 'ಶಿವಾಸ'ರು ಶಿವನ ಆರಾಧಕರು. ಇವರನ್ನು ಕೇಶಿಗಳು, ಮುನಿಗಳು, ಯತಿಗಳು, ವ್ರಾತ್ಯರು ಎಂದೂ ವೇದ ಯುಗದಲ್ಲಿ ಕರೆಯುತ್ತಿದ್ದರು. ವೈದಿಕ ಸಂಸ್ಕೃತಿಯ ವ್ಯಾಪ್ತಿಗೆ ಸೇರದ ಈ ಜನರನ್ನು ಹುಚ್ಚರೆಂದೂ, ಬೆತ್ತಲೆಯಾಗಿ ಗಾಳಿಯೊಂದಿಗೆ ಗೆಳೆತನವನ್ನು ಸಾಧಿಸಿಕೊಂಡು ಅಲೆದಾಡುವ ಅಲೆಮಾರಿಗಳೆಂದೂ, ಕಾಯಕ್ಲೇಶ ಗಳಿಂದ ಬುದ್ಧಿಕೆಡಿಸಿಕೊಂಡವರೆಂದೂ (ಉನ್ಮದಿತಾ ಮೌನೇಯೇನ), ರುದ್ರನೊಂದಿಗೆ ಕೂಡಿಕೊಂಡು ವಿಷವನ್ನು ಕುಡಿಯುತ್ತಿದ್ದರೆಂದೂ (ಕೇಶೀ ವಿಷಸ್ಯ ಪಾತ್ರೇಣ ಯದ್ರುದ್ರೇಣಾಪಿಬತ್ ಸಹ) ಋಗ್ವೇದದ ಹತ್ತನೆಯ ಮಂಡಲದಲ್ಲಿ ಬರುವ ಕೇಶೀಸೂಕ್ತ ಬಣ್ಣಿಸುತ್ತದೆ. ವ್ರಾತ್ಯರು ಸೈಂಧವ ಸಂಸ್ಕೃತಿಯ ನೆಂಟನ್ನು ಪಡೆದಿದ್ದವ ರೆಂದು ಒಂದು ಊಹೆ. 'ವ್ರಾತ್ಯಗಣ'ವೆಂಬ ಮಾತಿಗೆ ವೈದಿಕ ಸಾಹಿತ್ಯದಲ್ಲಿ ಒರಟಾಗಿ ಬದುಕುತ್ತ ಅಲೆಮಾರಿಗಳಾದ ಜನರೆಂಬ ಅರ್ಥವಿದೆ. ಪಾಣಿನಿಯು ವ್ರಾತ್ಯರನ್ನು ಹಿಂಸೆಯಿಂದ ಜೀವಿಸುವವರು (ಉತ್ಸೇಧ ಜೀವಿನಃ) ಎಂದು ನಿರ್ದೇಶಿಸಿದ್ದಾನೆ. ವ್ರಾತರೆಂದರೆ ನಾನಾಜಾತಿಯವರು ಒಟ್ಟಿಗೆ ಕೂಡಿ ಕೊಂಡು ಗೊತ್ತಾದ ಯಾವ ಕೆಲಸವನ್ನೂ ಮಾಡದೆ ದುಂಡಾವರ್ತಿಯಿಂದ ಬದುಕುವವರು ಎಂದು ಪತಂಜಲಿ ವಿವರಿಸಿದ್ದಾನೆ (ನಾನಾ ಜಾತೀಯಾ ಅನಿಯತವೃತ್ತಯಃ ಉತ್ಸೇಧಜೀವಿನಃ ಸಂಘಾ ವ್ರಾತಾಃ). ಪತಂಜಲಿಯ ಕಾಲದಲ್ಲಿ ಕೂಡ ಶಿವಭಾಗವತರಿದ್ದರು; ಕಬ್ಬಿಣದ ಶೂಲವನ್ನು ಹಿಡಿದಿರುತ್ತಿದ್ದ ಇವರು (ಆಯುಃಶೂಲಿಕ) ರಭಸದಿಂದ, ಎಂದರೆ ಬಲಾತ್ಕಾರವಾಗಿ, ತಮ್ಮ ಕೆಲಸಗಳನ್ನು ನಡೆಸಿಕೊಳ್ಳುತ್ತಿದ್ದರೆಂದು ಹೇಳಿದೆ. ಗಂಗಾ ಯುಮುನಾ ನದಿಗಳ ತೀರಗಳಲ್ಲಿ ವ್ರಾತ್ಯರು ಹೆಚ್ಚಾಗಿ ಇರುತ್ತಿದ್ದರು. ಅವರಲ್ಲಿ ಹೀನ (ಸಂಯಮವನ್ನಾಗಲೀ ವೃತ್ತಿಯನ್ನಾಗಲೀ ಅರಿಯದೆ ಮನಸ್ವೀ ಇರುವವರು), ಗಾರಾಗಿರ (ವಿಷವನ್ನುಣ್ಣುವವರು, ದುಂಡಾವರ್ತಿಯಿಂದ ನಡೆದುಕೊಳ್ಳುವವರು), ಸಮನೀಚಮೇಢ್ರ (ಎಂದರೆ ಯೋಗವನ್ನಭ್ಯಸಿಸಿ ಸಂಯಮಿಗಳಾದವರು) ಮತ್ತು ನಿಂದಿತ (ಸಮಾಜ ಬಾಹಿರರು) ಎಂಬ ಪಂಗಡ ಗಳಿದ್ದುವಂತೆ. ಆರ್ಯರ ವ್ರತವನ್ನನುಸರಿಸದೆ (ಅವ್ರತ), ಅವರ ಯಜ್ಞ ಯಾಗಾದಿಗಳನ್ನು ಗೌರವಿಸದೆ (ಅಕ್ರತು, ಅಯಜ್ವನ್), ವಿಚಿತ್ರವಾದ ಪದ್ಧತಿಗಳನ್ನು ಅನುಸರಿಸುತ್ತ (ಅನ್ಯವ್ರತ), ಸಂಯಮವನ್ನರಿಯದವರು (ಶಿಶ್ನದೇವ) ವ್ರಾತ್ಯಗಣಗಳಲ್ಲಿ ಸೇರಿದ್ದವರೇ. ಇವರ ವಿಚಾರವಾಗಿ ವೈದಿಕ ಸಾಹಿತ್ಯ ಪೂರ್ವಗ್ರಹ ಪೀಡಿತವಾಗಿದ್ದಿತೆಂದರೆ ಆಶ್ಚರ್ಯವಲ್ಲ. ಅವರ ವಿಚಾರ ಇಲ್ಲಿ ಪ್ರಸಕ್ತವಲ್ಲ; ರುದ್ರನಿಗೆ ಏಕವ್ರಾತ್ಯನೆಂಬ ಹೆಸರಿರುವುದು ಸ್ವಾರಸ್ಯ ಅಷ್ಟೆ. ವ್ರಾತ್ಯರಿಗೂ ರುದ್ರನಿಗೂ ಇದ್ದ ಸಂಬಂಧವನ್ನು ಇದು ಎತ್ತಿ ಹಿಡಿಯುತ್ತದೆ.

ವ್ರಾತ್ಯ, ದಸ್ಯು, ಯಕ್ಷ, ನಾಗ, ಶಬರ, ಅಸುರ ಮೊದಲಾದುವೆಲ್ಲ ವೈದಿಕಯುಗದಲ್ಲೇ ಪ್ರಸಿದ್ಧವಾಗಿದ್ದ ಅನಾರ್ಯ ಪಂಗಡಗಳು. ಇವರಲ್ಲಿ ಯಕ್ಷರು ಹಿಮಾಲಯದ ಪರಿಸರದಲ್ಲಿಯೇ ಇರುತ್ತಿದ್ದ ಕಾಡುಜನರೆಂದೂ ಶಿವನು ಮೊದಲಿಗೆ ಇವರ ದೇವರೆಂದೂ ಒಂದು ಊಹೆಯಿದೆ. ಶಿವನ ಪರಿವಾರದಲ್ಲಿ ಯಕ್ಷರಿದ್ದಾರೆ; ಯಕ್ಷರಾಜನಾದ ಕುಬೇರನೂ ಶಿವನ ಬಂಟನೇ. ಶಿವದೇವಾಲಯಗಳಲ್ಲಿಯೂ ಯಕ್ಷರನ್ನು ದ್ವಾರಪಾಲಕ ರನ್ನಾಗಿ ನಿಲ್ಲಿಸುವ ಪದ್ಧತಿಯಿದ್ದಿತು. ನಾಗಜನರಿಗೂ ಶಿವನಿಗೂ ಹೀಗೆಯೇ ಸಂಬಂಧವಿದ್ದಿತು. ಅಂತೂ ವೈದಿಕವಾಙ್ಮಯ ಸಿದ್ಧವಾಗುತ್ತಿದ್ದಾಗ ಹಲವಾರು ಹಳೆಯ ಪಂಗಡಗಳಲ್ಲಿ ಶಿವನ ಪೂಜೆ ಬಳಕೆಯಲ್ಲಿದ್ದಿತು. ವೈದಿಕರುದ್ರ ಈ ಅವೈದಿಕ ಶಿವನ ರೂಪಾಂತರವಿದ್ದರೆ ಅಸಹಜವೇನಲ್ಲ.

ಸಿದ್ಧಾಂತಕೌಮುದಿಯಲ್ಲಿ ಉಣಾದಿಸೂತ್ರ) ಎನ್ನುವ ಅರ್ಥವೂ ಒದಗಿಬಂದಿತು. ಈ ಅರ್ಥವೇ ಬೆಳೆಯಿತು. ಪ್ರಸಿದ್ಧವಾದ ಹತ್ತು ದೊರೆಗಳ ಹಗರಣದಲ್ಲಿ ಸುದಾಸ – ಭರತರ ಎದುರಾಳಿಗಳಾಗಿ ನಿಂತು ಹೋರಾಡಿದ 'ಶಿವಾಸ'ರು ಶಿವನ ಆರಾಧಕರು. ಇವರನ್ನು ಕೇಶಿಗಳು, ಮುನಿಗಳು, ಯತಿಗಳು, ವ್ರಾತ್ಯರು ಎಂದೂ ವೇದ ಯುಗದಲ್ಲಿ ಕರೆಯುತ್ತಿದ್ದರು. ವೈದಿಕ ಸಂಸ್ಕೃತಿಯ ವ್ಯಾಪ್ತಿಗೆ ಸೇರದ ಈ ಜನರನ್ನು ಹುಚ್ಚರೆಂದೂ, ಬೆತ್ತಲೆಯಾಗಿ ಗಾಳಿಯೊಂದಿಗೆ ಗೆಳೆತನವನ್ನು ಸಾಧಿಸಿಕೊಂಡು ಅಲೆದಾಡುವ ಅಲೆಮಾರಿಗಳೆಂದೂ, ಕಾಯಕ್ಲೇಶ ಗಳಿಂದ ಬುದ್ಧಿ ಕೆಡಿಸಿಕೊಂಡವರೆಂದೂ (ಉನ್ಮದಿತಾ ಮೌನೇಯೇನ), ರುದ್ರನೊಂದಿಗೆ ಕೂಡಿಕೊಂಡು ವಿಷವನ್ನು ಕುಡಿಯುತ್ತಿದ್ದರೆಂದೂ (ಕೇಶೀ ವಿಷಸ್ಯ ಪಾತ್ರೇಣ ಯದ್ರುದ್ರೇಣಾಪಿಬತ್ ಸಹ) ಋಗ್ವೇದದ ಹತ್ತನೆಯ ಮಂಡಲದಲ್ಲಿ ಬರುವ ಕೇಶೀಸೂಕ್ತ ಬಣ್ಣಿಸುತ್ತದೆ. ವ್ರಾತ್ಯರು ಸೈಂಧವ ಸಂಸ್ಕೃತಿಯ ನೆಂಟನ್ನು ಪಡೆದಿದ್ದವ ರೆಂದು ಒಂದು ಊಹೆ. 'ವ್ರಾತ್ಯಗಣ'ವೆಂಬ ಮಾತಿಗೆ ವೈದಿಕ ಸಾಹಿತ್ಯದಲ್ಲಿ ಒರಟಾಗಿ ಬದುಕುತ್ತ ಅಲೆಮಾರಿಗಳಾದ ಜನರೆಂಬ ಅರ್ಥವಿದೆ. ಪಾಣಿನಿಯು ವ್ರಾತ್ಯರನ್ನು ಹಿಂಸೆಯಿಂದ ಜೀವಿಸುವವರು (ಉತ್ಸೇಧ ಜೀವಿನಃ) ಎಂದು ನಿರ್ದೇಶಿಸಿದ್ದಾನೆ. ವ್ರಾತರೆಂದರೆ ನಾನಾಜಾತಿಯವರು ಒಟ್ಟಿಗೆ ಕೂಡಿ ಕೊಂಡು ಗೊತ್ತಾದ ಯಾವ ಕೆಲಸವನ್ನೂ ಮಾಡದೆ ದುಂಡಾವರ್ತಿಯಿಂದ ಬದುಕುವವರು ಎಂದು ಪತಂಜಲಿ ವಿವರಿಸಿದ್ದಾನೆ (ನಾನಾ ಜಾತೀಯಾ ಅನಿಯತವೃತ್ತಯಃ ಉತ್ಸೇಧಜೀವಿನಃ ಸಂಘಾ ವ್ರಾತಾಃ). ಪತಂಜಲಿಯ ಕಾಲದಲ್ಲಿ ಕೂಡ ಶಿವಭಾಗವತರಿದ್ದರು; ಕಬ್ಬಿಣದ ಶೂಲವನ್ನು ಹಿಡಿದಿರುತ್ತಿದ್ದ ಇವರು (ಆಯುಃಶೂಲಿಕ) ರಭಸದಿಂದ, ಎಂದರೆ ಬಲಾತ್ಕಾರವಾಗಿ, ತಮ್ಮ ಕೆಲಸಗಳನ್ನು ನಡೆಸಿಕೊಳ್ಳುತ್ತಿದ್ದರೆಂದು ಹೇಳಿದೆ. ಗಂಗಾ ಯಮುನಾ ನದಿಗಳ ತೀರಗಳಲ್ಲಿ ವ್ರಾತ್ಯರು ಹೆಚ್ಚಾಗಿ ಇರುತ್ತಿದ್ದರು. ಅವರಲ್ಲಿ ಹೀನ (ಸಂಯಮವನ್ನಾಗಲೀ ವೃತ್ತಿಯನ್ನಾಗಲೀ ಅರಿಯದೆ ಮನಸ್ವೀ ಇರುವವರು), ಗಾರಾಗಿರ (ವಿಷವನ್ನುಣ್ಣುವವರು, ದುಂಡಾವರ್ತಿಯಿಂದ ನಡೆದುಕೊಳ್ಳುವವರು), ಸಮನೀಚಮೇಢ್ರ (ಎಂದರೆ ಯೋಗವನ್ನಭ್ಯಸಿಸಿ ಸಂಯಮಿಗಳಾದವರು) ಮತ್ತು ನಿಂದಿತ (ಸಮಾಜ ಬಾಹಿರರು) ಎಂಬ ಪಂಗಡ ಗಳಿದ್ದುವಂತೆ. ಆರ್ಯರ ವ್ರತವನ್ನನುಸರಿಸದೆ (ಅವ್ರತ), ಅವರ ಯಜ್ಞ ಯಾಗಾದಿಗಳನ್ನು ಗೌರವಿಸದೆ (ಅಕ್ರತು, ಅಯಜ್ವನ್), ವಿಚಿತ್ರವಾದ ಪದ್ಧತಿಗಳನ್ನು ಅನುಸರಿಸುತ್ತ (ಅನ್ಯವ್ರತ), ಸಂಯಮವನ್ನರಿಯದವರು (ಶಿಶ್ನದೇವ) ವ್ರಾತ್ಯಗಣಗಳಲ್ಲಿ ಸೇರಿದ್ದವರೇ. ಇವರ ವಿಚಾರವಾಗಿ ವೈದಿಕ ಸಾಹಿತ್ಯ ಪೂರ್ವಗ್ರಹ ಪೀಡಿತವಾಗಿದ್ದಿತೆಂದರೆ ಆಶ್ಚರ್ಯವಲ್ಲ. ಅವರ ವಿಚಾರ ಇಲ್ಲಿ ಪ್ರಸಕ್ತವಲ್ಲ; ರುದ್ರನಿಗೆ ಏಕವ್ರಾತ್ಯನೆಂಬ ಹೆಸರಿರುವುದು ಸ್ವಾರಸ್ಯ ಅಷ್ಟೆ. ವ್ರಾತ್ಯರಿಗೂ ರುದ್ರನಿಗೂ ಇದ್ದ ಸಂಬಂಧವನ್ನು ಇದು ಎತ್ತಿ ಹಿಡಿಯುತ್ತದೆ.

ವ್ರಾತ್ಯ, ದಸ್ಯು, ಯಕ್ಷ, ನಾಗ, ಶಬರ, ಅಸುರ ಮೊದಲಾದುವೆಲ್ಲ ವೈದಿಕಯುಗದಲ್ಲೇ ಪ್ರಸಿದ್ಧವಾಗಿದ್ದ ಅನಾರ್ಯ ಪಂಗಡಗಳು. ಇವರಲ್ಲಿ ಯಕ್ಷರು ಹಿಮಾಲಯದ ಪರಿಸರದಲ್ಲಿಯೇ ಇರುತ್ತಿದ್ದ ಕಾಡುಜನರೆಂದೂ ಶಿವನು ಮೊದಲಿಗೆ ಇವರ ದೇವರೆಂದೂ ಒಂದು ಊಹೆಯಿದೆ. ಶಿವನ ಪರಿವಾರದಲ್ಲಿ ಯಕ್ಷರಿದ್ದಾರೆ; ಯಕ್ಷರಾಜನಾದ ಕುಬೇರನೂ ಶಿವನ ಬಂಟನೇ. ಶಿವದೇವಾಲಯಗಳಲ್ಲಿಯೂ ಯಕ್ಷರನ್ನು ದ್ವಾರಪಾಲಕ ರನ್ನಾಗಿ ನಿಲ್ಲಿಸುವ ಪದ್ಧತಿಯಿದ್ದಿತು. ನಾಗಜನರಿಗೂ ಶಿವನಿಗೂ ಹೀಗೆಯೇ ಸಂಬಂಧವಿದ್ದಿತು. ಅಂತೂ ವೈದಿಕವಾಙ್ಮಯ ಸಿದ್ಧವಾಗುತ್ತಿದ್ದಾಗ ಹಲವಾರು ಹಳೆಯ ಪಂಗಡಗಳಲ್ಲಿ ಶಿವನ ಪೂಜೆ ಬಳಕೆಯಲ್ಲಿದ್ದಿತು. ವೈದಿಕರುದ್ರ ಈ ಅವೈದಿಕ ಶಿವನ ರೂಪಾಂತರವಿದ್ದರೆ ಅಸಹಜವೇನಲ್ಲ.

ಋಗ್ವೇದದ ಮೊದಲ ಮಂಡಲದಲ್ಲಿಯೇ (ಸೂಕ್ತ 114, ಅನುವಾಕ 8) ರುದ್ರನನ್ನು ಕುರಿತ ಋಕ್ಕುಗಳಿವೆ. ಪ್ರಕೃತಿಯ ವಿನಾಶಕ ಭಯಾನಕ ವ್ಯಾಪಾರಗಳ ಮೂರ್ತರೂಪ ರುದ್ರ ಎನ್ನುವ ಕಲ್ಪನೆ ಇಲ್ಲಿ ಕಾಣುತ್ತದೆ. (ರೋದನಾತ್ ರುದ್ರಃ). ಭೋರೆಂದು ಬೀಸುವ ಬಿರುಗಾಳಿ, ಧಗಧಗನೆ ಉರಿಯುವ ಬೆಂಕಿ, ಕಣ್ಣುಕೋರೈಸುವ ಮಿಂಚು, ಎದೆನಡುಗಿಸುವ ಗುಡುಗು–ಸಿಡಿಲು, ಹುಚ್ಚೆದ್ದು ಹರಿಯುವ ಪ್ರವಾಹ, ಬಂದಲ್ಲಿ ಬರಗಾಲವನ್ನು ತರುವ ಬೇನೆ ಇವೆಲ್ಲವೂ ರುದ್ರನ ಪ್ರತಾಪವೇ ! ಯಜುರ್ವೇದದ ಶತರುದ್ರೀಯ ದಲ್ಲಿ (ತೈತ್ತಿರೀಯ ಸಂಹಿತೆ 4, 5, 1 ಮತ್ತು ವಾಜಸನೇಯಿ ಸಂಹಿತೆ, ಅ, 16) ರುದ್ರನ ಹೆಸರುಗಳು ಬರುತ್ತವೆ; ಇವುಗಳಲ್ಲಿ ಅವನ ಭಯಂಕರ ಸ್ವಭಾವವನ್ನು ಹೇಳುವುವೇ ಹೆಚ್ಚು.

ಆದರೆ ಇದಷ್ಟೇ ವೈದಿಕರುದ್ರನ ಗುಣ ಎಂದುಕೊಳ್ಳಬಾರದು. ಈ ಘೋರ ರೂಪವಲ್ಲದೆ ಅವನಿಗೆ ಸೌಮ್ಯರೂಪವೂ ಇದೆ (ದ್ವೇ ತನೂ ತಸ್ಯ ದೇವಸ್ಯ ಬ್ರಾಹ್ಮಣಾಃ ವೇದಜ್ಞಾಃ ವಿದುಃ ಘೋರಂ ಅನ್ಯಾಂ). ಅಥರ್ವವೇದದಲ್ಲಿಯೂ ಶತಪಥಬ್ರಾಹ್ಮಣದಲ್ಲಿಯೂ ರುದ್ರನನ್ನು ರುದ್ರ, ಶರ್ವ, ಉಗ್ರ, ಅಶನಿ ಎಂದು ಅವನ ಘೋರ ರೂಪವನ್ನು ನಿರ್ದೇಶಿಸಿ ಕರೆದಿರುವುದಲ್ಲದೆ ಭವ, ಪಶುಪತಿ, ಮಹಾದೇವ, ಈಶಾನ ಎಂದು ಅವನ ಸೌಮ್ಯಸ್ವಭಾವವನ್ನೂ ಲಕ್ಷಿಸಿ ಹೇಳಿದ್ದಾರೆ. ರುದ್ರನು ಬೇನೆಗಳನ್ನು ತರಿಸುವವನು ಮಾತ್ರವಲ್ಲ, ಗುಣಪಡಿಸುವವನೂ ಹೌದು. ಪತಂಜಲಿಯ ಮಹಾ ಭಾಷ್ಯದಲ್ಲಿ (ಕೀಲ್‌ಹಾರ್ನ್ ಸಂಪಾದಿತ, ಸಂ. 1, ಪು. 331, 424 ಮತ್ತು ಸಂ. 3, ಪು. 414) ರುದ್ರ–ಶಿವನ ಬಗ್ಗೆ ಪ್ರಸ್ತಾಪಗಳು ಬಂದಾಗ ಇವೆರಡು ಮುಖಗಳನ್ನೂ ಕಾಣಬಹುದು. ರುದ್ರನಿಗೆ ಪ್ರಾಣಿಗಳನ್ನು ಬಲಿಗೊಟ್ಟು ಅವನನ್ನು ಪ್ರೀತಿಬಡಿಸುತ್ತಿದ್ದ ಉಲ್ಲೇಖವೂ ಇದೆ; ಅವನ ಮೂಲಿಕೆಗಳ ಉಪಕಾರವನ್ನೂ ನೆನಸಿಕೊಂಡುದಿದೆ (ಶಿವಾ ರುದ್ರಸ್ಯ ಭೇಷಜೀ). ಮಹಾಭಾರತದಲ್ಲಿ ರುದ್ರನಿಗೆ ನರಬಲಿಯನ್ನೂ ಕೊಡುತ್ತಿದ್ದ ಕಥೆ (ಜರಾಸಂಧನ ಪ್ರಕರಣ) ಇದೆ; ಅವನು ವೈದ್ಯನೆನ್ನುವ ಪ್ರಸ್ತಾಪವೂ ಇದೆ.

ಭಾಗವತ ಮೊದಲಾದ ಪುರಾಣಗಳಲ್ಲಿ ಬರುವ ದಕ್ಷಯಾಗ ವಿಧ್ವಂಸನದ ಕಥೆಯು ಶಿವನು ಆರ್ಯವೈದಿಕ ಸಂಸ್ಕೃತಿಯ ಹೊರಗಿದ್ದ ದೇವತೆಯೆಂದು ಸ್ಪಷ್ಟಪಡಿಸುತ್ತದೆ. ಉಳಿದೆಲ್ಲ ದೇವತೆಗಳನ್ನು ಕರೆದಿದ್ದರೂ, ದಕ್ಷಪ್ರಜಾಪತಿ ತನ್ನ ಅಳಿಯನಾದರೂ ಶಿವನನ್ನು ಕರೆದಿರಲಿಲ್ಲ; ಅದಕ್ಕೆ ಕಾರಣ ಅವನು ಉನ್ಮಾರ್ಗಿ, ಅವ್ರತ, ಅನಾಚಾರಿಯೆಂದು ! ಈ ಕಥೆಯ ಮೂಲಸಾಮಗ್ರಿಯನ್ನು ತಾಂಡ್ಯಮಹಾಬ್ರಾಹ್ಮಣ ದಲ್ಲಿಯೇ ಕಾಣಬಹುದು (7, 9–10). ಯಜ್ಞದ ಸಂದರ್ಭದಲ್ಲಿ ಒಪ್ಪಿಸಲಾಗುತ್ತಿದ್ದ ಪಶುಬಲಿಗಳೆಲ್ಲವನ್ನೂ ದೇವತೆಗಳು ತಮ್ಮತಮ್ಮಲ್ಲಿಯೇ ಹಂಚಿಕೊಳ್ಳುತ್ತಿದ್ದರಂತೆ; ರುದ್ರನನ್ನು ದೂರವಿಟ್ಟಿದ್ದರಂತೆ (ದೇವಾಃ ವೈ ಪಶುಂ ವ್ಯಭಜಂತ, ತೇ ರುದ್ರಮಂತರಾಯನ್). ಹೀಗೆ ವಿರೋಧ ಭಾವನೆಯಿಂದಲೇ ರುದ್ರನನ್ನು ವೈದಿಕ ಸಂಸ್ಕೃತಿ ಕಾಣತೊಡಗಿದರೂ ಅವನನ್ನು ತಮ್ಮ ದೇವತಾಗೋಷ್ಠಿಯಲ್ಲಿ ಸೇರಿಸಿಕೊಳ್ಳಬೇಕಾಯಿತು; ಸೇರಿಸಿಕೊಂಡಮೇಲೂ ವಿರೋಧಭಾವನೆ ಅಷ್ಟಿಷ್ಟು ಉಳಿದೇ ಉಳಿಯಿತು.

ವೈದಿಕ ವಾಙ್ಮಯದಲ್ಲಿ ಬರುವ ಪ್ರಸ್ತಾಪಗಳನ್ನು ಗಮನಿಸಿದರೆ ರುದ್ರ ಅಥವಾ ಶಿವ ಯಾವೊಬ್ಬ ನಿರ್ದಿಷ್ಟ ದೇವತೆಯ ಹೆಸರೂ ಅಲ್ಲವೆಂದು ತೋರುತ್ತದೆ. ಹಲವಾರು ರುದ್ರರು, ಹಲವಾರು ಶಿವರು ಇದ್ದಂತೆ ಮಾತು ಬರುತ್ತದೆ. ಪುರಾಣಗಳ ಕಾಲದಲ್ಲಿ ಏಕಾದಶರುದ್ರರೆಂದು ನಿಶ್ಚಯವಾಗಿದ್ದಿತು. ಮಹಾಭಾರತದ ಸೌಪ್ತಿಕಪರ್ವದಲ್ಲಿ ಮತ್ತು ಶಾಂತಿಪರ್ವದಲ್ಲಿ ದಧೀಚಿ ಋಷಿಗೆ ದಕ್ಷ ಹೇಳುವ ಮಾತು—"ಶೂಲವನ್ನು ಹಿಡಿದು ಎತ್ತರದ ಜಟೆಯನ್ನು ಕಟ್ಟಿಕೊಂಡ ರುದ್ರರು ನಮಗೆ ಹಲವರಿದ್ದಾರೆ, ಹನ್ನೊಂದು ಮಂದಿಯಂತೂ

ಹೌದು, ಆದರೆ ಮಹೇಶ್ವರನೊಬ್ಬನನ್ನು ನಾನರಿಯೆ" (ಸಂತಿ ನೋ ಬಹವೋ ರುದ್ರಾಃ ಶೂಲಹಸ್ತಾಃ ಕಪರ್ದಿನಃ । ಏಕದಶಸ್ಥಾನಗತಾ ನಾಹಂ ವೇದ್ಮಿ ಮಹೇಶ್ವರಂ॥) ಎಂದು. ಎಂದರೆ ರುದ್ರರಲ್ಲಿ ಯಾವೊಬ್ಬನೂ ಎಲ್ಲರಿಗಿಂತ ಮಿಗಿಲೆಂಬ ಕಲ್ಪನೆಯಿರಲಿಲ್ಲ. ಭಗವದ್ಗೀತೆಯಲ್ಲಿಯೂ"ರುದ್ರಾಣಾಂ ಶಂಕರಶ್ಚಾಸ್ಮಿ" ಎನ್ನುವ ಮಾತು ಬರುವುದಿಲ್ಲವೆ? ಹಲವಾರು ವಿನಾಯಕರಲ್ಲಿ ಒಬ್ಬ ಗಣಪತಿ–ವಿನಾಯಕ ಕಾಲಕ್ರಮದಲ್ಲಿ ಉಳಿದುಕೊಂಡಂತೆಯೇ, ಹಲವಾರು ರುದ್ರರಲ್ಲಿ ಒಬ್ಬ ಶಿವ–ರುದ್ರ ಮೈದುಂಬಿ ಬಂದುದು ಮುಂದಿನ ಯುಗದಲ್ಲಿ. ಇದು ಮೊಟ್ಟಮೊದಲಿಗೆ ಸ್ಪಷ್ಟವಾಗಿ ಕಾಣಿಸುವುದು ಕೃಷ್ಣಯಜುರ್ವೇದಕ್ಕೆ ಸೇರಿದ ಶ್ವೇತಾಶ್ವತರೋಪನಿಷತ್ತಿನಲ್ಲಿ. "ಏಕೋ ಹಿ ರುದ್ರೋ ನ ದ್ವಿತೀಯಾಯ" ಎನ್ನುವ ಮಾತು ಇಲ್ಲಿ ಬರುತ್ತದೆ (3, 2). ಅಷ್ಟೇ ಅಲ್ಲದೆ ಈ ರುದ್ರನನ್ನು ಮಹೇಶ್ವರನ ನೆಲೆಗೆ ಏರಿಸಿದ್ದಾರೆ ಇಲ್ಲಿ—

> ಯೋ ದೇವಾನಾಂ ಪ್ರಭವಶ್ಚೋದ್ಭವಶ್ಚ
> ವಿಶ್ವಾಧಿಪೋ ರುದ್ರೋ ಮಹರ್ಷಿಃ । (೪, ೧೨)
> ವಿಶ್ವಸ್ಯೈಕಂ ಪರಿವೇಷ್ಟಿತಾರಂ
> ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ । (೪. ೧೪)

ಸ್ಕಂಭ–ಲಿಂಗ

ಇನ್ನು ಶಿವನ ಮೂರ್ತಿಕಲ್ಪನೆಯ ಕಡೆ ದೃಷ್ಟಿಯನ್ನು ಹೊರಳಿಸೋಣ. ಶಿವನನ್ನು ಸಾಮಾನ್ಯವಾಗಿ ಲಿಂಗದ ಆಕೃತಿಯಲ್ಲಿ ಆರಾಧಿಸುತ್ತಾರಲ್ಲವೆ? ಲಿಂಗದಲ್ಲಿಯೇ ಶಿವನ ಮುಖವನ್ನು ಕಡೆದ ಮುಖಲಿಂಗಗಳೂ (ಚಿತ್ರ 56), ಶಿವನ ಮನುಷ್ಯಾಕಾರವನ್ನು ಪೂರ್ಣವಾಗಿ ಕಡೆದು ಕಥೆಗೆ ಅಳವಡಿಸಿದ ಲಿಂಗೋದ್ಭವಮೂರ್ತಿಗಳೂ ಇವೆಯೆನ್ನಿ. ಆದರೆ ಶಿವಪೂಜೆಯೆಂದರೆ ಲಿಂಗಪೂಜೆಯೇ. 'ಲಿಂಗಪೂಜಾ ಶಿವಸ್ಯೇಷ್ಟಾ ವಿಗ್ರಹಾರಾಧನಾತ್ ಪ್ರಿಯೇ'. ಶಿವನ ಹಿನ್ನೆಲೆಯಲ್ಲಿ ವೈದಿಕ ರುದ್ರನನ್ನು ಕಂಡಂತೆಯೇ ಲಿಂಗದ ಹಿನ್ನೆಲೆಯಲ್ಲಿ ವೈದಿಕಸ್ಕಂಭವನ್ನು ಕಾಣಬಹುದು. ಅಥರ್ವವೇದದಲ್ಲಿ ಸ್ಕಂಭದ ಕಲ್ಪನೆ ಸ್ಪಷ್ಟವಾಗಿದೆ.



ಚಿತ್ರ 56

ಮುಖಲಿಂಗ

ಆನವಟ್ಟಿಯ ಬಳಿ ಭಾರಂಗಿಯ ಕಲ್ಲೇಶ್ವರ ಗುಡಿಯಲ್ಲಿರುವ ಮುಖಲಿಂಗ

ಸ್ಕಂಭವೆಂದರೆ ಸ್ತಂಭವೇ; ಮನೆಯನ್ನು ಹಿಡಿದು, ಎತ್ತಿ ನಿಲ್ಲಿಸುವ ಕಂಬ ಇದ್ದಂತೆ ಚರಾಚರಜಗತ್ತನ್ನೆಲ್ಲ ನಿಲ್ಲಿಸಿರುವ ಸ್ತಂಭ. ಪ್ರಪಂಚದ ಆದ್ಯಂತವೂ ವ್ಯಾಪಿಸಿ, ಆದರ ಎಲ್ಲ ಅಂಶಗಳನ್ನೂ ಅಂಗಗಳನ್ನೂ ಒಳಗೊಂಡು, ತಪಸ್ಸು-ಸತ್ಯ-ಶ್ರದ್ಧೆ ಮೊದಲಾದುವುಗಳನ್ನೂ ಒಳಗೊಂಡಿರುವ ಅವ್ಯಕ್ತ ಆದರೆ ಮೂರ್ತ ತತ್ತ್ವ ಇದು. ಅದರಲ್ಲಿಯೇ ಭೂಮಿ, ಆಕಾಶ, ಅಗ್ನಿ, ಸೂರ್ಯ, ಚಂದ್ರ, ವಾಯು ಎಲ್ಲವೂ ಅಡಗಿದೆ; ಅದರ ಆಕಾರದಲ್ಲಿ ಮೂವತ್ತುಮೂರು ದೇವತೆಗಳೂ ಸೇರಿದ್ದಾರೆ; ಅಮೃತವೂ ಅದರಲ್ಲಿದೆ, ಮೃತ್ಯುವೂ ಇದೆ, ಸಮುದ್ರವೇ ಅದರ ನಾಡಿಗಳು . ನೀರಿನ ಮೇಲಿರುವ 'ಬಂಗಾರದ ಕಡ್ಡಿ' (ವೇತಸಂ ಹಿರಣ್ಯಂ) ಅದು. ಈ ಸ್ಕಂಭವನ್ನು ಪುರುಷನಂತೆಯೇ ಕಲ್ಪಿಸಿಕೊಂಡಿರುವುದು ಸ್ವಾರಸ್ಯ—

ಯತ್ರಾಮೃತಂ ಚ ಮೃತ್ಯುಶ್ಚ ಪುರುಷೇಽಧಿಸಂಹಿತೇ
ಸಮುದ್ರೋ ಯಸ್ಯ ನಾಡ್ಯಃ
ಪುರುಷೇಽಧಿಸಂಹಿತಾ ಸ್ಕಂಭಂ ತಂ ಬ್ರೂಹಿ
ಕತಮಃ ಸ್ವಿದೇವ ಸಃ ॥ (೧೦, ೭, ೧೫)

ಈ ಸ್ತಂಭವನ್ನು ಕೊನೆಮೊದಲಿಲ್ಲದ ಕಂಬವೆಂದು ಬಗೆದುದುಂಟು; ಅದನ್ನು ಅಗ್ನಿಯೆಂದೂ ಕರೆದುದುಂಟು. ಶಿವನ ಆದಿಮೂಲವನ್ನು ಹುಡುಕಲು ಬ್ರಹ್ಮನೂ ವಿಷ್ಣುವೂ ಹಂಸ-ವರಾಹ ರೂಪಗಳನ್ನು ಧರಿಸಿ ಹೊರಟು ನಿರಾಶರಾದ ಕಥೆ ಪುರಾಣದಲ್ಲಿ ಬರುತ್ತದೆ; ಇದೇ ಲಿಂಗೋದ್ಭವ ಮೂರ್ತಿಯ ಸಂದರ್ಭ. ಇಲ್ಲಿ ಶಿವ ಕಂಡದ್ದು ಸಾವಿರಾರು ಜ್ವಾಲೆಗಳ ಬೆಂಕಿಯ ಕಂಬದಂತೆಯೇ. ಹಲವಾರು ಶಿವಕ್ಷೇತ್ರಗಳಲ್ಲಿ (ನಿದರ್ಶನಕ್ಕೆ ತಿರುವಣ್ಣಾಮಲೈ, ತಿರುಕ್ಕನೂರ್, ಮೊದಲಾದುವು) ಶಿವನನ್ನು ಅಗ್ನಿ ಸ್ತಂಭವೆಂದೇ ಪರಿಗಣಿಸಿರುವುದಿದೆ. ಮಹಾಭಾರತ ಸೌಪ್ತಿಕಪರ್ವ (17, 13–14) ದಲ್ಲಿ ಅಶ್ವತ್ಥಾಮನು ಶಿವನನ್ನು ಕುರಿತು ಪ್ರಾರ್ಥಿಸಿದಾಗ ಶಿವನು ಬಂಗಾರದ ವೇದಿಕೆಯಂತೆ ಕಾಣಿಸಿಕೊಂಡನೆಂದೂ ಅದರಿಂದ ಬೆಂಕಿ ಹೊರಹೊಮ್ಮಿತೆಂದೂ ಹೇಳಿದೆ:—

ಪುರಸ್ತಾತ್ ಕಾಂಚನೀ ವೇದೀ ಪ್ರಾದುರಾಸೀನ್ಮಹಾತ್ಮನಃ ।
ತಸ್ಯಾಂ ವೇದ್ಯಾಂ ತದಾ ರಾಜಂಶ್ಚಿತ್ರಭಾನುರಜಾಯತ ॥

ವೇದದಲ್ಲಿ ದ್ಯಾವಾಪೃಥಿವಿಯರು ಪ್ರಪಂಚದ ತಂದೆತಾಯಿಯರೆಂದು ಹೇಳುವಾಗ ಪುರುಷನಾದ ದ್ಯೌಃ ಹೊಳೆಯುವ ಅಂತರಿಕ್ಷದೇವತೆಯೆಂದೂ, ಸ್ತ್ರೀರೂಪದ ಪೃಥಿವೀ ಭೂಮಿದೇವತೆಯೆಂದೂ ಬಗೆದು, ಇವರಿಬ್ಬರ ಸಂಯೋಗ ಸೃಷ್ಟಿಯ ಹಿನ್ನೆಲೆಯೆನ್ನುವ ಅಭಿಪ್ರಾಯವಿದೆ. ದ್ಯೌಃ ಎತ್ತರಕ್ಕೆ ಎದ್ದು ನಿಂತ ಲಿಂಗವೆಂದೂ, ಪೃಥಿವೀ ಅದಕ್ಕೆ ಅಧಿಷ್ಠಾನವಾಗಿ ಹರಡಿಕೊಂಡ ಯೋನಿಯೆಂದೂ ಹೇಳಿದರೆ ತಪ್ಪಾಗದು. ಸ್ಕಂದ ಪುರಾಣದಲ್ಲಿ ಆಕಾಶವೇ ಲಿಂಗವೆಂದೂ ಭೂಮಿಯು ಪಾಣಿವಟ್ಟವೆಂದೂ ಹೇಳಿದೆ. "ತಸ್ಯ ಪೀಠಿಕಾ ಆಕಾಶಃ ಲಿಂಗಮಿತ್ಯಾಹುಃ ಪೃಥಿವೀ". ಸ್ಕಂಭವೆಂದರೆ ಮೂರ್ತರೂಪದಲ್ಲಿ ಲಿಂಗಾಕಾರವೇ.

ಇಲ್ಲಿ ಇನ್ನೂ ಒಂದು ಉಲ್ಲೇಖವನ್ನು ಗಮನಿಸದಿರಬಾರದು. ಋಗ್ವೇದದಲ್ಲಿ (10, 31, 7) ಜಗತ್ತಿಗೆ ಆದಿಕಾರಣವಾದುದನ್ನು ವನ, ವೃಕ್ಷ ಎಂದು ಕರೆದು ಅದರಿಂದಲೇ ಭೂಮಿ-ಅಂತರಿಕ್ಷಗಳನ್ನು ಮಾಡಿದ್ದಾರೆಂದೂ, ಅಚ್ಚಳಿಯದೆ ಈ ವನ, ವೃಕ್ಷ ಉಳಿದೇ ಇದೆಯೆಂದೂ ಹೇಳಿದೆ—

ಕಿಂ ಸ್ವಿದ್ವನಂ ಕಃ ಉ ಸ ವೃಕ್ಷಃ ಆಸ ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ ।
ಸಂತಸ್ಥಾನೇ ಅಜರೇ ಇತ ಊತೀ ಅಹಾನಿ ಪೂರ್ವೀರುಷಸೋ ಜರಂತ ॥

ಇಲ್ಲಿ ವೃಕ್ಷದೇವತೆಯ ಪ್ರಸ್ತಾಪ 'ನ್ನು ಕಾಣಬಹುದೆ? ವೈದಿಕಋಷಿಗಳ ಚಿಂತನೆಯಲ್ಲಿ ವೃಕ್ಷದೇವತೆಗಳಿಗೆ ಅಷ್ಟು ಮಹತ್ತ್ವವಿರದು. ಆದರೆ ಅದರ ಪರಿಚಯ ಅವರಿಗಿರದೆ ಇರಲಿಲ್ಲ. ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ವೃಕ್ಷದೇವತೆಗಳ ಚಿತ್ರಣ ವಿಪುಲವಾಗಿದೆ. 'ಸನಾತನವಾದ ಅಶ್ವತ್ಥ' ಆ ಕಾಲದ ಕಲ್ಪನೆಯೇ. ವೃಕ್ಷಪೂಜೆ, ನಾಗಪೂಜೆ, ಲಿಂಗಪೂಜೆಗಳು ನಮ್ಮ ಸಂಪ್ರದಾಯದಲ್ಲಿ ಸೇರಿಯೇ ಬಂದಿವೆ. ಪ್ರಾಚೀನ ಶಿವದೇವಾಲಯಗಳಲ್ಲಿ 'ಸ್ಥಳವೃಕ್ಷ'ಗಳಿರುವುದನ್ನು ಎಲ್ಲರೂ ಬಲ್ಲರು. ಹಾವಿಗೂ ಮರಕ್ಕೂ ಇರುವ ಸಂಬಂಧ ತೀರ ಹಳೆಯದು. ಪ್ರಾಚೀನ ಮನೋವೃತ್ತಿಯಲ್ಲಿ ಸಣ್ಣ ಬೀಜದಿಂದ ಹೆಮ್ಮರವಾಗಿ ಬೆಳೆದು ನೂರುಕಾಲ ಇರುವ ಮರವನ್ನೇ ದೇವರೆಂದು ಬಗೆದು ಪೂಜಿಸುವ ಪದ್ಧತಿ ಅನಿವಾರ್ಯವಾಗಿ ಒದಗಿ ಬರುತ್ತದೆ. ಬಹುಕಾಲ ಪೂಜಿಸುತ್ತಿದ್ದ ಮರ ಒಣಗಿ ಬಿದ್ದಾಗ, ಅದರ ಕೊಂಟನ್ನು ಬಿಸಾಡದೆ, ಜೋಪಾನವಾಗಿ ಉಳಿಸಿಕೊಂಡು ಅದನ್ನೇ ಪೂಜಿಸುವ ಪದ್ಧತಿಯೂ ಸಹಜವೇ. ಹಳೆಯ ಮರದ ಪ್ರತಿನಿಧಿಯಲ್ಲವೆ ಆ ಕೊಂಟು? ತಮಿಳಿನಲ್ಲಿ ಲಿಂಗಕ್ಕೆ 'ಕಂತಲಿ' ಎನ್ನುವ ಮಾತಿದೆ. ಈ ಮಾತಿನ ಮೊದಲ ಭಾಗವಾದ 'ಕಂತು' ಎಂದರೆ ಮರದ ಕೊಂಟೇ; ಮುಂದಿನ ಭಾಗವಾದ ಅಲಿ ಎಂದರೆ ಪ್ರತಿನಿಧಿ, ಸಂಕೇತ. ವೃಕ್ಷವನ್ನು ಪ್ರತಿನಿಧಿಸುವ ಅದರ ಕೊಂಟು, ದಾರುಲಿಂಗ. ಇದನ್ನು ಅನುಕರಿಸಿ, ಇನ್ನಷ್ಟುಕಾಲ ಉಳಿದಿರಲೆಂದು, ಕಲ್ಲಿನ ಕೊಂಟುಗಳನ್ನು ಕಡೆದಿಟ್ಟಾಗ ಅವು ಶಿಲಾಲಿಂಗಗಳಾದುವು. ಲಿಂಗವೆಂದರೂ ಸಂಕೇತವೇ ಅಲ್ಲವೇ? ಲಿಂಗ ವೃಕ್ಷದ ಸಂಕೇತ. ಅದಕ್ಕೆ ನಾಗಾಭರಣಗಳನ್ನು ಮಾಡಿರಿಸಿ 'ನಾಗಲಿಂಗ'ಗಳನ್ನೂ ಸಿದ್ಧಗೊಳಿಸಿದಾಗ ವೃಕ್ಷಾರಾಧನೆಯಲ್ಲಿ ನಾಗಪೂಜೆಯ ಪ್ರಸಕ್ತಿಯನ್ನು ಒತ್ತಿಹೇಳಿದಂತಾಯಿತಷ್ಟೆ.

ಇಲ್ಲಿ ಯೋನಿಯ, ಪಾಣಿವಟ್ಟದ, ಪ್ರಸ್ತಾಪವಿಲ್ಲ. ಪ್ರಾಚೀನ ಶಿವಲಿಂಗಗಳು ಕೇವಲ ಕಂಬಗಳೇ, ಕೊಂಟುಗಳೇ; ಬರಿಯ ನಾಳ (ಚಿತ್ರ 57, 58). ತಿರುನತ್ತಿಯಾಂಗುಡಿಯ ಬಳಿಯಿರುವ ಕನ್ರಪ್ಪೂರ್ ಎಂಬ ಪ್ರಾಚೀನ ಶೈವ ಕ್ಷೇತ್ರದಲ್ಲಿ ಶಿವನು ಮರದ ಕೂಟವಾಗಿಯೇ ಕಾಣಿಸಿಕೊಂಡನೆಂಬ ಕಥೆಯಿರುವುದನ್ನು



ಚಿತ್ರ 57
ಸ್ಥಾಣುಲಿಂಗ
ಪಾಣಿವಟ್ಟಿಲ್ಲದ ಬರಿಯ ನಾಳ



ಚಿತ್ರ 58
ಸ್ಥಾಣುಲಿಂಗ
ಮಾಮಲ್ಲಪುರದ ತ್ರಿಮೂರ್ತಿ
ಗುಹೆಯಲ್ಲಿರುವ ಶಿವಲಿಂಗ.
ಹಿಂಬದಿಯ ಗೋಡೆಯ ಮೇಲೆ
ವ್ಯಕ್ತಶಿವನ ಶಿಲ್ಪವಿದೆ.
ಸುಮಾರು ಏಳನೆಯ
ಶತಮಾನದ ಕೃತಿ

ಇಲ್ಲಿ ಗಮನಿಸಬೇಕು. ಹಾಗೆಂದೇ ಶಿವನಿಗೆ ಸ್ಥಾಣುವೆಂದು ಹೆಸರು. ಸ್ಥಾಣುವೆಂದರೆ ಮರದ ಕೊಂಟು. ಶಿವನ ಸ್ತುತಿಯೊಂದು ಇದನ್ನು ಸ್ವಾರಸ್ಯವಾಗಿ ನಿರೂಪಿಸಿದೆ —

> ಯಃ ಸ್ಥಾಣುರಪ್ಯತಿತರಾಂ ಯಥೇಪ್ಸಿತಾರ್ಥಪ್ರದೋ ಗುಣ್ಯೈರ್ಜಗತಾಂ ।
> ಕಲ್ಪದ್ರುಮಮತನುಮಥಃ ಕರೋತಿ ತಸ್ಮೈ ಶಿವಾಯ ನಮಃ ॥

ಶಿವನೇನೋ ಸ್ಥಾಣುವೇ, ಮರದ ಕೊಂಟೇ; ಆದರೆ ತನ್ನ ಗುಣಗಳಿಂದಾಗಿ ಜಗತ್ತಿನ ಎಲ್ಲ ಬಯಕೆಗಳನ್ನೂ ಪೂರೈಸುತ್ತ ಕಲ್ಪವೃಕ್ಷವನ್ನೂ ಮೀರಿಸಿದ್ದಾನೆ ಎಂದು ಈ ಸ್ತುತಿಯ ತಾತ್ಪರ್ಯ. ಶಿವನನ್ನು ವಿಶಾಲಾಕ್ಷ ಎಂದಿರುವುದು ಈ ಅರ್ಥದಲ್ಲಿಯೇ; ಹರಡಿಕೊಂಡ ಕೊಂಬೆಗಳಿರುವ ಮರವೇ ವಿಶಾಲಾಕ್ಷ. ವೈದಿಕ ಯಜ್ಞಯಾಗಾದಿಗಳ ಸಂದರ್ಭದಲ್ಲಿ ಯೂಪದ ಬಳಕೆಯಿದ್ದಿತಷ್ಟೆ. ಆಪ್ರೀಸೂಕ್ತಗಳಲ್ಲಿ (ಋಗ್ವೇದ, 1, 17, 11; 3, 8, 1; 3, 6, 11) ಯೂಪವನ್ನು ವನಸ್ಪತಿ (ಎಂದರೆ ಮರ) ಎಂದೇ ಕರೆದಿದ್ದಾರೆ; ಅದನ್ನು 'ಸಹಸ್ರವಲ್ಕ' (ಎಂದರೆ ಸಾವಿರ ಕೊಂಬೆಗಳ ಮರ) ಎಂದೂ ನಿರ್ದೇಶಿಸಿದ್ದಾರೆ. ಶಿವನ ಆಯುಧಗಳಾದ ಶೂಲ, ತ್ರಿಶೂಲಗಳೂ, ಶಿವನ ಮೂರ್ತಿಯಾದ ಲಿಂಗವೂ ವೈದಿಕ ಋಷಿಗಳ ಯೂಪದ ರೂಪಾಂತರಗಳೇ ಎಂದರೆ ತಪ್ಪಾಗುವುದಿಲ್ಲ; ಯೂಪವು ಪ್ರಾಚೀನ ಸ್ಥಾಣುವಿನ ಕಲ್ಪನೆಯನ್ನೇ ಅವಲಂಬಿಸಿದುದು. ಇದನ್ನು ಸ್ಥೂಣವೆಂದು ಕರೆದುದೂ ಇದೇ ನೆಲೆಯಲ್ಲಿ. ಭುವನೇಶ್ವರದ ಲಿಂಗರಾಜಗುಡಿಯಲ್ಲಿ ಮೂಲ ಶಿವಮೂರ್ತಿ ಬರಿಯ ಒಂದು ಕಲ್ಲು ಕಂಬವೇ.

ಈ ನೆಲೆಯಲ್ಲಿ ಶಿವನಿಗೆ ವ್ಯಕ್ತಮೂರ್ತಿಗಳನ್ನೂ ಅಳವಡಿಸಿದ್ದಿದೆ. ಲಿಂಗೋದ್ಭವ ಮೂರ್ತಿಯ ಪ್ರಸ್ತಾಪ ಆಗಲೇ ಬಂದಿತು. (ಚಿತ್ರ 59, 60). ಏಕಪಾದಮೂರ್ತಿಯೆಂಬುದು ಇನ್ನೊಂದು ಸ್ವಾರಸ್ಯವಾದ ಕಲ್ಪನೆ (ಚಿತ್ರ 61, 62). ಇಲ್ಲಿ ಶಿವನಿಗೆ ಮೇಲ್ಭಾಗದಲ್ಲಿ ಮನುಷ್ಯಾಕಾರವಿದ್ದು ಸೊಂಟದ ಕೆಳಗೆ ಎರಡೂ ಕಾಲುಗಳು ಕಲೆತು ಒಂದೇ ಕಾಲಿರುತ್ತದೆ; ಇದು ಏಕಪಾದಮೂರ್ತಿ. ಅಜ–ಏಕಪಾದ್ ಎನ್ನುವ ಮಾತನ್ನು ವೈದಿಕವಾಙ್ಮಯದಲ್ಲಿಯೇ ಕಾಣುತ್ತೇವೆ. ಅಜವೆಂದರೆ ಆಡು, ಟಗರು; ಅಗ್ನಿದೇವತೆಗೆ ಸ್ವಭಾವದಲ್ಲಿ ಸಂಬಂಧಿಸಿದ ಪ್ರಾಣಿ. ಬಿರುಗಾಳಿಯ ದೇವತೆಯೂ ಹೌದು. ಇದನ್ನು ಋಗ್ವೇದ 'ದಿವೋ ಧರ್ತಾ' (ಆಕಾಶವನ್ನು ಎತ್ತಿಹಿಡಿದಿರುವವನು) ಎಂದು ನಿರ್ದೇಶಿಸಿದೆ (10, 65, 18). ಏಕಪಾದ ಮೂರ್ತಿಯಲ್ಲಿ ಸೊಂಟದ ಎಡ–ಬಲ ಪಾರ್ಶ್ವ ಗಳಿಂದ ಬ್ರಹ್ಮನೂ ವಿಷ್ಣುವೂ ಹೊರಟುಕೊಂಡಂತೆ ನಿರೂಪಣೆಯಿರುತ್ತದೆ (ಚಿತ್ರ 61). ಇಡೀ ಚಿತ್ರ ಮರವನ್ನೇ ನೆನಪಿಗೆ ತರುವುದು ಸ್ವಾರಸ್ಯವಾದ ವಿವರ. ಅಷ್ಟುಮಾತ್ರವಲ್ಲ, ಸೈಂಧವ ಸಂಸ್ಕೃತಿಯ ಮುದ್ರೆಗಳಲ್ಲಿ ಮೊಹೆನ್‌ಜೊದಾರೋದಲ್ಲಿ ದೊರೆತ ಒಂದು ನಿರೂಪಣೆ ಈ ಏಕಪಾದಮೂರ್ತಿಯ,

ಚಿತ್ರ 59 ಚಿತ್ರ 60
ಲಿಂಗೋದ್ಭವ ಮೂರ್ತಿ

ಚಿತ್ರ 61

ಚಿತ್ರ 62

ಏಕಪಾದಮೂರ್ತಿ

ಚಿತ್ರ 63

ಮೊಹೆನ್‌ಜೊದಾರೋ ಮುದ್ರೆ

ವೃಕ್ಷದ ಕಲ್ಪನೆಗಳನ್ನು ಸೊಗಸಾಗಿ ಅಳವಡಿಸಿಕೊಂಡಿದೆ (ಚಿತ್ರ 63). ಒಂದೇ ಕೊಂಟಿನಿಂದ ನಡುಪಟ್ಟಿಯ ಬಳಿ ಎರಡೂ ಕಡೆಗಳಲ್ಲಿ ಎರಡು ಏಕಶೃಂಗಿ ಪ್ರಾಣಿಗಳ ತಲೆಗಳು ಹೊರಟು ಕೊಂಡಿವೆ; ಮೇಲ್ಭಾಗದಲ್ಲಿ ಅರಳೀಮರದ ಎಲೆಗಳು ಹರಡಿವೆ. ಪ್ರಾಚೀನ ನಾಗ–ನಾಗಿನಿ, ಯಕ್ಷ ಯಕ್ಷಿಯರ ಚಿತ್ರಣದಲ್ಲಿಯೂ ಮೇಲ್ಭಾಗ ಮನುಷ್ಯಾಕಾರವಾಗಿದ್ದು ಕೆಳಭಾಗ ಹಾವಿನ ಬಾಲದಂತೆ ಕಾಣಿಸುವ ವಾಡಿಕೆಯಿದ್ದಿತು; ಹಾವು ಕೂಡ 'ಅಜ ಏಕಪಾದ್' ಅಲ್ಲವೆ? ತಂತ್ರಸಂಪ್ರದಾಯದ ಕುಂಡಲಿನೀ ಶಕ್ತಿಯ ಕಲ್ಪನೆಗೂ ಇದಕ್ಕೂ ಇರುವ ಸಂಬಂಧವನ್ನು ಗಮನಿಸಬಹುದು.

ಏಕಪಾದಮೂರ್ತಿಗಳಲ್ಲಿ ಇಕ್ಕೆಲಗಳಲ್ಲಿ ಬ್ರಹ್ಮ, ವಿಷ್ಣು ಇವರು ಅಂಜಲಿಬದ್ಧರಾಗಿ ಹೊರಟು ಕೊಂಡಿರುವುದು ಸಾಮಾನ್ಯವಾದರೂ ಆಂಧ್ರಪ್ರದೇಶದಲ್ಲಿ ಕೇವಲ ಶಿವನೇ ಏಕಪಾದಮೂರ್ತಿಯಾಗಿರುವ ನಿದರ್ಶನಗಳಿವೆ. ಶ್ರೀಕಾಕುಳಂ ಜಿಲ್ಲೆಯ ಮುಖಲಿಂಗಗ್ರಾಮದ ಸೋಮೇಶ್ವರನ ಗುಡಿಯಲ್ಲಿ ಕೋಷ್ಠದಲ್ಲಿರುವ ಈ ಏಕಪಾದಮೂರ್ತಿಗೆ ಭೈರವರೂಪದ ಮುಖ, ಕೋರೆ ದಾಡೆಗಳು; ನಾಗಗ್ರೈವೇಯಕ (ಎಂದರೆ ಹಾವಿನ ಮಾಲೆ), ಸರ್ಪ ಯಜ್ಞೋಪವೀತ (ಹಾವಿನದೇ ಉಪವೀತ), ನಡುವಿಗೆ ಜಿಂಕೆಯ ತಲೆಯಿರುವ ಕಟಿಬಂಧ ಇವೆ. ಕೈಗಳಲ್ಲಿ ತ್ರಿಶೂಲ, ನಾಗ, ಕಮಂಡಲು, ಅಕ್ಷಮಾಲೆಗಳಿವೆ (ಚಿತ್ರ 62).

ಶಿವನಿಗೂ ಪರ್ವತಕ್ಕೂ ಇರುವ ಸಂಬಂಧವನ್ನು ಈಗಾಗಲೇ ಗಮನಿಸಿದ್ದೇವಲ್ಲವೆ? ಅವನು ಗಿರಿಶ, ಮಲೆದೇವರು, ಮಲ್ಲೇದೇವರು, ಮಲ್ಲೇಶ್ವರ. ಹಿಮಾಲಯದಲ್ಲಿರುವ ಕೈಲಾಸ ಶಿವನ ನಿವಾಸಸ್ಥಳ ಎಂದು ನಂಬಿಕೆಯಿದೆ. ಈ ಕೈಲಾಸ ಶಿಖರವು ಲಿಂಗಾಕಾರವಾಗಿಯೇ ಇದೆ. ಹಲವಾರು ಶಿವಕ್ಷೇತ್ರಗಳಲ್ಲಿ ಬೆಟ್ಟಗುಡ್ಡಗಳ ಮೇಲೇ ಶಿವಲಿಂಗಗಳನ್ನು ಪ್ರತಿಷ್ಠೆಮಾಡಿದ್ದಾರೆ; ಈ ಬೆಟ್ಟಗುಡ್ಡಗಳೂ ಶಿವನ ಆಕೃತಿಗಳೇ ಎಂದು ಕಲ್ಪನೆ. ಬೆಟ್ಟಗುಡ್ಡಗಳನ್ನು ಪೂಜಿಸುವ ಸಂಪ್ರದಾಯವೂ ತುಂಬ ಹಳೆಯದು; ಮುಂಡ, ಮಿಹಿಲಿ, ಸಂತಾಲ ಕೊರ್ವ, ಕೋಲ, ಮಲೆಪಂತುರನ್, ಕುರುಬ, ತೋಡ ಮೊದಲಾದ ಆದಿವಾಸಿಗಳಲ್ಲಿ ಈ ಶ್ರದ್ಧೆ

ಇಂದಿಗೂ ಇದೆ. ನಮ್ಮ ದೇಶವಲ್ಲಿ ಮಾತ್ರವಲ್ಲ, ಗ್ರೀಕರಲ್ಲಿ, ಕೆಲ್ಟಿಕ್‌ಜನರಲ್ಲಿ, ಸೆಮಿಟಿಕ್ ಜನರಲ್ಲಿ, ಕೊರಿಯದಲ್ಲಿ, ಪ್ರಾಚೀನ ಪರ್ಶಿಯದಲ್ಲಿ, ಜಪಾನಿನಲ್ಲಿ ಬೆಟ್ಟಗಳನ್ನು ದೇವರೆಂದೋ ದೇವರ ಆವಾಸಸ್ಥಾನವೆಂದೋ ಪೂಜಿಸುವ ಪದ್ಧತಿಯಿದ್ದುದು ತಿಳಿದುಬರುತ್ತದೆ. ನಮ್ಮ ಕುಲಪರ್ವತಗಳು (ರೈವತಕ, ವಿಂಧ್ಯ, ಸಹ್ಯ, ಕುಮಾರ, ಮಲಯ, ಶ್ರೀಪರ್ವತ, ಪಾರಿಯಾತ್ರ), ಗ್ರೀಕರ ಒಲಿಂಪಿಸ್, ಕೆಲ್ಟಿಕ್ ಜನರ ಪೊಯ್‌ನಿನಸ್ (ಆಲ್‌ಪೈನ್ ದೇವತೆ), ಬೆಬಿಲೋನಿಯನ್ ಜನರ ಎನ್‌ಲಿಸ್, ಪರ್ಶಿಯನ್ನರ ಅಲ್‌ಬೂರ್ಜ್ (ಹರಬೆರೆಜೈತಿ), ಜಪಾನೀಯರ ಕಮಿದೇವತೆಗಳು, ಚೀನೀಯರ ಷೆನ್ ಮೊದಲಾದುವೆಲ್ಲ ಈ ಪ್ರಾಚೀನ ಮನೋವೃತ್ತಿಯ ನಿದರ್ಶನಗಳೇ. ದಕ್ಷಿಣಭಾರತದಲ್ಲಂತೂ ಬೇರೂರಿ ಬೆಳೆದ ಭಾವನೆ ಇದು. ವೈದಿಕವಾಙ್ಮಯದಲ್ಲಿ ಬೆಟ್ಟಗುಡ್ಡಗಳಿಗೆ ಇಷ್ಟು ಪ್ರಾಶಸ್ತ್ಯವಿದ್ದಂತೆ ಕಂಡುಬರುವುದಿಲ್ಲ; ಆ ಕಾಲಕ್ಕೂ ಮೊದಲಿನ ಮನೋವೃತ್ತಿಯಿದು. ಋಗ್ವೇದದಲ್ಲಿ ಅಲಕ್ಷ್ಮಿಯನ್ನು ಬೆಟ್ಟಕ್ಕೆ ಓಡಿಸುವ ತವಕವಿದ್ದ ಉಲ್ಲೇಖವಿದೆ (10, 12, 155, ಅರಾಯಿ ಕಾಣೇ ವಿಕಟೇ ಗಿರಿಂ ಗಚ್ಛ ಸದಾನ್ವೇ). ಆರ್ಯದೇವತೆಗಳು ಬೆಟ್ಟದ ಮೇಲಿ ಇರುವವರಲ್ಲ, ಓಡಿಯಾಡುವವರಲ್ಲ; ಅದು ಅನಾರ್ಯದೇವತೆಗಳ ವೈಶಿಷ್ಟ್ಯ. ಹಾಗೆಂದೇ ಅಲಕ್ಷ್ಮಿಯನ್ನು ಅವರು ಬೆಟ್ಟಕ್ಕೆ ಓಡಿಸಿದ್ದು! ಶಿವನ ಹಿನ್ನೆಲೆಯನ್ನು ಪರಿಶೀಲಿಸಿದರೆ ಅವನು ಬೆಟ್ಟದ ದೇವತೆಯಾಗಿದ್ದುದು ಸಹಜವೇ. ಅವನಿಗೂ ಬೆಟ್ಟಕ್ಕೂ ತಾದಾತ್ಮ್ಯವನ್ನು ಕಲ್ಪಿಸಿದುದೂ ಸಹಜವೇ.

ಹೀಗೆ ಪೂಜಾಸ್ಥಾನಗಳಾದ ಬೆಟ್ಟಗಳನ್ನು ಆದಿವಾಸಿಜನರು ಸಣ್ಣಸಣ್ಣ ಕಲ್ಲುಗಳಲ್ಲಿ ಪ್ರತಿನಿಧಿಸಿ ತಮ್ಮ ಬಿಡದಿಗಳ ಬಳಿಯಿಟ್ಟುಕೊಂಡು ಪೂಜೆಮಾಡುತ್ತಿದ್ದರು. ತೋಡರಲ್ಲಿ, ಬಡಗರಲ್ಲಿ, ಕೇರಳದ ಆದಿವಾಸಿಗಳಲ್ಲಿ, ಕಾಡುಕುರುಬರಲ್ಲಿ, ಸೋಲಿಗರಲ್ಲಿ ಈ ಪದ್ಧತಿಯನ್ನು ಇಂದಿಗೂ ಕಾಣಬಹುದು. ಬೆಟ್ಟವನ್ನೇ ದೈವವೆಂದು ಬಗೆದಾಗ ಆ ಬೆಟ್ಟದ ಆಕೃತಿಯ ಕಲ್ಲನ್ನು ಪೂಜೆಗಿರಿಸಿಕೊಳ್ಳುವುದು ಸಂಕೇತವೇ, ಲಿಂಗವೇ. ಯಾವುದೇ ಬೆಟ್ಟವಾಗಲಿ, ಅದರ ಸ್ಥೂಲಾಕೃತಿ ನಮ್ಮ ಲಿಂಗಾಕಾರವಾಗಿಯೇ ಇರುತ್ತದೆ. ಹೀಗೆ ಬೆಟ್ಟ ದೇವರ ಸಂಕೇತವಾಗಿ ಲಿಂಗವು ಮೈದಳೆಯಿತು. ಲಿಂಗಗಳಲ್ಲಿ ಸ್ಥಾವರ, ಜಂಗಮ ಎಂದೆರಡು ಬಗೆಗಳು (ಸ್ಥಾವರಂ ಜಂಗಮಂ ಚೈವ ದ್ವಿವಿಧಂ ಲಿಂಗಮುಚ್ಯತೆ); ಸ್ಥಾವರವೆಂದರೆ ಗುಡ್ಡದಂತೆ ಅಲುಗಾಡದೆ ಇರುವುವು; ಜಂಗಮವೆಂದರೆ ಗುಡ್ಡದಂತಿರುವ ಸಣ್ಣಸಣ್ಣಕಲ್ಲುಗಳು, ಅಲ್ಲಿಂದಿಲ್ಲಿಗೆ ಒಯ್ಯುವಂಥವು. ಜಂಗಮಲಿಂಗಕ್ಕಿಂತಲೂ ಸ್ಥಾವರ ಲಿಂಗವೇ ಶ್ರೇಷ್ಠ (ಸ್ಥಾವರಂ ಜಂಗಮಾಚ್ಛ್ರೇಷ್ಠಂ), ಎಂದರೆ ಪ್ರತಿನಿಧಿಯಾದ ಕಲ್ಲಿಗಿಂತಲೂ ಪ್ರತಿನಿಧಿಸಲ್ಪಟ್ಟ ಗುಡ್ಡವೇ ಶ್ರೇಷ್ಠ. ಜಂಗಮಲಿಂಗವನ್ನು ಕಲ್ಲಿನಲ್ಲಿ, ರತ್ನದಲ್ಲಿ, ಲೋಹಗಳಲ್ಲಿ, ಮಣ್ಣಿನಲ್ಲಿ ಮಾಡುತ್ತಾರ (ಶೈಲಜಂ ರತ್ನಲೋಹಂ ಚ ಮೃನ್ಮಯೇನ್ನೈವ ಕಾರಯೇತ್).

ಶ್ಮಶಾನೇಶ್ವರ

ಸತ್ತವರು 'ಮೇಲೆ ಹೋಗುತ್ತಾರೆ'; ಹೆಣಗಳನ್ನು ಬೆಟ್ಟಗುಡ್ಡಗಳ ಮೇಲೆಳೆಯುವ ಪದ್ಧತಿ ಮಾನವ ಸಂಸ್ಕೃತಿಯ ಅವತರಣಿಕೆಯಲ್ಲಿಯೇ ಇದ್ದಿತು. ಈ ಪದ್ಧತಿ ಮುಂದೆ ಹೆಣಗಳನ್ನು ಸುಡುವ, ಹುಗಿಯುವ ಸಂಪ್ರದಾಯಗಳ ಪ್ರಾಬಲ್ಯದಿಂದ ಮರೆಯಾದಾಗಲೂ ಸತ್ತವನನ್ನು ಸುಟ್ಟ ಅಥವಾ ಭೂಗತಮಾಡಿದೆ ಗುಡ್ಡದ ಆಕೃತಿಯನ್ನು ನಿರ್ಮಿಸುವುದು ಉಳಿದುಕೊಂಡಿತು. ಸಮಾಧಿಶಿಲೆಗಳು, ಬೃಂದಾವನಗಳು ಸಮಾಧಿ ಮಂಟಪಗಳು ವಾಡಿಕೆಗೆ ಬರುವ ಮೊದಲು ಒರಟಾಗಿಯೇ ಕಲ್ಲುಮಣ್ಣುಗಳನ್ನು ಗುಡ್ಡದಾಕಾರದ ಪೇರಿಸಿಬಿಡುತ್ತಿದ್ದರು. ಇದು ಪ್ರಪಂಚದ ಹಲವಾರು ದೇಶಗಳಲ್ಲಿ ತುಂಬ ಹಿಂದೆ ಪ್ರಚಲಿತವಾಗಿದ್ದಿತು ಸತ್ತವನ ಪ್ರೇತ ಅಲ್ಲಿ ನೆಲೆಸಿರುವುದರಿಂದ ಬದುಕಿರುವವರು ಆ ಸ್ಥಳದ ಮೇಲೆ ಓಡಿಯಾಡಬಾರದೆಂದ

ಒಂದು ಉದ್ದೇಶ; ಗೌರವ, ಭೀತಿ ಎರಡೂ ಅಲ್ಲಿ ಪ್ರಸಕ್ತವಾಗಿರುತ್ತಿದ್ದುವು. ವರ್ಷಕ್ಕೊಮ್ಮೆ ಮೃತಕನಿಗೆ ಶ್ರಾದ್ಧಾದಿ ಕರ್ಮಗಳನ್ನು ನಡೆಸಬೇಕಾದ ಸ್ಥಳದ ನಿರ್ದೇಶನಕ್ಕೆ ಇದು ಅನುಕೂಲವೆಂಬುದು ಇನ್ನೊಂದು ಉದ್ದೇಶ. ಅಂತೂ, ಸಮಾಧಿಯು ಸ್ಪಷ್ಟಗೊಳ್ಳುವ ಮೊದಲು ಸತ್ತವನನ್ನು ಒಪ್ಪ ಮಾಡಿದ ಕಡೆ ಸಣ್ಣ ಗುಡ್ಡವೊಂದನ್ನು ಕಟ್ಟುವ ಪದ್ಧತಿಯಿದ್ದಿತು. ಸತ್ತವನು ರಾಜನೋ ಯತಿಯೋ ಮಾಂತ್ರಿಕನೋ ಶೂರನೋ ಆಗಿದ್ದರೆ ಗುಡ್ಡ ದೊಡ್ಡದೇ ಇರುತ್ತಿದ್ದಿತು. ಸಾಮಾನ್ಯ ಜನರ ಗುಡ್ಡದಂತಿರದೆ ಅಲಂಕರಣಗಳಿಂದ ಕೂಡಿರುತ್ತಿದ್ದಿತು. ಸತ್ತವನ ಸಂಬಂಧಿಗಳು ಮಾತ್ರವಲ್ಲದೆ ಊರವರೆಲ್ಲ ಹೋಗಿ ಅಲ್ಲಿ ಹರಕೆಹೊತ್ತು ಮರ್ಯಾದೆ ಸಲ್ಲಿಸಲು ಯೋಗ್ಯವಾದಂಥ ಕಟ್ಟಡವಾಗಿರುತ್ತಿದ್ದಿತು. ಶತಪಥ ಬ್ರಾಹ್ಮಣದಲ್ಲಿ ಅಸುರ ಜನರು ತಮ್ಮಲ್ಲಿ ಸತ್ತವರನ್ನು ಒಪ್ಪಮಾಡಿದ ಸ್ಥಳದಲ್ಲಿ ಸ್ತೂಪಾಕಾರವಾದ ಗುಡ್ಡಗಳನ್ನು ಕಟ್ಟಿ ಅದನ್ನು ಪೂಜಿಸುತ್ತಿದ್ದರೆಂದು ಉಲ್ಲೇಖವಿದೆ.

ಶಿವದೇವಾಲಯಗಳನ್ನು ಶ್ಮಶಾನ (ತಮಿಳಿನಲ್ಲಿ ಮಯಾಣಂ) ಎನ್ನುತ್ತಾರೆ ಅಲ್ಲವೆ? ವೀರವೈಷ್ಣವರು ಶಿವ ದೇವಾಲಯಕ್ಕೆ ಹೋಗದಿರಲು ಈ ನಂಬಿಕೆಯೇ ಕಾರಣ; ಹಾಗೆ ಹೋದವರೂ ಮನೆಗೆ ಬಂದೊಡನೆ ಕಾಲುತೊಳೆದುಕೊಳ್ಳುವ ವಾಡಿಕೆಯೂ ಇದೆ! ಶಿವನನ್ನು ಶ್ಮಶಾನವಾಸಿಯೆಂದು ಕರೆದು, ಕಾಶಿಯನ್ನು ಮಹಾ ಶ್ಮಶಾನ ಎಂದು ವ್ಯವಹರಿಸುತ್ತಾರೆ. ದಕ್ಷಿಣದೇಶದಲ್ಲಂತೂ ಶಿವದೇವಾಲಯಗಳು ಮೇಲೆ ಹೇಳಿದ ಸಮಾಧಿಮಂದಿರಗಳೇ ಆಗಿ ಆರಂಭವಾದುವು ಎಂದು ಹೇಳುತ್ತಾರೆ. ತಮಿಳುದೇಶದಲ್ಲಿ ನಾಟುಕೋಟಿ ಚೆಟ್ಟಿಯಾರರು ಹಳೆಯ ಶಿವದೇವಾಲಯಗಳನ್ನು ದುರಸ್ತಿಮಾಡಿಸುವಾಗ ಗರ್ಭಗುಡಿಯಡಿಯಲ್ಲಿ ಬೂದಿ, ಮೂಳೆಗಳು, ಮಡಕೆ ಚೂರುಗಳು ದೊರೆತ ನೂರಾರು ನಿದರ್ಶನಗಳಿವೆ (ನೋಡಿ, ಕೆ. ಆರ್. ಸುಬ್ರಹ್ಮಣ್ಯಂ, The Origin of Saivism and its History in the Tamil Land, ಮದ್ರಾಸು, 1929, ಪು. 29–30). ಸತ್ತವನನ್ನು ಒಪ್ಪಮಾಡಿದ ಕಡೆ ಕಟ್ಟಿದ ಗುಡಿಗೆ ತಮಿಳಿನಲ್ಲಿ 'ಪಲ್ಲಿಪ್ಪಡೈ' ಎಂದು ಹೆಸರು. 'ಪಲ್ಲಿ' ಎನ್ನುವ ಮಾತಿಗೆ ನಿದ್ರೆ ಎಂದರ್ಥ; ಸತ್ತವನು ಮಾಡುವ ದೀರ್ಘನಿದ್ರೆ. ತಮಿಳು ಶಾಸನಗಳಲ್ಲಿ ಹಳೆಯ ಹಲವಾರು ಶಿವಾಲಯಗಳನ್ನು ಪಲ್ಲಿಪಡೆಗಳೆಂದೇ ನಿರ್ದೇಶಿಸಿದ್ದಾರೆ. ಚಿತ್ತೂರಿನ ಬಳಿ ಪೊನ್ನಿ ಹೊಳೆಯ ಮೇಲಿರುವ ಮೇಲ್ಪಾಡಿಯಲ್ಲಿರುವ ಚೋಳೇಶ್ವರಾಲಯವು (ಅರಿಂಜಿಗೈ ಈಶ್ವರಂ) ಆರ್ರೂರಿನಲ್ಲಿ ತೀರಿಕೊಂಡ ಆರೂರ್–ತುಂಜಿನ ದೇವರ್ (ಇವನಿಗೇ ಅರಿಂಜಿಗೈ ಎಂಬ ಹೆಸರಿದ್ದಿತು) ಎಂಬ ರಾಜನ ಪಲ್ಲಿಪಡೈ (ಸಮಾಧಿ ಕೋಯಿಲ್) ಯಾಗಿ ಕಟ್ಟಲಾಯಿತೆಂದು ಅವನ ಮೊಮ್ಮಗ ಮೊದಲನೆಯ ರಾಜರಾಜನ ಶಾಸನವೊಂದು ತಿಳಿಸುತ್ತದೆ. ಹೀಗೆಯೇ ಶೋಳಪುರಂನಲ್ಲಿರುವ ಶಿವಾಲಯವನ್ನು ರಾಜಾದಿತ್ಯ ಗಂಗನು ತನ್ನ ತಂದೆಯ ಸಮಾಧಿಯ ಮೇಲೆ ಕಟ್ಟಿಸಿದ್ದು; ಇದು ಒಂಬತ್ತನೆಯ ಶತಮಾನದ ಮಾತು. ತೊಂಡಮಾನಾಡಿನಲ್ಲಿರುವ ಶಿವದೇವಾಲಯವೂ ಹೀಗೆಯೇ ಚೋಳರಾಜ ಒಂದನೆಯ ಆದಿತ್ಯನ ಸಮಾಧಿಯ ಮೇಲೆ ಕಟ್ಟಿಸಿದ್ದು. ಯತಿಗಳೂ ಗುರುಗಳೂ ಸತ್ತರೆ ಅವರ ಸಮಾಧಿಯ ಮೇಲೆ ಶಿವಲಿಂಗವನ್ನಿರಿಸಿ, ಆ ಗುದ್ದುಗೆಯನ್ನು ಪೂಜಿಸುವ ಪದ್ಧತಿ ಹಲವಾರು ಜನಾಂಗಗಳಲ್ಲಿ ಇಂದಿಗೂ ಉಳಿದು ಬಂದಿದೆ. ಈ ಶಿವಲಿಂಗವು ಗುಡ್ಡದ ಸಂಕೇತ; ಗುಡ್ಡವು ಕಾಲವಾದವರು ಸೇರುವ ಸ್ಥಳ – ಮಹಾಕಾಲ. ಶಿವನಗುಡಿ ಆರಂಭವಾದುದು ಈ ನೆಲೆಯಲ್ಲಿ ಎಂದು ತೋರುತ್ತದೆ.

ಮೊದಲಿಗೆ ಶ್ಮಶಾನವೆನ್ನುವ ಮಾತು ಸಮಾಧಿಗದ್ದುಗೆಗೆ ಮಾತ್ರವೇ ಸೀಮಿತವಾಗಿದ್ದಿತೆಂದು ಶತಪಥ ಬ್ರಾಹ್ಮಣದಲ್ಲಿ ಬರುವ ಪ್ರಸ್ತಾಪವನ್ನು ಈಗಾಗಲೇ ನೋಡಿದ್ದೇವೆ. ಈ ಗದ್ದುಗೆಯಲ್ಲಿಟ್ಟ ಶಿವಲಿಂಗವೇ

'ಶ್ಮಶಾನೇಶ್ವರ'. ಶ್ಮಶಾನೇಶ್ವರ ಶಿವ ಉತ್ತರ ದೇಶದಲ್ಲಿಯೂ ದಕ್ಷಿಣ ದೇಶದಲ್ಲಿಯೂ ಚಿರಪರಿಚಿತನೇ. ಲಿಂಗವೆನ್ನುವ ಮಾತಿಗೆ ಎಲ್ಲವೂ ಅಳಿಯುವ ಸ್ಥಿತಿಯೆಂದೇ ಅರ್ಥಮಾಡುವುದೂ ಉಂಟು —

ಲಯಂ ಗಚ್ಛಂತಿ ಭೂತಾನಿ ಸಂಹಾರೇ ನಿಖಿಲಾನ್ಯತಃ ।
ತೇನ ಲಿಂಗಮಿತಿ ಪ್ರೋಕ್ತಂ ಸೂಕ್ಷ್ಮತ್ವಾಲ್ಲಿಂಗಮುಚ್ಯತೇ ॥

ಶಿವಾಲಯಗಳನ್ನೇ ಹೇಳುವುದೇನು, ಬೌದ್ಧರ ಸ್ತೂಪಗಳ ತಾತ್ಪರ್ಯವೂ ಇದೇ ತಾನೆ? ಇದರ ಪ್ರಸ್ತಾಪ ಹಿಂದೆಯೇ ಬಂದಿದೆ. ಇಲ್ಲಿ ಸ್ತೂಪದ ಆಕಾರವೂ ಲಿಂಗದ ಆಕಾರವೂ ಚೆನ್ನಾಗಿ ಹೊಂದಿಕೊಳ್ಳುತ್ತವೆ ಎಂದು ಗಮನಿಸಿದರಾಯಿತು. ಮದ್ರಾಸಿನ ವಸ್ತುಸಂಗ್ರಹಾಲಯದಲ್ಲಿರಿಸಿರುವ ಅಮರಾವತಿ, ಜಗ್ಗಯ್ಯಪೇಟೆ ಸ್ತೂಪಗಳ ಅವಶೇಷಗಳಲ್ಲಿ ಸಣ್ಣ ಸಣ್ಣ ಸ್ತೂಪಗಳ ಶಿಲ್ಪವೂ ಇವೆ; ಇವನ್ನು ನೋಡಿದರೆ ಲಿಂಗವೇ ನೆನಪಿಗೆ ಬರುತ್ತದೆ.

ಹೀಗೆ ಶಿವನನ್ನು ಗುಡ್ಡಗಳಲ್ಲಿ, ಬಂಡೆಗಳಲ್ಲಿ, ಕಲ್ಲುಗುಂಡುಗಳಲ್ಲಿ, ಕಲ್ಲುಗಳಲ್ಲಿ ಪ್ರತಿನಿಧಿಸುವ ಪದ್ಧತಿ ವೇದಕಾಲಕ್ಕಿಂತ ಪ್ರಾಚೀನವಾದುದು. ಇಂಥ ಪೂಜಾಶಿಲೆಗಳು ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿಯೂ ದೊರೆತಿವೆ ಅಷ್ಟೇಕೆ, ಒಂದು ಲಿಂಗವೇ ದೊರೆತಿದೆ! ನರ್ಮದಾ ನದಿಯ ಬಾಣಲಿಂಗಗಳೂ, ಸ್ಫಟಿಕಶಿಲೆಗಳೂ, ಶೈಲೋದಕದಿಂದ ಗಟ್ಟಿಮಾಡಿದ ಮರದ ತುಂಡುಗಳೂ, ನುಣುಪಾದ ಅಂಡಾಕಾರದ ಕಲ್ಲುಗಳೂ ನಮ್ಮ ಶಿವಪೂಜೆಯಲ್ಲಿ ಉಪಯೋಗಕ್ಕೆ ಬರುತ್ತವೆ, ಕಲ್ಲುಗಳಿಂದ ದೇವರನ್ನೂ, ಪಿತೃಗಳನ್ನೂ ಋಷಿಗಳನ್ನೂ ಪ್ರತಿನಿಧಿಸುವ ಪದ್ಧತಿ ಇಂದಿಗೂ ಇಲ್ಲವೇ? ಅಪರಕರ್ಮದ ಸಂದರ್ಭದಲ್ಲಿ ಸತ್ತವನನ್ನು ಕಲ್ಲಿನಿಂದ ಪ್ರತಿನಿಧಿಸಿ ಅದರ ಮುಂದೆ ವಿಧಿಗಳನ್ನೆಲ್ಲ ನಡೆಸುತ್ತಾರಷ್ಟೆ; ಋಷಿಪಂಚಮಿಯಲ್ಲಿ ಋಷಿಗಳನ್ನು ಕಲ್ಲುಚೂರುಗಳೇ ಸಂಕೇತಿಸುತ್ತವೆ. ಈ ನೆಲೆಯಲ್ಲಿ ಕಲ್ಲೇ ಲಿಂಗ (ಚಿಹ್ನೆ, ಸಂಕೇತ, ಗುರುತು), ಗುಡ್ಡದ ಆಕಾರದಲ್ಲಿರುವ ಕಲ್ಲು ಇನ್ನಷ್ಟು ವಿಶೇಷವಾದ ಮರ್ಯಾದೆ ಪಡೆಯುತ್ತದೆ. ಲಿಂಗಗಳಲ್ಲಿ ಮೂರು ವಿಧಗಳಂತೆ. ಗುಡಿಯ ವಿಮಾನ (ಗುಡ್ಡದಂತಿರುವುದು) ಸ್ಥೂಲಲಿಂಗ; ಗರ್ಭಗುಡಿಯಲ್ಲಿರುವುದು ಸೂಕ್ಷ್ಮಲಿಂಗ; ಅದರ ಮುಂದಿರುವ ಬಲಿಕಲ್ಲು ಭದ್ರಲಿಂಗ (ಸ್ಥೂಲಲಿಂಗಂ ವಿಮಾನಂ ಸ್ಯಾತ್ ಸೂಕ್ಷ್ಮಲಿಂಗಂ ಸದಾಶಿವಃ, ಬಲಿಪೀಠಂ ಭದ್ರಲಿಂಗಂ ಲಿಂಗಂ ತ್ರಿವಿಧಮುಚ್ಯತೇ).

ಸರ್ಪಾರಾಧನೆಯ ನೆಲೆಯಲ್ಲಿ ಹಾವು ವಾಸಮಾಡುವ ಹುತ್ತವನ್ನು ಹಾವಿನ ಸಂಕೇತವೆಂದು, ಪ್ರತಿನಿಧಿಯೆಂದು ಪೂಜೆಮಾಡುವ ಪದ್ಧತಿಯನ್ನೂ ಗಮನಿಸಬೇಕು. ನಾಗಪಂಚಮಿಯಂದು ಇಂದಿಗೂ ಇದು ನಡೆಯುತ್ತದೆ. ಹಾವಿನ ಪೂಜೆಗಿಂತ ಹುತ್ತದ ಪೂಜೆಯೇ ಸುಲಭ, ಸುರಕ್ಷಿತ! ಹುತ್ತವು ಲಿಂಗವಾಯಿತಷ್ಟೆ; ಹುತ್ತದ ಆಕೃತಿಯನ್ನನುಸರಿಸಿ ಲಿಂಗಗಳನ್ನು ನಿರ್ಮಿಸಿದ್ದೂ ಆಯಿತು. ಹುತ್ತವೂ ಪರ್ವತಾಕಾರವೇ ಎನ್ನಬಹುದು. ಹಲವಾರು ಗುಡಿಗಳಲ್ಲಿ ಹುತ್ತವನ್ನೇ ದೇವರೆಂದು ಬಗೆದು ಪೂಜಿಸುವುದುಂಟು. ಉತ್ತಮ ನಿದರ್ಶನವೆಂದರೆ, ತಿರುವಾರೂರಿನ ಹಳೆಯ ದೇವರು 'ವಲ್ಮೀಕನಾಥರ್' ಎನಿಸಿಕೊಳ್ಳುವ ಶಿವನೇ.

ಈ ಆಕಾರದಲ್ಲಿ ಮಣ್ಣನ್ನು, ಮರಳನ್ನು ಪೇರಿಸಿ ಲಿಂಗಗಳನ್ನು ಮಾಡುವ ಪದ್ಧತಿಯೂ ಪ್ರಾಚೀನವಾದುದು. ರಾಮೇಶ್ವರದಲ್ಲಿ ರಾಮನು ಸಿದ್ಧಪಡಿಸಿದ ಲಿಂಗ 'ಸೈಕತಲಿಂಗ'ವೆಂದು ಪ್ರತೀತಿ; ಕುಂಭಕೋಣದ ಕುಂಭೇಶ್ವರಲಿಂಗ ಮಡಕೆಯ ಚೂರುಗಳಿಂದ ಮಾಡಿದ್ದು.

ಭಾರಶಿವಲಿಂಗ

ತುಂಬ ಪ್ರಾಚೀನ ಲಿಂಗಗಳಿಗೆ ಪಾಣಿವಟ್ಟು ಇರುತ್ತಿರಲಿಲ್ಲವೆಂದು ಮೊದಲೇ ಹೇಳಿದೆವು. ಆದರೆ ನಾಳವನ್ನು ಸ್ಥಿರವಾಗಿ ನಿಲ್ಲಿಸಲು ಅನುಕೂಲವಾಗುವಂತೆ ಪೀಠವನ್ನು ಏರ್ಪಡಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಇದನ್ನು ಯೋನಿಯೆಂದು ಕರೆದುದು ದಿಟ; ಇದು ಶಕ್ತಿಯ ಸಂಕೇತವೆಂದು ಗ್ರಹಿಸಿದುದೂ ನಿಜ. ಆದರೆ ಲಿಂಗಕ್ಕೆ ಅಭಿಷೇಕಮಾಡಿದಾಗ ನೀರು ನಿಲ್ಲಲು, ನೀರು ಹರಿದು ಕೆಳಗೆ ಬಿದ್ದಾಗ ಅದನ್ನು ಹಿಡಿದಿಟ್ಟುಕೊಳ್ಳಲು ಅನುಕೂಲವಾಗುವ 'ಅರ್ಘ್ಯ' ಇದು; ಮುಖ್ಯವಾಗಿ ಪೀಠ, ಅಧಿಷ್ಠಾನ. ಇದು ಸ್ತ್ರೀಪುರುಷರ ಜನನೇಂದ್ರಿಯಗಳೆಂಬ ತಪ್ಪುಗ್ರಹಿಕೆ ಈಗಿನ ವಿಮರ್ಶಕರಿಗೆ ಮಾತ್ರವಲ್ಲ, ವೈದಿಕಕವಿಗಳಿಗೂ ಇದ್ದಿತು; ಋಗ್ವೇದದಲ್ಲಿಯೇ 'ಶಿಶ್ನದೇವ'ರಾದ, ಎಂದರೆ ಪುರುಷಜನನೇಂದ್ರಿಯವನ್ನೇ ದೇವರೆಂದು ಬಗೆದಿದ್ದ, ಜನ ಇದ್ದ ಉಲ್ಲೇಖವಿದೆ (7, 24). ತಾತ್ಪರ್ಯವೇನೋ ಲಿಂಗಪೂಜೆ ಆರ್ಯಸಂಸ್ಕೃತಿಗೆ ಒಳಪಡದ ಜನರಲ್ಲಿ ಬಳಕೆಯಲ್ಲಿದ್ದಿತು ಎಂದು. ಲಿಂಗಪುರಾಣವು 'ಲಿಂಗವೇದೀ ಮಹಾದೇವೀ ಲಿಂಗಂ ಸಾಕ್ಷಾನ್ಮಹೇಶ್ವರಃ ಎಂದೂ, ಶಿವ ಪುರಾಣವು 'ಪೀಠಮಂಬಾಮಯಂ ಸರ್ವಂ ಶಿವಲಿಂಗಶ್ಚ ಚಿನ್ಮಯಃ' ಎಂದೂ ಹೇಳಿದೆ. ಎಲ್ಲವೂ ಪುರುಷ–ಸ್ತ್ರೀಮಯವಾದುದರಿಂದ ಶಿವಶಕ್ತಿಯುತವಾದುದು ಲಿಂಗವೆಂದೂ ಪ್ರತೀತಿಯಿದೆ (ಶರೀರಂ ದ್ವಿವಿಧಂ ಪ್ರೋಕ್ತಂ ಪುಂಸ್ತ್ವಂ ಚ ಸ್ತ್ರೀತ್ವಮೇವ ಚ । ಲಿಂಗೇನ ಲಾಂಛಿತಂ ಪುಂಸ್ತ್ವಂ ಸ್ತ್ರೀತ್ವಂ ಯೋನ್ಯಾಭಿ ಲಾಂಛಿತಂ ॥ ಲಿಂಗಮೀಶಮಯಂ ಪ್ರೋಕ್ತಂ ಯೋನಿಃ ಶಕ್ತಿಮಯಂ ಸ್ಮೃತಂ । ತಸ್ಮಾದ್ವೈ ಶಿವಶಕ್ತಿಸ್ತು ಸರ್ವಮೇತತ್ ಚರಾಚರಂ ॥)

ಲಿಂಗದ ವಿಚಾರ ಪ್ರಸ್ತಾಪಿಸುತ್ತ ಇನ್ನೊಂದು ವಿವರವನ್ನೂ ಗಮನಿಸಬೇಕು. ಅದು ಶಿವನು ಬೇರೆ, ಲಿಂಗವು ಬೇರೆ ಎನ್ನುವ ನಿಲುವು ಒಂದು ಕಾಲದಲ್ಲಿದ್ದಿತು ಎನ್ನುವುದು. ಎಲ್ಲೋರದ ಕೈಲಾಸ ದೇವಾಲಯದಲ್ಲಿ ಗರ್ಭಗೃಹದ ಉತ್ತರ ದಿಕ್ಕಿನ ಹೊರಗೋಡೆಯ ದೇವಕೋಷ್ಠದಲ್ಲಿ ಶಿವನ ಶಿಲ್ಪವೊಂದಿದೆ (ಚಿತ್ರ 64). ಇದನ್ನು ಆರ್. ಸೇನಗುಪ್ತ ಎಂಬುವರು ಗಮನಿಸಿ ಪ್ರಕಟಿಸಿದರು (Journal of Royal Asiatic Society No. 1, 1959, ಪು. 41–45). ಈ ಶಿಲ್ಪದಲ್ಲಿ ಶಿವನು ತನ್ನ ಎಡಭುಜದ ಮೇಲೆ ಲಿಂಗವನ್ನು ಹೊತ್ತುಕೊಂಡಿದ್ದಾನೆ. ಹಾಗೆಯೇ ಎರಡನೆಯ ಶತಮಾನದ ಮಥುರಾ ಶಿಲ್ಪವೊಂದು ಸ್ಥಾನಕ ಶಿವಲಿಂಗವನ್ನು ಹೊತ್ತಿರುವಂತೆ ಚಿತ್ರಿತವಾಗಿದೆ (ಚಿತ್ರ 65). ಇನ್ನೊಂದು ಶಿಲ್ಪದಲ್ಲಿ ಶಿವಪಾರ್ವತಿಯರ ನಡುವೆ ಲಿಂಗವಿದ್ದು ಅದನ್ನು ಗೌರವಿಸುತ್ತಿರುವಂತಿದೆ (ಚಿತ್ರ 66). ಶಿಲ್ಪದಲ್ಲಿ ಮಾತ್ರ ಈ ಪ್ರಕ್ರಿಯೆಯಲ್ಲ, ಸಾಹಿತ್ಯದಲ್ಲಿಯೂ ಇದು ಬಂದಿದೆ. ಕಲ್ಹಣನ ರಾಜತರಂಗಿಣಿಯಲ್ಲಿ ಶಿವನ ಮದುವೆಯ ಪ್ರಸ್ತಾಪ ಬಂದಾಗ ಅವನೇ ಲಿಂಗವೊಂದನ್ನು ಮಾಡಿ ಅದನ್ನು ಪೂಜಿಸಿದ ಉಲ್ಲೇಖವಿದೆ (1, 3, ಪು. 443–7). ಲಿಂಗಪುರಾಣದಲ್ಲಿ ಲಿಂಗವು ಪ್ರಧಾನ ಎಂದರೆ ಪ್ರಕೃತಿಯೆಂದೂ ಅದನ್ನು ಧರಿಸಿದ, ಅದಕ್ಕೆ ಆಸರೆಯಾಗಿ ನಿಂತ, ಪರಮೇಶ್ವರನು (ಪುರುಷ) ಲಿಂಗಿಯೆಂದೂ ವಿವರಣೆಯಿರುವುದು ಸ್ವಾರಸ್ಯವಾಗಿದೆ (1, 17, 5 ಪ್ರಧಾನಂ ಲಿಂಗ

ಚಿತ್ರ 64
ಭಾರಲಿಂಗಶಿವ

ಚಿತ್ರ **65**
ಭಾರಲಿಂಗಶಿವ
ಮಥುರಾ ವಸ್ತುಸಂಗ್ರಹಾಲಯ
ದಲ್ಲಿರುವ ಶಿಲ್ಪ.
ಕ್ರಿಸ್ತಾಬ್ದ ಎರಡನೆಯ ಶತಮಾನಕ್ಕೆ
ಸೇರಿದ್ದು

ಚಿತ್ರ **66**
ಶಿವ-ಲಿಂಗಾರ್ಚನೆ
ಎಲ್ಲೋರದ ಕೈಲಾಸ ದೇವಾಲಯ
ದಲ್ಲಿ ಶಿವ ಪಾರ್ವತಿಯರು ಲಿಂಗ
ವನ್ನು ಪೂಜಿಸುತ್ತಿರುವುದು



ಚಿತ್ರ **67**
ಭಾರಶಿವ
ದೆಹಲಿಯ ಭಾರತಕಲಾ ಭವನ
ದಲ್ಲಿರುವ ಪ್ರಾಚೀನ ಶಿಲ್ಪ.
ಇದು ಭಾರಶಿವ ವಂಶದ ರಾಜ
ನೊಬ್ಬನದೆಂದು ಭಾವಿಸಿದ್ದಾರೆ

ಮಾಖ್ಯಾತಂ ಲಿಂಗೀ ಚ ಪರಮೇಶ್ವರಃ). ಅಲ್ಲಿಯೇ, ಅವ್ಯಕ್ತವಾದುದು ಲಿಂಗವೆಂದೂ, ಶಿವನು ಅಲಿಂಗವೆಂದೂ ವಿವರಣೆಯಿದೆ **(1, 3)**. ಲಿಂಗವೆಂದರೆ ಇಲ್ಲಿ ಶಿವನಿಗೆ ಸಂಬಂಧಿಸಿದ್ದು (ಶೈವ) ಎಂದಷ್ಟೇ ಅರ್ಥ. ಬೇರೊಂದು ಸಂದರ್ಭದಲ್ಲಿ

> ತ್ರಿವಿಧಂ ವ್ಯಕ್ತಮವ್ಯಕ್ತಂ ವ್ಯಕ್ತಾವ್ಯಕ್ತಂ ತಥೈವ ಚ ।
> ವ್ಯಕ್ತಂ ತು ಸಕಲಾಕಾರಂ ಅವ್ಯಕ್ತಂ ಲಿಂಗಮುಚ್ಯತೇ ।
> ಮುಖಲಿಂಗಮಿತಿ ಪ್ರೋಕ್ತಂ ವ್ಯಕ್ತಾವ್ಯಕ್ತಂ ಪ್ರಜಾಯತೇ ॥

ಎಂದರೆ ವ್ಯಕ್ತವಾದುವು ಶಿವಲೀಲಾಮೂರ್ತಿಗಳೆಂದೂ, ಅವ್ಯಕ್ತವು ಲಿಂಗವೆಂದೂ, ವ್ಯಕ್ತಾವ್ಯಕ್ತವು ಮುಖಲಿಂಗವೆಂದೂ ನಿರೂಪಣೆಯಿರುವುದನ್ನು ಗಮನಿಸಬೇಕು. ಪ್ರಕೃತಿಯನ್ನು ಹೆಂಗಸೆಂದು ಪರಿಗಣಿಸಿ ಪುರುಷನನ್ನು ಗಂಡಸೆಂದಿದ್ದಾರಲ್ಲವೆ ? ದೇವೀಮೂರ್ತಿಗಳು ಕೈಯಲ್ಲಿ ಲಿಂಗವನ್ನು ಹಿಡಿದಿರುವಂತೆ ನಿರ್ಮಿಸಿರುವ ಶಿಲ್ಪಗಳು ನೂರಾರು ಇವೆ; ತಲೆಯಲ್ಲಿ ಧರಿಸಿರುವುದೂ ಉಂಟು; ಕೊರಳಲ್ಲಿ ಹಾಕಿಕೊಂಡಿರುವುದೂ ಉಂಟು. ಚಂಡೀ ಮಹಾತ್ಮ್ಯೆಯಲ್ಲಿ ಮಹಾಲಕ್ಷ್ಮಿಯ ಪ್ರತಿಮಾಲಕ್ಷಣವನ್ನು ಹೀಗೆ ಹೇಳಿದೆ

> ಮಾತುಲಿಂಗಂ ಗದಾಂ ಖೇಟಂ ಪಾನಪಾತ್ರಂ ಚ ಬಿಭ್ರತೀ ।
> ನಾಗಂ ಲಿಂಗಂ ಚ ಯೋನಿಂಚ ಬಿಭ್ರತೀ ನೃಪ ಮೂರ್ಧನಿ ॥

ಲಿಂಗವನ್ನು ಧರಿಸುವ ಧಾರ್ಮಿಕ ವಿಧಿ ಎಷ್ಟು ಹಳೆಯದೋ ತಿಳಿಯದು. ಕೊರಳಲ್ಲಿ, ತಲೆಯಮೇಲೆ, ಭುಜದಲ್ಲಿ ಲಿಂಗಗಳನ್ನು ಬಟ್ಟೆಯಲ್ಲಿ ಸುತ್ತಿ ಅಥವಾ ಸಂಪುಟ(ಕರಡಿಗೆ)ಗಳಲ್ಲಿಟ್ಟು ಮೈಮೇಲೆ ಇರಿಸಿಕೊಳ್ಳುವುದು ಹಲವಾರು ಶೈವ ಸಂಪ್ರದಾಯಗಳಲ್ಲಿದೆ. ಮನುಷ್ಯನ ಮೈಗೆ ಶಿವಲಿಂಗದ

ಸಂಪರ್ಕವಿರುವುದು 'ಶಿವಯೋಗ' ವೆಂದೂ ಬಗೆಯುತ್ತಾರೆ. ಸರ್ವದಾ ಸಂಪರ್ಕವಿದ್ದರೆ ಶಿವನಾಗುವ ಸಾಧ್ಯತೆ ಹೆಚ್ಚೆಂದು ಹಿನ್ನೆಲೆಯ ಕಲ್ಪನೆ—

> ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ ।
> ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಂ ॥

ಎನ್ನುವ ಶ್ಲೋಕ ಇದನ್ನು ಸಮರ್ಥಿಸುತ್ತದೆ. ದೇಹದಲ್ಲಿ ಧರಿಸಿರುವ ಶಿವಲಿಂಗಕ್ಕೆ ಅದ್ಭುತ ಶಕ್ತಿ (mana) ಒದಗಿಸುವ ಸಾಮರ್ಥ್ಯವಿದೆಯೆಂದು ನಂಬಿಕೆ. ಹಲವಾರು ಪುರುಷ ದೇವತೆಗಳ ಶಿಲ್ಪದಲ್ಲಿ ಕೂಡ ತಲೆಯ ಮೇಲೆ, ಕಿರೀಟದಲ್ಲಿ ಲಿಂಗವಿರುವುದನ್ನು ಕಾಣಬಹುದು. ಈ ಸಂಪ್ರದಾಯ ಬೌದ್ಧ ಶಿಲ್ಪಗಳಲ್ಲಿಯೂ ಬಂದಿತು. ಹೆಗಲ ಮೇಲೆ, ತಲೆಯ ಮೇಲೆ ದೊಡ್ಡದೊಡ್ಡ ಲಿಂಗಗಳನ್ನೇ ಹೊತ್ತು ತಿರುಗುವ ವಾಡಿಕೆಯೂ ಒಂದು ಕಾಲಕ್ಕೆ ಇದ್ದಂತೆ ತಿಳಿದುಬರುತ್ತದೆ. ವಾಕಾಟಕರ ಶಾಸನಗಳಲ್ಲಿ ಅವರ ಪೂರ್ವಜರಾದ ಭಾರಶಿವರು ಹೀಗೆಯೇ ಮಾಡುತ್ತಿದ್ದ ಸೂಚನೆ ಬರುತ್ತದೆ. ಇವರು ಐದನೆಯ ಶತಮಾನದವರು. 'ಭಾರಶಿವ' ಎನ್ನುವ ಹೆಸರೇ ಸ್ವಾರಸ್ಯವಾದುದು. "ಅಂಶಭಾರ ಸನ್ನಿವೇಶಿತ ಶಿವಲಿಂಗೋದ್ವಹನ" ಎನ್ನುವ ಮಾತು ಶಾಸನಗಳಲ್ಲಿ ಮತ್ತೆ ಮತ್ತೆ ಬರುತ್ತವೆ. ದೆಹಲಿಯ ಭಾರತ ಕಲಾಭವನದಲ್ಲಿ ಒಂದು ಶಿಲ್ಪದ ತುಂಡೊಂದನ್ನು ಇರಿಸಿದ್ದಾರೆ (ಚಿತ್ರ 67): ತಲೆಯ ಮೇಲೆ ಲಿಂಗವನ್ನು ಹೊತ್ತ ಗಂಡಸಿನ ಶಿಲ್ಪ ಇದು; ಇಷ್ಟು ಮಾತ್ರ ಉಳಿದಿದೆ. ಇದು ಭಾರಶಿವರಾಜನೊಬ್ಬನ ಮೂರ್ತಿಶಿಲ್ಪವೆಂದು ಕಾಶೀಪ್ರಸಾದ ಜಯಸ್ವಾಲರು ನಿರ್ದೇಶಿಸಿದರು. ಇಲ್ಲಿ ಲಿಂಗ ಭಾರವಾಗಿಯೇ ಇದೆ; ಅದಕ್ಕೊಂದು ಪದ್ಮಪೀಠವೂ ಇದೆ.

ಶಿವನು ತಾನೇ ಲಿಂಗವನ್ನು ಸದಾ ತನ್ನ ಕೊರಳಲ್ಲಿ ಧರಿಸಿರುತ್ತಾನೆಂದೂ, ಅದಕ್ಕೆ ಆತ್ಮಲಿಂಗವೆಂದು ಹೆಸರೆಂದೂ ಪ್ರತೀತಿಯಿದೆ. ಗೋಕರ್ಣದ ಕ್ಷೇತ್ರಕಥೆಯಲ್ಲಿ ಇದರ ಪ್ರಸ್ತಾಪವಿದೆ. ತನ್ನ ತಾಯಿಯ ಬಯಕೆಯಂತೆ ರಾವಣ 100,000,000 ಲಿಂಗಗಳನ್ನು ಸಂದರ್ಶಿಸಿ ಪೂಜಿಸಿ ಬರುವ ಸಲುವಾಗಿ ಪ್ರಪಂಚವನ್ನೆಲ್ಲ ಸುತ್ತಾಡುತ್ತಿದ್ದ. ಆಗ ಅವನಿಗೆ ಯಾರೋ ತಿಳಿಸಿದರಂತೆ: ಆತ್ಮಲಿಂಗವನ್ನು ದಿನವೂ ಒಂದು ಬಿಲ್ವಪತ್ರೆಯಿಂದ ಪೂಜಿಸಿದರೆ ಅದು 100,000,000 ಲಿಂಗಗಳನ್ನು ಪೂಜಿಸಿದಂತಾಗುತ್ತದೆ – ಎಂದು. ರಾವಣನು ತಪಸ್ಸುಮಾಡಿ ಶಿವನನ್ನು ಒಲಿಸಿ ಆತ್ಮಲಿಂಗವನ್ನು ಪಡೆದ. ಆದರೆ ಮನೆಗೆ ಬಂದು ಪ್ರತಿಷ್ಠೆ ಮಾಡುವವರೆಗೂ ನಡುದಾರಿಯಲ್ಲಿ ಎಲ್ಲಿಯೂ ಅದನ್ನು ಕೆಳಗಿಡಬಾರದೆಂದು ವರದೊಂದಿಗೆ ನಿಯಮವೂ ಇದ್ದಿತು. ರಾವಣ ಆತ್ಮಲಿಂಗವನ್ನು ಪಡೆದು ಹಿಂದಿರುಗುತ್ತಿರುವಾಗ ದಾರಿಯಲ್ಲಿ ಸಂಜೆಯಾಯಿತು: ಮಡಿಯುಟ್ಟು ಸಂಧ್ಯಾಕರ್ಮವನ್ನು ಮುಗಿಸಬೇಕಾಯಿತು. ಆದರೆ ತಾನು ಹೊತ್ತು ತರುತ್ತಿದ್ದ ಲಿಂಗವನ್ನು ಕೆಳಗಿಡಬಾರದಷ್ಟೆ? ಕೆಳಗಿಡದೆ ಸ್ನಾನ, ಸಂಧ್ಯೆ ಮಾಡುವುದು ಹೇಗೆ? ಆ ಹೊತ್ತಿಗೆ ಸರಿಯಾಗಿ ದನಕಾಯುವ ಹುಡುಗನೊಬ್ಬ ಎದುರಿಗೆ ಕಾಣಿಸಿಕೊಂಡ; ಅವನು ವೇಷ ಮರೆಸಿಕೊಂಡ ಗಣಪತಿಯೇ. ರಾವಣ ಆತ್ಮಲಿಂಗವನ್ನು ಅವನ ಕೈಯಲ್ಲಿತ್ತು ತಾನು ಸಂಧ್ಯೆ ಮುಗಿಸಿ ಬರುವವರೆಗೂ ಹಿಡಿದುಕೊಂಡಿರುವಂತೆ ಹೇಳಿದ. ಹುಡುಗ ಒಪ್ಪಿದ, ಆದರೆ ಅಗತ್ಯಬಿದ್ದರೆ ಮೂರು ಬಾರಿ ಕೂಗಿ ಕರೆಯುತ್ತೇನೆಂದೂ ರಾವಣ ಬರದಿದ್ದರೆ ಲಿಂಗವನ್ನು ಕೆಳಗಿರಿಸಿ ಹೋಗುವೆನೆಂದೂ ಮಾತುಮಾಡಿಕೊಂಡ. ರಾವಣ ಸ್ವಲ್ಪದೂರ ಹೋಗುತ್ತಿರುವಂತೆಯೇ ಹುಡುಗ ಅವನನ್ನು ಲಗುಬಗೆಯಿಂದ ಮೂರು ಬಾರಿ ಕೂಗಿ ಕರೆದ; ರಾವಣ ಮುಖ ತಿರುಗಿಸಿ ನೋಡುವಷ್ಟರಲ್ಲಿಯೇ ಹುಡುಗ ಲಿಂಗವನ್ನು ಕೆಳಗಿರಿಸಿ ಮರೆಯಾಗಿದ್ದ! ರಾವಣ ಬಂದು ಲಿಂಗವನ್ನು ಎತ್ತಿಕೊಳ್ಳಲು ನೋಡಿದಾಗ ಅದು ಭೂಮಿಯಲ್ಲಿ ನೆಲೆಸಿಬಿಟ್ಟಿದ್ದಿತು, ಎಷ್ಟು ಬಲಪ್ರಯೋಗ



ಚಿತ್ರ 68
ಶಿವಲಿಂಗ-ವೃಷಭ



ಚಿತ್ರ 69
ಮಹಾಬಲಿಪುರದಲ್ಲಿ ಬಸವ



ಚಿತ್ರ 70
ಸೈಂಧವ ಸಂಸ್ಕೃತಿಯಲ್ಲಿ ವೃಷಭ ಮುದ್ರೆ
ಕ್ರಿ.ಪೂ. ಮೂರುಸಾವಿರ ವರ್ಷಗಳ ಸುಮಾರಿನದು

ಮಾಡಿದರೂ ಅದನ್ನು ಕೀಳಲು ಆಗಲಿಲ್ಲ; ಹಾಗೆಂದೇ ಆ ಲಿಂಗ ಮಹಾಬಲೇಶ್ವರನೆನಿಸಿತು. ಬಿಹಾರದ ಬೈಜನಾಥ ದೇವಾಲಯದಲ್ಲಿಯೂ 'ಮಹಾದೇವ ರಾವಣೇಶ್ವರ'ನೆಂಬ ಹೆಸರಿನ ಲಿಂಗವಿದೆ. ಅಲ್ಲಿಯೂ ಇದೇ ಕಥೆ ಹೇಳುತ್ತಾರೆ. ಆದರೆ ಅಲ್ಲಿ ರಾವಣನನ್ನು ವಂಚಿಸಿದ್ದು ದನ ಕಾಯುವ ಹುಡುಗನಂತೆ ಕಾಣಿಸಿಕೊಂಡ ಗಣಪತಿಯಲ್ಲ, ಬ್ರಾಹ್ಮಣನಂತೆ ಬಂದ ವಿಷ್ಣು. ಉಳಿದ ವಿವರಗಳೆಲ್ಲ ಅವೇ. ಈ ಕಥೆಗಳಲ್ಲಿ ಲಿಂಗವನ್ನು ಹೊತ್ತು ತಿರುಗುತ್ತಿದ್ದ ಪದ್ಧತಿಯ ಪ್ರಸ್ತಾಪವಿರುವುದು ಸ್ವಾರಸ್ಯ.

ಶಿವನಿಗೆ ಲಿಂಗ ಪ್ರತ್ಯೇಕವಾಗಿರುವಂತೆಯೇ ಬಸವನನ್ನೂ ಪ್ರತ್ಯೇಕವಾಗಿರಿಸಿ ಶಿವನನ್ನು ಸಂಕೇತಿಸುವ ಪದ್ಧತಿ ಹಳೆಯದು (ಚಿತ್ರ 68). ಈಗ 'ಈರಣ್ಣನ ಮುಂದೆ ಬಸವಣ್ಣ' ಇರುವುದನ್ನು ಎಲ್ಲ ಶಿವಾಲಯಗಳಲ್ಲಿಯೂ ಕಾಣುತ್ತೇವಲ್ಲವೆ? ಶಿವನ ವಾಹನ ನಂದಿ ಎನ್ನುವ ಪುರಾಣಪ್ರಸಕ್ತಿಯೂ ಇದೆ; 'ವೃಷಧ್ವಜ', 'ವೃಷಕೇತನ' ಎಂದೂ ಶಿವನ ಹೆಸರುಗಳು. ಅದೂ ಬಸವನ ಬೆನ್ನಮೇಲಿನ ಡುಬ್ಬು ಲಿಂಗಾಕಾರವಾಗಿರುವುದರಿಂದ ಅದಕ್ಕೆ ವಿಶೇಷವಾದ ಪೂಜೆ ಸಲ್ಲಿಸುತ್ತಿದ್ದ ಕಾಲವೂ ಇದ್ದಿತು (ಚಿತ್ರ 69). ಬಸವನ ಕೆಲವು ಪ್ರಾಚೀನ ಶಿಲ್ಪಗಳಲ್ಲಿ ಈ ಭಾಗದ ಸುತ್ತ ಹೂಮಾಲೆಗಳನ್ನು ಕಡೆದಿರುವುದನ್ನು ಕಾಣಬಹುದು. ಬಸವನ ಈ ಭಾಗಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದ್ದಿತು. ಸೈಂಧವ ಸಂಸ್ಕೃತಿಯ ಮುದ್ರೆಗಳಲ್ಲಿಯೂ ಇದು ಪ್ರಮುಖವಾಗಿ ಕಾಣುವಂಥ ಬಸವನ ಚಿತ್ರಣವಿದೆ (ಚಿತ್ರ 70). ಶಿವನು 'ವೃಷವಾಹನ' ಅಥವಾ 'ವೃಷಕೇತನ' ಮಾತ್ರವಲ್ಲ, 'ವೃಷ'ವೂ ಹೌದು. ನಂದಿಯನ್ನೇ ಶಿವನೆಂದು ಪೂಜೆಮಾಡುವ ವಾಡಿಕೆ ಈಗಲೂ ಇದೆಯಷ್ಟೆ. ನಂದಿಯ ಬೆನ್ನ ಮೇಲಿನ ಡುಬ್ಬು ಪರ್ವತಾಕಾರವಾಗಿದ್ದು ಅದು ಮುಂದೆ ಲಿಂಗದೊಂದಿಗೆ ತಾದಾತ್ಮ್ಯವನ್ನು ಪಡೆಯಿತೆಂದು ಊಹಿಸಿಕೊಂಡರೆ ತಪ್ಪಾಗದು. ಲಿಂಗಾಕಾರದ

ಡುಬ್ಬು ಬೆನ್ನಮೇಲಿರುವುದರಿಂದ ವೃಷಭವೂ ಲಿಂಗಿಯೇ, ಭಾರಶಿವನೇ. ಕಾಲಕ್ರಮದಲ್ಲಿ ಮೂರ್ತಿಶಿಲ್ಪದಲ್ಲಿ ಬುದ್ಧನಿಗೆ ಮೂಡಿಸಿದ ಉಷ್ಣೀಷವೂ ಶಿವನಿಗೆ ಒದಗಿದ ಜಟಾಭಾರ–ಜಟಾಮುಕುಟಗಳೂ ಈ ಡುಬ್ಬಿನ ರೂಪಾಂತರಗಳೇ ಇರಬಹುದು.

ಶಿವನೊಂದಿಗೆ ಲಿಂಗವಿರುವಂತೆ ವೃಷಭವನ್ನೂ ಸೇರಿಸುವುದು ಹಳೆಯ ನಾಣ್ಯಗಳಲ್ಲಿ ವಿಶೇಷ ವಾಗಿ ಕಾಣಬರುತ್ತದೆ. ಕುಷಾಣರಾಜರಾದ ಕಾನಿಷ್ಕ ಮತ್ತು ವೇಮಾ ಕಾಡ್‌ಫಿಸಿಸ್ ಇವರ ಕ್ರಿಸ್ತಾಬ್ದ ಮೊದಲನೆಯ ಶತಮಾನದ ಬಂಗಾರದ ನಾಣ್ಯಗಳಲ್ಲಿ ವೃಷಭದ ಮುಂದೆ ಪಾಶ ತ್ರಿಶೂಲಧಾರಿಯಾಗಿ ನಿಂತಿರುವ, ತಲೆಯಿಂದ ಅಗ್ನಿಜ್ವಾಲೆಗಳು ಏಳುತ್ತಿರುವ, ದ್ವಿಭುಜಶಿವ ವೃಷಭದೊಂದಿಗೆ ಇರುವ ಚಿತ್ರಣಗಳು ಕಾಣಸಿಗುತ್ತವೆ. ಇಂಡೋಸಿಥಿಯನ್ ರಾಜನೊಬ್ಬನ ಬಂಗಾರದ ನಾಣ್ಯವನ್ನು ಕನಿಂಗ್‌ಹ್ಯಾಮ್ ದೊರಕಿಸಿ ಕೊಂಡು ಬ್ರಿಟಿಷ್ ಮ್ಯೂಸಿಯಂನಲ್ಲಿಟ್ಟಿದ್ದಾರೆ; ಇದರಲ್ಲಿ ಒಂದು ಕಡೆ ವೃಷಭದ ಚಿತ್ರವಿದ್ದು ಅಲ್ಲಿಯೇ ಗ್ರೀಕ್ ಲಿಪಿಯಲ್ಲಿ 'ತಾಒರೋಸ್' ಎಂಬ ಮಾತನ್ನೂ ಖರೋಷ್ಠಿಯಲ್ಲಿ 'ಉಸಭ' ಎಂಬ ಮಾತನ್ನೂ ಮೂಡಿಸಿದ್ದಾರೆ. ನಾಣ್ಯದ ಇನ್ನೊಂದು ಕಡೆ ಕಮಲ ವನ್ನು ಹಿಡಿದ ಹೆಣ್ಣುದೇವತೆಯೊಬ್ಬಳು ನಿಂತಿರುವ ಚಿತ್ರವಿದ್ದು ಅಲ್ಲಿಯೇ ಖರೋಷ್ಠಿಯಲ್ಲಿ 'ಪಖಲವತಿ ದೇವತ' ಎಂಬ ಬರಹವಿದೆ. ಪುಷ್ಕಲಾವತಿ ಗಂಧಾರ ರಾಜ್ಯದ ಹಳೆಯ ರಾಜಧಾನಿಯಾಗಿದ್ದಿತು. ಈ ರಾಜ್ಯಕ್ಕೆ ವೃಷಭ ರಾಜಲಾಂಛನವಾಗಿದ್ದಿತು. ಪ್ರಾಚೀನ ಶೈವಸಂಪ್ರದಾಯಗಳಾದ ಪಾಶುಪತವ್ರತ (ಅಥವಾ ಮಹಾವ್ರತ, ದೇವವ್ರತ, ಸುದೇವವ್ರತ) ಮೊದಲಾದುವು ಕುಷಾಣ ರಾಜರಲ್ಲಿ ತುಂಬ ಬಳಕೆ ಯಲ್ಲಿದ್ದಾಗ ವೃಷಭದ ಪ್ರಾಶಸ್ತ್ಯವೂ ಹೆಚ್ಚಿತು (ಚಿತ್ರ 70ಅ).

ಚಿತ್ರ 70 ಅ
ಸಾಂಚೀಸ್ತೂಪದ ತೋರಣ ಶಿಲ್ಪದಲ್ಲಿ ವೃಷವಾಹನ

ಲಿಂಗಗಳು ಸ್ವಯಂಭು, ದಿವ್ಯ, ಮಾನುಷ, ಆರ್ಷ, ರಾಕ್ಷಸ, ದೈವಿಕ, ಬಾಣಲಿಂಗ ಎಂದು ಏಳು ಬಗೆಗಳೆಂದು ಪ್ರತೀತಿ —

ಸ್ವಯಂಭೂರ್ದೈವಿಕಂ ಚೈವ ದಿವ್ಯಮಾನುಷಮಾರ್ಷಕಂ ।
ರಾಕ್ಷಸಂ ಬಾಣಲಿಂಗಂ ಚ ಸಪ್ತೈತೇ ಲಿಂಗಮುಚ್ಯತೇ ॥

ಬಾಣಾಸುರನು ಒಟ್ಟು ಹದಿನಾಲ್ಕು ಕೋಟಿ ಲಿಂಗಗಳನ್ನು ಪ್ರತಿಷ್ಠೆಮಾಡಿದ್ದನಂತೆ. ಇವಕ್ಕೆ ಬಾಣಲಿಂಗಗಳೆಂದು ಹೆಸರು. ಇವು ಈಗ ಗಂಡಕೀ ನದಿಯಲ್ಲಿಯೂ ನರ್ಮದಾ ನದಿಯಲ್ಲಿಯೂ ದೊರೆಯುವುವೆಂದು ನಂಬಿಕೆ. ಗಂಡಕೀ ನದಿಯಲ್ಲಿ ದೊರೆಯುವ ಆರು ಬಗೆಯ ಲಿಂಗಗಳಲ್ಲಿ (ಶಿವನಾಭ, ಅಘೋರ, ಸದ್ಯೋಜಾತ, ವಾಮದೇವ, ತತ್ಪುರುಷ) ಒಂದು (ಅಘೋರ) ಮನೆಯಲ್ಲಿ ಪೂಜೆಗೆ ಅರ್ಹವಲ್ಲ (ಸರ್ವತ್ರ ಸಂಹಿತಾಕಾರಾ ಮೂರ್ಧ್ನಿ ರಕ್ತಜಟೋದ್ಧೃಕ್ । ಅಘೋರಮೂರ್ತಿಃ ಸಾ ತ್ಯಾಜ್ಯಾ ಗೃಹಸ್ಥೈಃ ಶುಭಕಾಂಕ್ಷಿಭಿಃ॥). ನರ್ಮದಾ ನದಿಯಲ್ಲಿ ದೊರೆಯುವ ಲಿಂಗಗಳಲ್ಲಿ ಮೂರು ಬಗೆಗಳು—ಬುದ್ಬುದಾಕಾರ (ಉತ್ತಮ), ಅಂಡಸನ್ನಿಭ (ಎಂದರೆ ಮೊಟ್ಟೆಯ ಆಕಾರದ್ದು, ಮಧ್ಯಮ), ವೃಷಭಸ್ಕಂಧಸದೃಶ (ಎಂದರೆ ಗೂಳಿಯ ಬೆನ್ನ ಮೇಲಿನ

ಡುಬ್ಬಿನಂತಿರುವುದು, ಅಧಮ). ಇವುಗಳಲ್ಲಿ ಮೊದಲೆರಡು ಮಾತ್ರ ಪೂಜೆಗೆ ಯೋಗ್ಯವಾದುವು. ಹೀಗೆ ಏಳು ಲಿಂಗಗಳು (ಗಂಡಕಿಯಲ್ಲಿ ಐದು, ನರ್ಮದೆಯಲ್ಲಿ ಎರಡು) ಮಾತ್ರ ಪೂಜೆಗೆ ತಕ್ಕುವು ಎನ್ನುವ ನಂಬಿಕೆಯಿದೆ. ಇವೆಲ್ಲವೂ ಸ್ವಾಯಂಭುವ ಲಿಂಗಗಳು, ಎಂದರೆ ತಾವೇ ಆದುವು.

ಪಂಚಭೂತಗಳನ್ನು ಪ್ರತಿನಿಧಿಸಿ ಪಂಚಲಿಂಗಗಳನ್ನು ಹೇಳುವ ಪದ್ಧತಿ ಇದೆ: ಪೃಥ್ವೀಲಿಂಗ (ಕಾಂಚೀಪುರದಲ್ಲಿ), ಅಪ್‌ಲಿಂಗ (ಜಂಬುಕೇಶ್ವರದಲ್ಲಿ) , ತೇಜೋಲಿಂಗ (ತಿರುವಣ್ಣಾಮಲೆಯಲ್ಲಿ), ವಾಯುಲಿಂಗ (ಕಾಳಹಸ್ತಿಯಲ್ಲಿ) ಮತ್ತು ಆಕಾಶಲಿಂಗ (ಚಿದಂಬರದಲ್ಲಿ). ನಮ್ಮ ದೇಶದ ಸುಪ್ರಸಿದ್ಧ ಲಿಂಗಗಳೆಂದರೆ ಕಾಶಿಯ ವಿಶ್ವೇಶ್ವರ ಲಿಂಗ, ಹಿಮಾಲಯದ ಕೇದಾರೇಶ್ವರ, ಸೌರಾಷ್ಟ್ರದ ಸೋಮನಾಥ, ನಾಸಿಕದ ತ್ರ್ಯಂಬಕ, ನರ್ಮದಾ ತೀರದ ಓಂಕಾರ, ಉಜ್ಜಯಿನಿಯ ಮಹಾಕಾಲ, ಗೋಕರ್ಣದ ಮಹಾಬಲ, ರಾಮೇಶ್ವರದ ರಾಮಲಿಂಗ, ಶ್ರೀಶೈಲದ ಮಲ್ಲಿಕಾರ್ಜುನ, ದೇವಗಡದ ವೈದ್ಯನಾಥ, ಮಹಾರಾಷ್ಟ್ರದಲ್ಲಿ ಭೀಮಾನದಿ ಹುಟ್ಟುವಲ್ಲಿ ಭೀಮಾಶಂಕರಲಿಂಗ.

ಲಿಂಗಗಳಲ್ಲಿ ಶಿಲಾವರ್ಣಭೇದವೂ ಇದೆ. ಮುಕ್ತಿಯನ್ನು ಬಯಸುವವರು ಬಿಳಿಯ ಶಿಲೆಯ (ಎಂದರೆ ಸ್ಫಾಟಿಕ) ಲಿಂಗವನ್ನೂ, ಜಯವನ್ನಪೇಕ್ಷಿಸುವವರು ರತ್ನ ಶಿಲೆಯ ಲಿಂಗವನ್ನೂ, ಸಂಪತ್ಕಾಮಿಗಳು ಹಳದಿ ಬಣ್ಣದ ಲಿಂಗವನ್ನೂ ಪೂಜೆಮಾಡಬೇಕೆಂದು ವಿಧಿಯಿದೆ. ಕರಿಕಲ್ಲಿನ ಲಿಂಗವು ಎಲ್ಲ ಬಯಕೆಗಳನ್ನೂ ಕೈಗೂಡಿಸುವಂಥದು —

ಶ್ವೇತಶೈಲಂ ತು ಮೋಕ್ಷಾರ್ಥೀ ರತ್ನಶೈಲಂ ಜಯಪ್ರದಂ ।
ಪೀತವರ್ಣಂ ಶ್ರಿಯರ್ಥಂ ಕೃಷ್ಣಂ ಸ್ಯಾತ್ಸರ್ವಕಾಮದಂ ॥

ಶಿವಲೀಲೆ

ಪ್ರಾಚೀನ ಲಿಂಗಗಳನ್ನು ಪ್ರಸ್ತಾಪಮಾಡುತ್ತಿರುವಾಗ ಗುಡಿಮಲ್ಲದ ಲಿಂಗವನ್ನು ಮರೆಯಬಾರದು. ತುಂಬ ಸ್ವಾರಸ್ಯವಾದ ಈ ಲಿಂಗವನ್ನು ತಿರುವಾಂಕೂರಿನ ಸುಪ್ರಸಿದ್ಧ ಶಿಲ್ಪಶಾಸ್ತ್ರಜ್ಞರಾದ ಟಿ. ಎ. ಗೋಪೀ-ನಾಥರಾಯರು ಕಂಡುಹಿಡಿದು ಪ್ರಕಟಿಸಿದರು. ಉತ್ತರ ಆರ್ಕಾಟ್ ಜಿಲ್ಲೆಯ ರೇಣಿಗುಂಟದ ಬಳಿಯಿರುವ ಗುಡಿಮಲ್ಲಂ ಎಂಬಲ್ಲಿ ಈ ಲಿಂಗ ಇನ್ನೂ ಪೂಜೆಯಲ್ಲಿದೆ; ಅದನ್ನು ಈಗ ಪರಶು ರಾಮೇಶ್ವರ ಎಂದು ಕರೆಯುವ ವಾಡಿಕೆ ಯಿದೆ (ಚಿತ್ರ 70 ಆ). ಇದು ಕ್ರಿಸ್ತಪೂರ್ವ ಎರಡನೆಯ ಶತಮಾನದ ಶಿಲ್ಪವೆಂದು ಗೋಪೀನಾಥರಾಯರ ಎಣಿಕೆ; ಡಾ. ಆನಂದ ಕುಮಾರಸ್ವಾಮಿಯವರೂ ಇದನ್ನು ಒಪ್ಪಿ ದ್ದಾರೆ. ಒಂದೇ ಕಗ್ಗಲ್ಲಲ್ಲಿ ಕಡೆದ ಈ ಲಿಂಗ ಊರ್ಧ್ವಲಿಂಗದ ಮಾದರಿಯಲ್ಲೇ ಇದ್ದು, ಅದಕ್ಕೆ ಅರ್ಘ್ಯವಾಗಲೀ ಪೀಠವಾಗಲೀ ಇಲ್ಲ. ಸುಮಾರು ಐದು ಅಡಿ ಎತ್ತರದ ಈ ಲಿಂಗ ಸುಮಾರು ಒಂದಡಿ ದಪ್ಪನಾಗಿದೆ. ನಾಳದ



ಚಿತ್ರ 70 ಆ
ಗುಡಿಮಲ್ಲದ ಲಿಂಗ
ನಮ್ಮ ನಾಡಿನಲ್ಲಿ ಕಾಣಸಿಗುವ ಶಿವಲಿಂಗಗಳಲ್ಲೆಲ್ಲ ತುಂಬ ಸ್ವಾರಸ್ಯವಾದುದು, ಪುರಾತನವಾದುದು. ಕ್ರಿಸ್ತಪೂರ್ವ ಎರಡನೆಯ ಶತಮಾನದ ಶಿಲ್ಪ ಇದು; ಇಂದಿಗೂ ಪೂಜೆಯಲ್ಲಿದೆ

ಮುಂಭಾಗದಲ್ಲಿ ಸ್ಥಾನಕ ದ್ವಿಭುಜಶಿವನ ಮೂರ್ತಿಶಿಲ್ಪವಿದೆ. ಬಲಗೈಯಲ್ಲಿ ಟಗರು, ಎಡಗೈಯಲ್ಲಿ ಕಲಶ ಮತ್ತು ನೀಳವಾದ ಕೊಡಲಿಗಳಿವೆ. ಶಿವನ ಕಾಲ ಕೆಳಗೆ ಯಕ್ಷನೊಬ್ಬ ಮುದುರಿಕೊಂಡು ಕುಳಿತಿದ್ದಾನೆ; ಆನಂದಕುಮಾರಸ್ವಾಮಿಯವರು ಇವನನ್ನು ಅಪಸ್ಮಾರಪುರುಷನೆಂದು ನಿರ್ದೇಶಿಸಿದ್ದಾರೆ. ಮುಂದೆ ದಕ್ಷಿಣಾ ಮೂರ್ತಿಯ ಕಾಲ ಕೆಳಗೂ, ನಟರಾಜಮೂರ್ತಿಯ ಕಾಲ ಕೆಳಗೂ ಅಪಸ್ಮಾರ ಪುರುಷನನ್ನು ಮೂಡಿಸುವ ಪದ್ಧತಿ ಬೆಳೆದು ಬಂದಿತಲ್ಲವೆ? ಆದರೆ ಈ ಅಪಸ್ಮಾರಪುರುಷ ಬಾರ್ಹುತ್‌ಸ್ತೂಪದಲ್ಲಿರುವ ಕುಬೇರಯಕ್ಷನ ಕಾಲಡಿಯಲ್ಲಿರುವ ಅಪಸ್ಮಾರಪುರುಷನನ್ನೇ ಬಹುಮಟ್ಟಿಗೆ ಹೋಲುವುದು ಸ್ವಾರಸ್ಯ. ಶಿವನ ಮುಖದಲ್ಲಿ ಅನಾರ್ಯ ಜನಾಂಗದ ಲಕ್ಷಣಗಳನ್ನು ಕಾಣುವ ಪಂಡಿತರಿದ್ದಾರೆ; ಕಾಲುಗಳನ್ನು ದೂರ ಇರಿಸಿಕೊಂಡಿರುವ ಭಂಗಿಯೂ ಗಮನಾರ್ಹವಾದುದು. ಗುಡಿಮಲ್ಲದ ಶಿವನನ್ನು ಯಕ್ಷನೆಂದೇ ಪರಿಗಣಿಸಬಹುದು. ಶಿವನ ಶಿಲ್ಪದಿಂದ ಸ್ವಲ್ಪ ಮೇಲ್ಭಾಗದಲ್ಲಿ ಮೇಢ್ರದ ನೈಜ ಶಿಲ್ಪಕೃತಿಯಿದೆ; ಒಂದೇ ಕಲ್ಲಿನಲ್ಲಿ ಲಿಂಗವನ್ನೂ ಶಿವನ ಶಿಲ್ಪವನ್ನೂ ಕಡೆದಿರುವುದು ಇದರ ವೈಶಿಷ್ಟ್ಯ. ಈ ಮೂರ್ತಿಯ ಕೈಯಲ್ಲಿರುವ ಬಲಿ–ಪಶು ಮುಂದೆ ಶಿವನ ಚಿತ್ರಣದಲ್ಲಿ ಮೃಗಧರನೆಂಬ ವಿವರಕ್ಕೆಡೆಮಾಡಿಕೊಟ್ಟಿತೋ ಏನೋ; ಮುಂದಿನ ಶಿವನ ಶಿಲ್ಪಗಳಲ್ಲಿ ಒಂದು ಕೈಯಲ್ಲಿ ಪರಶು, ಇನ್ನೊಂದು ಕೈಯಲ್ಲಿ ಜಿಂಕೆ (ಮೃಗ) ಇರುತ್ತವೆ.

ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ಲಿಂಗ ದೊರೆತಿರುವುದು ದಿಟ (ಚಿತ್ರ 71): ಪ್ರಾಚೀನ ಸಾಹಿತ್ಯದಲ್ಲಿ ಲಿಂಗದ ಪ್ರಸ್ತಾಪ ಬಂದಿರುವುದೂ ಸರಿಯೇ. ಆದರೆ ಶಿವನನ್ನು ಲಿಂಗದಲ್ಲಿ ಮಾತ್ರ ಸಂಕೇತಿಸುವುದು ಅಷ್ಟು ಪ್ರಾಚೀನ ಪದ್ಧತಿಯಂತೆ ತೋರುವುದಿಲ್ಲ. ಲಿಂಗಪೂಜೆಯ ಪ್ರಸ್ತಾಪ ಮಹಾ ಭಾರತದ ಅನುಶಾಸನಪರ್ವ, ಸೌಪ್ತಿಕಪರ್ವ, ವನ ಪರ್ವಗಳಲ್ಲಿ ಬರುತ್ತದೆ. ವನಪರ್ವದಲ್ಲಿ ಬರುವ ಪ್ರಸ್ತಾಪ ಸ್ವಾರಸ್ಯವಾದುದು. ಕಿರಾತಾರ್ಜುನೀಯ ಸಂದರ್ಭದಲ್ಲಿ ಕಿರಾತನು ಅರ್ಜುನನನ್ನು ಸೋಲಿಸಿದ ನಂತರ ಅರ್ಜುನನು ಶಿವನನ್ನು ಪೂಜೆಮಾಡಿದ ನಂತೆ. ತಾನೇ ಮಣ್ಣಿನಲ್ಲಿ ಲಿಂಗವೊಂದನ್ನು ಮಾಡಿ ಪಿನಾಕಿಯಾದ ಶಿವನನ್ನು ಪೂಜಿಸಿದನೆಂದು ಮಾತು ಬರುತ್ತದೆ —

ಚಿತ್ರ 71
ಊರ್ಧ್ವಲಿಂಗ
ಸೈಂಧವ ಸಂಸ್ಕೃತಿಯಲ್ಲಿ ದೊರೆತ ಅವಶೇಷಗಳಲ್ಲಿ ಸೇರಿದ್ದು. (ಮೊಹೆನ್‌ಜೊದಾರೋ) — ಕ್ರಿ. ಪೂ. ಮೂರು ಸಾವಿರ ವರ್ಷ ಗಳ ಸುಮಾರಿನದು

ಶರಣ್ಯಂ ಶರಣಂ ಗತ್ವಾ ಭಗವಂತಂ ಪಿನಾಕಿನಂ ।
ಮೃಣ್ಮಯಂ ಸ್ಥಂಡಿಲಂ ಕೃತ್ವಾ ಮಾಲ್ಯೇನಾಪೂಜಯದ್ಭವಂ ॥

ಇಲ್ಲಿ ಮಣ್ಣಿನಿಂದ ಅರ್ಜುನ ಮಾಡಿದ್ದು 'ಸ್ಥಂಡಿಲ'ವನ್ನು. ಸ್ಥಂಡಿಲವೆಂದರೆ ವೇದಿ, ಕಟ್ಟೆ; ಮಣ್ಣಿನ ರಾಶಿ ಎಂದೂ ಆಗುತ್ತದೆ. ಪೂಜೆಗೆ ಪ್ರಶಸ್ತವಾದ ಸ್ಥಳವನ್ನು ಸಿದ್ಧಮಾಡಿ ಅದರ ಮೇಲೆ ಮಣ್ಣಿನ ಮುದ್ದೆಯೊಂದನ್ನಿಟ್ಟು ಅದನ್ನೇ ಶಿವನೆಂದು ಪೂಜಿಸಿದನೆಂದು ತಾತ್ಪರ್ಯ. ಲಿಂಗಗಳಲ್ಲಿ ಧ್ರುವ, ಚಲ, ಚಲಾಚಲ ಎಂಬ ಭೇದವಿದ್ದುದು ಶಿಲ್ಪಶಾಸ್ತ್ರಗಳಿಂದ ತಿಳಿದುಬರುತ್ತದೆ. ಅಲ್ಲಾಡದಂತೆ ಕಲ್ಲಿನಲ್ಲಿ ಮಾಡಿಡುವುದು 'ಧ್ರುವ'; ಸಣ್ಣಸಣ್ಣ ಲಿಂಗಗಳನ್ನು (ಬಾಣಲಿಂಗ, ಸ್ಫಟಿಕಲಿಂಗ, ಮಾಣಿಕ್ಯಲಿಂಗ, ಮರಕತಲಿಂಗ ಮೊದಲಾದುವು)

ಮಾಡಿಟ್ಟುಕೊಂಡು ಬೇಕೆಂದೆಡೆ ಅವನ್ನೊಯ್ಯುವುದು 'ಚಲ'; ಮಣ್ಣಿನಲ್ಲಿ ಮಾಡಿಟ್ಟು ಪೂಜೆಯಾದನಂತರ ಅದನ್ನಲ್ಲಿಯೇ ಬಿಟ್ಟುಹೋಗುವುದು 'ಚಲಾಚಲ'. ಅರ್ಜುನ ಮಾಡಿಟ್ಟುಕೊಂಡುದು 'ಚಲಾಚಲ' ರೀತಿಯದೇ. ರಸವೈದ್ಯರು ತಮ್ಮ ರಸಶಾಲೆಯಲ್ಲಿ ಪಾದರಸದಿಂದ ಲಿಂಗವನ್ನು ಮಾಡಿಟ್ಟುಕೊಂಡು ಪೂಜೆಮಾಡುತ್ತಿದ್ದು ದನ್ನೂ ಇಲ್ಲಿ ಗಮನಿಸಬೇಕು; ಇಂಥ 'ರಸಲಿಂಗ'ಗಳೂ ಚಲಾಚಲವೇ. ಯಾವ ಮನುಷ್ಯನಾಗಲೀ ಪೂಜೆಗೆ ಮೂರ್ತಿಯನ್ನು ಆ ಹೊತ್ತಿಗೆ ತಾನೇ ಮಾಡಿಕೊಂಡು ಪೂಜೆಯಾದನಂತರ ಅಲ್ಲಿಯೇ ಬಿಟ್ಟೋ, ನೀರಿನಲ್ಲಿ ಮುಳುಗಿಸಿಯೋ, ದೊಡ್ಡ ಮರದಡಿಯಲ್ಲಿ ಇರಿಸಿಯೋ ಹೋಗಲು ಅನುಕೂಲವಾಗುವಂಥ ದೇವತಾ ಮೂರ್ತಿಯೆಂದರೆ ಲಿಂಗವೊಂದೇ ಅಲ್ಲವೆ? ಅರ್ಜುನ ವೀರ ಬಿಲ್ಲಾಳು; ಸಮರ್ಥ ಕ್ಷತ್ರಿಯ. ಆದರೆ ಪ್ರತಿಮಾ ನಿರ್ಮಾಣದಲ್ಲಿ ಅವನ ಕೌಶಲವೆಷ್ಟು? ತಾನಿದ್ದೆಡೆಯೇ ಮೂರ್ತಿಯೊಂದನ್ನು ಮಾಡಿಕೊಂಡು ಪೂಜಿಸಬೇಕಾದ ಅಗತ್ಯವಿದ್ದುದರಿಂದ ಹೇಗೋ ಲಿಂಗವನ್ನು ಮಾಡಿಕೊಂಡ ಅಷ್ಟೆ. ಆದರೆ ಶಿವನ ಧ್ರುವಮೂರ್ತಿಗಳೂ ಲಿಂಗಾಕಾರವಾಗಿಯೇ ಇರುತ್ತಿದ್ದುವೇ? ಬಹುಶಃ ಗುಡಿಮಲ್ಲದ ಮೂರ್ತಿಗಳಂತಿರುತ್ತಿದ್ದುವೇನೋ.

ಲಿಂಗಪೂಜೆ ಪ್ರಬಲವಾದ ಕಾಲದಲ್ಲಿಯೂ ಮನುಷ್ಯಾಕಾರದ ಪ್ರತಿಮೆಗಳನ್ನು ಗುಡಿಗಳಲ್ಲಿರಿಸಿ ಕೊಳ್ಳುತ್ತಿದ್ದರು. ಶಿವನೇ ಲಿಂಗವನ್ನು ಹೊತ್ತಂತೆ, ಶಿವ–ಪಾರ್ವತಿಯರೇ ಲಿಂಗವನ್ನು ಪೂಜಿಸುತ್ತಿರುವಂತೆ, ಲಿಂಗವೂ ಪ್ರತಿಮೆಯೂ ಕೂಡಿಕೊಂಡಿರುವಂತೆ ಮೂರ್ತಿಗಳಲ್ಲಿರುತ್ತಿದ್ದುವು. ಗರ್ಭಗುಡಿಯೊಳಗೆ ಲಿಂಗವೇ ಧ್ರುವಬೇರವಾದರೂ ಉತ್ಸವಗಳಿಗೆ ಅನುಕೂಲವಾಗುವ ಚಲಬೇರ ಪ್ರತಿಮೆಯೇ ಆಗಿರುತ್ತಿರುತ್ತಿದ್ದಿತು; ಇದು ಮನುಷ್ಯಾಕಾರದ ಶಿವನ ಪ್ರತೀಕ. ದೇವಾಲಯಗಳಲ್ಲಿ ಶಿವನ ಲೀಲಾಮೂರ್ತಿಗಳೂ ಇರುತ್ತಿದ್ದುವು. ಸುಪ್ರಭೇದಾಗಮದಲ್ಲಿ 'ಲಿಂಗಲಕ್ಷಣ'ವನ್ನು ಹೇಳಿದನಂತರ 'ಸಕಲಲಕ್ಷಣ' (ಅ. 34) ಎಂಬ ಅಧ್ಯಾಯ ಬರುತ್ತದೆ; ಇಲ್ಲಿ ಶಿವನ ಮಾನುಷೀಮೂರ್ತಿಗಳ ಪ್ರಸ್ತಾಪವಿದೆ. 'ಸ-ಕಲ' ಎಂದರೆ ಕಲೆಗಳಿಂದ, ವ್ಯಕ್ತವಿವರಗಳಿಂದ, ಕೂಡಿದ್ದು; ನಿಷ್ಕಲವೆಂದರೆ ಹೀಗೆ ವಿವರಗಳಿಲ್ಲದ್ದು, ಲಿಂಗ.

ದಕ್ಷಿಣ ದೇಶದ ಶಿಲ್ಪಶಾಸ್ತ್ರಗ್ರಂಥಗಳಲ್ಲಿ ಶಿವನಿಗೆ ಹದಿನಾರು, ಹದಿನೆಂಟು, ಅಥವಾ ಇಪ್ಪತ್ತೆಂಟು ಲೀಲಾಮೂರ್ತಿಗಳನ್ನು ಹೇಳಿದ್ದಾರೆ. ಮುಖ್ಯವಾಗಿ ಕಾಶ್ಯಪ ಶಿಲ್ಪ, ಈಶಾನಶಿವಗುರುದೇವಪದ್ಧತಿ ಮತ್ತು ಮಯಮತ ಇವುಗಳಲ್ಲಿ ಈ ಮೂರ್ತಿಗಳ ಲಕ್ಷಣಗಳನ್ನು ವಿವರಿಸಿದ್ದಾರೆ. ಉತ್ತರ ದೇಶದ ಶಿಲ್ಪಶಾಸ್ತ್ರ ಪ್ರಕ್ರಿಯೆಯಲ್ಲಿ ಈ ಲೀಲಾಮೂರ್ತಿಗಳ ಪ್ರಸ್ತಾಪ ಅಷ್ಟಾಗಿ ಕಾಣಸಿಗುವುದಿಲ್ಲ. ಈ ಮೂರ್ತಿಗಳು ದ್ರಾವಿಡ ದೇಶದ ದೇವಾಲಯಗಳಲ್ಲಿ ಹೆಚ್ಚಾಗಿ ಇರುವುದಕ್ಕೆ ಇದೇ ಕಾರಣ. ಪುರಾಣ, ಸ್ಥಳ ಮಾಹಾತ್ಮ್ಯ, ಕ್ಷೇತ್ರೇತಿಹಾಸ ಇವುಗಳನ್ನವಲಂಬಿಸಿ ಪ್ರಚುರವಾದ ಕಥೆಗಳೂ ಪ್ರಸಂಗಗಳೂ ಈ ಲೀಲಾಮೂರ್ತಿಗಳ ಹಿನ್ನೆಲೆ. ಒಂದೊಂದು ಕ್ಷೇತ್ರದಲ್ಲಿಯೂ ಒಂದೊಂದು ಲೀಲಾಮೂರ್ತಿಗೆ ಪ್ರಾಶಸ್ತ್ಯವಿರುತ್ತದೆ — ಚಿದಂಬರದಲ್ಲಿ ನಟರಾಜಮೂರ್ತಿ ಯಿದ್ದಂತೆ, ಮಧುರೆಯಲ್ಲಿ ಸುಂದರೇಶಮೂರ್ತಿಯಿದ್ದಂತೆ, ಕಾಂಚೀಪುರದಲ್ಲಿ ಏಕಾಮ್ರೇಶ ಮೂರ್ತಿಯಿದ್ದಂತೆ, ಮಾಯಾವರದಲ್ಲಿ ಮಯೂರನಾಥ ಮೂರ್ತಿಯಿದ್ದಂತೆ, ಎರುಂಬೂರಿನಲ್ಲಿ ಕದಂಬವನೇಶಮೂರ್ತಿಯಿದ್ದಂತೆ, ಗೋವಿಂದಪುತ್ತೂರಿನಲ್ಲಿ ಗಂಗಾಜಟಾಧರೇಶ್ವರ ಮೂರ್ತಿಯಿದ್ದಂತೆ, ಕೋನೇರಿರಾಜಪುರದಲ್ಲಿ ಉಮಾ ಮಹೇಶ್ವರ ಮೂರ್ತಿಯಿದ್ದಂತೆ, ಕುಂಭಕೋಣದಲ್ಲಿ ನಾಗೇಶ್ವರ ಮೂರ್ತಿಯಿದ್ದಂತೆ, ರಾಮೇಶ್ವರದಲ್ಲಿ ರಾಮ ನಾಥಮೂರ್ತಿಯಿದ್ದಂತೆ, ತಿರುವಾರೂರಿನಲ್ಲಿ ವಲ್ಮೀಕೇಶ್ವರ ಮೂರ್ತಿಯಿದ್ದಂತೆ. ಇವೆಲ್ಲ ಕಥೆಗಳು ಸಿದ್ಧವಾದ ಮೇಲೇ ಮೈದಳೆದ ಮೂರ್ತಿಗಳು ಎನ್ನಲಡ್ಡಿಯಿಲ್ಲ.

ಸಾಮಾನ್ಯವಾಗಿ ಹದಿನಾರು ಅಥವಾ ಹದಿನೆಂಟು ಶಿವಲೀಲಾಮೂರ್ತಿಗಳನ್ನು ನಿರ್ದೇಶಿಸುವುದು ಉಂಟು. ಕಾಶ್ಯಪಸಂಹಿತೆಯ ಪ್ರತಿಮಾಲಕ್ಷಣವೆಂಬ ಅಧ್ಯಾಯದಲ್ಲಿ (ಪಟಲ 50) ಹೇಳಿರುವ ಮೂರ್ತಿಗಳಿವು: ಸುಖಾಸನ, ಸೋಮಾಸ್ಕಂದ (ಸಉಮಾಸ್ಕಂದ ಅಥವಾ ಉಮಾಸ್ಕಂದ), ಚಂದ್ರಶೇಖರ, ವೃಷ(ಭ)ವಾಹನ, ನೃತ್ಯಮೂರ್ತಿ, ಗಂಗಾಧರ, ತ್ರಿಪುರಾರಿ (ತ್ರಿಪುರಹರಣ, ತ್ರಿಪುರಾಂತಕ), ಕಲ್ಯಾಣಸುಂದರ, ಸಾರ್ಧನಾರೀ (ಅರ್ಧನಾರೀಶ್ವರ), ಗಜಹಾ (ಗಜಾಸುರಸಂಹಾರ), ಪಾಶುಪತ (ಕಿರಾತಾರ್ಜುನ), ಕಂಕಾಳ (ಕಂಕಂಗಳ), ಹರಿಹರ (ಶಿಲ್ಪರತ್ನದಲ್ಲಿ ಅರ್ಧನಾರಾಯಣ), ಭಿಕ್ಷಾಟನ, ಚಂಡೇಶ್ವರ ಪ್ರಸಾದ (ಚಂಡೇಶಾನುಗ್ರಹ, ಚಂಡೇಶ ವರಪ್ರಸಾದ), ದಕ್ಷಿಣಾಮೂರ್ತಿ, ಕಾಲಾರಿ (ಕಾಲಕಾಲ, ಕಾಲದಹನ). ಇವಲ್ಲದೆ ವಿಷಕಂಠಮೂರ್ತಿ, ಚಕ್ರಪ್ರದಾನಮೂರ್ತಿ, ವೀರಭದ್ರಮೂರ್ತಿ, ಸದಾಶಿವಮೂರ್ತಿ, ಋಷಭವಾಹನ, ದಕ್ಷಾಧ್ವರಹರಣ ವೀರಭದ್ರ, ಲಿಂಗೋದ್ಭವಮೂರ್ತಿ, ಏಕಪಾದಮೂರ್ತಿ ಮೊದಲಾದುವೂ ಇರುತ್ತವೆ. ದೊಡ್ಡ ದೊಡ್ಡ ಶಿವದೇವಾಲಯಗಳಲ್ಲಿ ಒಳಪ್ರಾಕಾರದುದ್ದಕ್ಕೂ ಸಾಲಾಗಿ ಈ ಮೂರ್ತಿಗಳನ್ನು ಕಡೆದು ನಿಲ್ಲಿಸಿರುವುದುಂಟು. ಒಟ್ಟಿನಲ್ಲಿ, ಶಿವಲೀಲಾಮೂರ್ತಿಗಳು ಎರಡು ಬಗೆಯವು—ಅನುಗ್ರಹಮೂರ್ತಿಗಳು ಸಂಹಾರಮೂರ್ತಿಗಳು ಎಂದು. ವೈದಿಕ ರುದ್ರನಿಗೂ ಇವೆರಡು ಮುಖಗಳಿದ್ದುವು ಎನ್ನುವುದನ್ನು ನೆನಸಿಕೊಳ್ಳಬಹುದು.

ಇವುಗಳಲ್ಲಿ ಕೆಲವಕ್ಕೆ ಉಪಪ್ರಭೇದಗಳೂ ಇವೆ. ನೃತ್ಯಮೂರ್ತಿ, ದಕ್ಷಿಣಾಮೂರ್ತಿ, ಭೈರವ ಇವು ನಿದರ್ಶನಗಳು. ನೃತ್ಯಮೂರ್ತಿಗಳು ನಟರಾಜ, ತಾಂಡವೇಶ್ವರ ಎಂದು ಪ್ರಸಿದ್ಧವಾಗಿವೆ. ಚಿದಂಬರ ನಟರಾಜನ ಪ್ರಸಿದ್ಧ ಕ್ಷೇತ್ರವಾದರೂ ಹಲವಾರು ಶಿವಕ್ಷೇತ್ರಗಳಲ್ಲಿ ಶಿವನ ಈ ಲೀಲೆಯ ಶಿಲ್ಪಗಳನ್ನು ಕಾಣಬಹುದು. ಚಿದಂಬರವೇ ಈ ಲೀಲಾಮೂರ್ತಿಯ ಸಂಪ್ರದಾಯಕ್ಕೆ ಸ್ಫೂರ್ತಿಯನ್ನೊದಗಿಸಿತು. ಈ ಸ್ಥಳಕ್ಕೆ ಮೊದಲು 'ತಿಲ್ಲೈ 3000' ಎಂದು ಹೆಸರಿದ್ದು, ಇಲ್ಲಿನ ಬ್ರಾಹ್ಮಣ ಸಮುದಾಯವೇ ತಮಿಳುನಾಡಿನಲ್ಲೆಲ್ಲ ತುಂಬ ಹಳಬರೆಂದು ಪ್ರತೀತಿಯಿದ್ದಿತು. ಈ ಗುಡಿಯಲ್ಲಿ ಪೂಜೆಮಾಡುವ ಅರ್ಚಕರು ದೀಕ್ಷಿತರೆನಿಸಿಕೊಳ್ಳುತ್ತಾರೆ; ಚಿದಂಬರದ ನಟರಾಜನು ತಮ್ಮವನೇ ಎಂದೂ ತಾವು ಮಾತ್ರ ಅವನನ್ನು ಗುಡಿಯಲ್ಲಿ ಪೂಜಿಸುವ ಅಧಿಕಾರವುಳ್ಳವರೆಂದೂ ಇವರ ನಂಬಿಕೆ. ಅವರ ದೃಷ್ಟಿಯಲ್ಲಿ ತಿಲ್ಲೈ ಅಥವಾ ಚಿದಂಬರದ ಗುಡಿಯೇ ಗುಡಿ; ಆದುದರಿಂದ ಅದನ್ನು ಅವರು 'ಕೋಯಿಲ್' ಎಂದೇ ವ್ಯವಹರಿಸುತ್ತಾರೆ. ಪ್ರಾಚೀನ ಪುಹಾರ್ ನಾಡಿಗೆ ಸೇರಿದ್ದ ತಿರುವೆಂಕಾಡು ಮೊದಲಿನ ತಿಲ್ಲೈ (ಆದಿತಿಲ್ಲೈ) ಯಾಗಿದ್ದಂತೆ ತಿಳಿದು ಬರುತ್ತದೆ; ಅನಂತರ ಈಗಿರುವ ಸ್ಥಳಕ್ಕೆ ಬದಲಾಯಿತಂತೆ. ಚೋಳರಾಜರು ಇದರ ಅಭಿವೃದ್ಧಿಗಾಗಿ ತುಂಬ ಶ್ರಮಿಸಿದರು; ಕಾರಣ ಇದು ಚೋಳರ ಕುಲಕ್ಷೇತ್ರ. ಅಲ್ಲಿನ ಗುಡಿಯ ಗರ್ಭಗೃಹದಲ್ಲಿ ಉಳಿದ ಶಿವಾಲಯಗಳಲ್ಲಿರುವಂತೆ ಶಿವಲಿಂಗವಿಲ್ಲ; ಗರ್ಭಗೃಹ ಬರಿದಾಗಿದ್ದು ಗೋಡೆಯ ಮೇಲೆ ಚಕ್ರವೊಂದರ ನಿರೂಪಣೆಯಿದೆಯಷ್ಟೆ. ಇಲ್ಲಿರುವುದು 'ಆಕಾಶಲಿಂಗ' (ಆಕಾಶವೆಂದರೆ ಬರಿಯದು ಎಂದರ್ಥ) ವೆಂದು ಪ್ರತೀತಿ. ಅದರ ಮುಂದೆ ತೆರೆಯನ್ನೆಳೆದಿದ್ದಾರೆ; ಪೂಜೆಯ ಕೆಲವು ಅವಸರಗಳಲ್ಲಿ ಮಾತ್ರ ಇದನ್ನು ಪಕ್ಕಕ್ಕೆ ಸರಿಸುತ್ತಾರೆ. ಇದೇ 'ಚಿದಂಬರ ರಹಸ್ಯ'ವೆಂದು

ಚಿತ್ರ 72
ವ್ಯಾಘ್ರಪಾದ, ಪತಂಜಲಿ.
ಚಿದಂಬರ ನಟೇಶನ ಮುಂದಿರುವ ಮೂರ್ತಿಗಳು

ಪ್ರಸಿದ್ಧವಾಗಿರುವುದು. ತೆರೆಯ ಮುಂಭಾಗದಲ್ಲಿ ನಟರಾಜ ಮೂರ್ತಿಯನ್ನಿರಿಸಿದ್ದಾರೆ. ವ್ಯಾಘ್ರಪಾದ, ಪತಂಜಲಿ ಋಷಿಗಳ ಅನುಗ್ರಹಕ್ಕೆಂದು ಇಲ್ಲಿ ಶಿವ ಆನಂದತಾಂಡವವನ್ನು ನಟಿಸಿದನೆಂದು ಕಥೆಯಿದೆ. ಗುಡಿಯಲ್ಲಿ ಈ ಋಷಿಗಳ ಭಕ್ತವಿಗ್ರಹಗಳೂ ಇವೆ (ಚಿತ್ರ 72).

ಆರನೆಯ ಶತಮಾನದಲ್ಲಿದ್ದ ತಿರುಮೂಲರ್ 'ಆನಂದ–ತಿಲ್ಲೈ–ಕುತ್ತು'ವನ್ನು ವರ್ಣಿಸಿದ್ದಾನೆ; ಮುಂದಿನ ಶತಮಾನದ ಅಪ್ಪರ್ ಮತ್ತು ಸಂಬಂದರ್ ಇಬ್ಬರೂ ತಿಲ್ಲೈ ನಟರಾಜನನ್ನು ಹಾಡಿ ಹೊಗಳಿದ್ದಾರೆ. ನಟರಾಜ ಮೂರ್ತಿಯ ಕಲ್ಪನೆ ಇಷ್ಟಂತೂ ಹಳೆಯದು; ಅದಕ್ಕೂ ಮೊದಲು ಇದ್ದಿತೋ ಇಲ್ಲವೋ ತಿಳಿಯುವುದಿಲ್ಲ. ಬಾದಾಮಿ, ಐಹೊಳೆ, ಎಲ್ಲೋರ, ಎಲಿಫೆಂಟ, ಉದಯಗಿರಿ ಇಲ್ಲೆಲ್ಲ ನಟರಾಜ ಶಿಲ್ಪಗಳಿರುವುದೂ ಇದೇ ಸರಿಸುಮಾರಿನದು. ದಕ್ಷಿಣದೇಶದಲ್ಲಿ ನಟರಾಜನ ಶಿಲ್ಪ ಮೊದಲನೆಯ ಪರಾಂತಕ (ಮುದಿರೈಕೊಂಡ ಪರಕೇಸರಿ, 907–955) ನ ಕಾಲದಲ್ಲಿ ಸಿದ್ಧವಾಯಿತೆಂದು ಹೇಳುತ್ತಾರೆ. ಪಲ್ಲವ ಮಾದರಿಯ ಜಟಾಮುಕುಟವನ್ನು ಧರಿಸಿ, ಊರ್ಧ್ವಜಾನುಭಂಗಿಯಲ್ಲಿರುವ ಕೂರಂ ನಟರಾಜ (ಚಿತ್ರ 73) ನಮಗೆ ದೊರೆತಿರುವ ಮೂರ್ತಿಗಳಲ್ಲೆಲ್ಲ ತುಂಬ ಹಳೆಯದು; ಇದು ಎಂಟು ಅಥವಾ ಒಂಬತ್ತನೆಯ ಶತಮಾನದಲ್ಲಿ ಆದದ್ದೆಂದು ಶಿವರಾಮಮೂರ್ತಿಗಳ ಎಣಿಕೆ. ಇದರ ನಂತರ ಆದುದೆಂದರೆ ಕ್ರಿಸ್ತಾಬ್ದ 900 ರ ಸುಮಾರಿಗೆ ಸಿದ್ಧವಾದ ನಲ್ಲೂರು (ತಂಜಾವೂರು ಜಿಲ್ಲೆ) ಸಭಾಪತಿ ನಟರಾಜ; ಅಷ್ಟಭುಜದ ಚತುರಭಂಗಿಯ ಮೂರ್ತಿ ಅದು (ಚಿತ್ರ 74). ಇದೂ ಪಲ್ಲವರ ಕಾಲದ್ದೇ. ಮುಂದಿನ ಶತಮಾನಗಳಿಂದ ನಟರಾಜಮೂರ್ತಿಗಳು ತಮಿಳು ನಾಡಿನಲ್ಲಿ ವಿಶೇಷವಾಗಿ ಬಳಕೆಯಲ್ಲಿ ಬಂದುವು.

ಕಾರಣಾಗಮದಲ್ಲಿ ಏಳು ಬಗೆಯ ನೃತ್ಯಭಂಗಿಗಳನ್ನು ಶಿವನಿಗೆ ಹೇಳಿದ್ದಾರೆ; ಮೊದಲನೆಯದೇ

ಚಿತ್ರ 73
ಕೂರಂ ನಟರಾಜ

ಚಿತ್ರ 74
ನಲ್ಲೂರು ನಟರಾಜ

ಚಿತ್ರ 75 ಆನಂದತಾಂಡವ

ಚಿತ್ರ 76 ಆನಂದತಾಂಡವ

ಚಿತ್ರ 77 ಆನಂದತಾಂಡವ

ಆನಂದತಾಂಡವ, ಹೆಚ್ಚು ಪ್ರಚಾರದಲ್ಲಿರುವ ಭಂಗಿ (ಚಿತ್ರ 75, 76, 77). ನಾಲ್ಕು ಕೈಗಳು, ಮೂರು ಕಣ್ಣುಗಳು, ತಲೆಯ ಎರಡೂ ಕಡೆ ಹರಡಿಕೊಂಡ ಜಟೆ, ಗಂಗೆ–ಚಂದ್ರರು ತಲೆಯಮೇಲೆ, ಒಂದು ಕಿವಿಗೆ ಕರ್ಣಪತ್ರ ಇನ್ನೊಂದಕ್ಕೆ ಮಕರಕುಂಡಲ, ಯಜ್ಞೋಪವೀತ, ನಡುವಿಗೆ ಹುಲಿಯ ಚರ್ಮ, ಕಾಲಿಗೆ ಪಾದಸರಸ್ನು–ಕಿಂಕಿಣಿಗಳು, ಅಭಯ ಹಸ್ತ ಡಮರುಗ ಬಲಗೈಗಳಲ್ಲಿ, ದಂಡಹಸ್ತ ಅಗ್ನಿ ಎಡಗೈ ಗಳಲ್ಲಿ, ಬಲಗಾಲು ಆಕುಂಚಿತವಾಗಿ ಮುಯಲಕ ಅಥವಾ ಅಪಸ್ಮಾರ ಪುರುಷನ ಮೇಲೆ, ಎಡಗಾಲು ಗಜಹಸ್ತಭಂಗಿಯಲ್ಲಿ: ಇದು ಆನಂದತಾಂಡವ. ಇದಕ್ಕೆ ನಾದಾಂತ ನಟನ ಎಂದೂ, ಭುಜಂಗತ್ರಾಸ (ಪುಯಂಗನ್) ಎಂದೂ ಕರೆಯುವುದುಂಟು. ಚಿದಂಬರದಲ್ಲಿರುವ ಭಂಗಿಯಿದು. ನಟರಾಜನ ಜಟೆಯಲ್ಲಿ ಗಂಗೆಯನ್ನು ಚಿತ್ರಿಸುವ ವಿವರ ಮೊದಲ ನೆಯ ರಾಜೇಂದ್ರ ಚೋಳನ (1012–1044) ಕಾಲದ್ದೆಂದೂ ಗಂಗರಾಜ್ಯವನ್ನು ಅವನು ಗೆದ್ದುದನ್ನು ಇದು ಸಂಕೇತಿಸುವುದೆಂದೂ ಹೇಳುತ್ತಾರೆ; ನಟ ರಾಜನಿಗೆ ತಮಿಳಿನಲ್ಲಿ 'ಗಂಗೈ'–ಪೂಂದನ್' (ಗಂಗೆ ಯನ್ನು ಹೊತ್ತವನು) ಎಂಬ ಹೆಸರು ಬಳಕೆಗೆ ಬಂದಿದೆ. ಆದರೆ ಈ ಕಾಲಕ್ಕೆ ಮೊದಲೂ ಅವನು ಗಂಗಾಧರನಾಗಿದ್ದ ಉಲ್ಲೇಖವಿದೆ, ಅದನ್ನು ಸೂಚಿಸುವ ಶಿಲ್ಪಗಳಿವೆ.

ಆನಂದತಾಂಡವವಲ್ಲದೆ ಸಂಧ್ಯಾತಾಂಡವ, ಉಮಾತಾಂಡವ, ಗೌರೀತಾಂಡವ, ಕಾಳಿಕಾತಾಂಡವ, ತ್ರಿಪುರತಾಂಡವ, ಸಂಹಾರತಾಂಡವಗಳನ್ನು ಕಾರಣಾ ಗಮ ವರ್ಣಿಸಿದೆ. ಕಾಶ್ಯಪ ಶಿಲ್ಪದಲ್ಲಿ ಹದಿನೆಂಟು ಬಗೆಗಳನ್ನು ಹೇಳಲಾಗಿದೆ. ಇವುಗಳಲ್ಲಿ ಒಂಬತ್ತರ ಪ್ರಸ್ತಾಪ (ನವತಾಂಡವ) ಹೆಚ್ಚಾಗಿ ಬಂದಿದೆ; ಈ ಒಂಬತ್ತನ್ನೇ ಶಿಲ್ಪರತ್ನವೂ ವಿವರಿಸುತ್ತದೆ. ತಮಿಳುನಾಡಿನ ವಿಖ್ಯಾತ ನಟರಾಜ ಮೂರ್ತಿಗಳಲ್ಲಿ ಚಿದಂಬರದ್ದಲ್ಲದೆ ಕೋನೇರಿರಾಜಪುರಂ, ಓಕ್ಕೂರು, ಶಿವಪುರಂ, ತಂದನ್‌ತೋಟ್ಟಂ, ತಿರುಪ್ಪಳನಂ,

ತಿರುಕ್ಕಾರೈವಾಶಲ್, ತಿರುಚ್ಚೆಂಗಾಟ್ಟಾಂಗುಡಿ, ತಂಜಾವೂರ್, ನಲ್ಲೂರ್, ಅತ್ತಿಪ್ಪುಲಿಯೂರ್ ಮೊದಲಾದೆಡೆ ಇರುವ ಮೂರ್ತಿಗಳೂ ಸೊಗಸಾಗಿವೆ, ಹೆಸರು ಪಡೆದಿವೆ (ಚಿತ್ರ 78, 79). ಉಮಾತಾಂಡವದಲ್ಲಿ ಎಡಗಡೆ ಪಾರ್ವತಿಯಿರುತ್ತಾಳೆ; ಗೌರೀ ತಾಂಡವದಲ್ಲಿ ಬಲಗಡೆ ನಂದಿಯಿರುತ್ತದೆ. ಕಾಳಿಕಾತಾಂಡವದಲ್ಲಿ ಶಿವನಿಗೆ ಅಷ್ಟ ಭುಜಗಳು, ಎರಡೇ ಕಣ್ಣುಗಳು; ತ್ರಿಶೂಲ ಡಮರು ಪಾಶ ಕಪಾಲ ಅಗ್ನಿ ಗಂಟೆ ಇವು ಆಯುಧಗಳು, ಉಳಿದೆರಡು ಕೈಗಳು ಅಭಯ–ವರದ ಮುದ್ರೆಯಲ್ಲಿರುತ್ತವೆ. ತ್ರಿಪುರತಾಂಡವದಲ್ಲಿ ಹದಿನಾರು ಕೈಗಳು; ಪಾರ್ಶ್ವಗಳಲ್ಲಿ ಗೌರಿಯೂ ಸ್ಕಂದನೂ ಇರುತ್ತಾರೆ. ಸಂಹಾರತಾಂಡವದಲ್ಲಿ ಅಷ್ಟಭುಜಗಳು, ಕಪಾಲ ಮಾಲೆ ವಿಶೇಷವಾದುದು.

ಚಿತ್ರ 78
ಕಾಲ್‌ಮಾರಿಆಡಿಯತಾಂಡವಂ
ಕಾಲನ್ನು ಬದಲಿಸಿದ ಅಪುರೂಪ ಭಂಗಿ; ಬಲಗಾಲು ಗಜಹಸ್ತಾಕಾರವಾಗಿದ್ದು ಎಡಗಾಲು ಆಕುಂಚಿತ ವಾಗಿರುವುದು ಇದರ ವಿಶೇಷ, ಈ ಶಿಲ್ಪಗಳನ್ನು ಮಧುರೆಯ ಅಕ್ಕಪಕ್ಕವೇ ಹೆಚ್ಚಾಗಿ ಕಾಣಬಹುದು.

ಚಿತ್ರ 79
ಊರ್ಧ್ವತಾಂಡವ
ಇದನ್ನು ಲಲಾಟ ತಿಲಕ ಕರಣವೆಂದೂ ಹೇಳುತ್ತಾರೆ. ಚಿತ್ತೂರಿನಬಳಿ ತಿರುವಾಲಂಗಾಡಿನಲ್ಲಿ ಒಂದು ಸುಂದರ ಶಿಲ್ಪವಿದೆ.

ಚಿದಂಬರ ನಟೇಶನು ದೇವತೆಯಾಗಿ ಉಳ್ಳ ಪಂಚಾಕ್ಷರ ಮಂತ್ರವನ್ನು ಮೋಕ್ಷರಕ್ಷಾಪ್ರಧಾನವೆಂದು ಹೇಳುತ್ತಾರೆ: 'ಓಂ ಹ್ರೀಂ ಶ್ರೀಂ ನಮಶ್ಶಿವಾಯ ಶ್ರೀಂ ಹ್ರೀಂ ಓಂ' ಈ ಮಂತ್ರಕ್ಕೆ ಧ್ಯಾನಶ್ಲೋಕವು ಮೂರ್ತಿಯ ಲಕ್ಷಣಗಳನ್ನು ನಿರೂಪಿಸುತ್ತದೆ —

ಪ್ರಥಮಂ ವಹ್ನಿಹಸ್ತಂ ಚ ದ್ವಿತೀಯಂ ಚರಣೌ ತಥಾ ।
ತೃತೀಯಂ ಲಂಬಹಸ್ತಂ ಚ ಚತುರ್ಥಂ ಡಮರುಂ ಸ್ಮರೇತ್ ।
ಅಭಯಂ ಪಂಚಮಂ ಚೈವ ಭಾವಯೇತ್ಸುಧೀಃ ॥

ಧ್ಯಾನಾಂತರವು ಮೂರ್ತಿಲಕ್ಷಣವನ್ನು ಇನ್ನಷ್ಟು ವಿಶದಗೊಳಿಸುತ್ತದೆ —

ವಾಮಹಸ್ತೇಽಥ ವಹ್ನಿಂ ನಯಿತುಮಥ ಕರೇ ದಕ್ಷಿಣೇ ಚಿತ್ಸ್ವರೂಪಂ ।
ಶಬ್ದಬ್ರಹ್ಮೈಕನಿಷ್ಠಂ ಡಮರುಮಭಯದಂ ಯಂ ವಕಾರಂ ಚ ವಾಮೇ ।
ಹಸ್ತೇ ಶ್ರೀ ದಕ್ಷಿಣೇನ ಸ್ವಪದಸರಸಿಜೇನಾತ್ಮಮೋಹಂ ಚ ಧಾಮ್ನಾ ।
ಚಾಕ್ರಮ್ಯಾವಸ್ಥಿತಂ ತ್ವಾಂ ಭಜತಿ ಹಿ ನಿಟಿಲೇ ನಿಗ್ರಾಹಾನುಗ್ರಹಾಭ್ಯಾಂ ॥

ನಟರಾಜಮೂರ್ತಿಯು ಅನುಗ್ರಹಮೂರ್ತಿಯೂ ಹೌದು, ಸಂಹಾರಮೂರ್ತಿಯೂ ಹೌದು ಎನ್ನುವ ಕಲ್ಪನೆ ಇಲ್ಲಿ ಕಾಣುತ್ತದೆ.

ಎಲ್ಲ ಶಿವಾಲಯಗಳಲ್ಲಿಯೂ ದಕ್ಷಿಣಭಾಗದ ದೇವಕೋಷ್ಠದಲ್ಲಿ ದಕ್ಷಿಣಾಮೂರ್ತಿಯ ಶಿಲ್ಪವಿರಬೇಕೆಂದು ಶಾಸ್ತ್ರ ಹೇಳುತ್ತದೆ. ನಿದರ್ಶನಕ್ಕೆ ಮಯಮತವು ಪೂರ್ವದಲ್ಲಿ ದ್ವಾರಪಾಲಕರು ಅಥವಾ ನಂದಿಕೇಶ, ಪಶ್ಚಿಮದಲ್ಲಿ ಮಹಾವಿಷ್ಣು ಅಥವಾ ಲಿಂಗೋದ್ಭವ, ದಕ್ಷಿಣದಲ್ಲಿ ದಕ್ಷಿಣಾಮೂರ್ತಿ ('ದಕ್ಷಿಣೇ ದೇವಕೋಷ್ಠೇ ಚ ದಕ್ಷಿಣಾಮೂರ್ತಿಮರ್ಚಯೇತ್'—ಕಾಮಿಕಾಗಮ) ಮತ್ತು ಉತ್ತರದಲ್ಲಿ ಬ್ರಹ್ಮ ಇವರ ಶಿಲ್ಪಗಳು ಇರಬೇಕೆಂದು ಹೇಳಿದೆ. ಈಶಾನಶಿವಗುರುದೇವ ಪದ್ಧತಿಯಲ್ಲಿಯೂ ಹೆಚ್ಚೂಕಡಮೆ ಇದೇ ವಿವರವಿದೆ. ದಕ್ಷಿಣಾಮೂರ್ತಿಯ ಶಿಲ್ಪಕೃತಿಗಳು ಸಾಮಾನ್ಯವಾಗಿ ತುಂಬ ಸುಂದರವಾಗಿರುತ್ತವೆ; ಅವುಗಳಿಗೆ ಗುಡಿಗಳಲ್ಲಿ ಮರ್ಯಾದೆಯೂ ಹೆಚ್ಚು. ಈ ಲೀಲಾಮೂರ್ತಿಯ ಹಿನ್ನೆಲೆಯ ಕಥೆ ಹೀಗೆ. ಒಮ್ಮೆ ಸೋಮಕಾಸುರನು ನಾಲ್ಕೂ ವೇದಗಳನ್ನು ಕದ್ದು ಸಮುದ್ರದೊಳಗೆ ಅಡಗಿಕೊಂಡನಂತೆ. ವಿಷ್ಣುವು ಮೀನಿನ ಆಕಾರವನ್ನು ತಳೆದು ನಾಲ್ಕು ವೇದಗಳನ್ನು ನಾಲ್ಕು ಮಕ್ಕಳಂತೆ ಮಾಡಿ ಹಿಡಿದುಕೊಂಡು ಮೇಲೆ ಬರುತ್ತಿದ್ದನಂತೆ. ಇವನ್ನು ಹಿಡಿದು ಅಸುರನೊಂದಿಗೆ ಕಾದಾಡುವುದು ಕಷ್ಟವೆನಿಸಿದಾಗ ಶಿವನಲ್ಲಿ ಮೊರೆಯಿಡಲು, ಶಿವನು ದಕ್ಷಿಣಾಮೂರ್ತಿಯಾಗಿ ಅಸುರನನ್ನು (ಮುಯಲಹನ್) ಬಲ ಕಾಲಡಿಯಲ್ಲಿ ತುಳಿದು ಕುಳಿತನಂತೆ. ಆಗ ನಾಲ್ಕು ವೇದಗಳು ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತ ಈ ನಾಲ್ವರು ಋಷಿಗಳಾಗಿ ದಕ್ಷಿಣಾಮೂರ್ತಿಯ ಶಿಷ್ಯರಾದರಂತೆ. ಶಿವನು ಅವರಿಗೆ ವೇದಾರ್ಥವನ್ನು ವ್ಯಾಖ್ಯಾನ ಮಾಡಿದನಂತೆ. ಹೀಗೆ ದಕ್ಷಿಣಾಮೂರ್ತಿ ಮುಖ್ಯವಾಗಿ ಜ್ಞಾನಾಭಿಮಾನಿ ದೇವತೆ; ದಕ್ಷಿಣಾಮೂರ್ತಿಯ ಮಂತ್ರವೂ ಜ್ಞಾನಪ್ರಧಾನವಾದ ಮಂತ್ರವೇ. ಕಾಮದಹನವಾದಮೇಲೆ ವಿರಕ್ತನಾಗಿ ಶಿವನು ತಪಸ್ಸಿಗೆ ಕುಳಿತ ಸಂದರ್ಭವನ್ನೂ ದಕ್ಷಿಣಾಮೂರ್ತಿಯ ಕಲ್ಪನೆಯಲ್ಲಿ ಸೇರಿಸುತ್ತಾರೆ.

ದಕ್ಷಿಣಾಮೂರ್ತಿಯು ಅನುಗ್ರಹ–ಸಂಹಾರಗಳೆರಡನ್ನೂ ಅಳವಡಿಸಿಕೊಂಡ ಮೂರ್ತಿಯಾದುದರಿಂದ ಸೌಮ್ಯಮುಖ, ಸಂಹಾರಸಂಕೇತ ಎರಡೂ ಇರುತ್ತವೆ; ಕಾಲಕೆಳಗೆ ಅಪಸ್ಮಾರಪುರುಷನೂ ಇರುತ್ತಾನೆ (ಚಿತ್ರ 80, 81). ದಕ್ಷಿಣಾಮೂರ್ತಿಗಳಲ್ಲಿಯೂ ಹಲವಾರು ಪ್ರಭೇದಗಳುಂಟು: ವೀರಾಸನದಲ್ಲಿ ಕುಳಿತ

ಚಿತ್ರ 80
ದಕ್ಷಿಣಾಮೂರ್ತಿ

ಚಿತ್ರ 81
ದಕ್ಷಿಣಾಮೂರ್ತಿ

ಲಕುಟೀದಕ್ಷಿಣಾಮೂರ್ತಿ, ಯೋಗಪಟ್ಟದಲ್ಲಿ ಕುಳಿತ ಮೇಧಾದಕ್ಷಿಣಾಮೂರ್ತಿ, ಸಂಹಾರಸಂಜ್ಞೆಯೇ ಪ್ರಮುಖವಾದ ಸಂಹಾರ ದಕ್ಷಿಣಾಮೂರ್ತಿ (ಭೂತ ಪ್ರೇತ ಪಿಶಾಚ ಬ್ರಹ್ಮರಾಕ್ಷಸ ದಾನವ ಕ್ಷುದ್ರದೈತ್ಯರನ್ನು ಸಂಹಾರವಮಾಡುವ ಮೂರ್ತಿ), ಯಜ್ಞದಲ್ಲಿ ಆರಾಧ್ಯ ದೈವದಂತೆ ಕುಳಿತ ಯಜ್ಞದಕ್ಷಿಣಾಮೂರ್ತಿ, ವೀಣೆಯನ್ನು ಹಿಡಿದ ವೀಣಾಧರ ದಕ್ಷಿಣಾಮೂರ್ತಿ, ಪಾರ್ವತಿಯೊಂದಿಗಿರುವ ಸಾಂಬದಕ್ಷಿಣಾಮೂರ್ತಿ ಮೊದಲಾದುವು. ಯಾವುದೇ ಪ್ರಭೇದವಾದರೂ ವ್ಯಾಖ್ಯಾನಮುದ್ರೆ (ಅಥವಾ ಜ್ಞಾನಮುದ್ರೆ), ಪುಸ್ತಕ, ಅಕ್ಷಮಾಲೆ ಇವು ಇದ್ದೇ ಇರುತ್ತವೆ. ಸಾಮಾನ್ಯವಾಗಿ ವಟಮೂಲವಾಸಿಯೆಂದು ಕಲ್ಪನೆಯಿದೆ; ಹಲವು ಶಿಲ್ಪಗಳಲ್ಲಿ ಹಿಂದೆ ಅರಳೀಮರವನ್ನು ಸೊಗಸಾಗಿ ಬಿಡಿಸಿರುತ್ತಾರೆ. ದಕ್ಷಿಣಾಮೂರ್ತಿಯ ಮಂತ್ರವಾದ "ಓಂ ಹ್ರೀಂ ದಕ್ಷಿಣಾಮೂರ್ತಯೇ ತುಭ್ಯಂ ವಟಮೂಲವಾಸಿನೇ ಧ್ಯಾನೈಕನಿರತಾಂಗಾಯ ನಮೋ ರುದ್ರಾಯ ಶಂಭವೇ ಹ್ರೀಂ ಓಂ" ಎನ್ನುವುದು ಜ್ಞಾನಪ್ರಧಾನವಾದುದು.

ವಟುಕಭೈರವನ ಶಿಲ್ಪವೂ ದಕ್ಷಿಣ, ಉತ್ತರದ ಗುಡಿಗಳಲ್ಲಿ ಕಾಣಸಿಗುತ್ತದೆ (ಚಿತ್ರ 82). ಭೂತ ಪ್ರೇತ ಪಿಶಾಚಗಳ ಉಚ್ಚಾಟನೆಗೆಂದು ಭೈರವನ ಪೂಜೆ ಪ್ರಸಿದ್ಧವಾಗಿದೆ; ಅವನದು ಆಪದುದ್ಧರಣ ಮಂತ್ರ. ಕೈಯಲ್ಲಿ ಕಪಾಲವನ್ನು ಹಿಡಿದು, ದಂಡಪಾಣಿಯಾಗಿ, ಹಾವನ್ನು ಜನಿವಾರವಾಗಿ ಧರಿಸಿ, ಯಾಗವನ್ನು ನಾಶಪಡಿಸುವ ಭೈರವನನ್ನು ಕ್ಷೇತ್ರಪಾಲನೆಂದೂ, ಮಹಾಶಾಸ್ತೃವೆಂದೂ ಕರೆಯುವುದುಂಟು ಭೈರವನೆಂದರೆ ಭಯಾನಕ; ಇದುಉಗ್ರರೂಪ. ಭೈರವಮೂರ್ತಿಯ ಪ್ರಭೇದಗಳು ಈ ಅಂಶವನ್ನು ಸ್ಪಷ್ಟ ಪಡಿಸುತ್ತವೆ – ತ್ರಿಪುರಾಂತ ಭೈರವ, ಉಗ್ರಭೈರವ, ಬಾಡವಾನಲಭೈರವ, ಅಗ್ನಿಭೈರವ ಅಗ್ನಿಜಿಹ್ವಭೈರವ, ಕಾಲಭೈರವ, ಕರಾಳಭೈರವ, ಭೀಮರೂಪಭೈರವ, ವೇತಾಲಭೈರವ, ಹಾಟಕೇಶ್ವರಭೈರವ ಇತ್ಯಾದಿ. ಇವುಗಳಲ್ಲಿ ಸ್ವರ್ಣಭೈರವ ಎನ್ನುವ ಮೂರ್ತಿಯೂ ಇರುವುದು ಸ್ವಾರಸ್ಯ ವಾದುದು. ಇದಕ್ಕೆ ದುರ್ವಾಸ ಋಷಿಯ ಸ್ವರ್ಣಾಕರ್ಷಣ ಭೈರವ ಮಂತ್ರವೊಂದಿದೆ; ದಾರಿದ್ರ್ಯಾಪಹಾರ ಇದರ ಪ್ರಯೋಜನ. ಇದರ ಧ್ಯಾನ ಶ್ಲೋಕ ಹೀಗೆ:

ಚಿತ್ರ 82
ಭಿಕ್ಷಾಟನ ಮೂರ್ತಿ

ಕೋಟಿಸೂರ್ಯಪ್ರತೀಕಾಶಂ ಕುಬೇರನಿಲಯಂ ಮಹಃ ।
ನೇತ್ರತ್ರಯಂ ಚತುರ್ಬಾಹೂ ಪಾಶಾಂಕುಶವರಾಭಯಂ ।
ಶಶಿಖಂಡ ಜಟಾಚೂಡಂ ಸ್ವರ್ಣಾಭರಣಭೂಷಿತಂ ।
ಸರ್ವಾಭರಣ ಸಂಪೂರ್ಣಂ ಶೋಭಿತಂ ಸ್ವರ್ಣಭೈರವಂ ।
ಸಿದ್ಧವಿದ್ಯಾಧರೈಸ್ಸೇವ್ಯಂ ಧ್ಯಾಯೇತ್ಕನಕ ಭೈರವಂ ॥

ಶಾರದಾತಿಲಕತಂತ್ರದಲ್ಲಿ ಈ ಭೈರವನಿಗೆ ಸಾತ್ತ್ವಿಕ, ರಾಜಸಿಕ, ತಾಮಸಿಕ ರೂಪಗಳನ್ನು ಹೇಳಿದ್ದಾರೆ. ದಕ್ಷಿಣ ದೇಶದಲ್ಲಿ ಸಾತ್ತ್ವಿಕರೂಪವೇ ಹೆಚ್ಚು ಬಳಕೆಯಲ್ಲಿದೆ. ನಗು ಮುಖದ ದ್ವಿಭುಜಮೂರ್ತಿ, ಬೆತ್ತಲೆಯಾಗಿದ್ದು ನಾಯಿಯೊಂದಿಗೆ ಇರುತ್ತಾನೆ. ಶಾರದಾತಿಲಕತಂತ್ರದಲ್ಲೇನೋ ನಾಯಿಯ ಪ್ರಸ್ತಾಪವಿಲ್ಲ. ರಾಜಸಿಕಭೈರವನಿಗೆ ನಾಲ್ಕು ಕೈಗಳು. ತಾಮಸಿಕ ರೂಪದಲ್ಲಿ ರುಂಡಮಾಲೆ, ಎಂಟು ಕೈಗಳು, ಸರ್ಪಾಭರಣ, ಕೋರೆದಾಡೆಗಳು.

ಅಘೋರರುದ್ರನನ್ನು ಅಘೋರ ಭೈರವನೆಂದು ಕರೆಯುವುದುಂಟು; ಇದು ತಾಮಸಿಕರೂಪವೇ ಕಾರ್ಮೋಡದಂತೆ ಕಪ್ಪಗಿರುವ ಮೈ; ಎಂಟು ಕೈಗಳಲ್ಲಿ ಕೊಡಲಿ, ಡಮರು, ಕತ್ತಿ, ಖೇಟ, ಬಾಣ, ಶೂಲ, ಕಪಾಲಗಳನ್ನು ಹಿಡಿದು, ಕೆಂಪು ಬಟ್ಟೆಯನ್ನುಟ್ಟು, ಹಾವುಗಳನ್ನು ಸುತ್ತಿಕೊಂಡು ಭಯಾನಕವಾಗಿರುವ ಈ ಮೂರ್ತಿಯ ಮಂತ್ರವು ರಕ್ಷಾಪ್ರಧಾನವಾದರೂ "ಹ್ರೀಂ ಸ್ಫುರ ಸ್ಫುರ, ಪ್ರಸ್ಫುರ ಪ್ರಸ್ಫುರ, ಘೋರ ಘೋರತರ ತನುರೂಪ, ಚಟ ಚಟ, ಪ್ರಚಟ ಪ್ರಚಟ, ವಮ ವಮ, ಬಂಧಯ ಬಂಧಯ, ಖಾದಯ ಖಾದಯ, ಹುಂ ಫಟ್" ಎನ್ನುವ ಸಂಹಾರಪದಗಳನ್ನೊಳಗೊಂಡಿದೆ. ಈ ಅಘೋರನ ಧ್ಯಾನಶ್ಲೋಕ ಹೀಗಿದೆ:—

ಕಾಲಾಭ್ರಾಭಃ ಕರಾಗ್ರೈಃ ಪರಶುಡಮರುಕೌ ಖಡ್ಗಖೇಟೌ ಚ ಬಾಣೇ-
ಷ್ವಾಸೌ ಶೂಲಂ ಕಪಾಲಂ ದಧದತಿಭಯದೋ ಭೀಷಣಾಸ್ಯಸ್ತ್ರಿಣೇತ್ರಃ ।
ರಕ್ತಾಕಾರೋಂಬರೋಽಹಿ ಪ್ರವರ ಘಟಿತಗಾತ್ರೋರಿ ನಾಗಗ್ರಹಾದೀನ್
ಖಾದನ್ನಿಷ್ಟಾರ್ಥದಾಯೀ ಭವದನಭಿಮತ ಛಿತ್ತಯೇಸ್ಯಾದಘೋರಃ॥

ಅಘೋರನನ್ನು ಪ್ರಸ್ತಾಪಮಾಡುವಾಗ ಮಂತ್ರಶಾಸ್ತ್ರದಲ್ಲಿ 'ಖಡ್ಗರಾವಣರುದ್ರ'ನೆಂಬ ದೇವತೆಯ ವಿವರವೂ ಬರುತ್ತದೆ. ಇದು ಭೂತಾಧಿಪತಿಯಾದ ರುದ್ರನು ಘಂಟೆ–ಕಪಾಲಗಳ ಮಾಲೆಯನ್ನು ಧರಿಸಿ ಮೈಗೆಲ್ಲ ಮಸಣದ ಬೂದಿಯನ್ನು ಬಳಿದುಕೊಂಡು, ಹರಿಹಾವಿನ ಜನಿವಾರವನ್ನು ಧರಿಸಿ, ಮಂಡಲಮಧ್ಯದಲ್ಲಿ ಕುಣಿದಾಡುತ್ತ ಭೂತಗಳನ್ನು ಬೆದರಿಸುವ ಮೂರ್ತಿ. ಇದೇ ಸಂದರ್ಭದಲ್ಲಿ ಶರಭಸಾಳುವ ಮೂರ್ತಿಯನ್ನೂ (ಚಿತ್ರ 83, 83ಅ) ಗಮನಿಸಬೇಕು. ಘೋರವಾದ ಮುಖ, ನಾಲ್ಕು ಕಾಲುಗಳು, ನಾಲ್ಕು ಕೈಗಳು

ಚಿತ್ರ 83
ಶರಭ ಸಾಳುವ ಮೂರ್ತಿ

ಚಿತ್ರ 83 ಅ
ಬಳ್ಳಿಗಾವೆಯ ಭೇರುಂಡೇಶ್ವರ

ಅರ್ಧಶರೀರ ಮೃಗದ್ದು, ರೆಕ್ಕೆಗಳಿವೆ, ಕೊಕ್ಕಿದೆ; ಸರ್ವಶತ್ರುಸಂಹಾರರೂಪ; ಬೇರೊಂದು ಮಂತ್ರದಲ್ಲಿ ಎಂಟುಕಾಲು, ಸಾವಿರ ಕೈ, ಎರಡು ತಲೆ, ಮೂರು ಕಣ್ಣು, ಎರಡು ರೆಕ್ಕೆ, ಕೆಂಪುಬಣ್ಣದ 'ಮೃಗವಿಹಂಗರೂಪ'ದ ವೀರಶರಭೇಶ್ವರನ ಉಲ್ಲೇಖವಿದೆ. ಆದರೆ ಶರಭಮೂರ್ತಿಯ ಶಿಲ್ಪದಲ್ಲಿ ಸಿಂಹದ ಮುಖ, ನಡುವೆ ಮನುಷ್ಯ

ರೂಪದಲ್ಲಿ ಶಿವನ ಆಯುಧಗಳನ್ನು ಧರಿಸಿದ ನಾಲ್ಕು ಕೈಗಳು, ಮತ್ತೆ ಸಿಂಹದ ದೇಹ, ಕಾಲುಗಳು; ವಿಷ್ಣು ರೂಪದ ನರಸಿಂಹನನ್ನು ನಿಗ್ರಹಿಸುತ್ತಿರುವಂತೆ ಭಂಗಿ ಇವು ಕಾಣುತ್ತವೆ. ಹಿರಣ್ಯಕಶಿಪು ಲೋಕಕಂಟಕನಾಗಲು ಅವನನ್ನು ಸಂಹರಿಸಲು ವಿಷ್ಣು ನರಸಿಂಹಾವತಾರವನ್ನೆತ್ತಿದನಷ್ಟೆ; ಹಿರಣ್ಯಕಶಿಪುವಿನ ವಧೆಯಾದ ಮೇಲೂ ಅವತಾರದ ಆವೇಶ ಇಳಿಯದೆ ವಿಷ್ಣು ಉಗ್ರನಾಗಿಯೇ ಇರಲು, ದೇವತೆಗಳೆಲ್ಲ ಬೆದರಿ ಶಿವನನ್ನು ಮೊರೆಹೊಕ್ಕ ರಂತೆ. ಶಿವನು ಶರಭಮೂರ್ತಿಯಾಗಿ ನರಸಿಂಹಾವತಾರದ ಘೋರರೂಪವನ್ನು ನಿಗ್ರಹಿದನೆಂದು ಕಥೆಯಿದೆ. ಶೈವ ವೈಷ್ಣವ ಮತಧರ್ಮಗಳ ವಿರಸವನ್ನು ಇಲ್ಲಿ ಕಾಣುವವರಿದ್ದಾರೆ. ಇದು ಇಲ್ಲಿ ಅಪ್ರಕೃತ. ಆದರೆ ಮಂತ್ರಪ್ರಯೋಗಗಳಲ್ಲಿ ಎಲ್ಲಿಯೂ ನರಸಿಂಹನ ನಿಗ್ರಹದ ಪ್ರಸ್ತಾಪವಿಲ್ಲದಿರುವುದನ್ನು ಗಮನಿಸಬೇಕು. ಜಿಂಕೆ, ಆನೆ, ಹಾವು, ಇಲಿ ಮೊದಲಾದ ಎಲ್ಲ ವಿಧವಾದ ತೊಂದರೆಗಳನ್ನು ಹೋಗಲಾಡಿಸಲು ಮತ್ತು ಶತ್ರುಗಳ ಸಂಹಾರಕ್ಕೆಂದೇ ಆಥರ್ವಣ ಶರಭಮಂತ್ರವಿರುವುದು —

> ಪಾಯಾನ್ನೋ ದೇವಶ್ಶರಭಸ್ಸ್ವಪಾಯಾತ್
> ಸದ್ಯಾರೇಃ ರೋಗ–ದ್ವಿಪಿನೋರಗಾಭ್ಯಾಂ ।
> ವೈಶ್ವಾನರಾಖುಕರಿಋಕ್ಷಕೇಭ್ಯಃ
> ಪರೇಭ್ಯೋ ಭೂತೇಭ್ಯೋ ರುಷಃ ಕೃತಾಂತಾತ್ ॥

ರುದ್ರನ ಉಗ್ರರೂಪಗಳ ಗುಂಪಿಗೇ ಸೇರಿದ ಇನ್ನೊಂದು ಪ್ರಚಲಿತ ಮೂರ್ತಿಯೆಂದರೆ ವೀರಭದ್ರ ನದು. ದಕ್ಷಪ್ರಜಾಪತಿಯ ಮಗಳು ದಾಕ್ಷಾಯಣಿ ಶಿವನ ಹೆಂಡತಿಯಾದಮೇಲೆ ಒಮ್ಮೆ ದಕ್ಷನು ಯಜ್ಞ ಮಾಡಲು ಹವಣಿಸಿ ಶಿವ–ದಾಕ್ಷಾಯಣಿಯರಿಬ್ಬರನ್ನು ಮಾತ್ರ ಕರೆಯದೆ ಉಳಿದ ಎಲ್ಲರನ್ನೂ ಕರೆದ. ಹಾಗಾ ದರೂ ದಾಕ್ಷಾಯಣಿಯು ತಾನು ಯಜ್ಞಮಂಟಪಕ್ಕೆ ಹೋಗಿ ಅಲ್ಲಿ ತನ್ನ ತಂದೆ ತನ್ನನ್ನು ಅಪಮಾನಗೊಳಿಸಲು ಯಜ್ಞಕುಂಡದಲ್ಲಿ ಬಿದ್ದು ಪ್ರಾಣಬಿಟ್ಟಳು. ಇದರಿಂದ ಸಿಟ್ಟಿಗೆದ್ದ ಶಿವನು ತನ್ನ ಜಟೆಯನ್ನು ನೆಲಕ್ಕೆ ಅಪ್ಪಳಿಸಲು ವೀರಭದ್ರನು ಹುಟ್ಟಿಕೊಂಡು ದಕ್ಷನ ತಲೆಯನ್ನು ಕಡಿದು ಅವನ ಯಾಗವನ್ನು ಧ್ವಂಸಪಡಿಸಿದ. ಇದು ಪುರಾಣದ ಕಥೆ. ಶಿಲ್ಪದಲ್ಲಿ ದಕ್ಷನನ್ನು ಆಡಿನ ತಲೆಯ ಭಕ್ತ ವಿಗ್ರಹವನ್ನಾಗಿ ಕಾಣಿಸುತ್ತಾರೆ. ಆರ್ಯಸಂಸ್ಕೃತಿಯ ಯಜ್ಞಯಾ ಗಾದಿಗಳ ಮನೋವೃತ್ತಿಗೆ ವಿರುದ್ಧವಾಗಿ ಮೈದಳೆದ ವಿಚಾರ ಕ್ರಾಂತಿಯ ಸಂಕೇತ ಇದು ಎಂದೊಂದು ವಾದವಿದೆ. ವೀರಭದ್ರನನ್ನು ರುದ್ರಪುತ್ರನೆಂದೂ ರುದ್ರಕೋಪಸಂಭವನೆಂದೂ ರುದ್ರಗಣದಲ್ಲಿ ಸೇರಿದವನೆಂದೂ ವ್ಯವಹರಿಸುವುದಿದ್ದರೂ ಶಿವನ ಲೀಲಾವತಾರ ಗಳಲ್ಲಿ ಒಂದು ಎಂದೇ ಎಣಿಕೆ. ಅವನ ಮೂರ್ತಿಲಕ್ಷಣದಲ್ಲಿ ಉಗ್ರ, ಅತಿಕ್ರೂರ, ಸರ್ವದುಷ್ಟನಿಬರ್ಹಣ, ಕರಾಳಾಟ್ಟಹಾಸ, ಗದಾ ಮುಷ್ಟಿಹಸ್ತ, ಭುಜಂಗಗಣಭೂಷಿತ, ಭಯದ, ಫಾಲನೇತ್ರಾನನ, ದಿಗಂಬರ ಮೊದಲಾದ ವಿವರಗಳಿವೆ. ದಕ್ಷಿಣದೇಶದಲ್ಲಿ, ಅದರಲ್ಲಿ ಯೂ ಕನ್ನಡನಾಡಿನಲ್ಲಿ, ವೀರಭದ್ರನ ಮೂರ್ತಿಗಳು ಹೆಚ್ಚು ಕೆಲವು ಸ್ವಾರಸ್ಯವಾದುವೂ ಇವೆ (ಚಿತ್ರ 83ಆ).

ಚಿತ್ರ 83 ಆ
ಚಾಮರಾಜನಗರದ ಬಳಿ
ನರಸಮಂಗಲದ ವೀರಭದ್ರ

ಶಿವನ ಲೀಲಾಮೂರ್ತಿಗಳಲ್ಲಿ ತುಂಬ ಮನೋಹರವಾದುದು ಅರ್ಧನಾರೀಶ್ವರ ಮೂರ್ತಿ. ಶಿವ-ಶಕ್ತಿಯರ ಸಂಯೋಗ ದರ್ಶನದಲ್ಲಿಯೂ ತಂತ್ರದಲ್ಲಿಯೂ ಹಾಸು ಹೊಕ್ಕಾಗಿ ಬಂದಿರುವ ವಿವರ. ಕಾಳಿದಾಸನ ಸುಪ್ರಸಿದ್ಧ ಮಂಗಳಶ್ಲೋಕ ಈ ಕಲ್ಪನೆಯ ಪ್ರಾಚುರ್ಯವನ್ನು ಸೂಚಿಸುತ್ತದೆ —

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

ಮಾತು, ಅದರ ಅರ್ಥ ಎರಡೂ ಎಡೆಬಿಡದೆ ಸೇರಿರುವಂತೆಯೇ ಪಾರ್ವತಿಯೂ ಪರಮೇಶ್ವರನೂ ಕೂಡಿದ್ದಾರೆಂದು ತಾತ್ಪರ್ಯ. ಶಿವಲಿಂಗದಲ್ಲಿಯೂ ಮೇಲಿನ ಲಿಂಗಭಾಗ ಶಿವನೆಂದೂ ಅದರಡಿಯ ಪಾಣಿವಟ್ಟು ಅಥವಾ ಅರ್ಘ್ಯ (ಯೋನಿ) ಶಕ್ತಿಭಾಗವೆಂದೂ ಕಲ್ಪನೆಯಲ್ಲವೆ? ಶಿವ–ಶಕ್ತಿಯರು ಒಟ್ಟಿಗೇ ಇರುವ ಸೋಮಾಸ್ಕಂದಮೂರ್ತಿ, ಉಮಾಮಹೇಶ್ವರಮೂರ್ತಿ, ಆಲಿಂಗನಮೂರ್ತಿ, ವಿಷಕಂಠಮೂರ್ತಿ ಮೊದಲಾದುವಲ್ಲದೆ ಅರ್ಧನಾರೀಶ್ವರಮೂರ್ತಿಯಲ್ಲಿ ಎರಡೂ ಕೂಡಿದ ಒಂದೇ ಮೂರ್ತಿಯಿರುವುದು ಸ್ವಾರಸ್ಯ. ಈ ಮೂರ್ತಿಯ ಅತಿಪ್ರಾಚೀನ ನಿದರ್ಶನವೆಂದರೆ ಮಾಮಲ್ಲಪುರದ ಧರ್ಮರಾಜ ರಥದಲ್ಲಿರುವುದು. ಸೇಲಂ ಜಿಲ್ಲೆಯ ತಿರುಚೆಂಗೋಡಿನಲ್ಲಿ ಈ ಮೂರ್ತಿಗೇ ಮೀಸಲಾದ ಗುಡಿಯಿದೆ. ಈ ಮೂರ್ತಿಯಲ್ಲಿ ಬಲಭಾಗ ಗಂಡಿನ ಲಕ್ಷಣಗಳನ್ನೂ ಎಡಭಾಗ ಹೆಣ್ಣಿನ ಲಕ್ಷಣಗಳನ್ನೂ ಒಳಗೊಂಡಿರುತ್ತವೆ. ಮತ್ಸ್ಯಪುರಾಣದಲ್ಲಿ ಪ್ರತಿಮಾಲಕ್ಷಣ ವಿವರವಾಗಿ ಬರುತ್ತದೆ. ಬಲಭಾಗದಲ್ಲಿ ಜಟಾಮುಕುಟ, ಶಿರಶ್ಚಂದ್ರ, ಫಾಲನೇತ್ರ, ವಾಸುಕೀಕರ್ಣಾಭರಣ, ಕಪಾಲ-ತ್ರಿಶೂಲಗಳನ್ನೂ ಎಡಭಾಗದಲ್ಲಿ ಕರಂಡಮಕುಟ, ಕುಂಕುಮತಿಲಕ, ಪತ್ರಕುಂಡಲ, ಕನ್ನಡಿ ಅಥವಾ ಉತ್ಪಲಗಳನ್ನೂ ಕಾಣಿಸಿರುತ್ತಾರೆ; ಒಂದೇ ಸ್ತನವೂ ಎಡಗಡೆ ಇರುತ್ತದೆ. ಎರಡೇ ಕೈಗಳಿರುವುದೂ ಉಂಟು; ಶಕ್ತಿಯ ಕಡೆ ಒಂದು ಕೈ, ಶಿವನ ಕಡೆ ಎರಡು ಕೈಗಳನ್ನು ಕಾಣಿಸುವುದೂ ಉಂಟು. ಧ್ಯಾನಶ್ಲೋಕವೂ ಮನೋಹರವಾಗಿದೆ—

ಹಾವಭಾವಲಲಿತಾರ್ಧನಾರಿಕಂ ಭೀಷಣಾರ್ಧಮಥವಾ ಮಹೇಶ್ವರಂ ।
ಪಾಶಸೋತ್ಪಲಕಪಾಲ ಶೂಲಿನಂ ಚಿಂತಯೇಜ್ಜಪವಿಧೌ ವಿಭೂತಯೇ ॥
ಅಥವಾ ಷೋಡಶಶೂಲವ್ಯಗ್ರಭುಜಾ ತ್ರಿನಯನಾऽಹಿನದ್ಧಾಂಗೀ ।
ಅರುಣಾಂಶುಕಾನುಲೇಪನವರ್ಣಾಭರಣಾ ಚ ಭಗವತೀ ಧ್ಯೇಯಾ ॥

ಕೆಲವು ಶಿಲ್ಪಗಳಲ್ಲಿ ಶಿವನ ಭಾಗದಲ್ಲಿ ವಾಹನವಾದ ವೃಷಭವನ್ನೂ ಶಕ್ತಿಯ ಭಾಗದಲ್ಲಿ ಸಿಂಹವನ್ನೂ ತೋರಿಸಿರುತ್ತಾರೆ. ವ್ಯಾಖ್ಯಾನ ಸಾಮರ್ಥ್ಯವನ್ನು ಪಡೆಯಲೆಂದು ಅರ್ಧನಾರೀಶ್ವರನ ಸಂಪುಟ ಮಂತ್ರವನ್ನು ಜಪಿಸುವುದಿದೆ — "ಓಂ ಹ್ರೀಂ ಹ್ರೋಂ ಜ್ಞಾಂ ವಿದ್ಯಾರಾಶಿಸ್ರವನ್ಮೇಘಸ್ಫುರದೂರ್ಮಿಗಣೋದ್ವಣ ಉಮಾಸಾರ್ಧಶರೀರಾಯ ನಮಸ್ತೇ ಪರಮಾತ್ಮನೇ ಜ್ಞಾಂ ಹ್ರೋಂ ಹ್ರೀಂ ಓಂ".

ಶಿವನ ಅನುಗ್ರಹಮೂರ್ತಿಗಳಲ್ಲಿ ಚಂಡೇಶಾನುಗ್ರಹ ಒಂದು. ಚಂಡೇಶ (ಚಂಡೇಶ್ವರ ಅಥವಾ ಚಂಡಿಕೇಶ್ವರ) ಶಿವನ ಮಹಾಭಕ್ತನಾಗಿದ್ದನೆಂದೂ, ತನ್ನ ತಂದೆ ಕಾಲಿನಿಂದ ಶಿವಲಿಂಗವನ್ನು ಒದೆದುದಕ್ಕಾಗಿ ಅವನ ಕಾಲನ್ನೇ ಕೊಡಲಿಯಿಂದ ಕಡಿದುಹಾಕಿಬಿಟ್ಟನೆಂದೂ, ಆ ಭಕ್ತಿಗೆ ಮೆಚ್ಚಿದ ಶಿವ ತಾನು ಧರಿಸಿದ್ದ ಮಾಲೆಯನ್ನೇ ಅವನಿಗೆ ಕೊಟ್ಟು ತನ್ನ ಗೃಹಕೃತ್ಯದ ಮೇಲ್ವಿಚಾರಣೆಯ ಅಧಿಕಾರವನ್ನು ವಹಿಸಿಕೊಟ್ಟನೆಂದೂ ಕಥೆಯಿದೆ. ಚಂಡೇಶಾನುಗ್ರಹ ಮೂರ್ತಿಯ ಹಿನ್ನೆಲೆ ಇದು. ಶಿವದೇವಾಲಯಗಳಲ್ಲಿ ಚಂಡೇಶನಿಗೇ ಒಂದು

ಪ್ರತ್ಯೇಕವಾದ ಗೂಡು ಅಥವಾ ಕೋಣೆಯಿರುತ್ತದೆ. ಅಲ್ಲಿ ಇವನ ಆಸೀನ ಅಥವಾ ಸ್ಥಾನಕ ಮೂರ್ತಿಯಿರುವುದು ವಾಡಿಕೆ (ಚಿತ್ರ 84. 85). ಅಂಜಲಿಬದ್ಧನಾಗಿ ನಿಂತು ಬಲಗೈಗೆ ಅನಿಸಿಕೊಂಡಂತೆ

ಚಿತ್ರ 84 ಚಂಡೇಶ್ವರ

ಚಿತ್ರ 85 ಚಂಡೇಶ್ವರ

ಪರಶುವನ್ನು ಹಿಡಿದಿರುವುದು, ಅಥವಾ ಒಂದು ಕೈಯಲ್ಲಿ ಪರಶುವನ್ನು ಹಿಡಿದು ಕುಳಿತಿರುವುದು ಸಾಮಾನ್ಯವಾಗಿ ಕಂಡುಬರುವ ಭಂಗಿ. ಶಿವದರ್ಶನವಾದನಂತರ ಶಿವನ ನಿರ್ಮಾಲ್ಯವನ್ನು ಚಂಡಿಕೇಶ್ವರನ ಸನ್ನಿಧಿಯಲ್ಲಿ ಅರ್ಪಿಸಿ

ಚಂಡೇಶ್ವರ ಮಹಾಭಕ್ತ ಶಿವಧ್ಯಾನ ಪರಾಯಣ
ನಿರ್ಮಾಲ್ಯಭೋಜನಂ ತುಭ್ಯಂ ಪ್ರದತ್ತಂ ತು ಶಿವಾಜ್ಞಯಾ ॥

ಎಂದೋ, ಇಲ್ಲವೇ

ನೀಲಕಂಠಪದಾಂಭೋಜಪರಿಸ್ಫುರಿತಮಾನಸ
ಶಂಭೋಃ ಸೇವಾಫಲಂ ದೇಹಿ ಚಂಡೇಶ್ವರ ನಮೋಸ್ತು ತೇ ॥

ಎಂದೋ ಹೇಳಿ ಮೂರುಬಾರಿ ಚಪ್ಪಾಳೆ ತಟ್ಟಿ ಹೊರ ಹೊರಡುವ ಪದ್ಧತಿಯಿದೆ.

ಶಿಲ್ಪದಲ್ಲಿ ಮೂಡಿಬಂದಿರುವ ಚಂಡೇಶ ಸೌಮ್ಯಮೂರ್ತಿಯಾದರೂ ಅವನ ಹಿನ್ನೆಲೆ ಉಗ್ರವಾದುದೇ. ತ್ರಿತನು ಋಷಿಯಾದ ಅವನ ಮಂತ್ರಕ್ಕೆ ಸರ್ವಜ್ವಾಲಿನಿ–ಫಟ್ ಎನ್ನುವುದು ಅಸ್ತ್ರ; 'ಚಂಡಚಂಡ', 'ಚಂಡ ಮೂರ್ತಿ', 'ಚಂಡಾಸನ' ಎನ್ನುವುದೇ ಹೆಸರುಗಳು. ಚಂಡೇಶ್ವರನಿಗೂ ಕ್ಷೇತ್ರಪಾಲನಿಗೂ ಸಂಬಂಧವಿದೆ. ಶಿವನ ದರ್ಶನವಾದನಂತರ ಚಂಡೇಶ್ವರನಿಗೆ ವರದಿ ಒಪ್ಪಿಸುವಂತೆಯೇ, ಶಿವನ ದರ್ಶನಕ್ಕೆ ಮೊದಲು ಕ್ಷೇತ್ರಪಾಲನ ಅಪ್ಪಣೆಯನ್ನು ಪಡೆಯುತ್ತಾರೆ. ಬೆತ್ತಲೆಯಿದ್ದು ನಾಯಿಯ ಮೇಲೆ ಕುಳಿತು, ಕತ್ತಿ–ಶೂಲ–ಡಮರು-ಕಪಾಲ ಗಳನ್ನು ಹಿಡಿದು, ಕೋರೆದಾಡೆಗಳಿಂದ ಭಯಾನಕವಾಗಿ ರುಂಡಮಾಲೆಯನ್ನೂ ಹಾವಿನ ಒಡವೆಗಳನ್ನೂ ಧರಿಸಿದ ಮುಕ್ಕಣ್ಣ ಕ್ಷೇತ್ರಪಾಲನನ್ನು ವಟುಕಭೈರವನೆಂದೂ ಕರೆಯುವುದುಂಟು.

ನಗ್ನರೂಪಂ ತ್ರಿಣೇತ್ರಂ ಚ ಸರ್ಪಾಭರಣಭೂಷಿತಂ
ರತ್ನಕುಂಡಲಸಂಯುಕ್ತಂ ಶಿರೋಮಾಲಾವಿಭೂಷಿತಂ
ಖಡ್ಗಂ ಶೂಲಂ ಕಪಾಲಂ ಚ ಡಮರುಂ ಭೀಮ ದಂಷ್ಟ್ರಕಂ
ಬಿಭ್ರಾಣಂ ಶುನಕಾರೂಢಂ ಕ್ಷೇತ್ರಪಾಲಮಹಂ ಭಜೇ ॥

ಈ 'ವ್ಯಗ್ರ ಕ್ಷೇತ್ರಪಾಲ'ನ ಮಂತ್ರದಿಂದ ಭೂತ–ಭವಿಷ್ಯತ್‌ಜ್ಞಾನವೊದಗುವುದೆಂದು ನಂಬಿಕೆಯಿದೆ. ಪ್ರಪಂಚಸಾರಸಂಗ್ರಹದಲ್ಲಿ ಚಂಡೇಶ್ವರ ಮಂತ್ರ ಪ್ರಸಂಗದಲ್ಲಿಯೇ ಕ್ಷೇತ್ರ ಪಾಲಮಂತ್ರವೂ ಬರುತ್ತದೆ; ಇದಾದೊಡನೆ ಕರ್ಣವಿದ್ಯೆಯ (ಎಂದರೆ ಕರ್ಣಪಿಶಾಚಿಯ) ಪ್ರಸ್ತಾಪವಿದೆ. ಶಿವನ ಪೂಜೆಯಲ್ಲಿ ಪ್ರಾಚೀನಕಲ್ಪನೆಗಳ ಹಿನ್ನೆಲೆಯಿರುವುದು ಇದರಿಂದ ಧ್ವನಿಸುತ್ತದೆ. ಶಿವಪೂಜೆಗೆ ಮೊದಲಲ್ಲಿ ಭೀಮಾಕಾರದ ಕ್ಷೇತ್ರಪಾಲ, ಶಿವಾಲಯದ ಕವಾಟೋದ್ಘಾಟನಕ್ಕಾಗಿ ಮಹಾಕಾಲ, ಒಳಗೆ ಶಿವನೆದುರು 'ತೀಕ್ಷ್ಣಶೃಂಗದ ವೃಷಭ', ಪರಿವಾರದಲ್ಲಿ ಸೇರಿದ ಮೂರು ಕಾಲುಗಳ ವಿಕಟ ಭೃಂಗಿ (ಚಿತ್ರ 86), ಕುಂಡೋದರಭೂತ, ಜ್ವರಹರಮೂರ್ತಿ, ಶಿವಪೂಜಾಫಲವನ್ನು ಕೊಡುವ ಚಂಡೇಶ ಈ ವಿವರಗಳನ್ನು ಗಮನಿಸಬೇಕು.


ಚಿತ್ರ 86
ಶಿವನ ಗಣಗಳಲ್ಲಿ
ಸೇರಿದ ಭೃಂಗಿ

ವಿಷ್ಣುವಿನ ವೈಶಿಷ್ಟ್ಯ

ಶಿವ-ವಿಷ್ಣು

'ಕೇಶವನಾಗಲಿ ಶಿವನಾಗಲಿ, ದೇವರು ಒಬ್ಬನೆ' ('ಏಕೋ ದೇವಃ ಕೇಶವೋ ವಾ ಶಿವೋ ವಾ') ಎನ್ನುವ ಮಾತು ಸುಸಂಸ್ಕೃತಸಮಾಜದಲ್ಲಿ ಧರ್ಮದ್ವೇಷ ಬೆಳೆಯಬಾರದೆಂದು ಹೇಳಿದುದು ಅಥವಾ ಏಕದೇವತಾವಾದದ ಅರಿವಿನಲ್ಲಿ ಹೇಳಿದುದು ಎಂದು ಭಾವಿಸುವುದುಂಟು. ಶಿವನಿಗೂ ವಿಷ್ಣುವಿಗೂ ಮೇಲೆ ಕಾಣುವಂಥ ಸಾದೃಶ್ಯಗಳು ಕಡಮೆಯೇ; ಇಬ್ಬರೂ ವಿರುದ್ಧ ಸ್ವಭಾವದವರೇ ಎಂದರೂ ತಡೆದೀತು. ಇಬ್ಬರಲ್ಲಿ ಏಕತಾನವಿರಲಿ, ಸಾಮರಸ್ಯವನ್ನಾದರೂ ಕಾಣುವುದು ಹೇಗೆ ಎಂದು ಸಂಶಯವೂ ಕೆಲವರಿಗುಂಟಾಗುವುದು ಸಹಜ. ಶಿವನನ್ನು ಅನಾರ್ಯ ದೇವತೆಯೆಂದೂ ಕಾಮಪ್ರವೃತ್ತಿಯ ಪ್ರತಿಮೆಯೆಂದೂ ಬೆರಳಿಟ್ಟು ತೋರಿಸಿದ ಪಂಡಿತರು ವಿಷ್ಣುವು ಹಾಗಿರದೆ ವೈದಿಕ–ಆರ್ಯ ದೇವತಾಗಡಣದಲ್ಲಿ ಸೇರಿದವನೆಂದೂ ಪರಮ ಸಾತ್ತ್ವಿಕ ದೇವತೆಯೆಂದೂ ವಾದಿಸಿದರು. ಆದರೆ ವಿಷ್ಣುವಿನ ಹಿನ್ನೆಲೆಯನ್ನು ಹುಡುಕುತ್ತ ಹೋದರೆ ಶಿವ–ವಿಷ್ಣು ಇಬ್ಬರೂ ಒಂದೇ ಮೂಲದಿಂದ ಬಂದವರೆಂದು ಭಾಸವಾಗದಿರದು.

ವಿಷ್ಣುವಿನ ಉಲ್ಲೇಖ ನಾಲ್ಕೂ ವೇದಗಳಲ್ಲಿ ಬರುವುದು ದಿಟ; ವಿಷ್ಣುವಿಗೊಂದು ಸೂಕ್ತವೇ ಋಗ್ವೇದದಲ್ಲಿದೆ (1, 154, 1). ಆರ್ಯವೀರನಾದ ಇಂದ್ರನಿಗೆ ವಿಷ್ಣು ನೆರವಾದ ಪ್ರಸ್ತಾಪಗಳೂ ಋಗ್ವೇದದಲ್ಲಿ ಬರುತ್ತವೆ (1, 186, 10; 7, 99, 4; ಬೃಹದ್ದೇವತಾ 6, 122); ಇಂದ್ರನನ್ನೂ

ವಿಷ್ಣುವನ್ನೂ ಒಟ್ಟಿಗೆ ಸೇರಿಸಿ 'ಇಂದ್ರಾವಿಷ್ಣು' ಎಂದು ಕರೆದಿರುವುದೂ ಉಂಟು. ಆದರೆ ವೈದಿಕ ಸಂದರ್ಭದಲ್ಲಿ ಇಂದ್ರನಂತೆ, ಅಗ್ನಿಯಂತೆ, ಪ್ರಜಾಪತಿಯಂತೆ ವಿಷ್ಣು ಪ್ರಸಿದ್ಧ ಅಥವಾ ಪ್ರಧಾನ ದೇವತೆಯೇ ನಲ್ಲ. ಅವನ ಪಾತ್ರವೂ ರುದ್ರನ ಪಾತ್ರದಂತೆಯೇ. ಬ್ರಾಹ್ಮಣಗಳ ಕಾಲದಲ್ಲಿಯೇ ಇಬ್ಬರೂ ಪ್ರಧಾನ ರಾದುದು. ಕೃಷ್ಣಯಜುರ್ವೇದದ ಮೈತ್ರಾಯಣೀ ಸಂಹಿತೆಯಲ್ಲಿ (2, 9, 1) ರುದ್ರ-ಶಿವ ಪುರುಷನಾದರೆ ಶತಪಥಬ್ರಾಹ್ಮಣದಲ್ಲಿ (12, 3, 4, 1) ನಾರಾಯಣನೇ ಪುರುಷ. ಇಬ್ಬರೂ ಸಂಹಿತಾಸಾಹಿತ್ಯದಲ್ಲಿ ಋಷಿಗಳೂ ಹೌದು, ದೇವತೆಗಳೂ ಹೌದು. ಶಿವ-ರುದ್ರನು ಶಿಶ್ನದೇವತೆಯಾದರೆ ವಿಷ್ಣು 'ಶಿಪಿವಿಷ್ಟ', ಶಿಶ್ನಕ್ಕೆ ದೂರದವನೇನಲ್ಲ ! ವೈದಿಕಸೆಲೆಯಲ್ಲಿ ರುದ್ರನಂತೆ ವಿಷ್ಣುವೂ ಪರ್ವತಶಾಯಿ, ಬೆಟ್ಟದಲ್ಲಿಯೇ ಹುಟ್ಟಿ ಬೆಟ್ಟವನ್ನೇ ಆಳುವವನು. ಇಬ್ಬರಿಗೂ ಅಗ್ನಿಯ ಸಂಬಂಧವುಂಟು. ವ್ರಾತ್ಯರೊಂದಿಗೆ ಸೆಣಸಿದನಾದರೂ (ಋಗ್ವೇದ 7, 99, 4), ವೃತ್ರಾಸುರನನ್ನು ನಿಗ್ರಹಿಸಲು ಇಂದ್ರನಿಗೆ ನೆರವಾದನಾದರೂ (ಋ. 6, 69, 5) ನಾಗಗಳೊಂದಿಗೆ ಅವನ ನೆಂಟು ಬಿಟ್ಟದ್ದಲ್ಲ. ಮುಂದಿನ ಪುರಾಣದಲ್ಲಿಯೂ ಅವನು ನಾಗಭೂಷಣ, ಇವನು ನಾಗಶಯನ; ಅವನು 'ವ್ರಾತ್ಯವೀರ'ನಾದರೆ ಇವನು 'ವಂಶವೀರ'; ಅವನು ಪಂಚವಕ್ತ್ರನಾದರೆ ಇವನದು ಪಂಚವ್ಯೂಹಗಳು. ಮಹಾಭಾರತದಲ್ಲಿ (1, 1, 22) ವಿಷ್ಣುವನ್ನೂ ಈಶಾನನೆಂದು ಕರೆದಿರುವುದಿದೆ ('ಆದ್ಯಂ ಪುರುಷಮೀಶಾನಂ').

ವೈದಿಕ ರುದ್ರನಿಗೆ ಎರಡು ರೂಪಗಳಂತೆ: ಒಂದು ಘೋರವಾದುದು, ಇನ್ನೊಂದು ಹಾಗಿಲ್ಲದುದು, ಎಂದರೆ ಸೌಮ್ಯವಾದುದು ('ದ್ವೇ ತನೂ ತಸ್ಯ ದೇವಸ್ಯ ಬ್ರಾಹ್ಮಣಾ ವೇದಜ್ಞಾ ವಿದುಃ ಘೋರಮನ್ಯಾಂ'). ಘೋರವಾದ ರೂಪ ರುದ್ರನಿಗೇ ಉಳಿದಂತೆಯೂ ಸೌಮ್ಯವಾದ ರೂಪ ವಿಷ್ಣುವಿಗೆ ಬಂದಂತೆಯೂ ತೋರುತ್ತದೆ. ವೈದಿಕದೇವತೆಗಳಿಗೆ, ಆದರಲ್ಲಿಯೂ ಇಂದ್ರನಿಗೆ, ಸ್ನೇಹಿತನಂತೆ, ಉಪಕಾರಿ ಯಂತೆ ಕಾಣಿಸಿಕೊಳ್ಳುವುದಷ್ಟೇ ಅಲ್ಲ, ಸೋಮಸವನಕ್ಕೂ ನೆರವಾಗುತ್ತಾನೆ; ಗರ್ಭಗಳನ್ನು ಕಾಪಾಡುತ್ತಾನೆ; ಧರ್ಮ ನಿಲ್ಲುವಂತೆ, ಜನರಲ್ಲಿ ಹರಡುವಂತೆ ಮಾಡುತ್ತಾನೆ. ರುದ್ರನಿಗೆ ವೈದ್ಯನ ಪಾತ್ರವೂ ಒದಗಿಬಂದಿದ್ದಿತಷ್ಟೆ (ಶಿವಾರುದ್ರಸ್ಯ ಭೇಷಜೀ); ವಿಷ್ಣುವೂ ಧನ್ವಂತರಿಯಾಗಿ ಈ ಕೆಲಸವನ್ನು ನಿರ್ವಹಿಸುತ್ತಾನೆ.

ಅಗ್ನಿಯು ವಿಷ್ಣುವಿನಂತೆಯೇ ಇಂದ್ರನಿಗೆ ಎರಡನೆಯವನು. ಮಾತರಿಶ್ವರು ಕಂಡು ಹಿಡಿದು ಭೃಗುಗಳು ವೈದಿಕವಿಧಿಯ ನಡುವೆ ಇರಿಸಿದ ಅಗ್ನಿ ಹಲವಾರು ವೈದಿಕ ಕಥೆಗಳಿಗೂ ವೈದಿಕ ಕಲ್ಪಗಳಿಗೂ ಕೇಂದ್ರಸ್ಥಾನವಾದ. ಆಕಾಶದಲ್ಲಿ ಸೂರ್ಯನಿದ್ದಂತೆ, ಅಂತರಿಕ್ಷದಲ್ಲಿ ಮಿಂಚಿದ್ದಂತೆ, ಭೂಮಿಯಮೇಲೆ ಅಗ್ನಿ ಸೂರ್ಯನಿಗೂ ಅಗ್ನಿಗೂ ಸಹಜವಾಗಿಯೇ ಇರುವ ಸಂಬಂಧ ಸೂರ್ಯನಿಗೂ ವಿಷ್ಣುವಿಗೂ ಬೆಳೆದುಬಂದಿತು ವಿಷ್ಣುವು ಸೌರದೇವತೆಯೆನ್ನುವುದು ನಿರ್ವಿವಾದ. 'ಧ್ಯೇಯಃಸದಾಸವಿತೃಮಂಡಲಮಧ್ಯವರ್ತಿ'ಯಲ್ಲವೆ ಅವನು? ದೇವತೆಗಳಿಗೆ ಪುರೋಹಿತನಾಗಿ ನೆರವಾಗುವ ಅಗ್ನಿ ಯನ್ನೂ ಮಿತ್ರನಂತೆ ನೆರವಾಗುವ ವಿಷ್ಣುವನ್ನೂ ಸಮೀಕರಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ನೀರಿನಲ್ಲಿ ಅಗ್ನಿ ಇರುವ ವೈದಿಕ ಪ್ರತಿಮೆ ನೀರಿನ ಮೇಲೆ ಹರಿದಾಡುವ ನಾರಾಯಣನ ಕಲ್ಪನೆಗೆ ಎಡೆಮಾಡಿಕೊಟ್ಟಿತು. ಬರುಬರುತ್ತ ಅಗ್ನಿ – ವಿಷ್ಣು ಪ್ರಬಲನಾದ ದೇವತೆಯೆಂದೇ ಪರಿಗಣಿಸಲ್ಪಟ್ಟಾಗ, ಅವನಲ್ಲಿ ಜನಪ್ರೀತಿ ಹೆಚ್ಚಾದಾಗ, ಇತರ ದೇವತೆಗಳಿಗೆ ಅಸೂಯೆ ಬಂದಿತೆಂದೂ,ಉಪಾಯದಿಂದ ಅವನ ತಲೆಯನ್ನು ಕತ್ತರಿಸಿಬಿಟ್ಟರೆಂದೂ, ಆದರೆ ವಿಷ್ಣು ಇಲ್ಲದ ಪ್ರಪಂಚದಲ್ಲಿ ಬಾಳುವುದೇ ಕಷ್ಟವೆನಿಸಿದಾಗ ಅಶ್ವಿನೀದೇವತೆಗಳ ನೆರವಿನಿಂದ ವಿಷ್ಣುವನ್ನು ಮತ್ತೆ ಬದುಕಿಸಿದರೆಂದೂ ಶತಪಥ ಬ್ರಾಹ್ಮಣದಲ್ಲಿ ಕಥೆಯಿದೆ. ಇದರ ತಾತ್ಪರ್ಯ ವಿಷ್ಣುವಿನ ಹಿನ್ನೆಲೆ ವೈದಿಕ ಸಂದರ್ಭವಲ್ಲಿಯೇ

ಇದ್ದಿರಲಿಲ್ಲವೆನ್ನುವುದು. ರುದ್ರನಂತೆ ವಿಷ್ಣುವೂ ವೈದಿಕ ಆರ್ಯರ ಸಂಸ್ಕಾರಕ್ಕೆ ಹೊರತಾಗಿಯೇ ಕಾಣಿಸಿಕೊಂಡು, ತನ್ನ ಜನಪ್ರೀತಿಯಿಂದಲೂ 'ಭಗ' (ವ್ಯಾನಾ) ದಿಂದಲೂ ಅವರ ಗಮನವನ್ನು ಸೆಳೆದು ಅವರಿಂದ ಸನ್ಮಾನ್ಯನಾದ ದೇವತೆ; ವಿಷ್ಣುವೂ ವೈದಿಕಯುಗ ಆರಂಭವಾಗುವ ಮೊದಲೇ ಇಲ್ಲಿದ್ದ ಜನರ ದೇವತೆಯೆಂದು ಹೇಳಿದರೆ ತಪ್ಪಾಗದು. ಜಾನಪದ ಕಲ್ಪಗಳಲ್ಲಿಯೂ ಕಲ್ಪನೆಗಳಲ್ಲಿಯೂ ಅಥರ್ವರು ಮಾಡುತ್ತಿದ್ದ ಶಾಂತ, ಪೌಷ್ಟಿಕ, ಭೇಷಜ ಕೆಲಸಗಳ ಮತ್ತು ಆಂಗಿರಸರು ಮಾಡುತ್ತಿದ್ದ ಘೋರ, ಆಭಿಚಾರಿಕ ಕೆಲಸಗಳ ವ್ಯತ್ಯಾಸವಿದ್ದಿತಷ್ಟೆ; ಈ ಪ್ರಭೇದದ ನೆಲೆಯಲ್ಲಿ ಮೊದಲನೆಯ ಸೌಮ್ಯ ಭಾಗಕ್ಕೆ ವಿಷ್ಣುವೂ, ಎರಡನೆಯ ಉಗ್ರ ಭಾಗಕ್ಕೆ ರುದ್ರನೂ ಮೈದುಂಬಿ ಬಂದಿದ್ದ ದೇವತೆಗಳಾಗಿದ್ದರೆನ್ನಬಹುದು. ಹೀಗೆ ಶಿವ–ವಿಷ್ಣು ಇವರು ಒಟ್ಟಿಗೇ ಬೆಳೆದು ಬಂದ ದೇವತೆಗಳು; ಜನರ ಮನೋವೃತ್ತಿಯಲ್ಲಿ ಎರಡು ಬೇರೆ ಬೇರೆ ಭಾಗಗಳನ್ನು ಅವರು ಆಕ್ರಮಿಸಿಕೊಂಡರಾಗಿ ಅವರು ಬೇರೆ ಬೇರೆಯಾಗಿಯೇ ಬೆಳೆದರು. ಸೂರ್ಯಚಂದ್ರರಿದ್ದಂತೆ ಸೂರ್ಯನನ್ನು ನಾರಾಯಣನೆಂದೂ ಚಂದ್ರನನ್ನು ಶಿವನೆಂದೂ ಕರೆದಿರುವುದಿದೆ; ಸೂರ್ಯನ ಪ್ರತಿನಿಧಿಯಾಗಿ ಅಗ್ನಿಯಿದ್ದರೆ ಮಹಾಭಾರತ ಹೇಳಿದಂತೆ 'ಅಗ್ನಿಸೋಮಮಯಂ ಸರ್ವಂ ಜಗದೇಕಚ್ಚರಾಚರಂ' (ಶಾಂತಿಪರ್ವ, 338, 52) ಎಂದು ಹೇಳಬಹುದು.

ವಿಷ್ಣು ಎನ್ನುವ ಮಾತಿಗೆ ಬೃಹದ್ದೇವತೆಯು ಹರಡುವುದು (ವಿಶ್ ಧಾತುವಿನಿಂದ ವಿಷ್ಣಾತಿ), ಹೋಗುವುದು (ವಿಶ್ ಧಾತುವಿನಿಂದಲೇ ವಿಶತಿ), ಸುತ್ತರಿಯುವುದು (ವಿಷ್ಲಿ ಧಾತುವಿನಿಂದ ವಿವೇಷ್ಟಿ) ಎಂದು ಮೂರು ನಿಷ್ಪತ್ತಿಗಳನ್ನು ಕಾಣಿಸಿದೆ (ವಿಷ್ಣಾತೇರ್ವಿಶತೇರ್ವಾ ಸ್ಯಾದ್ವೇವೇಷ್ಟೇರ್ವ್ಯಾಪ್ತಿಕರ್ಮಣಃ, 2, 69). ಇಲ್ಲಿ ಸಾಧಾರಣವಾದ ತಾತ್ಪರ್ಯ ಹರಡಿಕೊಳ್ಳುವುದು, ಆವರಿಸಿಕೊಳ್ಳುವುದು ಎಂದು. ಹರಡಿಕೊಳ್ಳುವುದೇ ವಿಷ್ಣುವಿನ ವೈಶಿಷ್ಟ್ಯ. ಅವನು ಮೂರು ಹೆಜ್ಜೆಗಳಿಂದ ಮೂರು ನೆಲೆಗಳನ್ನೂ ಆವರಿಸಿಕೊಂಡ ಪ್ರತಿಮೆ ಋಗ್ವೇದವಾಙ್ಮಯದಲ್ಲಿಯೇ ಬರುತ್ತದೆ (1, 22, 17; ತೈತ್ತಿರೀಯ ಸಂಹಿತೆ 1, 2, 13, 1,; 8, 12, 27; ಶತಪಥ ಬ್ರಾಹ್ಮಣ 1, 9, 3, 9): 'ಇದರ ಮೇಲೆಲ್ಲ ಅಡ್ಡಾಡಿದ ವಿಷ್ಣು; ತನ್ನ ಪಾದಗಳನ್ನು ಮೂರುಬಾರಿ ಕೆಳಗಿರಿಸಿದ, ಆ ಧೂಳಿನಲ್ಲಿ ಇದೆಲ್ಲವೂ ಕಲೆಯಿತು' ('ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ ಸಮೂಳ್ಹಮಸ್ಯ ಪಾಂಸುರೇ'). ಆಕಾಶಕ್ಕೂ ಭೂಮಿಗೂ ನಡುವೆ ಜಾಗವನ್ನು ಮಾಡಿಕೊಟ್ಟು, ಅಲ್ಲಲ್ಲ ದೇವತೆಗಳಿರುವಂತೆ, ಅವರಿಗೆ ಜನರು ಮಾಡುವ ಯಜ್ಞಯಾಗಾದಿಗಳ ಫಲ ಮುಟ್ಟುವಂತೆ ಮಾಡಿದವನೆಂದು ಆರ್ಯರು ಕೃತಜ್ಞತೆಯಿಂದ ಅವನನ್ನು ಗೌರವಿಸಿದರು. ಅವನೇ ಯಜ್ಞವೆಂದೂ ನಿರ್ದೇಶಿಸಿದರು ('ಯಜ್ಞೋ ವೈ ವಿಷ್ಣುಃ', ತೈತ್ತಿರೀಯ ಸಂಹಿತೆ 1, 7, 8; ಕೃಷ್ಣ ಯಜುರ್ವೇದ 3, 5, 2). ಯಜ್ಞನಾರಾಯಣನ ಕಲ್ಪನೆ ಬ್ರಾಹ್ಮಣಗಳ ಕಾಲದಷ್ಟು ಹಳೆಯದು. ವೈಖಾನಸಾಗಮದಲ್ಲಿ ಪ್ರಥಮಾವರಣದ ನೈಋತ್ಯಮೂಲೆಯಲ್ಲಿ ಯಜ್ಞಮೂರ್ತಿಯನ್ನು ಆವರಣದೇವತೆಯಾಗಿ ನಿಲ್ಲಿಸಬೇಕೆಂಬ ವಿಧಿಯಿದೆ; ಇದು ಎರಡು ತಲೆಗಳ, ನಾಲ್ಕು ಕೊಂಬುಗಳ, ಏಳು ಕೈಗಳ, ಮೂರು ಕಾಲುಗಳ ಅಗ್ನಿಯೇ. ಭಾಗವತದಲ್ಲಿ ಯಜ್ಞಮೂರ್ತಿಯನ್ನು ವಿಷ್ಣುವಿನ ಅವತಾರಗಳಲ್ಲಿ ಒಬ್ಬನೆಂದು ಎಣಿಸಿದ್ದಾರೆ. ಯಜ್ಞವೆಂದರೆ ಅಗ್ನಿದೇವತೆಯೇ; ದೇವತೆಗಳಿಗೆ ಮೊದಲ ಮುಖವಾದ ಅಗ್ನಿಯೇ, ಅವರಿಗೆ ಪ್ರಾಣಸ್ವರೂಪ ('ಮುಖಂ ದೇವಾನಾಮಗ್ನಿಃ, ಮುಖತ ಏವ ಪ್ರಾಣಂದಧಾತಿ, ಶತಪಥಬ್ರಾಹ್ಮಣ 3, 7; ಅಗ್ನಿರ್ಮುಖಂ ಪ್ರಥಮೋ ದೇವತಾನಾಂ, ಐತರೇಯ ಬ್ರಾಹ್ಮಣ 1, 9, 2).

ಮೂರೂ ನೆಲೆಗಳಲ್ಲಿ ಹರಡಿಕೊಂಡು, ಎಲ್ಲವನ್ನೂ ಆವರಿಸಿಕೊಂಡ ಅಗ್ನಿ ಎಲ್ಲ ದೇವತೆಗಳಿಗೂ ಪ್ರಾಣವಾಗಿ ಇದ್ದನೆನ್ನುವ ಪ್ರಸ್ತಾಪ ಸ್ಕಂಭದ ಕಲ್ಪನೆಯನ್ನು ನೆನಪಿಗೆ ತರುವುದಿಲ್ಲವೆ? ಸ್ಕಂಭವೇ ಶಿವನ ಲಿಂಗಸ್ವರೂಪದ ಹಿನ್ನೆಲೆಯೆನ್ನುವುದನ್ನು ಹಿಂದಿನ ಪರಿಚ್ಛೇದದಲ್ಲಿ ನೋಡಿದ್ದೇವೆ. ಶಿವನ ಲಿಂಗವು ಅಗ್ನಿಯ ಕಂಬವೆನ್ನುವ ಪ್ರತಿಮೆಯೂ ದೇಶದಲ್ಲಿ ಹರಡಿದೆ. ವಿಷ್ಣುವಿನ 'ತ್ರಿ—ವಿಕ್ರಮ' (ವಿಕ್ರಮಣ)ವೂ ಸ್ಕಂಭವೇ ಅಲ್ಲದೆ ಮತ್ತೇನು? ವಿಷ್ಣುವಿನ ಪಾಲಿಗೆ ಬಂದ ಕೆಲಸ ದೇವತೆಗಳ ಮತ್ತು ಮನುಷ್ಯರ ಹಿತವನ್ನು ಸಾಧಿಸುವುದು; ದೇವತೆಗಳಿಗೆ ಇರಲು ಸ್ಥಳವನ್ನೊದಗಿಸಿ ಅವರು ಸುಖವಾಗಿರುವಂತೆ ನೆರವಾಗುವುದು, ಮನುಷ್ಯರು 'ವಿಕ್ರಾಂತಿ'ಯನ್ನು ಪಡೆಯುವಂತೆ ಮಾಡುವುದು. ವಿಕ್ರಾಂತಿಯೆಂದರೆ ದೇವತೆಗಳಿಗಾಗಿ ಮನುಷ್ಯರು ತಮ್ಮ ಉಪಕಾರೀ ಚೈತನ್ಯವನ್ನು ಬಲಪಡಿಸಿಕೊಂಡು ಪ್ರದರ್ಶಿಸುವುದು; ಸ್ಥೈರ್ಯದಿಂದ ಮುನ್ನುಗ್ಗುವುದು. ಸ್ಕಂಭದ ಕಲ್ಪನೆಯಲ್ಲಿ ಸ್ಥಿತಿ ಮುಖ್ಯವಾದರೆ ಇಲ್ಲಿ ಗತಿ (ಗಮನ) ಮುಖ್ಯವಾಗುತ್ತದೆ. ಸ್ಥಿರವಾಗಿರುವ ಸೂರ್ಯ ತನ್ನ ಕಿರಣಗಳನ್ನು ಎಲ್ಲೆಡೆಯೂ ಹರಡಿ ಸ್ಥಾವರ ಜಂಗಮಗಳೆರಡಕ್ಕೂ ಕಾರಣವಾಗುವುದಿಲ್ಲವೆ? ('ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ', ಋಗ್ವೇದ 1. 115, 1). ಸ್ಥಿರಭಾವದಲ್ಲಿ ಅವನು ಸ್ಕಂಭ; ಕಾರ್ಯಭಾವದಲ್ಲಿ ವಿಷ್ಣು.

ಈ ನಿಟ್ಟಿನಲ್ಲಿ ಅಂತರಿಕ್ಷದಲ್ಲಿ ಅಡ್ಡಿಆತಂಕಗಳಿಲ್ಲದೆ ಸಲೀಲಾಗಿ ಹಾರಾಡುವ ಪಕ್ಷಿಯನ್ನು ವಿಷ್ಣುವಿನ ಕಲ್ಪನೆಯಲ್ಲಿ ಸೇರಿಸಿಕೊಂಡಿರುವುದನ್ನು ಗಮನಿಸಬೇಕು. ಸೂರ್ಯಪಕ್ಷಿಯ ಕಲ್ಪನೆ ಹಲವಾರು ಪ್ರಾಚೀನ ಸಂಸ್ಕೃತಿಗಳಲ್ಲಿದೆ. ಋಗ್ವೇದದಲ್ಲಿ ದೀರ್ಘತಮಾ–ಔಚಥ್ಯನ ಮಂತ್ರದ ಒಂದು ಸಾಲು ತುಂಬ ಪ್ರಸಿದ್ಧವಾಗಿದೆಯಷ್ಟೆ—'ಏಕಂ ಸದ್ವಿಪ್ರಾ ಬಹುಧಾ ವದಂತಿ' ಎನ್ನುವುದು. ಆ ಮಂತ್ರದ ಪೂರ್ಣಪಾಠದಲ್ಲಿ ಈ ದಿವ್ಯ (ಎಂದರೆ ಬೆಳಕಿಗೆ, ಆಕಾಶಕ್ಕೆ ಸಂಬಂಧಿಸಿದ), ಸೊಗಸಾದ ರೆಕ್ಕೆಗಳುಳ್ಳ ಗರುಡನ ಉಲ್ಲೇಖವನ್ನು ಕಾಣಬಹುದು—

> 'ಇಂದ್ರ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್
> ಏಕಂ ಸದ್ವಿಪ್ರಾ ಬಹುಧಾ ವದಂತಿ ಅಗ್ನಿಂ ಯಮಂ ಮಾತರಿಶ್ವಾನಮಾಹುಃ ॥ ೧, ೧೬೪. ೪೬

ವಿಷ್ಣುವಿಗೂ ಪಕ್ಷಿಗೂ ಸಮೀಕರಣಮಾಡಿರುವುದು ಸ್ವಾರಸ್ಯವಾಗಿದೆ; ಶಿವನಿಗೂ ವೃಷಭನಿಗೂ ಹೀಗೆಯೇ ಸಮೀಕರಣಮಾಡಿರುವುದನ್ನು ಹಿಂದಿನ ಪರಿಚ್ಛೇದದಲ್ಲಿ ನೋಡಿದ್ದೇವೆ. ಮುಂದೆ ಶಿವ ವೃಷಭವಾಹನ, ವೃಷಧ್ವಜನಾದಂತೆಯೇ ವಿಷ್ಣುವೂ ಪಕ್ಷಿವಾಹನ, ಗರುಡಧ್ವಜನಾದ. ವೇದಯುಗದಲ್ಲಿ ತಾರ್ಕ್ಷ್ಯ (ಗರುಡ)ನೂ ದೇವತೆಯೇ. 'ಸ್ವಸ್ತಿನಸ್ತಾರ್ಕ್ಷ್ಯೋ' (ಋಗ್ವೇದ 1, 89, 6) ಎನ್ನುವ ಪ್ರಸಿದ್ಧವಾದ ಮಂತ್ರವೇ ಇದೆಯಷ್ಟೆ. ವೈಷ್ಣವರ ಇಂದಿನ ಪೂಜಾಕ್ರಮದಲ್ಲಿಯೂ ತಾರ್ಕ್ಷ್ಯಮುದ್ರೆ ಎನ್ನುವುದಿದೆ; ಗರುಡಾಳ್ವರ್ ಆರಾಧನೆಯೂ ನಡೆಯುತ್ತದೆ.

ವೇದದಲ್ಲಿ ವಿಷ್ಣುವಿನ ಉಲ್ಲೇಖ ಸ್ಪಷ್ಟವಾಗಿದೆ, ಅವನು ದೇವತೆಯೆನ್ನುವ ಭಾವನೆಯೂ ಕೂಡ ಸ್ಪಷ್ಟವಾಗಿದೆ. ನಾರಾಯಣನೆಂಬ ಹೆಸರೂ ಋಗ್ವೇದದಲ್ಲಿ ಕಾಣಸಿಗುತ್ತದೆ; ಆದರೆ ಇಲ್ಲಿನ ನಾರಾಯಣ ಒಬ್ಬ ಋಷಿ. ಶತಪಥಬ್ರಾಹ್ಮಣ ಈ ಋಷಿಯನ್ನು ದೇವತೆಯ ನೆಲೆಗೇರಿಸಿರುವುದು ದಿಟ; ಆದರೆ ಬೌಧಾಯನ ಧರ್ಮಸೂತ್ರದವರೆಗೆ ಈ ನಾರಾಯಣನೂ ವಿಷ್ಣುವೂ ಒಂದೇ ದೇವತೆಯ ಎರಡು ಹೆಸರುಗಳು ಎನ್ನುವುದು ಕಾಣುವುದಿಲ್ಲ. ಇದು ಕ್ರಿಸ್ತಪೂರ್ವ ಇನ್ನೂರು–ಮುನ್ನೂರು ವರ್ಷಗಳ ಹಿಂದಿನ

ಮಾತು. ಅಲ್ಲಿಯವರೆಗೆ ನಾರಾಯಣ, ವಿಷ್ಣು ಎರಡೂ ಬೇರೆಬೇರೆ ದೇವತೆಗಳ ಹೆಸರುಗಳಾಗಿದ್ದುವೆಂದು ತಿಳಿದುಬರುತ್ತದೆ. ತೈತ್ತಿರೀಯ ಆರಣ್ಯಕದಲ್ಲಿ ಇದರ ನಿದರ್ಶನವನ್ನು ಕಾಣಬಹುದು. ವಿಷ್ಣು ವ್ಯಾಪಕನಾದರೆ, 'ತ್ರೀಣಿ ಪದಾ ವಿಚಕ್ರಮೇ' (ಋಗ್ವೇದ, 1, 22, 18) ಎನ್ನುವುದಾದರೆ ನಾರಾಯಣ ನೀರಿನ ದೇವತೆ (ತೋಯಾತ್ಮಾ); ನಾರಾಯಣನೂ ಜನರ, ಜಗತ್ತಿನ ಹಿತಕ್ಕಾಗಿಯೇ ಶ್ರಮಿಸುವ ದೇವತೆ. ನಾರಾಯಣನೇ ವಿಷ್ಣು ಎಂದು ಜನ ಬಗೆದಾಗ, ಹಿಂದಿನ ಶಿವಸ್ಕಂಭದ ಸಂಬಂಧ ತಪ್ಪಿತೆಂದು ತೋರುತ್ತದೆ. ಆಗ ವಿಷ್ಣುವಿನ ದೇವತಾ ಇತಿಹಾಸ ಪ್ರತ್ಯೇಕವಾಗಿ ಬೆಳೆಯತೊಡಗಿತೆನ್ನಬಹುದು. ಋಷಿಯಾಗಿದ್ದವನು ದೇವತೆಯಾಗಿ ವಿಷ್ಣುವಿನ ಲಕ್ಷಣಗಳನ್ನು ಮೂಡಿಸಿಕೊಂಡುದು ಸ್ವಾರಸ್ಯವಾದ ಪ್ರಸಂಗವೇ. ವ್ರಾತ್ಯವೀರನಾದ ರುದ್ರ–ಶಿವನಿಗೆ ಮಾನುಷೀಸಂಬಂಧ ತುಂಬ ಹಿಂದೆಯೇ ತಪ್ಪಿಹೋಗಿದ್ದಿತು; ಆದರೆ ವಿಷ್ಣುವಿಗೆ ಋಷಿ–ದೇವತೆ ನಾರಾಯಣನ ಸಂಬಂಧವಲ್ಲದೆ ಮುಂದೆ ವೃಷ್ಣಿವಂಶದ ವಾಸುದೇವ–ಕೃಷ್ಣನ ಸಂಬಂಧವೂ ಒದಗಿಬಂದಿತು, ಉಳಿಯಿತು.

ಭಾಗವತ ಪಂಥದ ಹಿತ

ಮಹಾಭಾರತದಲ್ಲಿ ನಾರಾಯಣ ಮತ್ತು ವಾಸುದೇವ ಇವರನ್ನು ಸಮೀಕರಿಸುವ ನಿದರ್ಶನಗಳಿವೆ. ನಾರಾಯಣ ಎಂಬ ಹೆಸರುಳ್ಳ (ಲಾಂಛನವುಳ್ಳ) ಅರ್ಬುದಮಂದಿ ಗೋವಳರನ್ನು ವಾಸುದೇವನು ದುರ್ಯೋಧನನ ಸೇನೆಗೆ ಒದಗಿಸಿಕೊಟ್ಟ ಉಲ್ಲೇಖ ಉದ್ಯೋಗಪರ್ವದಲ್ಲಿ ಬರುತ್ತದೆ; ಅವರೆಲ್ಲರೂ ನುರಿತ ಯೋಧರಂತೆ; ಕೃಷ್ಣನ ಸೇನೆ ಅದು—

> ಮತ್ಸಂಹನನತುಲ್ಯಾನಾಂ ಗೋಪಾನಾಮರ್ಬುದಂ ಮಹತ್ ।
> ನಾರಾಯಣಾ ಇತಿ ಖ್ಯಾತಾಃ ಸರ್ವೇ ಸಂಗ್ರಾಮಯೋಧಿನಃ ॥ (೭, ೧೮)

ಗೋವಳರಿಗೆ ನಾರಾಯಣರೆಂಬ ಹೆಸರಿದ್ದುದು ಹೇಗೆ? ನಾರಾಯಣಋಷಿಯ ಪಂಥವನ್ನು ಅವರು ಹಿಡಿದಿದ್ದವರೆ? ಗೋವಳರ ನಾಯಕನಾಗಿದ್ದ ಕೃಷ್ಣ 'ಗೋಪಾಲಕೃಷ್ಣ'ನಾದುದು ಸರಿಯೇ, ಆದರೆ ಪಂಥದ ಪೂರ್ವಜ ನಾರಾಯಣನನ್ನು ಈ ವಾಸುದೇವಕೃಷ್ಣನೊಂದಿಗೆ ಹೊಂದಿಸಿಕೊಂಡ ಸೂಚನೆ ಇಲ್ಲಿ ಕಂಡುಬರುತ್ತದೆಯಲ್ಲವೆ? ವಾಸುದೇವನೆಂಬ ಹೆಸರೂ ಗೊಂದಲಕ್ಕೆ ಕಾರಣವಾಗಿದೆ. ಹಲವಾರು ವಾಸುದೇವರಿದ್ದುದು ಮಹಾಭಾರತದಿಂದ ತಿಳಿದುಬರುತ್ತದೆ. ಅರ್ಜುನ ಮತ್ತು ಕೃಷ್ಣ ಇವರೊಂದಿಗೇ ತ್ರಿಗರ್ತಪ್ರಾಂತ್ಯದಿಂದ ಬಂದ ಸೈನಿಕರೊಂದಿಗೆ ನಾಲ್ಕುಸಾವಿರ ಮಂದಿ 'ವಾಸುದೇವನ ಅನುಚರರು' ಕಾದಾಡಿದ ಪ್ರಸ್ತಾಪ ದ್ರೋಣಪರ್ವದಲ್ಲಿ ಬರುತ್ತದೆ ('ಚತ್ವಾರಿ ಚ ಸಹಸ್ರಾಣಿ ವಾಸುದೇವಸ್ಯ ಚಾನುಗಾಃ', 27, 11). ಈ ವಾಸುದೇವ ಯಾರು? ಮತ್ತೆ ವಂಗ, ಪುಂಡ್ರ, ಕಿರಾತರ ನಡುವೆ ಪುರುಷೋತ್ತಮನೆಂದು ಪ್ರಸಿದ್ಧನಾಗಿದ್ದ ಪುಂಡ್ರಕವಾಸುದೇವನ ಪ್ರಸ್ತಾಪವನ್ನು ಕೃಷ್ಣನೇ ಮಾಡುವುದಿದೆ.

ಕ್ರಿಸ್ತಪೂರ್ವ ಆರೇಳನೆಯ ಶತಮಾನಗಳಷ್ಟು ಹಿಂದೆಯೇ ವಾಸುದೇವನನ್ನು ಪೂಜಿಸುತ್ತಿದ್ದರು. ಪಾಣಿನಿಯ ಒಂದು ಸೂತ್ರ ('ವಾಸುದೇವಾರ್ಜುನಾಭ್ಯಾಂ ವುನ್' 4, 3, 98) ಇದನ್ನು ಸೂಚಿಸುತ್ತದೆ. ಕೆಲವು ಶತಮಾನಗಳ ತರುವಾಯ ಪಾಣಿನಿಯ ಅಷ್ಟಾಧ್ಯಾಯಿಗೆ ಭಾಷ್ಯವನ್ನು ಬರೆದ ಪತಂಜಲಿ ಇದನ್ನು ಇನ್ನಷ್ಟು ಸ್ಪಷ್ಟಪಡಿಸಿದನು ('ಅಥವಾ ನೈಷ ಕ್ಷತ್ರಿಯಖ್ಯಾ ಸಂಜ್ಞೈಷಾ, ತತ್ರಭವತಃ ವಾಸುದೇವಃ ಭಕ್ತಿಃ (ಸೇವ್ಯಃ)ಯಸ್ಯ ಸ ವಾಸುದೇವಕಃ'). ವಾಸುದೇವ ಜನಪ್ರಿಯನಾಗಿದ್ದ ದೇವತೆಯೆಂಬುದು

ಮಾತ್ರವಲ್ಲದೆ ಕೃಷ್ಣನೇ ಅವನೆಂಬುದೂ ಪತಂಜಲಿ ಉಲ್ಲೇಖಿಸಿರುವ ಕೆಲವು ಶ್ಲೋಕಗಳಿಂದ ತಿಳಿದುಬರುತ್ತದೆ. ವಾಸುದೇವ ಮತ್ತು ಬಲದೇವ ಇಬ್ಬರೂ ವೃಷ್ಣಿವಂಶದವರೆಂದು ಹೇಳಿ ಅವರ ಕಂಸಹನನ, ಬಲಿಬಂಧಗಳನ್ನು ಪತಂಜಲಿ ಉಲ್ಲೇಖಿಸಿದ್ದಾನೆ (ಕೀಲ್‌ಹಾರ್ನ್ ಸಂಪಾದಿತ ಮಹಾಭಾಷ್ಯ, ಭಾಗ 2, ಪು. 36). ಉಪೇಂದ್ರವಜ್ರವೃತ್ತದ ಒಂದು ಪಾದ 'ಜಘಾನ ಕಂಸಂ ಕಿಲ ವಾಸುದೇವಃ' 3, 2, 111, ಅನುಷ್ಟುಭ್ ಶ್ಲೋಕಾರ್ಧ 'ಸಂಕರ್ಷಣದ್ವಿತೀಯಸ್ಯ ಬಲಂ ಕೃಷ್ಣಸ್ಯ ವರ್ಧತಾಂ' ಮಹಾಭಾಷ್ಯ, ಭಾಗ 1, ಪು. 476). ವೈದಿಕಯುಗದ ವಿಷ್ಣು-ನಾರಾಯಣ ಒಂದು ಕಾಲಕ್ಕೆ ನಾರಾಯಣ-ವಾಸುದೇವನಾಗಿ, ಇನ್ನೊಂದು ಕಾಲಕ್ಕೆ ವಾಸುದೇವ-ಕೃಷ್ಣನಾದುದು ವಿಷ್ಣುವಿನ ಜನಪ್ರೀತಿಯನ್ನು ತೋರಿಸುತ್ತದೆ. ಕ್ರಿಸ್ತಪೂರ್ವ ಮೂರುನಾಲ್ಕು ಶತಮಾನಗಳಿಗೆ ಮೊದಲು ಮೈದಳೆದ ಭಾಗವತಪಂಥ ಇದನ್ನು ಬೆಳೆಸಿತು. ಬೌದ್ಧರ ಪಾಳಿ 'ನಿದ್ದೇಸ'ದಲ್ಲಿ (ಸುಮಾರು ಕ್ರಿ. ಪೂ. 400) ವಾಸುದೇವನಲ್ಲಿ ಭಕ್ತಿಯನ್ನಿಟ್ಟ ಪಂಥವೊಂದಿದ್ದಿತೆಂದು ಹೇಳಿದೆ.

ಮಹಾಭಾರತದ ಶಾಂತಿಪರ್ವದಲ್ಲಿ ಸೇರಿರುವ 'ನಾರಾಯಣೀಯ'ವೆಂಬ ಪರಿಚ್ಛೇದವು ಭಾಗವತಪಂಥದ ಉಗಮವನ್ನು ವಿವರಿಸುತ್ತದೆ (ಮೋಕ್ಷಧರ್ಮಪರ್ವ. 335-351). ನಾರದನು ಶ್ವೇತದ್ವೀಪಕ್ಕೆ ಹೋಗಿ ನಾರಾಯಣನನ್ನು ಕಂಡು ಅವನಿಂದ ವಾಸುದೇವವ್ಯೂಹಪರವಾದ ಏಕಾಂತಿಕ ಧರ್ಮವನ್ನು ('ಏಕಾಂತಗತಬುದ್ಧಿನಾ') ತಿಳಿಯುವುದು ಇಲ್ಲಿನ ವಿವರ. 'ಪಾರಂಪರ್ಯಗತ'ವಾದ ಈ 'ಸಾತ್ತ್ವತ ವಿಧಿ'ಯಲ್ಲಿ "ಸ ವಾಸುದೇವೋ ವಿಜ್ಞೇಯಃ ಪರಮಾತ್ಮಾ ಸನಾತನಃ" ಎನ್ನುವುದೇ ಮುಖ್ಯಪ್ರಮೇಯ. ಇದು 'ನಾರಾಯಣಪರ'ವಾದುದೆನ್ನುವ ಮಾತು ಮತ್ತೆ ಮತ್ತೆ ಬರುತ್ತದೆ. ಕೌರವ-ಪಾಂಡವರ ಸಮರದಲ್ಲಿ ಅರ್ಜುನನು ಧೃತಿಗೆಟ್ಟಾಗ ವಾಸುದೇವನೇ 'ಹರಿಗೀತೆ' (ಭಗವದ್ಗೀತೆ)ಯ ರೂಪದಲ್ಲಿ ಏಕಾಂತಿಕಧರ್ಮವನ್ನು ಹೇಳಿದನಂತೆ. ಭಾಗವತ ಪಂಥದವರಿಗೆ ಭಗವದ್ಗೀತೆ ಪ್ರಮುಖವಾದ ಆಕರ. ಅದನ್ನು ಅವರ ಪಂಥದ ಪ್ರವರ್ತಕನಾದ 'ಭಗವಾನ'ನೇ ಹೇಳಿದನೆಂದೂ, ಪಂಥದ ಮೊದಲ ಗ್ರಂಥ ಅದೇ ಎಂದೂ ನಂಬಿಕೆಯಿದೆ. ಭಗವದ್ಗೀತೆಯಲ್ಲಿ ನಾರಾಯಣನೆನ್ನುವ ಹೆಸರು ಕಾಣಸಿಗುವುದಿಲ್ಲ. ವಾಸುದೇವ-ಕೃಷ್ಣನೆನ್ನುವ ಹೆಸರು ಮುಂದೆ ಮೈದುಂಬಿ ಬಂದಿತು. ಕ್ರಿಸ್ತಪೂರ್ವ ಮೂರು-ನಾಲ್ಕನೆಯ ಶತಮಾನಗಳಷ್ಟು ಹಿಂದೆಯೇ ಸಿದ್ಧವಾದ ಮಹಾನಾರಾಯಣೋಪನಿಷತ್ತಿನಲ್ಲಿ ಗಾಯತ್ರೀ ಛಂದಸ್ಸಿನ ಮಂತ್ರವೊಂದು ನಾರಾಯಣ-ವಾಸುದೇವ-ವಿಷ್ಣು ಇವರ ಸಮೀಕರಣವನ್ನು ಸ್ಪಷ್ಟಪಡಿಸಿದೆ—

ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ,
ತನ್ನೋ ವಿಷ್ಣುಃ ಪ್ರಚೋದಯಾತ್ ॥

ವೈದಿಕವಿಷ್ಣುವನ್ನು ಅನಂತರದ ನಾರಾಯಣಋಷಿ-ದೇವತೆಯ ನೆಲೆಯಲ್ಲಿ ನಿಲ್ಲಿಸಿ, ನಾರಾಯಣನನ್ನು ವಾಸುದೇವ-ಕೃಷ್ಣನೊಂದಿಗೆ ಹೊಂದಿಸುವುದು ಇಲ್ಲಿ ನಾವು ಕಾಣಬಹುದಾದ ವಿವರ. ಭಾಗವತಧರ್ಮಕ್ಕೆ ಈ ಸಮೀಕರಣ ನೆರವಾಯಿತು.

ಮಹಾನಾರಾಯಣೋಪನಿಷತ್ತು ಸಂನ್ಯಾಸಿಗಳ ವಿರಕ್ತಿಯನ್ನೂ ಗೃಹಸ್ಥರ ವಿಧಿಸಂಕಲ್ಪಗಳನ್ನೂ ಹೊಂದಿಸಲೆಂದು ಸಿದ್ಧವಾದಂತೆ ತೋರುತ್ತದೆ. ಇಲ್ಲಿ ನಾರಾಯಣನನ್ನು ಪ್ರಜಾಪತಿ, ಪರಮೇಶ್ವರ, ಬ್ರಹ್ಮ, ಋತ, ಸೂರ್ಯಮಂಡಲದೊಳಗಿರುವ ಬೆಳಕು, ಅಂತರಿಕ್ಷದಲ್ಲಿ ನೆಟ್ಟ ಮರ (ಸ್ಕಂಭ) ಎಂದು ಮೊದಲಾಗಿ ಬಣ್ಣಿಸಿದ್ದಾರೆ. ಇಲ್ಲಿ ಬರುವ ನಾರಾಯಣನ ಪ್ರಸ್ತಾಪವೂ, ಮಹಾಭಾರತದ ಪರಿಚ್ಛೇದಕ್ಕೆ

'ನಾರಾಯಣೀಯ'ವೆಂದೇ ಹೆಸರಿರುವುದೂ ಗಮನಾರ್ಹವಾದುದು. ಭಾಗವತಪಂಥದ ಹಿನ್ನೆಲೆ ಹೇಗೆ ಸಿದ್ಧವಾಯಿತೆಂಬ ಸುಳಿವು ಇಲ್ಲಿ ಸಿಗುತ್ತದೆ.

ಭಗವದ್ಗೀತೆಯಲ್ಲಿ ವಾಸುದೇವನ ಪ್ರಕೃತಿಯ ಪ್ರಸ್ತಾಪ ಬರುತ್ತದೆ; ಆದರೆ ಮಹಾಭಾರತದ ನಾರಾಯಣೀಯದಲ್ಲಿ ಬರುವ ವಾಸುದೇವ-ವ್ಯೂಹಗಳ ಉಲ್ಲೇಖವಿಲ್ಲ. ಭಾಗವತಪಂಥದ ಪ್ರಕ್ರಿಯೆಯಲ್ಲಿ ವ್ಯೂಹ ಮುಖ್ಯವಾದುದು; ಪಾಂಚರಾತ್ರ ಸಂಪ್ರದಾಯ ಇದನ್ನು ರೂಢಿಸಿಕೊಂಡಿತು. ಭಾಗವತಪಂಥವನ್ನು 'ಸಾತ್ತ್ವತ' ಎಂದೂ ವ್ಯವಹರಿಸುತ್ತಿದ್ದರು. ವಾಸುದೇವ-ಕೃಷ್ಣನು ಸಾತ್ತ್ವತ ವಂಶದವನೆಂದು ಮಹಾ ಭಾರತದ ಆದಿಪರ್ವದಲ್ಲಿಯೇ (218, 12) ಸೂಚನೆಯಿದೆ; ಅವನನ್ನು 'ಸಾತ್ತ್ವತರ್ಷಭ'ನೆಂದು ಭಾಗವತ (೧೦, ೫೮, ೪೨) ನಿರ್ದೇಶಿಸಿದೆ. ಸಾತ್ತ್ವತ, ಅಂಧಕ, ವೃಷ್ಣಿ ಇವು ಯಾದವ ಕುಲದ ಪಂಗಡಗಳು; ವಾಸುದೇವ, ಸಂಕರ್ಷಣ ಮೊದಲಾದ ವ್ಯೂಹಮೂರ್ತಿಗಳು ಸಾತ್ತ್ವತ ಕುಲದವರೇ.

ಅಂತೂ ಕ್ರಿಸ್ತ ಹುಟ್ಟುವುದಕ್ಕೆ ಎರಡು ಮೂರು ಶತಮಾನಗಳ ಮೊದಲು ಉತ್ತರದೇಶದಲ್ಲಿ ಭಾಗವತಪಂಥ ಹರಡಿದ್ದು ವಾಸುದೇವನ ಪೂಜೆ ರೂಪುಗೊಂಡಿದ್ದಿತು. ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ ಆಗ ವಿದಿಶಾನಗರಿಯಲ್ಲಿ ಎದ್ದ 'ಗರುಡಧ್ವಜ'. ಆಗಿನ ವಿದಿಶಾನಗರಿ ಇಂದು ಮಧ್ಯಪ್ರದೇಶದ ಗ್ವಾಲಿಯರ್ ಪ್ರಾಂತ್ಯದಲ್ಲಿ ಭಿಲ್ಸಾ ನಗರದ ಬಳಿಯಿರುವ ಬೇಸ್‌ನಗರ. ಆ ಕಾಲಕ್ಕೆ ಇಲ್ಲಿ ಶುಂಗಮನೆತನದ ಕಾಶೀಪುತ್ರ-ಭಾಗಭದ್ರನೆಂಬುವನು ದೊರೆಯಾಗಿದ್ದ. ಇವನ ಆಸ್ಥಾನಕ್ಕೆ ಹಿಲಿಯೋದೋರಸ್ ಎಂಬ ಇಂಡೋ-ಬ್ಯಾಕ್ಟ್ರಿಯನ್ (ಯವನ) ಇಂಡೋ-ಗ್ರೀಕ್‌ರಾಜ ಅಂತಿಯಲ್ಕಿಡಾಸ್‌ನ ಪ್ರತಿನಿಧಿಯಾಗಿ ಬಂದಿದ್ದ. ತಕ್ಷಶಿಲೆಯಲ್ಲಿ ವಾಸಿಸುತ್ತಿದ್ದ ದಿಯೋನ್ ಎಂಬಾತನ ಮಗನಾದ ಹಿಲಿಯೋದೋರಸ್ ವಿದಿಶೆಯಲ್ಲಿ 'ಗರುಡಧ್ವಜ' ವೊಂದನ್ನು ನಿಲ್ಲಿಸಿದ; ತಾನು 'ಭಾಗವತ'ನೆಂದೂ ಈ ಗರುಡಗಂಬವು 'ದೇವದೇವನಾದ ವಾಸುದೇವ'ನಿಗೆಂದೂ ಬ್ರಾಹ್ಮೀಲಿಪಿಯ ಶಾಸನವೊಂದು ತಿಳಿಸುತ್ತದೆ. (ಡಿ. ಸಿ. ಸರ್ಕಾರ್, Select Inscriptions, ಪು. 90–91). ಈ ವಾಸುದೇವ ಭಕ್ತರಾದ ಭಾಗವತರ ನಿಲುವು ಏನಾಗಿದ್ದಿತೆಂದು ಶಾಸನದ ಕಡೆಯಲ್ಲಿ ಬರುವ ಮಾತುಗಳಿಂದ ಊಹಿಸಿಕೊಳ್ಳಬಹುದು—

'ತಿನಿ ಅಮುತಪದಾನಿ ...... ಸು ಅನುಠಿತಾನಿ
ನೇಯಮ್ತಿ ಸ್ವಗಂ ದಮ ಚಾಗ ಅಪ್ರಮಾದ—'

ಸ್ವರ್ಗಕ್ಕೆ ಒಯ್ಯುವಂಥ ಮೂರು ಅಚ್ಚಳಿಯದ ಹೆಜ್ಜೆಗಳು (ಅಮೃತ ಪದಗಳು)—ದಮ, ತ್ಯಾಗ, ಅಪ್ರಮಾದ. ಮಹಾಭಾರತದಲ್ಲಿ ಇದೇ ವಿವರವಿದೆ — "ದಮಸ್ತ್ಯಾಗೋಽಪ್ರಮಾದಶ್ಚ ಏತೇಷ್ವಮೃತಪದ ಮಾಹಿತಂ" (12, 5, 43).

ವಿದಿಶೆ ಭಾಗವತಧರ್ಮದ ಕೇಂದ್ರವಾಗಿದ್ದಿತೆಂದು ಹೇಳಲು ಇನ್ನೂ ಒಂದು ಅದೇ ಕಾಲದ ಶಾಸನ ನೆರವಾಗುತ್ತದೆ. 'ಭಗವಾನ'ನಿಗೆ ದೊಡ್ಡದೊಂದು ಗುಡಿಯಿದ್ದುದೂ ಈ ಶಾಸನದಿಂದ ತಿಳಿದುಬರುತ್ತದೆ (ಭಗವತೋ ಪ್ರಾಸಾದೋತ್ತಮ). ಮೇವಾಡ ಜಿಲ್ಲೆಯ ಚಿತ್ತೂರಿನ ಬಳಿ ನಗರಿ ಎಂಬ ಗ್ರಾಮವಿದೆ; ಇಲ್ಲಿಯೂ ಮತ್ತು ಹತ್ತಿರವೇ ಇರುವ ಘೋಸುಂಡಿ ಎಂಬ ಇನ್ನೊಂದು ಗ್ರಾಮದಲ್ಲಿಯೂ ಭಾಗವತ ಪಂಥವನ್ನು ಸೂಚಿಸುವ ಶಾಸನಗಳು ದೊರೆತಿವೆ. ಕ್ರಿಸ್ತಪೂರ್ವ ಎರಡನೆಯ ಶತಮಾನದ ಶಾಸನಗಳಿವು. ಪಾರಾಶರೀಪುತ್ರನಾದ' 'ಭಾಗವತ' ಗಾಜಾಯನನು ವಾಸುದೇವ-ಸಂಕರ್ಷಣರಿಗೆ ಕಲ್ಲಿನ ಗೋಡೆಗಳಿದ್ದ

ಗುಡಿಯನ್ನು ಕಟ್ಟಿಸಿದ ಉಲ್ಲೇಖ ಇಲ್ಲಿ ಬರುತ್ತದೆ ('ಕಾರಿತೋಯಂ ರಾಜ್ಞಾ ಭಾಗವತೇನ ಗಾಜಾಯನೇನ ಪರಾಶರೀಪುತ್ರೇಣ ಸರ್ವತಾತೇನ ಅಶ್ವಮೇಧಯಾಜಿನಾ, ಅನಿಹತಾಭ್ಯಾಂ ಸರ್ವೇಶ್ವರಾಭ್ಯಾಂ ವಾಸುದೇವ ಸಂಕರ್ಷಣಾಭ್ಯಾಂ ಪೂಜಾಶಿಲಾಪ್ರಕಾರೋ ನಾರಾಯಣವಟಿಕ', Epigraphica Indica 22 ಪು. 204). ಈ ಗುಡಿಯನ್ನು ನಾರಾಯಣವಾಟಿಕೆಯೆಂದೇ ಕರೆದಿರುವುದು ನಾರಾಯಣ ವಾಸುದೇವರ ಸಂಬಂಧ ಇನ್ನೂ ಹಸಿರಾಗಿದ್ದ ಸಮಯವೆಂದು ಸೂಚಿಸುತ್ತದೆ. ಮುಂದಿನ ಶತಮಾನದಲ್ಲಿ ಸಿದ್ಧವಾದ ಇನ್ನೊಂದು ಪ್ರಾಕ್ತನ ಸ್ಮಾರಕವು ಮಧ್ಯಪ್ರದೇಶದ ವಿಲಾಸಪುರ ಜಿಲ್ಲೆಯ ಬುರ್ಹಿಖಡ ಎಂಬ ಹಳ್ಳಿಯಲ್ಲಿ ದೊರೆಯಿತು. ಇದು ಎರಡೂವರೆ ಅಡಿ ಎತ್ತರದ ಕರಂಡಮಕುಟವಿರುವ ವಿಷ್ಣುವಿಗ್ರಹ; ಇದನ್ನು ಜನ 'ಚತುರ್ಭುಜೀ ಭಗವಾನ್' ಎಂದು ಕರೆಯುತ್ತಿದ್ದರು. ಸಹಜ ಹಸ್ತಗಳು ಅಂಜಲಿಬದ್ಧವಾಗಿದ್ದು, ಮೇಲಿನೆರಡು ಕೈಗಳಲ್ಲಿ ಚಕ್ರ, ಗದೆಗಳನ್ನು ಹಿಡಿದಿರುವ ಈ ಮೂರ್ತಿಯನ್ನು ಭಾರದ್ವಾಜಿಯೆಂಬಾಕೆ ಮಾಡಿಸಿದಳೆಂದು ಗದೆಯ ಮೇಲಿರುವ ಬ್ರಾಹ್ಮೀಲಿಪಿಯ ಒಂದು ಸಾಲಿನ ಬರಹ ತಿಳಿಸುತ್ತದೆ. ಇಲ್ಲಿ ಅಭಯ–ವರದ ಹಸ್ತಗಳಿಲ್ಲದೆ ನಮಸ್ಕಾರಮುದ್ರೆಯಿರುವುದು ಭಾಗವತ ಪಂಥದ ಏಕಾಂತಿಕ ಭಕ್ತಿಯನ್ನು ನಿರ್ದೇಶಿಸುತ್ತಿರಬಹುದು.

ಇದೇ ಸಮಯದಲ್ಲಿ ಮಹಾಕ್ಷತ್ರಪ (ಉತ್ತರ ಭಾರತದ ಶಕ ಛತ್ರಪತಿ ರಾಜುವಲನ ಮಗ) ಷೋಡಾಸ ರಾಜ್ಯವಾಳುತ್ತಿದ್ದಾಗ ಮಥುರೆಯಲ್ಲಿ ವಾಸುದೇವನ ದೊಡ್ಡಗುಡಿ ('ಮಹಾಸ್ಥಾನ') ಇದ್ದಿತು; ಅದಕ್ಕೆ ಕಲ್ಲಿನ ಮಹಾದ್ವಾರ, ಪ್ರಾಕಾರಗಳೂ ಇದ್ದುವು. ಇದನ್ನು ಹೇಳುವ ಶಾಸನವೊಂದನ್ನು ಆರ್. ಪಿ. ಚಾಂದಾ ಕಂಡುಹಿಡಿದರು. ಮಥುರೆಯ ಬಳಿಯೇ ಮೋರಾ ಎಂಬ ಹಳ್ಳಿಯ ಬಾವಿಯೊಂದರಲ್ಲಿ ದೊರೆತ ಇನ್ನೊಂದು ಶಿಲಾ ಶಾಸನವೂ ಇದೇ ರಾಜನ ಕಾಲದ್ದು. ಅದರಲ್ಲಿ ವೃಷ್ಣಿವಂಶದ ಐವರು 'ಭಾಗವಾನ'ರಾದ ವೀರರ ಪ್ರತಿಮೆಗಳನ್ನು ಕಲ್ಲಿನ ಗುಡಿಯೊಂದರಲ್ಲಿಟ್ಟು ಪೂಜಿಸುತ್ತಿದ್ದ ಉಲ್ಲೇಖವಿದೆ ('ಭಗವತಾಂ ವೃಷ್ಣೀನಾಂ ಪಂಚವೀರಾಣಾಂ ಪ್ರತಿಮಾಃ ಶೈಲದೇವಗ್ರ......ಅರ್ಚಾದೇಶಾಂ ಶೈಲಂ ಪಂಚಜ್ವಲತ ಇವ ಪರಮವಪುಷಾ......', ಎಚ್. ಲೂಡರ್ಸ್ ಅವರ ಪಾಠ). ಈ ಐವರು ವೀರರು ಬಲದೇವ, ಅಕ್ರೂರ, ಅನಾದೃಷ್ಟಿ, ಸಾರಣ, ವಿದೂರಥ ಎಂದು ಲೂಡರ್ಸ್ ಮತ್ತು ಅಲ್ಸ್‌ಡಾರ್ಫ್ ಇವರ ವಿವರಣೆ. ಮುಂದೆ ಪಂಚವೀರರೆಂದರೆ 'ವಂಶವೀರ'ರಾದ ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಾಂಬ ಇವರೆಂದು ಗ್ರಹಿಕೆ ಬೆಳೆಯಿತು. ಇವರ ವಿಚಾರ ಮತ್ತೆ ಇಷ್ಟರಲ್ಲಿಯೇ ಬರುತ್ತದೆ.

ಹೀಗೆ ಆರಂಭವಾದ ಭಾಗವತ ಪಂಥ ಮಗಧದ ಗುಪ್ತರಾಜರ ಕಾಲದಲ್ಲಿ ಮಧ್ಯಪ್ರದೇಶದ ಸುತ್ತಮುತ್ತಲೆಲ್ಲ ಹರಡಿತು; ಜನರಲ್ಲಿ ಬೇರೂರಿತು. ಮೊದಲ ಗುಪ್ತರಾಜರೆಲ್ಲ 'ಪರಮಭಾಗವತ'ರೇ. ಕ್ರಿಸ್ತಾಬ್ದ ನಾನ್ನೂರು ವರ್ಷಗಳ ಸರಿಸುಮಾರಿನಲ್ಲಿ ಛಾಪಿಸಿದ ಬಂಗಾರದ ನಾಣ್ಯಗಳೂ, ಬರೆಯಿಸಿದ ಶಾಸನಗಳೂ ಅವರ ಭಾಗವತಪಂಥ ಪ್ರೀತಿಯನ್ನು ಸ್ಪಷ್ಟಪಡಿಸುತ್ತವೆ. ವಿಕ್ರಮಾದಿತ್ಯನೆಂದು ಪ್ರಸಿದ್ಧನಾದ ಎರಡನೆಯ ಚಂದ್ರಗುಪ್ತನಿಗೆ ಚತುರ್ಭುಜ ವಿಷ್ಣುವು ತನ್ನ ಚಕ್ರವನ್ನೇ ಕೊಡುತ್ತಿರುವ ಚಿತ್ರಣ ವನ್ನೊಳಗೊಂಡ ಬಂಗಾರದ ನಾಣ್ಯಗಳು ರಾಜಾಸ್ಥಾನದ ಭರತಪುರ ಪ್ರಾಂತ್ಯದಲ್ಲಿರುವ ಬಯಾನಾದಲ್ಲಿ ದೊರೆತಿವೆ. 'ಪರಮ ಭಾಗವತ'ನಾದ ಈ ದೊರೆಯೇ ವಿಷ್ಣುವಿಗಾಗಿ 'ಧ್ವಜ'ವೊಂದನ್ನೂ ನಿಲ್ಲಿಸಿದನೆಂದು ಮೆಹೆರೌಲಿ ಶಾಸನ ತಿಳಿಸುತ್ತದೆ. ಅವನ ಮಗಳು ಪ್ರಭಾವತಿ 'ಭಗವತ್ಪಾದಾನುಧ್ಯಾತೆ' (ರಿಟ್‌ಪುರ್ ಶಾಸನ); 'ಅತ್ಯಂತ ಭಗವದ್ಭಕ್ತೆ'; ಆಕೆಯ ಗಂಡ ರುದ್ರಸೇನನು 'ಭಗವತಶ್ಚಕ್ರಪ್ರಾಣೇಃ ಪ್ರಸಾದೋಪಾರ್ಜಿತ ಶ್ರೀಸಮುದಯ' (ಚಮ್ಮಕ್ ಶಾಸನ). ಚಂದ್ರಗುಪ್ತನ ಮಗ ಮೊದಲನೆಯ ಕುಮಾರಗುಪ್ತ–

ಮಹೇಂದ್ರಾದಿತ್ಯನೂ 'ಪರಮಭಾಗವತ'ನೇ; ಗರುಡಧ್ವಜವಿರುವ ಅವನ ನಾಣ್ಯಗಳು ದೊರೆತಿವೆ. ಅವನು ಕಾರ್ತಿಕೇಯನನ್ನೂ ಪೂಜಿಸುತ್ತಿದ್ದನೆನ್ನಿ. ಕ್ರಿಸ್ತಾಬ್ದ 404 ರಲ್ಲಿ ಮಂದಸ್ಸೋರಿನ ಬಂಡೆಯ ಮೇಲೆ ಮಹಾರಾಜ ನರವರ್ಮನು ಕಡೆಯಿಸಿದ ಶಾಸನ

> ಸಹಸ್ರಶಿರಸೇ ತಸ್ಮೈ ಪುರುಷಾಯಾಮಿತಾತ್ಮನೇ ।
> ಚತುಃ ಸಮುದ್ರ ಪರ್ಯಂಕತೋಯ ನಿದ್ರಾಲವೇ ನಮಃ ॥

ಎನ್ನುವ ಪ್ರಾರ್ಥನಾ ಶ್ಲೋಕದಿಂದ ಆರಂಭವಾಗಿ, ಎಂಟನೆಯ ಸಾಲಿನಲ್ಲಿ "ವಾಸುದೇವಂ ಜಗದ್ವಾಸಂ ಅಪ್ರಮೇಯಂ ಅಜಂ ವಿಭುಂ" ಎಂಬ ಮಾತುಗಳನ್ನು ಮೂಡಿಸಿಕೊಂಡಿದೆ. ಮಹಾರಾಜ ಸಂಖೋಬನ ಖೋ ತಾಮ್ರಶಾಸನದಲ್ಲಿ (ಕ್ರಿಸ್ತಾಬ್ದ 529) ಮೊಟ್ಟಮೊದಲಿಗೆ ಭಾಗವತಪಂಥದ ಮೂಲಮಂತ್ರವಾದ 'ಓಂ ನಮೋಭಗವತೇ ವಾಸುದೇವಾಯ' ಎನ್ನುವುದು ಕಾಣಸಿಗುತ್ತದೆ.

ತಾತ್ಪರ್ಯ ಇಷ್ಟೇ. ಸಾತ್ತ್ವತರೆಂಬ ಜನ ಭಾಗವತ ಪಂಥವನ್ನು ರೂಢಿಗೆ ತಂದು ಕ್ರಿಸ್ತಾಬ್ದದ ಮೊದಲ ಶತಮಾನಗಳಲ್ಲಿ ದೇಶದಲ್ಲೆಲ್ಲ ಹರಡಿ ವಿಷ್ಣುಪೂಜೆಗೆ ವಿಶೇಷವಾದ ಪ್ರೋತ್ಸಾಹವನ್ನು ಒದಗಿಸಿದರು. ಸಾತ್ತ್ವತ ಕುಲದ ಹಿರಿಯನಾಗಿದ್ದ ವಾಸುದೇವನೇ ಪಂಥ ಪ್ರವರ್ತಕನೆಂದರೆ ತಪ್ಪಾಗದು. ಆದ್ಯಪುರುಷನನ್ನು ದೇವತಾ ಸ್ಥಾನಕ್ಕೇರಿಸಿ ಪೂಜೆಮಾಡುವ ಪದ್ಧತಿಯೇನು ಅಪುರೂಪವಲ್ಲವಷ್ಟೆ. ಆದರೆ ಸಾತ್ತ್ವತರು ಆರ್ಯ ಸಮಾಜದಿಂದ ಹೊರಗಿದ್ದ ಜನ ಎನ್ನುವುದನ್ನು ಮರೆಯಬಾರದು. ಭಾಗವತಪಂಥವನ್ನು ಆದರಿಸಿದವರಲ್ಲಿ ಶಕರೂ ಯವನರೂ ಇದ್ದರು ಎನ್ನುವುದನ್ನೂ ಮರೆಯಬಾರದು. ಇಂಡೋಬ್ಯಾಕ್ಟ್ರಿಯನ್ ಆಳ್ವಿಕೆಯಲ್ಲಿದ್ದ ತಕ್ಷಶಿಲೆ, ಮತ್ತು ಅವರ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದ ವಿದಿಶೆ ಇವೆರಡೂ ಭಾಗವತ ಪಂಥ ಮೊದಲಿಗೆ ಬೇರೂರಿದ ಸ್ಥಳಗಳು. ವಿಷ್ಣುಪೂಜೆಯಲ್ಲಿ ಅನಾರ್ಯ ಸಂಸ್ಕೃತಿಯ ನೆರವನ್ನು ಉದ್ದಕ್ಕೂ ಕಾಣಬಹುದು.

ಭಾಗವತ ಪಂಥದ ಪಾಂಚರಾತ್ರ ಸಂಪ್ರದಾಯ ಏಕೇಶ್ವರವಾದವನ್ನು ಬಲಪಡಿಸಿತು. ಅದರ ಮೊದಲ ಹಂತದಲ್ಲಿ ಸಾತ್ತ್ವತ ಪಂಚವೀರರನ್ನೂ ಸಮಾನವಾಗಿ ಗೌರವಿಸುತ್ತಿದ್ದರು. ಐತರೇಯ ಬ್ರಾಹ್ಮಣದಲ್ಲಿ (8,28,2) ಐದು ದೇವತೆಗಳ ಪ್ರಸ್ತಾಪವಿದೆ ('ಪಂಚದೇವತಾಃ' ಮಿಂಚು, ಮಳೆ, ಸೂರ್ಯ, ಚಂದ್ರ, ಬೆಂಕಿ). ಶತಪಥ ಬ್ರಾಹ್ಮಣದಲ್ಲಿ ಐದು ವಿಧಿಗಳ ಕಲ್ಪನೆಯಿದೆ. ಐದು ದಿಕ್ಕುಗಳು (ದಿಶಃ), ಐದು ವರ್ಗಗಳು (ಗಂಧರ್ವ, ಪಿತೃ, ದೇವತೆ, ಅಸುರ, ರಾಕ್ಷಸ), ಐದು ಇಂದ್ರಿಯಗಳು ಹೀಗೆ ಐದಕ್ಕೆ ಹೆಚ್ಚಿನ ಮೌಲ್ಯವನ್ನು ಕೊಡುವುದು ಪ್ರಾಚೀನ ಪದ್ಧತಿ. ವೃಷ್ಣಿವಂಶದ ಪಂಚವೀರರು ಈ ನೆಲೆಯಲ್ಲಿ ಬಂದವರಾದರೂ ಬರುಬರುತ್ತ ಐವರೂ ಕೂಡಿ ಒಂದೇ ತತ್ತ್ವವೆನ್ನುವ ಭಾವನೆ ಎದ್ದುನಿಂತಿತು. ಲಿಂಗಪುರಾಣವು 'ಪಂಚಬ್ರಹ್ಮಾತ್ಮಕಃ ಶಿವಃ' (2, 14, 3) ಎಂದು ಹೇಳಿರುವುದನ್ನು ಇಲ್ಲಿ ನೆನಸಿಕೊಳ್ಳಬೇಕು. ಒಂದೇ ತತ್ತ್ವದಿಂದ ಐವರು ಹೊರಹೊಮ್ಮುವುದು, ವ್ಯವಸ್ಥೆಗೊಳ್ಳುವುದು ವ್ಯೂಹವೆನಿಸಿಕೊಳ್ಳುತ್ತದೆ. ಪಾಂಚರಾತ್ರಸತ್ರದ ಫಲವಾಗಿ ಪಂಚವೀರರು ಪಂಚವ್ಯೂಹವಾಗಿ ಪರಿಣಮಿಸಿದುದು ಒಂದು ಘಟ್ಟ. ಪಾಂಚರಾತ್ರಸತ್ರವು ಶತಪಥ ಬ್ರಾಹ್ಮಣದಲ್ಲಿ ಹೇಳಿದ್ದರೂ ದಿಟವಾಗಿ ವೈದಿಕ ಕ್ರಿಯಾಕಾಂಡದಿಂದ ಹೊರಗಾದುದು; ವೃಷ್ಣಿ, ಅಂಧಕ, ಆಭೀರ, ಸೌರಾಷ್ಟ್ರ, ಕಿರಾತ ಮೊದಲಾದ 'ಅನಾರ್ಯ' ಜನರಲ್ಲಿಯೇ ಬಳಕೆಯಲ್ಲಿದ್ದುದು. ಐವರು ಮನುಷ್ಯವೀರರನ್ನು ಬೇರೆಬೇರೆಯಾಗಿಯೇ ಪೂಜಿಸುವ ಪದ್ಧತಿ ಮೊದಲಿಗಿದ್ದುದು ಆಶ್ಚರ್ಯವೇನಲ್ಲ.

ಐವರೂ ಒಂದೇ ಕುಟುಂಬಕ್ಕೆ ಸೇರಿದವರೆನ್ನುವ ಕಲ್ಪನೆ ಮುಂದಿನ ಹೆಜ್ಜೆ. ಇದು ವಾಸುದೇವನ ಕುಟುಂಬವೆಂದು ಪರಿಗಣಿಸಲ್ಪಟ್ಟು ವಾಸುದೇವನ ವ್ಯೂಹಗಳೇ ಇತರರು ಎನ್ನುವ ಭಾವನೆ ಇನ್ನೂ ಮುಂದಿನ ಹೆಜ್ಜೆ.

ವಾಯು ಪುರಾಣದಲ್ಲಿ ಮನುಷ್ಯ–ದೇವತೆಗಳಾದ ಈ ಪಂಚವೀರರ ಹೆಸರುಗಳು ಬರುತ್ತವೆ.

> ಮನುಷ್ಯಾಕೃತೀನ್ ದೇವಾನ್ ಕೀರ್ತ್ಯಮಾನಾನ್ನಿಬೋಧತ
> ಸಂಕರ್ಷಣೋ ವಾಸುದೇವಃ ಪ್ರದ್ಯುಮ್ನಃ ಸಾಂಬ ಏವ ಚ,
> ಅನಿರುದ್ಧಶ್ಚ ಪಂಚೈತೇ ವಂಶವೀರಾಃ ಪ್ರಕೀರ್ತಿತಾಃ

ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಾಂಬ ಇವರೇ ಐವರು. ಸಂಕರ್ಷಣನೆಂದರೆ ಬಲರಾಮ, ಕೃಷ್ಣನ ಅಣ್ಣ; ವಾಸುದೇವನಂತೂ ಕೃಷ್ಣನೇ; ಪ್ರದ್ಯುಮ್ನ ಕೃಷ್ಣನ ಮಗ, ಅನಿರುದ್ಧ ಮೊಮ್ಮಗ, ಸಾಂಬ ಕೃಷ್ಣನ ಇನ್ನೊಬ್ಬ ಮಗ. ಕಾಲಕ್ರಮದಲ್ಲಿ ಸಾಂಬನ ದೇವತಾ ಘನತೆ ಕರಗಿಹೋಗಿ ಉಳಿದ ನಾಲ್ವರೇ ಚತುರ್ವ್ಯೂಹವೆನಿಸಿಕೊಂಡರು. ಇವರಲ್ಲಿ ವಾಸುದೇವನು ವ್ಯೂಹಗಳಿಗೆ ಅಧಿಷ್ಠಾನವೆಂದೂ, ತಾನೇ ವ್ಯೂಹ ವಲ್ಲವೆಂದೂ ಆಗಿ ಕಡೆಗೆ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರು ಮಾತ್ರ ವ್ಯೂಹ ಮೂರ್ತಿಗಳಾದರು. ವಾಸುದೇವನ ಜ್ಞಾನ–ಬಲ (ಸಂಕರ್ಷಣ), ಐಶ್ವರ್ಯ–ವೀರ್ಯ (ಪ್ರದ್ಯುಮ್ನ), ಶಕ್ತಿ–ತೇಜಸ್ಸು (ಅನಿರುದ್ಧ) ಇವೇ ವ್ಯೂಹಗಳ ನೆಲೆಗಳಾದುವು.

ವಾಸುದೇವ–ಸಂಕರ್ಷಣ ಇಬ್ಬರ ಪೂಜೆಯೇ ಬಹುಕಾಲ ನಡೆದಂತೆ ತೋರುತ್ತದೆ. ಈಗಾಗಲೇ ಪ್ರಸ್ತಾಪಮಾಡಿದ ಗಾಚಾಯನನ ಶಾಸನದಲ್ಲಿ 'ಸರ್ವೇಶ್ವರಾಭ್ಯಾಂ ವಾಸುದೇವ ಸಂಕರ್ಷಣಾಭ್ಯಾಂ' ಎನ್ನುವ ಮಾತನ್ನು ನೆನಸಿಕೊಳ್ಳಬೇಕು; ಪತಂಜಲಿ ಉದ್ಧರಿಸಿರುವ 'ಸಂಕರ್ಷಣ ದ್ವಿತೀಯಸ್ಯ ಕೃಷ್ಣಸ್ಯ' ಎನ್ನುವ ಶ್ಲೋಕಾರ್ಧವನ್ನೂ ಗಮನಿಸಬೇಕು. ಇಬ್ಬರಲ್ಲಿ ಸಂಕರ್ಷಣನಿಗೇ ಹೆಚ್ಚಿನ ಪ್ರಾಶಸ್ತ್ಯವಿದ್ದುದೂ ಉಂಟು; ದ್ವಾಪರಯುಗ ಕಳೆದು ಕಲಿಯುಗ ಆರಂಭವಾದಾಗ ಸಂಕರ್ಷಣನೇ ಸಾತ್ತ್ವತ ವಿಧಿಯನ್ನು ನಿರೂಪಿಸಿದನೆಂದು ಮಹಾಭಾರತ (6, 62, 42)ಹೇಳುತ್ತದೆ. ಹೀಗೆಂದೇ ಸರ್ವತಾತನ ನಗರೀ ಶಾಸನ 'ಭಗವದ್ಭ್ಯಾಂ ಸಂಕರ್ಷಣ ವಾಸುದೇವಾಭ್ಯಾಂ' ಎನ್ನುವ ಕ್ರಮವನ್ನು ಹಿಡಿದಿದೆ. ಎಷ್ಟಾದರೂ ಕೃಷ್ಣನ ಅಣ್ಣನಲ್ಲವೆ? ಪತಂಜಲಿಯ ಕಾಲದಿಂದಲೂ ಸಂಕರ್ಷಣ ಲಾಂಗುಲಿ (ನೇಗಿಲನ್ನು ಹಿಡಿದವನು), ರಾಮ, ರೌಹಿಣೇಯ (ವಾಸುದೇವ, ರೋಹಿಣಿಯರ ಮಗ). ಪಾಂಚರಾತ್ರ ಸಂಹಿತೆಯು ಸಂಕರ್ಷಣನನ್ನು ರುದ್ರ–ಶಿವನೆಂದು ಹೇಳಿದೆ; ಬ್ರಹ್ಮಾಂಡ ಪುರಾಣದಲ್ಲಿ ರುದ್ರನೂ ಹಲಾಯುಧನೇ; ಸಂಕರ್ಷಣ ಅವನ ಅವತಾರಗಳಲ್ಲೊಂದು (23, 132). ವಿಷ್ಣುಪುರಾಣದಲ್ಲಿ ಪ್ರತಿಕಲ್ಪದ ಕೊನೆಯಲ್ಲಿಯೂ ಶೇಷನ ಬಾಯಿಂದ ಹೊರಬರುವ ಸಂಕರ್ಷಣ–ರುದ್ರನ ಪ್ರಸ್ತಾಪವಿದೆ (2, 5, 18). ಸಂಕರ್ಷಣಧ್ವಜವೆಂದರೆ ತ್ರಿಶೂಲದಂತಿರುವ ತಾಳೆಮರದ ಕೊಂಬೆ. ತಾಳವೃಕ್ಷಕ್ಕೂ ಸಂಕರ್ಷಣನಿಗೂ ಗಂಟು; ಹಾಗೆಯೇ ನಾಗಕ್ಕೂ ಅವನಿಗೂ ಗಂಟು. ಅವನನ್ನು ಶೇಷ ಸಂಕರ್ಷಣನೆಂದೇ ಕರೆಯುವುದುಂಟು (ಭಾಗವತ, 6, 16, 33–46). ಬಲದೇವನೆಂಬ ನಾಗರಾಜನನ್ನು ಕಾರ್ತಿಕಮಾಸದ ಅಷ್ಟಮಿಯಂದು ಪೂಜೆಮಾಡುತ್ತಿದ್ದುದು ಮಹಾಭಾರತದಿಂದ ತಿಳಿದುಬರುತ್ತದೆ. ಶಿವನಿಗೂ ಹಾವುಗಳ ನೆಂಟಿದೆಯಲ್ಲವೆ? ಇಷ್ಟಲ್ಲದೆ ಇನ್ನೂ ಒಂದು ವಿವರವಿದೆ. ಶಿವನ ಲಾಂಛನ ಲಿಂಗ (ಮರದ ಕೊಂಟು) ಆದರೆ ಸಂಕರ್ಷಣನ ಲಾಂಛನ ಲಾಂಗಲ (ನೇಗಿಲು); ಎರಡೂ ಬೇಸಾಯಪ್ರಮುಖ ಸಮಾಜದ ಅಭಿವ್ಯಕ್ತಿಗಳೇ, ಗರ್ಭಾಧಾನದ ಕುರುಹುಗಳೇ. ಎಲ್ಲಕ್ಕೂ ಮೇಲಾಗಿ ಸಂಕರ್ಷಣನೂ

ಶಿವನಂತೆ ಯೋಗಿ. ಪ್ರಾತ್ಯತಪಶ್ಚರ್ಯೆ ಇಬ್ಬರಿಗೂ ಸಮಾನವಾದುದೇ. ವಿಷ್ಣುಧರ್ಮೋತ್ತರದಲ್ಲಿ ಸಂಕರ್ಷಣನು ಜ್ಞಾನಕ್ಕೆ ಅಭಿಮಾನಿ ದೇವತೆ (3, 142, 5); ಮೇಧಾದಕ್ಷಿಣಾಮೂರ್ತಿಯಿದ್ದಂತೆ.

ನಮ್ಮ ದೇಶದಲ್ಲಿ ದೊರೆತಿರುವ ವೈದಿಕ ಸಂಪ್ರದಾಯದ ಶಿಲ್ಪಗಳಲ್ಲಿ ತುಂಬ ಹಳೆಯದೆಂದರೆ ಸಂಕರ್ಷಣನದೇ. ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ ಕಡೆದ ಈ ಕಲ್ಲುಪ್ರತಿಮೆ ಕೈಯಲ್ಲಿ ನೇಗಿಲನ್ನು ಹಿಡಿದಿದೆ; ತಲೆಯ ಮೇಲೆ ನಾಗಛತ್ರವಿದೆ. ಮಥುರಾ ಬಳಿ ದೊರೆತ ಈ ಮೂರ್ತಿಯನ್ನು ಈಗ ಲಕ್ನೋ ವಸ್ತುಸಂಗ್ರಹಾಲಯದಲ್ಲಿರಿಸಿದ್ದಾರೆ (ವಾಸುದೇವ ಶರಣ ಅಗ್ರವಾಲ, Journal of Indian Society of Oriental Art 1937, ಪು. 126). ಕ್ರಿಸ್ತಪೂರ್ವಯುಗದಲ್ಲಿ ಪ್ರಚಲಿತವಾಗಿದ್ದ ಸಂಕರ್ಷಣ ಪೂಜೆ ದಕ್ಷಿಣದೇಶದಲ್ಲಿ ಕ್ರಿಸ್ತಾಬ್ದ ಆರೇಳನೆಯ ಶತಮಾನಗಳವರೆಗೂ ಬಳಕೆಯಲ್ಲಿದ್ದಿತು; ಶೇಷಸಂಕರ್ಷಣನ ಒಂದು ರೂಪವಾದ 'ಅನಂತಸ್ವಾಮಿ' ಎನ್ನುವ ಹೆಸರಿನ ದೇವತೆ ಪ್ರಬಲವಾಗಿದ್ದನು. ರಾಮ–ಕೃಷ್ಣರೆಂದರೆ ಬಲರಾಮ (ಸಂಕರ್ಷಣ) ಮತ್ತು ಕೃಷ್ಣ (ವಾಸುದೇವ) ಇವರೇ. ವಿಷ್ಣುವಿನ ದಶಾವತಾರಗಳಲ್ಲಿಯೂ ಬಲರಾಮನನ್ನು ಸೇರಿಸುವುದಿದೆ. ಬಲರಾಮನ ಪ್ರಾಶಸ್ತ್ಯ ಕಡಮೆಯಾದಾಗ ರಘುರಾಮನು ದಶಾವತಾರದ ಪಟ್ಟಿಯಲ್ಲಿ ಕೃಷ್ಣನಿಗೆ ಮೊದಲು ಕಾಣಿಸಿಕೊಂಡನೋ ಏನೋ.

ವ್ಯೂಹಾವತಾರ ವೈಭವ

ಭಾಗವತ ಪಂಥವು ಜನರ ಅನುರಾಗವನ್ನು ಸೂರೆಗೊಂಡು ಎಲ್ಲೆಡೆಗಳಲ್ಲಿ ಹರಡುತ್ತಿದ್ದಾಗ ಅದರ ಸಿದ್ಧಾಂತವೂ ದೃಢವಾಯಿತು. ಭಗವಂತನ ಎರಡು ಕ್ರಿಯೆಗಳು—ಸರ್ಜನ-ಪಾಲನ ಮತ್ತು ಮುಕ್ತಿಮಾರ್ಗ ದರ್ಶನ. ಸಂಕರ್ಷಣನಲ್ಲಿ ಮಹಾಭೂತಗಳ ಸೃಷ್ಟಿ ಮೊದಲಕ್ರಿಯೆ, ಏಕಾಂತಿಕ ಧರ್ಮದ ಪ್ರತಿಪಾದನೆ ಎರಡನೆಯದು; ಪ್ರದ್ಯುಮ್ನನಲ್ಲಿ ಪ್ರಕೃತಿ–ಪುರುಷ ಭೇದ ಮೊದಲ ಕ್ರಿಯೆ, ಧರ್ಮವನ್ನು ಆಚಾರದಲ್ಲಿ ಇಳಿಸುವುದು ಎರಡನೆಯದು; ಅನಿರುದ್ಧನಲ್ಲಿ ಜೀವಸೃಷ್ಟಿ ಮೊದಲನೆಯದು, ಪಾಂಚರಾತ್ರ ವಿಧಾನದಿಂದ ಮುಕ್ತಿಮಾರ್ಗವನ್ನು ತೋರಿಸುವುದು ಎರಡನೆಯದು (ಅನಿರುದ್ಧಪ್ರಶಸ್ತೇನ ಪಾಂಚರಾತ್ರೇಣ). ಹೀಗೆ ವ್ಯೂಹಗಳ ಮೊದಲ ನೆಲೆ ಸಿದ್ಧವಾದಂದು ಅದರ ಬೆಳವಣಿಗೆಗೆ ನಾಂದಿಯಾಯಿತು. ವ್ಯೂಹಗಳಿಗೆ ಮೂರ್ತಿಗಳನ್ನೂ ಸ್ಥಾನಗಳನ್ನೂ ನಿರ್ದೇಶಿಸಿದರು. ಪೂರ್ವದಲ್ಲಿ ಮನುಷ್ಯರೂಪದ ವಾಸುದೇವ, ದಕ್ಷಿಣದಲ್ಲಿ ಸಿಂಹರೂಪದ ಸಂಕರ್ಷಣ, ಉತ್ತರದಲ್ಲಿ ವರಾಹರೂಪದ ಪ್ರದ್ಯುಮ್ನ, ಪಶ್ಚಿಮದಲ್ಲಿ ಉಗ್ರಾಕಾರದ ಅನಿರುದ್ಧ.

ವೈಷ್ಣವಾಗಮಗಳಲ್ಲಿ ವೈಖಾನಸ, ಪಾಂಚರಾತ್ರ ಎಂಬ ಭೇದವಿದೆ. ವೈಖಾನಸ ಕೊಂಚ ಪ್ರಾಚೀನವೆಂದು ತೋರುತ್ತದೆ; ಪಾಂಚರಾತ್ರವನ್ನು ರಾಮಾನುಜಾಚಾರ್ಯರು ಪುರಸ್ಕರಿಸಿದರು. ದಕ್ಷಿಣದೇಶದ ವಿಷ್ಣುದೇವಾಲಯಗಳಲ್ಲಿ ಪ್ರತಿಷ್ಠೆ, ಪೂಜಾವಿಧಿಗಳು ಈ ಎರಡು ಸಂಪ್ರದಾಯಗಳಲ್ಲಿಯೇ ನಡೆಯುವುದು ವಾಡಿಕೆ. ಮಾಧ್ವ ಸಂಪ್ರದಾಯದ ಗುಡಿಗಳಲ್ಲಿ ತಂತ್ರಸಾರೋಕ್ತವಾದ ಪೂಜಾವಿಧಿಯಿರುತ್ತದೆ. ವಿಷ್ಣುವಿನ ವ್ಯೂಹ ಕಲ್ಪನೆ ಈ ಆಗಮಗಳಿಗೆಲ್ಲ ಸಾಧಾರಣವಾದುದು. ಮೇಲೆ ಹೇಳಿದ ವ್ಯೂಹ ಮೂರ್ತಿಗಳು ಬಹುಮಟ್ಟಿಗೆ ಪಾಂಚರಾತ್ರ ಸಂಪ್ರದಾಯದಿಂದ ಸ್ಪಷ್ಟವಾದುವು. ಬ್ರಹ್ಮನಲ್ಲಿ ನಿಷ್ಕಲ, ಸಕಲ ಎಂದು ಭೇದವಿದೆ. ನಿಷ್ಕಲವೆಂದರೆ ಬಣ್ಣಿಸಲಾಗದ, ರೂಪವಿರದ ಬ್ರಹ್ಮ; ಗುಣಗಳಿಲ್ಲವೆಂದಲ್ಲ, ಆದರೆ ಹಾಲಿನಲ್ಲಿ ತುಪ್ಪವಿದ್ದಂತೆ, ಸಾಸಿವೆಯಲ್ಲಿ ಎಣ್ಣೆಯಿದ್ದಂತೆ, ಕಟ್ಟಿಗೆಯಲ್ಲಿ ಬೆಂಕಿಯಿದ್ದಂತೆ, ಹೂವಿನಲ್ಲಿ ಕಂಪಿದ್ದಂತೆ, ಹಣ್ಣಿನಲ್ಲಿ ರಸವಿದ್ದಂತೆ ಇರುತ್ತದೆ. ಸಕಲಬ್ರಹ್ಮನು ಸಗುಣನೂ ಹೌದು; ಎಂದರೆ ತನ್ನ ಸಂಕಲ್ಪದಿಂದಲೇ ರೂಪಗಳನ್ನು ತಳೆಯುತ್ತಾನೆ. ಕಟ್ಟಿಗೆಯನ್ನು ಕಡೆದಾಗ ಬೆಂಕಿ ಬರುವಂತೆ, ಭಕ್ತನಾದವನು ಧ್ಯಾನದಿಂದ ಈ ರೂಪ

ವನ್ನು ಕೈಗೂಡಿಸಿಕೊಳ್ಳುತ್ತಾನೆ ('ಕಾಷ್ಠೇ ಅಗ್ನಿರ್ಮಥನಾದುಜ್ವಲನ್ನಿವ ನಿಷ್ಕಲಾತ್ಮನೋ ವಿಷ್ಣೋರ್ಧ್ಯಾನ ಮಥನೇನ ಭಕ್ತ್ಯಾಸಂಕಲ್ಪನಾತ್ ಸಕಲೋ ಭವತಿ', ಮರೀಚಿ ಸಂಹಿತೆ). ಹೀಗೆ ವಿಷ್ಣುವಿಗೆ ವ್ಯಕ್ತಮೂರ್ತಿಗಳೂ ಒದಗುತ್ತವೆ, ಅನೇಕ ಕಲ್ಯಾಣಗುಣಗಳೂ ಇರುತ್ತವೆ.

ಸಕಲನಾದ, ಆದರೆ ನಿರ್ಗುಣನಾದ, ಬ್ರಹ್ಮನನ್ನು ಆದಿವಾಸುದೇವನೆಂದು ವ್ಯವಹರಿಸುತ್ತಾರೆ. ಶುದ್ಧಸ್ಫಟಿಕದಂತಿರುವ ದ್ವಿಭುಜಮೂರ್ತಿ ಇದು. ಇದರಿಂದ ಹೊರಹೊಮ್ಮುವ ಎರಡನೆಯ ಪ್ರಕಾರವೆಂದರೆ ಪರವಾಸುದೇವ. ಚತುರ್ಭುಜಮೂರ್ತಿಯಾದ ಇವನ ನೆಲೆ ವೈಕುಂಠದಲ್ಲಿ; ಸ್ಥಿತಿಗಾಗಿ ಚಕ್ರ (ಸುದರ್ಶನ), ಮುಕ್ತಿಗಾಗಿ ಶಂಖ (ಪಾಂಚಜನ್ಯ), ಸಂಹಾರಕ್ಕಾಗಿ ಗದೆ (ಕೌಮೋದಕೀ) ಇವುಗಳನ್ನು ಕೈಗಳಲ್ಲಿ ಧರಿಸಿರುತ್ತಾನೆ. ಇವಲ್ಲದೆ ಪ್ರಕೃತಿಯನ್ನು ಸಂಕೇತಿಸುವ ಶ್ರೀವತ್ಸ ಮತ್ತು ಜೀವಾತ್ಮರ ಅಭಿಮಾನಿ ದೇವತೆಯಾದ ಕೌಸ್ತುಭ ಎರಡೂ ಲಾಂಛನಗಳಿರುತ್ತವೆ. ಸಾವಿರ ಹೆಡೆಯ ಶೇಷನ ಮೇಲೆ ಕುಳಿತಂತೆ ಚಿತ್ರಣವಿದೆ. ಅವನಿಂದ ಜ್ಞಾನ–ಬಲ, ಐಶ್ವರ್ಯ–ವೀರ್ಯ, ಶಕ್ತಿ–ತೇಜಸ್ಸು ಎನ್ನುವ ಷಡ್ಗುಣಗಳು ಯಾವಾಗಲೂ ಹೊರಹೊಮ್ಮುತ್ತಿರುತ್ತವೆ ('ಗುಣ್ಯೈಃಷಡ್ಭಿರಲಂಕೃತಃ'). ಈ ಷಡ್ಗುಣಗಳು ಪರವಾಸುದೇವನಲ್ಲಿ ಮಾತ್ರವಲ್ಲದೆ ಅವನಿಂದ ಪ್ರಸೃತನಾದ ವ್ಯೂಹವಾಸುದೇವನಲ್ಲಿಯೂ ಅಡಗಿರುತ್ತವೆ. ಅಲ್ಲಿಂದ ಮುಂದೆ ಯಥಾಕ್ರಮವಾಗಿ ಪ್ರಸೃತರಾಗುವ ಸಂಕರ್ಷಣ (ಜ್ಞಾನ–ಬಲ), ಪ್ರದ್ಯುಮ್ನ (ಐಶ್ವರ್ಯ–ವೀರ್ಯ) ಮತ್ತು ಅನಿರುದ್ಧ (ಶಕ್ತಿ–ತೇಜಸ್ಸು) ಈ ವ್ಯೂಹಮೂರ್ತಿಗಳಲ್ಲಿ ಗುಣವಿಭಾಗವಿದೆ. ಷಡ್ಗುಣಗಳು ಮಂತ್ರಗಳಲ್ಲಿಯೂ ಪ್ರತಿಮೆಗಳಲ್ಲಿಯೂ ಇದ್ದೇ ಇರುವುವೆಂಬ ಕಲ್ಪನೆ ('ಷಾಡ್ಗುಣ್ಯಂ ಸಂಸ್ಥಿತಂ ಮಂತ್ರಬಿಂಬಯೋಃ) ಇದ್ದು, ಪೂಜೆಯಲ್ಲಿ ಷಾಡ್ಗುಣ್ಯ ಯಂತ್ರದ (ಚಿತ್ರ 87) ಬಳಕೆಯಿದೆ.

ಪರವಾಸುದೇವನ ಸುತ್ತ ಎಂಟು ದಿಕ್ಕುಗಳಲ್ಲಿಯೂ ಎಂಟು ಮಂದಿ ಶಕ್ತಿಯರು ಇರುತ್ತಾರೆ— ಕಾಂತಿ, ತೃಪ್ತಿ, ಶ್ರದ್ಧೆ, ವಿದ್ಯೆ, ಜಯ, ಕ್ಷಮೆ, ಶಾಂತಿ, ಶಕ್ತಿ ಅಷ್ಟಶಕ್ತಿಯರು, ಇವರಲ್ಲದೆ ಪರವಾಸುದೇವನ ಪರಿವಾರದಲ್ಲಿ ಗರುಡವಿಷ್ವಕ್ಸೇನ, ನಿತ್ಯರು, ಮುಕ್ತರು, ಪಾರಿಷದರು ಇರುತ್ತಾರೆ. ವಿಷ್ಣು,ದೇವಾಲಯಗಳಲ್ಲಿ ಇವರ ಮೂರ್ತಿಗಳನ್ನೆಲ್ಲ ಅಳವಡಿಸಬೇಕೆಂಬ ವಿಧಿಯಿದೆ ಮೇಲೆ ಹೇಳಿದ ನಾಲ್ಕು ವ್ಯೂಹಮೂರ್ತಿಗಳು (ವ್ಯೂಹವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ) ನಾಲ್ಕು ವ್ಯೂಹ ಲೋಕಗಳಿಗೆ ಅಧಿಪತಿಗಳು. ವ್ಯೂಹಲೋಕಗಳೆಂದರೆ ಬ್ರಹ್ಮಾಂಡ ಸೃಷ್ಟಿಯನ್ನು ಮೀರಿದ ಪ್ರಾಂತ್ಯಗಳು.



ಚಿತ್ರ 87
ಷಾಡ್ಗುಣ್ಯಯಂತ್ರ

ಇದು ಪಾಂಚರಾತ್ರ ಪದ್ಧತಿಯ ವಿವರವಾದರೆ ವೈಖಾನಸರು ಪರಮಾತ್ಮನು ತನ್ನ ಸಂಕಲ್ಪದಿಂದ ಸೃಷ್ಟಿ ಮಾಡುವ ವೈಷ್ಣವಾಂಡದಲ್ಲಿ ನಾಲ್ಕು ವ್ಯೂಹಾಂಡಗಳನ್ನು ಹೇಳುತ್ತಾರೆ. ಮುಕ್ತಜೀವರು ಅನುಕ್ರಮವಾಗಿ ಆಮೋದ, ಪ್ರಮೋದ, ಸಮ್ಮೋದ, ವೈಕುಂಠಗಳೆಂಬ ನಾಲ್ಕು ವ್ಯೂಹಾಂಡಗಳನ್ನೇರಿ ಹೋಗುವಾಗ, ಕ್ರಮವಾಗಿ ಅವರಿಗೆ ವಿಷ್ಣು ಮಹಾವಿಷ್ಣು, ಸದಾವಿಷ್ಣು, ಸರ್ವವ್ಯಾಪಿ ವಿಷ್ಣು ಇವರ ಸಾಕ್ಷಾತ್ಕಾರವಾಗುತ್ತದೆ. ಈ ನಾಲ್ಕು ವ್ಯೂಹಾಂಡಗಳಲ್ಲಿ ಪರಮಾತ್ಮನ ಅಂಶಗಳಾಗಿ ಪುರುಷ, ಸತ್ಯ, ಅಚ್ಯುತ, ಅನಿರುದ್ಧ ಇವರು ತೋರಿಕೊಳ್ಳುತ್ತಾರೆ. ಈ ನಾಲ್ವರು ವ್ಯೂಹಮೂರ್ತಿಗಳಿಗೆ ಕ್ರಮವಾಗಿ ಧರ್ಮ, ಜ್ಞಾನ, ಐಶ್ವರ್ಯ, ವೈರಾಗ್ಯಗಳೇ ಗುಣಗಳು.

ಹೀಗೆ ನಾಲ್ಕು ವ್ಯೂಹಗಳನ್ನು ನಿರ್ದೇಶಿಸುವುದು ವಾಡಿಕೆ. ಈ ನಾಲ್ಕಕ್ಕೆ ಹಿನ್ನೆಲೆಯಲ್ಲಿರುವ ಆದಿಮೂರ್ತಿಯನ್ನೂ ಸೇರಿಸಿ ಐದು ವ್ಯೂಹಗಳು ಎಂದು ಹೇಳುವುದೂ ಉಂಟು ('ಪಂಚಧಾ ತು ಪುನರ್ವ್ಯೂಹಃ ಪ್ರೋಚ್ಯತೇ ಶ್ರುತಿಸಮ್ಮತಃ'). ಇದನ್ನನುಸರಿಸಿ ವಿಷ್ಣುದೇವಾಲಯಗಳಲ್ಲಿ ಪಂಚ ಬೇರಗಳನ್ನಿರಿಸಿಕೊಂಡಿರುತ್ತಾರೆ. ಧ್ರುವಬೇರ (ಪರ, ಮೂಲವಿರಾಟ್) ವಲ್ಲದೆ ಕೌತುಕಬೇರ (ಅರ್ಚಾ, ಪುರುಷ, ವಾಸುದೇವ, ಧರ್ಮಗುಣ), ಉತ್ಸವಬೇರ (ವಿಭವ, ಸತ್ಯ, ಸಂಕರ್ಷಣ, ಜ್ಞಾನಗುಣ), ಸ್ನಪನಬೇರ (ವ್ಯೂಹ, ಅಚ್ಯುತ, ಪ್ರದ್ಯುಮ್ನ, ಐಶ್ವರ್ಯಗುಣ) ಮತ್ತು ಬಲಿಬೇರ (ಹಾರ್ದ ಅಥವಾ ಅಂತರ್ಯಾಮಿ, ಅನಿರುದ್ಧ, ವೈರಾಗ್ಯಗುಣ) ಇವು ವೈಖಾನಸ ಸಂಪ್ರದಾಯದ ನಿರ್ದೇಶನ. ಭಗವಂತನ ಸಾಕ್ಷಾತ್ಕಾರವನ್ನು ಅನುಕ್ರಮವಾಗಿ ಮಾಡಿಕೊಳ್ಳುವ ಮಾರ್ಗ ಇದು. ಮೊದಲು ಪುರುಷ (ವಿಷ್ಣು ಧರ್ಮ), ಅನಂತರ ಸತ್ಯ (ಮಹಾವಿಷ್ಣು, ಜ್ಞಾನ), ಆಮೇಲೆ ಅಚ್ಯುತ (ಸದಾವಿಷ್ಣು, ಐಶ್ವರ್ಯ), ಕಡೆಯದಾಗಿ ಅನಿರುದ್ಧ (ಸರ್ವವ್ಯಾಪಿ ನಾರಾಯಣ, ವೈರಾಗ್ಯ) ಈ ಕ್ರಮದಲ್ಲಿ ಮೇಲೇರಿ ಜೀವಾತ್ಮವು ಆದಿಮೂರ್ತಿಯನ್ನು ಮುಟ್ಟುವುದೆಂದು ಭಾವನೆಯಿದೆ. ಈ ನೆಲೆಗಳಲ್ಲಿ ಅರ್ಚಾ, ವಿಭವ, ವ್ಯೂಹ, ಹಾರ್ದ (ಅಂತರ್ಯಾಮಿ) ಎನ್ನುವ ಅವತಾರಗಳನ್ನು ನಿರ್ದೇಶಿಸಿದ್ದಾರೆ. ಅರ್ಚಾವತಾರ ಮೂರ್ತಿಗಳನ್ನು (ತಿರುಮಲೆ ವೆಂಕಟೇಶ, ಶ್ರೀರಂಗದ ರಂಗನಾಥ, ಕಾಂಚೀಪುರದ ವರದರಾಜ ಇತ್ಯಾದಿ) ಅನುದಿನವೂ ವಿಧ್ಯುಕ್ತವಾಗಿ ಆರಾಧಿಸಿದರೆ ಎಲ್ಲ ನೆಲೆಗಳನ್ನೂ ದಾಟಿ ಪರಮಪದವನ್ನು ಪಡೆಯಬಹುದೆಂದು ವೈಖಾನಸರ ವಿಶ್ವಾಸ —

'ತದಾರಾಧನೇನ ಸಂಸಾರಾರ್ಣವನಿಮಗ್ನೋ
ಜೀವಾತ್ಮಾ ಪರಮಾತ್ಮಾನಂ ನಾರಾಯಣಂ ಪಶ್ಯತಿ

ಅರ್ಚಾವತಾರದ ಆರಾಧನೆಯ ಸೌಕರ್ಯಕ್ಕಾಗಿಯೇ ದೇವಾಲಯಗಳನ್ನೂ ಮೂರ್ತಿಗಳನ್ನೂ ಪೂಜಾವಿಧಿಯನ್ನೂ ವ್ಯವಸ್ಥೆ ಮಾಡಿದ್ದಾರೆ.

ಪಾಂಚರಾತ್ರಾಗಮದಲ್ಲಿ ಕೇಶವಾದಿ ಚತುರ್ವಿಂಶತಿಮೂರ್ತಿಗಳ ಬಳಕೆ ಹೆಚ್ಚಾಗಿದೆ. ಮಹಾಭಾರತದ ಅನುಶಾಸನ ಪರ್ವದಲ್ಲಿ ಬರುವ 'ವಿಷ್ಣು ಸಹಸ್ರನಾಮ'ದಿಂದ ಇಪ್ಪತ್ತ ನಾಲ್ಕು ಹೆಸರುಗಳನ್ನು ಆಯ್ದುಕೊಂಡು ಅವಕ್ಕೆ ಮೂರ್ತಿಲಕ್ಷಣವನ್ನು ಪದ್ಮಪುರಾಣದ ಪಾತಾಲಖಂಡವೂ ರೂಪಮಂಡನವೆಂಬ ಪ್ರಕರಣ ಗ್ರಂಥವೂ ನಿರ್ದೇಶಿಸಿದುವು. ಅಹಿರ್ಬುಧ್ನ್ಯಸಂಹಿತೆಯಲ್ಲಿ ಮತ್ತು ಬೃಹದ್ಬ್ರಹ್ಮ ಸಂಹಿತೆಯಲ್ಲಿ ವ್ಯೂಹಗಳಿಂದ ಹನ್ನೆರಡು ಇತರ ಮೂರ್ತಿಗಳು ಬಂದಿರುವುದನ್ನು ಹೇಳಿದೆ. ಪರವಾಸುದೇವನಿಂದ ಕೇಶವ, ನಾರಾಯಣ, ಮಾಧವ; ಸಂಕರ್ಷಣನಿಂದ ಗೋವಿಂದ, ವಿಷ್ಣು, ಮಧುಸೂದನ; ಪ್ರದ್ಯುಮ್ನನಿಂದ ತ್ರಿವಿಕ್ರಮ, ವಾಮನ, ಶ್ರೀಧರ; ಅನಿರುದ್ಧನಿಂದ ಹೃಷೀಕೇಶ, ಪದ್ಮನಾಭ, ದಾಮೋದರ ಹೀಗೆ ಒಂದೊಂದು ವ್ಯೂಹದಿಂದಲೂ ಮೂರು ಮೂರು ಮೂರ್ತಿಗಳನ್ನು ಅಲ್ಲಿ ಕಾಣಿಸಿದೆ. ವಾಸುದೇವ ವ್ಯೂಹವೊಂದರಲ್ಲಿ ಮಾತ್ರ ಆರೂ ಗುಣಗಳಿರುವುವು; ಸಂಕರ್ಷಣ ವ್ಯೂಹದಲ್ಲಿ ಜ್ಞಾನ ಪ್ರಧಾನ; ಪ್ರದ್ಯುಮ್ನ ವ್ಯೂಹದಲ್ಲಿ ಶಕ್ತಿ ಪ್ರಧಾನ; ಅನಿರುದ್ಧನಲ್ಲಿ ಐಶ್ವರ್ಯ ಪ್ರಧಾನ. ಹನ್ನೆರಡು ಮೂರ್ತಿಗಳು ಭಗವಂತನ ಬೇರೆ ಬೇರೆ ಗುಣಗಳ ಆವಿರ್ಭಾವಕ್ಕಾಗಿ. ನಾಲ್ಕು ವ್ಯೂಹಗಳಿಂದ ಅದೇ ಹೆಸರಿನ ನಾಲ್ಕು ಮೂರ್ತಿಗಳೂ, ಇವುಗಳಿಂದ ಮತ್ತೆ ನಾಲ್ಕೂ ಮೂರ್ತಿಗಳೂ, ಕಡೆಯ ನಾಲ್ಕರಲ್ಲಿ ಒಂದು ಮೂರ್ತಿಯಿಂದ ನಾಲ್ಕೂ ಮೂರ್ತಿಗಳೂ ಉಂಟಾದರೆಂದು ವಿವರಣೆಯಿದೆ (ನಕ್ಷೆ 1), ಹೀಗೆ ಒಟ್ಟು ಇಪ್ಪತ್ತನಾಲ್ಕು ವಿಷ್ಣುಮೂರ್ತಿಗಳನ್ನು ಪೂಜಿಸುವ ಪದ್ಧತಿ ಬಂದಿತು.

ನಕ್ಷೆ 1

ಚತುರ್ವಿಂಶತಿ ಮೂರ್ತಿಗಳ ಉಗಮ

1. ಮೊದಲನೆಯ ಪ್ರಸಾರ (12 ಮೂರ್ತಿಗಳು)

- ವಾಸುದೇವ
  - ಕೇಶವ ೧
  - ನಾರಾಯಣ ೨
  - ಮಾಧವ ೩
- ಸಂಕರ್ಷಣ
  - ಗೋವಿಂದ ೪
  - ವಿಷ್ಣು ೫
  - ಮಧುಸೂದನ ೬
- ಪ್ರದ್ಯುಮ್ನ
  - ತ್ರಿವಿಕ್ರಮ ೭
  - ವಾಮನ ೮
  - ಶ್ರೀಧರ ೯
- ಅನಿರುದ್ಧ
  - ಹೃಷೀಕೇಶ ೧೦
  - ಪದ್ಮನಾಭ ೧೧
  - ದಾಮೋದರ) ೧೨

2. ಎರಡನೆಯ ಪ್ರಸಾರ (12 ಮೂರ್ತಿಗಳು)

- (ವ್ಯೂಹ ವಾಸುದೇವ)
  - ವಾಸುದೇವ ೧೩
    - ಪುರುಷೋತ್ತಮ ೧೬
      - ಜನಾರ್ದನ ೨೧
      - ಉಪೇಂದ್ರ ೨೨
      - ಹರಿ ೨೩
      - ಕೃಷ್ಣ ೨೪
- (ವ್ಯೂಹ ಸಂಕರ್ಷಣ)
  - ಸಂಕರ್ಷಣ ೧೪
    - ಅಧೋಕ್ಷಜ ೧೮
- (ವ್ಯೂಹ ಪ್ರದ್ಯುಮ್ನ)
  - ಪ್ರದ್ಯುಮ್ನ ೧೫
    - ನರಸಿಂಹ ೧೯
- (ವ್ಯೂಹ ಅನಿರುದ್ಧ)
  - ಅನಿರುದ್ಧ ೧೭
    - ಅಚ್ಯುತ ೨೦

[ಬೃಹದ್ಬ್ರಹ್ಮಸಂಹಿತೆಯಲ್ಲಿ ಬರುವ ವಿವರ]

ದಕ್ಷಿಣ ದೇಶದಲ್ಲಿ, ಅದೂ ಕನ್ನಡ ಪ್ರಾಂತ್ಯದಲ್ಲಿ, ಈ ಚತುರ್ವಿಂಶತಿಮೂರ್ತಿಗಳ ಬಳಕೆ ಹೆಚ್ಚು. ಹೊಯ್ಸಳಕಾಲದ ವಿಷ್ಣುದೇವಾಲಯಗಳಲ್ಲಿ ಇವುಗಳ ಶಿಲ್ಪಪ್ರತಿಕೃತಿಗಳನ್ನು ಕಾಣಬಹುದು; ಹರಿದಾಸರೂ ಈ ಮೂರ್ತಿಗಳನ್ನು ಹಾಡಿ ಹೊಗಳಿದರು. ಒಂದೊಂದು ಮೂರ್ತಿಯನ್ನೂ ಸಮಭಂಗದ ಮನುಷ್ಯಾಕಾರದಲ್ಲಿ ಪದ್ಮಾಸನದ ಮೇಲೆ ನಿಲ್ಲಿಸಿ, ನಾಲ್ಕುಕೈಗಳನ್ನು ಅಳವಡಿಸಿ. ಅವುಗಳಲ್ಲಿ ಬಲಭಾಗದ ಕೆಳಕೈಯಿಂದ ಆರಂಭಿಸಿ (ದಕ್ಷಿಣಾಧಃಕರಾತ್ ಕ್ರಮಾತ್) ಶಂಖ–ಚಕ್ರ–ಗದಾ–ಪದ್ಮಗಳ ವಿವಿಧ ವಿನ್ಯಾಸಗಳನ್ನು ತೋರಿಸುವ ವಾಡಿಕೆಯಿದೆ; ಉಳಿದಂತೆ ಇಪ್ಪತ್ತುನಾಲ್ಕು ಮೂರ್ತಿಗಳಲ್ಲಿ ಯಾವ ಭೇದವೂ ಇರದು. ಕೇಶವನಿಗೆ ಶಂಖ–ಚಕ್ರ–ಗದಾ–ಪದ್ಮ, ನಾರಾಯಣನಿಗೆ ಪದ್ಮ–ಗದಾ–ಚಕ್ರ–ಶಂಖ, ಮಾಧವನಿಗೆ ಚಕ್ರ–ಶಂಖ–ಪದ್ಮ–ಗದಾ, ಗೋವಿಂದನಿಗೆ ಗದಾ–ಪದ್ಮ–ಶಂಖ–ಚಕ್ರ ಹೀಗೆ ಕ್ರಮ ಸಾಗುತ್ತದೆ. ಈ ಇಪ್ಪತ್ತುನಾಲ್ಕು ಮೂರ್ತಿಗಳಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಇವರು ಪ್ರಮುಖರಾದವರೆಂದು ಪರಿಗಣನೆ; ಇವರು ನಾಲ್ವರೂ ಶಕ್ತಿಮಯ ವ್ಯೂಹವನ್ನು ರಚಿಸುತ್ತಾರೆಂಬುದು ಕಾರಣ.

ನಾಲ್ಕು ವ್ಯೂಹಗಳಲ್ಲದೆ (ಪುರುಷ, ಸತ್ಯ ಇತ್ಯಾದಿ), ಇಪ್ಪತ್ತುನಾಲ್ಕು ವ್ಯೂಹಾಂತರಗಳನ್ನೂ (ಕಪಿಲ, ಯಜ್ಞ, ನಾರಾಯಣ, ಪುಣ್ಯ ಮೊದಲಾಗಿ), ಹತ್ತು ವಿಭವಾವತಾರಗಳನ್ನೂ (ನರಸಿಂಹ, ವಾಮನ, ತ್ರಿವಿಕ್ರಮ ಮೊದಲಾಗಿ), ವಿಭವಾಂತರಗಳನ್ನೂ (ಸುಭದ್ರ, ಈಶಿತಾತ್ಮ, ಸರ್ವೋದ್ವಹ, ಸರ್ವವಿದ್ಯೇಶ್ವರ ಮೊದಲಾಗಿ) ಹೇಳುವ ವಾಡಿಕೆಯಿದೆ. ವಿಷ್ಣು ದೇವಾಲಯಗಳಲ್ಲಿ ಆದಿಮೂರ್ತಿಯನ್ನು ಗರ್ಭಗುಡಿಯಲ್ಲಿಟ್ಟು. ಪ್ರಥಮಾವರಣದಲ್ಲಿ ವ್ಯೂಹ–ವ್ಯೂಹಾಂತರಗಳನ್ನೂ, ದ್ವಿತೀಯಾವರಣದಲ್ಲಿ ವಿಭವ–ವಿಭವಾಂತರಗಳನ್ನೂ, ತೃತೀಯಾವರಣದಲ್ಲಿ ದಿಕ್ಪಾಲಕರನ್ನೂ ಇರಿಸಬೇಕೆಂಬ ವಿಧಿ ಆಗಮಗಳಲ್ಲಿ ಕಂಡುಬರುತ್ತದೆ. ವಾಸ್ತವವಾಗಿ ಈ ವಿಧಿಯನ್ನು ಅನುಸರಿಸುವುದು ಅಪರೂಪವೆಂಬುದೇನೋ ದಿಟ. ವ್ಯೂಹ ಪ್ರಮುಖವಾದ ಪ್ರಸಾರ, ವ್ಯವಸ್ಥೆ; ವ್ಯೂಹಾಂತರ ಗೌಣವಾದ ಪ್ರಸಾರ, ವ್ಯವಸ್ಥೆ. ವಿಭವವೆಂದರೆ ಆವಿರ್ಭಾವ, ತನ್ನನ್ನು ತಾನು ತೋರಿಸಿಕೊಳ್ಳುವುದು; ಯಾವುದಾದರೊಂದು ನಿರ್ದಿಷ್ಟ ಉದ್ದೇಶಕ್ಕಾಗಿ ಭಗವಂತ ತನ್ನ ಸ್ವಸ್ಥಾನದಿಂದ ಕೆಳಗಿನ ಬ್ರಹ್ಮಾಂಡಸೃಷ್ಟಿಗೆ ಇಳಿಯುವುದು ವಿಭವಾವತಾರವೆನಿಸಿಕೊಳ್ಳುತ್ತದೆ. ಪರಮಾತ್ಮನು ತನ್ನ ಸಂಕಲ್ಪದಿಂದ ಅಸಂಖ್ಯಾತ ನೆಲೆಗಳುಳ್ಳ ಹಿರಣ್ಯಾಂಡವನ್ನು ಸೃಷ್ಟಿಮಾಡಿ, ಅದರ ಮೇಲಿನ ಸ್ತರದಲ್ಲಿ ವೈಷ್ಣವಾಂಡವನ್ನು ವ್ಯವಸ್ಥೆಮಾಡುತ್ತಾನೆ; ಇವಕ್ಕೆ ವ್ಯೂಹಲೋಕಗಳೆಂದು ಹೆಸರು. ಆಮೋದ, ಪ್ರಮೋದ, ಸಮ್ಮೋದ, ವೈಕುಂಠಗಳು ಇಲ್ಲಿನ ಅನುಕ್ರಮ ವ್ಯವಸ್ಥೆ; ಆಮೋದ ತೀರ ಕೆಳಗಿನ ನೆಲೆ, ವೈಕುಂಠ ಎಲ್ಲಕ್ಕಿಂತ ಮೇಲಿನ ನೆಲೆ. ಮುಕ್ತರಾದ ಜೀವರು ಆಮೋದದಿಂದ ವೈಕುಂಠದವರೆಗೆ ಏರುತ್ತಾರೆ. ವೈಕುಂಠದಲ್ಲಿ ಯಾವ ಅಡ್ಡಿ–ಅಡಚಣೆಗಳೂ ಇಲ್ಲ ('ವಿಗತಾ ಕುಂಠಾ ಯಸ್ಯ ಸ ವಿಕುಂಠಃ, ವಿಕುಂಠ ಏವ ವೈಕುಂಠಃ'); ಇಲ್ಲಿರುವ ವಿಷ್ಣು ಸರ್ವವ್ಯಾಪಿನಾರಾಯಣನೆನಿಸಿಕೊಳ್ಳುತ್ತಾನೆ. ಸೃಷ್ಟಿಯಂತೆ ಪಾಲನವೂ ಅವನ ಹೊಣೆಯೇ; ಭಕ್ತರಿಗೆ ಮುಕ್ತಿಯನ್ನು ದೊರಕಿಸಿಕೊಡುವುದೂ ಅವನ ಕೆಲಸವೇ. ಹೀಗಾಗಿ ಲೋಕಕಂಟಕರಾದವರನ್ನು ನಿಗ್ರಹಿಸಲು, ಧರ್ಮವನ್ನು ರಕ್ಷಿಸಲು, ಭಕ್ತರಿಗೆ ಮುಕ್ತಿಮಾರ್ಗವನ್ನು ಒದಗಿಸಲು ವಿಷ್ಣುವು ವೈಕುಂಠದಿಂದ ಬ್ರಹ್ಮಾಂಡ ಸೃಷ್ಟಿಗೆ, (ಎಂದರೆ ನಮ್ಮ ನೆಲೆಗೆ), ಇಳಿದು ಬರಬೇಕಾಗುತ್ತದೆ. ಇದು 'ಅವತಾರ' (ಕೆಳಗಿಳಿಯುವುದು).

ಅರ್ಚಾ ಮೂರ್ತಿಗಳು

ತಾತ್ಕಾಲಿಕವಾಗಿ ವಿಷ್ಣುವಿನ ಶಕ್ತಿ ಅಥವಾ ಗುಣ ಯಾರಲ್ಲಾಗಲೀ ಮೂಡಿಬರುವುದು ಆವೇಶವೆಂದೂ ಶಕ್ತಿಯ ಅಥವಾ ಗುಣದ ಒಂದು ಭಾಗ ಒದಗಿಬರುವುದು ಅಂಶವೆಂದೂ, ಪೂರ್ಣವಾಗಿ ತಾನೇ ಇಳಿದು

ಚತುರ್ವಿಂಶತಿ ಮೂರ್ತಿಗಳು

ಮೂರ್ತಿ	ಆಯುಧ ವಿನ್ಯಾಸ
1. ಕೇಶವ	ಶಂಖ — ಚಕ್ರ — ಗದಾ — ಪದ್ಮ
2. ನಾರಾಯಣ	ಪದ್ಮ — ಗದಾ — ಚಕ್ರ — ಶಂಖ
3. ಮಾಧವ	ಚಕ್ರ — ಶಂಖ — ಪದ್ಮ — ಗದಾ
4. ಗೋವಿಂದ	ಗದಾ — ಪದ್ಮ — ಶಂಖ — ಚಕ್ರ
5. ವಿಷ್ಣು	ಪದ್ಮ — ಶಂಖ — ಚಕ್ರ — ಗದಾ
6. ಮಧುಸೂದನ	ಶಂಖ — ಪದ್ಮ — ಗದಾ — ಚಕ್ರ
7. ತ್ರಿವಿಕ್ರಮ	ಗದಾ — ಚಕ್ರ — ಶಂಖ — ಪದ್ಮ
8. ವಾಮನ	ಚಕ್ರ — ಗದಾ — ಪದ್ಮ — ಶಂಖ
9. ಶ್ರೀಧರ	ಚಕ್ರ — ಗದಾ — ಶಂಖ — ಪದ್ಮ
10. ಹೃಷೀಕೇಶ	ಚಕ್ರ — ಪದ್ಮ — ಶಂಖ — ಗದಾ
11. ಪದ್ಮನಾಭ	ಪದ್ಮ — ಚಕ್ರ — ಗದಾ — ಶಂಖ
12. ದಾಮೋದರ	ಶಂಖ — ಗದಾ — ಚಕ್ರ — ಪದ್ಮ
13. ಸಂಕರ್ಷಣ	ಶಂಖ — ಪದ್ಮ — ಚಕ್ರ — ಗದಾ
14. ವಾಸುದೇವ	ಶಂಖ — ಚಕ್ರ — ಪದ್ಮ — ಗದಾ
15 ಪ್ರದ್ಯುಮ್ನ	ಶಂಖ — ಗದಾ — ಪದ್ಮ — ಚಕ್ರ
16. ಅನಿರುದ್ಧ	ಗದಾ — ಶಂಖ — ಪದ್ಮ — ಚಕ್ರ
17. ಪುರುಷೋತ್ತಮ	ಪದ್ಮ — ಶಂಖ — ಗದಾ — ಚಕ್ರ
18. ಅಧೋಕ್ಷಜ	ಗದಾ — ಶಂಖ — ಚಕ್ರ — ಪದ್ಮ
19. ನರಸಿಂಹ	ಪದ್ಮ — ಗದಾ — ಶಂಖ — ಚಕ್ರ
20. ಅಚ್ಯುತ	ಪದ್ಮ — ಚಕ್ರ — ಶಂಖ — ಗದಾ
21. ಜನಾರ್ದನ	ಚಕ್ರ — ಶಂಖ — ಗದಾ — ಪದ್ಮ
22. ಉಪೇಂದ್ರ	ಗದಾ — ಚಕ್ರ — ಪದ್ಮ — ಶಂಖ
23. ಹರಿ	ಚಕ್ರ — ಪದ್ಮ — ಗದಾ — ಶಂಖ
24. ಕೃಷ್ಣ	ಗದಾ — ಪದ್ಮ — ಚಕ್ರ — ಶಂಖ

(ಇದು ರೂಪಮಂಡನದಲ್ಲಿನ ವಿವರ. ಆಯುಧಗಳನ್ನು ಕ್ರಮವಾಗಿ ಬಲ ಹಿಂದಿನ ಕೈ, ಎಡ ಹಿಂದಿನ ಕೈ, ಎಡ ಮುಂದಿನ ಕೈ, ಬಲ ಮುಂದಿನ ಕೈಗಳಲ್ಲಿರುವಂತೆ ನಿರ್ದೇಶಿಸಿದೆ).

ಬರುವುದು ಅವತಾರವೆಂದೂ ಹೇಳುತ್ತಾರೆ. ಪರಶುರಾಮನಲ್ಲಿ ಆವೇಶವಿದ್ದಿತೆಂದೂ, ಪೂರ್ಣಾವತಾರವಾದ ರಾಮ ಕಾಣಿಸಿಕೊಂಡೊಡನೆ ಈ ಆವೇಶದ ಉಪಸಂಹಾರವಾಯಿತೆಂದೂ ಪ್ರತೀತಿ. ಪೂರ್ಣಾವತಾರದ ಪರಿವಾರದಲ್ಲಿ ಅಂಶಗಳೂ ಅವತರಿಸಿ ಬರುವುದುಂಟು; ನಿದರ್ಶನಕ್ಕೆ ರಾಮಾವತಾರದಲ್ಲಿ ಲಕ್ಷ್ಮಣಾದಿಗಳೆಲ್ಲ ಅಂಶಾವತಾರಗಳು. ಅವತಾರಗಳಲ್ಲಿ ಕೆಲವು ಮನುಷ್ಯರ ನೆಲೆಯನ್ನು ಮೀರಿದುವು; ಧರ್ಮ, ನರಸಿಂಹ, ವಾಮನ ಇವರು ನಿದರ್ಶನಗಳು. ಹಲವು ಮನುಷ್ಯರ ನೆಲೆಯಲ್ಲಿಯೇ ಕಾಣಿಸಿಕೊಂಡವು. ರಾಮ, ಬುದ್ಧ, ಕಲ್ಕಿ, ವೇದವ್ಯಾಸ, ದತ್ತಾತ್ರೇಯ, ಮಾಂಧಾತ, ಪರಶುರಾಮ ಇವು ಏಳನ್ನು ಮನುಷ್ಯಾವತಾರಗಳೆಂದು ಎಣಿಸುತ್ತಾರೆ.

ಅವತಾರಗಳ ಸಂಖ್ಯೆ ದಿಟವಾಗಿ ಲೆಕ್ಕವಿಲ್ಲದಷ್ಟು. ಆದರೆ ಹತ್ತು ಅವತಾರಗಳನ್ನು ಸಾಮಾನ್ಯವಾಗಿ ನಿರ್ದೇಶಿಸುವ ವಾಡಿಕೆ; ವಿಶೇಷವಾಗಿ ಕಥೆಗಳಲ್ಲಿ, ಪುರಾಣಗಳಲ್ಲಿ ಮತ್ತು ಶಿಲ್ಪಗಳಲ್ಲಿ ಮೂಡಿಬಂದಿರುವುವು ಇವೇ. ಮತ್ಸ್ಯ ಮತ್ತು ವರಾಹ ಪುರಾಣಗಳಲ್ಲಿ ಬರುವ ಪಟ್ಟಿಯೇ ಬಳಕೆಯಲ್ಲಿರುವುದು: ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಘುರಾಮ, ಕೃಷ್ಣ, ಬುದ್ಧ (ಬುದ್ಧನಿಗೆ ಬದಲು ಬಲರಾಮನನ್ನು ಸೇರಿಸಿರುವುದುಂಟು), ಕಲ್ಕಿ ('ಮತ್ಸ್ಯಃಕೂರ್ಮೋ ವರಾಹಶ್ಚ ನರಸಿಂಹೋಥ ವಾಮನಃ। ರಾಮೋರಾಮಶ್ಚ ಕೃಷ್ಣಶ್ಚ ಬುದ್ಧಃಕಲ್ಕೀ ಚ ತೇ ದಶ॥'). ಭಾಗವತಪುರಾಣದಲ್ಲಿ ಈ ಹತ್ತಲ್ಲದೆ ಸನತ್ಕುಮಾರ, ನಾರದ, ನರ–ನಾರಾಯಣ ಋಷಿಗಳು, ಕಪಿಲಋಷಿ, ದತ್ತಾತ್ರೇಯ, ಯಜ್ಞ, ಋಷಭ ಚಕ್ರವರ್ತಿ, ಧನ್ವಂತರಿ, ಮೊದಲ ದೊರೆಯಾದ ಪೃಥು, ಮೋಹಿನಿ, ವೇದವ್ಯಾಸ ಈ ಹನ್ನೆರಡನ್ನೂ ಸೇರಿಸಿ ಒಟ್ಟು ಇಪ್ಪತ್ತೆರಡು ಅವತಾರಗಳನ್ನು ಹೇಳಿದೆ (1, 3, 6 ಮುಂದೆ). ಇವರಲ್ಲಿ ಬುದ್ಧ ಮತ್ತು ಕಲ್ಕಿ ಎರಡೂ ಮುಂದಿನ ಅವತಾರಗಳೆನ್ನುವ ಸೂಚನೆಯೂ ಇದೆ. ಇಪ್ಪತ್ತೆರಡು ಸಾಲದೆಂಬಂತೆ ಅಹಿರ್ಬುಧ್ನ್ಯಸಂಹಿತೆಯು ಮೂವತ್ತೊಂಬತ್ತು ಅವತಾರಗಳನ್ನು ಪಟ್ಟಿಮಾಡಿದೆ (5, 50–57)! ಸಂಪ್ರದಾಯವೇನೋ ಹತ್ತನ್ನೇ ಹಿಡಿದಿದೆ; ಈ ಹತ್ತು ಯುಗಾವತಾರಗಳೆಂದು ಪ್ರತೀತಿ, ಎಂದರೆ ಒಂದೊಂದು ಯುಗದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡವರು. ಈ ಹತ್ತರಲ್ಲಿ ರಾಮಾವತಾರ, ಕೃಷ್ಣಾವತಾರಗಳೆರಡನ್ನು ಪೂರ್ಣಾವತಾರಗಳೆಂದು ವ್ಯವಹರಿಸುತ್ತಾರೆ; ಕೆಲವರು ಕೃಷ್ಣಾವತಾರವೊಂದನ್ನೇ ಪೂರ್ಣಾವತಾರವೆನ್ನುವುದುಂಟು.

ಅವತಾರಗಳ ಹಿನ್ನೆಲೆಯಲ್ಲೇ ಒಂದು ಕಥೆ; ದೇವಾಸುರರ ಹಗರಣಗಳಲ್ಲಿ, ಅಸುರರು ಶುಕ್ರಾಚಾರ್ಯನೊಡಗೂಡಿ ಶಿವನಿಂದ ವರ ಪಡೆಯಲು ತಪಶ್ಚರ್ಯೆಯಲ್ಲಿದ್ದಾಗ ಇಂದ್ರನು ಅವರನ್ನು ಕೊಲ್ಲಲು ಬರಲು ಶುಕ್ರಾಚಾರ್ಯರ ತಾಯಿ ತನ್ನ ಪ್ರಭಾವದಿಂದ ಅವನನ್ನು ನಿರ್ವೀರ್ಯನನ್ನಾಗಿ ಮಾಡಿದಳು. ಆಗ ವಿಷ್ಣು ಇಂದ್ರನನ್ನು ತನ್ನಲ್ಲಿ ಅಡಗಿಸಿಕೊಂಡು ಅಸುರಸಂಹಾರಕ್ಕೆ ತೊಡಗಲು ಶುಕ್ರಾಚಾರ್ಯರ ತಾಯಿ ಅಡ್ಡಿ ಬಂದಳು; ವಿಷ್ಣುವು ಇಂದ್ರನಿಂದ ಪ್ರಚೋದಿತನಾಗಿ ಆಕೆಯನ್ನು ಕೊಲ್ಲಲು, ಇದನ್ನು ಕೇಳಿದ ಶುಕ್ರಾಚಾರ್ಯರು ಕೋಪಗೊಂಡು ವಿಷ್ಣುವನ್ನು ಮನುಷ್ಯ ಲೋಕದಲ್ಲಿ ಏಳುಬಾರಿ ಜನ್ಮಗಳನ್ನೆತ್ತುವಂತೆ ಶಪಿಸಿದರು. ಇದು ಮತ್ಸ್ಯಪುರಾಣದಲ್ಲಿ ಬರುತ್ತದೆ. ದಶಾವತಾರಗಳಲ್ಲಿ ಒಂದೊಂದು ಅವತಾರಕ್ಕೂ ಒಂದೊಂದು ಕಥೆಯಿರುತ್ತದೆ, ಒಂದೊಂದು ಉದ್ದೇಶವಿರುತ್ತದೆ. ದುಷ್ಟಶಿಕ್ಷಣ—ಶಿಷ್ಟರಕ್ಷಣೆಗಳ ಪ್ರಯೋಜನವಿರುತ್ತದೆ. ಪುರಾಣ, ರಾಮಾಯಣ, ಮಹಾಭಾರತಗಳಲ್ಲಿ ಈ ಕಥೆಗಳನ್ನೆಲ್ಲ ಸೇರಿಸಿದ್ದಾರೆ.

ಈ ಅವತಾರಗಳಲ್ಲಿ ಕೆಲವು ಅರ್ಚನೆಗೆ ವಿಶೇಷವಾಗಿ ಹೊಂದಿಕೊಂಡಿವೆ; ವರಾಹ, ನರಸಿಂಹ, ವಾಮನ (ತ್ರಿವಿಕ್ರಮ), ರಾಮ, ಕೃಷ್ಣ ಇವು ಮುಖ್ಯವಾದುವು. ಈ ಕಾರಣದಿಂದ ಶಿಲ್ಪದಲ್ಲಿ ಈ ಮೂರ್ತಿಗಳು

ಬಂದಿರುವುದೂ ಹೆಚ್ಚು. ವರಾಹಾವತಾರದ ಮೊದಲ ನೆಲೆಯನ್ನು ಶತಪಥ ಬ್ರಾಹ್ಮಣದಲ್ಲಿ, ತೈತ್ತಿರೀಯ ಆರಣ್ಯಕದಲ್ಲಿಯೇ ಕಾಣಬಹುದು; ನೂರು ಕೈಗಳ ಕರಿಯ ವರಾಹ ಭೂಮಿಯನ್ನು ಎತ್ತಿ ಹಿಡಿದು ನಿಲ್ಲಿಸಿದ ಪ್ರಸಂಗ ಇಲ್ಲಿ ಬರುತ್ತದೆ. ಅಸುರ ಹಿರಣ್ಯಾಕ್ಷನು ಭೂಮಿಯನ್ನು ನೀರಿನಲ್ಲಿ ಮುಳುಗಿಸಿದಾಗ ವಿಷ್ಣು ವರಾಹನಾಗಿ ಬಂದು ಹಿರಣ್ಯಾಕ್ಷನನ್ನು ಕೊಂದು ಭೂಮಿಯನ್ನು ಮೇಲೆತ್ತಿದ ಕಥೆ ಅಗ್ನಿಪುರಾಣದಲ್ಲಿದೆ. ಹಂದಿಯ ಮೋರೆಯನ್ನೂ ಮನುಷ್ಯಾಕಾರವನ್ನೂ ತಳೆದು ವಿಷ್ಣು ಚತುರ್ಭುಜಗಳಲ್ಲಿ ಶಂಖ ಚಕ್ರಧಾರಿಯಾಗಿ ಹೆಂಗಸಿನ ಆಕಾರದ ಭೂಮಿಯನ್ನು ತೊಡೆಯಮೇಲೆ ಕೂರಿಸಿಕೊಂಡಿರುವುದು ಭೂವರಾಹಮೂರ್ತಿ (ಚಿತ್ರ 88, 89). ಇದನ್ನೇ ನರವರಾಹ, ಆದಿವರಾಹ ಎಂದು ಕರೆಯುವುದೂ ಉಂಟು. ಇದರ ಪ್ರತಿಮಾ ಲಕ್ಷಣವನ್ನು ಶಿಲ್ಪರತ್ನ ವಿವರಿಸಿದೆ. ಸಾಮಾನ್ಯವಾಗಿ ಇದು ಸ್ಥಾನಕಭಂಗಿಯಲ್ಲಿ, ಆಲೀಢಾಸನದಲ್ಲಿ, ಆಕುಂಚಿತಪಾದವಾಗಿ ಇರುತ್ತದೆ. ಲಕ್ಷ್ಮಿಯಿಂದೊಡಗೂಡಿದ ಯಜ್ಞವರಾಹಮೂರ್ತಿ ಸುಖಾಸೀನವಾಗಿರುತ್ತದೆ; ಭೂದೇವಿ ಪಕ್ಕದಲ್ಲಿರುತ್ತಾಳಷ್ಟೆ. ಪ್ರಳಯ ವರಾಹಮೂರ್ತಿ ಸಿಂಹಾಸನದ ಮೇಲೆ ಕುಳಿತು ಶಂಖ ಚಕ್ರಗಳನ್ನು ಹಿಡಿದು ಅಭಯಮುದ್ರೆಯಲ್ಲಿರುತ್ತದೆ. ವೈಷ್ಣವಾಗಮಗಳಲ್ಲದೆ ತಂತ್ರದಲ್ಲಿ ವರಾಹಪೂಜೆಯ ಪ್ರಕ್ರಿಯೆಯಿದೆ; ವಜ್ರಯಾನದಲ್ಲಿ ವಜ್ರವಾರಾಹೀ ಆರಾಧನೆ ಪ್ರಬಲವಾದುದು; ಭೂತಗಳಲ್ಲಿಯೂ ಹಂದಿ ಮೋರೆಯ ಪಂಜುರ್ಲಿ ಇದೆ. ತುಂಬ ಪ್ರಾಚೀನ ಧಾರ್ಮಿಕ ನೆಲೆಯಲ್ಲಿಯೇ ವರಾಹದ ಕಲ್ಪನೆಯನ್ನು ಮೂಡಿಸಿಕೊಂಡಿರುವುದು ನಿರ್ವಿವಾದ.

ಚಿತ್ರ **88**
ಭೂವರಾಹ
ಮಾಮಲ್ಲಪುರದ ಆದಿವರಾಹ ಗುಹೆಯಲ್ಲಿರುವ
ಶಿಲಾಫಲಕ–ಏಳನೆಯ ಶತಮಾನದ ಕೃತಿ

ಚಿತ್ರ **89**
ಭೂವರಾಹಮೂರ್ತಿ

ಚಿತ್ರ 90
ವರಾಹನರಸಿಂಹ
ಕಾಶ್ಮೀರದಲ್ಲಿ ದೊರೆತ ಶಿಲ್ಪ
ಒಂಬತ್ತನೆಯ ಶತಮಾನದ್ದು

ಚಿತ್ರ 91
ಯೋಗಾನರಸಿಂಹ

ಚಿತ್ರ 92
ಯೋಗಾನರಸಿಂಹ

ಚಿತ್ರ 93
ಸ್ಥೌಣನರಸಿಂಹ—ಯಾನಕ ಭಂಗಿ
ಪಟ್ಟದಕಲ್ಲಿನಲ್ಲಿರುವ ಶಿಲ್ಪ

ಪ್ರಯೋಗಗಳಲ್ಲಿ ವರಾಹಮಂತ್ರವನ್ನು ಪಿಶಾಚಾದಿ ನಿವೃತ್ತಿಗೆ, ಶತ್ರುಪೀಡಾಪರಿಹಾರಕ್ಕೆ ವಿಧಿಸಿದ್ದಾರೆ; ಹೂಂ ಎನ್ನುವುದು ಕೋಲಬೀಜ. ಸ್ವಪ್ನವಾರಾಹೀಮಂತ್ರ ("ಐಂ ಹ್ರೀಂ ನಮೋ ವಾರಾಹಿ ಅಘೋರೇ ಸ್ವಪ್ನೇ ಠಠಠಠ ಸ್ವಾಹಾ") ವನ್ನು ಸಿದ್ಧಿಸಿಕೊಂಡರೆ ಹಿಂದಾದುದು, ಮುಂದಾಗುವುದು ಎಲ್ಲವನ್ನೂ ಕನಸಿನಲ್ಲಿ ತಿಳಿಯಬಹುದೆಂದೂ ಅರಿಗಳನ್ನು ಬೆದರಿಸಬಹುದೆಂದೂ ಹೇಳುತ್ತಾರೆ—

ನಮಸ್ತೇ ಸ್ವಪ್ನವಾರಾಹಿ ಸ್ವಪ್ನೇ ಕಥಯ ಮೇ ರಿಪೋಃ ।
ಮಹಾಭಯಂ ಚ ಜನಯ ಭಕ್ತೇ ಮಯಿ ಕೃಪಾಂ ಕುರು ॥

ನೇಗಿಲು, ಮುಸಲ, ಕಪಾಲಗಳನ್ನು ಹಿಡಿದ ಕಪ್ಪುಬಣ್ಣದ ವಾರಾಹಿ ಕುರುಡಿಯೆಂದೂ ಕೋಪಿಷ್ಟೆಯೆಂದೂ ಮಂತ್ರಸಾರ ಹೇಳುತ್ತದೆ; ಎಲ್ಲರ ಮಾತು, ಮನಸ್ಸು, ಕಣ್ಣು, ನಾಲಗೆಗಳನ್ನು ನಿಲ್ಲಿಸುವ ದೇವತೆ ಇವಳು; ಅವಳ ಮಂತ್ರವೆಂದರೆ ನಿಗ್ರಹ–ಸ್ತಂಭನ ಪ್ರಧಾನವಾದುದು. ಇಲ್ಲಿ ವರಾಹಾವತಾರದ ಜಾನಪದ ಹಿನ್ನೆಲೆಯನ್ನು ಕಾಣಬಹುದು.

ಹಿರಣ್ಯಾಕ್ಷನ ವಧೆಯಾದಮೇಲೆ ಅವನ ತಮ್ಮ ಹಿರಣ್ಯಕಶಿಪು ವಿಷ್ಣುವಿನ ಮೇಲೆ ದ್ವೇಷವನ್ನು ಸಾಧಿಸುತ್ತ, ಲೋಕಕಂಟಕನಾಗಿರಲು ಅವನ ಮಗ ಪ್ರಹ್ಲಾದನ ಭಕ್ತಿಗೆ ಒಲಿದು ವಿಷ್ಣು ನರಸಿಂಹಾವತಾರವನ್ನೆತ್ತಿದ ಕಥೆ ಎಲ್ಲರಿಗೂ ಗೊತ್ತಷ್ಟೆ. ಪದ್ಮಪುರಾಣ, ವಿಷ್ಣುಪುರಾಣ ಮೊದಲಾದ ಹಲವು ಪುರಾಣಗಳಲ್ಲಿ ಈ ಕಥೆ ಬರುತ್ತದೆ. ಸಿಂಹದ ಮುಖ, ಮನುಷ್ಯನ ಮೈಯಿರುವುದು ಮೂರ್ತಿಲಕ್ಷಣ. ಅಣ್ಣತಮ್ಮಂದಿರಾದ ಹಿರಣ್ಯಾಕ್ಷ–ಹಿರಣ್ಯಕಶಿಪುಗಳನ್ನು ಕೊಲ್ಲಲು ಎರಡೂ ಅವತಾರಗಳನ್ನೂ ಕಲೆಸಿ ವರಾಹ–ನರಸಿಂಹನನ್ನು ಕಲ್ಪಿಸಿಕೊಂಡಿರುವುದೂ ಇದೆ. ಒಂದು ಮುಖ ಹಂದಿಯದು, ಇನ್ನೊಂದು ಸಿಂಹದ್ದು, ನಡುವೆ ವಿಷ್ಣುವಿನ ಸಾಮಾನ್ಯ ಮನುಷ್ಯಮುಖ ಇವಿರುವ ಶಿಲ್ಪಗಳೂ ಇವೆ. ಕಾಶ್ಮೀರದಲ್ಲಿ ದೊರೆತ ಇಂಥದೊಂದು ಶಿಲ್ಪ ಒಂಬತ್ತನೆಯ ಶತಮಾನದ್ದು (ಚಿತ್ರ 90); ಎರಡೂ ಪ್ರಾಣಿಗಳೂ ಉಗ್ರರೂಪದಲ್ಲಿದ್ದು ನಡುವಣ ವಿಷ್ಣುಮುಖ ಸೌಮ್ಯವಾಗಿರುವುದು ಸ್ವಾರಸ್ಯ. ಸಿಂಹಾಚಲದಲ್ಲಿರುವುದು ವರಾಹ ನರಸಿಂಹ.

ನರಸಿಂಹಮೂರ್ತಿಗಳಲ್ಲಿ ಗಿರಿಜ, ಸ್ಥೌಣ ಎಂದೆರಡು ವಿಧ. ಗಿರಿಜ ಎಂದರೆ ಬೆಟ್ಟದಿಂದ ಹೊರಬಂದ ಏಕಾಕಿ ನರಸಿಂಹ; ಪದ್ಮಾಸನದಲ್ಲಿ ಉತ್ಕುಟಿಕ ಭಂಗಿಯಲ್ಲಿ ಕುಳಿತ ಯೋಗಾನರಸಿಂಹ (ಚಿತ್ರ 91, 92) ಇದರ ನಿದರ್ಶನ. ನರಸಿಂಹಮೂರ್ತಿ ಇಲ್ಲಿ ಒಂಟಿಯಾಗಿರುವುದರಿಂದ ಕೇವಲ ನರಸಿಂಹ ಎಂದೂ ಕರೆಯುತ್ತಾರೆ. ಯೋಗಪಟ್ಟವಿಲ್ಲದೆ ಸುಖಾಸೀನನಾಗಿ ಕುಳಿತಿರುವ ಮೂರ್ತಿಗಳೂ ಇವೆ. ಸ್ಥಾನಕಮೂರ್ತಿಗಳೂ ಉಂಟು. ಸ್ಥೌಣ ಎಂದರೆ ಕಂಬವೊಡೆದುಕೊಂಡು ಹೊರಬಂದವನು. ಇದರಲ್ಲಿ ಸ್ಥಾನಕ, ಆಸೀನ ಎರಡೂ ಬಗೆಗಳುಂಟು. ಹಿರಣ್ಯಕಶಿಪುವನ್ನು ಕೊಲ್ಲುತ್ತಿರುವಂತೆ ಚಿತ್ರಿಸುವುದೇ ವಾಡಿಕೆ; ಕೊಲ್ಲಲು ನಡೆದು ಅಥವಾ ಗರುಡನನ್ನೇರಿ ಹೊರಡುತ್ತಿರುವಂತೆಯೂ ಕೆಲವೆಡೆ ಚಿತ್ರಿಸಿರುತ್ತಾರೆ, ಆಗ ಇದು ಯಾನಕನರಸಿಂಹ ಎನಿಸಿಕೊಳ್ಳುತ್ತದೆ (ಚಿತ್ರ 93). ಇವಲ್ಲದೆ ಲಕ್ಷ್ಮೀನರಸಿಂಹ, ಪ್ರಹ್ಲಾದವರದ ನರಸಿಂಹ, ಅಘೋರನರಸಿಂಹ, ಜ್ವಾಲಾನರಸಿಂಹ, ಉಗ್ರನರಸಿಂಹ ಮೊದಲಾದ ಕೆಲವು ಪ್ರಭೇದಗಳಿವೆ. ಮಂಗಳಗಿರಿಯಲ್ಲಿರುವ ಧ್ರುವ ನರಸಿಂಹ ಬಂಡೆಯಲ್ಲಿ ಬಾಯ್ತೆರದಂತೆ ಕಾಣುತ್ತದೆ. ಇದರಲ್ಲಿ ಪಾನಕವನ್ನು ಸುರಿಯುವ ವಾಡಿಕೆಯಿದೆ.

ವರಾಹದಂತೆಯೇ ನರಸಿಂಹನೂ ಜಾನಪದ ನೆಲೆಯಿಂದಲೇ ಎದ್ದು ಬಂದ ದೇವತೆ. ಇಲ್ಲಿ ಪ್ರಮುಖವಾದುದು ಅವನ ಕ್ರೂರರೂಪ —

ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಂ ।
ನೃಸಿಂಹಂ ಭೀಷಣಂ ಭದ್ರಂ ಮೃತ್ಯುಮೃತ್ಯುಂ ನಮಾಮ್ಯಹಂ ॥

ಆದರೆ ನೃಸಿಂಹನ ಸ್ವಭಾವ ಸೌಮ್ಯವೆಂದೂ ಕ್ರೌರ್ಯ ವಿಶೇಷವೆಂದೂ ಬಗೆದು ಪೂಜೆಯಲ್ಲಿ ಸೌಮ್ಯರೂಪವನ್ನೇ ಬಳಸಬೇಕೆಂದೂ ವಿಧಿಯಿದೆ ('ನೃಸಿಂಹಸ್ಯ ಪ್ರಸನ್ನತಾ ಸ್ವಭಾವಃ, ಕ್ರೂರತಾ ವಿಶೇಷೇಣ। ತತ್ರ ಪೂಜಾಯಾಂ ಪ್ರಸನ್ನರೂಪಂ ಧ್ಯಾಯೇತ್'). ಇದು ಆರ್ಯಸಂಸ್ಕರಣವೆನ್ನಬಹುದು. ಪ್ರಾಚೀನ ಕಲ್ಪಗಳಲ್ಲಿ ನರಸಿಂಹ ಮಂತ್ರವನ್ನು ಬಳಸುವುದು ದುಃಸ್ವಪ್ನ ಸಂದರ್ಭದಲ್ಲಿ, ಮೂಷಿಕಾದಿ ವಿಷಶಾಂತಿಗಾಗಿ, ಶಿರೋವೇದನಾದಿ (ತಲೆನೋವು ಮೊದಲಾದ) ರೋಗ ಶಮನಕ್ಕಾಗಿ, ದುರ್ಮರಣ ನಿವಾರಣೆಗಾಗಿ; ಮಾರಣ, ಉಚ್ಚಾಟನ, ವಿದ್ವೇಷಣ ಮೊದಲಾದ ಕ್ರಿಯೆಗಳಲ್ಲಿಯೂ ಇದರ ಬಳಕೆಯಿದೆ. ಶತ್ರುವಿನ ಹೆಸರನ್ನು ನೆನೆದು ಅವನನ್ನು ಜಿಂಕೆಯ ಮರಿಯಂತೆ ಭಾವಿಸಿ ತನ್ನನ್ನು ನರಸಿಂಹನೆಂದು ಧ್ಯಾನಿಸಿ ಆ ಜಿಂಕೆಯ ಮರಿಯನ್ನು ತಾನು ಹಿಡಿದಂತೆ ಕಲ್ಪಿಸಿಕೊಂಡು ಆಕಾಶದಿಂದ ಭೂಮಿಗೆ ಎಸೆಯುವಂತೆ ಭಾವಿಸಿಕೊಳ್ಳುವ ಕಲ್ಪಗಳಿವೆ. ('ಆತ್ಮಾನಂ ನೃಹರಿರೂಪಂ ಧ್ಯಾತ್ವಾ ಶತ್ರುಂ ಹರಿಣಶಿಶುಂಚ ಧ್ಯಾತ್ವಾ ಆತ್ಮನಾ ತಂ ಗೃಹೀತಂ ಚ ಧ್ಯಾತ್ವಾ, ತಂ ಶತ್ರುಂ ಗಗನತಃ ಕ್ಷಿತೌ ದೂರತಃ ಕ್ಷಿಪ್ತಂ ಚ ನಿತ್ಯಶೋ ಧ್ಯಾತ್ವಾ ಜಪೇತ್'). ಶತ್ರುವಿನ ಹೆಸರನ್ನು ಬರೆದಿಟ್ಟು ಅದರ ಕಡೆ ಕ್ರೂರದೃಷ್ಟಿಯಿಂದ ಸುಡುವ ಹಾಗೆ ನೋಡಿ, ಏಳು ದಿನಗಳು ನರಸಿಂಹ ಮಂತ್ರವನ್ನು ಜಪಿಸಿದರೆ ಶತ್ರು ಕಂಡಿತ ಸಾಯುವನಂತೆ. ಯುದ್ಧಕ್ಕೆ ಹೊರಡುವಾಗ ಶತ್ರುಗಳ ನಾಶಕ್ಕೆಂದು ನರಸಿಂಹಪ್ರಯೋಗ ಮಾಡುತ್ತಿದ್ದರು. ಈ ಪ್ರಯೋಗದಲ್ಲಿ ಕಟ್ಟಿಗೆಯನ್ನು ಒಟ್ಟಿ ಬೆಂಕಿ ಹಚ್ಚಿ 'ಜ್ವಲ, ಜ್ವಲ, ಖಾದ, ಖಾದ, ಭಿಂದ ಭಿಂದ' ಎಂದು ಗಟ್ಟಿಯಾಗಿ ಹೇಳುತ್ತಿದ್ದರು. ಉಗ್ರರೂಪ, ಮಹಾದಂಷ್ಟ್ರ, ಮಹೋತ್ಸಾಹ, ಅಪರಾಜಿತ, ಜಯಂತ, ಜ್ವಾಲಾಮುಖ, ಅಗ್ನಿನೇತ್ರ, ದೀಪ್ತಜಿಹ್ವ, ವಿದಾರಣ, ವಜ್ರನಖ, ಭೀಮ, ಭೀಷಣ ಮೊದಲಾದ ಹೆಸರುಗಳನ್ನೇ ನ್ಯಾಸದಲ್ಲಿ ಬಳಸುತ್ತಾರೆ. ಕೋಟೆಕೊತ್ತಲಗಳಲ್ಲಿಯೂ ಗಿರಿದುರ್ಗಗಳಲ್ಲಿಯೂ ನರಸಿಂಹನ ಗುಡಿಗಳಿರುವುದನ್ನು ಗಮನಿಸಬೇಕು. ಚಕ್ರಪುರುಷಮೂರ್ತಿಯಲ್ಲಿ ತ್ರಿಕೋಣಾಕೃತಿಯ ನಡುವೆ ಸುದರ್ಶನ–ನಾರಸಿಂಹನನ್ನು ಮೂಡಿಸುವ ಪದ್ಧತಿಯಿದೆ; ಜ್ವಾಲಾಚಕ್ರಧರನಾದ ಈ ನರಸಿಂಹ ಉಗ್ರರೂಪದಲ್ಲಿರುವುದು ಮಾತ್ರವಲ್ಲ, ಅವನು ತ್ರಿಣೇತ್ರನೂ ಹೌದು—

> ಯೋಗಪಟ್ಟ ನಿಬದ್ಧಾಂಗಂ ತ್ರಿಣೇತ್ರಂ ಚೋಗ್ರವಿಗ್ರಹಂ ।
> ಧ್ಯಾಯೇತ್ ಸಮಸ್ತದುಃಖಘ್ನಮಶೋಕದ್ರುಮಮೂಲತಃ ॥

ಸುದರ್ಶನ ನಾರಸಿಂಹ ಮಂತ್ರ "ಓಂ ಸಹಸ್ರಾರ ಜ್ವಾಲಾವರ್ತಿನೇ ಕ್ರೌಂ ಹನ ಹನ ಹುಂ ಫಟ್ ಸ್ವಾಹಾ" ಎನ್ನುವುದು. ಈ ಮಂತ್ರಕ್ಕೆ ಋಷಿ ಯಾರು ಗೊತ್ತೆ? ದೂರ್ವಾಸ! ನರಸಿಂಹಾವತಾರದ ಹಿನ್ನೆಲೆ ಸ್ಪಷ್ಟವಾಗಲು ಇನ್ನೇನು ಬೇಕು?

ವಾಮನ-ತ್ರಿವಿಕ್ರಮ ಎರಡೂ ಒಂದೇ ಸಂದರ್ಭದಲ್ಲಿ ಕಾಣಿಸಿಕೊಂಡ ಮೂರ್ತಿಗಳು. ಬಲಿಬಂಧವಾದುದು ಪತಂಜಲಿಗೇ ತಿಳಿದಿದ್ದಿತು; ಅಷ್ಟು ಹಳೆಯ ಕಥೆ ಅದು. ಅಲ್ಲಿ ಬಲಿಯ ಬಳಿಗೆ ವಾಮನಾಕಾರದ (ಕುಳ್ಳ) ಬ್ರಹ್ಮಚಾರಿಯಾಗಿ ಬಂದ ವಿಷ್ಣು ತ್ರಿವಿಕ್ರಮಾಕಾರವನ್ನು ತಳೆದನಷ್ಟೆ. ತ್ರಿವಿಕ್ರಮನಾದುದು ವೈದಿಕ ವಾಙ್ಮಯದಲ್ಲಿಯೇ ಬರುವ ವಿವರ; ಅದನ್ನು ಈಗಾಗಲೇ ತಿಳಿದಿದ್ದೇವೆ. ಮನೆಗಳಲ್ಲಿ ವಾಮನ ಮೂರ್ತಿಯನ್ನು ಪೂಜಿಸಿದರೂ ಗುಡಿಗಳಲ್ಲಿ ಮಠಗಳಲ್ಲಿ ತ್ರಿವಿಕ್ರಮಮೂರ್ತಿಗಳನ್ನು ಪೂಜೆಮಾಡಬಹುದಾಗಿದ್ದಿತು. ಉತ್ತಮದಶತಾಳ ಪ್ರಮಾಣದಲ್ಲಿ ಕಡೆದ ಈ ಮೂರ್ತಿಗೆ ಎಂಟು ಕೈಗಳು; ಎಡಗಾಲನ್ನು ಮೇಲೆತ್ತಿ ಹಿಡಿದಿರುತ್ತಾನೆ. ಅವನ ಮೊಣಕಾಲಿನವರೆಗೆ ಭೂಲೋಕ, ಅಲ್ಲಿಂದ ಹೊಕ್ಕಳಿನವರೆಗೆ ಅಂತರಿಕ್ಷ, ಅಲ್ಲಿಂದ ಹಣೆಯ ತನಕ ಸ್ವರ್ಲೋಕ. ಇದು ತ್ರಿವಿಕ್ರಮನ ಕಲ್ಪನೆ (ಚಿತ್ರ 94). ಇಂದ್ರ ಕಲ್ಪವೃಕ್ಷದ ಬಳಿಯಿದ್ದು ಅವನಿಗೆ

ಕೊಡೆಹಿಡಿದಿರುವಂತೆ, ವಾಯು–ವರುಣರು ಗಾಳಿ ಬೀಸುತ್ತಿರುವಂತೆ, ಶಿವನು ಕೈಮುಗಿದಿರುವಂತೆ, ಬ್ರಹ್ಮನು ತ್ರಿವಿಕ್ರಮನ ಎಡಗಾಲನ್ನು ತೊಳೆಯುತ್ತಿರುವಂತೆ, ಬಲಗಾಲ ಬಳಿ ನಮುಚಿ (ಎಂದರೆ ವೈದಿಕ ಸಂದರ್ಭದಲ್ಲಿ ಇಂದ್ರನನ್ನು ಸೆಣೆಸಿದ ವೃತ್ರಾಸುರ) ಅಂಗಲಾಚುತ್ತಿರುವಂತೆ ಚಿತ್ರಿಸಬೇಕೆಂದು ಶಾಸ್ತ್ರಗಳು ವಿಧಿಸುತ್ತವೆ. ಇಂದ್ರನು ವೃತ್ರಾಸುರನನ್ನು ಕೊಲ್ಲಲು ವಿಷ್ಣುವಿನ ನೆರವನ್ನು ಪಡೆದ ವೈದಿಕ ಪ್ರಸ್ತಾಪವನ್ನೇ ಇಲ್ಲಿ ಕಾಣಬಹುದು. ಮಹಾಬಲಿಪುರದಲ್ಲಿ ಕಡೆದಿರುವ ತ್ರಿವಿಕ್ರಮಮೂರ್ತಿಯ ಶಿಲಾಫಲಕ ತುಂಬ ಮನೋಜ್ಞವಾಗಿದೆ; ಇದನ್ನೂ ಎಲ್ಲೋರದ ತ್ರಿವಿಕ್ರಮ ಶಿಲ್ಪವನ್ನೂ ಅದ್ಭುತಮಣೀಯವೆನ್ನಬಹುದು.

ರಾಮ, ಕೃಷ್ಣರ ವಿಚಾರ ಹೆಚ್ಚಾಗಿ ಹೇಳುವ ಅಗತ್ಯವಿಲ್ಲ. ದೇಶದಲ್ಲೆಲ್ಲ ವಿಶೇಷವಾಗಿ ಪೂಜೆಗೊಳ್ಳುತ್ತಿರುವ ವಿಷ್ಣುಮೂರ್ತಿಗಳು ಇವೇ; ಗುಡಿಗಳಲ್ಲಿ ರಾಮ, ಕೃಷ್ಣರಿಗೆ ಮೀಸಲಾದ ಗುಡಿಗಳೇ ಹೆಚ್ಚು. ರಾಮನ ಶಿಲ್ಪ ಸಾಮಾನ್ಯವಾಗಿ ದ್ವಿಭುಜ ಸ್ಥಾನಕ ಭಂಗಿಯಲ್ಲಿ, ಮಧ್ಯಮದಶತಾಳ ಪ್ರಮಾಣದಲ್ಲಿ, ತ್ರಿಭಂಗದಲ್ಲಿ ಇರುತ್ತದೆ. ಧನುರ್ಧಾರಿಯಾಗಿರುವಂತೆ ಚಿತ್ರಿಸುವುದೇ ವಾಡಿಕೆ. ಪಕ್ಕಗಳಲ್ಲಿ ಸೀತೆ ಲಕ್ಷ್ಮಣರೂ ಹತ್ತಿರವೇ ಹನುಮಂತನೂ ಇರುತ್ತಾರೆ. ಸೀತೆಯನ್ನು ರಾಮನ ಬಲಗಡೆ ನವಾರ್ಧತಾಳ ಪ್ರಮಾಣದಲ್ಲಿ ಮಾಡಿ ನಿಲ್ಲಿಸುತ್ತಾರೆ; ರಾಮನ ಭುಜಕ್ಕೆ ಸೀತೆ ಬರಬೇಕಷ್ಟೆ. ಎಡಗಡೆ ಲಕ್ಷ್ಮಣನು ದಶತಾಳ ಪ್ರಮಾಣದಲ್ಲಿರುತ್ತಾನೆ; ಅವನು ರಾಮನ ಕಿವಿಯವರೆಗೆ ಇರಬೇಕಷ್ಟೆ. ಹನುಮಂತ ಸಪ್ತತಾಳ ಪ್ರಮಾಣದಲ್ಲಿದ್ದರೆ ಸಾಕು; ಅಂಜಲಿಬದ್ಧನಾಗಿ, ಅಥವಾ ನಮ್ರತೆಯನ್ನು ಸೂಚಿಸಲು ಬಾಯಿಯನ್ನು ಬಲಗೈಯಿಂದ ಅಡ್ಡಹಿಡಿದಂತೆ ಕಾಣಿಸುತ್ತಾನೆ. ಸೀತೆಗೂ ಹನುಮಂತನಿಗೂ ಕರಂಡಮುಕುಟ; ರಾಮ–ಲಕ್ಷ್ಮಣರಿಗೆ ಕಿರೀಟ ಮುಕುಟ. ರಾಮ–ಸೀತೆಯರನ್ನು ಸಿಂಹಾಸನದ ಮೇಲೆ ಕೂರಿಸಿ ಲಕ್ಷ್ಮಣ, ಭರತ, ಶತ್ರುಘ್ನ, ಹನುಮಂತ ಇವರು ಸುತ್ತ ನಿಂತಿರುವ ಪಟ್ಟಾಭಿರಾಮಮೂರ್ತಿಯ ಶಿಲ್ಪಗಳೂ ಇರುತ್ತವೆ. ಆದರೆ ರಾಮ–ಸೀತೆ, ಲಕ್ಷ್ಮಣ, ಹನುಮಂತ ಇವರ ಸ್ಥಾನಕ ವಿಗ್ರಹಗಳಿರುವುದೇ ವಾಡಿಕೆ (ಚಿತ್ರ 95). ಕುಂಭಕೋಣದ ಬಳಿ ತಿರುವಿಲ್ಲಿಯಂ ಗುಡಿಯಲ್ಲಿರುವ ಶ್ರೀಕೋಲವಿಳ್ಳಿರಾಮನ್ ಧ್ರುವಬೇರವು

ಚಿತ್ರ 94
ತ್ರಿವಿಕ್ರಮಮೂರ್ತಿ

ಚಿತ್ರ 95
ಸೀತಾ-ರಾಮ

ಶಯಾನಭಂಗಿಯಲ್ಲಿದೆ; ಅಲ್ಲಿನ ಉತ್ಸವಮೂರ್ತಿಗೆ ನಾಲ್ಕು ಕೈಗಳು. ಭದ್ರಾಚಲದ ಸುಪ್ರಸಿದ್ಧ ದೇವಾಲಯದಲ್ಲಿಯೂ ಚತುರ್ಭುಜ ರಾಮನೇ ಇರುವುದು; ಶಂಖ-ಚಕ್ರಧಾರಿ. ದರ್ಭಶಯನದಲ್ಲಿ ರಾಮನು ಆದಿಶೇಷನ ಮೇಲೆ ಪವಡಿಸಿದಂತೆ ಕಾಣಿಸಿದ್ದಾರೆ.

ಕೃಷ್ಣನನ್ನು ಮಧ್ಯಮದಶತಾಳ ಪ್ರಮಾಣದಲ್ಲಿ ಮಾಡಬೇಕೆಂದು ವಿಧಿ. ದ್ವಿಭುಜ, ಚತುರ್ಭುಜ ಮೂರ್ತಿಗಳು ಸ್ಥಾನಕ, ಆಸೀನ ಭಂಗಿಗಳಲ್ಲಿರುವುದೂ, ಕಾಳಿಯಮರ್ದನನಾಗಿ (ಚಿತ್ರ 96), ಗೋಪಾಲಕೃಷ್ಣನಾಗಿ, ಮುರಳೀವಾದಕನಾಗಿ, ಬಾಲಕೃಷ್ಣನಾಗಿ, ರುಕ್ಮಿಣಿವಲ್ಲಭನಾಗಿ ಇರುವುದೂ ದಕ್ಷಿಣದೇಶದಲ್ಲಿ ಎಲ್ಲೆಲ್ಲೂ ಕಾಣಸಿಗುತ್ತವೆ. ದೇವಿಯೊಡಗೂಡಿದ ಕೃಷ್ಣನನ್ನು ಶೌರಿರಾಜನೆಂದೂ, ಬೆಣ್ಣೆಹಿಡಿದು ಕುಣಿಯುತ್ತಿರುವ ಕೃಷ್ಣನನ್ನು ನವನೀತ ನೃತ್ತಮೂರ್ತಿಯೆಂದೂ (ಚಿತ್ರ 97), ಕೊಳಲನ್ನೂದುತ್ತಿರುವ ಚದುರನನ್ನು ಗಾನಗೋಪಾಲನೆಂದೂ, ಗೀತೋಪದೇಶ ಮಾಡುವ ಕೃಷ್ಣನನ್ನು ಪಾರ್ಥಸಾರಥಿಯೆಂದೂ, ಕಬ್ಬಿನ ಜಲ್ಲೆಯನ್ನು ಬಿಲ್ಲಿನಂತೆ (ಇಕ್ಷುಕೋದಂಡ) ಹಿಡಿದು ನಿಂತ ಕೃಷ್ಣನನ್ನು ಮದನಗೋಪಾಲನೆಂದೂ ವ್ಯವಹರಿಸುತ್ತಾರೆ. ಕೃಷ್ಣನ ಕಲ್ಪನೆಯ ಸ್ವಾರಸ್ಯವನ್ನು ಅನುಬಂಧದಲ್ಲಿ ಕಾಣಬಹುದು. ಶಿಲ್ಪದಲ್ಲಿ ತುಂಬ ಮನೋಜ್ಞವಾಗಿ, ಮಧುರವಾಗಿ, ರಮಣೀಯವಾಗಿ ಮೂಡಿಬಂದ ಮೂರ್ತಿಯೆಂದರೆ ಕೃಷ್ಣ. ಜನರ ಅನುರಕ್ತಿಯನ್ನು ಸೆಳೆದ ದೇವತೆಯೂ ಕೃಷ್ಣನೇ.

ಕೈಯಲ್ಲಿ ಬೆಣ್ಣೆಯ ಮುದ್ದೆಯನ್ನು ಹಿಡಿದು ಅಂಬೆಗಾಲಿಡುವ ಸಂತಾನಗೋಪಾಲ, ಬಲಗೈಯಲ್ಲಿ ಬೆಣ್ಣೆ ಹಿಡಿದು ಎಡಗೈಯನ್ನು ಅಡ್ಡಲಾಗಿ ಚಾಚಿ ಎಡಗಾಲ ಮೇಲೆ ನಿಂತಿರುವ ಮೂರು ವರ್ಷಗಳ ಮಗುವಿನಂತಿರುವ ನವನೀತನೃತ್ತಮೂರ್ತಿ, ಎಂಟು ತೋಳುಗಳ ವೇಣುಗೋಪಾಲ (ಅಥವಾ ಗಾನಗೋಪಾಲ),

ಚಿತ್ರ 96
ಕಾಳಿಯಮರ್ದನ ಕೃಷ್ಣ

ಚಿತ್ರ 97
ನವನೀತನೃತ್ತಮೂರ್ತಿ

ಗೋವಳರ ದೊರೆಯಂತೆ ಕಾಣುತ್ತ ಬಲಗೈಯಲ್ಲಿ ಚಾವಟಿಯನ್ನು ಹಿಡಿದು ಎಡಗೈಯನ್ನು ಕೋಲಿನ ಮೇಲೂರಿ ನಿಂತಿರುವ ಅಥವಾ ಕುಳಿತಿರುವ ರಾಜಗೋಪಾಲ, ರಾಧೆಯೊಂದಿಗಿರುವ ರಾಧಾಕೃಷ್ಣ ಮೊದಲಾದುವು ಸುಪ್ರಸಿದ್ಧ ಮೂರ್ತಿಭೇದಗಳು. ತಿರುಪತಿಯ ಬಳಿಯಿರುವ ತಿರುಚಾನೂರು ಗುಡಿಯಲ್ಲಿ ಕೃಷ್ಣನೆದುರು ಬಲರಾಮನೂ ಇದ್ದಾನೆ.

ಈ ಮುಖ್ಯ ಅವತಾರ ಮೂರ್ತಿಗಳಲ್ಲದೆ ಇತರ ಕೆಲವು ಮೂರ್ತಿಗಳೂ ಶಿಲ್ಪದಲ್ಲಿ ಬಂದಿವೆ; ಪೂಜೆಯಲ್ಲೂ ನಿಂತಿವೆ. ಇವುಗಳಲ್ಲಿ ದತ್ತಾತ್ರೇಯ, ರಂಗಶಾಯಿ, ಹಯಗ್ರೀವ, ವರದರಾಜ ಇವು ಮುಖ್ಯವಾದುವು. ದತ್ತಾತ್ರೇಯನ ವಿಚಾರ ಮಾರ್ಕಂಡೇಯ ಪುರಾಣ, ವಾಯುಪುರಾಣ, ಬ್ರಹ್ಮಪುರಾಣಗಳಲ್ಲಿ ವಿವರವಾಗಿ ಬಂದರೂ ತಾಂತ್ರಿಕ ನೆಲೆಯಿಂದ ಬಂದ ದೇವತೆಯಿರಬಹುದು. ಸಹಸ್ರಬಾಹು–ಕಾರ್ತವೀರ್ಯಾರ್ಜುನನ ಮಂತ್ರಕ್ಕೆ ದತ್ತಾತ್ರೇಯನೇ ಋಷಿ. ಕಳ್ಳರು ಕದ್ದುಕೊಂಡು ಹೋದುದನ್ನು ಮತ್ತೆ ಪಡೆಯುವ ಮಂತ್ರ ಇದು ('ಹೃತಂ ನಷ್ಟಂ ಚ ಲಭ್ಯತೇ ಕ್ರೋಂ ಸಹಸ್ರಾರ ಹುಂ ಫಟ್'); ಚೋರಸ್ತಂಭನಕ್ಕೆಂದೇ ಇದರ ವಿನಿಯೋಗ. ಮಾಹಿಷ್ಮತಿಯ ಒಡೆಯನೂ ಹೇಹಯ ರಾಜನೂ ಆಗಿದ್ದ ಕಾರ್ತವೀರ್ಯನನ್ನು 'ದತ್ತಾತ್ರೇಯ ಶ್ರೀಪಾದ ಪ್ರಿಯತಮ'ನೆಂದು ಕರೆದಿದ್ದಾರೆ. ಕಾರ್ತವೀರ್ಯನಿಗೆ ಸಾವಿರ ತೋಳುಗಳು ಬಂದುದೂ ಇವನ ದಯೆಯಿಂದಲೇ. ಇವನ ಮಂತ್ರದಲ್ಲಿ 'ಮರ್ದಯ, ಭೀಷಯ, ಕೃತ್ತಯ, ತ್ರಾಸಯ, ತಾಪಯ' ('ಹೊಡಿ, ಬೆದರಿಸು, ಕಡಿ, ಸುಡು') ಎನ್ನುವ ಮಾತುಗಳೇ ಇವೆ. ಆದರೆ ಪುರಾಣಗಳಲ್ಲಿ ದತ್ತಾತ್ರೇಯ ಸಾತ್ತ್ವಿಕನಾದ ಋಷಿ; ವೈದಿಕವಿಧಿಗಳನ್ನು ಮತ್ತೆ ಎತ್ತಿ ನಿಲ್ಲಿಸಿದವನು; ಋಷಿಗಿಂತಲೂ ಹೆಚ್ಚಾಗಿ ಯೋಗಿ ಎಂದರೆ ವ್ರಾತ್ಯಸಂಪ್ರದಾಯಕ್ಕೆ ಸೇರಿದವನು. ಬ್ರಹ್ಮ, ವಿಷ್ಣು, ಶಿವ ಮೂರೂ ದೇವತೆಗಳನ್ನು ಅಳವಡಿಸಿಕೊಂಡ ಮಗನೇ ತನಗೆ ದೊರೆಯಬೇಕೆಂದು ತಾಯಿ ಅತ್ರಿಯ ಬಯಕೆಯಾಗಿದ್ದರೂ ದತ್ತಾತ್ರೇಯನು ವಿಷ್ಣುವಿನ ಅವತಾರವೆಂದೇ ನಂಬಿಕೆ. ಬಾದಾಮಿಯ ದತ್ತಾತ್ರೇಯಶಿಲ್ಪ ಸುಂದರವಾಗಿದೆ; ಇದರಲ್ಲಿ ಧ್ಯಾನಮುದ್ರೆಯಲ್ಲಿ ಕುಳಿತ ಮೂರ್ತಿ ಶಂಖ ಚಕ್ರಗಳನ್ನೇ ಹಿಡಿದಿದೆ. ಆದರೆ ಕೆಳಗಿನ ಭದ್ರಪೀಠದಲ್ಲಿ ಗರುಡ, ಬಸವ, ಹಂಸಗಳನ್ನು ಮೂಡಿಸಿದ್ದಾರೆ; ತ್ರಿಮೂರ್ತಿಗಳ ವಾಹನಗಳಲ್ಲವೆ? ಮೂರ್ತಿ ವಿಷ್ಣುವೇ ಆದರೂ ಮುಖ್ಯವಾದ ವಾಹನ ಬಸವ; ತ್ರಿಣೇತ್ರ, ಜಟಾಮುಕುಟಗಳಿವೆ. ಪ್ರಭಾವಳಿಯಲ್ಲಿ ದಶಾವತಾರ ಚಿತ್ರಣವಿದೆ. ಹರಿಹರ ಮೂರ್ತಿಯಿದ್ದಂತೆ ತ್ರಿಮೂರ್ತಿಗಳನ್ನೂ ಬೆರೆಸುವ ಪ್ರಯತ್ನ ಇದು.

ಹಯಗ್ರೀವ ಕುದುರೆಮುಖದ ದೇವತೆ (ಚಿತ್ರ 98). ಹಲವರು ಈ ದೇವತೆಯನ್ನು ವಿಷ್ಣುವಿನ ಅವತಾರವೆಂದೂ, ಜ್ಞಾನಾಭಿಮಾನಿ ದೇವತೆಯೆಂದೂ ಬಗೆಯುತ್ತಾರೆ; ಮಧುಕೈಟಭರೆಂಬ ದಾನವರು ವೇದಗಳನ್ನು ಕದ್ದೊಯ್ದಾಗ ಅವರನ್ನು ನಿಗ್ರಹಿಸಿ ವೇದಗಳನ್ನು ಮತ್ತೆ ತಂದು ಬ್ರಹ್ಮನಿಗೆ ಕೊಟ್ಟ ಕಥೆ ಈ ಕಲ್ಪನೆಗೆ ಹಿನ್ನೆಲೆ. ಆದರೆ ದೇವೀಭಾಗವತದಲ್ಲಿ ಹಯಗ್ರೀವನೆಂಬ ರಾಕ್ಷಸನನ್ನು ಕೊಲ್ಲಲು ತಾನೂ ಹಯಗ್ರೀವನಾದ ಬೇರೊಂದು ಕಥೆ ಬರುತ್ತದೆ. ಭರ್ತೃಮೇಂಠನೆಂಬ ಕವಿ (ಕ್ರಿಸ್ತಾಬ್ದ 400ರ

ಚಿತ್ರ 98
ಹಯಗ್ರೀವ
ನಾಗಲಾಪುರದ ಶಿಲ್ಪ

ಸುಮಾರಿಗೆ ಕಾಶ್ಮೀರದಲ್ಲಿದ್ದವನು) 'ಹಯಗ್ರೀವವಧೆ' ಯೆಂಬ ಸಂಸ್ಕೃತ ಕಾವ್ಯವನ್ನು ಬರೆದಿದ್ದ; ಆ ಕಾವ್ಯ ಇಂದು ಉಳಿದಿಲ್ಲವಾದರೂ ಅದರ ಮೊದಲ ಶ್ಲೋಕವನ್ನು ರಾಜಶೇಖರ ತನ್ನ ಕಾವ್ಯಮೀಮಾಂಸೆಯಲ್ಲಿ ಉಳಿಸಿದ್ದಾನೆ —

ಆಸೀದ್ದೈತ್ಯೋ ಹಯಗ್ರೀವಃ ಸಹೃದ್ವೇಶ್ಮಸು ತಸ್ಯ ತಾಃ ।
ಪ್ರಥಯಂತಿ ಬಲಂ ಬಹ್ವೋಃ ಸಿತಚ್ಛತ್ರಸ್ಮಿತಾಃ ಶ್ರಿಯಃ ॥

ಈ ಹಯಗ್ರೀವ–ದೈತ್ಯನನ್ನು ವಿಷ್ಣುವು ಕೊಂದನೆಂದು ಇದೇ ಕಾವ್ಯದ ಇನ್ನೊಂದು ಶ್ಲೋಕದಿಂದ ಊಹಿಸಿಕೊಳ್ಳಬಹುದು (ಶಕುಂತಲನಾಟಕಕ್ಕೆ ರಾಘವನು ಬರೆದಿರುವ ಟೀಕೆಯಲ್ಲಿ ಈ ಶ್ಲೋಕವನ್ನು ಉದ್ಧರಿಸಿದೆ) —

ಯಂ ಪ್ರೇಕ್ಷ್ಯ ಚಿರರೂಢಾಪಿ ನಿವಾಸಪ್ರೀತಿರುಜ್ಝಿತಾ ।
ಮದೇನೈರಾವಣಮುಖೇ ಮಾನೇನ ಹೃದಯೇ ಹರೇಃ ॥

ಆದರೆ ಸಂದರ್ಭವೇನೋ ಗೊತ್ತಾಗುವುದಿಲ್ಲ; ಹರಿಯೆನ್ನುವ ಮಾತು ಮುಖ್ಯವಾಗಿದ್ದೀತು. ಹಯಗ್ರೀವ ದೈತ್ಯನಲ್ಲದೆ, ಹಯಗ್ರೀವನೆನ್ನುವ ಯಕ್ಷನೂ ಇದ್ದಾನೆ. ಗ್ರಾಮದೇವತೆಗಳಲ್ಲಿ ಮಾರಿಯಮ್ಮ, ಪೋಲೇರಮ್ಮ, ಶೀತಲೆ, ಹಾರೀತಿ, ಮಾತಂಗಿಯರೊಂದಿಗೆ ಹಯಗ್ರೀವನೂ ಇದ್ದಾನೆ; ಜ್ವರದೇವತೆ. ಕುಳ್ಳು, ಕೆಂಪುಮೋರೆ, ಡೊಳ್ಳುಹೊಟ್ಟೆ, ಕತ್ತಿನ ಸುತ್ತ ಹಾವಿನ ಮಾಲೆ, ಮುಖದ ಮೇಲೆ ಸಿಡುಕು—ಇದು ಹಯಗ್ರೀವ ದೇವತೆಯ ಲಕ್ಷಣ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುದುರೆ ಮೋರೆಯ ಭೂತವೂ ಒಂದಿದೆ, ಜರಂದಾಯ. ವೈದಿಕ ಸಂದರ್ಭದಲ್ಲಿಯೂ ದಧ್ಯಂಚ್, ಅಶ್ವಿನೀದೇವತೆಗಳು ಕುದುರೆ ಮುಖದವರೇ; ನಮ್ಮ ದೇಶದಲ್ಲಿ ಮಾತ್ರವಲ್ಲ, ಇತರ ದೇಶಗಳಲ್ಲಿಯೂ ಹಯಗ್ರೀವ ದೇವತೆಗಳಿವೆ. ಜಪಾನಿನ ಬೇಟೋ ಕ್ವನೋನ್ ಕುದುರೆಮುಖದ ದೇವತೆಯೇ. ಕಂಬೋಡಿಯದಲ್ಲಿ ಹಯವದನ ದೇವತೆಯಿದೆ (ಚಿತ್ರ 99). ಇಂಥ ಮೃಗ–ನರ ಸಂಯೋಜನೆ ಪ್ರಾಚೀನ ಧಾರ್ಮಿಕ ಸ್ತರಕ್ಕೆ ಸೇರಿದುದೇ ಅಲ್ಲವೇ? ಆದರೆ ಜಾನಪದ ದೇವತೆಯಾಗಿದ್ದ ಹಯಗ್ರೀವ ವಿಷ್ಣುವಿನ ಅವತಾರವೆನ್ನುವ ಕಲ್ಪನೆ ಯಾವಾಗ ಮೂಡಿಬಂದಿತೋ ತಿಳಿಯದು. ಹಯಶೀರ್ಷಪಾಂಚರಾತ್ರವೆನ್ನುವ ವೈಷ್ಣವಾಗಮವೂ ಒಂದು ಸಿದ್ಧವಾಯಿತು.

ಚಿತ್ರ 99
ಕಂಬೋಡಿಯದ
ಹಯಗ್ರೀವ ಯಕ್ಷ

ಸಾಮಾನ್ಯವಾಗಿ ವೈಷ್ಣವರಲ್ಲಿ ಹಯಗ್ರೀವ ಜ್ಞಾನಕ್ಕೆ, ವಿದ್ಯೆಗೆ ಅದರಲ್ಲಿಯೂ ವೇದವಿದ್ಯೆಗೆ ಅಭಿಮಾನಿದೇವತೆ. ತಮಿಳಿನಲ್ಲಿ ಅವನನ್ನು 'ಜ್ಞಾನಪ್ಪಿರಾನ್' ಎಂದೇ ಕರೆಯುತ್ತಾರೆ; ಗ್ರಂಥಾರಂಭದಲ್ಲಿ, ವಿದ್ಯಾರಂಭದಲ್ಲಿ ಹಯಗ್ರೀವನನ್ನು ಸ್ಮರಿಸಿಕೊಳ್ಳುವ ವಾಡಿಕೆಯೂ ಇದೆ. ಶೈವಸಂಪ್ರದಾಯದಲ್ಲಿ ಗಣಪತಿಯಿದ್ದಂತೆ ವೈಷ್ಣವರಲ್ಲಿ ಹಯಗ್ರೀವ ಎಂದರೆ ತಪ್ಪಾಗದು. ಅವನಿಗೆ ವ್ಯಾಖ್ಯಾನ ಮುದ್ರೆಯನ್ನೂ ಪುಸ್ತಕವನ್ನೂ ಶಂಖ–ಚಕ್ರಗಳೊಡನೆ ಸೇರಿಸುತ್ತಾರೆ. ಈ ಧ್ಯಾನಶ್ಲೋಕ ಪ್ರತಿಮಾಲಕ್ಷಣವನ್ನೂ ಮೂರ್ತಿ ಪ್ರಯೋಜನವನ್ನೂ ಹೇಳುತ್ತದೆ —

ವ್ಯಾಖ್ಯಾಮುದ್ರಾಂ ಕರಸರಸಿಜೈಃ ಪುಸ್ತಕಂ ಶಂಖಚಕ್ರೇ
ಬಿಭ್ರದ್ಭಿನ್ನ ಸ್ಫಟಿಕರಚಿತೇ ಪುಂಡರೀಕೇ ನಿಷಣ್ಣಃ ।
ಅಮ್ಲಾನ ಶ್ರೀರಮೃತ ವಿಶದೈರಂಶುಭಿಃ ಪ್ಲಾವಯನ್ಮಾ
ಮಾವಿರ್ಭೂಯಾದಮಿತಮಹಿಮಾ ಮಾನಸೇ ವಾಗಧೀಶಃ ॥

ಇನ್ನೊಂದು ಧ್ಯಾನಶ್ಲೋಕ ಅವನ ವೇದವಿದ್ಯಾಪ್ರೀತಿಯನ್ನು ಸೂಚಿಸುತ್ತದೆ —

ಋಗ್ಯಜುಸ್ಸಾಮರೂಪಾಯ ವೇದಾಹರಣಕರ್ಮಣೇ ।
ಪ್ರಣವೋದ್ಗೀಥವಚಸೇ ಮಹಾಶ್ವಶಿರಸೇ ನಮಃ ॥

ವೇದಾಧ್ಯಯನಕ್ಕೆ ತೊಡಗುವವರು ಅನಾರ್ಯಪದ್ಧತಿಯನ್ನೂ ಅಳವಡಿಸಿಕೊಂಡು ತಮ್ಮ ಕೆಲಸ ಕೈಗೂಡಲೆಂದು ಈ ದೇವತೆಯನ್ನು ಪೂಜಿಸತೊಡಗಿದರೋ ಏನೋ. ಒಂದು ಅನುಷ್ಟುಪ್‌ಮಂತ್ರ ಇದನ್ನು ಸೂಚಿಸುತ್ತದೆ —

ಉದ್ಗಿರತ್ಪ್ರಣವೋದ್ಗೀಥ ಸರ್ವವಾಗೀಶ್ವರೇಶ್ವರ ।
ಸರ್ವವೇದಮಯಾಚಿಂತ್ಯ ಸರ್ವಂ ಬೋಧಯ ಬೋಧಯ ॥

ಈ ಮಂತ್ರವನ್ನು ಜಪಿಸಿ, ದಶಾಂಶ ಹೋಮವನ್ನು ಮಾಡಿ, ಮಂಡಲವನ್ನು ರಚಿಸಿ ಅದರ ದಿಕ್ಕುಗಳಲ್ಲಿ ನಾಲ್ಕು ವೇದಗಳನ್ನೂ ವಿದಿಕ್ಕುಗಳಲ್ಲಿ ನಾಲ್ಕು ವೇದಾಂಗಗಳನ್ನೂ ಪೂಜಿಸಬೇಕೆನ್ನುವ ವಿಧಿಯಿದೆ. ಬುದ್ಧಿಗೆ ಬಲಕಾರಿಯಾದ ಬ್ರಾಹ್ಮೀರಸ ಎಂದರೆ ಬಜೆಯನ್ನು ತುಪ್ಪದಲ್ಲಿ ಬೆರೆಸಿ ಬಳಸುವ ಸಂಪ್ರದಾಯವೂ ಇದ್ದಿತು; ಇದೂ ಹಯಗ್ರೀವ ಪ್ರಯೋಗ ಮಂತ್ರದಲ್ಲಿ ಬರುತ್ತದೆ.

ನಮ್ಮ ವಿಚಾರ ಸರಣಿಗೆ ಸ್ವಾರಸ್ಯವಾದ ವಿವರವೆಂದರೆ ಹಯಗ್ರೀವ ಮೂರ್ತಿಗಳಲ್ಲಿ 'ದಧಿಭಕ್ತ ಹಯಗ್ರೀವ' ನೆನ್ನುವ ಮೂರ್ತಿಯಿರುವುದು. ಈ ಹಯಗ್ರೀವನಿಗೂ ವಿದ್ಯೆಗೂ ಯಾವ ಸಂಬಂಧವೂ ಇಲ್ಲ. ಇವನು 'ಅನ್ನಾಧಿಪತಿ', 'ಅನ್ನದ'; ಅವನ ಮಂತ್ರದಲ್ಲಿ "...ಭಕ್ಷ್ಯಭೋಜ್ಯಾನ್ನದಾನಮಾವಹಾವಹ ಸ್ವಾಹಾ" ಎಂದೇ ಇರುವುದು. ಅವನ ಪ್ರತಿಮಾ ಲಕ್ಷಣದಲ್ಲಿಯೂ ಮೊಸರು ಅನ್ನವನ್ನು ಹಿಡಿದಿರುವುದೇ ಮುಖ್ಯ—

ಸವ್ಯೇನ ಹಸ್ತೇನ ಸುಧಾಕರೀಮನ್ಯೇನ ದಧ್ಯೋದನಮಾದಧಾನಃ ।
ಶಶಾಂಕಮಧ್ಯೇ ಸಿತಪದ್ಮಸಂಸ್ಥಃ ಪಾಯಾತ್ಸಿತಾಭಸ್ತುರಗಾನನೋ ನಃ ॥

ಪ್ರಪಂಚಸಾರಸಂಗ್ರಹ, ಷಡ್ವಿಂಶ ಪಟಲ, ಪು.723

ಹಯಗ್ರೀವನು ವಿದ್ಯಾಧಿರಾಜನಾಗುವ ಮೊದಲು ಅನ್ನಾಧಿಪತಿಯೇ ಆಗಿದ್ದನೆಂದಲ್ಲವೇ ತಾತ್ಪರ್ಯ?

ಸಾಮಾನ್ಯವಾಗಿ ವಿಷ್ಣುಮೂರ್ತಿಗಳನ್ನು ಲಕ್ಷ್ಮೀದೇವಿಯೊಂದಿಗೆ ಇರಿಸುವುದೇ ಪದ್ಧತಿ. ವಿಷ್ಣುಮೂರ್ತಿ ಸ್ಥಾನಕವಾಗಿರುವುದೂ ವಾಡಿಕೆ (ಚಿತ್ರ 100,101). ಹೀಗಿದ್ದಾಗ ಎಡಭಾಗದಲ್ಲಿ ಶ್ರೀದೇವಿ (ಲಕ್ಷ್ಮಿ), ಬಲಭಾಗದಲ್ಲಿ ಭೂಮಿ (ಅಥವಾ ನೀಲಾ) ಇವರನ್ನು ಪದ್ಮಕಟಕ ಮುದ್ರೆಯಲ್ಲಿ ನಿಲ್ಲಿಸುತ್ತಾರೆ. ಆಸೀನಮೂರ್ತಿಯಾದರೆ ಎಡಪಕ್ಕದಲ್ಲಿ ಅಥವಾ ಎಡತೊಡೆಯಮೇಲೆ ಲಕ್ಷ್ಮಿ ಕೂತಿರುತ್ತಾಳೆ; ಇಂಥ ಮೂರ್ತಿಗಳಿಗೆ ಲಕ್ಷ್ಮೀನಾರಾಯಣ ಮೂರ್ತಿಗಳೆಂದು ಹೆಸರು. ಇದು ವರಾಹ, ನರಸಿಂಹದಂಥ ಅವತಾರ ಮೂರ್ತಿಗಳಲ್ಲಿಯೂ ಕಾಣಬರುತ್ತದೆ. ವರಾಹಮೂರ್ತಿ ಎಡತೊಡೆಯ ಮೇಲೆ ಅಂಜಲಿಬದ್ಧಳಾದ

ಚಿತ್ರ 100
ಸ್ಥಾನಕವಿಷ್ಣು
ಪಲ್ಲವರ ಕಾಲದ
ಪ್ರಾಚೀನ ಶಿಲ್ಪ

ಚಿತ್ರ 101
ಸ್ಥಾನಕವಿಷ್ಣುವಿನ
ಪ್ರಾಚೀನ ಶಿಲ್ಪ
ಮಹಾಬಲಿಪುರದಲ್ಲಿ
ಇರುವುದು

ಭೂಮಿಯನ್ನು ಕುಳ್ಳಿರಿಸಿಕೊಂಡಿದ್ದಾಗ ಬಲಭಾಗದಲ್ಲಿ ಕಟಕಮುದ್ರೆಯ ಲಕ್ಷ್ಮಿ ನಿಂತಿರುತ್ತಾಳೆ. ಯೋಗಾನರಸಿಂಹ, ಕೇವಲನರಸಿಂಹ, ಉಗ್ರನರಸಿಂಹ ಈ ಮೂರ್ತಿಗಳನ್ನು ಬಿಟ್ಟು ಉಳಿದ ನರಸಿಂಹಮೂರ್ತಿಗಳಲ್ಲಿ ಎಡಭಾಗದಲ್ಲಿ ಲಕ್ಷ್ಮಿಯಿರುತ್ತಾಳೆ. ಲಕ್ಷ್ಮೀನರಸಿಂಹ ಎನ್ನುವ ಮೂರ್ತಿಪ್ರಭೇದವೇ ಇದೆ. ಆದರೆ ನರಸಿಂಹಮೂರ್ತಿಯೊಂದಿಗೆ ಭೂಮಿದೇವಿ ಇರುವುದು ಅಪುರೂಪ. ಕೃಷ್ಣನ ಮೂರ್ತಿಗಳು ಕೆಲವು ಒಂಟಿಯಾಗಿಯೇ ಇರುವುದಾದರೂ, ರುಕ್ಮಿಣಿಯೊಂದಿಗೆ ಅಥವಾ ರುಕ್ಮಿಣೀಸತ್ಯಭಾಮೆಯರೊಂದಿಗೆ ಇರುವುವೂ ಉಂಟು.

ಕಥೆಯ ಹಿನ್ನೆಲೆಯಲ್ಲಿ ಮೈದಳೆದ ವಿಷ್ಣುಮೂರ್ತಿಗಳೇ ವಿಶೇಷವಾಗಿ ಕಾಣುವುವು. ಅವತಾರ ಮೂರ್ತಿಗಳೆಲ್ಲವೂ ಇಂಥವೇ; ಇವಲ್ಲದೆ ಗಜೇಂದ್ರಮೋಕ್ಷ (ಕರಿವರದ, ವರದರಾಜ), ಪಾರ್ಥಸಾರಥಿ, ವಿಶ್ವರೂಪ, ವಿಟ್ಠಲ (ವಿಠೋಬ), ಜಗನ್ನಾಥ, ಗೋವಿಂದರಾಜ, ವೆಂಕಟೇಶ (ಚಿತ್ರಗಳು 102, 103, 104 105) ಮೊದಲಾದುವೂ ಕಥೆಗಳ ಹಿನ್ನೆಲೆಯನ್ನು ಅಳವಡಿಸಿಕೊಂಡವೇ. ವೆಂಕಟೇಶ–ವಿಷ್ಣುಮೂರ್ತಿಗಳು ಪಲ್ಲವ ಹಾಗೂ ಚೇರ ಶಿಲ್ಪಗಳು; ಇವು ಅನುಕ್ರಮವಾಗಿ ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯ ಮತ್ತು ತಿರುವನಂತಪುರದ ವಸ್ತುಸಂಗ್ರಹಾಲಯಗಳಲ್ಲಿವೆ. ಶಯಾನಮೂರ್ತಿಗಳಲ್ಲಿ ಜಲಶಾಯಿ ಅಥವಾ ರಂಗನಾಥ ಪ್ರಸಿದ್ಧವಾದುದು. ದೇವತಾಮೂರ್ತಿಗಳಲ್ಲಿ ಶಯಾನಭಂಗಿಯವು ಅಪುರೂಪವೇ. ವಿಷ್ಣುವಿನ ಶಯಾನಮೂರ್ತಿಗಳು ಮಾತ್ರ ಇಡೀದೇಶದಲ್ಲಿ ಒಂದು ಕಾಲಕ್ಕೆ ಎಲ್ಲ ದೇಶಗಳಲ್ಲಿಯೂ ಮೂಡಿಬಂದುವು (ಚಿತ್ರ 106). ನೇಪಾಳದಲ್ಲಿಯೂ ಇದು ಜನಪ್ರಿಯವಾದುದು ತಿಳಿದುಬರುತ್ತದೆ. ಇದನ್ನು ಯೋಗನಿದ್ರೆಯೆಂದು ಕರೆದು ಆಧ್ಯಾತ್ಮಿಕ ಅರ್ಥವನ್ನೂ ಹೇಳುತ್ತಾರೆ. ನಾಭಿಯಿಂದ ಬ್ರಹ್ಮ ಹುಟ್ಟಿಕೊಂಡಂತೆಯೂ ಲಕ್ಷ್ಮಿಯು ಕಾಲನ್ನೊತ್ತುತ್ತ ಕುಳಿತಂತೆಯೂ ಚಿತ್ರಿಸಿಕೊಂಡಿರುವ ಈ ಮೂರ್ತಿ ಆದಿಶೇಷನ ಮೇಲೆ ಪವಡಿಸಿರುತ್ತದೆ. ಪರವಾಸುದೇವ ಮೂರ್ತಿ ಸುಖಾಸೀನನಾಗಿ ಕುಳಿತಾಗಲೂ ಆದಿಶೇಷನ ಮೇಲೇ ಕುಳಿತಿರುವುದನ್ನು ನೆನಸಿಕೊಳ್ಳಬಹುದು (ಚಿತ್ರ 107).

ಚಿತ್ರ 102 ಚಿತ್ರ 103
ಪಲ್ಲವ ವಿಷ್ಣುಗಳು
ಎಂಟು ಒಂಬತ್ತನೆಯ ಶತಮಾನದವು

ಚಿತ್ರ 104
ವೆಂಕಟೇಶ-ವಿಷ್ಣು
ಎಂಟನೆಯ ಶತಮಾನದ್ದು

ಚಿತ್ರ 105
ವೆಂಕಟೇಶ-ವಿಷ್ಣು
ಒಂಬತ್ತನೆಯ ಶತಮಾನದ್ದು



ಚಿತ್ರ 106
ಭೋಗಿಶಯನ ಮೂರ್ತಿ
ಮಾಮಲ್ಲಪುರದ ಕಡಲತೀರದ ಗುಡಿಯಲ್ಲಿರುವ ಶಿಲ್ಪ

ಚಿತ್ರ 107
ಆಸೀನ ವಿಷ್ಣು
ಬಾದಾಮಿಯ ಮೂರನೆಯ ಗುಹೆಯಲ್ಲಿದೆ
ಕ್ರಿಸ್ತಾಬ್ದ 578ರಲ್ಲಿ ಸಿದ್ಧವಾದುದು

ಶಿವನಿಗೆ ಬಾಣಲಿಂಗವಿದ್ದಂತೆ ವಿಷ್ಣುವಿಗೆ ಶಾಲಗ್ರಾಮ (ಅಥವಾ ಸಾಲಿಗ್ರಾಮ) ಪೂಜೆಯೂ ಬಳಕೆಯಲ್ಲಿದೆ. ವೈಷ್ಣವರಿಗಂತೂ

ಶಾಲಗ್ರಾಮಶಿಲಾ ಯತ್ರ ತತ್ರ ಸನ್ನಿಹಿತೋ ಹರಿಃ ।
ತತ್ರೈವ ಲಕ್ಷ್ಮೀರ್ವಸತಿ ಸರ್ವತೀರ್ಥಸಮನ್ವಿತಾ ॥

ಎನ್ನುವ ಶ್ರದ್ಧೆ. ದಿನವೂ ಶಾಲಗ್ರಾಮವನ್ನು ಪೂಜಿಸಿ ಅದನ್ನು ತೊಳೆದ ನೀರನ್ನು ತೀರ್ಥವೆಂದು ಸ್ವೀಕರಿಸುವ ಪದ್ಧತಿ ಪ್ರಚಲಿತವಾದುದು. ಅಮ್ಮೋನೈಟ್ ಜಾತಿಗೆ ಸೇರಿದ ಈ ಕರಿ ಬಣ್ಣದ ಕಲ್ಲುಗಳು ನದಿಯ ನೀರಿನಲ್ಲಿ ಸಾವಿರಾರು ವರ್ಷಗಳಿದ್ದು ನುಣುಪಾಗಿ ಹೊಳೆಯುತ್ತಿರುತ್ತವೆ. ಇವು ಸಾಮಾನ್ಯವಾಗಿ ನೇಪಾಳ ರಾಜ್ಯದಲ್ಲಿ ಗಂಗಾನದಿಗೆ ಉಪನದಿಯಾಗಿ ಹರಿಯುವ ಗಂಡಕಿಯಲ್ಲಿ ದೊರೆಯುವುವು. ಪುರಾಣ ಕಥೆಯ ಪ್ರಕಾರ ಗಂಡಕಿಯು (ಅಥವಾ ತುಲಸೀ) ಗೋಲೋಕದಲ್ಲಿ ಕೃಷ್ಣನಿಗೆ ಪ್ರಿಯೆಯಾಗಿದ್ದ ಒಬ್ಬಳು ಗೋಪಿ; ರಾಧೆಯು ಅವಳ ಬಗ್ಗೆ ಅಸೂಯೆಪಟ್ಟು ಮನುಷ್ಯಲೋಕದಲ್ಲಿ ಹುಟ್ಟುವಂತೆ ಶಪಿಸಿದಳು. ರಾಧೆಯಿಂದಲೇ ಗೋಲೋಕದ ಗೋಪನೊಬ್ಬ ಸುದಾಮನೆಂಬುವನು ಆ ಮೊದಲೇ ಶಪ್ತನಾಗಿ ಶಂಖಚೂಡನೆಂಬ ಅಸುರನಾಗಿ ಭೂಮಿಗೆ ಇಳಿದಿದ್ದ. ತುಲಸಿಯು ಧರ್ಮಧ್ವಜ ಮತ್ತು ಮಹಾದೇವಿಯರ ಮಗಳಾಗಿ ಹುಟ್ಟಿ ಬದರಿಕಾಶ್ರಮದಲ್ಲಿ ನಾರಾಯಣನನ್ನು ಕುರಿತು ತಪಸ್ಸು ಮಾಡಿದಳು. ಅನಂತರ ತುಲಸಿಯು ಶಂಖಚೂಡನನ್ನು ಮದುವೆಯಾಗಿ ಒಂದು ಮನ್ವಂತರಕಾಲ ಅವನೊಂದಿಗಿದ್ದಳು. ಶಂಖಚೂಡನು ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಅಭೇದ್ಯವಾದ ಕವಚವನ್ನು ಪಡೆದು ಲೋಕಕಂಟಕನಾದನು. ವಿಷ್ಣುವು ಮಾಯೆಯಿಂದ ಬ್ರಾಹ್ಮಣನಾಗಿ ಬಂದು ಆ ಕವಚವನ್ನು ಯಾಚಿಸಿ ಪಡೆದುಕೊಂಡನಂತರ ಶಿವನು ಶೂಲದಿಂದ ಅಸುರನನ್ನು ಕೊಂದನು. ಈ ಜನ್ಮ ಕಳೆದೊಡನೆ ಅವನು ಗೋಲೋಕಕ್ಕೆ ಹಿಂದಿರುಗಿದನು; ಅವನ ಮೈಮೂಳೆಗಳು ಶಂಖಗಳಾದುವು. ಇಷ್ಟಾದಮೇಲೆ ವಿಷ್ಣು ಶಂಖಚೂಡನಂತೆ ವೇಷ ಮರೆಸಿಕೊಂಡು ಕವಚವನ್ನು ತೊಟ್ಟು ತುಲಸಿಯ ಬಳಿ ಬರಲು ಅವಳು ಮೋಸಹೋದಳು. ಆದರೆ ಗುಟ್ಟು ರಟ್ಟಾದೊಡನೆ ತುಳಸಿಯು ಸಿಟ್ಟಿಗೆದ್ದು ಅವನ ಕಠೋರ ಹೃದಯಕ್ಕಾಗಿ ಕಲ್ಲಾಗೆಂದು ಶಪಿಸಿದಳು. ಅದೇ ಶಾಲಗ್ರಾಮ ಶಿಲೆಯಾಯಿತು; ಎಂದರೆ ವಿಷ್ಣುವಿನ ಮೈ. ತುಳಸಿಯು ಪ್ರಾಣವನ್ನು ನೀಗಿಕೊಂಡೊಡನೆ ಅವಳ ದೇಹವು ಗಂಡಕಿನದಿಯಾಗಿ ಹರಿಯತೊಡಗಿತು; ಅವಳ ತಲೆಗೂದಲು ತುಳಸೀ ಗಿಡವಾಗಿ ಮೈದಳೆಯಿತು. ವಿಷ್ಣು ಶಿಲಾರೂಪದಲ್ಲಿ ಗಂಡಕೀನದಿಯಲ್ಲಿ ಅಡಗಿಕೊಂಡನು.

ವಿಷ್ಣುವಿನ ಪೂಜೆಯನ್ನು ಬರಿಯ ನೆಲದಮೇಲೆ ಮಾಡಬಾರದೆನ್ನುವ ನಿಯಮವಿದೆ; ಶಾಲಗ್ರಾಮ, ಮಣಿ, ಯಂತ್ರ, ಪ್ರತಿಮೆ ಅಥವಾ ಅಕ್ಕಿ ಇವುಗಳಲ್ಲಿ ಮಾಡಬೇಕು (ಶಾಲಗ್ರಾಮೇ ಮಣೌ ಯಂತ್ರೇ ತಂಡುಲೇ ಪ್ರತಿಮಾದಿಷು। ಹರೇಃ ಪೂಜಾ ಪ್ರಕರ್ತವ್ಯಾ ನ ತು ಕೇವಲ ಭೂತಲೇ). ಶಾಲಗ್ರಾಮ ಎನ್ನುವ ಮಾತಿನ ಅರ್ಥ ಅಷ್ಟಾಗಿ ಸ್ಪಷ್ಟವಾಗಿಲ್ಲ. ಶಾಲವೃಕ್ಷಗಳ ಸಮೂಹ ಎಂದು ಕೆಲವರ ಅರ್ಥವಿವರಣೆ; ತುಂಬ ಒಳ್ಳೆಯ ಕಲ್ಲು (ಸಾರಗ್ರಾಮ) ಎಂದು ಇನ್ನೊಂದು ವಿವರಣೆ; ಹುಳುಗಳು (ಅಲಿ, ವಜ್ರಕೀಟ) ಹೆಚ್ಚಿನ ಸಂಖ್ಯೆಯಲ್ಲಿ ಇರುವುದೆಂದು ಪಾಂಚರಾತ್ರಾಗಮದ ವಿವರಣೆ —

ಅಲಯೋ ವಜ್ರಕೀಟಾಃ ಸ್ಯುಃ ತದ್ವೃಂದಂ ಗ್ರಾಮ ಉಚ್ಯತೇ ।
ಅಲಿಗ್ರಾಮ ಸಮೇತತ್ವಾತ್ ಸಾಲಿಗ್ರಾಮಃ ಸ ಉಚ್ಯತೇ ॥

ವಿಷ್ಣುವೇ ಒಮ್ಮೆ ವಜ್ರಕೀಟವಾಗಿ ಭೂಮಿಯ ಮೇಲೆ ವಿಹರಿಸುತ್ತಿದ್ದನೆಂದೂ, ಇದನ್ನು ಕಂಡು ದೇವತೆಗಳೆಲ್ಲ ಬಂಗಾರದ ದುಂಬಿಗಳಾಗಿ ಅವನ ಸುತ್ತ ತಿರುಗಲಾರಂಭಿಸಿದರೆಂದೂ, ಆಗ ವಿಷ್ಣು

ಇದ್ದಕ್ಕಿದ್ದಂತೆ ಬಂಡೆಯಾಗಿಬಿಟ್ಟನೆಂದೂ, ಗರುಡನೇ ಮೊದಲಾದ ದೇವತೆಗಳು ಆ ಬಂಡೆಯ ಡೊಗರಿನೊಳಹೊಕ್ಕರೆಂದೂ ಕಥೆಯು ಈ ವಿವರಣೆಯ ಹಿನ್ನೆಲೆ.

ಶಾಲಗ್ರಾಮದಲ್ಲಿ ಬಾಯಿ (ವದನ) ಎನಿಸಿಕೊಳ್ಳುವ ಭಾಗ ಮುಖ್ಯವಾದುದು: ಇದೇ ಡೊಗರು. ನದಿಯಿಂದ ಎತ್ತಿಕೊಂಡನಂತರ ಸಣ್ಣ ಬಡಿಗೆಯೊಂದರಿಂದ ಅಥವಾ ಕೈಬೆರಳಿನಿಂದ ಶಾಲಗ್ರಾಮವನ್ನು ಬಡಿದರೆ, ಪುಡಿ ಕೆಳಗೆ ಬಿದ್ದು ಡೊಗರು ಕಾಣಿಸಿಕೊಳ್ಳುತ್ತದೆ. ಇದನ್ನು ಬಿಲ, ಛಿದ್ರ ಎಂದೂ ಕರೆಯುತ್ತಾರೆ. ಇದಲ್ಲದೆ ಬಣ್ಣ, ಚಕ್ರಗಳು (ಸರುಳಿಗಳು, ಒಂದರಿಂದ ಹನ್ನೆರಡರವರೆಗೂ ಕೋಶಿಕೆಯಂತೆ ಮಠಾಕಾರವಾಗಿ ಅಥವಾ ಉದ್ದವಾಗಿ ಕೇಸರಾಕಾರವಾಗಿ ಇರುತ್ತವೆ), ಮತ್ತು ಮೂರ್ತಿ (ಎಂದರೆ ಆಕಾರ) ಇವೂ ಮುಖ್ಯವಾದ ವಿವರಗಳು. ಅದರ ಗಾತ್ರ (ಸ್ಥೂಲ ಅಥವಾ ಸೂಕ್ಷ್ಮ), ಪರಿಮಾಣ, ಪ್ರಮಾಣ, ಆಸನ, ಮುದ್ರೆ ಮೊದಲಾದ ಇತರ ವಿವರಗಳೂ ಇರುತ್ತವೆ. ಶಾಲಗ್ರಾಮಗಳ ಪರೀಕ್ಷೆ ಕಷ್ಟವಾದುದು. ಶಾಲಗ್ರಾಮಗಳಲ್ಲಿ ಹಲವಾರು ಬಗೆಗಳಿವೆ. ವದನಗಳನ್ನು ನೋಡಿ, ಸುರುಳಿಗಳನ್ನು ಪರೀಕ್ಷೆಮಾಡಿ ಯಾವ ಶಾಲಗ್ರಾಮವೆಂದು ನಿರ್ಧರಿಸುತ್ತಾರೆ. ವಿಷ್ಣುಮೂರ್ತಿಶಾಲಗ್ರಾಮದಲ್ಲಿ ಮಾಲಾಕಾರವಾದ ಒಂದು ಚಕ್ರವಿದ್ದು ವಿಷ್ಣುವಿನ ಆಯುಧಗಳಾದ ಶಂಖ, ಗದೆ, ಕಮಲಗಳ ಚಿಹ್ನೆಗಳೂ ಇರುತ್ತವೆ. ಶಾಲಗ್ರಾಮ ಗುಂಡಗೆ ಅಥವಾ ಅಂಡಾಕಾರದಲ್ಲಿರುವುದು ವಾಡಿಕೆ; ಆದರೆ ಮತ್ಸ್ಯಮೂರ್ತಿಶಾಲಗ್ರಾಮ ಚಪ್ಪಟೆಯಾಗಿ ಮೀನಿನಾಕಾರ ದಲ್ಲಿರುವುದು ಸ್ವಾರಸ್ಯ. ಇದರಲ್ಲಿ ಬಿಲದೊಳಗೊಂದು ಚಕ್ರ, ಹೊರಗಿನ್ನೊಂದು ಚಕ್ರವಿರುತ್ತದೆ. ಎರಡು ಚಕ್ರಗಳಿರುವುದು ಸಾಮಾನ್ಯ; ಆದರೆ ಲಕ್ಷ್ಮೀನಾರಾಯಣ ಶಾಲಗ್ರಾಮದಲ್ಲಿ ಮೂರು ಚಕ್ರಗಳು; ಇದು ಅಪುರೂಪ. ವದನಗಳೇ ಇರದ ಶಾಲಗ್ರಾಮಗಳೂ ಇರುತ್ತವೆ; ಇವನ್ನು ಉಗ್ರ ಎಂದು ವ್ಯವಹರಿಸುತ್ತಾರೆ. ಸುದರ್ಶನಶಾಲಗ್ರಾಮ ನಿದರ್ಶನ; ಆದರೆ ಹೊರಭಾಗದಲ್ಲಿ ಎರಡು ಚಕ್ರಗಳಿರುತ್ತವೆ. ಚೆಂಡಿನಂತಿರುವ ಇದನ್ನು ಉಗ್ರಚಕ್ರಶಾಲಗ್ರಾಮ ಎಂದೂ ಕರೆಯುತ್ತಾರೆ.

ವಿಷ್ಣುವಿನ ಅವತಾರ ವಿಶೇಷಗಳು, ವ್ಯೂಹಮೂರ್ತಿಗಳು ಇವನ್ನು ಅಧಿಕರಿಸಿ ಶಾಲಗ್ರಾಮಗಳ ವೈವಿಧ್ಯವಿದೆ: ಕೃಷ್ಣಶಾಲಗ್ರಾಮಗಳಲ್ಲಿ ಹದಿನಾರು ಬಗೆ (ಬಾಲ, ಗೋಪಾಲ, ಗೋವರ್ಧನ, ತ್ರೈಲೋಕ್ಯಮೋಹನ, ಸೌಭಾಗ್ಯವರದ, ವಿಜಯ, ಧನಂಜಯ, ಪಾರಿಜಾತಹರ, ಕಾಲಿಯ ಮರ್ದನ ರುಕ್ಮಿಣೀವರದ ಇತ್ಯಾದಿ); ನೃಸಿಂಹಶಾಲಗ್ರಾಮಗಳಲ್ಲಿ ಹದಿಮೂರು ಬಗೆ (ವಿದಾರಣನರಸಿಂಹ, ರಾಕ್ಷಸಾಂತಕನರಸಿಂಹ, ಅಘೋರನರಸಿಂಹ, ಅಧೋಮುಖನರಸಿಂಹ, ಕುಕ್ಷಿನರಸಿಂಹ, ವಿಭೀಷಣ ನರಸಿಂಹ, ವಿವೃತಾಸ್ಯನರಸಿಂಹ, ಕಪಿಲನರಸಿಂಹ, ಲಕ್ಷ್ಮೀನರಸಿಂಹ, ಹಾರನರಸಿಂಹ, ಇತ್ಯಾದಿ); ರಾಮಶಾಲಗ್ರಾಮಗಳಲ್ಲಿ ಹನ್ನೆರಡು ಬಗೆ (ರಾಮಮೂರ್ತಿ, ಸೀತಾರಾಮ, ದಶರಥರಾಮ, ದಶಕಂಠ ಕುಲಾಂತಕ, ವೀರರಾಮ, ವಿಜಯರಾಮ, ಕೋದಂಡರಾಮ, ಹರ್ಷಿತರಾಮ, ಕಲಿನಾಶನರಾಮ, ಪಟ್ಟಾಭಿರಾಮ ಇತ್ಯಾದಿ); ನಾರಾಯಣ ಶಾಲಗ್ರಾಮಗಳಲ್ಲಿ ಒಂಬತ್ತು ಬಗೆ (ಮಹಾನಾರಾಯಣ, ಶ್ಯಾಮಲ ನಾರಾಯಣ, ಲಕ್ಷ್ಮೀನಾರಾಯಣ, ನರನಾರಾಯಣ, ರೂಪನಾರಾಯಣ, ಮಾಯಾನಾರಾಯಣ ಇತ್ಯಾದಿ); ಗೋಪಾಲ ಶಾಲಗ್ರಾಮಗಳಲ್ಲಿ ಆರು ಬಗೆ; ಕೂರ್ಮ, ವರಾಹ (ಶ್ವೇತ ವರಾಹ, ಭೂವರಾಹ, ಲಕ್ಷ್ಮೀವರಾಹ, ಶುದ್ಧವರಾಹ), ಸುದರ್ಶನ (ಮಹಾಸುದರ್ಶನ, ಶುದ್ಧಸುದರ್ಶನ, ಉಭಯಸುದರ್ಶನ, ಸಮಸುದರ್ಶನ) ಶಾಲಗ್ರಾಮಗಳೊಂದೊಂದರಲ್ಲಿಯೂ ನಾಲ್ಕು ಬಗೆಗಳು, ಬಲರಾಮ ಶಾಲಗ್ರಾಮಗಳಲ್ಲಿ ಮೂರು ಬಗೆ: ವಾಮನ (ದಧಿವಾಮನ, ವಾಮನಮೂರ್ತಿ), ಪರಶುರಾಮ (ಶಾಂತ, ಉಗ್ರ), ದಾಮೋದರ, ವಾಸುದೇವ ಶಾಲಗ್ರಾಮಗಳೊಂದೊಂದರಲ್ಲಿಯೂ ಎರಡು ಬಗೆ; ದತ್ತಾತ್ರೇಯ, ಲಕ್ಷ್ಮಿ, ನರ, ತ್ರಿಮೂರ್ತಿ, ಸೂರ್ಯ

ಶಾಲಗ್ರಾಮಗಳಲ್ಲಿ ಒಂದೊಂದು ಬಗೆ. ವಿಷ್ಣುವಿನವು ಮಾತ್ರವಲ್ಲದೆ ಶಿವನ ಶಾಲಗ್ರಾಮಗಳೂ ಇರಿವೆ; ಶಿವ-ವಿಷ್ಣು ಶಾಲಗ್ರಾಮಗಳು ಎರಡಿವೆ; ಗಣೇಶ ಶಾಲಗ್ರಾಮವೊಂದಿದೆ; ಕಾರ್ತವೀರ್ಯಾರ್ಜುನ ಶಾಲಗ್ರಾಮವೂ ಒಂದಿದೆ. ಶಾಲಗ್ರಾಮ ಮೇಲೆ ಕರಿಯಬಣ್ಣವೆಂದು ಕಂಡರೂ ಸೂಕ್ಷ್ಮವಾಗಿ ಪರೀಕ್ಷೆ ಮಾಡಿದರೆ ಹಲವಾರು ಬಣ್ಣಗಳಿರುವುದು ತಿಳಿಯುತ್ತದೆ: ಕೆಂಪುಮಿಶ್ರಕಪ್ಪು (ನರಸಿಂಹಶಾಲಗ್ರಾಮ), ಹಸಿರು (ವಾಮನಶಾಲಗ್ರಾಮ), ಬಿಳಿ (ವಾಸುದೇವಶಾಲಗ್ರಾಮ), ಕೆಂಪು (ಸಂಕರ್ಷಣ ಶಾಲಗ್ರಾಮ); ಕಪ್ಪಿನ ಮೇಲೆ ನಸುಗೆಂಪು (ದಾಮೋದರಶಾಲಗ್ರಾಮ), ಕಪ್ಪು (ಅನಿರುದ್ಧಶಾಲಗ್ರಾಮ), ಹಳದಿ (ನಾರಾಯಣ ಶಾಲಗ್ರಾಮ), ಇವಲ್ಲದೆ ಹಲವಾರು ಬಣ್ಣಗಳು ಮೂಡಿರುವ ಶ್ರೀಧರಶಾಲಗ್ರಾಮ. ಲಕ್ಷ್ಮೀನರಸಿಂಹ ಶಾಲಗ್ರಾಮದ ಮೇಲೆಲ್ಲ ಕಲೆಗಳಿರುತ್ತವೆ; ಮತ್ಸ್ಯಮೂರ್ತಿಶಾಲಗ್ರಾಮದಲ್ಲಿ ಪಾದದಾಕಾರದಲ್ಲಿ ಚುಕ್ಕಿಗಳು ಮೂಡಿರುತ್ತವೆ.

ಶಾಲಗ್ರಾಮದ ಜನಪ್ರೀತಿಯನ್ನೂ ಅಪಾರ ಬೆಲೆಯನ್ನೂ ಕಂಡು ಅದನ್ನು ಕೃತಕವಾಗಿ ತಯಾರಿಸುವುದೂ ಉಂಟು. ಶಾಲಗ್ರಾಮಗಳಿಗೆ ಸಾವಿರಾರು ರೂಪಾಯಿಗಳನ್ನು ಕೊಟ್ಟು ಕೊಳ್ಳುವವರಿದ್ದಾರೆ; ಅಪರೂಪದ ಶಾಲಗ್ರಾಮಗಳಿಗೆ ಲಕ್ಷರೂಪಾಯಿ ಆಗುವುದೂ ಇದೆ. ಆದುದರಿಂದ ಈ ಉದ್ಯಮದಲ್ಲಿ ಮೋಸ ಲಾಭದಾಯಕವೇ. ಗಂಡಕೀನದಿಯಲ್ಲಿ ತೆಗೆದ ಶಿಲೆಗಳನ್ನು ನೇಪಾಳ ರಾಜ್ಯದ ಅಧಿಕಾರಿಗಳು ಪರೀಕ್ಷಿಸಿ ಸರಿಯಾದುವನ್ನು ಮಾತ್ರ ಇರಿಸಿಕೊಂಡು ಉಳಿದುವನ್ನು ಎಸೆದುಬಿಡುತ್ತಾರೆ. ಹೀಗೆ ಎಸೆದುವನ್ನು ಬೈರಾಗಿಗಳು ಎತ್ತಿಕೊಂಡು ಅವುಗಳಲ್ಲಿ ವದನಗಳನ್ನು ಕಂಡರಿಸಿ, ಬಳಪದ ಕಲ್ಲಿನಲ್ಲಿ ಚಕ್ರವನ್ನು ಕೊರೆದು ಅದನ್ನು ಶಿಲೆಯಮೇಲೆ ಅಂಟಿಸುತ್ತಾರೆ. ತಜ್ಞರಲ್ಲದವರಿಗೆ ಯಾವ ಶಾಲಗ್ರಾಮ ಸರಿಯಾದುದು, ಯಾವುದು ಕೃತಕ ಎಂದು ತಿಳಿಯುವುದೇ ಇಲ್ಲ. ಶಾಲಗ್ರಾಮ ಪರೀಕ್ಷೆಗೆ ತುಂಬ ಅನುಭವ ಬೇಕು. ಅಕ್ಕಿಯಲ್ಲಿ ಅಥವಾ ಹಾಲಿನಲ್ಲಿ ಶಾಲಗ್ರಾಮವನ್ನು ಇರಿಸಿದರೆ, ಅದು ಸರಿಯಾದ ಶಾಲಗ್ರಾಮವಾದರೆ ಸ್ವಲ್ಪ ಕಾಲದ ನಂತರ ಅಕ್ಕಿಯ ಅಥವಾ ಹಾಲಿನ ಪ್ರಮಾಣ ಕೊಂಚ ಹೆಚ್ಚುವುದೆಂದೂ, ಅದೇ ಪರೀಕ್ಷೆಯೆಂದೂ ಹೇಳುತ್ತಾರೆ—

ಕ್ಷೀರೇ ವಾ ತಂಡುಲೇ ವಾಽಪಿ ಶಾಲಗ್ರಾಮಂ ನಿವೇಶಯೇತ್ ।
ದೃಷ್ಟ್ವಾಧಿಕ್ಯಂ ತಯೋಃ ಕಿಂಚಿತ್ ಗೃಹ್ಣೀಯಾದ್ಬುದ್ಧಿಮಾನ್ನರಃ ॥

ದೊಡ್ಡ ನೆಲ್ಲೀಕಾಯಿಗಾತ್ರದ ಶಾಲಗ್ರಾಮವೇ ಅತ್ಯುತ್ತಮವಾದುದೆಂದು ಹೇಳುತ್ತಾರೆ; ಕಿತ್ತಳೇಹಣ್ಣಿನ ಗಾತ್ರದ ಶಾಲಗ್ರಾಮಗಳೂ ಇರುತ್ತವೆ. ಶಾಲಗ್ರಾಮದ ಬಂಡೆಗಳೇ ಇರುವುದೂ ಉಂಟು. ಉಡುಪಿಯಲ್ಲಿ ಕೃಷ್ಣನ ಮೂರ್ತಿ, ಬದರಿಯಲ್ಲಿ ನಾರಾಯಣನ ವಿಗ್ರಹ ಮೊದಲಾದುವನ್ನು ಶಾಲಗ್ರಾಮಶಿಲೆಯಲ್ಲಿಯೇ ಕಡೆದುವೆಂದು ಪ್ರತೀತಿ. ಪೂಜೆಗೆ ಇರಿಸಿಕೊಂಡ ಶಾಲಗ್ರಾಮಗಳು ಕಾರಣಾಂತರದಿಂದ ಒಡೆದುಹೋದಾಗ ಅವುಗಳಲ್ಲಿ ಶ್ರೀನಿವಾಸ, ರಾಮ, ಕೃಷ್ಣನ ಸಣ್ಣಸಣ್ಣ ಪುತ್ಥಳಿಗಳನ್ನು ಮಾಡಿ ಪೂಜಿಸುವ ವಾಡಿಕೆಯೂ ಇದೆ. ಬಿಲ, ಚಕ್ರಗಳಿಲ್ಲದ ಶಾಲಗ್ರಾಮ ಪೂಜೆಗೆ ಯೋಗ್ಯವಲ್ಲವೆಂದು ನಂಬಿಕೆಯಿದೆ (ಲಾಂಛನೇನ ವಿನಾ ಯಾ ಸ್ಯಾದಪ್ರಶಸ್ತಾ ತು ಸಾ ಸ್ಮೃತಾ).

ಶಾಲಗ್ರಾಮಕ್ಕೇ ಪ್ರತ್ಯೇಕವಾಗಿ ಪೂಜೆ ನಡೆಯುವುದೂ ವಾಡಿಕೆ. ಹಾಗೆ ಮಾಡುವಾಗ 'ಓಂ ನಮೋ ಭಗವತೇ ವಿಷ್ಣವೇ ಶ್ರೀ ಶಾಲಗ್ರಾಮ ನಿವಾಸಿನೇ ಸರ್ವಾಭೀಷ್ಟಫಲಪ್ರದಾಯ, ಸಕಲದುರಿತನಿವಾರಿಣೇ ಶಾಲಗ್ರಾಮಾಯ ಸ್ವಾಹಾ' ಎಂಬ ಮಂತ್ರವನ್ನೂ ಅದರ ವಿನಿಯೋಗವನ್ನೂ ಬಳಸುತ್ತಾರೆ.

ಗ್ರಾಮದೇವತೆಯರು ಸರ್ವಶಕ್ತಿಯರಾದಾಗ

ಮಾತೃಮರ್ಯಾದೆ

ನಾವು ತಾಯಿಯಿಂದ ಬಂದವರಷ್ಟೆ; ಇಡೀ ಜಗತ್ತೂ ಒಬ್ಬಳು ತಾಯಿಯಿಂದಲೇ ಬಂದುದು ಎಂದು ಮನುಷ್ಯ ಬಗೆದರೆ ಆಶ್ಚರ್ಯವೇನಲ್ಲ, ಅಸಂಬದ್ಧ ಎಂದೂ ಎನಿಸುವುದಿಲ್ಲ. ಪ್ರಪಂಚದ ಎಲ್ಲ ಧರ್ಮಗಳ ಮೊದಲ ಹಂತದಲ್ಲಿ ಈ ಭಾವನೆಯಿದ್ದುದು ಕಂಡುಬರುತ್ತದೆ. ಜಗನ್ಮಾತೆಯ ಕಲ್ಪನೆ ಬರುವ ಮೊದಲು ಸಂಕುಚಿತವಾದ ನೆಲೆಯಲ್ಲಿ ಎಲ್ಲಕ್ಕೂ ಕಾರಣವೆಂಬ ಕಲ್ಪನೆಯಿದ್ದುದೂ ಸಹಜವೇ. ಬುಡಕಟ್ಟಿಗೆ ಸೇರಿದ 'ಎಲ್ಲರ ಅಮ್ಮ' (ಎಲ್ಲಮ್ಮ), ಕಾಣುವ 'ಎಲ್ಲದರ ಅಮ್ಮ' (ಸರ್ವಾಂಬಿಕೆ), ತಾಯಿಯಂತೆ ಎಲ್ಲರನ್ನೂ ಹೊತ್ತು ಕಾಪಿಡುವ ದೈವ, ಭೂಮಿಯಿಂದ ಬೆಳೆಯನ್ನೂ ಮುಗಿಲಿಂದ ಮಳೆಯನ್ನೂ ಹೊರತರುವ ತಾಯಿ, ತಪ್ಪಿದರೆ ಸಿಟ್ಟುಗೊಂಡು ಶಿಕ್ಷಿಸುವ ಮತ್ತು ಮೆಚ್ಚಿದರೆ ಮುದ್ದುಮಾಡುವ ತಾಯಿ. ಈ ಭಾವನೆ ಬೇರೂರಿದುದು ಈ ಮೊದಲ ಹಂತದಲ್ಲಿಯೇ.

ತಾಯಿಯ ಕಲ್ಪನೆಯೊಂದಿಗೆ ಹೆಂಗಳೆಯರ ನಿಗೂಢವಾದ ಶಕ್ತಿ, ಸ್ವಾರಸ್ಯವಾದ ಸ್ವಭಾವ, ಅದ್ಭುತವೆನಿಸುವ ಪ್ರಸವ ಸಾಮರ್ಥ್ಯ, ಮೋಹಕವಾದ ಸ್ವರೂಪ ಇವೆಲ್ಲವೂ ಈ ಹಂತದಲ್ಲಿಯೇ ಸೇರಿಕೊಂಡವು. ಇದಲ್ಲದೆ ಮಾತೃಪ್ರಮುಖವಾದ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀಪಾರಮ್ಯ ಸಹಜವೇ ಅಲ್ಲವೆ? ಜಗತ್ತಿನ ಎಲ್ಲ ಸಮಾಜಗಳೂ ಆರಂಭವಾದುದು ಮಾತೃಪ್ರಮುಖವಾಗಿಯೇ. ಆ ಯುಗದ ಮನುಷ್ಯ 'ತಾಯಿಯ

ಮಗನೇ'; ಬೆಳೆಯುವಾಗ ಅವನ ಪರಿಸರವೆಲ್ಲ ತಾಯಿಯಿಂದ ತುಂಬಿದ್ದಂದೇ. ತಂದೆ ಯಾರೆಂದು ನಿಶ್ಚಯವಿಲ್ಲದಿರುವುದು, ತಂದೆಯಾದವನು ಜನಾಂಗದ ಕರೆಗೆ ಓಗೊಟ್ಟು ಸಮರಕ್ಕೋ ಅಥವಾ ಆಹಾರ ಸಂಚಯಕ್ಕೆಂದು ಕಾಡಿಗೋ ಹಲವಾರು ದಿನಗಳವರೆಗೆ ಮನೆಯಿಂದ ದೂರವಿರುವುದು, ತಂದೆ ಮನೆಯಲ್ಲಿದ್ದರೂ ಆಡಳಿತವೆಲ್ಲ ತಾಯಿಯದೇ ಆಗಿದ್ದುದೂ ಆ ವ್ಯವಸ್ಥೆಯ ವಿವರಗಳೇ. ಮಗುವಿನ ಮನಸ್ಸಿನ ಮೇಲೆ ಮೂಡುತ್ತಿದ್ದುದು ತಾಯಿಯ ಪ್ರಭಾವವೇ.

ಹೆಂಗಸು ಒಲಿದರೇನೋ ಅಭಯೆ, ಅನ್ನಪೂರ್ಣೆ, ಭದ್ರೆ, ಮಂಗಳೆ, ಕಲ್ಯಾಣಿ; ಆದರೆ ಮುನಿದರೆ ಕಾಳಿ, ಭೀಮೆ, ಚಂಡಮುಂಡಿ, ದಂಡಿನಿ, ಉಗ್ರೆ; ಆ ಯುಗದ ನೈತಿಕ ನೆಲೆಯಲ್ಲಿ ಕಾಮಾಕ್ಷಿ, ಕಾಮುಕೆ, ಕಾಮಚಾರಿಣಿ, ಮದೋತ್ಕಟೆ, ರಂಭೆ, ರತಿಪ್ರಿಯೆ, ನಗ್ನಿಕೆ. ಮನುಷ್ಯನ ಆಗುಹೋಗುಗಳಿಗೆಲ್ಲ ಹೆಂಗಸೇ ಕಾರಣ; ಉತ್ಕಾರಿಣಿಯೂ ಅವಳೇ, ಸಂಹಾರಿಣಿಯೂ ಅವಳೇ; ಶುಕ ಹಸ್ತೆಯೂ ಹೌದು, ಸಿಂಹವಾಹಿನಿಯೂ ಹೌದು; ಸುಂದರಿಯೂ ಹೌದು. ಪ್ರಚಂಡೆಯೂ ಹೌದು. ಇವೆಲ್ಲ ನಮ್ಮಲ್ಲಿ ದೇವಿಯ ಹೆಸರುಗಳೇ; ಕಲ್ಪನೆಯ ನೂರು ಮುಖಗಳನ್ನು ಮೂಡಿಸಿಕೊಂಡವು.

ನಮ್ಮ ದೇಶದಲ್ಲಿ ವೈದಿಕ ಸಂಸ್ಕೃತಿಯ ದೇವತೆಗಳು ಬಹುಮಟ್ಟಿಗೆ ಗಂಡಸರು; ಕಾಳಗದಲ್ಲಿ ಪಾಲ್ಗೊಳ್ಳುವವರು, ಕುದುರೆಯನ್ನೇರುವವರು, ಬೇಟೆಯಾಡುವವರು, ನಿಸರ್ಗದ ಕಟ್ಟಳೆಯನ್ನು ಕಾಪಾಡುವವರು. ಇಂದ್ರ, ವರುಣ, ಅಗ್ನಿ, ಸೂರ್ಯ, ವಿಷ್ಣು, ರುದ್ರ ಇವರೊಡನೆ ನಿಂತ ರಾತ್ರಿ, ಅರಣ್ಯಾನೀ, ಸರಸ್ವತಿ, ಶ್ರೀಯರು ಹೇಗೆ ತಾನೆ ಪ್ರಮುಖರಾದಾರು? ಪುರುಷಪ್ರಧಾನವಾದ ಸಮಾಜ ಬೇರೆ ಅವರದ್ದು ! ಆದರೆ ಈ ಕಾಲಕ್ಕೆ ಮೊದಲು ಬೆಳೆದು ಹರಡಿದ್ದ ಸೈಂಧವ ಸಂಸ್ಕೃತಿಯಲ್ಲಿ ಮಾತೃದೇವತೆಯರಿಗೆ ಮರ್ಯಾದೆಯ ಸ್ಥಾನವಿದ್ದಿತು. ಇದರ ಪ್ರಸ್ತಾಪ ಹಿಂದೆಯೇ ಬಂದಿದೆ. ವೈದಿಕ ಸಂಸ್ಕೃತಿ ಬಲಿತು ಬೇರೂರಿದರೂ ಜನರ ಜೀವನಾಡಿಯಲ್ಲಿ ಸೇರಿಹೋಗಿದ್ದ ಈ ಮಾತೃಮರ್ಯಾದೆ ಉಳಿದುಬಂದಿತು; ವೈದಿಕ ಸಮ್ಮತಿಯನ್ನು ಪಡೆಯಿತು, ವೈದಿಕ ದೇವತೆಗಳನ್ನು ವಶಪಡಿಸಿಕೊಂಡಿತು. ಇದಕ್ಕೆ ಕಾರಣ, ಜನಸಾಮಾನ್ಯರ ಸುಪ್ತಚೇತನದ ಅಂತರಾಳಗಳಲ್ಲಿ ಇದರ ಸಾರ್ಥಕತೆಯಿದ್ದುದು. ಇದು ಕಾಲಕಾಲಕ್ಕೆ ತಲೆಯೆತ್ತಿತು; ತಾಯಿತಂದೆಯರಿಬ್ಬರೂ ಅಗತ್ಯವೆಂದು ಸಮನ್ವಯಮಾಡಿದುದನ್ನು ಮಹಾಭಾರತದಲ್ಲಿ (ಅನುಶಾಸನ ಪರ್ವ, 14, 235) ಕಾಣಬಹುದು. ಇಡೀ ಜಗತ್ತು ಎರಡು ಬಗೆಯ ಪ್ರಸಾರಗಳು, ಗಂಡೆಲ್ಲವೂ ಶಿವ, ಹೆಣ್ಣು ಉಮೆ —

ಪುಲ್ಲಿಂಗಂ ಸರ್ವಮೀಶಾನಂ ಸ್ತ್ರೀಲಿಂಗಂ ವಿದ್ಧಿ ಚಾಪ್ಯುಮಾಂ ।
ದ್ವಾಭ್ಯಾಂ ತನುಭ್ಯಾಂ ವ್ಯಾಪ್ತಂ ಹಿ ಚರಾಚರಮಿದಂ ಜಗತ್ ॥

ಸೃಷ್ಟಿಗೆ ತಂದೆಯು ನಿಮಿತ್ತಕಾರಣನೆಂದೂ ತಾಯಿ ಉಪಾದಾನಕಾರಣಳೆಂದೂ ವಾದವೊಂದು ಹೊರಟಿತು. ತಾಯಿಯ ಪಾರಮ್ಯವೇನೋ ಉಳಿಯಿತು.

ಮಾತೃಮರ್ಯಾದೆ ತಾಂತ್ರಿಕ ಅಥವಾ ಶಾಕ್ತ ಸಂಪ್ರದಾಯದ ಮೂಲಾಧಾರ. ಈ ಸಂಪ್ರದಾಯ ವೈದಿಕಯುಗಕ್ಕಿಂತಲೂ ಪ್ರಾಚೀನವೆನ್ನುವುದು ನಿರ್ವಿವಾದ. 'ಜಗತ್ ಶಕ್ತಿಮಯಂ ವಿದ್ಯಾತ್'; 'ಶಕ್ತಿಪ್ರೇರಯಿತಾ ಶಿವಃ' (ಕಾರಣಾಗಮ) ಎನ್ನುವುದು ಈ ಸಂಪ್ರದಾಯದ ಮುಖ್ಯ ನಿಲುವು. ಇದರಲ್ಲಿ ದಕ್ಷಿಣಾಚಾರವೆಂದೂ ವಾಮಾಚಾರವೆಂದೂ ಎರಡು ಕವಲುಗಳು. ಮೊದಲನೆಯದು ಸಾತ್ತ್ವಿಕ, ವೇದಗಳನ್ನವಲಂಬಿಸಿ ನಿಂತ ಪಂಥ; ಪುರಾಣಗಳ ಪ್ರಭಾವ ಹೆಚ್ಚು. ಎರಡನೆಯದು ರಾಜಸ, ವೇದಬಾಹ್ಯವಾದುದೆಂದು ಪ್ರತೀತಿ; ಇದರಲ್ಲಿ ಶಿವನಿಗಿಂತಲೂ ಶಕ್ತಿಗೆ ಪ್ರಾಶಸ್ತ್ಯ ಹೆಚ್ಚು. ಶಕ್ತಿಯೇ ಶಿವನಿಗೂ ಕಾರಣವೆಂದು ಇದರ ನೆಲೆ; 'ಶಕ್ತೀಃ

ಪ್ರಾಧಾನ್ಯಂ ಸರ್ವದಾ ಪರಿಕೀರ್ತಿತಂ'. ಮುಂದೆ 'ಶಿವನು ತಂದೆ, ಶಕ್ತಿಯು ತಾಯಿ' (ಸರ್ವೇಷಾಂ ಜಗತಾಮೇಷಾಂ ಮಾತಾ ಶಕ್ತಿಃ ಪಿತಾ ಶಿವಃ). ವಾಸ್ತವವಾಗಿ ಒಂದೇ ಶೈವೀಶಕ್ತಿ; ಬೆಂಕಿಯಲ್ಲಿ ಕಾವು ಹೇಗೋ ಹಾಗೆ ಶಿವನಲ್ಲಿ ಶಕ್ತಿ ಅವಿನಾಭಾವಿನಿ (ಏಕೈವ ವಸ್ತುತಃ ಶೈವೀಶಕ್ತಿರ್ಯಾ ವಿಮಲಾ ಪರಾ। ಅವಿನಾಭಾವಿನೀ ಶಂಭೋಃ ಶುಚೇರುಷ್ಣತ್ವವದ್ವಿಭೋಃ). ಬೆಂಕಿಯಲ್ಲಿ ಬಿಸಿ ಇದ್ದಂತೆ, ಸೂರ್ಯನ ಕಿರಣಗಳಿದ್ದಂತೆ, ಚಂದ್ರನ ಬೆಳದಿಂಗಳಿದ್ದಂತೆ ಶಿವನಿಗೆ ಶಕ್ತಿ ಸಹಜವಾದುದು (ಶಿವಸ್ಯ ಸಹಜಾ ಶಿವಾ) ಎಂಬ ನಿಲುವು ಬಂದಿತಾದರೂ ಮೊದಲಿಗೆ ಶಕ್ತಿಯ ಪಾರಮ್ಯ ಇದ್ದುದರಲ್ಲಿ ಸಂಶಯವಿಲ್ಲ. ಶಕ್ತಿಯಿಂದಲೇ ಸಂಪ್ರದಾಯ ಶಕ್ತವಾದುದು.

ವೇದಭಾಗಗಳಲ್ಲಿಯೂ ಈ ಸೂಚನೆ ಸ್ಪಷ್ಟವಾಗಿದೆ. ಬಹ್ವೃಚೋಪನಿಷತ್ತಿನಲ್ಲಿ 'ಓಂ ದೇವೀ ಹ್ಯೇಕಾಗ್ರ ಆಸೀತ್, ಸೈವ ಜಗದಂಡಮಸೃಜತ' ಎಂದಿರುವುದನ್ನು ಗಮನಿಸಬೇಕು. ಕೇನೋಪನಿಷತ್ತಿನಲ್ಲಿ ಹೈಮವತೀ–ಉಮೆಯು ಇಂದ್ರನಿಗೇ ಅರಿವು ಮೂಡಿಸಿದ ಪ್ರಸಂಗವಿದೆ (3, 25). ಋಗ್ವೇದದ ರಾತ್ರಿಸೂಕ್ತ, ದೇವೀಸೂಕ್ತಗಳು ಗಮನಾರ್ಹವಾದುವು. ಋಗ್ವೇದದ ರಾತ್ರಿಪರಿಶಿಷ್ಟದಲ್ಲಿ (ಹತ್ತನೆಯ ಮಂಡಲ, 127 ಮುಂದೆ) ದುರ್ಗಾಸ್ತವವಿದೆ. ದುರ್ಗೆಯನ್ನು ನೆನೆಯುವ ಸಂದರ್ಭ ಇಲ್ಲಿದೆ —

> ದುರ್ಗೇಷು ವಿಷಮೇ ಘೋರೇ ಸಂಗ್ರಾಮೇ ರಿಪುಸಂಕಟೇ ।
> ಅಗ್ನಿಚೋರ ನಿಪಾತೇಷು ದುಷ್ಟಗ್ರಹನಿವಾರಣೇ ।
> ದುರ್ಗೇಷು ವಿಷಮೇಷು ತ್ವಾಂ ಸಂಗ್ರಾಮೇಷು ವನೇಷು ಚ ।
> ಮೋಹಯಿತ್ವಾ ಪ್ರಪದ್ಯಂತೇ ತೇಷಾಂ ಮೇ ಅಭಯಂ ಕುರು ॥

ಇತ್ಯಾದಿ. ವಾಜಸನೇಯಿಸಂಹಿತೆ (3, 57) ಮತ್ತು ತೈತ್ತಿರೀಯ ಬ್ರಾಹ್ಮಣ (1, 6, 104) ಗಳಲ್ಲಿ ಅಂಬಿಕೆಯು ರುದ್ರನ ಸೋದರಿಯೆನ್ನುವ ಪ್ರಸ್ತಾಪವೂ, ಆಕೆ 'ಜಗನ್ಮಾತೆ'ಯೆಂಬ ಉಲ್ಲೇಖವೂ ಇವೆ. ತೈತ್ತಿರೀಯ ಆರಣ್ಯಕ (10, 18) ಈಕೆಯನ್ನು ದುರ್ಗೆ, ವೈರೋಚನೀ, ಕಾತ್ಯಾಯನಿ, ಕನ್ಯಾಕುಮಾರಿ, ವರದಾ, ವೇದಮಾತಾ, ಕಾಲಿ, ಕರಾಲಿ ಎಂದು ಸಂಬೋಧಿಸಿದೆ. ಆದರೆ ಈ ಪ್ರಸ್ತಾಪಗಳಲ್ಲಿ ಶಕ್ತಿಯ ಪಾತ್ರ ಸಂಕುಚಿತವೇ.

ಆದರೆ ಮಹಾಭಾರತದಲ್ಲಿ ಬರುವ ದುರ್ಗಾಸ್ತೋತ್ರ (4, 6), ಹರಿವಂಶದಲ್ಲಿ ಬರುವ 'ಆರ್ಯಾಸ್ತವ' (3, 3) ಇವು ಈಕೆಯ ಹಿರಿಮೆಯನ್ನು ಆರ್ಯಸಂಸ್ಕೃತಿಯ ಪರಿಸರದೊಳಗೆ ತಂದುವು. ಆರ್ಯಾಸ್ತವ ಈಕೆಯು ಪೂಜೆಗೊಳ್ಳುತ್ತಿದ್ದ ನೆಲೆಯನ್ನೂ ಸ್ಪಷ್ಟಪಡಿಸಿದೆ –'ಶಬರೈರ್ಬರ್ಬರೈಶ್ಚೈವ ಪುಲಿಂದೈಶ್ಚ ಸುಪೂಜಿತಾ'. ಬೇಟೆಗಾರರು, ಕಿರಾತರು, ಕಾಡುಜನ ಇವರ ದೇವತೆಯೇ ಈಕೆ ಎನ್ನಲು 'ನಗ್ನಶಬರಿ', 'ಪರ್ಣಶಬರಿ' (ಎಲೆಯನ್ನುಟ್ಟ ಬೇಟೆಯವಳು), 'ಅಪರ್ಣಾ' (ಎಲೆಯ ನಡುಬಟ್ಟೆಯೂ ಇಲ್ಲದವಳು), 'ನಗ್ನಿಕಾ' (ಬೆತ್ತಲೆಯಿರುವವಳು), 'ದಂಡಿನೀ' (ಕಟ್ಟಿಗೆ ಹಿಡಿದವಳು), 'ಕಾಮಚಾರಿಣೀ' (ಬೇಕೆಂದೆಡೆ ತಿರುಗುವವಳು), 'ಮಾರ್ಗದಾಯಿನೀ' (ಕಾಡಿನಲ್ಲಿ ದಾರಿ ತೋರಿಸುವವಳು) ಮೊದಲಾದ ಹೆಸರುಗಳು ನೆರವಾಗುತ್ತವೆ. ಮಾರ್ಕಂಡೇಯ ಪುರಾಣದ ಚಂಡೀಪಾಠ (85, 34) ಅಥವಾ 'ಸಪ್ತಶತೀ' (700 ಶ್ಲೋಕಗಳು) ಈಕೆಯ ಆರಾಧನೆಯನ್ನು ವೈದಿಕಪ್ರಭಾವದೊಳಗೇ ಅಡಕಮಾಡಿಬಿಟ್ಟಿತು. ಇಲ್ಲಿ ಈಕೆಯು ಸೌಮ್ಯವಾದ ರೂಪಗಳನ್ನೂ ತುಂಬ ಘೋರವಾದ ರೂಪಗಳನ್ನೂ ತಳೆಯುವಳೆಂಬ ಮಾತಿದೆ; ಇವಳು 'ವಿಶ್ವೇಶ್ವರಿ, ಜಗದ್ಧಾತ್ರಿ, ಸ್ಥಿತಿಸಂಹಾರಕಾರಣೆ'. ಅಷ್ಟು ಮಾತ್ರವಲ್ಲ, ಎಲ್ಲ ವಸ್ತುಗಳಲ್ಲಿಯೂ ಅವುಗಳ ಮುಖ್ಯ ಲಕ್ಷಣವಾಗಿ ಕಾಣಿಸಿಕೊಳ್ಳುವವಳು —

> ಜಲೇ ಶೀತಂ ತಥಾ ವಹ್ನಾವೌಷ್ಣ್ಯಂ ಜ್ಯೋತಿರ್ದಿವಾಕರೇ ।
> ನಿಶಾನಾಥೇ ಹಿಮಂ ಕಾಮಂ ಪ್ರಭವಾಮಿ ಯಥಾ ತಥಾ ॥

ಹೀಗೆ ಪುರಾತನವಾದ ಶಕ್ತಿವಾದವು ಜಾನಪದಪ್ರಿಯವಾಗಿದ್ದುದು ಸಂಭಾವಿತ ಸಮಾಜದಲ್ಲಿಯೂ ಪ್ರವೇಶಮಾಡಿ ತನ್ನ ಪ್ರಭಾವವನ್ನು ಬೀರಿತು. ಆದರೆಜಾನಪದಪ್ರಿಯವಾಗಿದ್ದ ಶಕ್ತಿವಾದದಲ್ಲಿ ಶಕ್ತಿ ಒಬ್ಬಳೇ ಎಂಬ ಎಣಿಕೆಯಿಲ್ಲ. ಶಾಕ್ತರ ನಂಬಿಕೆ 'ಎಲ್ಲ ಹೆಂಗಸರೂ ದೇವತಾಸ್ವರೂಪರು' (ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು); ('ಪ್ರಕೃತೇಃ ಪ್ರತಿವಿಶ್ವೇಷು ದೇವ್ಯಶ್ಚ ಸರ್ವಯೋಷಿತಃ'). ಇದು ನೂರಾರು ಮಾತೃದೇವತೆಯರ ಕಲ್ಪನೆಗೆ ಎಡೆಮಾಡಿಕೊಟ್ಟಿತು. ಆರ್ಯಸಂಸ್ಕೃತಿಯ ಪುರಸ್ಕರ್ತೃವಾದ ಬೋಪದೇವನೇ ಹಲವಾರು ಇಂಥ ಗ್ರಾಮದೇವತೆಯರನ್ನು ಹೆಸರಿಸಿದ್ದಾನೆ: ಸರ್ವಾಂಬಾ (ಎಲ್ಲಮ್ಮ), ಫಲಗೌರಿ, ರೇಣುಕಾ, ಮಾರಿಕಾ, ವೀರಾಂಬಾ, ಭವಾನೀ, ಮೂಕಾಂಬಾ, ತೃಣಾಂಬಾ, ಸಂಗಮೇಶಿ, ಪಶುಮಾತಾ, ಭೇರುಂಡಾ, ಬಗಲಾ, ಶುಕಹಸ್ತಾ, ಮಯೂರೀ, ವಾರುಣೀ, ಸಿಂಹವಾಹಿನಿ, ತುಲಸೀ, ಶಷ್ಕುಲೀ, ವ್ಯಾಘ್ರೇಶೀ, ತಾಟಕೇಶೀ, ಚಾಲಿನೀ, ಶೂರ್ಪಿಕಾ, ಅಂಜನಾ, ಅರ್ಗಲಾಂಬಿಕಾ, ಮಹಾಮುಂಡಾ, ಓಷಧೀಶ್ವರೀ, ಸ್ಫೋಟಾಂಬಾ, ಮುಕ್ತಾಂಬಾ (ದುರ್ವಾಸಪುತ್ರಿ), ನಗ್ನಿಕಾ, ತಾರಾ, ಗಂಗಾ, ಲಕ್ಷ್ಮೀ, ಫುಲ್ಲಲೋಚನಾ, ನಾಗರೂಪಾ, ಜಟೀ, ಮಸೂರಿಕಾಹಿಫೇನಾ, ಪೂತನಾ, ಲಂಕಿಣೀ, ರಾಕ್ಷಸೀ ಇತ್ಯಾದಿ. ಈ ಪಟ್ಟಿಯಲ್ಲಿ ಬಹುಮಂದಿ ಜಾನಪದ ನೆಲೆಯಿಂದಲೇ ಎದ್ದು ಬಂದವರು. ಬೋಪದೇವನು ಇದೇ ಪಟ್ಟಿಯಲ್ಲೇ ಅಡಕಮಾಡಿರುವ ಗಂಡುದೇವತೆಗಳ ಹೆಸರನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ—ರೈಣುಕ, ವೀರ, ಭಿಲ್ಲ, ಕಿರಾತ, ಶ್ವಪತಿ, ಸಿದ್ಧ, ಸಿದ್ಧಪುರುಷ, ಜಲಮೂರ್ತಿ, ಬ್ರಹ್ಮರಾಕ್ಷಸ, ಖಡ್ಗರಾವಣ, ಚಂಡಿಕೇಶ್ವರ, ವಿನಾಯಕ, ಹನುಮಾನ್, ಶಾಸ್ತ, ಭೈರವ, ಕೂಷ್ಮಾಂಡ, ಮುನೀಶ್ವರ (ಜಡೆಮುನಿ), ಜಾಮದಗ್ನ್ಯ, ಮಿಹಿರಸ್ವಾಮಿ ಇತ್ಯಾದಿ. ಶಬರ, ಪುಲಿಂದ ಮೊದಲಾದ ಅನಾರ್ಯ ಪಂಥಗಳು ಮೊಟ್ಟಮೊದಲು ಬೇರೂರಿದ ಪ್ರದೇಶವೆಂದರೆ ವಿಂಧ್ಯಾಪರಿಸರ. ದೇವಿಯನ್ನು 'ವಿಂಧ್ಯವಾಸಿನಿ'ಯೆಂದೇ ನಿರ್ದೇಶಿಸಿರುವುದು ಆಕಸ್ಮಿಕವೇನಲ್ಲ. ಈ ಅನಾರ್ಯ ಜನರ ಮೂಲದೇಶ ಮಧ್ಯ ಏಶಿಯಾ. ಇಲ್ಲಿನ ಪ್ರಭಾವವನ್ನು ದೇವಿಯ ಕಲ್ಪನೆಯಲ್ಲಿ ಕಾಣಬಹುದು. ದೇವಿಯ ಜನ್ಮಸ್ಥಳ ಮೇರುಪರ್ವತದ ಪಶ್ಚಿಮ ಭಾಗದಲ್ಲಿರುವ ಚೋಲ್ ಸರೋವರವೆಂದು ಪ್ರತೀತಿಯಷ್ಟೆ. ಮೇರುಪರ್ವತವೆಂದರೆ ಮಧ್ಯ ಏಶಿಯಾದ ಪಾಮಿರ್ ಬೆಟ್ಟ; ಅದರ ಪಶ್ಚಿಮ ಭಾಗದಲ್ಲಿ ಸೈರ್ ಡಾರಿಯಾ ಮತ್ತು ಅಮು ಡಾರಿಯಾ ಕಣಿವೆಗಳ ನಡುವೆ ಇರುವ ಸರೋವರ ಈಗಲೂ ಅಲ್ಲಿನ ಜನರಿಗೆ 'ಚೋಲ್' ಎಂದೇ ಪ್ರಸಿದ್ಧವಾಗಿದೆ. ದೇವಿಯ ಗಣಗಳಲ್ಲಿ ಸೇರಿದ ಶಾಕಿನಿ ಶಕಜನರ ದೇವತೆ, ಡಾಕಿನಿ ಡಾಗಿಸ್ಥಾನದ ಡಾಗ್ ಜನರ ದೇವತೆಯೆಂದು ತಂತ್ರಸಂಶೋಧನೆಯಲ್ಲಿ ತಜ್ಞರಾದ ಪ್ರಬೋಧಚಂದ್ರ ಬಾಗಚಿಯವರು ನಿರ್ದೇಶಿಸಿದ್ದಾರೆ. ಸುಮಾರು ಆರನೆಯ ಶತಮಾನದಲ್ಲಿ ದೇವೀಪಂಥವು ಪಶ್ಚಿಮ ಭಾರತದಲ್ಲಿ ಹರಡಿದಂತೆ ತೋರುತ್ತದೆ. ಮಹಾಭಾರತದಲ್ಲಿ ದುರ್ಗೆ ಕಾಣಿಸಿಕೊಳ್ಳುವ ವೇಳೆಗೆ ಮೇರುಪರ್ವತದಿಂದ ಆಕೆ ವಿಂಧ್ಯಪರ್ವತಕ್ಕೆ ಬಂದಿದ್ದಳು. ಭೀಷ್ಮಪರ್ವದಲ್ಲಿ ಅರ್ಜುನ ಮಾಡಿದ ದುರ್ಗಾಸ್ತವವೂ ವಿರಾಟಪರ್ವದಲ್ಲಿ ಯುಧಿಷ್ಠಿರ ಮಾಡಿದ ದುರ್ಗಾಸ್ತವವೂ ಈಕೆಯ ಶೌರ್ಯ, ಸಂಗ್ರಾಮಪ್ರಸಕ್ತಿಗಳನ್ನು ಪ್ರಸ್ತಾಪಮಾಡುವುದಲ್ಲದೆ ಆಕೆಯ ತಾಮಸ ಸ್ವಭಾವವನ್ನೇ ತೋರಿಸಿವೆ —

> ವಿಂಧ್ಯೇ ಚೈವ ನಗಶ್ರೇಷ್ಠೇ ತವಸ್ಥಾನಂ ಹಿ ಶಾಶ್ವತಾ ।
> ಕಾಲಿ ಕಾಲಿ ಮಹಾಕಾಲಿ ಸಿಧುಮಾಂಸ ಪಶುಪ್ರಿಯೇ ॥

ಬೋಪದೇವನ ಲೇಖನಿಯಲ್ಲಿ ಹಲವಾರು ದೇಶಭಾಷೆಯ ಹೆಸರುಗಳು ಸಂಸ್ಕೃತದ ರೂಪ ತಳೆದಿರುವುದನ್ನು ಗಮನಿಸಬಹುದು. ದಕ್ಷಿಣದೇಶದ ಹಳ್ಳಿಹಳ್ಳಿಗಳಲ್ಲಿ, ಸರಳವಾಗಿ ಹಳೆಯ ಬಗೆಯಿಂದಲೇ, ಪೂಜೆಗೊಳ್ಳುವ ಗ್ರಾಮದೇವತೆಯರ ಸಂಖ್ಯೆ ವಿಪುಲವಾದುದೇ– ಎಲ್ಲಮ್ಮ, ಅಣ್ಣಮ್ಮ, ಗಂಗಮ್ಮ, ಅಚ್ಚಮ್ಮ,

ಚಿತ್ರ 108
ಕಾಳಿಯ ಶಿಲ್ಪ-ದಕ್ಷಿಣ ದೇಶದ್ದು

ಚಿತ್ರ 109
ಭದ್ರಕಾಳಿ

ಚಿತ್ರ 110
ಮೂಕಾಂಬಿಕೆ



ಚಿತ್ರ 111
ಭಗವತಿ-ಕನ್ಯಾಕುಮಾರಿ

ಅಂಚಮ್ಮ, ಸಿದ್ಧಮ್ಮ, ಬಂಗಾರಮ್ಮ, ಮಾರಮ್ಮ, ಮಲ್ಲಮ್ಮ, ಮಲೆಯಮ್ಮ, ಚಂಗಲಮ್ಮ, ಗಳಗಳಮ್ಮ, ಮುದ್ದಾಲಮ್ಮ, ಪುಟ್ಟಮ್ಮ, ತಿಮ್ಮಮ್ಮ, ಉಡಿಸಲಮ್ಮ, ವೀರಮ್ಮ, ಕುಪ್ಪಮ್ಮ, ಕೊಂಡಮ್ಮ, ಜೋಗುಳಮ್ಮ, ಎಲಗೋಲಮ್ಮ, ನೂಕುಲಮ್ಮ, ಚವುರಮ್ಮ, ಕಿರಾತಮ್ಮ, ಓಲಮ್ಮ, ಮುರುಕಾತ್ತಾಳ್, ಓಮತ್ತಾಳ್, ವಲ್ಲಿಯಮ್ಮಾಳ್, ವಡವುಡ್ಯಮ್ಮನ್, ಪೆದ್ದಾಚಿಯಮ್ಮಾಳ್, ಕುಂಬತ್ತಾಳ್ ಮೊದಲಾದವರು, ಕೇರಳದ ಕಡೆ ತಂಬುರಾಟ್ಟಿ, ಕಂದನ್, ಕಾಲಿ, ಪೋದಿ, ಚಾವುಂಡಿ, ಕುರುಂಬ, ಕೊರ್ರುವೈ ಮೊದಲಾದ ದೇವತೆಗಳೂ ತುಳುನಾಡಿನ ದುರ್ಗಿ, ಕಾಳರಾತ್ರಿ, ಧೂಮಾವತಿ, ಗೆಜ್ಜೆಮಲ್ಲೆ, ಕಲ್ಲುರ್ಟಿ, ಮಮ್ಮಾಯಿ, ಮುಕ್ಕಂಬೆ, ಚಾವುಂಡಿ, ಲೆಕ್ಕೇಸಿರಿ, ಉಳ್ಳಾಳ್ತಿ ಮೊದಲಾದ ಹೆಣ್ಣು ದೈವಗಳೂ ಇದೇ ಗುಂಪಿಗೆ ಸೇರುತ್ತಾರೆ. ಈ ದೇವತೆಗಳ ಗುಡಿಗಳು ಆಭೀರಶಿಬಿರಗಳಲ್ಲಿ, ಕಿರಾತಪಲ್ಲಿಕೆಗಳಲ್ಲಿ (ಎಂದರೆ ಕಾಡುಜನರ ನೆಲೆಗಳಲ್ಲಿ), ಪೂಗಶ್ರೇಣಿಗಳಲ್ಲಿ (ಜಾತಿಗೆಟ್ಟವರ ಕೇರಿಗಳಲ್ಲಿ), ಬೇಸಾಂಘುಗಾರರ ವಸತಿಗಳಲ್ಲಿ, ಹಳ್ಳಿಗಳಲ್ಲಿ, ಹಳ್ಳಿಗಳ ಹೊಲಗೇರಿ (ಗ್ರಾಮಚಂಡಾಲವಾಟಿ) ಗಳಲ್ಲಿ, ಬಡಗಿಗಳ ಅಂಗಡಿ (ತ್ವಷ್ಟ್ರಾವಾಸ)ಗಳಲ್ಲಿ, ಅಂಗಡಿಬೀದಿ (ವಣಿಕ್ಪಥ)ಗಳಲ್ಲಿ, ಊರಿನ ರಸ್ತೆ (ಪದ್ಧತಿ)ಗಳಲ್ಲಿ ಇರುತ್ತಿದ್ದುವೆಂದು ಸ್ಮೃತಿಪುರಾಣಸಮುಚ್ಚಯ ನಿರ್ದೇಶಿಸುತ್ತದೆ. 'ಆಗಮಸ್ಮೃತಿಸಾರ'ದಲ್ಲಿ ಬ್ರಾಹ್ಮಣರಿಗೆ ಶಿವನು ದೇವರು, ಕ್ಷತ್ರಿಯರಿಗೆ ವಿಷ್ಣು, ವೈಶ್ಯರಿಗೆ ಬ್ರಹ್ಮ, ಶೂದ್ರರಿಗೆ ಗ್ರಾಮದೇವತೆಯರು —

> ಬ್ರಾಹ್ಮಣಾನಾಂ ಶಿವೋ ದೇವಃ ಕ್ಷತ್ರಿಯಾಣಾಂ ತು ಮಾಧವಃ
> ವೈಶ್ಯಾನಾಂ ತು ಭವೇದ್ ಬ್ರಹ್ಮಾ ಶೂದ್ರಾಣಾಂ ಗ್ರಾಮದೇವತಾಃ ॥

ಎನ್ನುವ ಮಾತಿದೆ; ಹಳ್ಳಿಗಳಲ್ಲಿ ಮಾತ್ರವಲ್ಲದೆ ಪಟ್ಟಣಗಳಲ್ಲಿಯೂ ಗ್ರಾಮದೇವತೆಗಳಿಗೆ ಪೂಜೆ ನಡೆಯುತ್ತಿದ್ದಿತು (ಪೂಜಿತಾ ಗ್ರಾಮದೇವ್ಯಶ್ಚ ಗ್ರಾಮೇ ಚ ನಗರೇ ಮುನೇ).

ಈ ಗ್ರಾಮದೇವತೆಯರ ಉಗಮ ಹೇಗಾಯಿತು, ಅವರ ಹಿನ್ನೆಲೆಯೇನು ಎನ್ನುವುದು ಹಳ್ಳಿಗಳ ಕಡೆ ಬಳಕೆಯಲ್ಲಿರುವ ಜಾನಪದ ಕಥೆಗಳಿಂದಲೂ ಹಾಡುಗಳಿಂದಲೂ ಅಷ್ಟಿಷ್ಟು ಸ್ಪಷ್ಟವಾಗುತ್ತದೆ. ಊರಿಗೆ ನೆರವಾದ, ಹಗೆಗಳಿಗೆ ಮಾರಿಯಾದ, ಬೇರೆ ಯಾರಿಗೂ ಇರದ ಗುಣಗಳನ್ನು ಪಡೆದ, ಸುಳಿವಿಲ್ಲದೆ ಮರೆಯಾದ, ಅಳುಕದೆ ತನ್ನನ್ನು ತಾನೇ ಬಲಿಕೊಟ್ಟುಕೊಂಡ ಹೆಂಗಳೆಯರು ಗ್ರಾಮದೇವತೆಗಳಾಗಿ ಮೈದಳೆದುದುಂಟು. ಪತಿವ್ರತೆಯರು, ಸತಿಯರು, ತಪ್ಪುಮಾಡಿ ಶಿಕ್ಷೆಗೊಳಗಾದವರು, ಸೇಡಿಗಾಗಿ ಆತ್ಮಹತ್ಯೆ ಮಾಡಿಕೊಂಡವರು, ಅಪಘಾತಕ್ಕೆ ತುತ್ತಾದವರು, ವಿಚಿತ್ರವಾದ ಬೇನೆಗೊಳಗಾದವರು ಇಂಥವರೂ ಈ ದೇವತಾ ಯೋಗವನ್ನು ಪಡೆದ ನಿದರ್ಶನಗಳಿವೆ. ಮಕ್ಕಳನ್ನು ಕಬಳಿಸುವ ಪೂತನೆ, ಕಾಡಿಸುವ ಶಾಕಿನಿ–ಡಾಕಿನಿಯರು, ಬೆದರಿಸುವ ಶಬರಿ–ಕಿರಾತೆಯರು, ರೋಗ ರುಜಿನೆಗಳನ್ನೊದಗಿಸಿ ಬವಣೆಪಡಿಸುವ ಮಾರಿ–ಮಸಣಿಯರು, ಮನಸ್ಸನ್ನು ಸೆಳೆದು ತೊಂದರೆಗೀಡುಮಾಡುವ ಮೋಹಿನಿ–ಮಾತಂಗಿ–ಚಂಡಾಲಿ–ಲಂಖಿನಿಯರು ದಿಟವಾಗಿ ಹೆಂಗಸರಾಗಿರದೆ ಕಲ್ಪನೆಯ ನೆರಳಿನಲ್ಲಿಯೇ ಬೆಳೆದುಬಂದವರು. ಮೈಮರೆಸುವ, ಮನಸ್ಸನ್ನು ಹಗುರಗೊಳಿಸುವ ಹೆಂಡವನ್ನೂ ದೇವತೆಯೆಂದೇ ಬಗೆದು ಸುರಭಾಂಡೇಶ್ವರಿಯೆಂದು ಕರೆದು, ಹೆಂಡದ ಗಡಿಗೆಯೇ ಆಕೆಯ ನಿವಾಸಸ್ಥಾನವೆಂದು ಬಗೆದುದುಂಟು.

ಹಳ್ಳಿಯವರು ಇಡೀ ಹಳ್ಳಿಯ ಹಿತಕ್ಕಾಗಿ (ಗ್ರಾಮೀಣಾಃ ಸ್ವೇಷಾಂ ಸಮುಷ್ಟಿಕ್ಷೇಮಾಯ) ಹಳ್ಳಿಯೊಳಗೆ ಅಥವಾ ಹಳ್ಳಿಯ ಹೊರಗೆ ಇಂಥ ದೇವತೆಯರಿಗೆ ಸಣ್ಣ ಸಣ್ಣ ಗುಡಿಗಳನ್ನು ಕಟ್ಟುವುದನ್ನು ಸ್ಮೃತಿಗ್ರಂಥಗಳೂ ಗಮನಿಸಿವೆ; ಈ ದೇವತೆಯರನ್ನು ಗ್ರಾಮಶಕ್ತಿಗಳೆಂದು ಕರೆದಿವೆ. ವೈಷ್ಣವಪ್ರಭಾವ

ಹೆಚ್ಚಿದರೆ ಗ್ರಾಮಮಧ್ಯದಲ್ಲಿ, ಶಾಕ್ತರಿದ್ದರೆ ಗ್ರಾಮದ ಹೊರಗೆ, ಕಾಪಾಲಿಕರಿದ್ದರೆ ಶ್ಮಶಾನದಲ್ಲಿ, ಗಾಣಪತ್ಯರಾದರೆ ಬಾಗಿಲ ಬಳಿ ಅಥವಾ ಕಂಬದ ಪಕ್ಕದಲ್ಲಿ, ಇತರರಾದರೆ ಅಂಗಡಿಬೀದಿಯಲ್ಲಿ (ಪಣ್ಯವೀಥ್ಯಾಂ), ಕೆರೆಯ ಪಕ್ಕದಲ್ಲಿ, ಹಳ್ಳಿಯ ಪಕ್ಕದ ಕಾಡಿನಲ್ಲಿ, ಕಲ್ಲಿನಿಂದ, ಮರದಿಂದ, ಮಣ್ಣಿನಿಂದ ಮಾಡಿದ ಗುಡಿಗಳಲ್ಲಿ (ಪಾಷಾಣದಾರುಮೃಣ್ಮಯಾಯತನೇಷು) ಗ್ರಾಮದೇವತಾ ಪ್ರತಿಷ್ಠೆ ಮಾಡಬೇಕೆಂಬ ವಿಧಿಯನ್ನೂ ಸ್ಮೃತಿಗ್ರಂಥಗಳು ಹೇಳುತ್ತವೆ. ಎಂದರೆ ಸಂಭಾವಿತರೆನಿಸಿಕೊಂಡ ವರ್ಗದವರೂ ಈ ಗ್ರಾಮಶಕ್ತಿಯರ ಪೂಜೆ ವಿಹಿತವಾದುದೆಂದು ಅಂಗೀಕರಿಸಿದ್ದರು: ತಮ್ಮೆಲ್ಲ ದೇವರುಗಳ ಅಂಶದಿಂದಲೇ ಉಂಟಾದವರೆಂದು ಸಮಾಧಾನ ಪಟ್ಟುಕೊಂಡರು. ದೇವೀಯಾಮಳದಲ್ಲಿ —

> ಇಂದ್ರಾಣೀ ಪ್ರಮುಖಾ ದೇವ್ಯಃ ಸರ್ವದೇವಾಂಶ ಸಂಭವಾಃ ।
> ಶಕ್ತಯಸ್ತತ್ರ ತತ್ರ ಪೂಜ್ಯಂತೇ ನಾನಾರೂಪಾಃ ಕಲೌ ಯುಗೇ ॥

ಎಂದು ಹೇಳಿರುವುದನ್ನು ಗಮನಿಸಬೇಕು.

ಸುಸಂಸ್ಕೃತರು ದೇವಿ, ಅಂಬಾ, ಶಕ್ತಿ ಎಂದು ಬಗೆದು ತಮ್ಮ ಪೂಜಾಪದ್ಧತಿಯಲ್ಲಿ ಈಕೆಗೆ ಅವಕಾಶ ಒದಗಿಸಿಕೊಟ್ಟರು; ಆದರೆ ಇದರ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಗ್ರಾಮಶಕ್ತಿಯರ ಪಾತ್ರ ಹಿರಿದು. 'ಅಂಬಾ' (ತಾಯಿ) ಎನ್ನುವ ಸಂಸ್ಕೃತದ ಮಾತು ಗೌಡ ದ್ರಾವಿಡ ಪದವಾದ 'ಅಮ್ಮ' ಎನ್ನುವುದರಿಂದಲೇ ಬಂದಿತೆಂದು ತಜ್ಞರು ಹೇಳುತ್ತಾರೆ. ದಕ್ಷಿಣದೇಶದಲ್ಲಿ ಈಕೆಯನ್ನು ತಾಯಿ, ತಾಯ್, ಆಮ್ಮ, ಅಮ್ಮ, ಆಯಿ, ಕಾತ್ತಾಯಿ (ಕಾಪಿಡುವ ತಾಯಿ), ನಲ್ಲಾತ್ತಾಳ್ (ಒಳ್ಳೆಯ ದೇವತೆ), ಚೆಲ್ಲಾಯಿ (ನೀತಿಯ ತಾಯಿ) ಕಂಜಿಯಮ್ಮನ್ (ಆಸರೆ ನೀಡುವವಳು), ಚೇಮಾತ್ತೇ (ಶುಭವನ್ನು ಕೊಡುವ ತಾಯಿ), ಚಿನ್ನಮ್ಮ ಅಥವಾ ತಾಯಿಲಾಳಮ್ಮನ್ ಅಥವಾ ಬಾಲಾಂಬಾ (ಸಣ್ಣತಾಯಿ), ಕುಳುಂತಿಯಮ್ಮನ್ (ಶೀತಳೆ, ತಂಪನ್ನು ತರುವವಳು), ಊರಮ್ಮ ಅಥವಾ ಊತುಕ್ಕಾಟ್ಟಮ್ಮನ್ (ಊರನ್ನು ಕಾಪಾಡುವವಳು), ಮಣ್ಣಮ್ಮ ಅಥವಾ ಮಂಟಮ್ಮ (ಭೂಮಿಯನ್ನು ರಕ್ಷಿಸುವವಳು) ಎಂದು ಮೊದಲಾಗಿ ನಿರ್ದೇಶಿಸುತ್ತಾರೆ. ಈಕೆಯ ಲಾಂಛನಗಳಲ್ಲಿ ಕೆಲವು ಪ್ರಾಣಿಗಳೂ ಮರಗಳೂ ಸೇರುವುದುಂಟು. ಕೋಲಾರದ ಕೋಲಾರಮ್ಮನಿಗೂ ಚೇಳಿಗೂ ಇರುವ ಸಂಬಂಧ ಪ್ರಸಿದ್ಧವಾದುದಲ್ಲವೆ? ಈಗ ಗರ್ಭಗುಡಿಯಲ್ಲಿರುವ ದೇವತೆ ಅಷ್ಟಭುಜದ ಮಹಿಷಮರ್ದಿನಿಯೇ ಕೋಲಾರಮ್ಮನೆನಿಸಿಕೊಳ್ಳುತ್ತಾಳೆ. ಆದರೆ ದಿಟವಾದ ಗ್ರಾಮದೇವತೆ ಪಕ್ಕದ ಕೋಣೆಯಲ್ಲಿರುವ ಆರಡಿ ಎತ್ತರದ ಮೂಕನಂಚಾರಮ್ಮ. ಈಕೆಯ ಪಾದಪೀಠದಡಿಯಿಂದ ಪ್ರತಿವರ್ಷವೂ ವೈಶಾಖಮಾಸದ ಶುಕ್ಲ ಪಂಚಮಿಯಂದು ಚೇಳು ಹೊರಬಂದು ಅರ್ಧಗಂಟೆ ಹೊರಗಿದ್ದು ಅನಂತರ ಮತ್ತೆ ಮರೆಯಾಗುವುದೆಂದು ಪ್ರತೀತಿಯಿದೆ. ಹೀಗೆ ಕೋಲಾರಮ್ಮ ವೃಶ್ಚಿಕೇಶ್ವರಿ. ಹಾಗೆಯೇ ಪುತ್ತೂರಿನ ಪುತ್ತಾಲಮ್ಮನಿಗೂ ಹಾವಿನ ಹುತ್ತಕ್ಕೂ ನೆಂಟು; ಪೀಠಾಪುರದ ಕುಕ್ಕುಟಾಂಬಿಕೆ ಕೋಳಿಯ ಸಂಬಂಧವಿರುವವಳು. ಎಕ್ಕದ ಗಿಡದಿಂದ ಯಕ್ಕಮ್ಮ ಅಥವಾ ಯಕ್ಕಲಾದೇವಿ (ಅರ್ಕೇಶ್ವರಿ), ತಾಳೆಮರದದಿಂದ ಪನ್ನೈವೇರಿಯಮ್ಮ (ತಾಳವಾಸಿನೀ). ಹುಣಸೇಮರಕ್ಕೂ ಮಾರಿಯಮ್ಮನಿಗೂ ಸಂಬಂಧ: ಶಮೀವೃಕ್ಷದೇವತೆಯಂತೂ ಎಲ್ಲರಿಗೂ ತಿಳಿದವಳೇ —ಪಾಪಶಮನಿ, ಶತ್ರುಸಂಹಾರಿಣಿ.

ಗ್ರಾಮಶಕ್ತಿಯರ ಗೌರವ

ಈ ಗ್ರಾಮದೇವತೆಗಳು ಮುಖ್ಯವಾಗಿ ರೋಗರುಜಿನೆಗಳನ್ನು ತಂದೊಡ್ಡುವವರೆಂದೂ ಹೋಗಲಾಡಿಸುವವರೆಂದೂ ಪ್ರಸಿದ್ಧರು. ಪೋಲೇರಮ್ಮ (ಪ್ಲೇಗು), ಶೀತಲಾ (ಸಿಡುಬು, ದೊಡ್ಡಮ್ಮ),

ಮಾತಂಗಿ (ಆನೆಕಾಲುರೋಗ), ಘಂಟಿಕು (ಕಜ್ಜಿ, ತುರಿ ಮೊದಲಾದ ಚರ್ಮವ್ಯಾಧಿಗಳು), ಮಾರಿಯಮ್ಮ (ಎಲ್ಲ ಕಾಹಿಲೆಗಳೂ, ಸಾವು) ಮೊದಲಾದವರು ರೋಗಾದಿಗಳ ಸಂದರ್ಭದಲ್ಲಿ ವಿಶೇಷವಾಗಿ ಪೂಜೆಗೊಳ್ಳುತ್ತಾರೆ. ತಂಪುಮಾಡುವ ಮೊಸರನ್ನ, ಬೇವಿನಸೊಪ್ಪು ಮೊದಲಾದುವುಗಳನ್ನು ದೇವಿಗೆ ಅರ್ಪಿಸುವ ವಾಡಿಕೆಯಿದೆ. ಈ ದೇವತೆಗಳಲ್ಲಿ ಮುಖ್ಯಳಾದವಳು ಮಾರಿಯಮ್ಮ. ಇವಳ ಗುಡಿಗಳನ್ನು ದಕ್ಷಿಣ ದೇಶದಲ್ಲಿ ಎಲ್ಲೆಲ್ಲಿಯೂ ಕಾಣಬಹುದು. ತಿರುಚಿರಪಳ್ಳಿಯ ಕಣ್ಣನೂರಿನ ಗುಡಿ, ತಂಜಾವೂರಿನ ಮಾರಿಯಮ್ಮನ್ ಕೋಯಿಲ್, ತಿನ್ನವೆಲ್ಲಿಯ ಕೊರಂಗಿನಿಯಮ್ಮನ್ ಕೋಯಿಲ್ ಮೊದಲಾದುವು ಪ್ರಸಿದ್ಧವಾದುವು. ಈಕೆಯನ್ನು ಅಲಮೇಲುಮಂಗ್ಯ, ಯಕ್ಕಲದೇವಿ, ಪೂಜಕ್ಕುರಟ್ಟಿ (ಕೊರವ ಹೆಂಗಸರ ದೇವತೆ), ಶೀತಳಾದೇವಿ, ಮಣಿಮಂತ್ರಶೇಖರಿ, ಮಾರಿಮುತ್ತು, ಮುತ್ಯಾಲಮ್ಮ, ಮುತ್ತುಮಾರಿಯಮ್ಮ, ನಲ್ಲಮುತ್ತು (ಹೆಸರಿನಲ್ಲಿ ಮುತ್ತು ಸೇರಿರುವ ಧ್ವನಿ ಮೈಮೇಲೆ ಕೆಂಪಗೆ ಮುತ್ತಿನಂತೆ ಗುಳ್ಳೆಗಳೇಳುವುದು), ಮಹಾಮಾಯಿ, ಪೆದ್ದಮ್ಮ, ಆದಿಶಿವದೇವಿ, ಅಮ್ಮಣಿ ಮುಂತಾದ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಆಕೆಯ ಪರಿವಾರ ದೇವತೆಗಳಲ್ಲಿ ಗಣಪತಿ, ಸ್ಕಂದ, ಪಾರ್ವತಿ, ಕಾಳಿ, ದುರ್ಗೆ, ವಿಷ್ಣು, ಭೂದೇವಿ–ಶ್ರೀದೇವಿಯರು, ದೇವಯಾನಿ–ವಲ್ಲಿಯರು, ದುಂದುಭಿಯೆಂಬ ಅಸುರ, ಮಗನಾದ ಪಾಪಾಡೆರಾಯ, ಪೀಡಾರಿಗಳು, ಸೇವಕರಾದ ಮುತ್ಯಾಲು ಮತ್ತು ರಾವುತ ಇವರಿರುತ್ತಾರೆ. ತಮಿಳು ದೇಶದಲ್ಲಿ ಏಳುಮುನಿ, ಜಪಮುನಿ, ಕರುಪ್ಪನ್, ನಲ್ಲತಂಗಾಳ್, ವೀರತಂಗಾಳ್, ಶೆಂಕೋಡಿಯಮ್ಮಾಳ್ ಮೊದಲಾದ ಹಲವಾರು ಇತರ ಗ್ರಾಮದೇವತೆಯರನ್ನೂ ಮಾರಿಯಮ್ಮನೊಂದಿಗೆ ಸೇರಿಸುವುದುಂಟು. ಆ ಕಡೆ ಮಾರಿಗಿಂತಲೂ ಹೆಚ್ಚು ಭಯಾನಕನಾದ ದೇವತೆ ಆಕೆಯ ಬಂಟ ಕಾತ್ತಾನ್.

ಬೇವಿನ ಮರದಲ್ಲಿಯೇ ಆಕೆಯ ವಾಸವೆಂದೂ, ಬೇವಿನೆಲೆಗಳ ಮೇಲೆ ಮಲಗಿ ಹಾವಿನ ಮೇಲೆ ತಲೆಯಿಟ್ಟು ಮಲಗುವಳೆಂದು ಜನರ ನಂಬಿಕೆ. ಆಕೆಯ ಪ್ರತಿಮೆಯನ್ನೂ ರಥವನ್ನೂ ಈ ಮರದಿಂದಲೇ ಮಾಡುವ ವಾಡಿಕೆಯಿದೆ. ಬೇವಿನೆಲೆಗಳಿಂದಲೇ ಆಕೆ ರೋಗಗಳನ್ನು ಗುಣಪಡಿಸುವಳೆಂದೂ ನಂಬಿ ಬೇವಿನ ಮರದ ಟೊಂಗೆಗಳನ್ನು ಸುಟ್ಟು ಅದರ ಬೂದಿಯನ್ನು ಮಾರಿಯ ಪ್ರಸಾದವೆಂದು ಕೊಡುತ್ತಾರೆ. ಈ ದೇವತೆಯನ್ನು ತೃಪ್ತಿಪಡಿಸಲು ಪಶುಬಲಿ, ಬೆನ್ನುಸೀಡಿ (ತಮಿಳಿನಲ್ಲಿ ಶೇಡಿಲ್) ತಿರುಗುವುದು, ಹೊಂಡ ಹಾಯುವುದು, ಸಿಡುಬಿಗೆ ಮೀಸಲು ತೆಗೆದಿಡುವುದು ಮೊದಲಾದ ಪ್ರಾಚೀನ ವಿಧಿಗಳನ್ನು ಭಕ್ತರು ನಡೆಸುತ್ತಾರೆ.

ಮಾರಿಯಮ್ಮನಂತೆಯೇ ಪೀಡಾರಿಯೂ ವಿಶೇಷವಾಗಿ ಜನಪ್ರಿಯಳಾದ ಗ್ರಾಮದೇವತೆ. ಈಕೆಯ ಗುಡಿಗಳನ್ನೂ ಹಳ್ಳಿಹಳ್ಳಿಗಳಲ್ಲಿ ಕಾಣಬಹುದು. ಶಿವನಂತೆ ಮುಕ್ಕಣ್ಣೆ ಈಕೆ; ತಲೆಗೂದಲನ್ನು ಉರಿಯುವ ಬೆಂಕಿಯಂತೆ ಅಳವಡಿಸಿರುತ್ತಾರೆ. ನಾಲ್ಕು ಕೈಗಳಲ್ಲಿ ನಾಗಡಮರು, ತ್ರಿಶೂಲ, ಅಂಕುಶ ಮತ್ತು ಬ್ರಹ್ಮಕಪಾಲಗಳನ್ನು ಹಿಡಿದು ಸಿಂಹಾಸನದ ಮೇಲೆ ಕುಳಿತಿರುವಂತೆ ಈಕೆಯ ಮೂರ್ತಿಗಳಿರುತ್ತವೆ. ಮಾರಿಯಮ್ಮನಿಗಿದ್ದಂತೆ ಈಕೆಗೆ ಪಾರ್ಶ್ವದೇವತೆಗಳಿರುವುದಿಲ್ಲ. ಕ್ಷಾಮ, ಅನಾವೃಷ್ಟಿ, ಬೆಳೆಗೆ ತಗಲುವ ರೋಗ, ಸಾಂಕ್ರಾಮಿಕ ಜಾಡ್ಯಗಳು ಇಂಥ ಸಂದರ್ಭಗಳಲ್ಲಿ ಪೀಡಾರಿಯು ಪೂಜೆಗೊಳ್ಳುತ್ತಾಳೆ. ಈಕೆಯ ದೇವಾಲಯದಲ್ಲಿಯೂ ಕೋಣ–ಎತ್ತುಗಳ ಬಲಿ, ಕೆಂಡದ ಮೇಲೆ ನಡೆಯುವುದು, ಕರಗ ಹೊರುವುದು ಮೊದಲಾದ ವಿಧಿಗಳು ಜರಗುತ್ತವೆ. ಈಕೆಯ ಗುಡಿಯ ಮುಂದೆ ಬೇವಿನ ಮರವಿರುವುದು ವಾಡಿಕೆ. ಈಕೆಯನ್ನು ಉದ್ದಂಡಕಾಳಿಯೆಂದೂ ಕರೆಯುವುದಿದೆ.

ಗ್ರಾಮದೇವತೆಗಳಲ್ಲೆಲ್ಲ ತುಂಬ ಸ್ವಾರಸ್ಯವಾದ ವ್ಯಕ್ತಿತ್ವವೆಂದರೆ ಎಲ್ಲಮ್ಮನದು. ಈಕೆಯ ಪ್ರಾಚೀನತೆಯ ಬಗ್ಗೆ ಸಂಶಯಪಡುವಂತೆಯೇ ಇಲ್ಲ. ಕನ್ನಡನಾಡಿನಲ್ಲಿ ಆಂಧ್ರಪ್ರದೇಶದಲ್ಲಿ ಮತ್ತು ತಮಿಳುನಾಡಿನಲ್ಲಿ ಈಕೆಯ ಪೂಜೆ ಹೆಚ್ಚು; ಗುಡ್ಡದ ದೇವತೆಯೆಂದು ಈ ದೇವತೆಯ ಪ್ರಸಿದ್ಧಿ. 'ನವಶಕ್ತಿ'ಯರಲ್ಲಿ ಈಕೆ ಆದಿಶಕ್ತಿ; ಇತರರು ಮಾರಿಯಮ್ಮ, ಅಂಕಾಲಮ್ಮ, ಪೀಡಾರಿ, ಭದ್ರಕಾಳಿ, ದುರ್ಗೆ, ಚಾಮುಂಡಿ, ಮತ್ತು ಶಾಸ್ತನ ಮಡದಿಯರಾದ ಪೂರ್ಣಾ–ಪುಷ್ಕಲಾ. ಈಕೆಯನ್ನು ಬೋಪದೇವ ಸರ್ವಾಂಬಿಕೆಯೆಂದು ಹೆಸರಿಸಿದ್ದಾನೆ. ಈಕೆಯ ವಿಚಾರವಾಗಿ ಹಲವಾರು ಕಡೆ ಹಲವಾರು ಕಥೆಗಳು ಪ್ರಚಲಿತವಾಗಿವೆ. ತೆಲುಗು ದೇಶದಲ್ಲಿ ಈಕೆ ಆದಿಜಾಂಬುವನೆಂಬ ಮುನಿಯ ಮಂತ್ರಗಳಿಂದ ಹುಟ್ಟಿದವಳು; ಈ ಆದಿಜಾಂಬುವ ಕಲಿಯುಗ ಆರಂಭವಾಗಲು ಆರುತಿಂಗಳು ಮೊದಲಿದ್ದವನು. ಭೂಮಿಯಿಂದಲೇ ಮೈದಳೆದ ಈ ದೇವತೆ ಹುಟ್ಟಿದ ಒಂಬತ್ತು ಗಂಟೆಗಳಷ್ಟರಲ್ಲಿಯೇ ಹನ್ನೆರಡು ವರ್ಷಗಳ ಹುಡುಗಿಯಾಗಿ ಆದಿಜಾಂಬುವನನ್ನೇ ಮದುವೆಯಾಗಲೆಣಿಸಿದಳು. ತಂದೆಯ ವಾಪೆಯಲ್ಲಿದ್ದ ಅವನು ಒಪ್ಪದೆ, ಆಕೆಗೆ ಸಂಜೀವಗಿಡದ ಬೇರನ್ನು ಕೊಟ್ಟು ಮತಂಗಗಿರಿಗೆ ಕಳುಹಿಸಿದನು. ಈ ಬೇರನ್ನು ಭೂಮಿಯಲ್ಲಿ ನೆಟ್ಟೊಡನೆ ಹುಂಜವೊಂದು ಕಾಣಿಸಿಕೊಂಡಿತು; ಎಲ್ಲಮ್ಮ ಆಗ ಕೋಳಿಯಾಗಿ ಹುಂಜದೊಂದಿಗೆ ಕೂಡಿಕೊಂಡು ಮೂರು ಮೊಟ್ಟೆಗಳನ್ನಿಟ್ಟಳು. ಒಂದು ಮೊಟ್ಟೆ ಪಾತಾಳಕ್ಕೆ ಬಿದ್ದು ಆದಿಶೇಷನಾಯಿತು; ಇನ್ನೊಂದು ಮೊಟ್ಟೆ ಬಲಿಯ ರಾಜ್ಯದಲ್ಲಿ ಬಿದ್ದು ಕೊಳೆತು ಬ್ರಹ್ಮರಾಕ್ಷಸಿಯಾಯಿತು; ಮೂರನೆಯ ಮೊಟ್ಟೆಯ ಮೇಲೆ ಎಲ್ಲಮ್ಮ–ಕೋಳಿ ಕುಳಿತು ಕಾವು ಕೊಟ್ಟನಂತರ ಬ್ರಹ್ಮ–ವಿಷ್ಣು–ಮಹೇಶ್ವರರು ಅದರಿಂದ ಮೈದಳೆದರು. ಎಲ್ಲಮ್ಮ ಮತ್ತೆ ಹೆಣ್ಣಾದಳು. ಹೆಣ್ಣಾಗಿ ತ್ರಿಮೂರ್ತಿಗಳೊಂದಿಗೆ ಕೂಡಿಕೊಳ್ಳಲು ಬಯಸಿದಳು. ಆದರೆ ತಮ್ಮ ತಾಯಿಯೊಂದಿಗೇ ಕೂಡಿಕೊಳ್ಳಲು ಅವರು ಒಪ್ಪದೆ ಓಡಿಹೋಗಿ ಜಾಂಬುವ ಮುನಿಯಲ್ಲಿ ತಮ್ಮ ಕಷ್ಟವನ್ನು ತೋಡಿಕೊಂಡರು; ಎಲ್ಲಮ್ಮನೂ ಅವರನ್ನು ಹಿಂಬಾಲಿಸಿದಳು. ಮುನಿಯ ಸಲಹೆಯಂತೆ ಶಿವನು ಎಲ್ಲಮ್ಮನು ತನ್ನ ಮೂರನೆಯ ಕಣ್ಣನ್ನು ತನಗೆ ಕೊಡುವುದಾದರೆ ಆವಳೊಂದಿಗೆ ಕೂಡಿಕೊಳ್ಳುವೆನೆನ್ನಲು ಆಕೆ ಕೊಟ್ಟಳು; ಆದರೆ ಈ ಕಣ್ಣು ಹೋದೊಡನೆ ಅವನ ಬಲವೆಲ್ಲ ಉಡುಗಿಹೋಯಿತು; ಉಟ್ಟ ಬಟ್ಟೆಯೇ ಹೊರಲಾರದ ಹೊರೆಯಾಗಿಬಿಟ್ಟಿತು. ಆಗ ಆಕೆ ಮತಂಗಗಿರಿಗೆ ಹಿಂದಿರುಗಿದಳು. ಇದಾದ ಒಂಬತ್ತು ಗಂಟೆಗಳ ತರುವಾಯ ಕಲಿಯುಗ ಆರಂಭವಾಗಿ ಲಕ್ಷಾಂತರ ಜನರು ಆಕೆಯನ್ನು ಪೂಜೆಮಾಡಲೆಂದು ಬರತೊಡಗಿದರು.

ತಮಿಳುನಾಡಿನಲ್ಲಿಯೂ ಕನ್ನಡನಾಡಿನಲ್ಲಿಯೂ ಈಕೆಗೆ ಜಮದಗ್ನಿಯ ಹೆಂಡತಿ, ಪರಶುರಾಮನ ತಾಯಿ ರೇಣುಕೆಯ ಸಂಬಂಧವಿದೆ. ಪತಿವ್ರತೆಯಾದ ರೇಣುಕೆ ತನ್ನ ಶೀಲದ ಸಾಮರ್ಥ್ಯದಿಂದ ದಿನವೂ ಮರಳಿನಲ್ಲಿ ಗಡಿಗೆಯನ್ನು ಮಾಡಿ ಅದರಲ್ಲಿ ನದಿಯ ನೀರನ್ನು ಗಂಡನ ನಿತ್ಯವಿಧಿಗಳಿಗೆ ತಂದುಕೊಡುತ್ತಿದ್ದಳು (ನೀರನ್ನೇ ಉಂಡೆ ಉಂಡೆಯಾಗಿ ಮಾಡಿ ಗಂಡನ ಆಶ್ರಮದ ಬಳಿ ಉರುಳಿಸುತ್ತಿದ್ದಳೆಂದು ಇನ್ನೊಂದು ವಿವರ). ಒಂದು ದಿನ ಮೃತ್ತಿಕಾವತಿಯ ದೊರೆ ಚಿತ್ರರಥ ತನ್ನ ಹೆಂಡತಿಯೊಂದಿಗೆ ವಿಹರಿಸುತ್ತ ಆಕಾಶದಲ್ಲಿ ಹೋಗುತ್ತಿದ್ದಾಗ ನದಿಯಲ್ಲಿ ನೀರನ್ನು ತುಂಬಿಕೊಳ್ಳುತ್ತಿದ್ದ ರೇಣುಕೆ ನೋಡಿ ಅವರ ಸುಖಕ್ಕೆ ಅಸೂಯೆಪಟ್ಟಳು. ಒಡನೆಯೇ ಅವಳ ಶೀಲದ ಸಾಮರ್ಥ್ಯ ಮರೆಯಾಗಿಬಿಟ್ಟಿತು; ಎಂದಿನಂತೆ ಮರಳಿನಿಂದ ಗಡಿಗೆಯನ್ನು ಮಾಡಲಾಗಲಿಲ್ಲ. ಇದನ್ನು ತಿಳಿದು ಕೋಪಗೊಂಡ ಜಮದಗ್ನಿ ಅವಳನ್ನು ಕೊಲ್ಲುವಂತೆ ತನ್ನ ಐವರು ಮಕ್ಕಳಿಗೆ ಅಪ್ಪಣೆಮಾಡಿದನು. ಕಡೆಯ ಪರುಶುರಾಮನೊಬ್ಬನು ವಿನಾ ಉಳಿದವರು ತಾಯಿಯನ್ನು ಕೊಲ್ಲಲು ಒಪ್ಪಲಿಲ್ಲ. ಪರಶುರಾಮನು ಕೊಡಲಿಯೆತ್ತಿ ಹೊರಡಲು ರೇಣುಕೆ ಭಯದಿಂದ ಮತಂಗಜನರಿದ್ದ ವಸತಿಗೆ ಓಡಿ ಹೋಗಿ ಅವಿತುಕೊಂಡಳು. ಪರಶುರಾಮನು ಅವಳನ್ನು ಹಿಂಬಾಲಿಸಿ ಅಲ್ಲಿಗೇ ಹೋಗಿ ಅವಳ ತಲೆಯನ್ನು ತುಂಡರಿಸಿ ಬಂದನು. ತಂದೆಗೆ

ಮಗನ ಪಿತೃವಾಕ್ಯಪರಿಪಾಲನಾ ದಾರ್ಢ್ಯವನ್ನು ಕಂಡು ಸಂತೋಷವಾಗಿ ವರವೊಂದನ್ನು ಕೇಳುವಂತೆ ಹೇಳಲು ಪರಶುರಾಮನು ತನ್ನ ತಾಯಿ ಬದುಕುವಂತೆ ವರಬೇಡಿದನು. ಜಮದಗ್ನಿ ಆಗಲೆಂದು ಸಮ್ಮತಿಸಿ, ಬೇರ್ಪಟ್ಟ ರುಂಡಮುಂಡಗಳನ್ನು ಕೂಡಿಸಿ ಬರುವಂತೆ ಕಳುಹಿಸಿದನು. ಅಷ್ಟರಲ್ಲಿ ಮತಂಗಜನರ ಹೆಣ್ಣೊಬ್ಬಳು ಸತ್ತು, ಅವಳ ತಲೆಯನ್ನು ರೇಣುಕೆಯ ದೇಹದ ಬಳಿ ಇರಿಸಿದ್ದರು. ಪರಶುರಾಮನು ಬಂದು ರೇಣುಕೆಯ ದೇಹಕ್ಕೆ ಈ ಮತಂಗಸ್ತ್ರೀಯ ತಲೆಯನ್ನು ತಿಳಿಯದೆ ಕೂಡಿಸಿಬಿಟ್ಟನು. ದೇಹವೇನೋ ಜೀವತಳೆದು ಎದ್ದಿತು; ಆದರೆ ಎದ್ದವಳು ರೇಣುಕೆಯೆಂದು ಜಮದಗ್ನಿ ಒಪ್ಪಲಿಲ್ಲ. ಜಾತಿಭ್ರಷ್ಟ ಹೆಣ್ಣು ಮತಂಗಜನರಲ್ಲಿಯೇ ಪೂಜೆಗೊಳ್ಳುತ್ತ ನಿಂತಳು. ರೇಣುಕೆಯ ತಲೆಯೊಂದು ಹಾಗೆಯೇ, ಮೈಯಿಲ್ಲದೆ ಉಳಿದುಕೊಂಡಿತು; ತಮಿಳು ದೇಶದಲ್ಲಿ ಇದನ್ನು 'ಅಮ್ಮಚಾರ್' ಎನ್ನುತ್ತಾರೆ. ಬರಿಯ ತಲೆಯನ್ನು ಮಾತ್ರ ರೇಣುಕೆಯೆಂದು ಬಗೆದು ಪೂಜೆಮಾಡುವ ಪದ್ಧತಿ ಹಲವಾರು ಅನಾರ್ಯ, ಅಸಭ್ಯ, ಆದಿವಾಸಿ ಜನಾಂಗಗಳಲ್ಲಿ ಉಳಿದುಬಂದಿದೆ. ಅವಳ ಗುಡಿಗಳಲ್ಲಿ ತಲೆಯನ್ನು ಮಾತ್ರ ಕಂಡರಿಸಿ ಭೂಮಿಯ ಮೇಲೆ ಇಟ್ಟಿರುತ್ತಾರೆ; ಉಳಿದ ದೇಹ ಭೂಮಿಯೊಳಗೆ ಅಡಗಿದೆ ಯೆಂದು ಹೇಳುತ್ತಾರೆ; ಪೂಜಾರಿಗಳು ತಲೆಯ ಮುಖವಾಡವನ್ನು ಪೂಜಿಸುವುದು, ಅದನ್ನು ತಲೆಯ ಮೇಲೆ ಹೊತ್ತು ಕುಣಿಯುವುದು ಇವನ್ನು ಕಾಣಬಹುದು.

ಬೆಳಗಾವಿ ಜಿಲ್ಲೆಯಲ್ಲಿರುವ ಸವದತ್ತಿಯ ಸುಪ್ರಸಿದ್ಧ ಎಲ್ಲಮ್ಮನ ಗುಡಿಯ ಹಿನ್ನೆಲೆಯಲ್ಲಿ ಬೇರೊಂದು ಕಥೆ ಹೇಳುತ್ತಾರೆ. ನೀರು ತರಲು ರೇಣುಕೆ ತಡಮಾಡಿದಾಗ ಜಮದಗ್ನಿ ಆಕೆಗೆ ಮೈತೊನ್ನು ಹಿಡಿಯಲೆಂದು ಶಾಪಕೊಟ್ಟನಂತೆ. ಇದರಿಂದ ದುಃಖಿಗೊಂಡ ರೇಣುಕೆ ಅಲೆದಾಡುತ್ತ ಸವದತ್ತಿಗೆ ಬರಲು ಅಲ್ಲಿದ್ದ ಎಕ್ಕಯ್ಯ ಮತ್ತು ಜೋಗಯ್ಯ ಎಂಬ ಸಿದ್ಧರು ಅಲ್ಲಿನ ಜೋಗುಳ ಬಾವಿಯ ನೀರಿನಿಂದ ಅರಿಶಿನವನ್ನು ತೇಯ್ದು ಮೈಗೆಲ್ಲ ಬಳಿದು ಆಕೆಯ ತೊನ್ನನ್ನು ಗುಣಪಡಿಸಿದರಂತೆ. ಅಂದಿನಿಂದ ಸವದತ್ತಿಯ ಜೋಗಳಬಾವಿ ವಿಖ್ಯಾತ ವಾಯಿತೆಂದು ಕಥೆ. ರೇಣುಕೆ ಎಲ್ಲಮ್ಮನಾಗಿ ಅಲ್ಲಿಯೇ ಉಳಿದುಕೊಂಡಳಂತೆ. ಮೇಲೆ ಹೇಳಿದ ರೇಣುಕೆ ಶಿರಚ್ಛೇದದ ಕಥೆಯಲ್ಲಿಯೂ ಮಾರ್ಪಾಟೊಂದನ್ನು ಮಾಡಿ ಇಲ್ಲಿ ಹೇಳುವುದಿದೆ. ಪರಶುರಾಮನು ತಾಯಿಯ ತಲೆಯನ್ನು ಕಡಿಯಲು ಬರಲು ದಿಟವಾಗಿ ಪತಿವ್ರತೆಯಾಗಿದ್ದುದರಿಂದ ಆಕೆಯ ಕತ್ತಿನಿಂದ ಎಷ್ಟು ಸಾರಿ ಕಡಿದರೂ ತಲೆಗಳು ಕಾಣಿಸಿಕೊಳ್ಳುತ್ತಲೇ ಇದ್ದುವಂತೆ; ಒಂದೊಂದು ಬಾರಿ ತಲೆ ಕಡಿದು ಕೆಳಗೆ ಉರುಳಿಸಿದಾಗಲೂ ಒಂದೊಂದು ಪಿಡುಗು (ಪ್ಲೇಗ್, ಸಿಡುಬು, ಕಾಲರಾ, ಇತ್ಯಾದಿ) ಹೊರಹೊಮ್ಮಿತಂತೆ. ಕಡೆಗೆ ರೇಣುಕೆ ಗುಡ್ಡದ ಮೇಲೆ ಬಂದು ಗುಡ್ಡಮ್ಮ ಎಲ್ಲಮ್ಮನಾಗಿ ನಿಂತಳಂತೆ.

ಸಾಮಾನ್ಯವಾಗಿ ರೇಣುಕೆಯ (ಅಥವಾ ಎಲ್ಲಮ್ಮನ) ಗುಡಿಯಲ್ಲಿ ಗಂಡ ಜಮದಗ್ನಿ ಮತ್ತು ಮಗ ಪರಶುರಾಮ ಇವರ ಮೂರ್ತಿಗಳೂ ಇರುತ್ತವೆ. ಇವರಲ್ಲದೆ ಬಂಟ ಪೋತರಾಜು, (ಪೋತು ಎಂದರೆ ಕೋಣ), ಅಂಗರಕ್ಷಕ ಮಲ್ಲಜೆಟ್ಟಿ, ಮತ್ತು ಭದ್ರಕಾಳಿಯರೂ ಇರುತ್ತಾರೆ. ರೇಣುಕೆಯ ದೇಹಕ್ಕೆ ಮತಂಗ ಸ್ತ್ರೀಯ ತಲೆಯನ್ನು ಹೊಂದಿಸಿದಾಗ ಕಾಣಿಸಿಕೊಂಡ ಮಾತಂಗಿಯ ಗೊಂಬೆಯೂ ಎಲ್ಲಮ್ಮನ ಗುಡಿಯಲ್ಲಿ ಇರುವುದುಂಟು. ಮೂಲಸ್ಥಾನದಲ್ಲಿ ಮುಕ್ಕಣ್ಣೆಯಾದ, ಸಿಡುಕುಮುಖದ, ಡಮರು–ತ್ರಿಶೂಲ–ಪಾಶ–ಬ್ರಹ್ಮ ಕಪಾಲಗಳನ್ನು ನಾಲ್ಕು ಕೈಗಳಲ್ಲಿ ಹಿಡಿದ ತಲೆಮುಡಿಯಲ್ಲಿ ಹಾವುಗಳಿರುವ ದೇವತೆಯ ಪಂಚಲೋಹದ ಮೂರ್ತಿಯಿರುತ್ತದೆ. ಆದರೆ ಮೂಲ ಮೂರ್ತಿಯು ಕಲ್ಲಿನಲ್ಲಿ ಕಡೆದ ಬರಿಯ ತಲೆಯಾಗಿಯೇ ಇರುವುದು ವಾಡಿಕೆ; ಭೂಮಿಯಿಂದ ಎದ್ದುನಿಂತಂತೆಯೇ ಕಾಣುತ್ತದೆ. ಗೌಡ–ದ್ರಾವಿಡಸಂಸ್ಕೃತಿಯ ಅಭಿವ್ಯಕ್ತಿಯಲ್ಲಿ ಇದು ಪ್ರಕೃತಿಯ ಪ್ರತಿನಿಧಿಯೆಂದು ಪಂಡಿತರು ಪರಿಗಣಿಸಿದ್ದಾರೆ.

ಇದರಲ್ಲಿ ಇನ್ನೊಂದು ವಿವರವೂ ಸೇರಿಬರುತ್ತದೆ. ಮಾಹಿಷ್ಮತಿಯ ದೊರೆ ಕಾರ್ತವೀರ್ಯನು ಒಂದು ಹುಣ್ಣಿಮೆಯಂದು ಜಮದಗ್ನಿಯ ಆಶ್ರಮಕ್ಕೆ ನುಗ್ಗಿ ಅವನನ್ನು ಕೊಂದ ಕಥೆ ಇದಕ್ಕೆ ಮೂಲ; ಆಗ ರೇಣುಕೆ ವಿಧವೆಯಾದಳಷ್ಟೆ (ಚಿತೆಯೇರಿ ಸತಿಯಾದಳೆಂದು ಒಂದು ಕಲ್ಪನೆ). ಅಂತೂ ಅದನ್ನು ರಂಡೆ–ಹುಣ್ಣಿಮೆ ಎಂದು ಕರೆಯುತ್ತಾರೆ. ಅನಂತರ ಸ್ವರ್ಗದಿಂದ ಅಮೃತವನ್ನು ತಂದು ಇನ್ನೊಂದು ಹುಣ್ಣಿಮೆ ಜಮದಗ್ನಿಯ ಕಳೇಬರದ ಮೇಲೆ ಸಿಂಪಡಿಸಲು ಮುನಿಯು ಮತ್ತೆ ಬದುಕಿದ. ರಂಡೆಯಾಗಿದ್ದ ರೇಣುಕೆ ಮತ್ತೆ ಮುತ್ತೈದೆಯಾದಳು. ಅದು ಮುತ್ತೈದೆ ಹುಣ್ಣಿಮೆ. ರಂಡೆ ಹುಣ್ಣಿಮೆಯ ದಿನ ಸವದತ್ತಿಯ ಎಲ್ಲಮ್ಮನ ಗುಡಿಯಲ್ಲಿ ದೇವಿಯ ಕೈ ಬಳೆಗಳನ್ನು ಒಡೆದು ಹಾಕುತ್ತಾರೆ, ಕರಿಮಣಿಸರ ಕಿತ್ತುತ್ತಾರೆ; ಮುತ್ತೈದೆ ಹುಣ್ಣಿಮೆಯ ದಿನ ಮತ್ತೆ ಬಳೆಗಳನ್ನು ತೊಡಿಸಿ, ಕರಿಮಣಿಸರವನ್ನು ಹಾಕಿ, ಕುಂಕುಮವನ್ನು ಪೂಸಿ ಸಿಂಗರಿಸುತ್ತಾರೆ. ಈ ದಿನಗಳಂದು ನಡೆಯುವ ಜಾತ್ರೆಯಲ್ಲಿ ಸೇರಿದ ಮಂದಿ 'ಎಲ್ಲಮ ತಾಯಿ ಉದೋ (ಉದಯೋಽಸ್ತು ಎನ್ನುವ ಮಾತಿನ ಅಪಭ್ರಂಶವೆಂದು ತೋರುತ್ತದೆ), ಭವಾನೀ ನೀನೇ ಎಲ್ಲ, ನೀನೇ ಎಲ್ಲಮ್ಮ ಎಂದು ಅಖಂಡವಾಗಿ ಕೂಗುತ್ತಾರೆ.

ಎಲ್ಲಮ್ಮನಿಗೂ ಸಿದ್ಧರಿಗೂ (ಜೋಗಿಗಳಿಗೂ) ಸಂಬಂಧವಿರುವುದನ್ನು ಗಮನಿಸಬೇಕು. ರೇಣುಕೆಯ ಭಕ್ತರು ಜೋಗಿಗಳೆಂದು ಕರೆದುಕೊಳ್ಳುತ್ತಾರೆ; ಜೋಗಿದೀಕ್ಷೆ ಸಾಮಾನ್ಯವಾಗಿ ಎಲ್ಲಮ್ಮ ಕ್ಷೇತ್ರಗಳಲ್ಲಿಯೇ ಜರಗುವುದು. ಪರಶುರಾಮನಿಗೂ ತ್ರಿಪುರಾವಿದ್ಯೆಗೂ ಸಂಬಂಧವಿರುವುದನ್ನೂ ಈ ನೆಲೆಯಲ್ಲಿಯೇ ಪರಿಶೀಲಿಸಬೇಕು, 'ತ್ರಿಪುರಾರಹಸ್ಯ' (1, 18, 20) ದಲ್ಲಿ ಪರಶುರಾಮನು ತ್ರಿಪುರಾ ಅಥವಾ ಶ್ರೀವಿದ್ಯೆಯ ಉಪಾಸಕನೆಂದು ಹೇಳಿದೆ. ಶ್ರೀವಿದ್ಯೆಯನ್ನು ವಿವರಿಸುವ ಕಲ್ಪಸೂತ್ರವೊಂದು ಪರಶುರಾಮನ ಹೆಸರಿನಲ್ಲಿಯೇ ಇದೆ. ರೇಣುಕಾಮಂತ್ರಕ್ಕೆ ಭಾರ್ಗವನೇ ಋಷಿ. ಚಿಕ್ಕನಾಯಕನಹಳ್ಳಿ (ತುಮಕೂರು ಜಿಲ್ಲೆ)ಯ ಎಲ್ಲಮ್ಮ ಗ್ರಾಮದೇವತೆಯ ಗುಡಿಯಲ್ಲಿ ಮೂಲಸ್ಥಾನ ಎಲ್ಲಮ್ಮನ ಕಲ್ಲಿನ ತಲೆ; ಉತ್ಸವ ಮೂರ್ತಿ ಮರದಲ್ಲಿ ಮಾಡಿದ ಪರಶುರಾಮನದೇ. ದೇವಿಯ ಬಲಭಾಗದಲ್ಲಿ ಜಮದಗ್ನಿಯ ಶಿಲಾವಿಗ್ರಹವೂ ಇದೆ; ದೇವಾಲಯದ ಹೊರಗೆ ಇನ್ನೆರಡು ಗುಡಿಗಳಿದ್ದು ಅವುಗಳಲ್ಲಿ ಮಾತಂಗಿ ಮತ್ತು ಅವಳ ಮಗ ಪಾತಪ್ಪ ಇವರನ್ನು ಪ್ರತಿನಿಧಿಸುವ ಕಲ್ಲುಗುಂಡುಗಳಿವೆ.

ತಮಿಳುದೇಶದಲ್ಲಿಯೂ ಕೇರಳದಲ್ಲಿಯೂ ದುರ್ಗೆಯ ಕೊರ್ರವೈ (ಅವ್ವೈ)–ಭಗವತಿ ಎಂಬ ರೂಪ ಬಳಕೆಯಲ್ಲಿದೆ. ಈಕೆಯನ್ನು ಕಂದಳಿ (ಎಂದರೆ ನಾಮರೂಪಗಳಿಲ್ಲದ ಪರಾತ್ಪರಶಕ್ತಿ) ಎಂದೂ ಯುದ್ಧ ದೇವತೆಯೆಂದೂ ಕರೆಯುತ್ತಾರೆ. ಶಿಲಪ್ಪದಿಕಾರದಲ್ಲಿ ಈಕೆ ಮಹಿಷಮರ್ದಿನಿ; ಮಣಿಮೇಖಲೆಯಲ್ಲಿ ಕನ್ಯಾಕುಮಾರಿ. ಸಮರಕ್ಕೆ ಹೋಗುವ ಮೊದಲು, ಸಮರದಿಂದ ಹಿಂದಿರುಗಿದ ಮೇಲೆ ಏಯಿನಾರ್ ಮತ್ತು ಮರವರ್ ಬುಡಕಟ್ಟುಗಳ ಆದಿವಾಸಿ ಜನರು ಈಕೆಯನ್ನು ನರ್ತನದಿಂದ, ಸಂಗೀತದಿಂದ ಪೂಜಿಸುತ್ತಿದ್ದರು. ಇವರು ಮಾತ್ರವಲ್ಲದೆ ಕಾಡರ್, ಮಲಯನ್, ಎರವಲ್ಲನ್, ಪುಲಯನ್, ಕೂಡನ್, ಎಳುವನ್ ಮೊದಲಾದ ಪ್ರಾಚೀನ ಜನರೂ ಈಕೆಯ ಭಕ್ತರೇ. ದೇವಾಸುರಯುದ್ಧದಲ್ಲಿ ಹುಟ್ಟಿದ ದಾರಕನೆಂಬ ದಾನವ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಯಾವ ಗಂಡಸಿನಿಂದಲೂ ಒಳಗಾಗಲೀ ಹೊರಗಾಗಲೀ ರಾತ್ರಿಯಾಗಲೀ ಹಗಲಾಗಲೀ ಕಲ್ಲಿನಿಂದಾಗಲೀ ಕಬ್ಬಿಣದಿಂದಾಗಲೀ ಕೊಲ್ಲಲ್ಪಡದಿರುವಂತೆ ವರವನ್ನು ಪಡೆದನು. ಶಿವನನ್ನೇ ಎದುರಿಸಲು ಶಿವನ ಕೋಪವು 'ಕಂದನ್ ಕಾಳಿ'ಯ ರೂಪವನ್ನು ತಳೆದು, ಆಕೆ ಭೂತಬೇತಾಳಗಳ ಪಡೆಗಳೊಂದಿಗೆ ನಡೆದು ದಾರಕನನ್ನು ಸೆಣಸಿ ರಾತ್ರಿಯೂ ಹಗಲೂ ಅಲ್ಲದ 'ಅತ್ತ' ನಕ್ಷತ್ರದಲ್ಲಿ, ಉತ್ತರದಿಕ್ಕಿನ ಬಾಗಿಲ ಹೊಸ್ತಿಲ ಮೇಲೆ

ಅವನನ್ನು ಬೀಳಿಸಿ, ತನ್ನ ಕೈ ಉಗುರುಗಳಿಂದಲೇ ಅವನನ್ನು ಸೀಳಿದಳು. ಈ ಕಥೆ ಕೇರಳದ ಕಡೆ 'ದಾರಿಕವಧಂ ಪಾಟ್ಟು', 'ಭಗವತೀಪಾಟ್ಟು', 'ಕಾಲೀನಾಟಕಂ' ಎಂದು ಮೊದಲಾಗಿ ಪ್ರಸಿದ್ಧವಾಗಿದೆ. ಸಾಮಾನ್ಯವಾಗಿ ಈಕೆ ಉಗ್ರರೂಪದ ಮೂರ್ತಿಯೇ. ಆದರೆ ಕೆಲವು ಕಡೆಸೌಮ್ಯರೂಪವಾಗಿಯೂ ಇರುವುದುಂಟು; ನಗುತ್ತಿರುವ ಕೊರ್ರುವ್ವೆ ಭಗವತಿ (ವಲಿಯ ತಂಬೂರಾಟ್ಟಿ) ಯ ಪ್ರಸಿದ್ಧ ದೇವಾಲಯ ತೆಲ್ಲಿಚೆರಿಯ ಪಕ್ಕ ಚಿರಕ್ಕಲ್ ಕಾವು ಎಂಬಲ್ಲಿದೆ.

ಗ್ರಾಮದೇವತೆಯರು ಪರಸ್ಪರ ಸಂಬಂಧಿಸಿದಂತೆ ಕಲ್ಪನೆಗಳಿವೆ. ಕೆಲವರು ಅಕ್ಕತಂಗಿಯರೂ ಇರುವುದುಂಟು. ಒಂದೇ ಬಳಗದಿಂದಾಗಿ ಅವರ ಸ್ವಭಾವ, ಸ್ವರೂಪಗಳಲ್ಲಿ ಸಾದೃಶ್ಯ ಏರ್ಪಟ್ಟದ್ದು ಸಹಜವೇ. ಗ್ರಾಮದೇವತೆಯರ ಮೂರ್ತಿಲಕ್ಷಣ ಸುಮಾರಾಗಿ ಒಂದೇ ಇರುತ್ತದೆ. ಎಲ್ಲ ದೇವತೆಯರನ್ನೂ ಅಡಗಿಸಿ ಕೊಂಡ ಆದಿಶಕ್ತಿ, ಸರ್ವಶಕ್ತಿ ಅಥವಾ ಎಲ್ಲಮ್ಮ ಸಹಜವಾಗಿಯೇ ಬೆಳೆದುಬಂದ ಒಂದು ಮನೋಧರ್ಮದ ಸಂಕೇತ, ಪ್ರತೀಕ. ಒಂದೇ ಶಕ್ತಿಯು ಉಪಾಧಿಗಳಿಂದ ಅನೇಕವಾಗಿ ಕಾಣಿಸಿಕೊಳ್ಳುವ ಉಲ್ಲೇಖ ತಾಂತ್ರಿಕ ನೆಲೆಯಲ್ಲಿ ಬರುತ್ತದೆ; ಇದು ಗ್ರಾಮದೇವತೆಗಳಿಗೂ ಅನ್ವಯಿಸುವುದೇ.

ಏಕೋ ಭೂತ್ವಾ ಯಥಾ ಮೇಘಃ ಪೃಥಕ್ತ್ವೇವ ಚ ತಿಷ್ಠತಿ ।
ವರ್ಣತೋ ರೂಪತಶ್ಚೈವ ತಥಾ ಗುಣವಶಾದುಮಾ ॥

ಏಕಾ ಮಾತಾ

ಸಭ್ಯಸಮಾಜದವರು ನೂರಾರು ಶಕ್ತಿಯರನ್ನು ಒಪ್ಪಿಕೊಳ್ಳದೆ ಅವರನ್ನೆಲ್ಲ ಪ್ರತಿನಿಧಿಸುವ ಒಂದೇ ಶಕ್ತಿಯನ್ನು ಒಪ್ಪಿಕೊಂಡುದು ಸಹಜವೇ. ಗಂಡುದೇವತೆಗಳ ವಿಚಾರದಲ್ಲಿಯೂ ಇದೇ ವ್ಯಾಪಾರ ನಡೆಯಿತಷ್ಟೆ. 'ಏಕಂ ಸದ್ವಿಪ್ರಾ ಬಹುಧಾ ವದಂತಿ' ಎಂದ ಮನೋಧರ್ಮ, 'ಏಕೋ ದೇವಃ ಕೇಶವೋ ವಾ ಶಿವೋ ವಾ' ಎಂದ ನೆಲೆ ಇಲ್ಲಿಯೂ ಕೆಲಸ ಮಾಡಿದುವು. ಆದರೆ ಒಬ್ಬನೇ ದೇವತೆಯನ್ನು ನಾಡಿನವರೆಲ್ಲ ಅಂಗೀಕರಿಸಲಿಲ್ಲ; ಶೈವರು ಶಿವನನ್ನು, ವೈಷ್ಣವರು ವಿಷ್ಣುವನ್ನು, ಗಾಣಪತ್ಯರು ಗಣಪತಿಯನ್ನು, ಸೌರರು ಸೂರ್ಯನನ್ನು ಪರಮದೇವತೆಯೆಂದು ಬಗೆದಂತೆ ಶಕ್ತಿಯರಲ್ಲಿಯೂ ಈ ವ್ಯವಸ್ಥೆ ಮೂಡಿಬಂದಿತು. ಗಂಡುದೇವತೆಗಳಿಗೆ ಹೆಣ್ಣುಗಳನ್ನೂ ಶಕ್ತಿಯರೆಂದು ಅಳವಡಿಸಿದರು: ಶಿವನಿಗೆ ಶಿವೆ (ಶಕ್ತಿ). ವಿಷ್ಣುವಿಗೆ ಲಕ್ಷ್ಮಿ, ಬ್ರಹ್ಮನಿಗೆ ಸರಸ್ವತಿ, ಗಣಪತಿಗೆ ಪುಷ್ಟಿ, ಅನಂತನಿಗೆ ತುಷ್ಟಿ, ಕಾಲನಿಗೆ ರಾತ್ರಿ, ಸೂರ್ಯನಿಗೆ ಸಂಜ್ಞೆ, ಇಂದ್ರನಿಗೆ ಶಚಿ, ಅಗ್ನಿಗೆ ಸ್ವಾಹಾ, ದಕ್ಷನಿಗೆ ದಕ್ಷಿಣೆ, ಸ್ಕಂದನಿಗೆ ದೇವಸೇನೆ, ಇತ್ಯಾದಿ.

ಸಪ್ತಮಾತೃಕೆಯರು ಈ ನೆಲೆಯಲ್ಲಿಯೇ ಮೈದಳೆದವರಂತೆ ಕಾಣುತ್ತದೆ. ಬೃಹತ್ಸಂಹಿತೆಯಲ್ಲಿಯೇ (57, 56) ಅವರ ಹೆಸರುಗಳನ್ನು ಹೇಳದಿದ್ದರೂ ಅವರ ಪ್ರಸ್ತಾಪವೇನೋ ಬರುತ್ತದೆ; ವ್ಯಾಖ್ಯಾಕಾರನಾದ ಉತ್ಪಲ ಹೆಸರುಗಳನ್ನು ಹೇಳಿದ್ದಾನೆ—ಬ್ರಾಹ್ಮೀ, ವೈಷ್ಣವೀ, ರೌದ್ರೀ (ಮಾಹೇಶ್ವರಿ), ಕೌಮಾರೀ, ಐಂದ್ರೀ, ಯಮೀ, ವಾರುಣೀ, ಕೌಬೇರೀ. ಇವರು ಕ್ರಮವಾಗಿ ಬ್ರಹ್ಮ, ವಿಷ್ಣು, ಶಿವ, ಸ್ಕಂದ, ಇಂದ್ರ, ಯಮ, ವರುಣ, ಕುಬೇರ ಈ ದೇವತೆಗಳ ಶಕ್ತಿಯರು. ಇವರಲ್ಲದೆ ಇತರ ಮಾತೃಗಣಗಳನ್ನೂ ಪ್ರಸ್ತಾಪಿಸಿದ್ದಾನೆ. ಮಾರ್ಕಂಡೇಯ ಪುರಾಣದಲ್ಲಿ ದೇವಿಯು ಅಸುರನೊಂದಿಗೆ ಹೋರಾಡಲು ಹೊರಟಾಗ ಬ್ರಹ್ಮ, ಕಾರ್ತಿಕೇಯ, ವಿಷ್ಣು, ಇಂದ್ರ ಇವರಿಂದ ಶಕ್ತಿಯರು ಹೊರಹೊಮ್ಮಿ, ದೇವಿಗೆ ನೆರವಾಗಿ ಹೊರಟ ಉಲ್ಲೇಖವಿದೆ (88, 5, 12). ಸಪ್ತಮಾತೃಕೆಯರನ್ನು ಶಿಲ್ಪದಲ್ಲಿ ಒಂದೇ ಫಲಕದಲ್ಲಿ ಸಾಲಾಗಿ, ಅಥವಾ ಏಳು ಬೇರೆ ಬೇರೆ

ಮೂರ್ತಿಗಳಾಗಿ ಕಡೆದಿಡುವ ವಾಡಿಕೆಯಿದೆ; ಆಗ ಅವರ ಕ್ರಮ ಸಾಮಾನ್ಯವಾಗಿ ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ಕಾರ್ತಿಕೇಯೀ ಅಥವಾ ಮಾಯೂರೀ, ವೈಷ್ಣವೀ, ವಾರಾಹೀ, ಇಂದ್ರಾಣೀ, ಚಾಮುಂಡಾ. ಬ್ರಾಹ್ಮಿಯ ಬಲಭಾಗದಲ್ಲಿ ವೀರಭದ್ರನನ್ನೂ, ಚಾಮುಂಡಿಯ ಎಡಭಾಗದಲ್ಲಿ ಗಣೇಶನನ್ನೂ ಇರಿಸಿ ನಡುವೆ ಮಾತೃಗಣಗಳನ್ನಿರಿಸಬೇಕೆಂದು ವಿಧಿಯಿದೆ (ವೀರೇಶ್ವರಶ್ಚ ಮಾತೄಣಾಮಗ್ರತೋ ಭವೇತ್, ಅಂತೇ ತೇಷಾಂ ವಿನಾಯಕಃ, ಮಧ್ಯೇ ಚ ಮಾತರಃ ಕಾರ್ಯಾ). ಪ್ರಾಚೀನ ಶೈವದೇವಾಲಯಗಳಲ್ಲೆಲ್ಲ ಈ ಶಿಲ್ಪವ್ಯೂಹ ವನ್ನು ಕಾಣಬಹುದು. ಸಪ್ತಮಾತೃಕೆಯರಿಗೇ ಸ್ವತಂತ್ರವಾಗಿ ಆಲಯವಿರುವುದೂ ಉಂಟು.

ಮಾತೃಗಣಗಳನ್ನು ಏಳೆಂದೇ ವ್ಯವಹರಿಸುವುದು ವಾಡಿಕೆಯಾದರೂ ಎಂಟು, ಒಂಬತ್ತು, ಹದಿನಾರೆಂದು ನಿರ್ದೇಶಿಸುವುದೂ ಇದೆ. ಹದಿನಾರೆನ್ನುವಾಗ ದೇವಸೇನೆ, ಗೌರಿ, ಮೇಧಾ, ಪದ್ಮಾ, ಶಚೀ, ಶಾಂತಿ, ಸಾವಿತ್ರಿ, ಸ್ವಧಾ, ಸ್ವಾಹಾ, ವಿಜಯಾ, ಜಯಾ, ಧೃತಿ, ಪುಷ್ಟಿ, ತುಷ್ಟಿ, ಆತ್ಮದೇವತೆ, ಕುಲದೇವತೆಗಳು ಸೇರುತ್ತಾರೆ. ಇವರನ್ನು ಧಾತ್ರಿಗಳೆಂದೂ ಕರೆದು ಇವರ ಪ್ರೀತಿಗಾಗಿ 'ಧಾತ್ರೀಹವನ'ವನ್ನು ನಡೆಸುವ ಪದ್ಧತಿಯಿದೆ. ಅಂತೂ ಈ ಮಾತೃದೇವತೆಗಳಲ್ಲಿ ಪೂರ್ಣಶಕ್ತಿ, ಅಂಶರೂಪಿಣಿ, ಕಲಾರೂಪಿಣಿ, ಕಲಾಂಶರೂಪಿಣಿ ಎನ್ನುವ ಭೇದವಿದೆ. ತಾರತಮ್ಯಕ್ರಮದಲ್ಲಿ ಈ ಮಾತೃದೇವತೆಗಳು ವಿದ್ಯಾದೇವಿಯರ ತರುವಾಯ ಬರತಕ್ಕವರು. ವಿದ್ಯಾದೇವಿಯರೆಂದು ಶಕ್ತಿಯ ಐದು ಅವತಾರಗಳು—ದುರ್ಗಾ, ಲಕ್ಷ್ಮಿ, ಸರಸ್ವತಿ, ರಾಧಾ ಮತ್ತು ಸಾವಿತ್ರಿ. ಸೃಷ್ಟಿ ಕ್ರಮದಲ್ಲಿ ಪ್ರಕೃತಿಯು ಐದು ವಿಧವಾಗಿ ಕವಲೊಡೆದುದು ಈ ನಿರ್ದೇಶನಕ್ಕೆ ಮೂಲವೆಂದು ಮಾತಿದೆ (ಸೃಷ್ಟಿವಿಧೌ ಪ್ರಕೃತಿಃ ಪಂಚಧಾ ಸ್ಮೃತಾ). ದೇವೀ ಉಪಾಸನೆಯಲ್ಲಿ ಮೇಲೆ ಹೇಳಿದ ಸಪ್ತಮಾತೃಕೆಯರು ಪ್ರಧಾನರೆಂದೂ ಅವರ ತರುವಾಯ ಒಂಬತ್ತು ಮಂದಿ ಕುಲದೇವಿಯರು (ನಾರಸಿಂಹಿ, ಚಾಮುಂಡಾ, ವಾರುಣೀ, ಕಲಾಪೀ, ಕುರುಕುಲ್ಲಾ, ನಾರಾಯಣಿ, ಕೌಮಾರಿ, ಪರಾಜಿತಾ, ಅಪರಾಜಿತಾ) ಮತ್ತು ಎಂಟು ಮಂದಿ ನಾಯಿಕೆಯರು (ಬಾಲಿನೀ, ಕಾಮೇಶ್ವರೀ, ವಿಮಲಾ, ಅರುಣಾ, ಮೇದಿನೀ, ಜಯಂತೀ, ಸರ್ವೇಶ್ವರೀ, ಕೌಲೇಶೀ) ಇವರ ಪ್ರಸ್ತಾಪವಿದೆ.

ಮುಂಡಮಾಲಾತಂತ್ರದ ಪ್ರಕಾರ ಒಂದೇ ಶಕ್ತಿಯ ಹತ್ತು ಅವತಾರ ವಿಶೇಷಗಳು ಮಹಾವಿದ್ಯೆಯರೆಂದು ವ್ಯವಹಾರ; ಧೂಮವತೀ, ಬಗಲೀ, ಭೈರವೀ, ಛಿನ್ನಮಸ್ತಾ, ಭುವನೇಶ್ವರೀ, ಸುಂದರೀ, ತಾರಾ, ಕಾಲೀ, ಕಮಲಾ, ದುರ್ಗಾ ಇವು ಅಲ್ಲಿನ ಹೆಸರುಗಳು. ಆದರೆ ವಾಡಿಕೆಯಲ್ಲಿ ಕಾಳಿ, ತಾರಾ, ಷೋಡಶೀ (ತ್ರಿಪುರಾ), ಭುವನೇಶ್ವರಿ, ಭೈರವೀ (ತ್ರಿಪುರ ಭೈರವಿ), ಛಿನ್ನಮಸ್ತಾ, ಧೂಮವತೀ, ಅಲಕ್ಷ್ಮಿ, (ವಿಧವೆ), ಮಾತಂಗೀ, ಕಮಲಾ (ಲಕ್ಷ್ಮಿ), ಬಗಲಾಮುಖೀ ಇವರನ್ನು ದಶಮಹಾವಿದ್ಯೆಯರೆಂದು ಹೇಳುವುದಿದೆ. ಇವರಲ್ಲಿ ಮೊದಲೆರಡು ಮಹಾವಿದ್ಯೆಗಳೆಂದೂ, ಅನಂತರ ಐದು ವಿದ್ಯೆಗಳೆಂದೂ, ಅಲ್ಲಿಂದ ಮುಂದೆ ಮೂರು ಸಿದ್ಧವಿದ್ಯೆಗಳೆಂದೂ, ಪರಿಗಣನೆ. ಷೋಡಶಿಯನ್ನು ಶ್ರೀವಿದ್ಯೆಯೆಂದು ಕರೆಯುತ್ತಾರೆ; ಬಾಲಾ, ಲಲಿತಾ, ಮಹಾತ್ರಿಪುರಸುಂದರೀ, ರಾಜರಾಜೇಶ್ವರೀ, ಲಲಿತಾ ಪರಮೇಶ್ವರೀ ಎಂದೂ ಪರ್ಯಾಯನಾಮಗಳಿವೆ. ಒಂದೊಂದು ವಿದ್ಯೆಗೂ ಪ್ರತ್ಯೇಕವಾದ ಧ್ಯಾನ, ಯಂತ್ರ, ಮಂತ್ರ, ಕವಚ ಮೊದಲಾದುವು ಇರುತ್ತವೆ. (ದೇವೀಶಿಲ್ಪಗಳು ಚಿತ್ರಗಳು 112, 113, 114, 115, 116).

ಇವರಲ್ಲದೆ ನವದುರ್ಗೆಯರ ಪ್ರಸ್ತಾಪವೂ ಇದೆ. ದೇವೀಮಾಹಾತ್ಮ್ಯೆಯ ಕವಚದಲ್ಲಿ ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯನೀ, ಕಾಳರಾತ್ರೀ, ಮಹಾಗೌರೀ, ಸಿದ್ಧಿಶ್ರೀ ಇವರ ಹೆಸರುಗಳಿವೆ; ಕಾಶೀಕ್ಷೇತ್ರದ ನವದುರ್ಗೆಯರು ಇವರೇ. ಪುರಾಣಗಳಲ್ಲಿ ಉಗ್ರಚಂಡಾ,

ಚಿತ್ರ 112
ದುರ್ಗೆ

ಚಿತ್ರ 113
ಮಹಿಷಮರ್ದಿನಿ
ಶಿವಮೊಗ್ಗ ಜಿಲ್ಲೆಯ
ಸೊರಬ ತಾಲ್ಲೂಕಿನ
ದಂಬೇಹಳ್ಳಿಯ
ಗುಡಿಯಲ್ಲಿರುವುದು
ಕದಂಬರ ಕಾಲದ ಶಿಲ್ಪ
(ಕ್ರಿಸ್ತಾಬ್ದ 430-455)



ಚಿತ್ರ 114
ಮಾಮಲ್ಲಪುರದ ದುರ್ಗೆ

ಚಿತ್ರ 115
ಮಾಮಲ್ಲಪುರದ
ಮಹಿಷಮರ್ದಿನಿ

ಚಿತ್ರ 115 ಅ
ಮಹಿಷಮರ್ದಿನಿ

ಚಿತ್ರ 115 ಆ
ಚಾಮುಂಡಿ



ಚಿತ್ರ 116
ದೇವಿ

ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ, ಚಂಡವತೀ, ಚಂಡರೂಪಾ, ಅತಿಚಂಡಿಕಾ, ರುದ್ರಚಂಡಾ ಎಂಬ ಹೆಸರುಗಳೂ, ಆಗಮಗಳಲ್ಲಿ ನೀಲಕಂಠೀ, ಕ್ಷೇಮಂಕರೀ, ಹರಸಿದ್ಧಿ, ರುದ್ರಾಂಶದುರ್ಗಾ, ವನದುರ್ಗಾ, ಅಗ್ನಿದುರ್ಗಾ, ಜಯದುರ್ಗಾ (ಜಲದುರ್ಗಾ), ವಿಂಧ್ಯವಾಸಿನೀ, ರಿಪುಮಾರೀ ಎಂಬ ಹೆಸರುಗಳೂ ಇವೆ. ಸಸ್ಯಪ್ರಪಂಚಕ್ಕೆ ಅಭಿಮಾನಿದೇವತೆಯೆನಿಸಿ ಶಾಕಂಭರಿಯಾಗಿರುವುದೂ ಉಂಟು. ಒಂಬತ್ತು ಬಗೆಯ ಸಸ್ಯ ಗಳನ್ನು ನವದುರ್ಗೆಯರೆಂದು ವ್ಯವಹರಿಸುವ ವಾಡಿಕೆಯೂ ಇದೆ: ಬಾಳೆ (ರಂಭಾ, ಬ್ರಹ್ಮಾಣೀ), ಕಚ್ವೆ (ಕಾಲಿಕಾ), ಅರಿಶಿನ (ಹರಿದ್ರಾ, ದುರ್ಗಾ), ಜಯಂತೀ (ಕಾರ್ತಿಕೀ), ಬೇಲ (ಶಿವಾ), ದಾಳಿಂಬೆ (ರಕ್ತದಂತಿಕಾ), ಅಶೋಕ (ಶೋಕರಹಿತಾ), ಕುಂಬಳಕಾಯಿ (ಚಾಮುಂಡಾ,) ಭತ್ತ (ಲಕ್ಷ್ಮಿ). ಬಂಗಾಳದ ಕಡೆ 'ನವಪತ್ರಿಕಾ' ಎನ್ನುವ ವ್ರತಾಚರಣೆಯಲ್ಲಿ ಇವುಗಳ ಬಳಕೆಯಿದೆ.

ಶಕ್ತಿಪೂಜೆಯ ಪ್ರಾಬಲ್ಯ ಎಷ್ಟಿದ್ದಿತೆನ್ನುವುದು ಶಕ್ತಿತೀರ್ಥಗಳ ಸಂಖ್ಯೆಯನ್ನು ಗಮನಿಸಿದರೆ ತಿಳಿಯುತ್ತದೆ. ಕೊಲ್ಲಾಪುರ (ಕರವೀರ) ದಲ್ಲಿ ಮಹಾಲಕ್ಷ್ಮಿ. ಪ್ರಯಾಗದಲ್ಲಿ ಲಲಿತೆ, ಶ್ರೀಶೈಲದಲ್ಲಿ ಮಾಧವಿ, ಬದರಿಯಲ್ಲಿ ಊರ್ವಶಿ, ಜಾಲಂಧರದಲ್ಲಿ ವಿಶ್ವಮುಖೀ, ನೇಪಾಳದಲ್ಲಿ ಗುಹ್ಯಕಾಲೀ, ಗಯೆಯಲ್ಲಿ ಮಂಗಳಾ, ಕಾಮಾಖ್ಯಾ ಯೋನಿಮಂಡಲದಲ್ಲಿ ತ್ರಿಪುರಭೈರವೀ, ಶ್ರೀನಗರದಲ್ಲಿ ಜಂಬೂನದೇಶ್ವರೀ, ಗಂಧಮಾದನದಲ್ಲಿ ಕಾಲುಕಾ, ಹಿಮಾದ್ರಿಯಲ್ಲಿ ಉಮಾ, ಕಿಷ್ಕಿಂಧಪರ್ವತದಲ್ಲಿ ತಾರಾ, ದ್ವಾರಕೆಯಲ್ಲಿ ರುಕ್ಮಿಣೀ, ಬೃಂದಾವನದಲ್ಲಿ ರಾಧೆ, ಮಥುರೆಯಲ್ಲಿ ದೇವಕಿ, ಪುರುಷೋತ್ತಮಪುರಿಯಲ್ಲಿ ವಿಪುಲಾ, ಮಲಯಾಚಲದಲ್ಲಿ ಕಲ್ಯಾಣಿ, ವೇದಾರಣ್ಯದಲ್ಲಿ ಸುಂದರೀ, ಕುರುಕ್ಷೇತ್ರದಲ್ಲಿ ಸ್ಥಾಣುಪ್ರಿಯಾ, ಅವಿಮುಕ್ತ–ವಾರಾಣಸಿಯಲ್ಲಿ ವಿಶಾಲಾಕ್ಷಿ, ಕಾಂಚೀಪುರದಲ್ಲಿ ಅನ್ನಪೂರ್ಣ, ಚಿದಂಬರದಲ್ಲಿ ಮೀನಾಕ್ಷಿ, ಏಕಾಂಬರದಲ್ಲಿ ಪರಾಶಕ್ತಿ, ವೈದ್ಯನಾಥದಲ್ಲಿ ಬಗಲಾಮುಖೀ, ಮಣಿದ್ವೀಪದಲ್ಲಿ ಭುವನೇಶ್ವರೀ, ನೈಮಿಶದಲ್ಲಿ ಲಿಂಗಧಾರಿಣಿ, ಪುಷ್ಕರದಲ್ಲಿ ಗಾಯತ್ರೀ, ಕೇದಾರದಲ್ಲಿ ಮಾರ್ಗ ದಾಯಿನೀ, ಚಿತ್ರಕೂಟದಲ್ಲಿ ಸೀತೆ, ವಿಂಧ್ಯಪರ್ವತದಲ್ಲಿ ವಿಂಧ್ಯವಾಸಿನೀ ಇತ್ಯಾದಿ. ಹೀಗೆ ಒಟ್ಟು 108 ಶಕ್ತಿತೀರ್ಥಗಳನ್ನು ನಿರ್ದೇಶಿಸಿದ್ದಾರೆ. ಇವು ದೇಶದಾದ್ಯಂತ ಹರಡಿವೆ: ಕಡೆಗೆ ಚೀಣದಲ್ಲಿ ನೀಲಸರಸ್ವತಿಯನ್ನೂ ಗುರುತಿಸಿದ್ದಾರೆ. ಇವುಗಳಲ್ಲಿ ವಾರಾಣಸಿ (ವಿಶಾಲಾಕ್ಷಿ), ವಿಂಧ್ಯಾಚಲ (ವಿಂಧ್ಯವಾಸಿನಿ), ನೇಪಾಳ (ಗುಹ್ಯ

ಕೇಶ್ವರಿ), ಬಂಗಾಳ (ಸುಂದರೀ), ಗಯಾ (ಮಂಗಲಾವತೀ), ಮಾಳವ (ಕಾಲಿಕಾ), ಪ್ರಯಾಗ (ಲಲಿತಾ), ಕೊಲ್ಲಾಪುರ (ಮಹಾಲಕ್ಷ್ಮಿ), ಗುಜರಾತು (ಅಂಬಾ), ಮಾಲಾವಾರ (ಕನ್ಯಾಕುಮಾರಿ), ಮಲಯಗಿರಿ (ಭ್ರಾಮರೀ) ಮತ್ತು ಕಂಚೀ (ಕಾಮಾಕ್ಷಿ) ಇವು ದೇವೀಧಾಮಗಳೆಂದೂ ಪ್ರಸಿದ್ಧವಾಗಿವೆ.

ಕೆಲವು ಶಕ್ತಿಪೀಠಗಳು

ಇವುಗಳಲ್ಲದೆ ಶಕ್ತಿಪೀಠಗಳ ಪ್ರಸ್ತಾಪ ಸ್ವಾರಸ್ಯವಾಗಿದೆ. ಸಾಧನಮಾಲೆಯಲ್ಲಿ ಕಾಮಾಖ್ಯಾ (ಗೌಹಾತಿ), ಶ್ರೀಹಟ್ಟ (ಸಿಲ್ಹೆಟ್), ಪೂರ್ಣಗಿರಿ ಮತ್ತು ಉಡ್ಡಿಯಾನ (ಒಡ್ಯಾಣ) ಇವು ನಾಲ್ಕು ಶಕ್ತಿಪೀಠಗಳೆಂದು ನಿರ್ದೇಶನವಿದೆ; ಹೇವಜ್ರತಂತ್ರದ ಪ್ರಕಾರ ಉತ್ತರದ ಜಾಲಂಧರ (ಜಲಶೈಲಕ. ಇಲ್ಲಿ ದೇವತೆ ಚಂಡಿ), ಪಶ್ಚಿಮದ ಉಡ್ಡೀಯಾನ (ಓಢ್ರ; ಇಲ್ಲಿನ ದೇವತೆ ಕಾತ್ಯಾಯಿನಿ), ದಕ್ಷಿಣದ ಪೂರ್ಣಗಿರಿ (ದೇವತೆ ಪೂರ್ಣೇಶ್ವರಿ) ಮತ್ತು ಪೂರ್ವದ ಕಾಮರೂಪ (ದೇವತೆ ಕಾಮೇಶ್ವರಿ) ಇವು ಚತುಷ್ಪೀಠಗಳು. ಕಾಲಿಕಾಪುರಾಣದಲ್ಲಿ ಸಪ್ತಪೀಠಗಳ ಪ್ರಸ್ತಾಪವಿದೆ; ಮೇಲೆ ಹೇಳಿದ ನಾಲ್ಕರೊಂದಿಗೆ ದಿಕ್ಕರವಾಸಿನಿ, ದೇವೀಕೂಟ ಮತ್ತು ಲಲಿತಕಾಂತಾಕ್ಷೇತ್ರ ಇವು ಸೇರುತ್ತವೆ. ಶಕ್ತಿಪೀಠಗಳ ಹಿನ್ನೆಲೆಯಲ್ಲಿ ಒಂದು ಕಥೆಯಿದೆ.

ದಕ್ಷಪ್ರಜಾಪತಿಯು ಯಜ್ಞಮಾಡುತ್ತಿದ್ದ ಸಂದರ್ಭದಲ್ಲಿ ಅವನ ಮಗಳಾದ ಸತಿಯು ಆಹ್ವಾನವಿಲ್ಲದಿದ್ದರೂ ಅಲ್ಲಿಗೆ ಹೋಗಿ, ತನ್ನ ಗಂಡನನ್ನು ತಂದೆ ಹಳಿದುದನ್ನು ಕೇಳಿ ರೋಷದಿಂದ ಅಗ್ನಿಕುಂಡದಲ್ಲಿಯೇ ಹಾರಿ ಪ್ರಾಣಬಿಟ್ಟಳಷ್ಟೆ. ಇದನ್ನು ಕೇಳಿದ ಶಿವನು ಅಲ್ಲಿಗೆ ಓಡಿಬಂದು, ಕೋಪದಿಂದ ಜಟೆಯನ್ನು ನೆಲಕ್ಕಪ್ಪಳಿಸಲು ವೀರಭದ್ರನು ಹುಟ್ಟಿಕೊಂಡು ದಕ್ಷಯಜ್ಞವನ್ನು ಧ್ವಂಸಮಾಡಿದ. ತನ್ನ ಸತಿಯ ಮರಣದಿಂದ ವಿಹ್ವಲನಾದ ಶಿವನು ಆಕೆಯ ಕಳೇಬರವನ್ನು ಹೆಗಲಮೇಲೆ ಹೊತ್ತು ಅಲೆದಾಡತೊಡಗಿದ. ಶಿವನ ಬವಣೆಯನ್ನು ತಪ್ಪಿಸಲು ವಿಷ್ಣುವು ಉಪಾಯದಿಂದ ಕಳೇಬರದ ಒಂದೊಂದು ಭಾಗವನ್ನು ಕಡಿದು ಉರುಳಿಸಿದನು. ಅವು ಬಿದ್ದ ಸ್ಥಳಗಳೇ ಶಕ್ತಿಪೀಠಗಳು. ಜಾಲಂಧರದಲ್ಲಿ ಆಕೆಯ ಸ್ತನಗಳು ಬಿದ್ದುವು, ಉಡ್ಡೀಯಾನದಲ್ಲಿ ತೊಡೆಗಳು ಬಿದ್ದುವು, ಪೂರ್ಣಗಿರಿಯಲ್ಲಿ ಕತ್ತು ಮತ್ತು ಭುಜಗಳು, ಕಾಮರೂಪ (ಕಾಮಾಖ್ಯ)ದಲ್ಲಿ ಯೋನಿ ಮಂಡಲ, ದೇವೀಕೂಟದಲ್ಲಿ ಕಾಲುಗಳು, ದಿಕ್ಕರವಾಸಿನಿಯಲ್ಲಿ ನಾಭಿಮಂಡಲ, ಲಲಿತಕಾಂತಾಕ್ಷೇತ್ರದಲ್ಲಿ ತಲೆ ಇವು ಬಿದ್ದುವು. ಅಷ್ಟು ಹೊತ್ತಿಗೆ ಶಿವನ ಶೋಕವೂ ಶಮನಗೊಂಡಿತು. ಒಂದೊಂದು ಶಕ್ತಿಪೀಠದಲ್ಲಿಯೂ ಶಿವನು ಒಂದೊಂದು ಅಂಶದಿಂದ ಶಕ್ತಿಯೊಡಗೂಡಿ (ಜಾಲಂಧರಲ್ಲಿ ಜಲೇಶ್ವರನಾಗಿ, ಉಡ್ಡೀಯಾನದಲ್ಲಿ ಜಗನ್ನಾಥನಾಗಿ, ಪೂರ್ಣಗಿರಿಯಲ್ಲಿ ಮಹಾನಾಥನಾಗಿ, ಕಾಮರೂಪದಲ್ಲಿ ಕಾಮೇಶ್ವರನಾಗಿ) ಇದ್ದಾನೆ ಎನ್ನುವ ಕಲ್ಪನೆಯಿದೆ.

ಸಾಮಾನ್ಯವಾಗಿ ಬಳಕೆಯಲ್ಲಿರುವ ಶಕ್ತಿಪೀಠಗಳು ಅಸ್ಸಾಮಪ್ರಾಂತ್ಯದಲ್ಲಿ ಕಾಮಾಖ್ಯ ಮತ್ತು ಶ್ರೀಹಟ್ಟ, ಮಹಾರಾಷ್ಟ್ರದಲ್ಲಿ ಕೊಲ್ಲಾಪುರ (ಮಹಾಲಕ್ಷ್ಮಿ), ತುಲಜಾಪುರ, (ಭವಾನಿ), ಮಾಹೂರು (ರೇಣುಕಾ, ಮತ್ತು ಸಪ್ತಶೃಂಗಿ), ಕರ್ನಾಟಕದಲ್ಲಿ ಕೊಲ್ಲೂರು (ಮೂಕಾಂಬಿಕಾ) ಮತ್ತು ಶೃಂಗೇರಿ (ಶಾರದಾ), ತಮಿಳು ನಾಡಿನಲ್ಲಿ ಕಾಂಚೀಪುರ (ಕಾಮಾಕ್ಷಿ ಅಮ್ಮನ್) ಮತ್ತು ಮಧುರೈ (ಮೀನಾಕ್ಷಿ), ಕೇರಳದಲ್ಲಿ ಕ್ರಾಂಗನೂರು (ಕುರುಂಬ ಭಗವತಿ) ಮತ್ತು ಮನ್ನಡಿ (ಕಾಳಿ). ಇವುಗಳಲ್ಲಿ ಕಾಮಾಖ್ಯ ಪುರಾಣಪ್ರಸಿದ್ಧವಾದ, ತುಂಬ ಪ್ರಾಚೀನವಾದ ಕ್ಷೇತ್ರ. ಅಸ್ಸಾಮ ಪ್ರಾಂತ್ಯದಲ್ಲಿ ಗೌಹತಿಗೆ ಮೂರುಮೈಲು ದೂರವಿರುವ ಈ ಕ್ಷೇತ್ರ ನೀಲಾಚಲವೆನ್ನುವ ಬೆಟ್ಟದ ಮೇಲಿದೆ; ಈ ಬೆಟ್ಟವನ್ನು ಶಿವನ ಮೈಯೆಂದು

ಚಿತ್ರ 117
ಕೊಲ್ಲಾಪುರದ ಲಕ್ಷ್ಮಿ

ನಿರ್ದೇಶಿಸುತ್ತಾರೆ. ಕಾಮಾಖ್ಯವೆಂಬ ಹೆಸರು ಸಂಸ್ಕೃತಮೂಲವಲ್ಲ; ದೇಶೀ ಭಾಷೆಯಲ್ಲಿ ಈ ಮಾತಿಗೆ ದೆವ್ವ ಪ್ರೇತ ಎಂಬ ಅರ್ಥಗಳಿದ್ದುವು. ಕಾಮಾಖ್ಯವನ್ನು ಇಂದಿಗೂ ಶ್ಮಶಾನವೆಂದೇ ಕರೆಯುವುದು ವಾಡಿಕೆಯಲ್ಲಿದೆ. ದೇವಾಲಯದ ಗರ್ಭಗುಡಿಯಲ್ಲಿ ದೇವತಾಮೂರ್ತಿಯಿಲ್ಲ: ಗುಹೆಯಿದ್ದು, ಅದರ ಮೂಲೆಯಲ್ಲಿ ಕರಿಯ ಕಲ್ಲುಗುಂಡೊಂದರ ಮೇಲೆ ಯೋನಿಯ ಸಂಕೇತವಿದೆ, ಅದು ಯಾವಾಗಲೂ ಒದ್ದೆಯಾಗಿರುವುದು ಒಂದು ವಿಶೇಷ. ಪ್ರತಿತಿಂಗಳೂ ಇಲ್ಲಿನ ದೇವಿ ಮುಟ್ಟಾಗುವಳೆಂದು ಪ್ರತೀತಿಯಿದೆ; ಆಷಾಢಮಾಸದ ಮೊದಲಲ್ಲಿ ಅಂಬುವಾಚಿ (ಅಮೋಟಿ) ಎನ್ನುವ ಸಂದರ್ಭದಲ್ಲಿ ಗುಡಿಯನ್ನು ಮೂರುದಿನ ಮುಚ್ಚಿರುತ್ತಾರೆ; ಅನಂತರ ಆಕೆಯ ಯೋನಿಯ ರಕ್ತಸ್ರಾವವೆನ್ನುವ ಕಲೆಯಿಂದ ಕೂಡಿದ ಬಟ್ಟೆಗಳನ್ನು ಭಕ್ತರಿಗೆ ಕೊಡುತ್ತಾರೆ. ದೇವೀ ಭಾಗವತವು

ಭೂಮಂಡಲೇ ಕ್ಷೇತ್ರರತ್ನಂ ಮಹಾಮಾಯಾಧಿವಾಸಿತಂ ।
ನಾತಃ ಪರತರಂ ಸ್ಥಾನಂ ಕ್ವಚಿದಸ್ತಿ ಧರಾತಲೇ ।
ಪ್ರತಿಮಾಸು ಭವೇದ್ದೇವೀ ಯತ್ರ ಸಾಕ್ಷಾದ್ರಜಸ್ವಲಾ ॥

ಎಂದು ಈ ಕ್ಷೇತ್ರದ ವಿಶೇಷವನ್ನು ಬಣ್ಣಿಸಿದೆ. ಈ ಕ್ಷೇತ್ರಮಾಹಾತ್ಮ್ಯೆಯಲ್ಲಿ ಬರುವ

ಯೋನಿಪೀಠಂ ಕಾಮಗಿರೌ ಕಾಮಾಖ್ಯಾ ತತ್ರ ದೇವತಾ ।
ಯತ್ರಾಸ್ತೇ ತ್ರಿಗುಣಾತೀತಾ ರಕ್ತಪಾಷಾಣರೂಪಿಣೀ ॥

ಎನ್ನುವ ನಿರ್ದೇಶನವೂ ಸ್ವಾರಸ್ಯವಾದುದು. ಈ ಕ್ಷೇತ್ರದ ಹಿನ್ನೆಲೆ ಮೇಲೆ ಹೇಳಿದ ದಕ್ಷಯಾಗದ ಕಥೆ; ಕಾಲಿಕಾ ಪುರಾಣದಲ್ಲಿ ಬರುವಂಥದು. ಇದು ಪ್ರಾಚೀನವಾದ ತಾಂತ್ರಿಕ ಪೀಠವೆನ್ನುವುದರಲ್ಲಿ ಸಂಶಯವಿಲ್ಲ; ಪ್ರಾಗಾರ್ಯ ಸಂಪ್ರದಾಯಕ್ಕೆ ಸೇರಿದುದು. ಅಲ್ಲಿ ನರಬಲಿಗಳೂ ನಡೆಯುತ್ತಿದ್ದುವು; ನೀಲಾಚಲವು ಶ್ಮಶಾನವೆಂದು ಮಾತ್ರವಲ್ಲ, ಸಂಭೋಗಸ್ಥಳವೆಂದೂ ತಿಳುವಳಿಕೆಯಿದ್ದಿತು. ಗುಡಿಯು ಶ್ರೀಚಕ್ರಾಕಾರದಲ್ಲಿದೆಯೆಂದು ನಂಬಿಕೆ; ತ್ರಿಕೋಣಾಕಾರದ ಯೋನಿಗೇ ಪೂಜೆನಡೆಯುವುದು. ದೇವಿಯ ನಾಮಮಾಲೆಯನ್ನು ಹೇಳುವಾಗ ಪ್ರತಿ ಹೆಸರಿನ ಕಡೆಯಲ್ಲಿ ವಾಡಿಕೆಯಾಗಿರುವ 'ನಮಃ' ಎನ್ನುವುದಕ್ಕೆ ಬದಲಾಗಿ 'ವೌಷಟ್' ಎಂದೇ ಅಲ್ಲಿ ಹೇಳುವ ಪದ್ಧತಿ. ಅಲ್ಲಿನ ಯಜುರ್ವೇದೀಯ ಕಾಣ್ವಶಾಖೆಗೆ ಸೇರಿದ ವೇದಶಾಕ್ತರು ತಮ್ಮನ್ನು ಕಾಮಾಖ್ಯರೆಂದು ಕರೆದುಕೊಳ್ಳುವರು.

ಮಹಾರಾಷ್ಟ್ರದಲ್ಲಿ ಪುಣೆಗೆ 150 ಮೈಲಿ ದಕ್ಷಿಣಕ್ಕೆ ಪಂಚಗಂಗಾನದಿಯ ದಡದ ಮೇಲಿರುವ ಕೊಲ್ಲಾಪುರ (ಕರವೀರ) ಮಹಾಲಕ್ಷ್ಮಿಯ ಸ್ಥಾನವೆಂದು ಪ್ರಸಿದ್ಧವಾಗಿದೆ. ಈ ಲಕ್ಷ್ಮಿಯು ಶಾಕ್ತಲಕ್ಷ್ಮಿಯೇ. ಬ್ರಹ್ಮನ ಮಾನಸಪುತ್ರರಾದ ಗಯ, ಲವಣ, ಕೊಲ್ಲ ಎಂಬ ಅಸುರರು ಶಿವನ ಅನುಗ್ರಹವನ್ನು ಪಡೆದು ಲೋಕಕಂಟಕರಾಗಲು ವಿಷ್ಣುವು ಗಯನನ್ನೂ ಲವಣವನ್ನೂ ಕೊಂದನು; ಈ ಸೇಡನ್ನು ತೀರಿಸಿಕೊಳ್ಳಲು ಕೊಲ್ಲನು ಕೊಲ್ಲಾಗಿರಿಗೆ ಬಂದು ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಲೋಕಾಧಿಪತ್ಯವನ್ನು ಪಡೆದನು. ಒಂದು ಸಮಯ ಕೊಲ್ಲನು ತನ್ನ ಮಗ ಕರವೀರನಿಗೆ ಪಟ್ಟಕಟ್ಟಿ, ತಾನು ತಪಸ್ಸಿಗೆ ಹೋಗಿರಲು, ಕರವೀರನು ದೇವತೆಗಳನ್ನು

ಹಿಂಸಿಸತೊಡಗಿದಾಗ ಶಿವನು ಅವನನ್ನು ಕೊಂದು ಅವನ ಬಯಕೆಯಂತೆ ಅವನು ಆಳುತ್ತಿದ್ದ ಊರಿಗೆ ಕರವೀರವೆಂದೇ ಹೆಸರಿಟ್ಟನು. ಇದನ್ನು ಕೇಳಿ ಕೊಲ್ಲಾಸು ಮಹಾಲಕ್ಷ್ಮಿಯನ್ನು ಕುರಿತು ತಪಸ್ಸುಮಾಡಿ ಆಕೆ ಕೊಲ್ಲಾಪುರವನ್ನು ಬಿಟ್ಟು ಒಂದು ನೂರು ವರ್ಷಕಾಲ ಹೊರಗಿರುವಂತೆ ಬೇಡಿಕೊಂಡನು; ಏಕೆಂದರೆ ದೇವಿ ಅಲ್ಲಿರುವವರೆಗೂ ಅವನು ದೇವತೆಗಳನ್ನು ಹಿಂಸಿಸುವುದು ಅಸಾಧ್ಯವಾಗಿದ್ದಿತು. ದೇವಿಯೂ ಒಪ್ಪಿ ಹಿಮಾಲಯಕ್ಕೆ ಹೊರಟಳು. ಅಡ್ಡಿ ಆತಂಕವಿಲ್ಲದೆ ಕೊಲ್ಲ ದೇವತೆಗಳನ್ನು ಬಾಧಿಸತೊಡಗಿದ. ಆದರೆ ನೂರು ವರ್ಷಗಳು ಕಳೆಯಲು ಲಕ್ಷ್ಮಿಯು ಘೋರರೂಪ ತಾಳಿ ಕಂಕಭೈರವ, ಸಿದ್ಧಬಟುಕೇಶ್ವರ, ಕಾಳಭೇತಾಳ ಮತ್ತು ಅವಳ ಸೋದರಿ ಚಾಮುಂಡೆಯರ ನೆರವಿನಿಂದ ಕೊಲ್ಲನನ್ನು ಕೊಂದಳು. ಇದು ಈ ದೇವತೆಯ ಪೌರಾಣಿಕ ಹಿನ್ನೆಲೆ.

ಒಂದು ಕಾಲಕ್ಕೆ ಇದು ಶಾಕ್ತಸಂಪ್ರದಾಯದ ಕೇಂದ್ರವಾಗಿದ್ದಿತೆನ್ನುವುದು ಸ್ಪಷ್ಟವಾಗುತ್ತದೆ. ಮಂಡಪದ ಗೋಡೆಯೊಂದರ ಮೇಲೆ ಶ್ರೀಚಕ್ರವಿರುವುದೂ, ಲಕ್ಷ್ಮಿಯ ಮೂರ್ತಿಶಿಲ್ಪದ ವಿವರಗಳೂ ಇದನ್ನು ಸಮರ್ಥಿಸುತ್ತವೆ. ಹಿಂಬದಿಯಲ್ಲಿ ಸಿಂಹವಿದ್ದು ಮುಂದೆ ನಿಂತಿರುವ ಲಕ್ಷ್ಮಿಯ ಕರೀಕಲ್ಲಿನ ಮೂರ್ತಿ ಸುಮಾರು ಮೂರು ಅಡಿ ಎತ್ತರವಿದ್ದು ಸುಮುಖವಾಗಿದೆ. ನಾಲ್ಕು ಕೈಗಳಲ್ಲಿ ಮಾತುಲಿಂಗ ಅಥವಾ ಶ್ರೀಫಲ (ನಿಂಬೆ ಹಣ್ಣಿಗಿಂತ ಕೊಂಚ ದೊಡ್ಡ ಗಾತ್ರದಲ್ಲಿದೆ), ಭೂಮಿಯನ್ನು ಮುಟ್ಟಿರುವ ದೊಡ್ಡ ಗದೆ ಕೌಮೋದಕೀ, ಖೇಟಕವೆಂಬ ಗುರಾಣಿ, ಪಾನಪಾತ್ರೆಗಳನ್ನು ಕಾಣಬಹುದು. ಪಾನಪಾತ್ರೆ ಶಾಕ್ತಸಂಪ್ರದಾಯದ ಲಾಂಛನ. ವಿಶ್ವಕರ್ಮಶಾಸ್ತ್ರದಲ್ಲಿ ಬರುವ ಈ ಮೂರ್ತಿಲಕ್ಷಣ ಹೇಮಾದ್ರಿಯ ಚತುರ್ವರ್ಗಚಿಂತಾಮಣಿಯಿಂದ ಎತ್ತಿಕೊಂಡಿದೆ. —

> ದಕ್ಷಿಣಾಧಃ ಕರೇ ಪಾತ್ರಾಮೂರ್ಧ್ವೇ ಕೌಮೋದಕೀಂ ತಥಾ ।
> ವಾಮೋರ್ಧ್ವೇ ಖೇಟಕಂ ಧತ್ತೇ ಶ್ರೀಫಲಂ ತದಧಃ ಕರೇ ।
> ಬಿಭ್ರತೀ ಮಸ್ತಕೇ ಲಿಂಗಂ ಪೂಜನೀಯಾ ವಿಭೂತಯೇ ॥

ಮಾರ್ಕಂಡೇಯ ಪುರಾಣದ ದೇವೀಮಾಹಾತ್ಮ್ಯೆಯಲ್ಲಿ —

> ಮಾತುಲಿಂಗಂ ಗದಾಂ ಖೇಟಂ ಪಾನಪಾತ್ರಂ ಚ ಬಿಭ್ರತೀ ।
> ನಾಗಂ ಲಿಂಗಂ ಚ ಯೋನಿಂ ಚ ಬಿಭ್ರತೀ ನೃಪ ಮೂರ್ಧನಿ ॥

ಎಂದಿದೆ. ತಲೆಯ ಮೇಲೆ ನಾಗಲಿಂಗವನ್ನೂ ಯೋನಿಯನ್ನೂ ಕಡೆದಿರುವುದು ಸ್ವಾರಸ್ಯವಾದ ವಿವರ. ಲಕ್ಷ್ಮಿಯು ವೈಷ್ಣವಶಕ್ತಿಯೆಂದು ಸಾಮಾನ್ಯವಾಗಿ ಎಣಿಕೆಯಲ್ಲವೆ? ಆದರೆ ಇಲ್ಲಿನ ಲಕ್ಷ್ಮಿಗೆ ವಿಷ್ಣುವಿನ ಸಂಬಂಧ ಕಡಮೆ. ವೇಂಕಟೇಶ್ವರ ಮಾಹಾತ್ಮ್ಯೆಯಲ್ಲೇನೋ ಲಕ್ಷ್ಮಿಯು ಕೊಲ್ಲಾಪುರದಲ್ಲಿ ನಿಂತಳೆಂದೂ ವಿಷ್ಣುವು ವೇಂಕಟಾಚಲಕ್ಕೆ ಬಂದನೆಂದೂ ಅವರಿಬ್ಬರ ಪುನರ್ಮಿಲನ ವೆಂಕಟಾಚಲದ ಪರಿಸರದಲ್ಲಿಯೇ ಆಯಿತೆಂದೂ ವಿವರವಿದೆ. ತಿರುಮಲೆಯ ವೇಂಕಟೇಶ್ವರನಿಗೂ ಕೊಲ್ಲಾಪುರದ ಲಕ್ಷ್ಮಿಗೂ ಪ್ರಾಚೀನ ಸಂಬಂಧ ಇದ್ದಿರಬಹುದು; ಇದು ಶಾಕ್ತ ಸಂಪ್ರದಾಯದ ನೆಲೆಯಲ್ಲಿಯೇ ಒದಗಿಬಂದ ಸಂಬಂಧವೆನ್ನುವುದನ್ನು ಗಮನಿಸಬೇಕು. ತಿರುಮಲೆಯೂ ಒಂದು ಕಾಲಕ್ಕೆ ಶಾಕ್ತಪೀಠವಾಗಿದ್ದಿತೆನ್ನುವುದೂ ನಿರ್ವಿವಾದ; ಅಲ್ಲಿನ ದೇವರು ವಿಷ್ಣುವಾದುದೂ ಈಚೆಗೆ. ತಿರುಚ್ಚಾನೂರಿನ ಪದ್ಮಾವತಿಯೂ ಸ್ವತಂತ್ರದೇವತೆ; ವೇಂಕಟೇಶ್ವರನಿಗೂ ಈ ದೇವತೆಗೂ ಬೆಳೆದು ಬಂದ ಸಂಬಂಧ ಅಷ್ಟೇನು ಪ್ರಾಚೀನವೂ ಅಲ್ಲ, ನಿಕಟವೂ ಅಲ್ಲ ಎನ್ನುವುದನ್ನು ಎರಡೂ ದೇವಾಲಯಗಳ ಸಂಪ್ರದಾಯ ಭೇದವನ್ನು ಪರಿಶೀಲಿಸಿ ತಿಳಿಯಬಹುದು. ಇದು ಹೇಗಾದರೂ ಇರಲಿ, ಕೊಲ್ಲಾಪುರದಲ್ಲಿ ಲಕ್ಷ್ಮಿಯ ಪಾರ್ಶ್ವದೇವತೆಗಳು ದಕ್ಷಿಣಕ್ಕೆ ಮಹಾಸರಸ್ವತಿ ಅಥವಾ ಕೊಲ್ಲಾಸುರ, ಪಶ್ಚಿಮಕ್ಕೆ ಕಂಕಭೈರವ, ಉತ್ತರಕ್ಕೆ ಮಹಾಕಾಳಿ; ಮುಂಭಾಗದಲ್ಲಿ ಗಣೇಶ; ವಾಹನ ದುರ್ಗೆಗಿರುವಂತೆ ಸಿಂಹ. ಗರ್ಭಗೃಹದ ಮೇಲ್ಭಾಗ

ದಲ್ಲಿ ಶಿವಲಿಂಗವಿದೆ. ಸುತ್ತಲೂಗೂಡುಗಳಲ್ಲಿ ಉತ್ತರಕ್ಕೆ ಮುಖಮಾಡಿ ವೇಂಕಟೇಶ, ಪೂರ್ವಕ್ಕೆ ಕಾತ್ಯಾಯನಿ, ದಕ್ಷಿಣಕ್ಕೆ ಗೌರೀಶಂಕರ, ಈ ಮೂರ್ತಿಗಳಿವೆ.

ಕೊಲ್ಲಾಪುರಕ್ಷೇತ್ರದ ಸ್ಫೂರ್ತಿಯಿಂದ ಕಟ್ಟಿಸಿದ ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿದೇವಾಲಯವೂ ಸ್ವಾರಸ್ಯವಾಗಿದೆ. ನಮ್ಮ ನಾಡಿನಲ್ಲಿಯೇ ಹಾಸನದ ಬಳಿಯಿರುವ ದೊಡ್ಡಗದ್ದವಳ್ಳಿಯನ್ನು ಅಭಿನವ ಕೊಲ್ಲಾ ಪುರವೆಂದೇ ಕರೆಯುತ್ತಾರೆ. ಹೊಯ್ಸಳಶೈಲಿಯ ಈ ಗುಡಿಯಲ್ಲಿರುವ ಲಕ್ಷ್ಮಿ ಶಂಖ–ಚಕ್ರ–ಗದಾ–ಜಪ ಮಾಲೆಗಳನ್ನು ಹಿಡಿದ, ಮೂರುವರೆ ಅಡಿ ಎತ್ತರದ ಸ್ಥಾನಕಮೂರ್ತಿ. ಇಲ್ಲಿನ ಪಾರ್ಶ್ವದೇವತೆಗಳು ಭೂತನಾಥನೆನಿಸಿಕೊಳ್ಳುವ ಶಿವಲಿಂಗ (ದೇವಿಯ ಎದುರಿಗೇ ಇರುವುದು), ಭೈರವ, ಕಾಳಿ. ಭೈರವಮೂರ್ತಿ ಮೊದಲಿಗೆ ವಿಷ್ಣುವಾಗಿದ್ದಿತೆಂದು ತಿಳಿದುಬರುತ್ತದೆ; ಈಗಲೂ ವಿಷ್ಣುವಿನ ನಿರ್ದೇಶನವೇ ಇದೆ. ಪಾದ ಪೀಠದಲ್ಲಿ ಗರುಡಲಾಂಛನವಿರುವುದನ್ನು ಗಮನಿಸಬಹುದು. ಆದರೆ ಗುಡಿಯ ಮುಖ್ಯ ಆಕರ್ಷಣೆ ಪ್ರೇತವಾಹಿನಿಯಾದ ಮಹಾಕಾಳಿಯ ಉಜ್ವಲ–ಭಯಾನಕ ಶಿಲ್ಪವೇ.

ತುಳಜಾಪುರದ ಅಂಬಾಭವಾನಿಯೂ ಶಕ್ತಿದೇವತೆಯೇ. ಮಹಾರಾಷ್ಟ್ರಪ್ರಾಂತ್ಯದಲ್ಲಿ ಉಸ್ಮಾನಾ ಬಾದ್ ಜಿಲ್ಲೆಗೆ ಸೇರಿದ ಈ ಕ್ಷೇತ್ರದಲ್ಲಿ ಮೂರು ಅಡಿ ಎತ್ತರದ, ಎಂಟುಭುಜಗಳ ಸ್ಥಾನಕಮೂರ್ತಿ ಭವಾನಿ, ಅಂಬಾ, ತುಳಜಾ, ತುರಜಾ, ತ್ವರಿತಾ, ತುಕಾ ಈ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿದೆ. ಇದು ಸ್ವಯಂಭು ಮೂರ್ತಿಯೆಂದು ಪ್ರತೀತಿ. ತ್ರಿಶೂಲ, ಭರ್ಜಿ, ಬಾಣ, ಶಂಖ, ಬಿಲ್ಲು, ಪಾನಪಾತ್ರೆ, ಅಸುರನ ತಲೆಮುಡಿ ಇವು ಕೈಗಳಲ್ಲಿವೆ; ಈಕೆಯ ವಾಹನವೂ ಸಿಂಹವೇ. ಬಲಗಾಲು ಮಹಿಷಾಸುರನ ಮೇಲಿದೆ, ಎಡಗಾಲು ನೆಲದ ಮೇಲಿದೆ. ಕಾಲುಗಳ ನಡುವೆ ಅಸುರನ ತಲೆಯನ್ನು ದೇವಿ ಹಿಡಿದಿದ್ದಾಳೆ. ತಲೆಯ ಮೇಲ್ಭಾಗದಲ್ಲಿ ಯೋನಿ ಲಿಂಗಗಳನ್ನು ಕಾಣಬಹುದು. ಮತಂಗನೆಂಬ ಅಸುರನನ್ನು ದೇವಿ ಮಾತಂಗಿಯಾಗಿಯೇ ಕೊಂದಳೆಂದು ಸ್ಥಳ ಪುರಾಣ ಹೇಳುತ್ತದೆ. ಈ ದೇವಿಯ ಭಕ್ತರಾದ ಗೋಂಧಲಿಯರೆಂಬ ಜನ ವಿಶೇಷ ಸಂದರ್ಭಗಳಲ್ಲಿ ಗೊಂದಲ–ನೃತ್ಯವನ್ನು ಮಾಡುವರು. ಅನುಭೂತಿಯೆಂಬ ಹೆಣ್ಣಿನ ಕಥೆಯನ್ನು ಹೆಣೆದಿರುವುದು ಈ ಕ್ಷೇತ್ರದ ಜಾನಪದ ನೆಲೆಯನ್ನು ಸ್ಪಷ್ಟಪಡಿಸುತ್ತದೆ. ಕರ್ದಮಪಂಡಿತನ ಹೆಂಡತಿಯಾದ ಅನುಭೂತಿಯೆಂಬುವಳೇ ಈ ದೇವಿ ಯನ್ನು ಯಮುನಾಚಲವಾದ ಇಲ್ಲಿಗೆ ತರಲು ಕಾರಣಳಾದಳೆಂದು ಕಥೆ. ಗಂಡ ತೀರಿಕೊಂಡಾಗ, ಅನುಭೂತಿಗೆ ಸತಿಯಾಗುವ ಮನಸ್ಸಿತ್ತಾದರೂ ಸಣ್ಣ ಮಗನಿದ್ದುದರಿಂದ ಆಗದೆ ಅವನನ್ನು ಬೆಳೆಸಿ, ಅವನು ದೊಡ್ಡವ ನಾದೊಡನೆ ಮೇರುಪರ್ವತದಲ್ಲಿ ತಪಶ್ಚರ್ಯೆ ಮಾಡುತ್ತ ನಿಂತಳು. ಆದರೆ ಆ ಪರಿಸರದಲ್ಲಿ ಬೇಟೆಯಾಡು ತ್ತಿದ್ದ ಕುಕೂರನೆಂಬ ದಾನವರಾಜ ಆಕೆಯನ್ನು ಮೋಹಿಸಿ, ವಶಪಡಿಸಿಕೊಳ್ಳಲೆತ್ನಿಸಿದನು. ಅನುಭೂತಿಯು ದೇವಿಯಲ್ಲಿ ಮೊರೆಯಿಡಲು ದೇವಿಯು ತನ್ನ ಯೋಗಿನಿಯರು, ಗಣಗಳು, ಚಾಮುಂಡೆ, ಕಂಕಭೈರವ, ಕ್ಷೇತ್ರ ಪಾಲರ ನೆರವಿನಿಂದ ದಾನವರಾಜನನ್ನೂ ಅವನ ಸೇನೆಯನ್ನೂ ಸದೆಬಡಿದಳು.

ಅಂತೂ ದಾನವರಾದ ಕೊಲ್ಲ, ಕುಕೂರ, ಮಹಿಷಾ, ದಾರುಕ, ಶುಂಭ, ನಿಶುಂಭ ಮೊದಲಾದವರನ್ನು ನಿಗ್ರಹಿಸಲೆಂದು ದೇವಿಯ ಅವತಾರದ ಸಂದರ್ಭ. ಶುಂಭ–ನಿಶುಂಭರಿಂದ ದೇವತೆಗಳು ಬವಣೆಪಡುತ್ತಿರುವಾಗ, ಶುಂಭನು ದೇವಿಯನ್ನು ಮೋಹಿಸಿದನಂತೆ; ಆಕೆ ಅವನನ್ನು ತಿರಸ್ಕರಿಸಲು ಚಂಡ–ಮುಂಡರೆಂಬ ದಾನವರ ಯಾಜಮಾನ್ಯದಲ್ಲಿ ದೊಡ್ಡ ಸೇನೆಯೊಂದನ್ನು ಕಳುಹಿಸಿದನಂತೆ. ಆಗ ದೇವಿಯು (ಚಾಮುಂಡಿ) ಕಾಳಿಯನ್ನು ಕಳುಹಿಸಿ ಈ ಸೇನೆಯನ್ನೂ ಅದರ ನಾಯಕರನ್ನೂ ನಾಶಪಡಿಸಿ, ಕಾಳಿಯನ್ನು 'ಚಂಡಿ' ಅಥವಾ 'ಚಂಡಿಕೆ'ಯೆಂದು ಕರೆದಳಂತೆ. ಅನಂತರ ಚಾಮುಂಡಿಯು ತಾನೇ ಶುಂಭ–ನಿಶುಂಭರನ್ನು ಕೊಂದಳಂತೆ. ಇಲ್ಲಿ ಚಾಮುಂಡಿಗೂ

ಚಂಡಿಕೆಗೂ ಭೇದವೆಣಿಸಿದ್ದಾರೆ; ಆದರೆ ಅದು ಅವತಾರಭೇದವಷ್ಟೆ. ವ್ಯವಹಾರದಲ್ಲಿ ಚಂಡಿ–ಚಾಮುಂಡಿಯರು ಒಂದೇ ದೇವತೆ. ಕಾಳಿ ಅಥವಾ ಭದ್ರಕಾಳಿಯು ಕೋಪಾವೇಶದ ಮೂರ್ತಿಯಾದುದರಿಂದ ಆಕೆಯನ್ನು ಅಘೋರಶಕ್ತಿಯೆಂದು ಕರೆಯುವುದುಂಟು. ಆಕೆಯನ್ನು ದುಷ್ಟಶಕ್ತಿಯೆಂದೇ ಪರಿಗಣಿಸಿರುವ ವಿವರಗಳೂ ಇವೆ. ನಿದರ್ಶನಕ್ಕೆ, ಚಿದಂಬರದಲ್ಲಿ ಕಾಳಿಯು ಶಿವನೊಂದಿಗೆ ಕುಣಿದಾಗ ಶಿವನನ್ನು ತಮಿಳಿನಲ್ಲಿ 'ಪೇಯೋಡಾಡಿ' (ಎಂದರೆ ಭೂತದೊಂದಿಗೆ ಕುಣಿದವನು) ಎಂದು ಕರೆದರು. ಕಾಳಿಯ ಮೂರ್ತಿಶಿಲ್ಪವೂ ಭಯಾನಕ ವಾದುದು. ಕೋರೆದಾಡೆಗಳಿರುವ ಬಾಯಿ, ಹೊರಚಾಚಿದ ನಾಲಗೆ, ಕೆದರಿದ ಕೂದಲಲ್ಲಿ ಬುಸುಗುಟ್ಟುವ ಹಾವುಗಳು, ಹಣೆಯ ಮೇಲೆ ಕೆಂಡಗಣ್ಣು, ಹತ್ತುಕೈಗಳು, ಆವೇಶದಿಂದ ಕುಣಿಯುವ ಭಂಗಿ, ಒಮ್ಮೊಮ್ಮೆ ಶಿವನನ್ನೇ ತುಳಿಯುತ್ತ ಮಾಡುತ್ತಿರುವ ಕುಣಿತ, ಇತ್ಯಾದಿ. ಆಕೆಯ ಪಾರ್ಶ್ವದೇವತೆಗಳು ವೀರಭದ್ರ, ಅಘೋರ, ವಿಘ್ನೇಶ್ವರರು. ವೀರಭದ್ರನಂತೂ ಶಿವನ ಕೋಪದಿಂದಲೇ ಹುಟ್ಟಿದ ಮೂರ್ತಿ, ದಕ್ಷಯಾಗವನ್ನು ಧ್ವಂಸಮಾಡಿದವನು. ಅಘೋರನು ಮರುತ್ವನೆಂಬ ರಾಕ್ಷಸನನ್ನು ಕೊಲ್ಲಲು ಲಿಂಗದಿಂದ ಹೊರಹೊರಟ ಮೂರ್ತಿ. ವಿಘ್ನೇಶ್ವರನು ಭೂತಗಣಾಧಿಪತಿಯಲ್ಲವೆ? ಇವರಲ್ಲದೆ ಭೂತಭೇತಾಳಗಳು ಆಕೆಯ ಪಾರಿಚಾರಕರು.

ಕಲಕತ್ತೆಯಲ್ಲಿರುವ ಕಾಳೀದೇವಾಲಯ ಪ್ರಸಿದ್ಧವಾದುದು. ಸುಪ್ರಸಿದ್ಧ ವೈಷ್ಣವ ಸಂತ ಕೃಷ್ಣಚೈತನ್ಯ (1485–1533) ನ ಕಾಲದಲ್ಲಿದ್ದ ತಾಂತ್ರಿಕ ಕೃಷ್ಣಾನಂದ ಆಗಮವಾಗೀಶನೆಂಬುವನೇ ಈಗ ಬಳಕೆಯಲ್ಲಿರುವ ಕಾಳೀಮೂರ್ತಿಲಕ್ಷಣಗಳನ್ನು ನಿರ್ದೇಶಿಸಿದವನೆಂದೂ, ಬಂಗಾಳದಲ್ಲಿ ಕಾಳಿಕಾಪೂಜೆಯು ಪ್ರಚಲಿತವಾದುದು ಈತನ ಪ್ರಭಾವದಿಂದಲೇ ಎಂದೂ ಹೇಳುತ್ತಾರೆ. ಭವಾನಿಯೆಂಬ ಹೆಸರಿನಿಂದ ಕಾಳಿಯನ್ನು ಠಕ್ಕರು ಕುಲದೇವತೆಯೆಂದು ಆರಾಧಿಸುತ್ತಿದ್ದರು. ಈಕೆಗೆ ಮದ್ಯಮಾಂಸನಿವೇದನ, ಪಶುಬಲಿ, ನರಬಲಿಗಳನ್ನು ಕೊಡುವ ಪದ್ಧತಿಯಿದ್ದಿತು.

ದಕ್ಷಿಣದ ಕಡೆ ಕಾಳಿಯನ್ನು ಚಾಮುಂಡಿಯೆಂದು ಬಗೆದು ಪೂಜೆಮಾಡುತ್ತಾರೆ. ಮೈಸೂರಿನ ಅರಸು ಮನೆತನದ ಕುಲದೇವತೆ ಚಾಮುಂಡಾಂಬಿಕೆ, ಮಹಿಷಾಸುರನನ್ನು ಕೊಂದವಳು. ಈ ರೂಪಿನಲ್ಲಿಯೂ ಆಕೆಗೆ ಕೋರೆಬಾಡೆಗಳಿವೆ. ಸಿಂಹವಾಹಿನಿಯಾಗಿ ಅಸುರಮರ್ದಿನಿಯಾದಾಗ ಎಂಟು ಕೈಗಳಿರುವುದು ವಾಡಿಕೆ. ಸ್ಥಾನಕಭಂಗಿಯಲ್ಲಿ ನಾಲ್ಕೇ ಕೈಗಳಿರುತ್ತವೆ; ವೈಷ್ಣವ ಆಯುಧಗಳಾದ ಶಂಖ, ಚಕ್ರಗಳಿರುವುದನ್ನು ಗಮನಿಸಬಹುದು. ಚಾಮುಂಡಿ ಅಥವಾ ದುರ್ಗೆ ವಿಷ್ಣುವಿನ ಸೋದರಿಯೆಂದು ಪ್ರತೀತಿ; ಕೋಕಾಮುಖನಾದ ವಿಷ್ಣುವಿನ ಸೋದರಿ ಈಕೆ ಕೋಕಾಮುಖಿಯೆಂದೇ ಪ್ರಸಿದ್ಧಳು. ಮಹಿಷದ ತಲೆಯ ಮೇಲೆ ನಿಂತಿರುವಂತೆ ಶಿಲ್ಪಗಳಿವೆ. ಮಹಿಷಾಸುರನನ್ನು ಕೊಲ್ಲುತ್ತಿರುವಂತೆ ಶಿಲ್ಪದಲ್ಲಿ ದೇವಿ ಸಿಂಹವಾಹಿನಿಯಾಗಿರುವುದು ಸಾಮಾನ್ಯ. ಬಿಹಾರದ ಶಹಾಬಾದಿನ ಬಳಿಯಿರುವ ಮುಂಡೇಶ್ವರಿಯಲ್ಲಿ ದುರ್ಗೆ ಮಹಿಷಾಸುರನನ್ನೇರಿ ಸವಾರಿ ಮಾಡುತ್ತಿರುವ ಶಿಲ್ಪವೂ ಇದೆ.

ಸಾಮಾನ್ಯವಾಗಿ ಜನರ ಎಣಿಕೆಯಲ್ಲಿ ಚಾಮುಂಡಿ, ದುರ್ಗೆ, ಕಾಳಿ ಎಲ್ಲವೂ ಒಂದೇ ಶಕ್ತಿಯೇ ಆದರೂ ಮೂರ್ತಿಲಕ್ಷಣದಲ್ಲಿಯೂ ಸಂದರ್ಭದಲ್ಲಿಯೂ ವೈವಿಧ್ಯವಿದೆ. ದುರ್ಗಾವತಾರದಲ್ಲಿ ಸಿಂಹಮುಖದ ಅಸುರನನ್ನು ಕೊಂದಳೆಂದು ಕಥೆ. ಸಿಂಹಮುಖಾಸುರನು ಅಯ್ಯಪ್ಪ–ಶಾಸ್ತನ ಬಂಟನಾಗಿದ್ದು ಆ ದೇವತೆಯ ಉದ್ಯಾನಗಳನ್ನು ನೋಡಿಕೊಳ್ಳುತ್ತಿದ್ದನಂತೆ. ದುರ್ಗೆ ಆತನ ಅಪ್ಪಣೆಯಿಲ್ಲದೆ ಉದ್ಯಾನವನ್ನು ಪ್ರವೇಶಿಸಲು ಅವರಿಬ್ಬರಿಗೂ ಹಗರಣ ಮೊದಲಾಗಿ, ದುರ್ಗೆ ಅಸುರನನ್ನು ಕೊಂದಳು. ಅನಂತರ ಅಸುರನು ನಿರ್ವಹಿಸುತ್ತಿದ್ದ

ಕೆಲಸವನ್ನು ಶಾಸ್ತನು ದುರ್ಗೆಗೇ ಒಪ್ಪಿಸಿದನೆಂದು ಕಥೆ. ಆರು ಕೈಗಳ ದುರ್ಗೆ ಪಾಶಾಂಕುಶ ಖಡ್ಗ ಖೇಟ ತಲೆಮುಡಿಗಳನ್ನು ಹಿಡಿದಿರುತ್ತಾಳೆ; ಸಿಂಹಮುಖಾಸುರನನ್ನು ಕೊಂದ ಈಕೆಗೆ ಕುರಿಯ ಮುಖವನ್ನಳವಡಿಸಿರುವುದು ಸ್ವಾರಸ್ಯವಾದ ವಿವರ.

ಒಂದೇ ಶಕ್ತಿಯು ಸಂದರ್ಭೋಚಿತವಾಗಿ ನಾಲ್ಕು ಬಗೆಗಳಲ್ಲಿ ಪ್ರಕಟವಾಗುವುದಂತೆ—ಭೋಗದಲ್ಲಿ ಭವಾನಿ. ಯುದ್ಧಪ್ರಸಂಗದಲ್ಲಿ ದುರ್ಗಾ, ಕೋಪಬಂದಾಗ ಕಾಳಿ, ಮತ್ತು ಕಾಪಾಡುವಾಗ ವಿಷ್ಣು—

ಏಕೈವ ಶಕ್ತಿಃ ಪರಮೇಶ್ವರಸ್ಯ ಭಿನ್ನಾ ಚತುರ್ಧಾ ವಿನಿಯೋಗಕಾಲೇ
ಭೋಗೇ ಭವಾನೀ ಸಮರೇಷು ದುರ್ಗಾ ಕೋಪೇ ಚ ಕಾಲೀ ತ್ವವನೇ ತು ವಿಷ್ಣುಃ

ಶಕ್ತಿಯ ಅಭಿವ್ಯಕ್ತಿ

ವಿಷ್ಣುವನ್ನು ಶಕ್ತಿಯ ಅಭಿವ್ಯಕ್ತಿಗಳಲ್ಲೊಂದೆಂದು ಬಗೆದಿರುವುದು ಸ್ವಾರಸ್ಯವಲ್ಲವೆ? ವಿಷ್ಣುವನ್ನು ಶಕ್ತಿಯೆಂದು ನಿರ್ದೇಶಿಸಿರುವುದು ಪ್ರಾಚೀನವಾದುದೇ. ವಿಷ್ಣುವಿಗೂ ಯೋನಿಗೂ ಇರುವ ಸಂಬಂಧ ಋಗ್ವೇದ ಮಂತ್ರದಲ್ಲಿಯೇ (10, 184, 1) ಕಾಣಸಿಗುತ್ತದೆ.

ವಿಷ್ಣುರ್ಯೋನಿಂ ಕಲ್ಪಯತು ತ್ವಷ್ಟಾ ರೂಪಾಣಿ ಪಿಂಷತು ।
ಆ ಸಿಂಚತು ಪ್ರಜಾಪತಿರ್ಧಾತಾ ಗರ್ಭಂ ದಧಾತು ತೇ ॥

"ವಿಷ್ಣುವು ಯೋನಿಯನ್ನು ಒದಗಿಸಲಿ (ಎಂದರೆ ಗರ್ಭವನ್ನು ಹೊರುವಂತಾಗಲಿ; ಸಾಯಣರ ಮಾತು—'ಗರ್ಭಾಧಾನಕ್ಷಮಂ ಕರೋತು'); ತ್ವಷ್ಟನು ಆಕಾರಗಳನ್ನು ಮೂಡಿಸಲಿ; ಪ್ರಜಾಪತಿಯು (ರೇತಸ್ಸನ್ನು) ಸುರಿಯಲಿ; ಧಾತನು ನಿನ್ನಲ್ಲಿ ಬೀಜವನ್ನು ಉಂಟುಮಾಡಲಿ" ಎಂದು ಈ ಮಂತ್ರದ ಅರ್ಥ. ಮದುವೆಯ ಸಂದರ್ಭದಲ್ಲಿ ಈ ಮಂತ್ರದ ಬಳಕೆಯಿದೆ. ಕೃಷ್ಣಯಜುರ್ವೇದದಲ್ಲಿಯೂ ಇದೇ ಮಂತ್ರ ಮತ್ತೆ ಬರುತ್ತದೆ. ರುದ್ರಹೃದಯೋಪನಿಷತ್ತನಲ್ಲಿ 'ರುದ್ರನು ಬೀಜವನ್ನು ಒದಗಿಸುತ್ತಾನೆ, ವಿಷ್ಣುವು ಬೀಜಕ್ಕೆ ಯೋನಿಯಾಗುತ್ತಾನೆ' (ರುದ್ರಃ ಪ್ರವರ್ತತೇ ಬೀಜಂ ಬೀಜಯೋನಿರ್ಜನಾರ್ದನಃ) ಎಂದು ಹೇಳಿರುವುದನ್ನೂ ಗಮನಿಸಬೇಕು. ಅದೇ ಉಪನಿಷತ್ತಿನಲ್ಲಿಯೇ ಇನ್ನಷ್ಟು ಸ್ಪಷ್ಟವಾಗಿ 'ಯಾ ಉಮಾ ಸ ಸ್ವಯಂ ವಿಷ್ಣುಃ' ಎಂದು ನಿರೂಪಿಸಿದೆ. ಪಾರಾಶರೀಯ ವೈದಿಕಾಗಮದಲ್ಲಿ ವಿಷ್ಣುವು ಯೋನಿಯೆಂಬುದು ಶ್ರುತಿವಚನವೇ ಎಂದು ಹೇಳಿದ್ದಾರೆ—

ವಿಷ್ಣುರ್ಯೋನಿರಿತಿ ಶ್ರುತ್ವಾ ಲಿಂಗಪೀಠಂ ಸಮೀರಿತಂ ।
ಆದಿಪೀಠಂ ಭವೇದ್ಬ್ರಹ್ಮನ್ ಮಾಯಾಪೀಠಂ ತು ಮಧ್ಯಮಂ ।
ಊರ್ಧ್ವವೇದಿರ್ವಿಷ್ಣುಪೀಠಂ ವಿಷ್ಣುರ್ಯೋನಿರಿತಿ ಶ್ರುತಿಃ ॥

ಶಿಲ್ಪದಲ್ಲಿ ದುರ್ಗಾದೇವಿಯ ಸ್ಥಾನಕ ಮೂರ್ತಿಗಳು ವಿಷ್ಣುಮೂರ್ತಿಗಳಂತೆಯೇ ಇರುವುದನ್ನು ಗಮನಿಸಬೇಕು; ದುರ್ಗೆಯನ್ನು ನಾರಾಯಣಿ ಅಥವಾ ವೈಷ್ಣವಶಕ್ತಿಯೆಂದೇ ವ್ಯವಹರಿಸುವುದು ವಾಡಿಕೆ. ದುರ್ಗಾ ದ್ವಾದಶಾಕ್ಷರೀ ಮಂತ್ರಕ್ಕೆ 'ಶೇಷಪರ್ಯಂಕಶಾಯಿನೀ ನಾರಾಯಣೀ ದೇವತಾ'.

ಸಮರದೇವತೆಯಾದ ಮಹಿಷಮರ್ದಿನಿ–ದುರ್ಗೆಯ ಮೂರ್ತಿಲಕ್ಷಣವನ್ನು ಶಾರದಾತಿಲಕತಂತ್ರದಲ್ಲಿ ಬರುವ ಈ ಧ್ಯಾನಶ್ಲೋಕ ಸ್ಪಷ್ಟಪಡಿಸುತ್ತದೆ—

ಗಾರುಡೋಪಲಸನ್ನಿಭಾಂ ಮಣಿಮೌಳಿಕುಂಡಲಮಂಡಿತಾಂ
ನೌಮಿ ಫಾಲವಿಲೋಚನಾಂ ಘನಕುಂತಳಾಂ ಮಹಿಷೋಷಿಣೀಂ ।
ಚಕ್ರ–ಶಂಖ–ಕೃಪಾಣ–ಖೇಟಕ–ಬಾಣ–ಕಾರ್ಮುಕ–ಶೂಲಕಾಂ
ತರ್ಜನೀಮಪಿ ಬಿಭ್ರತೀಂ ನಿಜಬಾಹುಭಿಃ ಶಶಿಶೇಖರಾಂ ॥

ಮಹಿಷವನ್ನು ಹೆದರಿಸಿ ಕೊಲ್ಲುತ್ತಿರುವಂತೆ (ಮಹಿಷಂ ಭೀಷಯ ಭೀಷಯ ಹುಂ ಫಟ್ ಶಿಖಾ; ಮಹಿಷಂ ಹನ ಹನ ದೇವಿ ಹುಂ ಫಟ್ ಕವಚಂ), ಸಿಂಹವಾಹಿನಿಯಾಗಿರುವಂತೆ ದುರ್ಗೆಯನ್ನು ಚಿತ್ರಿಸಿರುತ್ತಾರೆ. ಪ್ರಸನ್ನವನದುರ್ಗೆಯಾದರೆ ಮಹಿಷದ ತಲೆಯ ಮೇಲೆ ನಿಂತಿರುತ್ತಾಳೆ (ಮಹಿಷೋತ್ತಮಾಂಗಸಂಸ್ಥಾ). ಜ್ವರ, ಸರ್ಪ, ಪಿಶಾಚಿಗಳಿಂದ ಬಾಧೆಯಿದ್ದರೆ ಅಥವಾ ಶತ್ರುಶಾಂತಿಗಾಗಿ ವನದುರ್ಗಾಪೂಜೆ ಮಾಡಬೇಕೆಂದು ಪ್ರಪಂಚಸಾರಸಂಗ್ರಹ ನಿರ್ದೇಶಿಸಿದೆ. ಶತ್ರುಸ್ತಂಭನಕ್ಕಾಗಿ ಬಗಲಾಮುಖೀದುರ್ಗೆಯ ಪೂಜೆ ವಿಧಿಸಲ್ಪಟ್ಟಿದೆ. ಈ ದುರ್ಗೆಯ ಮೂರ್ತಿಲಕ್ಷಣ —

ಗಂಭೀರಾಂ ಚ ಮದೋನ್ಮತ್ತಾಂ ತಪ್ತಕಾಂಚನಸನ್ನಿಭಾಂ ।
ಚತುರ್ಭುಜಾಂ ತ್ರಿನಯನಾಂ ಕಮಲಾಸನ ಸಂಸ್ಥಿತಾಂ ॥
ಮುದ್ಗರಂ ದಕ್ಷಿಣೇ ಪಾಶಂ ವಾಮೇ ಜಿಹ್ವಾಂ ಚ ವಜ್ರಕಂ ।
ಪೀತಾಂಬರಧರಾಂ ಸಾಂದ್ರವೃತ್ತ ಪೀನಪಯೋಧರಾಂ ॥

ಈಕೆಯಿಂದ ಒದಗುವ ವಿವರಗಳನ್ನು ಮಂತ್ರ ಹೇಳುತ್ತದೆ—"ಓಂ ಕ್ಲೀಂ ಬಗಲಾಮುಖಿ ಸರ್ವದುಷ್ಟಾನಾಂ ವಾಚಂ ಮುಖಂ ಪದಂ ಸ್ತಂಭಯ, ಜಿಹ್ವಾಂ ಕೀಲಯ, ಬುದ್ಧಿಂ ವಿನಾಶಯ ಕ್ಲೀಂ ಓಂ ಸ್ವಾಹಾ". ಈ ರೂಪಗಳಲ್ಲದೆ ಉಪದ್ರವನಾಶನಕ್ಕೆ ಶಾಂತಿದುರ್ಗೆ, ಉಚ್ಚಾಟನಕ್ಕೆ ಗಾಣಿದುರ್ಗೆ ಮತ್ತು ಪಕ್ಷಿದುರ್ಗೆ, ಭ್ರಮೆಯನ್ನುಂಟುಮಾಡುವುದಕ್ಕೆ ಘೋರರೂಪದ ಭ್ರಮರದುರ್ಗೆ ಮೊದಲಾದ ರೂಪಗಳ ಪೂಜೆಯೂ ಬಳಕೆಯಲ್ಲಿದೆ.

ವೇದಭಾಗಗಳಾದ ಬ್ರಾಹ್ಮಣಗಳಲ್ಲಿ ಹಲವಾರು ಮಾತೃದೇವತೆಯರ ಪ್ರಸ್ತಾಪ ಬರುತ್ತದೆ— ನಿರ್ಋತಿ, ಶಚೀ, ಮೀಢುಷೀ, ಯಮೀ, ಅಂಬಿಕಾ, ರುದ್ರಾಣಿ, ಶ್ರೀ, ಲಕ್ಷ್ಮಿ ಮತ್ತು ಸರಸ್ವತಿ. ಇವರಲ್ಲಿ ಅಂಬಿಕಾ ರುದ್ರಾಣಿಯರು ದುರ್ಗೆಯಾಗಿ ಮೈದಳೆದು ಪ್ರಸಿದ್ಧರಾದುದನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಇಂದ್ರನ ಹೆಂಡತಿಯಾದ ಶಚಿ ಮತ್ತು ಇವರಿಂದ ಹುಟ್ಟಿದ ಮಗ ಜಯಂತ, ವಿಷ್ಣುವಿನ ಹೆಂಡತಿಯಾದ ಲಕ್ಷ್ಮಿ ಮತ್ತು ಇವರ ಮಗ ಮದನ ಇವರು ಆರ್ಯಸಂಸಾರದ ದೈವೀ ನಿದರ್ಶನವಾದರು. ಇಂದಿನ ಹಿಂದೂ ಧರ್ಮದ ದೇವತೆಗಳಲ್ಲಿ ದುರ್ಗೆ, ಲಕ್ಷ್ಮಿ. ಸರಸ್ವತಿಯರು ಪ್ರಮುಖರಾಗಿ ಉಳಿದುಬಂದಿದ್ದಾರೆ. ಲಕ್ಷ್ಮಿ (ಶ್ರೀ) ವೈದಿಕ ದೇವತೆಯೇ. ಲಕ್ಷ್ಮಿಯೆಂದರೆ ವಿಷ್ಣುಪತ್ನಿಯೆಂದು ನಮ್ಮ ಕಲ್ಪನೆ ದೃಢವಾಗಿಬಿಟ್ಟಿದೆಯಲ್ಲವೆ? ಆದರೆ ಬಹುಕಾಲ ಲಕ್ಷ್ಮಿ ವಿಷ್ಣುವಿನ ಸಂಬಂಧವಿಲ್ಲದೆ ಸ್ವತಂತ್ರ ದೇವತೆಯಾಗಿದ್ದಳು. ಋಗ್ವೇದದ ಖಿಲ ಶ್ರೀಸೂಕ್ತ (2, 6), ಶತಪಥಬ್ರಾಹ್ಮಣ (11, 4, 3, 9), ಶಾಂಖಾಯನ ಗೃಹ್ಯಸೂತ್ರ (2, 4, 10) ಮೊದಲಾದೆಡೆ ಲಕ್ಷ್ಮಿಯ ಪ್ರಾಚೀನ ಪ್ರಸ್ತಾಪಗಳನ್ನು ಕಾಣಬಹುದು; ಬಂಗಾರದಂತೆ ಹೊಳೆಯುವ ಹೊಂಬಣ್ಣದ ಮೈ, ಜಿಂಕೆಯಂತೆ ಸೊಗಯಿಸುವ ರೂಪ, ಬಂಗಾರ–ಬೆಳ್ಳಿಯ ಮಾಲೆಗಳನ್ನು ತೊಟ್ಟು ಚಂದ್ರನಂತೆ ಕಂಗೊಳಿಸುವ ದೇವತೆ (ಹಿರಣ್ಯವರ್ಣಾಂ ಹರಿಣೀಂ ಸುವರ್ಣಾರಜತಸ್ರಜಾಂ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮಮಾವಹ). ವೇದಕಾಲಕ್ಕೂ ಮೊದಲು ಈಕೆ ಬೇಸಾಯಗಾರರ ಧಾನ್ಯದೇವತೆಯಾಗಿದ್ದಂತೆ ತೋರುತ್ತದೆ. ಆಕೆಯ ಬಳಕೆಯ ಹೆಸರುಗಳಲ್ಲಿ ಒಂದಾದ 'ಕರೀಷಿಣಿ' (ಎಂದರೆ ಹಸುವಿನ ಸಗಣಿಯ ದೇವತೆ) ಯನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಆಕೆಯ ಬಳಕೆಯ ಹೆಸರಾದ 'ಸಿರಿ', 'ಸಿರಿಮಾ ದೇವತಾ', 'ದೇವಿಸಿರಿ' ಇವುಗಳನ್ನು ಬಾರ್ಹುತ್, ಸಾಂಚಿ ಸ್ತೂಪಗಳಲ್ಲಿ, ಗುಪ್ತರ ನಾಣ್ಯಗಳಲ್ಲಿ ಕಾಣುತ್ತೇವೆ; ಲ್ಯಾಟಿನ್ ಭಾಷೆಯ 'ಸಿರಿಸ್' (ಧಾನ್ಯದೇವತೆ) ಮತ್ತು ಈ 'ಸಿರಿ' (ಶ್ರೀ) ಇವಕ್ಕೆ ಸಂಬಂಧ ನಿಕಟವಲ್ಲವೆಂದು ಹೇಳುವುದು ಹೇಗೆ? ಲ್ಯಾಟಿನ್ ಜನರ ಸಿರಿಸ್, ಗ್ರೀಕರ ಡಿಮೀಟರ್ ಮತ್ತು ಆಫ್ರೋಡೈಟ್ (ಇವಳೂ ಸಮುದ್ರ ಸಂಜಾತೆ) ಇವರೆಲ್ಲ ಧಾನ್ಯದೇವತೆಗಳೇ; ತುಷ್ಟಿಗೆ, ಪುಷ್ಟಿಗೆ, ಸಂಪತ್ತಿಗೆ, ಸುಖಕ್ಕೆ ಅಭಿಮಾನಿದೇವತೆಗಳೇ; ಒಂದೇ

ಮನೋಧರ್ಮದ ನೆಲೆಯಲ್ಲಿ ಮೈದಳೆದವರು. ಬೌದ್ಧರ ಲಕ್ಷ್ಮಿಯಾದ ವಸುಧಾರಾ ಕುಬೇರನ ಪತ್ನಿಯರಲ್ಲಿ ಒಬ್ಬಳು; ಉತ್ತರ – ದಕ್ಷಿಣ ದಿಗ್ಭಾಗಗಳಿಗೆ ಸಂಬಂಧಿಸಿದ ದೇವಕುಮಾರಿಕೆ. ಕುಬೇರನ ಓಲಗದಲ್ಲಿರುವವ ಳೆಂದೂ, ಅವನ ಮಗ ನಲಕೂಬರನೊಂದಿಗೆ ಈ ಓಲಗಕ್ಕೆ ಬರುವವಳೆಂದೂ, ಯಕ್ಷೇಶನೊಂದಿಗೆ ಸೇರಿದವ ಳೆಂದೂ ಮಹಾಭಾರತದಲ್ಲಿಯೂ ಪ್ರಸ್ತಾಪ ಬರುತ್ತದೆ (2. 10, 19; 3. 168. 3 ಇತ್ಯಾದಿ). ಆಶ್ವಿನ ಅಮಾವಾಸ್ಯೆಯಂದು (ದೀಪಾವಳಿ) ಲಕ್ಷ್ಮೀಪ್ರಬೋಧಕಾಲ, ಸುಖರಾತ್ರಿ ಎಂದು ಕಲ್ಪನೆಗಳಿವೆಯಲ್ಲವೆ? ಆ ಹೊತ್ತು ಲಕ್ಷ್ಮೀಪೂಜೆ ನಡೆಯುತ್ತದೆ; ಇದೇ ಸಂದರ್ಭದಲ್ಲಿ ಕುಬೇರನ ಪೂಜೆಯನ್ನೂ ನಡೆಸುತ್ತಾರೆ.

ಮಾರ್ಕಂಡೇಯಪುರಾಣದ ದೇವೀಮಾಹಾತ್ಮ್ಯೆಯಲ್ಲಿ ಮಹಾಲಕ್ಷ್ಮಿಯು ಗುಪ್ತರೂಪಿಣಿಯಾದ ದೇವಿಯೆಂದೂ, ಆಕೆಯ ಸಾತ್ತ್ವಿಕಾವಿರ್ಭಾವವು ಸರಸ್ವತಿ, ರಾಜಸಾಂಶವು ಲಕ್ಷ್ಮಿ, ತಾಮಸಿಕ ಅಭಿವ್ಯಕ್ತಿಯು ಮಹಾಕಾಲಿ ಎಂದೂ ಪ್ರಸ್ತಾಪಗಳಿವೆ. ಈ ಪ್ರಸ್ತಾಪದಲ್ಲಿ ಆಕೆ ಆದಿಶಕ್ತಿಯೇ; ಅಮರಕೋಶದಲ್ಲಿ 'ಮಾ' (ತಾಯಿ) ಎಂದು ಲಕ್ಷ್ಮಿಯ ಹೆಸರನ್ನು ಹೇಳಿರುವುದು ಸ್ವಾರಸ್ಯವಾಗಿದೆ. ಕಮಲದ ಮೇಲೆ ಪರ್ಯಂಕಾ ಸನದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತ ದ್ವಿಭುಜ ಅಥವಾ ಚತುರ್ಭುಜ (ಮಾರ್ಕಂಡೇಯ ಪುರಾಣದಲ್ಲಿ ಅಷ್ಟಾದಶಭುಜಲಕ್ಷ್ಮಿಯ ಉಲ್ಲೇಖವೂ ಇದೆ) ಲಕ್ಷ್ಮಿ ಪ್ರಾಚೀನ ಶಿಲ್ಪಗಳಲ್ಲಿಯೇ ಕಾಣಬರುವ ದೇವತೆ. ಕಮಲ, ಶ್ರೀಫಲ, ಶಂಖ, ಅಮೃತಘಟ, ಮಾತುಲಿಂಗ, ಖೇಟಕ, ಗದಾ (ಕೌಮೋದಕೀ) ಮೊದಲಾದುವು ಈಕೆಗೆ ವಿಶಿಷ್ಟವಾದ ಆಯುಧಗಳು. ಪ್ರಸೂತಿಲಾಂಛನವಾದ, ಸೌಭಾಗ್ಯಚಿಹ್ನೆಯಾದ ಕಮಲದ ಹೂ ಲಕ್ಷ್ಮಿಗೆ ತುಂಬ ಹೊಂದಿಕೊಂಡು ಬಂದಿದೆ.

ಪದ್ಮಪ್ರಿಯೇ ಪದ್ಮಿನಿ ಪದ್ಮಹಸ್ತೇ ಪದ್ಮಾಲಯೇ ಪದ್ಮದಳಾಯತಾಕ್ಷಿ ।
ವಿಶ್ವಪ್ರಿಯೇ ವಿಶ್ವಮನೋಽನುಕೂಲೇ ತ್ವತ್ಪಾದಪದ್ಮಂ ಮಯಿ ಸಂನಿಧತ್ಸ್ವ ॥

ಎನ್ನುವ ಪುಷ್ಪಾಂಜಲಿ ಪ್ರಸಿದ್ಧವೇ ಅಲ್ಲವೆ? ಆಕೆಯ ತಲೆಯ ಮೇಲೆ ಕುಂಭಗಳಿಂದ ಅಭಿಷೇಕಮಾಡುತ್ತಿರುವ ಆನೆಗಳೆರಡನ್ನು ಕಾಣಿಸಿರುತ್ತಾರೆ (ವಿಷ್ಣುಧರ್ಮೋತ್ತರದಲ್ಲಿ 'ಆವರ್ಜಿತಘಟಂ ಕಾರ್ಯಂ ತತ್ಪೃಷ್ಠೇ ಕುಂಜರ ದ್ವಯಂ' ಎಂಬ ವಿಧಿಯಿದೆ). ಇದು ಗಜಲಕ್ಷ್ಮಿ. ಈ ಆನೆಗಳೆರಡು ಶಂಖ ಮತ್ತು ಪದ್ಮ ಎಂಬ ನಿಧಿಗಳನ್ನು ಸೂಚಿಸುತ್ತವೆ (ಹಸ್ತದ್ವಯಂ ವಿಜಾನೀಹಿ ಶಂಖಪದ್ಮಾವುಭೌ ನಿಧೀ); ಲಕ್ಷ್ಮಿಯ ಕೈಗಳಲ್ಲಿರುವ ಶಂಖ–ಪದ್ಮಗಳೂ ಇವನ್ನೇ ಸೂಚಿಸುವುವು. ಲಕ್ಷ್ಮಿಗೂ ನಿಧಿಪತಿಯಾದ ಕುಬೇರನಿಗೂ ಇರುವ ಸಂಬಂಧ ಇಲ್ಲಿ ಧ್ವನಿತವಾಗುತ್ತದೆ.

ಚಿತ್ರ 117 ಅ
ಗಜಲಕ್ಷ್ಮಿ

ಗಜಲಕ್ಷ್ಮಿಯ ಚಿತ್ರವಿರುವ ನಾಣ್ಯವೊಂದು ಕ್ರಿಸ್ತಪೂರ್ವ ಮೂರನೆಯ ಶತಮಾನದ್ದು ಕೌಶಾಂಬಿಯಲ್ಲಿ ದೊರೆತಿದೆ. ಕ್ರಿಸ್ತಪೂರ್ವ ಒಂದೆರಡನೆಯ ಶತಮಾನಗಳಲ್ಲಿ ನಮ್ಮ ದೊರೆಗಳಾದ ವಿಶಾಖದೇವ, ಶಿವದತ್ತ, ಉಜ್ಜಯಿನಿಯ ಬ್ರಹ್ಮಮಿತ್ರ, ದೃಢಮಿತ್ರ, ಸೂರ್ಯಮಿತ್ರ ಇವರ ನಾಣ್ಯ ಗಳಲ್ಲದೆ ಪರಕೀಯ ಅರಸರಾದ ರಜುವಲ ಶೋಡಾಶ, ಹಗಾಮಾಸ ಮೊದಲಾದವರ ನಾಣ್ಯಗಳ ಮೇಲೂ ಕೈಗಳಲ್ಲಿ ಕಮಲವನ್ನು ಹಿಡಿದು ಕಮಲಗಳಿಂದ ಸುತ್ತರಿದ ಪದ್ಮಾ ಲಯೆಯ ಚಿತ್ರಣವಿದೆ. ಪುಷ್ಕಲಾವತಿಯ ಅಭಿಮಾನಿ ದೇವತೆ ಲಕ್ಷ್ಮಿಯೆಂದು ಆ ಕಾಲಕ್ಕೆ ಪ್ರಸಿದ್ಧಿಯಿದ್ದಿತು.

ಲಕ್ಷ್ಮಿಯು ವಿಷ್ಣುವಿನ ಶಕ್ತಿಯೆಂಬ ಕಲ್ಪನೆ ಬೇರೂರಿ ಬಂದುದು ಕಾಲಕ್ರಮದ ಬೆಳವಣಿಗೆಗೆ: ಆದರೆ ಈ ಕಲ್ಪನೆ ಬೇರೂರಿ ನಿಂತಿತು. ಸಮುದ್ರಮಂಥನ ಕಾಲದಲ್ಲಿ ಸಮುದ್ರದಿಂದ ಹೊರಬಂದ ಲಕ್ಷ್ಮಿಯನ್ನು ನಾರಾಯಣನು ವರಿಸಿದನೆಂದು ಹೇಳುವ ಪುರಾಣಕಥೆ ಪ್ರಚಲಿತವಾಗಿದೆ. ಉತ್ತರಭಾರತದಲ್ಲಿ, ಅದರಲ್ಲಿಯೂ ಬಂಗಾಳದ ಕಡೆ ವಿಶೇಷವಾಗಿ, ವಿಷ್ಣುವಿಗೆ ಲಕ್ಷ್ಮಿ ಮಾತ್ರವಲ್ಲದೆ ಪುಷ್ಟಿಸರಸ್ವತಿಯೂ ಹೆಂಡತಿಯೇ. ದಕ್ಷಿಣದಲ್ಲಿ ಶ್ರೀದೇವಿಯೊಂದಿಗೆ ಭೂದೇವಿಯೂ ಇರುತ್ತಾಳೆ. ವಿಷ್ಣುವಿನ ಪಾರ್ಶ್ವಗಳಲ್ಲಿ ಲಕ್ಷ್ಮಿಯೊಂದಿಗೆ ನೀಳಾದೇವಿಯನ್ನೂ ಅಳವಡಿಸಿರುವುದುಂಟು. ವಿಷ್ಣುವು ಏಕಬೇರವಾಗಿರುವಾಗ ಲಕ್ಷ್ಮಿಯನ್ನು ಅವನ ವಕ್ಷಃಸ್ಥಲದಲ್ಲಿಯೇ ಸೂಚಿಸುತ್ತಾರೆ; ಇದಕ್ಕೆ ಶ್ರೀವತ್ಸಚಿಹ್ನೆ ಎಂದೂ ವ್ಯೂಹಲಕ್ಷ್ಮಿಯೆಂದೂ ಹೆಸರು. ಶ್ರೀವತ್ಸ ಲಾಂಛನವು ಬೆಳೆದ ಬಗೆ ಅಷ್ಟಾಗಿ ಸ್ಪಷ್ಟವಾಗಿಲ್ಲ (ಚಿತ್ರ 118). ಸಾಮಾನ್ಯವಾಗಿ ಸಣ್ಣದೊಂದು ತ್ರಿಕೋಣವನ್ನು ಬಲ ಎದೆಯ ಮೇಲೆ ಮೂಡಿಸುವುದು ವಾಡಿಕೆ. ಆದರೆ ಈ ಲಕ್ಷ್ಮಿಯ ಕವಚವನ್ನು ಮಾಡುವಾಗ ಕೆಳಗಿನ ಮೂರ್ತಿಲಕ್ಷಣಗಳನ್ನು ಗಮನಿಸುತ್ತಾರೆ —

ಚಿತ್ರ 118
ಶ್ರೀವತ್ಸಚಿಹ್ನೆ
ವಿಷ್ಣುವಿನ ವೃಕ್ಷಃಸ್ಥಲದಲ್ಲಿ ಲಕ್ಷ್ಮಿಯನ್ನು ಪ್ರತಿನಿಧಿಸುವ ಪ್ರಾಚೀನ ಸಂಕೇತ ಬರುಬರುತ್ತ ಇದು ಸರಳವಾದ ತ್ರಿಕೋಣದ ಆಕಾರವನ್ನು ತಳೆಯಿತು

ದ್ವಿಭುಜಾ ವ್ಯೂಹಲಕ್ಷ್ಮೀಃ ಸ್ಯಾತ್ ಬದ್ಧಪದ್ಮಾಸನಸ್ಥಿತಾ ।
ಶ್ರೀನಿವಾಸಾಂಗಮಧ್ಯಸ್ಥಾ ಸುತರಾಂ ಕೇಶವಪ್ರಿಯಾ ॥

ಇದು ವರಾಹಪುರಾಣದಲ್ಲಿ ಬರುವ ನಿರ್ದೇಶನ. ತಿರುಮಲೆಯ ವೇಂಕಟೇಶ್ವರನಿಗೆ ಸಂಬಂಧಿಸಿದಂತೆ ಬರುವ ಮಾತು. ಅಲ್ಲಿನ ದೇವಾಲಯ ಏಕಬೇರಾಲಯ; ಗುಡಿಯಲ್ಲಿ ದೇವರ ಪಕ್ಕದಲ್ಲಾಗಲೀ ಇನ್ನೆಲ್ಲಾಗಲೀ ಲಕ್ಷ್ಮಿಯ ಸನ್ನಿಧಿಯಿಲ್ಲ. 'ನಿತ್ಯಂ ಶ್ರೀರಸ್ಯ ವಕ್ಷಸಿ ನಿವಸತೀತಿ ಶ್ರೀನಿವಾಸಃ' ಎಂದು ಸಮಾಧಾನ ಹೇಳುತ್ತಾರೆ, ಬೆಟ್ಟದ ಕೆಳಗೆ ತಿರುಚಾನೂರಿನಲ್ಲಿರುವ ಪದ್ಮಾವತೀ ದೇವಿಯನ್ನು ಲಕ್ಷ್ಮಿಯೆಂದು ಗ್ರಹಿಸಿದರೂ ಅದು ಸ್ವತಂತ್ರದೇವಿಯೆನ್ನುವುದು ನಿರ್ವಿವಾದ. ಈಕೆಯನ್ನು 'ಅಲರ್‌ಮೇಲ್‌ಮಂಗೈ ನಾಚ್ಚಿಯಾರ್' ಎಂದು ಕರೆಯುತ್ತಾರೆ. ರಾಮಾನುಜಾಚಾರ್ಯರು ಒಂದು ಶುಕ್ರವಾರ, ಶುಕ್ಲದ್ವಾದಶಿಯಂದು ಉತ್ತರಾಫಾಲ್ಗುಣೀ ನಕ್ಷತ್ರವಿದ್ದು ರತ್ನಮಂಜರಿಕಾಯೋಗವಿದ್ದಾಗ ಈ ಅಲರ್‌ಮೇಲ್‌ಮಂಗೈನಾಚ್ಚಿಯಾರ ಪ್ರತಿಕೃತಿಯನ್ನು ವೇಂಕಟೇಶ್ವರನ ವಕ್ಷಃಸ್ಥಳದಲ್ಲಿ ಮೂಡಿಸಿದರೆಂದು ಪ್ರತೀತಿ.

ಲಕ್ಷ್ಮೀ ದೇವಾಲಯಗಳಲ್ಲಿ ಮುಖ್ಯವಾದುದು ಕೊಲ್ಲಾಪುರ: ಅದರ ಪ್ರಸ್ತಾಪ ಆಗಲೇ ಬಂದಿದೆ. ಇದು ಶಾಕ್ತಲಕ್ಷ್ಮಿ. ಮಹಾಲಕ್ಷ್ಮಿಯೆಂದೂ ಕರೆಯುತ್ತಾರೆ. ಎಂಟು ರೂಪಗಳಲ್ಲಿ ಲಕ್ಷ್ಮಿಯನ್ನು ಕಲ್ಪಿಸಿಕೊಂಡಿದ್ದಾರೆ; ಮಹಾಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಧೈರ್ಯಲಕ್ಷ್ಮಿ, ವೀರಲಕ್ಷ್ಮಿ, ವಿದ್ಯಾಲಕ್ಷ್ಮಿ, ಸಂತಾನಲಕ್ಷ್ಮಿ ಮತ್ತು ಭಾಗ್ಯಲಕ್ಷ್ಮಿ. ಇವರೇ ಅಷ್ಟಲಕ್ಷ್ಮಿಯರು. ಇವರಿಗೆ ಪ್ರತ್ಯೇಕವಾಗಿ ಗುಡಿಗಳು ಬಳಕೆಯಲ್ಲಿಲ್ಲವಾದರೂ ಪೂಜಾಕಲ್ಪದಲ್ಲಿ ಅಳವಡಿಸಿಕೊಂಡಿದ್ದಾರೆ.

ಲಕ್ಷ್ಮಿಗಿಂತಲೂ ಹೆಚ್ಚಿನ ಪ್ರಸಿದ್ಧಿಯೂ ಪ್ರಾಚೀನತೆಯೂ ಅಲಕ್ಷ್ಮಿಯದು. ಅಲಕ್ಷ್ಮಿಯನ್ನು ಜ್ಯೇಷ್ಠಾಲಕ್ಷ್ಮಿ, ನಿರ್ಭಾಗ್ಯಲಕ್ಷ್ಮಿ, ದರಿದ್ರಲಕ್ಷ್ಮಿ, ಮೂದೇವಿ, ಕಾಲಾಡಿ, ಮುಗಡಿ, ತೌವ್ವೆ ಎಂದು ಮೊದಲಾಗಿ ಕರೆಯುತ್ತಾರೆ. ಕೈಯಲ್ಲಿ ಕಸಬರಿಗೆ, ಉದ್ದನೆಯ ಮೂಗು, ಇಳಿಬಿದ್ದ ತುಟಿಗಳು, ಸೋತು ಜೋಲಾಡುವ ಸ್ತನಗಳು, ಎದ್ದುಕಾಣುವ ಹೊಟ್ಟೆ, ಒಂದು ಕೈಯಲ್ಲಿ ಕಮಲದ ಹೂ. ಆಕೆಯ ವಾಹನ ಕತ್ತೆ (ಸುಪ್ರಭೇದಾಗಮ 'ಖರಾರೂಢಾ ಕಲೇಃ ಪತ್ನೀ'); ಆಕೆಯ ಧ್ವಜದಲ್ಲಿ ಕಾಗೆ '(ಕಾಕಧ್ವಜಸಮಾಯುಕ್ತಾ)'. ಈಕೆಯ ಪೂಜೆ ಈಗ ಕಡಮೆಯಾಯಿತು; ಆದರೆ ಒಂದು ಕಾಲಕ್ಕೆ ದಕ್ಷಿಣದೇಶದಲ್ಲಿ ತುಂಬ ಬಳಕೆಯಲ್ಲಿದ್ದಿತು. ಬೋಧಾಯನ ಗೃಹ್ಯಸೂತ್ರಗಳ ಕಾಲದಲ್ಲಿಯೂ ಈಕೆಯ ಜನಪ್ರೀತಿ ಸುಮಾರಾಗಿದ್ದಿತು. ಈ ಸೂತ್ರಗಳಲ್ಲಿ ಈಕೆ ಕಪಿಲಪತ್ನಿ; ಆಕೆಯನ್ನು ನಿರ್ಋತಿ, ಕುಂಭೀ, ಜ್ಯಾಯಾ, ಹಸ್ತಿಮುಖಾ, ವಿಘ್ನಪಾರ್ಷದಾ ಎಂದೂ ಕರೆದಿದ್ದಾರೆ. ಸಂಜೆಯ ವೇಳೆ ಮನೆಯ ಬಾಗಿಲು ಮುಚ್ಚಿದ್ದರೆ, ದೀಪ ಹಚ್ಚಿರದಿದ್ದರೆ ಈ ದೇವತೆ ಒಳಗೆ ಬಂದು ಕಷ್ಟಕಾರ್ಪಣ್ಯಗಳನ್ನು ತಂದೊಡ್ಡುವಳೆಂದು ನಂಬಿಕೆಯಿದೆ. ದೀಪಾವಳಿಯ ಆಶ್ವಿನ ಅಮಾವಾಸ್ಯೆ 'ಅಲಕ್ಷ್ಮೀಮಲನಾಶ'ಕ್ಕಾಗಿಯೇ ಲಕ್ಷ್ಮೀಪೂಜೆ ಮಾಡುವುದು. ಈ ಸಂದರ್ಭದಲ್ಲಿ ಅರ್ಧರಾತ್ರಿಯ ಸಮಯದಲ್ಲಿ ಹಳೆಯ ಮೊರ, ಕಸಬರಿಗೆ ಮೊದಲಾದುವುಗಳನ್ನು ಹೆಂಗಸರು ಮನೆಯಿಂದ ಹೊರತಂದು ಮೊರವನ್ನು ಕಸಬರಿಗೆಗಳಿಂದ ಜೋರಾಗಿ ಬಡಿದು ಊರಾಚೆ ಬಿಸಾಡುವ ಪದ್ಧತಿ ಕೆಲವು ಕಡೆ ಇದೆ. ಬಂಗಾಳದಲ್ಲಿ ಲಕ್ಷ್ಮೀಪೂಜೆಗೆ ಮೊದಲು ಅಲಕ್ಷ್ಮಿಯ ಮಣ್ಣುಗೊಂಬೆಯನ್ನು ಮಾಡಿ ಅದನ್ನು ಉಚ್ಚಾಟನೆ ಮಾಡುವರು. ಲಕ್ಷ್ಮಿಯ ಅಕ್ಕನಂತೆ ಅಲಕ್ಷ್ಮಿ; ಅದಕ್ಕೇ ಜ್ಯಾಯಾ, ಜ್ಯೇಷ್ಠಾ ಎನ್ನುವುದು.

ನಿರ್ಋತಿ ವೇದದಲ್ಲಿಯೇ ಕಾಣಸಿಗುವ ದೇವತೆ. ಬ್ರಾಹ್ಮಣಗಳಲ್ಲಿಯೂ ಗೃಹ್ಯಸೂತ್ರಗಳಲ್ಲಿಯೂ ಸಾವಿಗೆ, ಅನಿಷ್ಟಕ್ಕೆ, ಅಪಘಾತಕ್ಕೆ ದೇವತೆ ಇವಳು. ಮೈಯಿಲ್ಲ ಮೂಳೆಯಾಗಿ ಕೈಯಲ್ಲಿ ಕಪಾಲವನ್ನೂ ಕತ್ತಿಯನ್ನೂ ಹಿಡಿದು, ಪ್ರೇತಾಸನದ ಮೇಲೆ ಕುಳಿತಂತೆ ಕಲ್ಪಿಸಿಕೊಂಡಿದ್ದಾರೆ. ಆಕೆಯು ಮುದುಕಿಯಂತೆ ಜೀರ್ಣವಾದವಳಂತೆ ಕಾಣುವಳು; ಹೆಣ ಕೊಳೆತು ನಾರುವುದನ್ನು ಈಕೆ ಪ್ರತಿನಿಧಿಸುತ್ತಾಳೆಂದು ಹೇಳುತ್ತಾರೆ. ಆಕೆಯ ಧ್ವಜದಲ್ಲಿ ಕಾಗೆಯಿದೆಯಷ್ಟೆ; ಕಾಗೆಗಳು ಪಿತೃದೇವತೆಗಳ ಸಂಕೇತ. ಈ ದೇವತೆಯೂ ಜಾನಪದ ನೆಲೆಯಲ್ಲಿಯೇ ಮೈದಳೆದವಳು; ಅಷ್ಟದಿಕ್ಪಾಲಕರಲ್ಲಿ ಒಬ್ಬನಾಗಿ ಕಾಣಿಸಿಕೊಂಡ ನಿರ್ಋತಿಯ ಹಿನ್ನೆಲೆಯೂ ಇದೇ.

ಪುರಾಣಕಥೆಯೊಂದರಲ್ಲಿ ವಿಷ್ಣುವಿಗೆ ಮೂವರು ಹೆಂಡತಿಯರು—ಲಕ್ಷ್ಮಿ, ಗಂಗೆ, ಸರಸ್ವತಿ; ಗಂಗೆ ಸರಸ್ವತಿಯರು ಕಾದಾಡಿ ಒಬ್ಬರನ್ನೊಬ್ಬರು ನದಿಯಾಗೆಂದು ಶಪಿಸಿಕೊಂಡರು, ಇಬ್ಬರೂ ನದಿಗಳಾಗಿ ಹರಿದುಹೋದರು; ಲಕ್ಷ್ಮಿಯೊಬ್ಬಳು ಉಳಿದುಕೊಂಡಳು. ಬ್ರಹ್ಮವೈವರ್ತ, 4–ಪ್ರಕೃತಿಖಂಡ ಗಂಗೆಯ ಹೆಸರು ನದಿಯಾಗಿಯೇ ಉಳಿಯಿತು; ಸರಸ್ವತೀ ನದಿಯೂ ವೈದಿಕಯುಗದಲ್ಲಿ ಇದ್ದಿತಾದರೂ ಮುಂದೆ ಗುಪ್ತಗಾಮಿನಿಯಾಗಿ ತ್ರಿವೇಣಿಯಲ್ಲಿ ಸೇರಿತಷ್ಟೆ. ಹುವಿಷ್ಕನ ನಾಣ್ಯಗಳ ಮೇಲೆ ಗಂಗೆ ಸರಸ್ವತಿ ಇಬ್ಬರ ಚಿತ್ರಣವೂ ಇದೆ. ವೈದಿಕ ವಾಙ್ಮಯದಲ್ಲಿ ಸರಸ್ವತಿ ನದಿಯೂ ಹೌದು, ದೇವತೆಯೂ ಹೌದು ('ಅಂಬಿತಮೇ ನದೀತಮೇ ದೇವಿತಮೇ ಸರಸ್ವತಿ' ಋಗ್ವೇದ, 1, 4, 41. ಸಾಯಣರು 'ದ್ವಿವಿಧಾ ಹಿ ಸರಸ್ವತೀ ವಿಗ್ರಹ ದೇವತಾ ನದೀರೂಪಾ ಚ' ಎಂದಿದ್ದಾರೆ, 1, 1, 10). ದೇವತೆಯಾಗಿ ಬುದ್ಧಿಯನ್ನು ಕಾಪಾಡುವವಳು—

> ಪ್ರಣೋ ದೇವೀ ಸರಸ್ವತೀ ವಾಜೇಭಿರ್ವಾಜಿನೀವತೀ
> ಧೀನಾಂ ಅವಿತ್ರ್ಯವತು ॥ (ಋಗ್ವೇದ ೬, ೬, ೬೧)

ನದಿಯಾಗಿ ನದಿಗಳೆಲ್ಲೆಲ್ಲ ತುಂಬ ಶುಚಿಯಾದವಳು ('ನದೀನಾಂ ಶುಚಿರ್ಯತೀ ಗಿರಭ್ಯ ಆ ಸಮುದ್ರಾತ್,' ಋಗ್ವೇದ 7, 6, 95) ಎಂಬ ಪ್ರಸಿದ್ಧಿ ಇದ್ದರೂ ಜನಪ್ರೀತಿ ಗಳಿಸಿದುದು ದೇವತೆಯಾಗಿಯೇ. ವೇದದಲ್ಲಿಯೇ ಬರುವ ಅಂಭೃಣನ ಮಗಳು ವಾಕ್ (ವಾಗಂಭೃಣೀ) ಹೇಳಿದ ದೇವೀಸೂಕ್ತ (ಋಗ್ವೇದ 10, 125) ಸರಸ್ವತಿಯ ಹಿರಿಮೆಯನ್ನು ಸಾರುವುದು ಎಂದು ಶ್ರದ್ಧೆಮೂಡಿತು. ಹೀಗೆ ಸರಸ್ವತಿ ವಾಗ್ದೇವಿಯಾದಳು. ಧೀಶಕ್ತಿಯನ್ನು ಪ್ರಚೋದನೆಮಾಡುವ ಸವಿತೃವಿನ ಭರ್ಗವನ್ನು ಕುರಿತ ಮಂತ್ರ ಬೆಳಗಿನಲ್ಲಿ ಗಾಯತ್ರಿಯೆಂದೂ, ಮಧ್ಯಾಹ್ನ ಸಾವಿತ್ರಿಯೆಂದೂ, ಸಂಜೆ ಸರಸ್ವತಿಯೆಂದೂ ಕಲ್ಪನೆ ಬೆಳೆಯಿತು. ಮುಂದೆ ಪುರಾಣಗಳಲ್ಲಿ ಬ್ರಹ್ಮನ ಮಾನಸಕನ್ಯೆಯೆಂದೂ, ಶಕ್ತಿ (ಬ್ರಹ್ಮಾಣಿ) ಯೆಂದೂ, ಕೃಷ್ಣನ ಬಾಯಿಂದ ಹುಟ್ಟಿದವಳೆಂದೂ, ದುರ್ಗೆಯ ಮಗಳೆಂದೂ ಕಥೆಗಳು ಕಾಣಿಸಿಕೊಂಡವು. ಬ್ರಹ್ಮನು ತನ್ನ ಮಗಳನ್ನೇ ಕಾಮಿಸಿದ ಕಥೆಯ ಮೂಲ ಋಗ್ವೇದದಲ್ಲಿಯೇ (10, 61, 5, 7) ಕಾಣಸಿಗುವುದಾದರೂ ಅದು ಬೆಳೆದುದು ಮೈತ್ರಾಯಿಣೀ ಸಂಹಿತೆ (4, 2), ಶತಪಥಬ್ರಾಹ್ಮಣ (6, 2), ಐತರೇಯ ಬ್ರಾಹ್ಮಣ (3, 9), ಮತ್ಸ್ಯಪುರಾಣ (3) ಗಳಲ್ಲಿ.

ಹೀಗೆ ಸರಸ್ವತಿಯ ನೆಲೆ ಬಹುಮಟ್ಟಿಗೆ ವೈದಿಕ ಸಂಪ್ರದಾಯದ ಮಡಿಲಲ್ಲೇ ಇದ್ದಿತೆಂದು ತೋರುತ್ತದೆ. ಉಳಿದ ಶಕ್ತಿಯರಿಗಿದ್ದಂತೆ ಜಾನಪದ ಪ್ರಸಕ್ತಿ ಅಷ್ಟಾಗಿ ಇದ್ದಿರಲಾರದು. ಆದರೆ ಅಥರ್ವವೇದ (10, 4, 14) ದಲ್ಲಿ ಬರುವ ಘೃತಾಚಿಯನ್ನು ಸರಸ್ವತಿಯ ಪೂರ್ವರೂಪವೆಂದು ಹೇಳುವುದುಂಟು. ಕಿರಾತರ ಹುಡುಗಿಯೆಂದು ಬಗೆದು ಘೃತಾಚಿ ಹಾವಿನ ವಿಷವನ್ನು ಪರಿಹರಿಸುವ ದೇವತೆ; ಸರಸ್ವತಿಯನ್ನೂ ವಿಷಾಪಹಾರಣೆಯೆಂದು ಬಗೆದಿದ್ದುದನ್ನು ವೈದಿಕ ವಾಙ್ಮಯದಲ್ಲಿಯೇ ಕಾಣಬಹುದು. ಸರಸ್ವತಿಯು ಶಬರಜನರ ಕನ್ಯೆಯೆಂದೂ ಉಲ್ಲೇಖವಿದೆ. ಮಹಾಯಾನ ಬೌದ್ಧರಲ್ಲಿ ಸರಸ್ವತಿಯ ಈ ರೂಪ ವೀಣಾಪಾಣಿಯಾದ ಆರ್ಯ ಜಾಂಗುಲಿಯಲ್ಲಿ ಉಳಿದು ಬಂದಿತು; ಧ್ಯಾನಿಬುದ್ಧರ ಶಕ್ತಿ ಶ್ವೇತತಾರೆಯ ಒಂದು ರೂಪ ಇದು. ಜಾಂಗುಲಿಯನ್ನು ಅಳವಡಿಸಿಕೊಂಡು ಸಿದ್ಧಳಾದ ಮನಸಾದೇವಿಯೂ ಸರಸ್ವತಿಯಂತೆಯೇ ಹಂಸಾರೂಢೆಯಾದ ಯೋಗಿನಿ; ಏಳು ಹೆಡೆಗಳ ಹಾವು ಅವಳ ಮೇಲೆ ಛತ್ರಿಯಂತೆ ಇರುತ್ತದೆ. ಕಶ್ಯಪನ ಮಾನಸಕನ್ಯೆಯಾದ ಮನಸಾದೇವಿಯ ಹೆಸರು ದಿಟವಾಗಿ ಗೌಡದ್ರಾವಿಡಪದವಾದ 'ಮಂಚಮ್ಮ' ಎಂಬುದರ ಸಂಸ್ಕೃತೀಕರಣವೆಂದು ಆಚಾರ್ಯ ಕ್ಷಿ ತಿ ಮೋ ಹ ನ ಸೇ ನ – ಶಾ ಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ. ಮಂಚಮ್ಮನ ಪೂಜೆ ದಕ್ಷಿಣದೇಶದಲ್ಲಿ ಒಂದು ಕಾಲಕ್ಕೆ ಬಳಕೆಯಲ್ಲಿದ್ದು ಹನ್ನೊಂದನೆಯ ಶತಮಾನದ ಸುಮಾರಿಗೆ ಬಂಗಾಳವನ್ನು ಮುಟ್ಟಿತೆಂದು ಅವರ ವಾದ. ಈಗಂತೂ ಬಂಗಾಳದಲ್ಲಿ ಈಕೆಯ ಜನಪ್ರೀತಿ ವಿಪುಲವಾಗಿದೆ. ಅಂತೂ ಸರಸ್ವತಿಗೂ ಜಾನಪದನೆಲೆ ಇದ್ದಿತೆಂದು ತಿಳಿದುಬರುವುದಷ್ಟೇ ಸ್ವಾರಸ್ಯ; ವಿವರಗಳು ಸ್ಪಷ್ಟವಾಗಿಲ್ಲ.

ಚಿತ್ರ 119
ಸರಸ್ವತಿ
ತಂಜಾವೂರಿನ ಬೃಹದೀಶ್ವರ ದೇವಾಲಯ (ಗಂಗೈಕೊಂಡ ಚೋಳಪುರಂ) ದಲ್ಲಿರುವ ಕುಡ್ಯಶಿಲ್ಪ

ಸರಸ್ವತಿಯು ಬ್ರಹ್ಮನ ಶಕ್ತಿಯೆಂದು ನಂಬಿಕೆಯಿದ್ದರೂ ವ್ಯವಹಾರದಲ್ಲಿ ಸ್ವತಂತ್ರ ದೇವತೆಯೇ. ಬೌದ್ಧರೂ, ಜೈನರೂ, ಶಾಕ್ತರೂ ಸರಸ್ವತಿಯನ್ನು ಸ್ವೀಕರಿಸಿದರು. ಕೊಲ್ಲಾಪುರದಲ್ಲಿ ಮಹಾಲಕ್ಷ್ಮಿ ಶಾಕ್ತ ಲಕ್ಷ್ಮಿಯಾಗಿರುವಂತೆಯೇ ಶೃಂಗೇರಿಯಲ್ಲಿ ಶಾರದೆ ಶಾಕ್ತಶಾರದೆ. ಮಹಾಯಾನ ಬೌದ್ಧರ ಪ್ರಜ್ಞಾಪಾರಮಿತಾ, ಮಂಜುಶ್ರೀ, ವಜ್ರಶಾರದೆ, ವಜ್ರವೀಣಾಸರಸ್ವತಿ ಇವರೂ, ಜೈನರ ಶ್ರುತದೇವತೆ, ವಾಗೀಶ್ವರೀ, ವಾಗ್ವಾದಿನೀ, ಭಾರತೀ, ಜೈನಶಕ್ತಿಯರೂ ಈ ಶಾಕ್ತ ಸರಸ್ವತಿಯ ರೂಪಾಂತರಗಳೇ. ಅವಳ ಮೂರ್ತಿಲಕ್ಷಣ —

ಚಂದ್ರಪ್ರಭಾಂ ನೀಲಗಲಪ್ರಯಾನಾಂ ತ್ರಿನೇತ್ರರಮ್ಯಾಂ ಸ್ವಗುಣಾಂ ಪ್ರತುಷ್ಟಾಂ ।
ಪದ್ಮಾಸನಾಂ ತ್ವಾಂ ಪ್ರಯುಜೇಽಕ್ಷಮಾಲಾ ಸತ್ಪುಸ್ತಕಾಢ್ಯಾಂ ಚ ಮಯೂರಚಾರೇ ...

ಎಂದು ಸರಸ್ವತೀ ಮಂತ್ರಪೂಜೆಯಲ್ಲಿ ನಿರ್ದೇಶಿಸಲ್ಪಟ್ಟಿದೆ. ಇಲ್ಲಿ ವೀಣಾವಾದನದ ಪ್ರಸ್ತಾಪವಿಲ್ಲ. ನೀಲಕಂಠೆ, ಚಂದ್ರಶೇಖರಿ, ತ್ರಿನೇತ್ರೆ, ಪದ್ಮಾಸನಸ್ಥೆ, ಅಕ್ಷಮಾಲಾಪುಸ್ತಕಧಾರಿಣಿ—ಶೃಂಗೇರಿಯ ಶಾರದೆ ಇಂಥವಳೇ. ರೂಪಮಂಡನ (5, 61) ದಲ್ಲಿರುವ ಮೂರ್ತಿಲಕ್ಷಣ ವೀಣೆಯನ್ನೂ ಆಯುಧಗಳಲ್ಲಿ ಸೇರಿಸಿದೆ—ಒಂದು ಮುಖ; ಅಕ್ಷಮಾಲೆ, ವೀಣೆ, ಪುಸ್ತಕ, ಕಮಲಗಳನ್ನು ಹಿಡಿದಿರುವ ನಾಲ್ಕು ಕೈಗಳು; ಕರಂಡಮುಕುಟ; ಪ್ರಭಾಮಂಡಲ; ಮಹಾವಿದ್ಯೆಯೆಂದು ಈ ಸರಸ್ವತಿಯ ಹೆಸರು. ಇದು ಸರಸ್ವತಿಯ ಸಾತ್ವಿಕರೂಪ. ವರದಮುದ್ರೆ, ಅಕ್ಷಮಾಲೆ, ಕಮಂಡಲು, ವೀಣೆಗಳನ್ನು ಹಿಡಿದಿರುವುದೂ ಉಂಟು. ಕಮಂಡಲವನ್ನು ಜ್ಞಾನಭಾಂಡವೆಂದು ಹೇಳುವುದೂ ಇದೆ. ಪುಸ್ತಕವನ್ನು ಹಿಡಿದ ಸರಸ್ವತಿಯ ಅತಿ ಪ್ರಾಚೀನಶಿಲ್ಪ ಕ್ರಿಸ್ತಾಬ್ದ ಮೊದಲನೆಯ ಅಥವಾ ಎರಡನೆಯ ಶತಮಾನದ್ದು; ಮಥುರೆಯ ಬಳಿ ಕಾಂಕಲಿಟಿಲಾ ಎಂಬಲ್ಲಿ ದೊರೆತದ್ದು. ಅದಕ್ಕೆ ಮೊದಲು ಸರಸ್ವತಿಯ ಮೂರ್ತಿಲಕ್ಷಣದಲ್ಲಿ ಪುಸ್ತಕದ ಪ್ರಸ್ತಾಪವಿಲ್ಲ. ಮಾನಸಾರವು ಹೇಳುವ ಮೂರು ಬಗೆಯ ದೇವೀಕೇಶವಿನ್ಯಾಸಗಳಲ್ಲಿ ಕೇಶಬಂಧ ಅಥವಾ ಧಮ್ಮಿಲ್ಲ ಎನ್ನುವುದು ಸರಸ್ವತಿಗೆ ವಿಶಿಷ್ಟವಾದುದು; ಲಕ್ಷ್ಮಿಗೆ ಕುಂತಲ; ಇತರ ದೇವಿಯರಿಗೆ ಅಲಕಚೂಡಕ. ಸರಸ್ವತಿಯ ವಾಹನ ಹಂಸ ಅಥವಾ ನವಿಲು.

ಶರನ್ನವರಾತ್ರಿಯಲ್ಲಿ ಕ್ರಮವಾಗಿ ಮೂಲಾನಕ್ಷತ್ರವಿದ್ದಾಗ ಸರಸ್ವತೀಪೂಜೆ, ಅಷ್ಟಮಿಯಂದು ದುರ್ಗಾ ಪೂಜೆ, ನವಮಿಯಂದು ಚಂಡೀಪೂಜೆ ನಡೆಯುವುದು ಶಕ್ತಿಗೂ ಸರಸ್ವತಿಗೂ ಇರುವ ತಾಂತ್ರಿಕ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ದುರ್ಗಾದೇವಿಯ ಸಾಮಾನ್ಯ ಕಲ್ಪನೆಯಲ್ಲಿ ಸರಸ್ವತಿಯು ಬೆರೆತು ಹೋದಳೆಂದು ತೋರುತ್ತದೆ. ನಮ್ಮ ದೇವಾಲಯಗಳ ಇತಿಹಾಸದಲ್ಲಿ ಸರಸ್ವತಿಗೇ ಸ್ವತಂತ್ರವಾದ ಆಲಯಗಳಿದ್ದುದು ವಿರಳ; ದುರ್ಗೆಗೆ ಅಥವಾ ಲಕ್ಷ್ಮಿಗೆ ಪಾರ್ಶ್ವದೇವತೆಯಾಗಿ ಮಾತ್ರ ಸರಸ್ವತಿಯ ಸ್ಥಾನವಿದ್ದಿತು. ವೈದಿಕ ಸರಸ್ವತಿಯಂತೂ ಜಾನಪದ ಮನೋಧರ್ಮದ ಮೇಲೆ ಹೆಚ್ಚಿನ ಪ್ರಭಾವವನ್ನು ಮೂಡಿಸಲಿಲ್ಲ.

ದುರ್ಗೆಯ ಕಲ್ಪನೆಯ ಹಿನ್ನೆಲೆಯಲ್ಲಿ ಏಕಾನಂಶೆಯ ಕಲ್ಪನೆಯಿದ್ದಿತೆಂದು ಕೆಲವರು ಹೇಳುತ್ತಾರೆ. ಬಲರಾಮ, ವಾಸುದೇವ (ಕೃಷ್ಣ) ಇವರ ಸೋದರಿಯಾದ ಏಕಾನಂಶಾ ನಂದ–ಯಶೋದೆಯರ ಮಗಳೆಂದೂ, ಕಂಸನು ಅವಳನ್ನು ಬಂಡೆಯ ಮೇಲಪ್ಪಳಿಸಿ ಕೊಲ್ಲಲು ಎತ್ತಿದಾಗ ಆಕಾಶಕ್ಕೆ ಹಾರಿ ಹೋಗಿ ದುರ್ಗೆಯ ರೂಪವನ್ನು ಧರಿಸಿದಳೆಂದೂ ಹರಿವಂಶದಲ್ಲಿ (2, 2, 34) ಕಥೆ ಬರುತ್ತದೆ. ದಿಟವಾಗಿ ಏಕಾನಂಶೆ (ಏಕಾದಶಿ) ವೃಷ್ಣಿವಂಶದ ಜನರ ಕುಲದೇವತೆಯಾಗಿದ್ದವಳು; ಕೃಷ್ಣನನ್ನು ಉಳಿಸಿದುದಕ್ಕಾಗಿ ಅವಳ ಪೂಜೆಯನ್ನು ಈ ಜನರು ಮಾಡತೊಡಗಿದರೆಂದು ಹರಿವಂಶ ಹೇಳಿದರೂ ಕೃಷ್ಣನಿಗೆ ಮೊದಲೇ ಈ

ದೇವತೆಯ ಪೂಜೆ ಇದ್ದಿತು. ವೃಷ್ಣಿಜನರ ದೇವತೆಯೆಂದು ಬ್ರಹ್ಮಾಂಡ (3, 71, 220) ಮತ್ತು ವಾಯು (2, 34, 203) ಪುರಾಣಗಳಲ್ಲಿಯೂ ಬರುವ ವಿವರ. ಬೌದ್ಧರ ಪ್ರಾಚೀನಕಾವ್ಯವಾದ ಲಲಿತವಿಸ್ತರದಲ್ಲಿ ಈ ದೇವತೆ ಅಲಂಬುಶಾ, ಕೃಷ್ಣಾ, ದ್ರೌಪದೀ ಮೊದಲಾದ ಇತರ ದೇವತೆಗಳೊಂದಿಗೆ ಪಶ್ಚಿಮ ದಿಗ್ಭಾಗದಲ್ಲಿ ಇದ್ದವಳೆಂಬ ಸೂಚನೆಯಿದೆ. ಕರಿಯ ದೇವತೆಯಾದ ಕುಹೂವಿನೊಂದಿಗೆ, ಅಮಾವಾಸ್ಯೆಯೊಂದಿಗೆ ಈಕೆಯ ಸಮೀಕರಣ ಮಹಾಭಾರತದಲ್ಲಿ (3, 208, 8) ನಡೆದಿದೆ. ಭದ್ರೆ, ಸುಭದ್ರೆಯರೊಂದಿಗೂ ಈಕೆಯ ಸಮೀಕರಣವನ್ನು ನಡೆಸಿರುವುದುಂಟು. ಎಡಬಲಗಳಲ್ಲಿ ಬಲರಾಮ--ಕೃಷ್ಣರನ್ನಿರಿಸಿ ಈ ದೇವತೆಯ ಪೂಜೆಮಾಡತಕ್ಕದ್ದೆಂದು ವರಾಹಮಿಹಿರನ ಬೃಹತ್ಸಂಹಿತೆ (50, 37, 9) ನಿರ್ದೇಶಿಸುತ್ತದೆ. ವಿಷ್ಣುಧರ್ಮೋತ್ತರವು

> ಏಕಾನಂಶಾಪಿ ಕರ್ತವ್ಯಾ ದೇವೀ ಪದ್ಮಕರಾ ತಥಾ ।
> ಕಟಿಸ್ಥವಾಮಹಸ್ತಾ ಸಾ ಮಧ್ಯಸ್ಥಾ ರಾಮಕೃಷ್ಣಯೋಃ ॥

ಎಂದು ವಿಧಿಸುತ್ತದೆ, ಜಗನ್ನಾಥಪುರಿಯಲ್ಲಿ ಇದರ ಅನ್ವಯನನ್ನು ಕಾಣಬಹುದು. ಬಲರಾಮ (ಬಲಭದ್ರ, ಸಂಕರ್ಷಣ) ನೆಂದರೆ ರುದ್ರಾಂಶ, ಕೃಷ್ಣ (ವಾಸುದೇವ) ನೆಂದರೆ ವಿಷ್ಣು, ಸುಭದ್ರೆ (ಏಕಾನಂಶಾ) ಯೆಂದರೆ ಶಕ್ತಿ. ಮೂರು ದೇವತೆಗಳ ಪ್ರಾಚೀನ ಪೂಜೆಗೆ ಇದು ಪ್ರಸಿದ್ಧವಾದ ಕ್ಷೇತ್ರವಾಗಿದ್ದಿತು.

ಕಾಲಕ್ರಮದಲ್ಲಿ ಏಕಾನಂಶೆಯ ಪೂಜೆಯೇನೋ ಹಿಂದೆ ಬಿದ್ದಿತು. ಆದರೆ ಪದ್ಮಹಸ್ತೆಯಾದ, ಕಟಿನ್ಯಸ್ತವಾಮಹಸ್ತೆಯಾದ ಈ ದೇವಿಯ ಮೂರ್ತಿಲಕ್ಷಣ ಸಾಮಾನ್ಯವಾಗಿ ಎಲ್ಲ ದೇವೀ ಮೂರ್ತಿಗಳಿಗೂ ಮಾದರಿಯಾಯಿತು.

ಸ್ವಯಂಪ್ರಧಾನರಾದ ಪಾರ್ಶ್ವದೇವತೆಗಳು

ಪೂಜೆಗೊಳ್ಳುವ ದೇವತೆಗಳಲ್ಲಿ ಶಿವ, ವಿಷ್ಣು, ಬ್ರಹ್ಮ, ಸೂರ್ಯ, ದೇವಿ, ಗಣೇಶ ಇವರಿಗೆಂದೇ ಆಲಯವಿರುವುದು ವಾಡಿಕೆ. ಆದರೆ ಪ್ರತಿಯೊಂದು ಆಲಯದಲ್ಲಿಯೂ ಹಲವಾರು ಇತರ ದೇವತೆಗಳಿಗೂ ಎಡೆಯಿರುತ್ತದೆ; ಆ ದೇವತೆಗಳನ್ನು ಎಲ್ಲಿ ನೆಲೆಗೊಳಿಸಬೇಕು ಎಂದು ಆಗಮದ ವಿಧಿಗಳೇ ಇವೆ. ಶಿವ ದೇವಾಲಯವಾದರೆ ಗರ್ಭಗುಡಿಯಲ್ಲಿ ಶಿವಲಿಂಗ; ದೇವಾಲಯದ ಆವರಣದೊಳಗೆ ದೇವಿಯಲ್ಲದೆ ಗಣಪತಿ, ದಕ್ಷಿಣಾಮೂರ್ತಿ, ಭೈರವ, ಚಂಡೇಶ್ವರ, ನಾರಾಯಣ, ವೀರಭದ್ರ, ಶಾಸ್ತ, ಸುಬ್ರಹ್ಮಣ್ಯ ಮೊದಲಾದ ಇತರ ದೇವತೆಗಳಿಗೂ ಗುಡಿಗಳಿರುವುದನ್ನು ಕಾಣಬಹುದು. ವಿಷ್ಣುದೇವಾಲಯವಾದರೆ ಗರ್ಭಗುಡಿಯಲ್ಲಿ ವಿಷ್ಣು; ಆವರಣದೊಳಗೆ ಲಕ್ಷ್ಮಿ, ಗರುಡ, ವಿಷ್ವಕ್ಸೇನ, ಹನುಮಂತ, ನವಗ್ರಹ, ದಿಕ್ಪಾಲಕರು ಮೊದಲಾದ ದೇವತೆಗಳು. ಗರ್ಭಗುಡಿಯಲ್ಲಿದ್ದುಕೊಂಡು ಪ್ರಧಾನಪೂಜೆ ಪಡೆಯುವ ದೇವತೆ ಸ್ವಯಂಪ್ರಧಾನದೇವತೆ; ಅದರ ಪರಿವಾರದಲ್ಲಿ ಸೇರಿ ನೆರೆದಿರುವ ದೇವತೆಗಳು ಪಾರ್ಶ್ವದೇವತೆಗಳು. ಜೈನಸಂಪ್ರದಾಯದಲ್ಲಿ 'ವ್ಯಂತರದೇವತೆ'ಗಳೆನ್ನುವ ವ್ಯವಹಾರವಿದೆ. ಗುಂಪಿನಲ್ಲಿ ವಿದ್ಯಾಧರರು, ಯಕ್ಷರು, ಸಿದ್ಧರು, ಸಾಧ್ಯರು, ಅಸುರರು ಎಲ್ಲರೂ ಸೇರುತ್ತಾರೆ, ಸಾಮಾನ್ಯವಾಗಿ ದಕ್ಷಿಣದೇಶದ ಗುಡಿಗಳಲ್ಲಿ ಗ್ರಾಮದೇವತೆಗಳೂ, ವೀರರೂ, ದಾನಿಗಳೂ, ಸಾಹಸಿಗಳೂ ಈ ಗೋಷ್ಠಿಯಲ್ಲಿ ಸೇರುವುದುಂಟು.

ಸ್ವಯಂಪ್ರಧಾನ ದೇವತೆಗಳು ವಿಶೇಷವಾಗಿ ಆರ್ಯಸಂಸ್ಕೃತಿಯ ವಲಯದಲ್ಲಿ ಮೂಡಿಬಂದವರು. ಆದರೆ ಗ್ರಾಮದೇವತೆಗಳ ಅಥವಾ ವೀರರ ಪ್ರಭಾವ ಇದರಿಂದ ಕುಗ್ಗದೆ ಇದ್ದಾಗ ಪಾರ್ಶ್ವದೇವತೆಗಳು

ಬರುಬರುತ್ತ ಪ್ರಧಾನರಾದುದು ಸಹಜವೇ. ನಮ್ಮ ನಾಡಿನ ಹಲವಾರು ದೇವಾಲಯಗಳಲ್ಲಿ ಸ್ವಯಂಪ್ರಧಾನ ದೇವತೆ ಯಾವುದಿದ್ದರೂ ಪಾರ್ಶ್ವದೇವತೆಗಳಿಗೆ, ಪಾರ್ಷದರಿಗೆ ವಿಶೇಷವಾದ ಪೂಜೆ ಸಲ್ಲುವುದನ್ನು ಗಮನಿಸ ಬಹುದು. ಬರುಬರುತ್ತ ಹೀಗೆ ಜನಪ್ರೀತಿಯನ್ನು ಗಳಿಸಿಕೊಂಡ ಪಾರ್ಶ್ವದೇವತೆಗೇ ಪ್ರತ್ಯೇಕವಾದ ಆಲಯ ಮೂಡಿಬರುವುದು ಸಹಜವೇ. ಎಂದರೆ ಮೊದಲಿಗೆ ಇಂಥ ದೇವತೆಗಳಿಗೆ ಗುಡಿಯಿರಲಿಲ್ಲವೆಂದಲ್ಲ; ಆದರೆ ಆ ಗುಡಿಗಳು ಗ್ರಾಮೀಣವಾಗಿರುತ್ತಿದ್ದುವು; ಅಲ್ಲಿ ನಡೆಯುವ ಪೂಜೆಯಲ್ಲಿ ಆರ್ಯಸಂಸ್ಕೃತಿಯ ಪ್ರಭಾವ ಇರುತ್ತಿರಲಿಲ್ಲ; ಗುಡಿಯ ರಚನೆಗಾಗಲೀ ಅಲ್ಲಿನ ಸಂಪ್ರದಾಯಕ್ಕಾಗಲೀ ಆಗಮಶುದ್ಧಿಯೆನ್ನುವುದು ಇರುತ್ತಿರಲಿಲ್ಲ. ಈಗಲೂ ಹಳ್ಳಿಗಳ ಕಡೆ ಇಂಥ ಗುಡಿಗಳನ್ನು ಕಾಣಬಹುದು.

ಆದರೆ ಈ ಗುಡಿಗಳು ವಿಶೇಷವಾದ ಆದರವನ್ನು ಗಳಿಸಿಕೊಂಡುವಾದರೆ ಹೀಗೆಯೇ ಉಳಿಯುವುದು ಕಷ್ಟ. ಕಟ್ಟಡ ದೊಡ್ಡದಾಗುವುದಷ್ಟೇ ಅಲ್ಲ, ಸಂಪತ್ತು ಹೆಚ್ಚುವುದಷ್ಟೇ ಅಲ್ಲ, ಅಲ್ಲಿನ ಪೂಜಾವಿಧಾನಗಳಲ್ಲಿಯೂ ಮಾರ್ಪಾಟು ಒದಗುತ್ತದೆ; ದೇವತೆಯ ಮಹಾತ್ಮ್ಯ ಕಥೆಗಳಲ್ಲಿ, ಪ್ರತೀತಿಗಳಲ್ಲಿ ಮೂಡಿಕೊಳ್ಳುತ್ತದೆ. ಗಣಪತಿ, ಸ್ಕಂದ, ಶಾಸ್ತ ಇವರು ಮೊದಲಿಗೆ ಶಿವನ ಪರಿವಾರದೇವತೆಗಳೆಂದು ಪರಿಗಣಿತರಾಗಿದ್ದವರು; ಆದರೆ ಅವರ ಹಿನ್ನೆಲೆ ಶಿವನ ಹಿನ್ನೆಲೆಗಿಂತ ಹಿಂದಿನದೆಂದು ಈಗಾಗಲೇ ಕಂಡಿದ್ದೇವೆ. ಇವರ ಭಕ್ತರು ಇವರನ್ನು ಬರಿಯ ಪರಿವಾರದೇವತೆಗಳೆಂದು, ಪಾರ್ಶ್ವದೇವತೆಗಳೆಂದು ಎಣಿಸಲು ಸಿದ್ಧರಿರದಿದ್ದರೆ ಆಶ್ಚರ್ಯವೇನಲ್ಲ. ಭಕ್ತರ ಸಂಖ್ಯೆ ಹೆಚ್ಚಿದಾಗ ಇವರನ್ನೇ ಸ್ವಯಂಪ್ರಧಾನದೇವತೆಗಳಾಗಿ ನಿಲ್ಲಿಸಿದರು.

ಹೀಗೆ ಪಾರ್ಶ್ವದೇವತೆಗಳಾಗಿದ್ದು ಕಾಲಕ್ರಮೇಣ ಸ್ವಯಂಪ್ರಧಾನರಾದವರು ಹಲವಾರು ದೇವತೆ ಗಳು. ಇವರಲ್ಲಿ ಗಣೇಶನ ಪ್ರಸ್ತಾಪ ಈಗಾಗಲೇ ಬಂದಿದೆ. ಇಲ್ಲಿ ಸುಬ್ರಹ್ಮಣ್ಯ, ಶಾಸ್ತ, ಮಲ್ಲಾರಿ ಇವರನ್ನು ಕುರಿತ ವಿವರಗಳಿವೆ.

ಸುಬ್ರಹ್ಮಣ್ಯ–ಸ್ಕಂದ

ಶಿವನ ಪರಿವಾರದಲ್ಲಿ ಅವನ ಮಗನೆಂದು ಹೆಸರಾದ ಸುಬ್ರಹ್ಮಣ್ಯನಿಗೆ ವಿಶೇಷವಾದ ಸ್ಥಾನವಿದೆ. ದಕ್ಷಿಣದೇಶದಲ್ಲಿ, ಅದರಲ್ಲಿಯೂ ತಮಿಳುನಾಡು ತುಳುನಾಡುಗಳಲ್ಲಿ, ಅವನ ಪ್ರಭಾವ ಹೆಚ್ಚು. ಶೇಯೋನ್, ಮುರುಗ, ಆರುಮುಖ (ಷಣ್ಮುಖ), ಮಹಾಸೇನ, ಕುಮಾರ, ಸುಬ್ರಹ್ಮಣ್ಯ, ಬಾಲಸ್ವಾಮಿ, ವೇಲನ್, ದಂಡಪಾಣಿ, ವಲ್ಲೀನಾಯಕ, ದೇವಸೇನಾಪತಿ, ಸೇನಾನಿ, ಗುಹ, ಗುರುಗುಹ, ಶಿವಗುರು, ದೇಶಿಕ ಮೊದಲಾದ ಹೆಸರುಗಳಿಂದ ಈ ದೇವತೆ ಪ್ರಸಿದ್ಧನಾಗಿದ್ದಾನೆ. ತಮಿಳುನಾಡಿನಲ್ಲಿಯೇ ಈ ದೇವತೆ ಮೈದಳೆದದ್ದು ಎಂದು ಹೇಳುವುದಿದೆ. ಕ್ರಿಸ್ತಪೂರ್ವ ಒಂದೆರಡನೆಯ ಶತಮಾನಗಳಲ್ಲಿದ್ದ ತಮಿಳು ಮಹಾಕವಿ ನಕ್ಕಿರದೇವನಾಯನಾರ್ (ನಕ್ಕಿರರ್) 'ತಿರುಮುರುಗರುಪ್ಪಡೈ' ಎನ್ನುವ ಗ್ರಂಥದಲ್ಲಿ ಮುರುಗನ ಆರಾಧನೆಯನ್ನು ಬಣ್ಣಿಸಿದ್ದಾರೆ. ಕ್ರಿಸ್ತಾಬ್ದ ಮೊದಲೆರಡನೆಯ ಶತಮಾನಗಳಲ್ಲಿ ಕಾಣಿಸಿಕೊಂಡ 'ಶಿಲಪ್ಪದಿಕಾರಂ' ನಲ್ಲಿಯೂ ಆರುಮೊಗದ ಮುರುಗನ ಪ್ರಸ್ತಾಪವಿದೆ; ಅವನ 'ವೇಲ'ದ ಹಿರಿಮೆಯಿದೆ. ಈ ದೇವತೆಯ ಇಂದಿನ ಜನಪ್ರೀತಿಗೆ ಪ್ರಾಯಶಃ ಕಾರಣವಾದುದು ತಮಿಳಿನ 'ಕಂದಪುರಾಣಂ'. ಸಂಸ್ಕೃತದ ಸ್ಕಂದಪುರಾಣವೆಂಬುದು ಒಟ್ಟಾರೆ ಇಂದು ಉಪಲಬ್ಧವಿಲ್ಲ; ಅಷ್ಟಾದಶ ಪುರಾಣಗಳಲ್ಲಿ ಹದಿಮೂರನೆಯದಾದ ಇದು ಕ್ರಿಸ್ತಾಬ್ದ ಏಳನೆಯ ಶತಮಾನದ ಸುಮಾರಿಗೆ ಸಿದ್ಧವಾಯಿತೆಂದು ಹೇಳುತ್ತಾರೆ. ಅದರ ಮೂರನೆಯ ಭಾಗವಾದ ಶಂಕರಸಂಹಿತೆ (ಶಿವರಹಸ್ಯಸಂಹಿತೆ) ಯಲ್ಲಿ ಏಳು ಕಾಂಡಗಳು—ಉತ್ಪತ್ತಿಕಾಂಡ, ಅಸುರಕಾಂಡ, ಮಹೇಂದ್ರಕಾಂಡ, ಯುದ್ಧ ಕಾಂಡ, ದೇವಕಾಂಡ, ದಕ್ಷಕಾಂಡ ಮತ್ತು ಉಪದೇಶಕಾಂಡಗಳೆಂದು. ಇದರಲ್ಲಿ ಮೊದಲ ಆರುಕಾಂಡಗಳನ್ನು

ಕಾಂಚೀಪುರದ ಕಚ್ಚಿಯಪ್ಪ ಶಿವಾಚಾರ್ಯರೂ, ಕಡೆಯ ಕಾಂಡವನ್ನು ಅವರ ಶಿಷ್ಯ ಕೋನೇರಿಯಪ್ಪ ಮುದಲಿಯಾರರೂ ತಮಿಳಿಗೆ ಹನ್ನೆರಡನೆಯ ಶತಮಾನದಲ್ಲಿ ಅನುವಾದಮಾಡಿದರು. ಇದರಲ್ಲಿ ಸ್ಕಂದನ ಕಥೆ ವಿಸ್ತಾರವಾಗಿ ಬರುತ್ತದೆ.

ಶಿವನ ಮುಖಗಳಿಂದ ಹೊರಹೊಮ್ಮಿದ ಆರುಕಳೆಗಳ ತೇಜಸ್ಸನ್ನು ಅಗ್ನಿಯೂ ವಾಯುವೂ ಒಯ್ದು ಶರವಣ ಸರೋವರದಲ್ಲಿ ಇರಿಸಿದರಂತೆ; ಶರವಣಭವನಾದ. ಅಲ್ಲಿ ಆರು ಕೃತ್ತಿಕೆಯರು ಅದನ್ನು ಬೆಳೆಸಿದರು; ಕಾರ್ತಿಕೇಯನಾದ. ಇದೇ ಮುರುಗನ ಮೊದಲ ರೂಪ. ಪಾರ್ವತಿ ಮುರುಗನನ್ನು ಶರವಣ ಸರೋವರದಲ್ಲಿ ಕಂಡಾಗ ಅವನ ಆರೂ ಕಳೆಗಳನ್ನು ಅಪ್ಪಿಕೊಂಡಳು; ಆರೂ ಸೇರಿ ಒಂದಾಯಿತು: ಅದೇ ಸ್ಕಂದ. ಅನಂತರ ಅವನಿಗೆ ಹಾಲನ್ನುಣಿಸಿ ಶಿವಪಾರ್ವತಿಯರು ತಮ್ಮ ನಡುವೆ ಮಗುವನ್ನು ನಿಲ್ಲಿಸಿಕೊಂಡರು. ಇದು ಸೋಮಾಸ್ಕಂದ ಮೂರ್ತಿ. ಪಾರ್ವತಿಯ ನೂಪುರದಿಂದ ಹೊರಬಂದ ಒಂಬತ್ತು ವೀರರು (ವೀರಬಾಹು, ವೀರಕೇಸರಿ, ವೀರಮಹೇಂದ್ರ, ವೀರಮಹೇಶ್ವರ, ವೀರಪುರಂದರ, ವೀರರಾಕ್ಷಸ, ವೀರಮಾರ್ತಾಂಡ, ವೀರಾಂತಕ, ವೀರಧೀರ) ಮಗುವಿನ ಬಂಟರಾದರು. ತಿರುಮಾಲನ (ಎಂದರೆ ವಿಷ್ಣುವಿನ) ಇಚ್ಛೆಯಂತೆ ಶಿವನು ಈ ಮಗುವಿನಿಂದ ಪ್ರಣವೋಪದೇಶ ಪಡೆದನು; ಅದೇ ಶಿವಗುರು, ಸ್ವಾಮಿನಾಥ, ದೇಶಿಕ. ಕಶ್ಯಪ ಮತ್ತು ಮಾಯೆಯರ ಮೂವರು ಮಕ್ಕಳಾದ ಶೂರಪದ್ಮ, ಸಿಂಹಮುಖ, ತಾರಕ ಎಂಬ ಅಸುರರು ಲೋಕಕಂಟಕರಾಗಲು ಆರುದಿನಗಳ ಮಗುವಾದ ಕುಮಾರ ತನ್ನ ವೀರಬಂಟರೊಂದಿಗೆ ಅವರನ್ನು ಸೆಣಸಲು ಹೊರಟನು. ಸೆಣಸಾಟದಲ್ಲಿ ತಾರಕಾಸುರನು ಕ್ರೌಂಚಪರ್ವತದಲ್ಲಿ ಅಡಗಿಕೊಳ್ಳಲು ಕುಮಾರನು ವಜ್ರಾಯುಧದಿಂದ ಈ ಬೆಟ್ಟವನ್ನು ಸೀಳಿ ತಾರಕನನ್ನು ಕೊಂದನು. ಹೀಗೆ ಅವನು ಕ್ರೌಂಚವಿದಾರಣ, ತಾರಕಾರಿ. ಈ ಸಾಹಸ ಸಂದರ್ಭದಲ್ಲಿ ಅವನು ವಿಶ್ರಮಿಸಿಕೊಂಡ ಸ್ಥಳವೆಂದು ತಿರುತ್ತಣಿ ಪ್ರಸಿದ್ಧವಾಗಿದೆ. ತಮ್ಮನನ್ನು ಕೊಂದ ಈ ಮಗುವಿನ ಮೇಲೆ ಶೂರಪದ್ಮನು ಎರಗಿಬರಲು ಅವರಲ್ಲಿ ದೊಡ್ಡಯುದ್ಧವೇ ನಡೆಯಿತು. ಕಡೆಗೆ ಶೂರಪದ್ಮನು ಸಮುದ್ರದಡಿಯಲ್ಲಿ ಮಾವಿನಮರದ ರೂಪವನ್ನು ತಳೆದು ಅಡಗಿಕೊಂಡನು. ಕುಮಾರನು ವೇಲಾಯುಧದಿಂದ ಈ ಮಾವಿನಮರವನ್ನು ಉರುಳಿಸಿದಾಗ ಅಸುರನ ಮೈ ಇಬ್ಭಾಗವಾಗಿ ಸೀಳಿತು — ಒಂದು ಭಾಗ ನವಿಲಿನಂತೆ, ಇನ್ನೊಂದು ಭಾಗ ಕೋಳಿಯಂತೆ ಕಾಣಿಸಿಕೊಂಡವು. ಕುಮಾರನು ನವಿಲನ್ನು ತನ್ನ ವಾಹನವನ್ನಾಗಿಯೂ, ಕೋಳಿಯನ್ನು ತನ್ನ ಧ್ವಜವನ್ನಾಗಿಯೂ ಮಾಡಿಕೊಂಡನು. ಹೀಗೆ ಅವನು ಶಿಖಿವಾಹನ, ಕುಕ್ಕುಟಧ್ವಜ. ಈ ಪ್ರಸಂಗ ನಡೆದದ್ದು ತಿರುಚೆಂದೂರಿನಲ್ಲಿ; ಇದಕ್ಕೆ ಜಯಂತಿಪುರವೆಂದೂ ಹೆಸರಾಯಿತು.

ದೇವಕಾರ್ಯ ಮುಗಿದಮೇಲೆ ಕುಮಾರನು ಇಂದ್ರನ ಮಗಳಾದ ದೇವಯಾನಿಯನ್ನೂ ವೇಡ್ಡ ಜನರ ಶಿವಮುನಿಯ ಮಗಳಾದ ವಳ್ಳಿಯನ್ನೂ ವರಿಸಿದನು. ವಳ್ಳಿಯಮ್ಮಾಳನ್ನು ಮದುವೆಯಾದುದು ತಿರುಪ್ಪರನ್ ಕುನ್ರಂನಲ್ಲಿ. ಆಕೆಯನ್ನು ಇವನು ಪ್ರೀತಿಸಿ ಮದುವೆಯಾದುದು ಪದ್ಮಾವತೀ—ವೆಂಕಟೇಶ ಕಲ್ಯಾಣದ ಧಾಟಿಯಲ್ಲಿಯೇ ಇದೆ. ಅಂತೂ ಶಿಲ್ಪದ ವಲ್ಲೀಕಲ್ಯಾಣ ಸುಂದರಮೂರ್ತಿಗೆ ಇದು ಹಿನ್ನೆಲೆ. ತಿರುಪ್ಪರನ್ ಕುನ್ರಂನಲ್ಲಿರುವುದು ಚತುರ್ಭುಜಸ್ಥಾನಕಮೂರ್ತಿ.

ಪುರಾಣಗಳಲ್ಲಿ ಇನ್ನೊಂದು ಸ್ವಾರಸ್ಯವಾದ ಕಥೆಯಿದೆ. ದಕ್ಷನ ಮಗಳಾದ ಸ್ವಾಹಾದೇವತೆ ಅಗ್ನಿಯನ್ನು ಪ್ರೀತಿಸುತ್ತಿದ್ದಳು; ಆದರೆ ಅಗ್ನಿ ಸಪ್ತರ್ಷಿಗಳ ಹೆಂಡತಿಯರಲ್ಲಿ ಅನುರಕ್ತನಾಗಿದ್ದ. ಇದನ್ನು ತಿಳಿದ ಸ್ವಾಹಾದೇವಿ ಆರು ಋಷಿಪತ್ನಿಯರ ರೂಪವನ್ನು ಧರಿಸಿ ಮೋಸದಿಂದ ಆರುಬಾರಿ ಅಗ್ನಿಯೊಂದಿಗೆ ಕೂಡಿಕೊಂಡಳು. ವಸಿಷ್ಠನ ಹೆಂಡತಿ ಅರುಂಧತಿ ಪರಮಪತಿವ್ರತೆಯಾಗಿದ್ದುದರಿಂದ ಆಕೆಯ ರೂಪವನ್ನು ತಳೆಯುವುದು

ಸ್ವಾಹೆಗೆ ಸಾಧ್ಯವಾಗಲಿಲ್ಲ. ಒಮ್ಮೊಮ್ಮೆ ಅಗ್ನಿಯಿಂದ ಪಡೆದ ವೀರ್ಯವನ್ನೂ ಆಕೆ ಶರವನದಲ್ಲಿ ಇರಿಸಿದಳು. ಆರುಮುಖದ ಮಗು ಕಾಣಿಸಿಕೊಂಡುದು ಹೀಗೆ. ಋಷಿಗಳು ತಂತಮ್ಮ ಹೆಂಡತಿಯರಲ್ಲಿ ಸಂದೇಹಪಟ್ಟು ಅವರನ್ನು ಬಿಟ್ಟುಬಿಟ್ಟರು; ವಿಶ್ವಾಮಿತ್ರ ಅವರಲ್ಲಿ ಯಾವ ತಪ್ಪೂ ಇರದೆಂದು ಸಮಾಧಾನಗೊಳಿಸಿದನು. ಋಷಿಪತ್ನಿಯರು ಮಗುವಿಗೆ ತಾಯಿಯರಾಗಬಯಸಿದರಾಗಿ ಕೃತ್ತಿಕೆಯರಾದರು; ಕೃತ್ತಿಕೆಯರಿಗೆ ಅಗ್ನಿಯೇ ದೇವತೆ. ಸ್ಕಂದನು ಇವರನ್ನು ಎಲ್ಲ ಮಕ್ಕಳಿಗೂ ಅಭಿಮಾನಿದೇವತೆಗಳಾಗುವಂತೆ ನಿಯಮಿಸಿದನು. ಈ ಮಗುವಿನ ಬಲ ಹೀಗೆ ಹೆಚ್ಚುತ್ತಿದ್ದುದನ್ನು ಕಂಡು ಅವನನ್ನು ಅಡಗಿಸುವಂತೆ ಇಂದ್ರನನ್ನು ಋಷಿಗಳು ಪ್ರಚೋದಿಸಿದರು. ಇಂದ್ರನಿಗೂ ಕುಮಾರನಿಗೂ ಸಮರ ನಡೆದು ಇಂದ್ರನೇ ಸೋತಾಗ, ಇಂದ್ರನು ಅವನನ್ನು ದೇವಸೇನಾಪತಿಯನ್ನಾಗಿ ಮಾಡಿದ. ತನ್ನ ಮಗಳಾದ ದೇವಸೇನೆಯನ್ನು ಅವನಿಗೆ ಕೊಟ್ಟನೆಂದು ವಿವರ. ಇದೇ ತಮಿಳು ಗ್ರಂಥದಲ್ಲಿ 'ದೇವಯಾನೈ' ಎಂದು ಬರುತ್ತದೆ.

ಈ ಪುರಾಣಪ್ರಸಕ್ತಿ ಬರುವ ಮೊದಲಿಗೇ ಈ ದೇವತೆ ದ್ರಾವಿಡ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಸೇರಿದ್ದ, ಜನಪ್ರಿಯನಾಗಿದ್ದ ಮುರುಗ. ತಮಿಳುನಾಡಿನಲ್ಲಿ ಪ್ರಮುಖವಾಗಿ ತಿರುಪ್ಪರನ್‌ಕುನ್ರಂ, ತಿರುವವಿನನ್ ಕುಡಿ (ಪಳನಿ), ತಿರುವೆರಗಂ (ಸ್ವಾಮಿಮಲೆ), ತಿರುತ್ತಣಿ, ತಿರುಚ್ಚೆಂದೂರು, ಅಳಹರ್ ಕೋಯಿಲ್, ಮತ್ತು ಶ್ರೀಲಂಕೆಯಲ್ಲಿ ಕದಿರಗಾಮ ಇವು ಮುರುಗಕ್ಷೇತ್ರಗಳು. ಮುರುಗನ ದೇಗುಲಗಳು ಸಾಮಾನ್ಯವಾಗಿ ಬೆಟ್ಟಗುಡ್ಡಗಳ ಮೇಲೆಯೇ ಕಾಡುಗಳ ನಡುವೆಯೇ ಇರುತ್ತಿದ್ದುವು. ಕುರವ, ವಡ್ಡ ಮೊದಲಾದ ಕಾಡುಜನರ ಕುಲದೇವತೆಯಾಗಿದ್ದ ಮುರುಗನನ್ನು "ಶೇಯೋನ್" ಎಂದು ಕರೆಯುತ್ತಿದ್ದರು. ಒಂದು ಕಾಲಕ್ಕೆ ಈ ನೆಲೆಯ ಜನರಲ್ಲಿ ಶೇಯೋನ್ ಮತ್ತು ಮಾಯೋನ್ (ಮಾಯಾವಿ, ತಿರುಮಾಲ್, ವಿಷ್ಣು) ಇಬ್ಬರೂ ಜೋಡಿದೇವತೆಗಳು; ಅವರಿಬ್ಬರೂ ಮಲೆದೇವತೆಗಳೇ, ಕ್ಷೇತ್ರಪಾಲಕರೇ. ಒಂದೇ ಕಡೆ, ಬೆಟ್ಟದ ಮೇಲೆ, ಅವರಿಬ್ಬರ ಗುಡಿಗಳೂ ಒಟ್ಟಿಗೆ ಇರುತ್ತಿದ್ದುವು. ಇಬ್ಬರ ಲಕ್ಷಣಗಳೂ ಹಲವಾರು ಬಾರಿ ಕಲೆಯುತ್ತಿದ್ದುವು. ಪ್ರಾಚೀನ ತಮಿಳು ಗ್ರಂಥಗಳಲ್ಲಿ ಇಬ್ಬರ ಪ್ರಸ್ತಾಪವೂ ಕಲೆತೇ ಬರುತ್ತದೆ. ತಿರುಮಲೆಯ ವೆಂಕಟೇಶ್ವರನಿಗೂ ಕುಮಾರನಿಗೂ ಇರುವ ನಂಟು ಮೂಲಭೂತವಾದುದೇ.

ಶೇಯೋನ್ ಕೆಂಬಣ್ಣದ ಬಾಲಕನಂತೆ ಕುರಂಚಿನಾಡಿನ ಬೆಟ್ಟಗಳ ಮೇಲೆ ಅಡ್ಡಾಡುತ್ತಾನೆಂದೂ, ಪ್ರಣಯರಸಿಕನೆಂದೂ ಪ್ರಾಚೀನವಾದ ಪ್ರಖ್ಯಾತಿಯೇ. ಕಪಿಲರ್ ರಚಿಸಿದ 'ಕುರಿಂಚಿಪಾಟು' ಸುಗ್ಗಿಯ ಕಾಲದಲ್ಲಿ ತರುಣ ತರುಣಿಯರು ಪರಸ್ಪರ ಅನುರಾಗದಲ್ಲಿ ಸೇರಿದಾಗ ಮಲೆಯನ್ನೇರಿ ಶೇಯೋನನ ಅನುಗ್ರಹ ವನ್ನು ಬೇಡುತ್ತಿದ್ದುದನ್ನು ವಿವರಿಸುತ್ತದೆ. ಈ ದೇವರು ನಡೆದುಕೊಂಡ ಬಗೆ ಅವರಿಗೆ ಮಾದರಿಯಾದುದೇ. ನಗುಮೊಗದ ಸುಂದರಿ ವಳ್ಳಿ ಕುರವರೆಂಬ ಕಾಡು ಜನರ ಹುಡುಗಿಯಾಗಿ ಬೆಟ್ಟದ ಮೇಲೆ ಕೊಳಗಳಲ್ಲಿ ಮಿಂದು, ಬಗೆಬಗೆಯ ಹೂಗಳನ್ನಾಯ್ದು ಮುಡಿದು, ಅಡ್ಡಾಡುತ್ತ, ಬೆಳೆದ ಕಾಳನ್ನು ಮೆಲ್ಲಲು ಬಂದ ಹಕ್ಕಿಗಳನ್ನು ಓಡಿಸುತ್ತ ಇದ್ದಾಗ, ಜತೆಗಾರರಿಂದ ದೂರಾದ ವೀರಕುಮಾರ ಅವಳನ್ನು ಸಂಧಿಸುತ್ತಾನೆ; ಅವಳಲ್ಲಿ ಅವನ ಪ್ರೇಮ ಮೂಡುತ್ತದೆ. ಹುಡುಗಿಯ ತಂದೆತಾಯಿಯರಿಗೆ ಇದು ತಿಳಿದಾಗ ಅವರು ಮುರುಗನನ್ನು ಪೂಜೆ ಮಾಡಿ ಅವರಿಬ್ಬರಿಗೆ ಮದುವೆ ನಡೆಸುತ್ತಾರೆ. ಅಸೆ, ಬಿದಿರುಮೆಳೆ, ಪೈರಿನ ಗೊಂಚಲು, ಕೊಂಬಿನೂದು ಇವೆಲ್ಲ ಶೇಯೋನನ ಪೂಜೆಗೆ ಸಂಬಂಧಿಸಿದುವು. ತಿರುಪ್ಪರನ್‌ಕುನ್ರಂ ದೇಗುಲ ತುಂಬ ಹಿಂದಿನಿಂದಲೂ ಕಾಮಿಗಳಿಗೆ, ಪ್ರೇಮಿಗಳಿಗೆ ಸಮಾಧಾನವನ್ನು ತರುವ ಸ್ಥಳ; ಯುವಕ-ಯುವತಿಯರೇ ಅಲ್ಲಿ ನೆರೆಯುತ್ತಿದ್ದರು. ಅಲ್ಲಿನ ದೇವರು ಚೆವ್ವೇಳ್, ಎಂದರೆ ಪ್ರೇಮವನ್ನು ಹೆಚ್ಚಿಸುವವನು; ಹೆಂಗಳೆಯರಲ್ಲಿ ಕಾಮೋದ್ರೇಕಕ್ಕೆ ಕಾರಣವಾಗು ವವನು.

ಶ್ರೀಲಂಕೆಯ ದಕ್ಷಿಣಭಾಗದಲ್ಲಿ ದಟ್ಟವಾದ ಕಾಡಿನ ನಡುವೆ ಮಾಣಿಕ್ಯಗಂಗೆ ನದಿಯ ದಡದ ಮೇಲೆ ಇರುವ ಕದಿರಗಾಮ ಕೂಡ ವಳ್ಳೀಕಲ್ಯಾಣಕ್ಕೆ ಹೆಸರಾದುದೇ. ಕಾಡಿಗೆ 'ದೇವಿಯಂಗೆ ಕೆಲೆ' (ದೇವರ ಅರಣ್ಯ) ಎಂದೇ ಹೆಸರು. ತಿರುಮಲೆಯಂತೆ ಅಲ್ಲಿಯೂ ಏಳುಬೆಟ್ಟಗಳು—ಕದಿರಮಲೆ, ವಳ್ಳಿಮಲೆ, ಪಿಳ್ಳೈಯಾರ್‌ಮಲೆ, ದೇವಯಾನೈಮಲೆ, ವಿಷ್ಣುಮಲೆ, ಕಾಳಭೈರವಮಲೆ, ಕಾಳಿಮಲೆ; ಶಬರಿಮಲೆ ಯಾತ್ರೆಯಂತೆಯೇ ತುಂಬ ಕಷ್ಟಸಾಧ್ಯವಾದ ಯಾತ್ರೆ; ಅಷ್ಟೇ ನಿಯಮಗಳಿಂದ, ಭಾವುಕತೆಯಿಂದ ಇಲ್ಲಿಯೂ ಯಾತ್ರಿಕರು ಬರುತ್ತಾರೆ. ಚಿದಂಬರದಂತೆ ಇಲ್ಲಿಯೂ ರಹಸ್ಯವಿದೆ. ದೇವಾಲಯದ ಗರ್ಭಗುಡಿಯಲ್ಲಿ ಮೂರ್ತಿಯಿಲ್ಲ; ಮೂಲಸ್ಥಾನವನ್ನು ತೆರೆಯಿಂದ ಮುಚ್ಚಿರುತ್ತಾರೆ. ಮೂಲಸ್ಥಾನದಲ್ಲಿ ತ್ರಿಕೋಣ–ಷಾಡ್ಗುಣ್ಯಯಂತ್ರವನ್ನು ಪಂಚ ಲೋಹದ ಫಲಕದ ಮೇಲೆ ಮೂಡಿಸಿ ಅದನ್ನು ಕರಂಡದಲ್ಲಿಟ್ಟು ಪೂಜಿಸುತ್ತಾರೆಂದು ಪ್ರತೀತಿ. ಆದುದರಿಂದಲೇ ಇದಕ್ಕೆ 'ಅವ್ಯಕ್ತಮೂರ್ತಿಪುರಿ', 'ದಹರಾಲಯಂ', 'ಚಿದಾಕಾಶ' ಎನ್ನುವ ಹೆಸರುಗಳಿವೆ. ಹದಿನೇಳನೆಯ ಶತಮಾನದಲ್ಲಿ ಉತ್ತರಭಾರತದಿಂದ ಇಲ್ಲಿಗೆ ಬಂದ ಸ್ವಾಮಿಕಲ್ಯಾಣಗಿರಿ ಎನ್ನುವ ಸಾಧುಗಳು ಹನ್ನೆರಡುವರ್ಷ ತಪಸ್ಸುಮಾಡಿದಮೇಲೆ ಕುಮಾರನು ವೇಡ್ಡ ಜನಾಂಗದ ಹುಡುಗನಂತೆ ಕಾಣಿಸಿಕೊಂಡು ಈ ದೇಗುಲವನ್ನು ತೋರಿಸಿದನಂತೆ. ಅಲ್ಲಿಯವರೆಗೆ ದೇಗುಲವಿದ್ದುದು ಯಾರಿಗೂ ತಿಳಿದೇ ಇರಲಿಲ್ಲವಂತೆ. ಅವರೇ ಈ ದೇವಾಲಯದ ಜೀರ್ಣೋದ್ಧಾರಕ್ಕೂ ಕದಿರಗಾಮದ ಪ್ರಸಿದ್ಧಿಗೂ ಕಾರಣವಾದವರು.

ಮೇಲೆ ಹೇಳಿದ 'ತಿರುಮುರುಗರ್ರುಪ್ಪಡೆ' ಯಲ್ಲಿ ಆಗಿನ ಕುರವಹೆಂಗಳೆಯರು ಈ ಮುರುಗ ಆಂಡವನನ್ನು ಪೂಜಿಸುತ್ತಿದ್ದ ಪ್ರಸ್ತಾಪವಿದೆ. ತರುಣಿಯರು ಗುಡ್ಡದ ಪಕ್ಕದಲ್ಲಿ ಕುಕ್ಕುಟಧ್ವಜ (ಕೋಡಿ) ವನ್ನು ನೆಟ್ಟು ಅದಕ್ಕೆ ತುಪ್ಪ–ಸಾಸುವೆಗಳನ್ನು ಬಳಿದು, ಕೆಂಪುಹೂಮಾಲೆಗಳನ್ನೂ ಹಸಿರೆಲೆಗಳನ್ನೂ ಕಟ್ಟಿ ಸಿಂಗರಿಸಿ, ಅದರ ಮುಂದೆ ಆಡಿನ ರಕ್ತದಿಂದ ಕಲಸಿದ ಅನ್ನವನ್ನು ಎಡೆಯಾಗಿಟ್ಟು, ಮುರುಗನ ಹಿರಿಮೆಯನ್ನು ಹಾಡಿಕೊಂಡು ಕುಣಿದಾಡುತ್ತಿದ್ದರು. ಪ್ರಣಯಕ್ಕೆ ಮಾತ್ರ ಅಧಿದೇವತೆಯಲ್ಲ ಅವನು; ಸಂತಾನವೂ ಅವನ ಕೃಪೆಯೇ. ಈ ವಿವರ ಒಂದು ಕಾಲಕ್ಕೆ ಇಡೀ ನಾಡಿನಲ್ಲೆಲ್ಲ ಹರಡಿದ್ದಂತೆ ತೋರುತ್ತದೆ. ಬಂಗಾಳದ ಕಡೆ ಈಗಲೂ ಸಂತಾನಾಪೇಕ್ಷಿಗಳಾದ ಹೆಂಗಸರು ಸ್ಕಂದನ ಮಣ್ಣಿನ ಮೂರ್ತಿಯನ್ನು ಮಾಡಿ ಪೂಜಿಸುವ ವಾಡಿಕೆಯಿದೆಯಂತೆ. ಇದು ಮಾತ್ರವಲ್ಲದೆ ಯಾವ ಬಗೆಯ ಕಷ್ಟ ಒದಗಿದರೂ, ತತ್ರಾಪಿ ಜ್ವರಬಾಧೆ ಯಿದ್ದಾಗ, ಮುರುಗನಿಗೆ ಹರಕೆಹೊರುವ ಪದ್ಧತಿಯಿದ್ದುದು ತಮಿಳು ಗ್ರಂಥಗಳಿಂದ ತಿಳಿದುಬರುತ್ತದೆ. ಕಾವಡಿಯನ್ನು ಹೊತ್ತು ಗುಡಿಗೆ ಹೋಗುವ ಪದ್ಧತಿ ತುಂಬ ಹಳೆಯದು. ಕೃತ್ತಿಕಾನಕ್ಷತ್ರವಿದ್ದಾಗ ಮಡಕೆಗಳಲ್ಲಿ ಹಾಲು, ಸಕ್ಕರೆ, ಜೇನುತುಪ್ಪ, ಹೂ, ಹಣ್ಣುಗಳನ್ನಿಟ್ಟುಕೊಂಡು ಸಿಂಗರಿಸಿದ ಬೊಂಬಿನ ಕೋಲಿಗೆ ಅವನ್ನು ಕಟ್ಟಿ, ಬೊಂಬನ್ನು ಹೆಗಲಮೇಲೆ ಹೊತ್ತು, ಅರಿಶಿನಬಣ್ಣದ ಬಟ್ಟೆಯನ್ನುಟ್ಟು 'ಹರೋಹರ' ಎಂದು ಕೂಗುತ್ತ, ಕುಣಿಯುತ್ತ ಯಾವುದಾದರೊಂದು ಗುಡ್ಡದ ಮೇಲಿನ ಮುರುಗನ ಗುಡಿಗೊಯ್ದು ಅಲ್ಲಿ ಅದನ್ನು ಸಮರ್ಪಿಸುವುದು ಕಾವಡಿ ಪದ್ಧತಿ.

ಈ ದೇವತೆ ಎಂದೂ ಮುಗಿಯದ ಹರೆಯದವನು; ಹುಡುಗನೆಂದೇ ಎಣಿಕೆ. ಸ್ವರೂಪದಲ್ಲಿಯೂ ಸ್ವಭಾವದಲ್ಲಿಯೂ ಕೌಮಾರವೇ ಇವನ ಮುಖ್ಯ ಲಕ್ಷಣವಾದುದರಿಂದ 'ಬಾಲನ್', 'ಕುಮಾರನ್' ಎಂದು ಕರೆದರು. ಅವನ ನಿರಂತರ ತಾರುಣ್ಯವನ್ನು ಸೂರ್ಯನ ಹಿನ್ನೆಲೆಯಲ್ಲಿ ಪಂಡಿತರು ಕಂಡಿರುವುದುಂಟು. ಅವನು ಸೂರ್ಯದೇವತೆಯ ಪ್ರತೀಕವೆಂದು ಅವರ ಎಣಿಕೆ; ಹಾಗೆಂದೇ ಅವನು ಕುಕ್ಕುಟಧ್ವಜ.

ಕೋಳಿಗೂ ಸೂರ್ಯನಿಗೂ ಹಳೆಯ ನೆಂಟಸ್ತಿಕೆ; ಕೋಳಿಯನ್ನು ಸೂರ್ಯಪಕ್ಷಿ ಎಂದುದೂ ಉಂಟು. ಆರು ಮುಖಗಳೆಂದರೆ ಸಂವತ್ಸರದ ಆರು ಋತುಗಳು; ಹನ್ನೆರಡು ಕೈಗಳೆಂದರೆ ಹನ್ನೆರಡು ತಿಂಗಳುಗಳು. ಕ್ರೌಂಚವಿದಾರಣನೆಂದರೆ ಗುಡ್ಡದಂಥ ಕತ್ತಲೆಯನ್ನು ಸೀಳುವವನು, ಇತ್ಯಾದಿ, ಇತ್ಯಾದಿ.

ತಮಿಳುನಾಡಿನ ಮುರುಗನಿಗೂ ಉತ್ತರದೇಶದ ಸ್ಕಂದನಿಗೂ ಸಮಾಗಮವಾಗಿ ಈಗಿನ ಸುಬ್ರಹ್ಮಣ್ಯ ಕಲ್ಪನೆ ಮೈದಳೆಯಿತೆಂದು ಒಂದು ವಾದವಿದೆ. ಈಗ ಉತ್ತರಭಾರತದಲ್ಲಿ ಈ ದೇವತೆಯ ಪೂಜೆ ಅಷ್ಟಾಗಿ ಕಾಣಬರುವುದಿಲ್ಲ; ಈ ದೇವತೆಯ ಪ್ರಸಿದ್ಧಿಯೂ ಅಷ್ಟಕ್ಕಷ್ಟೇ. ಆದರೆ ಕ್ರಿಸ್ತಪೂರ್ವ ಒಂದೆರಡು ಶತಮಾನಗಳಲ್ಲಿ ಆ ಕಡೆ ಸ್ಕಂದ, ವಿಶಾಖರ ಪೂಜೆ ವಿಶೇಷವಾಗಿದ್ದುದು ಪತಂಜಲಿಯ 'ಮಹಾಭಾಷ್ಯ'ದಿಂದ ತಿಳಿದು ಬರುತ್ತದೆ (5, 3, 99). ಛಾಂದೋಗ್ಯೋಪನಿಷತ್ತಿನಲ್ಲಿ (7, 2, 6) ನಾರದನಿಗೆ ಬ್ರಹ್ಮವಿದ್ಯೆಯನ್ನುಪದೇಶಿಸಿದ ಸನತ್ಕುಮಾರನನ್ನು ಸ್ಕಂದನೆಂದೇ ಕರೆದಿದ್ದಾರೆ. ಅಥರ್ವವೇದದ ಪರಿಶಿಷ್ಟದಲ್ಲಿ (5, 2, 3) 'ಸ್ಕಂದಯಾಗ'ದ ಪ್ರಸ್ತಾಪ ಬರುತ್ತದೆ; 'ಅಗ್ನಿಭೂಃ' ಆದ ಕುಮಾರನ ಪರಿಚಯ ಇಲ್ಲಿ ಕಾಣಸಿಗುತ್ತದೆ. ಇನ್ನೊಂದು ಸ್ವಾರಸ್ಯವಾದ ವಿವರವೆಂದರೆ ಇಲ್ಲಿ ಸ್ಕಂದ 'ಧೂರ್ತ'; ಕೆಲವು ಸಂಸ್ಕೃತ ನಾಟಕಗಳಲ್ಲಿಯೂ (ಶೂದ್ರಕನ 'ಮೃಚ್ಛಕಟಿಕ' ನಿದರ್ಶನ) ಸ್ಕಂದ ಕಳ್ಳರ ದೇವತೆಯಾಗಿರುವ ಉಲ್ಲೇಖವಿದೆ. ಈ ದೇವತೆಯ ಹಿನ್ನೆಲೆ ಏನೆಂಬುದು ಆಗಿನ ಜನಕ್ಕೆ ತೀರದ ಸಮಸ್ಯೆಯಾಗಿದ್ದುದೂ ಗಮನಾರ್ಹವಾದುದು —

> ಆಗ್ನೇಯಂ ಕೃತ್ತಿಕಾಪುತ್ರಂ ಐಂದ್ರಂ ಕೇಚಿದಧೀಯತೇ ।
> ಕೇಚಿತ್ ಪಾಶುಪತಂ ರೌದ್ರಂ ಯೋಽಸಿ ಸೋಽಸಿ ನಮೋಽಸ್ತು ತೇ ॥

ಇದು ಅಥರ್ವ ಪರಿಶಿಷ್ಟದಲ್ಲಿ (6, 4) ಬರುವ ಮಾತು. 'ಕೆಲವರು ನೀನು ಅಗ್ನಿಯ ಮಗನೆಂದೂ, ಇನ್ನು ಕೆಲವರು ಕೃತ್ತಿಕೆಯರ ಮಗನೆಂದೂ, ಮತ್ತೆ ಕೆಲವರು ಇಂದ್ರನ ಸಂಬಂಧಿಯೆಂದೂ, ಮತ್ತೂ ಕೆಲವರು ಶಿವನ ಮಗನೆಂದೂ ಹೇಳುತ್ತಾರೆ; ನೀನು ಯಾರೋ ಅವನೇ! ನಮಸ್ಕಾರವನ್ನಂತೂ ಮಾಡುತ್ತೇನೆ', ಎಂದು ಈ ಶ್ಲೋಕದ ಅರ್ಥ. ಮಹಾಭಾರತದಲ್ಲಿ ಈ ದೇವತೆಯ ಪ್ರಸ್ತಾಪ ಅಗ್ನಿ ಉಪಾಖ್ಯಾನ ವಾದೊಡನೆ ಬರುತ್ತದೆ (ಅರಣ್ಯಪರ್ವ, 222 ಮುಂದೆ). ತನ್ನ ಶಕ್ತ್ಯಾಯುಧದಿಂದ ಕ್ರೌಂಚಪರ್ವತವನ್ನು ಸೀಳಿದ ಸ್ಕಂದನ ಉಲ್ಲೇಖ ಇಲ್ಲಿ ವಿಸ್ತಾರವಾಗಿಯೇ ಬರುತ್ತದೆ. ಆದರೆ ಇಲ್ಲಿ ಕುಮಾರನು ಸೆಣಸುವುದು ಮಹಿಷನೊಂದಿಗೆ. ಅವನು ವೀರಯೋದ್ಧ. ಭಗವದ್ಗೀತೆಯೂ 'ಸೇನಾನೀನಾಮಹಂ ಸ್ಕಂದಃ' ಎಂದು ಹೇಳುವುದಿಲ್ಲವೆ? ವನಪರ್ವದಲ್ಲಿ ಶಿವನು 'ಸ್ಕಂದಂ ಪಶ್ಯತ ಮಾಮಿವ' ಎಂದು ಹೇಳಿರುದಿದೆ.

ಕ್ರಿಸ್ತಾಬ್ದದ ಆರಂಭದಲ್ಲಿ ಸ್ಕಂದನ ಆರಾಧನೆ ಉತ್ತರ ಭಾರತದಲ್ಲೆಲ್ಲ ಬಳಕೆಯಲ್ಲಿದ್ದಿತು. ಅದರಲ್ಲಿಯೂ ಕುಷಾಣರಾಜರು ಇದಕ್ಕೆ ತುಂಬ ಉತ್ತೇಜನ ಕೊಟ್ಟರು. ಅವರು ಸ್ಕಂದ–ಕಾರ್ತಿಕೇಯನ ಭಕ್ತರಾಗಿದ್ದು ತಮ್ಮ ನಾಣ್ಯಗಳ ಮೇಲೆ ಅವನ ಪುರುಷಾಕೃತಿಯನ್ನೋ ಲಾಂಛನವನ್ನೋ ಮೂಡಿಸುತ್ತಿದ್ದರು. ಹುವಿಷ್ಕನ ನಾಣ್ಯಗಳಲ್ಲಿ ಮಹಾಸೇನ ಮತ್ತು ಸ್ಕಂದ ಎಂಬೆರಡು ರೂಪಗಳ ಚಿತ್ರಣವೂ ಇದೆ. ಕ್ರಿಸ್ತಾಬ್ದ ಎರಡನೆಯ ಶತಮಾನದಲ್ಲಿ ಯೌಧೇಯ ಜನಾಂಗದ ಒಡೆಯರು ಟಂಕಿಸಿದ್ದ ನಾಣ್ಯಗಳಲ್ಲಿ 'ಯೌಧೇಯ ಭಗವತ ಸ್ವಾಮಿನೋ ಬ್ರಹ್ಮಣ್ಯ (ಸ)' ಅಥವಾ 'ಭಗವತಸ್ವಾಮಿನೋ ಬ್ರಹ್ಮಣ್ಯದೇವಸ್ಯ ಕುಮಾರಸ್ಯ' ಎಂಬ ಬರಹಗಳಿವೆ. ಯೌಧೇಯರು ತಮ್ಮ ಇಡೀ ರಾಜ್ಯವನ್ನೇ ಈ ದೇವತೆಗೆ ಸಮರ್ಪಿಸಿ ಅವನ ಪ್ರತಿನಿಧಿಯಾಗಿ ಗಣವು ಆಡಳಿತವನ್ನು ನಡೆಸುವ ಪದ್ಧತಿಯಿದ್ದಿತು. ಈ ಔದುಂಬರರು ಪಂಜಾಬಿನಲ್ಲಿ ಈಗ ಕಾಂಗಡಾ ಜಿಲ್ಲೆಯ

ಚಿತ್ರ 120
ಕಾರ್ತಿಕೇಯ
ಸುಮಾರು
ಆರನೆಯ
ಶತಮಾನದ
ಗುಪ್ತಶಿಲ್ಪ

ಚಿತ್ರ 121
ದೇವಸೇನಾಪತಿ ಸುಬ್ರಹ್ಮಣ್ಯ
ದಕ್ಷಿಣದೇಶದ ಶಿಲ್ಪ

ಚಿತ್ರ 122
ಶಿಖಿವಾಹನ-
ಸ್ಕಂದ
ಒಡಿಸ್ಸಾ ದೇಶದ
ಭುವನೇಶ್ವರದ
ಶಿಲ್ಪ

ಗುರುದಾಸಪುರ, ಹೋಷಿಯಾರ್‌ಪುರಗಳಿರುವ ಕಡೆ ಇರುತ್ತಿದ್ದರು. ಕೌಶಾಂಬಿಯ ಮೇಘ ರಾಜವಂಶಕ್ಕೆ ಸೇರಿದ್ದ ಮಹಾರಾಜ ಗೌತಮೀ ಪುತ್ರವೃಷಭ–ಧ್ವಜನೆಂಬುವನು ತನ್ನ ರಾಜ್ಯವನ್ನು ಕಾರ್ತಿಕೇಯನಿಗೆ ಒಪ್ಪಿಸಿದುದು ಭೀಟಾದಲ್ಲಿ ದೊರೆತ ಮೃಣ್ಮಯ ಮುದ್ರೆಯೊಂದರಿಂದ ತಿಳಿದುಬರುತ್ತದೆ. ಅಯೋಧ್ಯೆಯಲ್ಲಿ ಆಳುತ್ತಿದ್ದ ವಿಜಯಮಿತ್ರರಾಜನ ನಾಣ್ಯಗಳಲ್ಲಿಯೂ ಈ ದೇವರ ಲಾಂಛನವಾದ ಕುಕ್ಕುಟಧ್ವಜದ ಚಿತ್ರಣವಿದೆ. ಉಜ್ಜಯಿನಿಯ ನಾಣ್ಯಗಳಲ್ಲಂತೂ ಆರು ಮುಖಗಳ (ಮೂರು ಮುಖಗಳು ಮಾತ್ರ ಮುಂದಾಗಿ ಕಾಣುತ್ತವೆ) ದೇವತೆಯೇ ಇದೆ. ಮೊದಲನೆಯ ಕುಮಾರಗುಪ್ತ (145–416)ನ ಶಾಸನಗಳಲ್ಲಿ 'ಸ್ವಾಮಿ ಮಹಾಸೇನ'ನ ಪ್ರಸ್ತಾಪ ಬರುತ್ತದೆ.

ಪತಂಜಲಿಯ ಕಾಲಕ್ಕೆ ಸ್ಕಂದ, ವಿಶಾಖ ಇಬ್ಬರೂ ಬೇರೆ ಬೇರೆ ದೇವತೆಗಳಾಗಿದ್ದಂತೆ ತೋರುತ್ತದೆ; ಹುವಿಷ್ಕನ ನಾಣ್ಯಗಳಲ್ಲಿ ಈ ಭೇದ ಉಳಿದಿದೆ. ಇವರಿಬ್ಬರಲ್ಲದೆ ಕುಮಾರ, ಮಹಾಸೇನ ಎಂಬ ಇನ್ನಿಬ್ಬರು ದೇವತೆಗಳೂ ಕ್ರಿಸ್ತಾಬ್ದ ಎರಡನೆಯ ಶತಮಾನದಲ್ಲಿ ಪೂಜೆಗೊಳ್ಳುತ್ತಿದ್ದರು. ಮಹಾಭಾರತದ ಪ್ರಕಾರ ಕುಮಾರನು ಜನ್ಮಿಸಿದನಂತರ ಹಿಮವಂತನ ಮಗಳು ಉಮೆಯ ಬಳಿ ವಿಶಾಖನಾಗಿಯೂ, ರುದ್ರನ ಬಳಿ ಸ್ಕಂದನಾಗಿಯೂ ಹೋದ. ವಿಶಾಖ ಹಿಮಾಲಯದ ತಪ್ಪಲಿನಲ್ಲಿ ಪೂಜೆಗೊಳ್ಳುತ್ತಿದ್ದ ದೇವತೆ; ಸ್ಕಂದನಿಗೂ ಇವನಿಗೂ ತಾದಾತ್ಮ್ಯ ಯಾವ ಕಾಲದಲ್ಲಿ ಬಂದಿತೋ ಹೇಳುವುದು ಕಷ್ಟ. ಸ್ಕಂದ ಮುಖ್ಯವಾಗಿ ಅಗ್ನಿ ದೇವತೆ. ಅಗ್ನಿಯು ರುದ್ರನೊಂದಿಗೆ ಬೆರೆತು, ಹೈಮವತಿ–ಉಮೆ ರುದ್ರನ ಮಡದಿಯೆನ್ನುವ ಕಲ್ಪನೆ ಬೇರೂರಿದಾಗ ಅವರಿಬ್ಬರ ಕುಮಾರನಾಗಿ ಮೈದಳೆದ ದೇವತೆಯಲ್ಲಿ ಸ್ಕಂದ,

ವಿಶಾಖ, ಕುಮಾರ, ಮಹಾಸೇನರು ಕೂಡಿಕೊಂಡಿರಬಹುದು. ಮೊದಲಿಗೆ ಈ ದೇವತೆ ವ್ಯಂತರ ನೆಲೆಯದೇ. ಕೃತ್ತಿಕೆಯರ, ಮಾತೃಕೆಯರ ರಕ್ಷಕನಾಗಿ ಪೂಜೆಗೊಳ್ಳುತ್ತಿದ್ದುದುಂಟು. ಹದಿನಾರು ವರ್ಷ ಮುಟ್ಟುವ ಮೊದಲು ಎಲ್ಲ ಮಕ್ಕಳನ್ನೂ ಕಾಪಿಡುವ ಹೊಣೆ ಕೃತ್ತಿಕೆಯರದೆಂದು ವಿಧಿಸಿದವನು ಇವನೇ; ತಾನೇ ಮಗುವಾಗಿದ್ದುಕೊಂಡು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವವನು ಈ ಕುಮಾರ, ಇವನ ಬಂಟರು (ಪಾರ್ಷದರು) ಕ್ರೂರಿಗಳೆಂದೂ, ಎಳೆಯ ಮಕ್ಕಳನ್ನು ಹೊತ್ತುಕೊಂಡು ಹೋಗುವರೆಂದೂ ನಂಬಿಕೆಯಿದ್ದಿತು.

ಮಹಾಸೇನ, ಸೇನಾನಿ, ದೇವಸೇನಾಪತಿ ಎನ್ನುವ ಕಲ್ಪನೆಯಲ್ಲಿ ದೇವತೆಗಳ ಸೇನೆಗೆ ವಿಜಯವನ್ನು ಗಳಿಸಿಕೊಟ್ಟ ವೀರನೆಂಬ ಇಂಗಿತವಿದೆ; ಆದರೆ ಇಂದ್ರನೊಂದಿಗೂ ಸೆಣಸಿದವನು, ಋಷಿಗಳಿಗೆ ಆಗದಿದ್ದವನು ಎನ್ನುವ ಕಲ್ಪನೆಯಲ್ಲಿ ಆರ್ಯೇತರ ಜನರ ದೇವತೆಯೆನ್ನುವ ಅನುಮಾನವಿದೆ. ಶಿವನಿಗೆ ಪ್ರಣವೋಪದೇಶ ಮಾಡಿ ಅವನಿಗಿಂತ ಒಂದು ಪಟ್ಟು ಹೆಚ್ಚಾದನಲ್ಲವೆ? ದಕ್ಷಿಣದಲ್ಲಿ ಈ ಕಲ್ಪನೆ ಬೇರೂರಿರುವುದು ಸಹಜವೇ. ಸ್ವಾಮಿಮಲೆಯಲ್ಲಿರುವ ಸುಬ್ರಹ್ಮಣ್ಯನ ಗುಡಿಯಲ್ಲಿ ಜಟಾಧಾರಿಯಾಗಿ, ಗಡ್ಡವನ್ನು ಬೆಳೆಸಿಕೊಂಡು, ಚಿನ್ಮುದ್ರೆಯಲ್ಲಿ ಕುಳಿತ ದ್ವಿಭುಜಮೂರ್ತಿಯೇ ಅರ್ಚಾಮೂರ್ತಿ. ದಿಟವಾಗಿ ಅವನು ಸಿದ್ಧ ಅಥವಾ ಯೋಗಿಯೆಂದೂ, ಮಡದಿಯರೆಂದು ನಿಂತ ವಳ್ಳಿ ಮತ್ತು ದೇವಸೇನೆಯರು ಅವನ ಇಚ್ಛಾಶಕ್ತಿ, ಕ್ರಿಯಾಶಕ್ತಿಗಳೆಂದೂ ವಿವರಣೆಯಿದೆ. ನಾರದನಿಗೆ ಬ್ರಹ್ಮೋಪದೇಶ ಮಾಡಿದ ಸನತ್ಕುಮಾರನಲ್ಲವೆ ಇವನು? ಸು–ಬ್ರಹ್ಮಣ್ಯನಾದುದು ಹೀಗೆ.

ಆಗಮಗಳು ಈ ದೇವತೆಯ ಶಿಲ್ಪಲಕ್ಷಣಗಳನ್ನೂ, ಆಲಯನಿರ್ಮಾಣ ವಿವರಗಳನ್ನೂ, ಪೂಜಾ ಕ್ರಮಗಳನ್ನೂ ಒಳಗೊಂಡುವು. ಕಾಮಿಕಾಗಮ, ಪೂರ್ವಕಾರಣಾಗಮ, ಸುಪ್ರಭೇದಾಗಮ, ಕುಮಾರತಂತ್ರಗಳಲ್ಲಿ ವಿಶೇಷವಾಗಿಯೇ ಇವು ಬರುತ್ತವೆ. ಕುಮಾರತಂತ್ರದ ಪ್ರಕಾರ ಈ ದೇವತೆಯ ಹಲವಾರು ರೂಪಗಳಲ್ಲಿ ಮುಖ್ಯವಾದುವು ಶಕ್ತಿಧರ, ಸ್ಕಂದ, ಸೇನಾಪತಿ, ಸುಬ್ರಹ್ಮಣ್ಯ, ಗಜವಾಹನ, ಶರವಣಭವ, ಕಾರ್ತಿಕೇಯ, ಕುಮಾರ, ಷಣ್ಮುಖ, ತಾರಕಾರಿ, ಸೇನಾನಿ, ಬ್ರಹ್ಮಶಾಸ್ತ, ವಲ್ಲೀ ಕಲ್ಯಾಣಸುಂದರ, ಬಾಲಸ್ವಾಮಿ, ಶಿಖಿವಾಹನ. ಇವನನ್ನು ಮಹಾಯೋಗಿಯೆಂದೂ ಭೂತನಾಥನೆಂದೂ ಬಗೆದಿರುವುದುಂಟು. ಕೆಲವೆಡೆ ಮೇಕೆಯ ಮುಖವನ್ನಿರಿಸಿ 'ಛಾಗವಕ್ತ್ರ' (ನೈಗಮೇಯ) ಎಂದು ಕರೆದಿರುವುದೂ ಇದೆ.

ಚಿತ್ರ 123

ಚಿತ್ರ 124

ಶಿಖಿವಾಹನ ಸುಬ್ರಹ್ಮಣ್ಯ

ಎರಡು ಕೈಗಳು, ನಾಲ್ಕು ಕೈಗಳು ವಾಡಿಕೆ; ಆರುತಲೆಗಳಿದ್ದಾಗ ಹನ್ನೆರಡು ಕೈಗಳು. ಕುಕ್ಕುಟ (ಕೋಳಿ), ಘಂಟೆ, ವೈಜಯಂತಿ, ಪತಾಕೆ, ಶಕ್ತಿ ಇವು ಸಾಮಾನ್ಯವಾಗಿ ಆಯುಧಗಳು. ಎಡಗೈಯಲ್ಲಿ ವಜ್ರಾಯುಧವನ್ನೂ ಬಲಗೈಯಲ್ಲಿ ಶಕ್ತ್ಯಾಯುಧವನ್ನೂ ಅಳವಡಿಸಿರುತ್ತಾರೆ. ಎರಡೇ ಕೈಗಳಿದ್ದಾಗ ಶಕ್ತ್ಯಾಯುಧವೊಂದು ಇರುತ್ತದೆ; ದಂಡಾಕಾರವಾಗಿರುವ ಈ 'ವೇಲ್' ಅವನ ವಿಶೇಷಾಯುಧ. ಬೃಹತ್ಸಂಹಿತೆಯು ಇವನನ್ನು 'ಬರ್ಹಿಕೇತು' ಎಂದರೆ ನವಿಲಿನ ಧ್ವಜವುಳ್ಳವನು ಎಂದು ಬಣ್ಣಿಸಿದೆ. ನವಿಲನ್ನೇರಿ ಕುಳಿತಂತೆ, ನವಿಲ ಬಳಿ ನಿಂತಂತೆ ಈ ದೇವತೆಯಿದ್ದಾಗ 'ಶಿಖಿವಾಹನ'ನೆನಿಸಿಕೊಳ್ಳುತ್ತಾನೆ. ಗುಪ್ತರ ಕಾಲದ ಶಿಲಾಫಲಕವೊಂದರಲ್ಲಿ ಸುಖಾಸೀನ ಭಂಗಿಯ ಕಾರ್ತಿಕೇಯನ ಬಲತೊಡೆಯಡಿಯಿಂದ ನವಿಲು ತನ್ನ ಕೊರಳನ್ನೆತ್ತಿಕೊಂಡು ಅವನ ಬಲಗೈಯಲ್ಲಿರುವ ತಿನಿಸಿಗೆ ಕೊಕ್ಕುಹಾಕುತ್ತಿರುವಂತೆ ಶಿಲ್ಪವಿದೆ. ಆರನೆಯ ಶತಮಾನದ ಈ ಕಲಾಕೃತಿ ಸ್ವಾರಸ್ಯವಾದುದು. ಸ್ವಯಂಪ್ರಧಾನ ಸುಬ್ರಹ್ಮಣ್ಯದೇವಾಲಯ ಗಳಲ್ಲಿ ಮೂಲವರ ಮುಂದೆ ನವಿಲನ್ನು ಕಡೆದು ನಿಲ್ಲಿಸಿರುತ್ತಾರೆ; ಶಿವನ ಮುಂದೆ ನಂದಿಯಿರುವಂತೆ, ವಿಷ್ಣುವಿನ ಮುಂದೆ ಗರುಡ ಇರುವಂತೆ.

ಸುಬ್ರಹ್ಮಣ್ಯನು ಏಕಾಂಗಿಯಾಗಿ ದ್ವಿಭುಜ ಅಥವಾ ಚತುರ್ಭುಜನಾಗಿರುವಂತೆಯೂ, ವಲ್ಲೀ–ದೇವಸೇನೆಯರೊಡಗೂಡಿದ್ದಾಗ ಚತುರ್ಭುಜನಾಗಿರುವಂತೆಯೂ, ನಿಂತಂತೆಯೂ, ನವಿಲನ್ನೇರಿ ಕುಳಿತಂತೆಯೂ ಮೂರ್ತಿಶಿಲ್ಪಗಳಿವೆ. ವಿಷ್ಣುಧರ್ಮೋತ್ತರದಲ್ಲಿ ಷಣ್ಮುಖ ಸುಬ್ರಹ್ಮಣ್ಯನ ಉಲ್ಲೇಖವಿದೆ. ಪಂಚಮುಖನಾದ ಶಿವನ ಐದು ಮುಖಗಳೂ ಪಾರ್ವತಿಯ ಒಂದು ಮುಖವೂ ಸೇರಿ ಆರುಮುಖಗಳೆಂದು ಒಂದು ವಿವರಣೆ. ಮುಖಗಳು ಆರಿದ್ದಾಗ ಹನ್ನೆರಡು ಕೈಗಳು ಇರುತ್ತವೆ; ಈ ಮೂರ್ತಿ ಕುಳಿತಿರುವುದೇ ವಾಡಿಕೆ. ಸುಬ್ರಹ್ಮಣ್ಯನ ಬಟ್ಟೆ ಕೆಂಪು ಬಣ್ಣದ್ದಿರಬೇಕೆಂದೂ, ಅವನ ಪೂಜಾಪುಷ್ಪಗಳೂ ಕೆಂಪುಬಣ್ಣದವೆಂದೂ, ತಲೆಯ ಮೇಲೆ ಐದು ಜಡೆಗಳ ಶಿಖಂಡಕ ಅಥವಾ ಕಾಕಪಕ್ಷವೆನ್ನುವ ಕೇಶಬಂಧವಿರಬೇಕೆಂದೂ ಆಗಮ ಸೂಚಿಸುತ್ತದೆ.

ಸ್ಥಾನಕಭಂಗಿಯಲ್ಲಿ ಒಂಟಿಯಾಗಿದ್ದು ಚತುರ್ಭುಜಗಳಿದ್ದಾಗ ಅದು ಸುಬ್ರಹ್ಮಣ್ಯನ ರಾಜಸಿಕ ಮೂರ್ತಿಯೆಂದೂ, ಆಸೀನನಾಗಿದ್ದು ದ್ವಿಭುಜವಿರುವುದು ಸಾತ್ತ್ವಿಕವೆಂದೂ, ಮಯೂರವಾಹನನಾಗಿ ಆರು, ಎಂಟು, ಅಥವಾ ಹನ್ನೆರಡು ಭುಜಗಳಿದ್ದಾಗ ತಾಮಸಮೂರ್ತಿಯೆಂದೂ ವ್ಯವಹಾರವಿದೆ. ಸ್ಥಾನಕಮೂರ್ತಿಯು ಭೋಗಬೇರ; ಕೇವಲ ಆಸೀನಮೂರ್ತಿಯು ಯೋಗಬೇರ; ವಾಹನಾರೂಢವಾದುದು ಧ್ಯಾನಬೇರವೆಂದೂ ಕಲ್ಪನೆಯಿದೆ.

ಸುಬ್ರಹ್ಮಣ್ಯನ ಪೂಜೆಯಲ್ಲಿ ನಾಗಪೂಜೆಯ ಸಂಬಂಧವೂ ಒದಗಿಬಂದಿರುವುದನ್ನು ಗಮನಿಸಬೇಕು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಾಗಾರಾಧನೆಗೇ ಮೀಸಲಾದ ಸುಬ್ರಹ್ಮಣ್ಯ, ಮಂಜೇಶ್ವರ, ಕುಡುಪು, ಬಳ್ಳಮಂಜು, ಮುಗ್ಗು, ಕುಮಾರಮಂಗಳ, ಕಾಟುಕುಕ್ಕೆ, ಕುಕ್ಕಂಗೋಡ್ಲು ಮೊದಲಾದ ಕ್ಷೇತ್ರಗಳು ಸುಬ್ರಹ್ಮಣ್ಯ ಕ್ಷೇತ್ರಗಳೇ. ನಾಗನೇ ಸ್ಕಂದನೆನ್ನುವ ಕಲ್ಪನೆ ಪ್ರಾಚೀನವೇನಲ್ಲವಾದರೂ, ಶೈವಧರ್ಮದ ಪ್ರಭಾವದಿಂದ ಬೇರೂರಿತು; ಆ ಕಡೆ ಸುಬ್ರಹ್ಮಣ್ಯನನ್ನು ಸರ್ಪರೂಪದಲ್ಲಿಯೇ ಪೂಜಿಸುವ ಪದ್ಧತಿ ಬಂದಿತು. ತುಳುಪಾಡ್ದನಗಳಲ್ಲಿ 'ಕುಕ್ಕೇ ಸುಬ್ರಾಯದೇವರ್' ಎನ್ನುವ ಮಾತು ಬರುತ್ತದೆ; 'ಕುಕ್ಕೆ' ಎಂದರೆ ತುಳುಭಾಷೆಯಲ್ಲಿ ಮಗ; ಇದು ಸಂಸ್ಕೃತದ 'ಸ್ಕಂದ' ಎನ್ನುವುದರ ಅಚ್ಚ ತುಳುರೂಪವೆಂದು ಮಂಜೇಶ್ವರ ಗೋವಿಂದ ಪೈಗಳು ಹೇಳಿದ್ದಾರೆ; ಸ್ಕಂದಷಷ್ಠಿಗೆ 'ಕುಕ್ಕೆ ಸಟ್ಟಿ' ಎಂದೇ ಅಲ್ಲಿನ ವ್ಯವಹಾರ. ಕೊಕ್ಕರಾಡಿಯ ಸುಬ್ರಹ್ಮಣ್ಯದೇವಾಲಯ, ಕಜಕ್ಕಾರು ಷಣ್ಮುಖನ ಗುಡಿ, ಸುಬ್ರಹ್ಮಣ್ಯ (ಅಥವಾ ಕುಮಾರಗಿರಿ) ಇವೆಲ್ಲವೂ ಸರ್ಪಾಲಯಗಳೇ. ಅನಂತ–ಸುಬ್ರಹ್ಮಣ್ಯನ

ಕಲ್ಪನೆ ಅಲ್ಲಿ ಪ್ರಚಲಿತವಾಗಿರುವುದೂ ಸರ್ಪದ ಆಧಿಕ್ಯವನ್ನೇ ಸೂಚಿಸುತ್ತದೆ. ಹಾವನ್ನು ಹಿಡಿದು ಕೊಲ್ಲುವ ನವಿಲು ಕಾಲವನ್ನು ಕಬಳಿಸುವ 'ಅನಂತ'ದ ಸಂಕೇತ; ಅದು ಸುಬ್ರಹ್ಮಣ್ಯನ ವಾಹನ, ಎಂದರೆ ಅವನು ಅನಂತಾಸನ. ಉಡುಪಿಯ ನಾಲ್ಕು ದಿಕ್ಕುಗಳಲ್ಲಿರುವ ನಾಗಾಲಯಗಳಲ್ಲಿಯೂ ಒಂದೇ ತೆರನಾದ ಸುಬ್ರಹ್ಮಣ್ಯ ಮೂರ್ತಿಗಳಿವೆ. ಶೇಷಸಂಬಂಧದಿಂದ ಸುಬ್ರಹ್ಮಣ್ಯನೂ ಸಂಕರ್ಷಣ–ಬಲರಾಮನೂ ಕೂಡಿಕೊಂಡಿರುವುದು ಸ್ವಾರಸ್ಯವಾದ ವಿವರ. ಉಡುಪಿ ತಾಲ್ಲೂಕಿನ ಕೊಡವೂರಿನಲ್ಲಿ ಷಣ್ಮುಖ–ಬಲರಾಮನ ಮೂರ್ತಿಯಿದೆ. ಬಲರಾಮ (ಸಂಕರ್ಷಣ) ನಲ್ಲಿ ರುದ್ರಾಂಶವಿರುವುದು, ಬಲರಾಮನನ್ನು ಕೃಷ್ಣಕಾರ್ತಿಕೆಯಂದು ಪೂಜಿಸುವ ವಿಧಿಯಿರುವುದು ಈ ಸಂಬಂಧವನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ. ಶೈವ–ವೈಷ್ಣವ ಸಂಪ್ರದಾಯಗಳು ಒಟ್ಟಿಗೆ ಸೇರುವುದು ಈ ಸುಬ್ರಹ್ಮಣ್ಯ–ಸಂಕರ್ಷಣ ಸಂಬಂಧದಲ್ಲಿಯೇ.

ಸುಬ್ರಹ್ಮಣ್ಯನ ಕಲ್ಪನೆಯಲ್ಲಿ ಹಲವಾರು ಪ್ರಾಚೀನ ಪದ್ಧತಿಗಳು ಬೆರೆತಿವೆಯೆನ್ನುವುದು ಸ್ಪಷ್ಟವಾಗುತ್ತದೆ. ಸ್ಕಂದ ಎನ್ನುವ ಮಾತಿನಲ್ಲಿ ರೇತಸ್ಸನ್ನು ಮೇಲಕ್ಕೆ ಹಾರಿಸುವ, ಎಂದರೆ ಊರ್ಧ್ವರೇತಸ್ಸಿನ, ಅರ್ಥವಿದೆ; ಪ್ರಾಚೀನ ಯೋಗಸಂಪ್ರದಾಯದ ಕಲ್ಪಗಳು ಸ್ಕಂದನ ಕಲ್ಪನೆಯಲ್ಲಿ ಅಡಕವಾದುವು. ಮುರುಗ, ಶೇಯ್ಯೋನ್, ವೇಲನ್, ಗುಹ ಮೊದಲಾದುವೂ ಬೇರೆ ಬೇರೆ ಪುರಾತನ ಕಲ್ಪಗಳನ್ನೂ ಕಲ್ಪನೆಗಳನ್ನೂ ಸೂಚಿಸುತ್ತವೆ. ಶತ್ರುಗಳನ್ನು ನಾಶಪಡಿಸುವುದು, ರೋಗಗಳನ್ನು ಹೋಗಲಾಡಿಸುವುದು ಈ ದೇವತೆಯ ವೈಶಿಷ್ಟ್ಯವಾಗಿದ್ದಂತೆ ತೋರುತ್ತದೆ —

> ಶಕ್ತಿಹಸ್ತಂ ವಿರೂಪಾಕ್ಷಂ ಶಿಖಿವಾಹಂ ಷಡಾನನಂ ।
> ದಾರಣಂ ರಿಪುರೋಗಘ್ನಂ ಭಾವಯೇತ್ ಕುಕ್ಕುಟಧ್ವಜಂ ॥

ಸುಬ್ರಹ್ಮಣ್ಯ ಕುಕ್ಕುಟಧ್ವಜನಾಗಿರುವುದನ್ನು ಜೈನ ವಾಙ್ಮಯದಲ್ಲಿಯೂ ಶಿಲ್ಪದಲ್ಲಿಯೂ ವಿಶೇಷವಾಗಿ ಬರುವ ಕುಕ್ಕುಟ ಸರ್ಪದ ಕಲ್ಪನೆಯೊಂದಿಗೆ ಪರಿಶೀಲಿಸಬೇಕು.

1937ರಲ್ಲಿ ತಿರುವನಂತಪುರದಲ್ಲಿ ನೆರೆದ ಅಖಿಲ ಪ್ರಾಚ್ಯ ಸಮ್ಮೇಳನದ ಒಂಬತ್ತನೆಯ ಅಧಿವೇಶನದಲ್ಲಿ ಎನ್. ಗೋಪಾಲಪಿಳ್ಳೆ ಎಂಬುವರು ಸ್ಕಂದನ ಬಗ್ಗೆ ಒಂದು ವಾದವನ್ನು ಮಂಡಿಸಿದರು. ಅವರ ಪ್ರಕಾರ ಸ್ಕಂದಪೂಜೆಯ ಹಿನ್ನೆಲೆ ಭಾರತಕ್ಕೆ ದಂಡೆತ್ತಿ ಬಂದಿದ್ದ ಮೆಸಿಡೋನಿಯದ ರಾಜಕುಮಾರ ಅಲೆಕ್ಸಾಂಡರ್. ಹಲವಾರು ರಾಷ್ಟ್ರಗಳಲ್ಲಿ ವಿಖ್ಯಾತನಾದ ಈ ಮಹಾಪುರುಷ 'ದೇವ–ಕುಮಾರ' ನೆಂದೇ ಗ್ರೀಸ್, ಪರ್ಶಿಯಗಳಲ್ಲಿ ವಿಶ್ರುತನಾಗಿದ್ದ; ಗ್ರೀಕರ ದೇವತೆ ಸ್ಯೂಸ್ (ಶಿವ) ನ ಮಗ ಇವನೆಂದು ಪ್ರತೀತಿಯಿದ್ದಿತು. ಪರ್ಶಿಯನ್ ಮತ್ತು ಅರೇಬಿಯನ್ ಜನ ಇವನನ್ನು 'ಇಸ್ಕಂದರ'ನೆಂದು ಕರೆದದ್ದು ಭಾರತದೇಶದಲ್ಲಿ 'ಸ್ಕಂದ'ನೆಂದು ಸಂಸ್ಕೃತ ರೂಪವನ್ನು ತಳೆಯಿತು. ಅವನ ತಂದೆ ಫಿಲಿಪ್‌ಗೆ ಇದ್ದ ಮಹದಾಶೆ ಪರ್ಶಿಯ ದೇಶವನ್ನು ಗೆಲ್ಲಬೇಕೆಂಬುದು; ಅಲೆಕ್ಸಾಂಡರ್ ಈ ಆಶೆಯನ್ನು ತೀರಿಸಿದ. ಪರ್ಶಿಯದ ದೊರೆ ಡೇರಿಯಸ್ (ಶಾಸನಗಳಲ್ಲಿ ಡಾರಯವಸ್) ನಮ್ಮ ಮಾತಿನಲ್ಲಿ 'ತಾರಕ'ನಾದ; ಅವನ ಅಭಿಮಾನಿದೇವತೆ ಅಹುರ–ಮಸ್ದಾನೇ ನಮ್ಮ 'ಮಹಿಷಾಸುರ'. ಸ್ಕಂದನು ತಾರಕಾರಿಯೂ ಹೌದು, ಮಹಿಷಾಸುರಮರ್ದನನೂ ಹೌದು. ಅಲೆಕ್ಸಾಂಡರನಿಗೆ ಪ್ರಿಯವಾಗಿದ್ದ ಶೂಲ ಅವನ ಗ್ರೀಕ್ ಚಿತ್ರಗಳಲ್ಲೆಲ್ಲ ಕಾಣಬರುತ್ತದೆ; ಇದನ್ನು ಸ್ಕಂದನ ಶಕ್ತ್ಯಾಯುಧವೆಂದರು. ಸೇನಾನಿಯಂತೂ ಸರಿಯೇ ಸರಿ!

ಚಂದ್ರಗುಪ್ತಮೌರ್ಯ ಹುಡುಗನಾಗಿದ್ದಾಗ ಅಲೆಕ್ಸಾಂಡರನನ್ನು ಕಂಡಿದ್ದು ಅವನ ಬಗ್ಗೆ ಭಕ್ತಿಭಾವನೆಯನ್ನು ತಳೆದಿದ್ದ; ತಾನು ದೊಡ್ಡವನಾದ ಮೇಲೆ ಹೊರದೇಶದ ಈ ಮಹಾವೀರನನ್ನು ದೇವತಾಪುರುಷನೆಂದು

ಪರಿಗಣಿಸಿದ್ದರೆ ಆಶ್ಚರ್ಯವೇನಲ್ಲ. ಅಂತೂ ಸ್ಕಂದನ ಪೂಜೆ ಮೌರ್ಯರಲ್ಲಿ ವಿಶೇಷವಾಗಿದ್ದಿತೆನ್ನುವುದು ದಿಟ. "ಶಿವಃ ಸ್ಕಂದೋ ವಿಶಾಖ ಇತಿ......ಮೌರ್ಯೈರ್ಹಿರಣ್ಯಾರ್ಥಿಭಿರರ್ಚಾಃ ಪ್ರಕಲ್ಪಿತಾಃ" ಎಂದು ಪತಂಜಲಿಯೇ ಹೇಳುತ್ತಾನೆ (ಪಾಣಿನಿ, 5, 3, 99). ಮೌರ್ಯರಿಗೂ ನವಿಲಿಗೂ (ಮೋರಿಯ) ಗೋತ್ರ ಸಂಬಂಧವಿದ್ದಿತು; ಹೀಗಾಗಿ ಅವರ ದೇವತೆ ಸ್ಕಂದ ಮಯೂರವಾಹನನಾದ; ಸ್ಕಂದ ದಕ್ಷಿಣದೇಶದ ದೇವತೆಯಾಗುವ ಮೊದಲು ಸಿಂಧೂದೇಶದ ದೇವತೆಯಾಗಿದ್ದನೆಂಬ ಸೂಚನೆ ಶಂಕರಾಚಾರ್ಯರ 'ಸುಬ್ರಹ್ಮಣ್ಯ ಭುಜಂಗ' ದಲ್ಲಿ ಕಾಣಸಿಗುತ್ತದೆ —

ನಮಃ ಸಿಂಧವೇ ಸಿಂಧುದೇಶಾಯ ತಸ್ಮೈ ।
ಪುನಃ ಸ್ಕಂದಮೂರ್ತೇ ನಮಸ್ತೇ ನಮೋಽಸ್ತು ॥

ಮಧುರೆಯ ಬಳಿಯಿರುವ ಸುಪ್ರಸಿದ್ಧ ಸುಬ್ರಹ್ಮಣ್ಯಕ್ಷೇತ್ರವಾದ ತಿರುಪ್ಪರನ್‌ಕುನ್ರಂ ಈಗಲೂ ಅಲ್ಲಿನ ಮುಸಲ್ಮಾನರಿಗೆ ಸಿಕ್ಕಂದರ್ ಎಂದೇ ಪರಿಚಿತವಾಗಿದೆ.

ಶಾಸ್ತ-ಅಯ್ಯಪ್ಪ

ಸುಬ್ರಹ್ಮಣ್ಯನಂತೆಯೇ ಶಾಸ್ತನೂ ಶಿವನ ಪರಿವಾರಕ್ಕೆ ಸೇರಿದ ದೇವತೆಯೇ. ಕೇರಳದಲ್ಲಿ ಸುಪ್ರಸಿದ್ಧನಾದ ಈ ದೇವತೆಯು ಪ್ರಸ್ತಾಪ ಅನುಬಂಧದಲ್ಲಿ ವಿವರವಾಗಿ ಬಂದಿದೆ. ತಮಿಳುದೇಶದಲ್ಲಿಯೂ ಕನ್ನಡ ನಾಡಿನಲ್ಲಿಯೂ ಈ ದೇವತೆಯು ಪೂಜೆ ನಡೆಯುತ್ತದೆ; ಇಲ್ಲೆಲ್ಲ ಇವನನ್ನು ಅಯ್ಯನ್, ಅಯ್ಯನಾರ್, ಅಯ್ಯಪ್ಪ, ಬೇಟೆ ಅಯ್ಯಪ್ಪ, ಮಲೆದೇವರು ಎಂದು ಕರೆಯುವುದು ವಾಡಿಕೆ. ಇವನು ಭೂತಗಳಿಗೆ ಒಡೆಯನೆಂದೂ, ಅವು ಜನರನ್ನು ಹಿಂಸಿಸದಂತೆ ತಡೆಯಲು ಇವನನ್ನು ಒಲಿಸಿಕೊಳ್ಳಬೇಕೆಂದೂ ಕಲ್ಪನೆಯಿದೆ. ಕಾಡಾನೆಯ ಮೇಲೆ ಅಥವಾ ಕುದುರೆಯ ಮೇಲೆ ಕುಳಿತು, ಕತ್ತಿಹಿರಿದು ಬೆಟ್ಟಗುಡ್ಡಗಳಲ್ಲಿ, ಕಣಿವೆ ಕಂದರಗಳಲ್ಲಿ ಸರಿರಾತ್ರಿಯ ವೇಳೆ ತನ್ನ ಗಣಗಳೊಡನೆ ಆಡ್ಡಾಡುತ್ತಿರುವ ಈ ದೇವತೆಯ ಬಗ್ಗೆ ಜನ ಭಕ್ತಿಯಿಂದಲೂ ಭಯದಿಂದಲೂ ನಡೆದುಕೊಳ್ಳುತ್ತಾರೆ. ಅಯ್ಯಪ್ಪನ ಪರಿವಾರ ರಾತ್ರಿಯಲ್ಲಿ ಬರಿಯ ಪಂಜುಗಳನ್ನು ವೇಗವಾಗಿ ಸಾಗುತ್ತಿರುವಂತೆ ಕಾಣಿಸುವುದೆಂದೂ ಅದನ್ನು ಕಂಡವರು ಉಳಿಯುವುದಿಲ್ಲವೆಂದೂ ನಂಬಿಕೆ ಹರಡಿದೆ. ಇದನ್ನು 'ಅಯ್ಯಪ್ಪನ ಕಾಣ್ಕೆ' (ತಮಿಳಿನಲ್ಲಿ ಅಯ್ಯನ್ ಕಾಟ್ಚಿ) ಎಂದು ಕರೆಯುತ್ತಾರೆ. ಶತ್ರುನಾಶ, ಭೀತಿನಾಶ, ಅರ್ಥಲಾಭ, ಪುತ್ರಲಾಭ, ಗೌಳೀದೋಷಪರಿಹಾರ, ಸ್ತ್ರೀಮೋಹನ ಮೊದಲಾದ ಪ್ರಯೋಜನಗಳಿಗೆಲ್ಲ ಅಯ್ಯಪ್ಪನ ಪೂಜೆ ನಡೆಯುತ್ತದೆ. ತುಂಬ ಕಾರಣಿಕವುಳ್ಳ ದೇವರು ಮಾತ್ರವಲ್ಲದೆ ಕರುಣೆಯನ್ನೂ ಉಳ್ಳ ದೇವತೆ.

ಭೂತನಾಥ ಸದಾನಂದ ಸರ್ವಭೂತದಯಾಪರ ।
ರಕ್ಷ ರಕ್ಷ ಮಹಾಬಾಹೋ ಶಾಸ್ತ್ರೇ ತುಭ್ಯಂ ನಮೋ ನಮಃ ॥

ಶಿವನ ಮತ್ತು ವಿಷ್ಣುವಿನ ಮಗ (ಹರಿಹರಪುತ್ರ) ನೆಂದು ಒಂದು ಕಲ್ಪನೆಯಾದರೆ, ಶಿವನ ಅವತಾರಗಳಲ್ಲಿ ಒಂದೆಂದು ಇನ್ನೊಂದು ಕಲ್ಪನೆ; ಇವನನ್ನು ಕ್ಷೇತ್ರಪಾಲನೆಂದೂ ಭೈರವನೆಂದೂ ಬಗೆದಿರುವುದುಂಟು. ಕೆಲವೆಡೆ 'ಜಡೆಮುನಿ', 'ಮುನೀಶ್ವರ' ದೈವಗಳನ್ನೂ ಅಯ್ಯಪ್ಪನೊಂದಿಗೆ ಸಮೀಕರಿಸಿರುವುದಿದೆ. ಊರಾಚೆ, ನದಿಯ ದಡದ ಲೇಮ ಅಥವಾ ಗುಡ್ಡದ ಮೇಲೆ, ಕಾಡಿನ ನಡುವೆ, ದೊಡ್ಡದೊಂದು ಮರದಡಿಯಲ್ಲಿ ಈ ದೇವತೆಯ ಗುಡಿಯಿರುವುದು ವಾಡಿಕೆ. ತಮಿಳಿನಲ್ಲಿ ಇವನನ್ನು 'ಪುರ್‌ರುಟ್ಟವನ್' (ಎಂದರೆ ಊರ ಹೊರಗೆ ವಾಸಿಸುವವನು) ಎಂದೇ ಕರೆಯುತ್ತಾರೆ. ಇವನ ಗುಡಿ ಊರಿಗೆ ಸುಮಾರು ದೂರದಲ್ಲಿಯೇ ಇರುತ್ತದೆ.

ಊರವರು ದಿನವೂ ಇವನಿಗೆ ಎಡೆ ಒಪ್ಪಿಸುವ ಪದ್ಧತಿಯಿದೆ. ಹೆಂಡ, ಹಂದಿ, ಆಡು, ಕೋಳಿ ಇವನ್ನೂ ಬಲಿಯಾಗಿ ಇಡುವುದುಂಟು; ಸಾತ್ವಿಕಾಹಾರವನ್ನೂ ಅರ್ಪಿಸುವುದಿದೆ. ವರ್ಷಕ್ಕೊಮ್ಮೆ

ಸುಗ್ಗಿಯ ಸುಮಾರಿಗೆ ಏಳುದಿನಗಳ ದೊಡ್ಡ ಉತ್ಸವವನ್ನೂ ವಿಜೃಂಭಣೆಯಿಂದ ನಡೆಸುತ್ತಾರೆ. ಆಗಾಗ ಹರಕೆ ಹೊತ್ತವರು ಮಣ್ಣಿನ ಆನೆ, ಕುದುರೆ, ಕೋಣ, ನಾಯಿಗಳ ಬೊಂಬೆಗಳನ್ನೂ ಮಾಡಿಸಿ ನಿಲ್ಲಿಸುತ್ತಾರೆ. ಮನೆಯಲ್ಲಿ ಅಥವಾ ಊರಿನಲ್ಲಿ ಏನಾದರೂ ಉಪದ್ರವವಿದ್ದರೆ, ಆತಂಕವಿದ್ದರೆ ಅಯ್ಯಪ್ಪನಿಗೆ ಹರಕೆ ಹೊರುತ್ತಾರೆ. ತಮಿಳು ನಾಡಿನ ಕಡೆ ಮಳೆ ಬೀಳದೆ ಬರಗಾಲ ಬರುವಂತಿದ್ದರೆ ಹಳ್ಳಿಯವರು 'ಪರಿ ಅಡಪ್ಪು' ಎಂಬ ಉತ್ಸವವನ್ನು ನಡೆಸುತ್ತಾರೆ. ಹಳ್ಳಿಯವರೆಲ್ಲ ಹಿರಿಯ ಹೆಂಗಳೆಯೊಬ್ಬಳನ್ನು ಮುಂದೆ ಮಾಡಿಕೊಂಡು ಕುಂಬಾರನ ಮನೆಯಲ್ಲಿ ಮಾಡಿದ ಮಣ್ಣಿನ ಆನೆ-ಕುದುರೆಗಳನ್ನು ಮೆರವಣಿಗೆಯಲ್ಲೊಯ್ದು ಊರಹೊರಗಿನ ಅಯ್ಯಪ್ಪನ ಗುಡಿಗೆ ಹೋಗುತ್ತಾರೆ. ಹಿರಿಯ ಹೆಂಗಳೆ ತಲೆಯ ಮೇಲೆ ಹೆಂಡದ ಗಡಿಗೆಯನ್ನು (ಮದುಕ್ಕುಡಂ) ಹೊತ್ತು ಬರುವುದು ವಿಶೇಷ; ಅಯ್ಯಪ್ಪನಿಗೆ ಸಲ್ಲುವ ಕಾಣಿಕೆ ಇದು.

ಕಾಡುಜನರ ಬೆಟ್ಟದೈವವನ್ನು ಪುರಾಣಕಾರರೂ ಪರಿಗ್ರಹಿಸಬೇಕಾಯಿತು; ಜನರ ನಡುವೆ ಈ ದೈವದ ಪ್ರಭಾವ ಅಷ್ಟಿದ್ದಿತು. ಪಟ್ಟಣದ ಜನರೂ, ಇತರ ದೇಶಗಳವರೂ ಪುರಸ್ಕರಿಸುವ ದೇವತಾಗೋಷ್ಠಿಯಲ್ಲಿ ಇದಕ್ಕೂ ಒಂದು ಸ್ಥಾನವನ್ನು ಕಲ್ಪಿಸಬೇಕಾಯಿತು. ದ್ರಾವಿಡ ದೇವತೆಗಳಾದ ಗಣೇಶ, ಕಾರ್ತಿಕೇಯರಂತೆ ಇವನನ್ನೂ ಶಿವನ ಮಗನೆಂದು ಎಣಿಸುವುದು ಸುಲಭವೆನಿಸಿತು. ಗಣೇಶನು ಭೂತನಾಥ, ಭೂತಸಂಸೇವಿತ; ಶಾಸ್ತನು ಭೂತನಾಥನೇ, ಭೂತಸಂಸೇವಿತನೇ. ಗಣೇಶನು ಭೂತಗಳ, ಶಿವಗಣಗಳ ಒಡೆಯನಾದಂತೆ ಕಾರ್ತಿಕೇಯನೂ ಸೇನಾಪತಿ, ಸೇನಾನಿ; ಶಾಸ್ತನೂ ಗಣನಾಥನೇ. ಶಿವನ ಪಡಿಯಚ್ಚಿನಲ್ಲೇ ಗಣೇಶನು ಸಿದ್ಧನಾದಂತೆ ಶಾಸ್ತನನ್ನೂ ಸಿದ್ಧಗೊಳಿಸಿದರು. ಅವನನ್ನೂ 'ಶಂಭೋಸ್ಸುತ' ನೆಂದೂ 'ಉಮಾಸುತ'ನೆಂದೂ ವ್ಯವಹರಿಸಿದರು.

ಗಣೇಶನ ಜನನದಲ್ಲಿಯೂ ಕಾರ್ತಿಕೇಯನ ಜನನದಲ್ಲಿಯೂ ರಹಸ್ಯವಿದ್ದಂತೆಯೇ ಶಾಸ್ತನ ಜನನವೂ ರಹಸ್ಯವಾಗಿ ಉಳಿಯಿತು. ಗಣೇಶನೇನು ಶಿವ-ಪಾರ್ವತಿಯರ ಸಂಭೋಗದ ಫಲವಲ್ಲವಷ್ಟೆ; ಕಾರ್ತಿಕೇಯನೂ ಹಾಗೆಯೇ, ಅವನ ಜನನದಲ್ಲಿ ಅಗ್ನಿ, ಸಪ್ತಮಾತೃಕೆಯರು, ಶರವಣ ಎಲ್ಲರ ಪಾತ್ರವೂ ಇದೆ. ಶಾಸ್ತನ ಹುಟ್ಟಿಗೂ ಪಾರ್ವತಿಯ ಅಗತ್ಯವಿಲ್ಲದೆ ಶಿವನೊಬ್ಬನೇ ಕಾರಣವೆಂಬ ಕಲ್ಪನೆ ಬಂದುದು ಸಹಜವೇ.

ಆದರೆ ಶಾಸ್ತನು ಆರ್ಯಸಂಸ್ಕೃತಿಯಲ್ಲಿ ಸ್ವೀಕೃತನಾದ ಸಮಯದಲ್ಲಿ ಶಿವ, ವಿಷ್ಣು ಈ ಎರಡು ದೇವತೆಗಳ ತಾದಾತ್ಮ್ಯವನ್ನು ಹೇಳಿ, ಶೈವ-ವೈಷ್ಣವ ಪಂಥಗಳ ಸಮನ್ವಯವನ್ನು ಸಾಧಿಸುವ ಪ್ರಯತ್ನ ನಡೆಯುತ್ತಿದ್ದಿತೆಂದು ಕಾಣುತ್ತದೆ. ಹರಿಹರ, ಶಂಕರನಾರಾಯಣ, ಶಿವವಿಷ್ಣು ಈ ಕಲ್ಪನೆ ಇಂಥ ಪ್ರಯತ್ನದ ಫಲವೇ. ಹೊಸದಾಗಿ ಪ್ರವೇಶಮಾಡಿದ ಶಾಸ್ತನನ್ನು ಇವರಿಬ್ಬರ ಮಗನೆಂದೂ ಪರಿಗಣಿಸುವುದು ಸಂದರ್ಭೋಚಿತವಾಯಿತು. ಶೈವ, ವೈಷ್ಣವ ಪಂಥಗಳೆರಡಕ್ಕೂ ಗ್ರಾಹ್ಯವೆನಿಸಲೆಂದು ಶಾಸ್ತನನ್ನು ಹರಿಹರಪುತ್ರನೆಂದು ಕರೆದರು. ಇದಕ್ಕೆ ನೆರವಾಗುವ, ಇದನ್ನು ಸಮರ್ಥಿಸುವ ಕಥೆಗಳು ಮೂಡಿಬರಲು ಹೆಚ್ಚು ಸಮಯ ಬೇಕಾಗಲಿಲ್ಲ.

ಭಾಗವತಪುರಾಣ, ಬ್ರಹ್ಮಾಂಡಪುರಾಣ, ಸುಪ್ರಭೇದಾಗಮಗಳಲ್ಲಿ ಮೋಹಿನಿಭಸ್ಮಾಸುರ ಕಥೆಯಲ್ಲಿ ಶಾಸ್ತನನ್ನು ಅಳವಡಿಸಿದ್ದಾರೆ. ತಾನು ಕೈಯಿಟ್ಟದ್ದೆಲ್ಲವೂ ಬೂದಿಯಾಗಬೇಕೆಂದು ಶಿವನಿಂದ ವರಪಡೆದ ಭಸ್ಮಾಸುರ ಶಿವನನ್ನೇ ಪರೀಕ್ಷೆಮಾಡಲು ಹೊರಡಲು ಶಿವ ಅವನಿಂದ ತಪ್ಪಿಸಿಕೊಂಡು ಓಡಿಹೋಗಿ ಕೊಳವೊಂದರಲ್ಲಿ ಅಡಗಿಕೊಂಡು, ವಿಷ್ಣುವಿನಲ್ಲಿ ಮೊರೆಯಿಡುತ್ತಾನೆ. ವಿಷ್ಣು ಮೋಹಿನಿಯಂತೆ ಮೈಮರೆಸಿಕೊಂಡು ಬಂದು, ಭಸ್ಮಾಸುರನ ಕಾಮವನ್ನು ಕೆಣಕಿ, ತನ್ನನ್ನು ಆಲಂಗಿಸುವ ಮೊದಲು ಸಾಯಂಸಂಧ್ಯೆಯನ್ನು ಮುಗಿಸಿ

ಬರುವಂತೆ ಹೇಳುತ್ತಾನೆ. ಸಾಯಂಸಂಧ್ಯೆಯ ಮುನ್ನ ಸ್ನಾನಮಾಡಲು ಅಸುರ ತಲೆಗೆ ಎಣ್ಣೆ ಬಳಿದುಕೊಳ್ಳಲು ಆರಂಭಿಸಿ, ತನ್ನ ಕೈಕೆಳಗೆ ತಾನೇ ಸಿಕ್ಕು ಬೂದಿಯಾಗುತ್ತಾನೆ. ವರದ ಫಲ ಹೀಗೆ ಅವನನ್ನು ಮುಗಿಸಿದಮೇಲೆ, ಕೊಳದಿಂದ ಮೇಲೆದ್ದು ಬಂದ ಶಿವ ಮೋಹಿನೀರೂಪದಲ್ಲಿದ್ದ ವಿಷ್ಣುವನ್ನು ನೋಡಿ ಕಾಮಾತುರನಾಗುತ್ತಾನೆ. ಅವರಿಬ್ಬರ ಸಂಭೋಗದ ಫಲವಾಗಿ ಶಾಸ್ತನ ಉದಯವಾಗುತ್ತದೆ.

ಮೋಹಿನಿಯನ್ನು ಅಮೃತಮಂಥನ ಸಂದರ್ಭದಲ್ಲಿ ಕಾಣಿಸುವ ಕಥೆಯೂ ಪುರಾಣಗಳಲ್ಲಿದೆ. ಕಾಲ ಕೂಟವಿಷವನ್ನು ಶಿವ ಕುಡಿದಮೇಲೆ ಸಮುದ್ರದಿಂದ ಅಮೃತ ಎದ್ದು ಬರಲು ಅದಕ್ಕಾಗಿ ದೇವ-ದಾನವರು ಸೆಣಸಾಡತೊಡಗಲು ವಿಷ್ಣು ಮೋಹಿನಿಯಂತೆ ಬಂದು ಅಮೃತ ಹಂಚಲು ಮೊದಲುಮಾಡಿ ದಾನವರನ್ನು ವಂಚಿಸಿ ದೇವತೆಗಳನ್ನು ಅಮರರನ್ನಾಗಿ ಮಾಡಿದುದು ಈ ಕಥೆಯ ಮುಖ್ಯಘಟನೆ. ಪ್ರಾಸಂಗಿಕವಾಗಿ ಶಿವ-ಮೋಹಿನಿಯರ ಕೂಡಿಕೆಯೂ ಅಲ್ಲಿ ಬರುತ್ತದೆ.

ಇನ್ನೊಂದು ಕಥೆ ಮೋಹಿನೀ ಪ್ರಸಂಗದಷ್ಟು ಪ್ರಚಲಿತವಾಗಿಲ್ಲ. ದತ್ತಾತ್ರೇಯನು ಗಾಲವಋಷಿಯ ಮಗಳಾದ ಲೀಲೆಯನ್ನು ಮದುವೆಯಾದನು. ಲೀಲೆ ತುಂಬ ವಿಷಯಾಸಕ್ತೆ; ಯಾವಾಗಲೂ ರತಿಕ್ರೀಡೆ ಅವಳಿಗೆ ಬೇಕಾಗಿದ್ದಿತು. ಇದರಿಂದ ಬೇಸತ್ತ ದತ್ತಾತ್ರೇಯ ವಿರಕ್ತನಾಗಿ ಕಾಡಿಗೆ ಹೋಗುವ ಮನಸ್ಸುಮಾಡಿದ; ಲೀಲೆ ತಡೆದಳು. ದತ್ತಾತ್ರೇಯನಿಗೆ ಸಿಟ್ಟುಬಂದು, ಎಮ್ಮೆಯಾಗೆಂದು ಶಪಿಸಿಬಿಟ್ಟ. ಮುಂದೆ ಲೀಲೆ ಕರಂಬನೆಂಬ ಎಮ್ಮೆರೂಪದ ರಾಕ್ಷಸನ ಮಗಳಾಗಿ ಹುಟ್ಟಿ ಮಹಿಷಿಯಾದಳು.

ದನುವೆಂಬ ದಾನವನಿಗೆ ರಂಬ, ಕರಂಬ ಎಂಬಿಬ್ಬರು ಮಕ್ಕಳು. ಅಣ್ಣ ರಂಬನ ಮಗ ಮಹಿಷಾಸುರ; ಅವನು ಹುಟ್ಟಿದ ಸಂದರ್ಭ ಹೀಗೆ. ಅಣ್ಣನು ಸುಡುವ ಬೆಂಕಿಯಲ್ಲಿಯೂ, ತಮ್ಮನು ಕತ್ತುದ್ದ ನೀರಿನಲ್ಲಿಯೂ ನಿಂತು ಅಗ್ನಿಯನ್ನು ಕುರಿತು ತಪಸ್ಸುಮಾಡಿದರು. ಇವರ ತಪಸ್ಸಿಗೆ ಅಂಜಿ, ದೇವೇಂದ್ರನು ಮೊಸಳೆಯಂತೆ ಬಂದು ನೀರಿನಲ್ಲಿ ತಪಸ್ಸುಮಾಡುತ್ತಿದ್ದ ಕರಂಬನನ್ನು ಕೊಂದುಬಿಟ್ಟನು. ತಮ್ಮನು ತೀರಿಕೊಂಡುದಕ್ಕೆ ದುಃಖಪಟ್ಟ ರಂಬ ಆತ್ಮಹತ್ಯೆ ಮಾಡಿಕೊಳ್ಳಲು ತೊಡಗಿದ್ದಾಗ, ಅಗ್ನಿಯು ಪ್ರಸನ್ನನಾಗಿ ವರವನ್ನು ಬೇಡೆನ್ನಲು, ದೇವತೆಗಳಿಂದಲೂ ಮನುಷ್ಯರಿಂದಲೂ ದಾನವರಿಂದಲೂ ಕೊಲ್ಲಲ್ಪಡದಂಥ ಮಗನನ್ನು ಬೇಡುತ್ತಾನೆ.

ತಪಸ್ಸಿನಿಂದ ರಂಬ ಹಿಂದಿರುಗುತ್ತಿರುವಾಗ ತುಂಬ ಚೆನ್ನಾಗಿರುವ ಎಮ್ಮೆಯೊಂದನ್ನು ಕಂಡು ಮುಗ್ಧನಾಗಿ ತಾನು ಕೋಣದ ರೂಪವನ್ನು ಧರಿಸಿ ಎಮ್ಮೆಯೊಂದಿಗೆ ಕೂಡಿಕೊಂಡನು. ಇದನ್ನು ಕಂಡ ಒಂದು ಕಾಡುಕೋಣ ಸಿಟ್ಟಾಗಿ ರಂಬನ ಮೇಲೆರಗಿ ಕೊಂದಿತು. ಅಸುರನನ್ನು ಸುಡಲು ಸಿದ್ಧಪಡಿಸಿದ ಚಿತೆಗೇ ಈ ಎಮ್ಮೆಯೂ ಬಿದ್ದು ಪ್ರಾಣ ಕಳೆದುಕೊಂಡಿತು. ಈ ಚಿತೆಯಿಂದ ಹುಟ್ಟಿದವನೇ ಮಹಿಷಾಸುರ. ಮುಂದೆ ರಂಬನು ರಕ್ತಬೀಜನೆಂಬ ರಾಕ್ಷಸನಾಗಿ ಜನ್ಮ ತಳೆದನು. ಮಹಿಷಾಸುರನು ಬ್ರಹ್ಮನನ್ನು ಕುರಿತು ನೂರು ವರ್ಷ ತಪಸ್ಸುಮಾಡಿ ತ್ರಿಮೂರ್ತಿಗಳಿಂದ ತನಗೆ ಸಾವು ಬರದಂತೆ ವರವನ್ನು ಪಡೆದು, ಲೋಕಕಂಟಕನಾಗಲು ತ್ರಿಮೂರ್ತಿಗಳ ಸಮ್ಮಿಳಿತ ಶಕ್ತಿಸ್ವರೂಪಿಣಿಯಾಗಿ ದುರ್ಗೆ ಮಹಿಷಾಸುರನನ್ನು ಸೆಣಸಿ ಕೊಂದಳು.

ಕರಂಬನ ಮಗಳಾದ ಮಹಿಷಿ ತನ್ನ ದೊಡ್ಡಪ್ಪನ ಮಗ ಮಹಿಷಾಸುರನನ್ನು ದೇವತೆಗಳು ಕೂಡಿ ಕೊಂದರೆಂದು ಅವರ ಮೇಲೆ ಸೇಡು ತೀರಿಸಿಕೊಳ್ಳಲು ಬ್ರಹ್ಮನನ್ನು ಕುರಿತು ಉಗ್ರತಪಸ್ಸನ್ನು ಮಾಡಿದಳು. ಶಿವ ಮತ್ತು ವಿಷ್ಣು ಇವರಿಬ್ಬರೂ ಸಂಭೋಗಿಸಿದಾಗ ಹುಟ್ಟಿದ ಮಗನ ವಿನಾ, ಅವನು ಮನುಷ್ಯರಾಜನೊಬ್ಬನ ಬಳಿ ಹನ್ನೆರಡು ವರ್ಷ ಊಳಿಗಮಾಡಿದ ವಿನಾ ಯಾರಿಂದಲೂ ತನಗೆ ಸಾವು ಬರಬಾರದೆಂದು ಆಕೆ

ಪಡೆದ ವರ. ಗಂಡಸರಾದ ಇವರಿಬ್ಬರ ಸಂಭೋಗ ಅಸಾಧ್ಯವೆಂದು ಆಕೆಯು ಎಣಿಕೆಯಿದ್ದಿತು; ಒಂದು ವೇಳೆ ಹೀಗೆ ಸಂತಾನವಾದರೂ ಇಷ್ಟು ಪ್ರಬಲ ದೇವತೆಗಳ ಮಗ ಮನುಷ್ಯನ ಬಳಿ ಊಳಿಗ ಮಾಡುವುದಂತೂ ಅಸಂಭವವಲ್ಲವೆ?

ಈ ಧೈರ್ಯದಿಂದ ಮಹಿಷಿ ಮೂರೂ ಲೋಕಗಳನ್ನು ಪೀಡಿಸತೊಡಗಿದಳು. ಆದರೆ ಅಮೃತ ಮಂಥನ ಸಂದರ್ಭದಲ್ಲಿ ಶಿವ-ಮೋಹಿನಿಯರು ಕೂಡಿಕೊಂಡು, ಮೋಹಿನಿಯ ಬಲತೊಡೆಯಿಂದ ಹುಟ್ಟಿದ ಶಾಸ್ತನು ಮಣಿಕಂಠನಾಗಿ ಪಂದಲಂರಾಜನ ಬಳಿ ಹನ್ನೆರಡುವರ್ಷ ಊಳಿಗಮಾಡಿ ಮಹಿಷಿಯನ್ನು ಕೊಂದು ಲೋಕಕಲ್ಯಾಣಕ್ಕೆ ಕಾರಣನಾದನು. ಅವನು ಮಹಿಷಿಯನ್ನು ಕೊಂದು, ಕಳೇಬರವನ್ನು ಎಷುತ್ತ ಎಂಬ ಕಡೆ ಅಲಸಾನದಿಯ ದಡದ ಮೇಲೆ ಒಗೆದನಂತೆ. ಶಬರಿಮಲೆ ಯಾತ್ರಿಕರು ಇಲ್ಲಿಗೆ ಬಂದಾಗ ಎಷುತ್ತ ನದಿಯನ್ನು ಪೂಜಿಸುವ ವಾಡಿಕೆಯಿದೆ. ಎಮ್ಮೆಯ ಕಳೇಬರವನ್ನು ಸುಟ್ಟ ಸ್ಥಳ ಕಲ್ಲಿಡಂಕನ್ನು ಎಂದು ತೋರಿಸುತ್ತಾರೆ.

ಮಣಿಕಂಠನು ಮಹಿಷಿಯನ್ನು ಕೊಂದ ಬಳಿಕ, ಎಮ್ಮೆಯ ಮೈಯಿಂದ ಲೀಲೆ ತನ್ನ ಸ್ವರೂಪವನ್ನು ತಳೆದು ಹೊರಗೆ ಬಂದು ಮಣಿಕಂಠನನ್ನು ಮದುವೆಯಾಗೆಂದು ನಿರ್ಬಂಧಿಸಿದಳಂತೆ. ಶಬರಿಮಲೆ ಯಾತ್ರಿಕರಲ್ಲಿ ಯಾವುದಾದರೂ ವರ್ಷ 'ಸರಂಕುಟ್ಟಿಯಲ್'ನಲ್ಲಿ ಆಲದ ಮರಕ್ಕೆ ಬಾಣ ಬಿಡುವ 'ಕನ್ನಿ ಅಯ್ಯಪ್ಪ' ಒಬ್ಬನೂ ಇರದಿದ್ದರೆ ಆ ವರ್ಷ ಲೀಲೆಯನ್ನು ಮದುವೆಯಾಗುವೆನೆಂದು ಮಣಿಕಂಠ ವಾಗ್ದಾನಮಾಡಿದನಂತೆ. ಆದರೆ 'ಕನ್ನಿ ಅಯ್ಯಪ್ಪ'ಗಳ ಸಂಖ್ಯೆ ವರ್ಷವರ್ಷವೂ ಹೆಚ್ಚುತ್ತಲೇ ಬರುತ್ತಿದೆಯಾಗಿ ಲೀಲೆ ಇನ್ನೂ ಅವಿವಾಹಿತಳಾಗಿ ಯೇ ಇದ್ದಾಳೆಂದೂ, 'ಸರಂಕುಟ್ಟಿಯಲ್' ಎಂಬೆಡೆ ಆಕೆ ಕಾಯುತ್ತಿದ್ದಾಳೆಂದೂ ನಂಬಿಕೆ. ಮಣಿಕಂಠ ಬ್ರಹ್ಮಚಾರಿಯಾಗಿಯೇ ಉಳಿದಿದ್ದಾನೆ! ಮಣಿಕಂಠನ ಪೇಚಾಟವನ್ನು ತಪ್ಪಿಸಲು 'ಕನ್ನಿ ಅಯ್ಯಪ್ಪನ್'ಗಳು 'ಸರಂಕುಟ್ಟಿಯಲ್' ನಲ್ಲಿ ಮರದೆಡೆ ಬಾಣಬಿಡುವ ಪದ್ಧತಿ ಉಳಿದುಬಂದಿದೆ.

ಹೀಗೆ ಶಾಸ್ತನಿಗೆ ಪುರಾಣಪ್ರಖ್ಯಾತಿ ಒದಗಿಬಂದಾಗ ಆಗಮಗಳೂ ಶಾಸ್ತನ ಕಲ್ಪನೆಯನ್ನು ಬರಮಾಡಿ ಕೊಂಡುವು. ಅಜಿತಾಗಮ, ಶಿಲ್ಪರತ್ನಶಾಸ್ತ್ರ, ಸರಸ್ವತೀಯ ಚಿತ್ರಕರ್ಮಶಾಸ್ತ್ರ, ಈಶಾನಶಿವಾಚಾರ್ಯಪದ್ಧತಿ, ಸುಪ್ರಭೇದಾಗಮ, ಪೂರ್ವಕಾರಣಾಗಮಗಳಲ್ಲಿ ಪ್ರಾಸಂಗಿಕವಾಗಿ ಶಾಸ್ತನ ವರ್ಣನೆ, ಸ್ತುತಿಗಳು ಬರುತ್ತವೆ. ಶಾಸ್ತನನ್ನೇ ಕುರಿತ ಆಗಮಗ್ರಂಥಗಳೂ ಸಿದ್ಧವಾದುವು; ಕುಲಾಲಶಾಸ್ತ್ರಾಗಮ, ಶಾಸ್ತ್ರಾಪ್ರತಿಷ್ಠಾವಿಧಿ, ಶಾಸ್ತೃ ಲಕ್ಷಣ, ಶಾಸ್ತೃವರ್ಣಸಹಸ್ರನಾಮಸ್ತೋತ್ರ ಮೊದಲಾದುವು ನಿದರ್ಶನಗಳು. ಕುಲಾಲ ಶಾಸ್ತ್ರಾಗಮ ದಲ್ಲಿಯೂ ಈಶಾನಶಿವಾಚಾರ್ಯಪದ್ಧತಿಯ ಶಾಸ್ತ್ರಾಧ್ಯಾನಾನಿ ಎಂಬ ಪರಿಚ್ಛೇದದಲ್ಲಿಯೂ ಶಾಸ್ತನ ಉತ್ಪತ್ತಿಯ ವಿಚಾರವಾಗಿ ಕಥೆಗಳಿವೆ.

ಆಗಮಗಳಲ್ಲಿ ಶಾಸ್ತನನ್ನು ಹರಿಹರಪುತ್ರನೆಂದೇ ಬಗೆದಿದ್ದಾರೆ. 'ಸುಯೌವನ', 'ಸುಲೀನಾಂಸ', 'ದಿವ್ಯ ರೂಪ', 'ಸರ್ವಾವಯವಸುಂದರ', 'ನಾಗಕೋಮಲವಿಸ್ತೀರ್ಣ', 'ಶೃಂಗಾರೋಚಿತವೇಶವಿಭ್ರಮಸುಖಿ' ಮೊದಲಾದ ವಿಶೇಷಗಳು ಧ್ಯಾನಶ್ಲೋಕಗಳಲ್ಲಿ ಬರುತ್ತವೆ. 'ಸರ್ವಕಾರುಣ್ಯಕರಣ', 'ಸಕಲವರದ', 'ಇಷ್ಟವರದ' ಮೊದಲಾದ ಗುಣಗಳೂ ಉಲ್ಲೇಖಿಸಲ್ಪಟ್ಟಿವೆ. ಕುಲಾಲಶಾಸ್ತ್ರಾಗಮವು "ಸರ್ವಾಭೀಷ್ಟಫಲಪ್ರದಂ ಮಹಾ ಪಾತಕ ದೋಷಘ್ನಂ ಸರ್ವಕಾರ್ಯೇಷು ಸಿದ್ಧಿದಂ । ಆರೋಗ್ಯಂ ಚ ಫಲಂ ತತ್ರ ಪುತ್ರಶ್ರೀಕೀರ್ತಿವರ್ಧನಂ" ಎಂದು ಫಲವನ್ನು ಹೇಳುತ್ತದೆ. "ಶಾಸ್ತಾರಂ ಶರಣಂ ವ್ರಜಾಮಿ ವರದಂ ತ್ರೈಲೋಕ್ಯರಕ್ಷಾಕರಂ" ಎಂದೂ,

"ಕಲಯೇ ಸದಾ ಹೃದಿ ಮಹಾಶಾಸ್ತಂ ತು ವಾಕ್‌ಸಿದ್ಧಯೇ" ಎಂದೂ "ಶ್ರಿತಜನವರದಂ……ಕ್ಲೇಶೋದ್ಭ್ರಾಂತಿಪ್ರಣಾಶಂ……ಸ್ತೌಮಿ ಶಾಸ್ತಾರಂ" ಎಂದೂ ಶಾಸ್ತೃವರ್ಣಸಹಸ್ರನಾಮ ಸ್ತೋತ್ರದಲ್ಲಿ ಒಕ್ಕಣೆಗಳಿವೆ.

ತಮಿಳು ಭಾಷೆಯ ಪಿಂಗಳನಿಘಂಟುವಿನಲ್ಲಿ ಬರುವ ಶಾಸ್ತೃವರ್ಣನೆಯಲ್ಲಿ 'ವೆಳ್ಳಾನೈಯ್ಯುಳ್ಳೋನ್' (ಬಿಳಿಯಾನೆಯವನು), 'ವೆಳ್ಳಾನೈವಾಹನನ್' (ಶಾತವಾಹನ, ಶ್ವೇತಮಾತಂಗವಾಹನ), 'ಚೆಂಡಾಯುಧನ್' (ಚೆಂಡು ಎನ್ನುವುದು ಬಾಗಿದ ಕೋಲು, ವಕ್ರದಂಡ) ಎಂಬ ವಿವರಗಳಿವೆ. ಚೂಡಾಮಣಿ ನಿಘಂಟು 'ಚಾಟವಾಹನನ್' (ಶಾತವಾಹನ), 'ಚಂಟಿನ್‌ತೋನ್' (ದಂಡವನ್ನು ಹಿಡಿದವ), 'ಕೋಳಿಕ್ಕೊಟಿಯೋನ್', (ರತ್ನಚೂಡಧ್ವಜ), 'ಮಾಚ್ಚಾತನ್', 'ಪಚ್ಚೈಪ್ಪರಿಯುಳ್ಳೋನ್' ಎಂದು ವರ್ಣಿಸುತ್ತದೆ. ಆಗಮಗಳಲ್ಲಿಯೂ 'ಮಂಡಲೀಭೂತದಂಡಾಗ್ರ' ಅಥವಾ 'ವಜ್ರದಂಡ'ವನ್ನು ಹಿಡಿದವನೆಂದೂ (ಪೂರ್ವಕಾರಣಾಗಮ), ವಕ್ರ ದಂಡವನ್ನೂ ಪುಷ್ಪಾಬ್ಜವನ್ನೂ ಶಿಖಿಪೋತವನ್ನೂ ಹಿಡಿದವನೆಂದೂ (ಸರಸ್ವತೀಯ ಚಿತ್ರಕರ್ಮಶಾಸ್ತ್ರ), ದಂಡವನ್ನು ಹಿಡಿದವನೆಂದೂ (ಅಜಿತಾಗಮ), 'ಇಷು' ಅಥವಾ 'ಶರಾಸನ'ನೆಂದೂ (ಶಿಲ್ಪರತ್ನ), ಪುಷ್ಪ ದಂಡವನ್ನು ಹಿಡಿದವನೆಂದೂ (ಶಾಸ್ತೃಸ್ಥಾಪನ) ವರ್ಣನೆಗಳಿವೆ. ಖೇಟಕ, ಶಿಖಿದಂಡ, ಗದೆ, ಅಂಕುಶ, ಕುಠಾರ, ಧನಸ್ಸು, ನಿಸ್ತ್ರಿಂಶ, ಖಡ್ಗ, ಕ್ಷುರಿಕಾ (ಕತ್ತಿ), ಚಾಪ, ಶೂಲ, ಪಾಶ ಇವೂ ಶಾಸ್ತನ ಆಯುಧಗಳೇ.

ಶಾಸ್ತೃಧ್ಯಾನಶ್ಲೋಕದಲ್ಲಿ ಶಾಸ್ತನು ಶೂಲ, ಪುಷ್ಪ, ಶರ, ಕೃಪಾಣ, ಅಂಕುಶ, ಪಾಶ, ಖೇಟ, ಇಕ್ಷು ಕಾರ್ಮುಕ, ಮಾಣಿಕ್ಯಪಾತ್ರಗಳನ್ನು ಹಿಡಿದಂತೆ ಕಲ್ಪನೆಯಿದೆ. ಮುದ್ರೆಗಳಲ್ಲಿ ವ್ಯಾಖ್ಯಾನ, ವರದ, ಸೂಚೀ, ಅಭಯ ಇವು ಮುಖ್ಯವಾದುವು; ಅಕ್ಷಮಾಲೆಯನ್ನು ಹಿಡಿದಿರುವುದೂ ಉಂಟು. ಸಾಮಾನ್ಯವಾಗಿ ಶಾಸ್ತ ದ್ವಿಭುಜ; ಕೆಲವೊಮ್ಮೆ ಚತುರ್ಭುಜನಾಗಿರುವುದೂ ಉಂಟು. ಅವನು ಧರಿಸಿರುವ ಬಟ್ಟೆ ಕರಿಯದು (ಕಾಲವಾಸನ್); ಈ ಕಾರಣದಿಂದಲೇ ಶಬರಿಮಲೆ ಯಾತ್ರಿಕರು ಕರಿಯ ಬಟ್ಟೆ ಧರಿಸುವುದು.

ಶಾಸ್ತನನ್ನು ಒಂಟಿಯಾಗಿಯೇ ನಿರ್ದೇಶಿಸುವುದು ವಾಡಿಕೆ. ಹನ್ನೆರಡು ವರ್ಷದ ಹುಡುಗನೆಂದೂ ಬ್ರಹ್ಮಚಾರಿಯೆಂದೂ ಕಲ್ಪನೆಯಿದೆ. ಶಿವನ ಇನ್ನಿಬ್ಬರು ಮಕ್ಕಳಾದ ಗಣೇಶ ಮತ್ತು ಸುಬ್ರಹ್ಮಣ್ಯ ಇವರನ್ನೂ ಹೀಗೆಯೇ ಕಲ್ಪಿಸಿಕೊಳ್ಳುವುದಿದೆಯಷ್ಟೆ. ಶಾಸ್ತನನ್ನು ಯೋಗಿಯೆಂದು ಪರಿಗಣಿಸುವುದೇ ವಿಶೇಷ. ಯೋಗಾಸನದಲ್ಲಿ ಕುಳಿತು, ಯೋಗಪಟ್ಟವನ್ನು ಹಾಕಿರುವ ಶಾಸ್ತಮೂರ್ತಿಗಳೇ ಹೆಚ್ಚು. ಶಬರಿಮಲೆಯ ಶಾಸ್ತನೂ ಹೀಗೆಯೇ ಇರುವುದು. ಹೀಗಲ್ಲದೆ ಸುಖಾಸನ, ವೀರಾಸನಗಳಲ್ಲಿದ್ದರೂ ಯೋಗಪಟ್ಟ ವಿರುತ್ತದೆ.

ಪಿಂಗಳನಿಘಂಟಿನಲ್ಲಿ ಶಾಸ್ತನನ್ನು ಯೋಗಿಯೆಂದು ನಿರ್ದೇಶಿಸಿದರೂ ಪೂರಣೈಕ್ಕೇಳ್ವನ್ (ಪೂರ್ಣೆಯೊಂದಿಗೆ ಮದುವೆಯಾದವನು) ಪುತಕ್ಕಲೈಮಣಾಳನ್ (ಪುಷ್ಕಲೆಯ ಅಥವಾ ಪುದ್ಗಲೆಯ ಗಂಡ) ಎಂಬ ವಿಶೇಷಣಗಳಿವೆ. ಪೂರ್ಣೆ, ಪುಷ್ಕಲೆಯೆಂಬಿಬ್ಬರು ದೇವಿಯರೊಡಗೂಡಿ ನಿಂತಿರುವ ಶಾಸ್ತನ ಪ್ರತಿಮೆಗಳು ಕೆಲವು ದೊರೆತಿವೆ. ಬ್ರಹ್ಮಚಾರಿಯಾದ ಗಣೇಶನಿಗೆ ಸಿದ್ಧಿ–ಬುದ್ಧಿಯೆಂಬಿಬ್ಬರು ದೇವಿಯರನ್ನೂ ಬಾಲವಟು ವಾದ ಸುಬ್ರಹ್ಮಣ್ಯನಿಗೆ ವಲ್ಲೀ–ದೇವಸೇನೆಯರನ್ನೂ ಆಳವಡಿಸಿರುವುದನ್ನು ಇಲ್ಲಿ ನೆನಸಿಕೊಳ್ಳಬೇಕು. ಶಿವನನ್ನು ವರಿಸಲು ಕನ್ಯಾಕುಮಾರಿ ಕಾಯುತ್ತಿರುವಂತೆ ಲೀಲಾದೇವಿಯೂ ಶಾಸ್ತನನ್ನು ವರಿಸಲು 'ಸರಂಕುಟ್ಟಿಯಲ್'ನಲ್ಲಿ ಕಾದಿದ್ದಾಳೆ. ಸುಪ್ರಭೇದಾಗಮದಲ್ಲಿ ಶಾಸ್ತನ ಇಕ್ಕೆಲಗಳಲ್ಲಿ ಮದನಾ ಮತ್ತು ವರ್ಣನೀ ಎಂಬ ಶಕ್ತಿಯರನ್ನು ನಿಲ್ಲಿಸಬೇಕೆಂಬ ಸೂಚನೆಯಿದೆ.

ಚಿತ್ರ 125
ತಂಜಾವೂರಿನ ಶಾಸ್ತ

ಚಿತ್ರ 126
ವಕ್ರದಂಡ ಹಿಡಿದ ಶಾಸ್ತ

ಚಿತ್ರ 127
ತಿರುನಲ್ವೇಲಿಯ ಶಾಸ್ತ

ಚಿತ್ರ 128
ನಾಕೈವೇಳಿಪಾಳಯಂ ಶಾಸ್ತ

ಚಿತ್ರ 129
ಬೇಟೆಗೆ ಹೊರಟ ಶಾಸ್ತ
ಕೊಚ್ಚಿಯ ಮತ್ತನ್‌ಚೇರಿ ಅರಮನೆಯಲ್ಲಿರುವ
ಒಂದು ಭಿತ್ತಿಚಿತ್ರ

ಶಾಸ್ತನ ಪ್ರಾಚೀನಶಿಲ್ಪಕೃತಿಗಳಲ್ಲಿ ಭೂತದಂತೆ ಯಕ್ಷರಂತೆ ಮೈಯಿರುತ್ತದೆ: ದಪ್ಪಹೊಟ್ಟೆ, ಸುಖಾಸನ, ಉಪವೀತ, ಹರಡಿದ ಕೇಶರಾಶಿ, ಕಿರೀಟಮುಕುಟ, ನಾಯಿಗಳೊಂದಿಗೆ ಮತ್ತು ಆಡುಗಳೊಂದಿಗೆ ಆಟವಾಡುತ್ತಿರುವಂತೆ ಚಿತ್ರಿಸುವುದೂ ಉಂಟು. ಅವನ ಬಳಿ ಕೋಳಿಯಿರುವುದನ್ನು ಕೆಲವು ಶಿಲ್ಪಗಳಲ್ಲಿ ಕಾಣಬಹುದು; ಅವನು ಕುಕ್ಕುಟಧ್ವಜ (ರತ್ನಚೂಡಧ್ವಜ)ನೆಂಬ ವರ್ಣನೆಯಿದೆ. ವಾಹನದ ಪ್ರಸ್ತಾಪ ಆಗಲೇ ಬಂದಿತು. ತಿರುವಾಂಕೂರಿನ ಸೆರೆಯಲ್ಲಿ ಪಂಗೋಡೆಯ ಬಳಿ ವಟ್ಟವಿಲ ಎಂಬಲ್ಲಿ ಇರುವ ಶಾಸ್ತ ಕುದುರೆ ಸವಾರ; ಇದು ಉಚ್ಚೈಶ್ರವ, ನೀಲಾಶ್ವ ಎಂಬ ವಿವರಗಳಿವೆ. ಆನೆ ವಾಹನವಾದರೆ ಅದು ಮದಗಜ, ಶ್ವೇತಮಾತಂಗ. ಮದಗಜಶಾಸ್ತ ಎಂದೇ ಮೂರ್ತಿಭೇದವುಂಟು. ವೃಷಭಾರೂಢನಾದ ಶಾಸ್ತನ ಮೂರ್ತಿಗಳೂ ಇವೆ. ಆದರೆ ಸಾಮಾನ್ಯವಾಗಿ ಪದ್ಮಪೀಠದ ಮೇಲೆ ಅಥವಾ ಸಿಂಹಾಸನದ ಮೇಲೆ ಸುಖಾಸನ, ವೀರಾಸನ ಅಥವಾ ಯೋಗಾಸನಗಳಲ್ಲಿ ಕುಳಿತಿರುವ ಮೂರ್ತಿಗಳೇ ಹೆಚ್ಚು. 'ಚಿಂತಾಮಣಿಮಹಾಪೀಠಮಧ್ಯಗಾಯ ನಮೋ ನಮಃ' ಎಂದು ಶಾಸ್ತನ ಧ್ಯಾನಶ್ಲೋಕದಲ್ಲಿ ಬರುವ ವಿವರ.

ಶಾಸ್ತನನ್ನು ಶಾಂತಮುಖಮುದ್ರೆಯಲ್ಲಿ ಚಿತ್ರಿಸುವುದು ಸಾಮಾನ್ಯ. ಅಂಶುಮದ್ಭೇದಾಗಮದಂತೆ ಶಾಸ್ತನಿಗೆ ಮೂರುಕಣ್ಣುಗಳು, ಶಿವನಂತೆ. ಕೋರೆದಾಡೆಗಳಿದ್ದು ಘೋರದಂಷ್ಟ್ರನೆನಿಸಿಕೊಂಡಿರುವುದೂ ಉಂಟು. ಶಿಲ್ಪರತ್ನದ ಪ್ರಕಾರ ಅವನ ಮೈಬಣ್ಣ ಕಪ್ಪು (ಶ್ಯಾಮ); ಅಂಶುಮದ್ಭೇದಾಗಮದಂತೆ ಬಂಗಾರದ ಬಣ್ಣ (ಹಿರಣ್ಯಸದೃಶ); ಶೈವಸಿದ್ಧಾಂತಸಂಗ್ರಹದ ಪ್ರಕಾರ ಹವಳದ ಬಣ್ಣ (ಪ್ರವಾಲವರ್ಣ). ಮೋಹಿನೀಶಾಸ್ತ 'ಶಾರದಚಂದ್ರಕಾಂತಿಧವಲ'; ಮದಗಜಶಾಸ್ತ, 'ಕನಕಶಿಖರವರ್ಣ'. ತಲೆಯ ಮೇಲೆ ಕಿರೀಟಮುಕುಟ, ಕೇಶಬಂಧ ಅಥವಾ ಜಟಾಬಂಧ ಇರುವುದು ವಾಡಿಕೆ. ರತ್ನಮುಕುಟ, ಕರಂಡಮುಕುಟಗಳನ್ನೂ ಆಗಮ ಹೇಳುತ್ತದೆ. 'ಪಿಂಗಜಟಾ', 'ಊರ್ಧ್ವಕೇಶ', 'ತುಂಗಭೃಂಗಸಮುಜ್ಜ್ವಲ ಕುಂತಲ', 'ಉಜ್ಜ್ವಲ ಕೇಶಕ', 'ರತ್ನಜಾಲೋಲ್ಲಸನ್ಮೌಳಿ' ಎಂಬ ವರ್ಣನೆಗಳಿವೆ.

ಈಶಾನಶಿವಾಚಾರ್ಯಪದ್ಧತಿಯಲ್ಲಿ ಆದಿಶಾಸ್ತ, ಪರಿಶಾಸ್ತ, ಹರಶಾಸ್ತ, ಸೇನಾನಿಶಾಸ್ತ, ಭೂತವಲ್ಲಭಶಾಸ್ತ, ಭೋಗಿಶಾಸ್ತ, ಗಜಶಾಸ್ತ ಮತ್ತು ಏಕವೀರಶಾಸ್ತ ಎನ್ನುವ ಮೂರ್ತಿಭೇದಗಳನ್ನು ಹೇಳಿದೆ. ಮದಗಜಶಾಸ್ತ, ಮೋಹಿನಿಶಾಸ್ತ, ಅಮೃತಶಾಸ್ತ, ಗ್ರಾಮಶಾಸ್ತ, ಉಗ್ರಶಾಸ್ತ, ವೀರಶಾಸ್ತ, ಲಕ್ಷ್ಮೀಶಾಸ್ತ ಎನ್ನುವ ಭೇದಗಳೂ ಇವೆ. ಮಹಾಶಾಸ್ತ ಮತ್ತು ಮೋಹಿನೀಶಾಸ್ತರು ಚತುರ್ಭುಜ ಮೂರ್ತಿಗಳು. ಮಹಾಶಾಸ್ತನಿಗೆ ವ್ಯಾಖ್ಯಾನಮುದ್ರೆ, ವರದ ಮುದ್ರೆ, ನಾಗಾಯುಧ, ಅಕ್ಷಮಾಲೆಗಳೂ ಮೋಹಿನೀಶಾಸ್ತನಿಗೆ ವ್ಯಾಖ್ಯಾನಮುದ್ರೆ, ಪುಸ್ತಕ, ವೀಣಾ, ಅಕ್ಷಸೂತ್ರಗಳೂ ವಿಶಿಷ್ಟವಾದುವು; ಮದಗಜ ಶಾಸ್ತನಿಗೆ ದಂಡ ಕುಠಾರಗಳು; ಲಕ್ಷ್ಮೀಶಾಸ್ತನಿಗೆ ಅಭಯಮುದ್ರೆ, ವರದಮುದ್ರೆ.

ಶಾಸ್ತನ ಉಪಾಸನೆಯನ್ನೂ ಇತರ ಆರ್ಯದೇವತೆಗಳ ಉಪಾಸನೆಯಂತೆ ಅಳವಡಿಸಿದ್ದಾರೆ. ಉಪಾಸನಾಮಂತ್ರಕ್ಕೆ ಮಹಾಶಾಸ್ತನೇ ದೇವತೆ, ಅರ್ಧನಾರೀಶ್ವರನು ಋಷಿ, ಅನುಷ್ಟುಭ್ ಛಂದಸ್ಸು; ಶ್ರಂ ಬೀಜ, ಶ್ರೀಂ ಶಕ್ತಿ, ಶ್ರುಂ ಕೀಲಕ. ಶಾಸ್ತನ ಮೂಲಮಂತ್ರ ಹೀಗೆ—"ಓಂ ಶ್ರಾಂ ಹರಿಹರಪುತ್ರ ಪುತ್ರಲಾಭ, ಶತ್ರುವಿನಾಶನ ಮದಗಜವಾಹನ, ಶ್ರೀಗುರು ಮಹಾಶಾಸ್ತ ಹುಂ ಫಟ್ ಸ್ವಾಹಾ". ಯಂತ್ರವು "ಓಂ ಶ್ರೀಂ ಹ್ರೀಂ ಕ್ಲೀಂ ಓಂ ಕ್ರೋಂ ಕ್ಷ್ರೌಂ ಯರಲವಶಷಸಹೋಂ ಹಂಸಸ್ಸೋಹಂ". ಶಾಸ್ತನ ಪ್ರತಿಷ್ಠಾವಿಧಿಯಲ್ಲಿ ಸಾಂಪ್ರದಾಯಿಕವಾದ ಆಹ್ವಾನಸೂತ್ರದ ಕೊನೆಯಲ್ಲಿ "ಓಂ ಗ್ಲೌಂ ಸ್ತಂಭಯ ಸ್ತಂಭಯ" ಎನ್ನುವ ಮಾತು ಬರುತ್ತದೆ.

"ಓಂ ಹಾಂ ಹೌಂ ಶಿವಾಯ ನಮಃ" ಎನ್ನುವ ಶಿವನ ಮೂಲಮಂತ್ರದ ಪಡಿಯಚ್ಚಿನಲ್ಲಿ ಶಾಸ್ತನ ಮೂಲಮಂತ್ರವನ್ನು "ಓಂ ಶ್ರಾಂ ಶ್ರೌಂ ಶಾಸ್ತಾಯ ನಮಃ" ಎಂದು ಸಿದ್ಧಪಡಿಸಿರುವುದೂ ಉಂಟು. ಪೂರ್ವಕಾರಣಾಗಮದ ಪ್ರಕಾರ ಶಾಸ್ತನ ಪರಿವಾರದೇವತೆಗಳು ಮದನ, ಭೀಷಣ. ರೌದ್ರ, ಉನ್ಮತ್ತ, ಉಗ್ರಭಾಷಕ, ಆಶ್ಚರ್ಯ, ಸುಂದರ ಮತ್ತು ವೀರ್ಯ.

ಶಾಸ್ತಾಯಾಗವೆನ್ನುವ ಗ್ರಂಥದಲ್ಲಿ ಶಾಸ್ತನ ಪ್ರತಿಷ್ಠೆಯ ವಿಚಾರವಾಗಿ ವಿವರಗಳಿವೆ. ನದೀತೀರದಲ್ಲಿ, ತಟಾಕದಲ್ಲಿ, ಕಾಡಿನಲ್ಲಿ, ಬೆಟ್ಟದ ತುದಿಯಲ್ಲಿ, ಮರದ ಬುಡದಲ್ಲಿ ಅಥವಾ ಹಳ್ಳಿಯ ನಡುವೆ ಗುಡಿಯಲ್ಲಿ ಮಹಾಶಾಸ್ತನನ್ನು ಪ್ರತಿಷ್ಠೆಮಾಡಬೇಕು. ಬೆಟ್ಟದ ಮೇಲಿರುವ ಶಾಸ್ತನಿಗೆ ಹದಿನಾರು ಕೈಗಳು, ಕಾಡಿನ ನಡುವೆಯಿರುವ ಮೂರ್ತಿಗೆ ಹತ್ತುಕೈಗಳು, ಪಟ್ಟಣದಲ್ಲಿ ಎಂಟು ಅಥವಾ ನಾಲ್ಕು. ಹಳ್ಳಿಯಲ್ಲಿರುವ ಅಥವಾ ನದಿಯ ದಡದಲ್ಲಿ ಕೊಳದ ಪಕ್ಕದಲ್ಲಿರುವ ಶಾಸ್ತನಿಗೆ ಎರಡೇ ಕೈಗಳು. ಇದು ಕುಲಾಲಶಾಸ್ತ್ರಾಗಮದಲ್ಲಿ ಬರುವ ವಿವರ. ಹಳ್ಳಿಯಲ್ಲಿ ಶಾಸ್ತನ ಗುಡಿಯನ್ನು ಪಶ್ಚಿಮದಿಕ್ಕಿನಲ್ಲಿ ಅಥವಾ ನೈಋತ್ಯದಿಕ್ಕಿನಲ್ಲಿ ಕಟ್ಟಬೇಕೆಂದೂ, ಶಾಸ್ತನು ಹಳ್ಳಿಗೆ ಬೆನ್ನುತಿರುಗಿಸಿಕೊಂಡಿರಬೇಕೆಂದೂ ಶಾಸ್ತೃಸ್ಥಾಪನವೆನ್ನುವ ಆಗಮಗ್ರಂಥ ವಿಧಿಸುತ್ತದೆ.

ಹೀಗೆ ಆಗಮದಲ್ಲಿ ಶಾಸ್ತನನ್ನು ಅಳವಡಿಸಿಕೊಂಡಿದ್ದಾರೆ. ಆದರೂ ಪ್ರಾಚೀನ ದೇವತೆಯ ಲಕ್ಷಣಗಳನ್ನು ಕೈಬಿಡದಿರುವುದು ಸ್ವಾರಸ್ಯ; ಪ್ರಾಚೀನ ಕಲ್ಪನೆಗಳೂ ಬಹಳಮಟ್ಟಿಗೆ ಉಳಿದುಬಂದಿವೆ. ಶಾಸ್ತನಲ್ಲಿ ಶೈವ ಲಕ್ಷಣಗಳೂ ವೈಷ್ಣವಲಕ್ಷಣಗಳೂ ಎರಡೂ ಕಲೆತಿದ್ದರೂ ಶೈವಪ್ರಭಾವ ಕೊಂಚ ಹೆಚ್ಚಾಗಿದೆಯೆನ್ನಬಹುದು. ಅವನನ್ನು ಶಿವನ ಪರಿವಾರದಲ್ಲಿಯೇ ಸೇನಾನಿಯೆಂದು ಭೂತನಾಥನೆಂದು ಸೇರಿಸುವುದು ವಾಡಿಕೆ. ಗಣೇಶನಂತೆ ಸ್ಕಂದನಂತೆ ಪರಿವಾರದೇವತೆಯಾಗಿದ್ದ ಶಾಸ್ತ ಕಾಲಕ್ರಮದಲ್ಲಿ ಸ್ವಯಂಪ್ರಧಾನ ದೇವತೆಯೆಂದು ಆಗಮ ಪರಿಗಣಿಸಿತು. ಇದೂ ಪ್ರಾಚೀನ ಸಂಪ್ರದಾಯಕ್ಕೆ ಆರ್ಯಸಂಸ್ಕೃತಿ ಮಣಿಯಿತೆನ್ನಲು ನಿದರ್ಶನ.

ಮಲ್ಲಾರಿ-ಖಂಡೋಬ

ತಮಿಳುನಾಡಿನಲ್ಲಿ ಮುರುಗನಿದ್ದಂತೆ, ಕೇರಳದಲ್ಲಿ ಅಯ್ಯಪ್ಪನಿದ್ದಂತೆ ಮಹಾರಾಷ್ಟ್ರದಲ್ಲಿ ಖಂಡೋಬ ದೇವತೆ. ಇವನನ್ನು ಖಂಡೇರಾಯ, ಮಲ್ಲಾರಿ, ಮೈಲಾರ, ರಾವುಲನಾಥ ಎಂದು ಮೊದಲಾಗಿ ಕರೆಯುತ್ತಾರೆ. ಶಿವನ ಅವತಾರವಾದ ಮಾರ್ತಂಡಭೈರವನೇ ಇವನೆಂದು ಪ್ರತೀತಿಯಿದೆ. ಮಲ್ಲನೆಂಬ ರಾಕ್ಷಸನನ್ನು ಕೊಂದು ಮಲ್ಲಾರಿಯಾದ; ಮಹಾರಾಷ್ಟ್ರಕ್ಕೆ ಸೇರಿಕೊಂಡು ಬಂದಿದ್ದ ಕನ್ನಡ ಪ್ರದೇಶಗಳಲ್ಲಿ ಮೈಲಾರಿಯಾದ. ಖಂಡವೆನ್ನುವ ಮಾತಿಗೆ ಕತ್ತಿ (ಖಡ್ಗ) ಎಂದರ್ಥ. ಮಹಾರಾಷ್ಟ್ರದಲ್ಲಿ ಈ ದೇವತೆಗೆ ಪ್ರಸಿದ್ಧ ಕ್ಷೇತ್ರವಾದ ಪುಣೆ ಜಿಲ್ಲೆಯಲ್ಲಿರುವ ಜೇಜೂರಿ (ಜಯಾದ್ರಿ) ಗುಡಿಯಲ್ಲಿ ಗರ್ಭಗುಡಿಯೆದುರು ನಾಲ್ಕಡಿ ಉದ್ದ ಅಲುಗಿರುವ ಕತ್ತಿಯೊಂದನ್ನಿರಿಸಿ ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ವೀರಪೂಜೆಯ ನೆಲೆಯಲ್ಲಿ ಬೆಳೆದು ಬಂದ ಜಾನಪದದೇವತೆ ಇವನೆಂಬುದು ಸ್ಪಷ್ಟವಾಗಿದೆ. ಮುರುಗನು ತಾರಕನನ್ನೂ, ಅಯ್ಯಪ್ಪನು ಮಣಿಕಂಠನನ್ನೂ ಕೊಂದಂತೆಯೇ ಖಂಡೋಬನು ಮಣಿಮಲ್ಲರನ್ನು ಕೊಂದು ವೀರನಾದ ಕಥೆಯಿದೆ. ವಿಷ್ಣುವು ಸಂಹರಿಸಿದ ಮಧು–ಕೈಟಭ ದೈತ್ಯರ ಅವಶೇಷಗಳಿಂದ ಮೈದಳೆದ ಮಣಿ ಮತ್ತು ಮಲ್ಲ ಎಂಬಿಬ್ಬರು ಸೋದರರು, ವಿಷ್ಣುವಿನ ಮೇಲೆ ಸೇಡು ತೀರಿಸಿಕೊಳ್ಳಲು ಶಿವನನ್ನು ಒಲಿಸಿಕೊಂಡು ಲೋಕಕಂಟಕರಾದರಂತೆ. ಕಡೆಗೆ ಶಿವನು ಮಾರ್ತಂಡ ಭೈರವನಾಗಿ ಕಾಣಿಸಿಕೊಂಡು ಮೊದಲು ಮಣಿಯನ್ನೂ ಅನಂತರ ಮಲ್ಲನನ್ನೂ ಕೊಂದು ಮಲ್ಲಾರಿಯಾದನಂತೆ. ಮಣಿಮಲ್ಲನೆಂಬ ಒಬ್ಬನೇ ದೈತ್ಯನೆಂದೂ ಅವನಿಗೆ ಎರಡು ತಲೆಗಳಿದ್ದುವೆಂದೂ ಹೇಳುವುದಿದೆ. ಆಸೀನ

ಖಂಡೋಬನ ಭದ್ರಪೀಠದ ಮೇಲೆ ಇಂಥ ಪ್ರತೀಕವೊಂದನ್ನು ಮೂಡಿಸುವ ಪದ್ಧತಿಯಿದೆ. ಮೇಲೆ ಹೇಳಿದ ಜೇಜೂರಿಯ ಗುಡಿಯಲ್ಲಿ ಮಲ್ಲನ ಶಿಲಾಪ್ರತಿಮೆಯೂ ಒಂದಿದೆ.

ಶಿವನಂತೆ ಖಂಡೋಬನಿಗೂ ಲಿಂಗಪೂಜೆಯೂ ಮೂರ್ತಿಪೂಜೆಯೂ ಉಂಟು. ಜೇಜೂರಿಯ ಗರ್ಭಗುಡಿಯಲ್ಲಿ ಚಚ್ಚೌಕವಾದ ಯೋನಿಯೊಂದಿದ್ದು ಅದರಲ್ಲಿ ಎರಡು ಸ್ವಯಂಭು ಲಿಂಗಗಳಿವೆ. ಇವುಗಳಲ್ಲಿ ಒಂದು ಖಂಡೋಬನೆಂದೂ ಇನ್ನೊಂದು ಅವನ ಶಕ್ತಿಯಾದ ಮ್ಹಾಳಸಾದೇವಿಯೆಂದೂ ಪ್ರತೀತಿ. ಅಲ್ಲಿಯೇ ಅವನ ವ್ಯಕ್ತಮೂರ್ತಿಗಳೂ ಇವೆ. ಕತ್ತಿ, ತ್ರಿಶೂಲ, ಡಮರು, ಕಪಾಲಗಳನ್ನು ಹಿಡಿದು ಕುದುರೆಯನ್ನೇರಿ ಕುಳಿತಂತೆ, ಅಥವಾ ಭದ್ರಪೀಠದಲ್ಲಿ ಕುದುರೆಯ ಲಾಂಛನವನ್ನು ಪಡೆದು ಸುಖಾಸೀನನಾಗಿರುವಂತೆ ಚಿತ್ರಿಸುತ್ತಾರೆ. ಭೈರವನಾದುದರಿಂದ ನಾಯಿಯ ಸಂಬಂಧವೂ ಇವನಿಗುಂಟು. ಧ್ಯಾನಶ್ಲೋಕದಲ್ಲಿ ಇದು ಸ್ಪಷ್ಟವಾಗಿದೆ.

ಧ್ಯಾಯೇನ್ಮಲ್ಲಾರಿದೇವಂ ಕನಕಗಿರಿನಿಭಂ ಮ್ಹಾಲಸಾಭೂಷಿತಾಂಕಂ ।
ಶ್ವೇತಾಶ್ವಂ ಖಡ್ಗಹಸ್ತಂ ವಿಬುಧಬುಧಗಣೈಃ ಸೇವ್ಯಮಾನಂ ಕೃತಾರ್ಥೈಃ—
ರ್ಯುಕ್ತಾಂಘ್ರಿಂ ದೈತ್ಯಮೂರ್ಧ್ನಿ ಡಮರು ವಿಲಸಿತಂ ನೈಶಚೂರ್ಣಾಭಿರಾಮಂ ।
ನಿತ್ಯಂ ಭಕ್ತೇಷು ತುಷ್ಟಂ ಶ್ವಗಣಪರಿವೃತಂ ನಿತ್ಯಮೋಂಕಾರಗಮ್ಯಂ ॥

ಮ್ಹಾಳಸೆಯನ್ನು ತೊಡೆಯಮೇಲೆ ಕೂರಿಸಿಕೊಂಡು ಬಿಳಿ ಕುದುರೆಯನ್ನೇರಿ ಕತ್ತಿಹಿಡಿದು ವೀರಾವೇಶದಿಂದ ಹೊರಟ ಮಲ್ಲಾರಿಯ ಸುತ್ತಲೂ ಬೇಟೆ ನಾಯಿಗಳು! ಬೇಟೆಗಾರ ಮಲ್ಲಾರಿಯ ಚಿತ್ರ ಇದು.

ಈ ನಾಯಿಯ ನಂಟು ವಿಚಿತ್ರವಾದ ಪದ್ಧತಿಗಳಿಗೆ ಎಡೆಮಾಡಿಕೊಟ್ಟಿದೆ. ಧಾರವಾಡ ಜಿಲ್ಲೆಯ ರಾಣೇಬೆನ್ನೂರಿನಲ್ಲಿರುವ ಗುಡ್ಡಗುಡ್ಡಾಪುರ (ದೇವರಗುಡ್ಡ) ಕನ್ನಡನಾಡಿನಲ್ಲಿ ಹೆಸರಾಂತ ಮಲ್ಲಾರಿಕ್ಷೇತ್ರ. ರಾಣೇಬೆನ್ನೂರಿಗೆ ಎಂಟುಮೈಲಿ ದೂರದಲ್ಲಿ ಕಡಿದಾದ ಗುಡ್ಡವೊಂದರ ಮೇಲೆ ಈ ದೇವತೆಯ ಗುಡಿಯಿದೆ. ಪ್ರತಿವರ್ಷವೂ ನಡೆಯುವ ಜಾತ್ರೆಯ ಸಮಯದಲ್ಲಿ ವಾಗ್ಗಯ್ಯರೆಂಬ ಭಕ್ತರು ನಾಯಿಗಳಂತೆ ನಡೆದುಕೊಳ್ಳುವ ಸಂಪ್ರದಾಯವಿದೆ. ವಾಗ್ಗಯ್ಯಗಳ ವೇಷ ವಿಚಿತ್ರವಾದುದು; ಕಂಬಳಿಯನ್ನು ಹೊದೆದು, ಲಂಗೋಟಿ ಕಟ್ಟಿಕೊಂಡು, ತಲೆಗೆ ರುಮಾಲು ಸುತ್ತಿ, ಕವಡೆಸರವನ್ನು ಧರಿಸಿ, ನಡುವಿಗೆ ಹುಲಿಯ ಮತ್ತು ಕರಡಿಯ ಚರ್ಮದ ಚೂರುಗಳನ್ನೂ ಒಂದೆರಡು ಗಂಟೆಗಳನ್ನೂ ಕಟ್ಟಿಕೊಂಡು, ಬಗಲಿಗೆ ಭಂಡಾರ (ಹಳದಿಪುಡಿ) ದಿಂದ ತುಂಬಿದ ಕೃಷ್ಣಾಜಿನದ ಜೋಳಿಗೆಯನ್ನು ತೂಗಿಹಾಕಿಕೊಳ್ಳುತ್ತಾರೆ; ಕೈಯಲ್ಲಿ ಮರದ ಬಟ್ಟಲೊಂದಿರುತ್ತದೆ. ಇವರು ಮಲ್ಲಾರಿದೇವರ ಒಕ್ಕಲು; ಅವನ ಪರಿವಾರದವರೆಂದು ನಂಬಿಕೆ. ಮಲ್ಲನನ್ನು ಕೊಲ್ಲಲು ಹೊರಟ ಖಂಡೋಬ ಬೇಟೆನಾಯಿಗಳ ಗುಂಪಿನೊಂದಿಗೆ ಹೊರಟನಂತೆ; ಮಲ್ಲನನ್ನು ಕೊಂದನಂತರ ಗುಡ್ಡದ ಮೇಲೆ ನಿಂತಾಗ ಅವನ ನಾಯಿಗಳು ಮನುಷ್ಯರಾಗಿ ಮಾರ್ಪಟ್ಟು ಅವನ ಸೇವೆಯಲ್ಲಿ ತೊಡಗಿದರಂತೆ. ಈ ಪರಿವರ್ತನೆಯನ್ನು ನೆನಸಿಕೊಳ್ಳಲು ವಾಗ್ಗಯ್ಯಗಳು ಗುಡಿಯಲ್ಲಿ ನೆರೆದ ಯಾತ್ರಿಕರೆದುರು ನಾಯಿಗಳಂತೆ ಗಟ್ಟಿಯಾಗಿ ಬೊಗಳಿ, ಅವರಿಗೆ ಭಂಡಾರವನ್ನು ಕೊಟ್ಟು, ಪ್ರತಿಯಾಗಿ ಕಾಣಿಕೆ ಪಡೆಯುತ್ತಾರೆ. ಅವರ ಬಟ್ಟಲಿನೊಳಗೆ ಹಾಲು, ತುಪ್ಪ, ಬಾಳೆಹಣ್ಣು, ಸಕ್ಕರೆ (ಪಂಚಾಮೃತ) ಹಾಕಿ, ಕಾಸು ಕೊಡುತ್ತಾರೆ. ವಾಗ್ಗಯ್ಯಗಳು ತಂತಮ್ಮ ಬಟ್ಟಲುಗಳನ್ನು ನೆಲದ ಮೇಲಿರಿಸಿ, ದೂರಸರಿದು ಬಟ್ಟಲುಗಳ ಬಳಿ ಬೊಗಳಿಕೊಂಡು, ಓಡಿಬಂದು, ಕಚ್ಚಾಡಿ, ಗುದ್ದಾಡಿ, ನೆಲದ ಮೇಲೆ ಹೊರಳಿ, ಬಾಯಿಯನ್ನು ಬಟ್ಟಲಿಗೆ ಆನಿಸಿ ಅದರೊಳಗಿದ್ದುದನ್ನು ನಾಯಿಗಳಂತೆಯೇ ತಿನ್ನುತ್ತಾರೆ. ತಿಂದಾದಮೇಲೆ 'ಏಳುಕೋಟೆ ಮಲ್ಲಾರಿ ಮಾರ್ತಂಡ' ಎಂದು ಕೂಗಿ, ತಮಗೆ ತಿನಿಸು ಕೊಟ್ಟ ಯಾತ್ರಿಕರನ್ನು ಹರಸುತ್ತಾರೆ. ಜಾತ್ರೆಯ ಕಾಲದಲ್ಲಿ ವಾಗ್ಗಯ್ಯಗಳು ಕುದುರೆಯವರು

ಆಗುತ್ತಾರೆ. ಕೈಯಲ್ಲಿ ಚಾಟಿಗಳನ್ನು ಹಿಡಿದುಕೊಂಡು ಕುದುರೆಗಳಂತೆ ಓಡುತ್ತ, ನಗೆಯುತ್ತ ಬರುತ್ತಾರೆ: ಚಾಟಿಗಳಿಂದ ತಮ್ಮನ್ನು ತಾವು ಹೊಡೆದುಕೊಳ್ಳುತ್ತಾರೆ.

ಮಲ್ಲಾರಿದೇವರ ಹಿನ್ನೆಲೆಯನ್ನು ಇದು ಸೂಚಿಸುತ್ತದೆಯಲ್ಲವೆ? ವೀರಪೂಜೆಯ ನೆಲೆಯು ಅಲ್ಲಿ ನಡೆಯುವ 'ಶಸ್ತ್ರಪವಾಡ' ದಿಂದ ಮತ್ತಷ್ಟು ಸ್ಪಷ್ಟವಾಗುತ್ತದೆ. ಆಶ್ವೀಜಮಾಸದ ಶುದ್ಧದಶಮಿ ಮತ್ತು ಕೃಷ್ಣನವಮಿಯಂದು ನಡೆಯುವ ಜಾತ್ರೆಯ ಸಂದರ್ಭದಲ್ಲಿ ಕಂಚವೀರರೆಂಬುವರು ನಾಲ್ಕಡಿ ಉದ್ದದ ಕಬ್ಬಿಣದ ಸರಳನ್ನು ಚಪ್ಪಟೆಯಾಗಿ ಬಡಿದು, ತುದಿಯನ್ನು ಮೊನಮಾಡಿ. ಕಾಲಿನ ಒಂದು ಕಡೆಯಿಂದ ಇನ್ನೊಂದು ಕಡೆಗೆ ತೂರಿಸಿಕೊಂಡು ತೆಗೆಯುತ್ತಾರೆ; ಅನಂತರ ಒಂಬತ್ತಂಗುಲ ಉದ್ದ ಮುಕ್ಕಾಲಂಗುಲ ಅಗಲವಿರುವ ಮರದ ತುಂಡನ್ನು ಈ ತೂತಿನೊಳಗೆ ತೂರಿಸಿ, ಚರ್ಮದ ಹಗ್ಗವನ್ನು ಈ ಕಡೆಯಿಂದ ಆ ಕಡೆಗೆ ಎಳೆಯುತ್ತಾರೆ. ಆಮೇಲೆ ಗಾಯಕ್ಕೆ ಭಂಡಾರವನ್ನು ಮೆತ್ತುತ್ತಾರೆ. ಭಂಡಾರ ಮೆತ್ತಿದರೆ ರಕ್ತ ಸುರಿಯುವುದಿಲ್ಲ. ಮಲ್ಲಾರನ ಹೆಸರಿನಲ್ಲಿ ಮಾಡಿದ ಈ ಭಂಡಾರ ನೋವನ್ನೂ ಮರೆಯಿಸುವುದೆಂದು ನಂಬಿಕೆ. ಮಾರ್ಗಶೀರ್ಷದ ಚಂಪಾಷಷ್ಠಿಯ ದಿನ ಮಲ್ಲಾರನ ಹೆಸರನ್ನು ಒಂದು ಸಾವಿರಬಾರಿ ಹೇಳಿ ಈ ಭಂಡಾರವನ್ನು ತಯಾರಿಸುವ ವಾಡಿಕೆಯಿದೆ. ಸ್ಕಂದನಿಗೂ ಖಂಡೋಬನಿಗೂ ಇರುವ ಸಂಬಂಧ ಇಲ್ಲಿ ಎದ್ದು ಕಾಣುತ್ತದೆ. ಖಂಡವೆಂಬುದು ಸ್ಕಂದನೆನ್ನುವುದರ ಅಪಭ್ರಂಶವೇ ಎಂದೂ ಹೇಳುವುದಿದೆ. ಅಂತೂ ಶಸ್ತ್ರಪವಾಡದಲ್ಲಿ ಇಷ್ಟೆಲ್ಲ ಆದಮೇಲೆ ಭಕ್ತನು ತನ್ನ ಅಂಗೈಯಲ್ಲಿ ಮಣಿಕಟ್ಟಿನ ಬಳಿ ಒಂದಡಿ ಉದ್ದದ ಸೂಜಿಯೊಂದನ್ನು ಚುಚ್ಚಿಕೊಂಡು, ಅದರ ಮೇಲ್ಭಾಗದಲ್ಲಿ ಅಡ್ಡಪಟ್ಟಿಯೊಂದನ್ನು ಕಟ್ಟಿ, ಅದಕ್ಕೆ ಐದು ಕಡ್ಡಿಗಳನ್ನು ಸಿಕ್ಕಿಸಿ, ಎಣ್ಣೆಯಲ್ಲಿ ಅದ್ದಿದ ಬಟ್ಟೆಯಿಂದ ಒಂದೊಂದನ್ನೂ ಸುತ್ತಿ, ಬೆಂಕಿಯಿಡುತ್ತಾನೆ. ಗುಡಿಯ ಬಾಗಿಲ ಬಳಿಯಿರುವ ವಾಗ್ಗಯ್ಯನು ಈ ಪಂಚದೀಪವನ್ನು ದೇವರೆದುರು ಆರತಿ ಬೆಳಗಿದನಂತರ, ಭಕ್ತನು ದೇವರಿಗೆ ಅಡ್ಡಬಿದ್ದು ಅಂಗೈಯಿಂದ ಸೂಜಿಯನ್ನು ತೆಗೆಯುತ್ತಾನೆ. ಈ ಸಂದರ್ಭದಲ್ಲಿ ಕೆಲವು ವಾಗ್ಗಯ್ಯರು ಉದ್ದವಾದ ಕಬ್ಬಿಣದ ಸರಪಳಿಯ ಒಂದು ಕೊನೆಯನ್ನು ಗುಡಿಯ ಕಂಬವೊಂದಕ್ಕೆ ಬಿಗಿದು ಇನ್ನೊಂದು ಕೊನೆಯನ್ನು ತಮ್ಮ ಕೊರಳುಗಳಿಗೆ ಸುತ್ತಿಕೊಂಡು, ಜಗ್ಗಿಸಿ ಎಳೆದು ಸರಪಳಿಯನ್ನು ಕಡಿದುಹಾಕುತ್ತಾರೆ. ದಸರೆಯ ದಿನ ಗೊತ್ತಾದ ಸಮಯಕ್ಕೆ ಮಲ್ಲಾರಿಯದೆನ್ನಲಾದ ಹದಿನೈದಡಿ ಉದ್ದವಿರುವ ದೊಡ್ಡಬಿಲ್ಲನ್ನು ಗುಡಿಯಿಂದ ಹೊರತಂದಿರಿಸುತ್ತಾರೆ; ಒಬ್ಬ ವಾಗ್ಗಯ್ಯನು ಇದನ್ನೇರಿ ಮೇಲೆ ನಿಂತಾಗ ದೇವರ ಆವೇಶ ಮೈಮೇಲೆ ಬರುತ್ತದೆ ಎನ್ನುವ ನಂಬಿಕೆಯಿದೆ. ಈ ಪದ್ಧತಿಗಳೆಲ್ಲ ಪ್ರಾಚೀನ ವೀರಕಲ್ಪನೆಯ ಪ್ರಭಾವದಿಂದ ಮೂಡಿಬಂದುವು.

ಖಂಡೋಬನ ಶಕ್ತಿ ಮ್ಹಾಳಸೆಯ ಪ್ರಸ್ತಾಪ ಬಂದಿತಷ್ಟೆ. ಗುಡ್ಡಗುಡ್ಡಾಪುರದ ಗುಡಿಯಲ್ಲಿ ಈಕೆಯನ್ನು ಮಲಸಾಂಬಾ, ಘೃತಮಾರಿ, ತುಪ್ಪದ ಮಲ್ಲವ್ವ ಎಂದು ಕರೆಯುತ್ತಾರೆ. ಖಂಡೋಬನು ಶಿವನೆನ್ನುವ ಶ್ರದ್ಧೆಯಿದ್ದರೂ ಈಕೆ ಮಾತ್ರ ಮನುಷ್ಯಳೇ; ನೇಪಾಳದ ತಿಮ್ಮಶೇಟಿಯೆಂಬ ವ್ಯಾಪಾರಿಯ ಮಗಳಂತೆ, ಲಿಂಗಾಯತ ಜನಾಂಗಕ್ಕೆ ಸೇರಿದವಳಂತೆ. ಇವಳಲ್ಲದೆ ಖಂಡೋಬನಿಗೆ ಇನ್ನೊಂದು ಹೆಣ್ಣಿನ ಸಂಬಂಧವೂ ಉಂಟು; ಬಾನಾಯಿ ಎಂಬಾಕೆ ಧಂಗರ ಜಾತಿಗೆ ಸೇರಿದ ಕನ್ನಿಕೆ, ಖಂಡೋಬನನ್ನು ಮದುವೆಯಾದವಳಲ್ಲವೆಂದೂ ಪ್ರೇಯಸಿಯೆಂದೂ ಹೇಳುವುದಿದೆ. ಜೇಜೂರಿಯಲ್ಲಿ ಗುಡ್ಡದ ಮೇಲಿನ ಹಳೆಯ ಕರೇ ಪಾಥಾರ್ ಗುಡಿಯಲ್ಲಿರುವವಳು ಮ್ಹಾಳಸೆ; ಗುಡ್ಡದ ಕೆಳಗೆ ಗುಡಿಯಲ್ಲಿರುವವಳು ಬಾನಾಯಿ. ಇಬ್ಬರು ಹೆಂಗಳೆಯರನ್ನು ಕಟ್ಟಿಕೊಂಡು, ಅವರಿಬ್ಬರೂ ತಾನೂ ನೆಮ್ಮದಿಯಿಂದಿರಲು ಮಾಡಿದ ವ್ಯವಸ್ಥೆಯೆಂದು ಕಥೆಯೂ ಇದೆ. ಅಂತೂ ಖಂಡೋಬನು ಏಳುಕೋಟಿ ಸೈನಿಕರ ಸೇನಾಪತಿಯೆಂದು ಪ್ರಖ್ಯಾತ; ಮುರುಗ ಸುಬ್ರಹ್ಮಣ್ಯನಿಗೂ. ಅಯ್ಯಪ್ಪ–

ಶಾಸ್ತನಿಗೂ, ಮಲ್ಲಾರಿ–ಖಂಡೋಬನಿಗೂ ಇರುವ ಸಂಬಂಧ ಸ್ವಾರಸ್ಯವಾದುದು. ಶೈವಧರ್ಮದ ಹಿನ್ನೆಲೆಯಲ್ಲಿ ವೀರಪೂಜೆಯ ಪಾತ್ರವನ್ನು ಈ ಸಂಬಂಧ ಸ್ಪಷ್ಟಪಡಿಸುತ್ತದೆ.

ಹೀಗೆಯೇ ಅಲ್ಲಲ್ಲಿ ಹಲವಾರು ದೇವತೆಗಳು ಜನಸಾಮಾನ್ಯರಿಂದ ಪೂಜೆಗೊಳ್ಳುವರು. ನೀಲಗಿರಿಯ ಕುರುಬರು ಕುರಿಬಟ್ರಾಯ (ಹಿರಿಯದೇವ) ನನ್ನು, ಬಡಗರು ಮಲಯದೇವ (ಬೆಟ್ಟದ ದೇವ)ನನ್ನು, ಇಡ್ಕೆಯ ಕುರುಬರು ವೀರಭದ್ರನನ್ನು, ತುಳುನಾಡಿನಲ್ಲಿ ಬಾನಿಕೇರರು ತಳವಾರರು ಬ್ರಹ್ಮಭೂತವನ್ನು ಪೂಜಿಸುವುದು ನಿದರ್ಶನಗಳು. ಬ್ರಹ್ಮಭೂತನೆಂಬುವ ದೇವತೆ (ಸ್ವಾಮಿ ಬೆರ್ಮರೆ) ಮೇಲೆ ಹೇಳಿದ ಖಂಡೋಬನಿದ್ದಂತೆ; ಅರ್ಧದೇವತೆ, ಅರ್ಧಭೂತ; ಬಲಗೈಯಲ್ಲಿ ಕತ್ತಿಹಿಡಿದು ಕುದುರೆಯ ಮೇಲೆ ಸವಾರಿ ಮಾಡುತ್ತ ಇರುವಂತೆ ಚಿತ್ರಿಸಿಕೊಳ್ಳುತ್ತಾರೆ. ಒಂದು ತಲೆ, ಮೂರು ತಲೆ, ಅಥವಾ ನಾಲ್ಕು ತಲೆಗಳನ್ನು ಅಳವಡಿಸಿರುತ್ತಾರೆ; ಬೆರ್ಮರಗಂಡ ಎನ್ನುವ ಕಲ್ಲುಗುಂಡುಗಳಲ್ಲಿ ಪ್ರತಿನಿಧಿಸುತ್ತಾರೆ; ಮಂಡಲಗಳನ್ನು ರಚಿಸಿ ಎಡೆಯಿಡುತ್ತಾರೆ. ನಾಗದೇವರು, ಎಂದರೆ ಸುಬ್ರಾಯದೇವರು, ಈ ಬ್ರಹ್ಮಭೂತದೊಂದಿಗೆ ಸಮೀಕರಣವಾಗಿರುವುದೂ ಉಂಟು. ಈ ದೇವತೆಯ ಧ್ಯಾನ ಶ್ಲೋಕ—

> '......ಭಾಸ್ಕರಸನ್ನಿಭಂ ತ್ರಿನಯನಂ ನಾರಾಯಣಂ ನಾಗೇಂದ್ರಭೂಷೋಜ್ವಲಂ
> ಹಸ್ತಾದಾತ್ತಕಪಾಲಮಹಿತಂ ಶ್ವೇತಾಬ್ಜ ಟಂಕಾಯುಧಂ......ಭೂತೇಶಂ
> ಭಯಹರಂ ಚತುರಾನನಂ ಬ್ರಹ್ಮಾಭಿಧಾನಂ ಭಜೇ.'

ವಿಷ್ಣುವಿನ, ಶಿವನ, ಬ್ರಹ್ಮನ ಮೂರ್ತಿಲಕ್ಷಣಗಳನ್ನು ಅಳವಡಿಸಿಕೊಂಡಿರುವುದನ್ನು ಸೂಚಿಸುತ್ತದೆ. ಆದರೆ ಒಂದು ಕಾಲಕ್ಕೆ ಮನುಷ್ಯವೀರನಾಗಿದ್ದವನು ಭೂತವಾಗಿ ಪೂಜೆಗೊಂಡನೆಂದು ತೋರುತ್ತದೆ.

ಆಗಮಗಳ ಆದೇಶ

ಪೂಜೆಯ ಪದ್ಧತಿ

ಪೂಜೆಗೆಂದು ಪ್ರತಿಮೆಗಳನ್ನು ಸಿದ್ಧಪಡಿಸುವ ಪದ್ಧತಿ ಬೆಳೆಯುತ್ತ ಬಂದ ಕಾಲದಲ್ಲಿಯೇ ಪೂಜಾ ಕ್ರಮವೂ ವ್ಯವಸ್ಥೆಗೊಳ್ಳತೊಡಗಿತು. ಪೂಜೆಯ ಅಂಗಗಳು, ಪರಿಕರಗಳು, ಮಂತ್ರಗಳು, ತಂತ್ರಗಳು, ಮುದ್ರೆಗಳು ಇವೆಲ್ಲವೂ ಈ ವ್ಯವಸ್ಥೆಯಲ್ಲಿ ಅಡಗಿದುವು. ಅಷ್ಟು ಮಾತ್ರವಲ್ಲದೆ ಸಾರ್ವಜನಿಕರ ಆರಾಧನೆಗೆಂದು, ಸಮಾಜದ ಸಮಸ್ತರ ಹಿತಕ್ಕೆಂದು ಆಲಯಗಳನ್ನು ನಿರ್ಮಿಸಿ, ಪ್ರತಿಮೆಗಳನ್ನು ಪ್ರತಿಷ್ಠೆಮಾಡಿ ಅಲ್ಲಿನ ಪೂಜಾಪದ್ಧತಿಗಳನ್ನು ಖಚಿತಗೊಳಿಸುವುದು ಇದೇ ವ್ಯವಸ್ಥೆಯ ಉದ್ದೇಶಗಳಲ್ಲಿ ಸೇರಿತು. ಹೀಗೆ ಪ್ರತಿಮಾರ್ಚನೆ, ಪ್ರತಿಮಾಪ್ರತಿಷ್ಠೆ, ಆಲಯನಿರ್ಮಾಣ ಇವೆಲ್ಲವನ್ನೂ ಒಳಗೊಂಡ ವ್ಯವಸ್ಥೆಗೆ ವ್ಯವಹಾರದಲ್ಲಿ ಆಗಮವೆಂದು ಹೆಸರು. ಆಗಮವೆನ್ನುವ ಮಾತಿಗೆ ಹಲವಾರು ಅರ್ಥಗಳಿವೆ; ಒಂದೊಂದು ನೆಲೆಯಲ್ಲಿ ಒಂದೊಂದು ತಾತ್ಪರ್ಯ ಸ್ಫುರಿಸುತ್ತದೆ. ವೇದವೆಂದು ಒಂದು ಅರ್ಥ; ಶಾಸ್ತ್ರವೆಂದು ಇನ್ನೊಂದು; ತಂತ್ರವೆಂದು ಮತ್ತೊಂದು. ಗುರಿಯಾದ ಪರಮಪದವನ್ನು ಮುಟ್ಟಿಸುವ ಸಾಧನೆಯೆಂದು (ಆ ಸಮಂತಾತ್ ಗಮಯತಿ ಪರಂ ಪದಂ) ಒಟ್ಟಾರೆ ತಾತ್ಪರ್ಯ. ಪದವನ್ನು ಅಕ್ಷರಗಳಲ್ಲಿ ಒಡೆದು 'ಆ' ಎಂದರೆ ಹೊರ ಬಂದದ್ದು (ಆಗತಂ—ಶಿವನ ಮುಖಗಳಿಂದ), 'ಗ' ಎಂದರೆ ಒಳ ಹೊಕ್ಕದ್ದು (ಗತಂ—ಗಿರಿಜಾಮುಖೇ), 'ಮ' ಎಂದರೆ ಅಭಿಪ್ರಾಯ (ಮತಂ ವಾಸುದೇವಸ್ಯ) ಎಂದು ಮೊದಲಾಗಿ ವಿಚಿತ್ರವಾಗಿ ಅರ್ಥಬಿಡಿಸುವುದೂ ಇದೆ.

ಆಗಮಗಳು ದೇವತಾಪರವಾದ ಸಂಪ್ರದಾಯಗಳು. ಶಿವನ ಪರವಾದುವು ಶೈವಾಗಮಗಳು, ದೇವಿಯ ಪರವಾದುವು ಶಾಕ್ತಾಗಮ ಅಥವಾ ದೇವ್ಯಾಗಮಗಳು, ವಿಷ್ಣುವಿನ ಪರವಾದುವು ವೈಷ್ಣವಾಗಮಗಳು. ಇದು ಮುಖ್ಯವಾದ ಸಂಪ್ರದಾಯಭೇದ. ವೈಷ್ಣವಾಗಮಗಳಲ್ಲಿ ವೈಖಾನಸ ಮತ್ತು ಪಾಂಚರಾತ್ರ ಎಂದು ಎರಡು ಪ್ರಭೇದಗಳಿವೆ. ಇವಲ್ಲದೆ ಶೈವಸಂಪ್ರದಾಯದ ರೌದ್ರಾಗಮದ ವಾತುಳಭಾಗವನ್ನವಲಂಬಿಸಿ ವೀರಶೈವಾಗಮ ಮತ್ತು ವೈಷ್ಣವಪಾಂಚರಾತ್ರಾಗಮದ ಭಾಗವೆನಿಸಿ, ಪಾದ್ಮಸಂಹಿತೆಯನ್ನವಲಂಬಿಸಿದ ಮಾಧ್ವತಂತ್ರಸಾರಾಗಮ ಇವೂ ಬಳಕೆಯಲ್ಲಿವೆ. ದೇವತಾ ಪ್ರಸಂಗದಿಂದ ಮತ್ತು ಸಿದ್ಧಾಂತದೃಷ್ಟಿಯಿಂದ ಆಗಮಗಳಲ್ಲಿ ಭೇದ ಕಂಡುಬಂದರೂ, ಎಲ್ಲ ಆಗಮಗಳ ನೆಲೆ ಒಂದೇ ಎನ್ನುವುದನ್ನು ಮರೆಯಬಾರದು. ಎಲ್ಲವೂ ಉಪಾಸನಾಪ್ರಮುಖವಾದುವು; ಕ್ರಿಯಾವಾದವನ್ನೇ ಎತ್ತಿಹಿಡಿಯುವುವು, ವಿಚಾರಸರಣಿಯಲ್ಲಿ ಏಕತಾನತೆಯನ್ನು ಪಡೆದುವು. ಶೈವಾಗಮಗಳೇ ಆಗಮಗಳೆಂದೂ ಅವು ತಾಮಸವೆಂದೂ (ಅಘೋರಮೂರ್ತಿ, ದಕ್ಷಿಣಾಮೂರ್ತಿಗಳು ಉಪಾಸ್ಯದೇವತೆಗಳು), ಶಾಕ್ತಾಗಮಗಳು ತಂತ್ರಗಳೆಂದೂ ಅವು ರಾಜಸವೆಂದೂ (ಕಾಳಿ, ಶಾಂತಿ ದುರ್ಗೆ), ವೈಷ್ಣವಾಗಮಗಳು ಸಂಹಿತೆಗಳೆಂದೂ ಅವು ಸಾತ್ತ್ವಿಕವೆಂದೂ (ಅನಂತಶಯನ, ನರಸಿಂಹ, ನಿರ್ದೇಶಿಸುವ ವಾಡಿಕೆಯಿದೆ; ಆದರೆ ಇದೇನು ಸರ್ವಸಮ್ಮತವಾದ ನಿರ್ದೇಶನವಲ್ಲ. ತಂತ್ರಗಳೂ ಸಂಹಿತೆಗಳೂ ಎಲ್ಲ ಆಗಮಗಳಲ್ಲಿಯೂ ಬರುತ್ತವೆ; ಸಾತ್ತ್ವಿಕ–ರಾಜಸ–ತಾಮಸ ಲಕ್ಷಣಗಳನ್ನೂ ಎಲ್ಲ ಆಗಮಗಳಲ್ಲಿಯೂ ಕಾಣಬಹುದು. ಬೆಳೆದುಬಂದ ರೀತಿಯಲ್ಲಿ ವೈವಿಧ್ಯವಿದ್ದರೂ ಎಲ್ಲ ಆಗಮಗಳ ಮೂಲನೆಲೆ ಒಂದೇ.

ಆಗಮಸಂಪ್ರದಾಯಕ್ಕೂ ವೈದಿಕಸಂಪ್ರದಾಯಕ್ಕೂ ಇರುವ ಸಂಬಂಧವನ್ನು ಕುರಿತು ವಿಪುಲವಾದ ಚರ್ಚೆ ನಡೆದಿದೆ. ವೈದಿಕಸಂಪ್ರದಾಯ ಪ್ರಬಲವೆಂದು ತೋರಿದ ಕಾಲದಲ್ಲಿ ಆಗಮಗಳು ಅದೇ ಸಂಪ್ರದಾಯದ ನೆಲೆಯಲ್ಲಿಯೇ ಕಾಣಿಸಿಕೊಳ್ಳುವ ತವಕ ಇದ್ದಿತಾದರೂ, ವೈದಿಕಸಂಪ್ರದಾಯದ ಹಲವಾರು ವಿವರಗಳನ್ನು ಆಗಮಗಳು ಅಳವಡಿಸಿಕೊಂಡುವಾದರೂ ಆಗಮಗಳ ನೆಲೆ ಅವೈದಿಕವಾದ ತಾಂತ್ರಿಕ ಸಂಪ್ರದಾಯದ್ದು ಎನ್ನುವುದು ಸ್ಪಷ್ಟವಾಗುತ್ತದೆ. ವೈದಿಕಸಂಪ್ರದಾಯದ ಅನುಯಾಯಿಗಳು ಆಗಮವನ್ನು ಕಡೆಗಣ್ಣಿನಿಂದ ಕಂಡರು; ಆಗಮಸಂಪ್ರದಾಯದವರೂ ವೇದೋಕ್ತವಾದ ವಿಧಿಗಳಿಗಿಂತಲೂ ಆಗಮವಿಧಿ ಉತ್ತಮವೆಂದು ಬಗೆದರು. ವಾಮ, ಪಾಶುಪತ, ಲಾಗುಡ, ಭೈರವ ಮೊದಲಾದ ಶೈವಾಗಮಗಳು 'ವೇದಬಾಹ್ಯ', 'ನ ಸೇವ್ಯ', 'ವೇದವಾದವಿರುದ್ಧ' ಎನ್ನುವ ನಿಲುವು ವೈದಿಕ ಸಂಪ್ರದಾಯದಲ್ಲಿದ್ದಿತು. ಸೂತ ಸಂಹಿತೆಯು ಪಾಂಚರಾತ್ರ, ಶಾಕ್ತ, ಶೈವ (ಕಾಪಾಲ, ಕಾಳಾಮುಖ) ಮಾರ್ಗದವರು ಬ್ರಾಹ್ಮಣರಾದರೂ ಅಧಮರು

ಪಾಂಚರಾತ್ರೇ ಚ ಕಾಪಾಲೇ ತಥಾ ಕಾಲಾಮುಖೇಽಪಿ ಚ |
ಶಾಕ್ತೇ ಚ ದೀಕ್ಷಿತಾ ಯೂಯಂ ಭವಥ ಬ್ರಾಹ್ಮಣಾಧಮಾಃ ||

ಎಂದು ಆಗ್ರಹದಿಂದ ಹೇಳಿತು. ತಂತ್ರಾನುಷ್ಠಾನದಿಂದ ಸಿಟ್ಟುಗೊಂಡ ಗೌತಮನು ಕೊಟ್ಟ ಶಾಪವಂತೆ ಇದು. ಈ ಮಾತನ್ನು ಭಟ್ಟೋಜಿದೀಕ್ಷಿತ ತನ್ನ 'ತತ್ತ್ವಕೌಸ್ತುಭ' ದಲ್ಲಿಯೂ ಉದಹರಿಸಿದ್ದಾನೆ. ಪದ್ಮಪುರಾಣದ ವಶಿಷ್ಠ-ದಿಲೀಪಸಂವಾದದಲ್ಲಿ ಹಿಂದೆ ದ್ರಾವಿಡದೇಶದಲ್ಲಿದ್ದ ಚಿತ್ರಸೇನರಾಜನು ಪಾಷಾಂಡ ಸಂವಾದದಿಂದ ಪಾಶುಪತಾನುಷ್ಠಾನ ಪ್ರವೃತ್ತನಾಗಿ, ವೈದಿಕಾನುಷ್ಠಾನವನ್ನು ಬಿಟ್ಟು 'ಅವಿಂದನ್ನರಕೇ ಘೋರಂ ಸಂತಾಪಂ' ಎನ್ನುವ ಪ್ರಸ್ತಾಪ ಬರುತ್ತದೆ. ಹಾಗೆಯೇ ವಾಸಿಷ್ಠಲೈಂಗದಲ್ಲಿ ಶಾಂಡಿಲ್ಯನೆಂಬ 'ಸಾಹಸಿ'ಯು ಪಾಂಚರಾತ್ರಾನುಷ್ಠಾನದಿಂದ ನರಕವನ್ನು ಪಡೆದನೆಂದು ಉಲ್ಲೇಖವಿದೆ (ವಾಸುದೇವಂ ಕುಮಾರ್ಗೇಣ ಪೂಜಯಾಮಾಸ ಸುವ್ರತಃ). ಹೀಗೆ ಆಗಮವೆಂದರೆ 'ಕುಮಾರ್ಗ', 'ಮೋಹಶಾಸ್ತ್ರ', 'ಪಾಷಂಡವಿದ್ಯೆ

ಎನ್ನುವುದು ವೈದಿಕವಲಯಗಳಲ್ಲಿ ಪ್ರಸಿದ್ಧವಾಗಿದ್ದಿತು. ಆಗಮವನ್ನು ನಂಬಿದವರು, 'ವೇದಗಳು. ಅಗ್ನಿ ಹೋತ್ರ, ಯಜ್ಞ ಇವುಗಳಿಗಿಂತ ಆಗಮೋಕ್ತವಾದ ವಿಷ್ಣುಪೂಜೆ ಕೋಟಿಪಾಲು ಹೆಚ್ಚಿನದು'—

ಅಗ್ನಿಹೋತ್ರಾಶ್ಚ ವೇದಾಶ್ಚ ಯಜ್ಞಾ ಸದಕ್ಷಿಣಾ ।
ಹರೇರ್ನಿತ್ಯಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ ॥

ಎಂದರು. ದೇವರನ್ನು ಒಲಿಸಿಕೊಳ್ಳಲು ನಾಲ್ಕು ದಾರಿಗಳು—ಜಪ, ಹೋಮ, ಧ್ಯಾನ ಮತ್ತು ಪೂಜೆ; ಇವುಗಳಲ್ಲಿ ಪೂಜೆಯೇ ಅತ್ಯುತ್ತಮ ಎಂದು ಮರೀಚಿಯಂಥ ಆಗಮವಾದಿಗಳು ಸೂಚಿಸಿದರು (ಅಥ ಸಮಾರಾಧನಂ ಚತುರ್ವಿಧಂ ಭವತಿ, ಜಪ–ಹುತಾರ್ಚನ–ಧ್ಯಾನಾನೀತಿ, ತೇಷ್ವರ್ಚನಂ ಸರ್ವಾರ್ಥಸಾಧನಂ ಸ್ಯಾದಿತಿ ಮರೀಚಿಃ).

ವೇದ ಆಗಮಗಳಿಗೆ ವಿರೋಧವಿದ್ದ ಕಾಲದಲ್ಲಿಯೇ ಕುಮಾರಿಲರು ಪಾಶುಪತ, ಜೈನ, ಬೌದ್ಧ ಎಲ್ಲವನ್ನೂ ಒಟ್ಟಿಗೆ ಸೇರಿಸಿ 'ಆಗಮ' ವೆಂದು ನಿರ್ದೇಶಿಸಿದರು. ಪಾಂಚರಾತ್ರದ ಈಶ್ವರಸಂಹಿತೆಯಲ್ಲಿ ವಾಸುದೇವನಿಂದಾದ ಏಕಾಯನವೇದವೇ ಮೊದಲಿಗಿದ್ದಿತೆಂದೂ ಜನರಲ್ಲಿ ಪ್ರಾಪಂಚಿಕಪ್ರವೃತ್ತಿ ಹೆಚ್ಚಿದಾಗ ವಿಕಾರ ವೇದಗಳು (ಎಂದರೆ ನಾಲ್ಕು ವೇದಗಳು) ಕಾಣಿಸಿಕೊಂಡುವೆಂದೂ ಆಗ ವಾಸುದೇವನು ಏಕಾಯನವೇದವನ್ನು ಮರೆಮಾಡಿ ಅನಂತರ ಸನಕ ಸನಂದನಾದಿ ಏಕಾಂತಿಗಳಿಗೆ ಉಪದೇಶಿಸಿದನೆಂದೂ ಹೇಳಿದೆ. ವೇದದ ಮೊದಲು ಆಗಮವಿದ್ದಿತೆನ್ನುವ ವಾದ ಇದು.

ಆಗಮಗಳು ಪೂಜೆಯನ್ನೇ ಬೆಳೆಸಿಕೊಂಡುವಾದರೂ, ವೈದಿಕಸಂಪ್ರದಾಯದ ಜಾಡಿನಲ್ಲೇ ನಿಲ್ಲುವ ಪ್ರಯತ್ನಮಾಡಿದುದು ಸಹಜವೇ; ಬರುಬರುತ್ತ ಪ್ರಬಲವಾಗುತ್ತಿದ್ದ ಸಂಪ್ರದಾಯ ಅದು. ಶೈವಾಗಮಗಳು ಕೂಡ

ವೈದಿಕೀಂ ತು ಪುರಸ್ಕೃತ್ಯ ಪಶ್ಚಾತ್ ಶೈವೀಂ ಸಮಾಚರೇತ್ ।
ಇತಿ ವರ್ಣಾಶ್ರಮಾಚಾರಾನ್ ಮನಸಾಪಿ ನ ಲಂಘಯೇತ್ ॥

ಎನ್ನುವಷ್ಟು ದೂರ ಹೋದುವು. ಪೂಜಾವಿಧಾನದಲ್ಲಿಯೂ, ಅರ್ಚಾಮೂರ್ತಿಗಳ ಪ್ರತಿಷ್ಠೆಯಲ್ಲಿಯೂ ವೇದಮಂತ್ರಗಳನ್ನು ಆಗಮಗಳು ಯಥೇಚ್ಛವಾಗಿ ಬಳಸಿಕೊಳ್ಳತೊಡಗಿದುವು. ವೇದಮಂತ್ರಗಳನ್ನುಚ್ಚರಿಸದೆ ಮಾಡುವ ಪೂಜೆ ಪೂಜೆಯೇ ಅಲ್ಲವೆಂದೂ ನಂಬಿಕೆ ಮೂಡಿತು (ಅಮಂತ್ರಮರ್ಚಕಂ ದೃಷ್ಟ್ವಾ ದೂರೇ ತಿಷ್ಠತಿ ಶಂಕರಃ). ಆಗಮಗಳು ವೇದಸಾರವಾದುವೇ ಎಂದೂ ಆಗಮವಾದಿಗಳು ಶಪಥಮಾಡಲಾರಂಭಿಸಿದರು.

ವೇದಸಾರಮಿದಂ ತಂತ್ರಂ ತಸ್ಮಾದ್ವೈದಿಕಮಾಚರೇತ್

ಎಂದು ಮಕುಟಾಗಮ ಹೇಳಿತು. ಹೀಗೆ ಆಗಮವು ವೈದಿಕಸಂಪ್ರದಾಯದ ಕಡೆ ಸರಿಯುತ್ತಿದ್ದಾಗ, ಈ ನೆಲೆಯನ್ನು ಒಪ್ಪಿಕೊಳ್ಳದ ಆಗಮವಾದಿಗಳು ಇದ್ದೇ ಇದ್ದರು. ವೇದವಿರೋಧಿಗಳಲ್ಲದಿದ್ದರೂ ಆಗಮದ ತಾಂತ್ರಿಕ ನೆಲೆಯಲ್ಲಿಯೇ ನಂಬಿಕೆಯಿದ್ದವರು ಇವರು. ವೇದಮಂತ್ರಗಳನ್ನು ಬಳಸಿಕೊಂಡರೂ ಪೂಜಾವಿಧಾನಗಳನ್ನು ಒಪ್ಪದಿದ್ದ ವೈದಿಕರಂತೆ ಕೇವಲ ಆಗಮವಾದಿಗಳೂ ಸಮನ್ವಯಕ್ಕೆ ಸಿದ್ಧರಾಗಿರಲಿಲ್ಲ. ಈ ಕಾರಣದಿಂದ ಆಗಮದಲ್ಲಿಯೇ ವೇದಸಮ್ಮತವಾದುದು ವೇದಬಾಹ್ಯವಾದುದು ಎಂದೆರಡು ವಿಭಾಗಗಳು ತಲೆದೋರಿದುವು ವಾಯುಸಂಹಿತೆಯು ಶೈವಾಗಮದ ವಿಚಾರ ಹೇಳುತ್ತ

ಶೈವಾಗಮೋऽಪಿ ದ್ವಿವಿಧಃ ಶ್ರೌತಾಶ್ರೌತಶ್ಚ ಸ ಸ್ಮೃತಃ ।
ಶ್ರುತಿಸಾರಮಯಃ ಶ್ರೌತಃ ಸ್ವತಂತ್ರ ಇತರೋ ಮತಃ ॥

ಎಂದು ಹೇಳಿರುವುದು ಎಲ್ಲ ಆಗಮಗಳಿಗೂ ಅನ್ವಯಿಸುತ್ತದೆ. ವೇದಸಂಪ್ರದಾಯದಿಂದ ಸ್ವತಂತ್ರವಾಗಿದ್ದುವೇ ಪ್ರಾಚೀನವಾದುವೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. 'ಶ್ರುತಿಸಾರಮಯ'ವಾದ ವಿಭಾಗ, ಎಂದರೆ ವೇದಸಮ್ಮತವಾದ ವಿಭಾಗದಲ್ಲಿ ಶೈವಾಗಮದವರು ಹದಿನೆಂಟು ಸಂಹಿತೆಗಳನ್ನು ಪರಿಗಣಿಸಿದರೆ ಸ್ವತಂತ್ರವಾದ ವಿಭಾಗವು 'ಶತಕೋಟಿ ಪ್ರವಿಸ್ತರ' ವೆಂದೂ ಒಪ್ಪಿಕೊಂಡರು. ಹದಿನೆಂಟು ಸಂಹಿತೆಗಳು ಮಾತ್ರವೇ ರೂಢಮೂಲವಾದುದು ಬೇರೆ ಮಾತು. ಆದರೆ ಸ್ವತಂತ್ರವಾದ ನೆಲೆಯ ವೈಪುಲ್ಯವನ್ನು ಇಲ್ಲಿ ಗಮನಿಸಬೇಕು. ವೇದಸಮ್ಮತವಾದ ವಿಭಾಗ ಸಿದ್ಧಾಂತವೆನಿಸಿಕೊಂಡಿತು; ಸ್ವತಂತ್ರವಾದುದು 'ವೇದಬಹಿಷ್ಕೃತ' ವಾಯಿತು —

ಸಿದ್ಧಾಂತೋ ವೇದಸಾರತ್ವಾದನ್ಯದ್ವೇದಬಹಿಷ್ಕೃತಂ

ಎಂದು ಕಾಮಿಕಾಗಮ ಸ್ಪಷ್ಟಪಡಿಸುತ್ತದೆ.

ಈಗ ಉಳಿದಿರುವ, ಬಳಕೆಯಲ್ಲಿರುವ ಆಗಮಭಾಗಗಳೆಲ್ಲ ಹೆಚ್ಚೂ ಕಡಮೆ ವೇದಸಮ್ಮತವಾದುವೇ; ವೈದಿಕಾಚಾರದ ವ್ಯಾಪ್ತಿಯೊಳಗೆ ನುಸುಳಿಕೊಂಡಿರುವುವೇ. ಆದರೆ ತಾಂತ್ರಿಕ ಪ್ರಸಕ್ತಿಯನ್ನು ಬಿಟ್ಟೇಬಿಟ್ಟರೆ ಆಗಮದ ಸ್ವರೂಪವೇ ಮರೆಯಾಗಿಬಿಡುತ್ತದೆ. ಈ ಹೆದರಿಕೆಯಿಂದ ತಾಂತ್ರಿಕವಿಧಿಗಳನ್ನು ಪರಿಷ್ಕರಿಸಿ, ಮಾರ್ಪಡಿಸಿ, ಮುಸುಕುಹಾಕಿ ಉಳಿಸಿಕೊಂಡಿರುವುದನ್ನು ಗಮನಿಸಬಹುದು. ಆಗಮವನ್ನು 'ವೇದ ಸಾರಮಿದಂ ತಂತ್ರಂ' ಎಂದು ತೋರಿಸುವ ತವಕದ ಹಿನ್ನೆಲೆ ಇದೇ. ಎಷ್ಟು ಬಣ್ಣ ಬದಲಾಯಿಸಿದರೂ ಅದು ತಂತ್ರವೇ.

ಒಂದೊಂದು ಸಂಪ್ರದಾಯವೂ ತಾನು ವೈದಿಕವೆನ್ನುವ ಛಲವನ್ನು ತಳೆದಿದ್ದರೂ ಇತರ ಸಂಪ್ರದಾಯ ಗಳು ಅದನ್ನು ತಾಂತ್ರಿಕವೆಂದು ಮೂದಲಿಸುತ್ತಿದ್ದುದು ಈ ಕಾರಣದಿಂದಲೇ. ಶೈವ–ಶಾಕ್ತ–ವೈಷ್ಣವ ಆಗಮ ಗಳ ನಡುವೆ ಇರುವ ವೈಷಮ್ಯವಿರಲಿ; ವೈಷ್ಣವರಲ್ಲಿಯೇ ವೈಖಾನಸರು ತಾವು ಮಾತ್ರ ವೈದಿಕರು, ಪಾಂಚ ರಾತ್ರರಾದರೋ ತಾಂತ್ರಿಕರು ಎನ್ನುವುದಿಲ್ಲವೆ? ಪಾಂಚರಾತ್ರರು ತಮ್ಮ ಸಂಪ್ರದಾಯವೇ ವೇದಸಮ್ಮತ, ವೈಖಾನಸವು ಅಶ್ರೀಕರ, ಅಸೌಮ್ಯ ಎನ್ನುವರು.

ಆಗಮದ ನೆಲೆ ಪೂಜೆಯೆಂದೆವಲ್ಲ. ಈ ಪೂಜೆಯನ್ನು ಮನೆಯೊಳಗೆ ಮಾಡುವುದು, ಊರಿನಲ್ಲಿ ಗುಡಿಯಲ್ಲಿ ಮಾಡುವುದು ಎಂದು ವಿಭಾಗಮಾಡಿದರು. ಮೊದಲನೆಯದು 'ಆತ್ಮಾರ್ಥ'; ತನ್ನ ಮತ್ತು ತನ್ನ ಕುಟುಂಬದ ಹಿತಕ್ಕಾಗಿ, "ಕ್ಷೇಮ–ಸ್ಥೈರ್ಯ–ವಿಜಯ–ಆಯುರಾರೋಗ್ಯ" ಕ್ಕಾಗಿ ಮಾಡುವುದು. ಎರಡನೆ ಯದು 'ಪರಾರ್ಥ'; ಊರಿನವರೆಲ್ಲರ, ಊರಿನ ಒಡೆಯರ, ಎಲ್ಲ ಪ್ರಾಣಿಗಳ ಪೀಡೆ ಪರಿಹಾರವಾಗಿ ಹಿತವಾಗಲೆಂದು, "ಅಸ್ಮದ್ರಾಷ್ಟ್ರಪಾಲಕಾನಾಂ ಸರ್ವೇಷಾಂ ಆಸ್ತಿಕಜನಾನಾಂ ದ್ವಿಪದಶ್ಚತುಷ್ಪದಾಂಚ ಸಕಲದುಷ್ಟಾರಿಷ್ಟಪೀಡಾ ಪರಿಹಾರದ್ವಾರಾ" ಇತ್ಯಾದಿ. ಆಗಮದ ಮುಖ್ಯ ಆಸಕ್ತಿ ಪರಾರ್ಥಪೂಜೆಯಲ್ಲಿ. ವೈಖಾನಸರು ದೇವತಾರ್ಚನೆಯನ್ನು 'ಅಮೂರ್ತ' ಮತ್ತು 'ಸಮೂರ್ತ' ಎಂದು ಇಬ್ಬಗೆಯಲ್ಲಿ ಕಂಡರು. ಅಮೂರ್ತವೆಂದರೆ ಮನೆಯೊಳಗೆ ಮಾಡುವ ಹೋಮ, ಗಾರ್ಹಸ್ಪತ್ಯಅಗ್ನ್ಯಾಧಾನ ಮೊದಲಾದುವು; ಎಂದರೆ ವೈದಿಕವಿಧಿಗಳು. ಸಮೂರ್ತವೆಂದರೆ ಗುಡಿಯೊಳಗೆ ವಿಧಿವತ್ತಾಗಿ ಮೂರ್ತಿಯನ್ನು ಪೂಜಿಸುವುದು (ಆಲಯೇ ಬಿಂಬೇ ನಿತ್ಯಂ ವಿಧಿವದರ್ಚನಂ). ಇದನ್ನು ಮರೀಚಿ 'ದೇವಯಾಗ'ವೆಂದು ಕರೆದಿದ್ದಾನೆ. ಪೂಜೆ ಪೂರ್ಣವಾಗುವುದು ಇಲ್ಲಿಯೇ (ಆಲಯೇऽರ್ಚಾ ಸುಪೂರ್ಣೇಯಂ ಉತ್ತಮೇತಿ ಪ್ರಕೀರ್ತಿತಾ) ಎಂದು

ಅವನ ಪ್ರಶ್ನೆ. ಶೈವಾಗಮಗಳೂ ಚರ, ಸ್ಥಿರ ಎಂದು ದೇವಪೂಜೆಯನ್ನು ವಿಭಾಗಮಾಡಿ ಚರವನ್ನು 'ಗೃಹೇಷು ಕರ್ತವ್ಯಂ' ಎಂದೂ ಸ್ಥಿರವನ್ನು 'ದೇವಾಲಯೇಷು' ಎಂದೂ ನಿರ್ದೇಶಿಸಿದುದು ಮಾತ್ರವಲ್ಲದೆ 'ಗೃಹಾಚ್ಛ ತಗುಣಾಧಿಕ್ಯಂ ಸ್ಥಾವರೇಷು ಚ ಪೂಜಯೇತ್' ಎಂದು ಹೇಳಿದವು.

ಭಾಗವತದಲ್ಲಿ ಯಾಗಗಳು ವೈದಿಕ, ತಾಂತ್ರಿಕ, ಮಿಶ್ರ ಎಂದು ಮೂರು ಬಗೆಗಳೆಂದು ಹೇಳಿದೆ —

ವೈದಿಕಸ್ತಾಂತ್ರಿಕೋ ಮಿಶ್ರ ಇತಿ ಮೇ ತ್ರಿವಿಧೋ ಮಖಃ

ಬರುಬರುತ್ತ ವೈದಿಕಯಾಗಗಳು ಬಳಕೆಯಿಂದ ಜಾರಿದುವು; ಅಪುರೂಪವಾದುವು; ಅವಕ್ಕೆ ಅಗತ್ಯವಾದ ಅಧಿಕಾರ, ಸನ್ನಾಹಗಳು ದುರ್ಲಭವಾದುವು. ರಾಜ–ಮಹಾರಾಜರೂ ಮಠಾಧಿಪತಿಗಳೂ ಆಗೊಮ್ಮೆ ಈಗೊಮ್ಮೆ ಮಾಡಿಸುತ್ತಿದ್ದರು, ಅಷ್ಟೆ. ದಿನದಿನವೂ ಬ್ರಾಹ್ಮಣರ ಮನೆಗಳಲ್ಲಿ ಅಗ್ನಿಕಾರ್ಯ ಮೊದಲಾದ ವೈದಿಕ ಕ್ರಿಯೆಗಳು ನಡೆಯುವುದೂ ಕಡಮೆಯಾಯಿತು. ಊರಿನ ಗುಡಿಗಳಲ್ಲಿ ನಡೆಯುವ 'ತಾಂತ್ರಿಕಯಾಗ' ಎಂದರೆ ಪೂಜೆಪುರಸ್ಕಾರಗಳೇ ಪ್ರಬಲವಾದುವು. ಅಗ್ನಿಯನ್ನು ಆರಾಧಿಸುವ ಜನ ಊರಗುಡಿಯಲ್ಲಿನ ಮೂರ್ತಿಗಳ ಸಣ್ಣಸಣ್ಣ ಪ್ರತಿಕೃತಿಗಳನ್ನು ಮನೆಯೊಳಗೇ ಇರಿಸಿಕೊಂಡು ಅವಕ್ಕೆ ವೈದಿಕಾಚಾರದಿಂದಲೂ ತಾಂತ್ರಿಕಾಚಾರದಿಂದಲೂ ಪೂಜೆ ನಡೆಸಲಾರಂಭಿಸಿದರು. ಇದೇ 'ಮಿಶ್ರಯಾಗ'. ಮನೆಯಲ್ಲಿ ನಡೆಸುವ ಪೂಜೆಯು ಗುಡಿಯಲ್ಲಿನ ಪೂಜೆಯ ಪಡಿಯಚ್ಚಿನಲ್ಲಿಯೇ (ಆದರೆ ಅಗತ್ಯವಾದ ಬದಲಾವಣೆಗಳನ್ನು ಮಾಡಿಕೊಂಡು) ವ್ಯವಸ್ಥಿತವಾಯಿತು. ಗೃಹಾರ್ಚನೆಗೆ ಮೂಲ ಆಲಯಾರ್ಚನೆಯೇ. ಸಮಾಜದಲ್ಲಿ ಮೊದಲು ಮೈದಳೆದುದು ಗುಡಿಯ ಪೂಜೆ; ಅದನ್ನು ಅನುಕರಿಸಿ ಮನೆಗಳಲ್ಲಿಯೂ ಸಣ್ಣಸಣ್ಣ ಗುಡಿಗಳನ್ನು, ಎಂದರೆ ದೇವರಮನೆಗಳನ್ನು, ಜನ ಅಳವಡಿಸಿಕೊಂಡರು. ಜನರಲ್ಲಿ ಮೂರ್ತಿಪೂಜೆ ಹರಡಿದುದು ಹೀಗೆ. ತಾಂತ್ರಿಕ ಆಗಮಗಳ ಪ್ರಭಾವ ಎಷ್ಟು ಪ್ರಬಲವಾಗಿದ್ದಿತೆನ್ನಲು ಇದು ಸಾಕ್ಷಿ.

ಅರ್ಚಕರ ಅಗತ್ಯ

ದೇವಾಲಯದ ಪೂಜೆ ಮುಖ್ಯವಾಗಿ, ಮಾದರಿಯಾಗಿ ಪರಿಣಮಿಸಿದ ಕಾಲದಲ್ಲಿ ಈ ಪೂಜಾಪದ್ಧತಿಯಲ್ಲಿ ಪಾರಂಗತರಾದವರ ಹಿರಿಮೆಯೂ ಹೆಚ್ಚಿತು. ಗುಡಿಗಳಲ್ಲಿ ಪೂಜೆಮಾಡುವ ಅರ್ಚಕರು, ಪೂಜಾವಿಧಾನಗಳನ್ನು ತಿಳಿಯಹೇಳುವ ಆಗಮಿಕರು, ಗುಡಿಯ ಪೂಜೆಯನ್ನು ನಿರ್ವಹಿಸುವ ಸ್ಥಾನಿಕರು ಊರಿನಲ್ಲಿ ಗಣ್ಯರಾದರು. ಆದರೆ ಬ್ರಾಹ್ಮಣಸಮಾಜದ ನೆಲೆಯಲ್ಲಿ ಇವರಿಗೆ ಸಾಕಷ್ಟು ಮನ್ನಣೆ ದೊರೆಯಲಿಲ್ಲವೆಂದರೆ ವೈದಿಕಾಚಾರನಿಷ್ಠರು ತಾಂತ್ರಿಕಸಂಪ್ರದಾಯದ ವಿಚಾರದಲ್ಲಿ ಇರಿಸಿಕೊಂಡಿದ್ದ ಅಸಹನೆಯೇ ಕಾರಣ. ಗುಡಿಯಲ್ಲಿ ಸಂಬಳಕ್ಕೆಂದು ದೇವರ ಪೂಜೆ ಮಾಡುವ ವೃತ್ತಿ ಪೂಜಾರಿಯನ್ನು ಹೀನಾಯವಾಗಿ ಕಂಡುದು ಸಹಜವೇ. ಮನೆಯ ಹೊರಗೆ, ಎಲ್ಲರೂ ನೆರೆಯುವ ಕಡೆ, ಎಲ್ಲರಿಗೂ ಕಾಣುವಂತೆ ಆಡಂಬರದ ಪೂಜೆಮಾಡುವುದು ಅವರಿಗೆ ಅಷ್ಟು ಒಗ್ಗದಿದ್ದುದೂ ಆಶ್ಚರ್ಯವಲ್ಲ. ಆದರೆ ಸಾಮಾಜಿಕವಾದ ಒಂದು ಅಗತ್ಯವನ್ನು ಪೂರೈಸುವ ಈ ಜನರನ್ನು ಕಡೆಗಾಣಿಸುವಂತೆಯೂ ಇರಲಿಲ್ಲ. ಈ ತುಮುಲದ ನಡುವೆ ಆಗಮಕ್ಕೆ ಅಂಟಿಕೊಂಡು ಬಾಳುವವರ ಸ್ಥಿತಿಗತಿಗಳ ಏರಿಳಿತ ಒದಗಿತು.

ಅರ್ಚಕನ ನೆರವಿಲ್ಲದೆ ಪೂಜೆ ನಡೆಯಲಾರದು, ಮಾತ್ರವಲ್ಲ, ನಡೆಯಬಾರದು ಎನ್ನುವ ಆಗ್ರಹವನ್ನೂ ಆಗಮಗಳಲ್ಲಿ ಕಾಣುತ್ತೇವೆ. ಇವನನ್ನು ಗುರು, ಆಚಾರ್ಯ ಎಂದು ಪರಿಗಣಿಸಿ, ಇವನಿಂದಲೇ ಪ್ರತಿಷ್ಠೆ, ಪೂಜೆ ಮೊದಲಾದುವನ್ನು ನಡೆಸಬೇಕೆಂದು ಆಗಮ ಸ್ಪಷ್ಟಪಡಿಸುತ್ತದೆ. ಪಾಂಚರಾತ್ರದ "ಆಚಾರ್ಯಂ

ಪರಯೋತ್ ಪೂರ್ವಂ ಯದ್ವಶಾಃ ಸಕಲಾಃ ಕ್ರಿಯಾಃ" ಎನ್ನುವ ಮಾತನ್ನು ಗಮನಿಸಬೇಕು. ಕಾರಣಾಗಮದಲ್ಲಿ "ಆತ್ಮಾರ್ಥವಾಗಿ ಮನೆಗಳಲ್ಲಿ ಯಾರು ಬೇಕಾದರೂ ಪೂಜೆ ಮಾಡಿಕೊಳ್ಳಬಹುದು. ಆದರೆ ಪರಾರ್ಥ ಪೂಜೆಯನ್ನು ಆದಿಶೈವ (ಎಂದರೆ ಅರ್ಚಕ)ನೇ ಮಾಡಬೇಕು" (ಸರ್ವೇಷಾಮಾತ್ಮರಕ್ಷಾರ್ಥಂ ಇಷ್ಟಲಿಂಗಾರ್ಚನಂ ಗೃಹೇ । ಆತ್ಮಾರ್ಥಯಜನಂ ಕುರ್ಯಾನ್ನಕುರ್ಯಾಚ್ಚ ಪರಾರ್ಥಕಂ ॥ ಆತ್ಮಾರ್ಥಂ ಚ ಪರಾರ್ಥಂ ಚ ಆದಿಶೈವೇನ ಪೂಜಿತಂ......) ಎನ್ನುವ ಮಾತಿದೆ. ಶೈವಾಗಮದಲ್ಲಿ ಹೀಗೆ ಪರಾರ್ಥಯಜನ ಮಾಡಬಹುದಾದ ಅರ್ಚಕರನ್ನು ಆದಿಶೈವರೆಂದೂ, ಶಿವಬ್ರಾಹ್ಮಣರೆಂದೂ ಕರೆದು ಶಿವನ ಮಕ್ಕಳೇ ಅವರೆಂದೂ (ಆದಿಶೈವಕುಲೋದ್ಭೂತಾಃ ಮಮ ಪುತ್ರಾಃ ಶಿವದ್ವಿಜಾಃ), ಅವರನ್ನು ಶಿವ ಉಂಟುಮಾಡಿದವನಾದರೆ ಶಿವನನ್ನು ಉಂಟುಮಾಡುವವರು ಅವರೆಂದೂ (ಶಿವೇನ ಸ್ಥಾಪಿತಂ ಶೈವಂ ಶೈವೇನ ಸ್ಥಾಪಿತಃ ಶಿವಃ) ಹೇಳಿದೆ. ಇವರು ಮಾಡುವ ಪೂಜೆ ಎಲ್ಲ ಸಿದ್ಧಿಗಳನ್ನೂ ಒದಗಿಸುವುದೆಂದು ನಂಬಿಕೆ (ಆದಿಶೈವಸ್ಯ ಪೂಜಾ ಚ ಸರ್ವ ಸಿದ್ಧಿಕರೀ ಸ್ಮೃತಾ).

ಕೆಲವು ಆಗಮಗಳು ಅರ್ಚಕನ ಅಗತ್ಯವನ್ನು ಹೇಳುತ್ತ ಅರ್ಚಕನೇ ಜಂಗಮರೂಪಿಯಾದ ದೇವರು (ಅರ್ಚಕಸ್ತು ಹರಃ ಸಾಕ್ಷಾಚ್ಚರರೂಪೀ ಸನಾತನಃ) ಎಂದೂ ಪೂಜೆಮಾಡಿಸಿಕೊಳ್ಳುವ ದೇವರಿಗೂ ಪೂಜೆ ಮಾಡುವ ಅರ್ಚಕನಿಗೂ ನಡುವೆ ಭೇದವನ್ನೆಣಿಸಬಾರದೆಂದೂ ಸ್ಪಷ್ಟಪಡಿಸಿದುವು —

ಪೂಜ್ಯಪೂಜಕಯೋರ್ಭೇದಂ
ವಿಮೃಣ್ವಾನೋ ನರಾಧಮಃ ।
ಸ ಯಾತಿ ನರಕಂ ಘೋರಂ
ಯಾವದಾಭೂತಸಂಪ್ಲವಂ ॥

ಎಲ್ಲ ಆಗಮಗಳೂ ಇಷ್ಟು ದೂರ ಹೋಗದಿದ್ದರೂ ಪೂಜೆಯ ಸಾಫಲ್ಯ, ಸಾರ್ಥಕ್ಯಗಳು ಅರ್ಚಕನ ಅಧೀನವೆಂದು ಒಪ್ಪಿಕೊಂಡುವು, ಒತ್ತಿ ಹೇಳಿದುವು. ದೊಡ್ಡವರಿಂದ ಸರಿಯಾಗಿ ಪ್ರತಿಷ್ಠಿತವಾದ ಕಲ್ಲು ಕೂಡ ದೇವರಾಗುತ್ತದೆ (ಅಶ್ಮಾಪಿ ಯಾತಿ ದೇವತ್ವಂ ಮಹದ್ಭಿಃ ಸುಪ್ರತಿಷ್ಠಿತಃ). ಮೂರ್ತಿಯಲ್ಲಿ ದೇವತೆಯ ಸಾನ್ನಿಧ್ಯ ಒದಗುವುದು ಅರ್ಚಕನ ತಪೋಯೋಗದಿಂದ, ಅರ್ಚನೆಯ ಹೆಚ್ಚಳದಿಂದ, ಮೂರ್ತಿಯ ಸೌಂದರ್ಯದಿಂದ —

ಅರ್ಚಕಸ್ಯ ತಪೋಯೋಗಾ-
ದರ್ಚನಸ್ಯಾತಿಶಾಯನಾತ್ ।
ಆಭಿರೂಪ್ಯಾಚ್ಚ ಬಿಂಬಾನಾಂ
ದೇವಃ ಸಾನ್ನಿಧ್ಯಮೃಚ್ಛತಿ ॥

ಅಥವಾ ಅರ್ಚಕನ ಹಿರಿಮೆ, ಮೂರ್ತಿಯ ಸೌಷ್ಠವ ಮತ್ತು ಪೂಜೋಪಕರಣಗಳು ಇವು ಮೂರು ದೇವ ಸಾನ್ನಿಧ್ಯವನ್ನು ಒದಗಿಸುವುವು —

ಅರ್ಚಕಸ್ಯ ಮಾಹಾತ್ಮ್ಯಾತ್
ಪೂಜ್ಯಲಿಂಗಸ್ಯ ಸೌಷ್ಠವಾತ್ ।
ಪೂಜೋಪಕರಣಾಚ್ಚೈವ
ತ್ರಿಭಿಃ ಸಾನ್ನಿಧ್ಯಮೃಚ್ಛತಿ ॥

ಭಗವದ್ವಸ್ತುವಿನ ಆರಾಧನಾ ವಿಧಿಗಳನ್ನು ಕುರಿತು ಬೆಳೆದು ಬಂದ ಶಾಸ್ತ್ರವೇ ಆಗಮ. ವೈದಿಕ ಮನೋವೃತ್ತಿ ಪ್ರೌಢವಾದುದು 'ಏಕಂ ಸತ್' ಎನ್ನುವ ನಿಶ್ಚಯದಲ್ಲಿ; ಈ ನಿಶ್ಚಯ ಉಪನಿಷತ್ತಿನಲ್ಲಿ ಮೂಡಿ ಬಂದಿತು, ಆಗಮದಲ್ಲಿಯೂ ಮೂಡಿಬಂದಿತು. ಮೂಡಿಬಂದ ಬಗೆಗಳು ಬೇರೆಬೇರೆ. ಉಪನಿಷತ್ತಿನಲ್ಲಿ

ಅದು ಪ್ರತಿಬೋಧವಿದಿತವಾದ ನಿರ್ಗುಣಬ್ರಹ್ಮನ ಉಪಾಸನೆಯಲ್ಲಿ ಪರ್ಯವಸಾನವಾದರೆ, ಆಗಮದಲ್ಲಿ ಪರಮ ಉಪಾಸ್ಯವಾದ ಸಾಕಾರಭಗವದ್ವಸ್ತುವಿನಲ್ಲಿ ಪರ್ಯವಸಾನವಾಯಿತು. ಯಾವ ಸಂಪ್ರದಾಯದ ಆಗಮವೇ ಆಗಲಿ ಇದೇ ಮೊದಲ ಸಾಮಾನ್ಯತತ್ತ್ವ. ಆ ಪರಾಪತ್ಪರವಾದ ಭಗವದ್ವಸ್ತು ವಿಷ್ಣುವೋ, ಶಿವನೋ, ದೇವಿಯೋ, ಈ ತತ್ತ್ವಕ್ಕೇನು ಬಾಧಕವಿರದು. ಉಪನಿಷತ್ತಿನ ಮತ್ತು ಆಗಮಗಳ ಮನೋಧರ್ಮ ಒಂದೇ ಇದ್ದಿತೆನ್ನುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಉಪನಿಷತ್ತುಗಳಲ್ಲಿಯೂ ಯಜ್ಞಯಾಗಾದಿ ಗಳ ಖಂಡನೆಯಿದೆ. ಹಳೆಯ ವೈದಿಕಕಲ್ಪನೆಗಳ ತಿರಸ್ಕಾರವಿದೆ; ಉಪಾಸ್ತಿ (ಉಪಾಸನೆ) ಯ ಸೂಚನೆ ಯಿದೆ. ಇದೇ ಆಗಮಗಳ ನೆಲೆಯೂ ಕೂಡ. ಉಪನಿಷತ್ತುಗಳಂತೆಯೇ ಆಗಮಗಳೂ ವಿಶಿಷ್ಟವಾಗಿ ಸ್ವತಂತ್ರವಾಗಿ ಬೆಳೆದುವು. ಕೆಲವು ಆಗಮಗ್ರಂಥಗಳನ್ನು ಉಪನಿಷತ್ತುಗಳೆಂದೇ ಕರೆದಿದ್ದಾರೆ. ಉಪನಿಷದ್ ಬ್ರಹ್ಮಯೋಗಿ ಇವಕ್ಕೆ ವ್ಯಾಖ್ಯಾನವನ್ನೂ ಸಿದ್ಧಪಡಿಸಿದ್ದಾರೆ. ಆದರೆ ಉಪನಿಷತ್ತಿನ ನಿರ್ಗುಣೋಪಾಸನೆ ಸಾಮಾನ್ಯಜನರಿಗೆ ಅನುಕೂಲವಾಗದೆಂಬ ಸಂಶಯವಿದ್ದೇ ಇದ್ದಿತು. ಮರೀಚಿಯು ಪ್ರತಿಮೋಪಾಸನೆಯ ಅಗತ್ಯವನ್ನು ಹೇಳುತ್ತ "ಏವಂ ಸದಾ ಧ್ಯಾತುಮಶಕ್ಯತ್ವಾತ್ ಪ್ರತಿಮಾದಿಷ್ವಾವಾಹ್ಯ ಅರ್ಚಯೇತ್" ಎಂದಿದ್ದಾನೆ. ಪೂಜಾಪದ್ಧತಿಯು 'ಸಾಲಂಬಂ ಸುಗುಣಂ ಶ್ರೇಷ್ಠಂ' ಎನ್ನುವ ನಿಲುವು ಆಗಮದ್ದು.

ಭಗವಂತನ ಸರೂಪ, ಸಗುಣ ಸ್ವರೂಪವನ್ನು ಕುರಿತು ಆರಂಭವಾದ ಧೋರಣೆ ಭಾಗವತಸಂಪ್ರ ದಾಯ. ಈ ಸಂಪ್ರದಾಯಕ್ಕೂ ಆಗಮಕ್ಕೂ ಮೊದಲಿನಿಂದ ಸಂಬಂಧ ಬೆಳೆದುಬಂದಿದೆ. ಆಲಯನಿರ್ಮಾಣ, ಮೂರ್ತಿಪ್ರತಿಷ್ಠೆ, ಪೂಜಾಪದ್ಧತಿಗಳು ಈ ಸಂಬಂಧದಿಂದಲೇ ಮೈದಳೆದವು. ನಮ್ಮ ದೇಶದಲ್ಲಿ ಈವರೆಗೆ ತಿಳಿದುಬಂದಿರುವ ದೇವಾಲಯಗಳಲ್ಲಿ ಅತಿಪ್ರಾಚೀನವಾದ ದೇವಾಲಯವೆಂದರೆ ಮಧ್ಯದೇಶದ ಬೇಸ್ (ವಿದಿಶಾ) ನಗರದಲ್ಲಿದ್ದ 'ಭಗವತೋ ಪ್ರಾಸಾದೋತ್ತಮ'. ಕ್ರಿಸ್ತಪೂರ್ವ ಎಂಟನೆಯ ಶತಮಾನದ ಶಾಸನ ವೊಂದು ಇದನ್ನು ಪ್ರಸ್ತಾಪಿಸುತ್ತದೆ. ಹಿಲಿಯೋಡೋರಸ್ ಎಂಬ ಯವನನು 'ದೇವದೇವವಾಸುದೇವ'ನಿ ಗಾಗಿ ನೆಡಿಸಿದ ಗರುಡಧ್ವಜದ ಪ್ರಸ್ತಾಪ ಆಗಲೇ ಬಂದಿದೆ. ರಾಜಾಸ್ಥಾನ–ಮೇವಾಡದ ಘೋಸುಂಡಿ ಶಾಸನ ಗಳು 'ಸಂಕರ್ಷಣವಾಸುದೇವ'ರ 'ಪೂಜಾಶಿಲೆಯ ಪ್ರಾಕಾರ' (ನಾರಾಯಣವಾಟಿಕಾ)ವನ್ನು ಉಲ್ಲೇಖಿಸುತ್ತವೆ. ಸುಮಾರು ಅದೇ ಕಾಲಕ್ಕೆ ಸೇರಿದುವು ಇವು. ಕ್ರಿಸ್ತಪೂರ್ವ ಮೊದಲನೆಯ ಶತಮಾನಕ್ಕೆ ಸೇರಿದ ವಾಸುದೇವ ವಿಷ್ಣುವಿನ (ಚತುರ್ಭುಜೀ ಭಗವಾನ್) ಎರಡೂವರೆ ಅಡಿ ಎತ್ತರದ ಮೂರ್ತಿ ಮಧ್ಯಪ್ರದೇಶದ ಬಿಲಾಸಪುರ ಜಿಲ್ಲೆಯ ಬುರ್ಹಿಕರ್ ಹಳ್ಳಿಯಲ್ಲಿ ದೊರೆತಿದೆ; ನಮಗೆ ದೊರೆತಿರುವ ವಿಷ್ಣು ವಿಗ್ರಹಗಳಲ್ಲೆಲ್ಲ ತುಂಬ ಪುರಾತನ ವಾದುದು ಇದು.

ಹೀಗೆ ವಾಸುದೇವ–ಕೃಷ್ಣನ ಪ್ರಭಾವದಿಂದ ಪ್ರಬಲವಾದ ಭಾಗವತಪಂಥ ವಿಶಾಲವಾಗಿ ಹರಡಿತು. ಭಾಗವತಪಂಥವು ಕೇವಲ ವೈಷ್ಣವ ಎನ್ನಲಾಗದು; ಶಿವಭಾಗವತರೂ ಇದ್ದುದು ಪತಂಜಲಿಯ ಮಹಾಭಾಷ್ಯ (5, 2, 76) ದಿಂದ ತಿಳಿದುಬರುತ್ತದೆ. ಪಾಂಚರಾತ್ರ ಈ ಸಾತ್ತ್ವತಭಾಗವತ ಮೂಲದಿಂದ ಹೊರ ಬಂದಂತೆಯೇ ಪಾಶುಪತ–ಲಕುಲೀಶ ಪಂಥವೂ ಹೊರಬಂದಿತು. ಶಾಕ್ತ ಆರಾಧಕರಲ್ಲಿ ಬಳಕೆಯಲ್ಲಿರುವ ದೇವೀಪರವಾದ ಗ್ರಂಥಕ್ಕೆ ದೇವೀಭಾಗವತವೆಂದೇ ಹೆಸರಿರುವುದನ್ನು ಗಮನಿಸಬೇಕು. ಭಾಗವತಪಂಥ ಮೈದಳೆದದ್ದು ಕಾಶ್ಮೀರದಲ್ಲಿ; ಅಲ್ಲಿಯೇ ಶೈವಶಾಕ್ತತಂತ್ರಗಳೂ ಬಳಕೆಗೆ ಬಂದುವು; ಪಾಂಚರಾತ್ರದ ಪ್ರಾಚೀನ ಸಂಹಿತೆಗಳಾದ ಜಯಾಖ್ಯ, ವೈಹಾಯಸ, ಹಂಸಪಾರಮೇಶ್ವರಗಳು ಕಾಶ್ಮೀರದಲ್ಲಿ ಬಳಕೆಯಲ್ಲಿದ್ದುವೆಂದು ಉತ್ಪಲನ 'ಸ್ಪಂದಪ್ರದೀಪಿಕೆ'ಯಿಂದ ತಿಳಿದುಬರುತ್ತದೆ. ಆಗಮ ಕಾಶ್ಮೀರದಲ್ಲಾದರೂ ಪ್ರಚಾರ ದಕ್ಷಿಣದೇಶ ದಲ್ಲಿಯೇ ವಿಶೇಷವಾಗಿ ಆಯಿತು.

ಇದು ಹೇಗಾದರೂ ಇರಲಿ. ಪರಾತ್ಪರವಾದ ಭಗವದ್ವಸ್ತುವನ್ನು ವಿಷ್ಣು, ಶಿವ, ಶಕ್ತಿಯರೆಂದು ಮೂರು ತೆರನಾಗಿ ಪರಿಗಣಿಸಿ ಮೂರು ಬೇರೆಬೇರೆ ಸಂಪ್ರದಾಯಗಳು ಮೂಡಿಬಂದುವು. ಪಾಂಚರಾತ್ರ, ವೈಖಾನಸ, ತಂತ್ರಸಾರಗಳು ವಿಷ್ಣುಸರ್ವೋತ್ತಮತ್ವವನ್ನು ಒಪ್ಪಿಕೊಂಡುವು. ಶೈವಾಗಮಗಳೂ, ಹರದತ್ತ—ಲಕುಲೀಶರ ಪಾಶುಪತಸೂತ್ರವೂ, ವಸುಗುಪ್ತನ ಶಿವಸೂತ್ರ, ಕಲ್ಲಟನ ಸ್ಪಂದಕಾರಿಕೆ, ಸೋಮಾನಂದನ ಶಿವದೃಷ್ಟಿ ಮೊದಲಾದ ಪ್ರತ್ಯಭಿಜ್ಞಾಗಮಗಳೂ ಶಿವನ ಆಧಿಕ್ಯವನ್ನು ಅಂಗೀಕರಿಸಿದುವು. ಐದು ಶುಭಾಗಮಗಳೂ, ಅರವತ್ತನಾಲ್ಕು ಕೌಲಾಗಮಗಳೂ, ಎಂಟು ಮಿಶ್ರಾಗಮಗಳೂ, ಸೌಂದರ್ಯಲಹರಿ, ವರಿವಸ್ಯಾರಹಸ್ಯ ಮೊದಲಾದುವೂ ದೇವಿಯ ಹಿರಿಮೆಯನ್ನು ಒಪ್ಪಿ ಹೀಗೆ ಉಪಾಸ್ಯದೇವತಾಭೇದದಿಂದ ವೈಷ್ಣವ, ಶೈವ, ಶಾಕ್ತ ಆಗಮ ಸಂಪ್ರದಾಯಗಳು ಬೇರೆಬೇರೆಯಾಗಿ ಬೆಳೆದುಬಂದುವಾದರೂ ಎಲ್ಲಕ್ಕೂ ಮೂಲಭೂತವಾದ ತತ್ತ್ವವೇನೋ ಅದ್ವಿತೀಯವಾದ ಪರಮಪೂಜ್ಯವಾದ, ಉಪಾಸ್ಯವಾದ ಭಗವದ್ವಸ್ತುವೇ. ಈ ವಿಚಾರದಲ್ಲಿ ಆಗಮಗಳ ನಡುವೆ ವಿರೋಧವಿರದು.

ಆಗಮಗಳಲ್ಲಿ ಬಹುಮಟ್ಟಿಗೆ ನಾಲ್ಕು 'ಪಾದ' (ಎಂದರೆ ವಿಭಾಗ) ಗಳು—ಜ್ಞಾನ (ಶೈವಾಗಮಗಳಲ್ಲಿ ವಿದ್ಯಾ), ಯೋಗ, ಕ್ರಿಯಾ, ಮತ್ತು ಚರ್ಯಾ. ಇವುಗಳಲ್ಲಿ ಕ್ರಿಯಾಪಾದವು ಮುಖ್ಯವಾದುದೆಂದು ಎಲ್ಲ ಆಗಮಗಳೂ ಅಂಗೀಕರಿಸಿವೆ. ಈ ವಿಭಾಗದಲ್ಲಿಯೇ ವಾಸ್ತುಶಿಲ್ಪ, ಶಿಲ್ಪಶಾಸ್ತ್ರ, ಮೂರ್ತಿಪ್ರತಿಷ್ಠೆ, ಮಂದಿರನಿರ್ಮಾಣ, ದೇವತಾರ್ಚನೆ, ಉತ್ಸವಗಳು ಮೊದಲಾದ ವಿವರಗಳೆಲ್ಲ ಬರುವುವು. ಉಳಿದಂತೆ ಶೈವ ಮತ್ತು ಪಾಂಚರಾತ್ರ ವೈಷ್ಣವಾಗಮಗಳು ಜ್ಞಾನಪಾದವನ್ನೂ ವೈಖಾನಸಾಗಮವು ಚರ್ಯಾಪಾದವನ್ನೂ ಎತ್ತಿಹಿಡಿಯುವುವೆಂದು ತೋರಿಬರುತ್ತದೆ. ಜ್ಞಾನಪಾದದಲ್ಲಿ ಸಿದ್ಧಾಂತ ಮುಖ್ಯವಾದ ವಿವರ. ನಿದರ್ಶನಕ್ಕೆ ಶೈವಾಗಮಗಳು ಪತಿ—ಪಶು—ಪಾಶ ಎಂಬ ವಿಭಾಗಮಾಡುವುದು ಇಲ್ಲಿಯೇ. ಚರ್ಯಾಪಾದದಲ್ಲಿ ಚಾತುರ್ವರ್ಣ್ಯ, ಪೂಜೋಪಕರಣಸಂಗ್ರಹ, ಪೂಜಾವಿಧಾನ ಇವೆಲ್ಲ ಬರುತ್ತವೆ. ಯೋಗಪಾದದಲ್ಲಿ ಆಧ್ಯಾತ್ಮಿಕ ನೆಲೆಯ ತಾತ್ಪರ್ಯಗಳ ವಿವರಣೆಯಿರುತ್ತದೆ. ಅರವತ್ತುನಾಲ್ಕು ಕಲೆಗಳಲ್ಲಿ ಒಂದೂ, ಅಥರ್ವವೇದಕ್ಕೆ ಉಪವೇದವೂ ಆದ ಸ್ಥಾಪತ್ಯವೇದ ಕ್ರಿಯಾಪಾದಕ್ಕೆ ಸಂಬಂಧಿಸಿದುದು.

ದೇವಾಲಯ ನಿರ್ಮಾಣ, ಮೂರ್ತಿಶಿಲ್ಪ, ಪೂಜೋಪಕರಣಗಳ ಸಿದ್ಧತೆ ಮೊದಲಾದುವೆಲ್ಲ ಈ ವೇದದ ವಸ್ತುಗಳು. ವಸುಗಳು, ಭೃಗುಗಳು ಎಂಬ ಎರಡು ಪುರಾತನ ಬುಡಕಟ್ಟುಗಳು ಈ ವೇದದ, ಎಂದರೆ ಈ ಕಲೆಯ, ಮೂಲಪುರುಷರೆಂದು ಪ್ರತೀತಿ. ಈ ಎರಡು ಬುಡಕಟ್ಟುಗಳಿಗೂ ಸೇರಿದವನು ವಿಶ್ವಕರ್ಮ; ಪ್ರಭಾವವಸುವಿನ ಮಗ. ಶಿಲ್ಪಕ್ಕಿಂತ ಪ್ರಾಚೀನವಾದುದು ವಾಸ್ತು. ವಾಸ್ತುವೆನ್ನುವ ಮಾತು ಋಗ್ವೇದದಲ್ಲಿಯೇ ಕಾಣಸಿಗುತ್ತದೆ (4, 37, 1, 2); ವಾಸ್ತೋಷ್ಪತಿಯೆಂಬ ದೇವತೆಯ ಪ್ರಸ್ತಾಪವೂ ಇದೆ; ಇದೇ ಮುಂದೆ ವಾಸ್ತುಪುರುಷನಾದುದು. ಶಿಲ್ಪವೆನ್ನುವ ಮಾತನ್ನು ಮೂರ್ತಿಶಿಲ್ಪ ಮತ್ತು ಸಂಗೀತ ಎನ್ನುವ ಅರ್ಥದಲ್ಲಿ ಬ್ರಾಹ್ಮಣ ಸಾಹಿತ್ಯ ಮೊಟ್ಟಮೊದಲಿಗೆ ಬಳಸಿದೆ. ಶಿಲ್ಪವೂ ವಾಸ್ತುವೂ ಒಂದೇ ಶಾಸ್ತ್ರದ ಅಂಗಗಳಾದರೂ ವಿಭಿನ್ನವಾದುವೇ. ವಾಸ್ತುಶಾಸ್ತ್ರದಲ್ಲಿ ವಾಸ್ತು, ಶಿಲ್ಪ ಮತ್ತು ಚಿತ್ರ ಎಂದು ವಿಭಾಗ ಮಾಡುವ ವಾಡಿಕೆಯಿದೆ.

ಶೈವಾಗಮಗಳಲ್ಲಿ ವಿಶ್ವಕರ್ಮನ ಮುಖೋದ್ಭವರಾದ ಐವರು ಮನು, ಮಯ, ತ್ವಷ್ಟಾ, ಶಿಲ್ಪಿ ಮತ್ತು ದೈವಜ್ಞರೆನ್ನುವ ಪ್ರಸ್ತಾಪ ಬರುತ್ತದೆ (ಪಂಚಾಲಬ್ರಾಹ್ಮಣೋತ್ಪತ್ತಿಪ್ರಕರಣ); ಸ್ಕಂದಪುರಾಣವು ದೈವಜ್ಞನನ್ನು ವಿಶ್ವಜ್ಞನೆಂದು ಹೆಸರಿಸಿದೆ (ನಾಗರಖಂಡ, ವಿಶ್ವಕರ್ಮೋಪಾಖ್ಯಾನ); ಇವನನ್ನೇ ಆಗಮಿಕನೆಂದು

ಬಗೆದರೆ ಉಳಿದ ನಾಲ್ವರು ಮುಂದೆ ಕುಶಲಕರ್ಮಿಗಳಾಗಿ ಮೈದಳೆದ ಸ್ಥಪತಿ, ವಾಸ್ತುವಿದ್ಯಾನಿರ್ದೇಶಕ, ಸೂತ್ರಗ್ರಾಹಿ, ತಕ್ಷಕ, ಶಿಲ್ಪಿ, ವರ್ಧಕಿ (ಬಡಗಿ) ಗಳ ಮೊದಲರೂಪಗಳೆನ್ನಬಹುದು, ಅಂತೂ ಇವರೆಲ್ಲರೂ ದೇವಾಲಯನಿರ್ಮಾಣಕ್ಕೆ ಮೂರ್ತಿಶಿಲ್ಪಕ್ಕೆ ಅಗತ್ಯವೆನಿಸಿದರು; ಸ್ಥಾಪತ್ಯವೇದದ ಆಧಾರಸ್ತಂಭಗಳು. ಸ್ಥಾಪತ್ಯವೇದವನ್ನು 'ವಿಶ್ವಕರ್ಮಾದಿ ಶಿಲ್ಪಶಾಸ್ತ್ರಂ' ಎಂದು ನಿರ್ದೇಶಿಸುತ್ತಾರೆ. ಋಗ್ವೇದಕ್ಕೆ ಆಯುರ್ವೇದ ವಿದ್ದಂತೆ, ಯಜುರ್ವೇದಕ್ಕೆ ಧನುರ್ವೇದವಿದ್ದಂತೆ, ಸಾಮವೇದಕ್ಕೆ ಗಾಂಧರ್ವ (ಸಂಗೀತ ಶಾಸ್ತ್ರ) ವಿದ್ದಂತೆ ಅಥರ್ವವೇದಕ್ಕೆ ಸ್ಥಾಪತ್ಯವೇದ ಉಪವೇದ. ಈ ನಿರೂಪಣೆಯಲ್ಲಿ ಪುರಾತನವಾದ 'ತ್ರಯಿ' (ಮೂರು ವೇದಗಳ) ಕಲ್ಪನೆಯಿಂದ ಹೊರಗಾದುದು ಸ್ಥಾಪತ್ಯ; ಎಂದರೆ ತಾಂತ್ರಿಕ ನೆಲೆಯದು. ಆದರೆ ಬೇಗನೆ ವೈದಿಕ ಮನ್ನಣೆಯನ್ನು ಪಡೆಯಿತು; ವೇದವಾಙ್ಮಯದಲ್ಲಿ ಸೇರಿಕೊಂಡುಬಿಟ್ಟಿತು; ಯಜ್ಞಶಿಲ್ಪವೆಂಬ ಭಾಗವೊಂದೇ ಬೆಳೆಯಿತು; ವಿಗ್ರಹಸೃಷ್ಟಿಮಾಡುವಾಗ ವಾಗೀಶ್ವರಿಯೆಂಬ ಅಗ್ನಿಕುಂಡವನ್ನು ನಿರ್ಮಾಣ ಮಾಡಿ ತ್ವಷ್ಟೃನಾಮಕ ಅಗ್ನಿಪುರುಷನಿಗೆ ಸಪ್ತಾಜ್ಯಾಹುತಿಗಳನ್ನು ಕೊಡುವ ವಿವರ ಅಗ್ನಿಶಿಲ್ಪದಲ್ಲಿ ಬೆಳೆಯಿತು.

ಅಂತೂ ಶಿಲ್ಪಶಾಸ್ತ್ರ ವೈದಿಕನೆಲೆಯಲ್ಲಿಯೇ ಹಿರಿದಾಗಿ ಬೆಳೆಯಿತಾದರೂ ಅದರ ಮೂಲ ಪ್ರಾಚೀನ ಆಗಮವೇ. ಆಗಮಶಾಸ್ತ್ರಕ್ಕೆ ಮೂಲಪುರುಷರಾದ ಅತ್ರಿ, ಮರೀಚಿ, ವಿಖನಸ, ಅಗಸ್ತ್ಯ, ಕಶ್ಯಪ, ಭೃಗು ಮೊದಲಾದವರೆಲ್ಲ "ಶಿಲ್ಪಶಾಸ್ತ್ರೇಷು ಧೀಮತಃ" ಎನ್ನುವ ವಿವರವಿದೆ (ಗಾರ್ಗೇಯ ಪ್ರತಿಷ್ಠಾಗಮ). ಮೊದ ಮೊದಲು ವಿಗ್ರಹವನ್ನು ಮಾಡಿದ ಶಿಲ್ಪಿಯೇ ಆಗಮೋಕ್ತವಾದ ಪ್ರತಿಷ್ಠೆಯನ್ನೂ ನಡೆಸುತ್ತಿದ್ದಂತೆ ತಿಳಿದು ಬರುತ್ತದೆ. ಶಿಲ್ಪರತ್ನಾಕರದಲ್ಲಿ 'ಶಿಲ್ಪಿನಾ ನಿರ್ಮಿತೋ ದೇವೋ ಸ್ಥಾಪಿತೋ ತೇನ ವೈ ಪುನಃ' ಎನ್ನುವ ಉಲ್ಲೇಖವಿದೆ. ಶಿಲ್ಪಿಯು ವಿಗ್ರಹದಲ್ಲಿ ಜ್ಯೋತಿಯನ್ನು ಮೂಡಿಸುವುದರಿಂದ ಆವನೇ 'ಬಿಂಬಸ್ಯ ಗುರುರಿಷ್ಯತೇ' ಎಂದೂ ಹೇಳುವುದಿದೆ. 'ಆಕೃತೀಪತಿಯಾದ ಶಿಲ್ಪಾಚಾರ್ಯ' ನೇ ವೈದಿಕನಾಗಿದ್ದು ಅರ್ಚನೆಯನ್ನೂ ಮಾಡುತ್ತಿದ್ದ ಕಾಲವೊಂದಿದ್ದಿರಬೇಕು. ಮಯಮತ ಮೊದಲಾದ ಗ್ರಂಥಗಳಲ್ಲಿ ಈ ಸೂಚನೆಯಿದೆ. ಕಾಲಕ್ರಮದಲ್ಲಿ ನಿರ್ಮಾಣದ ಕೆಲಸ ಮಾತ್ರ ಸ್ಥಪತಿ–ಶಿಲ್ಪಿಗಳಿಗೆ ಉಳಿಯಿತು; ಪ್ರತಿಷ್ಠಾಪನೆ, ಅರ್ಚನೆ, ಉತ್ಸವ ನಿರ್ವಹಣೆ ಇವೆಲ್ಲವೂ ಆಗಮಿಕ–ಅರ್ಚಕರ ಹೊಣೆಯಾದುವು. ವಿಶ್ವಕರ್ಮಶಿಲ್ಪದಲ್ಲಿ 'ಸ್ಥಪತಿಃ ಸ್ಥಾಪಯೇತ್ ಪಶ್ಚಾತ್ ಪೂಜಕಸ್ತ್ವಪಿ ಪೂಜಯೇತ್' ಎಂದು ಹೇಳಿರುವುದನ್ನು ಗಮನಿಸಬೇಕು.

ಆಗಮ ವಾಙ್ಮಯ

ಶೈವಾಗಮಗಳಲ್ಲಿ ಇಪ್ಪತ್ತೆಂಟು ಸಂಹಿತೆಗಳನ್ನು ನಿರ್ದೇಶಿಸುವ ವಾಡಿಕೆಯಿದೆ. ಶಿವನ ಐದು ಮುಖ ಗಳಿಂದ ಹೊರಬಂದ ವಿಭಾಗಗಳಂತೆ ಇವು. ಕಾರಣಾಗಮದ ತಂತ್ರಾವತಾರಪಟಲದಲ್ಲಿ ಬರುವ ನಿರ್ದೇಶನ ಹೀಗೆ—ಸದ್ಯೋಜಾತ ಮುಖದಿಂದ ಐದು (ಕಾಮಿಕ, ಯೋಗಜ, ಚಿತ್ಯ, ಕಾರಣ ಮತ್ತು ಅಜಿತ ಆಗಮಗಳು), ವಾಮದೇವ ಮುಖದಿಂದ ಐದು (ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದ ಆಗಮಗಳು) ಹೀಗೆ ಹತ್ತು ಶಿವಭೇದವೆಂದೂ; ಅಘೋರಮುಖದಿಂದ ಐದು (ವಿಜಯ, ನಿಃಶ್ವಾಸ, ಸ್ವಾಯಂ ಭುವ, ಅನಿಲ, ವೀರಾಗಮಗಳು), ತತ್ಪುರುಷಮುಖದಿಂದ ಐದು (ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬಾಗಮಗಳು), ಮತ್ತು ಈಶಾನಮುಖದಿಂದ ಎಂಟು (ಪ್ರೋದ್ಗೀತ, ಸರ್ವೋತ್ತಮ, ಲಲಿತ, ಪಾರಮೇಶ್ವರ ಸಿದ್ಧ, ಕಿರಣ, ಸಂತಾನ, ವಾತುಲಾಗಮಗಳು) ಹೀಗೆ ಹದಿನೆಂಟು ರುದ್ರಭೇದವೆಂದೂ ಸ್ವತಂತ್ರಶ್ರೌತವಿಭಾಗ ದಲ್ಲಿ ಸೇರಿವೆ. ಇದನ್ನೇ ಅವರು 'ಸಿದ್ಧಾಂತ' ವೆಂದು ಕರೆಯುವುದು.

ಶೈವಾಗಮಗಳನ್ನು ಸಂಗ್ರಹಿಸಿ, ಕ್ರೋಡೀಕರಿಸಿ, ಪ್ರಚುರಪಡಿಸಿದ ಹದಿನೆಂಟು ಮಂದಿ 'ದಿವ್ಯರಾದ ಶಿವಾಚಾರ್ಯ'ರನ್ನೂ ಪರಿಗಣಿಸುತ್ತಾರೆ; ಇವರಲ್ಲಿ ಒಬ್ಬೊಬ್ಬರೂ ಸಿದ್ಧಪಡಿಸಿದ ನಿಲುವನ್ನು ಪದ್ಧತಿಯೆಂದು ಕರೆಯುತ್ತಾರೆ. ದುರ್ವಾಸಮುನಿಯನ್ನು ಆಚಾರ್ಯರ ಪಟ್ಟಿಯಲ್ಲಿ ಮೊದಲಿಗನೆಂದು ವ್ಯವಹರಿಸುವುದುಂಟು. ಆದರೆ ಈ ಪಟ್ಟಿಯಲ್ಲಿ ಯಾರು ಐತಿಹಾಸಿಕ ವ್ಯಕ್ತಿಗಳೋ, ಯಾರು ಯಾವ ಕಾಲದಲ್ಲಿದ್ದವರೋ ಹೇಳುವುದು ಕಷ್ಟ. ಉಗ್ರಜ್ಯೋತಿ, ಸದ್ಯೋಜ್ಯೋತಿ, ಶ್ರೀರಾಮಕಂಠ, ವೈದ್ಯಕಂಠ, ನಾರಾಯಣ ಕಂಠ, ವಿಭೂತಿಕಂಠ,ಶ್ರೀಕಂಠ, ನೀಲಕಂಠ, ಸೋಮಶಂಭು, ಈಶಾನಶಂಭು, ಹೃದಯಾದಿಶಂಭು (ಹೃದಯಶಿವ), ಬ್ರಹ್ಮಶಂಭು, ವೈರಾಗ್ಯಶಿವ, ಜ್ಞಾನಶಂಭು, ತ್ರಿಲೋಚನ ಶಿವ, ವರುಣಶಿವ, ಈಶ್ವರಶಿವ ಮತ್ತು ಅಘೋರಶಿವ ಎಂದು ಒಂದು ಪಟ್ಟಿ. ದುರ್ವಾಸ, ಪಿಂಗಲ, ಉಗ್ರಜ್ಯೋತಿ, ಸುಬೋಧಕ ಎಂದು ಮೊದಲಾಗುವ ಇನ್ನೊಂದು ಪಟ್ಟಿಯೂ ಇದೆ.

ಪಾಂಚರಾತ್ರವೆನ್ನುವ ಹೆಸರು ಈ ಆಗಮವಿಭಾಗಕ್ಕೆ ಹೇಗೆ ಬಂದಿತೋ ಖಚಿತವಾಗಿ ತಿಳಿದುಬಂದಿಲ್ಲ ರಾತ್ರವೆನ್ನುವುದು ಜ್ಞಾನವಚನವೆಂದೂ ಐದು ವಿಧವಾದ ಜ್ಞಾನವನ್ನು ಹೇಳುವುದರಿಂದ ಇದು ಪಂಚರಾತ್ರವೆಂದೂ ನಾರದಪಾಂಚರಾತ್ರಸಂಹಿತೆ ಹೇಳುತ್ತದೆ; ರಾತ್ರಿಯೆಂದರೆ ಅಜ್ಞಾನವೆಂದೂ ಅದನ್ನು ಹೋಗಲಾಡಿಸುವುದು 'ಪಂಕ್ತಿ'ಯೆಂದೂ, ಆ ಶಾಸ್ತ್ರವೇ ಪಾಂಚರಾತ್ರವೆಂದೂ ಶ್ರೀಪ್ರಶ್ನಸಂಹಿತೆಯ ವಿವರಣೆ. ಸಾಕ್ಷಾತ್ ವಿಷ್ಣುವೇ ಐವರು ಶಿಷ್ಯರಿಗೆ ಐದು ರಾತ್ರಿಗಳಲ್ಲಿ ಉಪದೇಶಿಸಿದ ಶಾಸ್ತ್ರವೆಂದು ಮಾರ್ಕಂಡೇಯಸಂಹಿತೆ. ಭಾರದ್ವಾಜಸಂಹಿತೆಗಳಲ್ಲಿ ಬರುವ ವಿವರಣೆ. ಮೊದಲರಾತ್ರಿಯಲ್ಲಿ ಅನಂತ, ಎರಡನೆಯ ರಾತ್ರಿಯಲ್ಲಿ ಗರುಡ, ಮೂರನೆಯದರಲ್ಲಿ ಸೇನೇಶ ವಿಷ್ವಕ್ಸೇನ, ನಾಲ್ಕನೆಯದರಲ್ಲಿ ವೇಧಸ್ (ಬ್ರಹ್ಮ), ಐದನೆಯದರಲ್ಲಿ ರುದ್ರ ಇವರೇ ಈ ಶಾಸ್ತ್ರವನ್ನು ಗ್ರಹಿಸಿದವರೆಂದು ಒಂದು ಮತ; ಈ ಐದು ರಾತ್ರಗಳನ್ನು ಬ್ರಹ್ಮರಾತ್ರ, ಶಿವರಾತ್ರ, ಇಂದ್ರರಾತ್ರ, ನಾಗರಾತ್ರ, ಋಷಿರಾತ್ರಗಳೆಂದು ನಿರ್ದೇಶಿಸುವುದು ಇನ್ನೊಂದು ಮತ. ದೇಹದಲ್ಲಿ ಕೂಡಿರುವ ಐದು ಮಹಾಭೂತಗಳಿಗೆ ರಾತ್ರಿಗಳೆಂದು ಹೆಸರೆಂದೂ ಯೋಗದಿಂದ ಅವನ್ನು ಬೇರ್ಪಡಿಸುವುದು ಪಾಂಚರಾತ್ರವೆಂದೂ ಪರಮಸಂಹಿತೆ, ವಿಷ್ಣುಸಂಹಿತೆ, ಹಯಶೀರ್ಷಸಂಹಿತೆ ಮತ್ತು ಕಾಪಿಂಜಲ ಸಂಹಿತೆಗಳು ಹೇಳುತ್ತವೆ. ಒಂದೇ ತತ್ತ್ವವು ಭೂತಪ್ರಧಾನವಾದ ಐದು ವಿಗ್ರಹಗಳನ್ನು ತಳೆಯುವುದು ಪಾಂಚರಾತ್ರವೆಂದು ವಿಷ್ಣುತತ್ತ್ವಸಂಹಿತೆಯ ಮಾತು. ನಾಲ್ಕು ವೇದಗಳು ಮತ್ತು ಕಡೆಯದಾಗಿ ಸಾಂಖ್ಯಯೋಗ ಈ ಐದು ಕೂಡಿರುವ ಮಹೋಪನಿಷತ್ತಿಗೆ ಪಾಂಚರಾತ್ರವೆಂದು ಹೆಸರೆಂದು ಶ್ರೀಭಾಷ್ಯದ ವಿವರಣೆ. ಇದನ್ನು ಭಗವಚ್ಛಾಸ್ತ್ರವೆಂದೂ ಕರೆಯುತ್ತಾರೆ.

ಪಾಂಚರಾತ್ರವು ವೇದವೆಂದೂ, 'ವೇದಾರ್ಥಪೂರಕ' ವೆಂದೂ ನಂಬಿಕೆಯಿದ್ದರೂ, ಮೇಲೆ ಹೇಳಿದಂತೆ ಅದರ ತಾಂತ್ರಿಕ ನೆಲೆ ಪಾಂಚರಾತ್ರಗ್ರಂಥಗಳಲ್ಲಿಯೇ ಸ್ಪಷ್ಟವಾಗುತ್ತದೆ. 'ಮಲಿನಾ ವೇದಹೀನಾಶ್ಚ ಪಾಂಚರಾತ್ರೇಽಧಿಕಾರಿಣಃ', 'ವೈದಿಕೇನ ವಿಧಾನೇನ ಪೂಜಾಂ ಕುರ್ಯಾತ್ ಹರೇಸ್ತತಃ, ಅಲಾಭೇ ವೇದಮಂತ್ರಾಣಾಂ ಪಾಂಚರಾತ್ರೋದೀತೇನ ವಾ' ಮೊದಲಾದ ಮಾತುಗಳು ನಿದರ್ಶನ. ಆದರೆ ರಾಮಾನುಜಾಚಾರ್ಯರ ಕಾಲಕ್ಕೆ ಕೊಂಚ ಮೊದಲು ಇದರ ವೈದಿಕಸ್ವರೂಪವನ್ನು ನಿರ್ಧರಿಸುವ ಕೆಲಸ ಆರಂಭವಾದಂತೆ ತೋರುತ್ತದೆ; ಆಚಾರ್ಯರ ಕಾಲದಿಂದೀಚೆಗಂತೂ ಅದರ ಪ್ರಾಮಾಣ್ಯ, ರಕ್ಷೆಗಳು ಸಿದ್ಧವಾದುವು. ಈಗ ಶ್ರೀವೈಷ್ಣವ ದೇವಾಲಯಗಳಲ್ಲಿ ಬಹುಮಟ್ಟಿಗೆ ಪಾಂಚರಾತ್ರ ವಿಧಿಯಿಂದಲೇ ಪೂಜೆ ನಡೆಯುವುದು. ಪಾಂಚರಾತ್ರ ಸಂಪ್ರದಾಯಕ್ಕೆ 'ಅಸ್ಮದ್ಗೋತ್ರಪ್ರವರ್ತಕ' ರಾದ ವೈದಿಕ ಋಷಿಗಳನ್ನು ಹೇಳುವ ವಾಡಿಕೆಯಿದೆ—ಭಾರದ್ವಾಜ, ವಸಿಷ್ಠ, ವಿಶ್ವಾಮಿತ್ರ, ಕೌಂಡಿಣ್ಯ. ಸನತ್ಕುಮಾರಸಂಹಿತೆಯಲ್ಲಿ ವಾಸಿಷ್ಠ, ನಾರದೀಯ, ಕಾಪಿಲ, ಗೌತಮೀಯ,

ನಸತ್ಕುಮಾರೀಯ ಎಂಬ ವಿಭಾಗಗಳನ್ನು ಕಾಣುತ್ತೇವೆ. ಆದರೆ ಶೈವಾಗಮದಂತೆ ಇದನ್ನು ಸಿದ್ಧಾಂತವೆಂದು ಕರೆದು ಅದರಲ್ಲಿ ದಿವ್ಯ, ಆಗಮ, ತಂತ್ರ, ತಂತ್ರಾಂತರಗಳೆಂಬ ಸಿದ್ಧಾಂತಗಳನ್ನೂ ಹೆಸರಿಸುತ್ತಾರೆ.

ಪಾಂಚರಾತ್ರವಾಙ್ಮಯವು 'ಪಂಚಲಕ್ಷಪ್ರಮಾಣ' ('ಸಾರ್ಧಕೋಟಿಪ್ರವಿಸ್ತರ') ವೆಂದು ನಂಬಿಕೆ. ಆದರೆ ಬಳಕೆಯಲ್ಲಿರುವುದು ಹತ್ತಾರು ಸಂಹಿತೆಗಳಷ್ಟೆ–ಪಾದ್ಮಸಂಹಿತೆ, ಶ್ರೀಪ್ರಶ್ನಸಂಹಿತೆ, ಕಾಪಿಂಜಲಸಂಹಿತೆ, ನಾರದೀಯಸಂಹಿತೆ, ಮಾರ್ಕಂಡೇಯಸಂಹಿತೆ, ವಾಸಿಷ್ಠಸಂಹಿತೆ, ಹಯಶೀರ್ಷಸಂಹಿತೆ, ಭಾರದ್ವಾಜಸಂಹಿತೆ, ಭಾರ್ಗವಸಂಹಿತೆ, ವಿಷ್ವಕ್ಸೇನಸಂಹಿತೆ, ಅಗಸ್ತ್ಯಸಂಹಿತೆ, ಸಾನಂದಸಂಹಿತೆ, ಅನಿರುದ್ಧಸಂಹಿತೆ, ವಿಷ್ಣುತಂತ್ರ, ಈಶ್ವರಸಂಹಿತೆ, ಅಹಿರ್ಬುಧ್ನ್ಯಸಂಹಿತೆ, ಲಕ್ಷ್ಮೀತಂತ್ರ ಮೊದಲಾದುವು. ಈ ವಾಙ್ಮಯದಲ್ಲಿ ಪಾಂಚರಾತ್ರ ಸಿದ್ಧಾಂತವನ್ನೂ ಸೃಷ್ಟಿಕ್ರಮವನ್ನೂ ಹೇಳುವ ಜ್ಞಾನಪಾದ, ಪೂಜಾಧಿಕಾರವನ್ನು ವಿವರಿಸುವ ಯೋಗಪಾದ, ಪ್ರತಿಮಾನಿರ್ಮಾಣ ಪ್ರಾಸಾದನಿರ್ಮಾಣ ಪ್ರತಿಷ್ಠಾವಿಧಿಗಳನ್ನು ನಿರೂಪಿಸುವ ಕ್ರಿಯಾಪಾದ, ಪೂಜೋತ್ಸವಾದಿ ನಿತ್ಯನೈಮಿತ್ತಿಕ ವಿಧಿಗಳನ್ನು ಹೇಳುವ ಚರ್ಯಾಪಾದಗಳನ್ನೇ ಬೆಳೆಸಿರುವುದು ಕಾಣಬರುತ್ತದೆ. ಆದರೆ ಕೆಲವು ಸಂಹಿತೆಗಳು (ಅಹಿರ್ಬುಧ್ನ್ಯ, ಲಕ್ಷ್ಮೀತಂತ್ರ) ಜ್ಞಾನಪಾದಕ್ಕೆ ಮೀಸಲಾದುವು. ನಾಲ್ಕೂ ಪಾದಗಳನ್ನು ಸಮವಾಗಿ ವಿವರಿಸುವ ಸಂಹಿತೆಗಳು ತೀರ ಕಡಮೆ.

ವೈಖಾನಸಸಂಪ್ರದಾಯದ ಉಗಮ ತುಂಬ ಪ್ರಾಚೀನವಾದುದೆಂಬುದು ನಿರ್ವಿವಾದ. ಪ್ರಜಾಪತಿ ಯಿಂದ ಹೊರಬಂದ ವಿಖನಸಮುನಿಯನ್ನು ತೈತ್ತಿರೀಯ ಆರಣ್ಯಕ ಪ್ರಸ್ತಾಪಿಸುತ್ತದೆ; ಐತರೇಯ ಆರಣ್ಯಕ ದಲ್ಲಿಯೂ ಪ್ರಜಾಪತಿಯ ಉಗುರಿನಿಂದ ಬಂದವರು ವೈಖಾನಸರೆಂದು ಹೇಳಿದೆ (1, 23). ಇಂದ್ರನಿಗೆ ಪ್ರಿಯ ರಾದ ವೈಖಾನಸ ಋಷಿಗಳು ತಾಂಡ್ಯ ಬ್ರಾಹ್ಮಣ (14, 4, 6–8) ದಲ್ಲಿ ಕಾಣಸಿಗುತ್ತಾರೆ. ಸಾಮವಿಧಾನ ಬ್ರಾಹ್ಮಣ (1, 1–7) ದಲ್ಲಿ ವೈಖಾನಸರು ನೂರುಮಂದಿ 'ಮಂತ್ರದೃಶಃ ಋಷಯಃ'. ವೈಖಾನಸ ಪದ್ಧತಿಯ ಅತ್ರಿಸಂಹಿತೆ ಮತ್ತು ಆನಂದಸಂಹಿತೆಗಳು ವಿಖನಸನೆನ್ನುವುದು ಚತುರ್ಮುಖ ಬ್ರಹ್ಮನೇ ಎಂದೂ ಅವನಿಂದ ಹೊರಬಂದವರು ವೈಖಾನಸರೆಂದೂ ವಿವರಿಸುತ್ತವೆ. ಸೀತೋಪನಿಷತ್ತಿನಲ್ಲಿ ವೈಖಾನಸಮತದ ಪ್ರಸ್ತಾಪವಿದ್ದು, ವಿಖನಸನೆಂದರೆ ವಿಷ್ಣುವೆಂದೂ ಅವನ ಬಾಯಿಂದ ಹೊರಬಂದ ಮಾತು ('ಹರೇ ರ್ಮುಖಾನ್ನಾದಃ', 'ತಸ್ಯ ಮುಖಾನ್ನಾರದರೂಪಿಣೀ ವಾಣೀ') ವೈಖಾನಸವೆಂದೂ ಹೇಳಿದೆ.

ವೈಖಾನಸರೆನ್ನುವವರು ಋಷಿಗಳಲ್ಲಿ ಒಂದು ಪಂಗಡವೆಂದು ತಿಳಿದುಬರುತ್ತದೆ. 'ವೈಖಾನಸೋ ವನೇ ಮೂಲಫಲಾಶೀ ತಪಃಶೀಲಃ' ಎಂದು ಬೌಧಾಯನ ಧರ್ಮಸೂತ್ರ ಪ್ರಸ್ತಾಪಿಸುತ್ತದೆ. ರಾಮಾಯಣ, ಮಹಾಭಾರತ, ಭಾಗವತಗಳಲ್ಲಿಯೂ ಇವರು 'ಋಷಿವಿಶೇಷ'ವೆಂದೇ ಕಂಡುಬರುತ್ತಾರೆ. ನಾರದಪರಿವ್ರಾಜ ಕೋಪನಿಷತ್ತು ಇದನ್ನು 'ಆಶ್ರಮವಿಶೇಷ'ವೆಂದು ನಿರೂಪಿಸಿದೆ; ಮೂರನೆಯದಾದ ವಾನಪ್ರಸ್ಥಾಶ್ರಮಕ್ಕೇ ವೈಖಾನಸವೆನ್ನುವ ಹೆಸರಿದ್ದಂತೆ ತೋರುತ್ತದೆ. ಇದು ಹೇಗಾದರೂ ಇರಲಿ, ವೈಖಾನಸಸಂಪ್ರದಾಯದಲ್ಲಿ ಒಂಬತ್ತು ಋಷಿಗಳನ್ನು ಮೂಲಪುರುಷರೆಂದು ಹೆಸರಿಸುತ್ತಾರೆ—ಕಶ್ಯಪ, ಅತ್ರಿ, ಮರೀಚಿ, ವಸಿಷ್ಠ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಭೃಗು. ಇವರು ಒಬ್ಬೊಬ್ಬರೂ ಒಂದೊಂದು ಸಂಹಿತೆಯನ್ನು ಸಿದ್ಧಪಡಿಸಿದಂತೆ ಉಲ್ಲೇಖವಿದೆ. ಇವರಲ್ಲಿ ನಾಲ್ವರು ಬ್ರಹ್ಮನ ಆದೇಶವನ್ನು ಪಡೆದು ವೈಷ್ಣವಶಾಸ್ತ್ರವನ್ನು ಭೂಮಿಯಲ್ಲಿ ಹರಡಿದರಂತೆ—ಮರೀಚಿ, ಅತ್ರಿ, ಕಶ್ಯಪ ಮತ್ತು ಭೃಗು. ಇವರ ಸಂಹಿತೆಗಳೇ ಪ್ರಸಿದ್ಧವಾದವು. ವೈಖಾನಸವಾಙ್ಮಯದಲ್ಲಿ ಸಂಹಿತೆ, ಅಧಿಕರಣ, ತಂತ್ರ, ಕಾಂಡಗಳೆನ್ನುವ ವಿಭಾಗವಿದೆ. ಸಂಹಿತೆಯೆಂದರೆ ಮರೀಚಿ ಋಷಿಯು ಸಿದ್ಧಪಡಿಸಿದ (ಅಥವಾ ಸಂಗ್ರಹಿಸಿದ) ಎಂಟು ಆಗಮಗಳು—ಜಯಾಗಮ, ಆನಂದಾಗಮ

ಸಂಜ್ಞಾನಾಗಮ, ವೀರಾಗಮ, ವಿಜಯಾಗಮ ಮೊದಲಾದುವು. ಅಧಿಕರಣ ಭೃಗುವಿನದು; ಇದರಲ್ಲಿ ಖಿಲ, ಖಿಲಾಧಿಕಾರ, ಪುರಾಧಿಕಾರ, ವಾಸಾಧಿಕಾರ, ಅರ್ಚಾಧಿಕಾರ ಮೊದಲಾದ ಹತ್ತು ಭಾಗಗಳಿವೆ. ತಂತ್ರವನ್ನು ಸಿದ್ಧಪಡಿಸಿದ ಋಷಿ ಅತ್ರಿ; ಪೂರ್ವತಂತ್ರ, ವಿಷ್ಣುತಂತ್ರ, ಉತ್ತರತಂತ್ರ, ಮತ್ತು ಮಹಾತಂತ್ರಗಳೆಂಬ ನಾಲ್ಕು ಭಾಗಗಳಲ್ಲಿ ಇದು ಅಡಕವಾಗಿದೆ. ಕಾಂಡದ ಕರ್ತೃ ಕಶ್ಯಪ: ಇದರಲ್ಲಿ ಸತ್ಯ, ಧರ್ಮ, ಜ್ಞಾನಗಳೆಂದು ಮೂರು ಕಾಂಡಗಳು. ಆದರೆ ಇವನ್ನು ಮರೀಚಿಸಂಹಿತೆ, ಅತ್ರಿಸಂಹಿತೆ, ಭೃಗುಸಂಹಿತೆ, ಕಾಶ್ಯಪಸಂಹಿತೆ ಎಂದು ಕರೆಯುವುದೇ ವಾಡಿಕೆ.

ವೈಖಾನಸರು ವೈದಿಕವಾದ ಆಚಾರವನ್ನೇ ಹಿಡಿದವರೆಂದು ನಂಬಿಕೆಯಿದೆ. ಮರೀಚಿ ಸಂಹಿತೆಯಲ್ಲಿ ಚತುರ್ವೇದೋದ್ಭವೈರ್ಮಂತ್ರೈಃ ಪರಮಾತ್ಮಾನಂ ನಾರಾಯಣಮರ್ಚಯೇತ್' ಎನ್ನುವ ವಿಧಿಯಿದೆ. ಆಲಯನಿರ್ಮಾಣದಲ್ಲಿ ಭೂಮಿಕರ್ಷಣ (ಬೀಜಾವಾಪನ) ವಾದನಂತರ, ಇಷ್ಟಕಾಪ್ರಕ್ಷೇಪವಾಗುವಾಗ 'ಚತುರ್ವೇದಾದೀನಾವಾಹ್ಯ ಆದ್ಯೇಷ್ಟಕಾಸ್ಥಾಪನಂ' ಎನ್ನುವ ಮಾತುಬರುತ್ತದೆ. 'ಶಯನಂ ಕೃತ್ವಾ ಅಗ್ನಿಸ್ಥಾಪನೆ'ಯನ್ನು ಮಾಡುವಂತೆ 'ಆಲಯಂಕೃತ್ವಾ ಬಿಂಬ ಸ್ಥಾಪನಂ'; ಔಪಾಸನಾಗ್ನಿಯಿರುವಂತೆಯೇ 'ಧ್ರುವಾರ್ಚಾಬೇರ', ತ್ರೇಧಾಗ್ನಿಕಲ್ಪನವಿರುವಂತೆಯೇ 'ತ್ರೀಣಿ ಬೇರಾಣಿ', ಪಂಚಾಗ್ನಿಯಿರುವಂತೆಯೇ ಪಂಚ ಬೇರಗಳು —

ಯಥಾ ಕರ್ಮಣಿ ಏಕಸ್ಯ ಕಲ್ಪಿತಾಃ ಪಂಚವಹ್ನಯಃ ।
ತಥಾ ಚೈಕವಿಮಾನಸ್ಯ ಪಂಚಬೇರಾಣಿ ಕಲ್ಪಯೇತ್ ॥

ಆದರೆ ಈ ಸಂಪ್ರದಾಯದ ತಾಂತ್ರಿಕ ನೆಲೆಯನ್ನು ಹುಡುಕಲು ಕಷ್ಟಪಡಬೇಕಾಗಿಲ್ಲ. ಅದರಲ್ಲಿ ಬರುವ ಸಪ್ತವಿಧಾರ್ಚನೆಗಳು ಈ ನೆಲೆಯವೇ—ಮಂತ್ರಾಸನ, ಸ್ನಾನಾಸನ, ಅಲಂಕಾರಾಸನ, ಭೋಜ್ಯಾಸನ, ಯಾತ್ರಾಸನ, ಶಯನಾಸನಗಳೇ ಮೊದಲಾದ ಮೂವತ್ತೆರಡು ಉಪಚಾರಗಳನ್ನೊಳಗೊಂಡ ನಿತ್ಯಾರ್ಚನೆ; ಅಮಾವಾಸ್ಯೆ, ಪೂರ್ಣಿಮೆ, ದ್ವಾದಶಿ ಮೊದಲಾದ ವಿಷ್ಣುಪಂಚದಿನಗಳಲ್ಲಿ ಮಧ್ಯಾಹ್ನಕಾಲದಲ್ಲಿ ನಡೆಯುವ ನೈಮಿತ್ತಿಕಾರ್ಚನೆ; ಅಂಕುರಾರ್ಪಣವೇ ಮೊದಲಾದ ವಿಶೇಷಾರ್ಚನೆ, ಲೌಕಿಕಾಗ್ನಿಯಲ್ಲಿ ಅಷ್ಟೋತ್ತರ ಶತಹೋಮ ಮೊದಲಾದ ವಿಧಿಗಳನ್ನೊಳಗೊಂಡ ಶಾಂತಿಕಾರ್ಚನೆ, ಪೌಷ್ಟಿಕಾರ್ಚನೆ, ಕಾಮ್ಯಾರ್ಚನೆಗಳು; ಪುಷ್ಪನ್ಯಾಸ, ಹೋಮ, ಪರಿವಾರಾರ್ಚನೆ, ಬಲಿಗಳಿಲ್ಲದೆ ಅಷ್ಟೋಪಚಾರಗಳಿಂದ ಮಾತ್ರ ಕೂಡಿದ ಅಧಿಕಾರ್ಚನೆ ಅಥವಾ ಉಪಸಂಧ್ಯಾರ್ಚನೆ. ಈ ಸಂಪ್ರದಾಯದವರು ಹೆಚ್ಚಾಗಿ ಬಳಸುವ ಷಾಡ್ಗುಣ್ಯಯಂತ್ರ (ಜ್ಞಾನ—ಶಕ್ತಿ—ಬಲ—ಐಶ್ವರ್ಯ—ವೀರ್ಯ—ತೇಜಾಂಸಿ ಷಡ್ಗುಣಾಃ) ಸಂಪ್ರದಾಯದ ಪ್ರಾಚೀನತೆಯನ್ನು ಸೂಚಿಸುತ್ತದೆ. "ಮಾನಸೀ ಹೋಮಪೂಜಾ ಚ ಬೇರಪೂಜೇತಿ ಸಾ ತ್ರಿಧಾ' ಎಂದು ಒಪ್ಪಿದರೂ ಕಣ್ಣಿಗೂ ಮನಸ್ಸಿಗೂ ಹೃದಯಕ್ಕೂ ಪ್ರೀತಿಯನ್ನುಂಟು ಮಾಡುವ 'ಬೇರಪೂಜಾ ವಿಶಿಷ್ಯತೇ' ಎಂದು ಅವರ ವಾದ.

ಶಾಕ್ತಾಗಮಗಳು ದಿಟವಾಗಿ ತಂತ್ರಗಳೇ. ಕ್ರಮಿಕಾಗಮದಲ್ಲಿ ತಂತ್ರಕ್ಕೆ

ತನೋತಿ ವಿಪುಲಾನರ್ಥಾನ್ ತಂತ್ರಮಂತ್ರಸಮನ್ವಿತಾನ್ ।
ತ್ರಾಣಂ ಚ ಕುರುತೇ ಯಸ್ಮಾತ್ ತಂತ್ರಮಿತ್ಯಭಿಧೀಯತೇ ॥

ಎನ್ನುವ ಅರ್ಥವನ್ನು ಹೇಳಿದೆ. ವಿಸ್ತಾರವಾದ ಅರ್ಥ ಇಲ್ಲಿನ ತಾತ್ಪರ್ಯ; ತಂತ್ರಮಂತ್ರಗಳಿಂದ ಒದಗುವ ತ್ರಾಣ ಉದ್ದೇಶ. ಯಾವುದರಿಂದ ಜ್ಞಾನ ವಿಸ್ತಾರವಾಗುವುದೋ ಅದು ತಂತ್ರ (ತನ್ಯತೇ ವಿಸ್ತಾರ್ಯತೇ ಜ್ಞಾನಮನೇನ ಇತಿ) ಎಂದೂ ವಿವರಣೆಯಿದೆ. ಈ ತಂತ್ರ ವಾಙ್ಮಯದ ವಿಸ್ತಾರವನ್ನು ನಿರ್ಧರಿಸುವುದು

ಸುಲಭವಲ್ಲ. ಶಾಕ್ತಾಗಮಗಳಲ್ಲೇನೋ ಕ್ರಮವಾಗಿ ತಂತ್ರ, ಉಪತಂತ್ರ, ಸಂಹಿತೆ, ಚೂಡಾಮಣಿ, ಅರ್ಣವ, ಡಾಮರ, ಸೂಕ್ತಿ, ಪುರಾಣ, ಉಪವೇದ, ಕಕ್ಷಪುಟಿ, ವಿಮರ್ಶಿಣಿ, ಕಲ್ಪಾಷ್ಟಕ, ಕಲ್ಪಲತಾ, ರಾವ ಮತ್ತು ಚಿಂತಾ ಮಣಿ ಎನ್ನುವ ಅಂಗಗಳನ್ನು ನಿರ್ದೇಶಿಸುತ್ತಾರೆ. ಇವುಗಳಲ್ಲೆಲ್ಲ ಶಕ್ತಿಯೇ ಪ್ರಧಾನ, ಅದರಲ್ಲಿಯೂ ಕಾಳಿಯೇ ಪ್ರಧಾನ (ಶಕ್ತೇಃ ಪ್ರಾಧಾನ್ಯಂ ಕಾಲ್ಯಾ ಚ ಸರ್ವದಾ ಪರಿಕೀರ್ತಿತಂ). ಶಾಕ್ತಸಾಧನೆಯಲ್ಲಿ ಪರಮಶಿವ, ದುರ್ವಾಸ, ಹಯಗ್ರೀವ, ಅಗಸ್ತ್ಯ ಇವರು ಆಚಾರ್ಯಪರಂಪರೆಗೆ ಸೇರಿದವರು. ಕುಲಾರ್ಣವತಂತ್ರ, ಪ್ರಯೋಗಸಾರ, ಭವಚೂಡಾಮಣಿ, ಮುಂಡಮಾಲಾತಂತ್ರ, ದಕ್ಷಿಣಾಸರ್ವಸ್ವ, ಕುಲಸದ್ಭಾವತಂತ್ರ, ಶಕ್ತಿಸಂಗಮತಂತ್ರ, ಕೌಲೋಪನಿಷತ್ತು, ಪ್ರಪಂಚಸಾರತಂತ್ರ, ಉಡ್ಡೀಶತಂತ್ರ, ರುದ್ರಯಾಮಳ, ಪಿಂಗಳಾಮತ, ಶಾರದತಿಲಕ, ರಹಸ್ಯಾಮ್ನಾಯ, ಆದಿನಾಥ ಸಂಹಿತೆ, ಸಿದ್ಧೇಶ್ವರತಂತ್ರ, ವಿಜಯತಂತ್ರ, ದುರ್ಗಾಸಪ್ತಶತಿ, ನಿರ್ವಾಣತಂತ್ರ ಮೊದಲಾದುವು ಪ್ರಸಿದ್ಧವಾದ ಪ್ರಕರಣಗ್ರಂಥಗಳು. ಮಂತ್ರ-ಯಂತ್ರ ವಿಧಾನಗಳು, ಮಂತ್ರಯಂತ್ರೋದ್ಧಾರ, ಬಲಿದಾನ, ದೀಪದಾನ, ಆವಾಹನ, ಪೂಜನ, ವಿಸರ್ಜನ ಮೊದಲಾದುವನ್ನು ವಿವರಿಸುವ ಗ್ರಂಥಸಮುದಾಯ ಕಲ್ಪವೆನಿಸಿಕೊಳ್ಳುತ್ತದೆ. ಶಿವ–ಪಾರ್ವತಿಯರ ನಡುವೆ, ಅಥವಾ ಗುರು–ಶಿಷ್ಯರ ನಡುವೆ ನಡೆದ ಸಂವಾದ ರೂಪದಲ್ಲಿದ್ದು ಮಂತ್ರ, ಯಂತ್ರ ಮೊದಲಾದುವನ್ನು ತಿಳಿಯಪಡಿಸುವುದು 'ತಂತ್ರ'. ಯಾವುದಾದರೊಂದು ದೇವತೆಯನ್ನು ಆರಾಧಿಸುವ ಸಲುವಾಗಿ ಬಳಸುವ ಮಂತ್ರಗಳು, ಯಂತ್ರಗಳು, ವಿಧಿಗಳು ಇವನ್ನೂ ಕಾಮ್ಯ ಕರ್ಮಗಳನ್ನೂ ಹೇಳುವುದು 'ಪಟಲ'. ಹಲವಾರು ದೇವ–ದೇವಿಯರ ಸಾಧನಾ ಪ್ರಕಾರಗಳು ಅಡಗಿದ್ದರೆ 'ಪದ್ಧತಿ' ಯೆನಿಸಿಕೊಳ್ಳುತ್ತದೆ.

ಶೈವ--ಶಾಕ್ತ ಸಂಪ್ರದಾಯದ ಇತಿಹಾಸವನ್ನು ಪರಿಶೀಲಿಸಿದ ತಜ್ಞರು ವಾಙ್ಮಯವನ್ನು ಮೂರು ಹಂತಗಳಲ್ಲಿ ವಿಂಗಡಿಸಿದ್ದಾರೆ. ಮೊದಲನೆಯ ಹಂತದಲ್ಲಿ ಸದಾಶಿವನೇ ಉಪದೇಶಿಸಿದ ಹದಿನೆಂಟು ಶೈವಾ ಗಮಗಳು ಸೇರುತ್ತವೆ—ವಿಜಯ, ವಿಶ್ವಾಸ, ಸ್ವಾಯಂಭುವ, ವಾತುಲ, ವೀರಭದ್ರ, ರೌರವ, ಮಾಕುಟ, ವೀರೇಶ, ಚಂದ್ರಹಾಸ, ಜ್ಞಾನ, ಮುಖಬಿಂಬ, ಪ್ರೋದ್ಗೀತ, ಲೋಹಿತ, ಸಿದ್ಧ, ಸಂತಾನ, ಸರ್ವೋದ್ಗೀತ, ಕಿರಣ, ಪರಮೇಶ್ವರ. ಇವೆಲ್ಲವೂ ಕ್ರಿಸ್ತಾಬ್ದ ಆರನೆಯ ಶತಮಾನದಲ್ಲಿ ರಚಿತವಾದುವಂತೆ. ಮುಂದಿನ ಹಂತದಲ್ಲಿ ಎಂದರೆ, ಆರರಿಂದ ಒಂಬತ್ತನೆಯ ಶತಮಾನದವರೆಗೆ, ಭೈರವನು ಹೇಳಿದಂತೆ ಹತ್ತು ಯಾಮಳಗಳು ಸಿದ್ಧವಾದುವು—ರುದ್ರಯಾಮಳ, ಕಂದ (ಸ್ಕಂದ) ಯಾಮಳ, ಬ್ರಹ್ಮಯಾಮಳ, ವಿಷ್ಣುಯಾಮಳ, ಯಮ ಯಾಮಳ, ವಾಯುಯಾಮಳ, ಕುಬೇರಯಾಮಳ, ಇಂದ್ರಯಾಮಳ, ಪಿಂಗಳಾಯಾಮಳ ಮತ್ತು ಜಯದ್ರಥ ಯಾಮಳ. ಯಾಮಳಗಳು ಎಂಟೇ ಎಂದೂ, ಮೇಲಿನ ಪಟ್ಟಿಯಲ್ಲಿ ಕಡೆಯ ಎರಡು ಬ್ರಹ್ಮಯಾಮಳದ ಪರಿಶಿಷ್ಟಗಳೆಂದೂ ಹೇಳಿ ಅವನ್ನು ಪಿಂಗಾಳಾಮತ, ಜಯದ್ರಥಮತ ಎಂದು ಕರೆಯುವುದೂ ಉಂಟು. ಪಿಂಗಳಾಮತದಲ್ಲಿ ಕಾಮರೂಪೀತಂತ್ರಗಳು (ಕಾಮರೂಪದಲ್ಲಿ ಬಳಕೆಯಲ್ಲಿದ್ದುವು) ಮತ್ತು ಉಡ್ಡಿಯಾನ ತಂತ್ರಗಳು (ಉಡ್ಡಿಯಾನ ಪ್ರದೇಶದಲ್ಲಿ ಬಳಕೆಯಲ್ಲಿದ್ದುವು) ಎನ್ನುವ ಎರಡು ವಿಭಾಗಗಳಿವೆ. ಜಯದ್ರಥ ಯಾಮಳದಲ್ಲಿ ಹಲವಾರು ಶಕ್ತಿಯರ ಆರಾಧನಾ ವಿವರಗಳಿವೆ. ಮೂರನೆಯ ಹಂತದಲ್ಲಿ ಬೌದ್ಧತಂತ್ರಗಳೇ, ಅದರಲ್ಲಿಯೂ ವಜ್ರಯಾನದ ಪ್ರಭಾವವನ್ನು ತಳೆದು ಹಲವಾರು ತಂತ್ರಗಳು ಮೈದಳೆದವು. ಹತ್ತು–ಹನ್ನೊಂದನೆಯ ಶತಮಾನಗಳಲ್ಲಿ ಸಿದ್ಧವಾದುವು ಇವು. ಸಮ್ಮೋಹತಂತ್ರದಲ್ಲಿ ಇಡೀ ದೇಶವು ಕೇರಳ, ಕಾಶ್ಮೀರ, ಗೌಡ, ವಿಲಾಸಗಳೆಂಬ ನಾಲ್ಕು ತಾಂತ್ರಿಕ ವಿಭಾಗದಿಂದ ಕೂಡಿರುವುದಾಗಿ ಪ್ರಸ್ತಾಪವಿದೆ. ಅಂಗದಿಂದ ಮಾಳವದವರೆಗೆ ಕೇರಳಸಂಪ್ರದಾಯ; ಮದ್ರದಿಂದ ನೇಪಾಲದವರೆಗೆ ಕಾಶ್ಮೀರಸಂಪ್ರದಾಯ; ಶಿರಹಟ್ಟಿದಿಂದ ಸಿಂಧುವಿನವರೆಗೆ ಗೌಡಸಂಪ್ರದಾಯ; ದೇಶದ ಎಲ್ಲ ಭಾಗಗಳಲ್ಲಿ ಬಳಕೆಯಲ್ಲಿರುವುದು ವಿಲಾಸಸಂಪ್ರದಾಯ.

ನಮ್ಮ ದೇಶ ಮಾತ್ರವಲ್ಲದೆ ಮಹಾಚೀನ (ಚೈನಾ), ಬಾಹ್ಲಿಕ (ಬ್ಯಾಕ್ಟ್ರಿಯ), ಕಿರಾತ (ಹಿಮಾಲಯ), ಭೋಟ (ಟಿಬೆಟ್), ಪಾರಸಿಕ (ಪರ್ಶಿಯ), ಐರಾಕ (ಇರಾಕ್), ಯವನ, ಹೂಣ, ಗಂಧಾರ (ಆಫ್ಘನಿಸ್ಥಾನ) ಮೊದಲಾದ ನೆರೆರಾಜ್ಯಗಳಲ್ಲಿಯೂ ತಾಂತ್ರಿಕ ಸಂಪ್ರದಾಯಗಳಿದ್ದುದು ಈ ತಂತ್ರದಿಂದಲೇ ತಿಳಿದುಬರುತ್ತದೆ.

ಅಂತರ್ಯಾಗ

ಹೀಗೆ ಆಗಮ ವಾಙ್ಮಯ ವಿಪುಲವಾಗಿ ವಿಭಿನ್ನವಾಗಿ ಬೆಳೆದಿದ್ದರೂ ಮೂಲಭೂತವಾದ ಸಾಧನ ಸರಳವಾಗಿಯೇ ಉಳಿಯಿತು. ಎಲ್ಲ ಆಗಮಗಳಲ್ಲಿಯೂ ಪೂಜ್ಯ–ಪೂಜಕರ ಏಕತಾನತೆ ಮುಖ್ಯವಾದ ವಿವರ. ದೇವಾಲಯವು ದಿಟವಾಗಿ ದೇಹವೇ; ದೇಹದಲ್ಲಿರುವ ಜೀವವೇ ಪರಮಾತ್ಮ. ಎರಡೂ ಬೇರೆಬೇರೆಯೆಂಬ ಭಾವನೆಯೇ ನಿರ್ಮಾಲ್ಯ; ನಾನೇ ಅವನು ಎಂದು ಪೂಜಿಸಬೇಕು —

ದೇಹೋ ದೇವಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ ।
ತ್ಯಜೇದಜ್ಞಾನ ನಿರ್ಮಾಲ್ಯಂ ಸೋಽಹಂ ಭಾವೇನ ಪೂಜಯೇತ್ ॥

ದೇಹವನ್ನು ದೇವಾಲಯಕ್ಕೆ ಹೋಲಿಸುವುದೂ ಉಂಟು. ಗುಡಿಯ ಶಿಖರವೇ ಮನುಷ್ಯನ ತಲೆ; ಗರ್ಭಗುಡಿ ಕತ್ತು; ಮುಖಮಂಡಪ ಹೊಟ್ಟೆ; ತೊಡೆಗಳು ಪ್ರಾಕಾರ; ಕಾಲುಗಳು ಗೋಪುರ; ಧ್ವಜಸ್ತಂಭವೇ ಬದುಕು —

ಶಿಖರಂ ಶಿರ ಇತ್ಯಾಹುಃ ಗರ್ಭಗೇಹಂ ಗಳಂ ತಥಾ ।
ಮಂಡಪಂ ಕುಕ್ಷಿಮಿತ್ಯಾಹುಃ ಪ್ರಾಕಾರಂ ಜಾನುಜಂಘಕೌ ।
ಗೋಪುರಂ ಪಾದಮಿತ್ಯಾಹುಃ ಧ್ವಜಂ ಜೀವನಮುಚ್ಯತೇ ॥

ಇದು ಶೈವಾಗಮಗಳ ವಿವರವಾದರೆ, ವೈಖಾನಸರು ದೇವರ ದೇಹವೇ ದೇವಾಲಯವೆನ್ನುವರು —

ವಿಮಾನಂ ಗೋಪುರಂ ಚೈವ ಪ್ರತಿಮಾಪೀಠಮೇವ ತು ।
ಶರೀರಮೇವ ದೇವಸ್ಯ ಸ್ಮೃತಮೇತಚ್ಚತುಷ್ಟಯಂ ॥

ಇದರ ಹಿನ್ನೆಲೆ ಸ್ವಾರಸ್ಯವಾದುದು. ವೈದಿಕಸಂಸ್ಕೃತಿಯಲ್ಲಿ ಮುಖ್ಯವಾದುದು ಯಾಗ; ದ್ರಾವಿಡ–ತಾಂತ್ರಿಕ ಸಂಸ್ಕೃತಿಯಲ್ಲಿ ಮುಖ್ಯವಾದುದು ಪೂಜೆ. ಎರಡರ ವಿಧಿಗಳೂ, ಮನೋವೃತ್ತಿಗಳೂ ಅತ್ಯಂತ ವಿಭಿನ್ನವಾದುವು. ಅಷ್ಟಲ್ಲದೆ, ಯಾಗವೆನ್ನುವುದು ಜಾನಪದಕ್ರಿಯೆ, ಸಮಷ್ಟಿ ವ್ಯಾಪಾರ; ಪೂಜೆ ವೈಯಕ್ತಿಕವಾದುದು, ಏಕಾಂತದಲ್ಲಿ ನಡೆಯುವಂಥದು. ಜಾನಪದದಲ್ಲಿ ಯಾಗದ ಕಲ್ಪನೆಗೆ ಪ್ರಾಶಸ್ತ್ಯವಿದ್ದಂತೆ ಪ್ರತಿ ವ್ಯಕ್ತಿಯ ನಿತ್ಯಜೀವನದಲ್ಲಿ ಪೂಜೆಗೆ ಮಹತ್ತ್ವ. ಎರಡೂ ಸಂಸ್ಕೃತಿಗಳು ಬೆರೆತಾಗ, ಯಾಗ–ಪೂಜೆಗಳ ಸಮನ್ವಯವೂ ಆಗಬೇಕಾಯಿತು. ಈ ಸಮನ್ವಯದ ಫಲ ಅಂತರ್ಯಾಗ. ಇದು ಶೈವ ವೈಷ್ಣವ ಶಾಕ್ತ ಸಂಪ್ರದಾಯಗಳಿಗೆಲ್ಲ ಸಾಧಾರಣವಾದ ವಿವರ; ಎಲ್ಲ ಆಗಮಗಳಲ್ಲಿಯೂ ಇದರ ಪ್ರಸ್ತಾಪವಿದೆ. ವೈದಿಕ ನೆಲೆಯಲ್ಲಿ ಮೂಡಿಬಂದ ಆಗಮಗಳು ಯಾಗಗಳನ್ನು ಅಂತರ್ಯಾಗ, ಬಹಿರ್ಯಾಗಗಳೆಂದು ಎರಡು ಬಗೆಗಳಲ್ಲಿ ವಿಂಗಡಿಸಿದುವು. ಬಹಿರ್ಯಾಗವೆಂದರೆ ಬಾಹ್ಯಪೂಜೆ; ದೇವಾಲಯದಲ್ಲಿ ಅಥವಾ ಮನೆಯ ದೇವರ ಕೋಣೆಯಲ್ಲಿ ಪ್ರತಿಮೆಯನ್ನಿಟ್ಟು, ಅದರ ಅರ್ಚನೆಗೆಂದು ಪೂಜೋಪಕರಣಗಳನ್ನೆಲ್ಲ ಅಣಿಮಾಡಿಕೊಂಡು, ಮಂತ್ರಗಳನ್ನು ಬಳಸಿ, ವಿವಿಧೋಪಚಾರಗಳಿಂದ ಪೂಜೆಮಾಡುವುದು. ಹೊರಗೆ ಕಾಣುವಂಥ ಈ ಪೂಜೆಯಿಂದ ಪ್ರಯೋಜನವೇನೆಂದರೆ—ಹೊರಗಣ ವಿಷಯಗಳಿಂದ ಹುಟ್ಟಿದ ವಾಸನೆಗಳು ನಾಶವಾಗುತ್ತವೆ (ಲಕ್ಷ್ಮೀತಂತ್ರ 37, 1). ಆದರೆ ಬಾಹ್ಯಯಾಗ ಸಫಲವಾಗಬೇಕಾದರೆ ಅಂತರ್ಯಾಗವಿರಲೇಬೇಕು ('ಅಂತರ್ಯಾಗಂ ವಿನಾ

ಯಸ್ಯ ಬಾಹ್ಯಪೂಜಾ ನ ಸಿದ್ಧ್ಯತಿ । ವೃಥಾ ಪರಿಶ್ರಮಸ್ತಸ್ಯ......'). ಅಷ್ಟು ಮಾತ್ರವಲ್ಲ, ಅಂತರ್ಯಾಗವಿಲ್ಲದ ಪೂಜೆ ಅವೈದಿಕವೆಂದೂ ಹೇಳಿದೆ; 'ಅಂತರ್ಯಾಗವಿಹೀನಾ ಯಾ ಸಾ ಪೂಜಾಽವೈದಿಕೀ ಸ್ಮೃತಾ' ಎಂಬುದು ಸೂತಸಂಹಿತೆಯ ಮಾತು.

ಅಂತರ್ಯಾಗವನ್ನು ಮಾನಸಪೂಜೆ, ಮಾನಸಯಾಗ ಎಂದೂ ಕರೆಯುತ್ತಾರೆ. ಹೊರಗೆ ಮಾಡುವ ಪೂಜೆಯನ್ನು ತನ್ನೊಳಗೆ ಮಾಡಿಕೊಳ್ಳುವುದು ಇದರ ಮುಖ್ಯಲಕ್ಷಣ. ಹೃದಯಾಂತಃಪೀಠಸ್ಥನಾದ ಭಗವಂತನನ್ನು ಮನಸ್ಸಿನಲ್ಲಿಯೇ ಮಾಡಿಕೊಂಡು ಅರ್ಘ್ಯಾದಿ ಭೋಗಗಳಿಂದ ಪೂಜಿಸುವುದು —

ಬ್ರಹ್ಮಾನಂದಮಯೈ ಶಕ್ರ ಭೋಗ್ಯೈರ್ಯತ್ಪಾರಮಾರ್ಥಿಕೈಃ ।
ಇಜ್ಯೇಯಂ ಹೃದಯಾಂತಃಸ್ಥಾ ಸೋಽಂತರ್ಯಾಗ ಇತಿ ಸ್ಮೃತಃ ॥

ಈ ಅಂತರ್ಯಾಗದಲ್ಲಿ 'ಸೋಽಹಂಭಾವ' ಮುಖ್ಯವಾದುದೆಂಬ ಮಾತು ಆಗಲೇ ಬಂದಿತಷ್ಟೆ. ಪೂಜೆಮಾಡುವಾಗ ಪೂಜಕನು ತಾನೇ ಪೂಜ್ಯವಸ್ತುವಾಗಬೇಕು—

ದೇವೀ ಭೂತ್ವಾ ಯಜೇದ್ದೇವೀಂ
ಶಿವೋ ಭೂತ್ವಾ ಶಿವಂ ಯಜೇತ್
ನಾಽಶಿವಃ ಶಿವಮರ್ಚಯೇತ್

ಶಿವನಲ್ಲದವನು ಶಿವನನ್ನು ಪೂಜಿಸಬಾರದು; ಶಿವನಾಗಿಯೇ ಶಿವನನ್ನು ಪೂಜಿಸಬೇಕು. ಮಣ್ಣಿನ ಗೂಡಿನೊಳಗಿರುವ ಕೀಟವು ಎಡಬಿಡದೆ ಭೃಂಗವನ್ನೇ ಧ್ಯಾನಮಾಡುವುದರಿಂದ ಭೃಂಗವಾಗುವಂತೆಯೇ ತನ್ನ ಉಪಾಸ್ಯದೇವತೆಯನ್ನು ಅನವರತವೂ ಧ್ಯಾನಮಾಡುವುದರಿಂದ ಸ್ವೋಪಾಸ್ಯದೇವತಾಭಾವವು ಸಿದ್ಧಿಸುವುದು ಭಕ್ತನ ಹೃದಯಪದ್ಮವೇ ದೇವರ ಮಂದಿರವೆಂದು ನಂಬಿಕೆ. ತಾನು ಬೇರೆ, ಶಿವ ಬೇರೆ ಎಂದು ಬಗೆಯುವುದು ಪ್ರಾಕೃತಭಾವ; ಇದನ್ನು ಬಿಟ್ಟು ಹೃದಯದಲ್ಲಿಯೇ ಯಾಗಮಾಡಬೇಕು. ನಾಭಿಯಲ್ಲಿ ಹೋಮಮಾಡಿ ಹುಬ್ಬುಗಳ ನಡುವೆ ಸರ್ವಗತನಾದ ಈಶ್ವರನನ್ನು ಧ್ಯಾನಮಾಡುತ್ತಾ ಪೂಜಿಸಬೇಕೆಂದು ಶೈವಾಗಮ ಹೇಳುತ್ತದೆ (ಉತ್ಸೃಜ್ಯ ಪ್ರಾಕೃತಂ ಭಾವಂ ಶಿವೋಽಹಮಿತಿ ಭಾವಯೇತ್......). ವೈಷ್ಣವ ಸಂಪ್ರದಾಯದಲ್ಲಿಯೂ ತಾನೇ ವಿಷ್ಣು ಎಂದು ಬಗೆಯಬೇಕೆಂದು ನಿರ್ದೇಶನವಿದೆ (ಆತ್ಮಾನಂ ಸವಿಗ್ರಹಂ ವಿಷ್ಣುರೂಪಿಣಂ ಧ್ಯಾಯೇತ್ ಎಂದು ಜಯಾಖ್ಯ ಸಂಹಿತೆ) —

ಅಹಂ ಸ ಭಗವಾನ್ ವಿಷ್ಣುರಹಂ ನಾರಾಯಣೋ ಹರಿಃ ।
ವಾಸುದೇವೋಽಪ್ಯಹಂ ವಾಪಿ ಭೂತಾವಾಸೋ ನಿರಂಜನಃ ॥

'ಇತಿ ಪರಮಪುರುಷಂ ಧ್ಯಾತ್ವಾ ಮಾನಸಯಾಗಮಾರಭೇತ', ಇದು 'ಅಹಾಂಗ್ರಹೋಪಾಸನೆ' ಅಥವಾ 'ಆಭ್ಯಂತರೋಪಾಸನೆ'ಯೆನಿಸಿಕೊಳ್ಳುತ್ತದೆ. ಬಾಹ್ಯಯಾಗದಲ್ಲಿ ಬರುವುದು 'ಪ್ರತೀಕೋಪಾಸನೆ'. ಸಾಧಕನೇ ದೇವತಾಸ್ವರೂಪವನ್ನು ಪಡೆಯುವುದು ಶಾಕ್ತಸಂಪ್ರದಾಯದಲ್ಲಿಯೂ ಉಂಟು (ತ್ವಂ ವಾ ಅಹಮಸ್ಮಿ ಭಗವತಿ ದೇವತೇ ಅಹಂ ವೈ ತ್ವಮಸಿ). ಮೊದಲಲ್ಲಿ 'ದೇವಿ, ನಾನು ನಿನ್ನ ದಾಸ' ಎನ್ನುವ ದ್ವೈತಭಾವನೆ; ಅನಂತರ 'ನಾನೇ ಅದು' ಎನ್ನುವ ವಿಶಿಷ್ಟಾದ್ವೈತಭಾವನೆ; ಅದರ ಅನಂತರ 'ನಾನೇ, ಬೇರೆ ಅಲ್ಲ' ಎನ್ನುವ ಅದ್ವೈತ ಭಾವನೆ; ಈ ಬೆಳವಣಿಗೆ ಹೆಚ್ಚಿನ ಅಭ್ಯಾಸದಿಂದಲೂ, ಗುರುಕಾರುಣ್ಯದಿಂದಲೂ, ದೇವಿಯ ಅನುಗ್ರಹದಿಂದಲೂ ಒದಗುವುದು —

ದಾಸೋಽಹಂ ತವ ಮಾತರಿತ್ಯಗಸುತೇ ದ್ವೈತಾತ್ಮಿಕಾಸೀನ್ಮತಿಃ ।
ಪಶ್ಚಾತ್ ಸೋಽಹಮಿತಿ ಪ್ರಬುದ್ಧಿರುದಿತ್ವಾದ್ವೈತಾ ವಿಶಿಷ್ಟಾ, ಚ ಯಾ ॥
ತತ್ಪಶ್ಚಾದಹಮೇವ ನಾನ್ಯದಿತಿ ಧೀಃ ಅದ್ವೈತಲಕ್ಷ್ಯಾ ಹ್ಯಭೂತ್ ।
ಅಭ್ಯಾಸಾತಿಶಯಾಚ್ಚ ಸದ್ಗುರುಕೃಪಾಲೇಶಾಚ್ಚ ತೇಽನುಗ್ರಹಾತ್ ॥

ಇದು ಬರಿಯ ಚಮತ್ಕಾರದ ಮಾತು ಎನ್ನುವಂತಿಲ್ಲ. ದಿಟವಾಗಿ ಸಾಧನಾಕ್ರಮದಲ್ಲಿ ಅಡಗಿರುವ ವಿವರ ಇದು. ಬಾಹ್ಯಪೂಜೆಯಲ್ಲಿ ಮಾಡುವಂತೆಯೇ ಸ್ನಾನ, ಶುದ್ಧಿ, ಭೂತಶುದ್ಧಿ (ಪೂಜಕನ ಶರೀರದ ಶೋಧನೆ), ಮಂತ್ರನ್ಯಾಸ, ಹಸ್ತನ್ಯಾಸ, ದೇಹನ್ಯಾಸ, ಧ್ಯಾನಪ್ರಕಾರಗಳನ್ನೂ ಇಲ್ಲಿ ಮಾಡುತ್ತಾರೆ. ವೈಷ್ಣವ ಅಂತರ್ಯಾಗದ ಭೂತಶುದ್ಧಿಯಲ್ಲಿ ಶರೀರವೇ ಕ್ಷೀರಸಮುದ್ರವೆಂದು ಬಗೆದು ಅದರ ಮಧ್ಯದಲ್ಲಿ ಆಧಾರಮಯಿಯಾದ ವೈಷ್ಣವೀಶಕ್ತಿಯನ್ನು ವಿನ್ಯಾಸಮಾಡಿ, ಅದರ ಮೇಲ್ಭಾಗದಲ್ಲಿ ಕಮಲವನ್ನೂ ಅದರಲ್ಲಿ ನಾರಾಯಣನನ್ನೂ ಕಲ್ಪಿಸಿಕೊಳ್ಳುತ್ತಾರೆ. ಶರೀರದಲ್ಲಿ ಬ್ರಹ್ಮರಂಧ್ರದಿಂದ ಆತ್ಮನು ಪ್ರವಿಷ್ಟನಾದಂತೆ ಬಗೆದಾಗ ಪ್ರಾಕೃತಶರೀರ ವಿಲಯಗೊಳ್ಳುವುದೆಂದೂ, ಆಗ ಪೂಜಾಯೋಗ್ಯವಾದ ಅಮೃತಮಯವಾದ ಶರೀರ ಉತ್ಪನ್ನವಾಗುವುದೆಂದೂ ನಂಬಿಕೆ; ಇದೇ ಸಂಶುದ್ಧದೇಹವೆನಿಸಿಕೊಳ್ಳುತ್ತದೆ. ಪ್ರತಿಮೆಗಳಲ್ಲಿ ಮಾಡುವ ನ್ಯಾಸವನ್ನು ಶರೀರದಲ್ಲಿಯೇ ಮಾಡುವರು (ಯಥಾ ಬೇರೇ ತಥಾ ದೇಹೇ ನ್ಯಾಸಕರ್ಮ ಸಮಾಚರೇತ್).

ಸ್ವಾಗತಂ ತವ ದೇವೇಶ ಸಂನಿಧಿಂ ಭಜಮೇಽಚ್ಯುತ ।
ಗೃಹಾಣ ಮಾನಸೀಂ ಪೂಜಾಂ ಯಥಾರ್ಥಪರಿಭಾವಿತಾಂ ॥

ಎಂದು ಸುರಭಿಮುದ್ರೆಯಿಂದ ಪ್ರಾರ್ಥನೆಮಾಡಿ ದೇವರನ್ನು ಹೃದಯಕಮಲದಲ್ಲಿ ಎದುರ್ಗೊಂಡು ಅಭ್ಯಂಗ, ಉದ್ವರ್ತನ, ಸ್ನಾನ, ವಿಲೇಪನ, ವಸ್ತ್ರ, ಮಾಲ್ಯ, ಭೂಷಣ, ಛತ್ರಚಾಮರವ್ಯಜನ, ಧೂಪ, ದೀಪ, ನೈವೇದ್ಯಗಳನ್ನು ಸಮರ್ಪಿಸುತ್ತಾರೆ. ಧ್ಯಾನಮಾಡುವಾಗ "ಮನಸಾ ಪೀಠಂ ಕಲ್ಪಯಿತ್ವಾ... ಅವ್ಯಕ್ತ ಪದ್ಮಕರ್ಣಿಕೋಕಪರಿ ... ಅಂಗುಷ್ಠಪರಿಮಾಣಂ ಉದಾರಾಂಗಂ ಸರ್ವಲಕ್ಷಣಲಕ್ಷಿತಂ ... ಶುದ್ಧಸ್ಫಟಿಕಸಂಕಾಶಂ ... ಅತಿಸುಂದರಂ ... ವಾಸುದೇವಂ ಸ್ವಾಭಿಮುಖಂ ... ಶಾಂತಂ ಧ್ಯಾತ್ವಾ" ಎಂದು ವಿವರವಿದೆ. ಹೊಕ್ಕುಳಲ್ಲಿ ಬ್ರಹ್ಮಾಂಜಲಿಯನ್ನು ಜೋಡಿಸಿ, ಹೊರಗಣ ಇಂದ್ರಿಯಗಳನ್ನೆಲ್ಲ ಮನಸ್ಸಿನಲ್ಲಿ ಅಡಗಿಸಿ ಮನಸ್ಸನ್ನು ಬುದ್ಧಿಯಲ್ಲಿಯೂ, ಬುದ್ಧಿಯನ್ನು ಭಗವಂತನಲ್ಲಿಯೂ ಇರಿಸಿ ಜ್ಞಾನಭಾವನೆಯಿಂದ ಮಾನಸಪೂಜೆಯನ್ನು ಮಾಡುತ್ತಾರೆ. (ನಾಭೌ ಬ್ರಹ್ಮಾಂಜಲಿಂ ಬದ್ಧ್ವಾ ಬಾಹ್ಯೇಂದ್ರಿಯಸಮೂಹಂ ಮನಸ್ಯುಪರತಂ ಕೃತ್ವಾ ಮನಶ್ಚ ಬುದ್ಧೌ ನಿಕ್ಷಿಪ್ಯ ಬುದ್ಧಿಂ ಚ ಭಗವತಿ ನಿಕ್ಷಿಪ್ಯ......). ಶೈವಾಗಮಗಳ ಮಾನಸಯಾಗವೂ 'ನಾಭಿಚಕ್ರಂ ಸಮಾಶ್ರಿತ್ಯ' ಎಂದೇ ಆರಂಭವಾಗುತ್ತದೆ.

ಗರ್ಭಗುಡಿಯಲ್ಲಿ ದೇವತಾಪ್ರತಿಷ್ಠೆಮಾಡುವಾಗ, ದೇಹವೇ ದೇವಾಲಯವೆಂಬ ಕಲ್ಪನೆಯನ್ನು ಇನ್ನೂ ಸೂಕ್ಷ್ಮವಾಗಿ ಮುಂದರಿಸಿ ಅಂತರ್ಯಾಗದ ಅಗತ್ಯವನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಶರೀರದಲ್ಲಿ ಅಡಕವಾಗಿರುವ ಷಟ್ಚಕ್ರಗಳ ಕಲ್ಪನೆಯನ್ನು ಇಲ್ಲಿ ಬಳಸಿಕೊಂಡಿರುವುದು ಸ್ವಾರಸ್ಯವಾಗಿದೆ. ಕಣ್ಣಿಗೆ ಕಾಣುವ, ಪೂಜೆಗೊಳ್ಳುವ ಶ್ರೀವಿಗ್ರಹವೇ ಚಕ್ರಗಳಲ್ಲಿ ಮೇಲ್ಮಟ್ಟದ ಸಹಸ್ರಾರ; ವಿಗ್ರಹದ ಅಡಿಯಲ್ಲಿರುವ ಪದ್ಮಪೀಠ ಸೂಚಿಸುವುದು ಇದನ್ನೇ. ವಿಗ್ರಹವನ್ನು ಮೂಡಿಸುವುದು ನಪುಂಸಕಶಿಲೆಯಲ್ಲಿ; ವಿಗ್ರಹವನ್ನು ಪುರುಷಶಿಲೆಯಲ್ಲಿ ಮಾಡುವುದೇ ವಾಡಿಕೆ. ಗರ್ಭಗುಡಿಯ ನೆಲದ ಮಟ್ಟದಲ್ಲಿ ನಪುಂಸಕಶಿಲೆಯ ಪೀಠ ಅಡಗಿದ್ದು ಅದರ ಸುತ್ತ ಇಷ್ಟಕಾಚಯನವಾಗಿರುತ್ತದೆ. ಅದರಡಿಯಲ್ಲಿ ತಾಮ್ರದ ಕೊಳವೆಯೊಂದಿದ್ದು ಯೋಗನಾಳಿ

ಯೆನಿಸಿಕೊಳ್ಳುತ್ತದೆ. ಇದು ಸುಷುಮ್ನಾನಾಡಿಯನ್ನು ಪ್ರತಿನಿಧಿಸುತ್ತದೆ. ಯೋಗವೆಂದರೆ ಎರಡನ್ನು ಕೂಡಿಸುವುದಲ್ಲವೆ? ಗರ್ಭಗುಡಿಯ ನೆಲೆಯ ನಪುಂಸಕಶಿಲೆಯ ಮಟ್ಟವನ್ನೂ ಗುಡಿಯ ನೆಲಮಟ್ಟದ ಕೆಳಗಿರುವ ಭಾಗಗಳನ್ನು ಕೂಡಿಸುವುದೇ ಯೋಗನಾಳಿ. ಭೂಮಟ್ಟದ ಕೆಳಗೆ ಆಧಾರಶಿಲೆ (ಮೂಲಾಧಾರ), ಅದರ ಮೇಲೆ ನಿಧಿಕುಂಭ (ಸ್ವಾಧಿಷ್ಠಾನ), ಅದರ ಮೇಲೆ ಶಿಲಾಪದ್ಮ (ಮಣಿಪೂರ), ಅದರ ಮೇಲೆ ಶಿಲಾಕೂರ್ಮ (ಅನಾಹತ), ಅದರ ಮೇಲೆ ರಜತಪದ್ಮ—ರಜತಕೂರ್ಮಗಳನ್ನೊಳಗೊಂಡ ಭಾಗ (ವಿಶುದ್ಧ), ಅದರ ಮೇಲೆ ಸ್ವರ್ಣಪದ್ಮ-ಸ್ವರ್ಣಕೂರ್ಮಗಳನ್ನೊಳಗೊಂಡ ಭಾಗ (ಆಜ್ಞಾ) ಇಷ್ಟಿರುತ್ತವೆ. ಕಡೆಗೆ ಹೇಳಿದ ಭಾಗದಿಂದಲೇ ಯೋಗನಾಳಿ ಆರಂಭವಾಗುವುದು. ಮೂರ್ತಿಪ್ರತಿಷ್ಠೆಯ ಸ್ವಾರಸ್ಯ ಹೀಗಿದೆ.

ಅಂತೂ ಆಗಮಗಳು ಮೈದಳೆದು ದೇವತಾಪೂಜೆಯ ಭೌತಿಕ, ಸಾಮಾಜಿಕ, ಆಧ್ಯಾತ್ಮಿಕ ವಿವರಗಳನ್ನೆಲ್ಲ ಸ್ಪಷ್ಟಪಡಿಸಿದುವು. ಪ್ರಪಂಚದ ಬೇರಾವ ದೇಶದಲ್ಲಿಯೂ ಪೂಜೆ ಹೀಗೆ ಶಾಸ್ತ್ರವಾಗಿ, ಕಲೆಯಾಗಿ ಬೆಳೆಯಲಿಲ್ಲ. ಅದು ನಮ್ಮ ದೇಶದ ವೈಶಿಷ್ಟ್ಯ.



ಅನುಬಂಧಗಳು

ಆದಿವಾಸಿಗಳ ಆಲಂಬನೆ

ಮನುಷ್ಯನಿಗೆ ಆತಂಕ ಪರಿಸ್ಥಿತಿಯಿದ್ದಾಗ, ಸಂದರ್ಭ ಅವನ ಅರಿವಿಗೆ ಮೀರಿದ್ದಾಗ ಅವನ ವರ್ತನೆಯನ್ನು ನಿರ್ಧರಿಸುವುದು ಧಾರ್ಮಿಕ ಪ್ರವೃತ್ತಿ. ಈಗಿನ ಸಾಂಸ್ಕೃತಿಕ ಪರಿಹಾರಗಳೂ ಒತ್ತಾಸೆಗಳೂ ತಿಳಿವಳಿಕೆಗಳೂ ಇಲ್ಲದಿದ್ದ ಪ್ರಾಚೀನ ಕಾಲದಲ್ಲಂತೂ ಯಾವೊಂದು ಆಶ್ಚರ್ಯಕರವಾದ ಅಥವಾ ಅರ್ಥವಾಗದ ಪ್ರಸಂಗ ಒದಗಿದಾಗಲೂ ಅತೀಂದ್ರಿಯ ಶಕ್ತಿಗಳ ನೆರವನ್ನು ಮನುಷ್ಯ ಬಯಸುತ್ತಿದ್ದುದು ಸಹಜವೇ. ಆಹಾರಕ್ಕೆಂದು ಆದಿವಾಸಿಯು ಹೊರಟಾಗ ಅವನ ಬೇಟೆಗೆ ಪ್ರಾಣಿಗಳು ದೊರೆಯುವುವೆಂದು ಅವನಿಗೆ ನಂಬಿಕೆಯಿಲ್ಲ ಎಷ್ಟು ದೂರ ಅಲೆಯಬೇಕೋ ತಿಳಿಯದು. ರೋಗರುಜಿನಗಳು ಬಂದಾಗ ಏಕೆ ಹೀಗಾಯಿತೆಂದು ಅವನಿಗೆ ತಿಳಿಯದು, ಅದನ್ನು ಹೋಗಲಾಡಿಸುವುದು ಹೇಗೆಂದೂ ತಿಳಿಯದು. ಕಾರ್ಮೋಡ ಕವಿದು ಗುಡುಗು, ಸಿಡಿಲು ಆರ್ಭಟಿಸಿ, ಮಿಂಚು ಕಣ್ಣನ್ನು ಕೋರೈಸಿದಾಗ ಅವನು ಗಡಗಡ ನಡುಗುತ್ತ ನಿಂತಾಗ ಅವನಿಗೆ ನೆರವಾಗ ಬಲ್ಲದು ಯಾವುದು? ಅದರ ಅರ್ಥವೇನು? ಸಾವೆಂದರೆ ಏನು? ಸತ್ತ ಮನುಷ್ಯ ಏನಾಗುತ್ತಾನೆ? ಇಂಥ ಸಮಸ್ಯೆಗಳು ಮನುಷ್ಯನನ್ನು ಕಾಡಿದಾಗ ಈ ಸಮಸ್ಯೆಗಳಿಗೆ ಪರಿಹಾರವನ್ನು ಅವನು ತನ್ನ ಬುದ್ಧಿಶಕ್ತಿಯಿಂದಲೇ ಕಂಡುಹಿಡಿಯಬೇಕಾಯಿತು. ಅವನಿಗೆ ಮೊದಲು ಅನಿಸಿದ್ದು ಹೀಗೆ—ಅಲೌಕಿಕವಾದ ಶಕ್ತಿಗಳು ನಮ್ಮ ಸುತ್ತಲೂ ಹರಡಿದ್ದು, ಅಡಗಿದ್ದು, ನಮಗೆ ಅನುಕೂಲವಾಗಿ ಅಥವಾ ಪ್ರತಿಕೂಲವಾಗಿ ಕೆಲಸಮಾಡಬಲ್ಲವು; ಪ್ರಕೃತಿಯಲ್ಲಿ ನಡೆಯುವ ವಿದ್ಯಮಾನಗಳಿಗೆಲ್ಲ ಪರಸ್ಪರ ಸಂಬಂಧವನ್ನು ಕಾರ್ಯಕಾರಣಭಾವವನ್ನು ಈ

ಶಕ್ತಿಗಳೇ ಒದಗಿಸುತ್ತವೆ. ಈ ಕಲ್ಪನೆ ಮನುಷ್ಯನಲ್ಲಿ ಮೂಡಿಬಂದಾಗಲೇ ಅಂಥ ಶಕ್ತಿಗಳನ್ನು ಒಲಿಸಿಕೊಂಡ ತನಗೆ ಅನುಕೂಲವಾಗುವಂತೆ ಮಾಡಿಕೊಳ್ಳಬಹುದೆಂಬ ಉಪಾಯವೂ ಅವನಿಗೆ ಹೊಳೆಯಿತು. ಇದೇ ಧಾರ್ಮಿಕ ಕಲ್ಪ (ವಿಧಿ) ಆಗಿ ಪರಿಣಮಿಸಿತು. ಪ್ರಾಚೀನ ಶಿಲಾಯುಗದ ಆದಿ ಭಾಗದಲ್ಲಿಯೇ, ಎಂದರೆ 350,000 ವರ್ಷಗಳ ಹಿಂದೆಯೇ, ಮನುಷ್ಯನಲ್ಲೇ ಈ ಧಾರ್ಮಿಕ ಪ್ರವೃತ್ತಿ ಬೆಳೆಯಿತು. ಪಿಕಿಂಗ್ ಮನುಷ್ಯನ ತಲೆಯೋಡೆಗಳೂ 250000 ವರ್ಷಗಳಷ್ಟು ಹಿಂದಿನ ಸ್ಟೈನ್‌ಹೀಮ್ ತಲೆಯೋಡುಗಳೂ 70,000 ವರ್ಷ ಗಳಷ್ಟು ಪ್ರಾಚೀನವಾದ ನಿಯಂಡರ್ಥಲ್ ತಲೆಯೋಡುಗಳೂ ದೊರೆತಿವೆ; ಇವುಗಳಲ್ಲಿ ಕಶೇರುಕವು ಮಿದುಳನ್ನು ಪ್ರವೇಶ ಮಾಡುವ 'ಫೊರಾಮನ್ ಮ್ಯಾಗ್ನಂ' ಎಂಬ ಪ್ರದೇಶ ಇಲ್ಲದೇ ಇರುವುದೇ ಸ್ವಾರಸ್ಯ ವಾದ ಅಂಶ. ತಲೆಯೋಡೆಯೊಳಗಿನ ಮಿದುಳನ್ನು ಕೈಹಾಕಿ ತೆಗೆಯಲು ಅನುಕೂಲವಾಗುವಂತೆ ಈ ಡೊಗರನ್ನು ಮಾಡಿರುವುದು ಸ್ಪಷ್ಟವಾಗಿದೆ. ಈ ತಲೆಯೋಡುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ಆಲ್‌ಬರ್ಟೋರ್ ಬ್ಲಾಂಕ್ ಇದು ಧಾರ್ಮಿಕ ಕಲ್ಪದ ಅಂಗವಾಗಿ ನಡೆದುದೆಂದು ನಿರ್ಧರಿಸಿದ್ದಾನೆ.

ಮನುಷ್ಯನ ಮಿದುಳು ತಿನ್ನಲು ತುಂಬ ರುಚಿಯೆಂದು ಹಲವು ಪ್ರಾಚೀನ ಜನಾಂಗಗಳಲ್ಲಿ ನಂಬಿಕೆ ಯಿದ್ದಿತು. ಮನುಷ್ಯನನ್ನೇ ತಿನ್ನುವ ಮನುಷ್ಯರು ಒಂದು ಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿಯೇ ಇದ್ದರು ಎಂಬುದು ದಿಟ. ಆದರೆ ಮೇಲೆ ಹೇಳಿದ ತಲೆಯೋಡುಗಳಲ್ಲಿ ಕೇವಲ ಮಿದುಳಿಗಾಗಿ 'ಫೊರಾಮೆನ್ ಮ್ಯಾಗ್ನಂ' ಭಾಗವನ್ನು ತೆಗೆದರೆಂದು ಹೇಳಲಾಗುವುದಿಲ್ಲ. ಹೀಗೆ ಮೆದುಳನ್ನು ತಿನ್ನುವುದೂ ಧಾರ್ಮಿಕ ಕಲ್ಪದ ಅಂಗವಾಗಿಯೇ ಇದ್ದಿತೆನ್ನುವುದನ್ನು ಗಮನಿಸಬೇಕು. ಬೋರ್ನಿಯೋ ಮೆಲನೀಸಿಯಗಳಲ್ಲಿ ಸತ್ತ ಮನುಷ್ಯನ ಮಿದುಳನ್ನು ತೆಗೆದು ಅದಕ್ಕೆ ಧಾರ್ಮಿಕ ವಿಧಿಗಳನ್ನು ನಡೆಸಿ ಅನಂತರ ಪ್ರೇತ ಭೋಜನದಲ್ಲಿ ಅದನ್ನು ತಿನ್ನುವ ಪದ್ಧತಿ ಇಂದಿಗೂ ಆದಿವಾಸಿಗಳಲ್ಲಿದೆ. ಅಂತೂ ಮನುಷ್ಯನು ಸತ್ತ ನಂತರ ಮಿದುಳನ್ನು ಹೊರತೆಗೆದು ಅದನ್ನು ವಿಧ್ಯುಕ್ತವಾಗಿ ತಿನ್ನುವ ಪದ್ಧತಿಯೇ ನಮಗೆ ತಿಳಿದಿರುವಮಟ್ಟಿಗೆ ಅತ್ಯಂತ ಪುರಾತನ ವಾದ ಧಾರ್ಮಿಕ ಕಲ್ಪ.

ಮುಂದೆ ಧರ್ಮದ ಕಲ್ಪನೆಗಳು ಬೆಳೆದುದಕ್ಕೂ ಮಾರ್ಪಟ್ಟುದಕ್ಕೂ ಹಲವಾರು ನಿದರ್ಶನಗಳು ದೊರೆಯುತ್ತವೆ. ಮನುಷ್ಯನು ಸತ್ತಾಗ ಅವನ ದೇಹವನ್ನು ಕಾವಿ ಬಣ್ಣದ ಹುಡಿಯಿಂದ ಬಳಿದು, ಶವದ ಬಳಿ ಅವನಿಗೆ ಸಂಬಂಧಪಟ್ಟ ಪದಾರ್ಥಗಳನ್ನಿರಿಸಿ, ಇವೆಲ್ಲವನ್ನೂ ಹೂಳುವುದು ಸಾಧಾರಣವಾಗಿದ್ದಿತು. ಮರಣಾನಂತರ ಅವನಿಗೆ ಕಷ್ಟವಾಗದಿರಲಿ ಎನ್ನುವ ಅಪೇಕ್ಷೆ ಈ ಪದ್ಧತಿಯ ಮೂಲ; ಎಂದರೆ ಮನುಷ್ಯನಿಗೆ ಆಗಲೇ ಮರಣಾನಂತರ ಸ್ಥಿತಿಯ ಬಗ್ಗೆ ಕಲ್ಪನೆಗಳು ಬೆಳೆದುಬಂದಿದ್ದುವು. ಮರಣಾನಂತರವೂ ಜೀವ ಇರುತ್ತದೆ ಎನ್ನುವುದು ಬಹುಶಃ ಆದಿವಾಸಿ ಜನರೆಲ್ಲರ ವಿಶ್ವಾಸವಾಗಿದ್ದಿತು. ಆದರೆ ಮರಣಾನಂತರದ ಜೀವನಕ್ಕೂ ಈ ಲೋಕದ ಜೀವನಕ್ಕೂ ಅವರು ಹೆಚ್ಚಿನ ಅಂತರವನ್ನೇನು ಕಲ್ಪಿಸಲಿಲ್ಲವೆಂದು ತೋರುತ್ತದೆ. ಅವರ ದೃಷ್ಟಿಯಲ್ಲಿ ಇಲ್ಲಿ ಬೇಕಾದುದೇ ಅಲ್ಲಿಯೂ ಬೇಕು, ಇಲ್ಲಿ ಬೇಡವಾದುದು ಅಲ್ಲಿಯೂ ಬೇಡ. ಇಲ್ಲಿನಂತೆಯೇ ಅಲ್ಲಿನ ಬದುಕೂ ಎಂದು ಅವರು ಬಗೆದು ಪ್ರೇತಕ್ಕೆ ಆಹಾರ, ಉಡುಗೆ, ಆಯುಧ, ಉಪಕರಣ, ಮನೆ ಎಲ್ಲವನ್ನೂ ಒದಗಿಸುತ್ತಿದ್ದರು. ಒದಗಿಸುವಾಗ ಈ ಸಾಮಗ್ರಿಗಳ ಸಂಸ್ಕಾರದ ಕಲ್ಪನೆಯೂ ಬಂದಿತೆನ್ನಿ. ಪ್ರೇತಕ್ಕೆ ಇವನ್ನು ಮುಟ್ಟಿಸುವ ಬಗೆ ಅವರ ಧಾರ್ಮಿಕ ಕಲ್ಪನೆಗಳಿಗೆ ವಸ್ತುವಾಯಿತು.

ಸತ್ತವನು ಇದ್ದವರನ್ನು ಕಾಡದಿರಲೆಂದೂ, ಸತ್ತ ಹಿರಿಯನು ಪಿತೃ ದೇವತೆಯಾಗಿ ತನ್ನವರಿಗೆ ನೆರವಾಗ ಲೆಂದೂ ಹಲವಾರು ಕಲ್ಪಗಳು ಸಿದ್ಧವಾದುವು. ಸತ್ತವರೊಂದಿಗೆ ಇದ್ದವರು ಸಂಬಂಧವನ್ನು ಉಳಿಸಿಕೊಳ್ಳು

ವುದು ಎಲ್ಲ ಪ್ರಾಚೀನ ಜನಾಂಗಗಳಲ್ಲಿಯೂ ಕಾಣಬರುತ್ತದೆ. ನಿರ್ದಿಷ್ಟ ಸಮಯಗಳಲ್ಲಿ ಜನರು ಪ್ರೇತಗಳ ಮುಖವಾಡಗಳನ್ನು ಧರಿಸಿಕೊಂಡು ಧಾರ್ಮಿಕ ನೃತ್ಯ ಮಾಡುವ ಪದ್ಧತಿಯಿದೆ; ಇಂಥ ಸಂದರ್ಭಗಳಲ್ಲಿ ಪ್ರೇತಗಳು ಜೀವಂತವಾಗಿರುವವರೊಂದಿಗೆ ವ್ಯವಹರಿಸುವುದೆಂದು ಅವರ ವಿಶ್ವಾಸವಾಗಿದ್ದಿತು.

ಇರುವ ಮನುಷ್ಯರಿಗೂ ಕಣ್ಣಿಗೆ ಕಾಣದಿದ್ದರೂ ಬಲಿಷ್ಠರಾದ ದೇವತೆಗಳಿಗೂ ನಡುವೆ ಈ ಪಿತೃಗಳು ಅಥವಾ ಪ್ರೇತಗಳಿದ್ದು ದೇವ-ಮನುಷ್ಯರ ಸಂಪರ್ಕವನ್ನು ಸಾಧಿಸುವುವೆಂಬ ಕಲ್ಪನೆಯೂ ಪ್ರಾಚೀನವಾದುದು. ಪಿತೃದೇವತೆಗಳ ಅಥವಾ ಪ್ರೇತಗಳ ವಾಸಸಾಧನವಾಗಿ ಪ್ರತಿಮೆಗಳನ್ನು ಮಾಡಿಡುವುದೂ ಪ್ರಚಲಿತವಾದ ಪದ್ಧತಿಯಾಯಿತು. ಸುಮಾರು ಮೂವತ್ತುಸಾವಿರ ವರ್ಷಗಳಿಂದ ಇಂಥ ಪ್ರತೀಕಗಳು ಮನುಷ್ಯನ ವ್ಯವಹಾರದಲ್ಲಿವೆ.

ಆದಿವಾಸಿಯ ಬದುಕಿನಲ್ಲಿ ಆಹಾರವನ್ನು ಸಂಗ್ರಹಮಾಡುವುದು ಪ್ರಮುಖವಾದ ವ್ಯಾಪಾರ. ಬೇಟೆಯಾಡುವುದು, ರುಚಿಯಾದ ಮತ್ತು ಮಾಂಸಲವಾದ ಪ್ರಾಣಿಗಳನ್ನು ಹೊಡೆಯುವುದು, ಸಾಕಷ್ಟು ಮಾಂಸವನ್ನು ಸಂಗ್ರಹಿಸಿ ತನ್ನ ಗುಹೆಗೆ ತರುವುದು ಮೊದಲಾದುವು ಅವನ ಜೀವನಕ್ರಮದಲ್ಲಿ ಸೂತ್ರ ವಾಗಿದ್ದಿತು. ಕ್ರೂರಿಗಳಾದ ಕಾಡುಪ್ರಾಣಿಗಳನ್ನು ಬೇಟೆಯಾಡುವುದೇನೂ ಸುಲಭವಾದ ಕೆಲಸವಾಗಿರಲಿಲ್ಲ ವೆಂದು ಬೇರೆ ಹೇಳಬೇಕೆ? ಅವನಿಗಿದ್ದ ಆಯುಧ ಸೌಕರ್ಯವು ಕಡಮೆಯೇ! ಹೀಗಿರುವಾಗ ಬೇಟೆಗೆ ಹೊರಡುವ ಮೊದಲು ಅಲೌಕಿಕ ಶಕ್ತಿಗಳ ನೆರವನ್ನು ಪಡೆದುಕೊಳ್ಳುವ ಕಾತರ ಅವನಿಗಿದ್ದುದು ಸಹಜವೇ. ಅಲೌಕಿಕ ಶಕ್ತಿಗಳನ್ನು ಒಲಿಸಿಕೊಳ್ಳುವ ಸಲುವಾಗಿ ಮಂತ್ರ-ತಂತ್ರಗಳು ಸಿದ್ಧವಾದುವು. ಆದಿವಾಸಿಗಳ ಗುಹೆಗಳ ಒಳಭಾಗದಲ್ಲಿ ವನ್ಯಮೃಗಗಳ ನೈಜ ಚಿತ್ರಗಳನ್ನು ಬಿಡಿಸಿ. ಅವು ಗಾಯಗೊಂಡಂತೆ, ಬಲೆಯಲ್ಲಿ ಸಿಕ್ಕುಬಿದ್ದಂತೆ, ಸತ್ತುಬಿದ್ದಂತೆ ರೂಪಿಸಿಕೊಂಡಿರುವುದು ಈ ನೆಲೆಯಲ್ಲಿಯೇ. ನಲವತ್ತು ಸಾವಿರ ವರ್ಷಗಳ ಹಿಂದೆಯೇ ರಚಿಸಲ್ಪಟ್ಟ ಇಂಥ ಗುಹಾಚಿತ್ರಗಳು ಹಲವಾರು ಕಡೆ ಇಂದಿಗೂ ಉಳಿದುಬಂದಿವೆ. ಇವುಗಳನ್ನು ಅಧ್ಯಯನ ಮಾಡಿರುವ ವಿದ್ವಾಂಸರು ಅವುಗಳ ಮಾಂತ್ರಿಕ-ತಾಂತ್ರಿಕ ಹಿನ್ನೆಲೆಯನ್ನು ಅವುಗಳಲ್ಲಿ ನಿರ್ದೇಶಿಸಿ ದ್ದಾರೆ.

ಸಾಮಾನ್ಯವಾಗಿ ತನ್ನ ಇಚ್ಛೆಯಂತೆ ನಡೆಯದ ಪ್ರಾಕೃತಿಕ ಪ್ರಸಂಗಗಳನ್ನು ಕೂಡ ಮನುಷ್ಯನು ತನಗೆ ಬೇಕಾದಂತೆ ನಡೆಯುವ ಹಾಗೆ ಮಾಡುವುದು ಮಂತ್ರ-ತಂತ್ರಗಳ ಉದ್ದೇಶ; ಯಾವುದಾದರೂ ಒಂದು ನಿರ್ದಿಷ್ಟವಾದ ಕಲ್ಪವನ್ನು ಸರಿಯಾದ ರೀತಿಯಲ್ಲಿ, ಮಂತ್ರಗಳನ್ನು ಸರಿಯಾಗಿ ಉಚ್ಚರಿಸಿ, ಮಾಡಿದ್ದೇ ಆದರೆ ಪ್ರಸಂಗಗಳು ನಮಗೆ ಬೇಕಾದ ರೀತಿಯಲ್ಲಿ ನಡೆದೇ ನಡೆಯುತ್ತದೆ ಎನ್ನುವ ವಿಶ್ವಾಸ ಪ್ರಾಚೀನ ಜನರಿಗಿದ್ದಿತು. ಮಳೆಬರಿಸುವುದು; ಬೇಟೆಯನ್ನು ಫಲಪ್ರದವಾಗಿಸುವುದು, ಭೂಮಿ ಫಲವತ್ತಾಗುವಂತೆ ಮಾಡುವುದು, ಶತ್ರು ತೊಂದರೆಗೀಡಾಗಿ ಸಾಯುವಂತೆ ಮಾಡುವುದು, ರೋಗರುಜಿನಗಳನ್ನು ತಡೆಗಟ್ಟುವುದು, ಆಯುಧವು ಸರ್ವಸಮರ್ಥವಾಗುವಂತೆ ಮಾಡುವುದು, ತಾನು ಹೋದಲ್ಲೆಲ್ಲ ಜಯಶೀಲನಾಗುವುದು, ಇವೆಲ್ಲ ಮಂತ್ರ-ತಂತ್ರಗಳಿಗೆ ವಸ್ತುಗಳೇ.

ಕೆಲವು ಪದಾರ್ಥಗಳಲ್ಲಿಯೂ ಮನುಷ್ಯರಲ್ಲಿಯೂ ಒಂದು ಅಲೌಕಿಕ ಶಕ್ತಿ ಇದ್ದು ಅದರಿಂದಾಗಿ ಅದನ್ನು ಪಡೆದವರಲ್ಲಿ ಸೌಂದರ್ಯ, ಬಲ, ಜಯ, ಸಂಪತ್ತು ಮೊದಲಾದುವು ಒದಗುವುದು ಎಂಬ ನಂಬಿಕೆ ಪ್ರಾಚೀನ ವಾದುದು. ಈ ಶಕ್ತಿಗೆ ತನ್ನದೇ ಆದ ಇಚ್ಛೆಯಾಗಲೀ, ಸಂಕಲ್ಪವಾಗಲೀ, ಪ್ರಯೋಜನವಾಗಲಿ ಇರುವುದಿಲ್ಲ.

ಈ ಶಕ್ತಿಯನ್ನು ನಮಗೆ ಬೇಕಾದ ಯಾವ ಕೆಲಸಕ್ಕೆ ಬೇಕಾದರೂ ಬಳಸಿಕೊಳ್ಳಬಹುದು; ನಮ್ಮ ವಿದ್ಯುಚ್ಛಕ್ತಿಯಿದ್ದಂತೆ ಎನ್ನಬಹುದು. ಶಕ್ತಿಯಿರುವ ಕಲ್ಲನ್ನು ತೋಟದಲ್ಲಿಟ್ಟರೆ ಮರಗಳೆಲ್ಲ ಹೂ ಹಣ್ಣುಗಳಿಂದ ತುಂಬಿ ಬಳಕುತ್ತದೆ; ಶಕ್ತಿಯನ್ನು ಬಿಲ್ಲಿನಲ್ಲಿ ಆವಾಹನೆ ಮಾಡಿಕೊಂಡರೆ ಅದರಿಂದ ಹೊರಹೋದ ಬಾಣವೊಂದೂ ವ್ಯರ್ಥವಾಗುವುದೇ ಇಲ್ಲ; ಶಕ್ತಿಯಿರುವ ತಾಯಿತವನ್ನು ಮೈಯಲ್ಲಿ ಎಲ್ಲಿಯಾದರೂ ಇರಿಸಿಕೊಂಡರೆ ಮನುಷ್ಯನಿಗೆ ಅಪಜಯ, ಪರಾಭವ, ಆತಂಕ ಒಂದೂ ಇರುವುದಿಲ್ಲ; ಶಕ್ತಿಯಿರುವ ಮೂರ್ತಿ ಊರ ನಡುವೆ ಇದ್ದರೆ ಜನರಿಗೆ ಶತ್ರುಭಯವಿಲ್ಲ; ಬೇಟೆಗೆ ಮೊದಲು ಚಿತ್ರವನ್ನು ಇಳಿಸಿದರೆ ಬೇಟೆ ಚೆನ್ನಾಗಿಯೇ ನಡೆಯುತ್ತದೆ. ಹೀಗೆಲ್ಲ ಶಕ್ತಿಯ ಸುತ್ತ ಕಲ್ಪನೆಗಳು ಬೆಳೆದು ಅದರಿಂದಾಗಿ ವೈಯಕ್ತಿಕ ಕೌಟುಂಬಿಕ ಸಾಮಾಜಿಕ ವಿಧಿಗಳು ಮೈದಳೆದವು.

ಈ ಅಲೌಕಿಕ ಶಕ್ತಿಯನ್ನು ಪ್ರತಿಕೂಲವಾಗಿಯೂ ಘಾತಕವಾಗಿಯೂ ಪೂರಕವಾಗಿಯೂ ಬಳಸಬಹುದೆಂಬ ನಂಬಿಕೆಯಿಂದ ಮಾಟ–ಮದ್ದು, ಇಂದ್ರಜಾಲ, ಅಭಿಚಾರ ಮೊದಲಾದ ಕಲ್ಪಗಳು ಮೈದಳೆದವು. ತನಗೆ ಆಗದಿದ್ದ ವ್ಯಕ್ತಿಯ ಬಟ್ಟೆ, ಕೂದಲು, ಉಗುರು, ಹಲ್ಲು ಮೊದಲಾದುವನ್ನು ಪಡೆದುಕೊಂಡು ಅವುಗಳಿಗೆ ವಿಧ್ಯುಕ್ತವಾಗಿ ತೊಂದರೆಯನ್ನುಂಟುಮಾಡಿದರೆ ಆ ವ್ಯಕ್ತಿಯೂ ಈ ತೊಂದರೆಯನ್ನು ಅನುಭವಿಸುವನೆಂಬ ನಂಬಿಕೆ ಇದರ ಮೂಲ. ಅಲೌಕಿಕ ಶಕ್ತಿಗಳನ್ನು ಹೀಗೆ ಸಾಧಕ—ಬಾಧಕಗಳಾಗಿ ಬಳಸಿಕೊಳ್ಳುವುದರಲ್ಲಿ ನಿಷ್ಣಾತರಾದ ಕೆಲವರು ಜನಾಂಗದ ಪುರೋಹಿತರಾಗಿ ಉಳಿದರು; ಮಂತ್ರ–ತಂತ್ರಗಳು ಇವರ ಕೆಲಸವಾದುವು. ಇಡೀ ಜನಾಂಗವು ಇವರನ್ನು ಆಶ್ರಯಿಸಿಯೇ ಬಾಳಬೇಕಾಗಿದ್ದಿತು. ಈ ನೆಲೆಯಲ್ಲೇ ಧಾರ್ಮಿಕ ಕಲ್ಪನೆಗಳು ಮುಂದುವರೆದುವು. ಮಾರ್ಪಟ್ಟುವು; ಮುಖ್ಯವಾದುವು.

ಇದಕ್ಕೆ ಮುಂದಿನ ಹೆಜ್ಜೆಯೆಂದರೆ ದೇವರ ಕಲ್ಪನೆ. ಎಲ್ಲ ಶಕ್ತಿಗಳಿಗೂ ಆಕರವಾಗಿ, ಪ್ರಪಂಚಕ್ಕೆ ಅಧಿಷ್ಠಾನವಾಗಿ, ಎಲ್ಲ ವ್ಯಕ್ತಿಗಳಿಗೂ ಧ್ಯೇಯವಾಗಿ ಇರುವ ಇಂದ್ರಿಯಾತೀತನಾದ, ಪರಮ ಸಮರ್ಥನಾದ ಭಗವಂತನನ್ನು ಸ್ಮರಿಸುವ, ಆರಾಧಿಸುವ, ಸೇವಿಸುವ ಪದ್ಧತಿ ಮೊದಲಾಯಿತು. ಭಗವಂತನನ್ನು ಆದಿವಾಸಿಗಳು ಕಲ್ಪಿಸಿಕೊಂಡಾಗ ಅವನಿಗೆ ಮನುಷ್ಯರ ಗುಣ–ಧರ್ಮಗಳನ್ನೇ ಸಹಜವಾಗಿ ಅನ್ವಯಿಸಿದರು; ಅವನ ವರ್ತನೆಯೂ ಮನೋವೃತ್ತಿಯೂ ಮನುಷ್ಯರಂತೆಯೇ ಇದ್ದು ಒಲಿದವರಿಗೆ ಪ್ರಸಾದಿ, ಮುನಿದವರಿಗೆ ಭಯಂಕರ ಎನ್ನುವ ನಂಬಿಕೆ ಬೆಳೆಯಿತು. ದೇವರಿಗೆ ಹರ್ಷ ಕ್ರೋಧಗಳನ್ನೂ ಈರ್ಷ್ಯೆ ಅಸೂಯೆಗಳನ್ನೂ ಕಲ್ಪಿಸಿದರು.

ಈ ದೇವರಿಗೆ ಮೂರ್ತಿಗಳನ್ನು ಮಾಡಿ ಇಟ್ಟರು; ಹಲವಾರು ಸಂದರ್ಭಗಳಲ್ಲಿ ಸರಿಯಾಗಿ ಹಲವಾರು ಮೂರ್ತಿಗಳೂ, ದೇವತೆಗಳೂ ಸಿದ್ಧವಾದುವು. ಈ ದೇವರನ್ನು ಒಲಿಸಿಕೊಳ್ಳಲು ಹೊಸ ಕಲ್ಪಗಳು ಮೈದುಂಬಿ ಬಂದುವು. ಇಂಥ ಮೂರ್ತಿಗಳ ಪೂಜೆ ಎಲ್ಲ ಜನಾಂಗಗಳಲ್ಲಿಯೂ ಉಳಿದು ಬಂದಿದೆ. 'ನೀನು ನನಗೆ ನೆರವಾದರೆ ನಾನು ನಿನಗೆ ಬಲಿ ಕೊಡುತ್ತೇನೆ, ಪೂಜೆ ಸಲ್ಲಿಸುತ್ತೇನೆ' ಎನ್ನುವ ಕರಾರು ಈ ಪೂಜೆಗಳಲ್ಲಿ ಅಡಗಿದೆ. ನಮ್ಮ ಪೂಜೆಗೆ ತಕ್ಕ ಪ್ರಸಾದ ದೇವರಿಂದ ದೊರೆಯುತ್ತದೆ ಎನ್ನುವ ಭರವಸೆ ಇಲ್ಲಿ ಮುಖ್ಯವಾದುದು. ದೇವರಿಗೆ ತಕ್ಕ ಪೂಜೆ, ಪೂಜೆಗೆ ತಕ್ಕ ಫಲ. ಪ್ರಾರ್ಥನೆಯಿಂದ ಅಲೌಕಿಕ ಶಕ್ತಿ ಒದಗಿ ಬಂದು ನಮ್ಮ ಕೈ ಬಲವಾಗುತ್ತದೆ, ಕೆಲಸ ಯಶಸ್ವಿಯಾಗುತ್ತದೆ ಎನ್ನುವ ನಂಬಿಕೆಯಿಂದಾಗಿ ಪೂಜೆಯಲ್ಲಿ ಪ್ರಾರ್ಥನೆ ಪ್ರಮುಖವಾದ ಪಾತ್ರವನ್ನು ತಳೆಯಿತು. ಪೂಜೆಯನ್ನು ನಡೆಸುವ ಹಕ್ಕು, ಶಕ್ತಿ ಪುರೋಹಿತರಿಗೆ ಮಾತ್ರ ಇದ್ದರೂ ಪ್ರಾರ್ಥನೆಯನ್ನು ಮಾತ್ರ ಯಾರಾದರೂ ಮಾಡಬಹುದು. ಪೂಜೆಯಲ್ಲಿ ಕಲ್ಪಗಳು, ವಿಧಿಗಳು, ಮುದ್ರೆಗಳು

ಮೊದಲಾದ ಕಲಾಪ ಮುಖ್ಯವಾಗುತ್ತದೆ; ಇದನ್ನೆಲ್ಲ ಸರಿಯಾಗಿ ನಡೆಸಬೇಕೆಂದರೆ ಅನುಭವ ಬೇಕು, ತಿಳುವಳಿಕೆ ಬೇಕು. ಕಲಾಪದಲ್ಲಿ ಕಾಲು ಜಾರಿದರೆ ದೇವರಿಗೆ ಮುನಿಸು ಎನ್ನುವ ಹೆದರಿಕೆ ಬೇರೆ. ಪ್ರಾರ್ಥನೆಯಲ್ಲಿ ಈ ಆತಂಕವಿರದು.

ಮುಖವಾಡಗಳ ನೋಡಿ

ನಾಟಕದಲ್ಲಿ ತಮ್ಮ ನಿಜಸ್ವರೂಪವನ್ನು ಮರೆಸಿಕೊಳ್ಳುವುದು ಪಾತ್ರಧಾರಿಗಳ ಕರ್ತವ್ಯ; ಪಾತ್ರಕ್ಕೆ ತಕ್ಕಂತೆ ವೇಷವಿರಬೇಕು. ನೋಡುವವರಿಗೆ ಇದು ಯಾರೆಂದು ತಿಳಿಯಬಾರದು. ರಂಗಭೂಮಿಯ ಮೇಲೆ ಅವನು ನಿತ್ಯಜೀವನದ ಮನುಷ್ಯನಲ್ಲ: ರಸ, ಗುಣ, ಭಾವ ಇವುಗಳನ್ನು ವ್ಯಕ್ತಪಡಿಸುವಂಥ ಸಜ್ಜಿಕೆ ಅವನಲ್ಲಿರಬೇಕು. ಹಳೆಯಕಾಲದಲ್ಲಿ ಮುಖವಾಡಗಳನ್ನು ಧರಿಸುವುದು ವಾಡಿಕೆಯಾಗಿದ್ದಿತು. ಕಥಕ್ಕಳಿ, ಟಿಬೆಟನ್ ಭೂತನೃತ್ಯ ಮೊದಲಾದುವುಗಳಲ್ಲಿ ಮುಖವಾಡಗಳ ಬಳಕೆ ಈಗಲೂ ಹೆಚ್ಚು. ಹಬ್ಬ, ಜಾತ್ರೆ, ಸಂತೋಷ ಕೂಟಗಳಂಥ ವಿಶೇಷ ಸಂದರ್ಭಗಳಲ್ಲಿ ಇತರರನ್ನು ನಗಿಸಲೆಂದೋ ಹೆದರಿಸಲೆಂದೋ ಮುಖವಾಡವನ್ನು ಧರಿಸುವ ಪದ್ಧತಿ ಐರೋಪ್ಯದೇಶಗಳಲ್ಲುಂಟು. ಆದರೆ ಮುಖವಾಡಗಳ ಮೂಲ ಧರ್ಮಸಂದರ್ಭವೇ. ವಿಶ್ವದ ಎಲ್ಲ ಆದಿವಾಸಿ ಪಂಗಡಗಳ ಧಾರ್ಮಿಕ ನೃತ್ಯಗಳಲ್ಲಿ, ಧರ್ಮಕರ್ಮಗಳಲ್ಲಿ ಇಂದಿಗೂ ಮುಖವಾಡ ಅತಿ ಮುಖ್ಯವಾದುದು. ಆದಿವಾಸಿಗಳ ಕಲ್ಪನೆಯಲ್ಲಿ ಮನುಷ್ಯನ ನೆರೆಯಲ್ಲಿಯೇ ಭೂತಪಿಶಾಚ, ಶಾಕಿನೀ, ಡಾಕಿನೀ ಮೊದಲಾದ ದುಷ್ಟಶಕ್ತಿಗಳು ವಾಸಿಸುತ್ತವೆ: ಅವುಗಳಿಂದ ಮನುಷ್ಯನಿಗೆ ತುಂಬ ತೊಂದರೆಯೆಂದು ಬೇರೆ ಹೇಳುವ ಅಗತ್ಯವಿಲ್ಲ. ಅವುಗಳನ್ನು ಓಡಿಸುವುದು ಮಾಂತ್ರಿಕನಿಗೆ ಮಾತ್ರ ಸಾಧ್ಯ. ಆದಿವಾಸಿಗಳ ಸಮಾಜ ವ್ಯವಸ್ಥೆಯಲ್ಲಿ ಮಾಂತ್ರಿಕನ ಸ್ಥಾನ ಮುಖ್ಯವಾದುದು; ಭೂತೋಚ್ಚಾಟನೆಯೇ ಎಲ್ಲ ರೋಗರುಜಿನಗಳಿಗೂ ಆತಂಕ—ಅಭೀಷ್ಟಗಳಿಗೂ ಸಿದ್ಧೌಷಧ. ಭೂತವನ್ನು ಹೆದರಿಸಿ ಓಡಿಸಬೇಕೆಂದರೆ ಮಾಂತ್ರಿಕನು ಭೀಕರವಾದ ಮುಖವಾಡವನ್ನು ಧರಿಸುತ್ತಾನೆ, ರೌದ್ರಾವೇಶದಿಂದ ಕುಣಿಯುತ್ತಾನೆ. ಮುಖವಾಡವಿಲ್ಲದಿದ್ದರೆ ಅವನಿಗೆ ಶಕ್ತಿಯೇ ಇರದು. ಮುಖವಾಡ ಎಷ್ಟು ಭಯಂಕರವಾಗಿದ್ದರೆ ಅವನ ಶಕ್ತಿ ಅಷ್ಟು ಹೆಚ್ಚು ಎಂದು ನಂಬಿಕೆ.

ಆಫ್ರಿಕ, ಆಸ್ಟ್ರೇಲಿಯ, ಪೆಸಿಫಿಕ್‌ದ್ವೀಪಗಳ ಆದಿವಾಸಿಗಳು ತಮ್ಮ ದಿನದಿನದ ವ್ಯವಹಾರದಲ್ಲಿ ಹೀಗೆ ಮುಖವಾಡ ಧರಿಸಿದ ಮಾಂತ್ರಿಕನ ನೆರವನ್ನು ವಿಶೇಷವಾಗಿ ಪಡೆಯುತ್ತಾರೆ. ಆಫ್ರಿಕದ ಕಾಂಗೋ ಪ್ರದೇಶದಲ್ಲಿ ಮತ್ತು ನೈಜೀರಿಯಾದಲ್ಲಿ ಇಂಥ ಮುಖವಾಡಗಳನ್ನು ಮರದಲ್ಲೇ ಮಾಡುತ್ತಾರೆ. ನೋಡಲು ನಿಜವಾಗಿ ಭಯಂಕರವಾಗಿರುತ್ತದೆ ಇವು. ಮುಖವಾಡಕ್ಕೆ ಕೂದಲಿನಂಥ ಹುಲ್ಲನ್ನೂ ಸೇರಿಸಿ, ಕಣ್ಣುಗಳಿಗೆ ಕೆಂಪು ಬಣ್ಣ ಬಳಿದು, ಭೀಕರತೆಯನ್ನು ಇನ್ನಷ್ಟು ಹೆಚ್ಚಿಸುತ್ತಾರೆ. ಹಾಗೆಯೇ ಕ್ಯಾಮರೂನ್ ಮುಖವಾಡಗಳಲ್ಲಿ ರೌದ್ರರಸ ಉಕ್ಕುತ್ತದೆ; ದೈವದ ಪ್ರತೀಕವೆಂದು ಮುಖವಾಡಗಳಿಗೆ ಹೆಚ್ಚಿನ ಮರ್ಯಾದೆಯಿರುತ್ತದೆ. ಮೂರ್ತಿಶಿಲ್ಪದ ಹಿನ್ನೆಲೆಯಲ್ಲಿ ಇವು ಸ್ವಾರಸ್ಯವಾದ ಪ್ರಯೋಗಗಳು.

ನ್ಯೂಗಿನಿಯ ಆದಿವಾಸಿಗಳು ಮುಖವಾಡವನ್ನು ಮನುಷ್ಯನ ತಲೆಯೋಡುಗಳಿಂದಲೇ ಮಾಡುತ್ತಾರೆ. ಸತ್ತ ಮನುಷ್ಯನ ಜೀವವು ಈ ತಲೆಯೋಡುಗಳಲ್ಲಿ ಉಳಿದಿರುವುದೆಂದು ಆ ಜನರ ಕಲ್ಪನೆ. ಮನುಷ್ಯ ಸತ್ತನಂತರ ಅವನ ತಲೆಬುರುಡೆಯನ್ನು ಅವನ ನೆಂಟರು ಕಾಪಾಡಿಕೊಂಡು ಬರುವ ವಾಡಿಕೆಯುಂಟು. ನ್ಯೂಬ್ರಿಟನ್ ದ್ವೀಪದಲ್ಲಿ ವರ್ಷಕ್ಕೆ ಎರಡು ಬಾರಿ ಪಂಗಡದ ಜನ ಇಂಥ ತಲೆಬುರುಡೆಗಳ ಮುಖವಾಡವನ್ನು ಧರಿಸಿ, ಬೆಳದಿಂಗಳ ಕುಣಿತದಲ್ಲಿ ಪಾಲ್ಗೊಳುತ್ತಾರೆ. ಜನಾಂಗ ಒಟ್ಟಾರೆ ಬೇಟೆಯನ್ನೋ ಕಾಳಗವನ್ನೋ ಮೊದಲು ಮಾಡುವಾಗ ಇಂಥ ಕುಣಿತಗಳು ನಡೆಯುತ್ತವೆ. ಹೀಗೆ ಎಲ್ಲ ಆದಿವಾಸಿ ಜನಾಂಗಗಳಲ್ಲಿಯೂ

ತುಂಬ ಪ್ರಾಚೀನ ಕಾಲದಿಂದ ಬೇಟೆಗಾಗಿ ಮುಖವಾಡ ಧರಿಸಿ, ಧಾರ್ಮಿಕ ಕುಣಿತಗಳನ್ನು ನಡೆಸುವ ವಾಡಿಕೆಯಿದ್ದಿತು. ಯೂರೋಪಿನ ಹಲವು ಕಡೆ ಗುಹಾಚಿತ್ರಗಳಲ್ಲಿ ಕೂಡ ಇಂಥ ಚಿತ್ರಣವಿದೆ.

ದೈವಗಳ ಕಾಲ್ಪನಿಕ ಸ್ವರೂಪವನ್ನು ನಿರ್ದೇಶಿಸುವಂಥ ಮುಖವಾಡಗಳನ್ನೇ ಬಳಸುವುದು ವಾಡಿಕೆಯಾದರೂ, ಹಲವಾರು ಪ್ರಾಣಿಗಳ ಮುಖಗಳೂ ಈ ಕೆಲಸಕ್ಕೆ ಬರುತ್ತಿದ್ದುವು. ಮಧ್ಯ ಆಫ್ರಿಕ, ಪಶ್ಚಿಮ ಆಫ್ರಿಕ, ನ್ಯೂಗಿನಿ, ಸಿಲೋನ್, ಟಿಬೆಟ್, ಬ್ರಿಟಿಷ್ ಕೊಲಂಬಿಯಂ ಪ್ರದೇಶಗಳಲ್ಲಿ ಧಾರ್ಮಿಕ ಕುಣಿತದ ಸಂದರ್ಭದಲ್ಲಿ ಪ್ರಾಣಿಗಳ ಮುಖವಾಡವನ್ನು ಬಳಸುತ್ತಾರೆ. ಕಲ್ಪದಲ್ಲಿ ಹೀಗೆ ಮುಖವಾಡಗಳನ್ನು ಧರಿಸಿದರೆ ಆಯಾ ಪ್ರಾಣಿಗಳ ಬಲ, ವೇಗ, ಯುಕ್ತಿ ಇವು ಮುಖವಾಡ ಧರಿಸಿದವರಿಗೆ ಹರಿದುಬರುವುದೆಂಬ ಕಲ್ಪನೆ ಈ ಜನರಲ್ಲಿದೆ. ಬ್ರಿಟಿಷ್ ಕೊಲಂಬಿಯದಲ್ಲಿ ಅಮೆರಿಕನ್ ಇಂಡಿಯನ್ ಬುಡಕಟ್ಟಿನವರು ಕರಡಿ, ತೋಳ, ಕೊಕ್ಕರೆ, ತಿಮಿಂಗಿಲ ಮೊದಲಾದ ಪ್ರಾಣಿಗಳ ಆಕಾರವನ್ನು ಮರದ ಮುಖವಾಡಗಳಲ್ಲಿ ಮೂಡಿಸುತ್ತಾರೆ. ಅವರ ಕಥೆಗಳಲ್ಲಿ, ಪುರಾಣಗಳಲ್ಲಿ ಈ ಪ್ರಾಣಿಗಳ ಪಾತ್ರ ಹೆಚ್ಚಿನದು. ಮುಖವನ್ನು ಮುಚ್ಚಿ, ದೊಡ್ಡ ಕೊಕ್ಕನ್ನು ಮೂಡಿಸಿ ಮೈಯನ್ನೂ ಹಕ್ಕಿಗಳ ಆಕಾರದಲ್ಲಿಯೇ ಸಜ್ಜುಗೊಳಿಸಿ ಕಲ್ಪನೃತ್ಯವನ್ನು ಈ ಜನ ಮಾಡುತ್ತಾರೆ. ನೃತ್ಯದ ಒಂದು ಹಂತದಲ್ಲಿ ಕೊಕ್ಕು ಬಾಯಿ ತೆರೆಯುವಂತೆ ಕೂಡ ಜಾಣತನದ ವ್ಯವಸ್ಥೆಯಿರುತ್ತದೆ. ಹೀಗೆ ನೃತ್ಯಮಾಡುವಾಗ ಈ ಅದ್ಭುತ ಪಕ್ಷಿ ಮನುಷ್ಯನ ಮೈಮೇಲೆ ಮೂಡಿಬರುವುದೆನ್ನುವ ನಂಬಿಕೆಯಿದೆ. ಒಂದು ಕಾಲದಲ್ಲಿ ಯಾವ ಪ್ರಾಣಿಯಾಗಲೀ ಮನುಷ್ಯ, ಮೃಗ, ಪಕ್ಷಿಯಾಗಬೇಕೆಂದಾಗ ಮಾರ್ಪಡಬಲ್ಲದು ಎನ್ನುವ ನಂಬಿಕೆಯಿದ್ದಿತು. ಈ ನಂಬಿಕೆ ಈ ಆದಿವಾಸಿಗಳಲ್ಲಿ ಇಂದಿಗೂ ಉಳಿದಿದೆ.

ರೆಡ್ ಇಂಡಿಯನ್ ಜನ ಅಮೆರಿಕ ದೇಶದಲ್ಲೆಲ್ಲ ಮರದಲ್ಲೇ ವಿಶೇಷ ಕೆತ್ತನೆ ಕೆಲಸದಿಂದ ವಿಶಿಷ್ಟವಾದ ಮುಖವಾಡಗಳನ್ನು ಮಾಡಿ ಬಳಸುತ್ತಿದ್ದರು. ಈಗ ಈ ರೂಢಿ ತಪ್ಪಿದೆಯೆನ್ನಿ. ಆದರೂ ಇರೋಕೊಸ್ ಜನ ಈಗಲೂ ಮರದಿಂದ ಮಾಡಿದ ಮುಖವಾಡಗಳನ್ನು ಧರಿಸುತ್ತಾರೆ. ಪ್ಯುಬ್ಲೋ ಇಂಡಿಯನ್ ಜನರು, ಆರಿಜೋನ ಮತ್ತು ನ್ಯೂ ಮೆಕ್ಸಿಕೋ ಪ್ರದೇಶಗಳ ಗ್ರಾಮಾಂತರದಲ್ಲಿ ವಾಸಮಾಡುವ ಜನರು ಚರ್ಮದಿಂದ ಮಾಡಿದ ಮುಖವಾಡಗಳನ್ನು ಬಳಸುತ್ತಾರೆ. ಇದಕ್ಕೆ ಬಲವಾಗಿ ಬಣ್ಣ ಬಳಿದು ರೆಕ್ಕೆ-ಪುಕ್ಕಗಳನ್ನು ಸಿಕ್ಕಿಸಿ, ಮಣಿಗಳನ್ನು ಹೆಣೆದು ಅಣಿಮಾಡುತ್ತಾರೆ. ಕಲ್ಪನೃತ್ಯವಾಗುವ ಮೊದಲು ಹಳ್ಳಿಯ ಹೆಗ್ಗಡೆ ಈ ಮುಖವಾಡಗಳನ್ನೆಲ್ಲ ಸಂಗ್ರಹಿಸಿ ಒಂದು ಕಡೆಯಿಟ್ಟು ಅಲಂಕರಿಸುತ್ತಾನೆ. ನೃತ್ಯವಾದನಂತರ ಪ್ರತಿಯೊಬ್ಬರೂ ತಂತಮ್ಮ ಮುಖವಾಡಗಳನ್ನು ಮನೆಗೊಯ್ದು, ಅದನ್ನು ಬುಟ್ಟಿಯೊಂದರಲ್ಲಿ ಕಟ್ಟಿ ಹಿಂದಿನ ಕೋಣೆಯೊಂದರಲ್ಲಿ ಇಡುತ್ತಾರೆ. ಇದು ಮನೆಯಲ್ಲಿ ಪೂಜಾಮೂರ್ತಿಯಿದ್ದಂತೆ. ತುಂಬ ಪವಿತ್ರವಾದ ವಸ್ತುವಿನಂತೆ ಇದರ ವಿಚಾರದಲ್ಲಿ ನಡೆದುಕೊಳ್ಳುತ್ತಾರೆ. ಮುಖವಾಡ ಯಾವ ಸತ್ತ್ವವನ್ನು ಪ್ರತಿನಿಧಿಸುತ್ತದೆಯೋ ಆ ಸತ್ತ್ವವು ಮುಖವಾಡದಲ್ಲಿಯೇ ಉಳಿದಿರುತ್ತದೆ ಎಂದು ನಂಬಿಕೆ. ಮುಖವಾಡ ಇದ್ದ ಸಮಯದಲ್ಲಿ ಅದನ್ನು ಧರಿಸಿದ ಪಾತ್ರಿ ದೇವತೆಯೇ ಎಂದು ಅವರ ಕಲ್ಪನೆ. ನೃತ್ಯ ಮುಗಿದು ಮುಖವಾಡವನ್ನು ತೆಗೆದೊಡನೆ ಪಾತ್ರಿಯು ಸ್ನಾನ ಮಾಡಿ ಶುದ್ಧನಾಗಬೇಕು: ಇಲ್ಲವಾದರೆ ಸತ್ತ್ವವು ಅವನ ಶರೀರದಲ್ಲಿಯೇ ಇದ್ದುಕೊಂಡು ಅವನಿಗೆ ತೊಂದರೆಯುಂಟುಮಾಡಬಹುದು.

ಮುಖವಾಡಗಳು ಭಯಂಕರವಾಗಿರುವುದೇ ವಾಡಿಕೆಯಾದರೂ ಅದು ಹಾಗೆ ಇರಬೇಕೆಂಬ ನಿಯಮವೇನಿಲ್ಲ. ಬೇಟೆಯಲ್ಲಿ ಯಶಸ್ಸನ್ನು ಉಂಟುಮಾಡುವ, ಹವೆ ಚೆನ್ನಾಗಿರುವಂತೆ ಮಾಡುವ ಅಭಿಮಾನಿ



ಚಿತ್ರ 130

ಇರೋಕಾ ಜನಾಂಗದ ಮುಖವಾಡ; ಭೂತಗಳನ್ನು ಓಡಿಸುವ ಮಾಂತ್ರಿಕ ಇದನ್ನು ಧರಿಸುತ್ತಾನೆ



ಚಿತ್ರ 130 ಅ

ಬಕೋಟ ಆದಿವಾಸಿಗಳು ಈ ಚಿತ್ರ ಪ್ರತೀಕಗಳನ್ನು ಪೂಜಿಸುತ್ತಾರೆ; ಇವು ದೇವತೆಗಳಿಗೂ ಮನುಷ್ಯರಿಗೂ ನಡುವಣ ನೆಲೆಯಲ್ಲಿರುವುವೆಂದು ಅವರ ನಂಬಿಕೆ

ಚಿತ್ರ 131

ಅಲ್ಯೂಷನ್ ದ್ವೀಪಗಳ ಎಸ್ಕಿಮೋ ಜನಾಂಗದ ಪ್ರೇತ ಮುಖವಾಡ



ಚಿತ್ರ 131 ಅ

ಪಶ್ಚಿಮ ಆಫ್ರಿಕದ ಆದಿವಾಸಿಗಳು ಬಳಸುವ ಮುಖವಾಡಗಳು; ಒಂದೊಂದರಲ್ಲಿಯೂ ಒಂದೊಂದು ದೇವತೆ ವಾಸಮಾಡುವುದೆಂದು ಅವರ ನಂಬಿಕೆ



ಚಿತ್ರ 132

ಉತ್ತರ ಅಮೆರಿಕದ ಆದಿವಾಸಿಗಳು 'ಸೂರ್ಯನರ್ತನ' ಮಾಡುವಾಗ ಧರಿಸುವ ಮುಖವಾಡ

ಚಿತ್ರ 133

ನೈಜೀರಿಯದ ಇಬೋ ಜನಾಂಗದ ಪ್ರೇತಮುಖವಾಡ ಶವಸಂಸ್ಕಾರದ ಸಮಯದಲ್ಲಿ ಈ ಮುಖವಾಡವನ್ನು ಧರಿಸಿ ಕುಣಿಯುತ್ತಾರೆ

ಚಿತ್ರ 134
ಟಿಬೆಟಿನ್ ಭೂತನೃತ್ಯದಲ್ಲಿ ಲಾಮಾಗಳು ಧರಿಸುವ ಮಹಾಕಾಲನ ಮುಖವಾಡ

ಚಿತ್ರ 135
ಭಾಗವತರ ಮೇಳದಲ್ಲಿ ಬಳಸುವ ನರಸಿಂಹನ ಮುಖವಾಡ



ಚಿತ್ರ 136
ಉತ್ತರಪ್ರದೇಶದ ಕಡೆ ಬಳಸುವ ದೈತ್ಯ ಮುಖವಾಡ

ಚಿತ್ರ 137
ಭಿಲ್ಲಜನಾಂಗದವರು ಧರಿಸುವ ಹನುಮಂತನ ಮುಖವಾಡ

ಚಿತ್ರ 138
ದಕ್ಷಿಣಕನ್ನಡಜಿಲ್ಲೆಯಲ್ಲಿ ಕೋಲದ ಸಂದರ್ಭದಲ್ಲಿ ಬಳಸುವ ಭೂತಮುಖವಾಡ

ದೇವತೆಗಳನ್ನು ಪ್ರತಿನಿಧಿಸುವ ಮುಖವಾಡಗಳು ಸೌಮ್ಯವಾಗಿಯೇ ಇರುತ್ತವೆ. ನ್ಯೂಗಿನಿಯಲ್ಲಿ ಮೀನು ಹಿಡಿಯುವ ಕಾಲ ಆರಂಭವಾಗುವಾಗ ಪಾಪುವನ್ ಜನ ಕುಣಿತವೊಂದನ್ನು ನಡೆಸುತ್ತಾರೆ. ಆ ಸಂದರ್ಭದಲ್ಲಿ ಅವರು ಮೀನಿನ ಆಕಾರದ ಮುಖವಾಡಗಳನ್ನೇ ಧರಿಸುವುದು. ಮೀನು ಬೇಗನೆ, ಹೇರಳವಾಗಿ ಗಾಳಕ್ಕೆ ಸಿಗಲಿ, ಬಲೆಗೆ ಬೀಳಲಿ ಎನ್ನುವುದೇ ಈ ಕುಣಿತದ ಉದ್ದೇಶ; ಮೀನುದೈವ ಒಲಿದರೆ ಒಳಿತು ಎಂದು ಮೀನಿನ ಮುಖವಾಡ.

ಸಿಂಹಳದ್ವೀಪದಲ್ಲಿ ಆದಿವಾಸಿಗಳ ಗ್ರಾಮದಲ್ಲಿ ಕಾಯಿಲೆ ಬಂದಿತೆಂದರೆ ಮಾಂತ್ರಿಕನಾದ ವೈದ್ಯನು ಕಾಯಿಲೆಯನ್ನೇ ಪ್ರತಿನಿಧಿಸಿದ ಮುಖವಾಡವನ್ನು ಹಾಕಿಕೊಂಡು ಕುಣಿಯುತ್ತಾನೆ. ಇದರಿಂದ ಆ ಕಾಯಿಲೆ ಓಡಿಹೋಗುವುದೆಂದು ಜನರಲ್ಲಿ ನಂಬಿಕೆಯಿದೆ. ಕಾಯಿಲೆಗಳು ಮಾತ್ರವಲ್ಲ, ಯಾವುದೇ ಉಪದ್ರವವಿದ್ದರೂ

ಮುಖವಾಡ ನೆರವಾಗುತ್ತದೆ. ದನಗಳ ರೋಗ ಹೆಚ್ಚಾದರೆ ಮಾಂತ್ರಿಕನು ಕೊಂಬುಗಳಿರುವ ಮುಖವಾಡ ವನ್ನು ಹಾಕಿಕೊಳ್ಳುತ್ತಾನೆ; ಹುಲಿಗಳ ಕಾಟ ಹೆಚ್ಚಾದರೆ ಅವನ ಮುಖವಾಡ ಹುಲಿಯದೇ.

ತುಂಬ ಹಿಂದಿನ ಕಾಲದಲ್ಲಿ ಶವಸಂಸ್ಕಾರ ಮಾಡುವಾಗ ಮುಖವಾಡಗಳನ್ನು ಬಳಸುತ್ತಿದ್ದರು: ಕ್ರಿಸ್ತಪೂರ್ವ 1300 ರ ಸುಮಾರಿಗೆ ಗ್ರೀಸ್‌ದೇಶದ ಮೈಸೀನೆ ಎಂಬಲ್ಲಿ ರಾಜರೂ ರಾಣಿಯರೂ ಸತ್ತರೆ ಅವರಿಗೆ ಬಂಗಾರದ ಮುಖವಾಡಗಳನ್ನು ಮಾಡಿ ಹೂಳುವ ಪದ್ಧತಿಯಿದ್ದಿತು. ಈ ಮುಖವಾಡಗಳನ್ನು ಈಗಲೂ ಅಥೆನ್ಸ್ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು. ಇಜಿಪ್ಟ್ ದೇಶದ ಚಕ್ರವರ್ತಿಗಳನ್ನೂ ಸಯಾಂ, ಕಂಬೋಡಿಯ ರಾಜರನ್ನೂ ಸಮಾಧಿ ಮಾಡುವಾಗ ಬಂಗಾರ, ಬೆಳ್ಳಿ, ಹಿತ್ತಾಳೆ ಮುಖವಾಡಗಳನ್ನು ಅಳವಡಿ ಸುವ ವಾಡಿಕೆಯಿದ್ದಿತು. ಪರಲೋಕ ಯಾತ್ರೆಯಲ್ಲಿ ಸತ್ತವನಿಗೆ ಮತ್ತೆ ಜೀವ ಬರಲು ಈ ಮುಖವಾಡ ನೆರವಾಗುವುದೆಂದು ಜನ ನಂಬಿದ್ದುದು ಈ ಪದ್ಧತಿಗೆ ಕಾರಣ.

ಧಾರ್ಮಿಕ ಪ್ರತಿಕ್ರಿಯೆಯೇ ಮುಖವಾಡದ ಮೂಲವಾದರೂ ಬರಬರುತ್ತ ರಂಗಭೂಮಿಯ ಮೇಲೆ ಇದರ ಬಳಕೆ ವಿಶೇಷವಾಯಿತು: ಗ್ರೀಕ್ ಮತ್ತು ರೋಮನ್ ಜನರಲ್ಲಿ ನಾಟಕಕ್ಕೆ ಮುಖವಾಡ ಅನಿ ವಾರ್ಯವಾಗಿದ್ದಿತು. ಗ್ರೀಕ್ ನಾಟಕಗಳ ಮುಖವಾಡವೇನೋ ಪ್ರಾಚೀನ ಧರ್ಮಕ್ಕೆ ಸಂಬಂಧಿಸಿದ ಕಲ್ಪ ಗಳಿಂದಲೇ ಪ್ರಭಾವಿತವಾದುದು. ರಂಗಭೂಮಿ ಸಂಕುಚಿತವಾಗಿದ್ದುದರಿಂದ ಪಾತ್ರಧಾರಿಗಳು ತಮ್ಮ ಸಹಜ ಪ್ರಮಾಣಕ್ಕಿಂತಲೂ ದೊಡ್ಡದಾಗಿ ಕಾಣಬೇಕಾದ, ಅವರ ಹಾವ-ಭಾವ, ಅಭಿನಯ-ಅಂಗಚೇಷ್ಟೆಗಳು ಪ್ರೇಕ್ಷಕರಿಗೆ ಚೆನ್ನಾಗಿ ಕಾಣಬೇಕಾದ ಅಗತ್ಯವಿದ್ದುವು. ದೊಡ್ಡದಾದ ಮುಖವಾಡಗಳನ್ನು ಮೇಣಬಟ್ಟೆಯ ಮೇಲೆ ಬಣ್ಣ ಬಳಿದು ಸಿದ್ಧಗೊಳಿಸುತ್ತಿದ್ದರು. ಕಣ್ಣಿಗೆ, ಬಾಯಿಗೆ ರಂಧ್ರಗಳಿರುತ್ತಿದ್ದುವು. ಪಾತ್ರಧಾರಿ ನೋಡ ಬೇಕು, ಮಾತನಾಡಬೇಕು, ಉಸಿರಾಡಬೇಕು ಅಲ್ಲವೆ?

ಗಂಭೀರಪಾತ್ರದ ಮುಖವಾಡಗಳು ಇಡೀ ಮುಖವನ್ನು ಮುಚ್ಚುತ್ತಿದ್ದುವು: ಅವಕ್ಕೆ ಕೃತಕ ಕೂದಲನ್ನೂ ಸೇರಿಸುತ್ತಿದ್ದರು. ಹಾಸ್ಯಪ್ರಧಾನವಾದ ಮುಖವಾಡಗಳಲ್ಲಿ ಅಗಲವಾದ ಬಾಯಿ, ವಿಕಾರವಾದ ಮುಖಮುದ್ರೆ ಇರುತ್ತಿದ್ದುವು. ಎರಡೂ ಬಗೆಯ ಮುಖವಾಡಗಳಲ್ಲಿ ಬಾಯಿಯ ವ್ಯವಸ್ಥೆ ಸ್ವಾರಸ್ಯ ವಾಗಿರುತ್ತಿದ್ದಿತು. ತುಟಿಗಳ ಬಳಿ ಜೋಡಿ ಚಿಪ್ಪುಗಳನ್ನು ಕೂಡಿಸಿ ಧ್ವನಿ ಹಿಗ್ಗುವಂತೆ ಮಾಡುತ್ತಿದ್ದರು; ಕೆಲ ವೊಮ್ಮೆ ಹಿತ್ತಾಳೆ ಚೂರುಗಳನ್ನೂ ಸೇರಿಸುತ್ತಿದ್ದರು. ಹಾಸ್ಯಪ್ರಧಾನವಾದ ಮುಖವಾಡದ ಉದ್ದೇಶ ಒಂದೇ, ಸಭಿಕರನ್ನು ನಗಿಸುವುದು.

ರೋಮನ್ ನಾಟಕಗಳಲ್ಲಿ ಮುಖವಾಡವೇ ಪಾತ್ರದ ವ್ಯಕ್ತಿತ್ವವನ್ನು ಪ್ರದರ್ಶಿಸುವಂಥದು. ಯಾವುದೇ ವಸ್ತುವಾಗಲೀ ಪಾತ್ರಧಾರಿಗಳಲ್ಲಿ ಅಷ್ಟಾಗಿ ವೈವಿಧ್ಯವಿರುತ್ತಿರಲಿಲ್ಲ: ಮುಖವಾಡದಿಂದಲೇ ಪಾತ್ರ ಪರಿಚಯವಾಗಬೇಕಾಗಿದ್ದಿತು. ರೋಮನ್ ಚಕ್ರಾಧಿಪತ್ಯ ಮಣ್ಣುಗೂಡಿದ ನಂತರ ಅಲ್ಲಿದ್ದ ಹಾಸ್ಯ ಪಾತ್ರಿಗಳು ಯೂರೋಪಿನಲ್ಲೆಲ್ಲ ಅಲೆದಾಡತೊಡಗಿದರು. ದೊಂಬರು, ನಟರು ಇವರೊಂದಿಗೆ ಸೇರಿ ಅಭಿನಯ ಪ್ರದರ್ಶನಗಳನ್ನು ಊರೂರಿನಲ್ಲಿ ನಡೆಸುವುದೇ ಅವರ ವೃತ್ತಿಯಾಯಿತು. ನಮ್ಮ ದೇಶದಲ್ಲಿ ಲಂಬಾಣಿಯ ರಿದ್ದಂತೆ ಆ ದೇಶಗಳಲ್ಲಿ ಈ ಪಾತ್ರಿಗಳು ತಿರುಗಾಡುತ್ತಿದ್ದರು. ಇವರ ಪ್ರದರ್ಶನವೆಂದರೆ ಜನ ಕಿಕ್ಕಿರಿದು ನೆರೆಯುತ್ತಿದ್ದರು; ಜನಪ್ರಿಯ ರಂಗಭೂಮಿ ಇವರಿಂದಲೇ ಉಳಿಯಿತು.

ಯೂರೋಪಿಗಿಂತ ಮೊದಲೇ ಪ್ರಾಚ್ಯದೇಶಗಳಲ್ಲಿ ಮುಖವಾಡ ಧರಿಸಿದ ಪಾತ್ರಿಗಳನ್ನೊಳಗೊಂಡ ನಾಟಕಗಳು, ನೃತ್ಯಗಳು ನಡೆಯುತ್ತಿದ್ದುವು. ಜಪಾನ್ ಮತ್ತು ಚೀಣಾದೇಶಗಳ ರಂಗಭೂಮಿಯಲ್ಲಿ ಮುಖ

ವಾಡಗಳನ್ನು ಸಾವಿರಾರು ವರ್ಷಗಳಿಂದ ಬಳಸುತ್ತಿದ್ದಾರೆ. ಜಪಾನ್ ದೇಶದ 'ನೋ' ನಾಟಕಗಳಲ್ಲಿ ದೇವತೆಗಳು, ದೈತ್ಯರು, ಸ್ತ್ರೀಪುರುಷರು, ಪ್ರಾಣಿಗಳು ಇವರಿಗೆಲ್ಲ ಬೇರೆ ಬೇರೆ ಮುಖವಾಡಗಳಿವೆ. ಅವುಗಳ ಆಕಾರ ರಚನೆ ತುಂಬ ಸ್ವಾರಸ್ಯವಾದುವು. ದೇವತೆಗಳ ಮುಖವಾಡ ಸುಂದರವಾದುದು, ದೈತ್ಯರದ್ದು ಭೀಕರ ಇತ್ಯಾದಿ. ಮುಖವಾಡದಿಂದಲೇ ಭಾವವನ್ನು ನಯವಾಗಿ ಹೊರಹೊಮ್ಮಿಸುತ್ತಿದ್ದರು. ಅವರ ನಾಟಕಗಳು ಕಳೆಕಟ್ಟು ವುದು ಈ ಮುಖವಾಡಗಳಿಂದಲೇ. ಟಿಬೆಟ್‌ದೇಶದ ಭೂತ ನೃತ್ಯಗಳಲ್ಲಿ ಬಳಸುವ ಎಲ್ಲ ಮುಖವಾಡಗಳೂ ಕರಾಳಾಕಾರವೇ. ಚೀಣಾದೇಶದಲ್ಲಿ ಪ್ರತ್ಯೇಕವಾದ ಮುಖವಾಡಗಳನ್ನು ಧರಿಸುವ ಪದ್ಧತಿ ಕಡಮೆ. ಮುಖಕ್ಕೆ ಬಣ್ಣ ಬಳಿದುಕೊಳ್ಳುವುದು ಅವರಲ್ಲಿ ಹೆಚ್ಚು, ನಮ್ಮ ಕಥಕ್ಕಳಿಯಂತೆ. ಒಂದೊಂದು ಬಣ್ಣಕ್ಕೂ ಒಂದೊಂದು ಸಾಂಪ್ರದಾಯಿಕವಾದ ಅರ್ಥವುಂಟು. ಸತ್ಪುರುಷನ ಮುಖದ ಬಣ್ಣ ಕೆಂಪು; ಕ್ರೂರ ಕರ್ಮಿಯದು ಕಪ್ಪು; ದುಷ್ಟನಾದ ರಾಜನ ಮುಖ ಬಿಳಿಬಣ್ಣದ್ದು. ರಂಗಭೂಮಿಯ ಪರಿಚಯವಿದ್ದವರಿಗೆ ಪಾತ್ರನಿರ್ದೇಶನ ತುಂಬ ಸುಲಭವಾಗುತ್ತದೆ. ಯಕ್ಷಗಾನ, ಬಯಲಾಟಗಳಲ್ಲಿ ಮುಖವಾಡವೆಂಬ ಪ್ರತ್ಯೇಕವಾದ ವ್ಯವಸ್ಥೆಯಿಲ್ಲದಿದ್ದರೂ ಮುಖವನ್ನು ಮಾರ್ಪಡಿಸಿಕೊಳ್ಳುವ ಸಾಧನಗಳು ಹಲವುಂಟು.

ಈಗಲೂ ಮುಖವಾಡಗಳ ಬಳಕೆಯಿಲ್ಲದೆ ಇಲ್ಲ. ಕ್ರಿಸ್‌ಮಸ್ ಮತ್ತು ಈಸ್ಟರ್ ಹಬ್ಬಗಳಲ್ಲಿ ಮುಖವಾಡಗಳನ್ನು ಧರಿಸಿದ 'ಮಮ್ಮರ್'ಗಳು ಜಾನಪದ ನಾಟಕಗಳಲ್ಲಿ ಪಾಲ್ಗೊಳುತ್ತಾರೆ. ಮುಖವಾಡ ಗಳನ್ನೇ ಹೆಚ್ಚಾಗಿ ಬಳಸುವ 'ಸಂತ ಜಾರ್ಜ್' ಮತ್ತು 'ಟರ್ಕಿ ವೀರ' ಮೊದಲಾದ ನಾಟಕಗಳು ಜನಪ್ರಿಯ ವಾಗಿವೆ. ಕತ್ತಿಕುಣಿತ, ಕೊಂಬುಕುಣಿತ, ಮಾರಿಸ್‌ಕುಣಿತ ಇವು ಮುಖವಾಡ ಪ್ರಧಾನವಾಗಿದ್ದು ಈಗಲೂ ನಡೆಯುತ್ತವೆ. ಕ್ರೈಸ್ತಧರ್ಮ ಆರಂಭವಾಗುವ ಕಾಲಕ್ಕಿಂತ ಮೊದಲೇ ಇದ್ದ ಪ್ರಾಚೀನ ಕಲ್ಪಗಳು ಇವು: ಮಳೆ ಬರುವಂತೆ ಮಾಡಲು, ಬಿಸಿಲು ಬರುವಂತೆ ಮಾಡಲು, ಸುಗ್ಗಿ ಸಮೃದ್ಧವಾಗುವಂತೆ ಮಾಡಲು ಈ ಕುಣಿತಗಳು ನಡೆಯುತ್ತವೆ. ಇವುಗಳಲ್ಲಿ ಮುಖವಾಡದ ಬಳಕೆ ಹೆಚ್ಚು.

ಮನುಷ್ಯನನ್ನೇ ತಾತ್ಕಾಲಿಕವಾಗಿ ದೈವದಂತೆ ಮಾರ್ಪಡಿಸುವ ಸಾಧನಗಳಲ್ಲಿ ಮುಖವಾಡ ಮುಖ್ಯವಾದುದು. ಧಾರ್ಮಿಕ ಕಲ್ಪಗಳಲ್ಲಿ ತಲೆದೋರಿದ ಈ ಅಗತ್ಯ ರಂಗಭೂಮಿಯ ಮೇಲೆ ಬೆಳೆದಾಗ ಅದಕ್ಕೆ ಲೌಕಿಕ ಕಳೆ ಒದಗಿತು ದಿಟ; ಆದರೆ ಮೂರ್ತಿಶಿಲ್ಪಕ್ಕೆ ಇದು ಒದಗಿಸಿದ ಪ್ರೇರಣೆ ಧಾರ್ಮಿಕ ನೆಲೆಯಲ್ಲಿಯೇ.

ಮೆಲನೇಶಿಯನ್ ನಿದರ್ಶನ

ಪೆಸಿಫಿಕ್ ಸಾಗರದಲ್ಲಿ ಹೂಮಾಲೆಯಂತೆ ಹಬ್ಬಿರುವ ದ್ವೀಪಗಳನ್ನು 'ಓಶಿಯಾನಿಯಾ' ದ್ವೀಪಗಳೆಂದು ಕರೆಯುತ್ತಾರೆ. ಭೌಗೋಳಿಕವಾಗಿ ಈ ಪ್ರದೇಶವನ್ನು ಮೂರು ದ್ವೀಪಸ್ತೋಮಗಳೆಂದು ವಿಭಾಗ ಮಾಡುವರು; ಪಶ್ಚಿಮದ (ಅಥವಾ ಒಳ) ದ್ವೀಪಮಾಲೆ, ಮೆಲನೀಶಿಯ, ವಾಯವ್ಯ ಪೆಸಿಫಿಕ್ ದ್ವೀಪಗಳೆನಿಸಿ ಕೊಳ್ಳುವ ಸಣ್ಣ ಸಣ್ಣ ದ್ವೀಪಗಳು, ಮೈಕ್ರೋನೀಶಿಯ ಮತ್ತು ನ್ಯೂಜಿಲೆಂಡ್ ಮೊದಲಾದ ಪೂರ್ವ ಪೆಸಿಫಿಕ್ ದ್ವೀಪಗಳನ್ನೊಳಗೊಂಡ ಪಾಲನೀಶಿಯ, ಇದು ಪ್ರಾದೇಶಿಕ ವಿಭಾಗವಷ್ಟೆ; ಸಾಂಸ್ಕೃತಿಕವಾಗಿ ಈ ವಿಭಾಗಗಳು ತೀರ ವಿಭಿನ್ನವೇನಲ್ಲ. ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಜನರು ಹಿಂದಿನಿಂದಲೂ ವಲಸೆ ಹೋಗಿ ಬರುತ್ತಿರುವುದು ಸ್ಪಷ್ಟವಾಗಿದೆ; ಭಾಷೆಯಲ್ಲಿಯೂ ಅಷ್ಟಾಗಿ ವೈವಿಧ್ಯವಿಲ್ಲ; ಆಚಾರ, ನಂಬಿಕೆಗಳ ಹರವು ಒಂದೇ.

ಸುಮಾರು 20,000 ವರ್ಷಗಳ ಹಿಂದೆ ನೀಗ್ರೋ ಬುಡಕಟ್ಟಿಗೆ ಸೇರಿದ ಜನರೂ ಐನಾಯ್ಡ್ ಮತ್ತು ವೆಡ್ಡಾಯ್ಡ್ ಬುಡಕಟ್ಟಿಗೆ ಸೇರಿದ ಜನರೂ ನ್ಯೂಗಿನಿ ಮತ್ತು ಆಸ್ಟ್ರೇಲಿಯಗಳಿಗೆ ವಲಸೆ ಬಂದರು, ಅಲ್ಲಿ ನೆಲೆಯಾಗಿ ನಿಂತರು. ಬೇಟೆ ಮತ್ತು ಹಣ್ಣುಗಳ ಆಯ್ಕೆಯೇ ಮೊದಲು ವೃತ್ತಿಗಳಾಗಿದ್ದು ಬರುಬರುತ್ತಾ ಬೇಸಾಯದ ಗುಟ್ಟನ್ನು ಈ ಜನರು ಕಂಡುಕೊಂಡರು; ನಾಯಿ, ಕೋಳಿ ಹಂದಿಗಳನ್ನು ಸಾಕಿಕೊಳ್ಳಲೂ ಆರಂಭಿಸಿದರು; ಕೆಲವು ದ್ವೀಪಗಳಿಗೇನೋ ಈ ಪ್ರಾಣಿಗಳು ಬರಲೇ ಇಲ್ಲ. ನಿದರ್ಶನಕ್ಕೆ ನ್ಯೂಜಿಲೆಂಡ್‌ನಲ್ಲಿ ಬಹುಕಾಲದವರೆಗೆ ಕೋಳಿಯಾಗಲೀ ಹಂದಿಯಾಗಲೀ ಕಾಣಸಿಗುವುದೇ ಕಷ್ಟವಾಗಿದ್ದಿತು. ಮುಂದೆ ಕಕೇಸಾಯ್ಡ್ ಮಂಗೋಲಾಯ್ಡ್ ಮಿಶ್ರಣವಿರುವ ಆಸ್ಟ್ರೇನೀಶಿಯನ್ ಜನಾಂಗ ಇಲ್ಲಿ ಪ್ರಬಲವಾಯಿತು. ಇವರು ಸಾಗರ ಜೀವಿಗಳಾಗಿದ್ದು ಸೊಗಸಾದ ದೋಣಿ, ತೆಪ್ಪಗಳನ್ನೂ ಮಾಡಲು ಕಲಿತಿದ್ದರು.

ಹೀಗೆ ಹಲವಾರು ಬುಡಕಟ್ಟಿನ ಜನರು ಒಟ್ಟಿಗೆ ಕಲೆತುದರ ಫಲವನ್ನು ಮೆಲನೀಶಿಯನ್ ಸಂಸ್ಕೃತಿಯ ವೈವಿಧ್ಯಗಳಲ್ಲಿ ಕಾಣಬಹುದು. ಅಲ್ಲಿನ ಸಂಸ್ಕೃತಿ ಮತ್ತು ಭಾಷೆ ಇವೆರಡರಲ್ಲಿಯೂ ಕಾಣಬರುವ ವೈವಿಧ್ಯ ಸ್ವಾರಸ್ಯವಾದುದು. ಮೆಲನೇಶಿಯನ್ ಪ್ರದೇಶದಲ್ಲಿ ನ್ಯೂಗಿನಿ (ದ್ವೀಪಗಳಲ್ಲೆಲ್ಲ ಇದೇ ದೊಡ್ಡದು), ಸಾಲೋಮನ್, ನ್ಯೂ ಹೈಬ್ರಿಡಿಸ್, ಫಿಜಿ, ನ್ಯೂ ಕೆಲೆಡೋನಿಯ ಈ ದ್ವೀಪಗಳು ಮುಖ್ಯವಾದುವು. ಇಡೀ ಓಶಿಯಾನಿಯಾದ ಸಂಸ್ಕೃತಿಗೆ ಫಿಜಿಯೇ ಕೇಂದ್ರಸ್ಥಾನದಲ್ಲಿದ್ದಿತು.

ಇಲ್ಲಿನ ಸಂಸ್ಕೃತಿಯನ್ನು ಅಧ್ಯಯನ ಮಾಡಿದ ನಂತರವೇ ಮಾನವಶಾಸ್ತ್ರದ ರೂಪುರೇಷೆಗಳು ಸ್ಪಷ್ಟವಾದುವು ಎಂದರೆ ಉತ್ಪ್ರೇಕ್ಷೆಯಲ್ಲ. 1845 ರಲ್ಲಿ ಸರ್ ಜಾರ್ಜ್ ಗ್ರೇ ಮಾಡಿದ ಅಧ್ಯಯನವು ಇ. ಬಿ. ಮ್ಯಾಕ್ಸ್ ಮ್ಯುಲರ್, ಪ್ರೋಬಿನಸ್, ಅಡಾಲ್ಫ್ ಬೆಸ್ಟಿಯನ್, ಸರ್ ಜೇಮ್ಸ್‌ಫ್ರೇಸರ್, ಸಿಗ್ಮಂಡ್ ಫ್ರಾಯ್ಡ್, ಟೇಲರ್, ಮೊದಲಾದವರ ಆಸಕ್ತಿಯನ್ನು ಕೆರಳಿಸಿತು. ಈ ಅಧ್ಯಯನದ ಫಲವಾಗಿ ಈ ಪ್ರದೇಶದ ಧರ್ಮ, ಕಲೆ, ಸಮಾಜ ವ್ಯವಸ್ಥೆಗಳ ಬಗ್ಗೆ ವಿಪುಲವಾದ ವಿವರಗಳು ಹೊರಬಿದ್ದುವು.

ಅವರ ಧಾರ್ಮಿಕ ವಿಧಿಗಳು ತುಂಬ ಸ್ವಾರಸ್ಯವಾದುವು. ಪ್ರಾಚೀನವೆನಿಸುವ ಕಲ್ಪನೆಗಳು, ಅದ್ಭುತವೆನಿಸುವ ಕಲಾಕೃತಿಗಳು ಈ ಧಾರ್ಮಿಕ ವಿಧಿಗಳಲ್ಲಿ ಹಾಸು ಹೊಕ್ಕಾಗಿ ಬಂದಿವೆ. ಮೆಲನೀಶಿಯದ ಧಾರ್ಮಿಕ ಕಲೆ ಈ ದೃಷ್ಟಿಯಿಂದ ಸ್ವಾರಸ್ಯವಾದುದು. ನ್ಯೂಹೈಬ್ರಿಡಿಸ್‌ನಲ್ಲಿ ಬಳಕೆಯಲ್ಲಿರುವ ನೂರಾರು ಕಥೆಗಳು ಶಿಲ್ಪಗಳಲ್ಲಿ ಮೂಡಿಬಂದಿವೆ; ಟೆಂಗು ಜನರ ಕಲ್ಪನೆಗಳಂತೂ ಕುತೂಹಲಕಾರಿಗಳಾದುವು. ಟ್ರೊಬ್ರಿಯಾಂಡರ್ ಜನರು ಉತ್ತಮ ನಾವಿಕರಾಗಿದ್ದು ಅವರ ಕಲೆಯಲ್ಲಿಯೂ ಕಲ್ಪನೆಗಳಲ್ಲಿಯೂ ಈ ವಿವರ ಎದ್ದು ಕಾಣುತ್ತದೆ.

ಮೆಲನೀಶಿಯನ್ ಜನರು ಎಲ್ಲ ಪದಾರ್ಥಗಳೂ ಜೀವಂತವಾಗಿದೆಯೆಂದು ಬಗೆದು ಜೀವತತ್ವಗಳು ಹೊರ ಆವರಣದಲ್ಲೆಲ್ಲ ತುಂಬಿವೆಯೆಂದು ನಂಬುತ್ತಾರೆ. ಸಾಮಾನ್ಯವಾದ ಮನುಷ್ಯ ಜೀವಕ್ಕಿಂತ ದೊಡ್ಡದಾದ 'ಭೂತ'ಗಳು ಅನಾದಿಕಾಲದಿಂದ ಭೂಮಿಯೊಳಗೂ ಹೊರಗೂ ಇರುವುದೆಂದು ಅವರ ಕಲ್ಪನೆ; ಅವರ ಭಾಷೆಯಲ್ಲಿ 'ಕಸ', 'ಸೋನ' ಎನ್ನುತ್ತಾರೆ. ಇಂಥ ಭೂತಗಳನ್ನು ಬೇರೆ ಬೇರೆ ಆಕಾರಗಳಲ್ಲಿ ಮಾಡಿಟ್ಟು, ಅವಕ್ಕೆ ಕಾಲಕಾಲಕ್ಕೆ ಅರ್ಚನೆಗಳನ್ನೂ ಬಲಿಗಳನ್ನೂ ಸಲ್ಲಿಸುವ ವಾಡಿಕೆಯಿದೆ. ಪಾಪುಲಿ ಪ್ರದೇಶದಲ್ಲಿ ಬಿದಿರಿನ ಗೊಂಬೆಯೊಂದನ್ನು ಬುಟ್ಟಿಯಂತೆ ಮಾಡಿ, ಬಾಯಿ ತೆರೆದುಕೊಂಡಂತೆ, ನಾಲ್ಕು ಕಾಲುಗಳ ಮೇಲೆ ನಿಂತಂತೆ ನಿರ್ಮಿಸುತ್ತಾರೆ. ಕಯ್ಯೆಯ್ ಮುನು ಎನ್ನುವ ಭಯಂಕರ ಭೂತವನ್ನು ಅದು ಪ್ರತಿನಿಧಿಸುತ್ತದೆ. ಬೇರೆ

ಸುಮಾರು 20,000 ವರ್ಷಗಳ ಹಿಂದೆ ನೀಗ್ರೋ ಬುಡಕಟ್ಟಿಗೆ ಸೇರಿದ ಜನರೂ ಐನಾಯ್ಡ್ ಮತ್ತು ವೆಡ್ಡಾಯ್ಡ್ ಬುಡಕಟ್ಟಿಗೆ ಸೇರಿದ ಜನರೂ ನ್ಯೂಗಿನಿ ಮತ್ತು ಆಸ್ಟ್ರೇಲಿಯಗಳಿಗೆ ವಲಸೆ ಬಂದರು, ಅಲ್ಲಿ ನೆಲೆಯಾಗಿ ನಿಂತರು. ಬೇಟೆ ಮತ್ತು ಹಣ್ಣುಗಳ ಆಯ್ಕೆಯೇ ಮೊದಲು ವೃತ್ತಿಗಳಾಗಿದ್ದು ಬರುಬರುತ್ತಾ ಬೇಸಾಯದ ಗುಟ್ಟನ್ನು ಈ ಜನರು ಕಂಡುಕೊಂಡರು; ನಾಯಿ, ಕೋಳಿ ಹಂದಿಗಳನ್ನು ಸಾಕಿಕೊಳ್ಳಲೂ ಆರಂಭಿಸಿದರು; ಕೆಲವು ದ್ವೀಪಗಳಿಗೇನೋ ಈ ಪ್ರಾಣಿಗಳು ಬರಲೇ ಇಲ್ಲ. ನಿದರ್ಶನಕ್ಕೆ ನ್ಯೂಜಿಲೆಂಡ್‌ನಲ್ಲಿ ಬಹುಕಾಲದವರೆಗೆ ಕೋಳಿಯಾಗಲೀ ಹಂದಿಯಾಗಲೀ ಕಾಣಸಿಗುವುದೇ ಕಷ್ಟವಾಗಿದ್ದಿತು. ಮುಂದೆ ಕಕೇಸಾಯ್ಡ್ ಮಂಗೋಲಾಯ್ಡ್ ಮಿಶ್ರಣವಿರುವ ಆಸ್ಟ್ರೇನೀಶಿಯನ್ ಜನಾಂಗ ಇಲ್ಲಿ ಪ್ರಬಲವಾಯಿತು. ಇವರು ಸಾಗರ ಜೀವಿಗಳಾಗಿದ್ದು ಸೊಗಸಾದ ದೋಣಿ. ತೆಪ್ಪಗಳನ್ನೂ ಮಾಡಲು ಕಲಿತಿದ್ದರು.

ಹೀಗೆ ಹಲವಾರು ಬುಡಕಟ್ಟಿನ ಜನರು ಒಟ್ಟಿಗೆ ಕಲೆತುದರ ಫಲವನ್ನು ಮೇಲನೀಶಿಯನ್ ಸಂಸ್ಕೃತಿಯ ವೈವಿಧ್ಯಗಳಲ್ಲಿ ಕಾಣಬಹುದು. ಅಲ್ಲಿನ ಸಂಸ್ಕೃತಿ ಮತ್ತು ಭಾಷೆ ಇವೆರಡರಲ್ಲಿಯೂ ಕಾಣಬರುವ ವೈವಿಧ್ಯ ಸ್ವಾರಸ್ಯವಾದುದು. ಮೆಲನೇಶಿಯನ್ ಪ್ರದೇಶದಲ್ಲಿ ನ್ಯೂಗಿನಿ (ದ್ವೀಪಗಳಲ್ಲೆಲ್ಲ ಇದೇ ದೊಡ್ಡದು), ಸಾಲೋಮನ್, ನ್ಯೂ ಹೈಬ್ರಿಡಿಸ್, ಫಿಜಿ, ನ್ಯೂ ಕೆಲೆಡೋನಿಯ ಈ ದ್ವೀಪಗಳು ಮುಖ್ಯವಾದುವು. ಇಡೀ ಓಶಿಯಾನಿಯಾದ ಸಂಸ್ಕೃತಿಗೆ ಫಿಜಿಯೇ ಕೇಂದ್ರಸ್ಥಾನದಲ್ಲಿದ್ದಿತು.

ಇಲ್ಲಿನ ಸಂಸ್ಕೃತಿಯನ್ನು ಅಧ್ಯಯನ ಮಾಡಿದ ನಂತರವೇ ಮಾನವಶಾಸ್ತ್ರದ ರೂಪುರೇಷೆಗಳು ಸ್ಪಷ್ಟವಾದುವು ಎಂದರೆ ಉತ್ಪ್ರೇಕ್ಷೆಯಲ್ಲ. 1845 ರಲ್ಲಿ ಸರ್ ಜಾರ್ಜ್ ಗ್ರೇ ಮಾಡಿದ ಅಧ್ಯಯನವು ಇ. ಬಿ. ಮ್ಯಾಕ್ಸ್ ಮ್ಯುಲರ್, ಪ್ರೋಬಿನಸ್, ಅಡಾಲ್ಫ್ ಬೆಸ್ಟಿಯನ್, ಸರ್ ಜೇಮ್ಸ್‌ಫ್ರೇಸರ್, ಸಿಗ್ಮಂಡ್ ಫ್ರಾಯ್ಡ್, ಟೇಲರ್, ಮೊದಲಾದವರ ಆಸಕ್ತಿಯನ್ನು ಕೆರಳಿಸಿತು. ಈ ಅಧ್ಯಯನದ ಫಲವಾಗಿ ಈ ಪ್ರದೇಶದ ಧರ್ಮ, ಕಲೆ, ಸಮಾಜ ವ್ಯವಸ್ಥೆಗಳ ಬಗ್ಗೆ ವಿಪುಲವಾದ ವಿವರಗಳು ಹೊರಬಿದ್ದುವು.

ಅವರ ಧಾರ್ಮಿಕ ವಿಧಿಗಳು ತುಂಬ ಸ್ವಾರಸ್ಯವಾದುವು. ಪ್ರಾಚೀನವೆನಿಸುವ ಕಲ್ಪನೆಗಳು, ಅದ್ಭುತವೆನಿಸುವ ಕಲಾಕೃತಿಗಳು ಈ ಧಾರ್ಮಿಕ ವಿಧಿಗಳಲ್ಲಿ ಹಾಸು ಹೊಕ್ಕಾಗಿ ಬಂದಿವೆ. ಮೆಲನೀಶಿಯದ ಧಾರ್ಮಿಕ ಕಲೆ ಈ ದೃಷ್ಟಿಯಿಂದ ಸ್ವಾರಸ್ಯವಾದುದು. ನ್ಯೂಹೈಬ್ರಿಡಿಸ್‌ನಲ್ಲಿ ಬಳಕೆಯಲ್ಲಿರುವ ನೂರಾರು ಕಥೆಗಳು ಶಿಲ್ಪಗಳಲ್ಲಿ ಮೂಡಿಬಂದಿವೆ; ಟಿಂಗು ಜನರ ಕಲ್ಪನೆಗಳಂತೂ ಕುತೂಹಲಕಾರಿಗಳಾದುವು. ಟ್ರೊಬ್ರಿಯಾಂಡರ್ ಜನರು ಉತ್ತಮ ನಾವಿಕರಾಗಿದ್ದು ಅವರ ಕಲೆಯಲ್ಲಿಯೂ ಕಲ್ಪನೆಗಳಲ್ಲಿಯೂ ಈ ವಿವರ ಎದ್ದು ಕಾಣುತ್ತದೆ.

ಮೆಲನೀಶಿಯನ್ ಜನರು ಎಲ್ಲ ಪದಾರ್ಥಗಳೂ ಜೀವಂತವಾಗಿದೆಯೆಂದು ಬಗೆದು ಜೀವತತ್ವಗಳು ಹೊರ ಆವರಣದಲ್ಲೆಲ್ಲ ತುಂಬಿವೆಯೆಂದು ನಂಬುತ್ತಾರೆ. ಸಾಮಾನ್ಯವಾದ ಮನುಷ್ಯ ಜೀವಕ್ಕಿಂತ ದೊಡ್ಡದಾದ 'ಭೂತ'ಗಳು ಅನಾದಿಕಾಲದಿಂದ ಭೂಮಿಯೊಳಗೂ ಹೊರಗೂ ಇರುವುದೆಂದು ಅವರ ಕಲ್ಪನೆ; ಅವರ ಭಾಷೆಯಲ್ಲಿ 'ಕಸ', 'ಸೋನ' ಎನ್ನುತ್ತಾರೆ. ಇಂಥ ಭೂತಗಳನ್ನು ಬೇರೆ ಬೇರೆ ಆಕಾರಗಳಲ್ಲಿ ಮಾಡಿಟ್ಟು, ಅವಕ್ಕೆ ಕಾಲಕಾಲಕ್ಕೆ ಅರ್ಚನೆಗಳನ್ನೂ ಬಲಿಗಳನ್ನೂ ಸಲ್ಲಿಸುವ ವಾಡಿಕೆಯಿದೆ. ಪಾಪುಲಿ ಪ್ರದೇಶದಲ್ಲಿ ಬಿದಿರಿನ ಗೊಂಬೆಯೊಂದನ್ನು ಬುಟ್ಟಿಯಂತೆ ಮಾಡಿ, ಬಾಯಿ ತೆರೆದುಕೊಂಡಂತೆ, ನಾಲ್ಕು ಕಾಲುಗಳ ಮೇಲೆ ನಿಂತಂತೆ ನಿರ್ಮಿಸುತ್ತಾರೆ. ಕಯ್ಯಾಯ್ ಮುನು ಎನ್ನುವ ಭಯಂಕರ ಭೂತವನ್ನು ಅದು ಪ್ರತಿನಿಧಿಸುತ್ತದೆ. ಬೇರೆ

ಬೇರೆ ಭೂತಗಳಿಗೆ ಬೇರೆ ಬೇರೆ ಹೆಸರುಗಳಿವೆ. ಬೇರೆ ಬೇರೆ ಆಕಾರದ ಗೊಂಬೆಗಳು ಇವನ್ನು ಪ್ರತಿನಿಧಿಸುತ್ತವೆ. ಈ ಭೂತಗಳಲ್ಲಿ ಅಡಾರೋ ಎನ್ನುವ ಸಮುದ್ರ ಭೂತ ಮುಖ್ಯವಾದುದು. ಸಾಲೋಮನ್ ದ್ವೀಪಗಳಲ್ಲಿ ಇದರ ಆರಾಧನೆ ವಿಶಿಷ್ಟವಾಗಿದೆ. ಇಲ್ಲಿಯೇ ನ್ಯೂಜಾರ್ಜಿಯಾ ಎಂಬೆಡೆ ದೋಣಿಯ ಮುಂಭಾಗದ ಅಣಿಗೆಯನ್ನು ಕರಿಮರದಲ್ಲಿ ಮುಖದಂತೆ ಕಡೆದು, ಅದಕ್ಕೆ ದೋಣಿ ಹೊರಡುವಾಗ ಬಲಿ ಕೊಡುತ್ತಾರೆ; ದೋಣಿ ಮುಳುಗದಂತೆ ಅದು ಕಾಪಾಡುತ್ತದೆಂದು ನಂಬಿಕೆಯಿದೆ.

ಕೆಲವು ಧಾರ್ಮಿಕ ನೃತ್ಯಗಳಲ್ಲಿ ಭೂತಗಳ ಮುಖವಾಡವನ್ನು ಧರಿಸುವುದೂ ಉಂಟು. ಇದಕ್ಕೆ ಅನುಗುಣವಾಗಿ ಹಗುರವಾದ ಸಾಮಗ್ರಿಗಳಿಂದ ಕಲಾತ್ಮಕವಾಗಿ ಮುಖವಾಡಗಳನ್ನು ತಯಾರಿಸುತ್ತಾರೆ. ಸಂದರ್ಭಕ್ಕೆ ತಕ್ಕಂತೆ ಮುಖವಾಡಗಳನ್ನು ತಯಾರಿಸುವುದೂ ಸಿಂಗರಿಸುವುದೂ ಒಂದು ಗುಂಪಿನ ವೃತ್ತಿ ಯಾಗಿ ಪರಿಣಮಿಸಿತು. ಮೆಲನೇಶಿಯನ್ ಜನರ ದೇವತೆಗಳಲ್ಲಿ ಅಥವಾ ಭೂತಗಳಲ್ಲಿ ತಾರತಮ್ಯವಿಲ್ಲ; ಅವರ ಸಾಮಾಜಿಕ ರಚನೆಯಲ್ಲಿಯೂ ಸ್ತರಗಳು ಕಾಣಿಸುವುದಿಲ್ಲ. ಅವರಲ್ಲಿ ಯಾವೊಂದು ಪಂಗಡವೂ ನೇರ ವಾಗಿ ದೇವತೆಗಳಿಂದ ಅಥವಾ ಭೂತಗಳಿಂದ ಇಳಿದುಬಂದಿತೆನ್ನುವ ಕಲ್ಪನೆಯಿಲ್ಲ.

ಮೆಲನೀಶಿಯನ್ ಜನರಲ್ಲಿ ಈ ಭೂತಗಳಷ್ಟೇ ಮುಖ್ಯವಾದುವು ಪಿತೃದೇವತೆಗಳು ಅಥವಾ ಪ್ರೇತಗಳು. ತೀರಿಕೊಂಡವನ ಸ್ಮರಣೆಗೆಂದು 'ರಂಬಾರಂಬ್' ಎನ್ನುವ ಗೊಂಬೆಯನ್ನು ಮಾಡಿಡುವ ಪದ್ಧತಿ ದಕ್ಷಿಣ ಮಲೆಕುಲದಲ್ಲಿ ಬಳಕೆಯಲ್ಲಿದೆ. ಮರದ ಕೊಂಬೆಯೊಂದಕ್ಕೆ ಸಸ್ಯದಿಂದ ತಯಾರಿಸಿದ ಅಂಟನ್ನು ಮೆತ್ತಿ ಅದರ ಮೇಲೆ ಬಣ್ಣ ಬಳಿದು ಈ ಗೊಂಬೆಗಳನ್ನು ಮಾಡುತ್ತಾರೆ. ಕೈಕಾಲುಗಳೆಂದು ಬಾಳೆಯೆಲೆಯ ಸುರುಳಿ ಗಳನ್ನು ಕಟ್ಟುತ್ತಾರೆ. ಮುಖದೊಳಗೆ ಆ ಮನುಷ್ಯನ ತಲೆಯೊಡನ್ನಿಡುತ್ತಾರೆ; ಜೇಡರ ಬಲೆಯಿಂದ ಕೂದಲನ್ನು ಮಾಡುತ್ತಾರೆ. ಮನುಷ್ಯನ ಸಾಮಾಜಿಕ ಸ್ಥಿತಿಯನ್ನು ಸೂಚಿಸಲು ರೆಕ್ಕೆ ಪುಕ್ಕಗಳು, ಕಡ್ಡಿಕೋಲುಗಳು ನೆರವಾಗುತ್ತವೆ.

ವಿಭಿನ್ನ ವ್ಯಕ್ತಿಗಳ ಪ್ರೇತಗಳಲ್ಲದೆ ಇಡೀ ಜನಾಂಗದ ಮೂಲಪುರುಷನೆಂದು ಒಂದು ಪಿತೃದೇವತೆಯ ಗೊಂಬೆಯನ್ನೂ ಮಾಡಿಡುವ ಪದ್ಧತಿ ಅವರಲ್ಲುಂಟು. ಮಧ್ಯ ಪೆಸಿಫಿಕ್ ಪ್ರದೇಶದಲ್ಲಿ ಇಂಥ ಗೊಂಬೆಗಳನ್ನು ವಿಶೇಷವಾಗಿ ಕಾಣಬಹುದು. ಸಾಮಾಜಿಕ ಧಾರ್ಮಿಕ ವಿಧಿಗಳು ಇಂಥ ಗೊಂಬೆಗಳ ಸಮ್ಮುಖದಲ್ಲಿಯೇ ನಡೆಯುವುವು. ಇವನ್ನು ಇಡುವುದೂ ಊರ ಚಾವಡಿಯಲ್ಲಿ. ಕಾಲಕಾಲಕ್ಕೆ ನಡೆಯುವ ಧಾರ್ಮಿಕ ನೃತ್ಯಗಳಲ್ಲಿ ಇಂಥ ಪ್ರೇತಮೂರ್ತಿಗಳನ್ನು ಜೇಡಿಮಣ್ಣಿನಲ್ಲೇ ಮಾಡಿ ಅವನ್ನು ಉದ್ದನೆಯ ಕೋಲಿನ ಮೇಲೆ ಸಿಕ್ಕಿಸಿ ಕುಣಿಯುತ್ತಾರೆ. ಮೃತರಾದವರ ಆತ್ಮ ಈ ಮೂರ್ತಿಗಳಲ್ಲಿ ಈ ಸಂದರ್ಭದಲ್ಲಿ ಇರುವುದೆಂದು ಅಲ್ಲಿನ ಜನರ ನಂಬಿಕೆ. ನ್ಯೂಹೈಬ್ರಿಡಿಸ್‌ನಲ್ಲಿ ಇಂಥ ಮೂರ್ತಿಗಳು ವಿಶೇಷವಾಗಿವೆ. ಕೆಲವೊಮ್ಮೆ ಬರಿಯ ಮುಖವಾಡಗಳು ಇರುವುದೂ ಉಂಟು.

ಸಾಲೋಮನ್ ದ್ವೀಪಗಳಲ್ಲಿ ಫ್ಲಾರಿಡಾ ಎಂಬಲ್ಲಿ ಒಂದು ಕಲ್ಪನೆಯಿದೆ. ಬದುಕಿದ್ದಾಗ ಹೆಚ್ಚಿನ ಸಾಮರ್ಥ್ಯವನ್ನೋ ಪ್ರಭಾವವನ್ನೋ ಪಡೆದಿದ್ದ ವ್ಯಕ್ತಿ ಸತ್ತಮೇಲೆ 'ಟಿಂಡಲೋ' ಎನ್ನುವ ಪ್ರೇತವಾಗಿ ಈ ಸಾಮರ್ಥ್ಯವನ್ನು ಅಥವಾ ಪ್ರಭಾವವನ್ನು ಉಳಿಸಿಕೊಳ್ಳುತ್ತಾನೆ. ಆ ಮನುಷ್ಯನನ್ನು ಹೂಳಿದ ಸ್ಥಳದಲ್ಲಿ, ನದೀತೀರದಲ್ಲಿ, ಅವನ ಹಳ್ಳಿಯಲ್ಲಿ, ಅವನಿಗೆ ಸೇರಿದ ಉದ್ಯಾನದಲ್ಲಿ ಪೊದೆಗಳ ಹಿಂದೆ ಅವನ ಮೂರ್ತಿಗಳನ್ನು ಮಾಡಿಡುತ್ತಾರೆ. ಅವುಗಳ ಮುಂದೆ ಆಹಾರ, ನಾಣ್ಯಗಳನ್ನು ಸಮರ್ಪಿಸುತ್ತಾರೆ. ಟಿಂಡಲೋ ಈ



ಚಿತ್ರ 139

ಈಸ್ಟರ್ ದ್ವೀಪಗಳ ಕವಕವ ಎನ್ನುವ ಪಿತೃದೇವತೆ; ನದಿಯಲ್ಲಿ ತೇಲಿಬಂದ ಮರದ ತುಂಡಿನಿಂದ ಇದನ್ನು ಕಡೆಯುತ್ತಾರೆ



ಚಿತ್ರ 140

ಈಸ್ಟರ್ ದ್ವೀಪಗಳ ಆದಿವಾಸಿಗಳು ಅಗ್ನಿ ಪರ್ವತದ ಬಂಡೆಯಲ್ಲಿ ಕಡೆಯುವ ದೇವತಾ ಮೂರ್ತಿ

ಚಿತ್ರ 141

ಆಫ್ರಿಕ ಖಂಡದ ಯುರುಬ ಜನಾಂಗದ ಶಂಗೋ ಎಂಬ ಪರಶು ದೇವತೆ. ಇದು ಇಮ್ಮುಖದ ಕೊಡಲಿ. ಅದರಲ್ಲಿ ಮೂಡಿಸಿರುವುದು ಶಂಗೋನ ಮೂರ್ತಿ; ಅವನು ಮರುದ್ಗಣಗಳಿಗೆ ಒಡೆಯ, ರುದ್ರ



ಚಿತ್ರ 142

ಮ್ಯಾಂಗ್ಯನ್ ದ್ವೀಪಗಳ ನ್ಗರಿಕಿ ಜನಾಂಗದವರ ದೇವತೆ ರೊಂಗೋ

ಚಿತ್ರ 143

ಡಚ್‌ನ್ಯೂಗಿನಿಯ ಪ್ರೇತವಿಗ್ರಹ. ಇದನ್ನು ಕರೋವರ್ ಎಂದು ಕರೆಯುತ್ತಾರೆ. ಮನುಷ್ಯ ಬದುಕಿರುವಾಗಲೇ ಮರದಲ್ಲಿ ಇದನ್ನು ಕಡೆದಿಟ್ಟುಕೊಳ್ಳುತ್ತಾರೆ; ಸತ್ತೊಡನೆ ಜೀವ ಇದರಲ್ಲಿ ಸೇರಿಕೊಳ್ಳುವುದೆಂದು ನಂಬಿಕೆ. ಕೆಲವೊಮ್ಮೆ ತೀರಿಕೊಂಡವನ ತಲೆಯೋಡನ್ನೂ ಇದರಲ್ಲಿ ಅಡಗಿಸಿಟ್ಟುಕೊಳ್ಳುವುದುಂಟು



ಚಿತ್ರ 144

ನ್ಯೂ ಐರ್‌ಲೆಂಡ್‌ನ ಆದಿವಾಸಿಗಳ ಉಲಿ ಎನ್ನುವ ವೀರಪುರುಷನ ಮೂರ್ತಿ



ಚಿತ್ರ 145

ದಕ್ಷಿಣ ಅಮೆರಿಕದ ವಾಯುದೇವತೆ, ಎಹೆಕಾಟ್ಲ್

ಮೂರ್ತಿಗಳನ್ನು ಪ್ರವೇಶಿಸುವುದಿಲ್ಲವಾದರೂ ಈ ಸಮರ್ಪಣೆಗಳಿಂದ ತೃಪ್ತವಾಗುವುದಂತೆ. ಟಿಂಡಲೋ ಉಳಿಯುವುದು ಬೇರೊಂದು ಪ್ರಾಣಿಯಲ್ಲಿ; ಮೊಸಳೆ, ಷಾರ್ಕ್‌ಮೀನು, ಹಾವು ಇವು ಸಾಮಾನ್ಯವಾಗಿ 'ಟಿಂಡಲೋ'ವನ್ನು ಭರಿಸುತ್ತವೆ.

ಈ ಜನರಲ್ಲಿ ಧಾರ್ಮಿಕ ಕಲ್ಪನೆಗಳಿಗೆ ಸಂಬಂಧಿಸಿದಂತೆ ಕೆಲವು ಕ್ರೂರ, ದುಷ್ಟ ಪದ್ಧತಿಗಳಿವೆ. ತಲೆಗಳ ಬೇಟೆ, ಮನುಷ್ಯರನ್ನೇ ತಿನ್ನುವುದು, ಲೈಂಗಿಕ ಅತ್ಯಾಚಾರ ಇವೆಲ್ಲ ಬಳಕೆಯಲ್ಲಿರುವ ಜನಾಂಗಗಳಿವೆ. ಇವರ ಪುರಾಣ ಕಥೆಗಳು ಯುದ್ಧಕ್ಕೆ ಸಂಬಂಧಪಟ್ಟುವು. ಅವರ ಧಾರ್ಮಿಕ ವಿಧಿಗಳಲ್ಲಿಯೂ ಸಮರಪ್ರಸಕ್ತಿಯಿದೆ. ಹೀಗಾಗಿಯೇ ವೀರರಸ ಪ್ರಧಾನವಾದ ಕೆಲವು ಕ್ರೂರ ಪದ್ಧತಿಗಳು ಜನರಲ್ಲಿ ಬೆಳೆದುಬಂದಿವೆ. ಐರೋಪ್ಯ ಸಂಸ್ಕೃತಿಯ ಸಂಪರ್ಕದಿಂದಾಗಿ ಈಚೆಗೆ ಇವುಗಳು ಮರೆಯಾಗಿವೆ ಎನ್ನುವುದು ನಿಜ.

ಮರಣಾನಂತರ ಬಾಳುವೆಯ ವಿಚಾರವಾಗಿ ಅವರು ಪ್ರತಿಯೊಬ್ಬ ವ್ಯಕ್ತಿಗೂ ಎರಡು ಜೀವಗಳಿವೆಯೆಂದು ನಂಬುತ್ತಾರೆ. ವ್ಯಕ್ತಿಯು ತೀರಿಕೊಂಡೊಡನೆ ಒಂದು ಜೀವ ಯಾವುದಾದರೊಂದು ದ್ವೀಪದಲ್ಲಿ ನೆಲಸುವುದಂತೆ, ಅಥವಾ ನೆಲದೊಳಗೆ ಹುದುಗಿಕೊಳ್ಳುವುದಂತೆ. ಇನ್ನೊಂದು ಜೀವ ಹಲವಾರು ರೂಪಗಳನ್ನು ಧರಿಸಿಕೊಳ್ಳುತ್ತದೆಯಂತೆ. ಅದು ಧರಿಸುವ ರೂಪಗಳು ಕಲೆಗೆ ವಸ್ತುಗಳಾಗಿವೆ. ಪ್ರೇತಜೀವ ಯಾವ ರೂಪವನ್ನು ಧರಿಸಿದೆಯೆಂದು ಜನಾಂಗದ ಪುರೋಹಿತರು ನಿಮಿತ್ತಗಳಿಂದ ತಿಳಿದುಕೊಂಡು ಹೇಳಿದ ಮೇಲೆ ಆಯಾ ಆಕೃತಿಗಳನ್ನು ಮರ, ಕಪ್ಪೆಚಿಪ್ಪು, ಜೇಡಿಮಣ್ಣು, ರೆಕ್ಕೆ–ಪುಕ್ಕಗಳು, ಮರದ ತೊಗಟೆ, ಚರ್ಮ ಇವುಗಳಿಂದ ತಯಾರಿಸುತ್ತಾರೆ. ಪಿತೃಸಂತರ್ಪಣೆಗೆ ಇವು ಅಗತ್ಯವಾಗುತ್ತದೆ.

ಕೆಲವು ಪ್ರೇತಗಳು ಸುಮುಖವಾಗಿರುತ್ತವೆ; ಕೆಲವು ಕ್ರೂರವಾಗಿರುತ್ತವೆ. ಇವುಗಳ ಆಕಾರ ಸ್ವಭಾವಕ್ಕೆ ಅನುಗುಣವಾಗಿರುವುದು ಸಹಜವೇ. ಟೊರೇಸ್ ದ್ವೀಪದಲ್ಲಿ ಡೋಗಯ್ ಎನ್ನುವ ಹೆಣ್ಣು ಭೂತ ತೆಂಗಿನಕಾಯಿ ಬೆಳೆಯನ್ನು ಹಾಳುಮಾಡುತ್ತದೆ, ಮೀನುಗಳನ್ನು ನಾಶಪಡಿಸುತ್ತದೆ. ಅಬ್ಬರದ ಅಲೆಗಳು ಏಳುವಂತೆ ಮಾಡುತ್ತದೆ. ಇದರ ಮೂರ್ತಿಯೂ ಭಯಂಕರವಾಗಿರುತ್ತದೆ. ಇಂಥ ಭೂತಗಳನ್ನು ಸಮಾಧಾನಪಡಿಸುವ ವಿಧಿಗಳು ನಡೆದಾಗ ಈ ಭೂತಗಳ ಮುಖವಾಡಗಳನ್ನು ಧರಿಸಿ ಕುಣಿಯುತ್ತಾರೆ.

ಮೆಲನೇಶಿಯನ್ ಜನರ ಕಲಾಕೃತಿಗಳಲ್ಲಿ ಸಂಗೀತ ವಾದ್ಯಗಳು ಸ್ವಾರಸ್ಯವಾದುವು. ಇದಕ್ಕೊಂದು ಪೌರಾಣಿಕ ಹಿನ್ನೆಲೆ ಇದೆ. ಒಮ್ಮೆ ಕೊಳವೊಂದರಿಂದ ದಿವ್ಯವಾದ ಸಂಗೀತ ಕೇಳಿಬಂದಿತು. ಇದನ್ನು ಆಲಿಸಿದ ಜನರಲ್ಲಿ ಒಬ್ಬ ನೀರಿಗೆ ಧುಮುಕಿ, ನೀರಿನಲ್ಲಿ ಬೆಳೆದ ಗಿಡವೊಂದರ ಬೇರನ್ನು ಹಿಡಿದು ತಳದೊಳಗೆ ಹೋದ; ಅಲ್ಲಿ ಅವನ ಪಿತೃದೇವತೆ (ಸ್ತ್ರೀ)ಯಿದ್ದುದನ್ನು ಕಂಡು ಅವಳಿಗೆ ನಮಸ್ಕರಿಸಲು ಆಕೆ ಅವನಿಗೆ ಕೊಳಲು, ಡೋಲು, ಕೊಂಬು ಮೊದಲಾದ ದಿವ್ಯವಾದ್ಯಗಳನ್ನು ಕೊಟ್ಟಳು; ಎರಡು ತಿಂಗಳ ಕಾಲ ಅವನ್ನು ನುಡಿಸಬಾರದೆಂದು ತಿಳಿಸಿದ್ದರೂ ಆತನು ಮೇಲೆ ಬಂದೊಡನೆ ಕುತೂಹಲವನ್ನು ತಡೆಯಲಾರದೆ ವಾದ್ಯಗಳನ್ನು ನುಡಿಸಿದನು. ಈ ಸಂಗೀತವನ್ನು ಕೇಳಿದ ನೀರಿನ ಭೂತಗಳು ಮನುಷ್ಯರಾಕಾರವನ್ನು ಧರಿಸಿ ಅವನ ಬಳಿಗೆ ಬಂದು ತಮಗೂ ವಾದ್ಯವನ್ನು ನುಡಿಸಲು ಕೊಡುವಂತೆ ಕೇಳಿದುವು. ಅವನು ಕೊಟ್ಟೊಡನೆ ಅವು ವಾದ್ಯಗಳೊಂದಿಗೆ ನೀರಿನಲ್ಲಿ ಮರೆಯಾದರು. ಅನಂತರ ಊರ ಜನರು ಅದೇ ಆಕಾರದ ವಾದ್ಯಗಳನ್ನು ತಾವೇ ತಯಾರಿಸಿಕೊಂಡರು.

ಮೆಲನೇಶಿಯನ್ ಜನರು ವಾದ್ಯಗಳನ್ನು ಚಿತ್ರವಿಚಿತ್ರವಾಗಿ, ವಿವಿಧ ವಿನ್ಯಾಸಗಳಲ್ಲಿ, ಸೊಗಸಾದ ಅಲಂಕರಣಗಳೊಂದಿಗೆ ಮಾಡುತ್ತಾರೆ. ವಾದ್ಯಗಳು ಮಾತ್ರವಲ್ಲದೆ, ಉನ್ನತ ಸ್ಥಾನದ ವ್ಯಕ್ತಿಗಳು ಹಿಡಿಯುವ ಆಯುಧಗಳನ್ನೂ ಕಲಾತ್ಮಕವಾಗಿ ಮಾಡುತ್ತಾರೆ. ನ್ಯೂಕೆಲಡೋನಿಯದಲ್ಲಿ ಜನಾಂಗದ ನಾಯಕನು ಹಿಡಿದಿರುವ ಕೊಡಲಿ ಒಂದು ನಿದರ್ಶನ. ಅವನು ಅದನ್ನು ಹಿಡಿದಿದ್ದಾಗ ಯಾರೂ ಅವನಿಗೆ ಪ್ರತಿ ಹೇಳುವಂತಿಲ್ಲ, ಅವನ ಮಾತನ್ನು ಮೀರುವಂತಿಲ್ಲ. ಮಳೆ ಬರಬೇಕೆಂದು ನಡೆಸುವ ವಿಧಿಗಳಲ್ಲಿ ಈತನು ಈ ಕೊಡಲಿಯನ್ನು ಹಿಡಿದೇ ಕುಣಿಯುತ್ತಾನೆ.

ಇವರಿಗೆ ಮಂತ್ರ ತಂತ್ರಗಳಲ್ಲಿ ಅಪಾರವಾದ ಶ್ರದ್ಧೆ. ಯಾವೊಂದು ಪ್ರಯೋಜನಕ್ಕಾಗಿಯೂ ಇವರು ಮಾಂತ್ರಿಕರನ್ನು ಆಶ್ರಯಿಸುತ್ತಾರೆ. ಉದ್ಯಾನದಲ್ಲಿ ಫಸಲು ಹೆಚ್ಚಬೇಕೆಂದರೆ, ನೀರಿನಲ್ಲಿ ಮೀನು ಹೆಚ್ಚಾಗಿ ದೊರೆಯಬೇಕೆಂದರೆ, ದೋಣಿ ಸುರಕ್ಷಿತವಾಗಿ ಹಿಂದಕ್ಕೆ ಬರಬೇಕೆಂದರೆ, ರೋಗರುಜಿನೆಗಳು ಮರೆಯಾಗಬೇಕೆಂದರೆ ಸರಿಯಾದ ಮಂತ್ರ, ಸಮರ್ಪಕವಾದ ತಂತ್ರ ಅಗತ್ಯವೆಂದು ಅವರ ನಂಬಿಕೆ. ತಾಂತ್ರಿಕ ವಿಧಿಗಳಲ್ಲಿ ಗೊಂಬೆಗಳು ಅನಿವಾರ್ಯವಾಗಿರುತ್ತವೆ. ಸಂದರ್ಭಕ್ಕೆ ತಕ್ಕಂತೆ ದೇವತೆಗಳ, ಭೂತಗಳ, ಪ್ರೇತಗಳ ಆಕೃತಿಗಳನ್ನು ಮಾಡುವ ಕಲೆ ಇವರಲ್ಲಿ ಚೆನ್ನಾಗಿ ಬೆಳೆದುಬಂದಿದೆ.

ಆದರೆ ಮುಖ್ಯವಾಗಿ ಪ್ರೇತಕಾರ್ಯಗಳಲ್ಲಿಯೇ ಗೊಂಬೆಗಳ ವೈವಿಧ್ಯವಿರುವುದು. ಮನುಷ್ಯ ಸತ್ತೊಡನೆಯೇ 'ಕೊರ್ವಾರ್' ಗೊಂಬೆಗಳನ್ನು ಮರದಲ್ಲಿ ಕಡೆಯುತ್ತಾರೆ. ತಲೆಯಲ್ಲಿ ಟೊಳ್ಳುಮಾಡಿ ಸತ್ತವನ ತಲೆಯೋಡನ್ನಿರಿಸುತ್ತಾರೆ. ಹಾಗೆ ಮಾಡಿದರೆ ತೀರಿಕೊಂಡ ವ್ಯಕ್ತಿಯು ಈ ಗೊಂಬೆಯಲ್ಲಿ ವಾಸಮಾಡುವನೆಂದು ನಂಬಿಕೆ. ನ್ಯೂಗಿನಿಯ ಕಡೆ ಲೋಹದಲ್ಲಿಯೂ ಗೊಂಬೆಗಳನ್ನು ಮಾಡಿ ಕೈಯಲ್ಲಿ ಹಾವುಗಳನ್ನು ಹಿಡಿದಿರುವಂತೆ ಚಿತ್ರಿಸುತ್ತಾರೆ. ದೋಣಿಯ ಮುಂಭಾಗದಲ್ಲಿ ಅಣಿಗೆಯ ಮೇಲೆ ಕೂಡ ಪ್ರೇತಮೂರ್ತಿಗಳನ್ನು ಇಡುವ ಪದ್ಧತಿ ಕೆಲವು ದ್ವೀಪಗಳಲ್ಲಿದೆ. ನ್ಯೂ ಹೆಬ್ರಿಡಿಸ್‌ನಲ್ಲಿ ಇದು ವಿಶೇಷ. ಹಾಗೆ ಮಾಡುವಾಗ ಇದನ್ನು ಆಕರ್ಷಕವಾಗಿ ಸಿಂಗರಿಸುವರು. ಧಾರ್ಮಿಕ ನೆಲೆಯಲ್ಲಿ ಕಲೆ ಒದಗಿಬಂದುದು ಹೀಗೆ.

ಶಬರಿಮಲೆಯ ಶಾಸ್ತ

ನಮ್ಮ ದೇಶದ ಒಂದೊಂದು ದೇವತೆಗೂ ವಿಶಿಷ್ಟವಾದ ಇತಿಹಾಸವುಂಟು, ವ್ಯಕ್ತಿತ್ವವುಂಟು, ಇತಿಹಾಸದಿಂದ ವ್ಯಕ್ತಿತ್ವ ಮೈದುಂಬಿ ಬರುತ್ತದೆ. ದೇವತೆಯ ಇತಿಹಾಸವು ಜನರ ಅನುಭವಗಳನ್ನೂ ಆಕಾಂಕ್ಷೆಗಳನ್ನೂ, ಜಾನಪದ ಪ್ರವೃತ್ತಿಗಳನ್ನೂ ಪ್ರಸಂಗಗಳನ್ನೂ ಪ್ರತಿಬಿಂಬಿಸುತ್ತದೆ. ದೇವತೆಯ ಸೃಷ್ಟಿ ಮನುಷ್ಯನಿಂದಲೇ ಆಗುತ್ತದೆ; ಆದರೆ ಈ ಸೃಷ್ಟಿಯಲ್ಲಿ ತಲೆಮಾರುಗಳ ವಿಕಾಸ ಕಾಣಬರುತ್ತದೆ. ಇಡೀ ಜನಾಂಗದ ಸುಪ್ತಚೇತನ ಹೊರಹೊಮ್ಮಿ ಪುತ್ಥಳಿಯಾಗುವುದು ಕಾಣಬರುತ್ತದೆ. ಮೇಲುನೋಟಕ್ಕೆ ಸಂದಿಗ್ಧವೆನಿಸಿದರೂ, ಆಕಸ್ಮಿಕವೆನಿಸಿದರೂ ಮೂಲಭೂತವಾದ ಪ್ರವೃತ್ತಿಗಳ ಅಗತ್ಯವನ್ನು ಗಮನಿಸುವುದು ಸಾಧ್ಯ. ಜನರ ಜೀವನ ವಿಧಾನ, ಪರಿಸರದ ಒತ್ತಡ, ಚರಿತ್ರೆಯ ಹೆಜ್ಜೆಗಳು, ಜನಾಂಗದ ಸ್ವಭಾವ ಇವೆಲ್ಲವೂ ದೇವತಾ ಕಲ್ಪನೆಯಲ್ಲಿ ಅಡಗಿರುತ್ತವೆ.

ಇದನ್ನು ಅರ್ಥಮಾಡಿಕೊಳ್ಳಲು ಶಬರಿಮಲೆಯ ಶಾಸ್ತ ಅಥವಾ ಅಯ್ಯಪ್ಪನನ್ನು ಪರಿಶೀಲಿಸಬಹುದು. ಮೊದಲಿಗೆ ಈ ದೇವತೆಯ ಪ್ರಸಿದ್ಧಿ ಕೇರಳ ಪ್ರಾಂತ್ಯಕ್ಕೆ ಸೀಮಿತವಾಗಿದ್ದಿತಂ; ನೆರೆಹೊರೆಯ ಅಂಚಿನ ಪ್ರಾಂತ್ಯಗಳಿಗೆ ಅಷ್ಟಿಷ್ಟು ಹರಡಿದ್ದಿತು. ತಮಿಳುನಾಡು, ಕೊಡಗುಸೀಮೆ ಇಲ್ಲಿಮಾತ್ರ ಕೇರಳದ ಶಾಸ್ತನ ಪ್ರಖ್ಯಾತಿ

ಯಿದ್ದಿತು. ಇಷ್ಟು ಬಿಟ್ಟರೆ ಕರ್ಣಾಟಕದಲ್ಲಾಗಲೀ ಆಂಧ್ರ ಮಹಾರಾಷ್ಟ್ರಗಳಲ್ಲಾಗಲೀ ಶಾಸ್ತನೆಂಬ ದೇವತೆಯ ಪರಿಚಯವಿದ್ದುದು ಕಡಮೆಯೇ, ಇನ್ನು ಉತ್ತರ ಹಿಂದೂಸ್ತಾನದ ಮಾತು ಬಿಡಿ. ಆದರೆ ಇದು ಸುಮಾರು ಇಪ್ಪತ್ತು-ಮೂವತ್ತು ವರ್ಷಗಳ ಹಿಂದಿನ ಮಾತು. ಈಗ ಇಡೀ ದೇಶದಲ್ಲೆಲ್ಲ ಅಯ್ಯಪ್ಪನ ಪೂಜೆ ನಡೆಯುತ್ತದೆ; ಮಲಯಾಳಿಗಳಲ್ಲದವರೂ ಶಬರಿಮಲೆಗೆ ಹೋಗಿ ಬರುತ್ತಾರೆ. ಈ ದೇವತೆಯ ಜನಪ್ರೀತಿ ಹೆಚ್ಚುತ್ತ ಬಂದಿದೆ. ಕೇರಳದಲ್ಲಿಯೂ ಹೀಗೆಯೇ ನಡೆಯಿತೆನ್ನಿ. ತುಂಬ ಹಿಂದಿನ ಕಾಲದಲ್ಲಿ ಅಯ್ಯಪ್ಪ ಕೇವಲ ಕಾಡು ಜನರ, ಬೇಟೆಗಾರರ, ಆದಿವಾಸಿಗಳ ದೇವತೆ. ಆರ್ಯಸಂಸ್ಕೃತಿಗೂ ಈ ದೇವತೆಗೂ ಯಾವ ಸಂಬಂಧವೂ ಇದ್ದ ಹಾಗಿರಲಿಲ್ಲ. ಆದರೆ ಬರಬರುತ್ತ ಕೇರಳದ ಎಲ್ಲ ಜನರೂ, ಎಲ್ಲ ಸಾಂಸ್ಕೃತಿಕ ಸ್ತರದವರೂ ಈ ದೇವತೆಯ ವಿಚಾರದಲ್ಲಿ ಭಯಭಕ್ತಿಗಳಿಂದ ನಡೆದುಕೊಳ್ಳತೊಡಗಿದರು. ಆರ್ಯಸಂಸ್ಕೃತಿಯ ಅಧ್ವರ್ಯುಗಳೂ ಈ ದೇವತೆಯನ್ನು ಆದರದಿಂದ ತಮ್ಮೊಳಗೆ ಬರಮಾಡಿಕೊಂಡರು. ಇದೊಂದು ಸ್ವಾರಸ್ಯವಾದ ಇತಿಹಾಸ. ಜನರ ಅಗತ್ಯವೇ ನಿಮಿತ್ತವೋ, ದೇವತೆಯ ಸಾಮರ್ಥ್ಯವೇ ಕಾರಣವೋ ಹೇಳುವುದು ಕಷ್ಟ; ಅಂತೂ ಇಂದು ಶಾಸ್ತ ದೇಶದಲ್ಲೆಲ್ಲ ಪ್ರಸಿದ್ಧನಾದ ದೇವತೆಯಾಗಿದ್ದಾನೆ.

ಶಾಸ್ತೃಕ್ಷೇತ್ರಗಳಲ್ಲಿ ತುಂಬ ಪ್ರಖ್ಯಾತವಾದುದು ಶಬರಿಮಲೆ. ಕೇರಳ ದೇಶದ ಕ್ವಿಲಾನ್ ಜಿಲ್ಲೆಗೆ ಸೇರಿದಂತಿರುವ ಪಶ್ಚಿಮ ಘಟ್ಟಸಾಲಿನಲ್ಲಿ ತುಂಬ ಎತ್ತರದ, ನಿರ್ಜನವಾದ, ದಟ್ಟವಾದ ಕಾಡಿನಿಂದ ಕೂಡಿದ ಶಬರಿಮಲೆ ಸಾವಿರಾರು ವರ್ಷಗಳಿಂದಲೂ ಪ್ರಸಿದ್ಧವಾಗಿದ್ದ ಉಲ್ಲೇಖವಿದೆ. ಗುಡಿಯಿರುವ ಭಾಗವಂತೂ ಈಗಲೂ ದುರ್ಗಮವಾದುದೇ; ಮೈಲಿಗಳವರೆಗೆ ಯಾವ ಜನವಸತಿಯೂ ಇಲ್ಲ. ಹತ್ತಿರದ ಹಳ್ಳಿಯೆಂದರೆ ಸುಮಾರು ನಲವತ್ತು ಮೈಲಿ ದೂರವಿರುವ ಎರುವೇಲಿ. ಯಾತ್ರಿಕರು ಇಲ್ಲಿಂದಲೇ ಶಬರಿಮಲೆಗೆ ಹೋಗುವುದು. ಗುಡಿಯಿರುವ ಬೆಟ್ಟವನ್ನು ಮುಟ್ಟಲು ಐದಾರು ತೊರೆಗಳನ್ನು ದಾಟಿ, ಐದಾರು ಕಡಿದಾದ ಬೆಟ್ಟಗಳನ್ನು ಏರಿಳಿದು ನಡೆದೇ ಹೋಗಬೇಕು. ಹುಲಿ, ಚಿರತೆ, ಕರಡಿ, ಆನೆ, ಕಾಡೆಮ್ಮೆಗಳ ಹಾವಳಿ ಹೆಚ್ಚು. ಹೀಗಿದ್ದೂ ವರ್ಷಕ್ಕೆ ಎರಡು ತಿಂಗಳು ಲಕ್ಷಗಟ್ಟಲೆ ಯಾತ್ರಿಕರು ನಿರಾಯುಧರಾಗಿ ಈ ನಲವತ್ತು ಮೈಲಿಗಳನ್ನು ದಾಟಿ ಶಬರಿಮಲೆಗೆ ಹೋಗುತ್ತಾರೆ. ಎರುವೇಲಿಯಿಂದ ಹೊರಡುವಾಗ ಬಣ್ಣಬಣ್ಣದ ಬಿಲ್ಲುಬಾಣಗಳನ್ನೂ ಗದೆಯಂಥ ದೊಣ್ಣೆಯನ್ನು ಕೊಂಡೊಯ್ಯುವ ವಾಡಿಕೆಯಿದೆ. ಮೊದಲಬಾರಿಗೆ ಹೋಗುವವರು ಮರದ ದೊಣ್ಣೆಯನ್ನೂ ಎರುವೇಲಿಯಲ್ಲಿ ಕೊಂಡುಕೊಳ್ಳುತ್ತಾರೆ. ಆದರೆ ಇದೇನು ಶಸ್ತ್ರವೆಂದಲ್ಲ; ಇದರಿಂದ ಯಾವ ಪ್ರಾಣಿಯನ್ನೂ ಹೆದರಿಸುವುದಾಗದು. ಈ ಆಟಿಗೆ ಆಯುಧಗಳನ್ನು ಕೊಂಡೊಯ್ಯುವುದು ಒಂದು ಧಾರ್ಮಿಕ ವಿಧಿ ಅಷ್ಟೆ. ಶಬರಿಮಲೆಗೆ ಹೋದನಂತರ ಅಲ್ಲಿ ಗುಡಿಯ ಬಳಿಯಿರುವ ದೊಡ್ಡಮರವೊಂದರ ಬುಡದಲ್ಲಿ (ಶಬರಿಪೀಠ) ಈ ಆಯುಧಗಳನ್ನಿರಿಸಿ ಹಿಂದಿರುಗುತ್ತಾರೆ. ಜನರ ಶ್ರದ್ಧೆಯೇ ಅವರನ್ನು ಕಾಪಾಡುವ ಆಯುಧ, ರಕ್ಷೆ.

ತಿರುವಾಂಕೂರಿನ ನಡುವೆ ಹಾದು ಹೋಗುವ ಕೊಟ್ಟಾಯಂ-ಕಾಮಿಳಿ ರಸ್ತೆಯಲ್ಲಿ ಕೊಟ್ಟಾಯಂನಿಂದ ನಲವತ್ತು ಮೈಲಿ ದೂರದಲ್ಲಿ ಮಂಡಿಪ್ಪೆರಿಯಾರ್ ಎಸ್ಟೇಟ್ ಇದೆ. ಇಲ್ಲಿಂದ ದಟ್ಟವಾದ ಕಾಡಿನ ನಡುವೆ ಇಪ್ಪತ್ತು ಮೈಲಿಗಳಷ್ಟು ದೂರ ನಡೆದು ಹೋದರೆ ಶಬರಿಮಲೆಯನ್ನು ಮುಟ್ಟಬಹುದು. ಪ್ರತಿ ಮಲೆಯಾಳೀ ಮಾಸದಲ್ಲಿ ಸುಮಾರು ಎರಡು ವಾರಗಳ ಕಾಲ ಗುಡಿಯಲ್ಲಿ ಪೂಜೆ ನಡೆಯುತ್ತದೆ. ಸಾಮಾನ್ಯವಾಗಿ ದೂರದ ಚೆಂಗನ್ನೂರಿನಲ್ಲಿ ವಾಸಮಾಡುವ ಶಬರಿಮಲೆ ಗುಡಿಯ ಪೂಜಾರಿ ಈ ಎಸ್ಟೇಟಿನಿಂದಲೇ ನಡೆದು ಹೋಗುತ್ತಾನೆ, ಅವನೊಂದಿಗೆ ಸಶಸ್ತ್ರ ರಕ್ಷಕರೂ ಇರುತ್ತಾರೆ. ಈ ಪೂಜಾರಿಯನ್ನು ಕಡುವಾಪ್ಪೋಟ್ಟಿ (ಎಂದರೆ ಹುಲಿ-ಪೂಜಾರಿ) ಎಂದು ಕರೆಯುತ್ತಾರೆ.

ಶಬರಿಮಲೆಯೆಂದರೆ ಶಬರಿಯ ಬೆಟ್ಟವೆಂದರ್ಥ. ಬೇಡರವಳಾದ ಶಬರಿಯು ರಾಮನನ್ನು ಕುರಿತು ತಪಸ್ಸುಮಾಡಿ, ಮೋಕ್ಷಕ್ಕೆ ಸಂದ ಸ್ಥಳವೆಂದು ಪ್ರತೀತಿ ಇದೆ. ಆದರೆ ಇದು ಈಚೆಗೆ ಆರ್ಯ ಸಂಸ್ಕೃತಿಗೆ ಅಳವಡಿಸಿಕೊಂಡ ಕಥೆಯೆಂದು ತೋರುತ್ತದೆ. ಶಾಸ್ತನ ಗುಡಿಗೆ ಹೋಗುವ ದಾರಿಯಲ್ಲಿ ಶಬರೀ ದೇವತೆಯ ಸನ್ನಿಧಿಯೂ ಒಂದಿದೆ. ಇದಕ್ಕೆ ಶಬರಿಪೀಠವೆಂದು ಹೆಸರು. ಈಕೆ ರಾಮಾಯಣದ ಶಬರಿ ಇರಲಾರಳು; ಕಾಡುಜನರ, ಬೇಟೆಗಾರರ (ಶಬರರ) ಅಭಿಮಾನ ದೇವತೆಯಿರಬಹುದು. ಮುಂದೆ ಕ್ಷುದ್ರದೇವತೆಯಾಗಿ ಪರಿಣಮಿಸಿದ ಈಕೆ ಮೊದಲಿಗೆ ಪ್ರಮುಖಳಾದ ಮಾತೃದೇವತೆಯಾಗಿದ್ದಳೆಂದು ತೋರುತ್ತದೆ. ಇಡೀ ಬೆಟ್ಟಕ್ಕೆ ಅವಳ ಹೆಸರು ಬಂದುದೂ, ಅದೇ ಹೆಸರು ನಿಂತುದೂ ಆಕಸ್ಮಿಕವಲ್ಲ.

ಬೆಟ್ಟದ ಮೇಲೆ ಸುಮಾರು ಒಂದು ಚದರ ಮೈಲಿ ಆವರಣದಲ್ಲಿ ಗುಡಿಯಿದೆ; ಆವರಣದ ಸುತ್ತಲೂ ಅಗಲವಾದ, ಆಳವಾದ ಕಂದಕವಿದ್ದು ಕಾಡುಪ್ರಾಣಿಗಳು ಇಲ್ಲಿಗೆ ಬರದಂತೆ ತಡೆಯುತ್ತದೆ. ಗುಡಿಯಲ್ಲಿ ಸುಮಾರು ಹತ್ತು ಅಡಿ ಎತ್ತರದ ಕಟ್ಟೆಯಿದ್ದು ಅದರ ಮೇಲೆ ಶಾಸ್ತನ ಲೋಹದ ಮೂರ್ತಿಯಿದೆ. ಅದೇ ಕಟ್ಟೆಯಮೇಲೆ ಶಾಸ್ತನ ಬಳಿಯೇ 'ಮಲೆ' ಯೆನಿಸಿಕೊಳ್ಳುವ ಬೆಟ್ಟದೇವತೆಯ ಮೂರ್ತಿಯೂ ಇರುವುದು ಸ್ವಾರಸ್ಯ. ಬೆಟ್ಟವನ್ನೇ ದೇವತೆಯೆಂದು ಬಗೆದು ಪೂಜೆ ಮಾಡುವ ಪದ್ಧತಿ ಎಲ್ಲೆಲ್ಲಿಯೂ ಇದ್ದಂತೆ ಇಲ್ಲಿಯೂ ಇದ್ದಿತು. ಶಾಸ್ತನ ಒಕ್ಕಲಾದ ಮಲೆಯರಾಯನ್ ಆದಿವಾಸಿಗಳು ಮಣಿಮಲೆ ಬೆಟ್ಟಸಾಲಿನಲ್ಲಿ ತಲಪಾರ ಮಲೆ, ಆಳಮಲೆ, ಪ್ರತಿಯಮಲೆ, ಪೋತನ್‌ಮಲೆ, ಮತ್ತು ಸವಂಪಾರಮಲೆ ಎನ್ನುವ ಐದು ಬೆಟ್ಟದ ಕೋಡುಗಳನ್ನು ದೇವತೆಗಳೆಂದು ಪೂಜಿಸಿ, ಈ ಐದೂ ದೇವತೆಗಳನ್ನು ಪ್ರತಿನಿಧಿಸಿ ಐದು ಸಣ್ಣ ಸಣ್ಣ ಕಲ್ಲು ಗುಂಡುಗಳನ್ನು ತಮ್ಮ ಗುಡಿಸಿಲ ಹೊರಗೆ ಇರಿಸಿಕೊಳ್ಳುತ್ತಾರೆ. ಇಂಥ ಪದ್ಧತಿಗಳು ಕೇರಳದ ಕಾಡುಜನರಲ್ಲಿ ಬಳಕೆಯಲ್ಲಿವೆ. ಶಾಸ್ತನ ಕಟ್ಟೆಯ ಮೇಲೆ ಈ ಮಲೆದೇವತೆಯಲ್ಲದೆ ಗಣಪತಿ ಮತ್ತು ಸುಬ್ರಹ್ಮಣ್ಯ ಇವರ ಮೂರ್ತಿಗಳೂ ಇವೆ. ಆದರೆ ಇವೆರಡೂ ಈಚೆಗೆ ಅಲ್ಲಿ ಮೂಡಿಕೊಂಡ ಮೂರ್ತಿಗಳೆನ್ನುವುದು ಸ್ಪಷ್ಟ ವಾಗಿದೆ. ಶಾಸ್ತನು ಶಿವನ ಮಗನೆಂದು ಕಲ್ಪನೆ ಬೇರೂರಿದಾಗ ಶಿವನ ಇತರ ಈ ಇಬ್ಬರು ಮಕ್ಕಳಿಗೂ ಅಲ್ಲಿ ಸ್ಥಾನವನ್ನು ಒದಗಿಸಿಕೊಟ್ಟರು.

ಕಟ್ಟೆಯ ಹೊರಗೆ ಆವರಣದಲ್ಲಿಯೇ ಕರುಪ್ಪನ್ (ಅಥವಾ ಕುರುಪ್ಪುಸ್ವಾಮಿ) ಮತ್ತು ಕೊಚು ಕಡುತ್ತ ಎಂಬೆರಡು ಗಂಡು ದೇವತೆಗಳೂ ಒಂದು ಸ್ತ್ರೀದೇವತೆಯೂ ಪೂಜೆಗೊಳ್ಳುತ್ತವೆ. ಕರುಪ್ಪನೆನ್ನುವುದು ಕರಿಭೂತ; ಈ ದೈವದ ಪೂಜೆ ತಮಿಳುನಾಡಿನಲ್ಲಿಯೂ ಉಂಟು. ಕಡುತ್ತನೂ ಭಯಂಕರವಾದ ದೈವ, ರಕ್ತ ವನ್ನು ಬಯಸುವ ಬಂಟ. ಇವರಿಬ್ಬರೂ ಶಾಸ್ತನ ಬೇಟೆಯಲ್ಲಿ ನೆರವಾದವರೆಂದು ಅವರಿಗೆ ಅಲ್ಲಿ ಪೂಜೆ ನಡೆಯು ವುದು. ಇವರೊಂದಿಗೆ ಅಲ್ಲಿ ಪೂಜೆಗೊಳ್ಳುವ ಹೆಣ್ಣುದೇವತೆ ಎಮ್ಮೆಯ ರೂಪದಲ್ಲಿದ್ದು ರಾಕ್ಷಸಿ ಮಹಿಷಿಯನ್ನು ಶಾಸ್ತನು ಕೊಂದಾಗ ಎಮ್ಮೆಯ ಮೈಯಿಂದ ಹೊರ ಹೊಮ್ಮಿದ ಭೂತವೆಂದು ಹೇಳುತ್ತಾರೆ. ಹೀಗೆ ಕರುಪ್ಪು, ಕಡುತ್ತ, ಮಹಿಷಿ ಮೂವರೂ ಭೂತಗಳೇ. ಅವರಿಗೆ ಒಡೆಯನಾದ ಶಾಸ್ತ ಭೂತನಾಥ. ಈ ದೇವತೆಗಳಲ್ಲದೆ ಆವರಣದೊಳಗೆ ಪೂಜೆಗೊಳ್ಳುವ ವಾವಾರ್ ಪ್ರತೀಕವೂ ಒಂದಿದೆ. ವಾವಾರ್ (ಅಥವಾ ಬಾವಾ, ಬಾಬಾ) ಎನ್ನುವವನು ಮುಸಲ್ಮಾನ ಸಾಧುವೆಂದೂ, ಶಾಸ್ತನ ಸ್ನೇಹಿತನಾಗಿದ್ದನೆಂದೂ ಕಥೆಗಳಿವೆ. ಎರುವೇಲಿ ಹಳ್ಳಿಯಲ್ಲಿ ಮಸೀದಿಯೊಂದಿದ್ದು ಅಲ್ಲಿ ಇವನ ಚೇತನ ಉಳಿದಿದೆಯೆಂದು ಪ್ರತೀತಿಯಿದೆ. ಶಬರಿಮಲೆ ಯಾತ್ರಿಕರು ಮೊದಲು ಎರುವೇಲಿಯಲ್ಲಿಯೂ ಅನಂತರ ಶಬರಿಮಲೆಯಲ್ಲಿಯೂ ಈತನನ್ನು ಪೂಜಿಸುವ ಪದ್ಧತಿಯಿದೆ. ಅರಬ್ಬಿಜನಾಂಗದ ಹಡಗುಕಳ್ಳನೂ ಸಾಹಸಿಯೂ ಆಗಿದ್ದ ಈತನು ಶಾಸ್ತನ ಸಾಹಸಕೃತ್ಯಗಳಲ್ಲಿ ನೆರವಾದನೆಂದು ಅವನಿಗೆ ಪೂಜೆ ಸಲ್ಲುತ್ತದೆ. ಪಂದಲಂ ಪ್ರಾಂತ್ಯದಲ್ಲಿ ಉದಯನ್ ಎಂಬ ದರೋಡೆಗಾರನು ಜನರಿಗೆಲ್ಲ

ಸಿಂಹಸ್ವಪ್ನನಾಗಿ, ಶಬರಿಮಲೆಯ ಮೇಲೆ ಅಡಗಿರುತ್ತ, ಹಳ್ಳಿಪಟ್ಟಣಗಳನ್ನು ಕೊಳ್ಳೆಹೊಡೆಯುತ್ತಿದ್ದನಂತೆ. ಆಗ ಶಾಸ್ತನು ಪಂದಲಂ ರಾಜನ ಸಾಕುಮಗನಾಗಿ ಮಣಿಕಂಠನೆಂಬ ಹೆಸರಿನಿಂದ ಬೆಳೆಯುತ್ತಿದ್ದನಂತೆ. ಮಣಿ ಕಂಠನು ವಾವಾರನ ಮೈತ್ರಿಯನ್ನು ಸಂಪಾದಿಸಿ ಅವನ ನೆರವಿನಿಂದ ಉದಯನನ್ನೂ ಅವನ ಸಂಗಡಿಗರನ್ನೂ ಎರುವೇಲಿಯಲ್ಲಿ ಹಿಡಿದು ಕೊಂದನಂತೆ. ಪಂದಲಂ ರಾಜನು ವಾವಾರನಿಗೆ ಭೂಮಿಕಾಣಿ ಕೊಟ್ಟು, ಎರು ವೇಲಿಯಲ್ಲಿಯೇ ನೆಲಸುವಂತೆ ಕೇಳಿಕೊಂಡನಂತೆ. ಇದು ನಡೆದದ್ದು ಸುಮಾರು 900 ವರ್ಷಗಳ ಹಿಂದೆ ಎಂದು ಹೇಳುತ್ತಾರೆ.

ಶಬರಿಮಲೆ ದೇವಾಲಯದ ನಿರ್ವಹಣೆಯಲ್ಲಿ ವಾವಾರನ ಮನೆತನದವರಿಗೆ ಒಂದು ಹಕ್ಕಿದ್ದಿತು; ಮಕರವಿಳಕ್ಕು ಉತ್ಸವದಲ್ಲಿ ವಾವಾರನ ಸಂತತಿಯವರು ಪಾಲುಗೊಳ್ಳುವ ಪದ್ಧತಿಯಿದೆ. ಅಂತೂ ಎರುವೇಲಿ ಯಲ್ಲಿ ವಾವಾರನ ಸನ್ನಿಧಿಯಿದ್ದು ಅದು ಶಬರಿಮಲೆ ಯಾತ್ರಿಕರನ್ನು ಇಂದಿಗೂ ಆಕರ್ಷಿಸುತ್ತದೆ. ಪೆಟ್ಟತ್ತುಳ್ಳಲ್ ಎನಿಸಿಕೊಳ್ಳುವ ವಿಧಿಯಲ್ಲಿ ಯಾತ್ರಿಕರು ಮುಖಕ್ಕೆ ಮಸಿ ಬಳಿದುಕೊಂಡು ಪಟ್ಟಶಾಸ್ತನ ಗುಡಿಗೆ ಓಡಿ ಬಂದು ಅಲ್ಲಿ ಕಾಣಿಕೆ ಕೊಡುತ್ತಾರೆ. ಶಾಸ್ತನಿಗೆ ನೆರವಾದ ಕಿರಾತರನ್ನು ನೆನಪಿಗೆ ತರುವ ವಿಧಿಯಿದು.

ಒಂದು ನೂರು ವರ್ಷಗಳ ಹಿಂದೆ ಫ್ರಾನ್ಸಿನ ಡೇ ಎಂಬಾತನು ಬರೆದ 'ದಿ ಲ್ಯಾಂಡ್ ಆಫ್ ಪೆರುಮಾಳ್ಸ್' (ಮದ್ರಾಸು 1863) ಎಂಬ ಪುಸ್ತಕದಲ್ಲಿ ಶಾಸ್ತ ಮತ್ತು ವಾವಾರರಿಬ್ಬರಿಗೂ ಕ್ರೈಸ್ತಪಾದ್ರಿಯೊಬ್ಬ ನೆರವಾದ ಉಲ್ಲೇಖವಿದೆ. ಸಂತ ಆಂಡ್ರೂ ಎಂಬಾತನ ಸಮಾಧಿ ಸಮುದ್ರತೀರದ ಅಲೆಪ್ಪಿಯಲ್ಲಿದೆ. ಶಬರಿಮಲೆ ಯಾತ್ರಿಕರು ಇಲ್ಲಿಗೆ ಬಂದು ಸಮುದ್ರಸ್ನಾನಮಾಡಿ ಈ ಸಂತನ ಸಮಾಧಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಕ್ರಾಂಗ ನೂರಿಗೆ ಹೋಗುವ ಪದ್ಧತಿಯಿದ್ದಿತೆಂದು ಈ ಪುಸ್ತಕದಿಂದ ತಿಳಿದುಬರುತ್ತದೆ. ಈ ಸಂತನ ಬಾಳುವೆಯ ವಿವರಗಳಾಗಲೀ ಅವನಿಗೂ ಶಬರಿಮಲೆಗೂ ಒದಗಿಬಂದ ಸಂಬಂಧದ ವಿಚಾರವಾಗಲೀ ತಿಳಿದುಬರುವುದಿಲ್ಲ.

ಶಬರಿಮಲೆಯ ಮೇಲೆ ಶಾಸ್ತನ ಮೂರ್ತಿಯಿರುವ ಕಟ್ಟೆಗೆ ಪೂರ್ವದಿಕ್ಕಿನಲ್ಲಿ ಹದಿನೆಂಟು ಮೆಟ್ಟಿಲು ಗಳಿವೆ; ಗುಡಿಯನ್ನು ಸೇರಲು ಈ ಮೆಟ್ಟಲುಗಳನ್ನು ಹತ್ತಿಹೋಗುವುದು ತುಂಬ ಶ್ರೇಯಸ್ಕರವೆಂದು ನಂಬಿಕೆ. ಇದಕ್ಕೆ 'ಪದಿನೆಟ್ಟಾಂಪಡಿ' ಎಂದು ಹೆಸರು; ಈ ಸೋಪಾನವನ್ನೇರುವಾಗ ಯಾತ್ರಿಕರು ತೆಂಗಿನಕಾಯಿ ಒಡೆಯುವ ಪದ್ಧತಿಯಿದೆ. ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿಯೂ ಮೆಟ್ಟಲುಗಳಿವೆ; ಆದರೆ ಇವು ಪದಿನೆಟ್ಟಾಂಪಡಿ ಯಷ್ಟು ಪವಿತ್ರವೆಂದು ಪರಿಗಣಿಸುವುದಿಲ್ಲ. ಈ ಹದಿನೆಂಟು ಮೆಟ್ಟಲುಗಳಿಗೆ ಆಧ್ಯಾತ್ಮಿಕ ಅರ್ಥವನ್ನೂ ಹೇಳುವುದಿದೆ.

ಹದಿನೆಂಟು ಪ್ರಬಲವಾದ ಸಂಖ್ಯೆ. ಅಷ್ಟಾದಶ ಪುರಾಣಗಳು, ಭಗವದ್ಗೀತೆಯ ಅಷ್ಟಾದಶ ಅಧ್ಯಾಯ ಗಳು, ಅಷ್ಟಾದಶ ಧಾನ್ಯಗಳು, ಅಷ್ಟಾದಶ ವಿವಾದಪದಗಳು, ಅಷ್ಟಾದಶ ಉಪಚಾರಗಳು ಇತ್ಯಾದಿ ಇತ್ಯಾದಿ. ಶಾಸ್ತನ ಗುಡಿಗಿರುವ ಹದಿನೆಂಟು ಮೆಟ್ಟಲುಗಳು ಜೀವದ ಹದಿನೆಂಟು ಆರೋಹಣ ಸ್ಥಾನಗಳು. ಶಾಸ್ತ ಪರಬ್ರಹ್ಮನಾದರೆ, ಯಾತ್ರಿಕ ಜೀವವಾದರೆ ಶಾಸ್ತನ ಬಲಗೈಯಲ್ಲಿರುವ ಚಿನ್ಮುದ್ರೆಯನ್ನು ಅನುಭವಿಸಿ, ಆನಂದವನ್ನು ಪಡೆಯಲು ಈ ಹದಿನೆಂಟು ಮೆಟ್ಟಲುಗಳನ್ನು ಏರಿಹೋಗಬೇಕು. ಪೂರ್ವಭಾವಿಯಾಗಿ ಯಮ, ನಿಯಮಗಳನ್ನು ಅಭ್ಯಾಸಮಾಡಿ ಅನಂತರ ಪದಿನೆಟ್ಟಾಂಪಡಿಯನ್ನು ಮುಟ್ಟಬೇಕು. ಹದಿನೆಂಟು ಮೆಟ್ಟಲುಗಳ ಸಂಕೇತ ಹೀಗೆ—ಐದು ಇಂದ್ರಿಯಗಳು, ಎಂಟು ರಜಸ್ಸುಗಳು, ಮೂರು ಗುಣಗಳು, ವಿದ್ಯೆ ಮತ್ತು ಅವಿದ್ಯೆ. ಆದರೆ ಇದು ಸಭ್ಯತನದ ಮುಸುಕು ಬಲವಾದಾಗ ಮೂಡಿಬಂದ ವಿವರಗಳಷ್ಟೇ; ಪ್ರಾಚೀನ ಮನೋವೃತ್ತಿಯ ನೆಲೆಯುವಲ್ಲ.

ಚಿತ್ರ 146

ಶಾಸ್ತ
ಆಂಧ್ರಪ್ರದೇಶದ ಅಲಂಪುರದಲ್ಲಿರುವ
ಪ್ರಾಚೀನ ಶಿಲಾಫಲಕ

ಚಿತ್ರ 147

ಕಪಿಲತೀರ್ಥದಲ್ಲಿರುವ
ಶಾಸ್ತನ ಕಲ್ಲು



ಚಿತ್ರ 148

ದಕ್ಷಿಣ ಆರ್ಕಾಟ್ ಜಿಲ್ಲೆಯ ಎಚಾಲ
ಗ್ರಾಮದಲ್ಲಿರುವ ಶಾಸ್ತನ ಶಿಲಾಫಲಕ

ಚಿತ್ರ 149

ದಕ್ಷಿಣ ದೇಶದಲ್ಲಿನ ಗ್ರಾಮದೇವತೆಯಾದ
ಕುಟ್ಟಿಚಾತ್ತನ್

ಚಿತ್ರ 150

ತಂಜಾವೂರು ಜಿಲ್ಲೆಯ
ಪರವಾಕ್ಕೊಟ್ಟೈನಲ್ಲಿರುವ ಶಾಸ್ತ

ಶಬರಿಮಲೆಯ ಮೇಲೆ ಶಾಸ್ತನ ಗುಡಿಯನ್ನು ಪರಶುರಾಮನ ಸೂಚನೆಯ ಮೇಲೆ ವಿಶ್ವಕರ್ಮನೇ ಕಟ್ಟಿದನೆಂದು ಸ್ಥಳಪುರಾಣ ಹೇಳುತ್ತದೆ. ಪರಶುರಾಮನು ಪಶ್ಚಿಮ ಘಟ್ಟಸಾಲಿನಲ್ಲಿ ಎಂಟು ಶಾಸ್ತ ದೇವಾಲಯಗಳನ್ನು ನಿರ್ಮಿಸಿದನೆಂದು ಪ್ರತೀತಿ; ಇವುಗಳಲ್ಲಿ ಶಬರಿಮಲೆ, ಅಚ್ಚೆನ್‌ಕೋಯಿಲ್, ಕುಲತ್ತುಪ್ಪುಷ, ಆರಯನ್‌ಕಾವು ಇವು ಪ್ರಸಿದ್ಧವಾದುವು. ಮಧುರೆಯಿಂದ ತಿರುವಾಂಕೂರಿನ ಪಂದಲಂ ಪ್ರಾಂತ್ಯಕ್ಕೆ ಬಂದು ಅಲ್ಲಿ ಕ್ರಿಸ್ತಾಬ್ದ 904 ರಲ್ಲಿ ಅರಸೊತ್ತಿಗೆಯೊಂದನ್ನು ಆರಂಭಿಸಿದ ಪಾಂಡ್ಯ ರಾಜರಿಗೂ ಶಬರಿಮಲೆ ಗುಡಿಗೂ ಮೊದಲಿನಿಂದ ನೆಂಟು ಉಳಿದುಬಂದಿದೆ. ಶಬರಿಮಲೆಯಿಂದ ನೇರವಾಗಿ ಬರುವುದಾದರೆ ಪಂದಲಂ ಕೇವಲ ಇಪ್ಪತ್ತೈದು ಮೈಲಿದೂರದಲ್ಲಿದೆ. ಶಾಸ್ತನು ಮಣಿಕಂಠನಾಗಿ ಅವತರಿಸಿದಾಗ ಈ ರಾಜಮನೆತನದಲ್ಲಿಯೇ ಬೆಳೆದು ಈ ಪರಿಸರದಲ್ಲಿಯೇ ತನ್ನ ಸಾಹಸಕೃತ್ಯಗಳಿಂದ ಪ್ರಸಿದ್ಧನಾದುದು. ಶಬರಿಮಲೆಯ ಗುಡಿಯನ್ನು ಪಂದಲಂ ರಾಜರೇ ಕಟ್ಟಿಸಿದುದೆಂದು ತಿಳಿದುಬರುತ್ತದೆ. ಸುಮಾರು ಇನ್ನೂರು ವರ್ಷಗಳ ಹಿಂದೆ

ತಿರುವಾಂಕೂರಿನ ಅರಸರು ಪಂದಲಂ ಪ್ರಾಂತ್ಯವನ್ನು ವಶಪಡಿಸಿಕೊಳ್ಳುವವರೆಗೂ ಈ ಗುಡಿಯು ಪಂದಲಂ ಅರಸರ ವಶದಲ್ಲಿಯೇ ಇದ್ದಿತು. ಅನಂತರವೂ ದೇವರ ವಿಶೇಷ ಆಭರಣಗಳನ್ನು ಪಂದಲಂ ಅರಮನೆ ಯಲ್ಲಿಯೇ ಇರಿಸಿ ವರ್ಷಕ್ಕೊಮ್ಮೆ ಮಕರವಿಳಕ್ಕು ಸಂದರ್ಭದಲ್ಲಿ ಉತ್ಸವದಿಂದ ಬೆಟ್ಟದ ಮೇಲೆ ಗುಡಿಗೆ ಪಹರೆಯೊಡನೆ ಕೊಂಡೊಯ್ಯುವ ಪದ್ಧತಿ ಉಳಿದುಬಂದಿದೆ. ಗುಡಿಯಿರುವುದು ಕಾಡಿನ ನಡುವೆ ಆದುದ ರಿಂದ ಬೆಲೆ ಬಾಳುವ ಅಲಂಕರಣ ಸಾಮಗ್ರಿಗಳನ್ನೂ ವಸ್ತ್ರಾಭರಗಣಳನ್ನೂ ಗುಡಿಯಲ್ಲಿ ಇರಿಸಿಕೊಳ್ಳುವುದಿಲ್ಲ; ಪಂದಲಂ ಅರಮನೆಯಲ್ಲಿರುತ್ತದೆ.

ಪಂದಲಂ ಅರಸರು ಬರುವ ಮೊದಲೇ ಬೆಟ್ಟದ ಮೇಲೆ ಸಣ್ಣದೊಂದು ಗುಡಿ ಇದ್ದಿತೆಂಬುದು ದಿಟ; ಋಷಿಗಳು ನೀಲಮಲೆಯ ಮೇಲೆ 'ಪೊನ್ನಂಬಲಮೇಡು' (ಬಂಗಾರದ ಗುಡಿ) ಯನ್ನು ಕಟ್ಟಿಸಿದ್ದ ಉಲ್ಲೇಖವಿದೆ. ಇದು ಈಗ ಕಾಣುವುದಿಲ್ಲ. ಮೊದಲಿಗೆ ಶಬರಿಮಲೆ ಈಗಿನ ಹಾಗೆ ನಿರ್ಜನ, ವನ್ಯ ಪ್ರದೇಶವಾಗಿರಲಿಲ್ಲ. 1816–1820 ರಲ್ಲಿ ಈ ಪ್ರಾಂತ್ಯವನ್ನು ಸರ್ವೇಕ್ಷಣ ಮಾಡಿದ ವಾರ್ಡ್ ಮತ್ತು ಕಾನ್ನರ್ ಇವರ ವರದಿಯ ಪ್ರಕಾರ ಈ ಬೆಟ್ಟದ ಮೇಲೂ ಆಸುಪಾಸಿನಲ್ಲೂ ಜನವಸತಿಯಿದ್ದಿತು. ಅಷ್ಟುಮಾತ್ರವಲ್ಲದೆ ಪೂರ್ವದ ತಮಿಳುನಾಡಿನಿಂದ ಪಶ್ಚಿಮದ ಮಲಯಾಳನಾಡಿಗೆ ಹೋಗುವ ವ್ಯಾಪಾರ ಮಾರ್ಗದಲ್ಲಿಯೇ ಈ ಪ್ರದೇಶ ವಿದ್ದಿತು. ಕಾರಣಾಂತರದಿಂದ ಕಾಡು ದಟ್ಟವಾಗಿ ಬೆಳೆದು ಶಾಸ್ತನ ಗುಡಿ ದುರ್ಗಮವಾಗಿಬಿಟ್ಟಿತು; ಶಬರಿಮಲೆ ಯಾತ್ರೆ ಕಷ್ಟಸಾಧ್ಯವಾಗಿ ಪರಿಣಮಿಸಿತು.

ಪಶ್ಚಿಮ ಕಾರಾವಳಿಯ ಪ್ರಾಚೀನ ಗುಡಿಗಳಂತೆ ಶಬರಿಮಲೆ ಗುಡಿಯೂ ದಾರುಮಯವಾಗಿದ್ದು ಎರಡು ಬಾರಿ ಬೆಂಕಿಗೆ ತುತ್ತಾಯಿತು; ಮೂರ್ತಿಯೂ ಸೇರಿ ಇಡೀ ದೇವಾಲಯ ಸುಟ್ಟು ಬೂದಿಯಾದಂತೆ ತಿಳಿದುಬರುತ್ತದೆ. ಮಲಯಾಳ ಶಕೆ 1085 ರಲ್ಲಿ ಎಂದರೆ ಕ್ರಿಸ್ತಾಬ್ದ 1910 ರಲ್ಲಿ ಶಾಸ್ತನ ಮೂರ್ತಿಯನ್ನು ಪ್ರತಿಷ್ಠೆ ಮಾಡಿದರೆನ್ನುವ ವಿವರ ಗುಡಿಯಲ್ಲಿರುವ ಸಂಸ್ಕೃತ ಶಾಸನವೊಂದರಿಂದ ಸ್ಪಷ್ಟವಾಗುತ್ತದೆ. ಇದನ್ನು ಹೇಳುವ ಶ್ಲೋಕ ಇದು—

ಸ ಮೀನಭಾಸ್ವನ್ನಯನಃ ಪ್ರಿಯಾದಿನಾ
ಪ್ರಭಾಪತಿರ್ಭಾಗ್ಯವಶಾನವಾಲಯೇ
ಪ್ರಭಾಕರಾಚಾರ್ಯಕರಪ್ರತಿಷ್ಠಿತೋ
ಮಹಾನಯಂ ವರ್ಷತು ಭೂರಿ ಮಂಗಳಂ ॥

ಇಲ್ಲಿ 'ಮೀನ' 'ಪ್ರಿಯ' ಮೊದಲಾದ ಕೆಲವು ಪದಗಳು ಪ್ರತಿಷ್ಠೆಯ ವರ್ಷವನ್ನು ಸೂಚಿಸುತ್ತವೆ. ಗುಡಿಯನ್ನು ಹೊಸದಾಗಿ ಕಟ್ಟಿಸಿದರೆನ್ನುವುದು 'ನವಾಲಯ' ಎಂಬ ಮಾತಿನಿಂದ ತಿಳಿದು ಬರುತ್ತದೆ. ಮೂರ್ತಿಯನ್ನು ಪ್ರತಿಷ್ಠೆ ಮಾಡಿದ ಪ್ರಭಾಕರಾಚಾರ್ಯನು ಯಾರೆಂಬುದು ಸ್ಪಷ್ಟವಾಗುವುದಿಲ್ಲ. 1950ರಲ್ಲಿ ಮೂರ್ತಿಯನ್ನು ಪುನಃ ಪ್ರತಿಷ್ಠೆಮಾಡುವ ಸಂದರ್ಭವೊದಗಿತು; ಇದೇ ಈಗಿರುವ ಮೂರ್ತಿ, ಲೋಹದ್ದು.

ಕೇರಳದಲ್ಲಿ ಶಬರಿಮಲೆಯಲ್ಲದೆ, ಇನ್ನು ಮೂರು ಶಾಸ್ತ ಕ್ಷೇತ್ರಗಳೂ ಪ್ರಸಿದ್ಧಿವಾಗಿವೆ—ಅಚ್ಚನ್ ಕೋಯಿಲ್, ಕುಲತ್ತುಪುಷ, ಆರ್ಯನ್‌ಕಾವು. ಶಾಸ್ತನು ತನ್ನ ಬಾಲ್ಯವನ್ನು ಅಚ್ಚನ್‌ಕೋಯಿಲ್‌ನಲ್ಲೂ, ಕೌಮಾರವನ್ನು ಆರ್ಯನ್‌ಕಾವಿನಲ್ಲೂ ಕಳೆದು ಕುಲತ್ತುಪುಷದಲ್ಲಿ ಪೂರ್ಣಾ ಮತ್ತು ಪುಷ್ಕಳೆಯರನ್ನು ಮದುವೆಯಾಗಿ, ಶಬರಿಮಲೆಯಲ್ಲಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದನೆಂದೂ ಹೇಳುತ್ತಾರೆ. ಇವೆಲ್ಲವೂ ಬೆಟ್ಟಗುಡ್ಡಗಳೇ. ದಟ್ಟವಾದ ಕಾಡಿನ ನಡುವೆಯೇ ಶಾಸ್ತನ ಗುಡಿಯಿರುವುದು ಸ್ವಾರಸ್ಯ. ಹಳ್ಳಿಗಳಲ್ಲಿ

ಶಾಸ್ತನ ಗುಡಿಯಿದ್ದಾಗಲೂ ಅದರ ಸುತ್ತಲೂ ಗಿಡಮರಗಳನ್ನು ಕಾಡಾಗಿ ಬೆಳೆಸುತ್ತಾರೆ; ಇದಕ್ಕೆ 'ಕಾವು' ಎಂದು ಹೆಸರು. ಶಂಕೊಟ್ಟೆಯ ಬಳಿಯಿರುವ 'ಆರ್ಯನ್‌ಕಾವು' ಇದಕ್ಕೆ ಒಂದು ನಿದರ್ಶನ. ಪೆರಿಯಾರ್ ನದೀ ಶಾಖೆಯೊಂದು ಮೂಡ್‌ನಲ್ಲಿ ಜಲಪಾತವಾಗಿ ಮೂರ್ಪಟ್ಟ ಕಡೆ ಒಂದು ಶಾಸ್ತನ ಗುಡಿಯಿದೆ; ಇದು 'ಮೆಟ್ಟಿಂಗಳ್ ಶಾಸ್ತ', ಎಂದು ಪ್ರಸಿದ್ಧವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಶಾಸ್ತನ ಪೂಜೆ ವಿಶೇಷವಾಗಿ ನಡೆಯುತ್ತದೆ. ಅಲ್ಲಿನ ದೈವಸ್ಥಾನಗಳಲ್ಲಿ ಕುಕ್ಷಿಶಾಸ್ತ (ಕುಟ್ಟಿಚಾತ್ತ) ನನ್ನೂ 'ಶಾಸ್ತಾವು' ಕಲ್ಲುಗಳನ್ನೂ ಕಾಣಬಹುದು. ದೇಶಮಂಗಲದಲ್ಲಿ ಕುಕ್ಷಿ ಶಾಸ್ತನಿಗೇ ಗುಡಿಯಿದೆ; ಧರ್ಮಸ್ಥಳದ ಗುಡಿಯಲ್ಲಿಯೂ ಶಾಸ್ತನಿಗೆ ಆಲಯವಿದೆ. ಕೊಡಗು ಸೀಮೆಯಲ್ಲಿ ಶಾಸ್ತನನ್ನು ಅಯ್ಯಪ್ಪನೆಂದೇ ಕರೆದು ಅವನನ್ನು ಕೇರಿಕೇರಿಗಳಲ್ಲಿಯೂ ಆರಾಧಿಸುತ್ತಾರೆ. ಇಲ್ಲಿನ ಬಲ್ಮಾವತಿ ಬಳಿಯಿರುವ ಪೊನಿಕಾಡು ಎಂಬ ಕಾಡಿನಲ್ಲಿರುವ ಅಯ್ಯಪ್ಪನ ಗುಡಿ ಪ್ರಸಿದ್ಧವಾದುದು. ತಮಿಳುನಾಡಿನಲ್ಲಿ ಅಯ್ಯಪ್ಪನನ್ನು 'ಅಯ್ಯನಾರ್' ಎಂಬ ಹೆಸರಿನಿಂದ ಕರೆಯುತ್ತಾರೆ. ಪ್ರತಿ ಹಳ್ಳಿಯಲ್ಲಿಯೂ ಅಯ್ಯನಾರ್ ಕೋವಿಲ್ ಇರುತ್ತದೆ; ಗ್ರಾಮದೇವತೆ ಅವನು.

ಶಾಸ್ತ ಎನ್ನುವುದು ಸಂಸ್ಕೃತಪದ, 'ಶಾಸ್ತ' ಎನ್ನುವ ಮಾತಿಗೆ ಒಡೆಯ, ಗುರು, ಸ್ವಾಮಿ, ನಿಯಮಗಳನ್ನು ವಿಧಿಸುವಾತ ಎಂದರ್ಥ. ಬೌದ್ಧ ಪಂಥದಲ್ಲಿ ಬುದ್ಧನನ್ನು ಶಾಸ್ತನೆಂದು ಕರೆಯುತ್ತಾರೆ. ಪಾಳಿಯಲ್ಲಿ 'ಸತ್ಥಾ' ಎಂದಾಗುತ್ತದೆ. ಅಮರಕೋಶವು ಬುದ್ಧನ ಹೆಸರುಗಳನ್ನು ಹೇಳುತ್ತ—'ಮುನೀಂದ್ರ, ಶ್ರೀಘನಃ ಶಾಸ್ತಾ, ಶಾಕ್ಯಮುನಿಸ್ತು ಯಃ'' ಎನ್ನುತ್ತದೆ. ಶಬರಿಮಲೆಯು ಮೊದಲಿಗೆ ಬೌದ್ಧವಿಹಾರವಾಗಿ ಇದ್ದಿತೆಂದೂ, ಅಲ್ಲಿನ ಧರ್ಮಶಾಸ್ತನು ಬುದ್ಧನೇ ಎಂದೂ ಒಂದು ವಾದವಿದೆ; 'ಸ್ವಾಮಿಯೇ ಶರಣಂ, ಶರಣಂ ಅಯ್ಯಪ್ಪ' ಎಂದು ಯಾತ್ರಿಕರು ಅಡಗಡಿಗೆ ಹೇಳುವ ಶರಣಾಗತಿ ಮಂತ್ರವು ಬೌದ್ಧರ ತ್ರಿಶರಣದಿಂದ ಪ್ರಭಾವಿತವಾದುದೆಂದೂ, ಶಾಸ್ತನಿಗೆ ನೆರವಾದನೆಂದು ಕಥೆಯಿರುವ ವಾವಾರ್ ದಿಟವಾಗಿ ದ್ವಾಪರನೆನ್ನುವ ಬೌದ್ಧಸಂತನೆಂದೂ, ಯಾತ್ರಿಕರು ಕೈಗೊಳ್ಳುವ ಅಹಿಂಸಾದಿ ವ್ರತಗಳು ಬೌದ್ಧ ಧರ್ಮದಿಂದ ಆಯ್ದುಕೊಂಡವೇ ಎಂದೂ ಈ ವಾದ ಸಮರ್ಥಿಸಿಕೊಳ್ಳುತ್ತದೆ. ಶಾಸ್ತನ ಇನ್ನೊಂದು ಹೆಸರಾದ ಅಯ್ಯಪ್ಪನಲ್ಲಿರುವ 'ಅಯ್ಯ' ಎನ್ನುವುದು (ಸಂಸ್ಕೃತದ 'ಆರ್ಯ') ಬುದ್ಧನಿಗೆ ಹೆಸರೆಂದೂ ಇದೇ ವಾದದ ವಿವರಗಳು. ಈ ವಾದವನ್ನು ಎತ್ತಿಹಿಡಿಯುವುದು ಕಷ್ಟ; ಸ್ಥೂಲ ಸಾದೃಶ್ಯಗಳಿಂದ ಏನನ್ನೂ ಸ್ಥಾಪಿಸುವುದೂ ಸಲ್ಲದು. ಇದು ಹೇಗಾದರೂ ಇರಲಿ, ಶಾಸ್ತ ಮತ್ತು ಅಯ್ಯಪ್ಪ ಎರಡೂ ಪದಗಳು ಸಂಸ್ಕೃತದಿಂದಲೇ ಬಂದಿವೆ ಎನ್ನುವುದೂ ಜಿಜ್ಞಾಸೆಯೇ. ಅಯ್ಯಪ್ಪ ಎನ್ನುವುದು ಗೌಡದ್ರಾವಿಡ ಪದ; ದ್ರಾವಿಡ ಅಯ್ಯ ಸಂಸ್ಕೃತ ಆರ್ಯದಿಂದ ಬಂದುದಲ್ಲವೆಂದು ಭಾಷಾಶಾಸ್ತ್ರಜ್ಞರು ಸ್ಪಷ್ಟಪಡಿಸಿದ್ದಾರೆ. ಸಂಸ್ಕೃತದ 'ಆರ್ಯ ಪ್ರಾಕೃತದಲ್ಲಿ 'ಅಜ್ಜ' 'ಅಯ್ಯ' ಎಂದಿರುವುದು ದಿಟ. ಆದರೆ ಅಯ್ಯವೇ ಮೊದಲಿನ ರೂಪವೆಂದೂ ಅದರ ಸಂಸ್ಕೃತೀಕರಣ 'ಆರ್ಯ'ವಾಯಿತೆಂದೂ ತಿಳಿದುಬಂದಿದೆ.

ಅಯ್ಯ, ಅಪ್ಪ ಎರಡೂ ತಂದೆಗೆ ಬಳಸುವ ಸಂಬೋಧನ ಪದಗಳು. ತಮಿಳುನಾಡಿನಲ್ಲಿ ಶಾಸ್ತನನ್ನು ಅಯ್ಯನ್, ಅಯ್ಯನಾರ್ ಎಂದು ಕರೆಯುತ್ತಾರೆ; ಇದು ಗೌರವಾರ್ಥದ ಪ್ರಯೋಗ. ತಮಿಳ್ ಅಕಾರಾದಿ ನಿಘಂಟಿನಲ್ಲಿ 'ಅಯ್ಯನ್ ಎನ್ಬದು ಮುತ್ತೋನ್ ಚಾತ್ತನ್ ಅಪ್ಪನ್ ಚುವಾಮಿ ಎನುಂ ಪೆಯರ್' ಎಂದಿದೆ. ಅಯ್ಯನ್ ಎನ್ನುವುದಕ್ಕೆ ಅಪ್ಪನ್ ಮತ್ತು ಚುವಾಮಿ (ಸ್ವಾಮಿ) ಎರಡೂ ಪರ್ಯಾಯ ಪದಗಳೇ. 'ಸ್ವಾಮಿಯೇ ಶರಣಂ, ಶರಣಂ ಅಯ್ಯಪ್ಪ' ಎನ್ನುವ ಮಂತ್ರದಲ್ಲಿ ಸ್ವಾಮಿ, ಅಯ್ಯಪ್ಪ ಎರಡೂ ಪದಗಳು

ಜನರಿಗೆ, ಜನಾಂಗಕ್ಕೆ, ಜಗತ್ತಿಗೆ ತಂದೆಯಾದವನನ್ನು ನಿರ್ದೇಶಿಸುತ್ತದೆ. ಶಾಸ್ತ ಎನ್ನುವ ಮಾತು ಇಷ್ಟು ಸ್ಪಷ್ಟವಾಗಿಲ್ಲ. ಮೇಲೆ ತಿಳಿಸಿದ ವಾದಕ್ಕೆ ಇಂಬು ಕೊಡುವಂತೆ ಮಧುರೈ ತಮಿಳ ಸಂಗಂನವರ ನಿಘಂಟಿನಲ್ಲಿ 'ಚಾತ್ತನ್ ಎನ್ಬದುವೇ ಅರಹನುಂ ಬುದ್ಧನುಂ ಹರಿಹರ ಪುತ್ತಿನರನುಡಂ ಮುಪ್ಪೆಯರೇ' ಎಂದಿದೆ. ಎಂದರೆ ಅರ್ಹನ್ (ಜಿನ), ಬುದ್ಧ ಮತ್ತು ಹರಿಹರಪುತ್ರ ಮೂವರಿಗೂ ಶಾಸ್ತನೆಂದೇ ಹೆಸರು. ಈ ನಿಘಂಟು ಸಿದ್ಧವಾಗುವ ಕಾಲಕ್ಕೆ ಸಂಸ್ಕೃತದ ಶಾಸ್ತನಿಂದ ದ್ರಾವಿಡ 'ಚಾತ್ತನ್' ಮೈದಳೆಯಿತೆನ್ನುವ ನಂಬಿಕೆಯಿದ್ದಿತು. ಆದರೆ ಈಗ ಈ ನಂಬಿಕೆ ಶಿಥಿಲವಾಗಿದೆ. ಚಾತ್ತನೇ ಶಾಸ್ತನ ಮೂಲರೂಪವೋ ಎಂಬ ಸಂಶಯವಿದೆ.

ಈ ವಿವಾದ ಇಲ್ಲಿ ಪ್ರಸಕ್ತವಲ್ಲ, ದಕ್ಷಿಣ ದೇಶದಲ್ಲಿ ದ್ರಾವಿಡ ಧರ್ಮದ ನೆಲೆಯಲ್ಲಿ ಚಾತ್ತನ್ ಎಂಬ ದೇವತೆಯ ಆರಾಧನೆ ತುಂಬ ಪ್ರಾಚೀನವಾದುದು ಎನ್ನುವುದು ಮುಖ್ಯ ವಿಚಾರ. ಆರ್ಯ ಸಂಸ್ಕೃತಿ ಇಲ್ಲಿ ತನ್ನ ಪ್ರಭಾವವನ್ನು ಬೇರೂರಿಸುವ ಮೊದಲೇ ಚಾತ್ತನ್ ಪ್ರಬಲನಾದ ದೇವತೆಯಾಗಿದ್ದ. ಆರ್ಯ ದೇವತೆಗಳು ಇಲ್ಲಿಗೆ ಬಂದಿಳಿದು ಬೇರು ಬಿಟ್ಟು ನಿಂತಾಗಲೂ ಈ ಚಾತ್ತನ್ ಕಳೆಗುಂದಲಿಲ್ಲ. ಸಂಪರ್ಕದ ಫಲವಾಗಿ ಈ ಚಾತ್ತನಿಗೂ ಪುರಾಣಪ್ರಸಕ್ತಿ ಒದಗಿತು; ಆಗಮಶುದ್ಧಿ ದೊರೆಯಿತು. ದೇವತೆಯ ಸ್ಥಾನ ಪ್ರಾಪ್ತವಾಯಿತು; ಶಿವನೊಂದಿಗೆ ವಿಷ್ಣುವಿನೊಂದಿಗೆ ಹತ್ತಿರದ ನೆಂಟೂ ಬೆಳೆಯಿತು.

ದಕ್ಷಿಣ ದೇಶದ ತೀರ ದಕ್ಷಿಣಭಾಗ ಪ್ರಾಚೀನ ದ್ರಾವಿಡ ಸಂಸ್ಕೃತಿಯ ನೆಲೆವೀಡು. ಇಲ್ಲಿ ಚಾತ್ತನ್ ಗ್ರಾಮದೇವತೆ, ಬೇಟೆಗಾರರನ್ನು ಕಾಪಿಡುವ ದೈವ; ಆದಿವಾಸಿಗಳ, ಕಾಡು ಜನರ, ಕಿರಾತರ ಆರಾಧ್ಯ ದೇವತೆ. ಬೆಟ್ಟಗುಡ್ಡಗಳಲ್ಲಿ ವಾಸಿಸುವ ಜನರಿಗೆ ಇವನು ಬೇಟೆಯಲ್ಲಿ ನೆರವಾಗುವ ದೈವ. ಬಯಲು ದೇಶದಲ್ಲಿರುವ ಆದಿವಾಸಿಗಳಿಗೆ ದುಷ್ಟಭೂತ; ತುಂಬ ಕಾರಣಿಕವುಳ್ಳ ಕ್ರೂರದೇವತೆ. ಕೇರಳ ದೇಶದಲ್ಲಿ ಪುಲಯನ್, ವೇಲನ್, ಕನನ್, ಕಣಿಯನ್, ಮಲಯರಾಯನ್, ಊರಾಳಿ, ಮನ್ನಾನ್, ಕಾಸಿಕರನ್, ವಿಷುವನ್, ಮಲಪಂಡಾರಂ ಮೊದಲಾದ ಆದಿವಾಸಿ ಜನಾಂಗಗಳಿಗೆ ಚಾತ್ತನೆಂದರೆ ಭಯ ಭಕ್ತಿ. ಅವನನ್ನು ಕಾಡಿ ಬೇಡಿ ಒಲಿಸಿಕೊಳ್ಳುವ ಕಾತರ ಅವರಲ್ಲುಂಟು. ಆ ಜನಾಂಗಗಳ ಮಂತ್ರವಾದಿಗಳು ಚಾತ್ತನನ್ನು ಪೂಜೆಮಾಡಿ ವಶೀಕರಣ, ಸಮ್ಮೋಹನ, ಅಭಿಚಾರ, ಅಪಸ್ಮಾರ, ಭೇದನ, ವೇದನಗಳಿಗೆ ಅವನನ್ನು ಬೇಡುತ್ತಾರೆ. ಸೇಡು ತೀರಿಸಿಕೊಳ್ಳುವವರಿಗೆ ಚಾತ್ತನಿಗಿಂತ ಹೆಚ್ಚು ಸಮರ್ಥದೈವವಿಲ್ಲ. ಯಾರ ಕೈವಾಡವೂ ಕಾಣದೆ ಮನೆಯ ಮೇಲೆ ಕಲ್ಲು ಬೀಳುವುದು, ಊಟದಲ್ಲಿ ಹುಳು ಕಾಣಿಸುವುದು, ಅಮೇಧ್ಯ ಸಿಗುವುದು, ಕಾರಣ ಇಲ್ಲದೆ ರೋಗಕ್ಕೆ ಪಕ್ಕಾಗುವುದು ಇಂಥ ನೂರೆಂಟು ಉಪದ್ರವಗಳಿಗೆ ಚಾತ್ತನೇ ನಿಮಿತ್ತ. ಅವನಿಗೆ ಅಸಾಧ್ಯವಾದುದೇ ಇಲ್ಲ; ತಂಟೆ–ತಕರಾರೆಂದರೆ ಅವನಿಗೆ ಪ್ರೀತಿ. ಅವನನ್ನು ಒಲಿಸಿಕೊಳ್ಳಲು ಶರಣಾಗತಿಯೊಂದೇ ದಾರಿ. ಅವನ ನೆರವನ್ನು ಪಡೆದವರು ಅವನಿಗೆ ಕೋಳಿ, ಆಡು, ಹೆಂಡ, ಗಾಂಜಾ ಇವನ್ನು ಸಮರ್ಪಿಸುತ್ತಾರೆ. ಆದಿವಾಸಿ ಜನರಂತೆ ಅವರ ದೇವರಾದ ಚಾತ್ತನೂ ಮಾಂಸಾಹಾರಿ, ಮದ್ಯಪ್ರಿಯ.

ಅವರು ಸಾಮಾನ್ಯವಾಗಿ ಚಾತ್ತನನ್ನು ಹನ್ನೆರಡು ವರ್ಷದ ಹುಡುಗನೆಂದು ಚಿತ್ರಿಸಿಕೊಳ್ಳುತ್ತಾರೆ; ಅವರಿಗೆ ಅವನು 'ಕುಟ್ಟಿಚಾತ್ತ' ಎಂದರೆ ಹುಡುಗಶಾಸ್ತ. ಕೈಯಲ್ಲಿ ಕತ್ತಿ ಹಿಡಿದು, ಎಮ್ಮೆಯ ಮೇಲೆ ಕುಳಿತ ಕುಟ್ಟಿಚಾತ್ತ ಯಮನಂತೆಯೇ ಕಾಣುತ್ತಾನೆ. ಕೇರಳದಲ್ಲೆಲ್ಲ ಅವನಿಗೆ ಪೂಜಾಸ್ಥಾನಗಳಿವೆ; ಇವಕ್ಕೆ ಕೊಟ್ಟಿಲುಗಳೆಂದು ಹೆಸರು. ಹಳ್ಳಿಗೆ ಹೋಗುವ ಮೊದಲೇ ಬಾಗಿಲಲ್ಲಿ ಇಂಥ ಗುಡಿಗಳನ್ನು ಕಾಣಬಹುದು. ಮಧ್ಯ ಕೇರಳದ ಅವನಂಗೋಡೆ ಎಂಬ ಹಳ್ಳಿಯಲ್ಲಿ ಕುಟ್ಟಿಚಾತ್ತನ ಮುಖ್ಯ ದೇವಾಲಯವಿದೆ. ಬಾಲಗ್ರಹ, ಪಿಶಾಚ ಬಾಧೆ, ಅಪಮೃತ್ಯು, ಉನ್ಮಾದ ಮೊದಲಾದ ವೈಪರೀತ್ಯಗಳು ಕುಟ್ಟಿಚಾತ್ತನು ಸಿಟ್ಟಿಗೆದ್ದನೆನ್ನುವ

ಸೂಚನೆ. ಅವನನ್ನು ಶಾಂತಗೊಳಿಸಲು ಜನ ಅವನಂಗೋಡೆಯಲ್ಲಿ ಸೇರುತ್ತಾರೆ. ತ್ರಿಚೂರಿನ ಬಳಿ ತ್ರಿಪ್ರಯರ್ ಎಂಬಲ್ಲಿ ಚಾತ್ತಸೇವಾಮಠವೊಂದಿದೆ. ಚಾತ್ತಸೇವೆಯೆನ್ನುವುದು ಆದಿವಾಸಿಗಳಲ್ಲಿ ವಿಶೇಷ ವಾಗಿ ಹರಡಿರುವ ಧಾರ್ಮಿಕ ಕಲ್ಪನೆ.

ಮುಖ್ಯವಾಗಿ ಚಾತ್ತ ಬೇಟೆಗಾರರ ದೇವತೆ; ಕಿರಾತಶಾಸ್ತನೆಂದೇ ವ್ಯವಹಾರವಿದೆ. ಕಾನಿಕ್ಕನ್ ಮೊದಲಾದ ಕಾಡುಜನರ ಬೇಟೆಯ ದೇವತೆಗಳಿಗೆ 'ಮುತ್ತನ್' ಗಳೆಂಬ ಹೆಸರಿದೆ. ಮುತ್ತನ್ ಅಥವಾ ಮುತ್ತೋನ್ ಎನ್ನುವುದು ಚಾತ್ತನ ಹೆಸರುಗಳಲ್ಲಿ ಒಂದು ಎಂದು ಮೇಲೆ ಉಲ್ಲೇಖಿಸಿದ ತಮಿಳು ಅಕಾರಾದಿ ನಿಘಂಟು ಹೇಳುತ್ತದೆ. ಈ ದೇವತೆಗಳಿಗೆ ಹೆಂಡ, ಅವಲಕ್ಕಿ, ಕೋಳಿಗಳ ನೈವೇದ್ಯ ನಡೆಯುತ್ತದೆ. ಪೂಜಾರಿಯಾದವನು ವಿಶೇಷಪೂಜೆಯ ಸಂದರ್ಭದಲ್ಲಿ ಮೂರು ದಿವಸ ಮುನ್ನ ಸ್ತ್ರೀಸಂಪರ್ಕವಿಲ್ಲದೆ ನಿಯಮದಿಂದ ಇರಬೇಕು; ಈ ದೇವತೆಗಳಿಗೆ ಎಡೆಯಿಡುವ ಸ್ಥಳಕ್ಕೆ ಹೆಂಗಸರು ಬರಬಾರದು.

ಬೆಟ್ಟದ ಕೋಡುಗಳು ಚಾತ್ತನ ನೆಲೆಯೆನ್ನುವ ನಂಬಿಕೆಯೂ ಆದಿವಾಸಿಗಳಲ್ಲಿದೆ. ಕಡಿದಾಗಿದ್ದು ಏರಲು ಕಷ್ಟವೆನಿಸಿದಷ್ಟೂ ಅದರ ಬಗ್ಗೆ ಭಯ ಭಕ್ತಿಗಳು ಹೆಚ್ಚುತ್ತವೆ. ತಮ್ಮ ಪರಿಸರದಲ್ಲಿರುವ ಬೆಟ್ಟವನ್ನು ಅವರು ಚಾತ್ತನ ರೂಪಗಳೆಂದೇ ಬಗೆದು ಅವುಗಳ ಪ್ರತೀಕಗಳೆಂದು ಸಣ್ಣ ಸಣ್ಣ ಕಲ್ಲುಗಳನ್ನು ತಮ್ಮ ಗುಡಿಸಿಲ ಹೊರಗೆ ಇರಿಸಿಕೊಳ್ಳುತ್ತಾರೆ; ಅವುಗಳಿಗೆ ಪೂಜೆಯೂ ಉಂಟು. ಬೆಟ್ಟವು ಚಾತ್ತನ ನೆಲೆ ಮಾತ್ರವಲ್ಲ, ಚಾತ್ತನು ಬೆಟ್ಟದ ಜೀವವೇ ಎಂದು ಅವರ ಕಲ್ಪನೆ. ಶಬರಿಮಲೆಯ ಯಾತ್ರಿಕರು ಪೆರುಂತೊಡೆಯ ಕಲ್ಲುಬಂಡೆಗಳನ್ನು ಪೂಜಿಸುವುದೂ, ಕಲ್ಲಿಡಂಕುನ್ನುವಿನಲ್ಲಿ ಬೆಟ್ಟದ ತುದಿಗೆ ಕಲ್ಲನ್ನು ಎಸೆಯುವುದೂ ಕೊಟ್ಟಪಾಡಿಯಿಂದ ಮುಂದಕ್ಕೆ ಹೋಗುವಾಗ ಶಬರಿಮಲೆಯವರೆಗೂ ಸಿಗುವ ಎಲ್ಲ ಕಲ್ಲುಬಂಡೆಗಳನ್ನು ಪೂಜಿಸುವುದೂ ಈ ಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ. ಶಬರಿಮಲೆಯ ಗುಡಿಯಲ್ಲಿ ಕಲ್ಲುಕಟ್ಟೆಯಮೇಲೆ ಶಾಸ್ತನ ಮೂರ್ತಿಯೊಂದಿಗೆ ಮಲೆ ದೇವತೆಯ ಪ್ರತೀಕವನ್ನೂ ಇರಿಸಿ ಪೂಜಿಸುವುದನ್ನು ಇಲ್ಲಿ ನೆನೆಸಿಕೊಳ್ಳಬೇಕು.

ಶಾಸ್ತನ ಹಿನ್ನೆಲೆ ಇದು. ಆದಿವಾಸಿಗಳ, ಕಾಡುಜನರ ಪ್ರಾಚೀನ ಕಲ್ಪನೆಯಾದ ಪ್ರಚಂಡ ಮಲೆದೈವ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತು ಜನರ ಭಯಕ್ಕೂ, ಆತಂಕಕ್ಕೂ, ಸಂತೋಷಕ್ಕೂ, ಸಮಾಧಾನಕ್ಕೂ ಕಾರಣವಾಗಿ, ಬೆಟ್ಟವಾಗಿ, ನದಿಯ ನೀರಾಗಿ, ಕಲ್ಲುಬಂಡೆಯಾಗಿ, ಮರವಾಗಿ, ಮೃಗವಾಗಿ ಕಾಣಿಸಿಕೊಂಡಿರು ವುದು ಪ್ರಾಚೀನಮನೋವೃತ್ತಿಯ ನೆಲೆಯಲ್ಲಿ. ಇರುವುದೆಲ್ಲ ಚಾತ್ತನೇ, ಓಡಿಯಾಡುವುದೆಲ್ಲ ಚಾತ್ತನೇ, ಬೆಳೆಯುವುದೆಲ್ಲ ಚಾತ್ತನೇ; 'ಸರ್ವಂ ಶಾಸ್ತಮಯಂ' ಎನ್ನುವ ಕಲ್ಪನೆ. ಶಬರಿಮಲೆ ಯಾತ್ರಿಕರು ತಮ್ಮ ತಮ್ಮೊಳಗೆ ವ್ಯವಹಾರಮಾಡುವಾಗ ಅಯ್ಯಪ್ಪನೆಂದೇ ಕರೆದುಕೊಳ್ಳುತ್ತಾರೆ. ಒಬ್ಬೊಬ್ಬ ಯಾತ್ರಿಕನೂ ಅಯ್ಯಪ್ಪನೇ. ಅಷ್ಟು ಮಾತ್ರವಲ್ಲ, ಎದುರಿಗೆ ಬಂದ ಆನೆಯೂ ಅಯ್ಯಪ್ಪನ ರೂಪವೇ. ಅದು 'ಆನೆಸ್ವಾಮಿ'; ಅದು ಹಾಕಿದ ಲದ್ದಿಯೂ ಅಯ್ಯಪ್ಪನೇ; ಅದು 'ಪೀ ಸ್ವಾಮಿ'; ಕಣ್ಣಿಗೆ ಕಂಡ ಕಲ್ಲು 'ಕಲ್ಲು ಸ್ವಾಮಿ', ಅವರ ಮಂತ್ರದಲ್ಲಿ ಮಾತ್ರ ಸ್ವಾಮಿ ಅಯ್ಯಪ್ಪನಿಗೆ ಸ್ಥಾನವಲ್ಲ; ಅವರ ಎಲ್ಲ ನಡೆಯಲ್ಲೂ ನುಡಿಯಲ್ಲೂ ಆಲೋಚನೆ ಯಲ್ಲೂ ಸ್ವಾಮಿ–ಅಯ್ಯಪ್ಪ ಎಡೆಬಿಡದೆ ಪ್ರವೇಶಿಸುತ್ತಾನೆ. ಅವರ ಕಣ್ಣಿಗೆ ಕಾಣುವುದೆಲ್ಲ ಅಯ್ಯಪ್ಪನೇ; ಅವರ ಮನಸ್ಸೆಲ್ಲ ಅಯ್ಯಪ್ಪನಲ್ಲೇ. ಇದು ಶಬರಿಮಲೆ ಯಾತ್ರೆಯ ವೈಶಿಷ್ಟ್ಯ.

ಶಬರಿಮಲೆಯ ಶಾಸ್ತನು ಆದಿವಾಸಿಗಳ ಚಾತ್ತನೇ ಎನ್ನುವುದು ನಿರ್ವಿವಾದ. ಯಾತ್ರಿಕರು ಕೈಗೊಳ್ಳುವ ವ್ರತಗಳೂ, ಧರಿಸುವ ಬಿಲ್ಲು ಬಾಣಗಳೂ, ಪೆಟ್ಟುತ್ತುಳಲ್ ವಿಧಿಯೂ ಇದನ್ನು ಸಮರ್ಥಿಸು

ತ್ರವೆ. ಬರಿಯ ಗ್ರಾಮದೇವತೆಯಾಗಿದ್ದು, ಬೇಟೆರಾಯನಾಗಿದ್ದ, ಪ್ರಭಾವಶಾಲಿ ಭೂತನಾಗಿದ್ದ ಚಾತ್ತನು ಆರ್ಯಸಂಸ್ಕೃತಿಯ ಪದರದಲ್ಲಿ ಸೇರಿಕೊಂಡು ಪರಾತ್ಪರ ದೈವ, ಪರಬ್ರಹ್ಮಸ್ವರೂಪನಾದ ಶಾಸ್ತನಾದುದು ಸೋಜಿಗ, ಸ್ವಾರಸ್ಯ. ಈ ಮಾರ್ಪಾಡಿಗೆ ಎಡೆಮಾಡಿಕೊಡುವಂತೆ ಹಲವಾರು ಪುರಾಣಕಥೆಗಳು ಹುಟ್ಟಿ ಕೊಂಡವು.

ಪ್ರಾಚೀನ ಕಲ್ಪನೆಗಳಿಗೂ ಪುರಾಣ ಕಥೆಗಳಿಗೂ ಸೇತುಬಂಧವಾಗಿ ಒಂದು ಅರೆ ಐತಿಹಾಸಿಕ ವಿವರವಿದೆ. ಅದಕ್ಕೆ ಒಂದು ಸಾಂಪ್ರದಾಯಿಕ ಪೀಠಿಕೆಯನ್ನೂ ಅಳವಡಿಸಿಕೊಂಡಿದ್ದಾರೆ. ಶಬರಿ ಈಗಿನ ಶಬರಿಮಲೆಯಲ್ಲೇ ತಪಸ್ಸು ಮಾಡುತ್ತಿದ್ದಾಗ ಪಾಂಡ್ಯರಾಜ್ಯದಲ್ಲಿ ವಿಜಯನೆಂಬ ಬ್ರಾಹ್ಮಣ ಮಕ್ಕಳಿಲ್ಲದೆ ಕೊರಗುತ್ತಿದ್ದ. ಅವನು ಶಬರಿಯನ್ನು ಕೇಳಲು ಆಕೆ ಶಬರೀತೀರ್ಥದಲ್ಲಿ ಸ್ನಾನಮಾಡೆಂದು ಸೂಚಿಸಿದಳು. ಆಗಲೆಂದು ಬ್ರಾಹ್ಮಣ ಸ್ನಾನಮಾಡಲು ಅವನ ಪಾಪಗಳೆಲ್ಲ ಕರಿಯ ಕಾಗೆಗಳಂತೆ ಹೊರಗೆ ಬಂದು ನೀರಿನಲ್ಲಿ ತೊಳೆದುಹೋದುವು. ಒಡನೆಯೇ ಧರ್ಮಶಾಸ್ತ ಕಾಣಿಸಿಕೊಂಡು ಮುಂದಿನ ಜನ್ಮದಲ್ಲಿ ಬ್ರಾಹ್ಮಣನಿಗೆ ತಾನು ಮಗನಾಗಿ ಬರುವುದಾಗಿ ಭರವಸೆ ಕೊಟ್ಟು ಮರೆಯಾದನು. ಇಷ್ಟು ಪೀಠಿಕೆ. ಪಾಂಡ್ಯದೇಶದ ರಾಜಕುಮಾರನೊಬ್ಬ ಕೇರಳದ ಪಂದಲಂಗೆ ಬಂದು ಅಲ್ಲಿ ಅರಸೊತ್ತಿಗೆಯನ್ನು ಆರಂಭಿಸಿದುದು ದಿಟ; ಅದು ಮೊನ್ನೆಮೊನ್ನೆಯವರೆಗೂ ಉಳಿದು ಬಂದಿದ್ದಿತು. ಇದಾದುದು ಕ್ರಿಸ್ತಾಬ್ದ 908 ರಲ್ಲಿ ಎಂದೂ ಊಹೆಯಿದೆ. ಈ ರಾಜಮನೆತನದಲ್ಲಿ ರಾಜಶೇಖರನೆಂಬ ಒಬ್ಬ ರಾಜನಿದ್ದನೆಂದೂ, ಅವನಿಗೆ ಪಂಬನದಿಯ ದಡದಲ್ಲಿ ಮಗುವೊಂದು ದೊರೆತು ಅದನ್ನು ಸಾಕುಮಗನಾಗಿ ಬೆಳೆಸಿದನೆಂದೂ ಕಥೆಯಿದೆ. ರಾಜಶೇಖರನೇ ಹಿಂದಿನ ಜನ್ಮದಲ್ಲಿ ಬ್ರಾಹ್ಮಣ ವಿಜಯನಾಗಿದ್ದು ಅವನ ಸಾಕುಮಗನೇ ಧರ್ಮಶಾಸ್ತನೆಂದು ವಿವರಿಸುವುದು ಪೀಠಿಕೆಯ ಉದ್ದೇಶ. ಪಂದಲಂ ಎನ್ನುವುದು ಶಬರಿಮಲೆಯಿಂದ ಇಪ್ಪತ್ತೈದು ಮೈಲಿ ದೂರವಿರುವ ಊರು. ಮಗು ದೊರೆತ ಪಂಬನದಿಯ ದಂಡೆಯನ್ನು ಈಗಲೂ ಗುರುತಿಸುತ್ತಾರೆ. ಈ ನದಿ ಶಬರಿಮಲೆ ಬೆಟ್ಟಸಾಲಿನಲ್ಲಿಯೇ ಹುಟ್ಟುತ್ತದೆ. ದ್ರಾವಿಡ ಪಂಬವನ್ನು ಸಂಸ್ಕೃತ ಮಾಡಿ ಪಂಪಾ ಎಂದು ಕರೆಯುವುದುಂಟು. ಮಣಿಮಲೆಯೆಂದು ಅಲ್ಲಿನ ಬೆಟ್ಟಸಾಲಿಗೆ ಹೆಸರಿದೆ. ಈ ಬೆಟ್ಟಸಾಲಿನ ಐದು ಕೋಡುಗಳನ್ನು (ತಲಪಾರ ಮಲೆ ಇತ್ಯಾದಿ) ಮಲಯ ರಾಯನ್ ಆದಿವಾಸಿಗಳು ದೈವಗಳೆಂದು ಪೂಜಿಸುತ್ತಾರೆ. ರಾಜಶೇಖರನ ಸಾಕುಮಗನ ಹೆಸರು ಮಣಿಕಂಠ ಎನ್ನುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಅವನು ಮಣಿಮಲೆಯ ಕೊಡುಗೆಯೇ ಎಂದು ಜನರು ಬಗೆದಿದ್ದರೆ ಆಶ್ಚರ್ಯವೇನಲ್ಲ. ಮಲೆದೈವವೇ ಜೀವತಳೆದು ಬಂದಿತೆನ್ನುವ ಕಲ್ಪನೆ ಪ್ರಾಚೀನ ಮನೋವೃತ್ತಿ ಯಲ್ಲಿ ಸಹಜವೇ.

ಅಂತೂ ಮಣಿಕಂಠ ರಾಜನ ಸಾಕುಮಗನಾದರೂ ಬೇಟೆಗಾರರಲ್ಲಿ ಬೇಟೆಗಾರನಾಗಿ, ಬಿಲ್ಲಾಳಾಗಿ, ಸಾಹಿಸಿಯಾಗಿ, ಶೂರನಾಗಿ ಬೆಳೆದ. ಹನ್ನೆರಡು ವರ್ಷದ ಹರೆಯದಲ್ಲೇ ಅಲ್ಲಿನ ಆದಿವಾಸಿಗಳಿಗೆ ನಾಯಕನಾದ. ಅವನೊಂದಿಗೆ ಕಿರಾತರೂ ಕಾಡುಜನರೂ ಬೆಟ್ಟ ಗುಡ್ಡಗಳಲ್ಲಿ ಕಾಡುಮೇಡುಗಳಲ್ಲಿ ಸಂಚರಿಸಿ ದುಷ್ಟಪ್ರಾಣಿ ಗಳನ್ನೂ ದರೋಡೆಕೋರರನ್ನೂ ಹಡಗುಕಳ್ಳರನ್ನೂ ಸದೆಬಡಿಯುತ್ತಿದ್ದರು. ಉದಯನೆಂಬ ಕಳ್ಳನನ್ನು ಮಣಿ ಕಂಠ ಎರುವೇಲಿಯಲ್ಲಿ ಹಿಡಿದು ಕೊಂದ ಪ್ರಸ್ತಾಪ ಹಿಂದೆಯೇ ಬಂದಿತಷ್ಟೆ; ಈ ಕೆಲಸದಲ್ಲಿ ಅವನಿಗೆ ನೆರವಾದ ವಾವಾರನ ಪ್ರಸ್ತಾಪವೂ ಬಂದಿತು. ಮಣಿಕಂಠ ದೊರೆತಾಗ ರಾಜಶೇಖರನಿಗೆ ಮಕ್ಕಳಿರಲಿಲ್ಲ. ಅವನೇ ತನ್ನ ಉತ್ತರಾಧಿಕಾರಿಯಾಗತಕ್ಕವನೆಂದು ರಾಜ ನಿರ್ಧರಿಸಿದ್ದ. ಆದರೆ ಹತ್ತು–ಹನ್ನೆರಡು ವರ್ಷಗಳ ನಂತರ ರಾಣಿಗೆ ಗಂಡುಮಗನೊಬ್ಬ ಹುಟ್ಟಿದ. ರಾಜನು ಮಾತ್ರ ಮಣಿಕಂಠನನ್ನೇ ಹಿರಿಯ ಮಗನೆಂದು ಬಗೆದಿದ್ದ.

ಇದರಿಂದ ರಾಣಿಗೆ ತನ್ನ ಮಗನ ವಿಚಾರವಾಗಿ ಕಾತರ ಮೂಡಿತು. ಮಣಿಕಂಠನಿರುವವರೆಗೆ ತನ್ನ ಮಗ ರಾಜನಾಗುವ ಸಂಭವವಿಲ್ಲವೆಂದು ಆಕೆಗೆ ಖಚಿತವಾಯಿತು. ಹೇಗಾದರೂ ಮಣಿಕಂಠನನ್ನು ಮುಗಿಸುವ ಸನ್ನಾಹ ಮಾಡಿದಳು. ಮಂತ್ರಿಯ ಮತ್ತಿತರ ಅಧಿಕಾರಿಗಳ ನೆರವನ್ನು ಪಡೆದು ತನಗೆ ದುಸ್ಸಹವಾದ ಹೊಟ್ಟೆಬೇನೆಯೆಂದೂ, ಹುಲಿಯ ಹಾಲಿನಿಂದ ಮಾತ್ರ ಈ ವ್ಯಾಧಿ ಗುಣವಾಗುವುದೆಂದೂ ವದಂತಿ ಹರಡಿಸಿದಳು. ಬೇಟೆಯಲ್ಲಿ ಗುರಿತಪ್ಪದ ಬಿಲ್ಲಾಳಾದ ಮಣಿಕಂಠನೇ ಹುಲಿಯ ಹಾಲನ್ನು ತರಲು ತಕ್ಕವನೆಂದು ಮಂತ್ರಿ ಸೂಚಿಸಿದನು. ರಾಜ ಹಿಂಜರಿದರೂ ಮಣಿಕಂಠ ತರಲೊಪ್ಪಿದ. ಇರುಮುಡಿಯನ್ನು ತಲೆಯಮೇಲೆ ಹೊತ್ತು ತಾನೊಬ್ಬನೇ ಹೊರಟ. ಇರುಮುಡಿಯೆಂದರೆ ಎರಡು ಬಾಯಿರುವ ಗಂಟು; ಒಂದರಲ್ಲಿ ತನಗೆ ಬೇಕಾದ ಆಹಾರ, ಇನ್ನೊಂದರಲ್ಲಿ ತ್ರಿಣೇತ್ರಶಿವನ ಶಕ್ತಿಯನ್ನು ಆಹ್ವಾನಿಸಿದ ತೆಂಗಿನಕಾಯಿ. ಈಗಲೂ ಶಬರಿಮಲೆಯ ಯಾತ್ರಿಕರು ಎರುವೇಲಿಯಿಂದ ಹೊರಡುವಾಗ ಇರುಮುಡಿಯನ್ನು ಹೊತ್ತು ಹೊರಡುತ್ತಾರೆ. ಈ ಗಂಟನ್ನು ಕಟ್ಟುವ ವಿಧಿ 'ಕಟ್ಟುಮುರುಕ್ಕು' ಎನಿಸಿಕೊಳ್ಳುತ್ತದೆ. ಶಾಸ್ತನ ಪ್ರಸ್ಥಾನವನ್ನು ನೆನೆಸಿಕೊಳ್ಳುವ ವಿಧಿಯಿದು, ಮಣಿಕಂಠನು ಎರುವೇಲಿಯಿಂದ ಹೊರಟು ಕಾಡಿನ ಒಳಹೊಕ್ಕು ಹುಲಿಯನ್ನು ಹಿಡಿದು ಅದರ ಬೆನ್ನೇರಿ ಪಂದಲಂ ರಾಜಧಾನಿಗೆ ಬಂದನೆಂದು ಕಥೆ. ದೇವತೆಗಳೆಲ್ಲ ಚಿರತೆಗಳಾಗಿ, ದೇವೇಂದ್ರನೇ ಹುಲಿಯಾಗಿ ಶಾಸ್ತನ ಬರವನ್ನು ಎದುರು ನೋಡುತ್ತಿದ್ದರೆಂದು ಉಪಕಥೆ. ಮಣಿಕಂಠನು ಹುಲಿಯನ್ನೇರಿ ಹಿಂದಿರುಗಿ ಬಂದಾಗ ಕಾಡಿನ ಚಿರತೆಗಳೆಲ್ಲ ಅವನನ್ನು ಹಿಂಬಾಲಿಸಿದುವಂತೆ. ಇದನ್ನು ನೋಡಿ ದಿಗಿಲುಬಿದ್ದ ರಾಣಿಗೆ ಒಮ್ಮೆಗೇ ಗುಣವಾಗಿಬಿಟ್ಟಿತಂತೆ. ರಾಜನು ಮಣಿಕಂಠನ ಸಾಹಸಕ್ಕೆ ಮೆಚ್ಚಿ ಅವನೇ ರಾಜನಾಗಬೇಕೆಂದು ಬೇಡಿಕೊಂಡ. ಆದರೆ ಮಣಿಕಂಠ ಒಪ್ಪದೆ ಕಾಡಿನೊಳಗೆ ಮರೆಯಾದ. ಮರೆಯಾಗುವ ಮೊದಲು ದೂರದಲ್ಲಿದ್ದ ಆಲದಮರಕ್ಕೆ ಬಾಣವೊಂದನ್ನು ಬಿಟ್ಟು ಅಲ್ಲಿ ತನಗೆ ಗುಡಿಯೊಂದನ್ನು ಕಟ್ಟುವಂತೆ ಸೂಚಿಸಿದ. ಇದು ಸರಂಕುಟ್ಟಿಯಲ್ ಎಂದು ಪ್ರಸಿದ್ಧವಾಗಿದೆ. ಈಗಲೂ ಮೊದಲಬಾರಿ ಶಬರಿಮಲೆಗೆ ಯಾತ್ರೆ ಹೋದವರು ಈ ಮರದೆಡೆಗೆ ಬಾಣ ಬಿಡುವ ಪದ್ಧತಿಯಿದೆ. ತನ್ನ ಪೂಜೆಯನ್ನು ನಡೆಸುವ ವಿಧಾನವನ್ನೂ, ಅದಕ್ಕೆ ಯಾತ್ರಿಕರು ಕೈಗೊಳ್ಳಬೇಕಾದ ನಿಯಮಗಳನ್ನೂ ಮಣಿಕಂಠನೇ ಸೂಚಿಸಿದನಂತೆ.

ಹೀಗೆ ಮರೆಯಾದ ಮಣಿಕಂಠ ಜನರಿಗೆ ದೈವವಾದ. ವೀರರು ತೀರಿಕೊಂಡು ಭೂತಗಳಾಗುವುದು, ಪಿತೃದೇವತೆಗಳಾಗಿ ಪೂಜೆಗೊಳ್ಳುವುದು ಎಲ್ಲ ಪ್ರಾಚೀನ ಜನಾಂಗಗಳಲ್ಲಿಯೂ ಕಂಡುಬರುವ ವಿವರ. ಅದ್ಭುತ ಕೆಲಸಗಳನ್ನು ಮಾಡಿ ಜನರಿಗೆ ಆಶ್ಚರ್ಯವನ್ನೂ ಸುಖವನ್ನೂ ಒದಗಿಸಿದ ಮಣಿಕಂಠ ಅವರ ದೈವವಾದ ಚಾತ್ತನಲ್ಲಿ ಬೆರೆತು ಹೋದುದು ಸಹಜವೇ. ಚಾತ್ತನ ಅಸ್ಪಷ್ಟ, ಅನಿರ್ದಿಷ್ಟ ವ್ಯಕ್ತಿತ್ವಕ್ಕೆ ಮಣಿಕಂಠನ ಮಾನವ ವ್ಯಕ್ತಿತ್ವವು ಕೂಡಿಕೊಂಡು ಶಾಸ್ತನ ಕಲ್ಪನೆ ಮೂಡಿತೆನ್ನಬಹುದು. ಆದರೆ ಈ ನೆಲೆಯಲ್ಲಿ ಶಾಸ್ತನಿಗೂ ಶಿವ–ವಿಷ್ಣು–ಶಕ್ತಿಯರಿಗೂ ಯಾವ ಸಂಬಂಧವೂ ಕಾಣಬರುವುದಿಲ್ಲ. ಮುಂದೆ ಶಿವನೂ ವಿಷ್ಣುವೂ ನಾಡಿನಲ್ಲೆಲ್ಲ ವಿಶಿಷ್ಟ ದೇವತೆಗಳಾಗಿ ಜನಪ್ರಿಯರಾಗತೊಡಗಿದಾಗ ಶಾಸ್ತನ ಭಕ್ತರು ಇವರಿಬ್ಬರಿಗೂ ಶಾಸ್ತನ ನೆಂಟನ್ನು ಒದಗಿಸಲೆತ್ನಿಸಿದುದು ಸಹಜವೇ. ಈ ಪ್ರಯತ್ನದ ಫಲವಾಗಿ ಶಾಸ್ತ ಹರಿಹರಪುತ್ರನಾದ; ಭಾಗವತ ಪುರಾಣ, ಸುಪ್ರಭೇದಾಗಮಗಳಲ್ಲಿ ಶಾಸ್ತನ ಬಗ್ಗೆ ಕಥೆಗಳು ತಲೆದೋರಿದುವು. ಮಣಿಕಂಠನಿಗೂ ಹರಿಹರಪುತ್ರನಿಗೂ ತಾದಾತ್ಮ್ಯವನ್ನು ಕಲ್ಪಿಸಿದರು. ಮಹಿಷಾಸುರ ವಧೆ, ಅಮೃತ ಮಂಥನ, ದತ್ತಾತ್ರೇಯ ಚರಿತ್ರೆ, ಭಸ್ಮಾಸುರ ಪ್ರಸಂಗ ಇವೆಲ್ಲವನ್ನೂ ಶಾಸ್ತನಿಗೆ ಅಳವಡಿಸಿದರು. ಹೀಗಾಗಿ ಇತರ ದೇವತೆಗಳಂತೆ ಶಾಸ್ತನೂ ಪುರಾಣ ಪ್ರಸಿದ್ಧನಾಗಿ, ಆಗಮಸಿದ್ಧನಾಗಿ ಮೈದಳೆದು ನಿಲ್ಲುವುದು ಸಾಧ್ಯವಾಯಿತು.

ಮಲೆಯಾಳ ಪಂಚಾಂಗದಲ್ಲಿ ವೃಶ್ಚಿಕ ಮಾಸದ ಮೊದಲ ದಿನದಿಂದ (ಎಂದರೆ ಸಾಮಾನ್ಯವಾಗಿ ನವೆಂಬರ್ ತಿಂಗಳ ನಡುವೆ) ಆರಂಭವಾಗಿ ಮಕರ ಸಂಕ್ರಾಂತಿಯಂದು (ಎಂದರೆ ಜನವರಿ 14 ನೆಯ ತಾರೀಖಿನ ಸುಮಾರು) ಮುಗಿಯುವ ಎರಡು ತಿಂಗಳ ಕಾಲ ಶಬರಿಮಲೆಯಲ್ಲಿ ಮಂಡಲಪೂಜೆ ನಡೆಯುತ್ತದೆ. ಜನವರಿ 14ರ ಸುಮಾರಿಗೆ ನಡೆಯುವ ಮಕರವಿಳಕ್ಕು ಉತ್ಸವ ತುಂಬ ವೈಭವದಿಂದ ಜರುಗುತ್ತದೆ. ಈ ಪೂಜೆ ಮತ್ತು ಉತ್ಸವಕ್ಕಾಗಿ ಕೇರಳದ ಎಲ್ಲ ಭಾಗಗಳಿಂದಲೂ, ದಕ್ಷಿಣದೇಶದ ನಾನಾ ಕಡೆಗಳಿಂದಲೂ ಲಕ್ಷಾಂತರ ಜನರು ಗುಂಪು ಗುಂಪಾಗಿ ಬಂದು ನೆರೆಯುತ್ತಾರೆ. ಹೀಗೆ ಶಬರಿಮಲೆಗೆ ಬರುವ ಯಾತ್ರಿಕರು ಕೆಲವು ನಿಯಮಗಳನ್ನು ಅನುಸರಿಸಿ, ಮೂವತ್ತು ನಲವತ್ತು ಮೈಲಿ ಕಾಡಿನೊಳಗೆ ನಡೆದೇ ಬರಬೇಕು. ಕಷ್ಟಸಾಧ್ಯವಾದ ಯಾತ್ರೆಯಾದರೂ ಜನ ಉತ್ಸಾಹದಿಂದ, ಶ್ರದ್ಧೆಯಿಂದ ಕೃತಕೃತ್ಯತೆಯಿಂದ ಅದನ್ನು ಕೈಕೊಳ್ಳುವುದು ಸೋಜಿಗವೆನಿಸುತ್ತದೆ.

ಯಾತ್ರಿಕರಲ್ಲಿ ಗಂಡಸರೇ ಹೆಚ್ಚು ಮಂದಿ ಇರುತ್ತಾರೆ. ಮೈನೆರೆಯದ ಹೆಣ್ಣು ಮಕ್ಕಳೂ, ಮುಟ್ಟು ನಿಂತ ಹೆಂಗಸರೂ ಶಬರಿಮಲೆಗೆ ಹೋಗಿಬರಬಹುದು. ಇತರರು ಹೋಗುವ ಹಾಗಿಲ್ಲ. ಮಲೆಯರಾಯನ್ ಎನಿಸಿಕೊಳ್ಳುವ ಆದಿವಾಸಿಗಳು ಶಬರಿಮಲೆಯಾತ್ರೆ ನಡೆಸುವ ಪದ್ಧತಿಯನ್ನೇ ಹೆಚ್ಚು ಕಡಿಮೆ ಎಲ್ಲರೂ ಅನುಸರಿಸುತ್ತಾರೆ. ಈ ಆದಿವಾಸಿಗಳು ಕೊಟ್ಟಾಯಂ ಜಿಲ್ಲೆಯ ತೊಡುಪುಷ, ಮಿನಚಿಲ್, ಚಂಗನಚ್ಚೇರಿ ತಾಲ್ಲೂಕುಗಳಲ್ಲಿ ಬಹುಮಟ್ಟಿಗೆ ವಾಸಮಾಡುವ ಕಾಡುಜನ; ಕಾಡುಪ್ರಾಣಿಗಳನ್ನು ಕೊಂದು ಹೊಟ್ಟೆ ಹೊರೆದುಕೊಳ್ಳುತ್ತಾರೆ; ಬೇಸಾಯವನ್ನೂ ಆಗಾಗ ನಡೆಸುವ ಅಲೆಮಾರಿ ಜನ ಇವರು. ಇವರ ಸಾಂಸ್ಕೃತಿಕ ನೆಲೆ ತುಂಬ ಪ್ರಾಚೀನವಾದುದು. ಇವರು ಬೆಟ್ಟಗಳನ್ನೇ ದೈವಗಳೆಂದು ಪೂಜಿಸುತ್ತಾರೆ; ಶಬರಿಮಲೆಯ ಶಾಸ್ತನಿಗೆ ವಿಶೇಷವಾಗಿ ನಡೆದುಕೊಳ್ಳುತ್ತಾರೆ. ಶಾಸ್ತನ ವಿಚಾರವಾಗಿ ಇವರಲ್ಲಿ ಹೆಂಗಸಿಗೆ ನಿರ್ಬಂಧ ಹೆಚ್ಚು. ಎಲ್ಲ ಆದಿವಾಸಿಗಳೂ ತಮ್ಮ ಧಾರ್ಮಿಕ ವಿಧಿಗಳಿಂದ ಹೆಂಗಸರನ್ನು ದೂರವಿಡುವುದು ವಾಡಿಕೆಯೇ; ಕೆಲವು ದೇವತೆಗಳ ಬಗ್ಗೆ ಈ ನಿರ್ಬಂಧ ಕಠಿಣವಾಗುತ್ತದೆ. ಶಬರಿಮಲೆಯ ಯಾತ್ರೆಗೆ ಹೊರಟ ಮಲಯರಾಯನ್ ಆದಿವಾಸಿ ಹದಿನಾಲ್ಕು ದಿನಗಳಿಗೆ ಮುಂಚೆ ಸ್ತ್ರೀ ಸಂಪರ್ಕವನ್ನು ಬಿಟ್ಟಿರುತ್ತಾನೆ; ಮಾಂಸಾಹಾರವನ್ನೂ ಬಿಟ್ಟಿರುತ್ತಾನೆ. ಮನ್ನಾನ್ ಆದಿವಾಸಿಗಳೂ ಬೇಸಾಯದ ವಿಧಿಗೆ ಮೊದಲು ಐದು ದಿನ ಹೆಂಗಸರೊಂದಿಗೆ ಕೂಡುವುದಿಲ್ಲ. ಕಾನಿಕ್ಕಾರನ್ ಆದಿವಾಸಿಗಳು ದೇವರಿಗೆ ಎಡೆಯಿಡುವ ಸ್ಥಳಕ್ಕೆ ಹೆಂಗಸರು ಬರುವುದಿಲ್ಲ. ನಾಗಬನಗಳಿಗೆ, ಕಾವುಗಳಿಗೆ, ದೈವಗಳು ನೆಲೆಸಿರುವ ಬೀಡುಗಳಿಗೆ ಹೆಂಗಸರ ಪ್ರವೇಶವಿಲ್ಲ. ರಜಸ್ವಲೆಯಾಗುವುದು, ಯೋನಿಯಿಂದ ರಕ್ತಸ್ರಾವವಾಗುವುದು ಹೆಂಗಸಿನ ದೋಷಗಳೆಂದು ಬಗೆದು, ಧಾರ್ಮಿಕ ವಿಧಿಯಿಂದ ಅಂಥ ಹೆಂಗಸನ್ನು ಬಹಿಷ್ಕೃತೆಯೆಂದು ನಿಶ್ಚಯಿಸುವುದು ಪ್ರಾಚೀನ ಮನೋಧರ್ಮ. ಪ್ರಪಂಚದ ಎಲ್ಲ ಆದಿವಾಸಿಗಳಲ್ಲಿಯೂ ಇದನ್ನು ಗಮನಿಸಬಹುದು. ಸಂದರ್ಭ ಇಲ್ಲದಿದ್ದರೂ ಸಂಭವವೇ ಸಾಕಾಗುತ್ತದೆ. ಸಾಮಾನ್ಯವಾಗಿ ಆದಿವಾಸಿಗಳ ಗಂಡು ದೈವಗಳು ವೀರಾಳುಗಳು; ಬಹಿಷ್ಠೆಯಾಗುವ, ಅಬಲೆಯಾದ ಹೆಂಗಸೆಂದರೆ ಅವರಿಗೆ ಸಹನೆಯಿಲ್ಲ. ಸುಸಂಸ್ಕೃತ ಜನಾಂಗಗಳಲ್ಲಿನ ಧಾರ್ಮಿಕ ವ್ರತಗಳಲ್ಲಿ ಬ್ರಹ್ಮಚರ್ಯಕ್ಕೆ ಕೊಟ್ಟಿರುವ ಪ್ರಾಶಸ್ತ್ಯ ಗಮನಾರ್ಹವಾದುದು. ಈ ಸ್ತ್ರೀದ್ವೇಷಕ್ಕೆ ಪ್ರತೀಕಾರವೆಂಬಂತೆ ಕೆಲವು ವಿಧಿಗಳಿರುವುದೂ ಸ್ವಾರಸ್ಯ.

ನಿದರ್ಶನಕ್ಕೆ ಕೊಡಗುಸೀಮೆಯ ಬಲ್ಲಾಮವತಿಯಲ್ಲಿ ಅಯ್ಯಪ್ಪನ ಪೂಜೆಗೆ ಪೂರ್ವಭಾವಿಯಾಗಿ ನಡೆಯುವ ವಿಧಿಯನ್ನು ನೋಡಿ. ಇಲ್ಲಿನ ಪೊನಿಕಾಡಿನಲ್ಲಿ ಅಯ್ಯಪ್ಪನ ಗುಡಿಯೊಂದಿದೆ. ಅಯ್ಯಪ್ಪ ಅವಿವಾಹಿತ, ಬ್ರಹ್ಮಚಾರಿ; ಪೂಜೆಯ ದಿನ ಮುಂಜಾನೆ ಹೆಂಗಸರೆಲ್ಲ ಕಲೆತು ಗುಡಿಯ ಬಳಿಯಿರುವ ಕೊಳಕ್ಕೆ

ಮೀಯಲು ಹೋಗುತ್ತಾರೆ. ಮಿಂದು, ಬರಿಬೆತ್ತಲೆಯಿರುವಾಗ ಒಬ್ಬೊಬ್ಬಳೂ ಒಂದೊಂದು ಒಲೆ ಹೊತ್ತಿಸಿ, ಅರಿಶಿನ ಕೂಡಿದ ಅಕ್ಕಿಹಿಟ್ಟಿನ ರೊಟ್ಟಿಯನ್ನು ಬೇಯಿಸಿ ಅಯ್ಯಪ್ಪನನಿಗೆ ಎಡೆಯಿಡುತ್ತಾಳೆ. ರೊಟ್ಟಿ ಆಗುತ್ತಿರುವಾಗ, ಬೆತ್ತಲೆ ಹೆಂಗಸರು ಕೂಡಿಕೊಂಡು ಅಶ್ಲೀಲವೆನಿಸುವ ಮಾತುಕತೆಯಲ್ಲಿ ತೊಡಗುತ್ತಾರೆ. ಎಡೆಯಿಟ್ಟನಂತರ, ಅವರೆಲ್ಲ ಅಯ್ಯಪ್ಪ ಕೊಡಗು ಸೀಮೆಗೆ ಬಂದ ಕಥೆಯನ್ನು ಹಾಡಿನಲ್ಲಿ ಹಾಡಿ, ಕುಣಿಯುತ್ತಾರೆ. ಇದರ ಮನೋವೈಜ್ಞಾನಿಕ ಇಂಗಿತ ಪ್ರಬಲವಾದುದು. ಜನರ ಪ್ರಸುಪ್ತ ಚೇತನದ ಆಳದಲ್ಲಿ ಅಡಗಿರುವ ಕಾಮುಕತೆ ಮತ್ತು ಮೇಲಿನ ಸ್ತರಗಳಲ್ಲಿ ಮೂಡಿ ಬರುವ ಸಾಂಘಿಕ ಸಮನ್ವಯ ದೃಷ್ಟಿ ಇವುಗಳ ತುಯ್ದಾಟ ಇಲ್ಲಿ ಕಾಣಬರುತ್ತದೆ.

ಇದು ಹೇಗಾದರೂ ಇರಲಿ, ಮಲಯರಾಯನ್ ಆದಿವಾಸಿಗಳು ಹದಿನಾಲ್ಕು ದಿನಗಳ ಸಂಯಮ ವನ್ನು ನಡೆಸಿದ ನಂತರ ಶಬರಿಮಲೆಗೆ ಹೊರಡುವ ಹಿಂದಿನ ದಿನ ಎಲ್ಲ ಯಾತ್ರಿಕರೂ ಕಲೆತು ಪ್ರಯಾಣದಲ್ಲಿ ಬೇಕಾಗುವ ಪಾಥೇಯವನ್ನು ಕಟ್ಟಿಕೊಳ್ಳುತ್ತಾರೆ. ಅನಂತರ ಬೆಂಕಿಯ ಸುತ್ತ ಕುಣಿದಾಡುತ್ತಿದ್ದಾಗ ಒಬ್ಬನಿಗೆ ಆವೇಶ ಬರುತ್ತದೆ. ಅವನು ಆ ಸ್ಥಿತಿಯಲ್ಲಿ ಆಡುವ ಮಾತು ಅಯ್ಯಪ್ಪನೇ ನುಡಿಸಿದುದೆಂದು ನಂಬಿಕೆ. ಹೀಗೆ ಆವಿಷ್ಟನಾದ 'ಅಯ್ಯಪ್ಪ' ಬೆಂಕಿಯ ಮೇಲೆ ನಡೆಯುತ್ತಾನೆ. ಜನರ ಶ್ರದ್ಧೆ ಬಲವಾಗುತ್ತದೆ. ಈ ಮನೋವೃತ್ತಿಯಿಂದ ಹೊರಟು ಎರುವೇಲಿಯಲ್ಲಿ ಮಲೆಯಾಳ ಧನುರ್ಮಾಸದ ಇಪ್ಪತ್ತೇಳನೆಯ ದಿನ (ಎಂದರೆ ಜನವರಿ ಹತ್ತರ ಸುಮಾರಿಗೆ) ಪೆಟ್ಟುತ್ತುಳಲ್ ವಿಧಿಯನ್ನು ಆಚರಿಸುತ್ತಾರೆ.

ಆದಿವಾಸಿಗಳು ಮಾತ್ರವಲ್ಲದೆ ಸುಸಂಸ್ಕೃತರೂ ಯಾತ್ರೆಗೆ ಪೂರ್ವಭಾವಿಯಾಗಿ ನಲವತ್ತೊಂದು ದಿನ ಗಳ ಸಂಯಮವನ್ನು ನಡೆಸುತ್ತಾರೆ. ಈ ಅವಧಿಯಲ್ಲಿ ಲೈಂಗಿಕ ವ್ಯಾಪಾರ, ಮದ್ಯಪಾನ, ಮಾಂಸಾಹಾರ ಎಲ್ಲವೂ ವರ್ಜ್ಯ. ತಲೆಗೂದಲನ್ನು ಕತ್ತರಿಸದೇ, ಮುಖಕ್ಷೌರಮಾಡಿಸದೆ ದೀಕ್ಷೆ ತೊಡುತ್ತಾರೆ. ನೀಲಿಗಪ್ಪು ಬಣ್ಣದ ಬಟ್ಟೆಯುಟ್ಟು, ತುಲಸೀಮಾಲೆಯನ್ನೋ ರುದ್ರಾಕ್ಷಿಯನ್ನೋ ಧರಿಸುತ್ತಾರೆ. ಕಪ್ಪು ಬಟ್ಟೆಯ ಉದರ ಬಂಧವನ್ನು ಕಟ್ಟಿಕೊಳ್ಳುವುದು ವಾಡಿಕೆ; ಅದನ್ನು ತುಂಬ ಜಾಗರೂಕತೆಯಿಂದ ನೋಡಿಕೊಳ್ಳುತ್ತಾರೆ. ಯಾವ ಕೆಲಸವನ್ನು ಮಾಡಬೇಕಾದರೂ ಅಯ್ಯಪ್ಪನ ಹೆಸರನ್ನು ಮುಂದೆಮಾಡಿಕೊಂಡು ಅಡಿಗಡಿಗೆ 'ಸ್ವಾಮಿಯೇ ಶರಣಂ–ಶರಣಂ ಅಯ್ಯಪ್ಪ' ಎಂಬ ಸೂತ್ರವನ್ನು ಪುರಶ್ಚರಣ ಮಾಡುತ್ತಿರುತ್ತಾರೆ.

ಈ ಯಾತ್ರಿಕರ ಗುಂಪಿನಲ್ಲಿ ಎಲ್ಲರೂ ಸ್ವಾಮಿಗಳೇ, ಅಯ್ಯಪ್ಪಗಳೇ. ಅವರ ವ್ಯಕ್ತಿತ್ವ ಯಾತ್ರೆಯ ಅವಧಿಯಲ್ಲೇ ಮರೆಯಾಗಿರುತ್ತದೆ. ಪರಸ್ಪರ ಮರ್ಯಾದೆ, ಸೌಹಾರ್ದ, ಸಹಕಾರ ಇವು ಈ ಗುಂಪಿನಲ್ಲಿ ಕಾಣಬರುತ್ತವೆ. ಹೆಚ್ಚು ಬಾರಿ ಶಬರಿಮಲೆಗೆ ಹೋಗಿ ಬಂದವನು 'ಪೆರಿಯಸ್ವಾಮಿ'; ಅವನೇ ಗುಂಪಿನ ನಾಯಕ. ಅವನ ಅಪ್ಪಣೆಯನ್ನು ಚ–ಚು ಮೀರದೆ, ಅವನಿಗೆ ವಿಧೇಯರಾಗಿ ಎಲ್ಲರೂ ನಡೆದುಕೊಳ್ಳುತ್ತಾರೆ. ಬೆಳ್ಳಿಕಟ್ಟಿನ ಬಿದಿರು ಬೆತ್ತವನ್ನು ಹಿಡಿದು ಬಗಲಿಗೆ ವಿಭೂತಿ ಚೀಲವನ್ನು ಆತ ಕಟ್ಟಿಕೊಂಡಿರುತ್ತಾನೆ. ಈ ಗುಂಪಿನಲ್ಲಿ ಜಾತಿ–ಮತ, ಬಡವ–ಸಿರಿವಂತ ಎಂಬ ಭೇದವಿಲ್ಲ; ಎಲ್ಲರೂ ಸಮಾನರೇ. ಪುಲಯ ಆದಿವಾಸಿ ಮಾಡುವ ಅಯ್ಯಪ್ಪನ ಪೂಜೆಯಲ್ಲಿ ನಂಬೂದ್ರಿ ಬ್ರಾಹ್ಮಣನೂ ಬಿಂಕವಿಲ್ಲದೆ ಪಾಲ್ಗೊಳ್ಳುತ್ತಾನೆ. ಯಾವ ಕಾರಣದಿಂದಾದರೂ ಆಶೌಚ ಇದ್ದವರು ಈ ಗುಂಪಿನ ಬಳಿಗೆ ಬರುವುದಿಲ್ಲ. ಯಾತ್ರೆಯ ದೀಕ್ಷೆಯನ್ನು ಕೈಕೊಂಡ ಪ್ರತಿಯೊಬ್ಬನೂ ಅಯ್ಯಪ್ಪ ದೇವರೇ. ಸಾಮಾನ್ಯವಾಗಿ ಯಾತ್ರೆಗೆ ಪೂರ್ವಭಾವಿಯಾದ ಪೂಜೆ ಶನಿವಾರ ರಾತ್ರಿ ಪೆರಿಯಸ್ವಾಮಿಯ ನೇತೃತ್ವದಲ್ಲಿ ನಡೆಯುತ್ತದೆ. ಮೊದಲ ಬಾರಿ ಯಾತ್ರೆಗೆ ಹೊರಡುವ ಕನ್ನಿ ಅಯ್ಯಪ್ಪನು ಈ ಪೂಜೆಯನ್ನು ವ್ಯವಸ್ಥೆ ಮಾಡುತ್ತಾನೆ. ರಾತ್ರಿಯೆಲ್ಲ ಭಜನೆ ನಡೆಯುತ್ತದೆ; ಸರಿರಾತ್ರಿಯಲ್ಲಿ

ಆವೇಶದಿಂದ ಕೂಡಿದ ನರ್ತನ ಜರುಗಿ ಪೆರಿಯಸ್ವಾಮಿಗೆ ಅಯ್ಯಪ್ಪನ ಆವೇಶ ಒದಗಿಬರುತ್ತದೆ. ಇದು ಈ ರಾತ್ರಿಪೂಜೆಯ ವೈಶಿಷ್ಟ್ಯ. ಶನಿವಾರ ಅಯ್ಯಪ್ಪನ ಜನ್ಮದಿನವೆಂದು ಪ್ರತೀತಿ. ಅಂದು ಯಾತ್ರಿಕನು ರುದ್ರಾಕ್ಷಿ ಅಥವಾ ತುಲಸೀಮಾಲೆಯನ್ನು ವಿಧ್ಯುಕ್ತವಾಗಿ ಧರಿಸುವುದೇ ದೀಕ್ಷೆ. ಅಲ್ಲಿಂದ ಮುಂದೆ ಯಾತ್ರೆ ಮುಗಿಯುವವರೆಗೂ ಅವನು ಪ್ರಾಪಂಚಿಕ ವ್ಯವಹಾರಗಳಿಂದ ವಿಮುಖನಾಗಿರುವನೆಂದು ಸಂಕೇತ; ಮನೆಯಲ್ಲಿ ಹುಟ್ಟು-ಸಾವುಗಳು ರೋಗ-ರುಜಿನಗಳು ಆದರೂ ಅವನನ್ನು ಮಾತ್ರ ಬಾಧಿಸುವಂತಿಲ್ಲ.

ತಾನು ಯಾತ್ರೆಯಲ್ಲಿ ಪರಾಧೀನನಾಗದೆ ಸರ್ವಸ್ವತಂತ್ರನಾಗಿರುವ ಉದ್ದೇಶದಿಂದ ತನಗೆ ಅಗತ್ಯವಾದ ಸಾಮಗ್ರಿಗಳನ್ನು ತಾನೇ ಗಂಟು ಕಟ್ಟಿಕೊಂಡು, ಅದನ್ನು ತಾನೇ ಹೊತ್ತು ಶಬರಿಮಲೆಯನ್ನು ಮುಟ್ಟಬೇಕೆಂಬ ವಿಧಿಯಿದೆ. ಮೂರು ನಾಲ್ಕು ದಿವಸಗಳಿಗೆ ಬೇಕಾಗುವ ಆಹಾರ ಸಾಮಗ್ರಿ, ಬಟ್ಟೆಬರೆ, ಪಾತ್ರಪಡಗ, ಪೂಜಾದಿಸಾಮಗ್ರಿ ಎಲ್ಲವೂ ಈ ಗಂಟಿನಲ್ಲಿರುತ್ತದೆ. ಇದೇ 'ಇರುಮುಡಿಕಟ್ಟು'. ಈ ಗಂಟನ್ನು ಕಟ್ಟಿಕೊಳ್ಳುವ, ತಲೆಯ ಮೇಲೆ ಹೊತ್ತುಕೊಳ್ಳುವ ವಿಧಿಗೆ 'ಕಟ್ಟುಮುರುಕ್ಕು' ಎಂದು ಹೆಸರು. ಈ ಗಂಟಿನಲ್ಲಿರುವ ಮುಖ್ಯ ಪದಾರ್ಥವೆಂದರೆ ತುಪ್ಪ ತುಂಬಿದ ತೆಂಗಿನ ಕಾಯಿ. ಇದು ಶಾಸ್ತನ ಶಕ್ತಿಯನ್ನು ಸಂಕೇತಿಸುತ್ತದೆ.

ಡಿಸೆಂಬರ್ ತಿಂಗಳ ಕೊನೆಯ ಭಾಗದಲ್ಲಿ ಅಥವಾ ಜನವರಿಯ ಮೊದಲ ಭಾಗದಲ್ಲಿ ಯಾತ್ರಿಕರು ಎರುಮೇಲಿಯನ್ನು ಮುಟ್ಟುತ್ತಾರೆ; ಇಲ್ಲಿಂದಲೇ ದಿಟವಾಗಿ ಯಾತ್ರೆ ಆರಂಭವಾಗುವುದು. ಇಲ್ಲಿ ಪೆಟ್ಟಶಾಸ್ತನ ಗುಡಿಯೂ ವಾವಾರ್ ಸನ್ನಿಧಿಯೂ ಇವೆ. ಎರುಮೇಲಿಯಲ್ಲಿ ನಡೆಯುವ ವಿಧಿ 'ಪೆಟ್ಟತ್ತುಳ್ಳಲ್' ಎನಿಸಿ ಕೊಳ್ಳುತ್ತದೆ. ಯಾತ್ರಿಕರು ಮುಖಕ್ಕೆ ಮಸಿ ಬಳಿದುಕೊಂಡು ಕಟ್ಟಿಗೆಗಳನ್ನು ಹಿಡಿದು ಪೆಟ್ಟಶಾಸ್ತನ ಗುಡಿಯ ಕಡೆಗೆ ಓಡುವುದು ಇದರ ಮುಖ್ಯ ವಿವರ. ಆದಿವಾಸಿಗಳ ಬೇಟೆಯನ್ನು ನೆನಪಿಗೆ ತರುವ ಈ ವಿಧಿಯಲ್ಲಿ ಕಿರಾತರು ಮಣಿಕಂಠಶಾಸ್ತನಿಗೆ ನೆರವಾದ ಪ್ರಸಂಗ ಧ್ವನಿತವಾಗುತ್ತದೆ. ಎರುಮೇಲಿಯಿಂದ ಹೊರಟವರು ಶಬರಿಮಲೆಯನ್ನು ಮುಟ್ಟಬೇಕಾದರೆ ಸುಮಾರು ನಲವತ್ತೈದು ಮೈಲಿಗಳು ಕಾಡುದಾರಿಯಲ್ಲಿ ನಡೆದು ಹೋಗಬೇಕು.

ಹೀಗೆ ಹೊರಟ ಯಾತ್ರಿಕರು ನಡೆಯುತ್ತ ಪೆರುಂತೊಡೆ ನದಿಯ ದಡವನ್ನು ಮುಟ್ಟಿ ಅಲ್ಲಿ ಶಾಸ್ತ ತಂಗಿದ್ದನೆಂಬ ಕಾರಣದಿಂದ ನದೀದಡದ ಬಂಡೆಗಳಿಗೆ ಹುರಿದಕ್ಕಿ-ಬೆಲ್ಲವನ್ನು ಸಮರ್ಪಿಸಿ, ರಾತ್ರಿ ಅಲ್ಲಿಯೇ ತಂಗಿದ್ದು ಮರುದಿನ ಬೆಳಿಗ್ಗೆ ಅಷುತ್ತ ಬೆಟ್ಟವನ್ನು ಏರುತ್ತಾರೆ. ಮುಳ್ಳುಪೊದೆಗಳು, ಕಡಿದಾದ ಬಂಡೆಗಳು ಇವನ್ನೆಲ್ಲ ದಾಟಿ ಆರು ಮೈಲಿಗಳಷ್ಟು ದೂರ ಹತ್ತಿಹೋದನಂತರ ಅಷುತ್ತ ನದಿಯನ್ನು ಮುಟ್ಟಿ ಅದರ ದಡದ ಮೇಲೆ ಎರಡನೆಯ ರಾತ್ರಿ ಕಳೆಯುತ್ತಾರೆ. ಮುಂದೆ ಕಲ್ಲಿಡಂಕುನ್ನು ಎನ್ನುವ ಕಡೆ ಗುಡ್ಡದ ತುದಿಗೆ ಸಣ್ಣ ಕಲ್ಲೊಂದನ್ನು ಎಸೆಯುವ ವಾಡಿಕೆಯಿದೆ. ಇಲ್ಲಿ ಅಸುರನೊಬ್ಬನಿದ್ದಾನೆಂದು ಬಗೆದು, ಅವನು ಅಲ್ಲಿಂದ ಬಂದು ತಮಗೆ ತೊಂದರೆ ಮಾಡದಿರಲೆಂದು ಕಲ್ಲು ಎಸೆಯುವುದು. ಮಣಿಕಂಠನು ಮಹಿಷಿಯನ್ನು ಕೊಂದು ಕಳೇಬರವನ್ನು ಇಲ್ಲಿ ಎಸೆದಿದ್ದನೆಂದು ಕಥೆ.

ಕರಿಮಲೆಯೆಂಬ ಬೆಟ್ಟವನ್ನು ಏರಿಳಿದು ಪಂಬನದಿಯನ್ನು ಮುಟ್ಟುವುದು ಯಾತ್ರೆಯಲ್ಲಿ ಮುಖ್ಯ ಘಟ್ಟ. ಶಾಸ್ತನು ಯಾತ್ರೆಯ ಸಮಯದಲ್ಲಿ ಯಾರಿಗೂ ಕಾಣದಂತೆ ಅಯ್ಯಪ್ಪಗಳೊಂದಿಗೆ ಬರುತ್ತಿರುತ್ತಾ ನೆಂದೂ, ಈ ನದಿಯ ದಡದಲ್ಲಿ ಅವರೊಂದಿಗೇ ಅಡಿಗೆ ಮಾಡಿಕೊಂಡು ಊಟ ಮಾಡುತ್ತಾನೆಂದೂ ನಂಬಿಕೆ ಯಿದೆ. ಅವನು ವೇಷಮರೆಮಾಚಿಕೊಂಡು ಯಾರಿಗೂ ಅವನ ಸುಳಿವು ತಿಳಿಯುವುದಿಲ್ಲವಂತೆ; ಆದರೆ

ಅವನು ತಮ್ಮೊಡನೆ ಇದ್ದಾನೆಂದು ಅವರಿಗೆ ದೃಢವಾದ ವಿಶ್ವಾಸ. ಅವನ ಪ್ರೀತ್ಯರ್ಥವಾಗಿ ನದಿಯ ಮೇಲೆ ದೀಪಗಳನ್ನು ತೇಲಿಬಿಡುತ್ತಾರೆ. ರಾತ್ರಿಯಲ್ಲಿ ಅಸಂಖ್ಯಾತ ದೀಪಗಳು ನದಿಯ ಮೇಲೆ ತೇಲುತ್ತ ಸಾಗುವುದು ತುಂಬ ರಮಣೀಯವಾದ ದೃಶ್ಯವಲ್ಲವೆ? ಇದಕ್ಕೆ 'ಪಂಬವಿಳಕ್ಕು' (ಪಂಬನದಿಯ ಬೆಳಕು) ಎಂದು ಹೆಸರು; ಇದು ಮಕರ ಸಂಕ್ರಮಣದ ಹಿಂದಿನ ದಿನ ನಡೆಯುವುದು ವಾಡಿಕೆ.

ಅಲ್ಲಿಂದ ಹೊರಟು ಯಾತ್ರಿಕರು ಮರುದಿನ ಬೆಳಿಗ್ಗೆ ಶಬರಿಮಲೆಯನ್ನು ಸೇರುತ್ತಾರೆ. ಪೂರ್ವಕ್ಕೆ ಮುಖ ಮಾಡಿ ನಿಂತ ಗುಡಿಯನ್ನು ಪತ್ತಿನೆಟ್ಟಂಪಡಿ (ಹದಿನೆಂಟು ಮೆಟ್ಟಲುಗಳು) ಯಿಂದ ಪ್ರವೇಶ ಮಾಡು ತ್ತಾರೆ. ಪವಿತ್ರವಾದ ಈ ಮೆಟ್ಟಲುಗಳನ್ನು ಏರುವ ಮೊದಲು ತೆಂಗಿನಕಾಯಿಯನ್ನು ಒಡೆಯುತ್ತಾರೆ. ಯಾತ್ರಿಕರು ಎಷ್ಟು ಬಾರಿ ಶಬರಿಮಲೆಯಾತ್ರೆ ಮಾಡಿದ್ದರೋ ಅಷ್ಟನೆಯ ಮೆಟ್ಟಲಿನ ಮೇಲೆ ಕಾಯಿ ಒಡೆಯುವುದೂ ಉಂಟು. ಅನಂತರ ಪ್ರದಕ್ಷಿಣೆಮಾಡಿ ಶಾಸ್ತನಿಗೆ ತಾವು ತೆಂಗಿನಕಾಯೊಳಗೆ ತಂದ ತುಪ್ಪವನ್ನು ಸಮರ್ಪಿಸುತ್ತಾರೆ. ಕೊಚುಕುಡುತ್ತ ಮತ್ತು ಕರುಪ್ಪುಸ್ವಾಮಿ ದೈವಗಳಿಗೂ ಪೂಜೆ ನಡೆಸುತ್ತಾರೆ.

ಮಕರ ಸಂಕ್ರಮಣದ ರಾತ್ರಿ ಮಕರವಿಳಕ್ಕು ಉತ್ಸವ ಬರುತ್ತದೆ. ವೈಭವದಿಂದ ದೀಪಗಳೊಡಗೂಡಿ ಮಲೆಕಪ್ಪುರತಮ್ಮನ ಸನ್ನಿಧಿಯಿಂದ ಶಾಸ್ತನ ಗುಡಿಗೆ ಸಾಗುವ ಈ ಉತ್ಸವವನ್ನು ನೋಡುವುದು ಯಾತ್ರೆಯ ಪ್ರಮುಖ ಘಟ್ಟ. ಮಲೆಕಪ್ಪುರಂ ಎನ್ನುವ ಸ್ಥಳ ಹತ್ತಿರದಲ್ಲಿಯೇ ಇದೆ. ಶಾಸ್ತನ ಶಕ್ತಿಯನ್ನು ಇಲ್ಲಿ ಪ್ರತಿಷ್ಠಾಪಿಸಿದ್ದಾರೆಂದು ಪ್ರತೀತಿ. ಆದರೆ ಮಲೆಕಪ್ಪುರತಮ್ಮ ಯಾರೆಂದು ಸ್ಪಷ್ಟವಾಗಿಲ್ಲ. ಶಾಸ್ತನ ಶಕ್ತಿಯೆಂದಷ್ಟೇ ಹೇಳುತ್ತಾರೆ. ಮರುದಿನ ಬೆಳಿಗ್ಗೆ ಒರಕುಷಿ ತೀರ್ಥದಲ್ಲಿ ಮಿಂದು ಸಂತರ್ಪಣೆ ನಡೆಸಿ ಹಿಂದಿರುಗುತ್ತಾರೆ. ಯಾತ್ರೆಯನ್ನು ಯಶಸ್ವಿಯಾಗಿ ನಡೆಸಿದ ಮೇಲೆ ದೀಕ್ಷೆಯೂ ಮುಗಿಯಿತೆಂದರ್ಥ. ಇನ್ನು ಮುಂದೆ ಯಾತ್ರಿಕ ನಿತ್ಯವ್ಯವಹಾರದಲ್ಲಿ ತೊಡಗಬಹುದು; ಅವನ ಆಹಾರ ವಿಹಾರಗಳಲ್ಲಿ ಯಾವ ನಿರ್ಬಂಧವೂ ಇಲ್ಲ. ಅವನ ಮೇಲೆ ಪೆರಿಯಸ್ವಾಮಿಯ ಅಧಿಕಾರವೂ ಇಲ್ಲಿಗೆ ಮುಗಿಯುತ್ತದೆ.

ಈ ಯಾತ್ರಾ ಪದ್ಧತಿಯ ಮುಖ್ಯ ವಿವರಗಳೆಲ್ಲಾ ಮಲಯರಾಯನ್ ಆದಿವಾಸಿಗಳಿಂದಲೇ ನಿಶ್ಚಿತವಾ ದುವು. ಇತರರು ಅವನ್ನು ಪರಿಗ್ರಹಿಸಿದ್ದಾರಷ್ಟೆ. ಆದುದರಿಂದ ಈ ವಿವರಗಳನ್ನೂ ಗುರುತಿಸಬಹುದು. ಈ ಆದಿವಾಸಿಗಳು ಶಬರಿಮಲೆಯಾತ್ರೆಯನ್ನು ಕೈಕೊಳ್ಳುವುದು ಕಾಡಿನಲ್ಲಿ ದುಷ್ಟಶಕ್ತಿಗಳು ತಮ್ಮನ್ನು ಬವಣೆಪಡಿಸ ದಿರಲೆಂದು; ಅನಿಷ್ಟದಿಂದ ತಮ್ಮನ್ನು ಕಾಪಾಡಿಕೊಳ್ಳುವುದು ಯಾತ್ರೆಯ ಮುಖ್ಯ ಉದ್ದೇಶ. ಈ ದೃಷ್ಟಿಯಿಂದ ಶಾಸ್ತನು ಪ್ರಬಲ. ಹೀಗೆ ಅವರು ಎಚ್ಚರದಿಂದ ನಡೆದುಕೊಳ್ಳುತ್ತಾರೆ. ಆದಿವಾಸಿಗಳಲ್ಲಿ ಶ್ರದ್ಧೆಯೆಂದರೆ ಭಯದ ಪಾಲು ಹೆಚ್ಚು. ಧಾರ್ಮಿಕ ವಿಧಿಗಳಲ್ಲಿ ಭೀತಿ ಹಾಸುಹೊಕ್ಕಾಗಿ ಸೇರಿರುತ್ತದೆ.

ಶಾಸ್ತನು ಅವರ ದೃಷ್ಟಿಯಲ್ಲಿ ಭೂತನಾಥ; ಅಶರೀರವಾಗಿ ನಮ್ಮ ಸುತ್ತಲೂ ಸುಳಿದಾಡುವ ದೈವಗ ಳಿಗೆ ಒಡೆಯ. ಆನೆಯನ್ನೋ, ಕುದುರೆಯನ್ನೋ ಏರಿ, ಕೈಯಲ್ಲಿ ಕತ್ತಿ ಹಿಡಿದು, ನಡುರಾತ್ರಿಯಲ್ಲಿ ಎಲ್ಲೆಡೆಯೂ ಅಲೆದಾಡುತ್ತಾ ಶಾಸ್ತನು ಬೇಟೆಯಾಡುತ್ತಾನೆಂದು ಅವರ ಕಲ್ಪನೆ. ಅವನ ಬಂಟರಾಗಿ ಇತರ ದೈವಗಳು ಕಂದೀಲುಗಳನ್ನು ಹಿಡಿದು ಅವನಿಗೆ ದಾರಿ ತೋರಿಸುತ್ತ ಸಾಗುತ್ತಿರುತ್ತಾರೆ. ನಡುರಾತ್ರಿಯ ಈ ಬೇಟೆ ಗಾರರನ್ನು ಯಾವನಾದರೂ ಮನುಷ್ಯ ಕಂಡನೆಂದರೆ ಅವನಿಗೆ ಸಾವು ಸಿದ್ಧ. ಶಾಸ್ತನ ದಾರಿಯಲ್ಲಿ ಯಾರೂ ಅಡ್ಡಬರುವಹಾಗಿಲ್ಲ; ಶಾಸ್ತನನ್ನು ಬರಿಗಣ್ಣಿನಿಂದ ನೋಡುವ ಹಾಗಿಲ್ಲ. ಸಾವು ಸನ್ನಿಹಿತವಾಗಿದ್ದರೇ ಈ ಬೇಟೆಗಾರರ ತಂಡ ಕಾಣಿಸಿಕೊಳ್ಳುವುದು.

ಬೇಟೆಯಾಡದಿರುವಾಗ ಶಾಸ್ತನು ಯೋಗಿ. ಪದ್ಮಾಸನದಲ್ಲಿಯೋ ಸುಖಾಸನದಲ್ಲಿಯೋ ಪಟ್ಟಬಂಧದಲ್ಲಿಯೋ ಕುಳಿತು, ತಲೆಯ ಮೇಲೆ ಕಿರೀಟವನ್ನೂ, ಹಣೆಯಲ್ಲಿ ವಿಭೂತಿಯನ್ನೂ ಧರಿಸಿ, ಕೈಯಲ್ಲಿ ವಜ್ರದಂಡವನ್ನು ಹಿಡಿದು ಧ್ಯಾನದಲ್ಲಿ ಕುಳಿತಿರುವಂತೆ ಚಿತ್ರಿಸಿಕೊಳ್ಳುತ್ತಾರೆ. ಶಬರಿಮಲೆಯ ಮೇಲಿರುವ ಗುಡಿಯಲ್ಲಿ ಶಾಸ್ತನ ಮೂರ್ತಿ ಯೋಗಿಯಂತೆಯೇ ಇದೆ. ದಕ್ಷಿಣಾಮೂರ್ತಿಯಂತೆ ಯೋಗಪಟ್ಟದಲ್ಲಿ ಕುಳಿತ ಶಾಸ್ತನ ಬಲಗೈ ಚಿನ್ಮುದ್ರೆಯಲ್ಲಿದೆ. ಎಡಗೈ ಆನೆಯ ಸೊಂಡಿಲಿನಂತೆ ಹೊರಚಾಚಿದೆ. ತಲೆಯ ಮೇಲೆ ಕಿರೀಟಮುಕುಟ, ಮೈಯಲ್ಲಿ ಉಪವೀತಗಳಿವೆ. ಸರ್ವಾಲಂಕಾರ ಭೂಷಿತವಾದ ಈ ಮೂರ್ತಿಯ ಕಲ್ಪನೆ ಆದಿವಾಸಿಗಳಿಗೆ ಹೊಸದೇ. ಅವರು ಶಾಸ್ತನನ್ನು ಕಾಣುವುದು ಕೊಚುಕೊಡುತ್ತ, ಕರುಪ್ಪನ್ ದೈವಗಳಂತೆಯೇ.

ಶಾಸ್ತನ ಈ ಮೂರ್ತಿನಿರ್ದೇಶನವನ್ನು ಮಾಡಿದವನು ಪರಶುರಾಮನೆಂದೇ ಪ್ರತೀತಿ. ಮೂರ್ತಿಯನ್ನು ಪರಶುರಾಮನೇ ಶಬರಿಮಲೆಯ ಕಟ್ಟೆಯ ಮೇಲೆ ಪ್ರತಿಷ್ಠೆ ಮಾಡಿದನಂತೆ. ಅವನ ಅಣತಿಯಂತೆ ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನೇ ಗುಡಿಯನ್ನು ಕಟ್ಟಿದನೆಂದು ಪ್ರತೀತಿಯಿದೆ. ಕೇರಳದಲ್ಲಿಯೂ ತುಳುನಾಡಿನಲ್ಲಿಯೂ ಸಾಂಸ್ಕೃತಿಕ ನೆಲೆಗಳ ಪರಿವರ್ತನೆಗೆ ಪರಶುರಾಮನೇ ಕಾರಣನೆಂದು ಐತಿಹ್ಯ. ಆರ್ಯ ಸಂಸ್ಕೃತಿಯ ಹಿಡಿತಕ್ಕೆ ಒಳಪಟ್ಟ ಭಾಗವನ್ನು ಪರಶುರಾಮಕ್ಷೇತ್ರವೆಂದೇ ವ್ಯವಹರಿಸುತ್ತಾರೆ. ಮಲಯರಾಯನ್, ಮನ್ನಾನ್, ಕಾನಿಕ್ಕಾರನ್ ಮೊದಲಾದ ಆದಿವಾಸಿಗಳ ಶಾಸ್ತಕಲ್ಪನೆಯಲ್ಲಿ ಪರಶುರಾಮನ ಪಾತ್ರವಿಲ್ಲ. ಹೀಗೆ ತುಂಬ ಪ್ರಾಚೀನವಾದ ಕಾನನದೈವವೊಂದಕ್ಕೆ ವರ್ಧಿಷ್ಣುವಾದ ನಾಗರ ಸಂಸ್ಕೃತಿಯ ಸಂಪರ್ಕ ಒದಗಿಬಂದು ಪೂರ್ವಕಾರಣಾಗಮವು

> ವಕ್ಷ್ಯೇ ಶಾಸ್ತಾರ್ಚನಂ ದಿವ್ಯಂ
> ಶುಭದಂ ಪಾಪನಾಶನಂ
> ಸರ್ವಲೋಕಹಿತಂ ಪುಣ್ಯಂ
> ಸರ್ವೋಪದ್ರವನಾಶನಂ

ಎನ್ನುವಂತಾಯಿತು.

ಅಷ್ಟದಿಕ್ಪಾಲಕರು

ನಮ್ಮಲ್ಲಿ ಯಾವ ಪುಣ್ಯಕೆಲಸವನ್ನು ಮಾಡುವ ಮೊದಲೂ ಮಹಾಸಂಕಲ್ಪವನ್ನು ಹೇಳುವ ಪರಿಪಾಟಿಯಿದೆಯಷ್ಟೆ. ಅದರಲ್ಲಿ ಬರುವ 'ಅನೇಕಕೋಟಿಬ್ರಹ್ಮಾಂಡ' ಗಳಲ್ಲಿ ಒಂದಾದ ಈ ಬ್ರಹ್ಮಾಂಡಮಂಡಲವು ಕೂರ್ಮ-ವರಾಹ-ಆದಿಶೇಷ ಇವರಿಂದ ಪ್ರತಿಷ್ಠಿತವಾದುದೆಂದೂ, ಅತಲ-ಸುತಲ ಮೊದಲಾದ ಏಳು ಲೋಕಗಳಿಗೆ ಮೇಲ್ಭಾಗದಲ್ಲೂ ಭುವರ್ಲೋಕ-ಸುವರ್ಲೋಕ ಮೊದಲಾದ ಏಳು ಲೋಕಗಳಿಗೆ ಕೆಳಭಾಗದಲ್ಲಿದೆಯೆಂದೂ, ಇಂದ್ರ-ಅಗ್ನಿ ಮೊದಲಾದ ಎಂಟು ಮಂದಿ ದಿಕ್ಪಾಲಕರಿಂದ ಪಾಲಿತವಾದುದೆಂದೂ ಉಲ್ಲೇಖವಿದೆ. ಹೀಗೆ ದಿಕ್ಪಾಲಕರಿಂದ ಪಾಲಿತವಾದ ಸಪ್ತದ್ವೀಪಗಳಲ್ಲಿ ಒಂದಾಗಿ 'ಪಂಚಾಶತ್ಕೋಟಿಯೋಜನ ವಿಸ್ತೀರ್ಣ'ವಾದುದು ಈ ಭೂಮಂಡಲವಂತೆ. ಇದರಲ್ಲಿ ಅಡಗಿರುವುದು ಜಂಬೂದ್ವೀಪ. ಇದರಲ್ಲಿರುವ ಒಂಬತ್ತು ಖಂಡಗಳಲ್ಲಿ ನಾವಿರುವ ಭರತಖಂಡ ಒಂದು.

ಅಪಾರವಾದ, ಅದ್ಭುತವಾದ, ಅಚಿಂತ್ಯವಾದ ಈ ಬ್ರಹ್ಮಾಂಡಮಂಡಲದ ಕಲ್ಪನೆಯೇ ಸ್ವಾರಸ್ಯವಾದುದು. ಇದರಲ್ಲಿ ಕೂರ್ಮವೆಂಬ ಆಧಾರಪೀಠದ, ಅಷ್ಟದಿಕ್ಪಾಲಕರ ಮತ್ತು ನವಗ್ರಹಗಳ ಕಲ್ಪನೆ

ಸೇರಿಕೊಂಡು ಬಂದಿದೆ. ದೇವತಾರ್ಚನೆ ಮಾಡುವಾಗ, ಹೋಮಹವನಗಳನ್ನು ಮಾಡುವಾಗ ದಿಗ್ಬಂಧವನ್ನು ಮಾಡಿ ಇಂದ್ರಾದಿ ದಿಕ್ಪಾಲಕರನ್ನು ಪೂಜಿಸಿ, ಅವರ ನೆರವಿನಿಂದ ಬಾಹ್ಯಾಂತರ ಶುಚಿಯನ್ನು ತಂದುಕೊಂಡು ಮುಂದರಿಯುವುದು ವಾಡಿಕೆ. ಕೈಕೊಂಡ ಕೆಲಸಕ್ಕೆ ಯಾವ ದಿಕ್ಕಿನಿಂದಲೂ ತೊಂದರೆ ಬಾರದಂತೆ ಸಿದ್ಧತೆಯಿದು. ಒಬ್ಬೊಬ್ಬ ದಿಕ್ಪಾಲಕನನ್ನೂ ಬೇರೆಬೇರೆಯಾಗಿ ಬರಮಾಡಿಕೊಂಡು ಪೂಜೆಮಾಡುವುದು ದಿಕ್ಪಾಲಕಪೂಜೆ.

ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಎನ್ನುವ ನಾಲ್ಕು ದಿಕ್ಕುಗಳಲ್ಲದೆ ಪೂರ್ವಕ್ಕೂ ದಕ್ಷಿಣಕ್ಕೂ ನಡುವೆ ಆಗ್ನೇಯ, ದಕ್ಷಿಣಕ್ಕೂ ಪಶ್ಚಿಮಕ್ಕೂ ನಡುವೆ ನೈಋತ್ಯ, ಪಶ್ಚಿಮಕ್ಕೂ ಉತ್ತರಕ್ಕೂ ನಡುವೆ ವಾಯವ್ಯ, ಉತ್ತರಕ್ಕೂ ಪೂರ್ವಕ್ಕೂ ನಡುವೆ ಈಶಾನ್ಯ ಹೀಗೆ ಮತ್ತೆ ನಾಲ್ಕು ವಿದಿಕ್ಕುಗಳನ್ನೂ ಹೇಳುತ್ತಾರೆ; ಎಂದರೆ ಒಟ್ಟು ಎಂಟು ದಿಕ್ಕುಗಳು. ಇದೇ ತುಂಬ ಬಳಕೆಯಲ್ಲಿರುವ ಪರಿಗಣನೆಯಾದರೂ ಮೊದಲಿಗೆ ನಾಲ್ಕೇ ದಿಕ್ಕುಗಳನ್ನು ಹೇಳುವ ವಾಡಿಕೆಯಿದ್ದಿತು. ತಂತ್ರಗಳು ಈ ಎಂಟಕ್ಕೆ ಅತ್ಯುಚ್ಚ, ಅತಿನೀಚ ನೆಲೆಗಳೆರಡನ್ನೂ ಸೇರಿಸಿ ದಶದಿಕ್ಕುಗಳನ್ನು ಎಣಿಸುತ್ತಾರೆ. ಯಾವ ದಿಕ್ಕಿಗೆ ಯಾರು ಪಾಲಕರು ಎನ್ನುವ ವಿಚಾರವಾಗಿಯೂ ಒಮ್ಮತ ವಿರಲಿಲ್ಲ. ಒಂದು ಪಟ್ಟಿಯ ಪ್ರಕಾರ ಪೂರ್ವಕ್ಕೆ ಸೂರ್ಯ, ಪಶ್ಚಿಮಕ್ಕೆ ವರುಣ, ಉತ್ತರಕ್ಕೆ ಸೋಮ, ದಕ್ಷಿಣಕ್ಕೆ ಯಮ (ಬೃಹದಾರಣ್ಯಕ). ಆದರೆ ಪ್ರಚಲಿತವಾದ ಇನ್ನೊಂದು ಪಟ್ಟಿ ಪೂರ್ವಕ್ಕೆ ಇಂದ್ರ, ಪಶ್ಚಿಮಕ್ಕೆ ವರುಣ, ಉತ್ತರಕ್ಕೆ ಕುಬೇರ, ದಕ್ಷಿಣಕ್ಕೆ ಯಮ ಎಂದು ಹೆಸರಿಸುತ್ತದೆ. ವಿದಿಕ್ಕುಗಳಿಗೆ ಅಗ್ನಿ, ನಿಋತಿ, ವಾಯು ಮತ್ತು ಈಶಾನ; ತಂತ್ರದಲ್ಲಿ ಅತ್ಯುಚ್ಚನೆಲೆಗೆ ಬ್ರಹ್ಮ, ಅತಿನೀಚನೆಲೆಗೆ ಅನಂತ (ವಿಷ್ಣು).

ಅಷ್ಟದಿಕ್ಪಾಲಕರಿಗೆ ವಿಶಿಷ್ಟವಾದ ನಗರಗಳನ್ನೂ ವಾಹನಗಳನ್ನೂ ವಸುಗಳನ್ನೂ ಹೇಳುವ ಪದ್ಧತಿ ಪ್ರಾಚೀನವಾದುದು. ಒಬ್ಬೊಬ್ಬ ದಿಕ್ಪಾಲಕನೂ ಆ ದಿಕ್ಕಿಗೆಲ್ಲ ಒಡೆಯನಾದುದರಿಂದ ಅವನನ್ನು ರಾಜನಂತೆ ಚಿತ್ರಿಸುವುದಿದೆ. ಒಂದು ಕಾಲಕ್ಕೆ ದಿಕ್ಪಾಲಕರ ಪೂಜೆ ಪ್ರಚಲಿತವಾಗಿದ್ದಿತು. ಮಹಾಯಾನ ಬೌದ್ಧಧರ್ಮ ಹರಡಿರುವ ಕಡೆಗಳಲ್ಲಿ ಲೋಕಪಾಲಕರಿಗೆ ಮರ್ಯಾದೆ ದೊರೆತಿದೆ. ಈ ದಿಕ್ಪಾಲಕರ ಒಡೆಯ ಕುಬೇರನೆಂದು ಅವರ ಕಲ್ಪನೆ. ಯಕ್ಷರು ಉತ್ತರದಿಕ್ಕಿನ ಅಭಿಮಾನಿಸತ್ತ್ವಗಳು; ಅವರ ಒಡೆಯ ಕುಬೇರ. ಪೂರ್ವದಿಕ್ಕಿನಲ್ಲಿ ಅಪ್ಸರೆಯರು, ಗಂಧರ್ವರು; ಅವರ ಒಡೆಯ ಧೃತರಾಷ್ಟ್ರನೆಂಬ ದಿಕ್ಪಾಲಕ. ಪಶ್ಚಿಮದಲ್ಲಿ ನಾಗರು; ಅವರೊಡೆಯ ವಿರೂಪಾಕ್ಷ. ದಕ್ಷಿಣದಲ್ಲಿ ಕುಂಭಾಂಡದೈತ್ಯರು; ಅವರೊಡೆಯ ವಿರೂಢಕ.

ಬರುಬರುತ್ತ ದಿಕ್ಪಾಲಕರು ಹಿಂದುಳಿದರು; ಅವರ ಪೂಜೆಯಿರಲಿ, ನೆನಪೂ ಮಾಸತೊಡಗಿತು.

ಅಷ್ಟದಿಕ್ಪಾಲಕರಲ್ಲಿ ಇಂದ್ರನೇ ಅಗ್ರಗಣ್ಯ. ದಿಗ್ಬಂಧನಮಾಡುವಾಗ "ಐಂದ್ರೀಂ ದಿಶಂ ಸಮಾರಭ್ಯ ದಿಶಂ ತ್ವಧಸ್ತಾದಂತಂ ಪ್ರೋಕ್ಷ್ಯ ಚಕ್ರೇಣ ಬಧ್ನಾಮಿ" ಎಂದು ಹೇಳುತ್ತಾರೆ. ಇಂದ್ರನ ದಿಕ್ಕೆಂದರೆ ಪೂರ್ವ. ಅಮರಾವತಿ ಅವನ ನಗರ; ಐರಾವತವೆಂಬ ಆನೆ ವಾಹನ; ಅನಲನೆಂಬುವನು ವಸು. "ಇಂದ್ರಾಯ ಸುರಾಧಿಪತಯೇ ಕುಲಿಶಧರಾಯ ಸರಸ್ವತೀಪಾರ್ಷದಾಯ ನಮಃ" ಎನ್ನುವುದು ಅವನ ಮಂತ್ರ. ಅವನ ಅಸ್ತ್ರ ಕುಲಿಶ (ವಜ್ರಾಯುಧ); ಅವನ ಬಣ್ಣ ಹಳದಿ; ಅವನ ಉಡುಪು ಬಂಗಾರದ್ದು; ಅವನ ಬೀಜಾಕ್ಷರ 'ಲಂ'. ಇಂದ್ರನೆಂದರೆ ಶಕ್ತ, ಸಮರ್ಥನೆಂದೂ (ಇಂದ್ ಧಾತುವಿನಿಂದ) , ಮಳೆಯನ್ನು ತರುವವನೆಂದೂ (ಇಂದು, ಎಂದರೆ ಹನಿ ಎನ್ನುವ ಧಾತುವಿನಿಂದ) ಅರ್ಥ. ಇವನನ್ನು ಶಕ್ರನೆಂದೂ, ಮಘವಾನನೆಂದೂ, ವಾಸವನೆಂದೂ ವಜ್ರಪಾಣಿಯೆಂದೂ, ಪುರಂದರನೆಂದೂ ಕರೆಯುತ್ತಾರೆ. ದೇವತೆಗಳಿಗೆ ಒಡೆಯನಾದುದರಿಂದ ದೇವರಾಜ, ಸುರಾಧಿಪತಿ, ಕಶ್ಯಪ–ಅದಿತಿಯರ ಮಗನಾದ ಇವನ ಹೆಂಡತಿ ಇಂದ್ರಾಣಿ ಅಥವಾ ಶಚೀ; ಈಕೆ ದೈತ್ಯ



ಅಷ್ಟದಿಕ್ಪಾಲಕರು

ಪುಲೋಮನ ಮಗಳು. ಅವನು ಪುಲೋಮನನ್ನು ಕೊಂದು ಶಚಿಯೊಡಗೂಡಿದ ಕಥೆ ತೈತ್ತಿರೀಯ ಬ್ರಾಹ್ಮಣದಲ್ಲಿ ಬರುತ್ತದೆ. ಇಂದ್ರನ ಮೂವರು ಮಕ್ಕಳು ಜಯಂತ, ಋಷಭ ಮತ್ತು ಮೀಢುಷ. ರಾಮಾಯಣದ ವಾಲಿ, ಮಹಾಭಾರತದ ಅರ್ಜುನ ಇಬ್ಬರೂ ಇವನ ಮಕ್ಕಳೆಂದೇ ಪ್ರತೀತಿ. ಸ್ವರ್ಗದ ಬಾಗಿಲಲ್ಲಿ, ಕೈಲಾಸದಂತೆ ನಿಂತಿರುವ ನಾಲ್ಕು ಸೊಂಡಿಲುಗಳ ಆನೆ ಐರಾವತ ಅವನ ವಾಹನ; ಸಮುದ್ರಮಂಥನದ ಕಾಲದಲ್ಲಿ ಹೊರಬಂದ ಈ ಆನೆಯ ಬಣ್ಣ ಬಿಳಿ. ಅದೇ ಕಾಲದಲ್ಲಿ ಹೊರಬಂದ ಕುದುರೆ ಉಚ್ಚೈಃಶ್ರವಸ್ ಕೂಡ ಇಂದ್ರನ ವಾಹನವೇ. ಅವನು ಕುಳಿತು ಹೊರಡುವ ರಥಕ್ಕೆ ಚೈತ್ರವಿಮಾನವೆಂದು ಹೆಸರು. ರಥದ ಸಾರಥಿ ಮಾತಲಿಯೆಂಬ ವೀರ; ಈ ಮಾತಲಿಯ ಹೆಂಡತಿ ಸುಧರ್ಮಾ, ಮಗಳು ಗುಣಕೇಶಿ. ಇಂದ್ರನ ಬಿಲ್ಲು ವಿಜಯವೆನಿಸಿಕೊಳ್ಳುತ್ತದೆ; ಇದೇ ಆಕಾಶದಲ್ಲಿ ಕಾಣುವ ಕಾಮನ ಬಿಲ್ಲು (ಇಂದ್ರಧನುಸ್). ಅಮರಾವತಿಯಲ್ಲಿ ಅವನಿರುವ ಅರಮನೆಯ ಹೆಸರು ವೈಜಯಂತ; ಅಲ್ಲಿರುವ ಉದ್ಯಾನ ನಂದನವನ.

ವೈದಿಕ ದೇವತೆಗಳಲ್ಲಿ ಪ್ರಮುಖನಾದ ಇಂದ್ರ ಮೊದಲಿಗೆ ಮನುಷ್ಯವೀರನೇ ಆಗಿದ್ದನೆಂದು ಸೂಚನೆಯಿದೆ. ಪ್ರಾಚೀನ ಆರ್ಯರಿಗೂ ಅಸುರರೆನಿಸಿಕೊಂಡ ದಸ್ಯುಗಳಿಗೂ ನಡುವೆ ಜರುಗುತ್ತಿದ್ದ ಸಮರಗಳಲ್ಲಿ ಆರ್ಯರನ್ನು ದಿಗ್ವಿಜಯಕ್ಕೆ ಒಯ್ದ ವೀರ ಇವನು. ಆರ್ಯಗಣಗಳಿಗೆ ನಾಯಕ; ಆರ್ಯರ ಅಭಿಮಾನಿದೇವತೆಗಳಿಗೆ ರಾಜ. ಮೊದಲಿಗೆ ನಿಸರ್ಗದೇವತೆಯಾದ ಇವನು ಕಾಲಕ್ರಮದಲ್ಲಿ ಪುರಾಣದ ಮತ್ತು ಇತಿಹಾಸದ ಆದರದಿಂದ ಸ್ವಾರಸ್ಯವಾದ ವ್ಯಕ್ತಿತ್ವವನ್ನು ಪಡೆದನು. ಋಗ್ವೇದ ಇವನ ಪರಾಕ್ರಮವನ್ನು ಬಣ್ಣಿಸುತ್ತದೆ—"ಇಂದ್ರೋ ಜನಾನ್ಯಾತಯತಿ ಬ್ರುವಾಣಃ" ಎಂದು ಅವನ ಆಧಿಪತ್ಯವನ್ನು ಹೇಳುತ್ತದೆ. ಆಕಾಶದಲ್ಲಿ ಅಲೆದಾಡುವ ಮೋಡ (ಅಹಿ)ವನ್ನು ತನ್ನ ವಜ್ರಾಯುಧದಿಂದ ಸೀಳಿ, ಮಳೆ ಬರುವಂತೆ ಮಾಡುವವನು ಇಂದ್ರ. ಕಾರ್ಮೋಡ ಕವಿದು ಕಗ್ಗತ್ತಲೆಯಾಗಲು ಇದೇ ವಜ್ರಾಯುಧ ಬೆಳಕನ್ನು ಒದಗಿಸುತ್ತದೆ. ಮಳೆಗೂ ಬೆಳಕಿಗೂ ಒಡೆಯನೆನಿಸಿದ ಈ ದೇವತೆಯನ್ನು ಆರ್ಯರು ಬಹುವಾಗಿ ಮೆಚ್ಚಿಕೊಂಡುದು ಸಹಜವೇ. ಅವನ ಹಿರಿಮೆಯನ್ನು

ಋಷಿಗಳು 'ಸತ್ಯ' ಎಂದು ಬಣ್ಣಿಸಿದರು. ಸತ್ಯವೆಂದರೆ ವಿಶ್ವಪಾಲನೆಯಲ್ಲಿಯೂ ನಿಯಮದಲ್ಲಿಯೂ ಸಮರ್ಥವಾದುದೆಂದರ್ಥ. "ಸತ್ಯವೇ ವಿಶ್ವವ್ಯಾಪಿಯಾದ ದಿವ್ಯನಿಯಮದ ನಾಭಿ" ಯೆಂದು ಒಂದು ಬ್ರಾಹ್ಮಣ ತಿಳಿಸುತ್ತದೆ. ಈ ಸತ್ಯದ ಪ್ರತಿಷ್ಠೆಯಾಗುವುದು ಇಂದ್ರನಿಂದಲೇ. ಸೂರ್ಯನನ್ನೂ ಗಗನವನ್ನೂ ಉಷಸ್ಸನ್ನೂ ಅವನೇ ಉಂಟುಮಾಡಿದನೆಂದು ಋಗ್ವೇದದ ಒಂದು ಮಂತ್ರ ಹೇಳುತ್ತದೆ.

ಈ ದೃಷ್ಟಿಯಿಂದಲೇ ಅವನು ಲೋಕಪಾಲಕರಲ್ಲಿ ಅಗ್ರಗಣ್ಯ, ರಾಜ. ಅವನ ಮುಖ್ಯಲಕ್ಷಣ ಕ್ಷಾತ್ರತೇಜಸ್ಸು. ಇವನಿಗೆ ನೆರವಾಗಿ ನಿಂತವರು ಮರುತ್ತುಗಳು, ಮರುದ್ದೇವತೆಯರು. ಬೀಸುವ ಗಾಳಿಯು ದಿವ್ಯಕಲ್ಪನೆಯೇ ಇದರ ಮೂಲ. ಇಂದ್ರನನ್ನು 'ಮರುತ್ವಾನ್' ಎಂದು ಕರೆದಾಗ ಗಾಳಿಗೂ ಮಳೆಗೂ ಇರುವ ಸಾಹಚರ್ಯನಿಯಮ ಸ್ಪಷ್ಟವಾಗುತ್ತದೆ. ಬರಗಾಲವನ್ನು 'ನಮುಚಿ'ಯೆನ್ನುವ ಅಸುರನೆಂದು ಬಗೆದು, ಮಳೆಗಾಳಿಗಳ ಒಡೆಯ ಇಂದ್ರನಿಗೂ ಅವನಿಗೂ ಎಡೆಬಿಡದೆ ಹಗರಣವಾದಂತೆ ವೇದವಾಙ್ಮಯ ಚಿತ್ರಿಸುತ್ತದೆ. ಇಂದ್ರನೊಂದಿಗೆ ಕಾದಾಡುವ ಹವ್ಯಾಸವನ್ನು ಇವನು ಬಿಡಲೇ ಇಲ್ಲವಾದುದರಿಂದ 'ನ-ಮುಚಿ' (ಎಂದರೆ "ನಾ ಬಿಡೆ") ಎನ್ನುವ ಹೆಸರು ಬಂದಿತಂತೆ. ಇಲ್ಲಿಯೂ ನಿಸರ್ಗವ್ಯಾಪಾರವೇ ಸಂಕೇತ. ಕಾಲಕಾಲದಲ್ಲಿ ಮಳೆಗರೆದು ಜನರನ್ನು ಸಂತೈಸಿ, ಸಂತೋಷಪಡಿಸುವವನೆಂದು ಇಂದ್ರ "ಸುಪರ್ಣ"ನಾದ; ಸುಪರ್ಣನೆಂದರೆ ಆಹ್ಲಾದಕಾರಿಯಾದ ದಿವ್ಯಜ್ಯೋತಿ.

ಇಂದ್ರನಿಗೆ ವಿಶಿಷ್ಟವಾದುದು ವಜ್ರಾಯುಧ. ಕಥೆ-ಕಲ್ಪನೆಗಳಲ್ಲಿ ಈ ಆಯುಧದ ಮಹಿಮೆ ಬಗೆಬಗೆಯಾಗಿ ಬಂದಿದೆ; ಪುರಾಣಗಳಲ್ಲಿ ಇಂದ್ರನ ಹಿರಿಮೆಯನ್ನು ಹೇಳುವ ನೂರಾರು ಪ್ರಸಂಗಗಳಲ್ಲಿ ವಜ್ರಾಯುಧದ ಸಾಮರ್ಥ್ಯವೇ ಮುಖ್ಯವಾಗಿ ಬರುವ ವಿವರ. ಆದರೆ ವೈದಿಕವಾಙ್ಮಯದಲ್ಲಿ ವಜ್ರವೆಂದರೆ ತ್ರಿಷ್ಟುಪ್ ಎನ್ನುವ ಛಂದಸ್ಸು. 'ಸ್ತುಬ್' (ಹೊಗಳು, ಸ್ತೋತ್ರಮಾಡು) ಎನ್ನುವ ಧಾತುವಿನಿಂದ ರೂಪತಳೆದ ಈ ಛಂದಸ್ಸಿನಿಂದ ಸ್ತುತಿಸಿದರೇ ಇಂದ್ರನ ಸಾಮರ್ಥ್ಯವು ಪ್ರಕಟವಾಗುವುದೆಂಬ ವಿವರಣೆಯಿದೆ. ಶತಪಥ ಬ್ರಾಹ್ಮಣ "ಹನ್ನೊಂದಕ್ಷರಗಳ ತ್ರಿಷ್ಟುಪ್ ಛಂದಸ್ಸೇ ವೀರ್ಯ; ಯಜ್ಞಮಾಡುವಾಗ ಅಸುರರನ್ನು ಎದುರಿಸಲು ಇದೇ ಸಮರ್ಥವಾದ ಸಾಧನ" ಎಂದು ಹೇಳಿದೆ. ಇನ್ನೊಂದು ಬ್ರಾಹ್ಮಣ ಇದನ್ನು ಕ್ಷತ್ರಾತ್ಮಕವಾದುದು, ತೇಜಸ್ವಿಯಾದುದು, ಓಜಃಸಂಪನ್ನವಾದುದು ಎಂದು ಬಣ್ಣಿಸಿದೆ. ಆದರೆ ಪುರಾಣಯುಗದ ಕಲ್ಪನೆಯಲ್ಲಿ ದಧೀಚಿಋಷಿಯ ಬೆನ್ನುಮೂಳೆಯಿಂದ ದೇವಶಿಲ್ಪಿ ತ್ವಷ್ಟಾರನು ಮಾಡಿದ ಆಯುಧವಾಯಿತು. ಬೆಟ್ಟಗಳನ್ನು ಸೀಳಲು. ವೃತ್ರಾಸುರನ ತಲೆಯನ್ನು ತುಂಡರಿಸಲು ಇಂದ್ರನು ಬಳಸಿದುದು ಇದೇ ಆಯುಧವನ್ನು. ವಜ್ರಬಾಹುವಾದ ಇಂದ್ರನು ಸ್ಥಾವರಜಂಗಮಗಳಿಗೆಲ್ಲ ಒಡೆಯನಾದನೆಂದೂ, ಚಕ್ರದ ಗಚ್ಚು ಪಟ್ಟಿಗಳನ್ನೆಲ್ಲ ಸುತ್ತರಿದು ನಿಂತಂತೆ ಇಡೀ ವಿಶ್ವವನ್ನೇ ಅವನು ಸುತ್ತರಿದು ನಿಂತಿದ್ದಾನೆಂದೂ ಋಗ್ವೇದದ ಮಂತ್ರವೊಂದು ನಿರ್ದೇಶಿಸಿದೆ. ಬೌದ್ಧರ ತಾಂತ್ರಿಕ ಪಂಥಕ್ಕೆ ಸೇರಿದ ವಜ್ರಯಾನದಲ್ಲಿ ವಜ್ರವು ಮಾಯಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಯೆನ್ನುವ ಕಲ್ಪನೆಯಿದೆ; ಅವರ ಕರ್ಮಕಾಂಡದಲ್ಲಿ 'ಸಿಡಿಲಿನ ಬೆಳಕ'ನ್ನು ಪ್ರತಿನಿಧಿಸುವ 'ವಜ್ರದಂಡ' (ಟಿಬೆಟನ್ ಭಾಷೆಯಲ್ಲಿ ದೋರ್ಜೆ) ಹೆಚ್ಚಾಗಿ ಬಳಕೆಯಲ್ಲಿದೆ.

ನಿಸರ್ಗದೇವತೆಗಳ ಕಾಲಮುಗಿದು ಪ್ರಾಕೃತ ದೇವತೆಗಳ ಕಲ್ಪನೆ ಮೂಡಿದಂದು ಕೂಡ ಇಂದ್ರನ ಹೆಚ್ಚಳ ಇದ್ದಿತೆಂದು ತೋರುತ್ತದೆ. ಪಾಣಿನಿಯ ಕಾಲದಲ್ಲಿ ವಾಸುದೇವ (ಎಂದರೆ ವಿಷ್ಣು) ಅರ್ಜುನ (ಎಂದರೆ ಇಂದ್ರ) ಇವರಿಬ್ಬರನ್ನೂ ಜನರು ಪೂಜಿಸುತ್ತಿದ್ದುದು ಆವನ 'ವಾಸುದೇವಾರ್ಜುನಾಭ್ಯಾಂ ವುನ್' ಎನ್ನುವ ಸೂತ್ರದಿಂದ ಧ್ವನಿತವಾಗುತ್ತದೆ. ಶತಪಥ ಬ್ರಾಹ್ಮಣದಲ್ಲಿ ಅರ್ಜುನ ಎನ್ನುವುದು ಇಂದ್ರನ ಗುಟ್ಟಾದ

ಹೆಸರು (ಗುಹ್ಯಂ ನಾಮ) ಎಂಬ ವಿವರವಿದೆ. ಇಂದ್ರನಿಗೂ ಅರ್ಜುನನಿಗೂ ಇರುವ ನಂಟನ್ನು ಸಾಯಣಾಚಾರ್ಯರು ತಮ್ಮ ವೇದಭಾಷ್ಯದಲ್ಲಿ ಉಲ್ಲೇಖಿಸಿದ್ದಾರೆ. ಫಲ್ಗುಣೀ ಎಂಬ ನಕ್ಷತ್ರ ಇಂದ್ರಾಧಿಷ್ಠಿತವಾದುದು; ಈ ನಕ್ಷತ್ರದಲ್ಲಿಯೇ ಅರ್ಜುನ ಹುಟ್ಟಿದುದರಿಂದ ಅವನು ಫಾಲ್ಗುಣ; ಈ ಕಾರಣದಿಂದಲೇ ಅವನು ಇಂದ್ರಪುತ್ರ. ಕೃಷ್ಣನ ಪೂಜೆ ಪ್ರಬಲವಾದಾಗ ಇಂದ್ರನ ಪೂಜೆ ಹಿಂದೆಬಿದ್ದಿತು; ಅವನ ಹಿರಿಮೆ ಜನರ ಮನಸ್ಸಿನಿಂದ ಜಾರಿತು. ಭಾಗವತದಲ್ಲಿ ಬರುವ ಗೋವರ್ಧನೋದ್ಧರಣ ಪ್ರಸಂಗ ಸೂಚಿಸುವುದು ಇದನ್ನೇ. ಇಂದ್ರಯಜ್ಞವನ್ನು ಮಾಡದಿದ್ದ ಗೋವಳರ ಮೇಲೆ ಸಿಟ್ಟಿಗೆದ್ದ ಇಂದ್ರನ ಉಪದ್ರವವನ್ನು ನಿಲ್ಲಿಸಿದವನು ಕೃಷ್ಣ. ಅಲ್ಲಿಂದ ಮುಂದೆ ಇಂದ್ರನ ಪೂಜೆ ನಿಂತಿತು. ಹೀಗೆ ಒಂದು ಕಾಲಕ್ಕೆ ಅಖಿಲ ಲೋಕಪಾಲಕನೆಂದು ಮೆರೆದ ಇಂದ್ರ ಇಂದು ಕೇವಲ ದಿಕ್ಪಾಲಕನಾಗಿ ಉಳಿದಿದ್ದಾನೆ.

ಪೂರ್ವದಿಕ್ಕಿಗೂ ದಕ್ಷಿಣದಿಕ್ಕಿಗೂ ನಡುವೆ ಇರುವ ಆಗ್ನೇಯ ಕೋಣೆಗೆ ಅಭಿಮಾನಿದೇವತೆ ಅಗ್ನಿ; ಆ ದಿಗ್ಭಾಗದ ಲೋಕಪಾಲಕ. ಇಂದ್ರನಂತೆ ಇವನೂ ವೈದಿಕದೇವತೆ. ಅವನ ನಗರ ತೇಜೋವತಿ; ವಾಹನ ಪುಂಡರೀಕ; ಅನಿಲ ವಸು. ಅವನಿಗೆ ವೈಶ್ವಾನರ (ಎಲ್ಲೆಲ್ಲಿಯೂ ಹರಡಿರುವವನು), ಹುತಾಶನ (ಇಟ್ಟ ಎಡೆಯನ್ನು ತಿನ್ನುವವನು), ವಿರಾಟ್‌ಪುರುಷ, ಪಾವಕ (ಶುದ್ಧಿಮಾಡುವವನು), ಜಾತವೇದ, ಚಿತ್ರಭಾನು, ಜ್ವಲನ ಮೊದಲಾದ ಹೆಸರುಗಳಿವೆ. ಅವನ ಧ್ವಜ ಹೊಗೆಯಾದುದರಿಂದ ಅವನು ಧೂಮಕೇತು; ತೋಮರವನ್ನು ಹಿಡಿದವನಾದುದರಿಂದ ತೋಮರಧರ; ಕೆಂಪುಕುದುರೆಗಳನ್ನುಳ್ಳವನಾದುದರಿಂದ ರೋಹಿತಾಶ್ವ; ಟಗರನ್ನೇರಿ ಹೋಗುವುದರಿಂದ ಛಾಗರಥ; ಏಳು ನಾಲಗೆಗಳನ್ನುಳ್ಳವನಾಗಿ ಸಪ್ತಜಿಹ್ವ. ಅಗ್ನಿಯ ಐದು ರೂಪಗಳೆಂದರೆ ಕಟ್ಟಿಗೆಯಲ್ಲಡಗಿ ದಿನವೂ ಕಾಣಿಸಿಕೊಳ್ಳುವ ಬೆಂಕಿ, ಮೋಡಗಳಲ್ಲಿ ಸಿಡಿಲಂತೆ ಮೈದಳೆದು ಕಾಡುಕಿಚ್ಚಿಗೆ ಕಾರಣವಾಗುವ ದಾವಾಗ್ನಿ, ಸೂರ್ಯನ ರೂಪದಲ್ಲಿ ಲೋಕಕ್ಕೆ ಬೆಳಕನ್ನು ಕೊಡುವ ದಿವ್ಯಾಗ್ನಿ, ಎಲ್ಲ ಜೀವಿಗಳಲ್ಲೂ ಇದ್ದು ಆಹಾರಪಚನ ಮೊದಲಾದ ಕ್ರಿಯೆಗಳಿಗೆ ಕಾರಣವಾಗುವ, ಆರೋಗ್ಯಕ್ಕೆ ಅವಶ್ಯವಾದ ಜಾಠರಾಗ್ನಿ, ಸಮುದ್ರದೊಳಗೆ ಅಡಗಿದ್ದು ಜಗತ್ತನ್ನೆಲ್ಲ ಸುಡುವ ಬಾಡವಾಗ್ನಿ (ಜ್ವಾಲಾಮುಖಿ). ಹೀಗೆ ಅಲೌಕಿಕ ಪ್ರಕಾಶದ ಅಗ್ನಿಗೆ ಮೂರು ಜನ್ಮಸ್ಥಾನಗಳನ್ನು ಹೇಳುತ್ತಾರೆ—ಸಮುದ್ರದಲ್ಲಿ ಬಾಡವಾನಲ, ದ್ಯುಲೋಕದಲ್ಲಿ ಸೂರ್ಯ (ಆದಿತ್ಯರೂಪ), ಅಂತರಿಕ್ಷದಲ್ಲಿ ಮಿಂಚು (ವಿದ್ಯುದ್ರೂಪ). ಜಗತ್ತಿನಲ್ಲಿ ದೇಶ ಕಾಲ ವಿಭಾಗವೂ ಋತುಭೇದವೂ ಅಗ್ನಿಯಿಂದಲೇ ಒದಗುವುದೆಂದು ನಂಬಿಕೆಯಿದೆ. ಇವಲ್ಲದೆ ಬ್ರಹ್ಮಾಗ್ನಿ, ಪ್ರಾಜಾಪತ್ಯಾಗ್ನಿ, ಗಾರ್ಹಪತ್ಯಾಗ್ನಿ, ದಕ್ಷಿಣಾಗ್ನಿ, ಕ್ರವ್ಯಾಗ್ನಿಯೆಂಬ ಭೇದವೂ ಇದೆ.

ಅಗ್ನಿಯೆಂದರೆ ಅಗ್ರಗಾಮಿಯೆಂದರ್ಥ; 'ಮುಖಂ ದೇವಾನಾಮಗ್ನಿಃ' (ಶತಪಥ ಬ್ರಾಹ್ಮಣ); 'ಅಗ್ನಿರ್ಮುಖಂ ಪ್ರಥಮೋ ದೇವತಾನಾಂ' (ಐತರೇಯ ಬ್ರಾಹ್ಮಣ). ಎಲ್ಲ ದೇವತೆಗಳಿಗೂ ಇವನೇ ಮೊದಲು; ಎಲ್ಲ ಕರ್ಮಗಳೂ ಇವನನ್ನು ಮೊದಲು ಮಾಡಿಕೊಂಡೇ ನಡೆಯುವುವು. ನಮ್ಮಲ್ಲಿ ವಿವಾಹವೇ ಮೊದಲಾಗಿ ಎಲ್ಲ ಮಂಗಳ ಕಾರ್ಯಗಳೂ ಅಗ್ನಿಸಾಕ್ಷಿಯಾಗಿಯೇ ನಡೆಯುತ್ತವೆ; ಶವಸಂಸ್ಕಾರದಲ್ಲಿಯೂ ಅಗ್ನಿಸ್ಪರ್ಶವೇ ಪ್ರಮುಖವಿವರವಷ್ಟೇ. ಮನೆ ಕಟ್ಟುವಲ್ಲಿಯೂ ಆಗ್ನೇಯ ದಿಕ್ಕನ್ನೇ ದೇವ ಮೂಲೆಯೆನ್ನುವುದು, ಇಲ್ಲಿಯೇ ವಾಸ್ತುಪುರುಷನ ನ್ಯಾಸ. ಔಪಾಸನೆಯಲ್ಲಿ ಅಗ್ನಿಯನ್ನು ಬಳಸುವ ಪದ್ಧತಿ ವೈದಿಕ ಯುಗದಿಂದ ಉಳಿದುಬಂದಿದೆ. ಗೃಹಸ್ಥರು ಮನೆಗಳಲ್ಲಿ ತಲೆಮಾರುಗಳಿಂದ ನಂದದೆ ಇರುವ ಅಗ್ನಿಯನ್ನು ಕಾಪಿಟ್ಟುಕೊಳ್ಳುವ ಪದ್ಧತಿಯಿದ್ದಿತು. ಔಪಾಸನೆಗಳಲ್ಲಿ ಒಂದಾದ ಮಂಥವಿದ್ಯೆಯಲ್ಲಿ ಅಗ್ನಿರೂಪನಾದ ಈಶ್ವರನನ್ನು ಪೂಜಿಸುತ್ತಾರೆ. ಬರಿಯ ಹಾಲನ್ನು ಕುಡಿದು, ನೇಮದಿಂದ ಇದ್ದು, ಕುಶಾಸನದ ಮೇಲೆ ಕುಳಿತು ಬೃಹದಾರಣ್ಯಕದ ಮಂತ್ರಗಳನ್ನು ಹೇಳಿ

ಫಲೌಷಧಿಗಳಿಂದ ಹವನ ಮಾಡುವುದು ಈ ಔಪಾಸನೆಯ ಮುಖ್ಯ ಕ್ರಿಯೆ. ಪಂಚಾಗ್ನಿವಿದ್ಯೆಯೆಂಬ ಇನ್ನೊಂದು ಔಪಾಸನೆಯಲ್ಲಿ ಲೋಕವೇ ಅಗ್ನಿ, ಅದು ಉರಿಯಲು ಸೂರ್ಯನೇ ಕಟ್ಟಿಗೆ, ಸೂರ್ಯರಶ್ಮಿಗಳು ಹೊಗೆ, ದಿನವೇ ಉರಿ, ದಿಕ್ಕುಗಳು ಇದ್ದಿಲು, ಅವಾಂತರದಿಕ್ಕುಗಳು ಕಿಡಿಗಳು ಎನ್ನುವ ರೂಪಕವಿದೆ.

ದೇವತೆಗಳ ವರ್ಗೀಕರಣದಲ್ಲಿ ಪೃಥ್ವೀಲೋಕದಲ್ಲಿ ಅಗ್ನಿ, ಮನುಷ್ಯ, ಪಶು, ವನಸ್ಪತಿ; ಅಂತರಿಕ್ಷಲೋಕ ದಲ್ಲಿ ಇಂದ್ರ, ಚಂದ್ರ, ರುದ್ರ, ವಿದ್ಯುತ್, ಮೇಘ; ಮತ್ತು ದ್ಯುಲೋಕದಲ್ಲಿ ಸೂರ್ಯ, ಅಶ್ವಿನೀದೇವತೆಗಳು ಹೀಗೆ ವಿಭಾಗಮಾಡುತ್ತಾರೆ. ಇದರ ತಾತ್ಪರ್ಯ ಭೂಮಿಯ ಮೇಲೆ ಮನುಷ್ಯರಿಗೂ ಗಿಡಗೆಂಟೆಗಳಿಗೂ ಅಗ್ನಿಯು ಅವಶ್ಯಕವಾದ ತತ್ತ್ವವೆಂದು. ಪ್ರಾಣಕ್ಕೆ ಆಧಾರಭೂತವಾದ ಅಗ್ನಿಯನ್ನು 'ಧ್ರುವಂ ಜ್ಯೋತಿ' (ಸ್ಥಿರವಾದ ಬೆಳಕು) ಎಂದು ಋಗ್ವೇದ ಕರೆದು ಜಂಗಮಭೂತಗಳ ನಡುವೆ ಇದು ಮಾರ್ಗದರ್ಶನಮಾಡು ವುದೆಂದು ಬಣ್ಣಿಸಿದೆ. ವಿಶ್ವದ ಚಾಲಕನಾದ ಈ ಅಂತಸ್ತತ್ತ್ವವನ್ನೇ 'ವೈಶ್ವಾನರ' ಎನ್ನುವ ಮಾತು ನಿರ್ದೇ ಶಿಸುತ್ತದೆ. ಇದನ್ನು ಪಾರ್ಥಿವಾಗ್ನಿಯೆಂದು ವ್ಯವಹರಿಸುವುದೂ ಉಂಟು.

ಈ ಕ್ರಿಯೆಯ ಬಲವೇ ಅಗ್ನಿಯ ಪ್ರಾಧಾನ್ಯದ ರಹಸ್ಯ. ಯಜ್ಞಯಾಗಾದಿಗಳಲ್ಲಿ ಎಲ್ಲ ಕೆಲಸವೂ ಅಗ್ನಿಪ್ರಮುಖವಾಗಿಯೇ ನಡೆಯುತ್ತದೆ; ಎಂದರೆ ಅಗ್ನಿಯೇ ಮಾರ್ಗದರ್ಶಕ. ಅಗ್ನಿಯಮೂಲಕವೇ ಎಲ್ಲ ದೇವತೆಗಳೂ ಹವಿಸ್ಸನ್ನು ಸ್ವೀಕರಿಸುವವರು; ಅಗ್ನಿಯು ಹವ್ಯವಾಹನ. ಹವಿಸ್ಸಿನಂತೆ ಮೈದಳೆದ ಎಲ್ಲ ಅನ್ನಕ್ಕೂ ಅವನೇ ಒಡೆಯ. ಅವನು ಯಜ್ಞೇಶ್ವರ. ಅವನೇ ವಿಶ್ವವ್ಯವಸ್ಥೆಗೆ ಮೂಲ ಎನ್ನುವ ಕಲ್ಪನೆ ಋಗ್ವೇದದಲ್ಲಿಯೇ ಕಾಣುತ್ತದೆ. ವಿಶ್ವದ ನಿಯಮನಕ್ಕೆ ಅವನೇ ಸಮರ್ಥನೆಂದು ಅಗ್ನಿಯನ್ನು 'ವೃಷಭ' (ವೃಷವೆಂದರೆ ಶಕ್ತಿ) ನೆಂದು ವ್ಯವಹರಿಸಿದ್ದಾರೆ. ವಿಶ್ವದ ಸಂಗೋಪನದಲ್ಲಿ ಎಡೆಬಿಡದೆ ಅವನು ಆಸಕ್ತ ನಾಗಿರುವುದರಿಂದ "ಧೃತವ್ರತ'. ಹಾಗೆಂದೇ ಉಪನಿಷತ್ತು "ಅಗ್ನಿಯೇ ನಮ್ಮನ್ನು ಒಳ್ಳೆಯ ದಾರಿಯಲ್ಲಿ ನಡೆಯಿಸು" (ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್) ಎಂದು ಕೇಳಿಕೊಳ್ಳುತ್ತದೆ.

ಅಗ್ನಿಯ ಸ್ವರೂಪವನ್ನು ವೈದಿಕವಾಙ್ಮಯ ಸ್ವಾರಸ್ಯವಾಗಿ ನಿರ್ದೇಶಿಸಿದೆ. ಜ್ವಾಲೆಯೇ ಅಗ್ನಿದೇವನ ಸೇನೆ; ಅವನ ಸ್ನೇಹಿತನಾದ ವಾಯುವೇ ಅವನನ್ನು ಯಜ್ಞಗೃಹಕ್ಕೆ ಕರೆದುಕೊಂಡು ಬರುವವನು. ಅಲ್ಲಿ ಋತ್ವಿಗ್ಜನರು ಚರು, ಪುರೋಡಾಶ ಮೊದಲಾದುವುಗಳಿಂದ ಅಗ್ನಿಗೆ ಅಭಿಷೇಕಮಾಡಿ ಉಪಚರಿಸುತ್ತಾರೆ. ನಾಲ್ಕು ಕೊಂಬುಗಳು, ಮೂರುಪಾದಗಳು, ಎರಡುತಲೆ, ಏಳುಕೈಗಳು ಇರುವ ಅಗ್ನಿಯ ಶಿಲ್ಪಕೃತಿಗಳು ನಮ್ಮ ದೇಶದಲ್ಲಿ ಹಲವೆಡೆ ಉಂಟು. ಇದಕ್ಕೆ ಆಧಾರ ಈ ಮಂತ್ರ—

ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾ
ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ
ತ್ರಿಧಾ ಬದ್ಧೋ ವೃಷಭೋ ....

ಈ ಮಂತ್ರಕ್ಕೆ ಐದು ಅರ್ಥಗಳಿವೆಯೆಂದು ಸಾಯಣರ ಮಾತು. ನಾಲ್ಕು ಕೊಂಬುಗಳೆಂದರೆ ನಾಲ್ಕು ವೇದಗಳೆಂದು ನಿರುಕ್ತ; ನಾಲ್ಕು ದಿಕ್ಕುಗಳೆಂದು ಸಾಯಣರು. ಮೂರುಪಾದಗಳೆಂದರೆ ಮೂರು ಸವನ ಗಳೆಂದು ನಿರುಕ್ತ; ಪ್ರಾತಃಕಾಲ, ಮಧ್ಯದಿನ, ಸಾಯಂಕಾಲಗಳೆಂದು ಸಾಯಣರು. ಎರಡು ತಲೆಗಳು ನಿರುಕ್ತದ ಪ್ರಕಾರ ಪ್ರಾಯಣೀಯ, ಉದಯನೀಯ ಎಂಬ ಅಂಗಗಳು; ಸಾಯಣರ ಪ್ರಕಾರ ದಿನ, ರಾತ್ರಿ. ಏಳುಕೈ ಗಳೆಂದರೆ ನಿರುಕ್ತಕಾರನು ಏಳು ಛಂದಸ್ಸುಗಳೆಂದಿದ್ದಾನೆ; ಏಳು ಕಿರಣಗಳು ಅಥವಾ ಏಳು ಋತುಗಳೆಂದು

ಸಾಯಣರ ವಿವರಣೆ. ಮೂರು ನೆಲೆಗಳಲ್ಲಿ ಕೂಡಿದವನು (ತ್ರಿಧಾ ಬದ್ಧ) ಎನ್ನುವಲ್ಲಿ ಮಂತ್ರ, ಬ್ರಾಹ್ಮಣ ಮತ್ತು ಕಲ್ಪಗಳೇ ಮೂರು ನೆಲೆಗಳೆಂದು ನಿರುಕ್ತ ಹೇಳಿದರೆ ಭೂಮಿ, ಅಂತರಿಕ್ಷ ಮತ್ತು ದ್ಯುಲೋಕಗಳೆಂದು ಸಾಯಣರು ಹೇಳಿದ್ದಾರೆ.

ಸ್ವಾಹಾ ಎಂಬ ಶಕ್ತಿಯೊಡಗೂಡಿ, ಧನುರ್ಧರನಾಗಿ ಸಪ್ತಜಿಹ್ವೆಗಳಿಂದ ಕೂಡಿದಂತೆ ಅಗ್ನಿಯನ್ನು ಚಿತ್ರಿಸುವುದುಂಟು. ಸ್ವಾಹಾದೇವಿ ದಕ್ಷಬ್ರಹ್ಮನ ಮಗಳೆಂದು ವಿವರವಿದೆ. ಆದರೆ ಹೋಮ–ಹವನಗಳಲ್ಲಿ ಯಾವ ವಸ್ತುವನ್ನು ಅಗ್ನಿಗೆ ಅರ್ಪಿಸುವಾಗಲೂ ಅದನ್ನು ತುಪ್ಪದಲ್ಲಿ ಅದ್ದಿ 'ಸ್ವಾಹಾ' ಎಂದು ಹೇಳಿಯೇ ಹಾಕಬೇಕೆಂದು ವಿಧಿಯಿದೆ. ಉರಿಗೆ ನೆರವಾಗುವ ತುಪ್ಪವನ್ನು ಅಗ್ನಿಯ ಕಣ್ಣು (ಘೃತಂ ಮೇ ಚಕ್ಷುಃ) ಎನ್ನುತ್ತಾರೆ.

ಅಗ್ನಿದೇವನಿಗೆ ಏಳು ನಾಲಗೆಗಳು (ಜಿಹ್ವಾಃ ಸಪ್ತ ವಿಭಾವಸೋಃ) ಎನ್ನುವ ಕಲ್ಪನೆ ಪ್ರಾಚೀನವಾದುದು. ಕರಾಳೀ, ಧೂಮಿನೀ, ಶ್ವೇತಾ, ಲೋಹಿತಾ, ನೀಲಲೋಹಿತಾ, ಸುವರ್ಣಾ, ಪದ್ಮರಾಗಾ ಇವೇ ನಾಲಗೆಗಳು. ಏಳು ಬಣ್ಣಗಳ ಹೆಸರುಗಳಿವು; ಉರಿಯಲ್ಲಿ ಕಾಣುವಂಥವು. ಮುಂಡಕೋಪನಿಷತ್ತಿನಲ್ಲಿ 'ಲೇಲಾಯಮಾನ'ವಾದ ಅಗ್ನಿಗೆ ಕಾಳೀ, ಕರಾಳೀ, ಮನೋಜವಾ, ಸುಲೋಹಿತಾ, ಧೂಮ್ರವರ್ಣಾ, ಸ್ಫುಲಿಂಗಿನೀ, ವಿಶ್ವರುಚೀ ಇವು ದೇವಿಯರೆಂದು ಹೇಳಿದೆ. ಈ ಏಳು ನಾಲಗೆಗಳನ್ನಳವಡಿಸಿಕೊಂಡು ಅಗ್ನಿಗೆ ನವಶಕ್ತಿಯರನ್ನು ಹೇಳುವ ಪರಿಪಾಟಿಯಿದೆ—ಪೀತಾ, ಶ್ವೇತಾ, ಅರುಣಾ, ಕೃಷ್ಣಾ, ಧೂಮ್ರಾ, ತೀವ್ರಾ, ಸ್ಫುಲಿಂಗಿನೀ, ರುಚಿರಾ, ಜ್ವಾಲಿನಿಯರೆಂದು. ಉರಿಯ ಸ್ವರೂಪ, ಆಕಾರ, ಬಣ್ಣಗಳನ್ನು ಅವಲಂಬಿಸಿ ನಿಂತ ಕಲ್ಪನೆಯೇ ಇದು. ಅಗ್ನಿಯ ಶಿಲ್ಪದಲ್ಲಿ ಉರಿಯನ್ನು ಅಳವಡಿಸಿರುವುದುಂಟು. ನಾಲ್ಕು ಕೈಗಳಿರುವ ಶಿಲ್ಪಗಳೂ ಇವೆ; ಕೊಡಲಿ, ಸ್ರುಕ್, ಅಕ್ಷಮಾಲೆ, ಅಗ್ನಿಗಳನ್ನು ಹಿಡಿದಂತೆ ಚಿತ್ರಿಸುತ್ತಾರೆ.

ಅಗ್ನಿಗೂ ರುದ್ರನಿಗೂ ಹಳೆಯ ಸಂಬಂಧವಿದೆ; ತಾದಾತ್ಮ್ಯವೂ ಇದೆ. ಶಿವನ ಪ್ರಸ್ತಾಪ ಮಾಡುವಾಗ ಈ ವಿಚಾರ ಆಗಲೇ ಬಂದಿದೆ. ಸ್ಕಂದನ ಜನನಕ್ಕೆ ಅಗ್ನಿಯು ಕಾರಣನಾದ ಕಥೆ ಗೊತ್ತಷ್ಟೆ; ಕಾರ್ತಿಕೇಯನಿಗೆ ಆಗ್ನೇಯನೆಂದೇ ಹೆಸರು. ಅಗ್ನಿಪತ್ನಿಯಾದ ಸ್ವಾಹಾದೇವಿಯೂ ದಾಕ್ಷಾಯಣಿಯೇ. ವೇದಿಕೆಯ ಮೇಲೆ ಜ್ವಲಿಸುವ ಅಗ್ನಿಯೇ ಶಿವಲಿಂಗದ ರೂಪವನ್ನು ತಳೆಯಿತೆಂಬ ನಂಬಿಕೆಯಿದೆ. ಶಿವನನ್ನು 'ಪಾವಕ', 'ಶುಚಿ' ಎಂದಂತೆಯೇ ಅಗ್ನಿಗೂ ಈ ನಿರ್ದೇಶನಗಳುಂಟು. 'ಆಶುಶುಕ್ಷಣಿ' ಯಾದ (ಎಂದರೆ ಸುತ್ತಲೂ ಸುಡುವ) ಅಗ್ನಿಯನ್ನು ಜನ ಶುಚಿಯೆನ್ನುವರೆಂದು ಬೃಹದ್ದೇವತೆ ಹೇಳುತ್ತದೆ (ಅಮುಷ್ಮಿನ್ನೇವ ವಿಪ್ರೈಸ್ತು ಲೋಕೇ ಅಗ್ನಿಃ ಶುಚಿರುಚ್ಯತೇ). ಪೃಥ್ವಿಯ ಮೇಲೆ ಪವಮಾನ, ಮಧ್ಯಲೋಕದಲ್ಲಿ ವನಸ್ಪತಿ, ದ್ಯುಲೋಕದಲ್ಲಿ ಶುಚಿ ಹೀಗೆ ಅಗ್ನಿಗೆ ನಾಮಾಂತರಗಳುಂಟಂತೆ. ಅಗ್ನಿಸ್ಪೃಷ್ಟವಾದುದು ಪವಿತ್ರವೆನ್ನುವ ನಂಬಿಕೆ ನಮ್ಮಲ್ಲಿ ಉಳಿದುಬಂದಿದೆ. ಸೀತೆಗೂ ಅಗ್ನಿಪರೀಕ್ಷೆಯಾಯಿತಲ್ಲವೇ? ಶಿವನಿಗಿದ್ದಂತೆ ಅಗ್ನಿಗೂ ಅಷ್ಟಮೂರ್ತಿಗಳಿವೆ—ಜಾತವೇದ, ಸಪ್ತಜಿಹ್ವ, ಹವ್ಯವಾಹನ, ಅಶ್ವೋದರಜ, ವೈಶ್ವಾನರ, ಕೌಮಾರತೇಜ, ವಿಶ್ವಮುಖ ಮತ್ತು ದೇವಮುಖ.

ದಕ್ಷಿಣದಿಕ್ಕಿಗೆ ಒಡೆಯನಾದ ಯಮನಿಗೆ ಪೂಜೆಯಿಲ್ಲದಿದ್ದರೂ ಪ್ರಸಿದ್ಧಿಯೇನೋ ಉಳಿದಿದೆ. ಪೂಜೆಯೇ ಇಲ್ಲವೆಂದೂ ಅಲ್ಲ. ದೀಪಾವಳಿಯ ಸಂದರ್ಭದಲ್ಲಿ ನರಕಚತುರ್ದಶಿಯಂದು ಯಮದೀಪವಿಟ್ಟು ಯಮತರ್ಪಣ ಕೊಡುವ ವಾಡಿಕೆಯಿದೆ. ಯಮದೀಪವಿಡುವಾಗ

ಯಮಾಯ ಧರ್ಮರಾಜಾಯ ಮೃತ್ಯವೇ ಚಾಂತಕಾಯ ಚ ।
ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯ ಚ ॥
ಔದುಂಬರಾಯ ದಧ್ನಾಯ ನೀಲಾಯ ಪರಮೇಷ್ಠಿನೇ ।
ವೃಕೋದರಾಯ ಚಿತ್ರಾಯ ಚಿತಗುಪ್ತಾಯ ವೈ ನಮಃ ॥

ಎನ್ನುವ ಮಂತ್ರ ಹೇಳುತ್ತಾರೆ. ದೀಪದಾನ ಮಾಡಿದರೆ ಅಪಮೃತ್ಯು ಬರುವುದಿಲ್ಲ; ಅಂದು ತೈಲ–ಗಂಗಾಸ್ನಾನ ಮಾಡಿದವರು ಯಮಲೋಕವನ್ನು ನೋಡುವುದಿಲ್ಲ ಎನ್ನುವ ನಂಬಿಕೆಗಳಿವೆ.

ಯಮನಿಗೂ ನರಕಕ್ಕೂ ಸಂಬಂಧವಿದೆಯಷ್ಟೆ. ಆದರೆ ಈ ಸಂಬಂಧ ಹಳೆಯದಲ್ಲ. ನರಕವು ಯಮಲೋಕದ ಒಂದು ಪ್ರದೇಶ, ಪಾಪಿಗಳು ತೊಳಲಾಡಿ ಬವಣೆಪಟ್ಟು ಯಮದಂಡವನ್ನು ಅನುಭವಿಸುವ ಪ್ರದೇಶ ಎನ್ನುವುದು ಪೌರಾಣಿಕ ಯುಗದ ನಂಬಿಕೆ. ನರಕದಲ್ಲಿ ತಾಮಿಸ್ರ, ಅಂಧತಾಮಿಸ್ರ, ರೌರವ, ಮಹಾ ರೌರವ, ಕಾಲಸೂತ್ರ, ಅಂಧಕೂಪ, ಕ್ರಿಮಿಭೋಜನ, ವಜ್ರಕಂಟಕ ಮೊದಲಾದ ಬಗೆಬಗೆಯ ಯಾತನೆಯ ನಿವೇಶನಗಳನ್ನೂ ಪುರಾಣಕಾರರು ತಾವೇ ಕಂಡುಬಂದವರಂತೆ ಬಣ್ಣಿಸಿದ್ದಾರೆ! ಆದರೆ ಪ್ರಾಚೀನ ಕಲ್ಪನೆಯ ಯಮಲೋಕವೇನು ಇಷ್ಟು ಭಯಾನಕವಾದುದಲ್ಲ. ದ್ಯುಲೋಕ (ಅಂತರಿಕ್ಷ)ಕ್ಕೂ ಯಮನಿಗೂ ಇರುವ ಸಂಬಂಧ ಹಳೆಯದು. ಯಮನು ದ್ಯುಲೋಕ ರಾಜ (ಯತ್ರ ರಾಜಾ ವೈವಸ್ವತಃ) ಎಂದು ಋಗ್ವೇದದ ಕಲ್ಪನೆ. ಇರುವ ಮೂರು ಲೋಕಗಳಲ್ಲಿ ಎರಡು ಸೂರ್ಯನವು, ಒಂದು ಯಮನದು (ತಿಸ್ರೋ ದ್ಯಾವಃ ಸವಿತುರ್ದ್ವಾ ಉಪಸ್ಥಾ ಏಕ ಯಮಸ್ಯ ಭುವನೇ ವಿರಾಷಾಟ್). ಈ ಯಮಲೋಕವು ಅತ್ಯುತ್ಕೃಷ್ಟವಾದುದೆಂಬ ಪ್ರಶಸ್ತಿಯೂ ಸಂಹಿತೆಯಲ್ಲಿದೆ: ಅಲ್ಲಿ ಶಾಶ್ವತವಾದ ಜ್ಯೋತಿ ಬೆಳಗುವುದಂತೆ, ಅದೇ ಪಿತೃಗಳ ಲೋಕ. "ಸಂಗಚ್ಛಸ್ವ ಪಿತೃಭಿಃ ಸಂಯಮೇನ ಇಷ್ಟಾಪೂರ್ತೇನ ಪರಮೇ ವ್ಯೋಮನ್" ಎಂಬ ಹರಕೆ ಸ್ವಾರಸ್ಯವಾದುದು. ಮನುಷ್ಯರು ಸಂಸಾರದಿಂದ ಪಾರಾದೊಡನೆ ಯಮಲೋಕಕ್ಕೆ ಹೊರಡುತ್ತಾರೆ. (ನರಃ ಸಂಸಾರಾಂತೇ ವಿಶತಿ ಯಮಧಾನೀಂ ಜವನಿಕಾಂ) ಎನ್ನುವಾಗಲೂ ಸಮಾಧಾನದ ಮನೋಧರ್ಮವೇ ವಿನಾ ಕಾತರವಾಗಲೀ ಭೀತಿಯಾಗಲೀ ಇರದು.

ಸಾವಿಗೆ ಯಮ ಕಾರಣ ಎನ್ನುವ ನಂಬಿಕೆಯೂ ಹರಡಿದೆಯಷ್ಟೆ. ಆದರೆ ವೈದಿಕವಾಙ್ಮಯದಲ್ಲಿ ಯಮನಿಗೂ ಆಯುಸ್ಸಿಗೂ ಸಂಬಂಧವಿಲ್ಲ. ಆಯುಸ್ಸನ್ನು ಅನುಗ್ರಹಿಸುವವನು ಪ್ರಜಾಪತಿ; ಆಯುಸ್ಸು ಮುಗಿಯುವುದರೊಳಗಾಗಿಯೇ ನಮ್ಮನ್ನು ಕಾಡಬೇಡಿರೆಂದು ಬೇಡಿಕೊಳ್ಳುವಾಗಲೂ (ನೋ ಮಧ್ಯಾರೀ ರಿಷ ತಾಯುರ್ಗಂತೋಃ) ಯಮನ ಪ್ರಸ್ತಾಪವಿಲ್ಲ. ಸಾವಿಗೂ ಯಮನಿಗೂ ನೇರವಾದ ಸಂಬಂಧವಿಲ್ಲದಿದ್ದರೂ ಪಿತೃದೇವತೆಗಳಿಗೆ ಅವನೇ ಒಡೆಯನೆನ್ನುವ ಕಲ್ಪನೆ ವೇದದಲ್ಲಿಯೇ ಇದೆ. ಅವನು ಪ್ರೇತರಾಜ, ಪ್ರೇತಾಧಿಪತಿ; ಪ್ರೇತವೆಂದರೆ ಇಲ್ಲಿಂದ ಹೊರಟವನು, ಮುಂದೆ ಪಿತೃವಾಗತಕ್ಕವನು. ಪಿತೃಲೋಕದಲ್ಲಿ ಅವನದೇ ಆಡಳಿತವಾದುದರಿಂದ ಅವನು ದಂಡಿ ಅಥವಾ ದಂಡಧರ. ವಿಶ್ವದ ಸೃಷ್ಟಿ, ಸ್ಥಿತಿ, ಲಯ ಗಳನ್ನಡಗಿಸಿಕೊಂಡ ಒಂದೇ ಸತ್‌ತತ್ತ್ವದ ಒಂದು ಮುಖ ಯಮಶಾಸನ. ಈ ದೃಷ್ಟಿಯಿಂದಲೇ ವೈದಿಕಋಷಿಗಳು

ಏಕಂ ಸದ್ವಿಪ್ರಾ ಬಹುಧಾ ವದಂತಿ
ಅಗ್ನಿಂ ಯಮಂ ಮಾತರಿಶ್ವಾನಮಾಹುಃ

ಎಂದುದು. ಋತದ ಒಂದು ಕ್ರಿಯೆ ನಿಯಮ. ಯಮ ಎನ್ನುವ ಮಾತಿಗೆ ನಿಯಂತ್ರಣ ಮಾಡುವವನು, ಹತೋಟಿಯಲ್ಲಿರಿಸಿಕೊಳ್ಳುವವನು, ಕಟ್ಟುವವನು ಎಂದರ್ಥ. ವೈದಿಕ ವಾಙ್ಮಯದಲ್ಲಿ ಆದಿತ್ಯನ ನಿಯಾಮಕತ್ವ

ವನ್ನು ಹೇಳುವಾಗ ಯಮನ ಪ್ರಸ್ತಾಪ ಬರುತ್ತದೆ. ಆದಿತ್ಯನನ್ನೇ ಯಮನೆಂದಿರುವುದೂ ಉಂಟು; ಅಗ್ನಿಯನ್ನೂ ಯಮನೆಂದೇ ಕರೆದಿರುವುದುಂಟು (ನಿರುಕ್ತಕಾರನಾದ ಯಾಸ್ಕ 'ಅಗ್ನಿರಪಿ ಯಮ ಉಚ್ಯತೇ' ಎಂದಿದ್ದಾನೆ). ಯಮನ ದಿಕ್ಕಾದ ದಕ್ಷಿಣ ಎನ್ನುವಾಗಲೂ ಸಾಮರ್ಥ್ಯದ, ಇಷ್ಟಾರ್ಥಗಳನ್ನು ನೆರವೇರಿಸುವ ಅರ್ಥವೇ 'ಧುರಿ ದಕ್ಷಿಣಾಯಃ' ಎಂದು ವೈದಿಕಸಂಹಿತೆ ಜಗತ್ತಿಗೆ ತಾಯಿಯಂತೆ ನಿಂತ ದ್ಯುಲೋಕವನ್ನು ಬಣ್ಣಿಸುತ್ತದೆ; 'ದಕ್ಷಿಣಾ ದಕ್ಷತೇಃ ಸಮರ್ಥಯತಿ' ಎಂದು ಯಾಸ್ಕನ ವಿವರಣೆ. ಹೀಗೆ ಯಮನನ್ನು 'ಧರ್ಮ'ನೆಂದೂ 'ಧರ್ಮರಾಜ'ನೆಂದೂ ಕರೆದಿದ್ದಾರೆ; ಅವನ ಶಾಸನ 'ಭೀಮ–ಶಾಸನ'.

ಋಗ್ವೇದ (10, 14, 5) ದಲ್ಲಿ ಯಮ ಸೂರ್ಯ–ವಿವಸ್ವಾನನ ಮಗ; ವಿಶ್ವಕರ್ಮನ ಮಗಳಾದ 'ಸರಣ್ಯು' (ಎಂದರೆ ಮೋಡ) ಯಮನ ತಾಯಿ. ಈಕೆಯೂ ಅಶ್ವಿನೀ ದೇವತೆಗಳ (–ಇವರೂ ವಿವಸ್ವಾನನ ಮಕ್ಕಳೇ–) ತಾಯಿಯಾದ ಸಂಜ್ಞೆಯೂ ನೋಡಲು ಒಂದೇ ತೆರನಾಗಿದ್ದರಂತೆ. ಯಮನಿಗೂ ಅಶ್ವಿನೀ ದೇವತೆಗಳಿಗೂ ನಿಕಟಸಂಬಂಧ. ಯಮನೊಂದಿಗೇ ಹುಟ್ಟಿದ ಸೋದರಿ ಯಮಿ ಸೋದರನನ್ನೇ ಕಾಮಿಸಿದಳು. ಇದನ್ನು ಹೇಳುವ ಋಗ್ವೇದದ ಯಮ–ಯಮೀಸಂವಾದ ಪ್ರಸಿದ್ಧವಾದುದು. ಈ ಯಮಿಯೇ ಮುಂದೆ ಯಮುನಾ ನದಿಯಾದಳಂತೆ. ಧರ್ಮಶಾಸ್ತ್ರ ಬರೆದ ಮನುವೂ ಯಮನ ಸೋದರನೆಂದು ಪ್ರತೀತಿ.

ಪುರಾಣಯುಗದಲ್ಲಿ ಈ ಹಿನ್ನೆಲೆ ಇನ್ನಷ್ಟು ವಿಸ್ತಾರವಾಗಿ ಬರುತ್ತದೆ. ಸೂರ್ಯನಿಗೆ ಮೂರು ಮಂದಿ ಮಡದಿಯರು–ರೈವತನ ಮಗಳಾದ ರಾಜ್ಞಿ, ತ್ವಷ್ಟೃವಿನ (ವಿಶ್ವಕರ್ಮನ) ಮಗಳಾದ ಸಂಜ್ಞೆ (ಎಂದರೆ ಬೆಳಕು) ಮತ್ತು ಪ್ರಭೆ. ರಾಜ್ಞಿಯಿಂದ ಹೊರಬಂದವನು ರೇವ, ಪ್ರಭೆಯಿಂದ ಹೊರಮೂಡಿದವನು—ಪ್ರಭಾತ (ಎಂದರೆ ಬೆಳಗು). ಸಂಜ್ಞೆಯಿಂದ ಹುಟ್ಟಿದವರು ಮೂವರು—ವೈವಸ್ವತ (ಎಂದರೆ ಮನು), ಯಮ ಮತ್ತು ಯಮುನೆ. ತ್ವಷ್ಟೃವಿನ ಮಗಳಾದ ಸಂಜ್ಞಾದೇವಿ (ಸುರೇಣು) ಸೂರ್ಯನನ್ನು ಮದುವೆಯಾಗಿ ಕೆಲ ಕಾಲ ಅವನೊಂದಿಗೆ ಇದ್ದು, ಅವನ ತೇಜಸ್ಸನ್ನು ತಡೆಯಲಾರದೆ ತನ್ನಂತೆಯೇ ಇದ್ದ ಸ್ತ್ರೀಯೊಬ್ಬಳನ್ನು ನಿರ್ಮಾಣಮಾಡಿ ಸೂರ್ಯನ ಬಳಿ ಬಿಟ್ಟು ತಾನು ತಪಸ್ಸಿಗೆ (ಅಥವಾ ತಂದೆಯ ಮನೆಗೆ) ಹೋಗಿಬಿಟ್ಟಳಂತೆ. ಅವಳಂತೆಯೇ ಇದ್ದ ಈ ಹೆಂಗಸೇ ಛಾಯಾದೇವಿ (ಎಂದರೆ ನೆರಳು). ತಾನು ಹೋಗುವ ಮೊದಲು ಸಂಜ್ಞೆ ತನ್ನ ಮಕ್ಕಳಾದ ಯಮ–ಯಮುನೆಯರನ್ನು ಛಾಯೆಯ ವಶದಲ್ಲಿಟ್ಟು ಅವರನ್ನು ಸರಿಯಾಗಿ ನೋಡಿಕೊಳ್ಳುವಂತೆ ಹೇಳಿದ್ದಳು. ಆದರೆ ಕಾಲಕ್ರಮದಲ್ಲಿ ಛಾಯಾದೇವಿಗೆ ಸೂರ್ಯನಿಂದ ಸಾವರ್ಣಿಮನು, ಶನೈಶ್ಚರ (ಎಂದರೆ ಶನಿ) ಮತ್ತು ತಪತಿ (ಪ್ರತದ ಕಾವು) ಎಂಬ ಮೂವರು ಮಕ್ಕಳಾದರು. ಆಗ ಛಾಯಾದೇವಿ ಯಮ–ಯಮುನೆಯರನ್ನು ಅಸಡ್ಡೆಯಿಂದ ಕಾಣತೊಡಗಲು, ಯಮನಿಗೆ ಸಿಟ್ಟುಬಂದು ಆಕೆಯನ್ನು ಕಾಲಿನಿಂದ ಒದ್ದನು, ಅಥವಾ ಒದೆಯಲು ಕಾಲನ್ನೆತ್ತಿದನು. ಆಕೆ "ನಿನ್ನ ಕಾಲಿನಲ್ಲಿ ಹುಳು ಬೀಳಲಿ, ವಾಸನೆ ಹಿಡಿಯಲಿ, ನೀರು ಸೋರಲಿ" ಎಂದು ಶಾಪವಿಟ್ಟಳು. ಆಗ ಯಮನು ತಂದೆಯಾದ ಸೂರ್ಯನ ಬಳಿಗೆ ಓಡಿಹೋಗಿ, ನಡೆದುದನ್ನು ಹೇಳಿದಾಗ ಸೂರ್ಯನು ಕೋಳಿಯೊಂದನ್ನು ನಿರ್ಮಿಸಿ ಅದು ಯಮನ ಕಾಲಿನಲ್ಲಿ ಬಿದ್ದ ಹುಳುವನ್ನೆಲ್ಲ ತಿಂದು ರಕ್ತವನ್ನು ಶುದ್ಧಿಮಾಡುವುದೆಂದು ತಿಳಿಸಿದನು. ಯಮ ಹೇಳುವವರೆಗೆ ಸೂರ್ಯನಿಗೆ ಈ ಛಾಯಾದೇವಿ ದಿಟವಾಗಿ ಸಂಜ್ಞಾದೇವಿಯಲ್ಲವೆಂದು ತಿಳಿದೇ ಇರಲಿಲ್ಲವಂತೆ ! ಅನಂತರ ಯಮನು ಗೋಕರ್ಣಕ್ಷೇತ್ರಕ್ಕೆ ಬಂದು ಅಲ್ಲಿ ತಪಸ್ಸುಮಾಡಿ, ಧರ್ಮಾಧರ್ಮವಿವೇಚನೆಯ ಶಕ್ತಿಯನ್ನೂ ಪಿತೃದೇವತೆಗಳ ಮೇಲೆ ಒಡೆತನವನ್ನೂ, ದಿಕ್ಪಾಲಕತ್ವವನ್ನೂ ವರಗಳಾಗಿ ಪಡೆದನು.

ಯಮನ ರಾಜಧಾನಿ ಸಂಯಮಿನಿ; ದಕ್ಷಿಣದಿಕ್ಕಿನಲ್ಲಿ ಭೂಮಿಯ ತುತ್ತತುದಿಯಲ್ಲಿ ಅಡಿಯಲ್ಲಿ ಇರುವ ಈ ಊರು ಕಗ್ಗತ್ತಲೆಯಲ್ಲಿ ಮುಳುಗಿದೆಯೆಂದೂ, ಅಲ್ಲಿನ ಅರಮನೆಯ ಕಾಲಾಚಿಯೆನ್ನುವ ಭವನದಲ್ಲಿ ವಿಚಾರಭೂ ಎನ್ನುವ ಸಿಂಹಾಸನದ ಮೇಲೆ ಕುಳಿತು, ಚಿತ್ರಗುಪ್ತನೆಂಬ ಕರಣಿಕನೊಡಗೂಡಿ, ಚಂಡ–ಮಹಾ ಚಂಡರೆಂಬ ಮಂತ್ರಿಗಳಿಂದ ಕೂಡಿ ಜನರ ಪಾಪ–ಪುಣ್ಯಗಳನ್ನು ವಿಚಾರಿಸುವನೆಂದೂ ನಂಬಿಕೆಗಳಿವೆ. ಈ ನಗರಕ್ಕೆ ನಾಲ್ಕು ಬಾಗಿಲುಗಳು, ಏಳು ತೋರಣಗಳು; ಅಲ್ಲಿ ಹರಿಯುವ ನದಿಗಳು ಪುಷ್ಪೋದಕ ಮತ್ತು ವೈವಸ್ವತಿ. ಯಮನ ದೂತರು ಕರಿಯ ಬಟ್ಟೆಯನ್ನುಟ್ಟವರು; ಕಾಗೆಯ ಆಕಾರವನ್ನು ತಳೆದವರು. ಯಮನ ಸಾರಥಿ ರೋಗ; ಅವನ ಎರಡು ನಾಯಿಗಳಿಗೆ ಒಂದೊಂದಕ್ಕೂ ನಾಲ್ಕು ಕಣ್ಣುಗಳು; ಇಂದ್ರಲೋಕದ ನಾಯಿಯಾದ ಸರಮೆಯ ಮರಿಗಳು ಇವು. ಅವನ ದಿಗ್ಗಜ ವಾಮನ; ವಸು ಪ್ರತ್ಯೂಷ.

ಹೀಗೆ ಪಿತೃಗಳಲ್ಲಿ ಮೊದಲನೆಯವನಾಗಿ, ಎಂದರೆ ಮೊಟ್ಟಮೊದಲು ಸತ್ತವನಾಗಿ, ಕಾಣಿಸಿಕೊಂಡ ಯಮ ಸತ್ತವರಿಗೆಲ್ಲ ಒಡೆಯನಾಗಿ ಮಾರ್ಪಟ್ಟ. ಅವನನ್ನು ಮೃತ್ಯುದೇವತೆ, ಅಂತಕ (ಕೊನೆಗಾಣಿಸುವವನು), ಕಾಲ, ಕೃತಾಂತ (ಮುಗಿಸುವವನು), ಶಮನ (ಬದುಕಿನ ಕಾವನ್ನು ಆರಿಸುವವನು), ಪಾಶಿನ್ (ಬಲೆಯನ್ನು ಬೀಸುವವನು, ಕಟ್ಟುವ ಹಗ್ಗವನ್ನು ಹಿಡಿದವನು), ಶ್ರಾದ್ಧದೇವ ಎಂದು ಮುಂತಾಗಿ ಕರೆದರು ಅವನ ಸ್ವರೂಪ ಭಯಂಕರವಾದುದೆಂದೂ, ಕೆಂಗಣ್ಣಿನ ಹಸಿರುಮೈಯವನೆಂದೂ, ಕುರೂಪಿಯೆಂದೂ, ವಿಕಾರದೇಹ ದವನೆಂದೂ, ಕೈಯಲ್ಲಿ ದಂಡ–ಹಗ್ಗಗಳನ್ನೋ ಕೊಡಲಿ ಕತ್ತಿಗಳನ್ನೋ ಹಿಡಿದು, ಉಗ್ರವೆಂಬ ಹೆಸರಿನ ಕರಿಯ ಕೋಣದ ಮೇಲೆ ಹಳದಿಬಣ್ಣದ ಬಟ್ಟೆಯನ್ನು ಉಟ್ಟು, ಹುಬ್ಬುಗಂಟಿಕ್ಕಿ ಕುಳಿತವನೆಂದೂ ಚಿತ್ರಣವಿದೆ. ಕೆಲವೊಮ್ಮೆ ಕೋಣದ ಆಕಾರವನ್ನೇ ತಳೆದಿರುವಂತೆ ಚಿತ್ರಿಸುವುದೂ ಉಂಟು. ಇದು ದುಷ್ಕರ್ಮಿಗಳ ಕಣ್ಣಿಗೆ ಕಾಣುವ ರೂಪವಾದರೆ, ಒಳ್ಳೆಯ ಜನರಿಗೆ ವಿಷ್ಣುವಿನಂತೆ ಸೌಮ್ಯವಾಗಿ, ಶಂಖ–ಚಕ್ರ–ಗದಾಧಾರಿಯಾಗಿ, ಮಂದಹಾಸದಿಂದ ಗರುಡಾರೂಢನಾಗಿರುವಂತೆ ಕಾಣಿಸಿಕೊಳ್ಳುತ್ತಾನಂತೆ.

ವೈದಿಕವಾಙ್ಮಯದಲ್ಲಿ ಯಮನ ಶಾಸನ ಅನುಲ್ಲಂಘ್ಯವಾದರೂ ಪುರಾಣಕಾಲದಲ್ಲಿ ಅವನು ಅಷ್ಟು ಸಮರ್ಥನಲ್ಲ. ಪತಿವ್ರತೆಯಾದ ಸಾವಿತ್ರಿ, ಶಿವಭಕ್ತನಾದ ಮಾರ್ಕಂಡೇಯ ಇವರು ಯಮನನ್ನೇ ಪರಾಭವ ಗೊಳಿಸಿದರಷ್ಟೆ. ಶೀಲದ ಪಾರಮ್ಯವನ್ನು ಭಗವದ್ಭಕ್ತಿಯ ಹಿರಿಮೆಯನ್ನು ಹೇಳುವ ಈ ಕಥೆಗಳಲ್ಲಿ ಯಮ ಜಗನ್ನಿಯಮನದ ಪ್ರತೀಕವಲ್ಲ; ಕೇವಲ ಮೃತ್ಯುದೇವತೆ. ಅವನ ಆಧಿಪತ್ಯ ನಿರಂಕುಶವಲ್ಲ; ಅವನದ್ದು ದತ್ತಸ್ವಾತಂತ್ರ್ಯ. ಯಮನ ಕಲ್ಪನೆಯಲ್ಲಿ ಒದಗಿದ ಮಾರ್ಪಾಟನ್ನು ಇಲ್ಲಿ ಕಾಣಬಹುದು; ಒಂದು ಕಾಲಕ್ಕೆ ವಿಶ್ವನಿಯಾಮಕತ್ವ, 'ಏಕಂಸತ್‌ತತ್ತ್ವ' ವೆಂದು ಪರಿಗಣಿತನಾಗಿದ್ದ ಯಮ ಇಂದಿಗೆ ಬರಿಯ ದಿಕ್ಪಾಲಕನಾಗಿ ಉಳಿದಿದ್ದಾನೆ. ಕಾಲನೆಂದು ವಿಖ್ಯಾತನಾಗಿದ್ದ ಯಮನಿಗೇ ಕಾಲಕ್ರಮದಲ್ಲಿ ಮುಪ್ಪಡರಿತು; ಅಂತಕನೆನಿಸಿದ ಅವನಿಗೇ ಆತಂಕವೊದಗಿತು.

ದಕ್ಷಿಣ ದಿಕ್ಕು ಮತ್ತು ಪಶ್ಚಿಮ ದಿಕ್ಕು ಇವುಗಳ ನಡುವೆ ಇರುವ ನೈಋತ್ಯದಿಕ್ಕಿಗೆ ಒಡೆಯ ನಿಋೃತಿ, ಸಂಸ್ಕೃತದಲ್ಲಿ ಈ ಮಾತಿಗೆ ನಾಶ, ಸಾವು, ಸಂಕಟ, ಕೇಡುಕು, ಜೀರ್ಣವಾಗುವುದು ಎಂದು ಅರ್ಥಗಳಿವೆ. ಲೋಕಕ್ಕೆ ಕಂಟಕ ಎನ್ನಲು 'ಸಾ ಹಿ ಲೋಕಸ್ಯ ನಿಋೃತಿಃ' ಎಂದು ಪ್ರಯೋಗವಿದೆ. ನಿಋೃತಿ ಎಂಬ ಹೆಣ್ಣು ದೇವತೆಯೂ ಉಂಟು, ಎಲ್ಲ ಪಾಪಗಳ ಪುತ್ಥಳಿಯಾದ ಈ ದೇವತೆ ಅಮೃತಮಂಥನ ಕಾಲದಲ್ಲಿ ಲಕ್ಷ್ಮಿಗಿಂತ ಮೊದಲೇ ಹುಟ್ಟಿ ಜ್ಯೇಷ್ಠೆಯಾದಳು. ಅಧರ್ಮನ ಹೆಂಡತಿಯಾದ ಈಕೆಯ ಮಕ್ಕಳು ಮೃತ್ಯು, ಭಯ, ಮಹಾಭಯ.

ಈಕೆಯಿದ್ದಲ್ಲಿ ಬಡತನ–ಬವಣೆ, ರೋಗ–ರುಜಿನೆ. ನಿಋತಿಯೆಂಬ ಗಂಡುದೇವತೆ ಕಶ್ಯಪ–ಸುರಭಿಯರ ಮಗನೆಂದು ಪ್ರತೀತಿ. ಏಕಾದಶರುದ್ರರಲ್ಲಿ ಇವನೊಬ್ಬ. ಕಲ್ಪಾದಿಯಲ್ಲಿ ಬ್ರಹ್ಮನ ಭ್ರೂಮಧ್ಯದಿಂದ ಹುಟ್ಟಿದ ಮೃಗವ್ಯಾಧ, ಸರ್ಪ, ಅಜೈಕಪಾದ, ಅಹಿರ್ಬುಧ್ನ್ಯ, ಪಿನಾಕಿ, ದಹನ, ಈಶ್ವರ, ಕಪಾಲಿ, ಸ್ಥಾಣು, ಭಗ, ನಿಋತಿ ಎಂಬ ಏಕಾದಶರುದ್ರರೆಲ್ಲರೂ ಭೈರವಸ್ವರೂಪದವರು. ಹುಟ್ಟುತ್ತಲೇ ಅರಚಿಕೊಂಡು ಹುಟ್ಟಿದರೆಂದು ರುದ್ರರು, ಅವರ ನಿವಾಸಸ್ಥಾನ ಶ್ಮಶಾನ.

ನಿಋತಿಯು ಮೊದಲಿಗೆ ಮೃತ್ಯುದೇವತೆಯೇ. ಯಮನು ಸತ್ತವರ ಧರ್ಮಾಧರ್ಮ ವಿಮರ್ಶೆ ಮಾಡುವವನಾದರೆ, ಸತ್ತವರ ಸ್ವರೂಪವನ್ನು ನಿರ್ಧಾರಮಾಡುವ ಅಧಿಕಾರವು ನಿಋತಿಯದಂತೆ. ಯಮನು ಧರ್ಮದೇವತೆಯಾದರೆ ನಿಋತಿಯೇ ದಿಟವಾಗಿ ಮೃತ್ಯುದೇವತೆ. ಅವನು ರಕ್ಷೋಧಿಪತಿ. ಯಕ್ಷ, ಗಂಧರ್ವ, ಕಿಂನರ ಮೊದಲಾದ ದೇವಯೋನಿಗಳಲ್ಲಿ ಸೇರಿದ ಈ ರಕ್ಷರು ಪಿಶಾಚಸ್ವರೂಪದವರೆಂದೂ ಹೇಳುವುದುಂಟು. ನಿಋತಿಯು ಧೂಮ್ರ ಅಥವಾ ಶ್ಯಾಮಲ ವರ್ಣದವನಾಗಿ ಶಕ್ತಿಧರನಾಗಿರುವಂತೆ, ಪ್ರೇತವಾಹನನಾಗಿ, ಪಿಶಾಚಪರಿವೃತನಾಗಿರುವಂತೆ ಚಿತ್ರಿಸುತ್ತಾರೆ. ಪಿಶಾಚಗಳು ರಾತ್ರಿಯೇ ಎಚ್ಚರವಾಗಿರುವುದರಿಂದ ನಿಋತಿಯೂ ನಿಶಾಚರ. ಮನುಷ್ಯ ಸತ್ತು ಪಿತೃದೇವತೆಯಾಗುವವರೆಗೆ ಪ್ರೇತ; ಇಲ್ಲಿಂದ ಹೊರಟವನು, ಅಲ್ಲಿಗೆ (ಎಂದರೆ ಪಿತೃಲೋಕಕ್ಕೆ) ಸೇರದವನು. ಸಪಿಂಡೀಕರಣ ಶ್ರಾದ್ಧದಲ್ಲಿ ಮೃತಕನಿಗೆ ಪಿತೃಸ್ವರೂಪ ಬರುತ್ತದೆ; ಅಲ್ಲಿಂದ ಮುಂದೆ ಅವನು ಯಮನ ಅಧಿಕಾರಕ್ಕೆ ಒಳಪಟ್ಟವನು, ಆದರೆ ಅಲ್ಲಿಯವರೆಗೆ ಎಂದರೆ ಪ್ರೇತನಾಗಿರುವಾಗ ಅವನ ಮೇಲಿನ ಅಧಿಕಾರ ನಿಋತಿಯದು. ನಿಋತಿಯ ನಗರ ರಕ್ಷೋವತಿಯೆನ್ನುವುದು; ಕುಮುದವೆಂಬ ಆನೆ ಅವನ ವಾಹನ; ಪ್ರಭಾಸ ವಸು

ಪಶ್ಚಿಮ ದಿಕ್ಕನ್ನು ಪಾಲಿಸುವವನು ವರುಣ. ಇವನು ಪ್ರಮುಖನಾದ ವೈದಿಕ ದೇವತೆ. ಇವನನ್ನು ವೇದಗಳು ರಾಜನೆಂದು ವ್ಯವಹರಿಸಿವೆ, ಮಾಯಿಯೆಂದು ಬಣ್ಣಿಸಿವೆ. ಅವನು ಕವಿ, ಉರುಚಕ್ಷುಸ್ (ದೂರ ನೋಡುವವನು), ಗೃತ್ಸ (ಬುದ್ಧಿವಂತ), ಭೂರಿ (ಬಲಶಾಲಿ), ಅಪಾಂಪತಿ (ನೀರಿನ ಒಡೆಯ), ನದೀಪತಿ (ನದಿಗಳ ಒಡೆಯ), ಭರ್ತೃ (ಪೋಷಕ), ಋತದ ತತ್ತ್ವವನ್ನು ಪ್ರತಿನಿಧಿಸುವವನು. ಮಿತ್ರನು ಹಗಲಿನಲ್ಲಿ ಮನುಷ್ಯರು ಮಾಡಿದ ನಿಯಮಗಳನ್ನು ಪಾಲಿಸುವವನಾದರೆ ವರುಣನ ಪ್ರಭಾವ ಗೊತ್ತಾಗುವುದು ರಾತ್ರಿಯ ರಹಸ್ಯದಲ್ಲಿ. ವರುಣನಿಗೆ ತಿಳಿಯದಿದ್ದುದು ಯಾವುದೂ ಇಲ್ಲ. ಹಕ್ಕಿಗಳು ಆಕಾಶದಲ್ಲಿ ಹಾರುವ ದಾರಿ, ನೀರಿನಲ್ಲಿ ದೋಣಿ ಹೋಗುವ ಜಾಡು, ಗಾಳಿ ಬೀಸುವ ಹಾದಿ ಎಲ್ಲವೂ ಅವನಿಗೆ ಗೊತ್ತು. ಸೂರ್ಯನು ಬೆಳಕನ್ನು ಕೊಡುವಂತೆ ನೇಮಿಸಿದವನು ಅವನೇ; ನದಿಗಳು ಹರಿಯುವ ಕಂದರವನ್ನು ಸಿದ್ಧಪಡಿಸಿದವನೂ ಅವನೇ; ಚಂದ್ರ ಬೆಳಗುವುದು, ನಕ್ಷತ್ರಗಳು ಬೆಳಗಾದೊಡನೆ ಮರೆಯಾಗುವುದು ಅವನಿಂದಲೇ. ನದಿಗಳೆಲ್ಲ ಸಮುದ್ರವನ್ನು ಸೇರುವುದೂ, ಎಲ್ಲ ನದಿಗಳೂ ಒಂದೇ ಸಮುದ್ರವನ್ನು ಸೇರಿದರೂ ಸಮುದ್ರ ತುಂಬಿ ಹರಿಯದಿರುವುದೂ ಅವನ ಆಣತಿಯಿಂದಲೇ. ಅವನು ಋತಾಧ್ಯಕ್ಷ, ಋತಪಾಲಕ, ಇಂದ್ರಿಯಗಳಿಗೆ ಅತೀತವಾದ ಅಂತರಿಕ್ಷ (ಬುಧ್ನ)ದಿಂದ ಪ್ರಸಾರಿತವಾದ ದಿವ್ಯತೇಜಸ್ಸು ಅವನದ್ದು. ಅಷ್ಟು ಮಾತ್ರವಲ್ಲ, ಮನುಷ್ಯನ ಒಳಿತು–ಕೆಡಕುಗಳನ್ನು ಗಮನಿಸಿ ವರುಣನು ಸಾಗುತ್ತಾನಂತೆ—

ಯಾಸಾಂ ರಾಜಾ ವರುಣೋ ಯಾತಿ ಮಧ್ಯೇ
ಸತ್ಯಾನೃತೇ ಅವಪಶ್ಯಂಗ್ ಜನಾನಾಂ

ವರುಣನ ಕಣ್ಣು ತಪ್ಪಿಸಿ ನಾವು ಕಣ್ಣು ಮಿಟುಕಿಸುವುದೂ ಸಾಧ್ಯವಿಲ್ಲವಂತೆ (ನ ಹಿ ತ್ವದಾರೇ ನಿಮಿಷಶ್ಚ ನೇಶೇ). ವರುಣನೆನ್ನುವ ಮಾತಿಗೆ ಉಣಾದಿಸೂತ್ರ ಅವನಿಂದಲೇ ಎಲ್ಲವೂ ಮುಚ್ಚಲ್ಪಟ್ಟಿದೆಯೆಂದು ಅರ್ಥಮಾಡಿದೆ (ವೃಣೋತಿ ಸರ್ವಂ, ವ್ರಿಯತೇ ಅನೇನೇತಿ ವಾ ವರುಣಃ). ವೈದಿಕವಾಙ್ಮಯದಲ್ಲಿ ಹೀಗೆ ಪ್ರಮುಖನಾಗಿದ್ದ ದೇವತೆ ಮುಂದೆ ಕಳೆಗುಂದಿದ. ಪುರಾಣಯುಗದಲ್ಲಿ ಅವನ ದಿವ್ಯತೇಜಸ್ಸು, ಸತ್ಸಂಕಲ್ಪ, ವಿಶ್ವನಿಯಾಮಕತ್ವ ಇವು ಮರೆಯಾದುವು; ಅವನ ನೀರಿನ ಸಂಬಂಧವಷ್ಟೇ ಉಳಿಯಿತು.

ಭಗವದ್ಗೀತೆಯಲ್ಲಿ ಕೃಷ್ಣ "ಜಲ ದೇವತೆಗಳಲ್ಲಿ ನಾನು ವರುಣ" (ವರುಣೋ ಯಾದಸಾಮಹಂ) ಎಂದಿರುವುದನ್ನು ಗಮನಿಸಬೇಕು. ವರುಣ ನೀರಿನ ಅಭಿಮಾನಿದೇವತೆ; ಸಮುದ್ರಾಧಿಪತಿ. ಸಮುದ್ರವನ್ನು ವರುಣಾಲಯ ಎಂದೇ ಕರೆಯುತ್ತಾರೆ. ಬಿಳಿಬಣ್ಣದ ವರುಣನನ್ನು ಮೊಸಳೆಯ ಮೇಲೆ ಕುಳಿತಂತೆ ಚಿತ್ರಿಸುತ್ತಾರೆ; ಅವನು ನಕ್ರವಾಹನ. ಋಗ್ವೇದದ ಕಾಲದಿಂದಲೂ ವರುಣನಿಗೂ ನೀರಿಗೂ ಸಂಬಂಧವಿದ್ದೇ ಇದ್ದಿತು. ಆದರೆ ನೀರೇ ಜಗತ್ತಿಗೆ ಮೂಲಾಧಾರವೆನ್ನುವ ಕಲ್ಪನೆ ದೃಢವಾದ ಕಾಲದಲ್ಲಿ ತಾನೇ ಋತಂಭರನೆಂದು ಹಿರಿಮೆಯನ್ನು ಗಳಿಸಿದ.

ಇತಿಹಾಸ-ಪುರಾಣಗಳ ಪ್ರಕಾರ ವರುಣನ ತಂದೆ ಕರ್ದಮ. ವರುಣನ ಹೆಂಡತಿ ವಾರುಣಿ ದೈತ್ಯಗುರು ಶುಕ್ರಾಚಾರ್ಯನ ಮಗಳು; ಮದ್ಯಕ್ಕೆ ಅಭಿಮಾನಿದೇವತೆ ಆಕೆ. ಋದ್ಧಿ ಎಂಬ ಹೆಂಡತಿಯೂ ವರುಣನಿಗಿದ್ದುದು ಕೆಲವು ಪ್ರಸ್ತಾಪಗಳಲ್ಲಿದೆ. ವರುಣನ ಮಗ ಪುಷ್ಕರ. ಅಧರ್ಮ, ಬಲ ಎಂಬ ಇನ್ನಿಬ್ಬರು ಮಕ್ಕಳೂ ಸುರಾ (ಎಂದರೆ ಹೆಂಡ) ಎಂಬ ಮಗಳೂ ವರುಣನಿಗಿದ್ದರು ಎನ್ನುವ ವಿವರವಿದೆ. ಪುರಾಣಗಳಲ್ಲಿ ವರುಣನ ಪ್ರಸ್ತಾಪ ಬಂದಾಗ ಅವನ ಪ್ರಣಯವೇ ಪ್ರಮುಖವಾಗಿ ಬರುತ್ತದೆ. ವೈವಸ್ವತಮನ್ವಂತರದಲ್ಲಿ ಅಗಸ್ತ್ಯ ಮತ್ತು ವಸಿಷ್ಠರ ಜನ್ಮವೃತ್ತಾಂತ ಹೇಳುವಾಗ ಒಂದು ಕಥೆಯಿದೆ. ಒಮ್ಮೆ ಊರ್ವಶಿಯು ಕ್ಷೀರಸಮುದ್ರದಲ್ಲಿ ತನ್ನ ಸಖಿಯರೊಂದಿಗೆ ಕ್ರೀಡಿಸುತ್ತಿರುವಾಗ ವರುಣನು ಅವಳನ್ನು ಮೋಹಿಸಿ ತನ್ನೊಂದಿಗೆ ಕರೆದೊಯ್ದನು ಆದರೆ ಆಕೆ ತಾನು ಮೊದಲೇ ಮಿತ್ರನೊಂದಿಗೆ ಕೂಡಿಕೊಂಡಿದ್ದುದನ್ನು ತಿಳಿಸಿ, "ನನ್ನ ಮನಸ್ಸು ನಿನ್ನ ಮೇಲಿದೆ, ಆದರೆ ನನ್ನ ಮೈ ಮಿತ್ರನ ವಶದಲ್ಲಿದೆ" ಎಂದು ಮಿತ್ರನ ಬಳಿಗೆ ಹೋಗಿಬಿಟ್ಟಳು. ವರುಣನಿಗೆ ಸಿಟ್ಟುಬಂದು ತನ್ನ ವೀರ್ಯವನ್ನು ಬಳಿಯಲ್ಲಿದ್ದ ಮಡಕೆಯೊಂದರಲ್ಲಿ ಇರಿಸಿ ಊರ್ವಶಿಗೆ "ನೀನು ಭೂಲೋಕಕ್ಕೆ ಹೋಗಿ ಮನುಷ್ಯನೊಬ್ಬನನ್ನು ವರಿಸಿ ಸಂಸಾರಮಾಡು" ಎಂದು ಶಾಪವಿತ್ತನು. ಊರ್ವಶಿ ಭೂಮಿಗಿಳಿದು ಪುರೂರವನನ್ನು ಮದುವೆಯಾದುದು ಈ ಕಾರಣದಿಂದಲೇ. ಸ್ವಲ್ಪಕಾಲಾನಂತರ ಮಿತ್ರನು ಬಂದು ಅದೇ ಮಡಕೆಯಲ್ಲಿಯೇ ತನ್ನ ವೀರ್ಯವನ್ನೂ ಇರಿಸಿದನು. ವರುಣನ ವೀರ್ಯದಿಂದ ಮೊದಲು ಅಗಸ್ತ್ಯನೂ, ಮಿತ್ರನ ವೀರ್ಯದಿಂದ ವಸಿಷ್ಠನೂ ಹುಟ್ಟಿದರು. ಇಬ್ಬರೂ ಕುಂಭಸಂಭವರೇ, ಎಂದರೆ ಮಡಕೆಯಲ್ಲಿ ಹುಟ್ಟಿದವರೇ; ಇಬ್ಬರೂ ಮೈತ್ರಾವರುಣಿಗಳೇ. ವರುಣನು ಉಚಥ್ಯಮುನಿಯ ಹೆಂಡತಿ ಭದ್ರೆಯನ್ನು ವಶಪಡಿಸಿಕೊಳ್ಳಲು ಯತ್ನಿಸಿದ ಕಥೆ ಪುರಾಣಗಳಲ್ಲಿ ಬರುತ್ತದೆ.

ವೇದದ ಹಿನ್ನೆಲೆಯಲ್ಲಿ ವರುಣನಿಗೆ ನಾಲ್ಕು ಮುಖಗಳು; ಒಂದು ಮುಖ ಅಗ್ನಿಯದು. ಸೂರ್ಯನೇ ಅವನ ಕಣ್ಣು. ಕೆಲವೊಮ್ಮೆ ಅವನು ಸಹಸ್ರಾಕ್ಷನೂ ಹೌದು. ಎರಡುಕೈಗಳು; ಒಂದರಲ್ಲಿ ಸರ್ಪಪಾಶ. ಅವನ ಮೇಲ್ಭಾಗದಲ್ಲಿ ಆಭೋಗವೆಂಬ ಹಾವಿನ ಹೆಡೆ ಛತ್ರಿಯಂತಿರುತ್ತದೆ. ವಾಹನ ಮೊಸಳೆ ಅಥವಾ ಹಂಸ; ಲಾಂಛನ ಮೀನು. ಅವನ ಬಂಗಾರದ ಅರಮನೆಯಿರುವುದು ಪುಷ್ಪಗಿರಿಯಲ್ಲಿ; ಅವನ ನಗರ ವಿಭಾವರಿ

(ಎಂದರೆ ನಕ್ಷತ್ರಗಳಿರುವ ರಾತ್ರಿ). ವಿದ್ಯಾ, ಸುಧಾ, ಕುಮುದಿನೀ, ಪೂರ್ಣವಾರುಣೀ, ವಿಶ್ವತೋಮುಖಿ, ತರಂಗಿಣೀ, ಸುರಸಾ, ಸುಶೀಲಾ, ವ್ಯಾಪಿನೀ ಇವರು ಅವನ ನವಶಕ್ತಿಯರು.

ವರುಣನ ವಿಚಾರವಾಗಿ ಇನ್ನೊಂದು ಸ್ವಾರಸ್ಯವಾದ ಕಲ್ಪನೆಯಿದೆ, ವರುಣ ಋಣಮೋಚಕನೆಂದು. ಋಗ್ವೇದದಲ್ಲಿಯೇ ಋಷಿಯು ವರುಣನನ್ನು ಕುರಿತು "ದೊರೆಯೇ ! ಹೆರವರ ಸಂಪಾದನೆಯಿಂದ ನಾನು ಬದುಕವಂತೆ ಮಾಡದಿರು. ಬೇರೆಯವರ ಸಂಪತ್ತನ್ನು ನಾನು ಅನುಭವಿಸುವುದು ಬೇಡ" (ಮಾಹಂ ರಾಜನ್ ಅನ್ಯಕೃತೇನ ಭೋಜಂ) ಎಂದು ಪ್ರಾರ್ಥಿಸಿಕೊಂಡಿದ್ದಾನೆ. ಇದೇ ಈ ಕಲ್ಪನೆಗೆ ಮೂಲವೋ ಏನೋ. ಅಂತೂ ಋಣ ವಿಮೋಚಕ ವಾರುಣ ಮಂತ್ರ ಎನ್ನುವುದೊಂದಿದೆ. ಸಂಧ್ಯಾಸಮಯದಲ್ಲಿ ಪಶ್ಚಿಮಾಭಿಮುಖನಾಗಿ ಅಗ್ನಿಯನ್ನು ಪ್ರತಿಷ್ಠಾಪಿಸಿ ಅದರಲ್ಲಿ ವರುಣನನ್ನು ಆವಾಹನೆಮಾಡಿ, ಸಾಧಕನು ನಾಲ್ಕುನೂರುಬಾರಿ ವರುಣಮಂತ್ರವನ್ನು ಜಪಿಸಿದರೆ ಸಕಲದುಃಖಶಮನವಾಗುವುದೆಂದು ಪ್ರತೀತಿಯಿದೆ. ಋಣವಿಮೋಚನ ಮಾತ್ರವಲ್ಲದೆ ವೈರಿನಿರಸನ, ಉಪದ್ರವನಿರೋಧಗಳೂ ವರುಣನ ಅನುಗ್ರಹದಿಂದಲೇ ಆಗುವುದೆಂಬ ನಂಬಿಕೆ ಮಧ್ಯಯುಗದಲ್ಲಿದ್ದಿತು.

ಹೀಗೆ ವೇದಕಾಲದಲ್ಲಿ ಪ್ರಮುಖನಾಗಿದ್ದ ವರುಣನಿಗೆ ಪುರಾಣಕಾಲದಲ್ಲಿ ಬವಣೆಗಳು ಮೊದಲಾದುವು. ಆದರೂ ಕಲ್ಪದಲ್ಲಿ ವರುಣನ ಪೂಜೆ ಉಳಿಯಿತು. ಮೇಲೆ ಹೇಳಿದ ಋಣವಿಮೋಚನ ಮೊದಲಾದ ಪ್ರಯೋಜನಗಳಲ್ಲದೆ ಮಳೆಬೀಳಲೂ ವರುಣ ಜಪವನ್ನು ಮಾಡುವ ಪದ್ಧತಿಯಿದ್ದಿತು. ಈ ಪ್ರಯೋಜನವನ್ನು ಪರ್ಜನ್ಯನು ಕಸಿದುಕೊಂಡನು! ಈಗ ವರುಣ ಬರಿಯ ದಿಕ್ಪಾಲಕ. 'ಪ್ರತೀಚೀಂ ವರುಣಃ ಪಾತಿ' ಎಂದಷ್ಟೇ ಅವನ ವೈಶಿಷ್ಟ್ಯ. ಅವನ ನಗರ ಸಿಂಧುಮತಿ; ವಾಹನ ಅಂಜನವೆಂಬ ದಿಗ್ಗಜ; ವಸು ದ್ರೋಣನೆಂಬುವನು.

ಪಶ್ಚಿಮ–ಉತ್ತರ ದಿಕ್ಕುಗಳ ನಡುವಣ ದಿಕ್ಕಿಗೆ ವಾಯು ಪಾಲಕ. ದಿಕ್ಪಾಲಕನಾಗಿ ಪ್ರಸಿದ್ಧನಾಗುವ ಮೊದಲೂ ವಾಯುವಿನ ಪ್ರಾಶಸ್ತ್ಯ ವೈದಿಕಸಾಹಿತ್ಯದಲ್ಲಿಯೂ ಪೌರಾಣಿಕ ಕಥೆಗಳಲ್ಲಿಯೂ ಇದ್ದಿತು. ಪಂಚಭೂತಗಳಲ್ಲಿ ಒಂದಾದ ವಾಯು ಶಿವನ ಅಷ್ಟಮೂರ್ತಿಗಳಲ್ಲಿಯೂ ಒಬ್ಬನೆಂದು ಪ್ರಖ್ಯಾತನಾದನು. ಭೂಮಿ, ನೀರು, ಗಾಳಿ, ಬೆಂಕಿ, ಆಕಾಶ ಇವು ಪಂಚಭೂತಗಳು; ಇವಕ್ಕೆ ಸೂರ್ಯ, ಚಂದ್ರ ಮತ್ತು ಯಷ್ಟಾ (ಎಂದರೆ ಯಜ್ಞಮಾಡುವವನು) ಸೇರಿದರೆ ಶಿವನ ಅಷ್ಟಮೂರ್ತಿಗಳೆಂದು ಕಲ್ಪನೆ (ಮೂರ್ತಯೋಷ್ಟೌ ಪಿನಾಕಿನಃ). ಶಿವನಿಗೂ ವಾಯುವಿಗೂ ವಿಶೇಷವಾದ ಸಂಬಂಧವೇ. ಮಹಾಭಾರತದಲ್ಲಿ ವಾಯುವಿನ ಅಂಶದಿಂದಲೇ ಕುಂತಿ ಭೀಮನನ್ನು ಪಡೆದುದು; ಭೀಮನ ಅವತಾರ ಭೇದವಾದ ಹನುಮಂತ ವಾಯುಪುತ್ರ, ರುದ್ರಾಂಶಸಂಭೂತ.

ವೈದಿಕ ಕಥೆಯಲ್ಲಿ ಕಶ್ಯಪಮುನಿಯ ಹೆಂಡತಿ ದಿತಿಯೆನ್ನುವಳು ಗರ್ಭಧಾರಣೆ ಮಾಡಿದ್ದಾಗ ಇಂದ್ರನು ಆಕೆಯ ಗರ್ಭವನ್ನು ತನ್ನ ವಜ್ರಾಯುಧದಿಂದ ನಲವತ್ತೊಂಬತ್ತು ತುಂಡುಗಳಾಗಿ ಕತ್ತರಿಸಿದನಂತೆ; ಈ ತುಂಡುಗಳೇ ಮರುತ್ತುಗಳು, ವೇದಯುಗದಲ್ಲಿ ವಾಯುವನ್ನು ಮರುದ್ದೇವತೆಯೆಂದೇ ವ್ಯವಹರಿಸುತ್ತಿದ್ದರು. ಮರುತ್ತಗಳನ್ನು ಬಹುವಚನದಲ್ಲಿಯೇ ಬಳಸುತ್ತಿದ್ದರು. ಋಗ್ವೇದದಲ್ಲಿ ಇಪ್ಪತ್ತೊಂದು, ನಲವತ್ತೊಂಬತ್ತು, ನೂರೆಂಟು ಮರುತ್ತುಗಳ ಎಣಿಕೆಗಳಿವೆ. ಮುಂದೆ ಮಹಾಭಾರತದಲ್ಲಿ ಹನ್ನೊಂದು ಮರುತ್ತುಗಳನ್ನು ಹೇಳಿದರು—ಮೃಗವ್ಯಾಧ, ಸರ್ಪ, ನಿಋುತಿ, ಅಜೈಕಪಾದ, ಅಹಿರ್ಬುಧ್ನ್ಯ, ಪಿನಾಕಿ, ದಹನ, ಈಶ್ವರ, ಕಪಾಲಿ, ಸ್ಥಾಣು, ಭಗ. ಇವು ಏಕಾದಶರುದ್ರರ ಹೆಸರುಗಳೆಂಬುದನ್ನು ಗಮನಿಸಬೇಕು. ಮರುತ್ತುಗಳನ್ನು ರುದ್ರಿಯ

ರೆಂದು ಕರೆಯುವುದುಂಟು; ಅವರು ವೃಷಭ ರೂಪದ ರುದ್ರ ಮತ್ತು ಗೋರೂಪದ (ಪೃಶ್ನಿ) ಭೂಮಿಯರಿಂದ ಹುಟ್ಟಿದವರೆಂದು ವೈದಿಕಕಲ್ಪನೆ. ದೇವೀಪುರಾಣದಲ್ಲಿ ಪ್ರವಾಹ, ನಿವಹ, ಉದ್ವಹ, ಸಂವಹ, ವಿವಹ, ಪ್ರವಹ, ಪರಿವಹಗಳೆಂಬ ಮರುತ್ತುಗಳ ಪ್ರಸ್ತಾಪವಿದೆ. ಮರುತ್ತುಗಳು ಇಂದ್ರನ ಸೋದರರು, ಒಡನಾಡಿಗಳು, ಬಂಟರು; ಸಮರದಲ್ಲಿ ಅವನಿಗೆ ನೆರವಾಗುವವರು; ಇವರೊಡಗೂಡಿದವನಾದುದರಿಂದ ಅವನು ಮರುತ್ವತ್, ಕಬ್ಬಿಣದ ಹಲ್ಲುಗಳಿಂದ ಕೂಡಿದ ಈ ಮರುತ್ತುಗಳು ಯಾವಾಗಲೂ ಒಟ್ಟಾಗಿಯೇ ಇದ್ದು, ಉತ್ತರದಿಕ್ಕಿನಲ್ಲಿ ವಾಸಮಾಡುತ್ತ, ಸಿಂಹಗಳಂತೆ ಗರ್ಜಿಸುತ್ತ ಸಾವಿರ ಕುದುರೆ ಕಟ್ಟಿದ ಬಂಗಾರದ ರಥಗಳಲ್ಲಿ ಹೋಗುವರೆಂದು ಋಗ್ವೇದ (1, 133, 6) ಬಣ್ಣಿಸುತ್ತದೆ. ಈಶಾನ (ಎಂದರೆ ಶಿವ) ಅವರನ್ನು ಕಾಪಾಡುವವನಂತೆ (ಗೋಪ್ತೃ). ಧರ್ಮದ ಮಕ್ಕಳೆಂದೂ ಯಮನ ಇನ್ನೊಂದು ರೂಪವೆಂದೂ ಹೇಳುವುದುಂಟು. ಅಗ್ನಿಯನ್ನು ಯಮನೆನ್ನುವುದೂ ವಾಯುಸಖನೆನ್ನುವುದೂ ಈ ನೆಲೆಯಲ್ಲಿ. ಅಂತರಿಕ್ಷದಲ್ಲಿ ಯಮನ ಆಡಳಿತವೇ ಆದರೂ ಅದು ವಾಯ್ವಾಸ್ಪದ. ಯಮ ಪ್ರೇತಾಧಿಪತಿಯಾದರೆ ವಾಯು ಪ್ರಾಣಾಧಿಪತಿ; ಒಬ್ಬ ದಂಡಧರನಾದರೆ ಇನ್ನೊಬ್ಬ ಅಂಕುಶಧರ. ಇಬ್ಬರ ಕಾರ್ಯಕ್ಷೇತ್ರವೂ ಒಂದೇ; ಇಬ್ಬರೂ ಜೀವನಿಯಾಮಕರು. ಮರಣಾನಂತರ ಜೀವವು ಅನುಕ್ರಮವಾಗಿ ಅಗ್ನಿಲೋಕ, ವಾಯುಲೋಕ, ವರುಣಲೋಕ, ಆದಿತ್ಯಲೋಕ, ಇಂದ್ರಲೋಕ, ಪ್ರಜಾಪತಿಲೋಕ, ಬ್ರಹ್ಮಲೋಕಗಳಿಗೆ ತೆರಳುವುದೆಂಬ ಕಲ್ಪನೆಯಿದೆ. ತಿಳಿದವರು ತತ್ತ್ವವನ್ನು ಬೇರೆಬೇರೆ ಹೇಳಿದರೂ 'ಏಕಂ ಸತ್' ಎಂದು ಹೇಳಿದ ಋಷಿ "ಇಂದ್ರ, ಯಮ, ಮಾತರಿಶ್ವ" ನೆಂದು ನಿದರ್ಶನಗಳನ್ನು ಹೇಳಿದುದನ್ನು ಗಮನಿಸಬೇಕು. ಮಾತರಿಶ್ವನೆಂದರೆ ವಾಯು.

ಋಗ್ವೇದಸಂಹಿತೆಯಲ್ಲಿ ಮರುತ್ತುಗಳು ಅಗ್ನಿ, ವಾಯು, ಆದಿತ್ಯರೆಂಬ ಮೂರು ತೇಜಸ್ಸುಗಳನ್ನು ಧರಿಸಿದ್ದಾರೆಂದೂ (ತ್ರಿ ರೋಚನಾ ಧಾರಯಂತ), 'ಪೂತದಕ್ಷ'ರಾದ ಮರುತ್ತುಗಳು ಇಂದ್ರನನ್ನು ಸ್ತುತಿ ಸುತ್ತಾರೆಂದೂ (ಅರ್ಚಂತಿ ತ್ವಾ ಮರುತಃ), ಮರುತ್ತುಗಳಿಗೆ ಇಂದ್ರನೇ ಪ್ರಜ್ಞಾವಂತನಾದ ದಾರ್ಶನಿಕನಾದ ಋಷಿಯೆಂದೂ (ತ್ವಮೇಷಾಮೃಷಿರಿಂದ್ರಾಸಿ ಧೀರಃ) ಹೇಳಿದೆ. ಇಂದ್ರ–ವಾಯು ಇವರ ಸಂಬಂಧ ಇಷ್ಟು ಪ್ರಾಚೀನವಾದುದು. ಗಾಳಿಗೂ ಮೋಡಕ್ಕೂ ಇರುವ ಸಂಬಂಧ ಇಲ್ಲಿ ಧ್ವನಿತವಾಗುತ್ತದೆ. ಆದರೆ ಕಾಲಕ್ರಮದಲ್ಲಿ ದೇವತೆಯೆನ್ನುವ ಹೆಗ್ಗಳಿಕೆ ಮರೆಯಾಗಿ ವಾಯು ದಿಕ್ಪಾಲಕನಾಗಿ ಮಾತ್ರ ಉಳಿದ.

ವಾಯುವೆಂದರೆ ತಿರುಗಾಡುವವನು (ವಾತ); ಅದಿಲ್ಲದೆ ಯಾರೂ ಉಳಿಯರು (ಮರುತ್ ಪ್ರಿಯತೇ ಅನೇನ ವಿನಾ), ಅದರಿಂದಲೇ ಜನ ಬದುಕುವುದು (ಅನಿಲ, ಜೀವತಿ ಅನೇನೇತಿ). ಎಲ್ಲೆಲ್ಲಿಯೂ ಹರಡಿರುವುದರಿಂದ ಅದು ವಾಯುವೆನಿಸಿಕೊಳ್ಳುತ್ತದೆಯೆಂದು ಬೃಹದ್ದೇವತದ ವಿವರಣೆ (ಅಣಿಷ್ಠ ಏವ ಯತ್ತು ತ್ರೀನ್ ವ್ಯಾಪ್ಯೈಕೋ ವ್ಯೋಮ್ನಿ ತಿಷ್ಠತಿ). ನಾಲ್ಕು ದಿಕ್ಕುಗಳ ಮಗನೆಂದೂ, ಪುರುಷನ ಉಸಿರಿನಿಂದ ಹುಟ್ಟಿದವನೆಂದೂ ಕಲ್ಪನೆಗಳಿವೆ. ದೇವಶಿಲ್ಪಿಯಾದ ತ್ವಷ್ಟೃವಿನ ಮಗನೆಂದೂ ಇಂದ್ರನ ಸೇವಕನೆಂದೂ ಹೇಳುವುದಿದೆ. ಸೋಮವನ್ನು ಕುಡಿದು ಅಮರರಾದ ದೇವತೆಗಳಲ್ಲಿ ಇವನೇ ಮೊದಲಿಗನಾದುದರಿಂದ 'ಪಾವಕ', ಅಗ್ನಿಯ ಬಣ್ಣ ಬಿಳಿಯದು; ಜಿಂಕೆಯನ್ನೇರಿ ಹೋಗುವ ವೀರನಂತೆ ಅವನನ್ನು ಚಿತ್ರಿಸುತ್ತಾರೆ. ಅವನ ನಗರಕ್ಕೆ ಗಂಧವತಿಯೆಂದು ಹೆಸರು; ಅವನ ದಿಗ್ಗಜ ಪುಷ್ಪದಂತವೆಂಬ ಆನೆ; ಸೋಮನೇ ವಸು.

ಉತ್ತರ ದಿಕ್ಕಿಗೆ ಒಡೆಯನಾದ ಕುಬೇರನಿಗೆ ಸೋಮನೆಂದೂ ಹೆಸರಿರುವುದರಿಂದ ಆ ದಿಕ್ಕಿಗೆ ಸೌಮ್ಯ ವೆಂಬ ವ್ಯವಹಾರವಿದೆ. ಇಂದ್ರನಂತೆ, ಅಗ್ನಿಯಂತೆ, ಯಮನಂತೆ, ವರುಣನಂತೆ ಕುಬೇರನೇನು ವೈದಿಕ

ಯುಗದ ದೇವತೆಯಲ್ಲ. ಅವನ ಉಲ್ಲೇಖ ಮೊದಲಬಾರಿಗೆ ಅಥರ್ವವೇದದಲ್ಲಿ ಕಾಣುವುದಾದರೂ ಪುರಾಣ ಯುಗದಲ್ಲಿಯೇ ಅವನು ಪ್ರಸಿದ್ಧನಾದುದು. ಪ್ರಾಚೀನ ಕಲ್ಪನೆಯಲ್ಲಿ ಸಂಪತ್ತನ್ನು ಕಾಪಾಡುವ ದೈವಕ್ಕೆ ಹೆಚ್ಚಿನ ಮಹತ್ತ್ವವಿದೆ. ಎಲ್ಲ ದೇಶಗಳ ಪುರಾತನ ಧರ್ಮಗಳಲ್ಲಿಯೂ ಇಂಥ ದೈವಗಳ ಉಲ್ಲೇಖವಿದೆ. ದ್ರಾವಿಡ ಸಂಸ್ಕೃತಿಯ ಹಂದರದಲ್ಲಿ ಮೈದಳೆದ ಈ ದೈವವೇ ಮುಂದೆ ಕುಬೇರನ ರೂಪವನ್ನು ತಳೆಯಿತೆನ್ನಬಹುದು. ಕುಬೇರನ ವ್ಯಕ್ತಿಚಿತ್ರಣವೂ ಇದನ್ನು ಸಮರ್ಥಿಸುತ್ತದೆ. ಕುಬೇರ ಯಕ್ಷರಾಜ; ಭೂಮಿಯೊಳಗೆ ಅಡಗಿರುವ ನಿಧಿಗಳನ್ನು ಕಾಪಾಡುವ 'ಗುಹ್ಯಕ' ಯಕ್ಷರು ಆರ್ಯರಿಗಿಂತ ಬೇರೆಯಾದ ಜನ. ನಾಗರಂತೆ, ಗಂಧರ್ವರಂತೆ, ಕುಂಭಾಂಡರಂತೆ ಇವರೂ ಒಂದು ವಿಶಿಷ್ಟಜನಾಂಗ. ಯಕ್ಷರೆಂದರೆ ಸ್ವರೂಪ ಅಸ್ಪಷ್ಟವಾಗಿರುವವರು. ಇವರಿಗೂ ರಾತ್ರಿಂಚರರಾದ ರಾಕ್ಷಸರಿಗೂ ನೆಂಟು ಮೊದಲಿನಿಂದ ಇದ್ದಿತು. ಮೊದಲು ಈ ಎರಡೂ ಜನಾಂಗಗಳು ದಕ್ಷಿಣದೇಶದಲ್ಲಿಯೇ ವಾಸಿಸುತ್ತಿದ್ದರೆಂದೂ ರಾವಣನ ಕಾಲದಲ್ಲಿ ರಾಕ್ಷಸರು ಯಕ್ಷರನ್ನು ಉತ್ತರ ದೇಶಕ್ಕೆ ಹೊಡೆದೋಡಿಸಿದರೆಂದೂ ರಾಮಾಯಣದಿಂದ ತಿಳಿದುಬರುತ್ತದೆ. ಕುಬೇರನೂ ರಾವಣನೂ ಒಬ್ಬ ತಂದೆಯ ಮಕ್ಕಳೇ; ರಾವಣನು ಲಂಕೆಯನ್ನು ವಶಪಡಿಸಿಕೊಳ್ಳುವವರೆಗೂ ಅದು ಯಕ್ಷರ ರಾಜಧಾನಿಯೇ ಆಗಿದ್ದಿತು. ಯಕ್ಷರು ಹಿಮಾಲಯದ ಪರಿಸರದಲ್ಲಿ ನೆಲೆಸಿದನಂತರ ಆರ್ಯರೊಡನೆ ಸಂಪರ್ಕ ನಿಕಟವಾಯಿ ತೆಂದು ತೋರುತ್ತದೆ.

ಯಕ್ಷರ ಒಡೆಯನಾದ ಕುಬೇರನೂ ಯಕ್ಷನೇ. ಜಪಾನೀ ಬೌದ್ಧಧರ್ಮದ ಕಲ್ಪನೆಯಂತೆ ಎಲ್ಲ ದಿಕ್ಪಾಲಕರೂ ಯಕ್ಷರೇ; ಉತ್ತರ ದಿಕ್ಪಾಲಕ ಬಿಷಮೊನ್–ತೆನ್ (ಎಂದರೆ ವೈಶ್ರವಣ–ಕುಬೇರ) ನಿಂದಲೇ ಉಳಿದೆಲ್ಲ ದಿಕ್ಪಾಲಕರೂ ಹುಟ್ಟಿಕೊಂಡರು. ಯಕ್ಷರು ಕುಬೇರನನ್ನು ತಮ್ಮ ಹೆಗಲಮೇಲೇರಿಸಿಕೊಂಡು ತಿರುಗಾಡುವುದರಿಂದ ಅವನು ನರವಾಹನ. ಪುಷ್ಪಕವಿಮಾನವೂ ಅವನದ್ದೇ. ಈ ವಿಮಾನವನ್ನು ಯಕ್ಷರೇ ನಡೆಯಿಸುವವರು. ಕುಬೇರನೆಂದರೆ ಕೆಟ್ಟಮೈಯವನು, ವಿಕಾರರೂಪದವನು. ಡೊಳ್ಳುಹೊಟ್ಟೆಯ ಕುಳ್ಳನಂತೆ ಅವನನ್ನು ಚಿತ್ರಿಸುತ್ತಾರೆ. ಅವನಿಗೆ ಮೂರು ಕಾಲುಗಳು, ಎಂಟೇ ಹಲ್ಲುಗಳು, ಒಂದೇಕಣ್ಣು! ಇನ್ನೊಂದು ಕಣ್ಣಿರಬೇಕಾದೆಡೆ ಹಳದಿ ಮಚ್ಚೆಯೊಂದಿದೆ ಅಷ್ಟೆ. ಕುರೂಪಿಯಾದರೇನು, ಅವನು ನವನಿಧಿಗಳ ಸಾರ್ವ ಭೌಮ, ಧನಪತಿ, ಇಚ್ಛಾವಸು (ಎಂದರೆ ಬೇಕಾದಷ್ಟು ಸಂಪತ್ತಿರುವವನು), ರಾಜರಾಜ. ಭೂಮಿಯೊಳಗಿರುವ ಐಶ್ವರ್ಯವೆಲ್ಲ ಅವನದೇ; ಅವನು ಇಷ್ಟಪಟ್ಟರೆ ಮನುಷ್ಯರಿಗೆ ಅವು ದೊರೆಯುತ್ತವೆ. ನವನಿಧಿಗಳು ಅವನ ವಶವರ್ತಿಗಳು.

ಅವನು ಪುಲಸ್ತ್ಯ, ಇಡವಿಡಾ ಎಂಬ ದಂಪತಿಗಳ ಮಗ. ಇಡವಿಡಾ, ಇಲಬಿಲೆ ಅಥವಾ ದೇವವರ್ಣೀ ಭರದ್ವಾಜಋಷಿಯ ಮಗಳು; ತೃಣಬಿಂದು ಮುನಿಯ ಮಗಳೆಂದೂ ಹೇಳುವುದಿದೆ. ಕುಬೇರನಿಗೆ ವೈಶ್ರವಣನೆಂದೂ ಹೆಸರು. ಅವನ ಹೆಂಡತಿ ಋದ್ಧಿ (ಅಥವಾ ಭದ್ರೆ); ಮುರನೆಂಬ ದಾನವನ ಮಗಳು. ಇವರಿಗೆ ನಳಕೂಬರ, ಮಣಿಗ್ರೀವ ಮತ್ತು ವರ್ಣಕವಿಯೆಂಬ ಗಂಡುಮಕ್ಕಳೂ ಮೀನಾಕ್ಷಿಯೆಂಬ ಮಗಳೂ ಇರುವರೆಂದು ಉಲ್ಲೇಖವಿದೆ. ಅವನ ಅನುಚರರಲ್ಲಿ ಪ್ರಮುಖರಾದವರು ಶುಕ್ರ, ಪ್ರೋಷ್ಠಪದ, ಮಣಿಭದ್ರ, ಮಣಿಮಂತ, ಪೂರ್ಣಭದ್ರ, ಮಣಿಕಂಧರ, ಮಣಿಭೂಷ. ಅವನ ಮಂತ್ರಿ ಪ್ರಹಾಸನೆನ್ನುವನು. ಅಷ್ಟದಿಗ್ಗಜಗಳಲ್ಲಿ ಸಾರ್ವಭೌಮವೆನ್ನುವ ಆನೆ ಅವನದ್ದು.

ಹಿಮಾಲಯದ ಉತ್ತರದಿಗ್ಭಾಗದಲ್ಲಿ ಕೈಲಾಸದ ಪರಿಸರದಲ್ಲಿರುವ ಅಲಕಾವತಿ ಅವನ ರಾಜ ಧಾನಿ. ಕೈಲಾಸಾಧಿಪತಿಯಾದ ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡು, ಅವನ ಮೈತ್ರಿಯನ್ನು ಪಡೆದು

ಅವನಿಂದ ಲಂಕಾರಾಜ್ಯಾಧಿಪತ್ಯವನ್ನು ಸಂಪಾದಿಸಿದನೆಂದು ಪುರಾತನಪುರಾಣದ ಕಥೆ; ಪುಷ್ಪಕವಿಮಾನವೂ ಅವನಿಗೆ ಶಿವನಿಂದ ಬಂದ ವರವೇ. ಆದರೆ ಅವನ ಮಲತಾಯಿ ಕೈಕಸೆಯ ಮಕ್ಕಳು ರಾವಣ–ಕುಂಭಕರ್ಣರು ಅವನೊಂದಿಗೆ ಕಾದು ಅವನನ್ನು ಸೋಲಿಸಿ ಲಂಕೆಯಿಂದ ಓಡಿಸಿಬಿಟ್ಟರು; ಪುಷ್ಪಕವಿಮಾನವನ್ನು ಕಸಿದು ಕೊಂಡುಬಿಟ್ಟರು. ಆಗ ಕುಬೇರ ಮತ್ತೆ ಶಿವನ ಬಳಿಗೆ ಬಂದು, ಅವನ ಅನುಜ್ಞೆಯಿಂದ ಕೈಲಾಸಪ್ರಾಂತ ದಲ್ಲಿಯೇ ಅಲಕಾವತಿಯೆಂಬ ಪಟ್ಟಣವನ್ನು ಕಟ್ಟಿಕೊಂಡು ಇರತೊಡಗಿದನು. ಅಂದಿನಿಂದ ಅವನು ರಾಜಾಧಿ ರಾಜನಾದ, ಯಕ್ಷರು ಅವನ ಪ್ರಜೆಗಳಾದರು. ಈಗಲೂ ರಾಜಾಶೀರ್ವಾದದಲ್ಲಿ "ರಾಜಾಧಿರಾಜಾಯ ಪ್ರಸಹ್ಯಸಾಯಿನೇ ನಮೋ ವಯಂ ವೈಶ್ರವಣಾಯ ಕುರ್ಮಹೇ" ಎನ್ನುವ ಮಾತು ಉಳಿದಿದೆ. ಕುಬೇರನ ವಸು ಅಧ್ವರ.

ಪ್ರಯೋಗಗಳಲ್ಲಿ ಕುಬೇರನನ್ನು 'ಯಕ್ಷಪ್ರವರ'ನೆಂದು ನಿರ್ದೇಶಿಸಿ ನ್ಯಗ್ರೋಧವೃಕ್ಷದಡಿಯಲ್ಲಿ 'ರತ್ನದೀಪೋದರ ಕಮಲನಿಧಿ ದ್ಯೋತಿತ'ವಾದ ಹೇಮಪೀಠದ ಮೇಲೆ ಸುಖಾಸೀನನಾಗಿ ಕುಳಿತಂತೆ ಚಿತ್ರಿಸಿದ್ದಾರೆ (ವೈಶ್ರವಣಮಂತ್ರ). ಅವನ ರಾಜಧಾನಿಗೆ ಪ್ರಭಾ, ವಸುಧಾರಾ, ವಸುಸ್ಥಳಿಗಳೆಂಬ ಹೆಸರುಗಳೂ ಇವೆ. ಅವನು ವಿಹರಿಸುವ ಉದ್ಯಾನ ಸೌಗಂಧಿಕ ಅಥವಾ ಚೈತ್ರರಥ; ಇದು ಮಂದರಪರ್ವತದ ಮೇಲಿದೆ ಯೆಂದು ಕಲ್ಪನೆ. ಕುಬೇರನಿಗೆ ಪ್ರತ್ಯೇಕವಾದ ಪೂಜೆ ನೇಪಾಳದಲ್ಲಿದೆ; ನಮ್ಮ ದೇಶದಲ್ಲಿ ಎಲ್ಲ ವೈದಿಕ ಸಂಸ್ಕಾರಗಳ ಕಡೆಯಲ್ಲಿಯೂ ಅವನ ಪ್ರಶಸ್ತಿಯಿರುವುದಷ್ಟೆ. ಏಷ್ಯದ ಹಲವಾರು ರಾಷ್ಟ್ರಗಳಲ್ಲಿ ಈ ದೇವತೆ ಪ್ರಸಿದ್ಧನಾಗಿದ್ದಾನೆ.

ಉತ್ತರ ದಿಕ್ಕಿಗೂ ಪೂರ್ವದಿಕ್ಕಿಗೂ ನಡುವೆ ಇರುವ ಈಶಾನ್ಯಕೋಣೆಗೆ ಪಾಲಕನಾದವನು ಈಶಾನ, ರುದ್ರ–ಶಿವನ ಅಭಿವ್ಯಕ್ತಿಗಳಲ್ಲಿ ಒಂದು. ಈಶನೆಂದರೆ ಒಡೆಯ, ಈಶಾನನೆಂದರೂ ಅದೇ ಅರ್ಥ. ಎಲ್ಲ ವಿದ್ಯೆಗಳಿಗೂ ಒಡೆಯ (ಈಶಾನಃ ಸರ್ವವಿದ್ಯಾನಾಂ, ಸರ್ವವಿದ್ಯಾಸ್ವಾಮೀ) ಎಂದೂ ಅರ್ಥವಿದೆ. ಆದರೆ ವ್ಯವಹಾರದಲ್ಲಿ ಶಿವನ ಪಂಚಮುಖಗಳಲ್ಲಿ ಒಂದು ಈಶಾನಮುಖ; ಶಿವನ ಅಷ್ಟಮೂರ್ತಿಗಳಲ್ಲಿ ಈಶಾನ ಒಬ್ಬ. ವೈದಿಕವಾಙ್ಮಯದಲ್ಲಿ ಸ್ಥಿರವಾದ ಅಂಗಗಳುಳ್ಳ, ಬಗೆಬಗೆಯ ರೂಪದ, ಹೊಂಬಣ್ಣದ ಹೊಳೆಯುವ ರುದ್ರನನ್ನು ಲೋಕಕ್ಕೆಲ್ಲ ಒಡೆಯ, ಪೋಷಕನೆಂದು ಕರೆದರು (ಈಶಾನಾದಸ್ಯ ಭುವನಸ್ಯ ಭೂರೇಃ). ಅವನಿಂದ ವಿಶ್ವ ಶಕ್ತಿಯು ವಿಭಿನ್ನವಾದುದಲ್ಲ. ಅಲ್ಲಿನ ರುದ್ರ ಧನುರ್ಧಾರಿ; ವಿಶ್ವವನ್ನೇ ಹಾರವನ್ನಾಗಿ ಧರಿಸಿದವನು (ನಿಷ್ಕಂ ವಿಶ್ವರೂಪಂ). ಅವನಿಗಿಂತಲೂ ಹೆಚ್ಚಿನ ಬಲವುಳ್ಳ ದೇವತೆಯೇ ಇಲ್ಲ (ನ ವಾ ಓಜೀಯೋ ರುದ್ರ ತ್ವದಸ್ತಿ). ಅವನು ನಿತ್ಯತರುಣ, ಸಿಂಹದಂತೆ ಭಯಂಕರ, ಆದರೆ ಮನುಷ್ಯರಿಗೆ ಉಪಕಾರಿ. ಹೀಗೆ ಲೋಕಕ್ಕೆ ಒಡೆಯ, ವಿಶ್ವಕ್ಕೆ ಯಜಮಾನ. ಈ ವಿಶ್ವರೂಪದ ರುದ್ರನಿಗೆ ಮುಂದಿನ ಯುಗದಲ್ಲಿ ಎಂಟು ಮೂರ್ತಿಗಳನ್ನು ಒದಗಿಸಿದರು. ಇವೆಲ್ಲವೂ ವಿಶ್ವವ್ಯವಸ್ಥೆಗೆ ಸಂಬಂಧಿಸಿದುವೇ. ಪೃಥಿವಿಗೆ ನಿಯಾಮಕ ಶರ್ವ, ನೀರಿಗೆ ಭವ, ತೇಜಸ್ಸಿಗೆ ರುದ್ರ, ವಾಯುವಿಗೆ ಉಗ್ರ, ಆಕಾಶಕ್ಕೆ ಭೀಮ, ಯಾಗಮಾಡುವ ಯಜಮಾನ ನಿಗೆ ಪಶುಪತಿ, ಚಂದ್ರನಿಗೆ ಮಹಾದೇವ, ಸೂರ್ಯನಿಗೆ ಈಶಾನ. ಈ ಎಂಟರ ಕಲ್ಪನೆಯೇ ಮುಂದೆ ಅಷ್ಟ ದಿಕ್ಪಾಲಕರ ಕಲ್ಪನೆಯಲ್ಲಿ ಪರ್ಯವಸಾನವಾಯಿತೆಂದು ಒಂದು ಅಭಿಪ್ರಾಯವಿದೆ.

ದಿಕ್ಪಾಲಕನಾದ ಈಶಾನ ಶಿವನಿಗಿಂತ ಬೇರೆಯಾದವನೆಂದೇ ಬಳಕೆಯಲ್ಲಿರುವ ನಂಬಿಕೆ. ವಾಯು ತತ್ತ್ವಕ್ಕೆ ಸಂಬಂಧಿಸಿದ ಈಶಾನ ತಾಮ್ರವರ್ಣದವನೆಂದೂ ಪಂಚಮುಖದವನೆಂದೂ ಚಿತ್ರಣವಿದೆ; ವೃಷಭ ವಾಹನನೆಂದೂ ಕಲ್ಪನೆಯಿದೆ. ವಿಶ್ವವ್ಯವಸ್ಥೆಗೆ ಸ್ಕಂಭವಾಗಿ ನಿಂತ ಈಶಾನನನ್ನು ಧರ್ಮ (ವೃಷ) ದ ಪಾಲಕನೆನ್ನು

ವುದನ್ನು ಕಾಣಿಸಲು ವೃಷಭಧ್ವಜ, ವೃಷಭಲಾಂಛನನಾಗಿದ್ದ ಶಿವನು ಮುಂದೆ ಪೌರಾಣಿಕಯುಗದಲ್ಲಿ ವೃಷಭ ವಾಹನನಾದ. ಸುಪ್ರತೀಕವೆಂಬ ದಿಗ್ಗಜ ಇವನ ವಾಹನ; ಇದಕ್ಕೆ ಕರಿಣಿ ಅಂಜನಾವತಿಯೆನ್ನುವುದು. ಈಶಾನನ ನಗರದ ಹೆಸರು ಯಶೋವತಿ. ಅವನಿಗೆ ಧ್ರುವನೆಂಬುವನು ವಸು.

ನವಗ್ರಹಗಳು

ನವಗ್ರಹಗಳ ಪೂಜೆ ಸ್ಮೃತಿಗಳ ಕಾಲದಲ್ಲಿಯೇ ಕಾಣಿಸಿಕೊಳ್ಳುತ್ತದೆ. ಜನರ ಆಯುಷ್ಯಕ್ಕೂ, ಸ್ಥಿತಿ ಗತಿಗಳಿಗೂ, ಸಂಕಟ ಸಂತೋಷಗಳಿಗೂ ನವಗ್ರಹಗಳೇ ಕಾರಣವೆನ್ನುವ ನಂಬಿಕೆಯೂ ಹಳೆಯದು. ನವ ಗ್ರಹಗಳಿಗೇ ಪ್ರತ್ಯೇಕವಾದ ಗುಡಿಯು ಅಪುರೂಪವಾದರೂ, ಎಲ್ಲ ದೇವಾಲಯಗಳಲ್ಲಿಯೂ (ವಿಶೇಷವಾಗಿ ಶಿವದೇವಾಲಯಗಳಲ್ಲಿ) ನವಗ್ರಹಗಳಿಗೆ ಪ್ರತ್ಯೇಕವಾಗಿ ಭಾಗವಿರುವುದು ವಾಡಿಕೆ. ನವಗ್ರಹಗಳ ಪೂಜೆ ಮನೆಗಳಲ್ಲಿ ವಿಶೇಷಸಂದರ್ಭಗಳಲ್ಲಿ ನಡೆಯುತ್ತದೆ; ಗ್ರಹಶಾಂತಿಯಂತೂ ಎಲ್ಲರಿಗೂ ತಿಳಿದ ವಿಚಾರವೇ. ವ್ಯವಹಾರದ ವಾರದ ದಿನಗಳ ಹೆಸರುಗಳೂ ಗ್ರಹಗಳನ್ನೇ ಅಧಿಕರಿಸಿವೆ.

ನವಗ್ರಹಗಳೆಂದರೆ ಸೂರ್ಯ, ಚಂದ್ರ, ಕುಜ, ಬುಧ, ಬೃಹಸ್ಪತಿ, ಶುಕ್ರ ಶನಿ, ರಾಹು, ಮತ್ತು ಕೇತು ಇವರಲ್ಲಿ ಸೂರ್ಯನೇ ಪ್ರಮುಖನಾದವನು. ಸೂರ್ಯಾರಾಧನೆ ಒಂದು ಕಾಲಕ್ಕೆ ಜಗತ್ತಿನಲ್ಲೆಲ್ಲ ಹರಡಿದ್ದುದು ತಿಳಿದುಬರುತ್ತದೆ. ಪರ್ಶಿಯ, ಭಾರತಗಳಲ್ಲಿಯಂತೂ ವಿಶೇಷವಾಗಿದ್ದಿತು. ಪ್ರಾಚೀನ ಭಾರತದಲ್ಲಿ 'ಆದಿತ್ಯಗೃಹ' ಗಳು ಬಹಳೆಡೆ ಇದ್ದುವು; ಸೌರಪಂಥ ಪ್ರಬಲವಾಗಿದ್ದಿತು. ಇಂದು ಜಗತ್ಪ್ರಸಿದ್ಧವಾಗಿರುವ ಕೋಣಾರ್ಕದ ಸೂರ್ಯಮಂದಿರ ಆ ಯುಗದ ಅವಶೇಷವೇ. ತಂಜಾವೂರು ಜಿಲ್ಲೆಯ ತಿರುವಡಮುರುಡೂರಿನಲ್ಲಿರುವ 'ಸೂರ್ಯನಾರ್ ಕೋಯಿಲ್' ಇನ್ನೊಂದು ನಿದರ್ಶನ. ಈ ದೇವಾಲಯವನ್ನು ಮಾರ್ತಾಂಡಾಲಯವೆಂದೂ ಕರೆಯುತ್ತಿದ್ದರು. ಕುಲೋತ್ತುಂಗ ಚೋಳ ಕಟ್ಟಿಸಿದ ಈ ಗುಡಿಯಲ್ಲಿ ಸೂರ್ಯನೇ ಪ್ರಧಾನದೇವತೆ; ಇತರ ಗ್ರಹಗಳಿಗೂ ಸುತ್ತಲೂ ಬೇರೆ ಬೇರೆ ಗುಡಿಗಳಿವೆ. ವೇದಯುಗದಿಂದ ಬೆಳೆದು ಬಂದ ಸೂರ್ಯಕಲ್ಪ ನೆಯು ಪೌರಾಣಿಕ, ತಾಂತ್ರಿಕ ಯುಗದಲ್ಲಿ ಸ್ವಾರಸ್ಯವಾಗಿ ಬೇರೂರಿತು. ಸೂರ್ಯನು ಕ್ಷತ್ರಿಯನೆಂದೂ, ಕಶ್ಯಪ ಋಷಿಯ ಮಗನೆಂದೂ, ಕಳಿಂಗರಾಜ್ಯದ ಅರಸನೆಂದೂ, ಸಿಂಹಧ್ವಜನೆಂದೂ ವಿವರಗಳು ಮೂಡಿಕೊಂಡವು. ರಾಜ್ಞೀ, ಸ್ವರ್ಣಾ, ಛಾಯಾ, ಸುವರ್ಣಾರ್ಚಸಾ ಎಂಬ ನಾಲ್ವರು ಹೆಂಗಳೆಯರು ಅವನ ಹೆಂಡತಿಯರಾದರು; ರೇವಂತ, ಯಮ, ಸಾವರ್ಣಿ, ಪ್ರಭಾತ, ಶನಿ ಮತ್ತು ಮರುತ್ತುಗಳು ಮಕ್ಕಳಾದರು; ದಂಡಾಲಪಿಂಗಳ ಮತ್ತು ಅತ್ರಿಪಿಂಗಳ ಎಂಬಿಬ್ಬರು ಪರಿಚಾರಕರಾದರು. ಧಾತ್ರಿ, ಮಿತ್ರ, ಅರ್ಯಮನ್, ರುದ್ರ, ವರುಣ, ಸೂರ್ಯ, ಭಗ, ವಿವಸ್ವಾನ್, ಪೂಷನ್, ಸವಿತೃ, ತ್ವಷ್ಟೃ, ವಿಷ್ಣು ಇವರು ದ್ವಾದಶಾದಿತ್ಯರಾದರು.

ಅವನನ್ನು ಚಿತ್ರಿಸುವಾಗ ತಾಮ್ರವರ್ಣದ ಕುಬ್ಜನಂತೆ, ಆರುಕೈಗಳಿರುವಂತೆ, ನಿಂತಿರುವಂತೆ ಕಾಣಿಸುವುದು ವಾಡಿಕೆ. ಅವನ ರಥಕ್ಕೆ ಒಂದೇ ಗಾಲಿ. ಅದನ್ನು ಎಳೆಯಲು ನಾಲ್ಕು ಅಥವಾ ಏಳು ಕುದುರೆಗಳು; ಒಮ್ಮೊಮ್ಮೆ ಏಳುತಲೆಗಳ ಒಂದೇ ಕುದುರೆಯನ್ನು ಅಳವಡಿಸುವುದೂ ಉಂಟು. ಈ ರಥಕ್ಕೆ ಸಾರಥಿ ಅರುಣನೆಂಬುವನು; ಕಶ್ಯಪನ ಮಗನಾಗಿ, ಗರುಡನ ಅಣ್ಣನಾದವನು. ನವಗ್ರಹಗಳೊಂದಿಗೆ ಇರುವಾಗ ನಡುವೆ ಪೂರ್ವಕ್ಕೆಮುಖಮಾಡಿ, ಎರಡುಕೈಗಳಲ್ಲಿ ಕಮಲಗಳನ್ನು ಹಿಡಿದು ನಿಂತಿರುತ್ತಾನೆ. ಸೂರ್ಯನನ್ನು ಯಂತ್ರದಲ್ಲಿ ಪೂಜೆಮಾಡುವ ಪದ್ಧತಿಯೂ ಇದೆ; ಕೆಂಪುಬಣ್ಣದ ವರ್ತುಲವನ್ನು ಸೂರ್ಯ ಚಕ್ರವೆಂದು ವ್ಯವಹರಿಸುತ್ತಾರೆ.

ಸೂರ್ಯನಿಗೆ ಈಶಾನ್ಯಕೋಣದಲ್ಲಿ ಚಂದ್ರ ಅಥವಾ ಸೋಮನಿರುತ್ತಾನೆ. ಈ ದೇವತೆಗೂ ವೈದಿಕ ಹಿನ್ನೆಲೆಯಿದೆ. ಮಳೆನೀರಿಗೆ, ಔಷಧಿ, ವನಸ್ಪತಿಗಳಿಗೆ ಒಡೆಯನಾದ ಚಂದ್ರನನ್ನು ಪೂರ್ವಾಭಿಮುಖವಾಗಿಯೇ ಬಿಳಿಬಟ್ಟೆಯನ್ನುಟ್ಟು ಗದೆ–ಕುಮುದಪುಷ್ಪಗಳನ್ನು ಹಿಡಿದು ನಿಂತಿರುವ ಬಿಳಿಬಣ್ಣದ ದ್ವಿಭುಜದೇವತೆಯಂತೆ ಕಾಣಿಸುತ್ತಾರೆ. ಜಾತಿಯಲ್ಲಿ ಅವನು ವೈಶ್ಯನಂತೆ; ರೋಹಿಣಿ ಅವನ ಹೆಂಡತಿ. ಅವನ ವಾಹನ ಜಿಂಕೆ. ಅವನ ರಥಕ್ಕೆ ಎರಡು ಗಾಲಿಗಳು; ಮೂರೆಂದೂ ಒಂದು ಅಭಿಪ್ರಾಯವಿದೆ. ಅದನ್ನು ಎಳೆಯುವುವು ಹತ್ತು ಕುದುರೆಗಳು, ಬಿಳಿಬಣ್ಣದವು. ಸಾರಥಿಗಳಿಬ್ಬರು. ಚಂದ್ರನ ತಂದೆ ಅತ್ರಿಯೆಂದೂ ತಾಯಿ ಅನುಸೂಯೆ ಯೆಂದೂ ಪುರಾಣದ ವಿವರ. ಇವನದು ಬಿಳಿಯ ಮಂಡಲ.

ಕುಜ (ಅಥವಾ ಮಂಗಳ) ಸೂರ್ಯನಿಗೆ ಪೂರ್ವಕ್ಕೆ ಇರುವ ಗ್ರಹ. ಇವನು ಅವಂತಿಯ ಕ್ಷತ್ರಿಯ ನೆಂದೂ ಭರದ್ವಾಜಮುನಿ ಮತ್ತು ಭೂಮಿಯರ ಮಗನೆಂದೂ ಕಲ್ಪನೆಯಿದೆ. ನವಗ್ರಹಗಳಲ್ಲಿದ್ದಾಗ ಸೂರ್ಯನ ಪಕ್ಕದಲ್ಲಿ ದಕ್ಷಿಣಕ್ಕೆ ಮುಖಮಾಡಿ ಕೆಂಪು ಬಟ್ಟೆಯನ್ನುಟ್ಟು, ಚತುರ್ಭುಜನಾಗಿ ದಂಡ, ಶಕ್ತಿ–ಆಯುಧಗಳನ್ನು ಹಿಡಿದು ವರದಾಭಯಮುದ್ರೆಗಳಲ್ಲಿರುತ್ತಾನೆ. ಇವನ ವಾಹನ ಮೇಕೆ; ಮಂಡಲ ಕೆಂಪುಬಣ್ಣದ ತ್ರಿಕೋಣ.

ಸೂರ್ಯನ ವಾಯುವ್ಯಕೋಣೆಯಲ್ಲಿ ಉತ್ತರಾಭಿಮುಖನಾಗಿ ಇರುವ ಗ್ರಹ ಬುಧ. ಇವನು ಮಗಧದೇಶದ ವೈಶ್ಯಜಾತಿಗೆ ಸೇರಿದವನೆಂದೂ ಅತ್ರಿವಂಶಕ್ಕೆ ಸೇರಿದವನೆಂದೂ ಚಂದ್ರನ ಮಗನೆಂದೂ ವಿವರಗಳಿವೆ. ಇವನ ಮೈಬಣ್ಣ ಹಳದಿ; ಕರ್ಣಿಕಾರಪುಷ್ಪಗಳಿಂದ ಅಲಂಕೃತವಾದುದು. ನಾಲ್ಕು ಕೈಗಳು ಅಥವಾ ಎರಡೇ ಕೈಗಳು ಇರುವುವು. ನಾಲ್ಕು ಕೈಗಳಿದ್ದಾಗ ಗದೆ ಮತ್ತು ಖೇಟಕ ಆಯುಧಗಳು; ಎರಡೇ ಕೈಗಳಿದ್ದಾಗ ಬದ್ಧಾಂಜಲಿ ಮುದ್ರೆ. ಸರ್ಪಾಸನವಿರುವುದು ವೈಶಿಷ್ಟ್ಯ. ಹಸಿರು ಬಣ್ಣದ ಗುದ್ದಲಿಯಾಕಾರದ ಮಂಡಲ ಇವನದು.



ನವಗ್ರಹಗಳ ವಿನ್ಯಾಸ

ಬೃಹಸ್ಪತಿ (ಅಥವಾ ಗುರು) ಸೂರ್ಯನ ಪಕ್ಕದಲ್ಲಿ, ಪಶ್ಚಿಮಕ್ಕೆ ಇರುವ ಗ್ರಹ. ಆಂಗಿರಸವಂಶದ ಬ್ರಾಹ್ಮಣನೆಂದೂ, ಸಿಂಧೂ ದೇಶದವನೆಂದೂ, ಪ್ರಭಾಸಕ್ಷೇತ್ರದಲ್ಲಿ ಶಿವನನ್ನು ಕುರಿತು ಒಂದು ಸಾವಿರ ವರ್ಷ ತಪಸ್ಸುಮಾಡಿ ಗ್ರಹದ ಸ್ಥಾನವನ್ನು ಪಡೆದನೆಂದೂ ವಿವರಗಳಿವೆ. ಅವನ ಹೆಂಡತಿ ತಾರೆಯನ್ನು ಚಂದ್ರನು ಕದ್ದೊಯ್ದು ಅವಳಿಂದ ಬುಧನೆಂಬ ಮಗನನ್ನು (ಗ್ರಹ) ಪಡೆದನೆಂದು ಪುರಾಣದ ಕಥೆ. ದೇವತೆಗಳ ಆಚಾರ್ಯನಾದ ಇವನನ್ನು ಬಂಗಾರದ ಸಿಂಹಾಸನದ ಮೇಲೆ ಉತ್ತರಕ್ಕೆ ಮುಖಮಾಡಿ ಕುಳಿತಂತೆ ಕಾಣಿಸುತ್ತಾರೆ; ಹಂಸವಾಹನನೆಂದೂ ಕಲ್ಪನೆಯಿದೆ. ನಾಲ್ಕುಕೈಗಳ ಈ ದೇವತೆ ಕಮಂಡಲು, ಅಕ್ಷಮಾಲೆ, ಪುಸ್ತಕಗಳನ್ನು ಹಿಡಿದಿರುತ್ತಾನೆ.

ಸೂರ್ಯನಿಗೆ ಉತ್ತರದಿಕ್ಕಿನಲ್ಲಿರುವ ಶುಕ್ರನು ಭೃಗುವಂಶದ ಬ್ರಾಹ್ಮಣ; ಕಾರಣಾಂತರದಿಂದ ಇವನಿಗೂ ದೇವತೆಗಳ ಗುರುವಾದ ಬೃಹಸ್ಪತಿಗೂ ವೈಮನಸ್ಯ ಉಂಟಾಗಿ ಶುಕ್ರನು ದೈತ್ಯರ ಗುರುವಾಗಲು ಒಪ್ಪಿಕೊಂಡ. ದೈತ್ಯರು ದೇವತೆಗಳ ಶತ್ರುಗಳು ತಾನೆ? ಬೃಹಸ್ಪತಿಯ ಮಗನಾದ ಕಚನೇ ಇವನ ಬಳಿ ಶಿಷ್ಯನಾಗಿದ್ದು ಮೃತಸಂಜೀವಿನಿ ವಿದ್ಯೆಯನ್ನು ಕಲಿತನೆಂದು ಕಥೆಯಿದೆ. ಶುಕ್ರನ ಮಕ್ಕಳಾದ ಚಂಡ ಮತ್ತು ಮರ್ಕ ಇವರಿಬ್ಬರೂ ದೈತ್ಯರ ದೊರೆಯಾದ ಹಿರಣ್ಯಕಶಿಪುವಿನ ಗುರುಗಳಾದರು. ಬಿಳಿಬಣ್ಣದ ಈ ಗ್ರಹಕ್ಕೆ ಬೃಹಸ್ಪತಿಗಿರುವಂತೆಯೇ ನಾಲ್ಕು ಕೈಗಳು, ಅದೇ ಆಯುಧಗಳು. ಐಶ್ವರ್ಯಕ್ಕೆ ಒಡೆಯನೆಂದು ನಿಧಿ ಪಾತ್ರೆಯನ್ನು ಹಿಡಿದಿರುವಂತೆಯೂ ಚಿತ್ರಿಸುತ್ತಾರೆ. ಪೂರ್ವಾಭಿಮುಖನಾಗಿರುವ ಈ ಗ್ರಹಕ್ಕೆ ಪಂಚಕೋಣದ ಮಂಡಲ.

ಶನಿ (ಅಥವಾ ಶನೈಶ್ಚರ, ಎಂದರೆ ನಿಧಾನವಾಗಿ ಚಲಿಸುವವನು) ಸೌರಾಷ್ಟ್ರದೇಶದ ಶೂದ್ರನೆಂದೂ, ಕಾಶ್ಯಪವಂಶದವನೆಂದೂ, ಸೂರ್ಯ–ಛಾಯೆಯರ ಮಗನೆಂದೂ ವಿವರಗಳಿವೆ. ಗ್ರಹವಿನ್ಯಾಸದಲ್ಲಿ ಸೂರ್ಯನಿಗೆ ದಕ್ಷಿಣಕ್ಕೆ ಪಶ್ಚಿಮಾಭಿಮುಖನಾಗಿರುವ ಗ್ರಹ ಇದು. ಕರಿಯ ಬಣ್ಣದ ಕುಳ್ಳಮೈ ಇವನದು; ನಾಲ್ಕು ಕೈಗಳು, ದಂಡ–ಅಕ್ಷಮಾಲೆಗಳನ್ನು ಧರಿಸಿರುತ್ತಾನೆ, ಕೆಲವೊಮ್ಮೆ ಧನುರ್ಬಾಣಧಾರಿ. ಸೂರ್ಯನ ದಕ್ಷಿಣಕ್ಕೆ ಇವನ ಸ್ಥಾನ; ಅರ್ಧಚಂದ್ರಾಕೃತಿಯ ಕರಿಬಣ್ಣದ ಮಂಡಲ ಇವನದು. ನವಗ್ರಹಪೂಜೆಯಲ್ಲಿ ಶನಿಯನ್ನು ಸುಮುಖನಾಗಿಸಿಕೊಳ್ಳುವುದೇ ಮುಖ್ಯವೆಂದು ಎಣಿಕೆಯಿದೆ. ಕೆಲವು ಕಡೆ ಶನಿಗಾಗಿಯೇ ಪ್ರತ್ಯೇಕ ಗುಡಿಗಳಿರುತ್ತವೆ. ಗ್ರಾಮೀಣ ಜನರಲ್ಲಿ ಶನಿದೇವರ ಮಾಹಾತ್ಮ್ಯ ವಿಶೇಷವಾಗಿ ಬಳಕೆಯಲ್ಲಿದೆ.

ಉಳಿದ ಗ್ರಹಗಳೆಂದರೆ ರಾಹು–ಕೇತು. ವಾಸ್ತವವಾಗಿ ಇವೆರಡೂ ಕೂಡಿ ಒಂದೇ ಗ್ರಹ. ಸಮುದ್ರಮಂಥನ ಕಾಲದಲ್ಲಿ ಹೊರಬಂದ ಅಮೃತವನ್ನು ದೇವತೆಗಳೇ ಪಡೆದರಷ್ಟೆ. ವಿಷ್ಣುವು ಮೋಹಿನಿಯಾಗಿ ದೈತ್ಯರನ್ನು ವಂಚಿಸಿ ದೇವತೆಗಳಿಗೆ ಮಾತ್ರ ಅಮೃತವನ್ನು ಹಂಚುತ್ತಿರುವಾಗ ಕಲಶದಿಂದ ಹುಲ್ಲಿನ ಮೇಲೆ ಬಿದ್ದ ಹನಿಗಳನ್ನಾದರೂ ಪಡೆಯಬೇಕೆಂದು ರಾಹುವೆಂಬ ದೈತ್ಯನು ಹಾವಿನ ರೂಪವನ್ನು ತಳೆದು ಅಮೃತವನ್ನು ನೆಕ್ಕುತ್ತಿರುವುದನ್ನು ಸೂರ್ಯ–ಚಂದ್ರರು ಪತ್ತೆಮಾಡಿ ವಿಷ್ಣುವಿಗೆ ತಿಳಿಸಿಬಿಟ್ಟರು. ತನ್ನ ಚಕ್ರದಿಂದ ವಿಷ್ಣು ಹಾವನ್ನು ಕತ್ತರಿಸಲು ತಲೆಯಭಾಗ ರಾಹುವಾಗಿಯೇ ಉಳಿಯಿತು, ಬಾಲದ ಭಾಗ ಕೇತುವಾಯಿತು. ಅಮೃತವನ್ನಾಗಲೇ ತಿಂದಿದ್ದುದರಿಂದ ರಾಹುವಿಗೆ ಸಾವು ಬರುವಂತಿರಲಿಲ್ಲ. ಅಂತೂ ಒಬ್ಬನೇ ದೈತ್ಯ ಇಬ್ಭಾಗವಾಗಿ ಎರಡುಗ್ರಹಗಳು ಮೈದಳೆದವು. ರಾಹುವನ್ನು ಸೂರ್ಯನಿಗೆ ಆಗ್ನೇಯ ದಿಕ್ಕಿನಲ್ಲಿಯೂ ಕೇತುವನ್ನು ನೈಋತ್ಯದಿಕ್ಕಿನಲ್ಲಿಯೂ ಅಳವಡಿಸುತ್ತಾರೆ; ಎರಡೂ ಗ್ರಹಗಳು ದಕ್ಷಿಣಕ್ಕೆ ಮುಖಮಾಡಿರುತ್ತವೆ. ರಾಹುವಿಗೆ ಮನುಷ್ಯನ ಮುಖ, ಹಾವಿನ ಮೈ, ಕೇತುವಿಗೆ ಹಾವಿನ ಮುಖ, ಮನುಷ್ಯನ ಮೈ. ಇಬ್ಬರಿಗೂ

ಎರಡೇ ಕೈಗಳು, ಬದ್ಧಾಂಜಲಿಮುದ್ರೆಯಲ್ಲಿ. ರಾಹುವು ಪೈಠಾಣದ ಶೂದ್ರನೆಂದೂ ವಿಪ್ರಚಿತ್ತಿ—ಸಿಂಹಿಕೆಯರ ಮಗನೆಂದೂ, ಕೇತುವು ಕುಶದ್ವೀಪದ ಶೂದ್ರನೆಂದೂ ವಿವರಗಳಿವೆ. ತಮ್ಮ ಗುಟ್ಟನ್ನು ಬಯಲಿಗೆಳೆದುಕ್ಕಾಗಿ ಅವರು ಸೂರ್ಯ–ಚಂದ್ರರ ಮೇಲೆ ಸೇಡುತೀರಿಸಿಕೊಳ್ಳಲು ಹವಣಿಸುವುದೇ ಗ್ರಹಣವೆಂದು ನಂಬಿಕೆಯಿದೆ.

ತುಳುನಾಡಿನ ದೈವಗಳು

ನಮ್ಮ ದೇಶದ ಧಾರ್ಮಿಕ ಇತಿಹಾಸದಲ್ಲಿ ತುಳುನಾಡಿನ ಭೂತಾರಾಧನೆ ವಹಿಸಿರುವ ಪಾತ್ರವನ್ನು ಈವರೆಗೆ ಸರಿಯಾಗಿ ನಿರ್ಧರಿಸುವುದಾಗಿಲ್ಲ. ಅದರ ಸ್ವಾರಸ್ಯ ಅಥವಾ ವೈಶಿಷ್ಟ್ಯದ ಬಗ್ಗೆಯೇನೋ ಯಾವ ಸಂಶಯವೂ ಇರದು; ಅದರ ಸಾಮಾಜಿಕ ನೆಲೆ ಮತ್ತು ಧಾರ್ಮಿಕ ತಾತ್ಪರ್ಯಗಳೂ ಅಷ್ಟಿಷ್ಟು ಸ್ಪಷ್ಟವಾಗಿವೆ. ಆದರೆ ಇತಿಹಾಸದ ಸಮಗ್ರವಾದ ಚೌಕಟ್ಟಿನಲ್ಲಿ ಮೂಡಿಸುವುದು ಸಾಧ್ಯವಿಲ್ಲ. ಅದರ ಮೂಲಭೂತವಾದ ಕಲ್ಪನೆಗಳೇನೋ ತುಂಬ ಪ್ರಾಚೀನವೆನಿಸುವ ಪದರಕ್ಕೆ ಸೇರಿದುವು; ಆದರೆ ನಡಾವಳಿಯಲ್ಲಿಯೂ ನುಡಿಕಟ್ಟಿನಲ್ಲಿಯೂ ಪ್ರೌಢವೆನ್ನಬಹುದಾದ ಮನೋಧರ್ಮವನ್ನು ಕಾಣಬಹುದು; ಅದರ ಕಲೆಗಾರಿಕೆಯಂತೂ ನಿರ್ವಿವಾದವಾಗಿ ಮೇಲ್ಮಟ್ಟದ್ದು.

ಪಶ್ಚಿಮಘಟ್ಟವನ್ನಿಳಿದರೆ ಸಮುದ್ರದವರೆಗೂ ಮೈಚಾಚಿ ನಿಂತಿರುವ ಭೂಭಾಗದಲ್ಲಿ ಪ್ರತ್ಯೇಕವಾದೊಂದು ಧಾರ್ಮಿಕ ಸಂಸ್ಕೃತಿ ಬೆಳೆದುದೂ, ಸಾವಿರಾರು ವರ್ಷಗಳ ಕಾಲ ಉಳಿದುದೂ ಆಶ್ಚರ್ಯವೇನಲ್ಲ. ಅಲ್ಲಿನ ವಾತಾವರಣ, ಮಳೆ–ಬೆಳೆ, ವನರಾಜಿ, ಜೀವನೋಪಾಯ, ಸುಮಸ್ಯೆಗಳೆಲ್ಲವೂ ಈ ಸಂಸ್ಕೃತಿಗೆ ಕಾರಣಗಳಾಗಿವೆ. ಅಲ್ಲಿನ ನಿಸರ್ಗದಲ್ಲಿ ಅಜೇಯ, ಅದ್ಭುತ, ಗಭೀರ, ಜೀವಂತ ಎನ್ನುವ ಲಕ್ಷಣಗಳೆಲ್ಲ ಎದ್ದು ಕಾಣುತ್ತವೆ. ಅಲ್ಲಿ ದಿನನಿತ್ಯದ ಆಗುಹೋಗುಗಳಲ್ಲಿ ಒಂದೊಂದರಲ್ಲಿಯೂ ದೈವದ ಕೈವಾಡವನ್ನು ಕಾಣುವುದು, ಕಲ್ಪಿಸಿಕೊಳ್ಳುವುದು ಕಷ್ಟವಲ್ಲ.

ತುಳುನಾಡಿನ ಜನರಲ್ಲಿ ಎಲ್ಲ ವರ್ಗಗಳಲ್ಲಿಯೂ ಭೂತಗಳ, ದೈವಗಳ ವಿಚಾರವಾಗಿ ನಂಬಿಕೆಯೂ ಆದರವೂ ವಿಶೇಷವಾಗಿವೆ. ಮನೆಯಲ್ಲಿ ರೋಗ–ರುಜಿನೆ, ಆಪತ್ತು–ವಿಪತ್ತು, ಗ್ರಾಮದಲ್ಲಿ ಬೇನೆ–ಬವಣೆ, ಊರಿಗೆ ಮಾರಿ, ಬೇಸಾಯಕ್ಕೆ ಎಡರು–ತೊಡರು, ದನ–ಕರುಗಳಿಗೆ ಕಷ್ಟ–ನಷ್ಟ ಏನಾದರೂ ಅವರು ದೈವಗಳಿಗೆ ಮೊರೆಯಿಡುತ್ತಾರೆ; ಕಷ್ಟಕ್ಕೆ ಕಾರಣವೂ ಈ ದೈವಗಳೇ, ಕಷ್ಟಗಳಿಂದ ಪಾರುಮಾಡುವುವೂ ಈ ದೈವಗಳೇ ಎಂದು ಅವನ ನಂಬಿಕೆ. ದೈವಗಳಿಗೆ ಕೋಪ–ತಾಪ ಉಂಟಾಗದಂತೆ ಎಚ್ಚರವಹಿಸುತ್ತಾರೆ; ಅವು ಬೇಡುವಂಥ, ಅವಕ್ಕೆ ತಕ್ಕಂಥ ಹರಕೆಗಳನ್ನು ಹೊರುತ್ತಾರೆ. ಅವುಗಳನ್ನು ಒಲಿಸಿಕೊಳ್ಳಲು ನೇಮ, ಕೋಲ, ಮೆಚ್ಚಿ, ಆಯನ, ಒತ್ತೆಕೋಲ, ಬಂಡಿ, ಡಕ್ಕೆಬಲಿ ಮೊದಲಾದ ವಿಧಿಗಳನ್ನೂ ನಡೆಯಿಸುತ್ತಾರೆ. ಅವುಗಳ ಸಾನ್ನಿಧ್ಯವನ್ನು ಕಾಪಾಡಿಕೊಳ್ಳಲು ಮನೆಯಲ್ಲಿಯೂ, ಊರೊಳಗೂ, ಅರಣ್ಯದಲ್ಲಿಯೂ ಗುಡಿಗುಂಡಾರಗಳನ್ನು ಕಟ್ಟಿಸುತ್ತಾರೆ.

ಮನೆಯಲ್ಲಿ ಕುಲಕ್ರಮದಿಂದ ದೈವಗಳಾದರೆ ಮನೆಯಲ್ಲಿಯೇ ಒಂದು ಕೋಣೆಯಲ್ಲಿ ಅಥವಾ ಗೂಡಿನಲ್ಲಿ 'ಭೂತಕೋಟ್ಯ' ಇರುತ್ತದೆ.; ಹಳ್ಳಿಗೇ ವಿಶಿಷ್ಟವಾದ ದೈವಗಳಿರುವುವು. ಹಳ್ಳಿಗಳು ಕಲೆತ ಮಾಗಣೆಗೆ, ಮಾಗಣೆಗಳು ಸೇರಿದ ಸೀಮೆಗೆ ಬೇರೆ ಬೇರೆ ದೈವಗಳು. ಹಳ್ಳಿಗಾದರೆ ಗುರಿಕಾರ, ಮಾಗಣೆಗಾದರೆ ಬಲ್ಲಾಳ, ಸೀಮೆಗಾದರೆ ಅರಸು ಈ ದೈವಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು; ಹಾಗಾದರೆ ಮಾತ್ರ ಅವೂ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತವೆ. ದೈವಗಳ ಪ್ರಸಾದವಿಲ್ಲದೆ ಗುರಿಕಾರನಾಗಲಿ, ಬಲ್ಲಾಳನಾಗಲೀ, ಅರಸನಾಗಲೀ ಪಟ್ಟವೇರುವುದಿಲ್ಲ, ಜಾತಿಕಟ್ಟಳೆಯಲ್ಲಿ ದೈವದ ಪಾತ್ರ ದೊಡ್ಡದು.

ಪಶುಬಲಿಯನ್ನು ಕೊಳ್ಳುವುವು ಭೂತಗಳು; ಇಂಥ 'ಅಸುರಕ್ರಿಯೆ'ಯನ್ನು ಒಪ್ಪದೆ ಸಾತ್ವಿಕ ನೈವೇದ್ಯವನ್ನು ಮಾತ್ರ ಸ್ವೀಕರಿಸುವುವು ದೈವಗಳು ಎಂದು ಸೂಕ್ಷ್ಮವಾದ ವಿವರಣೆಯಿದೆ. ಆದರೆ ವ್ಯವಹಾರದಲ್ಲಿ ಭೂತಗಳೂ ದೈವಗಳೂ ಒಂದೇ. ತುಳುನಾಡಿನಲ್ಲಿ ಏನಿಲ್ಲವೆಂದರೂ ಮುನ್ನೂರ ಐವತ್ತರಷ್ಟು ದೈವಗಳು ಅಥವಾ ಭೂತಗಳು ಪೂಜೆಗೊಳ್ಳುತ್ತವೆ. ಇವುಗಳಲ್ಲಿ ಮೇಲೆ ಹೇಳಿದಂತೆ ಮನೆಯ ದೈವಗಳು, ಹಳ್ಳಿಯ ದೈವಗಳು, ಮಾಗಣೆ ದೈವಗಳು ಮತ್ತು ಸೀಮೆ ದೈವಗಳು ಎಂಬ ವಿಭಾಗವಿದೆ, ತಾರತಮ್ಯಕ್ರಮವೂ ಇದೆ. ಸೀಮೆದೈವಗಳನ್ನು ಅರಸುದೈವಗಳೆಂದೂ ಕರೆಯುತ್ತಾರೆ. ಇವೇ ತುಂಬ ಮೇಲ್ಮಟ್ಟದವು. ಇವಕ್ಕೆ ಪಂಚದೀವಟಿಗೆ, ಒಡವೆಗಳು, ಪ್ರಭಾವಳಿ ಮೊದಲಾದ ಸನ್ಮಾನವಿರುತ್ತದೆ. ಅವುಗಳ ಉತ್ಸವ ಸಂದರ್ಭದಲ್ಲಿ ಮಾಗಣೆಭೂತಗಳೂ ಬಂದು ನೆರೆಯಬೇಕೆಂಬ ಕಟ್ಟಿದೆ.

ಭೂತಗಳಿಗೆ ವಿಶಿಷ್ಟವಾದ ಕೆಲವು ಲಕ್ಷಣಗಳನ್ನು ಜನ ಬಲ್ಲರು. ಯಾರಿಗೂ ಕಾಣದಂತೆ ಮನೆಯ ಮೇಲೆ ಕಲ್ಲು ಬೀಳುವುದು, ಇದ್ದಕ್ಕಿದ್ದಂತೆ ಉರಿಯೇಳುವುದು, ಮರಳುಗಾಳಿ ಹೊಡೆಯುವುದು, ಕತ್ತಲಲ್ಲಿ ಮನೆಯ ಮುಂದೆ ಪಂಜು ತನ್ನಷ್ಟಕ್ಕೇ ತಾನೇ ನಿಲ್ಲುವುದು, ಯಾರೊಬ್ಬರೂ ಇಲ್ಲದಿದ್ದಾಗ ಕಾಲಿನ ಗಗ್ಗರ ಸದ್ದಾಗುವುದು, ತನ್ನ ಹೆಸರು ಹಿಡಿದು ಕರೆದಂತೆ ಕೇಳಿಸುವುದು, ದನ-ಕರುಗಳು ಕಾರಣವಿಲ್ಲದೆ ಬೆದರಿ ಓಡಾಡುವುದು, ಹಠಾತ್ತನೆ ಎಚ್ಚರತಪ್ಪಿ ಬೀಳುವುದು, ಮಕ್ಕಳು ಬೇನೆ ಹಿಡಿದು ನರಳುವುದು, ರಕ್ತವಾಂತಿ, ಮೈಉರಿ, ಉಪದ್ರವ, ಮರದ ಕೊಂಬೆ ತಾನಾಗಿ ಜೋರಾಗಿ ಆಡುವುದು, ತೆಂಗಿನ ಅಥವಾ ಅಡಕೆಯ ಮರದಿಂದ ಕಾಯಿ ತಾನೇ ಉದುರುವುದು ಅಥವಾ ಮಾಯವಾಗುವುದು. ಹೀಗೆಲ್ಲ ನಡೆದಾಗ ಇದು ಭೂತಚೇಷ್ಟೆಯೆಂದೂ ಭೂತವನ್ನು ಸಮಾಧಾನಪಡಿಸಬೇಕೆಂದೂ ಜನ ತಿಳಿಯುತ್ತಾರೆ. ಅಷ್ಟು ಮಾತ್ರವಲ್ಲ, ತಮ್ಮ ಮನಸ್ಸಿನ ಬಯಕೆ ತೀರಬೇಕಾದರೂ ಭೂತಗಳನ್ನು ಒಲಿಸಿಕೊಳ್ಳಲೆತ್ನಿಸುತ್ತಾರೆ. ಗದ್ದೆಯಿಂದ ಧಾನ್ಯಗಳು ಕಳುವಾಗದಂತೆ, ಹಟ್ಟಿಯಿಂದ ದನ-ಕರುಗಳನ್ನು ಹುಲಿ ಹಿಡಿಯದಂತೆ ಪಿಲಿಚಾವುಂಡಿ ದೈವವನ್ನು ಮೊರೆಹೋಗುತ್ತಾರೆ. ಬೆಳೆ ಚೆನ್ನಾಗಿ ಆಗಲು, ಕಾಡುಪ್ರಾಣಿಗಳ ಹಿಂಸೆ ತಪ್ಪಲು ಕೊಡಮಣ್ಣಿತ್ತಾಯನೆಂಬ ದೈವ ನೆರವಾಗುತ್ತದೆ. ಹುಂಜ-ಕಾಳಗದಲ್ಲಿ ಗೆಲುವಾಗಲು ಜುಮಾದಿ ಒಲಿಯಬೇಕು. ಮೂಕಮಕ್ಕಳಿಗೆ ಮಾತು ಬರಲು ಲಕ್ಕೇಸಿರಿ; ಮೀನು ಬೇಕಾದಷ್ಟು ಸಿಗಲು ಬೊಬ್ಬರ್ಯ; ಮಕ್ಕಳು-ಮರಿ ಹೆಚ್ಚಲು ಅಬ್ಬಗೆ-ದಾರಗೆಯರು; ಬೆಳೆಯನ್ನು ಉಳಿಸಿಕೊಳ್ಳಲು, ತೆಂಗಿನಕಾಯಿ-- ಕಳ್ಳರನ್ನು ಹಿಡಿಯಲು ಕೊಡದಬ್ಬು; ಬೆಳೆಗೆ ಕ್ರಿಮಿಕೀಟಗಳ, ಬೆಂಕಿಯ ಉಪದ್ರವವನ್ನು ತಪ್ಪಿಸಲು, ಕಾಲಕಾಲಕ್ಕೆ ತಕ್ಕಷ್ಟು ಮಳೆ ಬರುವಂತೆ ಮಾಡಲು ಮಲ್ಲರಾಯಿ; ಕೋಳಿಗಳ ಬೇನೆಯನ್ನು ಪರಿಹಾರಮಾಡಲು ದೂಮಾವತಿ; ಹುಲಿಯ ಹಾವಳಿಯನ್ನು ತಪ್ಪಿಸಲು ಪಿಲಿಭೂತ ಅಥವಾ ಹುಲಿದೇವರು; ಉತ್ತಮಬೆಳೆ ಉತ್ಕೃಷ್ಟವಾಗಿ ಫಲಿಸಲು ಬಾಗಿಲ -ಬೊಬ್ಬರ್ಯ; ನಿದ್ರೆಬಾರದ ಬೇನೆಯನ್ನು ಹೋಗಿಸಲು ಜೋಗಿಪುರುಷ; ಮಕ್ಕಳು ತಂದೆ-ತಾಯಿಯರನ್ನು ಸರಿಯಾಗಿ ನೋಡಿಕೊಳ್ಳದಿದ್ದ ಪಾಪಕ್ಕೆ, ಮದುವೆಯಾದವನು ಪರಸ್ತ್ರೀಯನ್ನು ಕಾಮಿಸಿದ ಪಾಪಕ್ಕೆ, ಜಾತಿಯಲ್ಲಿ ಹೀನಾಯ ಎಣಿಸಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಲು ಪಂಜುರ್ಲಿ—ಹೀಗೆ ಬೇರೆ ಬೇರೆ ಪ್ರಯೋಜನಗಳಿಗೆ ಬೇರೆ ಬೇರೆ ದೈವಗಳನ್ನು ಮೆಚ್ಚಿಸುವುದೂ ಉಂಟು. ಅಂತೂ ಜನ ದೈವಗಳಿಗೆ ಹೆದರಿ ನಡೆದುಕೊಳ್ಳುತ್ತಾರೆ.

ದೈವಗಳು ಯಾವ ರೂಪವನ್ನಾದರೂ ಧರಿಸಿಕೊಳ್ಳಬಹುದೆನ್ನುವ ಕಲ್ಪನೆಯಿದ್ದರೂ ಕೆಲವು ದೈವಗಳಿಗೆ ವಿಶಿಷ್ಟವಾದ ಆಕಾರಗಳನ್ನು ಕಲ್ಪಿಸಿರುವುದನ್ನು ಕಾಣಬಹುದು. ನಮ್ಮ ಕಣ್ಣಿಗೆ ಕಾಣುವಂಥ ರೂಪ ದೈವಕ್ಕಿರದು ಎಂಬ ಕಾರಣದಿಂದ ದೈವಗಳನ್ನು ಪೂಜೆಮಾಡುವೆಡೆ ಬರಿಯ ಬಯಲೋ, ಬರಿಮಂಚವೋ,

ಉಯ್ಯಾಲೆಯೋ ಇರುತ್ತದೆ. ದೈವಗಳನ್ನು (ಅಥವಾ ಭೂತಗಳನ್ನು) ಪೂಜೆಮಾಡುವ ಜಾಗಕ್ಕೆ ಭೂತಸ್ಥಾನ (ಭೂತಸಾನ) ಎಂದು ಹೆಸರು. ಮನೆಯಲ್ಲಿಯೇ ಇರುವುದಾದರೆ 'ಭೂತಕೋಟ್ಯ' ಎನಿಸಿಕೊಳ್ಳುತ್ತದೆ. ಹಳ್ಳಿಯಲ್ಲಿ, ಅಥವಾ ಹಳ್ಳಿಯ ಹೊರಗೆ, ಅಥವಾ ಕಾಡಿನ ನಡುವೆ ಸಣ್ಣದೊಂದು ಕೋಣೆಯನ್ನು ಕಟ್ಟಿಸಿರುತ್ತಾರೆ; ಅದಕ್ಕೆ ಬಾಗಿಲೊಂದಿರುತ್ತದೆ, ಕಿಟಿಕಿಗಳಿರುವುದಿಲ್ಲ. ಕೋಣೆಯ ಹೊರಗೆ, ಬಾಗಿಲ ನೇರವಾಗಿ ಎರಡು ಕಂಬಗಳ ಮೇಲೆ ನಿಲ್ಲಿಸಿದ ಚಾವಣಿಯೂ ಇರುತ್ತದೆ. ಕೋಣೆಯಲ್ಲಿ ಮರದಿಂದ ಮಾಡಿದ ನಾಲ್ಕು ಕಾಲಿನ ಮಂಚವೋ, ಮೇಲಿಂದ ತೂಗಿಬಿಟ್ಟ ಉಯ್ಯಾಲೆಯೋ ಇರುತ್ತದೆ. ಇದೇ ಭೂತದ ಆಸನ, ಭೂತದ ಸಂಕೇತ. ಇದರ ಮೇಲೆ ಮನುಷ್ಯರು ಯಾರೂ ಕೂಡುವುದಿಲ್ಲ. ಮಾಗಣೆಯ ಬಲ್ಲಾಳನಾಗಲೀ ಸೀಮೆಯ ಅರಸನಾಗಲೀ ಪಟ್ಟಕ್ಕೇರುವಾಗ ಮಾತ್ರ ಭೂತದ ಅನುಮತಿಯನ್ನು ಪಡೆದು, ತನ್ನ ಬೀಡಿನಲ್ಲಿ ಅಥವಾ ಅರಮನೆಯಲ್ಲಿರುವ ಭೂತಮಂಚದ ಮೇಲೆ ಕೂಡುವನು; ಆ ಹೊತ್ತು ಅವನು ಭೂತದ ಪ್ರತಿನಿಧಿ ಯೆಂದೇ ಜನರ ಎಣಿಕೆ.

ಆದರೆ ಮಂಚದ ಮೇಲೆ ಭೂತದ ಲಾಂಛನಗಳನ್ನು ಇರಿಸುವ ವಾಡಿಕೆಯಿದೆ. ಘಂಟಾಮಣಿಯೆನಿಸಿ ಕೊಳ್ಳುವ ಘಂಟೆ, ಕಡ್ತಲೆಕತ್ತಿ, ಹಿತ್ತಾಳೆಗಿಂಡಿ, ದೀಪದ ಹಣತೆ ಇವು ಸಾಮಾನ್ಯವಾಗಿ ಭೂತಲಾಂಛನಗಳು. ಇವಲ್ಲದೆ ಆಯಾಭೂತಗಳನ್ನು ಪ್ರತಿನಿಧಿಸಲು ಹಿತ್ತಾಳೆಯಲ್ಲಿ ಮಾಡಿದ ಹಂದಿ, ಬಸವ, ಎಮ್ಮೆಗಳ ಸಣ್ಣ ಸಣ್ಣ ಪುತ್ಥಳಿಗಳನ್ನು ಅಲ್ಲಿ ಇರಿಸುವುದೂ ಉಂಟು. ಭೂತಾರಾಧನೆಯ ಸಂದರ್ಭದಲ್ಲಿ ಭೂತದ ಆವೇಶವನ್ನು ತಾಳುವ ಪಾತ್ರಿ ಬಳಸುವ (ಮೊಗ, ಮರ, ಬೆಳ್ಳಿ ಅಥವಾ ಬಂಗಾರದಲ್ಲಿ ಮಾಡಿದ ಮುಖವಾಡ); ಹಿಡಿಯುವ ಕತ್ತಿ, ಚಾಮರ, ಘಂಟೆಗಳು; ಉಡುವ ತಲೆಕಟ್ಟು, ತಾಳೆಪಟ್ಟೆ, ತಾಳೆಮಣಿ, ತುರಾಯಿ, ಎದೆಕಟ್ಟು, ಚೌಕುಳಿ ನಗ, ಸರ, ಬಳೆ, ನಡುಪಟ್ಟಿ ಮೊದಲಾದ ಆಭರಣಗಳು—ಇವೆಲ್ಲವೂ ಭೂತದ 'ಭಂಡಾರ'. ಇವನ್ನು ಭೂತ ಸ್ಥಾನದಲ್ಲಿಡದೆ, ಗುರಿಕಾರನ ಮನೆಯಲ್ಲಿ ಅದಕ್ಕೆಂದೇ ಪ್ರತ್ಯೇಕವಾಗಿ ವ್ಯವಸ್ಥೆಗೊಂಡ ಕೋಣೆಯಲ್ಲಿ ಇರಿಸಿರು ತ್ತಾರೆ. ಈ ಕೋಣೆಗೆ 'ಭಂಡಾರಮನೆ' ಎಂದು ಹೆಸರು. ಕಾಲಕಾಲಕ್ಕೆ ಈ ಭಂಡಾರಕ್ಕೆ ಗುರಿಕಾರನು ಪೂಜೆ ಸಲ್ಲಿಸುತ್ತಾನೆ. ಭೂತಾರಾಧನೆಯ ಸಂದರ್ಭದಲ್ಲಿ ಈ ಭಂಡಾರವನ್ನು ಇಲ್ಲಿಂದ ಭೂತಸ್ಥಾನಕ್ಕೆ ಮೆರವಣಿಗೆ ಯಲ್ಲಿ ಒಯ್ಯುತ್ತಾರೆ.

ಭೂತಗಳಿಗೂ ನಾಗಗಳಿಗೂ ಹತ್ತಿರದ ನೆಂಟು. ಭೂತಸ್ಥಾನದ ಬಳಿಯೇ ಅರಳೀಮರ, ಹಾವಿನ ಹುತ್ತ, ನಾಗಕಲ್ಲುಗಳಿರುವುದು ವಾಡಿಕೆ. ನಾಗಬನವು ಭೂತಗಳ ಆವಾಸವೆಂದೇ ಎಣಿಕೆ. ನಾಗಾರಾಧನೆಯ ಸಂದರ್ಭದಲ್ಲಿ ನಡೆಸುವ ಡಕ್ಕೆಬಲಿ, ನಾಗಮಂಡಲಗಳು ಭೂತಾರಾಧನೆಯ ಚೌಕಟ್ಟಿನಲ್ಲಿಯೇ ಸೇರಿದುವು. ನಾಗಪೂಜೆಯ ತಾತ್ಪರ್ಯದಲ್ಲಿ ದೋಹದತತ್ತ್ವವು ವಿಶಿಷ್ಟವಾಗಿ ಕೂಡಿಕೊಂಡಿದೆಯೆಂದು ಕಾಣುತ್ತದೆ; ಇದರ ಪ್ರಸ್ತಾಪ ಬೇರೆ ಸಂದರ್ಭದಲ್ಲಿ ಬಂದಿದೆ. ಭೂತಾರಾಧನೆಯಲ್ಲಿ ಈ ತತ್ತ್ವವೇ ಮುಖ್ಯವೆಂದು ಎನಿಸುವುದಿಲ್ಲವಾದರೂ ನಾಗಪೂಜೆಯನ್ನು ಅದರಲ್ಲಿ ಅಳವಡಿಸಿಕೊಂಡಿದ್ದಾರೆ. ಅದು ಈ ಪ್ರದೇಶದ ಸ್ವಾರಸ್ಯ.

ಜನರ ಕಲ್ಪನೆಯಲ್ಲಿ ಭೂತಗಳಿರುವ ಸ್ಥಾನ ಹೆಚ್ಚಿನದು; ಭೂತಗಳಂತೆಯೇ ವ್ಯವಹಾರದಲ್ಲಿ ನಿಂತಿರುವ ಪ್ರೇತ, ಪಿಶಾಚಗಳಿಗಿಂತಲೂ ಹೆಚ್ಚಿನದು. ಆತ್ಮಹತ್ಯೆ ಮಾಡಿಕೊಂಡವರು, ದುಷ್ಟಪ್ರಾಣಿಗಳಿಂದ ಕೊಲ್ಲಲ್ಪಟ್ಟ ವರು, ಶ್ರಾದ್ಧವಿಲ್ಲದವರು ಪ್ರೇತಗಳಾಗುತ್ತಾರೆ. ಆಕಸ್ಮಿಕವಾಗಿ ಅಕಾಲಮರಣಕ್ಕೆ ತುತ್ತಾದವರು, ಮದುವೆ

ಯಾಗದೆ ಸತ್ತವರು, ಪಾಪಿಗಳಾಗಿ ಪರರನ್ನು ಹಿಂಸಿಸಿ ಸತ್ತವರು ಇವರೆಲ್ಲ ಪಿಶಾಚಿಗಳಾಗುತ್ತಾರೆ. ಪ್ರೇತಗಳಿಗಿಂತ ಪಿಶಾಚಿಗಳು ಕ್ರೂರಿಗಳು; ಕಾಡುಮೇಡುಗಳಲ್ಲಿ ಅಲೆದಾಡುತ್ತ, ಮಾಂಸಾಹಾರಕ್ಕಾಗಿ ತವಕಪಟ್ಟು, ಗಾಳಿಯಂತೆ ಬೆಂಕಿಯಂತೆ ಕಾಣಿಸಿಕೊಳ್ಳುತ್ತ, ಜನರಿಗೆ ತೊಂದರೆಕೊಡುವ ಸತ್ತ್ವಗಳು ಇವು. ಇವೆರಡಲ್ಲದೆ ರಾವುವೆಂಬುದೂ ಇದೆ. ಮಾಟ-ಮಂತ್ರಗಳಿಂದ ಪ್ರಾಣ ಬಿಟ್ಟವರು ರಾವುಗಳಾಗುತ್ತಾರೆ. ರಾವುವೆಂದರೆ ನೆರಳಿನಂತೆ ಅಥವಾ ಎಳೆಗಾಳಿಯಂತೆ ತೋರಿಕೊಳ್ಳುವುವು. ಅವು ಹಾರಾಡುವೆಡೆ ಭೂತಗಳೂ ಬರುವುದಿಲ್ಲವೆಂದು ನಂಬಿಕೆ. ಇವು ಹೊಟ್ಟೆಬಾಕಗಳು; ಏನನ್ನಾದರೂ, ಎಷ್ಟಾದರೂ ತಿನ್ನುತ್ತವೆ. ಮನುಷ್ಯರನ್ನೂ ದನಕರುಗಳನ್ನೂ ಕೊಂದು ರಕ್ತವನ್ನು ಕುಡಿಯುತ್ತವೆ. ಪ್ರೇತಕ್ಕೆ ತುಳುಮಾತಿನಲ್ಲಿ ಕುಲೆ ಎನ್ನುವುದಿದೆ. ಆದರೆ ಕುಲೆ ಸಾಮಾನ್ಯವಾಗಿ ಕೀಳೆನಿಸಿಕೊಳ್ಳುವ ವರ್ಗಗಳಿಗೇ ಸೇರಿದವರು ಸತ್ತಾಗ ಮೈದಳೆಯುವ ರೂಪವೆಂದು ಹೇಳುತ್ತಾರೆ. ಇವು ಜನರನ್ನು ಹಿಡಿದು, ರಕ್ತ ಕುಡಿಯುವುವು; ಕೋಳಿಗಳನ್ನು ಕದ್ದು ತಿನ್ನುವುವು.

ಈ ಬಗೆಯ ಸತ್ತ್ವಗಳ ತಾರತಮ್ಯದಲ್ಲಿ ಭೂತ ಮೇಲ್ಮಟ್ಟದ್ದು. ಈಶ್ವರನ ಗಣಗಳಲ್ಲಿ ಸೇರಿದವೆಂದೂ, ಅವನ ಜಟೆಯಿಂದ ಮೂವತ್ತೆರಡು ವರ್ಗಗಳಲ್ಲಿ ಕಾಣಿಸಿಕೊಂಡವರೆಂದೂ, ಅವನ ಶಾಪದಿಂದ ಭೂಮಿಗಿಳಿದವರೆಂದೂ ಕಥೆಗಳಿವೆ. ಶಿವಗಳಲ್ಲಿ ಪ್ರಮಥಗಣ ಮತ್ತು ಪರಿವಾರಗಣಗಳಿಗೆ ಸೇರಿದವರೆನ್ನಲಾದ ಈ ಭೂತಗಳು ಗಣಪತಿಯ ಅಂಕೆಯಲ್ಲಿವೆಯೆಂದೂ ಹೇಳುವುದಿದೆ. ಆದರೆ ಈ ಕಲ್ಪನೆಗಳು ಕಾಣಿಸಿಕೊಳ್ಳುವುದಕ್ಕೂ ಮೊದಲೇ ಭೂತಗಳು ಇಲ್ಲಿ ಬೆಳೆದಿದ್ದುವು. ಯಾರ ಕಣ್ಣಿಗೂ ಕಾಣದಂತೆ, ನೆಲದ ಮೇಲೆ, ನೀರಿನ ಮೇಲೆ, ಗಾಳಿಯಲ್ಲಿ ಸುಳಿದಾಡುವುವು; ರಾತ್ರಿಯ ವೇಳೆ ತಾನಾಗಿ ಓಡಾಡುವ ಪಂಜು, ದೀವಟಿಗೆಗಳಿಂದ ಅವುಗಳ ಸುಳಿವು ಸಿಗುವುದು. ಜನರಿಗೆ ಉಪದ್ರವಕೊಟ್ಟು, ಬಲವಂತದಿಂದ ಅವರು ಕಾಣಿಕೆ-ಕೊಡುಗೆಗಳನ್ನು ನೀಡವಂತೆ ಮಾಡುವುವು. ಯುದ್ಧಭೂಮಿಯಲ್ಲಿ, ರುದ್ರಭೂಮಿಯಲ್ಲಿ ಹೆಚ್ಚಾಗಿ ವಾಸಮಾಡುತ್ತ, ಸೋಂಕುರೋಗದಿಂದ ಸತ್ತವರು, ಅಪರಕ್ರಿಯೆಗಳನ್ನು ಕಾಣದೆ ಸತ್ತವರು ಇವರ ಹೆಣಗಳನ್ನು ತಿನ್ನುವುವೆಂದೂ ಒಂದು ನಂಬಿಕೆ; ಭೂತಗಳು ಜನರನ್ನು ಹಿಂಸಿಸುವಾದರೂ ಕೊಲ್ಲುವುದಿಲ್ಲವೆಂಬ ಇನ್ನೊಂದು ನಂಬಿಕೆಯೂ ಇದ್ದಿತು (ಪಂಜುರ್ಲಿಯೊಂದನ್ನು ಬಿಟ್ಟು). ಈ ಪ್ರಾಚೀನಕಲ್ಪನೆಗಳ ಆಧಾರದ ಮೇಲೆ ಭೂತಾರಾಧನೆ ಮೈದಳೆಯಿತೆಂದು ತೋರುತ್ತದೆ.

ಭೂತಗಳಲ್ಲಿ ಹಲವು ಒಮ್ಮೆ ಮನುಷ್ಯರಾಗಿದ್ದವರು ತೀರಿಕೊಂಡಮೇಲೆ ಮೈದಳೆದ ರೂಪಗಳು. ನಿದರ್ಶನಕ್ಕೆ 'ಬೈದೇರ್ಕಳು' (ವೈದ್ಯರು) ಎನಿಸಿಕೊಳ್ಳುವ ಕೋಟಿ ಮತ್ತು ಚೆನ್ನಯ ಎಂಬ ಬಿಲ್ಲವ ವೀರ ಸೋದರರು ತೀರಿಕೊಂಡು ಭೂತಗಳಾದರು; ಅವರ ತಾಯಿ ದೇಯಿ-ಬೈದ್ಯೇದಿಯೂ ಭೂತವಾದಳು. ಕಾರ್ಕಳದ ಕಲ್ಕುಡ ಮತ್ತು ಕಲ್ಲುರ್ಟಿ ಎಂಬ ಅಣ್ಣ-ತಂಗಿಯರು ಮಾಯವಾಗಿ ಭೂತವಾದರು. ಬೊಬ್ಬರ್ಯ ಭೂತ ಮೊಪ್ಲಾ ಜನಾಂಗದ ಮುಸಲ್ಮಾನ ತರುಣ ನಾವಿಕನಾಗಿದ್ದವನು, ಹಡಗು ಮುಳುಗಿ ಉಡುಪಿಯ ಕಾಪುವಿನ ಬಳಿ ತೀರಿಕೊಂಡವನು; ಹಡಗು ಮುಳುಗಿದಮೇಲೆ ಸಮುದ್ರದಲ್ಲಿ ಈಜಿಕೊಂಡು ಬಂದು ದಡ ಸೇರಿದನೆಂದೂ ಕಥೆಯಿದೆ. ಉಮ್ಮಳ್ತಿ ಅವನ ಹೆಂಡತಿ; ಅವಳೂ ಭೂತವಾದಳು. ಕುಂಬಳೆಯ ಅಲಿ ಭೂತವೂ ಮೊಪ್ಲಾ ಯುವಕನಾಗಿದ್ದವನೇ. ಕುಂಜುಂಬು, ಕಾಂತಾಬಾರೆ, ಕೋಟಿಪೂಂಜೆ, ಉಳ್ಳಾಳ್ತಿ, ಅಣ್ಣಪ್ಪ, ಅಬ್ಬಗೆ-ದಾರಗೆ, ದೇವುಪೂಂಜೆ, ಸಂನ್ಯಾಸಿ, ಸುಬ್ಬಮ್ಮ, ಬೂದಾಬಾರೆ ಮೊದಲಾದ ಭೂತಗಳಿಗೂ ಮಾನವ ಹಿನ್ನೆಲೆ ಇದ್ದಂತೆ ತೋರುತ್ತದೆ.

ಬದುಕಿದ್ದಾಗ ಹಿರಿಮೆ ಗಳಿಸಿ, ಊರಜನರಿಗೆ ನೆರವಾಗಿ, ಅದ್ಭುತವೆನಿಸುವ ರೀತಿಯಲ್ಲಿ ಮಾಯವಾದವರು ಕಾಣದಾದಮೇಲೂ ಜನರಿಂದ ಪೂಜೆಗೊಳ್ಳುವುದು ಎಲ್ಲ ದೇಶಗಳಲ್ಲಿಯೂ ಕಾಣಸಿಗುವ ವಿವರವೇ. ತುಳುನಾಡಿನ ಭೂತಗಳಲ್ಲಿ ಈ ವರ್ಗಕ್ಕೆ ಸೇರಿದವೇ ಹೆಚ್ಚಿದ್ದರೆ ಆಶ್ಚರ್ಯವೇನಲ್ಲ. ಕೆಲವು ಭೂತಗಳು ಕೆಲವೆಡೆಗಳಲ್ಲಿ ಮಾತ್ರವೇ ಬಳಕೆಯಲ್ಲಿರುವುದಕ್ಕೆ ಇದೇ ಕಾರಣ. ಕೊಡದಬ್ಬು, ದೇವುಪೂಂಜೆ, ಕೋಟಿ–ಚೆನ್ನಯರ ಗರಡಿ ಇವು ನಿದರ್ಶನಗಳು. ಇವಲ್ಲದೆ, ಬಲಿಷ್ಠವಾದ ಅಥವಾ ಆತಂಕಕಾರಿಯಾದ ಪ್ರಾಣಿಯೂ ಭೂತವೆಂದು ಪೂಜೆಗೊಳ್ಳುವುದನ್ನು ಕಾಣಬಹುದು. ನಂದಿಗೋಣೆ (ಗೂಳಿ), ಪಂಜುರ್ಲಿ (ಹಂದಿ), ಪಿಲಿಚಾವುಂಡಿ (ಹುಲಿ), ಮೈಸಂದಾಯೆ (ಮಹಿಷಂದಾಯೆ, ಕಾಡೆಮ್ಮೆ), ಜರಂದಾಯೆ (ಕುದುರೆ), ಭೂತನಾಗೆ (ಹಾವು), ಪಿಲಿಭೂತ (ಹುಲಿ), ರಕ್ತಹೈಗುಳಿ, ಕಿರಾತನಂದಿ ಮೊದಲಾದುವು ಪೂಜೆಗೊಳ್ಳುವ ಭೂತಗಳೇ.

ಕೆಲವು ಗಂಡುಭೂತಗಳು (ಅಣ್ಣಪ್ಪ, ಕಲ್ಕುಡ, ತಿಮ್ಮಪ್ಪ, ದೇವುಪೂಂಜ ಮೊದಲಾದುವು); ಕೆಲವು ಹೆಣ್ಣು ಭೂತಗಳು (ಕಲ್ಲುರ್ಟಿ, ಉಳ್ಳಾಳ್ತಿ, ಬೈರವೆ, ಮಾರ್ಗಂದಾಯೆ, ಮುತ್ತಬ್ಬೆ, ಮಾರಿಯಮ್ಮ, ನಾಗಂತಾಯಿ, ರಕ್ತೇಶ್ವರಿ, ಯೆಲ್ಲಮ್ಮ ಮೊದಲಾದುವು). ಜುಮಾದಿಯೆಂಬ ಭೂತ ನಡುವಿನಿಂದ ಮೇಲೆ ಹೆಣ್ಣು, ಕೆಳಗೆ ಗಂಡು; ಈ ಭೂತದಲ್ಲಿ ಮರ್ಳು (ಮರುಳ), ಸರ್ಳು (ಸರಳ) ಎಂಬ ಭೇದವೂ ಇದೆ. ಭೂತಗಳಿಗೆ ಬಂಟಭೂತಗಳೂ ಇರುವುದುಂಟು; ಉಳ್ಳಾಳ್ತಿಗೆ ಮಲ್ಲರಾಯೆ ಮತ್ತು ಪಿಲಿಚಾವುಂಡಿ ಇದ್ದ ಹಾಗೆ, ಕುಂಬೇಲ್ರುವಿಗೆ ಕೊಡದಬ್ಬು ಇದ್ದಹಾಗೆ. ಕೆಲವು ಭೂತಗಳನ್ನು ಘಟ್ಟದಿಂದ ಇಳಿದು ಬಂದುವೆಂದು ಹೇಳುತ್ತಾರೆ. ಪಂಜುರ್ಲಿ ಒಂದು ನಿದರ್ಶನ; ಇದರಲ್ಲಿ ರುದ್ರಪಂಜುರ್ಲಿ, ಗ್ರಾಮಪಂಜುರ್ಲಿ, ಅಮ್ಮಾದಿ ಪಂಜುರ್ಲಿ, ವರ್ಣಪಂಜುರ್ಲಿ ಎಂದು ಮೊದಲಾದ ಭೇದಗಳಿವೆ. ಕೆಲವು ಭೂತಗಳು ಆರ್ಯಸಂಸ್ಕೃತಿಯ ಪೌರಾಣಿಕ ನೆಲೆಯಿಂದ ಇಲ್ಲಿ ಕಾಣಿಸಿಕೊಂಡುವು: ವಿಷ್ಣುಮೂರ್ತಿದೈವ, ಶಿವರಾಯ, ಬೈದ್ಯನಾಥ, ಪರಶುಪಾಣಿ, ಬೇಟೆಗಾರ (ಈಶ್ವರ), ವಾರಾಹಿ, ಚಾಮುಂಡಿ, ರಕ್ತೇಶ್ವರಿ, ಕಾಲಬೈರವೆ, ಗಾಂಧಾರಿ, ಖಡ್ಗರಾವಣೆ, ಕನ್ಯಾಕುಮಾರೆ, ಮಹಮ್ಮಾಯಿ, ಕುಮಾರಸ್ವಾಮಿ, ಖಡ್ಗೇಶ್ವರ, ಕ್ಷೇತ್ರಪಾಲ, ಧೂಮಾವತಿ, ದುರ್ಗಿ, ಬೆರ್ಮೆ (ಬ್ರಹ್ಮ), ಪಾತಾಳಬೈರವೆ, ಕಾಳರಾಹು, ಕಾಳರಾತ್ರಿ, ಕಾಳೇಶ್ವರಿ, ಯಕ್ಷ, ಉಚ್ಚಂಡಿ, ಭೂತರಾಜ, ಭಗವತಿ ಮೊದಲಾದುವು. ಊರಿನ ಹಿರಿಮೆಯಿಂದ ಹೆಸರಾಂತ ದೈವಗಳು ಕೆಲವು—ಕೊಲ್ಲೂರಮ್ಮ, ಕಾರ್ಗೋಳು ದೈವ, ಮುಕ್ಕಂಬೆ ಇತ್ಯಾದಿ. ಕೆಲವು ದೈವಗಳು ಕೆಲವು ಪರಿಶಿಷ್ಟವರ್ಗಗಳಲ್ಲಿಯೇ ಹೆಚ್ಚಾಗಿ ಪೂಜೆಗೊಂಡು ಪ್ರಸಿದ್ಧವಾದುವು; ಮೊಗವೀರರಲ್ಲಿ ಬೊಬ್ಬರ್ಯೆ, ಕೊರಗರಲ್ಲಿ ಕೊರಗ–ಕೊರತಿ ಭೂತ, ಬಿಲ್ಲವರಲ್ಲಿ ಕೋಟಿ–ಚೆನ್ನಯ, ಮುಂಡಾಲರಲ್ಲಿ ಕೊಡದಬ್ಬು ಮತ್ತು ಕುಂಬೆಲ್ರು ಇದ್ದಂತೆ. ಇವಲ್ಲದೆ ಬೇತಾಳ, ಬೈರಾಗಿ ಭೂತ, ಹೊಸಭಗವತಿ, ಕುಟ್ಟಿಚಾತ, ಸತ್ಯದೇವತೆ, ಗುಳಿಗೆ, ಸೊನ್ನೆ, ರೇವಂತ (ರಾಹುತ), ಜೋಗಿಪುರುಷೆ ಮೊದಲಾದುವು ಅಕ್ಕಪಕ್ಕದ ತಾಣಗಳಿಂದ ಎರವಲು ತಂದುಕೊಂಡಂತೆ ಕಾಣುತ್ತದೆ. ಮಲಯಾಳ–ಯಕ್ಷಿ, ಮಲಯಾಳ–ಬೊಬ್ಬರ್ಯೆ, ಮಲಯಾಳ–ಚಾಮುಂಡಿಗಳೆಂಬ ದೈವಗಳ ಹಿನ್ನೆಲೆಯನ್ನು ಹೆಸರುಗಳೇ ಹೇಳುತ್ತವೆ.

ಒಂದೊಂದು ಭೂತ ಮೈದಳೆದ ಬಗೆಯನ್ನೂ, ಅದು ತೋರಿಸಿದ ಮಾಯೆ ಮತ್ತು ಸಾಹಸಗಳನ್ನೂ ಅದರ ಕಾರಣಿಕವನ್ನೂ ಹೇಳುವ ಹಾಡುಗಳು ಪಾಡ್ದನಗಳೆನ್ನಿಸಿಕೊಳ್ಳುತ್ತವೆ. ಇವೆಲ್ಲ ತುಳುಭಾಷೆಯಲ್ಲಿಯೇ ಇದ್ದು, ಭೂತ ಕಟ್ಟುವ ಸಂದರ್ಭಗಳಲ್ಲಿ ಅವನ್ನು ಹಾಡುತ್ತಾರೆ. ಇವನ್ನು ಕೇಳುವಾಗಲೇ ಪಾತ್ರಿಗೆ ಭೂತದ ಆವೇಶ ಬರುವುದು. ಅದರ ವಿನಿಕೆಯಲ್ಲಿ ಪರವಶಮಾಡುವ ಗುಣವೂ, ವಸ್ತುವಿನಲ್ಲಿ ಭೂತದ ಪಾರಮ್ಯವನ್ನು ಹೇಳುವ ಉದ್ದೇಶವೂ ಇರುತ್ತದೆ. ತಮ್ಮಟೆ, ತಾಳಗಳೊಂದಿಗೆ ಅವನ್ನು ಹಾಡುತ್ತಿದ್ದಾಗ ಒದಗುವ

ಅದ್ಭುತವಾದ ಅನುಭವ ದಿಟವಾಗಿ ಸ್ವಾರಸ್ಯವಾದುದು. ಪಂಬಡ, ಪರವ, ನಲ್ಕೆ ಮತ್ತು ಪಣರೆಂಬ ಪರಿಶಿಷ್ಟ ವರ್ಗದ ಜನರೇ ಈ ಜಾನಪದಗೀತಗಳನ್ನು ಹಾಡುವುದರಲ್ಲಿ ಗಟ್ಟಿಗರು. ಪಾಡ್ದನಗಳನ್ನು ಉಳಿಸಿರುವವರೇ ಇವರು.

ಪಾಡ್ದನಗಳಲ್ಲೆಲ್ಲ ತುಂಬ ಸ್ವಾರಸ್ಯವಾದುದೆಂದರೆ ಬಿಲ್ಲವವೀರರಾದ ಕೋಟಿ–ಚೆನ್ನಯರನ್ನು ಕುರಿತದ್ದು. ಇವರ ಭೂತಸ್ಥಾನಗಳಿಗೆ 'ಗರಡಿ'ಗಳೆಂದು ಹೆಸರು. ಅವರ ತಾಯಿ ದೇಯಿ–ಬೈದ್ಯೇದಿ. ಮದುವೆಯಾಗುವ ಮೊದಲು ಮೈನೆರೆದ ಹುಡುಗಿ ದೇಯಿಯನ್ನು ಆ ಕಾಲದ ಪದ್ಧತಿಯಂತೆ ತಂದೆತಾಯಿಯರು ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿನಲ್ಲಿ ಬಿಟ್ಟರು. ದಿಕ್ಕುಕಾಣದೆ ಅಳುತ್ತಿದ್ದ ಅವಳನ್ನು ಶಾಂತ ಆಳ್ವನೆಂಬುವನು ಕಂಡು, ಮನೆಗೊಯ್ದು ತನ್ನ ಸೋದರಳಿಯ ಸಾಯನ ಬೈದ್ಯನಿಗೆ ಕೊಟ್ಟು ಮದುವೆ ಮಾಡಿದ. ಶಾಂತನ ಸ್ನೇಹಿತನಾಗಿದ್ದ ಪೆರ್ಮಾಳ ಬಲ್ಲಾಳ ಮದುವೆಯ ವೆಚ್ಚವನ್ನೆಲ್ಲ ವಹಿಸಿಕೊಂಡು, ಮದುಮಗನಿಗೆ ಹನ್ನೆರಡು ಹೊನ್ನು ಉಡುಗೊರೆಯನ್ನು ಕೊಟ್ಟ. ದೇಯಿ ವೈದ್ಯವನ್ನು ಚೆನ್ನಾಗಿ ಕಲಿತು ಹೆಸರಾದಳು. ಒಮ್ಮೆ ಬಲ್ಲಾಳನ ಕಾಲಿಗೆ ಮುಳ್ಳುನಾಟಿ, ವಿಷ ವಾಗಿ, ವ್ರಣ ಹೆಚ್ಚಿ, ಯಾರೂ ಗುಣಮಾಡದಾದಾಗ ದೇಯಿಗೆ ಹೇಳಿಕಳುಹಿಸಿದ. ಆಗ ದೇಯಿ ಒಂಬತ್ತು ತಿಂಗಳಬಸಿರನ್ನು ಹೊತ್ತಿದ್ದರೂ ಬಲ್ಲಾಳನ ಬೀಡಿಗೆ ಹೋಗಿ, ವೈದ್ಯಮಾಡಿ, ಗುಣಪಡಿಸಿದಳು. ಆದರೆ ಹಿಂದಿರುಗುವಾಗ ಸ್ವಲ್ಪ ದೂರದಲ್ಲಿಯೇ ಬಸಿರಬೇನೆ ಹೆಚ್ಚಿ, ದಾರಿಯಲ್ಲಿ ತೆಂಗಿನಮರವೊಂದನ್ನು ಹಿಡಿದು, ಅವಳಿ ಮಕ್ಕಳನ್ನು ಹೆತ್ತಳು. ಇವರೇ ಕೋಟಿ–ಚೆನ್ನಯರು. ಬಲ್ಲಾಳನು ಆಕೆಗೆ ಹೆರಿಗೆ ಉಪಚಾರಕ್ಕಾಗಿ ತನ್ನ ಬೀಡಿನಲ್ಲಿಯೇ ಅನುವುಮಾಡಿಕೊಟ್ಟು, ಮಕ್ಕಳು ಬೆಳೆದಮೇಲೆ ಮೂರು ಎಕರೆ ಭೂಮಿಯನ್ನು ಕೊಡುವುದಾಗಿ ವಾಗ್ದಾನಮಾಡಿದನು. ದೇಯಿ ಅರವತ್ತು ದಿನಗಳನ್ನು ಅಲ್ಲಿ ಕಳೆದು ಮನೆಗೆ ಹಿಂದಿರುಗಿದಾಗ, ಇದ್ದಕ್ಕಿದ್ದಂತೆ ತೆಂಗಿನಮರವೊಂದು ಅವಳ ಮೇಲೆ ಬಿದ್ದು ಸತ್ತಳು. ಬೆರ್ಮಣ್ಣ–ವೈದ್ಯನ ಮಾಟದಿಂದ ಅವಳು ಸತ್ತಳೆಂದೂ ಒಂದು ವಿವರವಿದೆ. ಅಂತೂ ಬಲ್ಲಾಳನು ಆಕೆಯ ಹೆಣವನ್ನು ಒಪ್ಪಮಾಡಿ, ಮಕ್ಕಳನ್ನು ಬೆಳೆಸಲು ವ್ಯವಸ್ಥೆ ಮಾಡಿದನು. ಬಲ್ಲಾಳನ ಸಚಿವ ಬುದ್ಯಂತನೆಂಬುವನ ಪೊಮ್ಮಕ್ಕಳಿಗೂ ಕೋಟಿ–ಚೆನ್ನಯರಿಗೂ ವಿರಸ ಒದಗಿತು. ಮುಂದೆ ಅವರು ಬೆಳೆದಮೇಲೆ ಬಲ್ಲಾಳನು ಅವರಿಗೆ ತಾನು ವಾಗ್ದಾನ ಮಾಡಿದ ಭೂಮಿಯನ್ನು ಬುದ್ಯಂತನ ಭೂಮಿಯಿದ್ದ ಬಳಿಯೇ ಕೊಟ್ಟನು. ಒಂದು ದಿನ ಕೋಟಿಗೂ ಬುದ್ಯಂತನಿಗೂ ಮಾತಿಗೆ ಮಾತು ಬೆಳೆದು, ಚೆನ್ನಯ ಬಂದು ಬುದ್ಯಂತನನ್ನು ಕತ್ತಿಯಿಂದ ಇರಿದು ಕೊಂದು ಬಿಟ್ಟ. ಇದರಿಂದ ಬಲ್ಲಾಳನಿಗೂ ಅವರ ಮೇಲೆ ಸಿಟ್ಟಾಯಿತು. ಅವರು ಅಲ್ಲಿಂದ ಹೊರಟು ಹಲವಾರು ಮಾಗಣೆಗಳಲ್ಲಿ ಸುತ್ತಾಡಿ ಸಾಹಸಕಾರ್ಯಗಳನ್ನು ಮಾಡಿ, ಕಡೆಗೆ ಒಂದು ಕಾಡುಹಂದಿಗಾಗಿ ಎಡಂಬೂರಿನ ಬಲ್ಲಾಳನ ಪರವಾಗಿ ಪಂಜದ ಬಲ್ಲಾಳನೊಂದಿಗೆ ಕಾದಾಡಿ, ಸಾವಿರಾರು ಜನರನ್ನು ಕೊಂದು, ಕೋಟಿ ಮಡಿಯಲು ಚೆನ್ನಯನೂ ತನ್ನ ತಲೆಯನ್ನು ಬಂಡೆಗೆ ಬಡಿದುಕೊಂಡು ಸತ್ತನು. ಅವರು ಕೈಲಾಸಕ್ಕೆ ಹೋದಮೇಲೆ ಶಿವನು ಅವರಿಬ್ಬರನ್ನೂ ಮತ್ತೆ ಭೂಮಿಗೆ ಕಳುಹಿಸಿದನು. ಅವರು ಭೂತಗಳಾಗಿ ಗರಡಿಗಳಲ್ಲಿಯೂ, ಗುಡಿ ಗಳಲ್ಲಿಯೂ, ಮನೆಗಳಲ್ಲಿಯೂ ಪೂಜೆಗೊಳ್ಳತೊಡಗಿದರು. ವೀರಮಾತೆಯೂ, ಸಾಹಸಿಯೂ, ಚತುರೆಯೂ ಆಗಿದ್ದು ಅಪಮೃತ್ಯುವಿಗೆ ತುತ್ತಾದ ದೇಯಿ–ಬೈದ್ಯೇದಿಯೂ ಭೂತವಾದಳು.

ಹೀಗೆಯೇ ಮಾನವಭೂತಗಳಲ್ಲಿ ಪ್ರಸಿದ್ಧರಾದವರು ಕಲ್ಕುಡ–ಕಲ್ಲುರ್ಟಿ. ಕಾರ್ಕಳದ ಗೊಮ್ಮಟ ಮೂರ್ತಿಯನ್ನು ಕಡೆದ ಸುಪ್ರಸಿದ್ಧ ಶಿಲ್ಪಿ ಕಲ್ಕುಡ; ಅದನ್ನು ಅಷ್ಟು ಸೊಗಸಾಗಿ ಕಂಡರಿಸಿದುದಕ್ಕೆ ಬೈರರಸು ನೀಡಿದ ಬಹುಮಾನವೆಂದರೆ ಶಿಲ್ಪಿಯ ಎಡಗೈಯನ್ನೂ ಬಲಗಾಲನ್ನೂ ಕತ್ತರಿಸಿದುದು! ಬೇರೆಲ್ಲಿಯೂ ಅವನು

ಇದಕ್ಕಿಂತ ಹೆಚ್ಚು ಸೊಗಸಿನ ಮೂರ್ತಿಯನ್ನು ಮಾಡಬಾರದೆಂದು! ಸಿಟ್ಟಿನಿಂದ ಕಾರ್ಕಳಸೀಮೆಯನ್ನು ತೊರೆದು ಕಲ್ಕುಡ ವೇಣೂರಿಗೆ ಬಂದು ಅಲ್ಲಿ ಅಜಿಲ ಅರಸನ ಇಚ್ಛೆಯಂತೆ ಅಲ್ಲಿಯೂ ಒಂದು ಗೊಮ್ಮಟ ಮೂರ್ತಿಯನ್ನು ಕಂಡರಿಸಿದ, ಎಡಗಾಲ ಮೇಲೆಯೇ ನಿಂತು ಬಲಗೈಯಿಂದಲೇ! ಅವನನ್ನು ಹುಡುಕಾಡುತ್ತ ಅಲ್ಲಿಗೆ ಬಂದ ಅವನ ತಂಗಿ ಕಲ್ಲುರ್ಟಿ ಅವನಿಗಾದ ಬವಣೆಯನ್ನು ಕಂಡು ಕೆಂಡವಾದಳು. ಇಬ್ಬರೂ ಮಾಯವಾಗಿ (ಎಂದರೆ ಆತ್ಮಹತ್ಯೆ ಮಾಡಿಕೊಂಡು) ಭೂತವಾದರು, ಅಣ್ಣನ ಬವಣೆಗೆ ಕಾರಣವಾದ ಭೈರರಸ ನನ್ನು ಕಾಡತೊಡಗಿದರು. ಕಡೆಗೆ ಅರಸು ಅವರ ಆರಾಧನೆಗೆ ಅಣಿಮಾಡಬೇಕಾಯಿತು. ಕಲ್ಕುಡೆ (ಅಥವಾ ಕಲ್ಲುಕುಟ್ಟಿಗ) ಮತ್ತು ಕಲ್ಲುರ್ಟಾಯಿ ಎಂಬ ಭೂತಗಳ ಪಾಡ್ದನ ಇದು.

ಬೊಬ್ಬರ್ಯಭೂತದ ಪಾಡ್ದನವೂ ಅದರ ಮಾನವ ಹಿನ್ನೆಲೆಯನ್ನು ಸೂಚಿಸುತ್ತದೆ. ಮುರವೆ–ಬ್ಯಾರಿ ಎಂಬ ಮೊಪ್ಲಾ ಮುಸಲ್ಮಾನನ ಮಕ್ಕಳು ದೊಡ್ಡವರಾದ ಮೇಲೆ ವ್ಯಾಪಾರಕ್ಕೆಂದು ಹಡಗೊಂದನ್ನು ಕಟ್ಟಿ ಭತ್ತ ಮೊದಲಾದ ಸಾಮಾನು ಹೇರಿಕೊಂಡು ಅರಬ್ಬಿ ಸಮುದ್ರದ ಮೇಲೆ ಹೊರಟರು. ಒಂದೂವರೆ ವರ್ಷಗಳನಂತರ ಅಪಾರವಾದ ಹಣವನ್ನು ಗಳಿಸಿ ಹಿಂದಿರುಗುತ್ತಿದ್ದಾಗ, ಇನ್ನೇನು ದಡ ಸಿಕ್ಕಿತು ಎನ್ನುವಾಗ ಇನ್ನೊಂದು ಮೊಪ್ಲಾ ಪಂಗಡದ ಹಡಗಿನಲ್ಲಿದ್ದವರು ಇವರ ಮೇಲೆ ಬಿದ್ದರು. ಇಬ್ಬರೂ ಕಾದಾಡುವಾಗ ಎರಡೂ ಹಡಗುಗಳು ಮುಳುಗಿ, ಇದ್ದವರೆಲ್ಲರೂ ಜಲಸಮಾಧಿಯನ್ನು ಪಡೆದರು. ಅವರಲ್ಲಿ ಒಬ್ಬ ಮಾತ್ರ ಸಮುದ್ರದಲ್ಲಿಯೇ ಈಜಿಕೊಂಡು ಉಡುಪಿಯ ಬಳಿ ಕಾಪು ಎಂಬಲ್ಲಿಗೆ ಬಂದ. ಅವನು ಮಾಯವಾಗಿ ಬೊಬ್ಬರ್ಯ ಭೂತವಾದ. ಇವನ ಭೂತಸ್ಥಾನದಲ್ಲಿ ಸುಮಾರು ಎರಡಡಿ ಎತ್ತರದ ಮರದ ಪೀಠವೊಂದರ ಮೇಲೆ ನಾಲ್ಕಡಿ ಎತ್ತರದಷ್ಟು ಕಂಬವನ್ನು ನಿಲ್ಲಿಸಿ ಅದರ ಮೇಲೆ ತ್ರಿಕೋಣಾಕಾರದ, ತೆರೆದ ಬೊಕ್ಕಸವೊಂದನ್ನಿರಿಸಿರುತ್ತಾರೆ. ಇದೇ ಆ ಭೂತದ ಸಂಕೇತ. ಈ ಭೂತವು ಕೈಯಲ್ಲಿ ಗದೆಯನ್ನು ಹಿಡಿದು ಆನೆಯನ್ನೇರಿ ಬರುವುದೆಂದೂ ಅದರ ಬಂಟ ಭೂತವು ಕುದುರೆಯನ್ನು ಹತ್ತಿರುವುದೆಂದೂ ಕಲ್ಪನೆಯಿದೆ. ಭೂತದ ಮುಸಲ್ಮಾನ ಹಿನ್ನೆಲೆಯನ್ನು ಪಾತ್ರಿಯು ದರ್ಶನಕಾಲದಲ್ಲಿ ಧರಿಸುವ ಉದ್ದನೆಯ ಬಿಳಿಕುಲಾವಿ, ಮೊಣಕಾಲವರೆಗೆ ಬಟ್ಟೆ ಮೊದಲಾದುವು ತೋರಿಸುತ್ತವೆ.

ಭೂತಗಳಲ್ಲಿ ಬಗೆಬಗೆಯ ನೆಂಟೂ ಇರುವುದನ್ನೂ ಬೊಬ್ಬರ್ಯಯ ಕಥೆ ಸ್ಪಷ್ಟಪಡಿಸುತ್ತದೆ. ಎಲ್ಲ ಭೂತಗಳೂ ಘಟ್ಟವನ್ನು ಇಳಿದು ಬಂದುವೆಂದು ಒಂದು ಕಲ್ಪನೆಯಿದೆ. ಇದರಂತೆ, ಬೊಬ್ಬರ್ಯ ಭೂತ ಹಾಗೆ ಇಳಿದು ಬರುವಾಗ ಒಂದು ಕಾಲನ್ನು ಘಟ್ಟದಮೇಲೂ ಇನ್ನೊಂದನ್ನು ಸಮುದ್ರತೀರದಲ್ಲೂ ಇಟ್ಟು ಉಳಿದ ಭೂತಗಳೆಲ್ಲ ಘಟ್ಟವನ್ನಿಳಿಯುವಾಗ ತನ್ನ ಕಾಲುಗಳ ಕೆಳಗೆ ತೂರಿಕೊಂಡು ಹೋಗಬೇಕೆಂದು ಕಟ್ಟು ಮಾಡಿದ. ಜರಂದಾಯ ಎನ್ನುವ ಭೂತ ಅರಸುಭೂತ; ಅದು ಈ ಕೀಳು ಬೊಬ್ಬರ್ಯಭೂತದ ಕಾಲಕೆಳಗೆ ನುಸುಳಿಹೋಗುವುದು ಮರ್ಯಾದೆಯೆ? ಅದು ಒಂದು ಹಂಚಿಕೆಯನ್ನು ಹೂಡಿತು; ಕೊಡದಬ್ಬು ಎಂಬ ಇನ್ನೊಂದು ಭೂತದ ನೆರವನ್ನು ಪಡೆಯಿತು. ಕೊಡದಬ್ಬು ಬೊಬ್ಬರ್ಯಯ ಒಂದು ಕಾಲಿಗೆ ಗುರಿಯಿಟ್ಟು ಬಾಣ ಹೊಡೆಯಿತು; ಒಡನೆಯೇ ಬೊಬ್ಬರ್ಯ ಆ ಕಾಲನ್ನು ಮೇಲೆತ್ತಿಕೊಂಡಿತು. ಆ ಸಮಯವನ್ನು ಕಾದಿದ್ದ ಜರಂದಾಯ ಘಟ್ಟವನ್ನಿಳಿದು ಬಂದುಬಿಟ್ಟಿತು. ದರ್ಶನಸಮಯದಲ್ಲಿ ಬೊಬ್ಬರ್ಯಪಾತ್ರಿಯು ಇಂದಿಗೂ ಕುಣಿಯುವಾಗ ಕೆಲಸಮಯ ಒಂದು ಕಾಲಮೇಲೆ ನಿಂತೇ ನಿಲ್ಲುತ್ತಾನೆ. ಜರಂದಾಯ ಭೂತದ ನೇಮ ನಡೆಯುವಾಗ ಕೊಡದಬ್ಬುವಿಗೂ ಮನ್ನಣೆ ದೊರೆಯುತ್ತದೆ.

ಜರಂದಾಯೆ ಪಾಡ್ದನದಲ್ಲಿ ಬಿಳಿಕುದುರೆಯನ್ನೇರಿ ಬಿಳಿಕೊಡೆಯನ್ನು ಹಿಡಿದು ಅತ್ರೇಲ ನದಿಯನ್ನು ದಾಟಿ ಕೋಟೆಬಲೆ–ಬೆರ್ಮನೆಯ ಬೀಡಿಗೆ ಬಂದ ಕಥೆಯಿದೆ. ನದಿಯ ಬಳಿ ಬಂದಾಗ ಒಂದು ಮಂಗಳವಾರ ಮಧ್ಯಾಹ್ನವಾಗಿತ್ತು. ದೋಣಿಯನ್ನು ನಡೆಸುವ ಕುನ್ಯ 'ದೋಣಿ ಕೋಟೆಬೆಲೆ–ಬೆರ್ಮನೆಯದು; ಮಂಗಳ ವಾರ, ಭಾನುವಾರ ದೋಣಿ ನಡೆಸಕೂಡದೆಂದು ಅವನ ಅಪ್ಪಣೆಯಾಗಿದೆ' ಎಂದು ಹೇಳಿದ. ಆದರೂ ಜರಂದಾಯೆ ಅವನನ್ನು ಬಲಾತ್ಕರಿಸಿ, ದೋಣಿಯನ್ನೇರಿ ನದಿಯನ್ನು ದಾಟುತ್ತಿರುವಾಗ, ನಡುವೆ ದೋಣಿ ಗಿರ್ರನೆ ತಿರುಗತೊಡಗಿತು; ಜರಂದಾಯೆ ಕುನ್ಯನನ್ನು ಕೊಂದು ನದಿಯಲ್ಲಿ ಅವನ ಹೆಣವನ್ನೆಸೆದು, ದಡಮುಟ್ಟಿ, ಕೋಟೆಬಲೆ ಬೆರ್ಮನೆಯ ದೇಹದಲ್ಲಿ ಸೇರಿಕೊಂಡು ಉಪದ್ರವ ಕೊಡಲಾರಂಭಿಸಿದ. ಮಯ್ಯ–ಬೆರ್ಮನೆಯೆಂಬ ಜೋಯಿಸ ಪ್ರಶ್ನೆಯನ್ನು ನೋಡಿ ಭೂತ ಬಂದ ಸಂಗತಿಯನ್ನು ತಿಳಿಸಿದ ಮೇಲೆ ಜರಂದಾಯೆ ಭೂತಕ್ಕೆ ಎಮ್ಮೆಯೊಂದನ್ನು ಅದರ ಮರಿಯೊಂದಿಗೆ ಬಲಿಕೊಟ್ಟು ಸಮಾಧಾನ ಪಡಿಸಲಾಯಿತು. ಈ ಭೂತವನ್ನು ಸ್ಥಾನದಲ್ಲಿ ಮಾತ್ರವಲ್ಲದೆ ಕೊಟ್ಟಿಗೆಗಳಲ್ಲಿಯೂ ಚಾವಡಿಗಳಲ್ಲಿಯೂ ಇರಿಸಿಕೊಳ್ಳುವ ವಾಡಿಕೆಯಿದೆ. ಜರಂದಾಯೆಗೆ ಜುಮಾದಿ–ಬಂಟೆಯೆಂಬ ಮೂಕಭೂತವು ಬಂಟನೆಂದೂ ನಂಬಿಕೆಯಿದೆ.

ಜುಮಾದಿಭೂತವು ಮುಗೇರನಾಡಿನಿಂದ ಬಂಟವಾಳ, ಬೆಂಜನ, ಅಮ್ಮುಂಜೆ, ಪುರಾಳ ಮೊದಲಾದ ಸ್ಥಳಗಳಲ್ಲಿ ಮನ್ನಣೆ ಪಡೆದು ಸಂಪಿಂಜೆಬೀಡಿಗೆ ಬಂದಿಳಿದು, ಅಲ್ಲಿ ಸ್ಥಾನವನ್ನು ಪಡೆಯಿತೆಂದು ಪಾಡ್ದನ ತಿಳಿಸುತ್ತದೆ. ಅದೂರಿನ ದೇರೆ–ಬೈದ್ಯ ಕೋಳಿಕಾಳಗಕ್ಕೆಂದು ಪುರಾಳಕ್ಕೆ ಹೊರಟವನು, ತಾನು ಗೆಲ್ಲುವುದಾದರೆ ಜುಮಾದಿಭೂತಕ್ಕೆ ಮೊದಲ ಹುಂಜವನ್ನು ಒಪ್ಪಿಸುವುದಾಗಿ ಹರಕೆ ಹೊತ್ತನು. ಆದರೆ ಗೆದ್ದು ಹಿಂದಿರುಗಿ ಬರುವಾಗ, ನದಿಯನ್ನು ದೋಣಿಯಲ್ಲಿ ದಾಟಿಸಿದವನಿಗೆ ಮೊದಲ ಹುಂಜವನ್ನು ಕೊಟ್ಟು, ಜುಮಾದಿಗೆ ತಾನು ಹೊತ್ತಿದ್ದ ಹರಕೆಯನ್ನು ಮರೆತೇಬಿಟ್ಟ. ದೋಣಿಯನ್ನು ನಡೆಸುವವನು ಅಡುಗೆಗೆಂದು ಹುಂಜವನ್ನು ಕೊಲ್ಲಲು, ಅದು ಮತ್ತೆ ಜೀವತಳೆದು ಹಾರಿಹೋಗಿ ದೇರೆ–ಬೈದ್ಯನ ಮನೆಯ ಮೇಲೆ ಕುಳಿತು ಕೂಗಿತು. ಆ ವೇಳೆಗಾಗಲೇ ದೇರೆ–ಬೈದ್ಯ ಬೇನೆ ಬಂದು ಹಾಸಿಗೆ ಹಿಡಿದಿದ್ದ. ಅವನ ತಂಗಿ ದೇಬೆಗೆ ಕನಸಿನಲ್ಲಿ ಜುಮಾದಿ ಕಾಣಿಸಿಕೊಂಡು ಹರಕೆಯ ಸಂಗತಿಯನ್ನು ತಿಳಿಸಿತು. ಅದೂರ ಭೂತಸ್ಥಾನದಲ್ಲಿ ಹುಂಜವನ್ನು ಒಪ್ಪಿಸಿದ ಮೇಲೆ ದೇರೆ–ಬೈದ್ಯನ ಬೇನೆ ಗುಣವಾಯಿತು.

ಪಂಜುರ್ಲಿಭೂತಕ್ಕೆ ಸಂಬಂಧಿಸಿದ ಪಾಡ್ದನದಲ್ಲಿ ಹೆಣ್ಣುಹಂದಿಯೊಂದು ಒಂದು ಗಂಡು, ಒಂದು ಹೆಣ್ಣು ಹೀಗೆ ಎರಡು ಮರಿಗಳನ್ನು ಹೆತ್ತು, ಆ ಮರಿಗಳು ಘಟ್ಟವಿಳಿದು ಬಂದ ಕಥೆಯಿದೆ. ಘಟ್ಟದ ಸುಬ್ರಾಯ ದೇವರನ್ನು ಪೂಜಿಸುವ ಸಲುವಾಗಿ ಬರುತ್ತ ಈ ಮರಿಗಳು ಗಂಡ–ಹೆಂಡರಾಗಿ ಕೂಡಿಕೊಂಡರು; ಮರಿಗಳಾದುವು. ಗಂಡು ಹಂದಿ ಆಹಾರ ತರಲು ಹೋಗಿದ್ದಾಗ, ಹಂದಿಮರಿಗಳು ಈಶ್ವರನ ಉದ್ಯಾನವನ್ನು ಹೊಕ್ಕು ಗಿಡಗಳೆನ್ನೆಲ್ಲ ನಾಶಮಾಡಿದುವು. ಕೋಪಗೊಂಡ ಈಶ್ವರ ತಾಯಿ ಹಂದಿಯನ್ನು ಕೊಂದ; ಈಶ್ವರನ ಹೆಂಡತಿ (ಪಾರ್ವತಿ) ತಾಯಿಯಿಲ್ಲದ ಮರಿಗಳ ಮೇಲೆ ಕನಿಕರಗೊಂಡು ಅವನ್ನು ಸಾಕಿದಳು. ಕೆಲವು ದಿನಗಳು ಕಳೆದಮೇಲೆ ಈ ಹಂದಿಮರಿಗಳು ಮತ್ತೆ ಉದ್ಯಾನವನ್ನು ಹಾಳುಮಾಡಿದುವು. ಈಶ್ವರನು ಸಿಟ್ಟಾಗಿ ಅವನ್ನು ಕೊಲ್ಲಲೆತ್ನಿಸಿದಾಗ ಪಾರ್ವತಿ ತಡೆದಳು. ಈಶ್ವರನು 'ನೀವು ಇನ್ನುಮುಂದೆ ಪಂಜಿ (ತುಳುಮಾತಿನಲ್ಲಿ ಹಂದಿ) ಗಳಲ್ಲ, ಪಂಜುರ್ಲಿಗಳು!' ಎಂದು ಶಾಪವಿತ್ತ. ಅವು ಭೂತಗಳಾಗಿ ಭೂಲೋಕಕ್ಕೆ ಬಂದುವು.

ಭೂತಗಳನ್ನು ಒಲಿಸಿಕೊಳ್ಳಲು ಬಗೆಬಗೆಯ ಪೂಜೆಗಳನ್ನು ಮಾಡುವ ಬಳಕೆಯಿದೆ. ಕೆಲವು ಸಾತ್ತ್ವಿಕ ದೈವಗಳಿಗೆ ಕೈಮುಗಿದು ಅರಳು, ಸೀಯಾಳ, ಬಾಳೆಹಣ್ಣುಗಳನ್ನು ಮುಂದಿಟ್ಟರೆ ಸಾಕು. ಹಟ್ಟಿಯ

ಬುಡದಲ್ಲಿರುವ ಕೊರಗು ಭೂತಕ್ಕೆ ಹಸುವಿನ ಹಾಲು ಕರೆದೊಡನೆ ನೊರೆಯನ್ನು ಎಡೆಯಿಟ್ಟರೆ ಮುಗಿಯಿತು; ಅದೇ ಭೂತ ತಾಳೆಯ ಮರದಡಿಯಲ್ಲಿದ್ದರೆ ಮರದಿಂದ ಕಳ್ಳು ಇಳಿಸುವಾಗ ಅದರ ನೊರೆಯನ್ನು ತೆಗೆದು ಒಂದು ಎಲೆಯಮೇಲೆ ಇರಿಸುವರು. ಜೋಗಿಪುರುಷಭೂತವಾದರೆ ಬಂಗಿ ಕೊಡಬೇಕು. ಕಿಜ್ಞಣ್ಣ ಶಾಸ್ತಾವು, ಸನ್ನಗುಳಿಗೆ ಮೊದಲಾದ ಭೂತಗಳಿಗೆ ಕೋಳಿ, ಅನ್ನ, ಹಂದಿಗಳ ಎಡೆ ಇಷ್ಟ; ಪುಲಿಭೂತಕ್ಕೆ ಅವಲಕ್ಕಿ–ಕೊಬ್ಬರಿ; ಬಾಗಿಲ ಬೊಬ್ಬರ್ಯೆಗೆ ಕಡಬು; ಕೋಟಿ—ಚೆನ್ನಯರಿಗೆ ಪಂಚಕಜ್ಜಾಯ, ಪಣ್ಯಾರ, ಬೆಲ್ಲ–ಅವಲಕ್ಕಿ, ಬಾಳೆಹಣ್ಣು. ಹಲವು ಭೂತಗಳಿಗೆ ಪಶುಬಲಿಯೂ ಸಲ್ಲುತ್ತದೆ. ಇದು ಅಸುರಕ್ರಿಯೆಯೆನಿಸಿಕೊಳ್ಳುತ್ತದೆ. ಪಂಜುರ್ಲಿ, ರಕ್ತೇಶ್ವರಿ, ಜುಮಾದಿ ಮೊದಲಾದ ಭೂತಗಳಿಗೆ ಕೋಳಿ, ಕುರಿ, ಮೊದಲಾದುವನ್ನು ಬಲಿಗೊಡುತ್ತಾರೆ. ಕುಂಡೋದರ ಭೂತಕ್ಕೆ ನರಬಲಿಯೂ ಸಲ್ಲುತ್ತಿದ್ದಿತಂತೆ. ಬಾರಕೂರಿನ ಬಳಿ ಹಿರಿಯಡ್ಕದ ವೀರಭದ್ರ ಗುಡಿಯಲ್ಲಿ ಕುಂಡೋದರನೆದುರು ಸಿಡಿಸೇವೆ ನಡೆಯುತ್ತಿದ್ದಿತು. ಭೂತಗಳಿಗೆ ಎಡೆಯಿಟ್ಟ ಆಹಾರವನ್ನು ಜನರಿಗೆ ಪ್ರಸಾದವೆಂದು ಹಂಚುತ್ತಾರೆ; ಆದರೆ ಅಂಥ ಆಹಾರದಲ್ಲಿ ರುಚಿಯಾಗಲೀ ಸತ್ತ್ವವಾಗಲೀ ಇರುವುದಿಲ್ಲವಂತೆ; ಏಕೆಂದರೆ ಭೂತ ಅದನ್ನು ಆಗಲೇ ಉಂಡಿರುವುದೆಂದು ಕಲ್ಪನೆ.

ಹೀಗೆ ಭೂತಗಳಿಗೆ ಎಡೆಯಿಡುವುದು ಮಾತ್ರವಲ್ಲದೆ ಮನೆಯಲ್ಲಿನ ಕೊಟ್ಯದಲ್ಲಿಯೂ ಭೂತಸ್ಥಾನಗಳಲ್ಲಿಯೂ ದಿನವೂ ಹಿತ್ತಾಳೆ ಗಿಂಡಿಯಲ್ಲಿ ನೀರಿಟ್ಟು, ಹಣತೆಯಲ್ಲಿ ದೀಪ ಹಚ್ಚಿಡುವುದು ವಾಡಿಕೆ. ಇದು ನಿತ್ಯಕ್ರಿಯೆಯಾದರೆ ಕಾಲ ಕಾಲಕ್ಕೆ, ಸಂದರ್ಭಾನುಸಾರ, ಅಥವಾ ಅಗತ್ಯಕ್ಕೆ ಅನುಕೂಲಕ್ಕೆ ತಕ್ಕಂತೆ ನೈಮಿತ್ತಿಕ ಕ್ರಿಯೆಗಳೂ ಭೂತಸ್ಥಾನಗಳಲ್ಲಿಯೂ ಮನೆಗಳಲ್ಲಿಯೂ ನಡೆಯುತ್ತವೆ. ಇವುಗಳಲ್ಲಿ ಅಗೆಲು–ತಂಬಿಲ, ನೇಮ, ಕೋಲ, ಬಂಡಿ, ಒತ್ತೆಕೋಲ, ಡಕ್ಕೆಬಲಿ, ಆಯನ, ಮೆಚ್ಚಿ, ನಾಗಮಂಡಲ ಎಂದು ಭೇದಗಳಿವೆ. ಇವುಗಳ ವಿವರಗಳ ಪ್ರಸ್ತಾಪ ಇಲ್ಲಿ ಅಗತ್ಯವಿಲ್ಲ. ಮುಖ್ಯವಾದ ಅಂಶವೆಂದರೆ ಭೂತಗಳ ಪಾತ್ರವನ್ನು ಮನುಷ್ಯರಲ್ಲಿ ನಿರ್ವಹಿಸುವುದು.

ಕೆಲವು ಪರಿಶಿಷ್ಟವರ್ಗದ ಜನರು ಹೀಗೆ ಭೂತ ಕಟ್ಟುವುದರಲ್ಲಿ ನಿಪುಣರು. ಭೂತದ ಆವೇಶವನ್ನು ತಳೆಯುವ ವ್ಯಕ್ತಿಗೆ 'ಪಾತ್ರಿ'ಯೆಂದು ಹೆಸರು. ಯಾರೆಂದರೆ ಅವರು ಪಾತ್ರಿಯಾಗುವ ಹಾಗಿಲ್ಲ; ಭೂತ ಅವರನ್ನು ಒಪ್ಪಿಕೊಂಡಿದೆಯೆಂದು ಸೂಚಿಸಲು ಕೆಲವು ಲಕ್ಷಣಗಳಿರುತ್ತವೆ. ಅವರ ಬದುಕಿನಲ್ಲಿ ವಿಧಿ—ನಿಷೇಧಗಳು ಹೆಚ್ಚು. ಪಾತ್ರಿಯಾಗುವವನು ಗೃಹಸ್ಥನಾಗಿರಬೇಕು. ಕೂದಲನ್ನು ಕತ್ತರಿಸದೆ ಬಿಟ್ಟು ಹಿಂದುಗಡೆ ಗಂಟುಹಾಕಿಕೊಳ್ಳುತ್ತಾನೆ; ಗಡ್ಡ–ಮೀಸೆಗಳನ್ನು ಬಿಡುವುದಿಲ್ಲ. ಕೆಲವು ಕಡೆ ಪಾತ್ರಿಯು ಹಳ್ಳಿಯ ಗಡಿಯನ್ನು ಮೀರಿ ಹೋಗಬಾರದೆಂದೂ, ನದಿಯನ್ನು ದಾಟಬಾರದೆಂದೂ, ಭೂಮಿಯನ್ನು ಉಳಬಾರದೆಂದೂ, ಹೊಲಿದ ಬಟ್ಟೆಯನ್ನು ತೊಡಬಾರದೆಂದೂ ನಿಯಮಗಳಿವೆ. ಅವರ ವರ್ಗದಲ್ಲಿ ವಾಡಿಕೆಯಿಲ್ಲದಿದ್ದರೂ ದಿನವೂ ಸ್ನಾನಮಾಡುವುದು ಇವರಿಗೆ ಮಾತ್ರ ಅಗತ್ಯ. ಮನೆಯಲ್ಲಿ ಮುಟ್ಟಾದ ಹೆಂಗಸರನ್ನು ಮುಟ್ಟಿಸಿಕೊಳ್ಳದೆ, ಅವರು ಮಾಡಿದ ಅಥವಾ ಮುಟ್ಟಿದ ಅಡುಗೆಯನ್ನು ಉಣ್ಣದೆ, ಅವರೊಂದಿಗೆ ಮಾತನಾಡದೆ ಇರುವ ನಿಷೇಧಗಳೂ ಇರುತ್ತವೆ. ಭೂತಸ್ಥಾನದ ನಿರ್ವಾಹಕರು ತನಗೆಂದು ಕೊಟ್ಟ ಬೆಳ್ಳಿ ಉಡಿದಾರ, ಬಂಗಾರದ ಸರ, ಬಂಗಾರದ ಅಥವಾ ಮತ್ತಾವುದಾದರೂ ಲೋಹದ ಕೈಕಡಗ ಇವನ್ನು ಆತ ಧರಿಸಿರುತ್ತಾನೆ. ಕೆಲವು ಪಾತ್ರಿಗಳು ಬರಿಯ ಭೂತಕಟ್ಟುವುದಷ್ಟನ್ನೇ ಮಾಡುತ್ತಾರೆ; ಬೇರೆ ಯಾವ ಉದ್ಯೋಗವನ್ನೂ ಹಿಡಿಯುವುದಿಲ್ಲ. ಸಮಾಜದಲ್ಲಿ ಪರಿಶಿಷ್ಟವರ್ಗಕ್ಕೆ ಸೇರಿದವರಾದರೂ ಅವರಿಗೆ ಮರ್ಯಾದೆ ಹೆಚ್ಚು.

ಭೂತ ಕಟ್ಟುವ ಸಮಯದಲ್ಲಿ, ಮೊದಲು ಒಂದೆರಡು ದಿನಗಳಿಂದಲೂ ಅವರು ದಿನವಿಡೀ ಶುದ್ಧವಿರುತ್ತಾರೆ. ಸ್ತ್ರೀಸಂಗ, ಮಾಂಸಭೋಜನಗಳೆರಡನ್ನೂ ಬಿಟ್ಟು, ಹೆಚ್ಚು ಸಮಯವನ್ನು ಏಕಾಂತದಲ್ಲಿಯೇ ಕಳೆಯುತ್ತ, ಪಾಡ್ದನಗಳನ್ನು ತಮ್ಮಷ್ಟಕ್ಕೆ ತಾವೇ ಮೆಲಕು ಹಾಕುತ್ತ ಭೂತದೊಂದಿಗೆ ಸಂಪರ್ಕವನ್ನು ಬೆಳೆಸಿಕೊಳ್ಳುತ್ತಾರೆ. ಭೂತ ಕಟ್ಟುವ ದಿನವಂತೂ ನಿರಶನವ್ರತವೇ, ಪಾತ್ರಿಯು ಅಂತರ್ಮುಖಿಯೇ. ಅವನ ವ್ಯಕ್ತಿತ್ವದಲ್ಲಿಯೇ ಮಹತ್ತ್ವದ ಮಾರ್ಪಾಟು ಒದಗುವುದನ್ನು ಯಾರಾದರೂ ಕಾಣಬಹುದು. ಭೂತ ತನ್ನಲ್ಲಿ ತೋರಿಸಿಕೊಳ್ಳಲು, ತನ್ನ ಮೂಲಕ ಮಾತನಾಡಲು, ತನ್ನಿಂದಲೇ ಕಾರಣಿಕವನ್ನು ತೋರಿಸಲು ತನ್ನನ್ನು ತಾನು ಸಿದ್ಧಮಾಡಿಕೊಳ್ಳುವನು. ಪಾತ್ರಿಯಾಗಿ ಸೇರುವಾಗಲೇ ಕುಂಬಳಕಾಯಿಯನ್ನು ಒಡೆದು, ಬಟ್ಟೆಯನ್ನು ಹರಿಯುವ ಒಂದು ವಿಧಿಯಿರುತ್ತದೆ. ತನ್ನ ಸಾಮಾನ್ಯ ಬದುಕನ್ನು ಭೂತಕ್ಕಾಗಿ ಬಿಟ್ಟುಕೊಟ್ಟ ಸಂಕೇತ ಇದು.

ಸಾಮಾನ್ಯವಾಗಿ ಪಾತ್ರಿಗಳು ಪಂಬಡ, ನಲ್ಕೆ, ಪರವ, ಕೊರಗ, ಮೂಲ್ಯ ಮೊದಲಾದ ಪರಿಶಿಷ್ಟ ವರ್ಗಗಳಿಗೆ ಸೇರಿದವರು; ನಾಗಮಂಡಲದಲ್ಲಾದರೆ ಬ್ರಾಹ್ಮಣರು ಪಾತ್ರಿಗಳಾಗುತ್ತಾರೆ. ಭಂಡಾರಮನೆಯಿಂದ ಭೂತಭಂಡಾರವನ್ನು (ಎಂದರೆ ಭೂತಕಟ್ಟಲು ಬೇಕಾದ ಮೊಗ, ಕಡ್ತಲೆಕತ್ತಿ, ಘಂಟೆ, ಚಾಮರ, ಒಡವೆ, ತಲೆಕಟ್ಟು, ತಾಳಿಮಣಿ, ಸರ, ಬಳೆ, ನಡುಪಟ್ಟಿ ಮೊದಲಾದ ಸಾಮಗ್ರಿಗಳು) ಆರಾಧನೆ ನಡೆಯುವ ತಾಣಕ್ಕೆ ಒಯ್ಯುವಾಗ, ಭಂಡಾರವನ್ನಿಟ್ಟ ಪಲ್ಲಕ್ಕಿಯೊಂದಿಗೆ ಹೋಗುವ ವ್ಯಕ್ತಿ ಆವೇಶವನ್ನು ತಳೆಯುವುದಕ್ಕೆ 'ಭೂತದ ಮಾನಿ' ಎನ್ನುತ್ತಾರೆ. ಇದನ್ನು ತಳೆಯುವವರು ಬಿಲ್ಲವ, ಬಂಟ, ಗೌಡ, ಮೂಲ್ಯ ಮೊದಲಾದ ಪಂಗಡದವರು. ಎಡಗೈಯಲ್ಲಿ ಕತ್ತಿಯನ್ನೂ, ಬಲಗೈಯಲ್ಲಿ ಹಿತ್ತಾಳೆ ಗಂಟೆಯನ್ನೂ ಹಿಡಿದಿರುತ್ತಾರೆ; ಎಡಗೈಕೆಳಗೆ ಚಾಮರ ಇಳಿದುಬಿದ್ದಿರುತ್ತದೆ. ಭೂತದ ತಾಣ ಮುಟ್ಟುವವರೆಗೆ ಮಾತ್ರ ಇವರ ಆವೇಶ. ಭೂತಸ್ಥಾನದಲ್ಲಿ ಆ ವೇಳೆಗಾಗಲೇ ಪಾತ್ರಿ ಸಿದ್ಧನಾಗಿದ್ದು ಭಂಡಾರ ಬರುವುದನ್ನು ಎದುರುನೋಡುತ್ತಿರುತ್ತಾನೆ; ಏಕೆಂದರೆ ಭಂಡಾರ ಬಾರದೆ ಆರಾಧನೆ ನಡೆಯುವಂತಿಲ್ಲ. ಭೂತಸ್ಥಾನದ ಎದುರು ಮಾನಿಯನ್ನು ತಳೆದವರೂ ಆವೇಶವನ್ನು ಆಗಲೇ ಪಡೆದ ಪಾತ್ರಿಯೂ ಕಲೆತು, ಕೆಲ ವಿಧಿಗಳು ನಡೆದನಂತರ ಮಾನಿಯು ಪಾತ್ರಿಗೆ ಪೂರ್ಣ ವಾಗಿ ವರ್ಗವಾಗುತ್ತದೆ. ಅಲ್ಲಿಂದ ಮುಂದೆ ಪಾತ್ರಿಯೇ ಪ್ರಮುಖ, ಅವನೇ ಭೂತದ ಪ್ರತಿನಿಧಿ. ಮೊದಲು ಮಾನಿಯನ್ನು ತಳೆದವರೂ ಆರಾಧನೆ ಮುಗಿಯುವವರೆಗೂ ಪಾತ್ರಿಯ ಬಳಿಯೇ ಇರುತ್ತಾರೆ; ಆದರೆ ಈಗ ಅವರಿಗೇನು ಆವೇಶ ಇರುವುದಿಲ್ಲ. ಭೂತದ 'ದರ್ಶನ' ಮುಗಿದು, ನುಡಿಕಟ್ಟೂ ನಡೆದು ಪಾತ್ರಿಗೆ ಆವೇಶ ಇಳಿಯುವಾಗ ಈ ಮಾನಿಯವರಿಗೆ ಮತ್ತೆ ಭೂತದ ಸಾನ್ನಿಧ್ಯ ಒದಗುತ್ತದೆ. ಭಂಡಾರವನ್ನು ಮತ್ತೆ ಗುರಿಕಾರನಿಗೋ, ಮೊಕ್ತೇಸರನಿಗೋ ಒಪ್ಪಿಸಿಬಿಟ್ಟರೆ ಅವರ ಕೆಲಸ ಮುಗಿಯಿತು.

ಭೂತಾರಾಧನೆಯಲ್ಲಿ ಪ್ರಮುಖಪಾತ್ರ ಪಾತ್ರಿಯದೇ. ಪಾತ್ರಿಯ ವೇಷಭೂಷಣಗಳು ಪ್ರಾಚೀನ ನೆಲೆಯನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆ. ಮುಖಕ್ಕೆ ಬಳಿದುಕೊಳ್ಳುವ ಬಣ್ಣ, ತಲೆಕಟ್ಟು, ಅಣಿ, ಎದೆಗೆ ಕವಚ, ಸರಗಳು, ನಡುಕಟ್ಟುಪಟ್ಟಿ, ಚಲ್ಲಣಗೆಜ್ಜೆ, ಗಗ್ಗರ, ಕೈಬಳೆಗಳು ಮತ್ತು ತೊಡುವ ಮೊಗವಾಡ ಇವೆಲ್ಲವೂ ಪಾತ್ರಿಗೆ ವಿಶಿಷ್ಟವಾದುವು. ನಾಗಮಂಡಲದಲ್ಲಿ ಮಾತ್ರ ಬ್ರಾಹ್ಮಣ ಪಾತ್ರಿಯು ಇವೆಲ್ಲ ಯಾವ ಕಲಾಪವೂ ಇಲ್ಲದೆ ಬರಿಯ ಕೆಂಪುಮಡಿ ಕಚ್ಚೆಪಂಚೆಯನ್ನುಟ್ಟು ಕೆಲಸವನ್ನು ನಿರ್ವಹಿಸುತ್ತಾನೆ. ಅವನ ಕೈಗಳಲ್ಲಿ ಅಡಕೆ ಹೂ (ಪಿಂಗಾರ ಅಥವಾ ಹಿಂಗಾರ) ಗಳಿರುತ್ತವೆ ಅಷ್ಟೆ.

ನಾಗಮಂಡಲದಲ್ಲಿ ಪ್ರಾಚೀನ ಭೂತಾರಾಧನೆಯ ವಿವರವೇ ಮುಖ್ಯರಸವಾದರೂ ಅದರ ಮೇಲೆ ಆರ್ಯಸಂಸ್ಕೃತಿಯಿಂದ ಎತ್ತಿಕೊಂಡ ವಿವರಗಳು ಸಮರಸವಾಗಿ ಬೆರೆತು ಬಂದಿವೆ. ಭೂತಾರಾಧನೆಯಲ್ಲಿ ಪಾತ್ರಿಯ ನುಡಿಕಟ್ಟು ತುಳುವಿನಲ್ಲೇ ನಡೆಯುತ್ತದೆ; ಪಾಡ್ದನಗಳೂ ತುಳುಭಾಷೆಯಲ್ಲಿಯೇ ಇರುತ್ತವೆ. ಇದು ತೌಳವಸಂಸ್ಕೃತಿಯ ಪ್ರತೀಕವೆಂದರೆ ನಾಗಮಂಡಲ ಕನ್ನಡ ಹೆಚ್ಚಾಗಿ ಬಳಕೆಯಲ್ಲಿರುವೆಡೆ ನಡೆಯುವ ಕ್ರಿಯೆ. ಬಯಲಿನ ನಡುವೆ ಸಾವಿರಾರು ಮಂದಿ ಕೂಡುವಂತೆ ಚಪ್ಪರ ಹಾಕಿ, ಅಲ್ಲಿ ನೆಲದ ಮೇಲೆ ಹಳದಿ, ಕೆಂಪು, ಕಪ್ಪು, ಬಿಳುಪು, ಹಸಿರು, ಹಳದಿ ಬಣ್ಣದ ಹುಡಿಗಳಿಂದ ವೃತ್ತಾಕಾರವಾಗಿ ನಾಗಮಂಡಲದ ರಂಗವಲ್ಲಿಯನ್ನು ರಚಿಸುತ್ತಾರೆ. ಪವಿತ್ರದ ಗಂಟಿನಂತೆ ಇರುವ ಸುರುಳಿಗಳು ನಾಲ್ಕಿದ್ದರೆ ಅದು ಕಾಲುಮಂಡಲ, ಎಂಟಿದ್ದರೆ ಅರ್ಧಮಂಡಲ, ಹದಿನಾರಿದ್ದರೆ ಪೂರ್ಣಮಂಡಲ. ಮಂಡಲದ ನಡುವೆ ಏಳುಹೆಡೆಗಳ ಹಾವಿನ ಮುಖವನ್ನು ತಿದ್ದಿ, ಅದರ ಮೇಲ್ಭಾಗದಲ್ಲಿ ಮನುಷ್ಯನ ಮುಖವನ್ನು ಬಿಡಿಸುತ್ತಾರೆ. ತುಂಬ ಕಲಾತ್ಮಕವಾಗಿ, ಚಾತುರ್ಯದಿಂದ ರಚಿಸುವ ಈ ಮಂಡಲವು ಐದಾರು ಜನರಿಗೆ ಐದಾರು ಗಂಟೆಗಳ ಕಾಲ ಹಿಡಿಸುತ್ತದೆ. ಈ ನಾಗಮಂಡಲದ ಸುತ್ತ ಅಡಿಕೆಹೂವನ್ನು ರಾಶಿರಾಶಿಯಾಗಿ ಹಾಕಿರುತ್ತಾರೆ; ಇದನ್ನು ಹಿಂಗಾರ, ಪಿಂಗಾರ, ಸಿಂಗಾರ ಎಂದು ಕರೆಯುವುದುಂಟು. ಪಾತ್ರಿಗೆ ಆವೇಶಬಂದಾಗ ಇದನ್ನು ಕೇಳುತ್ತಲೇ ಇರುತ್ತಾನೆ; ಅವನು ಕೇಳಿದಾಗಲೆಲ್ಲ ಕೊಡುತ್ತಲೇ ಇರಬೇಕು. ಅವನು ಅದನ್ನು ಕೈಗೆತ್ತಿಕೊಂಡು ಮೂಸಿ ಕೆಳಗೆ ಒಗೆಯುತ್ತಾನೆ; ಅದನ್ನು ಮತ್ತೆ ಬಳಸುವಂತಿಲ್ಲ; ಮಂಡಲಪೂಜೆ ಮುಗಿದಮೇಲೆ, ಬಂದವರಿಗೆಲ್ಲ ಪ್ರಸಾದವಾಗಿ ಹಂಚಲು ಬರುತ್ತದೆ, ಅಷ್ಟೆ. ಮಂಡಲದ ನಡುವೆ ಕಳಶ ಇಟ್ಟಿರುತ್ತಾರೆ. ಈ ಕಳಶವನ್ನು ಸುತ್ತರಿದುಕೊಂಡೇ ನಾಗ ಮಂಡಲ ನೃತ್ಯ ನಡೆಯುವುದು.

ಇಲ್ಲಿ ಪಾತ್ರಿಯು ಬ್ರಾಹ್ಮಣವರ್ಗಕ್ಕೆ ಸೇರಿರುವುದು ವಿಶೇಷ. ಹಾಗೆಂದೇ ಮಂಡಲಪೂಜೆ ಮೊದಲಾಗುವಾಗ ಗಣಹೋಮ, ಚಂಡೀಹೋಮ, ಕೂಷ್ಮಾಂಡಹೋಮ ಮೊದಲಾದುವು ನಡೆಯುತ್ತವೆ. ನಾಗಬನದಲ್ಲಿ ನಾಗಕಲ್ಲುಗಳಿಗೆ 'ಹಾಲಕ್ಕಿ' ಸೇವೆಯನ್ನು ಮಾಡಿದನಂತರ ಪಾತ್ರಿಯು ಇಬ್ಬರು 'ವೈದ್ಯ'ರೊಂದಿಗೆ ಆವೇಶ ತಳೆಯುತ್ತಾನೆ. ವೈದ್ಯರು ಡಕ್ಕೆ ಹಿಡಿದು ಬಡಿಯುತ್ತ ಹಾಡುವವರು; ಅದೊಂದು ಜನಾಂಗದ ಹೆಸರು. ಅವರ ವೇಷ ವಿಚಿತ್ರವಾಗಿರುತ್ತದೆ. ತಲೆಯಮೇಲೆ ತುರಾಯಿ ಮೂಡಿಸಿದ ಮುಂಡಾಸು, ಭುಜದ ಮೇಲೆ ಮಡಿಸಿ ಇಳಿಬಿದ್ದ ಶಾಲು, ಚಲ್ಲಣ ಇವೆಲ್ಲ ಗಂಡುವೇಷವಾದರೆ ಹಣೆಗೆ ಕುಂಕುಮದ ಬೊಟ್ಟನಿಟ್ಟು, ರವಿಕೆ ತೊಟ್ಟು, ಚಲ್ಲಣದ ಮೇಲೆ ಸೀರೆಯನ್ನುಟ್ಟು, ಕೊರಳಿಗೆ ಗುಂಡುಸರ ಹಾಕಿಕೊಂಡು, ಸೊಂಟಪಟ್ಟಿ, ಗೆಜ್ಜೆ, ಬಳೆಗಳನ್ನು ಧರಿಸಿ ಹೆಣ್ಣುಗಳಂತೆಯೂ ಕಾಣುತ್ತಾರೆ. ವಾಡಿಕೆಯಲ್ಲಿ ಇದನ್ನು ಅರ್ಧನಾರೀಶ್ವರ ವೇಷ ಎನ್ನುತ್ತಾರೆ. ಡಕ್ಕೆ ಬಡಿದು ಹಾಡುತ್ತ ಪಾತ್ರಿಯನ್ನು ಕೆರಳಿಸುವುದು ಇವರ ಕೆಲಸ; ನಾಗವನ್ನು ಹೀನಾಯವಾಗಿ ಕಾಣುವಂತೆ ಹಾಡು ಇರುತ್ತದೆ. ಇದರಿಂದ ಕೆರಳಿದ ಪಾತ್ರಿಗೆ ಆವೇಶಬಂದು ನಾಗವನ್ನು ಅನುಕರಿಸಿ ಮೈಯಾಡಿಸುತ್ತ, ಬುಸುಗುಟ್ಟುತ್ತ ನೃತ್ಯಮಾಡತೊಡಗುತ್ತಾನೆ. ಅವನನ್ನು ಹಿಂಬಾಲಿಸಿ ವೈದ್ಯರೂ ಮಂಡಲದ ಸುತ್ತ ಓಡಿಯಾಡುತ್ತಾರೆ. ಕಡೆಗೆ ನಾಗವನ್ನು ಹೊಗಳುವ ಹಾಡು ಅವರ ಬಾಯಿಂದ ಬರುತ್ತದೆ. ಹೀಗೆ ನಾಗಸಂತೃಪ್ತಿಯಾಗಲು ರಾತ್ರಿಯೆಲ್ಲ ನೃತ್ಯ ನಡೆದು ಮುಂಜಾನೆ ಮುಗಿಯುತ್ತದೆ. ವೈದ್ಯರು ಹಾಡುವ ಹಾಡಿನಲ್ಲಿ ನಾಗದ ಮೆಚ್ಚಿಗೆ ಮಾತ್ರವಲ್ಲದೆ ವಿಷ್ಣು, ಕೃಷ್ಣ ಮೊದಲಾದ ದೇವತೆಗಳ ಪ್ರಶಂಸೆಯೂ ಬರುತ್ತದೆ.

ನಾಗಪೂಜೆಯ ನಿಮಿತ್ತವಾಗಿ ನಡೆಯುವ ವಿಧಿಗಳಲ್ಲಿ ಕಲ್ಲುಹಾಕಿಸುವುದು, ಹಾಲೆರೆಯುವುದು, ತಂಬಿಲಮಾಡಿಸುವುದು, ದರ್ಶನ ಬರಿಸುವುದು, ಡಕ್ಕೆಬಲಿ, ನಾಗಮಂಡಲ ಇವೆಲ್ಲ ಸೇರುತ್ತವೆ. ನಾಗನಿಗೆ

ಡಕ್ಕೆಬಲಿ ಮಾಡಿಸುವಾಗ ನಾಗಮಂಡಲವನ್ನು ರಚಿಸುತ್ತಾರೆ. ಕೆಲವು ಭೂತಗಳಿಗೂ ಡಕ್ಕೆಬಲಿ ಮಾಡಿಸುವುದು ಉಂಟು. ಆಗ ನಾಗಮಂಡಲಕ್ಕೆ ಬದಲು ಆಯಾ ಭೂತಾಕಾರಗಳಲ್ಲಿಯೇ ರಂಗವಲ್ಲಿ ಇರುತ್ತದೆ. ಪಾತ್ರಿಯ ಮೇಲೆ ಭೂತದ ಮಾನಿಯೇ ಒದಗುತ್ತದೆ. ಕುಂದಾಪುರ–ಬಾರಕೂರು ಕಡೆ ಇದು ಹೆಚ್ಚು. ಡಕ್ಕೆಬಲಿಯಲ್ಲಿ ಒಂದು ಕಾಲಕ್ಕೆ ರಕ್ತಬಲಿಯೂ ಇದ್ದಿತೆಂದು ಒಂದು ಊಹೆಯಿದೆ.

ಭೂತಾರಾಧನೆಯ ಸಮಯದಲ್ಲಿ ಪಾತ್ರಿಯು ಹಲವುವೇಳೆ ಅದ್ಭುತವೆನಿಸುವ ಕೆಲಸಗಳನ್ನು ಮಾಡುತ್ತಾನೆ. ಉರಿಯುವ ಸೂಟೆಯಿಂದ ಮೈ ಇರಿದು ಕೊಳ್ಳುವುದು, ಪಂಜಿನ ಬೆಂಕಿಯನ್ನು ನುಂಗಲೆತ್ನಿಸುವುದು, ಕಬ್ಬಿಣದ ಸಲಾಕೆಯಿಂದ ತಲೆ ಬಡಿದುಕೊಳ್ಳುವುದು, ಬಂಡೆಗೆ ತಲೆಯನ್ನು ಘಟ್ಟಿಸಿಕೊಳ್ಳುವುದು, ತಲೆಯಮೇಲೆ ತೆಂಗಿನಕಾಯನ್ನು ಹೊಡೆಯಿಸಿಕೊಂಡು ಹೋಳಾಗಿಸುವುದು, ಬಡಿಗೆಯಿಂದ ಮೈ ಬಡಿದು ಕೊಳ್ಳುವುದು, ಇಡೀ ಕೋಳಿಯನ್ನು ಹಾಗೆಯೇ ತಿಂದು ಬಿಡುವುದು ಮೊದಲಾದುವನ್ನು ಕೆಲವು ದರ್ಶನಗಳಲ್ಲಿ ಕಾಣಬಹುದು. ಐದಾರು ಗಂಟೆ ಅವನು ಎಚ್ಚರತಪ್ಪಿ ಕುಣಿದಾಡುವುದೇ ಒಂದು ಅದ್ಭುತ! ವಿದ್ಯಾಭ್ಯಾಸವಾಗಲೀ ವ್ಯವಹಾರಜ್ಞಾನವಾಗಲೀ ವ್ಯುತ್ಪತ್ತಿಯಾಗಲೀ ಅಷ್ಟಾಗಿ ಇರದವನು ಅಚ್ಚುಕಟ್ಟಾಗಿ, ಪ್ರಾಸಬದ್ಧವಾಗಿ, ಸಂದರ್ಭೋಚಿತವಾಗಿ, ಕೇಳಿದವರಿಗೆ ಸಮಾಧಾನವಾಗುವಂತೆ ನುಡಿಕಟ್ಟನ್ನು ಹೇಳುವುದೂ ಅದ್ಭುತವೇ.

ಮೊದಲಿಗೆ ಭೂತಗಳಿಗೆ ನಿರ್ದಿಷ್ಟಪ್ರತೀಕಗಳಿದ್ದಂತೆ ತೋರುವುದಿಲ್ಲ. ಅವುಗಳಿಗೆ ಸ್ವರೂಪವೂ ನಿಶ್ಚಿತವಾಗಿರಲಿಲ್ಲವಷ್ಟೆ. ಸ್ವಭಾವವೇನೋ ಅಷ್ಟಿಷ್ಟು ಸ್ಪಷ್ಟವಾಗಿದ್ದಿತು. ಬರಿಯ ಕಲ್ಲುಗುಂಡು, ಮರದ ಕೊಂಟೆ ಇವನ್ನೇ ಭೂತವೆಂದು ಬಗೆದು ಪೂಜಿಸುತ್ತಿದ್ದ ಯುಗವೂ ಇದ್ದಿತು. ಇವೇ ಭೂತಗಳೆಂದಲ್ಲ, ಭೂತದ ಸಾನ್ನಿಧ್ಯವನ್ನು ಬಯಸಿದಾಗ ಅದರಲ್ಲಿ ಕಾಣಬಹುದೆಂದು. ಕಣ್ಣಿಗೆ ಕಾಣದ ಭೂತವನ್ನು, ಕೈಯಿಂದ ಹಿಡಿಯಲಾಗದ ಭೂತವನ್ನು ತಕ್ಕ ಮನುಷ್ಯನ ಮೇಲೆ ಬರಿಸುವ ಕಲೆಯೂ ಪ್ರಾಚೀನಸ್ತರಕ್ಕೇ ಸೇರಿದುದು. ಭೂತದ ಮಾನಿಯನ್ನು ತಳೆಯುವ ಪಾತ್ರಿಗೇ ಭೂತಕ್ಕೆ ಒಪ್ಪುವ ಅಲಂಕಾರ,ಉಡುಗೆ, ತೊಡಗೆಗಳನ್ನು ಅಳವಡಿಸಿ, ಭೂತದ್ದೆಂದು ಬಗೆಯಲಾದ ಆಯುಧಗಳನ್ನು ಅವನ ಕೈಗೇ ಕೊಟ್ಟು, ಆ ಸಮಯದಲ್ಲಿ ಅವನೇ ಭೂತವೆಂದು ಆರಾಧನೆಯನ್ನು ಸಲ್ಲಿಸುವ ಮನೋಧರ್ಮ ಇಲ್ಲಿ ಮುಖ್ಯವಾದುದು. ಈ ಧರ್ಮದಲ್ಲಿ ಪಾತ್ರಿಯೇ ಜೀವಂತ ದೈವ ಎನ್ನಬಹುದಾದರೂ ತಾಣಗಳಲ್ಲಿ ಈ ದೈವಕ್ಕೊಂದು ನೆಲೆಯನ್ನು ಕಲ್ಪಿಸುತ್ತಿದ್ದರು. ನಮಗೆ ಇರಲು ಮನೆ ಬೇಕಾಗುವಂತೆ ಭೂತಕ್ಕೂ ಬೇಕಲ್ಲವೆ? ಆದರೆ ಭೂತವನ್ನು ಯಾವೊಂದು ಸ್ಪಷ್ಟ ಆಕಾರದಲ್ಲಿಯೂ ಕಲ್ಪಿಸಿಕೊಳ್ಳದಿದ್ದುದರಿಂದ ಅವಕ್ಕೆ ಪ್ರತಿಮೆಗಳನ್ನು ಮಾಡಿಡುವುದೂ ಮೊದಲಿಗೆ ವಾಡಿಕೆಯಲ್ಲಿ ಬರದಿದ್ದುದು ಸಹಜವೇ.

ಭೂತಗಳು ನೂರಾರು ಇದ್ದರೂ, ಭೂತಸ್ಥಾನಗಳಲ್ಲಿ ಅವನ್ನು ಪ್ರತಿನಿಧಿಸುವ ಸಾಮಗ್ರಿಗಳು ಒಂದೇ ಇರುತ್ತಿದ್ದುವು. ಯಾವುದೇ ಭೂತವಾಗಲೀ, ಖಾಲಿ ಕೋಣೆಯಲ್ಲಿ ಮನುಷ್ಯರು ಯಾರೂ ಕೂಡದ ಮರದ ಮಂಚ, ಅದರ ಮೇಲೆ ಕತ್ತಿ, ಘಂಟೆ, ಹಿತ್ತಾಳೆ ಗಿಂಡಿ, ದೀಪದ ಹಣತೆ.—ಇಷ್ಟೇ ಭೂತದ ಇರವನ್ನು ತಿಳಿಸುವ ವಿವರಗಳು. ಸಂದರ್ಭಕ್ಕೆ, ಅಗತ್ಯಕ್ಕೆ, ಕಲ್ಪನೆಗೆ ತಕ್ಕಂತೆ ಭೂತಗಳ ಸ್ವಭಾವಗಳೂ ಹೆಸರುಗಳೂ ಕಥೆಗಳೂ ಬೇರೆಬೇರೆಯಾಗಿರುತ್ತಿದ್ದುವು. ಭೂತಗಳೆಲ್ಲ ಒಂದೇ ಎಂದು ಯಾವ ಕಾಲದಲ್ಲಿಯೂ ಬಗೆದಿರಲಿಲ್ಲ. ಆದರೆ ಭೂತಸಾನ್ನಿಧ್ಯವನ್ನು ಗುರುತಿಸಲು ಅವರು ಬಳಸಿದ ವಿಧಾನ ಸರಳವಾಗಿದ್ದಿತು. ಆದರೆ ಭೂತಗಳು ಮೈದಳೆದ ಬಗೆಯನ್ನು ತಿಳಿಸುವ ಕಥೆಗಳು ಬಳಕೆಗೆ ಬಂದಾಗ, ಪ್ರಾಣಿಗಳ ಅಂಶ ಪ್ರಮುಖವಾದಾಗ ಪ್ರಾಣಿಗಳ

ಸಣ್ಣಸಣ್ಣ ಪುತ್ಥಳಿಗಳನ್ನು ಮಾಡಿ ಅವನ್ನೇ ಭೂತಪ್ರತೀಕಗಳೆಂದು ಬಗೆಯತೊಡಗಿದರು. ಎತ್ತು, ಎಮ್ಮೆ, ಹಂದಿ, ಹುಲಿ, ಹಾವು ಈ ಪ್ರಾಣಿಗಳೇ ಭೂತಗಳನ್ನು ಪ್ರತಿನಿಧಿಸುವುದು ಇಲ್ಲಿನ ಸ್ವಾರಸ್ಯ. ನಂದಿ (ಎತ್ತು), ಮೈಸಂದಾಯೆ (ಎಮ್ಮೆ), ನಂದಿಗೋಣ (ಎತ್ತು ಎಮ್ಮೆ ಎರಡೂ ಕೂಡಿದ್ದು), ಪಂಜುರ್ಲಿ (ಹಂದಿ), ಪಿಲಿಭೂತ (ಹುಲಿ), ನಾಗಂದಾಯೆ (ಹಾವು) ಈ ಭೂತಗಳಿಗೆ ಪ್ರತೀಕಗಳು ಸಿದ್ಧವಾದುವು.

ಉಳಿದ ಭೂತಗಳಿಗೆ ಮರದ ಮಂಚ, ಉಯ್ಯಾಲೆಗಳಷ್ಟೇ ಅಲ್ಲದೆ ಮರದ ಕಂಬ, ಕಂಬದ ಮೇಲೆ ವಿಚಿತ್ರವಾದ ಬೊಕ್ಕಸ ಇವು ಪ್ರತಿನಿಧಿಗಳಾದುವು. ಬೊಬ್ಬರ್ಯ ಭೂತದ ಪ್ರತೀಕದ ಪ್ರಸ್ತಾಪ ಆಗಲೇ ಬಂದಿದೆ. ಮರದ ಕಂಬಗಳನ್ನು ಬೇರೆ ಬೇರೆ ವಿನ್ಯಾಸಗಳಲ್ಲಿ ಕಡೆದಿಡುತ್ತಿದ್ದರು. ಒಂದು ಭೂತಕ್ಕೇ ವಿಶಿಷ್ಟವಾದ ಮರದ ಕಂಬ ಅಥವಾ ವಿನ್ಯಾಸ ಎನ್ನುವುದಿಲ್ಲವಾದರೂ ಈ ಪದ್ಧತಿ ಬೆಳೆಯಿತು. ಭೂತಗಳಿಗೆ 'ಮೊಗ'ಗಳನ್ನು ಮಾಡಿಟ್ಟು, ದರ್ಶನ ಕಾಲದಲ್ಲಿ ಪಾತ್ರಿ ಅವನ್ನು ಧರಿಸುವುದೂ, ಉಳಿದಂತೆ ಭೂತಸ್ಥಾನದಲ್ಲಿಯೋ ಭಂಡಾರಮನೆಯಲ್ಲಿಯೋ ಇರಿಸಿ ಪೂಜಿಸುವುದೂ ಪ್ರಾಚೀನ ಪದ್ಧತಿಯೇ. ಮೊಗಗಳನ್ನು ಚಂದನಮರದಲ್ಲಿ, ಬೆಳ್ಳಿಯ ಅಥವಾ ಬಂಗಾರದ ತಗಡಿನಲ್ಲಿ ಮಾಡುತ್ತಾರೆ. ಅನಂತಾಡಿಯ ಲೆಕ್ಕೇಸಿರಿ ಭೂತದ ನೇಮದಲ್ಲಿ ಪಾತ್ರಿಯು ಬೆಳ್ಳಿಯ ಮೊಗ ಧರಿಸಿದಾಗ ಹೆಂಗಸರು ನೋಡುವುದಿಲ್ಲ; ಬಂಗಾರದ ಮೊಗ ಧರಿಸಿದಾಗ ಗಂಡಸರು ನೋಡುವುದಿಲ್ಲ. ಎಂದರೆ, ಮೊಗಗಳಲ್ಲಿಯೂ ವಾಗತ್ಯವಿದೆ ಯೆನ್ನುವುದು ಇಲ್ಲಿ ಧ್ವನಿಸುತ್ತದೆ.

ಆರ್ಯಸಂಸ್ಕೃತಿಯು ಈ ಕಡೆ ಹರಡಿದಾಗ ಶೈವ, ಶಾಕ್ತ, ವೈಷ್ಣವ ಸಂಪ್ರದಾಯದ ದೇವತೆಗಳು ಪ್ರಾಚೀನ ಭೂತಗಳೊಂದಿಗೆ ಬೆರೆತುಹೋದರು. ಕೆಲವೊಮ್ಮೆ, ಭೂತಗಳ ನೆಲೆಯನ್ನು ಮೀರಿದ ದೇವತೆಗಳು ಇವರೆಂದು ಸಿದ್ಧಪಡಿಸಲು ಭೂತಗಳನ್ನು ಪ್ರತಿನಿಧಿಸುವ ಪ್ರಾಣಿಗಳು ಈ ದೇವತೆಗಳ ವಾಹನಗಳಾಗಿ ಕಂಡು ಬಂದುವು. ಕುಂದಾಪುರ ತಾಲ್ಲೂಕಿನ ಕೋಣೆಹಳ್ಳಿಯ ಕಟ್ಕರೆ ಕಾಳಮ್ಮ ಎತ್ತಿನ ಮೇಲೆ, ಸುರತ್ಕಲ್ಲಿನ ಕಾವೇರಿ ದೈವಸ್ಥಾನದ ವರಾಹೇಶ್ವರಿ ಹಂದಿಯ ಮೇಲೆ, ದುರ್ಗಾಪರಮೇಶ್ವರಿ ನಂದಿಯ ಅಥವಾ ಎಮ್ಮೆಯ ಮೇಲೆ ಕುಳಿತಿರುವುದು ನಿದರ್ಶನಗಳು. ಇದು ಹೇಗಿದ್ದರೂ, ಈ ದೇವತಾಮೂರ್ತಿಗಳನ್ನು ಮನುಷ್ಯಾಕಾರದಲ್ಲಿ ಕಡೆದಿಡುವ ಸಂಪ್ರದಾಯ ಬಳಕೆಗೆ ಬಂದುದು ಹೀಗೆ.

ಆದರೆ ಸಮರದಲ್ಲಿ ಸತ್ತ ವೀರರನ್ನು ಮನುಷ್ಯಾಕಾರದಲ್ಲಿ, ಪ್ರಾಣಿಗಳ ಆಕಾರದಲ್ಲಿ, ಮನುಷ್ಯ–ಪ್ರಾಣಿಗಳೆರಡೂ ಕಲೆತ ಆಕಾರದಲ್ಲಿ ಮಾಡಿಟ್ಟು, ಕಾಲಕಾಲಕ್ಕೆ ಅವರ ಭೂತಗಳಿಗೆ ಪೂಜೆ ಸಲ್ಲಿಸುವ ಪದ್ಧತಿ ಇಲ್ಲಿದ್ದಿತು. ಕಟ್ಕರೆ ಕಾಳಮ್ಮನ ಗುಡಿಯ ಪ್ರಸ್ತಾಪ ಈಗಲೇ ಬಂದಿತಷ್ಟೆ. ಈ ಸ್ಥಳದಲ್ಲಿ ಅರಬ್ಬೀ ಮತ್ತು ತುರ್ಕೀಜನರು ಇಲ್ಲಿನವರೊಂದಿಗೆ ಕಾದಾಡಿದ ಹಿನ್ನೆಲೆಯಿದೆ. ಈ ಗುಡಿಯಲ್ಲಿ ಸುಮಾರು ಇಪ್ಪತ್ತೈದು ಮರದ ಮನುಷ್ಯಮೂರ್ತಿಗಳಿವೆ; ಇವರೆಲ್ಲ ಹಾಗೆ ಕಾದು ಮಡಿದ ವೀರರಂತೆ. ಇವರಲ್ಲಿ ಕೆಲವರು ಅರಬ್ಬೀಜನರೂ ಸೇರಿರುವುದು ಸ್ವಾರಸ್ಯ; ಈ ಮೂರ್ತಿಗಳಲ್ಲಿ ಕೆಲವು ಲುಂಗಿಯನ್ನುಟ್ಟು, ತಲೆಗೆ ಫೆಜ್‌ಕುಲಾವಿ ಯನ್ನು ಧರಿಸಿ ಗಡ್ಡ ಬೆಳೆಸಿ ನಿಂತಿವೆ. ಗುಡಿಯ ಬಾಗಿಲ ಬಳಿ ಹೈಗುಳಿಯ ಮೂರ್ತಿಯಿದೆ; ಪರ ದೇಶದವರೊಂದಿಗೆ ಸಮರ ನಡೆದಾಗ ನಮ್ಮವರ ನಾಯಕನಾಗಿದ್ದವನ ಭೂತ ಇದು. ಗುಡಿಯಲ್ಲಿ ಪ್ರಮುಖ ದೈವವೇನೋ ಕಾಳಮ್ಮ ಅಥವಾ ರಣಚಂಡಿಯದು. ಈ ದೇವತೆಯ ವರದಿಂದಲೇ ನಮ್ಮವರು ಗೆದ್ದರೆಂದು ನಂಬಿಕೆ. ನಾಲ್ಕು ಕೈಗಳ ಈ ಭಯಾನಕಮೂರ್ತಿ ಮರದಲ್ಲಿ ಕಡೆದಿದ್ದು ಹನ್ನೆರಡು ಅಡಿ ಎತ್ತರವಿದೆ.

ಕೊಡಲಿ, ತಲೆಯೋಡೆ, ಕತ್ತಿಗಳನ್ನು ಹಿಡಿದ ಈ ದೇವತೆಯ ಒಡವೆಗಳು ಸರ್ಪಾಕಾರವಾಗಿವೆ; ಎತ್ತಿನ ಮೇಲಿರುವ ಈಕೆಯ ಬಾಯಲ್ಲಿ ರಾಕ್ಷಸನೊಬ್ಬನ ತಲೆಯಿದೆ.

ಇದೇ ಹಿನ್ನೆಲೆಯಲ್ಲಿ ಸಿದ್ಧವಾದ ಇನ್ನೊಂದು ಗುಡಿಯೆಂದರೆ ಸುಪ್ರಸಿದ್ಧವಾದ ಮೆಕ್ಕೆಕಟ್ಟೆಯದು. ಉಡುಪಿ ತಾಲ್ಲೂಕಿನ ಸಿರಿಯಾರ ಗ್ರಾಮಕ್ಕೆ ಸೇರಿದ ಮೆಕ್ಕೆಕಟ್ಟು ನಿರ್ವಿವಾದವಾಗಿ ತುಂಬ ಪ್ರಾಚೀನ ದೈವಸ್ಥಾನ. ಇಲ್ಲಿಯ ದೈವವನ್ನು ಈಗ ನಂದೀಶ್ವರ ಎನ್ನುತ್ತಾರೆ. ಗರ್ಭಗುಡಿಯಲ್ಲಿರುವ ಮೂರ್ತಿ ಎರಡು ಕೊಂಬುಗಳಿರುವ, ಕಿವಿಗಳನ್ನು ಹಿಂಚಾಚಿ, ಮೇಲುಮುಖಮಾಡಿ, ನಾಲಗೆ ಹೊರಚಾಚಿ ನಿಂತಿರುವ ಮೂರಡಿ ಎತ್ತರದ ಎತ್ತು. ಇದಲ್ಲದೆ ಗರ್ಭಗುಡಿಯಲ್ಲಿ ಏಕಶೃಂಗಿ ನಂದಿ, ಪಾರ್ಶ್ವಮುಖ ನಂದಿ, ಪಂಚಮುಖ ನಂದಿ, ಆಕಾಶನಂದಿ, ತ್ರಿಮುಖನಂದಿ ಮೊದಲಾದುವೂ ಎತ್ತಿನ ಮೂರ್ತಿಗಳೇ, ಬೇರೆಬೇರೆ ಭಂಗಿಗಳಲ್ಲಿ ಬೇರೆಬೇರೆ ಕಲ್ಪನೆಗಳಲ್ಲಿವೆ ಅಷ್ಟೆ. ನಂದಿವಾಹನೆಯಾದ ದುರ್ಗಾಪರಮೇಶ್ವರಿಯ ಮೂರ್ತಿಯೂ ಒಂದಿದೆ. ಈ ಗುಡಿಯಲ್ಲಿ ಏನಿಲ್ಲವೆಂದರೂ ನೂರೈವತ್ತು ಮರದ ವಿಗ್ರಹಗಳಿವೆ; ಇವುಗಳಲ್ಲಿ ನಂದಿಯ ಪ್ರತಿಕೃತಿಗಳೇ ಹೆಚ್ಚು. ಸಾಮಾನ್ಯವಾಗಿ ಎತ್ತಿನ ಆಕಾರವಲ್ಲದೆ, ವಾರೆ ಕುತ್ತಿಗೆ ಒಕ್ಕೋಡು ನಂದಿ (ಕತ್ತನ್ನು ಪಕ್ಕಕ್ಕೆ ತಿರುಗಿಸಿ, ಒಂದೇ ಕೊಂಬಿರುವ ಎತ್ತು), ಹೈಗುಳಿ (ಗೂಳಿ) ಮನುಷ್ಯನ ಮೈಮೇಲೆ ಮೂರು ನಂದಿಮುಖ ಗಳಿದ್ದು, ನಂದಿಯ ಮೇಲೇ ನಿಂತಿರುವ ಮೂರ್ತಿ, ಎತ್ತಿನ ಒಡೆಯ, ಒಕ್ಕೋಡು ನಂದಿ, ಬೋಳುನಂದಿ, ಭೃಂಗಿನಂದಿ (ಮನುಷ್ಯನ ಮೈ, ನಂದಿಯ ಮುಖ), ಎತ್ತಿನ ಮಾವುತ, ತುಡುಂಬಿನ ಎತ್ತುಸವಾರ ಮೊದಲಾದ ವಿಗ್ರಹಗಳೂ ಇವೆ.

ನಂದಿಕೇಶ್ವರ ದೈವಸ್ಥಾನದಲ್ಲಿ ನಂದಿಗಳ ವಿಗ್ರಹಗಳಿರುವುದು ಸಹಜ. ಆದರೆ ಇಲ್ಲಿ ಜಟ್ಟಿಗರಾಯ ದ್ವಿಮುಖೇಶ (ಎರಡು ಮುಖಗಳ ಮನುಷ್ಯ), ಧೂಮ್ರಾಕ್ಷ (ಆರಡಿ ಎತ್ತರದ, ಒಂದು ಕೈಯಲ್ಲಿ ಕತ್ತಿ, ಇನ್ನೊಂದರಲ್ಲಿ ಧೂಪ ಹಿಡಿದ ಮೂರ್ತಿ), ದಂಷ್ಟ್ರಾಮುಖ (ಡಮರುವನ್ನು ಹಿಡಿದು, ನಾಗಜಟೆಯನ್ನು ಧರಿಸಿ, ಹಲ್ಲು ಕಡಿಯುತ್ತಿರುವ ಭಯಾನಕಮೂರ್ತಿ), ನಾಗೇಶ್ವರ, ವೀರಭದ್ರ, ಬೇತಾಳ, ಉಮ್ಮಳ್ತಿ–ಬೆಮ್ಮಳ್ತಿ ಯರು ಇಂಥ ಭೂತಗಳು ಮಾತ್ರವಲ್ಲದೆ ರಾಹುತರು, ಕುದುರೆಸವಾರರು, ದೂತರು, ಆನೆಮಾವುತರು, ಆನೆ ರಕ್ಷಕರು, ಜವನ–ಸೈನಿಕರು ಮೊದಲಾದವರ ಮೂರ್ತಿಗಳೂ ಇವೆ. ನಂದಿಕೇಶ್ವರನ ದೈವಸ್ಥಾನಕ್ಕೆ ಹಿನ್ನೆಲೆ ಯನ್ನು ಜಂಬುಕೇಶ್ವರನೆಂಬ ಋಷಿಗೆ ಅಂಟಿಸುತ್ತಾರೆ. ಈ ಋಷಿಯು ಇಲ್ಲಿ ತಪಸ್ಸು ಮಾಡುತ್ತಿದ್ದಾಗ ದುಷ್ಟ ಜನರೂ ಕಾಡುಮೃಗಗಳೂ ತೊಂದರೆಮಾಡುತ್ತಿರಲು ನಂದಿಯನ್ನು ಇಲ್ಲಿಪ್ರತಿಷ್ಠೆ ಮಾಡಿ ಆ ತೊಂದರೆಯನ್ನು ನೀಗಿಕೊಂಡನಂತೆ. ಅವನು ಮಹಾಲಿಂಗೇಶ್ವರನ ಭಕ್ತನೆಂದೂ ಆ ಸ್ಥಳದಲ್ಲಿಯೇ ಇರುವ ಮೂರು ಮಹ ಲಿಂಗೇಶ್ವರ ಗುಡಿಗಳೂ ಅವನ ಪ್ರಭಾವವನ್ನು ಸೂಚಿಸುವುವೆಂದೂ ಹೇಳುತ್ತಾರೆ. ತನ್ನ ಯಜ್ಞಕ್ಕಾಗಿ ಬೇಕಾದ ಮೇಕೆಗಳನ್ನು ಇಲ್ಲಿ ಕಟ್ಟುತ್ತಿದ್ದ ಕಾರಣ ಇದು 'ಮೇಕೆಕಟ್ಟು' ಆಯಿತೆಂದೂ ವಿವರಣೆಯಿದೆ. ಇದರ ನಿಜಾಂಶ ಏನಾದರೂ ಇರಲಿ, ನಂದಿಕೇಶ್ವರನ ಗುಡಿಯಲ್ಲಿ ನೂರಾರು ಭೂತಗಳ, ಮನುಷ್ಯರ ಮೂರ್ತಿಗಳು ಬಂದುದು ಹೇಗೆ ?

ಈ ಸ್ಥಳವನ್ನು ಹದಿನೈದು–ಹದಿನಾರನೆಯ ಶತಮಾನಗಳಲ್ಲಿ ಬಾರಕೂರು ಸೀಮೆಯ ಅರಸರು ಆಳುತ್ತಿದ್ದರು, ಮೆಕ್ಕೆಕಟ್ಟು ಬಾರಕೂರಿನಿಂದ ನಾಲ್ಕೈದು ಮೈಲಿಗಳಷ್ಟೇ. ಒಮ್ಮೆ ಪ್ರಬಲರಾದ ಕೆಳದಿ ರಾಜರು ಬಾರಕೂರಿನ ಮೇಲೆ ದಂಡೆತ್ತಿ ಬರಲು ಹವಣಿಸಿದರಂತೆ. ಬಾರಕೂರು ಅರಸು ಇದನ್ನು ತಿಳಿದು ನಂದಿ

ಕೇಶ್ವರನಿಗೆ ಹರಕೆ ಹೊತ್ತನಂತೆ. ಬಾರಕೂರಿಗೆ ಬರುವ ದಾರಿಯಲ್ಲಿ ಮೆಕ್ಕೆಕಟ್ಟು ಇದ್ದಿತು. ಕೆಳದಿ ರಾಜನ ಸೈನ್ಯ ಇಲ್ಲಿಯವರೆಗೆ ಸರಾಗವಾಗಿ ಬಂದಿತು; ಮುಂದೆ ಹೋಗಲು ಎಷ್ಟು ಹವಣಿಸಿದರೂ ಆಗಲಿಲ್ಲವಂತೆ, ಅವರ ಬಾಯಿಂದ ಮಾತೂ ಹೊರಡಲಿಲ್ಲವಂತೆ. ಸೇನೆಯ ನಾಯಕರು ಕಾರಣ ತಿಳಿಯಲು ಪ್ರಶ್ನೆ ಹಾಕಿಸಿದಾಗ, ಮೆಕ್ಕೆಕಟ್ಟಿನ ನಂದಿಯ ಕೋಪವೇ ಕಾರಣವೆಂದು ತಿಳಿಸಲು, ಅವರು ತಪ್ಪಿಗೆ ಕಾಣಿಕೆ ಸಲ್ಲಿಸಿ ಬಂದ ದಾರಿಯಲ್ಲಿ ಹಿಂದಿರುಗಿದರಂತೆ. ಈ ಸಂಗತಿಯನ್ನು ತಿಳಿದ ಬಾರಕೂರು ಅರಸು ಕೃತಜ್ಞತೆಯಿಂದ ಸೈನಿಕರ, ಮಾವುತರ, ಸವಾರರ ಗೊಂಬೆಗಳನ್ನು ಮಾಡಿಸಿ ನಂದಿಕೇಶ್ವರನಿಗೆ ಒಪ್ಪಿಸಿದನಂತೆ.

ಮೊದಲಿಗೆ ಎತ್ತು—ಭೂತದ ದೈವಸ್ಥಾನವಾಗಿದ್ದುದು ಹೀಗೆ ಇತರ ಭೂತಗಳನ್ನು ಮಾತ್ರವಲ್ಲದೆ ಹಲವಾರು ಆರ್ಯದೇವತೆಗಳಿಗೂ ಆವಾಸವಾಯಿತು. ದೈವಸ್ಥಾನದಲ್ಲಿ ಆರ್ಯ ಸಂಸ್ಕೃತಿಯ ಕಳೆ ಸ್ಪಷ್ಟ ವಾಗಿ ಮೂಡಿತು; ಈಗಲೂ ಶಿವಳ್ಳಿಬ್ರಾಹ್ಮಣರೇ ನಂದಿಕೇಶ್ವರನ ಪೂಜೆಮಾಡುವವರು. ಆದರೆ ಪ್ರಾಚೀನ ಪದ್ಧತಿಗಳೂ ಉಳಿದು ಬಂದುವು. ಈಗಲೂ ಮಾರಿಪೂಜೆಯ ಸಮಯದಲ್ಲಿ ಎರಡು ನಾಯಿಗಳಿಂದ ಕೂಡಿದ ಹಸಲ–ತಿಮ್ಮನೆಂಬ ವಿಗ್ರಹದ ಬಳಿ ಪಶುಬಲಿ ನಡೆಯುವ ವಾಡಿಕೆಯಿದೆ. ಬಾರಕೂರ ಬಳಿಯೇ ಶೇಡಿಗುಡ್ಡೆ ರೇವಂತಭೂತನ ಗುಡಿಯಲ್ಲಿ 'ನಂದಿಕೋಣ' ಸ್ವಾರಸ್ಯವಾದ ದಾರುಶಿಲ್ಪ. ಇದಕ್ಕೆ ಎತ್ತಿನ ಮೈಯಿದ್ದರೂ ಡುಬ್ಬು ಇಲ್ಲ; ಕೋಣದ ತಲೆಯಂತೆ ಕೆಳಗೆ ಮಾಡಿದ ತಲೆ. ಈ ಗುಡಿಯಲ್ಲಿ ಎರಡು ನಂದಿಕೋಣಗಳಿವೆ; ಒಂದು ಆಕಾಶ ನಂದಿಕೋಣವೆಂದೂ ಇನ್ನೊಂದು ಅಂತರಿಕ್ಷ ನಂದಿಕೋಣವೆಂದೂ ಎನಿಸಿಕೊಳ್ಳುತ್ತವೆ. ಈ ಹೆಸರುಗಳು ಹೇಗೆ ಬಂದುವೋ ತಿಳಿದುಬರುವುದಿಲ್ಲ. ಅಲ್ಲಿಯೇ ಊರ್ಧ್ವಶೃಂಗಿಯೆನಿಸಿಕೊಳ್ಳುವ ಇನ್ನೊಂದು ಮೂರ್ತಿಯಿದೆ. ಇದರ ಕೋಣದ ತಲೆಯ ಮೇಲೆ ಎತ್ತಿನ ಕೊಂಬು ಮೇಲೆದ್ದು ನಿಂತಿದೆ. ಗರ್ಭಗುಡಿಯಲ್ಲಿ ರೇವಂತಭೂತದ ಬಳಿ ಪಂಚಮುಖದ ನಂದಿಕೋಣವೊಂದಿದೆ; ಇದನ್ನು 'ಗಣ' ಎನ್ನುತ್ತಾರೆ. ಒಂದೇ ಮೈ, ಆದರೆ ಐದುತಲೆಗಳು, ಒಂದೊಂದು ತಲೆಯೂ ಊರ್ಧ್ವಶೃಂಗಿ. ಇದಲ್ಲದೆ ಅಲ್ಲಿಯೇ ಮೇಲ್ಭಾಗ ಮನುಷ್ಯನಂತೆಯೂ ಕೆಳಭಾಗ ಕೋಣದಂತೆಯೂ ಇರುವ ಇನ್ನೊಂದು ಮೂರ್ತಿಯಿದೆ. ಇದನ್ನು ಭೂತಾಳ ಪಾಂಡ್ಯನೆಂದು ಕೆಲವರು ನಿರ್ದೇಶಿಸುತ್ತಾರೆ; ಅಳಿಯಸಂತಾನ ಕಟ್ಟನ್ನು ಹಾಕಿದ ಹಿರಿಯ ಈತನೇ ಎಂದು ನಂಬಿಕೆ.

ಅಂತೂ, ತುಳುನಾಡಿನ ದೈವಗಳನ್ನು ಮೂರ್ತಿಮತ್ತಾಗಿ ಮರದಲ್ಲಿಯೋ ಶಿಲೆಯಲ್ಲಿಯೋ ಕಡೆದು, ಅಥವಾ ಲೋಹದಲ್ಲಿ ಮಾಡಿ ಅವನ್ನು ಅರ್ಚಿಸುವ ಪದ್ಧತಿ ಕಾಲಕ್ರಮದಲ್ಲಿ ಬೆಳೆದು ಬಂದಿತು. ಆರ್ಯ ಕಲ್ಪನೆಯ ದೇವತೆಗಳ ಪ್ರತೀಕಗಳು ಬಳಕೆಗೆ ಬಂದಾಗ ದೈವಗಳಲ್ಲಿಯೇ ಈ ದೇವತೆಗಳನ್ನೂ ಅಳವಡಿಸಿ ಕೊಳ್ಳುವುದು ಅಗತ್ಯವಾಯಿತು. ಅಂಬಲಪಾಡಿಯ ಮಹಾಕಾಳಿ, ಕನ್ನರಪಾಡಿಯ ದುರ್ಗಾಪರಮೇಶ್ವರಿ ಮೊದಲಾದ ಮೂರ್ತಿಗಳು ನಿದರ್ಶನಗಳು. ಕೆಲವು ದೈವಸ್ಥಾನಗಳಲ್ಲಿ ಶೈವ–ವೈಷ್ಣವ ಸಂಪ್ರದಾಯದ ದೇವತೆಗಳೇ ಪ್ರಮುಖ ಪಟ್ಟವನ್ನೂ ವಹಿಸಿದುವು—ಅಂಬಲಪಾಡಿಯಲ್ಲಿಯೇ ಜನಾರ್ದನ ವಹಿಸಿದ ಹಾಗೆ. ಕೋಟದ ಅಮೃತೇಶ್ವರಿ (ಹಲವು ಮಕ್ಕಳ ತಾಯಿ) ಗುಡಿಯಲ್ಲಿ ಲಿಂಗಗಳ ಪೂಜೆ ವಾಡಿಕೆಗೆ ಬಂದುದು ಹೀಗೆಯೇ ಇದ್ದೀತು; ಅಲ್ಲಿ ಐದಡಿ ಎತ್ತರದ ಶಿಲಾಸ್ತಂಭವನ್ನೇ ರಕ್ತೇಶ್ವರಿಯೆಂದು ಕರೆದು ಅಲ್ಲಿ ಕೋಳಿ, ಕುರಿಗಳನ್ನು ಬಲಿಗೊಡುವುದು ಉಳಿದೇ ಉಳಿಯಿತು.

ಸುರತ್ಕಲ್ಲಿನ ಕಾವೇರಿ ದೈವಸ್ಥಾನದಲ್ಲಿ ಇನ್ನೊಂದು ಬಗೆಯ ಸಂಯೋಗವನ್ನು ಕಾಣಬಹುದು. ಪಣಂಬೂರಿನಲ್ಲಿ ಇರುತ್ತಿದ್ದ ವರಾಹೇಶ್ವರಿಯ ಮರದ ಮೂರ್ತಿಯನ್ನು ಈಗ ಇಲ್ಲಿರಿಸಿ ಪೂಜೆಮಾಡುತ್ತಿದ್ದಾರೆ. ಐದಡಿ ಎತ್ತರದ ಈ ದೇವಿ ಹಂದಿಯ ಮೇಲೆ ಕುಳಿತಿದ್ದಾಳೆ; ಕೊರಳಲ್ಲಿ ನಾಗಹಾರಗಳಿವೆ. ಸ್ವಾರಸ್ಯವಾದ

ವಿವರವೆಂದರೆ ಮೂರ್ತಿಯ ಹೊರಚಾಚಿದ ನಾಲಗೆಯ ಮೇಲೆ ವಿಷ್ಣುವಿನ ವಿಗ್ರಹವನ್ನು ಕಡೆದಿದ್ದಾರೆ. ಮೊದಲಿಗೆ ಹಂದಿ–ದೈವದ (ಪಂಜುರ್ಲಿ?) ತಾಣವಾಗಿದ್ದ ಇಲ್ಲಿ ವರಾಹೇಶ್ವರಿಯನ್ನು ಇರಿಸಿ, ವರಾಹಾವ ತಾರವೆತ್ತಿದ ವಿಷ್ಣುವಿಗೂ ಈ ದೇವಿಗೂ ನೆಂಟನ್ನು ಕಲ್ಪಿಸುವುದು ಉದ್ದೇಶವಿದ್ದೀತು. ಹೀಗೆಯೇ ಮೆಕ್ಕೆಕಟ್ಟಿನ ನಂದಿಕೇಶ್ವರನ ಗುಡಿ ಮೊದಲಿಗೆ ಹೈಗುಳಿ ಭೂತದ ತಾಣವಾಗಿದ್ದಿರಬಹುದೆ? ಅಲ್ಲಿಯೇ ಗರ್ಭಗುಡಿಯಲ್ಲಿ ನಂದಿವಾಹನೆಯಾದ ದುರ್ಗಾಪರಮೇಶ್ವರಿಯ ಮೂರ್ತಿಯೂ ಇರುವುದನ್ನು ಗಮನಿಸಬಹುದು. ಮೈಸಂದಾಯೆಭೂತ ಇದ್ದೆಡೆ ಮಹಿಷಾಸುರಮರ್ದಿನಿಯನ್ನೂ ಆವಾಹನೆಮಾಡಿಕೊಂಡಿದ್ದರೆ ಆಶ್ಚರ್ಯವಿಲ್ಲ.

ಧರ್ಮಗಳ ಸಂಕ್ರಮಣ ಈ ಪ್ರದೇಶದಲ್ಲಿ ವಿಶೇಷವಾಗಿ ನಡೆದಿದೆ; ಸಂಕ್ರಮಣ ನಡೆದಿದ್ದರೂ ಸಂಯೋಗ, ಸಹಯೋಗಗಳಂತೂ ಸ್ಪಷ್ಟವಾಗಿವೆ. ಪ್ರಾಚೀನ ಭೂತಾರಾಧನೆಯ ಪದರದ ಮೇಲೆ ಶೈವ, ಜೈನ, ವೈಷ್ಣವ, ಶಾಕ್ತ ಸಂಪ್ರದಾಯದ ವಿವರಗಳು ಹೇರಳವಾಗಿ ಮೂಡಿಕೊಂಡು ಬಂದುವು. ಆದರೆ ಯಾವ ಸಂಪ್ರದಾಯದ ಕೊಡುಗೆ ಎಷ್ಟು ಎಂದಾಗಲೀ, ಸಂಕ್ರಮಣ ನಡೆದ ಬಗೆಯೇನು ಎಂದಾಗಲೀ, ಯಾವ ದೇವತೆಯ ಹಿನ್ನೆಲೆ ನಿಖರವಾಗಿ ಏನು ಎಂದಾಗಲೀ ಹೇಳುವುದು ಕಷ್ಟ. ನಿರ್ದಿಷ್ಟವಾಗಿ ಏನನ್ನು ಹೇಳು ವುದೂ ತಪ್ಪಾಗುತ್ತದೆ. ಇತಿಹಾಸ, ಶಾಸನಗಳು ನಮ್ಮ ನೆರವಿಗೆ ಬರುವುದು ಕಡಮೆ; ವಿಮರ್ಶೆಯಂತೂ ಗಟ್ಟಿನೆಲದ ಮೇಲೆ ನಿಲ್ಲುವಂತಿಲ್ಲ. ಮೇಲಿನ ಒಕ್ಕಣೆಯಲ್ಲಿ ಹೆಚ್ಚುಭಾಗ ಊಹೆಯೇ ಎಂದು ಹೇಳಿದರೆ ಅಡ್ಡಿಯಿಲ್ಲ. ಆದರೆ ಇದರಿಂದ ವಿವರಗಳ ಸ್ವಾರಸ್ಯಕ್ಕಾಗಲೀ, ಸಂಶೋಧನೆಯ ಅಗತ್ಯಕ್ಕಾಗಲೀ ಊನವಿರದು.

ಕೃಷ್ಣನ ಕಲ್ಪನೆ

ನಮ್ಮ ದೇಶದ ದೇವತಾ ಪರಿವಾರದಲ್ಲಿ ಕೃಷ್ಣನಿಗಿಂತ ಹೆಚ್ಚು ಸ್ವಾರಸ್ಯದ ದೇವತೆಯಿಲ್ಲ; ಅವನಷ್ಟು ಜನಪ್ರಿಯನಾದ ದೇವತೆಯೂ ಇಲ್ಲ. ಕಾಶ್ಮೀರದಿಂದ ಕೇರಳದವರೆಗೆ ಎಲ್ಲ ಪ್ರಾಂತ್ಯಗಳಲ್ಲಿಯೂ ಕೃಷ್ಣನು ಪೂಜೆಗೊಳ್ಳುತ್ತಿದ್ದಾನೆ. ಇದು ಸಾವಿರಾರು ವರ್ಷಗಳಿಂದ ನಡೆದುಬಂದಿದೆ. ಶ್ರಾವಣಮಾಸದಲ್ಲಿ ಕೃಷ್ಣ ಪಕ್ಷದ ಅಷ್ಟಮಿಯಂದು ರೋಹಿಣೀ ನಕ್ಷತ್ರವಿದ್ದಾಗ ಕೃಷ್ಣನ ಅವತಾರವಾಯಿತೆಂದು ನಂಬಿ, ಈ ಜನ್ಮ ಸಂದರ್ಭವನ್ನು ನಾಡಿನಲ್ಲೆಲ್ಲ ಜನರು ಶ್ರದ್ಧೆಯಿಂದ, ಉತ್ಸಾಹದಿಂದ ಉತ್ಸವವಾಗಿ ಆಚರಿಸುತ್ತಾರೆ. ಈ ಜನ್ಮಾಷ್ಟಮಿಯ ಉತ್ಸವದಲ್ಲಿ ಇಡೀ ದಿನ ಉಪವಾಸ ವ್ರತ, ಅರ್ಧ ರಾತ್ರಿಯ ಪೂಜೆ, ರಾತ್ರಿಯಲ್ಲಿ ಜಾಗರಣೆ, ತಿಥ್ಯಂತದಲ್ಲೋ ನಕ್ಷತ್ರಾಂತ್ಯದಲ್ಲೋ ಪಾರಣೆ ಇವು ಪ್ರಮುಖವಾದ ಅಂಗಗಳು. ಪೂಜೆಯ ಸಂದರ್ಭದಲ್ಲಿ ಕೃಷ್ಣಾವತಾರದ ಪ್ರಯೋಜನವನ್ನು ಸ್ಮರಿಸಿಕೊಂಡು ಕಂಸನನ್ನು ಕೊಲ್ಲಲೂ, ದುಷ್ಟಶಕ್ತಿಗಳಿಂದಾದ ಭೂಭಾರ ವನ್ನು ಇಳಿಸಲೂ ಹುಟ್ಟಿದ ಕೃಷ್ಣನಿಗೆ ಅರ್ಘ್ಯವನ್ನು ಕೊಡುವುದು ಮುಖ್ಯ ವಿವರ. ದುಷ್ಟ ಶಿಕ್ಷಣ, ಶಿಷ್ಟರಕ್ಷಣಗಳು ಕೃಷ್ಣಜನ್ಮದ ತಾತ್ಪರ್ಯ.

ಆದರೆ ಕೃಷ್ಣನು ಯಾರು? ದೇವತೆಯೇ, ಮನುಷ್ಯನೇ? ಕೇವಲ ಕಲ್ಪನೆಯೇ? ಅವನ ಜನಪ್ರಿಯತೆಯ ರಹಸ್ಯವೇನು? ಕೃಷ್ಣನ ಕಲ್ಪನೆಯು ಮೈದಳೆದದ್ದು ಯಾವಾಗ, ಎಲ್ಲಿ? ಹೇಗೆ? ಆದರ ಹಿನ್ನೆಲೆಯೇನು? ಈ ಮೊದಲಾದ ಸಮಸ್ಯೆಗಳು ಹಲವಾರು ವರ್ಷಗಳಿಂದ ಪಂಡಿತರನ್ನು ಕಾಡುತ್ತಿವೆ. ಸಮಸ್ಯೆಗಳೇನೋ ಸಮರ್ಪಕವಾಗಿ ಬಗೆಹರಿದಿಲ್ಲ. ಆದರೆ ಇಂಥ ಜಿಜ್ಞಾಸೆಯಿಂದ ಭಕ್ತರ, ಭಾವುಕರ ಶ್ರದ್ಧೆಗೆ, ಉತ್ಸಾಹಕ್ಕೆ ಕುಂದು ಬಂದಿಲ್ಲ, ಬರಬಾರದು. ಇತಿಹಾಸ ಶುದ್ಧವಾದ ಅನ್ವೇಷಣೆ, ವಿಶ್ಲೇಷಣೆ, ವಿಮರ್ಶೆಗಳಿಂದ

ಶ್ರದ್ಧಾಳುಗಳ ಮನೋಧರ್ಮ ಕ್ಲಿಷ್ಟವಾಗಬೇಕಾದುದಿಲ್ಲ. ಜ್ಞಾನವು ದೃಢವಾಗಬೇಕೆಂಬ ದೃಷ್ಟಿಯಿಂದ ಇಂಥ ಜಿಜ್ಞಾಸೆ ಅವಶ್ಯಕ. ಆಧ್ಯಾತ್ಮಿಕ ಸಮಾಧಾನದ ಮಾತು ಬೇರೆ.

ಕೃಷ್ಣನ ಕಲ್ಪನೆಯಲ್ಲಿ ಕಾಡು ಬೆಳೆದಿರುವುದು ನಿಜ, ಜಿಜ್ಞಾಸೆಯಲ್ಲಿ ಗೊಂದಲ ಒದಗುವುದೂ ಸಹಜ. ವೈದಿಕ ವಾಙ್ಮಯದ ವಾಸುದೇವ–ಕೃಷ್ಣ; ಮಹಾಭಾರತದಲ್ಲಿ ಪಾಂಡವ ಪಕ್ಷಪಾತಿಯಾಗಿ, ಧರ್ಮ ಸಂಸ್ಥಾಪನೆಗೆ ಸೂತ್ರಧಾರಿಯಾಗಿ ಕಾಣಬರುವ ಕುಶಲ–ಕೃಷ್ಣ; ಭಗವದ್ಗೀತೆಯಲ್ಲಿ ಯೋಗೇಶ್ವರನಾಗಿ ಸ್ಪಷ್ಟನಾಗುವ ಭಗವಾನ್-ಕೃಷ್ಣ; ಭಾಗವತದಲ್ಲಿ ಗೋಪಿಕಾ ಪ್ರಣಯಿಯಾಗಿ ಕಾಣುವ ರಸಿಕ–ಕೃಷ್ಣ; ಹರಿವಂಶಪುರಾಣಗಳಲ್ಲಿ ತೋರಿಬರುವ ಅವತಾರ–ವಿಶೇಷವಾದ ಕೃಷ್ಣ, ಹೀಗೆ ಅನೇಕ ಮುಖಗಳ ಕಲ್ಪನೆಯಿದೆ. ಅದೂ ಒಮ್ಮೆಲೆ ಮೈದಳೆದ ಕಲ್ಪನೆಯಲ್ಲ. ಕಾಲಾನುಕ್ರಮದಲ್ಲಿ ಹಲವಾರು ಹಿನ್ನೆಲೆಗಳಲ್ಲಿ ರೂಪಗೊಂಡ ಈ ಕಲ್ಪನೆಯಲ್ಲಿ ವಿಭಿನ್ನ ಮನೋಧರ್ಮಗಳು ಕೂಡಿಕೊಂಡಿವೆ. ಒಬ್ಬನೇ ಕೃಷ್ಣನಿಗೆ ಹಲವಾರು ವ್ಯಕ್ತಿತ್ವಗಳು ಪ್ರಸಕ್ತವಾಗಿವೆ. ಸಾಮರಸ್ಯವನ್ನು ಸಿದ್ಧಮಾಡುವುದು ಸುಲಭವಲ್ಲ. ಗೊಂದಲದಿಂದ ಎಳೆಗಳನ್ನು ಬಿಡಿಸುವುದು ಕಷ್ಟದ ಕೆಲಸ.

ಕೃಷ್ಣನೆಂಬ ಋಷಿಯು, ಕವಿಯ ಪ್ರಸ್ತಾಪ ಋಗ್ವೇದದಲ್ಲಿಯೇ ಇದೆ. ಎಂಟನೆಯ ಮಂಡಲದಲ್ಲಿ ಮೂರು ಸೂಕ್ತಗಳಿಗೂ (85, 86, 87), ಹತ್ತನೆಯ ಮಂಡಲದಲ್ಲಿ ಮೂರು ಸೂಕ್ತಗಳಿಗೂ (42, 43, 44) ಇವನೇ ಋಷಿ. ಋಗ್ವೇದಸಂಹಿತೆಯ ಅನುಕ್ರಮಣಿಯು 'ಶೌನಕ–ಕೃಷ್ಣ'ನೆಂಬ ಈ ಋಷಿಯನ್ನು ಆಂಗಿರಸನೆಂದು ನಿರ್ದೇಶಿಸಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಘೋರ–ಆಂಗಿರಸನೆಂಬ ಋಷಿಯು ದೇವಕೀಪುತ್ರ–ಕೃಷ್ಣನಿಗೆ ಹೇಳಿದ ಮಾತಿನ ಉಲ್ಲೇಖವಿದೆ. ಕೃಷ್ಣ ಹೇಳಿದುದನ್ನು ಕೇಳಿ 'ಅಪಿವಾಸ'ನಾದ ಆಂಗಿರಸನು ಕೃಷ್ಣನನ್ನು ಅಕ್ಷತನೆಂದೂ, ಅಚ್ಯುತನೆಂದೂ, ಪ್ರಾಣ ಸಂಶಿತನೆಂದೂ ಹೊಗಳಿದ್ದಾನೆ. ಕೃಷ್ಣ–ದೇವಕೀಪುತ್ರನು ಘೋರ ಆಂಗಿರಸನ ಶಿಷ್ಯ. ಈ ಕಾರಣದಿಂದಲೇ ಅನುಕ್ರಮಣಿಯು ಕೃಷ್ಣನನ್ನು ಗುರುಗೋತ್ರದಿಂದ ಆಂಗಿರಸನೆಂದು ನಿರ್ದೇಶಿಸಿದೆ.

ವಾಸುದೇವನ ಪೂಜೆ ಕ್ರಿಸ್ತಪೂರ್ವದಲ್ಲಿ ಹರಡಿದ್ದಿತು. ಬೌದ್ಧರ ನಿದ್ದೇಶವೆಂಬ ಪಾಳೀ ಪ್ರಸ್ಥಾನ ಗ್ರಂಥವು (ಕ್ರಿಸ್ತಪೂರ್ವ ನಾಲ್ಕನೆಯ ಶತಮಾನ) ವಾಸುದೇವನಲ್ಲಿ ಭಕ್ತಿಯನ್ನಿಟ್ಟ ಪಂಥವೊಂದು ಪ್ರಚಲಿತವಾಗಿದ್ದಿತೆಂದು ಹೇಳುತ್ತದೆ. ಬೌದ್ಧರ ಜಾತಕ ವಾಙ್ಮಯಕ್ಕೆ ಸೇರಿದ 'ಘಟಜಾತಕ'ದಲ್ಲಿ ವಾಸುದೇವ ಮತ್ತು ಬಲದೇವ ಇಬ್ಬರೂ ಉಪಸಾಗರ–ದೇವಗರ್ಭಾ ಎಂಬ ದಂಪತಿಗಳ ಮಕ್ಕಳು. ದೇವಗರ್ಭಾ ಎಂಬುದೇನೋ ದೇವಕಿಯ ಹೆಸರು.

ಜಾತಕದಲ್ಲಿ ವಾಸುದೇವನಿಗೆ 'ಕಣ್ಹ'ನೆಂಬ ಇನ್ನೊಂದು ಹೆಸರನ್ನೂ ಹೇಳಿದ್ದಾರೆ. ಜಾತಕಗಳ ಮೇಲೆ ಸಿದ್ಧವಾಗಿರುವ 'ಜಾತಕಟ್ಠಕಥಾ' ಎಂಬ ವ್ಯಾಖ್ಯೆಯು ಕಣ್ಹನೆಂಬ ಹೆಸರು ಕಣ್ಹಾಯನ ಗೋತ್ರವನ್ನು ಸೂಚಿಸುವುದೆಂದು ವಿವರಿಸುತ್ತದೆ. ಕಣ್ಹಾಯನ ಎಂಬುದು ಕಾರ್ಷ್ಣಾಯನ ಎಂಬುದರ ಪಾಳಿರೂಪ. ಕಾರ್ಷ್ಣಾಯನ ಎಂಬುದು ಪಾಣಿನಿಯ ಗಣಪಾಠ (4, 1, 99) ದಲ್ಲಿ ವಾಸಿಷ್ಠವಂಶಕ್ಕೆ ಸೇರಿದ ಬ್ರಾಹ್ಮಣ ಗೋತ್ರ. 'ಮಹಾ ಉಮ್ಮಗ್ಗ ಜಾತಕ'ದಲ್ಲಿ ಕಣ್ಹಾಯನ ಗೋತ್ರದ ವಾಸುದೇವಕಣ್ಹನು ಜಂಬಾವತಿ (ಜಾಂಬವತಿ)ಯ ಗಂಡನೆಂಬ ಉಲ್ಲೇಖವಿದೆ. ಕೃಷ್ಣನ ಅಷ್ಟಮಹಿಷಿಯರಲ್ಲಿ ಜಾಂಬವತಿ ಒಬ್ಬಳಷ್ಟೇ. ಹೀಗೆ ಬೌದ್ಧಧರ್ಮದ ಆರಂಭ ಕಾಲದಲ್ಲಿಯೇ ಕೃಷ್ಣನ ಪ್ರಖ್ಯಾತಿಯಿದ್ದಿತು. ಆ ವೇಳೆಗಾಗಲೇ ಅವನು ಕಥೆಗೆ ವಸ್ತು ಆಗಿದ್ದನು.

ಜೈನರ ತ್ರಿಷಷ್ಟಿ ಶಲಾಕಾಪುರುಷರಲ್ಲಿ ಹಲವರಿಗೆ ಕೃಷ್ಣನ ಸಂಪರ್ಕವುಂಟು. ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥ (ಅಥವಾ ಅರಿಷ್ಟನೇಮಿ) ಕೃಷ್ಣನಿಗೆ ಹತ್ತಿರದ ನೆಂಟ. ನೇಮಿಯ ತಂದೆ ಸಮುದ್ರವಿಜಯನೂ ಕೃಷ್ಣನ ತಂದೆ ವಸುದೇವನೂ ಅಣ್ಣತಮ್ಮಂದಿರು. ಇವರ ತಂದೆ ಅಂಧಕ ವೃಷ್ಣಿ ಮತ್ತು ಭೋಜವೃಷ್ಣಿ ಇಬ್ಬರೂ ಒರಗೆಯ ಸೋದರರು. ವಸುದೇವನಿಗೆ ರೋಹಿಣಿ ಮತ್ತು ದೇವಕಿ ಎಂಬಿಬ್ಬರು ಹೆಂಡತಿಯರು; ರೋಹಿಣಿಯ ಮಗ ಬಲರಾಮ, ದೇವಕಿಯ ಮಗ ಕೃಷ್ಣ. ಸಮುದ್ರ ವಿಜಯನಿಗೆ ಅರಿಷ್ಟನೇಮಿ (ನೇಮಿನಾಥ) ಮತ್ತು ರಥನೇಮಿ ಎಂಬಿಬ್ಬರು ಮಕ್ಕಳು. ನೇಮಿನಾಥ, ಬಲರಾಮ, ಕೃಷ್ಣ ಮೂವರಿಗೂ ಒಟ್ಟಿಗೆ ಉಪನಯನ ಸಂಸ್ಕಾರವಾಯಿತೆಂದೂ, ಆಗ ಅವರಿಗೆ ಸಮುದ್ರವಿಜಯನೇ ಪ್ರಾಚೀನ ಗೀತೆಯನ್ನು ಉಪದೇಶಿಸಿದನೆಂದೂ, ಮುಂದೆ ತೀರ್ಥಂಕರನಾದ ನೇಮಿಯು ಮಾಗಧೀ ಭಾಷೆಯಲ್ಲಿ ಈ ಗೀತೆಯನ್ನು ಕೃಷ್ಣನಿಗೆ ವಿಸ್ತರಿಸಿದನೆಂದೂ, ಅದನ್ನೇ ಕೃಷ್ಣನು ಅರ್ಜುನನಿಗೆ ಮಹಾಭಾರತ ಸಮರ ಸಂದರ್ಭದಲ್ಲಿ ತಿಳಿಯಪಡಿಸಿದನೆಂದೂ ಜೈನರ ಶ್ರದ್ಧೆ.

ಸಮುದ್ರವಿಜಯ, ವಸುದೇವ ಇವರಿಗೆ ಇಬ್ಬರು ತಂಗಿಯರು–ಕುಂತಿ, ಮಾದ್ರಿ. ಕುಂತಿಯ ಮಕ್ಕಳೇ ಪಾಂಡವರು, ಹೀಗೆ ಕೃಷ್ಣನು ಕುಂತಿಗೆ ಸೋದರಳಿಯ; ಅವನು ಪಾಂಡವರ ಪಕ್ಷ ಹಿಡಿದದ್ದು ಸಹಜವೇ. ಯದುವಂಶದಲ್ಲೆಲ್ಲ ಕೃಷ್ಣನೇ ಪ್ರಬಲನಾಗಿ ಸಮುದ್ರತೀರದ ದ್ವಾರಕೆ(ದ್ವಾರಾವತಿ)ಯ ರಾಜನಾದನು. ಸಮುದ್ರವಿಜಯನ ಅರಸೊತ್ತಿಗೆಯಿದ್ದುದು ಯಮುನಾ ನದಿಯ ದಡದ ಮೇಲಿದ್ದ ಶೌರಿಪುರ. ಯಮುನಾ ನದಿಯ ದಡದಮೇಲೆಯೇ ಇದ್ದ ಇನ್ನೊಂದು ಪಟ್ಟಣ ಮಥುರೆ; ಇದರ ರಾಜ ಉಗ್ರಸೇನ. ಇವನು ಭೋಜವೃಷ್ಣಿ (ಸಮುದ್ರವಿಜಯ, ವಸುದೇವರ ತಂದೆ ಅಂಧಕವೃಷ್ಣಿಗೆ ದಾಯಾದಿ ಸೋದರ) ಎಂಬುವನ ಮಗ. ಉಗ್ರಸೇನನ ಮಗ ಕಂಸ, ಮಗಳು ರಾಜಮತಿ. ಕಂಸನು ತಂದೆಯನ್ನೇ ಸೆರೆಯಲ್ಲಿಟ್ಟು, ತಾನು ರಾಜನಾಗಿದ್ದನು; ಕೃಷ್ಣನು ಈ ದುರುಳನನ್ನು ಕೊಂದು ಉಗ್ರಸೇನನಿಗೆ ಮತ್ತೆ ಪಟ್ಟ ಕಟ್ಟಿದನು. ರಾಜಮತಿಯನ್ನು ತನ್ನ ದೊಡ್ಡಪ್ಪನ ಮಗ ನೇಮಿನಾಥನಿಗೆ ತಂದುಕೊಂಡು ಮದುವೆ ಮಾಡಿಸಿದನು. ಇದು ಜೈನಗ್ರಂಥಗಳಲ್ಲಿ ಬರುವ ವಿವರ.

ಹೀಗೆ ಕೃಷ್ಣ, ನೇಮಿ ಇಬ್ಬರೂ ಹರಿವಂಶದವರು, ಸಮಸಾಮಯಿಕರು, ಬಂಧುಗಳು. ಅವರಲ್ಲಿ ಪರಸ್ಪರ ಸ್ಪರ್ಧೆ ನಡೆದುದುಂಟು. ಕೃಷ್ಣನು ನೇಮಿಯ ಹಿರಿಮೆಯನ್ನು ಒಪ್ಪಿಕೊಂಡು ಅವನ ಶಿಷ್ಯನಾದ ನೆಂದು ಜೈನರ ವಿಶ್ವಾಸ. ನೇಮಿ (ಅರಿಷ್ಟನೇಮಿ)ಯ ಹೆಸರು ಕೂಡ ಋಗ್ವೇದದಲ್ಲಿ ಬರುತ್ತದೆ: "ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟ ನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು". ಎಂದರೆ ಕೃಷ್ಣನ ಕಾಲವೂ ವೈದಿಕ ಯುಗವೇ ಎಂದಾಯಿತು.

ಕೃಷ್ಣನ ಕಥೆಯನ್ನು ಜೈನರು ಅಳವಡಿಸಿಕೊಂಡು ಹರಿವಂಶ ಪುರಾಣವನ್ನು ಸಿದ್ಧಪಡಿಸಿದರು. ಇದರಲ್ಲಿ ಕೃಷ್ಣ, ಬಲರಾಮ, ನೇಮಿ ಇವರ ಕಥೆಗಳು ವಿಸ್ತಾರವಾಗಿ ಬರುತ್ತವೆ. ಜೈನರ ಅಂಗವಾಙ್ಮಯ ದಲ್ಲಿ ಒಂಬತ್ತನೆಯ ಅಂಗವು (ಅನುತ್ತರೋಪಪಾತಿಕದಶಾನಿ) ಕೃಷ್ಣನ ಕಥೆಯನ್ನು ಹೇಳುತ್ತದೆ; ದ್ವಾರಾವತಿಯ ನಾಶ, ಕೃಷ್ಣನ ಮರಣ ಎರಡರ ಪ್ರಸ್ತಾಪವೂ ಇಲ್ಲಿ ಬರುತ್ತದೆ. ಆದರೆ ಇಲ್ಲಿನ ಕೃಷ್ಣ ಜೈನ ಧರ್ಮಾನುಯಾಯಿ. ಹನ್ನೆರಡನೆಯ ಉಪಾಂಗದಲ್ಲಿಯೂ ವೃಷ್ಣಿವಂಶದ ಚರಿತ್ರೆ (ವಣ್ಹಿದಸಾಓ) ಯುಂಟು; ಕಣ್ಹ–ವಾಸುದೇವನ ಪ್ರಸ್ತಾಪ ಬರುತ್ತದೆ. ಅವರ ತ್ರಿಷಷ್ಟಿ ಶಲಾಕಾಪುರುಷ (63 ಮಂದಿ ಉತ್ತಮ ಪುರುಷ) ರಲ್ಲಿ ಒಂಬತ್ತು ಮಂದಿ ವಾಸುದೇವನನ್ನು, ಒಂಬತ್ತುಮಂದಿ ಪ್ರತಿವಾಸುದೇವ (ವಿಷ್ಣುದ್ವಿಷ) ರನ್ನೂ,ಒಂಬತ್ತು ಮಂದಿ ಬಲದೇವರನ್ನೂ

ಸೇರಿಸುತ್ತಾರೆ. ವಾಸುದೇವರ ಶತ್ರುಗಳಾದ ಪ್ರತಿವಾಸುದೇವರನ್ನು ಈ ಲಕ್ಷಣಪುರುಷರ ಗೋಷ್ಠಿಗೆ ಸೇರಿಸದೆ 54 ಉತ್ತಮ ಪುರುಷರನ್ನೇ ಹೇಳುವ ಸಂಪ್ರದಾಯವೂ ಉಂಟು. ಇದಕ್ಕೆ ಸಮವಾಯಂಗದ ಎಣಿಕೆಯೊಂದು ನಿದರ್ಶನ.

ಕೃಷ್ಣನು ಮಹಾಭಾರತದಲ್ಲಿ ಓತಪ್ರೋತವಾಗಿ ಸೇರಿರುವ ಶಕ್ತಿ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣಗಳೇ ಮಹಾಭಾರತದ ಜೀವಾಳವೆಂದರೆ ಕೃಷ್ಣನೇ ಅದರ ಜೀವಸ್ವರ. ಈ ಬೃಹದ್ಗ್ರಂಥದಲ್ಲಿ ಪ್ರಪಂಚದ ವಿಶಿಷ್ಟ ವಿದ್ಯಮಾನಗಳೂ ಹಾದು ಹೋಗುತ್ತವೆಯಾದರೂ, ಪಾಂಡವರ ಕೌರವರ ವಂಶಗಳ ಚರಿತ್ರೆ ಒದಗುವುದಾದರೂ, ಮುಖ್ಯವಾಗಿ ಕೃಷ್ಣನೇ ಈ ಕಥೆಯ ಸೂತ್ರಧಾರ.

ಆದರೆ ಇಲ್ಲಿನ ಕೃಷ್ಣನಿಗೆ ಮನುಷ್ಯ ಛಾಯೆಯೇ ಹೆಚ್ಚು. ಪಾಂಡವರ ತಾಯಿಯಾದ ಕುಂತಿಗೆ ಕೃಷ್ಣನು ಸೋದರಳಿಯ; ಯದುವಂಶದವನು; ವಾರ್ಷ್ಣೇಯ; ದ್ವಾರಕೆಯ ದೊರೆ. ದುರುಳನಾದ ಕಂಸನನ್ನು ಕೊಂದು ಸಜ್ಜನನಾದ, ಉಗ್ರಸೇನನಿಗೆ ಯಾದವಾಧಿಪತ್ಯವನ್ನು ಕೊಡಿಸಿದ ವೀರ, ಧರ್ಮಪರ. ಮಥುರೆಯನ್ನು ಮುತ್ತಿದ ಜರಾಸಂಧ (ಕಂಸನ ಮಾವ)ನ ವಿಪುಲವಾದ ಸೇನೆಯನ್ನು ಹಿಮ್ಮೆಟ್ಟಿಸಿದ ಚತುರ. ನಿಶ್ಚಿತಾರ್ಥ ನಡೆದಿದ್ದ ಶಿಶುಪಾಲನಿಂದ ರುಕ್ಮಿಣಿಯನ್ನು ಅಪಹರಿಸಿಕೊಂಡು ಹೋದ ರಸಿಕ. ದ್ರೌಪದೀ ಸ್ವಯಂವರದ ಸಂದರ್ಭದಲ್ಲಿಯೇ ಮೊಟ್ಟ ಮೊದಲಿಗೆ ಪಾಂಡವ ಪಕ್ಷಪಾತವನ್ನು ಹಿಡಿದು ಕಡೆಗೆ ಕೌರವರನ್ನು ನಿಗ್ರಹಿಸಿದ ರಾಜಕಾರಣಿ, ಶೂರ, ಕುಶಲಿ, ಮರ್ಮಜ್ಞ. ಸುಭದ್ರಾಹರಣದಲ್ಲಿ ಅರ್ಜುನನಿಗೆ ನೆರವಾದ ನೆಚ್ಚಿನ ಸಖ. ಯುಧಿಷ್ಠಿರನ ರಾಜಸೂಯ ಸಂದರ್ಭದಲ್ಲಿ ಸರ್ವಮಾನ್ಯವಾಗಿ ಅರ್ಘ್ಯಾಭಿಹರಣ ಮಾಡಿದಾಗ ಭೀಷ್ಮನಿಂದ ಅದ್ವಿತೀಯ ಪರಾಕ್ರಮಿಯೆಂದೂ ಅಸಮಪ್ರಜ್ಞಾನಿಯೆಂದೂ ಪ್ರಶಸ್ತಿ ಪಡೆದವನು. ಧರ್ಮರಾಜ್ಯದ ಸ್ಥಾಪನೆಗೆ ಚತುರೋಪಾಯಗಳನ್ನೂ ಪ್ರಯೋಗಿಸಿ ಯಶಸ್ವಿಯಾದ ಮಹಾಪುರುಷ.

ಕೃಷ್ಣನ ಪರಾಕ್ರಮಕ್ಕೆ, ಕ್ಷಮೆಗೆ, ನ್ಯಾಯಪರತೆಗೆ, ಧರ್ಮನಿಷ್ಠೆಗೆ, ವಿಚಾರವೈಶಾರದ್ಯಕ್ಕೆ, ರಾಜನೀತಿ ಕೌಶಲ್ಯಕ್ಕೆ, ಆಶ್ರಿತವಾತ್ಸಲ್ಯಕ್ಕೆ ಮಹಾಭಾರತದುದ್ದಕ್ಕೂ ನಿದರ್ಶನಗಳು ದೊರೆಯುವುವು. ಅಲ್ಲಲ್ಲಿ ಪ್ರಕ್ಷಿಪ್ತಗಳನ್ನೂ, ಉತ್ಪ್ರೇಕ್ಷೆಗಳನ್ನೂ, ಅತ್ಯುಕ್ತಿಗಳನ್ನೂ ಬಿಟ್ಟರೆ ಇಲ್ಲಿ ದೃಢವಾಗಿ ನಿಲ್ಲುವುದು, ಎದ್ದು ಕಾಣುವುದು ಕೃಷ್ಣನ ಮನುಷ್ಯತ್ವ. ಗೀತೆಯಲ್ಲಿ ಅರ್ಜುನನು ಹೇಳುವಂತೆ, ಪ್ರಮಾದದಿಂದಲೋ, ಪ್ರಸಭದಿಂದಲೋ, ಮಹಿಮೆಯನ್ನು ತಿಳಿಯದೆಯೋ ಪಾಂಡವರ ಪಾಲಿಗಂತೂ ಇವನು ಸಖ, ಯಾದವ. ದುರ್ಯೋಧನನಾಗಲೀ ಶಿಶುಪಾಲನಾಗಲೀ ಕೃಷ್ಣನಲ್ಲಿ ದೇವತ್ವವನ್ನು ಕಾಣದಿದ್ದರೆ ಆಗ ಯಾರಿಗೂ ಆಶ್ಚರ್ಯವಾಗಲಿಲ್ಲ, ಅಸಹಜವೆನಿಸಲಿಲ್ಲ.

ಮನುಷ್ಯನೇ ಆದರೂ ಅವನ ಲೋಕೋತ್ತರ ಚಾರಿತ್ರ್ಯವು ಮಹಾಭಾರತದಲ್ಲಿ ಕಾಣುತ್ತದೆ. ಇಲ್ಲಿ ಅವನು ಪುರುಷೋತ್ತಮ, ಸರ್ವತಂತ್ರ ವಿಶಾರದ; ಅವನ ಯುಕ್ತಿ ಅಪ್ರತಿಹತವಾದುದು. ಆದರೆ ಅವನ ಕ್ಷಾತ್ರತೇಜಸ್ಸಿಗಿಂತ ಬ್ರಾಹ್ಮವರ್ಚಸ್ಸು ಹೆಚ್ಚಿನದು. ಕೃಷ್ಣನು ಯಾವ ಸಂದರ್ಭದಲ್ಲಿಯೂ ಸಮರಪ್ರಿಯನಾಗಿ ಆಯತಪ್ಪಿದ ಶೂರನಲ್ಲ. ಯುದ್ಧವನ್ನು ನಿಲ್ಲಿಸಲೆಂದೇ ಸರ್ವಪ್ರಯತ್ನ ಮಾಡಿದನು. ಅಷ್ಟು ಮಾತ್ರವಲ್ಲದೆ, ಕ್ಷತ್ರಿಯನಾದರೂ ಕೃಷ್ಣನದು ಸಾತ್ವಿಕ ಸ್ವಭಾವ, ಪಾಂಡವರ ಹಿತವನ್ನು ಬಯಸಿ, ಧರ್ಮದ ಅಭ್ಯುತ್ಥಾನಕ್ಕಾಗಿ, ರಾಜಕಾರಣದಲ್ಲಿಯೇ ಇದ್ದನಾದರೂ ಯೋಗದ ಮೇಲೆ ಅವನ ಒಲವು ನಿಸ್ಸಂದೇಹವಾದುದು. 'ಶಾಂತಿಪರ್ವ'ದಲ್ಲಿ ಕೃಷ್ಣನು ದಿನವೂ ಬೆಳಗಿನ ಜಾಮಗಳಲ್ಲಿಯೇ ಎದ್ದು ಬ್ರಹ್ಮನಲ್ಲಿ ಚಿತ್ತವನ್ನು

ನಿದಿಧ್ಯಾಸಮಾಡಿ ಧ್ಯಾನತತ್ಪರನಾಗಿರುತ್ತಿದ್ದನೆಂಬ ವಿವರವಿದೆ (53-2-3). ಭಾಗವತದಲ್ಲಿಯೂ (10,70) ಕೃಷ್ಣನು ಪ್ರತಿದಿನ ಪ್ರಾತಃಕಾಲದಲ್ಲಿ ಧ್ಯಾನಮಗ್ನನಾಗಿ ತನ್ನ ಆತ್ಮವನ್ನು ವಿಶ್ವಾತ್ಮದೊಂದಿಗೆ ಸೇರಿಸುತ್ತಿದ್ದ ನೆಂಬ ಪ್ರಸ್ತಾಪವು ಬರುತ್ತದೆ.

ಕೃಷ್ಣನ ಈ ವ್ಯಕ್ತಿಚಿತ್ರ ನಮ್ಮಲ್ಲಿ ಅಷ್ಟಾಗಿ ಬಳಕೆಯಲ್ಲಿಲ್ಲ. "ಯತ್ರ ಯೋಗೇಶ್ವರಃ ಕೃಷ್ಣೋ ತತ್ರ ಪಾರ್ಥೋ ಧನುರ್ಧರಃ" ಎಂಬ ಮಾತು ಪ್ರಸಿದ್ಧವಾಗಿದ್ದರೂ ಅದರ ತಾತ್ಪರ್ಯ ಪ್ರಚುರವಾಗಿಲ್ಲ. ಯೋಗಿಯಾದ, ಆಚಾರ್ಯಪುರುಷನಾದ ಕೃಷ್ಣನು (ಭಗವಾನ್) ಭಾಗವತ ಸಂಪ್ರದಾಯದ ಪ್ರವರ್ತಕ ಪುರುಷನೆಂದು ತಿಳಿದುಬರುತ್ತದೆ.

ವಾಸುದೇವನನ್ನು ಭಗವಂತನೆಂದು ವ್ಯವಹರಿಸಿದ ಭಾಗವತ ಪಂಥದವರ ಆದಿಗ್ರಂಥ ಭಗವದ್ಗೀತೆ ಎನ್ನುವುದು ಸ್ಪಷ್ಟವಾಗಿದೆ. ಪಾಂಚರಾತ್ರ ಪ್ರಕ್ರಿಯೆಗಳ ಮಡಿಲಿಂದ ಎದ್ದ ಈ 'ಹರಿಗೀತೆ' ಪ್ರಾಚೀನವಾದ ಸಾಂಖ್ಯ-ಯೋಗಗಳ ಸಮನ್ವಯಮಾಡಲೆಣಿಸಿದ ಪ್ರಥಮ ಪ್ರಯತ್ನ. ವೈದಿಕ ಧರ್ಮದ ಚೌಕಟ್ಟಿನಿಂದ ಹೊರಗೆ ಆರಂಭವಾದ ಭಾಗವತ ಪಂಥವು ದೇಶದ ಸನಾತನ ಧರ್ಮದೊಂದಿಗೆ ಸೇರಿ ಹರಿದುದು ಭಗವದ್ಗೀತೆ ಯಿಂದ ಎಂದು ಕೆಲವು ಪರಿಣತರ ಸಿದ್ಧಾಂತ. ಇದು ಹೇಗಾದರೂ ಇರಲಿ, ಭಗವದ್ಗೀತೆಯಲ್ಲಿ ವಾಸುದೇವನು ಸರ್ವೋತ್ತಮ, ಸರ್ವೇಶ್ವರ, ಪರಮಾತ್ಮ ಎಂಬ ಕಲ್ಪನೆ ಕಾಣುತ್ತದೆ.

ಮಹಾಭಾರತದಲ್ಲಿ ಪ್ರಸಿದ್ಧ ಪುರುಷನಾದ ಇವನು ಮಹಾಭಾರತದ 'ಖಿಲ'ವಾದ ಹರಿವಂಶದಲ್ಲಿ ವಿಷ್ಣುವಿನ ಅವತಾರವಾಗಿ ಪರಿಣಮಿಸಿ ಲೀಲಾಮೂರ್ತಿಯಾದನು. ಪರಮಾತ್ಮನೆಂದು ಪರಿಗಣಿತನಾದ ಕೃಷ್ಣನ ಅದ್ಭುತವಾದ ಲೀಲಾಮಾನುಷ ಕಥೆಗೆ 'ಹರಿವಂಶ'ವೇ ಆಕರವೆನ್ನಬಹುದು. ಅನಂತರ ಇದೇ ಕಥೆ ಭಾಗವತದ ಮುಖ್ಯ ವಸ್ತುವಾಯಿತು. ಹರಿವಂಶದ ರಚನೆ ಕ್ರಿಸ್ತಾಬ್ದ ಮೂರನೆಯ ಶತಮಾನದ ಸುಮಾರಿಗೆ ಆಯಿತೆಂದು ವಿದ್ವಾಂಸರ ಮತ. ಇದೇ ಕಾಲದಲ್ಲಿ ಇದೇ ಧಾಟಿಯನ್ನು ಹಿಡಿದು ವಿಷ್ಣುಪುರಾಣವೂ ಸಿದ್ಧವಾಯಿತು. ಕಾಲದ ಗೊಂದಲ ಇದ್ದೇ ಇದೆಯಾದರೂ ಈ ಸುಮಾರಿಗೆ ಸಾತ್ತ್ವತನಾದ ವಾಸು ದೇವನಿಗೂ ಪರಮಾತ್ಮನಾದ ವಿಷ್ಣುವಿಗೂ ತಾದಾತ್ಮ್ಯವನ್ನು ಭಾಗವತರು ಸಂಘಟಿಸಿದರು. ಮೇಲೆ ಹೇಳಿದ ನಾರಾಯಣೀಯದಲ್ಲಿ ವಿಷ್ಣುವಿನ ದಶಾವತಾರಗಳನ್ನು ಪ್ರಸ್ತಾಪಿಸುತ್ತ ಒಂಬತ್ತನೆಯ ಅವತಾರವನ್ನು ಸಾತ್ತ್ವತನೆಂದೇ ಕರೆದಿರುವುದು ಸ್ವಾರಸ್ಯವಾಗಿದೆ. ಭಾಗವತ ಪುರಾಣದಲ್ಲಿ ಸಾತ್ತ್ವತ ಸಂಪ್ರದಾಯವನ್ನು ನಿರೂಪಿಸಿದ ನಾರದ ಋಷಿಯೂ ಅವತಾರವೇ.

ಕೃಷ್ಣನ ವ್ಯಕ್ತಿತ್ವದಲ್ಲಿ ಇದು ಸಹಜವಾದ ಪರಿವರ್ತನೆಯೇ. ಮಹಾಭಾರತದ ಚತುರ ರಾಜಕಾರಣಿ, ಭಗವದ್ಗೀತೆಯ ಯೋಗೇಶ್ವರನಾದ ಯಾದವ ಮಹಾಪುರುಷನು ಭಾಗವತ ಪಂಥದ ಪ್ರವರ್ತಕನಾಗಿ ಭಗವಾನನಾದುದು ನಾಡಿನಲ್ಲೆಲ್ಲ ಅವನನ್ನು ಪೂಜಾಸ್ಥಾನದಲ್ಲಿ ನಿಲ್ಲಿಸಿತು. 'ಭಗವಾನ್' ರಾಮಕೃಷ್ಣ ಪರಮಹಂಸರನ್ನು, 'ಭಗವಾನ್' ರಮಣ ಮಹರ್ಷಿಗಳನ್ನು, 'ಭಗವಾನ್' ಸಾಯಿಬಾಬಾ ಮುಂತಾದವರನ್ನು ಪೂಜೆಮಾಡುವ ಪದ್ಧತಿ ಅಲ್ಲಲ್ಲಿ ಬಳಕೆಯಲ್ಲಿದೆಯಷ್ಟೆ. ಭಗವದ್ಗೀತೆಯಿಂದ ನಮ್ಮ ಸಂಸ್ಕೃತಿಯಲ್ಲಿ ಕೃಷ್ಣನ ಸ್ಥಾನ ಸುಭದ್ರವಾಯಿತು. ಭಾಗವತ ಪಂಥದ (ಅಥವಾ ಏಕಾಂತಿಕ ಧರ್ಮದ) ಗ್ರಂಥವಾದ ಇದು ಭಗವಾನನಾದ ಕೃಷ್ಣನ ದರ್ಶನ, ಉಪದೇಶ, ಆದೇಶ. ಇದನ್ನು ಸಂಪ್ರದಾಯವು 'ಉಪನಿಷತ್ತು', 'ಯೋಗಶಾಸ್ತ್ರ', 'ಬ್ರಹ್ಮವಿದ್ಯೆ' ಎಂದು ವ್ಯವಹರಿಸುವಷ್ಟು ಪ್ರಭಾವಶಾಲಿಯಾಯಿತು.

ಗೀತೆಯ ಕಾಲವೂ ಸಂದಿಗ್ಧವಾದುದು. ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದ ಸುಮಾರಿಗೆ ಭಗವದ್ಗೀತೆ ರೂಪುಗೊಂಡಿತೆಂದೂ, ಮೊದಲಿಗೆ ಇದು ಮಹಾಭಾರತದ ಭೀಷ್ಮಪರ್ವದಲ್ಲಿ ಸೇರಿರಲಿಲ್ಲವೆಂದೂ ಒಂದು ವಾದವಿದೆ. ಇದು ಹೇಗಾದರೂ ಇರಲಿ. ಕ್ರಿಸ್ತಾಬ್ದ ಏಳನೆಯ ಶತಮಾನದ ಸುಮಾರಿಗೆ ಬದುಕಿದ್ದ ಬಾಣಭಟ್ಟನಿಗೆ ಭಗವದ್ಗೀತೆಯು ಮಹಾಭಾರತಕ್ಕೆ ಸೇರಿದ್ದ ಗ್ರಂಥವೆಂದು ತಿಳಿದಿದ್ದಿತು. ಆ ಕಾಲಕ್ಕೆ ಆಗಲೇ ಗೀತೆ ಭಾರತಪಾರಿಜಾತದ ಮಧುಭೂತವಾಗಿದ್ದಿತು. ಹೀಗೆ ಅದರ ವಿಖ್ಯಾತಿ ದೃಢವಾಯಿತೆಂದು ಕಾಣುತ್ತದೆ. ಕ್ರಿಸ್ತಾಬ್ದ 883 ರಲ್ಲಿ ತೀರಿಕೊಂಡ ಕಾಶ್ಮೀರದ ರಾಜ ಅವಂತಿವರ್ಮನು ತಾನು ತೀರಿಕೊಳ್ಳುವ ಮುನ್ನ ಭಗವದ್ಗೀತೆಯನ್ನು ಆದ್ಯಂತವಾಗಿ ಓದಿಸಿ ಕೇಳಿದನೆಂದು ಕಲ್ಹಣನು ತನ್ನ ರಾಜ ತರಂಗಿಣಿ (5, 125) ಯಲ್ಲಿ ಹೇಳಿದ್ದಾನೆ. ಈ ಮೊದಲೇ ಶಂಕರಾಚಾರ್ಯರು ಭಗವದ್ಗೀತೆಯ ಮೇಲೊಂದು ಭಾಷ್ಯವನ್ನು ಬರೆದು ಅದರ ವೈಶಿಷ್ಟ್ಯವನ್ನು ವಿಸ್ತರಿಸಿದ್ದರು. ಭಾರತದೇಶದ ಪ್ರಸ್ಥಾನತ್ರಯದಲ್ಲಿ ಭಗವದ್ಗೀತೆ ಒಂದೆನಿಸಿದ್ದಿತು.

ಗೀತೆಯು ಸಮನ್ವಯ ಗ್ರಂಥ ಎನ್ನುವುದು ನಿರ್ವಿವಾದ. ಗೀತೆ ಅವತರಿಸುವ ವೇಳೆಗಾಗಲೇ ಉಪನಿಷತ್ತುಗಳ ಜ್ಞಾನ ಪ್ರಸ್ಥಾನ ಸಿದ್ಧವಾಗಿದ್ದಿತು; ವೇದದ ಕರ್ಮಕಾಂಡ ಬೇರೂರಿದ್ದಿತು. ಜ್ಞಾನ–ಕರ್ಮ ಸಮುಚ್ಚಯವಾದದ ಅಗತ್ಯವಿದ್ದಿತು. ಸಾಂಖ್ಯದರ್ಶನವೂ, ಯೋಗದರ್ಶನವೂ ವಿಭಿನ್ನವಾಗಿ ರೂಪುಗೊಂಡಿದ್ದುವು; ಅವುಗಳಿಗೆ ಸಮನ್ವಯವನ್ನು ಕಾಣಿಸುವ ಕಾತರ ಗೀತೆಯಲ್ಲಿ ಸ್ಪಷ್ಟವಾಗಿದೆ. ನಿತ್ಯಧರ್ಮದಲ್ಲಿ ಬೌದ್ಧಧರ್ಮದ ಪ್ರಭಾವವೂ ಸಾಕಷ್ಟು ಇದ್ದಿತು; ಅದನ್ನು ಸನಾತನ ಧರ್ಮವು ಜೀರ್ಣಿಸಿಕೊಳ್ಳುವುದರಲ್ಲಿದ್ದಿತು. ಇಂಥ ಸಂಧಿಸಮಯದಲ್ಲಿ ಸಮನ್ವಯ ರೂಪದ ಗೀತೆ ಅವತರಿಸಿದುದು ಹಿಂದೂ ಧರ್ಮದ ಸಂಘಟನೆಗೂ ಅವ್ಯಾಹತ ಪ್ರವೃತ್ತಿಗೂ ಎಡೆಮಾಡಿಕೊಟ್ಟಿತು. ಇದು ಗೀತೆಯ ಹಿರಿಮೆ. ಅದರ ಜೀವ ಸ್ವರೂಪನಾದ ಕೃಷ್ಣನು ಇಲ್ಲಿ ಲೋಕಪೂಜ್ಯನಾದುದು ಗೀತಾಚಾರ್ಯನೆಂದು.

ಗೀತೆಯು ಭಾಗವತ ಗ್ರಂಥವಾದುದರಿಂದ ಭಕ್ತಿಯ ಉತ್ಕರ್ಷವನ್ನು ನಿರೂಪಿಸುತ್ತದೆ. ಅಲ್ಲಿ ಪ್ರಪತ್ತಿ, ಈಶ್ವರಪ್ರಣಿಧಾನಗಳ ಮಾತು ಮತ್ತೆ ಮತ್ತೆ ಬರುತ್ತದೆ. ಕೃಷ್ಣಾರ್ಜುನ ಸಂವಾದ ರೂಪದಲ್ಲಿರುವ ಗೀತೆ ಬಹುಮಟ್ಟಿಗೆ 'ಭಗವಾನ್ ಉವಾಚ'. ಇಲ್ಲಿ ಆಚಾರ್ಯನಾದ ಕೃಷ್ಣನು ತನ್ನನ್ನು ಭಗವಂತನೆಂದೇ ವ್ಯವಹರಿಸಿಕೊಂಡಿರುವುದನ್ನು ಕಾಣುತ್ತೇವೆ. ತನ್ನಲ್ಲಿ ಶರಣುಹೋಗಬೇಕು; ತನ್ನಲ್ಲಿ ಭಕ್ತಿ ಮಾಡಬೇಕು; ತಾನೇ ವಿಧಾತ, ಸರ್ವನಿಯಾಮಕ, ಸ್ವತಂತ್ರ ಪರಮೇಶ್ವರನೆಂದು ಕೃಷ್ಣ ತಿಳಿಸುತ್ತಾನೆ. "ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು", "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ", "ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪರಮವ್ಯಯಂ" ಮುಂತಾದ ಮಾತುಗಳು ಆಚಾರ್ಯನಿಷ್ಠೆಯನ್ನು ಸೂಚಿಸುತ್ತವೆ. ಗೀತಾಚಾರ್ಯನಾದ ಕೃಷ್ಣನಿಗೂ ಭಗವಂತನಿಗೂ ತಾದಾತ್ಮ್ಯವನ್ನು ಭಾಗವತ ಪಂಥದವರು ಕಲ್ಪಿಸಿದರು.

ಇದೇನು ಅಸಾಧಾರಣವಾದ ಕಲ್ಪನೆ ಅಲ್ಲ. ಹಲವಾರು ನಿದರ್ಶನಗಳಿವೆ. ಋಗ್ವೇದ ಭಾಷ್ಯ ಬರೆದ ಸಾಯಣಾಚಾರ್ಯರು ತಮ್ಮ ಗುರುಗಳಾದ ವಿದ್ಯಾತೀರ್ಥರನ್ನು ಸ್ಮರಿಸುವ ಬಗೆಯನ್ನು ನೋಡಿ—

ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥ ಮಹೇಶ್ವರಂ ॥

ವಿದ್ಯಾತೀರ್ಥರು ಮನುಷ್ಯರೇ. ಶೃಂಗೇರಿ ಪೀಠದ ಗುರುಪರಂಪರೆಯಲ್ಲಿ, ಹತ್ತನೆಯವರು, 1228 ರಿಂದ 1333ರ ವರೆಗೆ ಬದುಕಿದ್ದವರು. ಸಾಯಣರು ಅವರನ್ನು 'ಮಹೇಶ್ವರ'ನೆಂದೇ ನಿರ್ದೇಶಿಸಿದರು; ವಿದ್ಯಾರಣ್ಯರು ಅವರಿಗಾಗಿ ಶೃಂಗೇರಿಯಲ್ಲಿ ದೇವಾಲಯವನ್ನೇ ಕಟ್ಟಿಸಿದರು. "ಗುರುರೇವ ಮಹೇಶ್ವರಃ" ಅಲ್ಲವೇ? ಕೃಷ್ಣನ ವ್ಯಕ್ತಿತ್ವದಲ್ಲಿಯೂ ಹೀಗೆಯೇ ಅವತಾರ ಕಳೆ ತುಂಬಿ ಬಂದಿತೆಂದರೆ ತಪ್ಪೇನಲ್ಲ.

ಮಹಾಭಾರತದ ಸೂತ್ರಧಾರನಾದ ಪಾಂಡವಪ್ರಾಣ–ಕೃಷ್ಣ, ಭಾಗವತಪಂಥದ ಪ್ರವರ್ತಕನಾದ ಯೋಗೇಶ್ವರ–ಕೃಷ್ಣ ಇವೆರಡೂ ಪ್ರಾಚೀನ ಚಿತ್ರಗಳಾದರೆ ಹರಿವಂಶ, ವಿಷ್ಣುಪುರಾಣ, ಭಾಗವತ ಪುರಾಣಗಳಲ್ಲಿ ಕೃಷ್ಣನ ಮತ್ತೊಂದು ಮಧ್ಯಕಾಲದ ಚಿತ್ರಣ ಇದೆ. ಅಭೀರ ಕನ್ಯೆಯರೊಂದಿಗೆ ಗೋವಳ ಬಾಲಕನಾದ ಕೃಷ್ಣನ ಶೃಂಗಾರ ಚೇಷ್ಟೆಗಳೂ, ಅವನ ಅದ್ಭುತ ಲೀಲೆಗಳೂ, ಲೋಕೋತ್ತರ ವೃತ್ತಗಳೂ ಇಲ್ಲಿ ಕಾಣುತ್ತವೆ. ನಮ್ಮಲ್ಲಿ ಸಾಮಾನ್ಯವಾಗಿ ಪ್ರಚಲಿತವಾಗಿರುವ ಕೃಷ್ಣನ ಕಲ್ಪನೆ ಇಲ್ಲಿಂದಲೇ ಉದ್ಭುದ್ಧವಾದುದು. ಮುಗ್ಧ ಗೋಪಾಲ ಬಾಲ, ನವನೀತ ಚೋರ, ಗೋಪಿಕಾ ಪರಿವೃತ, ವೇಣುಗಾನಲೋಲ, ರಾಧಾರಸಿಕ ಇತ್ಯಾದಿ ವಿವರಗಳೆಲ್ಲ ಇಲ್ಲಿನವು. ಮಹಾಭಾರತದ ಕೃಷ್ಣನಲ್ಲಿ, ಭಗವದ್ಗೀತೆಯ ಕೃಷ್ಣನಲ್ಲಿ ಈ ಗುಣಗಳನ್ನು ನಾವು ಕಾಣಲಾರೆವು.

ಈ ದೃಷ್ಟಿಯಿಂದ ಕೃಷ್ಣನ ವ್ಯಕ್ತಿತ್ವದ ಮುಖ್ಯ ಲಕ್ಷಣ ಶೃಂಗಾರ. ಗೀತಗೋವಿಂದ ಮುಂತಾದ ಕಾವ್ಯಗಳಲ್ಲಿ ಬರುವ ರಾಧಾಕೃಷ್ಣರ ಪ್ರಣಯ ಪ್ರಸಂಗ ಹೇಗೆ ಹುಟ್ಟಿತೆಂದು ನಿರ್ದೇಶಿಸುವುದು ಕಷ್ಟ, ಆದರೆ ಕೃಷ್ಣಭಕ್ತಿಪರವಾದ ಬ್ರಹ್ಮವೈವರ್ತ ಪುರಾಣದ 'ಪ್ರಕೃತಿಖಂಡ' (1, 7) ದಲ್ಲಿ ಲೋಕನಾಯಕನಾದ ಕೃಷ್ಣನು ಒಮ್ಮೆ ಸೃಷ್ಟಿಕಾರ್ಯದಲ್ಲಿ ತೊಡಗಬೇಕೆಂದು ಮನಸ್ಸು ಮಾಡಿದಾಗ ಅವನ ಸ್ತ್ರೀ ಶಕ್ತಿಯಾದ ರಾಧೆ ಅವನಿಂದಲೇ ಆವಿರ್ಭೂತಳಾದಳೆಂದೂ, ಅವರ ಸಂಯೋಗದಿಂದ ಬ್ರಹ್ಮಾಂಡವೇ ಒದಗಿ ಬಂದಿತೆಂದೂ, ಹೀಗೆ ಬಂದ ಅಂಡವನ್ನು ರಾಧೆ ಬಿಸುಟಳೆಂದೂ, ಅದರಿಂದ ಸಿಟ್ಟುಗೊಂಡ ಕೃಷ್ಣನು ರಾಧೆಗೆ ನಿತ್ಯ ತಾರುಣ್ಯವೂ ಬಂಜೆತನವೂ ಬರಲೆಂದು ಶಪಿಸಿದನೆಂದೂ ಕಥೆಯಿದೆ. ಆಗ ರಾಧೆಯ ಜಿಹ್ವಾಗ್ರದಿಂದ ಸರಸ್ವತಿಯು ಉತ್ಪನ್ನಳಾದಳಂತೆ; ರಾಧೆ ಇಬ್ಭಾಗವಾಗಿ ಎಡಭಾಗದಿಂದ ಲಕ್ಷ್ಮಿಯಾಗಿ ಪರಿಣಮಿಸಿದಳಂತೆ. ಇದನ್ನು ಕಂಡ ಕೃಷ್ಣನು ತಾನೂ ಇಬ್ಭಾಗವಾಗಿ ಎಡಭಾಗದಿಂದ ಚತುರ್ಭುಜ–ವಿಷ್ಣುವಾಗಿ ಪರಿಣಮಿಸಿದನಂತೆ. ಅನಂತರ ಕೃಷ್ಣನು ಲಕ್ಷ್ಮೀ–ಸರಸ್ವತಿಯರಿಬ್ಬರನ್ನೂ ವಿಷ್ಣುವಿಗೆ ದಾನಮಾಡಿದನೆಂದು ಕಥೆ ಮುಂದುವರೆಯುತ್ತದೆ.

ಆದರೆ ರಾಧೆಯ ಉಲ್ಲೇಖವು ದಶಾವತಾರಗಳನ್ನು ಹೇಳುವ ವಿಷ್ಣುಪುರಾಣದಲ್ಲಾಗಲೀ, ಕೃಷ್ಣಾವತಾರವನ್ನು ಹೆಚ್ಚು ಬೆಳೆಸಿರುವ ಬ್ರಹ್ಮಪುರಾಣದಲ್ಲಾಗಲೀ, ಮಹಾಭಾರತ, ಹರಿವಂಶ, ಭಾಗವತಗಳಲ್ಲಾಗಲೀ ಅಷ್ಟಾಗಿ ಬರುವುದಿಲ್ಲ. ದೇವೀಭಾಗವತದಲ್ಲಿ (9, 1, 1) ದುರ್ಗೆ, ಲಕ್ಷ್ಮಿ, ಸರಸ್ವತಿ, ಸಾವಿತ್ರಿಯರೊಂದಿಗೆ ರಾಧೆಯೂ "ಸೃಷ್ಟಿವಿಧೌ ಪಂಚಧಾ ಪ್ರಕೃತಿ"ಯಲ್ಲಿ ಪರಿಗಣಿತಳಾಗಿದ್ದಾಳೆ; ಅಲ್ಲಿಯೇ ರಾಧೆಯನ್ನು "ಪಂಚಪ್ರಾಣಾದೇವಿ"ಯೆಂದು ಬಣ್ಣಿಸಿದ್ದಾರೆ. ಬ್ರಹ್ಮವೈವರ್ತದಲ್ಲಿ ರಾಧೆ ಶ್ರೀಕೃಷ್ಣಪರಮಾತ್ಮನ ರಾಸಮಂಡಲ ಸಂಭೂತೆ, ರಾಜೇಶ್ವರಿ ಎಂಬ ಮಾತು ಬರುತ್ತದೆ. ಕೃಷ್ಣನ ಸ್ವರ್ಗವಾದ ಗೋಲೋಕದಲ್ಲಿ ರಾಧೆಯು ಕೃಷ್ಣನ ಶಕ್ತಿಯಾಗಿದ್ದುಕೊಂಡು ನಾನಾ ಪ್ರಕಾರ ಶೃಂಗಾರ ಕ್ರಿಯೆಗಳಲ್ಲಿ ನಿರತಳಾಗುತ್ತಾಳೆಂಬುದೂ ಇದೇ ಪುರಾಣದಲ್ಲಿ ಬರುವ ಪ್ರಸ್ತಾಪ. ವರಾಹ ಕಲ್ಪದಲ್ಲಿ ವೃಷಭಾನುವಿನ ಮಗಳಾಗಿ ಅವತರಿಸಿದ ಈ ಸ್ತ್ರೀರತ್ನವು ("ಕೋಟಿಸೂರ್ಯಸಮಾ ಜುಷ್ಟಪುಷ್ಪಜಾಜ್ವಲ್ಯವಿಗ್ರಹಾ") ಕೃಷ್ಣನ ವಕ್ಷಃಸ್ಥಳದಲ್ಲಿ ನಿಂತು ಇಡೀ ವಿಶ್ವಕ್ಕೆ ಆಧಾರರೂಪಳಾಗಿದ್ದಾಳೆಂದೂ, ಜಗತ್ತಿಗೆ ಅವಳೇ ಉಪಾದಾನಕಾರಣಳೆಂದೂ, ಅವ

ಇಲ್ಲದೆ ಕೃಷ್ಣನು ಸರ್ವಥಾ ಅಸಮರ್ಥನೆಂದೂ ಈ ಪುರಾಣಹೇಳುತ್ತದೆ. ಇಲ್ಲಿನ "ಕೃಷ್ಣ–ಗೋಪಿಕಾಜನ್ಮ ಖಂಡ" (15) ದಲ್ಲಿ ಬರುವ ಉಪಮೆ ಸ್ವಾರಸ್ಯವಾಗಿದೆ—

ವಿನಾ ಸ್ವರ್ಣಂ ಸ್ವರ್ಣಕಾರಃ
ಕುಂಡಲಂ ಕರ್ತುಮಕ್ಷಮಃ

ಚಿನ್ನವಿಲ್ಲದೆ ಅಕ್ಕಸಾಲೆ ಓಲೆಮಾಡುವುದು ಹೇಗೆ? ಕೃಷ್ಣ ಅಕ್ಕಸಾಲೆಯಾದರೆ ರಾಧೆ ಚಿನ್ನ. ನಾರದಪಾಂಚರಾತ್ರದಲ್ಲಿಯೂ ಕೃಷ್ಣ–ರಾಧೆಯರ ಶೃಂಗಾರಕ್ರೀಡೆ ವರ್ಣಿತವಾಗಿದೆ. ಇವರಿಬ್ಬರ ಶೃಂಗಾರ ಭೂಮಿಯಾದ ವ್ರಜಮಂಡಲವು ಪರಬ್ರಹ್ಮದ ಪ್ರತೀಕವೆಂದೂ, ಆನಂದರೂಪಿಯಾದ ಕೃಷ್ಣನಿಗೆ ರಾಧೆಯು ಆತ್ಮಸ್ವರೂಪಳೆಂದೂ ಸ್ಕಂದಪುರಾಣದ ನಿರ್ದೇಶನ. ಅಲ್ಲಿನ "ವೈಷ್ಣವ ಖಂಡ" (ವ್ರಜ ಭೂಮಿ ಮಾಹಾತ್ಮ್ಯ) ದಲ್ಲಿ "ಆತ್ಮಾರಾಮಸ್ಯ ಕೃಷ್ಣಸ್ಯ ಧ್ರುವಂ ಆತ್ಮಾಸ್ತಿ ರಾಧಿಕಾ" ಎಂಬ ಮಾತು ಬರುತ್ತದೆ.

ಪ್ರೇಮಮಯಿಯಾದ ರಾಧೆ, ಪ್ರಣಯಿಯಾದ ಕೃಷ್ಣ ಇವರ ಸಂಬಂಧಕ್ಕೆ ತಾತ್ವಿಕವಾದ, ಪಾರಮಾರ್ಥಿಕವಾದ ತಾತ್ಪರ್ಯವುಂಟು. ಗೋಪಿಕಾಗೀತೆಯಲ್ಲಿ ಗೋಪಿಯರು ಹೇಳುವುದನ್ನು ಕೇಳಿ—

ನ ಖಲು ಗೋಪಿಕಾನಂದನೊ ಭವಾನ್ ಅಖಿಲದೇಹಿನಾಂ ಅಂತರಾತ್ಮದೃಕ್ !
ವಿಖನಸಾರ್ಥಿತೋ ವಿಶ್ವಗುಪ್ತಯೇ ಸಖ ಉದೇಯಿವಾನ್ ಸಾತ್ವತಾಂ ಕುಲೇ!

"ನೀನು ಗೊಪಿಯ ಮಗನಲ್ಲ, ಎಲ್ಲ ಪ್ರಾಣಿಗಳ ಅಂತಃಸಾಕ್ಷಿ, ಎಂದರೆ ಪರಮಾತ್ಮ. ಜಗತ್ತಿನ ರಕ್ಷಣೆಗೆಂದು ಸಾತ್ವತ ವಂಶದಲ್ಲಿ ಹುಟ್ಟಿದೆಯಷ್ಟೆ!" ಎಂದು ಗೋಪಿಯರು ಅರಿತಿದ್ದಾರೆ. ರಾಧೆಯು ಭಗವತ್ಪ್ರೇಮದ ಸಾಕ್ಷಾತ್ ಪ್ರತೀಕ. ಜೀವನಿಗೆ ಪರಮಾತ್ಮನಲ್ಲಿ ನೈಜವಾದ, ಅನನ್ಯವಾದ, ಅತ್ಯುತ್ಕಟವಾದ ಪ್ರೇಮ, ಅನುರಾಗ, ಭಕ್ತಿಯಿರಬೇಕೆಂಬುದು ರಾಧಾಕೃಷ್ಣರ ಪ್ರೇಮಸಂದರ್ಭದಲ್ಲಿ ಧ್ವನಿತವಾಗುತ್ತದೆ.

ಅಂತೂ, ಕೃಷ್ಣನ ಕಲ್ಪನೆ ಸ್ವಾರಸ್ಯವಾದುದು. ಮನುಷ್ಯನಾಗಿದ್ದವನು ತನ್ನ ಲೋಕೋತ್ತರವಾದ ಚಾರಿತ್ರದಿಂದ ದೇವರೆಂದೇ ಪರಿಗಣಿತನಾದನೋ, ಅಥವಾ ಭಗವಂತನೇ ಲೀಲಾಮಾನುಷರೂಪದಿಂದ ಅವತರಿಸಿದನೋ ಈ ವಿವಾದವು ಅಪ್ರಸ್ತುತವಾದುದು. ಗೀತೆಯಲ್ಲಿಯೇ "ಹೇಗೆ ನೋಡಿದರೆ ಹಾಗೆ ಕಾಣುತ್ತೇನೆ" ಎಂಬ ಅರ್ಥವನ್ನು ಧ್ವನಿಸುವ "ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ" ಎಂಬ ಆಶ್ವಾಸನೆಯಿದೆ. ಕೃಷ್ಣನನ್ನು ದೇವರೆಂದವರೂ ಅವನ ಅವತರಣ ತಿರೋಧಾನಗಳನ್ನು ಒಪ್ಪಿಕೊಂಡರು, ಅವನಿಗೆ ಆಯುರ್ಮಾನಗಳನ್ನು ವಿಧಿಸಿದರು, ಅವನ ಜನ್ಮವನ್ನು ನಿರ್ದೇಶಿಸಿದರು; ಕೃಷ್ಣಾವತಾರವು ನಮಗೆ ತುಂಬ ಪ್ರಿಯವಾದುದು, ಸಮೀಪವಾದುದು ಎಂಬುದನ್ನು ಸ್ಪಷ್ಟಪಡಿಸಿದರು.

ಮಹಾಭಾರತದ ಕಾಲನಿರ್ಣಯದ ವಿಚಾರವಾಗಿ ವಿಪುಲವಾದ ವಿವಾದ ನಡೆದಿದೆ. ಸಂಪ್ರದಾಯದ ಎಣಿಕೆಯಂತೆ ಮಹಾಭಾರತ ಯುದ್ಧವು ನಡೆದದ್ದು ದ್ವಾಪರಯುಗದಲ್ಲಿ, ಅದೂ ಅದರ ಕೊನೆಗಾಲದಲ್ಲಿ. ಇದು ಕ್ರಿಸ್ತಪೂರ್ವ 3139ಕ್ಕೆ ಸರಿಯಾಗುತ್ತದೆ. ಈ ದಿನವೇ ಹರಿಯು (ಕೃಷ್ಣನು) ಜಗತ್ತಿನಿಂದ ಮರೆಯಾದನೆಂದೂ, ಅಂದೇ ಕಲಿಯ ಪ್ರವೇಶವಾಯಿತೆಂದೂ ವಿಷ್ಣುಪುರಾಣ ಹೇಳುತ್ತದೆ. ಕೃಷ್ಣನು ಶ್ರೀಮುಖ ಸಂವತ್ಸರದ ಶ್ರಾವಣ ಬಹುಳ ನವಮೀ ವಿದ್ಧ ಸಪ್ತಮೀ ತಿಥಿಯಂದು ವೃಷಭಲಗ್ನದಲ್ಲಿ ಹುಟ್ಟಿದನೆಂದೂ 125 ವರ್ಷ 9 ತಿಂಗಳು 8 ದಿನಗಳ ಕಾಲ ಬದುಕಿದ್ದು, ಕಲಿಯುಗದ ಮೊದಲನೆಯ ದಿನವೇ ಪರಂಧಾಮ ಸೇರಿದನೆಂದೂ ಒಂದು ನಂಬಿಕೆ ಇದೆ. ಇದಕ್ಕೆ ಜ್ಯೋತಿಷ ಸಿದ್ಧಾಂತಗಳ ಆಧಾರವನ್ನು ತೋರಿಸುತ್ತಾರೆ.

ಇನ್ನೊಂದು ನಂಬಿಕೆ ಕೃಷ್ಣನ ಜನ್ಮವರ್ಷ ವಿಜಯ (ಕ್ರಿಸ್ತಪೂರ್ವ 3208) ಶ್ರಾವಣಮಾಸದ ಕೃಷ್ಣಪಕ್ಷದ ಅಷ್ಟಮಿ ಮಂಗಳವಾರ ರೋಹಿಣೀ—ವೃಷಭ ಲಗ್ನ ಎಂದು. ಈ ಕಲ್ಪನೆಯ ಪ್ರಕಾರ ಕೃಷ್ಣನ ಆಯುರ್ಮಾನ 105 ವರ್ಷಗಳು. ಜನ್ಮಾಷ್ಟಮಿಯ ಪ್ರಸ್ತಾಪವು ಭವಿಷ್ಯ, ಭವಿಷ್ಯೋತ್ತರ, ಸ್ಕಂದ, ವಿಷ್ಣುಧರ್ಮೋತ್ತರ, ನಾರದೀಯ, ಬ್ರಹ್ಮವೈವರ್ತ ಪುರಾಣಗಳಲ್ಲಿ ಬರುತ್ತದೆ. ಕೃಷ್ಣನ ಜನ್ಮಕಾಲ ಮಧ್ಯ ರಾತ್ರಿ, ನಕ್ಷತ್ರವು ರೋಹಿಣಿ. ಜನ್ಮಾಷ್ಟಮಿಯನ್ನು ಆಚರಿಸುವವರು ತಿಥಿಯನ್ನು ಮುಖ್ಯವೆಂದೂ, ಜಯಂತಿಯನ್ನು ಆಚರಿಸುವವರು ನಕ್ಷತ್ರವನ್ನು ಮುಖ್ಯವೆಂದೂ ಪರಿಗಣಿಸುತ್ತಾರೆ. ಜಯಂತಿಯೆನ್ನುವುದು ಒಂದು ಯೋಗ. ಈ ಪದಕ್ಕೆ "ಜಯಂ ಪುಣ್ಯಂ ಚ ಕುರುತೇ, ಜಯಂತೀ ತೇನ ಸಂಸ್ಮೃತಾ" ಎಂಬ ವಿವರಣೆ ಯಿದೆ. ಶ್ರಾವಣ ಕೃಷ್ಣಾಷ್ಟಮಿಯಂದು ರೋಹಿಣಿ ನಕ್ಷತ್ರವೂ ಇದ್ದರೆ ಅದು ಜಯಂತೀ ಯೋಗ. ರಾಜ ಮಾರ್ತಾಂಡವೆಂಬ ಗ್ರಂಥವು—

ಅಷ್ಟಮೀ ಕೃಷ್ಣಪಕ್ಷಸ್ಯ ರೋಹಿಣೀ ಋಕ್ಷ ಸಂಯುತಾ ।
ಭವೇತ್ ಪ್ರೋಷ್ಟಪದೇ ಮಾಸಿ ಜಯಂತೀ ನಾಮ ಸಾ ಸ್ಮೃತಾ ॥

ಎಂದು ಸ್ಪಷ್ಟಪಡಿಸಿದೆ. ಆದರೆ ಬ್ರಹ್ಮಾಂಡ ಪುರಾಣದ ವಿವರಗಳು ಬೇರೆ—

ಅಭಿಜಿನ್ನಾಮ ನಕ್ಷತ್ರಂ ಜಯಂತೀ ನಾಮ ಶರ್ವರೀ ।
ಮುಹೂರ್ತೋ ವಿಜಯೋ ನಾಮ ಯತ್ರ ಜಾತೋ ಜನಾರ್ದನಃ ॥

ಅಂತೂ ಕೃಷ್ಣ ಜನ್ಮಾಷ್ಟಮಿಯು ದೇಶದಲ್ಲೆಲ್ಲ ತುಂಬ ವೈಭವದ ಉತ್ಸವ.

ಕೃಷ್ಣನು ವಿಷ್ಣುವಿನ ಅವತಾರಗಳಲ್ಲಿ ಪರಿಗಣಿತನಾಗಿದ್ದರೂ ಉಳಿದೆಲ್ಲ ಅವತಾರಗಳಿಗಿಂತಲೂ ಜನರ ಒಲವು ಕೃಷ್ಣನಲ್ಲಿಯೇ ಹೆಚ್ಚು. ಲೀಲಾಶುಕನು ಕೃಷ್ಣ ಕರ್ಣಾಮೃತದಲ್ಲಿ ರಾಮನಿಗೂ ಕೃಷ್ಣನಿಗೂ ತಾತ್ವಿಕವಾಗಿ ಭೇದವಿಲ್ಲದಿದ್ದರೂ ಧನುರ್ಧಾರಿಯಾದ ರಾಮನಿಗಿಂತ ವಂಶೀಧರನಾದ ಕೋಮಲ ಶ್ಯಾಮಲ ಕೃಷ್ಣನ ಪ್ರಾದು ರ್ಭಾವವೇ ತನಗೆ ಹೆಚ್ಚು ಹಿತವೆಂದು ಹೇಳಿದ್ದಾನಲ್ಲವೆ? ರಾಮನ ಧೀರ ಗಂಭೀರ ವ್ಯಕ್ತಿತ್ವದಲ್ಲಿ ವಿನೋದಕ್ಕೆ, ಚೇಷ್ಟೆಗೆ ಅವಕಾಶವಿಲ್ಲವಷ್ಟೆ. ಇದು ಕೃಷ್ಣನ ವ್ಯಕ್ತಿತ್ವದ ಸ್ವಾರಸ್ಯ. ಕ್ರಿಸ್ತಾಬ್ದದ ಆದಿಭಾಗದಲ್ಲಿ ಮೈದಳೆದ ಮೇಘಸಂದೇಶದಲ್ಲಿಯೂ ಕಾಳಿದಾಸನು ಕೃಷ್ಣಾವತಾರದ ಸೌಂದರ್ಯವನ್ನು ಪ್ರಸ್ತಾಪಿಸಿದ್ದಾನೆ (ಪೂರ್ವ, 13).

ಯೇನ ಶ್ಯಾಮಾಂ ವಪುರತಿತರಾಂ ಕಾಂತಿಮಾಪತ್ಸ್ಯತೇ ತೇ ।
ಬರ್ಹೇಣೇವ ಸ್ಫುರಿತರುಚಿನಾ ಗೋಪವೇಷಸ್ಯ ವಿಷ್ಣೋಃ ॥

ಆ ಕಾಲಕ್ಕೂ ಜನರ ಮನಸ್ಸನ್ನು ಸೂರೆಗೊಂಡಿದ್ದ ಕಲ್ಪನೆ ಕೃಷ್ಣನದು.

ಇದರಲ್ಲಿ ಇತಿಹಾಸ, ಪುರಾಣ, ಕಾವ್ಯ, ಧರ್ಮ, ಭಕ್ತಿ ಎಲ್ಲವೂ ಸೇರಿವೆ. ಪ್ರಾಕೃತ ಮನುಷ್ಯತ್ವ ದಂತೆಯೇ ಅಲೌಕಿಕ ಅವತಾರಿತ್ವವೂ ಸ್ಪಷ್ಟವಾಗುತ್ತದೆ. ಕೃಷ್ಣನು ಜನ್ಮಾರಭ್ಯ ಅದ್ಭುತ ವೃತ್ತಗಳನ್ನೇ ಕಾಣಿಸುತ್ತಿದ್ದರೂ ಮಾನವೀಯತೆಯ ಅಂಶಗಳು ದೃಢವಾಗಿ ಕೂತಿವೆ. ಅವನ ಶೈಶವ, ಕೈಶೋರ ಲೀಲೆ, ಮಹಾಭಾರತಕ್ಕೆ ಸಂಬಂಧಿಸಿದ ವ್ಯವಹಾರಗಳು, ಯಾದವೀ ಕಲಹ, ದೇಹತ್ಯಾಗ ಮುಂತಾದುವೆಲ್ಲ ಇತಿಹಾಸದ ವಿವರಗಳೇ ಎನ್ನಲಡ್ಡಿಯಿಲ್ಲ. ಕಾಲಿಯದಮನ, ಗೋವರ್ಧನೋದ್ಧರಣ, ದ್ರೌಪದೀಮಾನಸಂರಕ್ಷಣ, ವ್ರಜಾಂಗನಾವಿಹಾರ ಮುಂತಾದುವೆಲ್ಲ ಅತಿಮಾನುಷ ವ್ಯವಹಾರಗಳೇ. ನರಕಾಸುರ ವಧೆ, ಯಮಳಾರ್ಜುನ ಭಂಗ, ಪೂತನೀಪ್ರಾಣಹರಣ, ಧೇನುಕಾಸುರತೃಣಾವರ್ತಸಂಹಾರ ಮುಂತಾದುವು ಹೀಗೆಯೇ ಅದ್ಭುತ ವೃತ್ತಗಳು.

ಆದರೆ ಕೃಷ್ಣಾವತಾರದ ತಾತ್ಪರ್ಯವನ್ನು ಅರ್ಥಮಾಡಿಕೊಳ್ಳಲು ಸಾಮಾನ್ಯಮಾನವಮನೋಧರ್ಮವನ್ನು ಮೀರಿ ಹೋಗಬೇಕಾದುದಿಲ್ಲ. ಇದು ಗೋಪಿಕಾ ಸಂರಂಭದಲ್ಲಿ ಕಾಣುತ್ತದೆ. ಅವತಾರವೆಂಬ ಅರಿವಿದ್ದರೂ ಗೋಪಿಯರು ಕೃಷ್ಣನನ್ನು ಜಾರನೆಂದೇ ಪರಿಗಣಿಸಿದರಲ್ಲವೆ? 'ಗೋಪಿಕೋನ್ಮಾದ' ವೆಂಬುದೊಂದು ಸಂಸ್ಕೃತಕಾವ್ಯ; ಅಷ್ಟು ಪ್ರಸಿದ್ಧವಲ್ಲ. ಇಲ್ಲಿ ಗೋಪಿಯೊಬ್ಬಳು ಮತ್ತೊಬ್ಬಳಿಗೆ ಕೃಷ್ಣನು ವಿಶ್ವಾಸಕ್ಕೆ ಯೋಗ್ಯನಲ್ಲವೆಂದು ಹೇಳುತ್ತ, ಅವನ ಪೂರ್ವೋತ್ತರಗಳನ್ನು ಪ್ರಸ್ತಾಪಿಸುತ್ತಾಳೆ. ಶ್ಲೋಕಗಳು ಸ್ವಾರಸ್ಯವಾಗಿವೆ. ಅವನ ಲಂಪಟತನಕ್ಕೆ ನಿದರ್ಶನಗಳನ್ನು ಎತ್ತಿ ತೋರಿಸುತ್ತಾಳೆ. ರಾಮನಾಗಿ ಅವನು ಮಾಡಿದುದು ಏನು? ತನ್ನನ್ನು ನಂಬಿದ ಸೀತೆಯನ್ನು ಕೈಬಿಟ್ಟನಲ್ಲವೆ? ರಾವಣನನ್ನು ಕೊಂದು ಅವಳನ್ನು ಹಿಂದಕ್ಕೆ ಕರೆತಂದು ಅಗ್ನಿಯಲ್ಲಿ ಪರೀಕ್ಷೆ ಮಾಡಿಸಿ ಶುದ್ಧಳೆಂದು ಲೋಕಕ್ಕೆ ತೋರಿಸಿದ ಮೇಲೂ ಯಾವುದೋ ಸುದ್ದಿಯನ್ನು ನಂಬಿ ಕಾಡಿಗೆ ಕಳುಹಿಸಿದ ರಾಮನಿಗೆ ಕರುಣೆಯುಂಟೆ? ಅಂಥ ನಿಷ್ಕರುಣನಲ್ಲಿ ಈಗ ನಾವು ಮನಸ್ಸುಬಿಡಬಹುದೆ? ಅವನ ಸ್ವಭಾವವೇ ಡೊಂಕು. ಅಥವಾ ಕೃಷ್ಣನನ್ನು ರಸಿಕನೆಂದು ನಂಬಬಹುದೋ? ನಾರಾಯಣನಾಗಿ ಯೋಗವಮಾಡುತ್ತೇನೆಂದು ಬದರಿಗೆ ಹೋಗಿ ಅಲ್ಲಿ ಇಂದ್ರಿಯ ನಿಗ್ರಹ ಮಾಡಿ ಕೂತುಬಿಡಲಿಲ್ಲವೇ? ಅಪ್ಸರೆಯರು ಕೂಡ ಅವನನ್ನು ಕದಲಿಸಲಾಗಲಿಲ್ಲವಷ್ಟೆ. ಆದರೆ ಯೋಗಿಯೆಂದು ಕೂಡ ನಂಬಬಾರದು. ಏಕೆಂದರೆ ಮುಕ್ತಸಂಗನಾದ ವಿರಾಗಿಯ ತೊಡೆಯಿಂದ ಸುಂದರಿಯಾದ ಊರ್ವಶಿ ಬಂದುದು ಹೇಗೆ? ಹೀಗೆಲ್ಲ ಮುಗ್ಧರಾದ ಗೋಪಿಕಾಸ್ತ್ರೀಯರು ಕೃಷ್ಣನನ್ನು ದೂಷಿಸಿದರೂ ಅವನಲ್ಲಿ ದ್ವೇಷ ಮಾಡುವುದು ಅವರಿಂದಾಗಲಿಲ್ಲ. ಕೃಷ್ಣನ ಸ್ವಭಾವವೇ ಅವ್ಯಾಜಪ್ರೀತಿಯ ಪರಿಪಾಕ. ಅವನಿಗೆ ಯುಕ್ತವಾದ ಪ್ರವೃತ್ತಿಯೆಂದರೆ ಅನುರಕ್ತಿ; ನಿಸ್ಸೀಮವಾದ ಭಕ್ತಿ; ಅನನ್ಯ ಪ್ರಪತ್ತಿ, ಇದು ಕೃಷ್ಣಾವತಾರದ ತಾತ್ಪರ್ಯ.

ಬೌದ್ಧರಲ್ಲಿ ಮೂರ್ತಿಶಿಲ್ಪ

ಸ್ತೂಪಾರಾಧನೆ: ಬೌದ್ಧಧರ್ಮದ ಇತಿಹಾಸದ ಮೊದಲ ಹಂತದಲ್ಲಿ ಬುದ್ಧಪೂಜೆಯ ಪ್ರಸಕ್ತಿ ಇರಲಿಲ್ಲ. ಬುದ್ಧನು ದೇವರೆಂಬ ಕಲ್ಪನೆಯಾಗಲೀ, ಬುದ್ಧನನ್ನು ಆರಾಧಿಸಬೇಕೆಂಬ ವಿಧಿಯಾಗಲೀ ಇರಲಿಲ್ಲ. ದೇವತೆಗಳ, ಯಕ್ಷ–ಯಕ್ಷಿಯರ ಕಲ್ಪನೆಯೇನೋ ಇದ್ದಿತು; ಆದರೆ ಪೂಜೆಗಿಂತ ಧ್ಯಾನ, ಕಲ್ಪಕ್ಕಿಂತ ನೀತಿ ಹೆಚ್ಚಿನ ಸ್ಥಾನವನ್ನು ಬೌದ್ಧಧರ್ಮದಲ್ಲಿ ಪಡೆದುವು. ಆದರೆ ಕಾಲಕ್ರಮದಲ್ಲಿ ಈ ಧರ್ಮ ರಾಜಾಶ್ರಯವನ್ನು ಗಳಿಸಿ, ಜನಪ್ರಿಯವಾಗತೊಡಗಿದಾಗ ಪಂಥದ ಪ್ರಚಾರ ಮತ್ತು ಸಾಮಾನ್ಯಜನರ ಅಗತ್ಯಗಳನ್ನು ಅವಲಂಬಿಸಿ ಬುದ್ಧಪೂಜೆ ಬೆಳೆಯಿತು. ಪ್ರಾಚೀನರು ಗೌತಮಬುದ್ಧನನ್ನು ಬರಿಯ ಗುರು (ಶಾಸ್ತೃ) ವೆಂದೂ ಮನುಷ್ಯಮಾತ್ರನೆಂದೂ ಪರಿಗಣಿಸಿದ್ದರು; ಪಾಳೀವಾಙ್ಮಯದಲ್ಲಿ ಇದೇ ದೃಷ್ಟಿಯನ್ನು ಕಾಣಬಹುದು. ಆದರೆ ಬೋಧಿಯನ್ನು ಪಡೆದುಕೊಂಡು ಪರಿನಿರ್ವಾಣವನ್ನು ಮುಟ್ಟಿದ ಬುದ್ಧ ವಿಶಿಷ್ಟನಾದ ವ್ಯಕ್ತಿಯೇ; ಮೇಲಾಗಿ, ಅವನು ಪಂಥಪ್ರವರ್ತಕ. ಬೌದ್ಧರ ಶರಣತ್ರಯದಲ್ಲಿ ಬುದ್ಧನಿಗೆ ಶರಣು ಹೋಗುವುದೇ ಮೊದಲನೆಯದು. ಅವನ ನೆನಪನ್ನು ಉಳಿಸಿಕೊಳ್ಳಲು ಅನುಯಾಯಿಗಳು ಯತ್ನಿಸಿದುದು ಸಹಜವೇ.

ಬುದ್ಧನು ಶಾಕ್ಯಮುನಿಯಾಗಿ, ಸಂಘನಾಯಕನಾಗಿ, ಶಾಸ್ತೃವಾಗಿದ್ದುದರಿಂದ ಅವನು ಇತರ ಭಿಕ್ಷು–ಭಿಕ್ಷುಣಿಯರಿಗೆ ಜ್ಯೇಷ್ಠ, ಆದರ್ಶಪುರುಷ, ಪ್ರಮಾಣಭೂತನಾದ ವ್ಯಕ್ತಿ. ಬುದ್ಧನ ಆಧ್ಯಾತ್ಮಿಕನೆಲೆಯನ್ನು ಮುಟ್ಟುವುದು ಎಲ್ಲ ಮನುಷ್ಯರಿಗೂ ಸಾಧ್ಯವೇ ಆದರೂ, ಮೊದಲು ಈ ನೆಲೆಯನ್ನು ಮುಟ್ಟಿ, ಅದನ್ನು

ಮುಟ್ಟಬಹುದಾದ ಬಗೆಯನ್ನು ತಿಳಿಯಪಡಿಸಿದುದು ಅವನ ವೈಶಿಷ್ಟ್ಯ. ಈ ದೃಷ್ಟಿಯಿಂದ ಅವನು ಲೋಕಜ್ಯೇಷ್ಠ, ಅರ್ಹತ, ಭಗವತ್, ದೇವ-ಮನುಷ್ಯರಿಗೆ ಶಾಸ್ತೃ (ಸತ್ಥಾ ದೇವಮನುಸ್ಸಾನಂ), ಮತ್ತು ಪೂಜನೀಯ (ಪೂಜನೇಯ್ಯ). ಅವನನ್ನು ಸತ್ಕರಿಸುವುದು, ಸನ್ಮಾನಿಸುವುದು, ಆರಾಧಿಸುವುದು, ಪೂಜಿಸುವುದು ಸಾಧನಾಪಥದಲ್ಲಿ ನೆರವಾಗುವ ವಿವರಗಳೇ. ನಮ್ಮ ಶ್ರದ್ಧೆ ಬಲಿಯಲು ಬುದ್ಧನ ನೆನಪು ಆಗತ್ಯ.

ಈ ಕಲ್ಪನೆ ಮೂಡಿಬಂದುದೂ ಸಹಜವೇ. ಆದರೆ ಸಾಮಾನ್ಯಜನ ತಮ್ಮ ಕಷ್ಟಕಾರ್ಪಣ್ಯಗಳನ್ನು ನೀಗಿಕೊಳ್ಳಲು, ಸುಖಸಂಪತ್ತುಗಳನ್ನು ಪಡೆದುಕೊಳ್ಳಲು ಹಲವಾರು ಜಾನಪದ ದೈವಗಳನ್ನೂ ಯಕ್ಷ-ಯಕ್ಷಿಯರನ್ನೂ ಪೂಜೆಮಾಡುತ್ತಿದ್ದ ಕಾಲವೇ ಅದು. ಬೌದ್ಧಧರ್ಮವನ್ನು ತಾತ್ತ್ವಿಕವಾಗಿ ಒಪ್ಪಿಕೊಂಡ ವರೂ ಈ ದಾರಿಯನ್ನೇ ಹಿಡಿದರು. ಕಾಮ್ಯಸಿದ್ಧಿಗಳಿಗಾಗಿ ಬುದ್ಧನನ್ನೇನು ಆರಾಧಿಸುತ್ತಿರಲಿಲ್ಲ ಅವರು. ಬುದ್ಧನು ತನ್ನ ಜೀವಿತಕಾಲದಲ್ಲಿ ಪರಮಕಾರುಣಿಕನಾದರೂ ಅವನು ತೀರಿಕೊಂಡನಂತರ ಅವನ ಕರುಣೆ ಕೆಲಸಮಾಡಬಲ್ಲುದೆಂದು ಅವರಿಗೆ ನಂಬಿಕೆಯಿರಲಿಲ್ಲ. ಈ ನಂಬಿಕೆ ಬೆಳೆದುದು ಮುಂದಿನ ಒಂದು ಯುಗದಲ್ಲಿ. ಬುದ್ಧನೇ ದೇವರು; ಲೋಕೋತ್ತರನಾದವನು ಮಾತ್ರವಲ್ಲ, ಲೋಕಾನುಗ್ರಹಕಾರಕ; ವಿಶಿಷ್ಟ ಸಂಪದಭ್ಯು ದಯಗಳೂ ಅವನ ಕರುಣೆಯಿಂದ ಒದಗುವುದು ಸಾಧ್ಯ; ದೇವ ದೇವತೆಯರು, ಯಕ್ಷ ಯಕ್ಷಿಯರೆಲ್ಲ ಅವನ ಅನುಚರರು, ಆಜ್ಞಾಧಾರಕರು, ಅವನ ಪರಿವಾರದಲ್ಲಿ ಸೇರಿದವರು—ಈ ಕಲ್ಪನೆ ಬೆಳೆದುಬಂದುದು ಅನಿವಾರ್ಯವೇ. ಈ ಕಲ್ಪನೆಗೆ ಅನುವಾಗಿ ಬುದ್ಧನ ಪೂಜಾಮೂರ್ತಿಗಳು ಸಿದ್ಧವಾದುವು; ಅಭಯ-ವರದ ಮುದ್ರೆಗಳು ಮುಖ್ಯವಾದುವು; ಪೂಜಾಕಲ್ಪಗಳೂ ಸಿದ್ಧವಾದುವು.

ಆದರೆ ಮೊದಲ ಹಂತದಲ್ಲಿ, ಬುದ್ಧನು ಬದುಕಿ, ಬೋಧಿಸಿ, ತೀರಿಕೊಂಡ ಗುರುವೆಂದೇ ಕಲ್ಪನೆಯಿದ್ದ ಯುಗದಲ್ಲಿ, ಅವನ ಜೀವಿತಕ್ಕೆ ಸಂಬಂಧಿಸಿದ ಕ್ಷೇತ್ರಗಳನ್ನು ಭಕ್ತಿಯಿಂದ ಕಾಣುವ, ಆ ಕ್ಷೇತ್ರಗಳಿಗೆ ಯಾತ್ರೆ ಹೋಗುವ ವಾಡಿಕೆಯಿದ್ದಿತು. ಅಶೋಕ ಚಕ್ರವರ್ತಿಯು ಹೀಗೆ ಮಾಡಿದ ಉಲ್ಲೇಖವಿದೆ. ತಾನು ಹೋದೆಡೆ ಗಳಲ್ಲಿ ತಾನು ಗೌರವ ಸಲ್ಲಿಸಿದುದನ್ನು ಇತರರಿಗೆ ತಿಳಿಯಪಡಿಸುವ ಸಲುವಾಗಿ ಸ್ತೂಪಗಳನ್ನು ಕಟ್ಟಿಸಿದನು. ಬೌದ್ಧರಲ್ಲಿ ಸ್ತೂಪದ ಪೂಜೆ ವಿಶೇಷವಾಗಿ ಬೆಳೆಯಿತು. ಪೂಜಾಸ್ಥಾನಗಳಾಗಿ ಮೈದಳೆದ ಸ್ತೂಪಗಳ ಪ್ರತಿಕೃತಿಗಳು ಪೂಜಾವಸ್ತುಗಳಾಗಿ ಉಳಿದುವು. ಬರ್ಮ ಸಿಂಹಳಗಳ ಥೂಪ-ಬಿಂಬಗಳೂ ಟಿಬೆಟ್ಟಿನ ಚೋರ್ಟೆಗಳೂ ಈ ನೆಲೆಯಲ್ಲಿ ಅವತರಿಸಿದುವೇ.

ಸ್ತೂಪವೆಂದರೆ ಪ್ರಮುಖವಾಗಿ ಸಮಾಧಿಮಂದಿರ ಅಥವಾ ಸ್ಮಾರಕಭವನ. ಗುಡಿಗುಂಡಾರಗಳು ಮೈದಳೆಯುವ ಮೊದಲೇ ಇಂಥ ಕಟ್ಟಡಗಳು ಬಳಕೆಯಲ್ಲಿದ್ದುವು. ಸ್ತೂಪ (ಪ್ರಾಕೃತದಲ್ಲಿ ಥೂಪ) ಬೌದ್ಧರಿಗೇ ವಿಶಿಷ್ಟವಾದ ಪೂಜಾಸ್ಥಾನವಾದುದು ಅಶೋಕನು ಕ್ರಿಸ್ತಪೂರ್ವ 150 ರಲ್ಲಿ ಬಾರ್ಹುತ್ ಸ್ತೂಪವನ್ನು ಕಟ್ಟಿಸಿದನಂತರ. ಮೌರ್ಯವಂಶದ ಲೋಕಪ್ರಸಿದ್ಧನಾದ ಈ ದೊರೆ ಬೌದ್ಧಧರ್ಮವನ್ನು ಸ್ವೀಕರಿಸಿದನಂತರ ಬುದ್ಧನ ಜನ್ಮಸ್ಥಳ (ಲುಂಬಿನಿ), ಸಂಬೋಧಿಯನ್ನು ಪಡೆದ ಸ್ಥಳ (ಬುದ್ಧಗಯಾ), ಪ್ರಥಮಪ್ರವಚನವನ್ನು ಮಾಡಿದ ಸ್ಥಳ (ಕಾಶಿಯ ಬಳಿ ಸಾರನಾಥ) ಮತ್ತು ಪರಿನಿರ್ವಾಣ ಪಡೆದ ಸ್ಥಳ (ಕುಶೀನಾರ) ಇವುಗಳನ್ನು ಸಂದರ್ಶಿಸಿ ಅಲ್ಲಲ್ಲ ಕಂಬವನ್ನೋ, ಚೈತ್ಯವನ್ನೋ, ಸ್ತೂಪವನ್ನೋ ಕಟ್ಟಿಸಿದನು. ಈಗ ಉಳಿದಿರುವ ಈ ಸ್ಮಾರಕಗಳಲ್ಲಿ, ಲುಂಬಿನಿಯ ಸ್ತಂಭ (ಇದರ ಮೇಲೆ 'ಇಲ್ಲಿ ಭಗವಾನನಾದ ಬುದ್ಧನು ಹುಟ್ಟಿದನು' ಎಂಬ ಬರಹವಿದೆ), ಬಾರ್ಹುತ್‌ಸ್ತೂಪ, ಸಾರನಾಥ ಧಾಮೆಕ್ (ಧರ್ಮಚಕ್ರ) ಸ್ತೂಪ ಇವು ಮುಖ್ಯವಾದುವು. ಬಾರ್ಹುತ್‌ಸ್ತೂಪ ತುಂಬ ಪ್ರಾಚೀನವಾದುದು; ಅಶೋಕನ ಕಟ್ಟಡವನ್ನು ಮುಂದೆ

ಬಂದ ಶುಂಗ ಮತ್ತು ಕುಷಾಣರಾಜರು ಹಿಗ್ಗಿಸಿದರು. ಅದೇ ಕಾಲದ ಇನ್ನೊಂದು ಸುವಿಖ್ಯಾತ ಸ್ತೂಪ ವೆಂದರೆ ಮಧ್ಯಭಾರತದ ಸಾಂಚಿಗುಡ್ಡದ ಮೇಲಿರುವುದು. ದಕ್ಷಿಣಭಾರತದಲ್ಲಿಯೂ ಅಮರಾವತಿ ಮತ್ತು ನಾಗಾರ್ಜುನಕೊಂಡ ಇಲ್ಲಿರುವ ಸ್ತೂಪಾವಶೇಷಗಳು ಜಗದ್ವಿಖ್ಯಾತವಾಗಿವೆ. ಅಮರಾವತಿಯ ಸ್ತೂಪ ಮೈದಳೆದದ್ದು ಕ್ರಿಸ್ತಪೂರ್ವ 200 ರ ಸುಮಾರಿಗೆ, ಜೀರ್ಣೋದ್ಧಾರವಾದುದು ಕ್ರಿಸ್ತಾಬ್ದ 350 ರಲ್ಲಿ. ಈ ಸ್ತೂಪಕ್ಕೆ ಹೊಂದಿಕೊಂಡು ಶ್ರೀಧಾನ್ಯಕಟಕವೆಂಬ ವಿಶ್ವವಿದ್ಯಾಲಯವೂ ಇದ್ದಿತು. ನಾಗಾರ್ಜುನಕೊಂಡದ ಸ್ತೂಪವನ್ನು ಚಾಂತಮೂಲನೆಂಬ ರಾಜನು ಕ್ರಿಸ್ತಾಬ್ದ ಮೂರನೆಯ ಶತಮಾನದಲ್ಲಿ ಕಟ್ಟಿಸಿದನು. ಇದ ರೊಂದಿಗೆ ಎರಡು ಚೈತ್ಯಗಳೂ ಇಪ್ಪತ್ತು ವಿಹಾರಗಳೂ ಇದ್ದುವು. ಇವಲ್ಲದೆ ಕುಷಾಣರಾಜನಾದ ಕನಿಷ್ಕನು ಕಟ್ಟಿಸಿದ ಪೆಶಾವರದ ಸ್ತೂಪ, ತಕ್ಷಶಿಲೆಯ ಸ್ತೂಪ, ನಾಳಂದದ ಸ್ತೂಪ, ಮಥುರೆಯ ಸ್ತೂಪ ಇವೆಲ್ಲವೂ ಪ್ರಸಿದ್ಧವಾಗಿದ್ದುವು.

ಸ್ತೂಪವು ಸರಳವಾದ ಕಟ್ಟಡ. ಗೋಳಗುಮ್ಮಟದ ಮಾದರಿಯಲ್ಲಿ ಕಲ್ಲು, ಮಣ್ಣು, ಇಟ್ಟಿಗೆಗಳನ್ನು ಗುಡ್ಡದಂತೆ ರಾಶಿಮಾಡಿದರೆ ಅದು ಸ್ತೂಪವಾಯಿತು. ಪೂಜಾರ್ಹವಾದ ಸ್ಥಳವನ್ನು ಜನ ಕಾಣದೆ ಮೆಟ್ಟಿ ತುಳಿಯಬಾರದೆಂದು ಅದರ ಆಶಯ. ಮಹಾಪುರುಷರ ಅವಶೇಷಗಳನ್ನು ಭೂಮಿಯೊಳಗೆ ಹುದುಗಿಸಿಟ್ಟಾಗ ಅದಿರುವ ಸ್ಥಳ ಹೀಗೆ ನಿರ್ದಿಷ್ಟವಾದರೆ ಅಲ್ಲಿ ಕಾಲ ಕಾಲಕ್ಕೆ ಪೂಜೆಪುನಸ್ಕಾರಗಳು ನಡೆಯುವುದು ಸಾಧ್ಯ ವಾಗುತ್ತದೆ; ಅವಶೇಷಗಳು ಬಹುಕಾಲ ಉಳಿಯುವುದೂ ಸಾಧ್ಯವಾಗುತ್ತದೆ.

ಸ್ತೂಪವನ್ನು 'ಧಾತುಗರ್ಭ' (ಸಿಂಹಳದಲ್ಲಿ 'ದಗೋಬ') ಎಂದೂ ವ್ಯವಹರಿಸುತ್ತಾರೆ. ಧಾತುವೆಂದರೆ ಮಹಾಪುರುಷರ ಕಳೇಬರ (ಶಾರೀರಕಧಾತು), ಅಥವಾ ಅವರು ಬಳಸುತ್ತಿದ್ದ ಪದಾರ್ಥಗಳು (ಪರಿಭೋಗಿಕ ಧಾತು), ಅಥವಾ ಅವರನ್ನು ನೆನಪಿಗೆ ತರುವಂಥ ಸಂಕೇತಗಳು (ಉದ್ದೇಸಿಕ ಧಾತು). ಇಂಥ ಧಾತುವನ್ನು ಒಳಭಾಗದಲ್ಲಿ ಅಡಗಿಸಿಡುವುದರಿಂದ ಇದು ಧಾತುಗರ್ಭವೆನಿಸಿಕೊಳ್ಳುತ್ತದೆ. ಬುದ್ಧನ ಹಲ್ಲು, ಕೂದಲು, ಪಿಂಡಪಾತ್ರೆ, ಚಿತಾಭಸ್ಮ ಮೊದಲಾದುವನ್ನು ಬೇರೆ ಬೇರೆ ಕರಂಡಗಳಲ್ಲಿಟ್ಟು ಅವುಗಳ ಮೇಲೆ ಸ್ತೂಪಗಳನ್ನು ಕಟ್ಟಿಸಿದ ಉಲ್ಲೇಖವಿದೆ. ದಿಟವಾಗಿ ಸ್ತೂಪ ಇದೇ ಆದರೂ, ಕೆಲವೊಮ್ಮೆ ಧಾತು ಯಾವುದೂ ದೊರೆಯ ದಿದ್ದಾಗಲೂ ಸಾಂಪ್ರದಾಯಿಕವಾದ ಪ್ರತಿಮೆಗಳನ್ನೇ ಬಳಸಿಕೊಂಡು ಸ್ತೂಪಗಳನ್ನು ಕಟ್ಟಿರುವುದೂ ಉಂಟು. ಬುದ್ಧನ ಪಾದಯುಗ್ಮ, ಬೋಧಿವೃಕ್ಷ, ಸಿಂಹಾಸನ, ಛತ್ರ ಮೊದಲಾದುವು ಸ್ತೂಪಗಳಿಗೆ ವಸ್ತುಗಳಾಗಿರುವ ನಿದರ್ಶನಗಳಿವೆ.

ಧಾತುವನ್ನು ಕಲ್ಲಿನ ಕರಂಡದಲ್ಲಿಯೋ ಲೋಹದ ಕಳಶದಲ್ಲಿಯೋ ಇರಿಸಿ ಅದರ ಮೇಲೆ ಮಣ್ಣು, ಕಲ್ಲು, ಇಟ್ಟಿಗೆಗಳನ್ನು ಜೋಡಿಸಿ ಅರ್ಧಗೋಳಾಕಾರವಾಗಿ ಮಾಡಿರುವ ಭಾಗ 'ಅಂಡ' ವೆನಿಸಿಕೊಳ್ಳುತ್ತದೆ. ಈ ಭಾಗವನ್ನು ನಯಗಾರೆಯಿಂದ ಅಥವಾ ನುಣುಪುಮಾಡಿದ ಕಲ್ಲುಚಪ್ಪಡಿಗಳಿಂದ ಮುಚ್ಚುತ್ತಾರೆ. ಇದಕ್ಕೆ 'ಆಚ್ಛಾದ' ವೆಂದು ಹೆಸರು. ಗುಡ್ಡದಂತೆ ಕಾಣುವ ಈ ಕಟ್ಟಡದ ಸುತ್ತಲೂ 'ಮೇಧಿ' ಯೆನಿಸಿಕೊಳ್ಳುವ ಜಗುಲಿಯಿರುತ್ತದೆ. ಭಕ್ತಜನರು ಅಂಡವನ್ನು (ಅದರೊಳಗಿರುವ ಧಾತುವನ್ನು) ಸುತ್ತರಿದು ಬರಲು ಪ್ರದಕ್ಷಿಣಾಪಥವೂ ಇರುತ್ತದೆ. ಈ ದಾರಿಗೆ ಮರದ ಅಥವಾ ಕಲ್ಲಿನ 'ವೇದಿಕೆ'ಯೂ ಇರುವುದುಂಟು. ಜನ ನಡೆದು ಹೋಗುವಾಗ ಕೈಗೆ ಆಸರೆಯಾಗಿ ಇದಿರುತ್ತದೆ. ಇದರಲ್ಲಿ 'ಆಲಂಬನ', 'ಸೂಚಿ' (ಅಡ್ಡತೊಲೆ), 'ಉಷ್ಣೀಷ' ಎನ್ನುವ ಭಾಗಗಳನ್ನೂ ನಿರ್ದೇಶಿಸುತ್ತಾರೆ. ಈ ಕಟ್ಟಡದಲ್ಲಿ ಹಲವು ನೆಲೆಗಳಿದ್ದಾಗ 'ಸೋಪಾನ'ವೂ

ಅಗತ್ಯವಾಗುತ್ತದೆ. ಕೆಲವು ಸ್ತೂಪಗಳಲ್ಲಿ ಮೂರು ನಾಲ್ಕು ಪ್ರದಕ್ಷಿಣಾಪಥಗಳಿರುತ್ತವೆ. ಇವನ್ನೆಲ್ಲ ಒಳಗೊಂಡ ಕಲ್ಲುಗೋಡೆಗೆ 'ವೃತ್ತಿ'ಯೆಂದು ಹೆಸರು. ಇದರ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು 'ತೋರಣ'ಗಳಿರುತ್ತವೆ. ಶಿಲ್ಪಿ ತನ್ನ ಜಾಣ್ಮೆಯನ್ನು ತೋರಿಸುವ ಭಾಗ ಇದು. ಸಾಂಚೀಸ್ತೂಪದ ತೋರಣಶಿಲ್ಪಗಳು ಅತ್ಯುತ್ತಮ ಕಲಾಕೃತಿಗಳು. ಅಂಡದ ಮೇಲ್ಭಾಗದಲ್ಲಿ ಚತುರ್ಭುಜೀಯವಾದ 'ಹರ್ಮಿಕೆ'ಯಿದ್ದು ಅದರ ಮೇಲೆ ಮರದಿಂದಲೋ ಗಾರೆಯಿಂದಲೋ ಮಾಡಿದ ಕೊಡೆಯಾಕಾರದ ಛತ್ರವಿರುತ್ತದೆ. ಇದು ರಾಜ ಲಾಂಛನ, ಮಹಾಪುರುಷಲಕ್ಷಣ; ಮಹಾಸ್ಥಾನವೆನ್ನುವುದರ ದ್ಯೋತಕ.

ಚೈತ್ಯಮಂದಿರಗಳಲ್ಲಿ ಸ್ತೂಪದ ಆಕೃತಿಯನ್ನೇ ಫಲಕದಲ್ಲಿ ಕಡೆದು ಪ್ರಮುಖವಾಗಿರಿಸಿಕೊಂಡು ಪೂಜೆ ಸಲ್ಲಿಸುವ ಪದ್ಧತಿಯು ಮೂಡಿಬಂದಿತು. ಈ ಸ್ತೂಪಪ್ರತಿಮೆಯನ್ನು ಬಹುವಿನ್ಯಾಸಗಳಲ್ಲಿ ಅಲಂಕರಿಸಿರುವುದನ್ನು ಹಲವಾರು ಚೈತ್ಯಗಳಲ್ಲಿ ಕಾಣಬಹುದು. ಬುದ್ಧನ ಬದುಕನ್ನು ಅದು ಪ್ರತಿನಿಧಿಸುವುದೆಂದು ಕಲ್ಪನೆ. ಬುದ್ಧನನ್ನು ವ್ಯಕ್ತಿಯಾಗಿ, ಮನುಷ್ಯಾಕೃತಿಯಲ್ಲಿ ರೂಪಿಸುವುದು ಬಳಕೆಯಲ್ಲಿರಲಿಲ್ಲ; ಹಾಗೆ ರೂಪಿಸಲು ಪ್ರಾಚೀನ ಬೌದ್ಧರ ಮನೋಧರ್ಮವೂ ಸಮ್ಮತಿಸಲಿಲ್ಲ. ಸಾಂಚೀಸ್ತೂಪದ ತೋರಣ ಶಿಲ್ಪದಲ್ಲಿ ಬುದ್ಧನ ಬಾಳಕಥೆಯನ್ನೂ ಬದುಕಿನ ಪ್ರಮುಖ ವಿವರಗಳನ್ನೂ ತುಂಬ ಸ್ವಾರಸ್ಯವಾಗಿ ಕಡೆದಿದ್ದಾರೆ. ಆದರೆ ಬುದ್ಧನನ್ನು ಮಾತ್ರ ಎಲ್ಲಿಯೂ ಕಾಣಿಸಿಲ್ಲ. ಬುದ್ಧನೆಂದು ಸೂಚಿಸಲು ಬೋಧಿಮಂಡ, ಸಿಂಹಾಸನ, ಛತ್ರ, ಪಾದಯುಗಳ, ಧರ್ಮಚಕ್ರ ಮೊದಲಾದ ಸಂಕೇತಗಳನ್ನೇ ಬಳಸಿದ್ದಾರೆ. ಅದೇ ಸ್ತೂಪದಲ್ಲಿ ಹಲವಾರು ಯಕ್ಷ-ಯಕ್ಷಿಯರ, ವೃಕ್ಷದೇವತೆಯರ, ನಾಗ ದೈವಗಳ ವ್ಯಕ್ತಿಚಿತ್ರಣವೇ ಇದೆ. ಹೀಗೆ ದೇವತಾವಿಗ್ರಹಗಳು ಬಳಕೆಯಲ್ಲಿದ್ದ ಕಾಲದಲ್ಲಿಯೂ ಬುದ್ಧನನ್ನು ಮಾತ್ರ ಪ್ರತಿಮೆಯಲ್ಲಿ ಕಾಣಿಸದಿರುವುದು ಗಮನಾರ್ಹವಾದುದು.

ಗಾಂಧಾರ ಕಲೆಯ ನೆಲೆಯಲ್ಲಿ : ಬುದ್ಧನನ್ನು ಶಿಲ್ಪದಲ್ಲಿ ಸ್ಪಷ್ಟವಾಗಿ ಮೂಡಿಸುವ ಪದ್ಧತಿ ಯಾವಾಗ ಮೊದಲಾಯಿತೋ ಹೇಳುವುದು ಕಷ್ಟ. ಆದರೆ ಗಾಂಧಾರಶೈಲಿಯ ಕಲೆಯಲ್ಲಿ ಇದು ಸ್ಪಷ್ಟವಾಗಿ ಕಾಣಬರುತ್ತದೆ. ಹಿಂದೆ ಅಲೆಗ್ಸಾಂಡರನು ನಮ್ಮ ದೇಶಕ್ಕೆ ದಂಡೆತ್ತಿ ಬಂದು ವಾಯುವ್ಯ ಪ್ರದೇಶವನ್ನಾಕ್ರಮಿಸಿಕೊಂಡು ಹಿಂದಿರುಗಿದನಂತರ ಆ ಕಡೆ ಹಲವಾರು ಗ್ರೀಕರ ಪಾಳೆಯಪಟ್ಟುಗಳು ಮೈದಳೆದುವು. ಇವುಗಳಲ್ಲಿ ಬ್ಯಾಕ್ಟ್ರಿಯ ಮತ್ತು ಗಾಂಧಾರ ಎನ್ನುವ ರಾಜ್ಯಗಳು ಪ್ರಸಿದ್ಧವಾದುವು. ಕಾಬೂಲ್ ಕಣಿವೆಯ ಕೆಳಭಾಗದಿಂದ ಸಿಂಧೂ ನದಿಯ ಮೇಲ್ಭಾಗದವರೆಗೂ ಇರುವ ಪ್ರದೇಶಕ್ಕೆ ಮೊದಲಿನ ಹೆಸರು ಗಾಂಧಾರದೇಶವೆಂದು. ಈಗ ಆಫ್ಘನಿಸ್ಥಾನದಲ್ಲಿ ಕಾಂದಹಾರ್ ಎನಿಸಿಕೊಳ್ಳುವ ಪ್ರದೇಶ ಎನ್ನಬಹುದು. ಮೊದಲಿನಿಂದ ಇದು ಹಿಂದೂ ರಾಜ್ಯವೇ. ನಾಗರಾಜನಾದ ತಕ್ಷಕನೇ ಈ ರಾಜ್ಯದ ಮೂಲಪುರುಷನೆಂದು ಪ್ರತೀತಿ. ಅವನ ಸ್ಮರಣೆಗೆಂದೇ ತಕ್ಷಶಿಲೆ (ಟಾಕ್ಸಿಲಾ) ಮತ್ತು ತಕ್ಷಕ (ಆಟ್ಟಕ್) ನಗರಗಳು ನಿರ್ಮಿತವಾದುವಂತೆ. ಭರತನ ಮಗ ಪುಷ್ಕಲ ಎನ್ನುವವನು ಗಾಂಧಾರರಾಜ್ಯವನ್ನು ಗೆದ್ದು ಅದರ ರಾಜಧಾನಿಗೆ ಪುಷ್ಕಲಾವತಿಯೆಂದು ಹೆಸರಿಟ್ಟ ಉಲ್ಲೇಖವಿದೆ. ಈಗ ಪೆಶಾವರಿನ ಬಳಿಯಿರುವ ಚರ್ಸದ್ದಾ ಎನ್ನುವ ಊರು ಇದು. ಧೃತರಾಷ್ಟ್ರನ ಹೆಂಡತಿ ಗಾಂಧಾರಿ ಈ ರಾಜ್ಯದ ದೊರೆಯಾಗಿದ್ದ ಸುಬಲನ ಮಗಳು.

ಹೀಗೆ ಮೊದಲಿನಿಂದಲೂ ಪ್ರಸಿದ್ಧವಾಗಿದ್ದ ಈ ರಾಜ್ಯ ತನ್ನ ಭೌಗೋಳಿಕ ಸ್ಥಿತಿಯಿಂದಾಗಿ ವಿದೇಶೀಯರ ದಾಳಿಗೆ ಮತ್ತೆ ಮತ್ತೆ ಗುರಿಯಾಗುತ್ತಿದ್ದಿತು. ಮಂಗೋಲಿಯನ್ನರು, ವಿದೇಶೀ ಆರ್ಯರು, ಸಿಥಿಯನ್ನರು

ಈ ರಾಜ್ಯದ ನಗರಗಳನ್ನಾಕ್ರಮಿಸಿಕೊಂಡಿದ್ದರು. ಕ್ರಮೇಣ ಇದು ಪರ್ಶಿಯನ್ನರ ವಶವಾಗಿ ಪರ್ಶಿಯಾ ಸಾಮ್ರಾಜ್ಯಕ್ಕೆ ಸೇರಿಹೋಯಿತು. ಅನಂತರ ಬ್ಯಾಕ್ಟ್ರಿಯನ್ನರು, ಪಾರ್ಥಿಯನ್ನರು, ಕುಷಾಣರು, ಶಕರು, ಹೂಣರು ಇವರೆಲ್ಲ ಇದನ್ನು ಆಳಿದರು. ಇದರ ಆಕರ್ಷಣೆಗಳಲ್ಲಿ ಒಳ್ಳೆಯ ರಾಸಿನ ಕುದುರೆಗಳೂ, ಉದ್ದ ಕೂದಲಿನ ಕುರಿಗಳೂ ಸೇರಿದ್ದುವು.

ಈ ಎಲ್ಲ ಕಾರಣಗಳಿಂದ ಈ ಪ್ರದೇಶದಲ್ಲಿ ವಿಶಾಲವಾದ, ವ್ಯಾಪಕವಾದ, ಉದಾರವಾದ ಸಂಸ್ಕೃತಿ ಬೆಳೆಯುವುದು ಸಾಧ್ಯವಾಯಿತು. ಮೆಸೊಪೊಟೇಮಿಯನ್, ಜೋರಾಷ್ಟ್ರಿಯನ್, ಗ್ರೀಕ, ಚೀಣೀ, ಮಧ್ಯ ಏಷ್ಯಾ ಸಂಸ್ಕೃತಿಗಳೆಲ್ಲ ಇಲ್ಲಿ ಮೇಳೈಸಿದುವು; ಬೌದ್ಧ, ಹಿಂದೂ, ಯವನ, ಯೆಹೂದೀ ಧರ್ಮಗಳ ಸಂಗಮ ಸ್ಥಾನವೆನಿಸಿತು ಗಾಂಧಾರದೇಶ. ಇಲ್ಲಿ ದೊರೆತಿರುವ ಅವಶೇಷಗಳಲ್ಲಿ ಶಿವಲಿಂಗಗಳೂ, ಬೌದ್ಧಮೂರ್ತಿಗಳೂ, ಪರ್ಶಿಯದ ಅಗ್ನಿವೇದಿಗಳೂ, ತಾವೋಪಂಥದ ಪ್ರತೀಕಗಳೂ, ಈಜಿಪ್ಟ್ ದೇವತಾಮೂರ್ತಿಗಳೂ, ಗ್ರೀಕ್ ಶಿಲ್ಪಗಳೂ ಸೇರಿವೆ.

ಇಷ್ಟೆಲ್ಲ ಕಲಸುಮೇಲೋಗರವಾದರೂ ಸಂಸ್ಕೃತಿಯಲ್ಲಿ ಪ್ರಮುಖ ಧಾರ್ಮಿಕ ಪ್ರಭಾವ ಬೌದ್ಧ ಧರ್ಮದ್ದೇ. ಹಲವಾರು ಜನಾಂಗಗಳ ಜನ ಇಲ್ಲಿ ನೆರೆದು ಬೆರತಿದ್ದರೂ ಮುಖ್ಯವಾಗಿ ಸಾಂಸ್ಕೃತಿಕ ಮುದ್ರೆ ಗ್ರೀಕರದ್ದೇ. ಒಂದೆರಡು ಶತಮಾನಗಳವರೆಗೆ ಈ ಪ್ರದೇಶದಲ್ಲಿ ಗ್ರೀಕರೂ ಯುರೇಶಿಯನ್ ಜನರೂ ವಾಸವಾಗಿದ್ದರೂ ಕ್ರಿಸ್ತಪೂರ್ವ 250 ರಿಂದ ಕ್ರಿಸ್ತಾಬ್ದ 450 ರವರೆಗೆ ಬ್ಯಾಕ್ಟ್ರಿಯನ್ ಗ್ರೀಕರ ಪ್ರಭಾವವೇ ಸ್ಪಷ್ಟವಾಗಿದ್ದಿತು. ಈ ಕಾರಣದಿಂದ ಇಲ್ಲಿ ಬೆಳೆದ ಧಾರ್ಮಿಕ ಸಂಸ್ಕೃತಿ ಬೌದ್ಧ–ಗ್ರೀಕ ಪ್ರಭಾವಗಳನ್ನೊಳಗೊಂಡಿದ್ದಿತು. ಗ್ರೀಕರ ದೇವತೆಗಳು ಬೌದ್ಧರೂಪದಲ್ಲಿ ಬಂದಿಳಿದರು. ಜ್ಯೂಸ್ ಶಕ್ರನಾದ, ಅಪೋಲೋ ಬುದ್ಧನಾದ, ಹಿರಾಕ್ಲಿಸ್ ವಜ್ರಪಾಣಿಯಾದ, ಟೈಕೆ ಹಾರೀತಿಯಾದಳು.

ಗಾಂಧಾರ ಸಂಸ್ಕೃತಿಯ ಉಗಮ ಕ್ರಿಸ್ತಪೂರ್ವ 250ರ ಸುಮಾರಿಗೆ ಆಯಿತೆಂದು ಹೇಳಬಹುದು. ಕ್ರಿಸ್ತಪೂರ್ವ 165 ರಿಂದ 100ರ ವರೆಗೆ ಕುಷಾಣರು ಈ ರಾಜ್ಯವನ್ನು ಗೆದ್ದುಕೊಂಡು ಇಲ್ಲಿ ಆಳುತ್ತಿದ್ದಾಗಲೂ ಬ್ಯಾಕ್ಟ್ರಿಯನ್ ಗ್ರೀಕರ ಪ್ರಭಾವ ಮರೆಯಾಗಲಿಲ್ಲ. ಈ ವೇಳೆಗೆ ದೇಶದ ಜನರೆಲ್ಲ ಹೆಚ್ಚೂಕಡಮೆ ಬೌದ್ಧ ಧರ್ಮಾನುಯಾಯಿಗಳೇ ಆಗಿದ್ದರು. ಈ ಅವಧಿಯಲ್ಲಿ ವೈದಳೆದ ವಾಸ್ತು ಮತ್ತು ಶಿಲ್ಪಪ್ರಕಾರಗಳು ಗ್ರೀಕರ ಪ್ರಭಾವವನ್ನು ಅಳವಡಿಸಿಕೊಂಡ ಬೌದ್ಧಧರ್ಮದವು. ಕುಷಾಣರೂ ಗ್ರೀಕರೂ ಕಲೆಯನ್ನು ಮೆಚ್ಚಿಕೊಂಡು ಗ್ರೀಕೋ–ರೋಮನ್ ಏಷಿಯಾ ಭೂಭಾಗದಿಂದಲೇ ಶಿಲ್ಪಿಗಳನ್ನು ಕರೆಸಿಕೊಳ್ಳುತ್ತಿದ್ದರು.

ಹೀಗೆ ಯವನ ಸಂಪ್ರದಾಯದಲ್ಲಿ ಬೌದ್ಧ ವಿವರಗಳನ್ನು ಮೂಡಿಸುವ ಗಾಂಧಾರ ಕಲೆಯನ್ನು 'ಗ್ರೀಕೋ–ಬೌದ್ಧ' ಎಂದು ನಿರ್ದೇಶಿಸುತ್ತಾರೆ. ಬ್ಯಾಕ್ಟ್ರಿಯನ್ ಮತ್ತು ಕುಷಾಣರಾಜರ ಪರಿವಾರದಲ್ಲಿ ಗ್ರೀಕ್ ಶಿಲ್ಪಿಗಳೂ ವಾಸ್ತುವಿಶಾರದರೂ ಬಹುಮಂದಿ ಇರುತ್ತಿದ್ದರು; ಅವರು ದಂಡಯಾತ್ರೆ ಹೋದೆಡೆಯಲ್ಲೆಲ್ಲ ಇವರನ್ನೂ ಕೊಂಡೊಯ್ಯುತ್ತಿದ್ದರು. ಗ್ರೀಕ್ ಸಾಮ್ರಾಜ್ಯದಲ್ಲಿ ಕಟ್ಟಡಗಳನ್ನು ಕಟ್ಟಿದ ಸ್ಥಪತಿಗಳು ಗಾಂಧಾರ ದೇಶಕ್ಕೆ ಬಂದು ತಮ್ಮ ಚಾತುರ್ಯವನ್ನು ಪ್ರದರ್ಶಿಸಲು ಕಾತರರಾಗಿರುತ್ತಿದ್ದರು. ತಕ್ಷಶಿಲೆಯ ಬಳಿ ಕನಿಷ್ಕರಾಜನ ಸ್ತೂಪವೊಂದಿದೆ; ಅದನ್ನು ಕಟ್ಟಿದವನು ಗ್ರೀಕ್ ಸ್ಥಪತಿ ಅಗೇಸಿಲಾಉಸ್ ಎಂಬಾತ. ಕನಿಷ್ಕನ ಅವಶೇಷವನ್ನಿಟ್ಟ ಶಿಲಾಕರಂಡವನ್ನು ಮಾಡಿಕೊಟ್ಟವನೂ ಇವನೇ. ಕಾರ್ಲೆ ಶಾಸನದಲ್ಲಿ ಧೇನುಕಟಿ (ಥೆನೋಕ್ರೌಟಿಸ್) ಎಂಬ ಗ್ರೀಕ್‌ಕಲಾವಿದನ ಪ್ರಸ್ತಾಪ ಬರುತ್ತದೆ; ಕ್ರಿಸ್ತಪೂರ್ವ 70ರ ಸುಮಾರಿಗಿದ್ದವನು ಇವನು. ಕುಷಾಣರ ಕಾಲದಲ್ಲಿ ಉಜ್ಜ್ವಲವಾಗಿ ಬೆಳೆದ 'ಗ್ರೀಕೋ–ಬೌದ್ಧ' ಕಲೆ ಶಕ ಮತ್ತು ಪಾರ್ಥಿಯನ್

ಜನ ಈ ಪ್ರದೇಶವನ್ನು ಆಳಲು ಮೊದಲಿಟ್ಟಾಗ ಮುಂದುವರೆಯಿತು. ಗ್ರೀಕ್ ಕಲೆಯ ಪ್ರಭಾವ ಉಳಿದೆಲ್ಲ ಕಡೆಯೂ ಕ್ಷೀಣದೆಶೆಗೆ ಬಂದು ಮರೆಯಾಗುತ್ತಿದ್ದಾಗಲೂ ಇಲ್ಲಿ ಮಾತ್ರ ಸುಭದ್ರವಾಗಿ, ಸನ್ಮಾನ್ಯವಾಗಿ ಮೆರೆಯುತ್ತಿದ್ದಿತು.

ಈ ಸಂಪ್ರದಾಯದ ಕೇಂದ್ರ ತಕ್ಷಶಿಲೆ. ಪೆಶಾವರ್, ಬಾಮಿಯನ್, ಜಲಾಲಬಾದ್, ಹದ್ದಾ ಮೊದಲಾದ ನಗರಗಳೂ ಈ ಕಲೆಯನ್ನು ಪೋಷಿಸಿದುವು. ಆದರೆ ಈ ನಗರಗಳೆಲ್ಲ ದಾಳಿಕಾರರ ದಾರಿಯಲ್ಲಿಯೇ ಇದ್ದುದರಿಂದ ಇಲ್ಲಿನ ಕಟ್ಟಡಗಳೂ ಶಿಲ್ಪಗಳೂ ಆತಂಕಕ್ಕೀಡಾದುವು. ಕೆಲವು ಅವಶೇಷಗಳು ಮಾತ್ರ ಈಗ ಉಳಿದಿವೆ; ಬಹುಮಟ್ಟಿನ ಕಲಾಕೃತಿಗಳು ನಾಶವಾಗಿವೆ. ಉಳಿದವನ್ನು ಪರಿಶೀಲಿಸಿದರೆ ಗ್ರೀಕರ ಪ್ರಭಾವ ಚೆನ್ನಾಗಿ ಎದ್ದುಕಾಣುತ್ತದೆ. ಮಹಾಯಾನ ಬೌದ್ಧಧರ್ಮ ಅಲ್ಲಿ ಬೇರೂರಿದ್ದುದೂ ಸ್ಪಷ್ಟವಾಗುತ್ತದೆ. ವಿವಿಧ ವಾಸ್ತು ಪದ್ಧತಿಗಳ ಮೇಳನವನ್ನು ಕಾಣಬೇಕೆಂದರೆ ತಕ್ಷಶಿಲೆಯ ಬಳಿ ಇರುವ ಸಿರ್ಕಪ್‌ನ ಅವಶೇಷಗಳಿಗೆ ಹೋಗಬೇಕು. ಚೈತ್ಯದ ತೋರಣಗಳೂ ಬೋದಿಗೆಗಳೂ ಬೌದ್ಧಧರ್ಮದವು; ಅರಮನೆಯಿರುವುದು ಅಸ್ಸೀರಿಯ ದೇಶದ ಶೈಲಿಯಲ್ಲಿ; ಅಗ್ನಿಸ್ತಂಭಗಳು ಇರಾನ್ ದೇಶದ ಶೈಲಿಯಲ್ಲಿ; ಸಿಥಿಯನ್ ಕಲಾಪ್ರಕಾರದ ಗಂಡಭೇರುಂಡ; ಅಯೋನಿಯನ್ ಶೈಲಿಯ ಕಂಬಗಳು. ಹೀಗೆ ಬೇರೆ ಬೇರೆ ಭಾಗಗಳು ಬೇರೆಬೇರೆ ಶೈಲಿಗಳಲ್ಲಿದ್ದರೂ ಸಮಷ್ಟಿಯ ಸೌಂದರ್ಯಕ್ಕೇನು ಊನಬಂದಿಲ್ಲ. ತಖ್ತ್–ಇ–ಬಹಾಯ್ ಎಂಬಲ್ಲಿರುವ ಸ್ತೂಪ, ವಿಹಾರಗಳ ಅವಶೇಷ ಹೀಗೆಯೇ ಹಲವಾರು ಸಂಪ್ರದಾಯಗಳ ಸಂಗಮ. ಜನ್‌ಡಯಾಲ್ ಎಂಬಲ್ಲಿ ಇರುವ ದೇಗುಲ ಮಾತ್ರ ಶುದ್ಧ ಗ್ರೀಕ್ ಪದ್ಧತಿಯದು. ಹದ್ದಾದಲ್ಲಿ ದೊರೆತಿರುವ ಕೃತಿಗಳೂ ಗ್ರೀಕ್ ಶಿಲ್ಪದ ವಾಸ್ತವಿಕತೆಯನ್ನು ಪೂರ್ಣವಾಗಿ ಅನುಕರಿಸಿದುವೇ.

ಗಾಂಧಾರಕಲೆಯ ಫಲವೆಂದರೆ ಬುದ್ಧನನ್ನು ಚಿತ್ರಿಸುವ ಕೌಶಲ. ಶಿಲ್ಪದಲ್ಲಿ ಬುದ್ಧನನ್ನು ರೂಪಿಸುವ ವಾಡಿಕೆ ಮೊದಲಿಗಿರಲಿಲ್ಲವೆಂದು ಹೇಳಿದೆವಷ್ಟೆ. ಆದರೆ ಗ್ರೀಕ್ ಪ್ರಭಾವವನ್ನು ತಳೆದ ಗಾಂಧಾರ ಶಿಲ್ಪದಲ್ಲಿ ಬುದ್ಧನನ್ನು ನಿಜವಾದ ಮನುಷ್ಯನಂತೆಯೇ ಕಡೆದಿಡುವ ಪದ್ಧತಿ ಬೆಳೆಯಿತು. ಗಾಂಧಾರದ ಬುದ್ಧ ಮತ್ತು ಬೋಧಿಸತ್ತ್ವರು ಗ್ರೀಕ್ ವೀರರಂತೆ ಕಾಣುತ್ತಾರೆ. ಉಡುಗೆ–ತೊಡುಗೆಗಳಲ್ಲಿ, ಆಭರಣ–ಅಲಂಕರಣಗಳಲ್ಲಿ, ನಿಲ್ಲುವ ಅಥವಾ ಕೂಡುವ ಭಂಗಿಗಳಲ್ಲಿ ವಾಸ್ತವಿಕತೆ ಎದ್ದು ಕಾಣುತ್ತದೆ. ಮುಖಮುದ್ರೆ ಶಾಂತ, ಗಂಭೀರ; ಅವಯವಸೌಷ್ಠವ ಮತ್ತು ಸೌಂದರ್ಯಗಳು ಗ್ರೀಕ್ ಮತ್ತು ರೋಮನ್ ಶಿಲ್ಪಾಗಮಗಳಿಗೆ ಅನುಸಾರವಾಗಿಯೇ ಇವೆ. ಬುದ್ಧನನ್ನು ಚಿತ್ರಿಸುವಾಗ ಉಷ್ಣೀಷ ಜಟಾಬಂಧವಾಯಿತು, ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲ ಮೂಡಿಕೊಂಡಿತು. ಭೂಮಿಸ್ಪರ್ಶ, ಧರ್ಮಚಕ್ರಪ್ರವರ್ತನ, ವ್ಯಾಖ್ಯಾನ, ಅಭಯ, ಸಮಾಧಿ ಮೊದಲಾದ ಮುದ್ರೆಗಳೆಲ್ಲದರಲ್ಲಿಯೂ ಬುದ್ಧ ಕಾಣಿಸಿಕೊಂಡ.

ಕುಷಾಣರಾಜನಾಗಿದ್ದ ಕನಿಷ್ಕ (ಕ್ರಿಸ್ತಾಬ್ದ 120–162) ಬೌದ್ಧಧರ್ಮದಲ್ಲಿ ತುಂಬ ವಿಶ್ವಾಸಿಯಾಗಿದ್ದ ರಾಜ. ಅವನ ಕಾಲದಲ್ಲಿ ಬುದ್ಧ–ಬೋಧಿಸತ್ತ್ವರ ಮೂರ್ತಿಶಿಲ್ಪ ಹೆಮ್ಮರನಾಗಿ ಬೆಳೆಯಿತು. ಮನುಷ್ಯಾಕಾರವನ್ನು ನೈಜವಾಗಿ ಪ್ರತಿಕೃತಿ ಮಾಡುವುದರಲ್ಲಿಯೂ, ವಸ್ತ್ರ–ಅಲಂಕರಣ ಮೊದಲಾದ ವಿವರಗಳನ್ನೆಲ್ಲ ವಾಸ್ತವಿಕತೆಯ ಜಾಡುಬಿಡದೆ ಕಡೆಯುವುದರಲ್ಲಿಯೂ ಈ ಕಾಲದ ಶಿಲ್ಪಿಗಳನ್ನು ಮೀರಿಸುವವರು ಇರಲಾರರು. ಬುದ್ಧನ ವ್ಯಕ್ತಿತ್ವವನ್ನು ಶಿಶು, ತರುಣ ರಾಜಕುಮಾರ, ಕಠೋರತಪಸ್ವಿ, ಪರಿವ್ರಾಜಕ, ಧರ್ಮಸ್ವಾಮಿ ಮೊದಲಾದ ಹಲವು ಪ್ರಕಾರಗಳಲ್ಲಿ ಚಿತ್ರಿಸಿದರು; ಈ ಸಹಜ ನಿರೂಪಣೆಯಲ್ಲಿ ಅದ್ಭುತವಾದ ಕೌಶಲವನ್ನೂ ತೋರಿಸಿದರು. ಪದ್ಧತಿ ಯವನರದ್ದಾದರೂ ವಸ್ತುವೆಲ್ಲ ಭಾರತೀಯವೇ. ಬುದ್ಧನನ್ನು ಅಪೋಲೋ

ವಿನಂತೆ ಕಾಣಿಸುವುದು ಶಿಲ್ಪಿಯ ಉದ್ದೇಶವಾದರೂ ಅವನ ಉಡುಗೆ–ತೊಡುಗೆಗಳೆಲ್ಲ ಆ ಕಾಲದ, ಆ ಪ್ರದೇಶದ ಭಾರತೀಯ ರಾಜಪುತ್ರರದ್ದೇ. ಬೌದ್ಧಸಾಹಿತ್ಯದಲ್ಲಿ ಕಂಡುಬರುವ ಲಕ್ಷಣಗಳನ್ನೂ ಬುದ್ಧಮೂರ್ತಿಗಳಲ್ಲಿ ಕಾಣಿಸಿದ್ದಾರೆ.

ಗಾಂಧಾರ ಶಿಲ್ಪಗಳು

ಚಿತ್ರ 153
ಪ್ರವಚನ ಮುದ್ರೆ

ಚಿತ್ರ 154
ಬೋಧಿಸತ್ತ್ವ ರಾಜಪುತ್ರ

ಚಿತ್ರ 155
ಧರ್ಮಚಕ್ರ ಮುದ್ರೆ

ವಾಯುವ್ಯಪ್ರಾಂತ್ಯದಲ್ಲಿ ಗಾಂಧಾರಕಲೆ ಆರಂಭವಾಗಿ ಬೆಳೆಯುತ್ತಿರುವಾಗಲೇ, ಕುಷಾಣರಾಜರಾಗಿದ್ದ ಕನಿಷ್ಕ, ಹುವಿಷ್ಕ ಮೊದಲಾದವರ ಪ್ರೋತ್ಸಾಹದಿಂದಲೇ, ಮಥುರಾಕಲೆಯೂ ಮೈದಳೆಯಿತು. ಹಳೆಯ ವೈದಿಕ, ಜೈನ, ಬೌದ್ಧ ಸಂಪ್ರದಾಯಗಳಿಗೆಲ್ಲ ಕೇಂದ್ರವೆನಿಸಿದ್ದ ಮಥುರಾ ನಗರವು ವಾಣಿಜ್ಯ, ವ್ಯಾಪಾರಗಳಿಗೂ ಮುಖ್ಯವಾಗಿದ್ದುದರಿಂದ ಈ ಎಲ್ಲ ಧರ್ಮಗಳ ಜನರೂ ಬಹುಸಂಖ್ಯೆಯಲ್ಲಿ ಬಂದು ನೆರೆಯುತ್ತಿದ್ದರು. ಈ ಪಟ್ಟಣದಲ್ಲಿ ಪೂಜೆಗಾಗಿ, ದೇವಾಲಯಗಳಲ್ಲಿ ಪ್ರತಿಷ್ಠೆಗಾಗಿ ಬುದ್ಧನ ಮೂರ್ತಿಗಳನ್ನು ಸಿದ್ಧಮಾಡುವ ಉದ್ಯಮ ಬಿರುಸಾಗಿ ನಡೆಯತೊಡಗಿತು. ಈ ಉದ್ಯಮದಲ್ಲಿ ಮುಂದಾಳುಗಳಾಗಿದ್ದವರು ಕುಷಾಣ ಶಿಲ್ಪಿಗಳೇ. ಗಾಂಧಾರಕಲೆಯ ಪ್ರಭಾವ ಹೀಗೆ ಮಥುರಾ ಪ್ರಕಾರದಲ್ಲಿ ಕೂಡಿಕೊಂಡು ಬಂದಿತು. ಆದರೆ ಗ್ರೀಕರ ಅತಿವಾಸ್ತವಿಕತೆಯ ಹಟ ಮಥುರಾ ಶಿಲ್ಪಿಗಳಿಗೆ ಹಿಡಿಸಲಿಲ್ಲ. ಬುದ್ಧನನ್ನು ಮನುಷ್ಯನಂತೆ ಕಾಣಿಸುವ ಪದ್ಧತಿಯನ್ನೇನೋ ಧಾರಾಳವಾಗಿ ಅಳವಡಿಸಿಕೊಂಡರು; ಆದರೆ ಗ್ರೀಕರ ಸಾಮಾನ್ಯಮನುಷ್ಯನಂತಲ್ಲ, ಭಾರತೀಯ ಕಲ್ಪನೆಯ ದೇವಮಾನವನಂತೆ. ವಾರಾಣಸಿಯ ಬಳಿ ಸಾರನಾಥ ಮತ್ತು ಆಂಧ್ರದ ಅಮರಾವತಿಗಳಲ್ಲಿ ಈ ಕಲಾಪ್ರಕಾರದ ನಿದರ್ಶನಗಳಿವೆ. ಕಾಲಕ್ರಮದಲ್ಲಿ ಮಥುರಾನಗರವೇ ಮುಸಲ್ಮಾನರ ದಾಳಿಗೆ ತುತ್ತಾಗಿ ಅಲ್ಲಿದ್ದ ಕಲೆಗಾರಿಕೆಯೆಲ್ಲ ಸಂಪೂರ್ಣವಾಗಿ ನಾಶವಾಯಿತು. ವಿಕಲವಾದ, ಭಗ್ನವಾದ ಕೆಲವು ಪ್ರತಿಮೆಗಳು ಮಾತ್ರ ಅಲ್ಲಲ್ಲಿ ಉಳಿದಿವೆ.

ಆಂಧ್ರರಾಜರು ಈ ಸಂಪ್ರದಾಯವನ್ನು ಪುರಸ್ಕರಿಸಿದರಾಗಿ ಅಮರಾವತೀ ಸ್ತೂಪವನ್ನು ಕಟ್ಟುವಾಗ ಮಥುರಾನಗರದ ಶಿಲ್ಪಿಗಳನ್ನೇ ಕರೆಸಿಕೊಂಡರು. ಹೀಗಾಗಿ ಇಲ್ಲಿನ ಸ್ತೂಪದಲ್ಲಿ ಗಾಂಧಾರ–ಮಥುರಾ ಪದ್ಧತಿಗಳು ಬೆರೆತಿರುವುದನ್ನು ಕಾಣುವೆವು. ಮಥುರಾ ಸಂಪ್ರದಾಯವನ್ನು ಗಾಂಧಾರ ಪದ್ಧತಿಯ ಒಂದು ಶಾಖೆಯೆಂದೇ ಕೆಲವರು ಪರಿಗಣಿಸುತ್ತಾರೆ. ಗಾಂಧಾರಕಲೆಯ ಮಾನವಾದರ್ಶವನ್ನು ಇದು ಪೂರ್ತಿಯಾಗಿ ಅರಗಿಸಿಕೊಂಡಿರುವುದು ದಿಟ; ಅದರ ಉದ್ದೇಶ, ಸಂವಿಧಾನಗಳನ್ನೂ ಯಥೇಚ್ಛವಾಗಿ ಬಳಸಿರುವುದೂ ದಿಟ. ಆದರೆ ಮಥುರಾಪ್ರಕಾರದ ಕಲಾಭಿವ್ಯಕ್ತಿ ಮಾತ್ರ ಸಂಪೂರ್ಣವಾಗಿ ಭಾರತೀಯವೇ. ಅಲ್ಲಿನ ಶಿಲ್ಪಿಗಳು ಅನುಸರಿಸಿದುದು ಪ್ರಾಚೀನ ಶಿಲ್ಪಶಾಸ್ತ್ರದ ವಿಧಿನಿಯಮಗಳನ್ನೇ.

ಭಾರತೀಯತೆಯ ಪ್ರವೃತ್ತಿ ಹೀಗೆ ಪ್ರಕಟವಾದುದು ಮುಂದೆ ಕ್ರಿಸಾಬ್ದ ನಾಲ್ಕನೆಯ ಶತಮಾನದ ಸುಮಾರಿಗೆ ಗುಪ್ತರ ಕಲಾಪ್ರಕಾರದಲ್ಲಿ ಪ್ರೌಢವಾಯಿತು. ಅಶೋಕನ ಕಾಲದ ಶಿಲಾದೇಗುಲಗಳೂ ಶಿಲಾಸ್ತಂಭಗಳೂ ಅಲಂಕರಣ ಶಿಲ್ಪಗಳೂ ಗುಪ್ತಯುಗದ ಶಿಲ್ಪಿಗಳಿಗೆ ಸ್ಫೂರ್ತಿಯನ್ನು ಒದಗಿಸಿದುವು. ಆ ಕಾಲದಲ್ಲಿ ಬೌದ್ಧೇತರ ಬ್ರಾಹ್ಮಣ ಧರ್ಮವು ಬಲಗೊಳ್ಳುತ್ತಿದ್ದಿತಾಗಿ ಬುದ್ಧನು ಮಾತ್ರವಲ್ಲದೆ ಹಲವಾರು ದೇವ–ದೇವತೆಯರೂ ಶಿಲ್ಪದಲ್ಲಿ ಮೂಡಿಬಂದರು. ದೇವತಾ ಮೂರ್ತಿಗಳನ್ನು ಸಿದ್ಧಪಡಿಸಲು ನೆರವಾದ ವಿಧಿಗಳನ್ನೇ ಬುದ್ಧನ ಮೂರ್ತಿಶಿಲ್ಪಕ್ಕೂ ಬಳಸಿರುವುದನ್ನು ಕಾಣಬಹುದು. ನಿದರ್ಶನಕ್ಕೆ ಸುಲ್ತಾನ್ ಗಂಜಿನಲ್ಲಿ ದೊರೆತ ತಾಮ್ರದ ಬುದ್ಧನ ಸ್ಥಾನಕ ವಿಗ್ರಹವನ್ನು ನೋಡಬೇಕು. ಗಾಂಧಾರಪದ್ಧತಿಯಲ್ಲಿ ಮನುಷ್ಯನಂತೆ ಮೈದಳೆದ ಬುದ್ಧ ಗುಪ್ತಪದ್ಧತಿಯಲ್ಲಿ ದೇವತಾಸ್ವರೂಪವನ್ನು ಪಡೆದ. ಆರನೆಯ ಶತಮಾನದ ಸುಮಾರಿಗೆ ಈ ಕಲಾಪ್ರಕಾರವು ಪ್ರಗಲ್ಭಾವಸ್ಥೆಯನ್ನು ಮುಟ್ಟುತ್ತಿರುವಾಗ ವಜ್ರಯಾನ ಬೌದ್ಧಪಂಥವು ಬಲಗೊಂಡು ಬುದ್ಧಪರಿವಾರದ ದೇವತಾಮೂರ್ತಿಗಳ ನಿರ್ಮಾಣಕ್ಕೆ ಎಡೆಮಾಡಿಕೊಟ್ಟಿತು.

ಚಿತ್ರ 156
ಆಂಧ್ರಪ್ರದೇಶದ ಕಾಂಸ್ಯ ಶಿಲ್ಪ
ಐದನೆಯ ಶತಮಾನದ್ದು

ಚಿತ್ರ 157
ನಾಳಂದಾ ಬುದ್ಧ
ಭೂಮಿಸ್ಪರ್ಶ ಮುದ್ರೆಯಲ್ಲಿ
ಪಾಲಯುಗದ ಶಿಲ್ಪ

ಚಿತ್ರ 158
ಮಥುರಾ ಬುದ್ಧ
ಕ್ರಿಸ್ತಾಬ್ದ ಎರಡನೆಯ ಶತಮಾನದ್ದು

ವಜ್ರಯಾನದ ಚೌಕಟ್ಟು : ಮಹಾಯಾನ ಬೌದ್ಧಧರ್ಮದ ಒಂದು ಕವಲಾದ ಯೋಗಾಚಾರ ಪಂಥದಿಂದ ಬೆಳೆದುಬಂದುದು ವಜ್ರಯಾನ. ಇದರಲ್ಲಿ ತಾಂತ್ರಿಕ ಪ್ರಭಾವವನ್ನು ವಿಶೇಷವಾಗಿ ಕಾಣಬಹುದು. ಕ್ರಿಸ್ತಾಬ್ದ ಏಳನೆಯ ಶತಮಾನದ ಸುಮಾರಿಗೆ ಸ್ಪಷವಾಗಿ ತಲೆದೋರಿದ ಈ ಯಾನವನ್ನು ಅನಂಗವಜ್ರನೆಂಬ ಸಿದ್ಧಯೋಗಿಯು ತನ್ನ 'ಪ್ರಜ್ಞೋಪಾಯವಿನಿಶ್ಚಯಸಿದ್ಧಿ' ಎನ್ನುವ ಗ್ರಂಥದಲ್ಲಿ ವಿವರಿಸಿದ್ದಾನೆ. ಇವನ ಶಿಷ್ಯನಾದ ಪದ್ಮಸಂಭವನೆಂಬುವನೇ ಕ್ರಿಸ್ತಾಬ್ದ 747 ರಲ್ಲಿ ಟಿಬೆಟ್ಟಿಗೆ ತೆರಳಿ ಅಲ್ಲಿ ಈ ಸಂಪ್ರದಾಯವನ್ನು ಬೆಳೆಸಿದವನು. ಒಡಿಸ್ಸ, ಅಸ್ಸಾಮು, ಬಂಗಾಳ, ನೇಪಾಳ, ಟಿಬೆಟ್ಟುಗಳಲ್ಲಿ ವಜ್ರಯಾನದ ಬಳಕೆ ಹೆಚ್ಚಾಗಿದ್ದಿತು.

ಈ ಪಂಥದ ತಾತ್ತ್ವಿಕ ನೆಲೆಯಲ್ಲಿ ನಿರ್ವಾಣವನ್ನು ಶೂನ್ಯ, ವಿಜ್ಞಾನ ಮತ್ತು ಮಹಾಸುಖ ಎಂಬ ಅಂಗಗಳಾಗಿ ನಿರ್ದೇಶಿಸಿ ಈ ಮೂರೂ ಬೆರೆತಾಗ ಅದು ವಜ್ರವೆಂದೂ ನಿರೂಪಿಸಿದರು. ಹೇವಜ್ರತಂತ್ರದಲ್ಲಿ 'ಅಭೇದ್ಯಂ ವಜ್ರಮಿತ್ಯುಕ್ತಂ' ಎಂದು ನಿರ್ದೇಶನವಿದೆ. ಈ ವಜ್ರವೇ ಸತ್ತ್ವವೆಂದೂ, ಶೂನ್ಯತೆಯೆಂದೂ, ವಿಜ್ಞಪ್ತಿ ಮಾತ್ರವೆಂದೂ, ಜೀವಿಯಲ್ಲಿರುವ ಆತ್ಮವೆಂದೂ ವಿವರಣೆಗಳಿವೆ. ಮನುಷ್ಯನಲ್ಲಿ ಮನೋತತ್ತ್ವವಾದ ಬೋಧಿಚಿತ್ತವೇ ವಿಜ್ಞಾನವೆಂದು ಪುರುಷರೂಪದಲ್ಲಿ ಬಗೆದು ಅದನ್ನು ಕರುಣೆಯೆಂದೂ, ಆತ್ಮತತ್ತ್ವ ಅಥವಾ ಶೂನ್ಯತೆಯನ್ನು ನಿರಾತ್ಮೆಯೆಂದು ಸ್ತ್ರೀರೂಪದಲ್ಲಿ ಬಗೆದು ಅದನ್ನು ಪ್ರಜ್ಞೆಯೆಂದೂ ಹೇಳಿ, ಇವೆರಡೂ ಎಡಬಿಡದೆ ಕೂಡಿಕೊಳ್ಳುವುದೇ ಯುಗನದ್ಧ ಕ್ರಮದಿಂದ ಬರುವ ಮಹಾಸುಖವೆಂದು ವಿವರಣೆಯಿದೆ. ಪ್ರಜ್ಞೆ ಸ್ತ್ರೀರೂಪದ ಶೂನ್ಯತೆಯಾದರೆ ಪುರುಷರೂಪದ ಕರುಣೆ ಅದಕ್ಕೆ ಉಪಾಯ. ಹಾಲು–ನೀರು ಬೆರೆತಂತೆ ಇವೆರಡೂ ಬೆರೆಯುವುದು ಪ್ರಜ್ಞೋಪಾಯ; ಇದೇ ಮಹಾಸುಖ ಅಥವಾ ಸಮಂತಭದ್ರ.

ಹೀಗೆ ವಜ್ರಯಾನದಲ್ಲಿ ಸ್ತ್ರೀ–ಪುರುಷತತ್ತ್ವಗಳ ಮೈಥುನ ಅಥವಾ ಕಾಮಕಲೆಗೆ ಪ್ರಾಶಸ್ತ್ಯ ಬಂದಿತು. ಪದ್ಮವಜ್ರ (ಕ್ರಿಸ್ತಾಬ್ದ 690ರ ಸುಮಾರು), ಅನಂಗವಜ್ರ, ಇಂದ್ರಭೂತಿ, ಲಕ್ಷ್ಮೀಂಕರಾ, ಲೀಲಾವಜ್ರ, ಸಹಜಯೋಗಿನೀ ಚಿಂತಾ, ಡೊಂಬಿ ಹೇರುಕ (ಎಲ್ಲರೂ ಕ್ರಿಸ್ತಾಬ್ದ 700–750ರ ಸುಮಾರಿನವರು) ಮೊದಲಾದ ವಜ್ರಯಾನಾಚಾರ್ಯರು ಮನುಷ್ಯನಲ್ಲಿರುವ ಮಹಾಸುಖವೇ ಇಡೀ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳಿಗೆ ಕಾರಣವೆಂದು ಹೇಳಿ, ಇದನ್ನು ವಜ್ರಸತ್ತ್ವವೆಂಬ ದೇವತಾರೂಪದಲ್ಲಿ ಕಲ್ಪಿಸಿಕೊಂಡರು. ಇದೇ ಅದ್ವಯವಜ್ರ, ಪ್ರಜ್ಞಾಪಾರಮಿತಾ, ಬೋಧಿಚಿತ್ತ ಎಂದೂ ಕರೆಯಲ್ಪಟ್ಟಿತು. ಇದಕ್ಕೆ ಹಲವಾರು ಮೂರ್ತಿಗಳನ್ನೂ ಮುದ್ರೆಗಳನ್ನೂ ಭಂಗಿಗಳನ್ನೂ ವರ್ಣಚಿತ್ರಗಳಲ್ಲಿ, ರೇಖಾಚಿತ್ರಗಳಲ್ಲಿ, ಶಿಲ್ಪದಲ್ಲಿ ಮೂಡಿಸುವ ಪದ್ಧತಿಯೂ, ಅವನ್ನು ಮಂತ್ರಪುರಸ್ಸರವಾಗಿ ವಿಧಿವತ್ತಾಗಿ ಪೂಜಿಸುವ ಪದ್ಧತಿಯೂ ಬೆಳೆದುಬಂದುವು.

ಪ್ರಾಚೀನನೆಲೆಯ ಸ್ಥವಿರವಾದ–ಬೌದ್ಧಧರ್ಮದಲ್ಲಿ ಧ್ಯಾನವೇ ಪ್ರಮುಖಸಾಧನೆ; ಅಲ್ಲಿ ದೇವ–ದೇವತೆಯರ ಪಾತ್ರ ತೀರ ಕಡಮೆ, ಇಲ್ಲವೇ ಇಲ್ಲವೆಂದರೂ ತಡೆದೀತು. ಆದರೆ ಮಹಾಯಾನ ಬೌದ್ಧಪಂಥಗಳಲ್ಲಿ, ಅದರಲ್ಲಿಯೂ ವಜ್ರಯಾನದಲ್ಲಿ, ಪೂಜೆಯೇ ಪ್ರಮುಖ; ಇಲ್ಲಿ ಮಂತ್ರದ ಪಾತ್ರ ಹೆಚ್ಚು, ದೇವ ದೇವತೆಯರ ಸಂಖ್ಯೆಯೂ ಹೆಚ್ಚು. ವಜ್ರಯಾನದ ದೇವತೆಗಳೆಲ್ಲರೂ ಶೂನ್ಯತೆಯ ಮಡಿಲಿಂದಲೇ ಎದ್ದು ಬಂದವರೆಂದೂ, ಸ್ವಭಾವದಲ್ಲಿ ನಿಃಸ್ವಭಾವದವರೆಂದೂ, ಸ್ಫೂರ್ತಿ ಬಂದಹಾಗೆಲ್ಲ ಅವರೂ ಮೈದಳೆಯುವರೆಂದೂ ಕಲ್ಪನೆಯಿದೆ—

ಸ್ಫೂರ್ತಿಶ್ಚ ದೇವತಾಕಾರಾ ನಿಃಸ್ವಭಾವಾ ಸ್ವಭಾವತಃ ।
ಯಥಾ ಯಥಾ ಭವೇತ್ ಸ್ಫೂರ್ತಿಃ ಸಾ ತಥಾ ಶೂನ್ಯಾತ್ಮಿಕಾ॥

ಶೂನ್ಯತೆಯನ್ನು ಸರಿಯಾಗಿ ಅರಿತರೆ ಅದರಿಂದ 'ಬೀಜ' ಒದಗುವುದೆಂದೂ, ಸಾಧಕನು ಪುರಶ್ಚರಣಮಾಡುವ ಈ ಬೀಜದೊಂದಿಗೆ ಶೂನ್ಯತೆ ಕೂಡಿದಾಗ, ದೇವತೆಯ ಬಿಂಬ ಮೂಡಿಬರುವುದೆಂದೂ ವಿವರಣೆಯಿದೆ—

ಶೂನ್ಯತಾ ಬೋಧಿತೋ ಬೀಜಂ, ಬೀಜಾದ್ಬಿಂಬಂ ಪ್ರಜಾಯತೇ

ಚಿತ್ರ 159
ತಾರಾಭಗವತಿ
ಒಂಬತ್ತನೆಯ ಶತಮಾನದ ಶಿಲ್ಪ

ವಜ್ರಯಾನದಲ್ಲಿ ಬಹುಮಟ್ಟಿಗೆ ಪ್ರಚಲಿತವಾಗಿರುವ ತಾರಾ ಸಾಧನೆಯನ್ನು ನಿದರ್ಶನವೆಂದು ಪರಿಗಣಿಸಿದರೆ ಅಲ್ಲಿ ತಾರಾ ಭಗವತೀದೇವತೆಯ ಮೂರ್ತಿ ಹೊರಹೊಮ್ಮುವುದು ಹೀಗೆ. ಸಾಧಕನು ಶುಚಿರ್ಭೂತನಾಗಿ, ಪದ್ಮಾಸನದಲ್ಲಿ ಕುಳಿತು, ಹೃದಯದಲ್ಲಿ 'ಅ' ಕಾರವನ್ನು ಪುರಶ್ಚರಣ ಮಾಡುತ್ತ ಅದರಿಂದ ಹೊರಹೊಮ್ಮಿದಂತೆ ಚಂದ್ರಮಂಡಲವನ್ನು ಕಲ್ಪಿಸಿಕೊಳ್ಳುತ್ತಾನೆ. ಅದರ ಅಡಿಯಲ್ಲಿ ಅರಳಿದ ನೀಲಕಮಲವನ್ನು ಕಲ್ಪಿಸಿಕೊಳ್ಳುತ್ತಾನೆ. ಕಮಲದ ಕೇಸರದ ಮೇಲೆ ಮೂಡಿದ ಶುದ್ಧ ಚಂದ್ರಮಂಡಲವನ್ನೇ ದೃಷ್ಟಿಸುತ್ತ, ತಾರಾಭಗವತಿಯ ಬೀಜ ಮಂತ್ರವಾದ 'ತಾಂ' ಎನ್ನುವುದನ್ನು ಪುರಶ್ಚರಣಮಾಡುತ್ತಾನೆ. ಹಳದಿಬಣ್ಣದ ಬೀಜದಿಂದ ಹೊರಹೊಮ್ಮುವ ಬೆಳಕು ಸುತ್ತ ಹರಡಿದ ಕತ್ತಲೆಯನ್ನು ನಾಶಪಡಿಸಿ, ನಮಗೆ ಕಾಣದಿರುವ ಅಸಂಖ್ಯಾತ ಲೋಕಗಳನ್ನು ಬೆಳಗಿಸುತ್ತದೆಯೆಂದೂ, ಅಸಂಖ್ಯಾತ ಬುದ್ಧ–ಬೋಧಿಸತ್ತ್ವರನ್ನು ಉತ್ಪಾದಿಸುವುದೆಂದೂ ಬಗೆದು, ಅದನ್ನೇ ಧ್ಯಾನಿಸುತ್ತ ಬಗೆಬಗೆಯ ಅರ್ಚನೆಗಳನ್ನು ನೆರವೇರಿಸುತ್ತಾನೆ. ಅನಂತರ ಶ್ರದ್ಧೆಯಿಂದ ತುಂಬಿದ ಹೃದಯದಿಂದ ತನ್ನ ದೋಷಗಳಿಗೆ ಕ್ಷಮೆಯನ್ನು ಯಾಚಿಸಿ, ತನ್ನ ಹಾಗೂ ಇತರರ ಪುಣ್ಯಕರ್ಮಗಳನ್ನು ಅನುಮೋದಿಸಿ, ಭವಬಂಧನದಿಂದ ಪಾರಾಗುವ ಬಯಕೆಯನ್ನು ವ್ಯಕ್ತಪಡಿಸಿ, ಅನಂತರ ತನ್ನ ಶುದ್ಧಸ್ವಭಾವವನ್ನೂ ಎಲ್ಲ ವಸ್ತುಗಳ ಶುದ್ಧಸ್ವಭಾವವನ್ನೂ ಮನಸ್ಸಿನಲ್ಲಿ ತಂದುಕೊಂಡು, ತಾನು ಶೂನ್ಯತೆಯ ಸ್ವಭಾವದವನೆಂದು ಗೊತ್ತುಮಾಡಿಕೊಳ್ಳುತ್ತಾನೆ. ಇದಕ್ಕೆ ಅವನು ಬಳಸುವ ಮಂತ್ರ—'ಓಂ ಶೂನ್ಯತಾ–ಜ್ಞಾನ–ವಜ್ರಸತ್ತ್ವ ಸ್ವಭಾವತ್ಮಕೋಽಹಂ" ಎಂಬುದು. ಇಷ್ಟಾದಮೇಲೆ ಸಾಧಕನು ತನ್ನ ಹೃದಯದಲ್ಲಿ 'ತಾಂ' ಬೀಜಮಂತ್ರದಿಂದ ಹೊರಹೊಮ್ಮುವ ಆರ್ಯತಾರಾಭಗವತಿಯನ್ನು ಕುರಿತು ಧ್ಯಾನ ಮಾಡುತ್ತಾನೆ. ನೀಲಕಮಲದ ಮೇಲೆ ಶುದ್ಧ ಚೇದ್ರಮಂಡಲದಲ್ಲಿ ಈ ದೇವಿ ಲಲಿತಾಸನದಲ್ಲಿ ಕುಳಿತಂತೆ ಕಾಣಿಸಿಕೊಳ್ಳುತ್ತಾಳೆ; ಬಲಗೈ ವರದಮುದ್ರೆಯಲ್ಲಿ, ಎಡಗೈಯಲ್ಲಿ ನೀಲೋತ್ಪಲ; ಸರ್ವಾಭರಣ ಭೂಷಿತೆ; ಶಾಂತವಾದ ಮುಖ. ದೇವಿಯು ಧ್ಯಾನದಲ್ಲಿ ದೃಢವಾದಾಗ, ಮನಸ್ಸಿನಲ್ಲಿಯೇ ಆಕೆಯನ್ನು ಚಂದ್ರಮಂಡಲದಿಂದ ಹೊರತಂದು ಪೀಠದ ಮೇಲೆ ಕುಳ್ಳಿರಿಸಿ ಷೋಡಶೋಚಾರ ಪೂಜೆಮಾಡುತ್ತಾನೆ. ಆರ್ಯತಾರೆಯು ವಿಶ್ವಾತ್ಮಿಕೆಯೆಂದು ಕಲ್ಪಿಸಿಕೊಂಡು ತಾನೂ ತಾರಾಸ್ವರೂಪಿಯೆಂದೇ ಬಗೆದುಕೊಳ್ಳಬೇಕು. ಇದು 'ಕಿಂಚಿದ್ವಿಸ್ತರ ತಾರಾ ಸಾಧನೆ'ಯಲ್ಲಿ ಬರುವ ವಿವರ.

ಡೊಂಬಿ ಹೇರುಕನೆಂಬ ಸಿದ್ಧ (ಕ್ರಿಸ್ತಾಬ್ದ 750ರ ಸುಮಾರು) ಬೌದ್ಧ ದರ್ಶನದ ಪಂಚಸ್ಕಂಧವಾಪಕ್ಕೆ ಪಂಚಕುಲಗಳ ಕಲ್ಪನೆಯನ್ನು ಅಳವಡಿಸಿದುದು ವಜ್ರಯಾನದ ದೇವತಾಕೋಟಿಯ ಇತಿಹಾಸದಲ್ಲಿ ಮುಖ್ಯವಾದ ಘಟ್ಟ. ಅನಾತ್ಮವಾದವನ್ನು ಅವಲಂಬಿಸಿದ ಬೌದ್ಧರು ರೂಪ–ವೇದನಾ–ಸಂಜ್ಞಾ–ಸಂಸ್ಕಾರ–ವಿಜ್ಞಾನಗಳೆಂಬ ಐದು ಸ್ಕಂಧಗಳೇ ಸರ್ವಸ್ವವೆಂದು ಪ್ರತಿಪಾದಿಸುತ್ತಾರೆ. ವಜ್ರಯಾನದಲ್ಲಿ ಈ ಸ್ಕಂಧಗಳೊಂದೊಂದಕ್ಕೂ ಒಬ್ಬೊಬ್ಬ ಧ್ಯಾನಿಬುದ್ಧನನ್ನು ಅಧಿಪತಿಯೆಂದು ಹೇಳಿದೆ. ರೂಪಕ್ಕೆ ವೈರೋಚನ, ವೇದನಾಸ್ಕಂಧಕ್ಕೆ ರತ್ನಸಂಭವ, ಸಂಜ್ಞಾಸ್ಕಂದಕ್ಕೆ ಅಮಿತಾಭ, ಸಂಸ್ಕಾರಕ್ಕೆ ಅಮೋಘಸಿದ್ಧಿ, ವಿಜ್ಞಾನಕ್ಕೆ ಅಕ್ಷೋಭ್ಯ ಇವರೇ ಐವರು ಧ್ಯಾನಿಬುದ್ಧರು. ಇವರನ್ನು ಪಂಚಜಿನರೆಂದೂ, ಇವರನ್ನವಲಂಬಿಸಿ ಐದು ಕುಲಗಳಿವೆಯೆಂದೂ ಕಲ್ಪಿಸಿಕೊಂಡಿದ್ದಾರೆ. ಇವರಲ್ಲಿ ಮೂರ್ತಿಭೇದವೂ ಇದೆ. ವೈರೋಚನ ವ್ಯಾಖ್ಯಾನ ಮುದ್ರೆಯನ್ನು ತಳೆದು, ಸರ್ಪವಾಹನನಾಗಿ ನಡುವೆ ಇರುತ್ತಾನೆ; ಇವನ ಲಾಂಛನ ಧರ್ಮಚಕ್ರ. ಅವನ ಮೇಲ್ಭಾಗದಲ್ಲಿ (ಎಂದರೆ ಉತ್ತರಕ್ಕೆ) ಅಮೋಘಸಿದ್ಧಿ ವೀರಮುದ್ರೆಯಲ್ಲಿದ್ದು ವಿಶ್ವವಜ್ರ ಅಥವ ವಜ್ರಯುಗದ ಲಾಂಛನವನ್ನು ಪಡೆದಿರುತ್ತಾನೆ; ಇವನ ವಾಹನ ಗರುಡ. ಕೆಳಭಾಗದಲ್ಲಿ (ಎಂದರೆ ದಕ್ಷಿಣಕ್ಕೆ) ಅಶ್ವವಾಹನನಾಗಿ ಮಣಿಲಾಂಛನದ ರತ್ನಸಂಭವ ವರದಮುದ್ರೆಯಲ್ಲಿರುತ್ತಾನೆ. ವೈರೋಚನನ ಬಲಭಾಗದಲ್ಲಿ (ಪಶ್ಚಿಮಕ್ಕೆ) ಅಮಿತಾಭ ಧ್ಯಾನಮುದ್ರೆಯಲ್ಲಿ ನವಿಲನ್ನೇರಿ ಪದ್ಮಲಾಂಛನದೊಂದಿಗೆ ಇರುತ್ತಾನೆ. ಎಡಭಾಗದಲ್ಲಿ (ಪೂರ್ವಕ್ಕೆ) ಅಕ್ಷೋಭ್ಯ ಭೂಸ್ಪರ್ಶಮುದ್ರೆಯಲ್ಲಿ ಗಜವಾಹನನಾಗಿ ವಜ್ರಲಾಂಛನದೊಂದಿಗೆ ಇರುತ್ತಾನೆ. ಇವರಿವರ ಬಣ್ಣಗಳೂ ಬೇರೆಯಾಗಿರುತ್ತವೆ; 'ಕರ್ಮಾನುರೂಪತಃ' ಎಂದು ವಿವರಣೆಯೂ ಇದೆ.

ಒಂದೊಂದು ಸ್ಕಂಧಕ್ಕೂ ಅಧಿದೇವತೆಗಳಾದ ಧ್ಯಾನಿಬುದ್ಧರ ಕಲ್ಪನೆ 'ಗುಹ್ಯಸಮಾಜ' ಮೊದಲಾದ ತಾಂತ್ರಿಕಗ್ರಂಥಗಳಲ್ಲಿ ಬರುತ್ತದೆ. ಇವರು ಅಮರರಾದ ಬುದ್ಧರು; ಬೋಧಿಸತ್ತ್ವರ ಕೆಳಹಂತಗಳನ್ನು ಇವರು ದಾಟುವುದಿಲ್ಲ. ಪ್ರತಿ ಧ್ಯಾನಿಬುದ್ಧನಿಗೂ ಒಬ್ಬಳು ಶಕ್ತಿಯಿರುತ್ತಾಳೆ; ಇವರಿಬ್ಬರೂ ಕೂಡಿದಾಗ ಹಲವಾರು ಬೋಧಿಸತ್ತ್ವರು ಕಾಣಿಸಿಕೊಂಡು ಜಗತ್ಪಾಲನೆಮಾಡುತ್ತಾರೆ. ಧ್ಯಾನಿಬುದ್ಧರೇ ಜಗತ್ತಿನ ಸೃಷ್ಟಿ, ಸ್ಥಿತಿಗಳನ್ನು ನೇರವಾಗಿ ಮಾಡುವುದಿಲ್ಲ. ಪ್ರತಿ ಬೋಧಿಸತ್ತ್ವನ ಲೋಕಪಾಲನೆಯ ಅವಧಿಯಲ್ಲಿ ಎಂಟು ಮಂದಿ ಮಾನುಷೀಬುದ್ಧರು ಜಗತ್ತಿನಲ್ಲಿ ಕಾಣಿಸಿಕೊಂಡು ಜೀವರಿಗೆ ಮುಕ್ತಿಮಾರ್ಗವನ್ನುಪದೇಶಿಸುತ್ತಾರೆ. ಗೌತಮಬುದ್ಧನು ಇಂಥ ಮಾನುಷೀಬುದ್ಧರಲ್ಲಿ ಒಬ್ಬ.

ಐವರು ಧ್ಯಾನಿಬುದ್ಧರನ್ನು ಕಮಲಯುಗಲದ ಪೀಠದಮೇಲೆ, ಸಿದ್ಧಾಸನದಲ್ಲಿ, ಧ್ಯಾನಮುದ್ರೆಯಲ್ಲಿ, ಭಿಕ್ಷುಗಳಂತೆ ಉಡುಪು ಧರಿಸಿ ಕುಳಿತಂತೆ ಚಿತ್ರಿಸುತ್ತಾರೆ. ಬೋಧಿಸತ್ತ್ವರೂ ಮಾನುಷೀಬುದ್ಧರೂ ಇವರ ಕುಲಗಳಿಗೇ ಸೇರಿದವರು. ಆಯಾ ಬೋಧಿಸತ್ತ್ವನಾಗಲೀ, ಮಾನುಷೀಬುದ್ಧನಾಗಲೀ ದೇವತೆಯಾಗಲೀ ತಲೆಯಮೇಲೆ ಆಯಾ ಕುಲದ ಧ್ಯಾನಿಬುದ್ಧನ ಮೂರ್ತಿಯನ್ನು ಧರಿಸಿರುವಂತೆ ಚಿತ್ರಣವಿರುತ್ತದೆ. ಐದು ಕುಲಗಳನ್ನು ಮೋಹ (ವೈರೋಚನ), ಚಿಂತಾಮಣಿ (ರತ್ನಸಂಭವ), ರಾಗ (ಅಮಿತಾಭ), ಸಮಯ (ಅಮೋಘಸಿದ್ಧಿ) ಮತ್ತು ದ್ವೇಷ (ಅಕ್ಷೋಭ್ಯ) ಎಂದು ನಿರ್ದೇಶಿಸುವ ವಾಡಿಕೆಯಿದೆ. ಮೋಹ ಕುಲದ ನಾಯಕ (ಕುಲೇಶ) ವೈರೋಚನ; ಅವನ ಬೋಧಿಸತ್ತ್ವ ಸಮಂತಭದ್ರ, ಅವನ ಶಕ್ತಿ ವಜ್ರಧಾತ್ವೀಶ್ವರೀ. ಈ ಕುಲದಲ್ಲಿ ಮರೀಚೀ, ವಜ್ರವಾರಾಹೀ, ವಜ್ರವೇತಾಲೀ ಮೊದಲಾದ ದೇವತೆಗಳಿದ್ದಾರೆ. ಚಿಂತಾಮಣಿ ಕುಲದಲ್ಲಿ ರತ್ನಸಂಭವನಿಗೆ ಶಕ್ತಿ ಮಾಮಕೀ, ಬೋಧಿಸತ್ತ್ವ ರತ್ನಪಾಣಿ; ಕುಲದಲ್ಲಿ ಸೇರಿದ ದೇವತೆಗಳು ಜಂಭಲ, ವಸುಧಾರಾ ಮೊದಲಾದವರು. ರಾಗಕುಲದ ನಾಯಕ ಅಮಿತಾಭನಿಗೆ ಶಕ್ತಿ ಪಾಂಡರಾ; ಬೋಧಿ

ಸತ್ತ್ವ ಪದ್ಮಪಾಣಿ; ಲೋಕೇಶ್ವರ, ಕುರುಕುಲ್ಲಾ ಮೊದಲಾದವರು ಈ ಕುಲಕ್ಕೆ ಸೇರಿದವರು. ಸಮಯ ಕುಲದಲ್ಲಿ ಆರ್ಯತಾರಾ ಶಕ್ತಿ, ವಿಶ್ವಪಾಣಿಯೆಂಬುವನು ಬೋಧಿಸತ್ತ್ವ; ಖದಿರವಾಣಿ ತಾರಾ, ಪರ್ಣಶಬರೀ ಮೊದಲಾದವರು ಈ ಕುಲದವರು. ದ್ವೇಷಕುಲದ ಅಕ್ಷೋಭ್ಯನಿಗೆ ಲೋಚನಾ ಎಂಬುವಳು ಶಕ್ತಿ, ವಜ್ರ ಪಾಣಿ ಬೋಧಿಸತ್ತ್ವ; ಹೇರುಕ, ಯಮಾರಿ, ಏಕಜಟಾ, ನೈರಾತ್ಮ್ಯ ಇವರೆಲ್ಲ ಅಕ್ಷ್ಯೋಭ್ಯನಿಂದಲೇ ಬಂದವರು.

ವಜ್ರಯಾನದಲ್ಲಿ ಮಂಜುಶ್ರಿ, ಅವಲೋಕಿತೇಶ್ವರ, ಹಾರೀತೀ, ಕ್ಷಿತಿಗರ್ಭ, ಮೈತ್ರೇಯ, ಪದ್ಮಪಾಣಿ, ವೈಶ್ರವಣ, ಅಮಿತಾಯು, ಸಿಂಹನಾದ, ಮಂಜುಘೋಷ, ಚುಂದಾ, ತ್ರಿಸಮಯರಾಜ, ಗಗನಗಂಜ, ತಾರಾ, ಷಡಕ್ಷರೀ ಲೋಕೇಶ್ವರ, ಮಂಜುವರ, ಅರಪಚನ, ಖಸರ್ಪಣ, ಹೇರುಕ, ಅಪರಾಜಿತಾ, ಮಹಾಪ್ರತಿಸರಾ, ವಜ್ರವಾರಾಹೀ (ವಜ್ರಘೋಣಾ), ವಜ್ರವೇತಾಲೀ, ಖಂಡರೋಹಾ, ಭೃಕುಟೀ, ಹಯಗ್ರೀವ, ಶೀತಲಾ, ವಿದ್ಯುಜ್ವಾಲಾಕರಾಳೀ, ಮಾರೀಚೀ ಉಗ್ರತಾರಾ, ಏಕಜಟಾ, ಚಂಡರೋಷಣ, ಮಹಾಬಲ ನೈರಾತ್ಮ್ಯ, ಪರ್ಣಶಬರೀ, ಉಚ್ಛುಷ್ಮ ಜಂಭಲ, ವಸುಧಾರಾ ಮೊದಲಾದ ಹಲವಾರು ಬೋಧಿಸತ್ತ್ವ ದೇವದೇವತೆಯರ ಆರಾಧನೆ ನಡೆಯುತ್ತದೆ. ಇವರೆಲ್ಲರೂ ಐವರು ಧ್ಯಾನಿಬುದ್ಧರಿಂದಲೇ ಬಂದವರಾದರೆ., ಈ ಐವರು ಧ್ಯಾನಿಬುದ್ಧರೂ ಆದಿಬುದ್ಧನಿಂದ ಹೊರಬಂದವರು. ಆದಿಬುದ್ಧನ ಸತ್ತ್ವವನ್ನು ತಳೆದ ವಜ್ರಧರನೆಂಬ ಆರನೆಯ ಧ್ಯಾನಿಬುದ್ಧನನ್ನೂ ಪರಿಗಣಿಸುವುದುಂಟು.

ಆದಿಬುದ್ಧನ ಕಲ್ಪನೆ ನಾಳಂದಾ ವಿಹಾರದಲ್ಲಿ ಹತ್ತನೆಯ ಶತಮಾನದ ಸುಮಾರಿಗೆ ಸಿದ್ಧವಾಯಿ ತೆಂದು ಊಹಿಸಿದ್ದಾರೆ. ಅನಾದ್ಯನಂತವಾದ, ಸ್ವಯಂಭುವಾದ ಜ್ವಾಲೆಯಂತೆ ನೇಪಾಳದಲ್ಲಿ ಆದಿಬುದ್ಧ ಕಾಣಿಸಿಕೊಂಡನಂತೆ; ಈ ಜ್ವಾಲೆಯನ್ನು ಉಳಿಸಲು ಅದರ ಮೇಲೆ ಮಂಜುಶ್ರೀಯಿಂದ ಒಂದು ದೇಗುಲ ಕಟ್ಟಲ್ಪಟ್ಟಿತಂತೆ. ಇದೇ ನೇಪಾಳದ ಸುಪ್ರಸಿದ್ಧ ಸ್ವಯಂಭೂ ಚೈತ್ಯ ಎಂದು ನಿರ್ದೇಶಿಸುತ್ತಾರೆ. ಈ ಆದಿ ಬುದ್ಧ ಮನುಷ್ಯಾಕೃತಿಯನ್ನು ತಳೆದಾಗ ವಜ್ರಧರನೆನಿಸಿಕೊಳ್ಳುತ್ತಾನೆ. ಟಿಬೆಟ್ ಮತ್ತು ನೇಪಾಳಗಳಲ್ಲಿ ಆದಿಬುದ್ಧನ ಮೂರ್ತಿಗಳು ವಿಶೇಷವಾಗಿ ಬಳಕೆಯಲ್ಲಿವೆ. ವಜ್ರಪರ್ಯಂಕಾಸನದಲ್ಲಿ, ಎರಡೂ ಕೈಗಳನ್ನು ವಜ್ರಹುಂಕಾರ ಮುದ್ರೆಯಲ್ಲಿಟ್ಟು, ಎಂದರೆ ವಜ್ರಹಿಡಿದ ಬಲಗೈಯನ್ನೂ ಗಂಟೆ ಹಿಡಿದ ಎಡಗೈಯನ್ನೂ ಎದೆಯ ಮೇಲೆ ಅಡ್ಡಲಾಗಿಟ್ಟು, ಕುಳಿತಿರುವಂತೆ ವಜ್ರಧರನನ್ನು ಚಿತ್ರಿಸಲಾಗುತ್ತದೆ. ಶಕ್ತಿಸಂಯುಕ್ತ (ಯಬ್‌ಯುಂ) ನಾಗಿದ್ದಾಗ ತನ್ನ ಶಕ್ತಿ ಪ್ರಜ್ಞಾಪಾರಮಿತೆಯನ್ನು ಆಲಂಗಿಸಿಕೊಂಡು ಕುಳಿತಿರುತ್ತಾನೆ. ಆಯುಧಗಳಲ್ಲಿ ವಜ್ರವು ಶೂನ್ಯತೆಯನ್ನೂ ಗಂಟೆ ಪ್ರಜ್ಞೆಯನ್ನೂ ನಿರ್ದೇಶಿಸುತ್ತವೆ. ಕಾಲಚಕ್ರ ತಂತ್ರವೆನ್ನುವುದು ಆದಿಬುದ್ಧನನ್ನು ಕುರಿತದ್ದು.

ಅಂತೂ ವಜ್ರಯಾನದಲ್ಲಿ ದೇವತಾಗೋಷ್ಠಿ ವಿಪುಲವಾಗಿ ಬೆಳೆಯಿತು. ಈ ಗೋಷ್ಠಿಯಲ್ಲಿ ಸಾಂಪ್ರದಾಯಿಕ ಹಿಂದೂ ದೇವತೆಗಳೂ ಜಾನಪದ ನೆಲೆಯಿಂದ ಎದ್ದ ದೇವತೆಗಳೂ ಸೇರಿಕೊಂಡುದು ಆಶ್ಚರ್ಯವಲ್ಲ. ಐವರು ಧ್ಯಾನಿಬುದ್ಧರಲ್ಲಿ ನಡುವೆ ಇರುವ ವೈರೋಚನನನ್ನುಳಿದು ಇತರ ನಾಲ್ವರು ದಿಕ್ಪಾಲಕರ ಕಲ್ಪನೆಯಿಂದಲೇ ಮೂಡಿಬಂದವರು; ವೈರೋಚನ (ಅಥವಾ ವಜ್ರಧರ) ಇಂದ್ರನ ಪ್ರತಿಕೃತಿಯೇ. ಹಾಗೆಯೇ ಜಂಭಲ (ಕುಬೇರ), ವಸುಧಾರಾ (ಲಕ್ಷ್ಮಿ), ಲೋಕೇಶ್ವರ (ವಿಷ್ಣು), ಯಮಾರಿ (ಶಿವ), ತಾರಾ ಭಗವತಿ (ಪಾರ್ವತಿ) ಇವರಲ್ಲಿ ಮಾರ್ಪಾಟಿದ್ದರೂ ಮೂಲ ಸ್ಪಷ್ಟವಾಗುತ್ತದೆ. ಪಂಥದ ಪ್ರಚಾರದೃಷ್ಟಿ ಯಿಂದಲೂ, ವೈಶಿಷ್ಟ್ಯವನ್ನು ಸೂಚಿಸುವ ದೃಷ್ಟಿಯಿಂದಲೂ ಸಾಂಪ್ರದಾಯಿಕ ಹಿಂದೂ ದೇವತೆಗಳನ್ನು ನಿಗ್ರಹಿಸಿ ಈ ವಜ್ರಯಾನ ದೇವತೆಗಳು ನಿಂತಂತೆ ಕಾಣಿಸುತ್ತಾರೆ. ಮೂರ್ತಿಶಿಲ್ಪದಲ್ಲಿ ಇದು ಸ್ವಾರಸ್ಯವಾದ

ವಿವರ. ಇವಕ್ಕೆ 'ಧರ್ಮಪಾಲ' ಮೂರ್ತಿಗಳೆಂದು ಹೆಸರು. ಇಂದ್ರ, ಶಿವ, ವಿಷ್ಣು. ಬ್ರಹ್ಮ ನಾಲ್ವರನ್ನೂ ತುಳಿಯುತ್ತಿರುವ ವಿದ್ಯುಜ್ಜ್ವಾಲಾಕರಾಳಿ ಅಥವಾ ಏಕಜಟೆ; ಗರುಡನನ್ನೇರಿದ ವಿಷ್ಣುವಿನಂತೆ ವಿಷ್ಣುವನ್ನೇ ಏರಿ ಕುಳಿತ ಅವಲೋಕಿತೇಶ್ವರ (ಹರಿಹರಿಹರಿವಾಹನೋದ್ಭವ); ಬ್ರಹ್ಮ, ಶಿವ, ವಿಷ್ಣು ಮೂವರನ್ನೂ ಪಾಶದಲ್ಲಿ ಹಿಡಿದ ಚಂಡರೋಷಣ; ಶಿವನ ತಲೆಯನ್ನೊಂದು ಕಾಲಿನಿಂದ ಗೌರಿಯ ಎದೆಯನ್ನಿನ್ನೊಂದು ಕಾಲಿನಿಂದ ಮೆಟ್ಟಿ ಕುಣಿಯುವ ತ್ರೈಲೋಕ್ಯವಿಜಯ; ಕಾಲಡಿಯಲ್ಲಿ ಇಂದ್ರನನ್ನೂ ಉಪೇಂದ್ರನನ್ನೂ ತುಳಿಯುತ್ತ, ತೊಡೆಯ ನಡುವೆ ರುದ್ರನನ್ನೂ ಬ್ರಹ್ಮನನ್ನೂ ಅದುಮುತ್ತಿರುವ ಪ್ರಸನ್ನತಾರೆ; ಗಣೇಶನನ್ನು ವಿಘ್ನದಂತೆ ಬಗೆದು ಅವನನ್ನು ಸದೆಬಡಿಯುತ್ತಿರುವ ವಿಘ್ನಾಂತಕ, ಪರ್ಣಶಬರಿ ಮತ್ತು ಅಪರಾಜಿತೆ– ಈ ದೇವತೆಗಳನ್ನೆಲ್ಲ ಪರಿಶೀಲಿಸಿದಾಗ ಇದು ಸ್ಪಷ್ಟವಾಗುತ್ತದೆ.

ಕಾಳರಾತ್ರಿಯನ್ನು ಮೆಟ್ಟಿ ಕುಣಿಯುವ ಸಂವರ–ಹೇರುಕ; ಶತ್ರುಗಳ ರಕ್ತವನ್ನು ಹೀರಲು ಕಪಾಲವನ್ನು ಹಿಡಿದು, ಖಟ್ವಾಂಗ–ತ್ರಿಶೂಲಗಳನ್ನು ಧರಿಸಿದ ವಜ್ರವಾರಾಹೀ; ಮೃತ್ಯುವನ್ನು ಹಿಮ್ಮೆಟ್ಟಿಸುವ ಯಮಾರಿ (ಯಮಾಂತಕ); ಉಪದ್ರವಗಳನ್ನು ಓಡಿಸುವ ಮಾರೀಚಿ; ವಶೀಕರಣವೆನ್ನುವ ತಾಂತ್ರಿಕಕ್ರಿಯೆಗೆ ದೇವತೆಯಾದ ಕುರುಕುಲ್ಲೆ; ಮುಂಗುಸಿಯನ್ನು ಹಿಡಿದು ಅದರ ಬಾಯಿಂದ ರತ್ನ ಸುರಿಸುವ ಜಂಭಲ; ಧಾನ್ಯದೇವತೆಯಾದ ವಸುಧಾರೆ; ವ್ಯಾಧಿಗಳನ್ನು ಓಡಿಸುವ ಸರ್ವಮಾರೀಪ್ರಶಮನಿ ಪರ್ಣಶಬರಿ; ಜ್ವರಕ್ಕೆ ದೇವತೆಯಾದ ಹಯಗ್ರೀವ ಇವರೆಲ್ಲ ಜಾನಪದ ನೆಲೆಯಿಂದ ಬಂದು ವಜ್ರಯಾನದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡ ದೇವತೆಗಳು. ಮಾರಣ, ಉಚ್ಚಾಟನ, ಸ್ತಂಭನ ಮೊದಲಾದ ತಾಂತ್ರಿಕ ಸಾಧನೆಗಳಲ್ಲಿ ಈ ದೇವತೆಗಳ ಪಾತ್ರ ಹಿರಿದಾಗಿ ಬರುತ್ತದೆ.

ಚಿತ್ರ 160
ಗಣಪತಿಸಮಾಕ್ರಾಂತೆ
ಟಿಬೆಟ್‌ದೇಶದ ಶಿಲ್ಪ

ಈ ಕೆಲವು ದೇವತೆಗಳು ಘೋರಾಕಾರದಲ್ಲಿರುವುದನ್ನೂ ಇದೇ ಸಂಬಂಧದಲ್ಲಿ ಗಮನಿಸಬೇಕು. ಯಮಾರಿ, ಹೇರುಕ, ಉಚ್ಛುಷ್ಮಜಂಭಲ, ಏಕಜಟಾ ಮೊದಲಾದವರು ಭಯಂಕರ ಮೂರ್ತಿಗಳೇ. ಹೊರಗಿನ ರೂಪ ಉಗ್ರವಾಗಿದ್ದರೂ ಒಳಗಿನ ಸ್ವಭಾವ ಕರುಣಾಮಯವಾದುದೆಂದೇನೋ ಒಂದು ವಿವರಣೆಯಿದೆ—

ಶ್ರೀಮಂತಮಂತಃ ಕರುಣಾಮಯಂ ತಂ
ಸತ್ತ್ವಾರ್ಥಹೇತೋರ್ಬಹಿರುಗ್ರರೂಪಂ

ಎನ್ನುವುದು ಯಮಾರಿಯನ್ನು ಕುರಿತು ಹೇಳಿದ್ದು. ಸಾಮೋಪಾಯದಿಂದಾಗಲೀ ದಾನದಿಂದಾಗಲೀ ಸನ್ಮಾರ್ಗಕ್ಕೆ ಒಲಿಯದ ಜನರನ್ನು ಬೆದರಿಸಿ ಅವರನ್ನು ಒಳ್ಳೆಯ ದಾರಿಗೆ ಎಳೆದು ಅವರ ಚೇತನವನ್ನು ಉದ್ಧಾರದೆಡೆ ಒಯ್ಯಲೆಂದು ಈ ಉಗ್ರರೂಪ; ದಿಟವಾಗಿ, ಜೀವಿಗಳ ಅನುಗ್ರಹಕ್ಕಾಗಿಯೇ ದಂಡನೆ. ಧಾರ್ಮಿಕ ಪ್ರವೃತ್ತಿಗೆ ಭಯ ಮೂಲಕಾರಣವಾಗುವುದೆಂದು ಹಳೆಯ ಮನೋಧರ್ಮದ ನಂಬಿಕೆ.

ಸಾಮಾನ್ಯವಾಗಿ ವಜ್ರಯಾನ ದೇವತೆಗಳು ಧರಿಸುವ ಆಯುಧವೂ ಸಂಹಾರಧರ್ಮಕ್ಕೆ ಒಗ್ಗುವಂಥವೇ– ಖಡ್ಗ, ಪರಶು, ತ್ರಿಶೂಲ, ಖಟ್ವಾಂಗ, ಮುದ್ಗರ, ಅಂಕುಶ, ಚಕ್ರ, ಕರ್ತರೀ, ಪಾಶ, ಧನುಸ್ಸು, ಬಾಣ, ಚಷಕ, ಘಂಟೆ, ವಜ್ರ ಮೊದಲಾದುವು. ಆ ದೇವತೆಗಳು ಸುಖಾಸೀನವಾಗಿರುವುದಕ್ಕಿಂತ ಹೆಚ್ಚಾಗಿ ಆಲೀಢಭಂಗಿ

ಯಲ್ಲಿ ನಿಲ್ಲುವುದು (ಉಭಯುವರಾಹಾನನ–ಮಾರೀಚಿಯಂತೆ), ಅರ್ಧಪರ್ಯಂಕಾಸನದಲ್ಲಿ ಕುಣಿಯುವುದು (ನೈರಾತ್ಮ್ಯಯಂತೆ, ಹೇರುಕನಂತೆ) ಕಾಣಬರುತ್ತದೆ. ಬಹುಮಂದಿ ದೇವತೆಗಳು ಬ್ರಹ್ಮಕಪಾಲವನ್ನು ಹಿಡಿದು ರಕ್ತವನ್ನು ಕುಡಿಯುವಂತೆ ಕಾಣುತ್ತಾರೆ. ಅವರ ವಜ್ರಯೋಗಿನಿಯಂತೂ ಹಿಂದೂ ತಾಂತ್ರಿಕ ಛಿನ್ನಮಸ್ತಾ ದೇವಿಯೇ. ಕರ್ತರೀ ಮತ್ತು ಕಪಾಲಗಳನ್ನು ಹಿಡಿದ ಇಬ್ಬರು ಪರಿಚಾರಿಕೆಯರು ಬುದ್ಧ ಡಾಕಿನೀ ಮತ್ತು ವಜ್ರ ವರ್ಣನೀ ಇವರೊಡಗೂಡಿ, ಬಲಗೈಯಲ್ಲಿ ಹಿರಿದ ಕತ್ತಿಯಿಂದ ತನ್ನ ತಲೆಯನ್ನೇ ಕಡಿದುಕೊಂಡು ಎಡಗೈಯಲ್ಲಿ ಹಿಡಿದು ಪ್ರತ್ಯಾಲೀಢಭಂಗಿಯಲ್ಲಿ ನಿಂತ ಈ ದೇವತೆ ಭಯಾನಕಮೂರ್ತಿಯೇ. ಸಾಧನ ಮಾಲೆಯಲ್ಲಿಯೂ ಛಿನ್ನಮಸ್ತಾಕಲ್ಪದಲ್ಲಿಯೂ ಈ ದೇವತೆಯ ವಿವರಗಳಿವೆ. ಶಬರಪಾ ಎಂಬ ಸಿದ್ಧನು ವಜ್ರಯೋಗಿನೀ ಸಾಧನೆಯನ್ನು ರೂಪಿಸಿದನೆಂದು ಪ್ರತೀತಿಯಿದೆ. ಅವಳ ಮಂತ್ರವಜ್ರಯೋಗಿನೀ ಸಾಧನೆ ಯನ್ನು ರೂಪಿಸಿದನೆಂದು ಪ್ರತೀತಿಯಿದೆ. ಅವಳ ಮಂತ್ರ—

ಓಂ ಓಂ ಓಂ ಸರ್ವಬುದ್ಧಡಾಕಿನ್ಯೈ ವಜ್ರವರ್ಣನ್ಯೈ
ವಜ್ರವೈರೋಚನ್ಯೈ ಹೂಂ ಹೂಂ ಹೂಂ ಫಟ್ ಫಟ್ ಫಟ್ ಸ್ವಾಹಾ

ಬಹುಮಟ್ಟಿಗೆ ಈ ದೇವತೆಗಳು ಒಂದೇ ಮುಖದವರಾದರೂ, ಮೂರು ಮುಖಗಳ ಪರ್ಣಶಬರಿಯಂಥವರೂ ಇದ್ದಾರೆ, ಹನ್ನೆರಡು ಮುಖಗಳ ವಿದ್ಯುಜ್ಜ್ವಾಲಾಕರಾಳಿಯೂ ಇದ್ದಾಳೆ. ಸಾಮಾನ್ಯವಾಗಿ ಈ ಎಲ್ಲ ದೇವತೆಗಳೂ ಮುಕ್ಕಣ್ಣರು.

ಸೌಮ್ಯದೇವತೆಗಳು ಮಣಿ, ಉತ್ಪಲ, ಅಕ್ಷಮಾಲೆ, ಕಮಂಡಲು, ಬಹುಬೀಜಫಲ, ವಜ್ರ, ಘಂಟೆ ಮೊದಲಾದ ಆಯುಧಗಳನ್ನು ಧರಿಸಿರುತ್ತಾರೆ. ಸುಖಾಸೀನ, ವಜ್ರಪರ್ಯಂಕ, ಪದ್ಮಾಸನ, ಸಿದ್ಧಾಸನ, ಮಹಾರಾಜಲೀಲೆ ಈ ಭಂಗಿಗಳಲ್ಲಿ ವರದಮುದ್ರೆ, ಅಭಯ ಮುದ್ರೆ, ತ್ರೈಲೋಕವಿಜಯಮುದ್ರೆಗಳನ್ನು ಪ್ರದರ್ಶಿಸುತ್ತ ಕುಳಿತಿರುತ್ತಾರೆ. ಕರುಣೆಯೇ ಮೈವೆತ್ತು ಬಂದ ಲೋಕೇಶ್ವರ ತುಂಬ ಜನಪ್ರಿಯನಾದ ದೇವತೆ. ಅವನ ಹಲವಾರು ಮೂರ್ತಿಭೇದಗಳಲ್ಲಿ ಸಿಂಹನಾದವೆನ್ನುವುದು ಪ್ರಸಿದ್ಧವಾಗಿದೆ. ಸಿಂಹದ ಮೇಲೆ ಮಹಾ ರಾಜಲೀಲೆಯಲ್ಲಿ ಕುಳಿತ ಈ ಮೂರ್ತಿಯು ತ್ರಿಲೋಚನ, ಜಟಾಧಾರಿ, ನಿರಾಭರಣ, ವ್ಯಾಘ್ರಚರ್ಮಾಂಬರ. ಬಲಪಾರ್ಶ್ವದಲ್ಲಿ ಬಿಳಿಯ ಹಾವು ಸುತ್ತಿಕೊಂಡಿರುವ ತ್ರಿಶೂಲವಿರುತ್ತದೆ; ಎಡಪಾರ್ಶ್ವದಲ್ಲಿ ಅರಳಿದ ಬಿಳಿಕಮಲ. ಅದರ ಮೇಲೊಂದು ಬಿಳಿ ಬಣ್ಣದ ಕತ್ತಿ.

ಈ ಎಲ್ಲ ದೇವತೆಗಳನ್ನು ಪೂಜೆಮಾಡುವ ವಿಧಾನ, ಒದಗುವ ಸಿದ್ಧಿಗಳು, ದೇವತಾ ಲಕ್ಷಣಗಳು, ಅನುಕೂಲವಾದ ಮಂತ್ರಗಳು ಇವೆಲ್ಲವನ್ನೂ ತಾಂತ್ರಿಕ ಚೌಕಟ್ಟಿನಲ್ಲಿ ಅಳವಡಿಸಿ ಸಿದ್ಧಪಡಿಸಿರುವ ಗ್ರಂಥಗಳು ಹತ್ತು, ಹನ್ನೆರಡನೆಯ ಶತಮಾನಗಳಿಂದಲೂ ಬಳಕೆಯಲ್ಲಿವೆ. ಇವಕ್ಕೆ ಸಾಧನಮಾಲಾ ಅಥವಾ ಸಾಧನ ಸಮುಚ್ಚಯಗಳೆಂದೇ ಹೆಸರು. ಒಂದೊಂದು ದೇವತೆಗೂ ವಿಶಿಷ್ಟವಾದ ಒಂದು ಸಾಧನೆಯಿರುತ್ತದೆ; ತಾಂತ್ರಿಕ ಬೌದ್ಧನೆಲೆಯಲ್ಲಿ ಮೈದಳೆದ ದೇವತೆಗಳ ಪ್ರತಿಮಾಲಕ್ಷಣ ಇದರಲ್ಲಿ ಮುಖ್ಯವಾದ ವಿವರ. ವಜ್ರಯಾನದ ಆರಾಧನೆಯಲ್ಲಿ ಮಂತ್ರಗಳು ಪ್ರಮುಖವಾದುದರಿಂದ ಈ ಪ್ರತಿಮಾಲಕ್ಷಣದಲ್ಲಿ ಮಂತ್ರವೂ ಕೂಡಿಯೇ ಬರುತ್ತದೆ. ಸಾಮಾನ್ಯವಾಗಿ ಈ ದೇವತೆಗಳೆಲ್ಲವೂ ಮಂತ್ರಮೂರ್ತಿಗಳೇ. ಪ್ರತಿಯೊಂದು ಮಂತ್ರ ದಲ್ಲಿಯೂ ವಿಶೇಷವಾದ ಶಕ್ತಿಯಿದ್ದು ಮಂತ್ರದ ಪುರಶ್ಚರಣದಿಂದ ಮೂರ್ತಿಯು ಪ್ರಕಟವಾಗುವುದೆಂದು ನಂಬಿಕೆಯಿದೆ. ಮಂತ್ರವನ್ನು ವಿಧಿವತ್ತಾಗಿ ಉಚ್ಚರಿಸುವುದರಿಂದ ವ್ಯಕ್ತಿಚೇತನವು ವಿಶ್ವಚೇತನವಾದ ಶೂನ್ಯದಲ್ಲಿ ಪ್ರತಿಫಲಿಸಿ, ಅದರಲ್ಲಿ ಈ ಮೂರ್ತಿಗಳನ್ನು ಕಾಣುತ್ತದೆ. ಹೀಗೆ ಮಂತ್ರದಿಂದಲೇ ರೂಪು

ತಳೆಯುವ ಪ್ರತಿಮೆಯಲ್ಲಿ ಮಂತ್ರಪುರುಷ ಎನ್ನುತ್ತಾರೆ. ಬೋಧಿಚಿತ್ತಕ್ಕೂ, ಎಂದರೆ ವ್ಯಕ್ತಿಯ ಚೇತನಕ್ಕೂ ಮಂತ್ರಪುರುಷನಿಗೂ ತಾದಾತ್ಮ್ಯವು ಏರ್ಪಟ್ಟಾಗಲೇ 'ದರ್ಶನ' ಸಾಧ್ಯವಾಗುವುದು.

ಆರಾಧನೆಗೆ ಅನುಕೂಲವಾಗಿ ಮಂಡಲಗಳನ್ನೂ ಬಳಸುತ್ತಾರೆ. ಗುಹ್ಯಸಮಾಜತಂತ್ರದಲ್ಲಿ ಹೇಳಿರುವ ಐವರು ಧ್ಯಾನಿಬುದ್ಧರನ್ನು ಒಂದೆಡೆ ನಿರ್ದೇಶಿಸುವುದು 'ಪಂಚಜಿನಮಂಡಲ' (ಅಥವಾ ಧ್ಯಾನಿಬುದ್ಧಮಂಡಲ) ಎನಿಸಿಕೊಳ್ಳುತ್ತದೆ. ಇದರಲ್ಲಿ ಐದು ಕುಲದ ಶಕ್ತಿಯರನ್ನೂ ಬೋಧಿಸತ್ತ್ವರನ್ನೂ ಕುಲಲಾಂಛನಗಳನ್ನೂ ಅಳವಡಿಸಿದಾಗ ಮಂಡಲ ಜಟಿಲವಾಗುತ್ತದೆ; ಪೂಜಾವಿಧಾನವೂ ಸಂಕೀರ್ಣವಾಗುತ್ತದೆ. 'ನಿಷ್ಪನ್ನಯೋಗಾವಳಿ' ಯೆಂಬ ಗ್ರಂಥದಲ್ಲಿ ಇಪ್ಪತ್ತಾರು ದೇವತಾಮಂಡಲಗಳ ವಿವರಣೆಯಿದೆ. ತುಂಬ ಸ್ವಾರಸ್ಯವಾದ ಈ ಗ್ರಂಥವು ವಜ್ರಯಾನದ ದೇವತಾಕಲ್ಪನೆಯನ್ನು ಸ್ಪಷ್ಟಪಡಿಸುತ್ತದೆ. ಈ ಗ್ರಂಥದಿಂದಲೇ ವಿವರಗಳನ್ನು ಆಯ್ದುಕೊಂಡು ಪ್ರತಿಮಾಲಕ್ಷಣಗಳನ್ನು ಅಧ್ಯಯನಮಾಡಿ ಕಲಾವಿದರು ವಜ್ರಯಾನದ ದೇವತೆಗಳನ್ನು ರೇಖಾಚಿತ್ರದಲ್ಲಿ ವರ್ಣಚಿತ್ರದಲ್ಲಿ, ಶಿಲ್ಪದಲ್ಲಿ ಮೂಡಿಸಿದ್ದಾರೆ. ಟಿಬೆಟ್ ಮತ್ತು ನೇಪಾಳ ರಾಜ್ಯಗಳ ಮಠಗಳಲ್ಲಿರುವ ನೂರಾರು ಪ್ರತಿಮೆಗಳು (ಬಹುಮಟ್ಟಿಗೆ ಕಂಚಿನವು) ನಿಷ್ಪನ್ನಯೋಗಾವಳಿಯನ್ನವಲಂಬಿಸಿದುವೇ. ಇಂಥ ಸುಮಾರು ಎಂಟುನೂರು ಬೇರೆಬೇರೆ ದೇವತೆಗಳ ರೂಪನಿರ್ದೇಶನವನ್ನು ಮಾಡುವುದಾಗಿದೆ. 1937ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯದ ವಾಲ್ಟರ್ ಕ್ಲಾರ್ಕ್ ಎಂಬ ಪಂಡಿತರು ಚೀಣಾದೇಶದ ಪೈಪಿಂಗ್ (ಮಂಚೂರಿಯ) ಮಠವೊಂದರಲ್ಲಿದ್ದ ಇಂಥ ದೇವತೆಗಳ ಚಿತ್ರಗಳನ್ನೆಲ್ಲ ಒಂದು ಪ್ರಕಟಣೆಯಲ್ಲಿ ಕೂಡಿಸಿದ್ದಾರೆ.

ವಜ್ರಯಾನದ ದೇವತಾನಿರ್ದೇಶನದಲ್ಲಿ ವಿಶಿಷ್ಟವಾದ ಅಂಶವೆಂದರೆ 'ಯುಗನದ್ಧ' ಅಥವಾ ಸಂಪುಟಯೋಗ (ಟಿಬೆಟನ್ ಭಾಷೆಯಲ್ಲಿ ಯಬ್-ಯುಂ). ಬೋಧಿಚಿತ್ತವೂ ದೇವತೆಯೂ ಶೂನ್ಯತೆಯ ಅಭಿವ್ಯಕ್ತಿಗಳೇ. ಪೂಜಾಕ್ರಮದಲ್ಲಿ ಎರಡೂ ಬೇರೆಬೇರೆಯಾಗಿ ಕಂಡರೂ ಸಿದ್ಧಿಯಲ್ಲಿ ಕೂಡಿಕೊಳ್ಳುತ್ತವೆ. ಮಾಯೆಯ ತೆರೆಯಿಂದ ಒಂದಿದ್ದುದು ಎರಡಾಗಿ ಕಂಡು, ಆ ತೆರೆಯು ಹರಿದಾಗ ಎರಡೂ ಬೆರೆತು ಒಂದಾಗುತ್ತದೆ. ಇದಕ್ಕೆ ಅದ್ವಯವೆಂದು ಹೆಸರು; ಅದ್ವಯವಾಗುವ ವಿಧಾನ ಯುಗನದ್ಧ. ಬೋಧಿಚಿತ್ತವು ಶೂನ್ಯತೆಯೊಂದಿಗೆ ಬೆರೆಯುವುದನ್ನು ಶಿಲ್ಪದಲ್ಲಿ ಮೂಡಿಸಿದ್ದಾರೆ. ಯಾವುದಾದರೊಂದು ದೇವತೆಯು ತನ್ನ ಶಕ್ತಿಯೊಂದಿಗೆ ಎದುರುಬದರಾಗಿ ಗಾಢವಾದ ಆಲಿಂಗನದಲ್ಲಿ ಸಮರಸವಾಗಿ ಕೂಡಿಕೊಂಡಂತೆ ಚಿತ್ರಿಸುವುದೇ ಇಲ್ಲಿನ ಸ್ವಾರಸ್ಯ. ಪುರುಷ ದೇವತೆಯು ಶೂನ್ಯತೆಯನ್ನೂ ಸ್ತ್ರೀಶಕ್ತಿಯು ಬೋಧಿಚಿತ್ತವನ್ನೂ ಪ್ರತಿನಿಧಿಸುತ್ತವೆ. ದೇವತೆಯು ಏಕಾಕಿಯಾಗಿದ್ದಾಗ, ಅದರಲ್ಲಿ ಶಕ್ತಿಯು, ನೀರಿನಲ್ಲಿ ಉಪ್ಪು ಕರಗಿದಂತೆ ಲೀನವಾಗಿರುವುದೆಂಬ ಭಾವನೆಯಿದೆ.

ಚಿತ್ರ 161
ಯುಗನದ್ಧ ಅಥವಾ
ಯಬ್‌ಯುಂ
ಟಿಬೆಟ್ ದೇಶದ ಶಿಲ್ಪ

ದೇವತಾಕೋಟಿ :

ವಜ್ರಯಾನದ ಪ್ರಭಾವದಿಂದ ಮೈದಳೆದ ದೇವತಾಮೂರ್ತಿಗಳೇ ದಿಟವಾಗಿ ಅಸಂಖ್ಯರು. ಇವರಲ್ಲಿ ಬೋಧಿಸತ್ತ್ವರ ಪಾತ್ರ ಪ್ರಮುಖವಾದುದು. ಮುಂಬರುವ ಬುದ್ಧನೆನಿಸಿದ ಮೈತ್ರೇಯ, ಸಮಂತಭದ್ರ, ಅಕ್ಷಯಮತಿ, ಕ್ಷಿತಿಗರ್ಭ, ಗಗನಗಂಜ, ರತ್ನಪಾಣಿ, ಅವಲೋಕಿತೇಶ್ವರ, ಚಂದ್ರಪ್ರಭ, ಅಮಿತಪ್ರಭ,

ಮಂಜುಶ್ರೀ, ವಜ್ರಪಾಣಿ ಮೊದಲಾದವರು ಪ್ರಸಿದ್ಧರು. ಇವರಲ್ಲಿ ಅವಲೋಕಿತೇಶ್ವರ ಮತ್ತು ಮಂಜುಶ್ರೀ ಇವರು ತುಂಬ ಜನಪ್ರಿಯರು. ಅವಲೋಕಿತೇಶ್ವರನ ಜನಪ್ರೀತಿ ಎಷ್ಟೆಂದರೆ ಅವನ ನೂರೆಂಟು ಮೂರ್ತಿ ಭೇದಗಳನ್ನು ಕಲ್ಪಿಸಿಕೊಂಡು ಆರಾಧನೆಮಾಡುವ ವಾಡಿಕೆಯಿದೆ. ಹಯಗ್ರೀವ–ಲೋಕೇಶ್ವರ, ಮೋಜ ಘಾಂಜಬಲ–ಲೋಕೇಶ್ವರ, ಹಾಲಾಹಲ–ಲೋಕೇಶ್ವರ, ಹರಿಹರಿಹರಿವಾಹನ–ಲೋಕೇಶ್ವರ, ಷಡಕ್ಷರೀ-ಲೋಕೇಶ್ವರ, ಸುಗತಿಸಂದರ್ಶನ–ಲೋಕೇಶ್ವರ, ಮಣಿಪದ್ಮ–ಲೋಕೇಶ್ವರ, ವಿಶ್ವಹನ–ಲೋಕೇಶ್ವರ, ಯಮದಂಡ–ಲೋಕೇಶ್ವರ, ಕಾರಂಡವ್ಯೂಹ–, ಸರ್ವಶೋಕತಮೋನಿರ್ಘಾತ–, ವಜ್ರೋಷ್ಣೀಷ–, ಚಿಂತಾಮಣಿ–, ಸಿಂಹನಾದ–, ವಿಶ್ವವಜ್ರ–ಲೋಕೇಶ್ವರ ಮೊದಲಾದ ಮೂರ್ತಿಗಳನ್ನು ನೇಪಾಳದಲ್ಲಿ ಕಾಣಬಹುದು. ಸಿಂಹನಾದ–ಲೋಕೇಶ್ವರನು ಎಲ್ಲ ರೋಗಗಳನ್ನೂ ಪರಿಹರಿಸುವ ದೇವತೆ. ಖಸರ್ಪಣನೆಂಬ ಅವಲೋಕಿತೇಶ್ವರ ಶೃಂಗಾರಿ, ಶಾಂತ, ಕರುಣಾಮೂರ್ತಿ; ಟಿಬೆಟ್ಟಿನ ರಾಜಧಾನಿಯಲ್ಲಿ ದಲಾಯ್‌ಲಾಮಾನ ಅರಮನೆ ಪೋತಲಕವೆಂಬ ಪರ್ವತದ ಗರ್ಭದಲ್ಲಿರುವ ದೇವತೆ ಇವನೇ. ಅವನ ಪರಿವಾರದಲ್ಲಿ ಹಸಿರುತಾರೆ, ಅಂಜಲಿಬದ್ಧನಾದ ಸುಧನಕುಮಾರ, ಮುಕ್ಕಣ್ಣೆಯಾದ ಜಟಾಮುಕುಟೆಯಾದ ಚತುರ್ಭುಜೆಯಾದ ಭೃಕುಟೀ ಮತ್ತು ಕೆಂಬಣ್ಣದ ಮೈ, ಲಂಬೋದರ, ಜ್ವಾಲೆಯಂತೆ ಜಟೆ, ವ್ಯಾಘ್ರಚರ್ಮಾಂಬರಗಳುಳ್ಳ ಹಯಗ್ರೀವ ಇವರು ಇರುತ್ತಾರೆ. ಲೋಕನಾಥನೆಂಬ ಇನ್ನೊಬ್ಬ ಅವಲೋಕಿತೇಶ್ವರನೂ ತಾರೆ ಮತ್ತು ಹಯಗ್ರೀವರೊಂದಿಗೆ ಇರುವವನೇ. ಏಕಾಕಿಯಾಗಿಯೂ ಇರುವುದುಂಟು. ಇವನು 'ಹ್ರೀಃಕಾರನಿಷ್ಪನ್ನ'.

'ಸರ್ವಾಂಗಶುಕ್ಲ', 'ಜಟಾಮುಕುಟ', 'ಶಾಂತವೇಷ'ದ ಇನ್ನೊಬ್ಬ ಅವಲೋಕಿತೇಶ್ವರ 'ಹರಿಹರಿಹರಿವಾಹನೋದ್ಭವ'. ಈ ಮೂರ್ತಿಯ ಕಲ್ಪನೆ ಹೇಗೆ ಒದಗಿತೋ ತಿಳಿದುಬರುವುದಿಲ್ಲ; ಈ ಮೂರ್ತಿಯೂ ತುಂಬ ಅಪುರೂಪವೇ. ಸಿಂಹವನ್ನೇರಿ ಗರುಡ, ಗರುಡನನ್ನೇರಿ ವಿಷ್ಣು, ವಿಷ್ಣುವನ್ನೇರಿ ಈ ಅವಲೋಕಿತೇಶ್ವರ. ಸಿಂಹ, ಗರುಡ, ವಿಷ್ಣು ಮೂವರಿಗೂ 'ಹರಿ'ಯೆಂದೇ ಹೆಸರು. ನಾಲ್ಕುಕೈಗಳಲ್ಲಿ ದಂಡ, ಕಮಂಡಲು, ಕೃಷ್ಣಾಜಿನಗಳೂ ತಥಾಗತಸಾಕ್ಷಿಮುದ್ರೆಯೂ ಕಾಣಬರುತ್ತವೆ. ಸಾಮಾನ್ಯವಾಗಿ ಅವಲೋಕಿತೇಶ್ವರ ಮೂರ್ತಿಗಳೆಲ್ಲ ಸೌಮ್ಯಮುಖಮುದ್ರೆಯಲ್ಲಿರುತ್ತವೆ. ಆದರೆ 'ಮಾಯಾಜಾಲಕ್ರಮ' ಅವಲೋಕಿತೇಶ್ವರನೆಂಬುವನು ಉಗ್ರ. ಅವನ ಆಯುಧಗಳು ಕಪಾಲ, ಡಮರು, ಖಟ್ವಾಂಗ, ಅಂಕುಶ, ಪಾಶ, ಚಕ್ರ ಮೊದಲಾದುವು; ದಿಗಂಬರ, ಪಂಚಮುಖ, ತ್ರಿನಯನ, ಕಪಾಲಮಾಲಾಧರ; ಮುಖದಲ್ಲಿ ಕೋರೆದಾಡೆಗಳು (ದಂಷ್ಟ್ರಾ ಕರಾಳ). ಅವಲೋಕಿತೇಶ್ವರಮೂರ್ತಿಗಳಲ್ಲಿ ನೀಲ-ಕಂಠ, ಪ್ರೇತಸಂತರ್ಪಿತ, ಹಾಲಾಹಲ, ಅಷ್ಟಭುಜನರ್ತೇಶ್ವರ, ರಕ್ತಲೋಕೇಶ್ವರ ಮೊದಲಾದ ಮೂರ್ತಿಗಳನ್ನೂ ಈ ಪಂಚಮುಖ ಮಾಯಾಜಾಲಕ್ರಮ ಮೂರ್ತಿಯನ್ನೂ ಪರಿಶೀಲಿಸಿದರೆ ಶೈವಪ್ರಭಾವ ಧ್ವನಿತವಾಗುತ್ತದೆ. ತಾಂತ್ರಿಕಶೈವ ಸಂಪ್ರದಾಯದ ಮಡಿಲಿಂದ ವಜ್ರಯಾನವು ಎದ್ದಿತೆನ್ನುವ ವಾದವನ್ನು ಇದು ಎತ್ತಿ ಹಿಡಿಯುತ್ತದೆ.

ಚಿತ್ರ 162
ಪದ್ಮಪಾಣಿ ಅವಲೋಕಿತೇಶ್ವರ
ನೇಪಾಳೀ ಶಿಲ್ಪ

ಚೀಣ, ಜಪಾನ್, ನೇಪಾಳ, ಟಿಬೆಟ್ಟುಗಳಲ್ಲಿ ಪೂಜೆಗೆ ನಿಂತ ಇನ್ನೊಬ್ಬ ಬೋಧಿಸತ್ತ್ವನೆಂದರೆ ಮಹಾಬಲ–ಅಮಿತಾಭ. ಮೂರ್ತಿಯದು ರಕ್ತವರ್ಣ, ಜಟಾಮುಕುಟದಲ್ಲಿ ನಾಗಬಂಧ, ಸರ್ಪಭೂಷಣ, ವ್ಯಾಘ್ರಚರ್ಮಾಂಬರಧರ, ದಂಷ್ಟ್ರಾಕರಾಳವದನ, ತಲೆಯ ಮೇಲೆ ಧ್ಯಾನಿಬುದ್ಧ–ಅಮಿತಾಭನ ಮೂರ್ತಿಯಿರುತ್ತದೆ. (ಅಮಿತಾಭಮುಕುಟ). ಅಮಿತಾಭನಿಂದಲೇ ಎದ್ದು ಬಂದ ಇನ್ನೊಬ್ಬ ಬೋಧಿಸತ್ತ್ವ ಸಪ್ತಶತಿಕ–ಹಯಗ್ರೀವನೂ ಉಗ್ರಮೂರ್ತಿಯೇ; 'ರಕ್ತವರ್ಣ', 'ತ್ರಿನೇತ್ರ', 'ಕಪಿಲಶ್ಮಶ್ರುರೌದ್ರ', 'ಬೃಹದುದರ', 'ದಂಷ್ಟ್ರಾಕರಾಳ', 'ದಂತೌಷ್ಠ ಕಪಾಲಮಾಲಿ', 'ಹೀಹೀಕಾರನಿನಾದಿ', 'ಅಷ್ಟನಾಗೋಪೇತ',— ಒಟ್ಟಿನಲ್ಲಿ 'ಭೀಮಭಯಾನಕ'. ತಲೆಯಮೇಲೆ ಕುದುರೆಯ ತಲೆಯಿರುತ್ತದೆ. ಈ ಮೂರ್ತಿಲಕ್ಷಣದಲ್ಲಿಯೂ ಮೇಲೆ ಹೇಳಿದಂತೆ ಶೈವಪ್ರಭಾವ ಎದ್ದುಕಾಣುತ್ತದೆ. ಮೂರ್ತಿಯ ಹೆಸರು ಸೋಜಿಗವಾಗಿದೆ, 'ಸಪ್ತಶತಿಕ ಕಲ್ಪ' ವೆಂಬ ತಂತ್ರದಿಂದ ಈ ಹಯಗ್ರೀವ ಸಾಧನೆಯನ್ನು ಎತ್ತಿಕೊಂಡಿರುವುದರಿಂದ ಈ ಹೆಸರು ಬಂದಿತು ಎಂದು ವಿವರಣೆಯೇನೋ ಇದೆ.

ಈ ಬೋಧಿಸತ್ತ್ವರಲ್ಲಿ ಕೆಲವರು ಐತಿಹಾಸಿಕವ್ಯಕ್ತಿಗಳೇ ಆಗಿದ್ದು, ಕಾಲಕ್ರಮದಲ್ಲಿ ದೇವತಾಗಣದಲ್ಲಿ ಸೇರಿದಂತೆ ತೋರುತ್ತದೆ. ಮಂಜುಶ್ರೀಯ ವಿಚಾರದಲ್ಲಂತೂ ಈ ಊಹೆ ಪ್ರಬಲವಾಗಿದೆ. ಮಂಜುಶ್ರೀ ಚೀಣದಿಂದ ಬಂದವನೆಂದೂ, ಪಂಚಶೀರ್ಷಪರ್ವತದ ಮೇಲೆ ವಾಸಿಸುತ್ತ ಆ ಪ್ರದೇಶದ ರಾಜ ಧರ್ಮಾಕರನಿಗೆ ಗುರುವಾಗಿದ್ದನೆಂದೂ, ನೇಪಾಳದ ಕಾಲೀಹ್ರದವೆನ್ನುವ ನದಿಯಲ್ಲಿ ಕಮಲವೊಂದರ ಮೇಲೆ ಜ್ವಾಲೆಯ ಆಕೃತಿಯಲ್ಲಿ ಆದಿಬುದ್ಧ ಪ್ರಕಟವಾಗಿದ್ದಾನೆಂದು ದಿವ್ಯಜ್ಞಾನದಿಂದ ತಿಳಿದು ಅಲ್ಲಿಗೆ ತನ್ನ ಇಬ್ಬರು ಹೆಂಡತಿಯರು, ನೂರಾರು ಶಿಷ್ಯರೊಂದಿಗೆ ತೆರಳಿದನೆಂದೂ, ಆದರೆ ಅಲ್ಲಿ ನದಿಯಲ್ಲಿ ತುಂಬುಪ್ರವಾಹವಿದ್ದು ಆದಿಬುದ್ಧನ ಅಭಿವ್ಯಕ್ತಿಯನ್ನು ಜನರು ಕಾಣುವುದೇ ಅಸಾಧ್ಯವಾಗಿದ್ದಾಗ, ನದಿಯ ದಡದಲ್ಲಿದ್ದ ದೊಡ್ಡ ಬಂಡೆಯೊಂದನ್ನು ತನ್ನ ಕತ್ತಿಯಿಂದ ಸೀಳಿ ಇಬ್ಭಾಗಮಾಡಿ ಅದರ ನಡುವೆ ಪ್ರವಾಹದ ನೀರು ಹರಿದು ಹೋಗಲು ಅನುವುಮಾಡಿ ಕೊಟ್ಟು, ಆದಿಬುದ್ಧನ ಜ್ವಾಲೆಯ ಮೇಲೆ ದೇವಾಲಯವೊಂದನ್ನೂ ಪಕ್ಕದಲ್ಲಿಯೇ ವಿಹಾರವೊಂದನ್ನೂ ಕಟ್ಟಿಸಿದನೆಂದೂ ನೇಪಾಳದ ಸ್ವಯಂಭೂ ಪುರಾಣದಲ್ಲಿ ಕಥೆಯಿದೆ. ಕಾಲೀಹ್ರದವನ್ನು ಈಗ ಬಾಗಮತಿ ನದಿಯೆಂದು ಕರೆಯುತ್ತಾರೆ; ಈಗಲೂ ಬಂಡೆಯ ನಡುವೆಯೇ ಹರಿದು ಹೋಗುತ್ತದೆ; ಇಬ್ಭಾಗವಾದ ಬಂಡೆಗೆ 'ಕೋಟ್–ಬಾರ್' (ಕತ್ತಿಯಿಂದ ಒಡೆದದ್ದು) ಎಂಬ ಹೆಸರಿದೆ. ಇಷ್ಟೆಲ್ಲ ಆದಮೇಲೆ ಅವನು ಧರ್ಮಾಕರನನ್ನು ನೇಪಾಳದ ರಾಜನನ್ನಾಗಿ ಮಾಡಿ, ಪ್ರಾಕೃತದೇಹವನ್ನು ಬಿಟ್ಟು ಬೋಧಿಸತ್ತ್ವನಾದನಂತೆ. ಇದು ನಡೆದದ್ದು ಕ್ರಿಸ್ತಾಬ್ದ 300ರ ಸುಮಾರಿಗೆ ಎಂದು ಹೇಳುತ್ತಾರೆ.

ಚಿತ್ರ 163
ಮಂಜುಶ್ರೀ-ನೇಪಾಳೀ ಶಿಲ್ಪ

ಅಂತೂ, ಮಂಜುಶ್ರೀಯ ಆರಾಧನೆಯನ್ನು ಹೇಳುವ ಸಾಧನೆಗಳೇ ನಲವತ್ತರಷ್ಟು ಇವೆ. ವಜ್ರರಾಗ–ಮಂಜುಶ್ರೀ, ಧರ್ಮಧಾತು–ವಾಗೀಶ್ವರ–ಮಂಜುಶ್ರೀ, ಮಂಜುಘೋಷ–ಮಂಜುಶ್ರೀ, ಸಿದ್ಧೈಕವೀರ ಮಂಜುಶ್ರೀ, ವಜ್ರಾನಂಗ–

ಮಂಜುಶ್ರೀ, ಮಂಜುವರ–ಮಂಜುಶ್ರೀ, ಮಂಜುವಜ್ರ–ಮಂಜುಶ್ರೀ, ಅರಪಚನ–ಮಂಜುಶ್ರೀ, ಸ್ಥಿರಚಕ್ರ–ಮಂಜುಶ್ರೀ ಮೊದಲಾದ ಮೂರ್ತಿಭೇದಗಳೂ ಇವೆ. ಟಿಬೆಟ್, ನೇಪಾಳ ಚೀಣಾದೇಶಗಳಲ್ಲಿ ಅರಪಚನ–ಮಂಜುಶ್ರೀಯ ಪೂಜೆ ಪ್ರಚಲಿತವಾಗಿದ್ದಿತು. ಜಪಾನಿನಲ್ಲಿಯೂ ಈ ದೇವತೆಯನ್ನು 'ಮೊಂಜು' ಎನ್ನುವ ಹೆಸರಿನಿಂದ ಪೂಜಿಸುತ್ತಾರೆ. ಅರಪಚನನನ್ನು ಸದ್ಯೋನುಭವ–ಮಂಜುಶ್ರೀಯೆಂದೂ ಕರೆಯುತ್ತಾರೆ. ಅವನ ಮೂರ್ತಿಲಕ್ಷಣ ಹೀಗೆ—

> ಖಡ್ಗಪುಸ್ತಕಧಾರಿಣಂ, ಆಕುಂಚಿತಪಂಚಚೀರಂ, ರಕ್ತವಸ್ತ್ರಯುಗ ಯುತಂ
> ಶೃಂಗಾರವೇಷಧಾರಿಣಂ, ಸ್ಮಿತವಿಕಸಿತವದನಂ, ಶಶಾಂಕ ಕಾಂತಿತುಲ್ಯಶೋಭಂ,
> ವಿಶ್ವದಲಕಮಲಸ್ಥ ಬದ್ಧಪರ್ಯಂಕಂ......

ಅವನ ಕೈಯಲ್ಲಿರುವ ಪುಸ್ತಕ ಪ್ರಜ್ಞಾಪಾರಮಿತಾಸೂತ್ರ. ಅವನ ಮುಂದೆ ಜಾಲಿನೀಕುಮಾರ (ಸೂರ್ಯಪ್ರಭ), ಹಿಂದೆ ಚಂದ್ರಪ್ರಭ, ಬಲಗಡೆ ಕೇಶಿನೀ, ಎಡಗಡೆ ಉಪಕೇಶಿನೀ ಎಂಬ ದೇವತೆಯರಿರುತ್ತಾರೆ; ಇವರೆಲ್ಲ ಪ್ರಮುಖ ದೇವತೆಯ ಪ್ರತಿಕೃತಿಗಳೇ.

ಇನ್ನೊಬ್ಬ ಜನಪ್ರಿಯ ದೇವತೆ ಹೇರುಕ. ಯುಗನದ್ಧಸ್ಥಿತಿಯಲ್ಲಿರುವಾಗ ಇವನನ್ನೇ ಹೇವಜ್ರನೆಂದು ಕರೆಯುತ್ತಾರೆ. ಇವನ ಆರಾಧನೆಗಾಗಿ ಪ್ರತ್ಯೇಕ ತಂತ್ರಗಳೂ, ಕಲ್ಪಗಳೂ, ಸಾಧನೆಗಳೂ ಸಿದ್ಧವಾಗಿವೆ. ಶವದ ಮೇಲೆ ಅರ್ಧಪರ್ಯಂಕಾಸನದಲ್ಲಿ, ನರಚರ್ಮವನ್ನು ಹೊದೆದು, ಭಸ್ಮೋದ್ಧೂಳಿತಗಾತ್ರನಾಗಿ ರಕ್ತಪೂರ್ಣಕಪಾಲವನ್ನು ಹಿಡಿದು, ಈಷದ್ದಂಷ್ಟ್ರಾಕರಾಳಾಸ್ಯನಾಗಿ, ರಕ್ತನೇತ್ರನಾಗಿ, ವಿಲಾಸಿಯಾಗಿ ಪಿಂಗೋರ್ಧ್ವಕೇಶನಾಗಿ, ಐದು ತಲೆಯೋಡೆಗಳಿಂದ ಜಟೆಯನ್ನು ಕಟ್ಟಿಕೊಂಡಿರುವ ಈ ದೇವತೆ ಬಯಸಿದವರಿಗೆ ಬುದ್ಧತ್ವವನ್ನು ಕೊಡುವವನು. ಟಿಬೆಟ್ ಮತ್ತು ಚೀಣಗಳಲ್ಲಿ ಪೂಜೆಗೊಳ್ಳುತ್ತಿದ್ದ ಹೇವಜ್ರ ಮೂರ್ತಿಯಲ್ಲಿ ಹೇರುಕನು ತನ್ನ ಶಕ್ತಿಯೊಂದಿಗೆ ಕೂಡಿಕೊಂಡಿರುತ್ತಾನೆ. ದ್ವಿಭುಜ ಹೇವಜ್ರನಿಗೆ ಶಕ್ತಿ ಪ್ರಜ್ಞಾ–ನೈರಾತ್ಮ್ಯ; ಚತುರ್ಭುಜಹೇವಜ್ರನ ಶಕ್ತಿ ವಜ್ರವಾರಾಹೀ, ಅವನ ಮಗಳೇ; ಷಡ್ಭುಜ ಹೇವಜ್ರನ ಶಕ್ತಿಯೂ ಅವನ ಇನ್ನೊಬ್ಬ ಮಗಳು ಪ್ರಜ್ಞಾವಜ್ರಶೃಂಖಲಾ; ಷೋಡಶಬಾಹು ಹೇವಜ್ರನ ಶಕ್ತಿ ನೈರಾತ್ಮ್ಯ. ಹೇರುಕನು ಚಿತ್ರಸೇನೆಯೆಂಬ ಶಕ್ತಿಯೊಂದಿಗೆ ಕೂಡಿಕೊಂಡಾಗ ಬುದ್ಧಕಪಾಲಕನೆನಿಸಿಕೊಳ್ಳುತ್ತಾನೆ. ಮಹಾ ವೀರನೂ, ಘೋರಸಂಹಾರಕಾರಕನೂ, ಮುಂಡಮಾಲಾವಿಭೂಷಿತನೂ ಆದ ಇವನ ಶಕ್ತಿ ಚಿತ್ರಸೇನೆಯನ್ನು "ಮತ್ತಾ ನಗ್ನಾ ಮುಕ್ತಕೇಶೀ ಸರ್ವಭಯರಹಿತಾ ದೇವಿ" ಎಂದು ಸಾಧನೆ ವಿವರಿಸುತ್ತದೆ.

ಧ್ಯಾನಿಬುದ್ಧ ಅಕ್ಷೋಭ್ಯನ ಕುಲಕ್ಕೆ ಸೇರಿದ ಇನ್ನೊಬ್ಬ ಸುಪ್ರಸಿದ್ಧ ದೇವತೆ 'ಅತಿಭೀಷಣ'ನಾದ ಯಮಾರಿ (ಯಮಾಂತಕ). ಹಿನ್ನೆಲೆಯ ಕಥೆ ಸ್ವಾರಸ್ಯವಾಗಿದೆ. ಟಿಬೆಟ್ಟಿನಲ್ಲಿ ಯೋಗಿಯೊಬ್ಬನು ಐವತ್ತು ವರ್ಷಗಳ ತಪಶ್ಚರ್ಯೆ ಪೂರೈಸಿ ಇನ್ನೇನು ನಿರ್ವಾಣ ಮುಟ್ಟುವುದರಲ್ಲಿ ಇದ್ದ. ಒಂದು ರಾತ್ರಿ ಅವನು ಧ್ಯಾನದಲ್ಲಿದ್ದ ಗುಹೆಗೆ ಇಬ್ಬರು ಕಳ್ಳರು ನುಗ್ಗಿದರು; ಅವರು ಕದ್ದು ತಂದಿದ್ದ ಗೂಳಿಯೊಂದನ್ನು ಅಲ್ಲಿ ಕಡಿದರು. ಯೋಗಿ ಅಲ್ಲಿರುವುದು ಅವರಿಗೆ ತಿಳಿದಿರಲಿಲ್ಲ; ತಿಳಿದೊಡನೆ ತಮ್ಮ ಕಳುವಿನ ಸುಳಿವು ಅಳಿಯಲೆಂದು ಯೋಗಿಯ ತಲೆಯನ್ನು ಕತ್ತರಿಸಿದರು. ಒಡನೆಯೇ ಯೋಗಿಯು ಭಯಂಕರವಾದ ಯಮನ ರೂಪವನ್ನು ಧರಿಸಿ, ಕಡಿದ ಗೂಳಿಯ ತಲೆಯನ್ನು ತನ್ನ ಮುಂಡಕ್ಕೆ ಸಿಕ್ಕಿಸಿಕೊಂಡು, ಕಳ್ಳರಿಬ್ಬರನ್ನೂ ತುಂಡರಿಸಿದ; ಅವರ ತಲೆಯೋಡೆಯಿಂದಲೇ ಅವರ ಬಿಸಿರಕ್ತವನ್ನು ಹೀರಿದ. ಆದರೂ ಅವನ ಕೋಪ ಆರದೆ ಟಿಬೆಟ್ಟಿನ ಜನರನ್ನೆಲ್ಲ ಕೊಲ್ಲಲು ಹೊರಟ. ಜನ ಬೆದರಿ ತಮ್ಮ ಕುಲದೇವತೆಯಾದ ಮಂಜುಶ್ರೀಯಲ್ಲಿ ಮೊರೆಯಿಟ್ಟರು. ಮಂಜುಶ್ರೀ ಯಮಾಂತಕನ ರೂಪವನ್ನು ಧರಿಸಿ, ಈ ಯಮರೂಪದ ಯೋಗಿಯನ್ನು ನಿಗ್ರಹಿಸಿದ. ಸಾವನ್ನು ಸದೆಬಡಿದ

ಶಿವನ ಕಲ್ಪನೆಯ ಪ್ರಭಾವವನ್ನು ಇಲ್ಲಿ ಕಾಣಬಹುದು. ಎರಡು ಕೈಗಳ ಯಮಾರಿ 'ರಕ್ತಪರಿಪೂರ್ಣಕಪಾಲ ವಾಮಕರ', ಖಟ್ವಾಂಗಧರ, 'ಪಿಂಗಳೋರ್ಧ್ವಕೇಶ', 'ವ್ಯಾಘ್ರಚರ್ಮಾಂಬರಧರ'. ಯುಗನದ್ಧಸ್ಥಿತಿಯಲ್ಲಿ ಅವನ ಶಕ್ತಿ ಭಗವತೀ ಪ್ರಜ್ಞೆಯು 'ಮದವಿಹ್ವಲೆ', 'ಸ್ಖಲದ್‌ವ್ಯಾಘ್ರಚರ್ಮಾಂಶುಕೆ' (ಜಾರಿಹೋಗುತ್ತಿರುವ ಹುಲಿಯ ಚರ್ಮವನ್ನುಟ್ಟವಳು). ಯಮಾರಿ ಮೂರ್ತಿಗಳಲ್ಲಿ ಕೆಂಬಣ್ಣದ ರಕ್ತಯಮಾರಿ, ಕರಿಬಣ್ಣದ ಕೃಷ್ಣ ಯಮಾರಿ, ತ್ರಿಮುಖಯಮಾರಿ, ಷಡ್ಬಾಹುಯಮಾರಿ ಮೊದಲಾದ ಭೇದಗಳಿವೆ.

ಈ ಯಮಾಂತಕನಂತೆಯೇ ವಿಘ್ನಾಂತಕನೂ ಇದ್ದಾನೆ. ನೇಪಾಳದ ಕಥೆಯೊಂದು ಹಿನ್ನೆಲೆಯನ್ನು ಸೂಚಿಸುತ್ತದೆ. ಉಡ್ಡೀಯಾನದ ಪಂಡಿತನೊಬ್ಬನು ಖಟ್ಮಂಡುವಿನಲ್ಲಿ ಬಾಗಮತೀ ನದಿಯ ದಂಡೆಯ ಮೇಲೆ ಕುಳಿತು ತಾಂತ್ರಿಕಸಿದ್ಧಿಗಳನ್ನು ಪಡೆಯಲು ಯತ್ನಿಸುತ್ತಿದ್ದಾಗ, ಅವನಿಗೆ ಅಡ್ಡಿಯನ್ನೊಡ್ಡಲು ಗಣೇಶ ಹವಣಿಸಿದನಂತೆ. ಪಂಡಿತನು ಬೇರೆ ದಾರಿ ಕಾಣದೆ ವಿಘ್ನಾಂತಕನಲ್ಲಿ ಮೊರೆಯಿಡಲು ಭಯಾನಕನಾಗಿ ಮೈದಳೆದ ಆ ದೇವತೆಯು ಓಡಿಹೋದ ಗಣೇಶನನ್ನು ಹಿಡಿದು ದಂಡಿಸಿದನಂತೆ. ನೀಲವರ್ಣದ, ಮೇಲೆತ್ತಿ ಕಟ್ಟಿದ ಕೆಂಜಡೆಯ ಈ ದೇವತೆಯನ್ನು ಮಂಡಲದ ದ್ವಾರಪಾಲಕನನ್ನಾಗಿ ನಿರ್ದೇಶಿಸುತ್ತಾರೆ. ಮೂರ್ತಿಲಕ್ಷಣದಲ್ಲಿ ಗಣೇಶನನ್ನು ಕಾಲಕೆಳಗೆ ತುಳಿಯುತ್ತಿರುವಂತಿರುವ ವಿವರ ಮುಖ್ಯವಾದುದು.



ಚಿತ್ರ 164
ಗಣಪತಿ ಸಮಾಕ್ರಾಂತೆ
ಟಿಬೆಟ್ ದೇಶದ ಶಿಲ್ಪ

ಇದೇ ಗೋತ್ರಕ್ಕೆ ಸೇರಿದ ಇನ್ನೊಂದು ದೇವತೆ ವಜ್ರಹುಂಕಾರ. ವಜ್ರವನ್ನೂ ಘಂಟೆಯನ್ನೂ ವಜ್ರಹುಂಕಾರ ಮುದ್ರೆಯಲ್ಲಿ (ಘಂಟಾ ವಜ್ರಪ್ರಯೋಗೇನ ಮುದ್ರಾಬದ್ಧಕರದ್ವಯಂ) ಹಿಡಿದು, ಭೈರವನನ್ನು ತುಳಿಯುತ್ತ ('ಭೈರವಾಕ್ರಾಂತಭೀಕರ') ಇರುವ ಈ ದೇವತೆಯ ಅಟ್ಟಹಾಸ, ಮಹಾರೌದ್ರಸ್ವರೂಪಗಳು ಧ್ಯಾನಶ್ಲೋಕದಲ್ಲಿ ಬರುತ್ತವೆ. ಈ ದೇವತೆಯು ಶಿವನನ್ನು ನಿಗ್ರಹಿಸಿದರೆ ವಜ್ರಜ್ವಾಲಾನಲಾರ್ಕ ವಿಷ್ಣುವನ್ನು ತುಳಿಯುವ ದೇವತೆ. ಶೃಂಗಾರ–ವೀರ–ಬೀಭತ್ಸ–ಕರುಣಾರಸಗಳನ್ನು ತನ್ನ ನಾಲ್ಕು ಮುಖಗಳಲ್ಲಿ ಹೊರ ಸೂಸುತ್ತ, ವಜ್ರ–ಖಡ್ಗ–ಚಕ್ರ–ಬಾಣ–ಘಂಟಾ–ಚಾಪ–ಪಾಶ–ಖಟ್ವಾಂಗಗಳನ್ನು ತನ್ನ ಎಂಟು ಕೈಗಳಲ್ಲಿ ಹಿಡಿದು ವಿಷ್ಣುವನ್ನು ಮಾತ್ರವಲ್ಲದೆ ಅವನ ಹೆಂಡತಿಯನ್ನೂ, ಎಂದರೆ ಲಕ್ಷ್ಮಿಯನ್ನೂ, ನಿಗ್ರಹಿಸುತ್ತಿರುವಂತೆ (ಸಪತ್ನೀಕಂ ವಿಷ್ಣುಂ ಆಲೀಢಪಾದೇನ ಆಕ್ರಮ್ಯ) ತೋರುವ ಈ ದೇವತೆಯನ್ನು 'ಮಹಾಮಾಯಾಚಕ್ರ ರಚನಚತುರ'ನೆಂದು ಸಾಧನಮಾಲೆ ಬಣ್ಣಿಸುತ್ತದೆ. ಹಯಗ್ರೀವನ ಒಂದು ರೂಪವಾದ ಪರಮಾಶ್ವನೆಂಬ ದೇವತೆ ಇಂದ್ರ, ಮಧುಕರ, ಇಂದ್ರಾಣಿ, ಶ್ರೀ (ಲಕ್ಷ್ಮಿ), ರತಿ, ಪ್ರೀತಿಯರನ್ನೆಲ್ಲ ನಿಗ್ರಹಿಸುತ್ತಿರುವಂತೆ ಶಿಲ್ಪವಿರುತ್ತದೆ, ಇದು ಚತುರ್ಮುಖಮೂರ್ತಿ; ಎಂಟು ಕೈಗಳು, ನಾಲ್ಕು ಕಾಲುಗಳು. ಶಿವನನ್ನೂ, ಶಿವನು ನಿಗ್ರಹ ಮಾಡಿದ ಕಾಮ (ಅನಂಗ) ನನ್ನೂ ನಿಗ್ರಹಿಸುತ್ತಿರುವ ಕಾಲಚಕ್ರನೂ ಚತುರ್ಮುಖಮೂರ್ತಿ. ಉಚ್ಛುಷ್ಮ ಜಂಭಲ ಕುಬೇರನನ್ನು ನಿಗ್ರಹಮಾಡುತ್ತಿರುವ ಮೂರ್ತಿ.

ಸ್ತ್ರೀದೇವತೆಗಳಲ್ಲಿ ಮುಖ್ಯವಾದವಳು ತಾರಾಭಗವತೀ. ಧ್ಯಾನಿಬುದ್ಧ ಅಕ್ಷೋಭ್ಯನ ಕುಲದಲ್ಲಿ ಸಂಭವಿಸಿದ ಮಹಾಚೀನತಾರಾ, ಅಮೋಘಸಿದ್ಧಧ್ಯಾನಿಬುದ್ಧನ ಕುಲದಲ್ಲಿ ಸಂಭವಿಸಿದ ಖದಿರವಣೀತಾರಾ, ಮಹಾಶ್ರೀತಾರಾ, ವಶ್ಯತಾರಾ, ಷಡ್ಭುಜಸಿತತಾರಾ, ಧನದತಾರಾ; ರತ್ನಸಂಭವ ಧ್ಯಾನಿಬುದ್ಧನ ಕುಲಕ್ಕೆ ಸೇರಿದ

ಚಿತ್ರ 165
ತಾರಾಭಗವತಿ
ಒಂಬತ್ತನೆಯ ಶತಮಾನದ ಶಿಲ್ಪ

ಪ್ರಸನ್ನತಾರಾ ಮೊದಲಾದ ಮೂರ್ತಿಭೇದಗಳಿವೆ. ಮಹಾಚೀನತಾರೆ ಉಗ್ರಮೂರ್ತಿ, 'ಘೋರೆ', ಮುಂಡ ಮಾಲಾ ಪ್ರಲಂಬಿತೆ', 'ಖರ್ವಲಂಬೋದರೆ', 'ಘೋರಾಟ್ಟಹಾಸ ಭಾಸುರೆ', 'ಶವಾರೂಢೆ' 'ಲಲಜ್ಜಿಹ್ವೆ', 'ಮಹಾಭೀಮೆ'. ಮಹಾಕಾಳಿಯು ಬೌದ್ಧಪಾಠದಂತಿರುವ ದೇವತೆ; ಜಾನಪದ ನೆಲೆಯಿಂದಲೇ ಎದ್ದವಳೆನ್ನುವುದು ನಿರ್ವಿವಾದ. ಆದರೆ 'ಮಹಾಚೀನ' ಎನ್ನುವುದು ಟಿಬೆಟ್ (ಭೋಟ) ದೇಶಕ್ಕೆ ಹೆಸರು; ಈ ತಾರೆಯು ಸಾಧನೆಯನ್ನೂ ಮಹಾಚೀನತಂತ್ರ ದಿಂದಲೇ ಎತ್ತಿಕೊಳ್ಳಲಾಗಿದೆ. ಮೊದಲಿಗೆ ಆ ದೇಶದ ದೇವತೆಯೆಂದು ತೋರುತ್ತದೆ. ಭಾರತೀಯರು ಮಹಾಕಾಳಿಯ ಕಲ್ಪನೆಯ ವಿವರಗಳನ್ನೂ ಅಷ್ಟಿಷ್ಟು ಈ ಮೂಲ ದಿಂದಲೇ ಸಂಗ್ರಹಿಸಿರುವುದು ಸಾಧ್ಯ. ಭವತೋಷ ಭಟ್ಟಾಚಾರ್ಯರಂತೂ ತಾರಾಕಲ್ಪನೆಗೆ ಟಿಬೆಟ್ಟೇ ಮೂಲ ವೆಂದೂ, ಕಾಳೀಪೂಜೆಯು ಈ ನೆಲೆಯಿಂದಲೇ ಕಾಣಿಸಿಕೊಂಡಿತೆಂದೂ ಆಗ್ರಹಪೂರ್ವಕವಾಗಿ ವಾದಿಸುತ್ತಾರೆ. ತಾರಾ ಗೋತ್ರಕ್ಕೆ ಸೇರಿದ ಏಕಜಟೆ ಕೃಷ್ಣವರ್ಣದವಳು, ತ್ರಿನೇತ್ರೆ, 'ಪಿಂಗೋರ್ಧ್ವಕೇಶಮೂರ್ಧಜೆ', 'ಕುಣಪಸ್ಥೆ' (ಹೆಣದ ಮೇಲೆ ಪ್ರತ್ಯಾಲೀಢಾಸನದಲ್ಲಿ ನಿಂತವಳು), ರೌದ್ರೆ. ಇವಳ ಮೂಲವೂ ಟಿಬೆಟ್ಟೇ . ಹನ್ನೆರಡು ಮುಖ, ಇಪ್ಪತ್ತುನಾಲ್ಕು ಕೈಗಳ ವಿದ್ಯುಜ್ಜ್ವಾಲಾಕರಾಳಿಯು ಏಕಜಟೆಯ ಮೂರ್ತಿಭೇದವೇ: ಇವಳು 'ಮಹಾಪ್ರಳಯಾಗ್ನಿ ಸಮಪ್ರಭೆ', 'ಹಾಹಾಕಾರೆ', 'ಲಲಜ್ಜಿಹ್ವೆ', 'ಸರೋಷೆ', 'ವಿಕೃತಕೋಟಿಭೀಮ ಭ್ರುಕುಟೀತಟೋದ್ಭೂನೇತ್ರ ಚಲದ್ವರ್ತುಲೆ', 'ಭಯಸ್ಯಾಪಿ ಭಯಂಕರೀ' (ಭಯವನ್ನೂ ಬೆದರಿಸುವವಳು!). ಪರ್ಣಶಬರಿಯೂ ತಾರಾಭೇದವೇ. ವಿಘ್ನಗಣಗಳನ್ನು ದಂಡಿಸುವ ತರ್ಜನೀಮುದ್ರೆ; ಕೈಯಲ್ಲಿ ಪಾಶ, ಪರಶು, ವಜ್ರ, ಎಲೆಗಳ ಗೊಂಚಲು—ಈಕೆ ನಗುತ್ತಿದ್ದರೂ ಸಂಹಾರ ಮೂರ್ತಿಯೇ. ಈಕೆಯನ್ನು 'ಪಿಶಾಚಿ' ಯೆಂದು ಮಂತ್ರವೇ ಕರೆಯುತ್ತದೆ. ಗಂಡುದೇವತೆಗಳಲ್ಲಿ ಭೂತ ಡಾಮರ ಇರುವಂತೆ ಹೆಣ್ಣುದೇವತೆಯರಲ್ಲಿ ಈಕೆ.

ಸಾಮಾನ್ಯವಾಗಿ ತಾರೆ ಸೌಮ್ಯದೇವತೆಯೇ. ಪಂಚವರ್ಣಗಳನ್ನನುಸರಿಸಿ ಪಂಚತಾರೆಯರನ್ನು ಹೇಳುವ ವಾಡಿಕೆಯಿದೆ. ಒಂದೊಂದರಲ್ಲಿಯೂ ಮತ್ತೆ ಪ್ರಭೇದಗಳಿವೆ. ಹಸಿರುವರ್ಣದ ಖದಿರವಣೀ ತಾರೆ (ಶ್ಯಾಮತಾರೆ) ಬಲಗೈಯಲ್ಲಿ ವರದಮುದ್ರೆ, ಎಡಗೈಯಲ್ಲಿ ಉತ್ಪಲ ಇರುವ 'ದಿವ್ಯಕುಮಾರಿ'. ಮಹಾಶ್ರೀತಾರೆ ಸರ್ವಾಲಂಕಾರಭೂಷಿತೆಯಾಗಿ, ಸುವರ್ಣಸಿಂಹಾಸನದ ಮೇಲೆ ಕುಳಿತು ವ್ಯಾಖ್ಯಾನಮುದ್ರೆಯಲ್ಲಿರುತ್ತಾಳೆ. ವಶ್ಯತಾರೆ (ಆರ್ಯತಾರೆ) ಭದ್ರಾಸನದಲ್ಲಿ ಕುಳಿತು ವರದಮುದ್ರೆಯಲ್ಲಿರುತ್ತಾಳೆ. ಷಡ್ಭುಜತಾರೆ ನಾನಾಲಂಕಾರಧರೆಯಾಗಿ ವರದಾಕ್ಷಸೂತ್ರಗಳನ್ನೂ ಉತ್ಪಲ–ಕಮಲ–ಚಾಪ–ಬಾಣಗಳನ್ನೂ ಹಿಡಿದು ವಜ್ರ ಪರ್ಯಂಕಾಸನದಲ್ಲಿ ಕುಳಿತಿರುತ್ತಾಳೆ. ಧನದತಾರೆಯ ವೈಶಿಷ್ಟ್ಯವೆಂದರೆ ಆಕೆ ಯಾವುದಾದರೊಂದು ಪ್ರಾಣಿಯನ್ನು ವಾಹನವನ್ನಾಗಿ ಮಾಡಿಕೊಂಡು ಕುಳಿತಿರುತ್ತಾಳೆ; ಸಾಧನಮಾಲೆ ಯಾವ ಪ್ರಾಣಿಯೆಂದು ನಿರ್ದೇಶಿಸುವುದಿಲ್ಲ; 'ಸತ್ತ್ವಪರ್ಯಂಕಸ್ಥೆ'ಯೆಂದಷ್ಟೇ ಹೇಳುತ್ತದೆ. 'ಓಂ ತಾರೇ ತುತ್ತಾರೇ ತುರೇ ಸ್ವಾಹಾ' ಎನ್ನುವ ಆಕೆಯ ಮಂತ್ರ ಟಿಬೆಟ್ ಮತ್ತು ಚೀಣಾದೇಶಗಳಲ್ಲಿ ತುಂಬ ಬಳಕೆಯಲ್ಲಿದ್ದಿತು.

ಪ್ರಜ್ಞಾಪಾರಮಿತೆಯ ಶಿಲ್ಪಗಳು ತುಂಬ ಸುಂದರವಾಗಿವೆ; ಈಗ ಹಾಲೆಂಡಿನ ಲೆಯ್ಡನ್ ಮ್ಯೂಸಿಯಂನಲ್ಲಿರುವ ಸಿಂಘಸಾರಿಯ (ಇಂಡೋನೇಶ್ಯ) ಶಿಲಾಮೂರ್ತಿ ಜಗದ್ವಿಖ್ಯಾತವಾಗಿದೆ. ಮಹಾಯಾನವಾಙ್ಮಯದಲ್ಲಿ ಪ್ರಜ್ಞಾಪಾರಮಿತಾಸಾಹಿತ್ಯವು ಮೂರ್ತಿಮತ್ತಾಗಿ ನಿಂತ ರೂಪ ಇದೆಂದು ಎಣಿಕೆ. ಈ ಸಾಹಿತ್ಯವನ್ನು ನಾಗಾರ್ಜುನನು ಕ್ರಿಸ್ತಾಬ್ದ ಎರಡನೆಯ ಶತಮಾನದಲ್ಲಿ ಬಳಕೆಗೆ ತಂದಮೇಲೆ ಈ ದೇವತೆಯ ಪೂಜೆಯೂ ಪ್ರಬಲವಾಯಿತು. ಆರ್ಯ ಅಸಂಗನು ಈ ದೇವತೆಯ ಸಾಧನೆಗಳನ್ನು ಸಿದ್ಧಪಡಿಸಿದ್ದಾನೆ. ವಜ್ರಯಾನದ ಇತರ ದೇವತೆಗಳು ಮೈದಳೆಯುವ ಮೊದಲೇ ಈ ದೇವತೆ ಪ್ರಚುರವಾಗಿದ್ದಿತು. ಸಿತ (ಬಿಳಿ) ಪ್ರಜ್ಞಾಪಾರಮಿತೆ ಮತ್ತು ಪೀತ (ಹಳದಿ) ಪ್ರಜ್ಞಾಪಾರಮಿತೆ ಇಬ್ಬರೂ ಅಕ್ಷೋಭ್ಯ ಧ್ಯಾನಿಬುದ್ಧನ ಕುಲಕ್ಕೆ ಸೇರಿದವರು; ಕಮಲದ ಮೇಲೆ ವಜ್ರಪರ್ಯಂಕಾಸನ, ವ್ಯಾಖ್ಯಾನಮುದ್ರೆ, ಅಂಕಾರಜ್ಞಾನಸಂಭೂತಿ, ಪರಮಾನಂದ ದಾಯಿತ್ವ ಇವೆಲ್ಲ ಇವರ ಲಕ್ಷಣಗಳು; ಕೈಯಲ್ಲಿ ಪ್ರಜ್ಞಾಪಾರಮಿತಾಸೂತ್ರವಿರುತ್ತದೆ. ಕನಕಪ್ರಜ್ಞಾಪಾರಮಿತೆ ಧರ್ಮಚಕ್ರಮುದ್ರೆಯನ್ನು ಪ್ರದರ್ಶಿಸುತ್ತಿರುತ್ತಾಳೆ. ಈ ದೇವತೆಯ ಧ್ಯಾನ ಮಂತ್ರದಲ್ಲಿ

> ಪ್ರಜ್ಞಾಪಾರಮಿತಾ ಕಮನೀಯಕನಕ ಕಾಂತಿಃ ಪದ್ಮಸ್ಥ–ಪ್ರಜ್ಞಾಪಾರಮಿತಾ—
> ಪುಸ್ತಕಧರಾ, ಕರದ್ವಯೇನ ಧೃತ ಧರ್ಮಚಕ್ರಮುದ್ರಾ...

ಎಂಬ ವಿವರಗಳಿವೆ. ಬೌದ್ಧದರ್ಶನದಲ್ಲಿ ಶೀಲವನ್ನು ಪರಿಪೂರ್ಣಸ್ಥಿತಿಗೆ ಮುಟ್ಟಿಸಿದರೆ ಪಾರಮಿತೆಯೆಂಬ ವ್ಯವಹಾರವಿದೆ; 'ಪಾರಂ–ಇತಾ' ಎಂದರೆ ದಡವನ್ನು ಮುಟ್ಟಿದ್ದು ಎಂದರ್ಥ. ಹೀಗೆ ದಾನ, ಶೀಲ, ಕ್ಷಾಂತಿ, ವೀರ್ಯ, ಪ್ರಜ್ಞಾ, ಬಲ, ಉಪಾಯ, ಪ್ರಣಿಧಾನ, ಧ್ಯಾನ, ಜ್ಞಾನ, ವಜ್ರಕರ್ಮ, ರತ್ನ ಎಂಬ ಹನ್ನೆರಡು ಪಾರಮಿತೆಗಳನ್ನು ಹೇಳುತ್ತಾರೆ. ಇವುಗಳಲ್ಲಿ ಒಂದೊಂದೂ ದೇವತೆಯೆಂದು ಪರಿಗಣಿಸಿ ಪ್ರತಿಮಾಲಕ್ಷಣಗಳನ್ನು ನಿರ್ದೇಶಿಸಿದ್ದಾರೆ. ಇವುಗಳಲ್ಲಿಯೂ ಪ್ರಜ್ಞಾಪಾರಮಿತೆ ಸೇರಿದೆ.

ವೈರೋಚನನೆಂಬ ಧ್ಯಾನಿಬುದ್ಧನ ಕುಲಕ್ಕೆ ಸೇರಿದ ಮಾರೀಚಿ ಟಿಬೆಟ್ಟಿನ ಲಾಮಾ ಜನರಿಂದ ಮುಂಜಾನೆ ಪೂಜೆಗೊಳ್ಳುವ ಸೌರಸಂಬಂಧಿಯಾದ ದೇವತೆ. ಸೂರ್ಯನ ರಥವನ್ನು ಏಳು ಕುದುರೆಗಳು ಎಳೆದರೆ ಮಾರೀಚಿಯ ರಥವನ್ನು ಏಳು ಹಂದಿಗಳು ಎಳೆಯುತ್ತವೆ; ಸೂರ್ಯನ ಸಾರಥಿ ಅರುಣನಿಗೆ ಕಾಲುಗಳಿಲ್ಲವಾದರೆ ಮಾರೀಚಿಯ ಸಾರಥಿ ಮೈಯೇ ಇಲ್ಲದ ಬರಿತಲೆಯ ರಾಹು. ಎಡಗೈಯಲ್ಲಿ ಅಶೋಕವೃಕ್ಷದ ಟೊಂಗೆಯನ್ನು ಹಿಡಿದಿದ್ದರೆ ಅಶೋಕಕಾಂತಾ–ಮಾರೀಚಿಯೆನ್ನುತ್ತಾರೆ; ಸೂಜಿ–ದಾರವನ್ನು ಹಿಡಿದಿದ್ದರೆ ಆರ್ಯಮಾರೀಚಿ. ಸಾಮಾನ್ಯವಾಗಿ ಮಾರೀಚಿ ದ್ವಿಭುಜ ದೇವತೆ. ಆದರೆ ಅಷ್ಟಭುಜಗಳ 'ಮಾರೀಚಿ ಪಿಚುವಾ' (ಸಂಕ್ಷಿಪ್ತ ಮಾರೀಚಿ), ದಶಭುಜಗಳ ತ್ರಿಶಿಖಾ–ಮಾರೀಚಿ, ಇವೂ ಉಂಟು. ಇವಲ್ಲದೆ ಎರಡು ಹಂದಿಗಳ ಮುಖಗಳುಳ್ಳ ಉಭಯವರಾಹಾನನೆ, ವಜ್ರಧಾತ್ವೀಶ್ವರೀ, ವಜ್ರವೇತಾಳಿ ಮತ್ತು ಉಡ್ಡೀಯಾನೀ ಎಂಬ ಮಾರೀಚಿಯ ಮೂರ್ತಿಭೇದಗಳಿವೆ.

ಹೇರುಕನ ಶಕ್ತಿಯಾದ ವಜ್ರವಾರಾಹಿಯೂ ಜನಪ್ರಿಯೆಯಾದ ದೇವತೆ. ವೈರೋಚನ ಧ್ಯಾನಿಬುದ್ಧನ ಕುಲಕ್ಕೆ ಸೇರಿದ ಡಾಕಿನಿ ಈಕೆ. ದಿಗಂಬರೆಯಾದ ಈಕೆ ಕಪಾಲ–ಖಟ್ವಾಂಗಗಳನ್ನು ಹಿಡಿದು, ಸೂಚೀಮುದ್ರೆಯನ್ನು ತೋರಿಸುತ್ತ, ಕೆದರಿದ ಕೂದಲ (ಮುಕ್ತಕೇಶಿ) ಮುಕ್ಕಣ್ಣೆಯಾಗಿ ಚಿತ್ರಿತವಾಗಿದ್ದಾಳೆ. ಈಕೆಯನ್ನು 'ಸಹಜಾನಂದಸ್ವಭಾವೆ' ಎಂದು ಬಣ್ಣಿಸಿರುವುದರಿಂದ ಸಹಜೀಯತಾಂತ್ರಿಕಪಂಥದವರಿಗೆ ವಿಶಿಷ್ಟವಾದ ದೇವತೆಯೆಂದು ತೋರುತ್ತದೆ. ಅವರ ಸಿದ್ಧಾಚಾರ್ಯರಲ್ಲಿ ಡೊಂಬಿ–ಹೇರುಕ ಎಂಬುವನೂ ಒಬ್ಬನಿದ್ದಾನೆ. ಅವರ ದೇವತಾಕಲ್ಪನೆಗಳಲ್ಲಿ ಸೇರಿರುವ ಇನ್ನೊಬ್ಬಳು ದೇವತೆ ನೈರಾತ್ಮ್ಯೆಯೂ ವಜ್ರಯಾನಕ್ಕೆ ಸೇರಿದವಳೇ.

ವಜ್ರವಾರಾಹೀ ಮತ್ತು ನೈರಾತ್ಮ್ಯ ಇಬ್ಬರ ಮೂರ್ತಿಲಕ್ಷಣವೂ ಹೆಚ್ಚೂ ಕಡಮೆ ಒಂದೇ. ಇಬ್ಬರೂ ಶವದ ಮೇಲೆ ಅರ್ಧಪರ್ಯಂಕಾಸನದಲ್ಲಿ ಕುಣಿಯುತ್ತಿರುವ ಮೂರ್ತಿಗಳೇ. ಶವ ಮೇಲುಮುಖನಾಗಿ ಮಲಗಿದ್ದರೆ ಅದು ವಜ್ರವಾರಾಹಿ; ಕೆಳಮುಖನಾಗಿ ಮಲಗಿ ಬೆನ್ನಿನಮೇಲೆ ದೇವತೆ ಇದ್ದರೆ ಅದು ನೈರಾತ್ಮ್ಯ.

ತಾಂತ್ರಿಕಸಂಪ್ರದಾಯಗಳಲ್ಲೆಲ್ಲ ಕುರುಕುಲ್ಲೆಯ ಪ್ರಖ್ಯಾತಿ ವಿಶೇಷವಾದುದು. ವಜ್ರಯಾನದಲ್ಲಿಯೂ ಹಲವಾರು ಬಗೆಯ ಕುರುಕುಲ್ಲಾದೇವತೆಯ ಸಾಧನೆಗಳೂ ಕಲ್ಪಗಳೂ ಪ್ರಚಲಿತವಾಗಿವೆ. ವಶೀಕರಣ ವಿಧಿಗಳಲ್ಲಿಯೇ ಈಕೆಯ ಆರಾಧನೆ ಹೆಚ್ಚು. 'ಓಂ ಕುರುಕುಲ್ಲೇ ಹೂಂ ಹ್ರೀಂ ಸ್ವಾಹಾ' ಎನ್ನುವ ಮಂತ್ರವನ್ನು ಹತ್ತುಸಾವಿರ ಬಾರಿ ಪುರಶ್ಚರಣಮಾಡಿದರೆ ಯಾವ ಮನುಷ್ಯನಾದರೂ ವಶವಾಗುವನೆಂದು ಪ್ರತೀತಿ. ದ್ವಿಭುಜ ಶುಕ್ಲಕುರುಕುಲ್ಲೆ 'ಶೃಂಗಾರಾದಿರಸೋಪೇತೆ'ಯೆಂದೂ 'ಕ್ಷೀರಾಂಬೋಧಿ ಶ್ವೇತವರ್ಣಾಬ್ಜಸ್ಥೆ' ಯೆಂದೂ ವಿವರಗಳಿವೆ; ಆದರೆ ಆಕೆಯ ತಲೆಯ ಮೇಲೆ ಮುಡಿಯನ್ನು ಕಟ್ಟಲು ನೀಲವರ್ಣದ ಅನಂತನೆಂಬ ಹಾವು, ಕೊರಳ ಹಾರವಾಗಿ ಹಾಲುಬಿಳಿಬಣ್ಣದ ವಾಸುಕಿಯೆಂಬ ಹಾವು, ಕಿವಿಯೋಲೆಗಳಾಗಿ ಕೆಂಬಣ್ಣದ ತಕ್ಷಕನೆಂಬ ಹಾವು, ಯಜ್ಞೋಪವೀತವಾಗಿ ಹಸಿರುಬಣ್ಣದ ಕಾರ್ಕೋಟಕವೆಂಬ ಹಾವು, ನಡುಪಟ್ಟಿಯಾಗಿ ಬಿಳಿಬಣ್ಣದ ಪದ್ಮವೆಂಬ ಹಾವು, ಕಾಲುಬಳೆಯಾಗಿ ತಾವರೆದಂಟಿನ ಬಣ್ಣದ ಮಹಾಪದ್ಮವೆಂಬ ಹಾವು, ಕೈಬಳೆಯಾಗಿ ಹಳದಿಬಣ್ಣದ ಶಂಖಪಾಲನೆಂಬ ಹಾವು, ತೋಳುಬಳೆಯಾಗಿ ಹೊಗೆಯ ಬಣ್ಣದ ಕುಲಿಕವೆಂಬ ಹಾವು—ಇಷ್ಟಿದ್ದರೂ ಆಕೆ 'ಕರುಣಾರ್ದ್ರಚಿತ್ತೆ'ಯಂತೆ!

ಕುರುಕುಲ್ಲಾ ಎಂಬ ಬೆಟ್ಟದ ಮೇಲೆ ವಾಸಮಾಡುವ ತಾರೋದ್ಭವ-ಕುರುಕುಲ್ಲೆಯ ವಜ್ರಪರ್ಯಂಕಾ ಸನದಡಿಯಲ್ಲಿ ರಾಹುವೆಂಬ ದೈತ್ಯನ ಮೇಲೆ ಕುಳಿತ ರತಿ-ಮನ್ಮಥರು ಕಾಣಿಸಿಕೊಳ್ಳುವುದು ಸ್ವಾರಸ್ಯವಾದ ವಿವರ. ಈ ಎರಡು ಕುರುಕುಲ್ಲಾ ರೂಪಗಳೂ ಸೌಮ್ಯ, ಶೃಂಗಾರ ಪ್ರಧಾನವಾದರೂ, ಉಡ್ಡಿಯಾನ ಕುರುಕುಲ್ಲೆ ಉಗ್ರಮೂರ್ತಿ. ಅವಳ ಮೂರೂ ಕಣ್ಣುಗಳೂ ಕೆಂಪಾಗಿ ತಿರುಗುವಂಥವು; ರುಂಡಮಾಲೆಯನ್ನು ಧರಿಸಿರುವುದು ಮಾತ್ರವಲ್ಲದೆ ತಲೆಯ ಮೇಲೆ ಐದು ತಲೆಯೋಡೆಗಳು. ಇವಳು ಚತುರ್ಭುಜಮೂರ್ತಿ ಯಾದರೆ ಮಾಯಾಜಾಲಕುರುಕುಲ್ಲೆ ಷಡ್ಭುಜಗಳ ಮೂರ್ತಿ. ಕುರುಕುಲ್ಲೆ ಅಮಿತಾಭಧ್ಯಾನಿಬುದ್ಧನ ಕುಲಕ್ಕೆ ಸೇರಿದವಳು.

ಈ ದೇವತೆಗಳಲ್ಲದೆ ವಜ್ರಯಾನಕ್ಕೇ ವಿಶಿಷ್ಟವಾದ ದಿಕ್ಪಾಲಕರೂ, ಅವರ ಶಕ್ತಿಯರೂ, ಲಾಂಛನ ಗಳೂ, ಪ್ರತಿಮಾಲಕ್ಷಣಗಳೂ ಇವೆ. ಪೂರ್ವದಲ್ಲಿ ಯಮಾಂತಕ-ವಜ್ರಾಂಕುಶಿಯರು ದಿಕ್ಪಾಲಕಪಾಲಿಕೆಯರು, ಪಶ್ಚಿಮದಲ್ಲಿ ಪದ್ಮಾಂತಕ ವಜ್ರಸ್ಫೋಟಾ, ಉತ್ತರದಲ್ಲಿ ವಿಘ್ನಾಂತಕ ವಜ್ರಘಂಟಾ, ದಕ್ಷಿಣದಲ್ಲಿ ಪ್ರಜ್ಞಾಂತಕ ವಜ್ರಪಾಶಿಯರು. ಆಗ್ನೇಯ ಕೋಣೆಗೆ ತಕ್ಕಿರಾಜ, ನೈಋತ್ಯಕ್ಕೆ ನೀಲದಂಡ, ವಾಯವ್ಯಕ್ಕೆ ಮಹಾಬಲ, ಈಶಾನ್ಯಕ್ಕೆ ಅಚಲ ಇವರು ದಿಕ್ಪಾಲಕರು. ಮೇಲೆ ಉಷ್ಣೀಷ ಚಕ್ರವರ್ತಿ, ಕೆಳಗೆ ಶುಂಭರಾಜ ಇವರೂ ಈ ಗುಂಪಿಗೇ ಸೇರಿರುತ್ತಾರೆ; ಇವರ ಶಕ್ತಿಯರು ಉಷ್ಣೀಷವಿಜಯಾ ಮತ್ತು ಶುಂಭಾ. ಇವರಲ್ಲದೆ ಎಂಟುಮಂದಿ ಉಷ್ಣೀಷದೇವತೆಗಳೂ ಐವರು ರಕ್ಷಾದೇವತೆಯರೂ, ಎಂಟುಮಂದಿ ಗೌರಿಯರೂ (ಗೌರೀ, ಚೌರೀ, ವೇತಾಳೀ, ಘಸ್ಮರೀ, ಪುಕ್ಕಸೀ, ಶಬರೀ, ಚಂಡಾಲೀ, ಡೊಂಬೀ), ನಾಲ್ವರು ಲಾಸ್ಯದೇವತೆಗಳೂ, ನಾಲ್ವರು ವಾದ್ಯ ದೇವತೆಗಳೂ (ವಂಶಾ, ವೀಣಾ, ಮುಕುಂದಾ, ಮುರಜಾ), ನಾಲ್ವರು ದ್ವಾರಪಾಲಿಕೆಯರೂ, ನಾಲ್ವರು ಡಾಕಿನಿಯರೂ (ಡಾಕಿನೀ, ಲಾಮಾ, ಖಂಡರೋಹಾ, ರೂಪಿಣೀ) ಇದ್ದಾರೆ. ಲಾಸ್ಯ ಮತ್ತು ವಾದ್ಯದೇವತೆ ಗಳನ್ನು ಬಿಟ್ಟರೆ ಉಳಿದವರೆಲ್ಲ ಜಾನಪದ ಕಲ್ಪನೆಗಳ ಆಳದಿಂದ ಎದ್ದು ಬಂದವರೇ.

ಹಿಮಾಚಲ ಪ್ರಾಂತ್ಯದಲ್ಲಿ, ಅದರಲ್ಲಿಯೂ ನೇಪಾಳ ಮತ್ತು ಟಿಬೆಟ್ಟುಗಳಲ್ಲಿ, ಬೆಳೆದುಬಂದ ಮಹಾ ಯಾನ ಬೌದ್ಧಪಂಥದಲ್ಲಿ ಸುಮಾರು ಏಳುಸಾವಿರ ದೇವತೆಗಳಿದ್ದಾರೆ. ವಜ್ರಯಾನದ ಯೋಗಿಗಳು ತಂತಮ್ಮ ಸಾಧನೆಯ ಸಂದರ್ಭದಲ್ಲಿ ಸಾಕ್ಷಾತ್ಕರಿಸಿಕೊಂಡ ಅಥವಾ ಕಲ್ಪಿಸಿಕೊಂಡ ಮೂರ್ತಿಗಳೂ ಇದರಲ್ಲಿ ಸೇರಿದ್ದಾರೆ. ಸಾಧನೆಯ ಸಂವಿಧಾನ ಮತ್ತು ಉದ್ದೇಶಗಳಿಗೆ ತಕ್ಕಂತೆ ಮೂರ್ತಿಗಳ ಸ್ವರೂಪ, ಸ್ವಭಾವ, ಭಾವ, ಭಂಗಿ, ಆಸನ, ವಾಹನ, ಆಯುಧ, ಆಭರಣ, ವರ್ಣ, ಮುದ್ರೆ, ಶಕ್ತಿ ಎಲ್ಲದರಲ್ಲಿಯೂ ಭೇದವಿರುತ್ತದೆ. ಒಂದು ಸಾಧನೆಯಲ್ಲಿ ಸೌಮ್ಯವಾಗಿರುವ ಮೂರ್ತಿ ಇನ್ನೊಂದು ಸಾಧನೆಯಲ್ಲಿ ಉಗ್ರವಾಗಿರಬಹುದು; ಒಂದರಲ್ಲಿ ಒಬ್ಬಳು ಶಕ್ತಿಯಾದರೆ ಅದೇ ಮೂರ್ತಿಗೆ ಇನ್ನೊಂದು ಸಾಧನೆಯಲ್ಲಿ ಇನ್ನೊಬ್ಬಳು ಶಕ್ತಿಯಿರುತ್ತಾಳೆ. ಶಾಂತಿ, ಪುಷ್ಟಿ, ವಶೀಕರಣ, ಮಾರಣ, ಉಚ್ಚಾಟನ, ಭೈಷಜ್ಯ ಮೊದಲಾದ ವಿಧಿಗಳಲ್ಲಿ ಮೂರ್ತಿಗಳು ವಿಭಿನ್ನ ವಾಗಿ ಕಾಣಿಸಿಕೊಳ್ಳುವುದು ಸಹಜವೇ.

ಆಸನಗಳೂ ಮುದ್ರೆಗಳೂ ತಾಂತ್ರಿಕ ಸಂಪ್ರದಾಯದಿಂದ ತೆಗೆದುಕೊಂಡ ವಿವರಗಳೇ. ಸಾಮಾನ್ಯ ವಾಗಿ ಮೂರ್ತಿಗಳು ಕುಳಿತಿದ್ದಾಗ ಪದ್ಮಾಸನ, ವಜ್ರಾಸನ, ಯೋಗಾಸನ (ಪರ್ಯಂಕ ಬಂಧನ), ವೀರಾಸನ, ಲಲಿತಾಸನ, ಮಹಾರಾಜಲೀಲೆಗಳಲ್ಲಿರುತ್ತಾರೆ; ನಿಂತಾಗ ಆಲೀಢ, ಪ್ರತ್ಯಾಲೀಢ, ಕುಂಚಿತಪಾದ ಮೊದಲಾದ ಭಂಗಿಗಳಲ್ಲಿರುತ್ತಾರೆ. ಮುದ್ರೆಗಳಲ್ಲಿ ಧ್ಯಾನಮುದ್ರೆ (ಸಮಾಧಿಮುದ್ರೆ), ವ್ಯಾಖ್ಯಾನಮುದ್ರೆ, ವರದಮುದ್ರೆ, ಅಭಯಮುದ್ರೆ, ಅಂಜಲಿಮುದ್ರೆ, ಭೂಸ್ಪರ್ಶಮುದ್ರೆ, ಧರ್ಮಚಕ್ರಪ್ರವರ್ತನಮುದ್ರೆ, ವಜ್ರಮುದ್ರೆ (ಬೋಧ ಶ್ರೀಮುದ್ರೆ), ವಜ್ರಹೂಂಕಾರ ಮುದ್ರೆ ಇವು ಮುಖ್ಯವಾದುವು.

ವಜ್ರಯಾನದ ದೇವತೆಗಳಲ್ಲಿ ಮೂರ್ತಿಲಕ್ಷಣ ಸ್ಪಷ್ಟವಾಗುವುದು ಕೈಗಳಲ್ಲಿ ಹಿಡಿದಿರುವ ಆಯುಧ ಅಥವಾ ಇತರ ಸಾಮಗ್ರಿಗಳಿಂದ. ಇವುಗಳಲ್ಲಿ ಪ್ರಮುಖವಾದುದು ವಜ್ರ. ವಜ್ರಾಯುಧದಿಂದ ಇಂದ್ರನು ಪರ್ವತವನ್ನು ಸೀಳಿದ ಪ್ರಸಂಗ ತುಂಬ ಪ್ರಾಚೀನವಾದುದು; ಸಿಡಿಲಿನ ಸಂಕೇತ ಈ ಆಯುಧ. ನಮ್ಮಲ್ಲಿ ದೇವೇಂದ್ರ ವಜ್ರಪಾಣಿ, ವಜ್ರಧರ; ಸುಬ್ರಹ್ಮಣ್ಯನೂ ಶಾಸ್ತಾರನೂ ಈ ಆಯುಧವನ್ನೇ ಹಿಡಿದಿರುವುದುಂಟು. ವಜ್ರವು ಅಭೇದ್ಯ, ಅಚಲ, ಶಾಶ್ವತ ಎಂಬ ಅರ್ಥಗಳಲ್ಲಿ ಇದನ್ನು ಧರ್ಮಕ್ಕೆ ಸಂಕೇತವಾಗಿ ಬಳಸಿರುವುದಿದೆ. ವಜ್ರದಂತೆಯೇ ಸತ್ಯವೂ ಕಠೋರವಾದುದು; ಅದನ್ನವಲಂಬಿಸಿದ ಧರ್ಮವೂ ಅಷ್ಟೇ ಗಟ್ಟಿಯಾದುದು. ಅಸತ್ಯದ ಅಭಿವ್ಯಕ್ತಿಗಳಾದ ಅಜ್ಞಾನ, ಅಹಂಕಾರ, ಅಭಿನಿವೇಶ ಮೊದಲಾದ ಬೆಟ್ಟಗಳನ್ನು ಕಡಿದುರುಳಿಸುವ ಸಾಧನ ಈ ಜ್ಞಾನವಜ್ರ. ಸತ್ಯವನ್ನೂ, ಸತ್ಯವನ್ನನುಸರಿಸಿದ ಧರ್ಮವನ್ನೂ, ಈ ಧರ್ಮವನ್ನು ತಿಳಿಸಿಕೊಡುವ ಸಂಬೋಧಿಯನ್ನೂ, ಸಂಬೋಧಿಯಿಂದೊದಗುವ ಸಾಮರ್ಥ್ಯವನ್ನೂ ವಜ್ರ ಪ್ರತಿನಿಧಿಸುತ್ತದೆ. ವಜ್ರ-ಧರ ನೆಂದರೆ ವಜ್ರ-ಸತ್ತ್ವನೂ ಹೌದು; ವಜ್ರ-ಶೇಖರನು ವಜ್ರ-ಧಾತುವೂ ಆಗುತ್ತಾನೆ. ಪದ್ಮಕ್ಕೆ, ಯೋನಿಗೆ, ಲಿಂಗಕ್ಕೆ ಪರ್ಯಾಯವಾಗಿ ವಜ್ರವನ್ನು ಬಳಸಿರುವ ನಿದರ್ಶನಗಳೂ ಇವೆ.

ಶಿಲ್ಪದಲ್ಲಿ ವಜ್ರ ಬೆಳೆದುಬಂದ ಬಗೆ ಸ್ವಾರಸ್ಯವಾದುದು. ಅದರ ಆಕಾರ ಮೊದಲಿಗೆ ಪ್ರಪಂಚವನ್ನು ಬಾಗಿಸಿ ಮೇಲೆ ನಿಂತ ಪೂರ್ಣತೆಯನ್ನು ಧ್ವನಿಸುವಂತೆ ಇರುತ್ತಿದ್ದಿತು. ಅದು ಆಯುಧವೆಂಬ ಕಲ್ಪನೆ ಇನ್ನೂ ಮೂಡಿಕೊಳ್ಳದಿದ್ದಾಗ ಕೇವಲ ಸಾಂಕೇತಿಕ ಕ್ರಿಯೆಯೇ ಮುಖ್ಯವಾಗಿದ್ದಿತು. ಈ ಆಕಾರದಲ್ಲಿ ಮನುಷ್ಯನ ಮೂಲಾಕೃತಿಯನ್ನು ಕಾಣುವುದು ಕಷ್ಟವಲ್ಲ. ಮನುಷ್ಯನ ಸತ್ತ್ವವೇ ವಜ್ರವೆಂಬ ಕಲ್ಪನೆ ಇಲ್ಲಿ ಮುಖ್ಯವಾದುದು. ವಜ್ರವು ಆಯುಧವೆಂದು ಕಾಣಿಸಿಕೊಳ್ಳತೊಡಗಿದಾಗ ಇಮ್ಮುಖದ ಶೂಲವಾಯಿತು. ಕ್ರಮೇಣ ತ್ರಿಶೂಲ, ಪಂಚಶೂಲ, ನವಶೂಲಗಳ ಆಕಾರಗಳನ್ನು ವಜ್ರಾಯುಧ ತಳೆಯಿತು. ತ್ರಿಶೂಲವು ಧರ್ಮ, ಬುದ್ಧ, ಸಂಘ

ಗಳೆಂಬ ರತ್ನತ್ರಯವನ್ನು ಸೂಚಿಸುವುದೆಂದೂ ಪಂಚಶೂಲಗಳ ವಜ್ರವು ವೈರೋಚನ, ರತ್ನಸಂಭವ ಮೊದಲಾದ ಐವರು ಧ್ಯಾನಿಬುದ್ಧರನ್ನು ಸಂಕೇತಿಸುವುದೆಂದೂ, ನವಶೂಲಗಳ ವಜ್ರವು ಭವಚಿಹ್ನೆಗಳಾದ ಅನಿತ್ಯ–ಅನಾತ್ಮ–ದುಃಖ, ಪ್ರತೀತ್ಯಸಮುತ್ಪಾದದ ಪ್ರಮುಖ ವಿವರವಾದ ಭವತೃಷ್ಣೆ ಮತ್ತು ಅದರ ನಿರೋಧ, ದುಃಖನಿರೋಧ, ಶೂನ್ಯತೆ, ನಿರ್ವಾಣ (ಸಉಪಾದಿಸೇಸನಿಬ್ಬಾಣ) ಮತ್ತು ಪರಿನಿರ್ವಾಣ ಈ ಒಂಬತ್ತು ತತ್ತ್ವಗಳನ್ನು ಸೂಚಿಸುವುದೆಂದೂ ಹೇಳುತ್ತಾರೆ. ಎರಡು ತ್ರಿಶೂಲ ವಜ್ರಗಳು ಅಡ್ಡವಾಗಿ, ಶಿಲುಬೆಯ ಆಕಾರದಲ್ಲಿ, ಕೂಡಿಕೊಂಡಿದ್ದರೆ ಅದು 'ಕರ್ಮವಜ್ರ' ಎನಿಸಿಕೊಳ್ಳುತ್ತದೆ. ನಾಲ್ಕೂ ದಿಕ್ಕುಗಳಲ್ಲಿ ಮನೋವಾಕ್ಕಾಯ ಕರ್ಮಗಳು (ತ್ರಿಶೂಲ) ಕೂಡಿಕೊಂಡಿರುವ ಸ್ಥಿತಿ ಇಲ್ಲಿ ಧ್ವನಿತವಾಗಿದೆ. ಇದನ್ನು 'ಚಾತುರ್ದಿಶಕರ್ಮವಜ್ರ' ಎಂದೂ ಕರೆಯುತ್ತಾರೆ.

ಇತರ ಲಕ್ಷಣಗಳೊಂದಿಗೆ ವಜ್ರವನ್ನು ಸೇರಿಸುವುದೂ ಉಂಟು. ಇದಕ್ಕೆ ವಜ್ರಘಂಟೆ ನಿದರ್ಶನ. ಇಲ್ಲಿ ಘಂಟೆಯನ್ನು ಶಾಶ್ವತಶಬ್ದದ ಪ್ರತೀಕವೆಂದೂ ಸಂವೃತಿಸತ್ಯದ ಸಂಕೇತವೆಂದೂ ಹೇಳಿ ಅದರ ಹಿಡಿಯಲ್ಲಿರುವ ವಜ್ರವನ್ನು ಪರಮಾರ್ಥಸತ್ಯದ ಸಂಕೇತವೆಂದು ವಿವರಿಸುತ್ತಾರೆ. ಪರಮಾರ್ಥದ ನೆಲೆಯಲ್ಲಿ ನಿಂತು ಸಂವೃತಿ ಸತ್ಯದ ವ್ಯವಹಾರವನ್ನು ನಡೆಯಿಸುವ ಕಲ್ಪನೆ ಇಲ್ಲಿ ಕಾಣುತ್ತದೆ. 'ಶಬ್ದವನ್ನು ಕೇಳಬಹುದು, ಹಿಡಿಯಲಾಗದು'; ಹಾಗೆಯೇ ಸಂವೃತಿಸತ್ಯದ ಅನುಭವವಿದೆ, ಆದರೆ ಅದು ಶೂನ್ಯ. ಇದು ಘಂಟಾನಾದದ ಅರ್ಥ. ಘಂಟೆಯ ಹಿಡಿಯಲ್ಲಿ ವಜ್ರದ ಬದಲು ಸ್ತೂಪವನ್ನು ಅಳವಡಿಸುವುದೂ ಉಂಟು; ಅರ್ಥವೇನೋ ಅದೇ. ವಜ್ರಘಂಟೆಯ ಹಿಡಿಯಲ್ಲಿ ಪ್ರಜ್ಞಾಪಾರಮಿತೆ ಅಥವಾ ತಾರೆಯ ತಲೆಯನ್ನು ಚಿತ್ರಿಸಿರುತ್ತಾರೆ; ಘಂಟೆ ಪ್ರಜ್ಞೆಯೆಂದೂ ವಜ್ರವು ಉಪಾಯವೆಂದೂ ಕಲ್ಪನೆ. ಇಂಥ ಘಂಟೆಗಳನ್ನು ವಜ್ರಯಾನದ ಪುರೋಹಿತರು ವಿಶೇಷವಾಗಿ ಬಳಸುತ್ತಾರೆ. ಐವರು ಧ್ಯಾನಿಬುದ್ಧರೊಂದಿಗಿರುವ ಆರನೆಯ 'ವಜ್ರಸತ್ತ್ವ' ಕೈಯಲ್ಲಿ ವಜ್ರಘಂಟೆಯನ್ನೂ ಇನ್ನೊಂದು ಕೈಯಲ್ಲಿ ವಜ್ರವನ್ನೂ ಹಿಡಿದಿರುತ್ತಾನೆ; ಇವನು ಐವರು ಧ್ಯಾನಿಬುದ್ಧರ ಪುರೋಹಿತನೇ.

ವಜ್ರಯಾನದ ದೇವತೆಗಳ ಲಕ್ಷಣಗಳಲ್ಲಿ ಹೀಗೆಯೇ ವಿಶಿಷ್ಟವಾದ ಇನ್ನೊಂದೆಂದರೆ ಕಪಾಲ ಅಥವಾ ಪಾನಪಾತ್ರೆ. ಇದೂ ತಾಂತ್ರಿಕ ನೆಲೆಯಿಂದಲೇ ಬಂದ ವಿವರ. ಭಿಕ್ಷಾಪಾತ್ರೆಯನ್ನು ಹಿಡಿದು ಪಿಂಡಪಾತಕ್ಕೆ ಹೊರಟ ಗೌತಮಬುದ್ಧನ ಚಿತ್ರಣ ಗಾಂಧಾರಕಲೆಯಲ್ಲಿ ಕಂಡುಬರುತ್ತದೆ; ಇಲ್ಲಿ ಪರಿವ್ರಾಜಕನ ಲಕ್ಷಣ ಅಷ್ಟೇ ಇದು. ಆದರೆ ವಜ್ರಯಾನದಲ್ಲಿ ಇದು ಭಿಕ್ಷಾಪಾತ್ರೆಯಲ್ಲ. ದೇವತೆಗಳು ಸಂಹಾರಮೂರ್ತಿಗಳಾಗಿದ್ದಾಗ ಎದುರಾಳಿಯ ರಕ್ತವನ್ನು ಕುಡಿಯಲು ಅವನ ತಲೆಯೋಡೆಯಿಂದಲೇ ಮಾಡಿಕೊಂಡ ಪಾನಪಾತ್ರೆ. ಮಹಾಕಾಲ–ಶಿವನ ಕೈಯಲ್ಲಿ ಕಾಣುವ ಕಪಾಲ (ಬ್ರಹ್ಮ ಕಪಾಲ) ಇದಕ್ಕೆ ಮೂಲವೆಂದು ತೋರುತ್ತದೆ; ಶಾಕ್ತರ ಕಾಳಿಯ ಕೈಯಲ್ಲಿ ಕಪಾಲ ಪಾನಪಾತ್ರೆಯಾಗುತ್ತದೆಯಷ್ಟೆ.

ತಾಂತ್ರಿಕ ನೆಲೆಯಿಂದ ಒದಗಿಬಂದ ಇನ್ನೊಂದು ಲಕ್ಷಣ ಚಿಂತಾಮಣಿ. ಎಲ್ಲ ಬಯಕೆಗಳನ್ನೂ ಈಡೇರಿಸುವ ಈ ಮಣಿ ಬೌದ್ಧಧರ್ಮದಲ್ಲಿ 'ಉಪಾಯ'ವಾಗಿ ಕಾಣಿಸಿಕೊಳ್ಳುತ್ತದೆ. ಇದು ಪುರುಷ ತತ್ತ್ವವಾದರೆ ಪ್ರಜ್ಞೆಯೆಂಬ ಸ್ತ್ರೀತತ್ತ್ವವನ್ನು ಕಮಲದ ಆಕಾರದಲ್ಲಿ ಕಾಣಿಸಿ ಪದ್ಮದಲ್ಲಿ ಮಣಿಯನ್ನು ಅಳವಡಿಸಿ 'ಸಂಪುಟ' ಮಾಡುವ ಪದ್ಧತಿ ವಜ್ರಯಾನದಲ್ಲಿ ವಿಶಿಷ್ಟವಾದುದು. ಅವರ 'ಓಂ ಮಣಿ ಪದ್ಮೇ ಹೂಂ' ಎಂಬ ಸುವಿಖ್ಯಾತವಾದ ಮಂತ್ರದ ಅರ್ಥ ಇದೇ. ಮಣಿಯೆನ್ನುವುದು ಮನಸ್ತತ್ತ್ವವೆಂದೂ ಒಂದು ವಿವರಣೆಯಿದೆ; ಸಂಪತ್ತಿಗೂ ಇದು ಸಂಕೇತ. ಅದನ್ನು ಚಿತ್ರಿಸುವಾಗ ಗುಂಡಗೆ, ಹೃದಯದ ಆಕಾರದಲ್ಲಿ ಅಂಡಾಕಾರವಾಗಿ, ತ್ರಿಕೋಣಾಕಾರವಾಗಿ, ಸ್ತೂಪದ ಆಕೃತಿಯಲ್ಲಿ ಕಾಣಿಸುವ ಪದ್ಧತಿಗಳುಂಟು. ಮಣಿಯ ಪರಮಾರ್ಥನೆಲೆಯನ್ನು ಸೂಚಿಸಲು ಅದರ ಸುತ್ತ ಪ್ರಭಾಮಂಡಲವನ್ನೋ ಜ್ವಾಲಾಮಾಲೆಯನ್ನೋ ಅಳವಡಿಸುವುದೂ ಇದೆ.

ಹನುಮದ್ವಿಲಾಸ

ಹನುಮಂತ ಅನುಬಂಧದವರೆಗೂ ಕಾಯಬೇಕಾಗಿದ್ದಿತೆ? ಹಿಂದೆ ಪಾರ್ಶ್ವದೇವತೆಗಳ ಪ್ರಸ್ತಾಪ ಬಂದಾಗ ಹನುಮಂತನ ಉಲ್ಲೇಖವಿದ್ದಿತಾದರೂ, ಈ ದೇವತೆಯ ವಿಚಾರ ವಿಸ್ತಾರವಾಗಿ ಬರಲಿಲ್ಲ. ಕಾರಣ, ವಿವರಗಳು ಸ್ಪಷ್ಟವಾಗಿಲ್ಲದಿರುವುದು. ಆದರೂ ಮುಖ್ಯವಾದ ದೇವತೆ, ಅದರಲ್ಲಿಯೂ ಕನ್ನಡನಾಡಿನಲ್ಲಿ ವಿಶೇಷವಾಗಿ ಪೂಜೆಗೊಳ್ಳುವ ದೇವತೆ ಎಂಬ ಕಾರಣದಿಂದ ಒಂದೆರಡು ಮಾತುಗಳನ್ನಾದರೂ ಬಿಡಿಸಿ ಹೇಳಬೇಕಾಗುತ್ತದೆ. ಈ ದೇವತೆ ಜಾನಪದ ನೆಲೆಯಿಂದ ಬಂದುದೆಂಬುದೇನೋ ನಿರ್ವಿವಾದವಾದುದು. ಮೂರ್ತಿಯ ಆಕಾರ, ಇತಿಹಾಸ, ಸ್ವಭಾವ, ಪೂಜಾಪದ್ಧತಿ ಎಲ್ಲವೂ ಇದನ್ನೇ ಸೂಚಿಸುವುವು. ನಾಡಿನ ಗುಡ್ಡ ಗಾಡುಗಳಲ್ಲಿ, ಕಾಡುಮೇಡುಗಳಲ್ಲಿ, ಮೂಲೆಮೂಲೆಯ ಹಳ್ಳಿಗಳಲ್ಲಿ ಹನುಮಂತನ ಸಣ್ಣಸಣ್ಣ ಗುಡಿಗಳು ಕಂಡು ಬರುತ್ತವೆ, ಗುಡಿಯಿಲ್ಲದೆ ಬಿಡಿಯಾಗಿ ನಿಂತ ಒರಟುಮೂರ್ತಿಗಳೂ ಕಾಣಸಿಗುತ್ತವೆ. 'ಊರಬಾಗಿಲ ಹನುಮಂತ' ಎನ್ನುವುದನ್ನು ಎಲ್ಲರೂ ಬಲ್ಲರು; ಊರ ಹೊರಗೇ ಅವನ ಗುಡಿಯಿರುವುದು ಇನ್ನೂ ಒಂದು ವಿಶೇಷ. ಉತ್ತರ ಕರ್ನಾಟಕದ ಕಡೆ, 'ಊರು ಸುಟ್ಟರೂ ಹನುಮಪ್ಪ ಹೊರಗೆ' ಎನ್ನುವ ಗಾದೆಯೇ ಇದೆ. ಆರ್ಯ ವೀರನಾದ ರಾಮನ ಪರಿವಾರದಲ್ಲಿ ಸೇರುವ ಮೊದಲೇ ಹನುಮಂತ ಸ್ವತಂತ್ರ ದೇವತೆಯಾಗಿ ಮೆರೆಯುತ್ತಿದ್ದುದುಂಟು. ಕೋಟೆಕೊತ್ತಲಗಳಲ್ಲಿ, ಬೇಟೆಗಾರರ ವಸತಿಗಳಲ್ಲಿ ಪೂಜೆಗೊಳ್ಳುತ್ತಿದ್ದ ಈ ದೈವದ ಪ್ರಾಚೀನತೆ ಬಹಳವೇ ಇದೆ.

ಈಗ ಭಾರತದಲ್ಲೆಲ್ಲ ಹನುಮಂತನ ಪೂಜೆ ನಡೆಯುತ್ತಿದ್ದರೂ, ಒಂದು ಕಾಲಕ್ಕೆ ವಿಶೇಷವಾಗಿ ದಕ್ಷಿಣಭಾರತಕ್ಕೆ ಸೀಮಿತವಾಗಿದ್ದ ದೇವತೆಯೆಂದು ತೋರುತ್ತದೆ. ವೈದಿಕಯುಗದ 'ವೃಷಾಕಪಿ'ಗೂ ಹನುಮಂತನಿಗೂ ನೆಂಟನ್ನು ಕಲ್ಪಿಸಿದ್ದರೂ, ದಿಟವಾಗಿ ಹನುಮಂತ ಎನ್ನುವ ಮಾತು ಸಂಸ್ಕೃತದ್ದಲ್ಲವೆಂದೂ 'ಆಣ್ ಮಂತಿ' (ಗಂಡು ಕಪಿ) ಯೆನ್ನುವ ತಮಿಳು ಮಾತಿನ ರೂಪಾಂತರ ಅದೆಂದೂ ಹೇಳುವುದಿದೆ. ಇನ್ನು, ಕನ್ನಡಿಗರು ಹನುಮಂತನನ್ನು ತಮ್ಮವನೇ ಎಂದು ಕರೆದುಕೊಂಡಿರುವುದೂ ಇದೆ. ಸುಗ್ರೀವನ ರಾಜ ಧಾನಿಯಾಗಿದ್ದ ಋಷ್ಯಮೂಕಪರ್ವತ ನಮ್ಮ ಹಂಪಿಯಲ್ಲಿಯೇ ಇಲ್ಲವೇ? ಸುಗ್ರೀವನಿಗೆ ಸಚಿವನಾಗಿದ್ದವನು ತಾನೆ ಹನುಮಂತ? ರಾಮಾಯಣದಲ್ಲಿಯೂ ಇವನು 'ಮಹಾಕಪಿ'ಯೇ. ಕಪಿಯ ಸ್ವಭಾವವನ್ನೂ ಕಳೆದುಕೊಂಡವನೇನಲ್ಲ! ಒಂದು ಸ್ತುತಿ ಹೀಗಿದೆ:—

> ಮರ್ಕಟೇಶ ಮಹೋತ್ಸಾಹ ಸರ್ವಶೋಕವಿನಾಶನ।
> ಶತ್ರೂನ್ ಸಂಹರ ಮಾಂ ರಕ್ಷ ಕ್ಷಿಪ್ರಂ ದಾಪಯ ಮೇ ಪ್ರಭೋ॥

ಅಂಜನೆಯ ಮಗನೆಂದೂ (ಆಂಜನೇಯ), ರುದ್ರಾಂಶಸಂಭೂತನೆಂದೂ, ಭಾವಿರುದ್ರನೆಂದೂ, ಸೂರ್ಯ ಪುತ್ರನೆಂದೂ, ವಾಯುಪುತ್ರನೆಂದೂ, ಮರುದ್ಗಣಗಳಿಗೆ ಸಂಬಂಧಿಸಿದವನೆಂದೂ (ಮಾರುತಿ), ರಾಮಭಕ್ತ ನೆಂದೂ, ಭಾರತೀ ರಮಣನೆಂದೂ, ಮುಖ್ಯಪ್ರಾಣನೆಂದೂ ವಿಭಿನ್ನವಾದ ವಿವರಗಳು ಮುಂದೆ ಮೂಡಿಕೊಂಡು ಬಂದುವು. ವಿಷ್ಣುವಿನ ಅವತಾರವಾದ ಶ್ರೀರಾಮನಿಗೇ ಅವನ ಸೇವೆಯನ್ನು ಸಾಮಾನ್ಯವಾಗಿ ಸಲ್ಲಿಸಿದ್ದಾ ರಾದರೂ, ವೀರಭದ್ರನಿಂದ ಅವನಿಗೆ ಶಿವದೀಕ್ಷೆಯನ್ನು ಕೊಡಿಸಿ ಲಿಂಗಧಾರಣೆಯನ್ನು ಮಾಡಿಸಿರುವುದೂ ಉಂಟು! ಶಿವನಿಗೂ ಅವನಿಗೂ ಸಂಬಂಧವೇನೋ ಸರ್ವಸಮ್ಮತವಾದ ವಿವರವೇ. ಆದರೆ ಅವನ 'ಡೊಂಕುಮೋರೆಯ'ಯ ಮೇಲೆ ಮೆರೆಯುವುದು 'ಹರಿನಾಮ'; ಅವನ ಬಾಯಲ್ಲಿ 'ರಾಮನಾಮ'.

ಮಾಧ್ವಸಂಪ್ರದಾಯದಲ್ಲಿ ಹನುಮಂತನಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಮಧ್ವಾಚಾರ್ಯರೇ ಹನುಮಂತನ ಅವತಾರವೆಂದೂ ಎಣಿಕೆಯಿದೆ; ದರ್ಶನದಲ್ಲಿ ಅವನ ಪಾಲಿಗೆ ಮಾಧ್ಯಸ್ಥ್ಯದ ಪಾತ್ರವನ್ನೂ ಕೊಟ್ಟಿದ್ದಾರೆ. ವಿಷ್ಣುವಿನ ಅನುಜ್ಞೆಯಿಂದ ಜೀವರಿಗೆ ಮೋಕ್ಷವನ್ನು ಕೊಡತಕ್ಕವನೆಂದೂ ('ವಿಷ್ಣೋರ್ಹಿ ದಾತಾಮೋಕ್ಷಸ್ಯ ವಾಯುಶ್ಚ ತದನುಜ್ಞಯಾ'), ಜೀವೋತ್ತಮನೆಂದೂ, ಬ್ರಹ್ಮನಿಗೆ ಅಧಿಷ್ಠಾನವೆಂದೂ, ಇಂದ್ರಿಯಗಳಿಗೆ ಪ್ರೇರಕನೆಂದೂ, ಆಪ್ತನೆಂದೂ, ಋಜುಯೋಗಿಗಳಲ್ಲಿ ಮುಖ್ಯನೆಂದೂ ಈ ಸಿದ್ಧಾಂತದಲ್ಲಿ ವಿವರಗಳಿದ್ದು, ಹನುಮಂತನ ಪೂಜೆ ಈ ಸಂಪ್ರದಾಯದವರಲ್ಲಿ ಪ್ರಚಲಿತವಾಗಿದೆ. ಮಾಧ್ವಸಂಪ್ರದಾಯದ ಪ್ರಭಾವದಿಂದಾಗಿ ಹನುಮಂತನ ಗುಡಿಗಳು ಕನ್ನಡನಾಡಿನಲ್ಲಿ ಹರಡಿದುವು ಎನ್ನಬಹುದು; ಅದರಲ್ಲಿಯೂ, ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ವ್ಯಾಸತೀರ್ಥರು ಹೋದಲ್ಲೆಲ್ಲ ಹನುಮಂತನ ಮೂರ್ತಿಗಳನ್ನು ಪ್ರತಿಷ್ಠೆಮಾಡುತ್ತ ಬಂದರು.

ಚಿತ್ರ 166
ಕಾಂಬೋಡಿಯಾದ ದೇವಾಲಯಗಳಲ್ಲಿ
ಹನುಮಂತ ದ್ವಾರಪಾಲಕ
ಹತ್ತನೆಯ ಶತಮಾನದ ಶಿಲಾಕೃತಿ

ಆದರೆ ಹನುಮಂತನ ಪ್ರಖ್ಯಾತಿಗೆ ಇಷ್ಟೇ ಕಾರಣವೆನ್ನಲಾಗದು; ಅದರ ಜಾನಪದ ನೆಲೆಯನ್ನೂ ಕಡೆಗಣಿಸಲಾಗದು. ದುಷ್ಟ ಶಕ್ತಿಗಳನ್ನೂ ಶತ್ರುಗಳನ್ನೂ ದಮನಮಾಡುವುದು; ರೋಗ, ಪೀಡೆ ಮೊದಲಾದುವನ್ನು ಪರಿಹರಿಸುವುದು; ಭೀತಿಯನ್ನು ಹೋಗಲಾಡಿಸುವುದು; ಬಯಕೆಯನ್ನು ತೀರಿಸುವುದು ಇವೆಲ್ಲ ಹನುಮಂತನ ನೆರವಿನಿಂದಲೇ ಆಗಬೇಕು. ಹಳ್ಳಿಗಳಲ್ಲಿ ಇಂದಿಗೂ ಬೇನೆ, ಪೀಡೆ, ಕಾಟ ಇವುಗಳಿಗೆ ಪರಿಹಾರವಾಗಿ ಹನುಮಂತನ ಪೂಜೆಮಾಡುವ ವಾಡಿಕೆಯಿದೆ; ಬೆದರಿದ ಮಕ್ಕಳಿಗೆ ಹನುಮಂತನ ತಾಯಿತ ಕಟ್ಟುವುದಿದೆ; ಅಭಿಚಾರ ಕರ್ಮಗಳಲ್ಲಿ ಹನುಮಂತೋಪಾಸಕರು ತೊಡಗುವುದಿದೆ; ಬಸವಿಬಿಟ್ಟ ಹೆಂಗಸರು ಹನುಮಂತನಿಗೆ ತಾಳಿಯನ್ನು ಕಟ್ಟುವುದಿದೆ; ವೇಶ್ಯೆಯರು ಹನುಮಂತನ ತಾಳಿಯನ್ನು ಕಟ್ಟಿಕೊಳ್ಳುವುದಿದೆ, ಮನೆಯ ರಕ್ಷಣೆಗೆಂದು ಹನುಮಂತನ ಗುಂಡನ್ನು ನೆಡುವುದಿದೆ. ಕಪಿಮುಖಯಕ್ಷನೊಬ್ಬ ಪ್ರಾಚೀನ ನೆಲೆಯಲ್ಲಿಯೇ ಇದ್ದುದನ್ನು ಇಲ್ಲಿ ನೆನಸಿಕೊಳ್ಳಬೇಕು. ಆಲಯಗಳ ರಕ್ಷಣೆಗೆ ಯಕ್ಷರನ್ನು ನಿಲ್ಲಿಸುವ ಪದ್ಧತಿ ಮೂಡಿಬಂದಾಗ ದೇವಾಲಯದ ರಕ್ಷಣೆಗೆ ಹನುಮಂತನನ್ನು ಅಳವಡಿಸಿಕೊಂಡಂತೆ ತೋರುತ್ತದೆ. ಕಂಬೋಡಿಯದಲ್ಲಿಯೂ ದ್ವಾರಪಾಲಕನಾಗಿ ಹನುಮಂತನನ್ನು ದೇವಾಲಯಗಳ ಹೊರಗೆ ಕೂರಿಸಿರುತ್ತಾರೆ. ದೇಹರಕ್ಷಣೆಗಾಗಿಯೂ ಹನುಮಂತನನ್ನು ಮೊರೆಹೋಗುವುದು ಹಿಂದಿನ ಪದ್ಧತಿಯೇ. ಈಗಲೂ ಜಟ್ಟಿಗಳ ಗರಡಿಗಳಲ್ಲಿ ಹನುಮಂತನ ಪೂಜೆ ವೈಭವದಿಂದಲೇ ನಡೆಯುತ್ತದೆ. ಉತ್ತರ ಭಾರತದಲ್ಲಿಯೂ 'ವಜ್ರಾಂಗಬಲಿ'ಯಾದ ಈತನೇ ಆರೋಗ್ಯಕ್ಕೆ, ವೀರ್ಯಕ್ಕೆ, ಸಾಹಸಕ್ಕೆ ಅಧಿದೇವತೆ.

ಹನುಮಂತನ ತಾಂತ್ರಿಕಪ್ರಸಕ್ತಿ ಗಮನಾರ್ಹವಾದುದು. ಸಾಮಾನ್ಯವಾಗಿ ವಶೀಕರಣವೇ ಮೊದಲಾದ ಸಿದ್ಧಿಗಳಿಗೆ 'ಓಂ ನಮೋ ಭಗವತೇ ಆಂಜನೇಯಾಯ ಮಹಾಬಲಾಯ ಸ್ವಾಹಾ' ಎನ್ನುವ

ಮಂತ್ರವೂ "ಹಂ ಹನುಮತೇ ರುದ್ರಾತ್ಮಕಾಯ ಹುಂ ಫಟ್" ಎಂಬ ಮಂತ್ರವೂ ಬಳಕೆಯಲ್ಲಿವೆ. "ಕಶಿಂ ಕುಕ್ಷ ಪರವರ ಅಂಜನಾವರಪುತ್ರ ಆವೇಶಿ ಆವೇಶಿ ಓಂ ಹ್ರೀಂ ಹನುಮನ್ ಫಟ್" ಎನ್ನುವ ಮಂತ್ರ 'ಪಿಶಾಚಾದಿ ನಿವೃತ್ತಿಗೆ', ಇನ್ನೊಂದು ಮಂತ್ರ 'ಮದನಕ್ಷೋಭಶಾಂತಿ'ಗೆ, ಮತ್ತೊಂದು 'ಸರ್ವಗ್ರಹವಿನಾಶನ'ಕ್ಕೆ. ಇನ್ನೂ ಒಂದು 'ಸರ್ವಜ್ವರೋತ್ಸಾದನ'ಕ್ಕೆ, ಮತ್ತೂ ಒಂದು 'ಡಾಕಿನೀವಿಧ್ವಂಸನ'ಕ್ಕೆ, ಹೀಗೆ ಹಲವಾರು ಹನುಮನ್ಮಂತ್ರಗಳನ್ನು ಬಳಸುತ್ತಾರೆ. 'ಹನೂಮನ್ಮಾಲಾಮಂತ್ರ'ವೆನ್ನುವುದರಲ್ಲಿ "ಓಂ ಹ್ರೀಂ ಹಾ ಹಾ ಹಂಸ ಹಂಸ ಏಹಿ ಸರ್ವವಿಷಂ ಹರ ಹರ ಪರಬಲಂ ಕ್ಷೋಭಯ ಕ್ಷೋಭಯ ಮಮ ಸರ್ವಕಾರ್ಯಾಣಿ ಸಾಧಯ ಸಾಧಯ ಹುಂ ಫಟ್ ಸ್ವಾಹಾ" ಎನ್ನುವ ಮಾತುಗಳು ಬರುತ್ತವೆ. ಈ ಶುದ್ಧ ತಾಂತ್ರಿಕ ಪ್ರಯೋಜನಗಳಲ್ಲದೆ ವಿದ್ಯಾಪ್ರದವೂ ಆದ ಮಂತ್ರವೊಂದಿದೆ. ಅದರ ಧ್ಯಾನಶ್ಲೋಕವು ಮಾತ್ರ ಪ್ರಸಿದ್ಧವಾಗಿದೆ –

ಆಂಜನೇಯಮತಿಪಾಟಲಾನನಂ ಕಾಂಚನಾದ್ರಿಕಮನೀಯ ವಿಗ್ರಹಂ ।
ಪಾರಿಜಾತತರುಮೂಲವಾಸಿನಂ ಭಾವಯಾಮಿ ಪವಮಾನನಂದನಂ ॥

ಪಾರಿಜಾತ ಮರದಡಿಯಲ್ಲಿರುವ ಕಲ್ಪನೆ ಇಲ್ಲಿ ಬಂದಿದ್ದರೆ, ಇನ್ನೊಂದು ವಿದ್ಯಾಪ್ರಧಾನಮಂತ್ರದಲ್ಲಿ ಹನುಮಂತ 'ಕದಳೀವನ' (ಎಂದರೆ ಬಾಳೆ ಹಣ್ಣಿನ ತೋಟ) ದಲ್ಲಿ ಕುಳಿತವನೆಂದೂ ಒಂದು ಕೈಯನ್ನು ಮೊಳಕಾಲಮೇಲಿಟ್ಟು ಇನ್ನೊಂದು ಕೈಯಲ್ಲಿ ಜ್ಞಾನ ಮುದ್ರೆಯನ್ನು ತೋರಿಸುತ್ತ ಬ್ರಹ್ಮಧ್ಯಾನ ಪರಾಯಣನಾಗಿರುವ ಕಲ್ಪನೆಯಿದೆ. ಪಾರಿಜಾತಮರಕ್ಕಿಂತ ಬಾಳೇಹಣ್ಣಿನ ತೋಟವೇನೋ ಸಹಜವಾದ ಕಲ್ಪನೆಯೇ; ಆದರೆ ವಿದ್ಯಾಪ್ರಾಧಾನ್ಯ ಮಾತ್ರ ಪ್ರಾಚೀನ ನೆಲೆಯದೆಂದು ತೋರುವುದಿಲ್ಲ.

ಚಿತ್ರ 167

ತಿರುಪತಿ ಬೆಟ್ಟದ ಮೇಲಿರುವ ಭಕ್ತಾಂಜನೇಯ

ಚಿತ್ರ 168

ವೀರಾಂಜನೇಯ ಮೂರ್ತಿ ಮುಳಬಾಗಲಿನಲ್ಲಿ ಇರುವುದು ವ್ಯಾಸರಾಯರ ಪ್ರತಿಷ್ಠೆ ಹದಿನೈದನೆಯ ಶತಮಾನದ್ದು



ಚಿತ್ರ 169

ವೀರಾಂಜನೇಯ ರಾಜಾಸ್ಥಾನದ ದಾರು ಶಿಲ್ಪ

ಹನುಮಂತನ ವ್ಯಕ್ತಿತ್ವವನ್ನು ಚಿತ್ರಿಸಿಕೊಂಡಿರುವಾಗ ಅವನು 'ಬಾಲಬ್ರಹ್ಮಚಾರಿ'ಯೆಂದೂ 'ವೀರ ಬ್ರಹ್ಮಚಾರಿ' ಯೆಂದೂ 'ನೈಷ್ಠಿಕ ಬ್ರಹ್ಮಚಾರಿ' ಯೆಂದೂ ಶ್ರದ್ಧೆಯಿದೆ. ಅವನು ಯಾವಾಗಲೂ ಏಕಾಕಿ ಮೂರ್ತಿಯೇ; ಅವನಿಗೆ ಶಕ್ತಿಯರಿರುವುದಿಲ್ಲ. ಮಾಧ್ವಸಂಪ್ರದಾಯದಲ್ಲೇನೋ ಅವನು 'ಭಾರತೀ ರಮಣ'ನಾದರೂ ಚಿತ್ರಣದಲ್ಲಿ ಈ ವಿವರ ಮೂಡಿಬಂದಿಲ್ಲ. ವ್ಯಾಕರಣ ವಿಶಾರದನೆಂದೂ ಸಂಗೀತಮತವೊಂದರ ಪ್ರವರ್ತಕನೆಂದೂ ನಂಬಿಕೆಗಳಿವೆ; ಯೋಗಾಭ್ಯಾಸವನ್ನೂ ಅವನಿಗೆ ಅಂಟಿಸಿದ್ದಾರೆ.

ಶಿಲ್ಪದಲ್ಲಿ ಅಂಜಲಿಬದ್ಧನಾದ ಭಕ್ತವಿಗ್ರಹ ಮನೆಯಲ್ಲಿ ಪೂಜೆಗೆ ಶ್ರೇಷ್ಠವೆನ್ನುತ್ತಾರೆ. ಗುಡಿಗಳಲ್ಲಿ ರಣವೀರಾಂಜನೇಯ ಮೂರ್ತಿಗಳಿಗೆ ಆದರ ಹೆಚ್ಚು. ನಿಂತಿರುವಂತೆ, ಕುಳಿತಿರುವಂತೆ, ನಡೆಯುತ್ತಿರುವಂತೆ, ಓಡುತ್ತಿರುವಂತೆ ಭಂಗಿಗಳನ್ನು ಮೂಡಿಸಿ, ಒಂದು ಕೈಯಲ್ಲಿ ಗದೆ ಅಥವಾ ವೀರಾವೇಶದ ಮುದ್ರೆ, ಇನ್ನೊಂದರಲ್ಲಿ ಮರವನ್ನೋ ಬೆಟ್ಟವನ್ನೋ ಹಿಡಿದಿರುವಂತೆ ಕಾಣಿಸುತ್ತಾರೆ. ಮರವನ್ನು ಹಿಡಿದಿರುವುದು ದೈತ್ಯರ ಸಂಹಾರಕ್ಕಾಗಿ. ಬೆಟ್ಟವನ್ನು ಹಿಡಿದಿರುವುದು ರಾಮಾಯಣದ ಒಂದು ಸಂದರ್ಭವನ್ನು ಅವಲಂಬಿಸಿದ್ದು. ರಾಮರಾವಣಯುದ್ಧದಲ್ಲಿ ಲಕ್ಷ್ಮಣನು ಮೂರ್ಛೆಗೊಂಡು ಬಿದ್ದಾಗ ಸಂಜೀವಿನೀಮೂಲಿಕೆಯನ್ನು ತರಲು ಹೊರಟ ಹನುಮಂತ ಮೂಲಿಕೆಯನ್ನು ಗುರುತಿಸಲಾರದೆ ಅದಿದ್ದ ಇಡೀ ಬೆಟ್ಟವನ್ನೇ ಬುಡ ಸಮೇತ ಕಿತ್ತು ಲಂಕೆಗೆ ತಂದ ಸಂದರ್ಭ ಇದು. ರಾಮಲಕ್ಷ್ಮಣರನ್ನು ಹೆಗಲಮೇಲೆ ಹೊತ್ತು ಓಡುತ್ತಿರುವಂತೆ ಶಿಲ್ಪಗಳೂ ಇವೆ. ರಾಮನ ಪರಿವಾರದಲ್ಲಿದ್ದಾಗ ಸಾಮಾನ್ಯವಾಗಿ ಹನುಮಂತ ಭಕ್ತವಿಗ್ರಹವೇ. ಅಂಜಲಿಬದ್ಧಮುದ್ರೆಯಲ್ಲಿಲ್ಲದಾಗ ವಿನಮ್ರನಾಗಿ ತಲೆಬಾಗಿ ನಿಂತು ಬಲಗೈಯನ್ನು ಬಾಯಿಗೆ ಅಡ್ಡಲಾಗಿ ಹಿಡಿದು ನಿಂತಿರುವಂತೆ ಚಿತ್ರಿಸುತ್ತಾರೆ.

ಚಿತ್ರ 170
ಪಂಚಮುಖಿ ಆಂಜನೇಯ

ಸಾಮಾನ್ಯವಾಗಿ ಈ ದೇವತೆ ದ್ವಿಭುಜವೇ ಆದರೂ ಕೆಲವೊಮ್ಮೆ ಅವನ ಶೌರ್ಯಪ್ರದರ್ಶನದ ದೃಷ್ಟಿಯಿಂದ ಆರು, ಎಂಟು ಕೈಗಳನ್ನು ಅಳವಡಿಸುವುದೂ ಉಂಟು. ಪಂಚಮುಖಿ ಆಂಜನೇಯನ ಕಲ್ಪನೆ ಸ್ವಾರಸ್ಯವಾದುದು. ಮುಂದೆ ವಾನರಮುಖ, ಬಲಗಡೆ ಸಿಂಹಮುಖ, ಎಡಗಡೆ ವರಾಹ ಮುಖ, ಹಿಂದುಗಡೆ ಗರುಡಮುಖ, ಮೇಲುಗಡೆ ಹಯ ಮುಖ; ಎಲ್ಲವೂ 'ದಂಷ್ಟ್ರಾಕರಾಳವದನ', 'ಭೀಷಣ'. ಖಡ್ಗ, ತ್ರಿಶೂಲ (ಅಥವಾ ಶೂಲ), ಶಂಖ, ಚಕ್ರ, ಪಾಶ (ಅಥವಾ ಖಟ್ವಾಂಗ, ಅಂಕುಶ, ಪರ್ವತ, ಗದೆ, ಮುಸಲ (ಅಥವಾ ಮುದ್ಗರ), ಮುಷ್ಟಿ ಹೀಗೆ ಹತ್ತು ಆಯುಧಗಳನ್ನು ಹಿಡಿದು ಸ್ಥಾನಕ ಭಂಗಿಯಲ್ಲಿರುವ ಈ ಮೂರ್ತಿಯೂ ಅಪುರೂಪವೇ. ಆದರೆ ಕೆಲವು ತುಂಬ ಸೊಗಸಾದ ಕಂಚಿನ ಮೂರ್ತಿಗಳು ಮಾಧ್ವ ಮಠಗಳಲ್ಲಿ ಕಾಣಸಿಗುತ್ತವೆ. ಯೋಗಾಂಜನೇಯ ಚತುರ್ಭುಜಮೂರ್ತಿ; ಎಡಗೈ ಲಂಬಹಸ್ತಮುದ್ರೆಯಲ್ಲಿ, ಬಲಗೈಯಲ್ಲಿ ಜಪಮಾಲೆ, ಮೂರನೆಯದರಲ್ಲಿ ಯೋಗದಂಡ, ನಾಲ್ಕನೆಯದರಲ್ಲಿ ಕಮಂಡಲು (ಅಥವಾ ಕಪಾಲ) ಇವನ್ನು

ಹಿಡಿದು, ವಲ್ಕಲವನ್ನುಟ್ಟು, ಜಟಾಮುಕುಟವನ್ನು ಧರಿಸಿ, ಯೋಗಪಟ್ಟದಲ್ಲಿ ಕುಳಿತ ಮೂರ್ತಿ ಇದು. ದ್ವಿಭುಜ ಯೋಗಾಂಜನೇಯನೂ ಉಂಟು. ಪದ್ಮಾಸನದಲ್ಲಿ ಕುಳಿತ ಉಪದೇಶಾಂಜನೇಯನಿಗೆ ಬಲಗೈಯಲ್ಲಿ ಚಿನ್ಮುದ್ರೆ, ಎಡಗೈಯಲ್ಲಿ ಪುಸ್ತಕ, ವೀಣೆಗಳನ್ನು ಹಿಡಿದು ನಿಂತಂತೆ ದ್ವಿಭುಜಾಂಜನೇಯ ಮೂರ್ತಿಗಳೂ ಇರುತ್ತವೆ.

ಹನುಮಂತನ ವಾಹನವನ್ನು ವಿಷ್ಣುದೇವಾಲಯಗಳಲ್ಲಿ ಉತ್ಸವಾದಿ ಸಂದರ್ಭಗಳಲ್ಲಿ ಬಳಸುತ್ತಾರೆ. ಎರಡೂ ಕೈಗಳಲ್ಲಿ ಧಾರಕಮುದ್ರೆಯಲ್ಲಿ ಎತ್ತಿ ಹಿಡಿದು ವೀರಾಸನ ಭಂಗಿಯಲ್ಲಿ ಕುಳಿತಂತೆ, ಅಥವಾ ಏಳಲು ಉದ್ಯುಕ್ತನಾಗಿರುವಂತೆ ಈ ವಾಹನಮೂರ್ತಿಯಿರುತ್ತದೆ. ವೈಷ್ಣವರು ಪೂಜೆಯಲ್ಲಿ ಬಳಸುವ ಘಂಟೆಯ ಮೇಲೆ ಸ್ಥಾನಕ ಭಂಗಿಯ ಭಕ್ತಾಂಜನೇಯ ಮೂರ್ತಿಯನ್ನು ಹಿಡಿಯಾಗಿ ಅಳವಡಿಸಿರುತ್ತಾರೆ. ಕೆಲವೊಮ್ಮೆ ಇದರ ಹಿಂಭಾಗದಲ್ಲಿ ಅದೇ ಭಂಗಿಯ ಗರುಡನನ್ನೂ ಚಿತ್ರಿಸಿರುವುದುಂಟು.

ಕಳಿಯಾಟ್ಟದ ತೆಯ್ಯಕೋಲಗಳು

ಉತ್ತರ ಮಲಬಾರಿನ ಕಡೆ 'ಕಳಿಯಾಟ್ಟಂ' ಎನ್ನುವ ಪ್ರಾಚೀನ, ಸಾಂಪ್ರದಾಯಿಕ ಉತ್ಸವ ಬಳಕೆಯಲ್ಲಿದೆ, ಅಥವಾ ಇದ್ದಿತು. ಇದು ಪ್ರಮುಖವಾಗಿ ದೇವತಾರಾಧನೆಯಾದರೂ, ಇದರಲ್ಲಿ ವೀರಪೂಜೆಯ ವಿವರಗಳು ಹಾಸುಹೊಕ್ಕಾಗಿ ಸೇರಿಕೊಂಡಿವೆ; ಹಿನ್ನೆಲೆಯಲ್ಲಿ ತಾಂತ್ರಿಕ ಕಲ್ಪನೆಗಳೂ ವಿಧಿಗಳೂ ಇವೆ. ಈ ಉತ್ಸವಕ್ಕೆ 'ತೆಯ್ಯಾಟ್ಟಂ' ಎಂದೂ ಹೆಸರಿದೆ. 'ಕಳಿಯಾಟ್ಟಂ' ಎನ್ನುವ ಮಾತಿನ ಅರ್ಥ ಅಷ್ಟು ಸ್ಪಷ್ಟವಾಗಿಲ್ಲ. 'ಕಳಿ' ಎಂದರೇ ಆಟ, 'ಕಳಿಯಾಟ್ಟ'ವೆನ್ನುವುದು ದ್ವಿರುಕ್ತಿ ಎಂದು ಹೇಳುವವರಿದ್ದಾರೆ; 'ಕಳಿ' ಯೆನ್ನುವುದು 'ಕಾಳಿ'ಯ ಸಂಕೋಚರೂಪವೆಂದೂ ಭಗವತಿಯೇ ಈ ಆಟದ ಪ್ರಮುಖ ವಸ್ತುವಾದುದರಿಂದ ಇದು 'ಕಳಿಯಾಟ್ಟ'ವೆಂದೂ ಹೇಳುವವರಿದ್ದಾರೆ. 'ತೆಯ್ಯಾಟ್ಟ' ವೆನ್ನುವ ಮಾತಿನಲ್ಲಿ ಈ ಗೊಂದಲವಿಲ್ಲ. 'ತೆಯ್ಯ' ವೆಂದರೆ ದೈವ; ಅದರ ಲೀಲೆಯೇ 'ತೆಯ್ಯಾಟ್ಟಂ'. ತುಳುನಾಡಿನ ಭೂತಗಳನ್ನು ಈ ತೆಯ್ಯಗಳು ನೆನಪಿಗೆ ತರುತ್ತವೆ. ಇಲ್ಲಿಯೂ ವಣ್ಣಾರ್, ವೇಲರ್, ಮಲಯರ್ ಮೊದಲಾದ ಆದಿವಾಸಿಜನರು ಪಾತ್ರಿಗಳಾಗಿ ನಿಂತು ತೆಯ್ಯಗಳನ್ನು ಪ್ರತಿನಿಧಿಸುತ್ತಾರೆ; ಹೀಗೆ 'ತೆಯ್ಯ' ಕಟ್ಟುವವನಿಗೆ 'ತೆಯ್ಯಕ್ಕಾರನ್' ಎಂದು ಹೆಸರು. ಕೊಟ್ಟಯಂ ಪ್ರಾಂತದಲ್ಲಿ ಈ ಉತ್ಸವವನ್ನು 'ತೆರೆಯಾಟ್ಟ' ಎಂದು ಕರೆಯುತ್ತಾರೆ.

ತೆಯ್ಯಗಳು ದೇವತಾಸ್ವರೂಪಗಳು. ವಿಷ್ಣುಮೂರ್ತಿ (ನರಸಿಂಹ), ಕುಟ್ಟಿಚಾತ್ತ, ಉಚ್ಚಿಟ್ಟ, ಮುಚ್ಚಿಲೋಟ್ಟು-ಭಗವತಿ ಮೊದಲಾದುವು. ಇವುಗಳೊಂದಿಗೆ 'ಕೋಲ'ಗಳೆಂಬ ಇನ್ನೊಂದು ಬಗೆಯ ದೈವಗಳನ್ನೂ ಉತ್ತರಮಲಬಾರಿನ ಜನ ಆರಾಧಿಸುತ್ತಾರೆ. ಕೋಲಗಳಿಗೆ ಮಾನವಹಿನ್ನೆಲೆ ಮುಖ್ಯವಾದುದು; ಮನುಷ್ಯರಾಗಿದ್ದವರು ತಮ್ಮ ಸಾಹಸಕೃತ್ಯಗಳಿಂದ, ಅದ್ಭುತ ಪವಾಡಗಳಿಂದ, ಅಥವಾ ವಿಚಿತ್ರವೃತ್ತಾಂತಗಳಿಂದ ದೇವತೆಗಳೆಂದು ಪರಿಗಣಿಸಲ್ಪಟ್ಟು ಗುಡಿಗಳಲ್ಲಿ ಪೂಜೆಗೊಳ್ಳುವುದು ಪ್ರಾಚೀನ ಮನೋಧರ್ಮವೇ. ಪೊಟ್ಟನ್ (ಎಂದರೆ ಬೆಪ್ಪ), ಪಡವೀರನ್, ಕಡಾಂಕೋಟ್ಟುಮಾಕ್ಕಂ ಮೊದಲಾದ ಕೋಲಗಳು ಅಲ್ಲಿ ಪೂಜೆಗೊಳ್ಳುವುವು, ಎರಡನ್ನೂ ಕಲೆಸಿ 'ತೆಯ್ಯಕೋಲ' ಗಳೆಂದು ವ್ಯವಹರಿಸುವುದು ವಾಡಿಕೆ. ಚಿರಕ್ಕಲ್ ಕೋವಿಲಗಂ ಎಂಬ ಗುಡಿಯಲ್ಲಿ 'ಮುಪ್ಪತ್ತೈವರ್' (ಎಂದರೆ ಮೂವತ್ತೈದು) ಎಂಬ ತೆಯ್ಯಕೋಲಗಳ ಮೂರ್ತಿಗಳಿವೆ. ಬೇರೆಡೆಗಳಲ್ಲಿ ತೆಯ್ಯಕೋಲಗಳ ಸಂಖ್ಯೆ ನಲವತ್ತೇಳು ಎಂದು ಹೇಳುವುದಿದೆ. ಆದರೆ ಇಡೀ ಪ್ರದೇಶದ ತೆಯ್ಯಕೋಲಗಳನ್ನೆಲ್ಲ ಎಣಿಕೆ ಮಾಡಿದರೆ ಸುಮಾರು ಐನೂರು ಆಗುತ್ತವೆ! ಇವೆಲ್ಲ ಮೃಗ, ಮನುಷ್ಯ, ದೇವರುಗಳ ವಿಚಿತ್ರ, ವಿಶಿಷ್ಟ ಸಮಾವೇಶಗಳು.

ಕಳಿಯಾಟ್ಟದ ಸಂದರ್ಭದಲ್ಲಿ ಈ ತೆಯ್ಯಕೋಲಗಳನ್ನು ತೃಪ್ತಿಪಡಿಸುವ ಬಯಕೆಯಿದೆ. ಅಧಿಮಾನುಷ ನೆಲೆಯ ಈ ದೈವಗಳು ಮುನಿಸಿಕೊಂಡರೆ ಕೆಡುಕನ್ನುಂಟುಮಾಡುವುವು: ಒಲಿದರೆ ನೆರವಿಗೆ ಬರುವುವು. ಅವಕ್ಕೆ ಉತ್ಸವದಲ್ಲಿ ಎಡೆಯಿಡುವುದು, ಅವುಗಳನ್ನು ಕುರಿತ ಮಣಿಪ್ರವಾಳ ಶೈಲಿಯ ಸ್ತೋತ್ರಗಳನ್ನು (ಇವಕ್ಕೆ 'ತೋಟ್ಟ'ಗಳೆಂದು ಹೆಸರು) ಹೇಳುವುದು. ಅವುಗಳಲ್ಲಿ ಕಥೆಗಳನ್ನು ಹೇಳುವುದು, ಅವುಗಳ ಆಕೃತಿಯನ್ನು ಅನುಕರಿಸಿ ಪ್ರದರ್ಶಿಸುವುದು ಈ ಎಲ್ಲ ವಿಧಿಗಳ ಅಡಿಪಾಯವಾಗಿ ಅವುಗಳಿದ್ದ ಬಗೆಯನ್ನೂ ಅವುಗಳಿರುವ ನೆಲೆಯನ್ನೂ ನೆನಸಿಕೊಳ್ಳುವುದು ಮುಖ್ಯವಾದುದು. ಇದೊಂದು ಬಗೆಯ ಸಾಮುದಾಯಿಕ ಶ್ರಾದ್ಧಕರ್ಮದಂತೆ.

ತೆಯ್ಯಕೋಲಗಳು ಜಾತಿವ್ಯವಸ್ಥೆಯಲ್ಲಿ ಅಡಕವಾಗಿರುವುದೆಂದು ಸ್ವಾರಸ್ಯ. ಬ್ರಾಹ್ಮಣ, ನಾಯರ್ ಕಮ್ಮಾಳ ಮೊದಲಾದ ಒಂದೊಂದು ಜಾತಿಗೂ ವಿಶಿಷ್ಟವಾದ ತೆಯ್ಯಕೋಲಗಳಿವೆ. ಭೈರವನ್, ಪೊಟ್ಟನ್, ಕರಿಂಗುಟ್ಟಿಶಾಸ್ತ, ಪೂಕ್ಕುಡಿಚಾತ್ತ, ಉಚ್ಚಿಟ್ಟ ಎಂಬ ಐದು ದೇವತೆಗಳು ಬ್ರಾಹ್ಮಣರಿಗೆ ವಿಶಿಷ್ಟವಾದುವು; ಇವಕ್ಕೆ ಪಂಚಮೂರ್ತಿಗಳೆಂದು ಹೆಸರಿದೆ. ಕ್ಷೇತ್ರಪಾಲ, ಊರ್ಪಳಶಿ, ವೇಟ್ಟಪ್ಪ, ಕರಿಂದಿರಿ–ನಾಯರ್ ಪೈಯಂಬಳ್ಳಿ–ಚೆಂದು ಮೊದಲಾದುವು ನಾಯರ್ ಜನಾಂಗಕ್ಕೆ ವಿಶಿಷ್ಟವಾದುವು. ಕಳ್ಳು ಇಳಿಸುವ ತೀಯ ಜನರು ವಯನಾಟ್ಟು–ಕುಲವನ್, ದೊಂಡಚ್ಚನ್, ಮುತ್ತಪ್ಪನ್ ಮೊದಲಾದ ತೆಯ್ಯಕೋಲಗಳಿಗೆ ನಡೆದುಕೊಳ್ಳುತ್ತಾರೆ. ಇದಲ್ಲದೆ ಈ ದೇವತೆಗಳಲ್ಲಿ ಶಾಕ್ತ, ಶೈವ, ವೈಷ್ಣವವೆಂಬ ವಿಭಾಗವೂ ಉಂಟು. ಕಾಳಿ, ಚಾಮುಂಡಿ, ಕುರತ್ತಿ, ಭಗವತಿ, ಕಣ್ಣಂಗಾಟ್ಟು ಭಗವತಿ (ಯಶೋದೆಯ ಮಗಳು), ಪುದಿಯ–ಭಗವತಿ, ಚಿಗರ್ಮಪ್ಪೋದಿ (ಕುಡಂಗಲ್ಲೂರಮ್ಮ), ಕನ್ನಿಕ್ಕೋಲಂ ಮೊದಲಾದುವು ಶಾಕ್ತವಿಭಾಗದವು; ಪೊಟ್ಟನ್, ಬೈರವನ್, ಗುಳಿಗನ್, ವಯತ್ತೂರ್–ಕಾಲಿಯಾರ್, ಪುಲಮಾರುದನ್ (ನಂದಿಕೇಶ್ವರ) ಮೊದಲಾದುವು ಶೈವ; ವಿಷ್ಣುಮೂರ್ತಿ, ಬಲಭದ್ರನ್ (ಪೆಮೂರಿತಿ), ಪೊಮ್ಮುರುಕ್ಕನ್ (ಶ್ರೀ ಕೃಷ್ಣ), ಪಾಲೋಟ್ಟು ದೈವಂ, ದೈವತ್ತಾರ್ (ಮತ್ಸ್ಯಮೂರ್ತಿ), ಕಾರಣದೈವಂ ಮೊದಲಾದುವು ವೈಷ್ಣವ. ಈ ವಿಭಾಗದಲ್ಲಿ, ದೇವತೆಗಳ ಆಕೃತಿ, ಆರಾಧನಾ ವಿಧಿಗಳಲ್ಲಿಯೂ ಭೇದವಿದೆ.

ದೈವಕೋಲ, ಮೃಗಕೋಲ, ಮನುಷ್ಯಕೋಲ ಎಂದೂ ವಿಭಾಗಮಾಡುತ್ತಾರೆ. ಮೇಲೆ ಹೇಳಿದವು ದೈವಕೋಲಗಳು. ಮೃಗಕೋಲಗಳಲ್ಲಿ ಮುಖ್ಯವಾದುವು ಬಾಲಿತ್ತೆಯ್ಯಂ (ವಾಲಿ), ಹನುಮಾನ್‌ತೆಯ್ಯಂ, ಪುಲಿತ್ತೆಯ್ಯಂ, ನಾಗಕನ್ಯೆ. ಬಾಲಿತ್ತೆಯ್ಯಂ ನಾಲ್ಕು ವಿಶ್ವಕರ್ಮವರ್ಣದ ಕಮ್ಮಾಳರಿಗೆ ಕುಲದೈವ. ಈ ನಾಲ್ಕು ವರ್ಣಗಳೆಂದರೆ ಆಚಾರಿ (ಬಡಗಿ), ಮೂಚಾರಿ (ಎರಕ ಹುಯ್ಯುವವರು), ತಟ್ಟಾನ್ (ಅಕ್ಕಸಾಲೆ) ಮತ್ತು ಕೊಲ್ಲನ್ (ಕಬ್ಬಿಣದ ಕೆಲಸಮಾಡುವವರು). ವಾಲಿಯ ಪೂಜೆ ಇರುವುದು ಇವರಲ್ಲಿಯೇ. ಮನುಷ್ಯಕೋಲಗಳ ಸಂಖ್ಯೆ ಸಹಜವಾಗಿಯೇ ತುಂಬ ಹೆಚ್ಚು; ಪಾಲಂದಾಯಿ ಕಣ್ಣನ್, ಚಮ್ಮರತ್ತಿ, ವೀರನ್ (ಬ್ರಹ್ಮರಾಕ್ಷಸ), ಚಕ್ಕಪ್ಪೋದಿ, ಪೊನ್ನಿಯತ್ತರುಕ್ಕೊಲವೀರನ್, ಕದಿವನೂರ್-ವೀರನ್, ಮಾಕ್ಕಂ ಮೊದಲಾದುವು. ಮನುಷ್ಯರಾಗಿದ್ದವರು ಅಕಾಲಮರಣವನ್ನು ಪಡೆದೋ ಅಪಮೃತ್ಯುವನ್ನು ಪಡೆದೋ ಹೀನಕೆಲಸಗಳನ್ನುಮಾಡಿ ತೀರಿಕೊಂಡೋ ಸತ್ತಮೇಲೂ ಜನರನ್ನು ಕಾಡುವ ಪ್ರೇತಗಳಾಗುವುದು ಎಲ್ಲೆಲ್ಲಿಯೂ ಇದ್ದದ್ದೇ. ಕಳಿಯಾಟ್ಟದ ಹಿನ್ನೆಲೆಯಲ್ಲಿ ಇಂಥ ಪ್ರೇತಕೋಲಗಳು ಹಲವಿವೆ. ಕ್ಷೇತ್ರಪಾಲ, ವೈರಿಜಾತನ್, ವೇಟ್ಟಕುರುಮ್ಮಗನ್, ಊರ್ಪಶಿ, ತೊಂಡಚ್ಚನ್ (ವೈನಾಟ್ಟು ಕುಲವನ್), ಪೈಯಂಬಳ್ಳಿ ಚೆಂದು, ಮುತ್ತಪ್ಪನ್, ಪಡವೀರನ್, ಕುಲವೀರನ್, ರಯಿರಪ್ಪನ್, ಕರಿಂದಿರಿನಾಯರ್, ಕನ್ನಿಕ್ಕುರುಮಗನ್ (ವಾಕತ್ತೂರ್ ಕೇಳು) ಮೊದಲಾದುವು ಪ್ರೇತ ಕೋಲಗಳು. ಕೆಲವು ಯಕ್ಷಿತೆಯ್ಯಗಳೂ ಇವೆ, ಕರಿಂಚಾಮುಂಡಿ, ಕರುಕಲಕ್ಕಿ ಮೊದಲಾದುವು.

ಈ ತೆಯ್ಯಕೋಲಗಳಿಗೆ ಒಂದೊಂದಕ್ಕೂ ಪೂರ್ವಕಥೆ, ಮಾಹಾತ್ಮ್ಯೆಗಳಿರುತ್ತವೆ. ಕೆಲವು ಪುರಾಣ ಕಥೆಗಳಿಗೆ ಅಂಟಿಕೊಂಡೂ ಬಂದಿವೆ. ನಿದರ್ಶನಕ್ಕೆ ಕರಿಂಕುಟ್ಟಿಚಾತ್ತನ್ ಎನ್ನುವ ತೆಯ್ಯ ಕಂಸವಧೆಗಾಗಿ ಕೃಷ್ಣನು ಧರಿಸಿದ ರೂಪವಂತೆ. ಆದರೆ ಬಹುಮಟ್ಟಿಗೆ ಈ ಕಥೆಗಳು ಜಾನಪದ ನೆಲೆಯಲ್ಲಿಯೇ ಉಳಿದವು. ಮನೇಲ್ ಪೋದಿ, ಎಂದರೆ ಬ್ರಾಹ್ಮಣಮನೆಯೊಂದರಲ್ಲಿ ಇದ್ದ ಹುಡುಗಿಯೊಬ್ಬಳು ತನ್ನ ಮನೆಯಂಗಳದಲ್ಲಿದ್ದ ಹಲಸಿನ ಮರವನ್ನೇರಿ ಪೀಚು ಕಾಯಿಗಳನ್ನೆಲ್ಲ ಕಿತ್ತುಹಾಕುತ್ತಿದ್ದಳಂತೆ. ಇದನ್ನು ಕಂಡು ಸಿಟ್ಟಿಗೆದ್ದ ಅವಳ ಸೋದರಮಾವ ಬಂದು ಅವಳನ್ನು ಬೆದರಿಸಲು ಅವಳು ಮರದಿಂದ ಬಿದ್ದು ಪ್ರಾಣಬಿಟ್ಟಳಂತೆ. ಇವಳು ಚಿಕ್ಕಪ್ಪೋದಿ (ಎಂದರೆ ಹಲಸಿನ ಮರದ ದೈವ) ಎಂಬ ತೆಯ್ಯವಾದಳು. ಕದಿವನೂರ್‌ವೀರನೆಂಬ ತೆಯ್ಯ ಮಲೆನಾಡಿನಿಂದ ಬಂದವನಂತೆ. ತಂದೆಯೊಂದಿಗೆ ಜಗಳವಾಡಿ, ಮನೆಬಿಟ್ಟು ಹೊರಟು, ಕೊಡಗು ಸೀಮೆಗೆ ಬಂದು ಅಲ್ಲಿ ಶೀರಿಕೊಂಡು ತೆಯ್ಯವಾದ. ತುಳುನಾಡಿನ ಬೊಬ್ಬರ್ಯೆ-ಭೂತ ಇಲ್ಲಿಯೂ ಕಾಣಿಸಿ ಕೊಳ್ಳುತ್ತದೆ; ಕಥೆಯೂ ಹೆಚ್ಚೂ ಕಡಮೆ ಅದೇ.

ತುಳುನಾಡಿನಲ್ಲಿ ಭೂತದ ಕಥೆಯನ್ನೂ ಹಿರಿಮೆಯನ್ನೂ ಹೇಳಲು ಪಾಡ್ದನಗಳಿದ್ದಂತೆ ಇಲ್ಲಿ 'ತೋಟ್ಟ' ಗಳೂ 'ಅವತಾರಂ' ಗಳೂ ಇವೆ. ತೋಟ್ಟವೆನ್ನುವುದು ಮೇಲೆ ಹೇಳಿದಂತೆ ಸ್ತೋತ್ರವೆಂಬ ಮಾತಿನ ತದ್ಭವರೂಪ. ಇದು ತೆಯ್ಯಕೋಲಗಳ ಹಿರಿಮೆಯನ್ನು ಹೇಳುತ್ತದೆ. 'ಅವತಾರ' ವೆನ್ನುವುದು ತೆಯ್ಯ ಕೋಲ ಮೈದಳೆದ ಅಥವಾ ಬಂದೊದಗಿದ ಬಗೆಯನ್ನು ವಿವರಿಸುತ್ತದೆ. ಇವೆಲ್ಲವೂ ಮಲಯಾಳಭಾಷೆ ಯಲ್ಲಿಯೇ ಇವೆ. ಇವುಗಳನ್ನು ಸಿದ್ಧಪಡಿಸಿದವರ ಹೆಸರುಗಳು ಉಳಿದುಬಂದಿಲ್ಲ. ಈಚೆಗೆ ಸಿದ್ಧವಾದುವು ಮಣಿಪ್ರವಾಳಶೈಲಿಯಲ್ಲಿ (ಎಂದರೆ ಸಂಸ್ಕೃತ ಮಲಯಾಳ ಎರಡೂ ಕೂಡಿದ ಶೈಲಿಯಲ್ಲಿ) ಇವೆ. ಇವನ್ನೆಲ್ಲ ಕಳಿಯಾಟ್ಟದಲ್ಲಿ ಬಳಸಿಕೊಳ್ಳುತ್ತಾರೆ.

ಕಳಿಯಾಟ್ಟದಲ್ಲಿ ಕಲೆಯು ಬಹುಮಟ್ಟಿಗೆ ಸೇರಿಬಂದು ಕೃತಕವೆಂಬಂತೆ, ಪ್ರದರ್ಶನವೇ ಪ್ರಯೋಜನ ವಾಗಿ ಉಳ್ಳಂತೆ, ತೋರುತ್ತದೆ. ಕೇವಲ ಧಾರ್ಮಿಕವಿಧಿಗಳ ವಿವರಗಳನ್ನೂ ಇಲ್ಲಿ ಕೊಂಚಮಟ್ಟಿಗೆ ಅಡಕಮಾಡಿ ಕೊಂಡಿದ್ದಾರೆ. ಆದರೆ ಪ್ರಾಚೀನ ಮನೋಧರ್ಮದ ಅಭಿವ್ಯಕ್ತಿಯನ್ನೇ ಕಾಣಬೇಕೆನ್ನುವವರು ಈ ತೆಯ್ಯ ಕೋಲಗಳು ನೆಲೆಸಿರುವ ಕಾವು, ಮುಂಡ್ಯ, ಪಳ್ಳಿಯರ, ತಾನ, ತರವಾಡು, ಮಡಪ್ಪುರ, ಮುಚ್ಚಿಲೋಡು ಎಂಬ ಬೇರೆ ಬೇರೆ ಹೆಸರಿನ ಗುಡಿಗಳಲ್ಲಿ ನಡೆಯುವ ವಿಧಿಗಳನ್ನು ಗಮನಿಸಬೇಕು. ಈ ವಿಧಿಗಳು ಸಾಮಾನ್ಯ ವಾಗಿ ಚಳಿಗಾಲದಲ್ಲಿಯೇ ಜರುಗುವುವು. ಇಂಥ ವಿಧಿಗಳಲ್ಲಿ ಕೆಂಡ ಹಾಯುವುದು ವಿಶೇಷವಾಗಿ ಸೇರು ತ್ತದೆ. ವಿಷ್ಣುಮೂರ್ತಿ (ಇದಕ್ಕೆ ಓಂಕಾರಮೂರ್ತಿಯೆಂದೂ ಕೋಟ್ಟಪ್ಪುರತ್ತು ಎಂದೂ ಹೆಸರುಗಳಿವೆ) ಕೋಲಕ್ಕೆ ನಡೆಯುವ ಆರಾಧನೆಯಲ್ಲಿ ಆವೇಶಬಂದವನು ಉರಿಯುವ ಕೆಂಡದಲ್ಲಿ ನೂರೊಂದು ಬಾರಿ ಬೀಳು ತ್ತಾನೆ. ಸಾಂಕ್ರಾಮಿಕ ಜಾಡ್ಯಗಳು ಹರಡಿದ್ದಾಗ ಅವನ್ನು ಹೋಗಲಾಡಿಸಲೆಂದು ಈ 'ವಟ್ಟಕ್ಕೋಲ' ನಡೆಯು ತ್ತದೆ; ಪಾಪಪರಿಹಾರಕ್ಕೂ ಇದನ್ನು ನಡೆಸುವುದುಂಟು.

ಕೆಲವು ತೆಯ್ಯಕೋಲಗಳು ನರಬಲಿ, ಪಶುಬಲಿ, ರಕ್ತಬಲಿಗಳನ್ನೂ ಬಯಸುವ ಆಸುರೀಶಕ್ತಿಗಳು; ರಕ್ತೇಶ್ವರಿ, ಉಚ್ಚಬೆಲಿ ಮೊದಲಾದುವು. ಉಚ್ಚಬೆಲಿಯ ಆರಾಧನೆಯಲ್ಲಿ ಮೊದಲಿಗೆ ಪಾತ್ರಿಯಾದವನು ತನ್ನ ಕೈಯಿಂದಲೇ ರಕ್ತವನ್ನು ಹೊರಗೆ ಚಿಮ್ಮಿಸಿಕೊಂಡು ಅದನ್ನು ಕುಡಿಯುತ್ತಿದ್ದನಂತೆ. ಈಚೆಗೇನೋ ಇದು ಕೆಂಬಣ್ಣದ ನೀರಿನಲ್ಲಿ ಓಕುಳಿಯಾಡುವುದಷ್ಟೇ ಆಗಿ ಉಳಿದಿದೆಯೆನ್ನಿ. ಕೆಲವು ರಾಜಸತೆಯ್ಯಗಳಿಗೆ ರಕ್ತದ ಎಡೆಯೂ, ಮದ್ಯದ ಎಡೆಯೂ ಇರಲೇಬೇಕು. ಕರಿಂಚಾಮುಂಡಿಯೆಂಬ ಯಕ್ಷಿದೈವದ ಪ್ರಸ್ತಾಪ ಆಗಲೇ

ಬಂದಿತಷ್ಟೆ. ಇದು ತೀರ ಭಯಂಕರವಾದ ತೆಯ್ಯಕೋಲ. ಇದನ್ನು ಪ್ರತಿನಿಧಿಸುವವನ ನಡುವಿಗೆ ದೊಡ್ಡದೊಂದು ವೃತ್ತಾಕಾರದ ಮೊರವನ್ನು ಕಟ್ಟಿರುತ್ತಾರೆ. ಇದರಲ್ಲಿ ಆಡನ್ನೋ ಕೋಳಿಯನ್ನೋ ಇರಿಸಿದೊಡನೆ ಪಾತ್ರಿಯು ಅದನ್ನು ತನ್ನ ಕೈ ಉಗುರುಗಳಿಂದಲೇ ಬಗೆದು, ಸೀಳಿ ಅದರಿಂದ ರಕ್ತವನ್ನು ಕುಡಿಯುತ್ತಾನೆ!

ನಡೆಸುವ ಧಾರ್ಮಿಕ ವಿಧಿಯಿಂದ ತೆಯ್ಯಕೋಲಗಳನ್ನು ವಿಭಾಗಿಸುವ ಪದ್ಧತಿಯನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಸಾತ್ವಿಕ, ರಾಜಸ, ತಾಮಸ ವಿವರಗಳು ಈ ವಿಧಿಗಳಲ್ಲಿ ಸೇರಿಬರುತ್ತವೆ. ತೆಯ್ಯಕೋಲಗಳಲ್ಲಿ ಕೆಲವು ಕಾಡುಮೂರ್ತಿಗಳು; ಮೇಲೆ ಹೇಳಿದ ಕರಿಂಚಾಮುಂಡಿಯಂತೆ. ಇವುಗಳ ಆಕಾರವೂ ಭಯಂಕರ, ಇವುಗಳಿಗೆ ನಡೆಯುವ ವಿಧಿಯೂ ಭೀಕರ. ಮದ್ಯ, ಮಾಂಸ, ರಕ್ತ ಇವಿಲ್ಲದೆ ಪೂಜೆ ನಡೆಯುವ ಹಾಗಿಲ್ಲ. ಇನ್ನು ಕೆಲವು ನಾಡುಮೂರ್ತಿಗಳು. ಇವು ಸ್ವರೂಪದಲ್ಲಿಯೂ ಸ್ವಭಾವದಲ್ಲಿಯೂ ಸೌಮ್ಯವಾದುವು; ಕೆಲವು ಆಕೃತಿಯಲ್ಲಿ ರೌದ್ರವೆನಿಸಿದರೂ ಸ್ವಭಾವದಲ್ಲಿ ಮಾತ್ರ ಸೌಮ್ಯ. ಇವಕ್ಕೆ ರಕ್ತದ ಎಡೆ ಬೇಡ, ತೆಂಗಿನ ಮರದಿಂದ ಇಳಿಸಿದ ಕಳ್ಳಾದರೆ ಸಾಕು. ಮತ್ತೆ ಕೆಲವು ಬಯಲು (ವಯಲ್) ಮೂರ್ತಿಗಳು. ಇವನ್ನು ಆದಿವಾಸಿಗಳೂ ಬೇಸಾಯಗಾರರೂ ಪೂಜೆಮಾಡುವುದು ಹೆಚ್ಚು. ಪೂಜೆಯಲ್ಲಿ ಮೊರ, ಪೊರಕೆ, ಕತ್ತಿ ಒನಕೆ ಮೊದಲಾದುವನ್ನು ಬಳಸುತ್ತಾರೆ! ಮತ್ತೂ ಕೆಲವು ಕಡಲ ಮೂರ್ತಿಗಳು; ಘಂಟಾಕರ್ಣನಂತೆ, ಇವನ್ನು ಮೀನು ಹಿಡಿಯುವವರು, ಅಂಬಿಗರು, ನಾವಿಗರು ಪೂಜೆಮಾಡುತ್ತಾರೆ. ಇವರ ಪೂಜಾವಿಧಿಯಲ್ಲಿ ಸಹಜವಾಗಿಯೇ ಮೀನಿನ ನೈವೇದ್ಯ ಹೆಚ್ಚು; ಉಳಿದಂತೆ ಸೌಮ್ಯವಾದದ್ದೆಂದೇ ಹೇಳಬೇಕು.

ತೆಯ್ಯಕೋಲಗಳಿಗೆ ನಡೆಯುವ ಧಾರ್ಮಿಕ ವಿಧಿಗಳಲ್ಲಿ ಸ್ವಾರಸ್ಯವಾದುದೆಂದರೆ ವಿಕಟವಿನೋದದ ಕೆಲವು ಕೋಡಂಗಿ ಕೋಲಗಳ ಪಾತ್ರ. ಇವಕ್ಕೆ ಪೊರಾಟ್ಟುಕೋಲಗಳೆಂದು ಹೆಸರು. ಗಂಭೀರವಾದ, ಭೀಕರವಾದ ತೆಯ್ಯಗಳೊಂದಿಗೇ ಬರುವ ಈ ಕೋಲಗಳು ಸರ್ಕಸ್ಸಿನಲ್ಲಿ 'ಕ್ಲೌನ್'ಗಳು ವರ್ತಿಸುವಂತೆಯೇ ನಡೆದುಕೊಳ್ಳುತ್ತವೆ. ನಿದರ್ಶನಕ್ಕೆ ಪನಿಯನ್ ಎನ್ನುವ ಈ ಬಗೆಯ ಕೋಲ. ಅವನು ಬರುವುದು ತೀಚಾಮುಂಡಿಯೆಂಬ ಘೋರ ತೆಯ್ಯದೊಂದಿಗೆ. ತೀಚಾಮುಂಡಿಯ ಪಾತ್ರಿಯು ಧಗಧಗನೆ ಉರಿಯುವ ಕೆಂಡದ ರಾಶಿಯಲ್ಲಿ ಬೀಳವನು. ಅವನೊಂದಿಗೆ ಅಣಕವಾಡುತ್ತ ಬರುವ ಪನಿಯನ್ ತಾನೂ ಕೆಂಡದ ರಾಶಿಯಲ್ಲಿ ಬೀಳುವೆನೆಂದು ಗತ್ತಿನಲ್ಲಿ ಮುನ್ನುಗ್ಗುವನು; ಆದರೆ ಕೆಂಡದ ಬಿಸಿ ತಾಕಿದೊಡನೆ ಬೆದರಿ ಹಿಂದಕ್ಕೆ ಓಡುವನು.

ಜನರನ್ನು ನಗಿಸುವುದೇ ಮುಖ್ಯ ಪ್ರಯೋಜನವಿದ್ದಂತೆ ತೋರಿದರೂ, ಈ ವಿನೋದ ತೀಚಾಮುಂಡಿಯ ದೃಷ್ಟಿಪರಿಹಾರಕ್ಕೆಂದು. ಜನರ ಗಮನವೆಲ್ಲ ಗಂಭೀರ ತೆಯ್ಯದ ಪಾತ್ರಿಯ ಮೇಲೆ ಇದ್ದರೆ, ಅವನು ತನ್ನ ಅದ್ಭುತ ಕ್ರಿಯೆಗಳನ್ನು ಗಾಸಿಯಾಗದಂತೆ ನಡೆಸುವುದು ಕಷ್ಟವಾಗುತ್ತದೆ. ಪಾತ್ರಿಯಿಂದ ನಮ್ಮ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳುವವನು ಈ ಕೋಡಂಗಿಕೋಲ. ಹಾಗೆಯೇ ಎಂಬೇಟ್ಟನ್ ಎಂಬ ಇನ್ನೊಂದು ಗಂಭೀರ ತೆಯ್ಯದ ಜೊತೆಯಲ್ಲಿ ಬರುವ ಕೈಕ್ಕೋಳನ್ ಎಂಬ ಪೊರಾಟ್ಟುಕೋಲ. ಇದು ಉಪಹಾಸ್ಯದ ಸಂಭಾಷಣೆಯನ್ನು ನುಡಿಗಟ್ಟಾಗಿ ಹೇಳುತ್ತದೆ. ಮೀನುಗಾರ—ತೀಯ್ಯ ಮತ್ತು ಬ್ರಾಹ್ಮಣ ಇವರ ನಡುವೆ ನಡೆಯುವ ಮಾತುಕತೆ ನಗೆಯಾಟದ ಸಂದರ್ಭವಾಗುತ್ತದೆ; ಇದನ್ನು ಪೊರಾಟ್ಟುಕೋಲ ನಿರ್ವಹಿಸುತ್ತದೆ. ಈ ಭಾಗ ಕಳಿಯಾಟ್ಟದ ವಿಶೇಷ ಆಕರ್ಷಣೆಯಾಗುತ್ತದೆ. ಅಂತೂ ಧರ್ಮದ ಅತಿಗಂಭೀರಸಂದರ್ಭದಲ್ಲಿಯೂ ಪರಿಹಾಸ್ಯದ ಮನೋವೃತ್ತಿಯನ್ನು ಅಳವಡಿಸಿಕೊಳ್ಳುವುದು ಇದರಲ್ಲಿ ಎದ್ದು ಕಾಣುವ ವಿವರ.

ಈ ತೆಯ್ಯಕೋಲಗಳ ಆವೇಶವನ್ನು ತೋರಿಸುವಾಗ ಒಂದೊಂದಕ್ಕೂ ವಿಶಿಷ್ಟವಾದ ತಿರುಮುಡಿ (ಕಿರೀಟ), ತಿರುವಾಯುಧ (ಆಯುಧಗಳು), ಕೊರಳಹಾರ, ನಡುವಿನಲ್ಲಿ ಬಿಗಿದ ಅಲಂಕರಣ, ಮುಖಕ್ಕೆ ಮಾಡಿಕೊಂಡ ಸಿಂಗಾರ ಮೊದಲಾದುವು ಉಪಯೋಗಕ್ಕೆ ಬರುತ್ತವೆ. ಎಂದರೆ, ಬಹುಮಟ್ಟಿಗೆ ಪ್ರತಿ ತೆಯ್ಯಕೋಲಕ್ಕೂ ನೋಡಿದೊಡನೆ ತಿಳಿದವರು ಗುರುತಿಸುವಂತೆ ಆಕಾರ, ವೇಷ, ಭೂಷಣಗಳಿರುತ್ತವೆ. ಉಳಿದಂತೆ ವೈಶಿಷ್ಟ್ಯ ಇಲ್ಲದಿದ್ದಾಗ ಯಾವುದಾದರೊಂದು ಪ್ರಮುಖ ವಿವರವನ್ನೇ ಹಿಗ್ಗಿಸಿ ಅಳವಡಿಸುವುದುಂಟು. ದೈವತ್ತಾರ್ ಎಂಬುದು ಮತ್ಸ್ಯಾವತಾರದ ತೆಯ್ಯ; ಅದರ ತಲೆಯ ಮೇಲೆ ದೊಡ್ಡದಾಗಿ ಮೀನಿನಾಕಾರದ ಲಾಂಛನವಿರುತ್ತದೆ. ಇಷ್ಟೇ ಇದರ ನಿರ್ದೇಶನ. ಉಳಿದಂತೆ ಅದರ ಆಕಾರವಾಗಲೀ ಅಲಂಕರಣವಾಗಲೀ ಸಾಮಾನ್ಯವಾದುದೇ.

ಹೀಗಾಗಿ ಕಳಿಯಾಟ್ಟದ ನಿರ್ದೇಶಕರು ಪ್ರತಿಯೊಂದು ತೆಯ್ಯಕೋಲದ ಸಾಂಪ್ರದಾಯಿಕ ಮೂರ್ತಿ ಲಕ್ಷಣವನ್ನು ಅರಿತಿರಬೇಕಾಗುತ್ತದೆ. ಆದರೆ ಇದು ಗ್ರಂಥಸ್ಥವಾಗಿಯೂ ಇಲ್ಲ, ಶಿಲ್ಪದಲ್ಲಿ ಮೂಡಿಯೂ ಬಂದಿಲ್ಲ. ಕೆಲವು ತೆಯ್ಯಕೋಲಗಳ ರೇಖಾಚಿತ್ರಗಳೇನೋ ಅಲ್ಲಲ್ಲಿ ಉಳಿದುಕೊಂಡುಬಂದಿವೆ. ತೆಯ್ಯಕೋಲಗಳ 'ಅವತಾರ'ಗಳಲ್ಲಿ ಬರುವ ವಿವರದಂತೆ, ತೆಯ್ಯಕೋಲವು ಕಾಣಿಸಿಕೊಳ್ಳುವ ಸಮಯದಲ್ಲಿ ಅದು ವಾಳ್ ಎಂಬ ಮಚ್ಚುಗತ್ತಿಯಂಥ ಆಯುಧವೊಂದರಿಂದ ನೆಲದ ಮೇಲೆ ತನ್ನ ತಿರುಮುಡಿ, ತಿರುವಾಯುಧ, ಕೊರಳಹಾರ ಮೊದಲಾದ ಆಭರಣ - ಆಯುಧ ವಿಶೇಷಗಳನ್ನು ಬರೆಯುತ್ತದೆ. ಕೆಲವು ಪಳ್ಳಿಯಾರಗಳಲ್ಲಿ, ಎಂದರೆ ಗುಡಿಗಳಲ್ಲಿ, ಈ ಬಗೆಯ ಬರಹ ಇಂದಿಗೂ ಉಳಿದಿದೆಯೆಂದು ನಂಬಿಕೆಯಿದೆ. ಈ ಬರಹಗಳೇ ಮೂರ್ತಿ ಲಕ್ಷಣಗಳ ನಿರ್ದೇಶನಕ್ಕೆ ಆಧಾರವೆಂದೂ ಹೇಳುತ್ತಾರೆ.

ಜೈನರ ಕೊಡುಗೆ

ಪಂಥಪ್ರವರ್ತಕರನ್ನೂ, ಧರ್ಮಗುರುಗಳನ್ನೂ, ಸಾಧುಸಂತರನ್ನೂ ವಿಗ್ರಹಗಳಲ್ಲಿ ಮೂಡಿಸಿ ಪೂಜಿಸುವ ಪದ್ಧತಿಗೆ ಬೌದ್ಧ ಧರ್ಮವೇ ಸ್ಫೂರ್ತಿಯನ್ನೊದಗಿಸಿತೆಂದು ಒಂದು ಊಹೆಯಿದೆ. ಆದರೆ ಜೈನಧರ್ಮದ ಜಿನಮೂರ್ತಿಗಳ ಮೂಲಕೃತಿಗಳು ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿಯೇ ಕಾಣಸಿಗುವುವೆಂದು ಹೇಳುವವರೂ ಇದ್ದಾರೆ. ಇದರ ನಿರ್ಣಯ ಹೇಗಾದರೂ ಇರಲಿ, ಜೈನತೀರ್ಥಂಕರರ ವಿಗ್ರಹಗಳು ನಾಡಿನಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳತೊಡಗಿದುದು ಮಥುರಾಶಿಲ್ಪಶೈಲಿಯ ಕೈ ಮೇಲಾಗಿದ್ದಾಗ. ಜೈನಧರ್ಮದಲ್ಲಿ ಚತುರ್ವಿಂಶತಿ ತೀರ್ಥಂಕರರ ಕಲ್ಪನೆಯಿದೆ. ಋಷಭನಿಂದ ಆರಂಭವಾಗಿ ಮಹಾವೀರನವರೆಗೆ ಬರುವ ಈ ಇಪ್ಪತ್ತು ನಾಲ್ಕು ಜಿನರಲ್ಲಿ ಋಷಭ (ಆದಿನಾಥ), ಚಂದ್ರಪ್ರಭ, ನೇಮಿನಾಥ, ಪಾರ್ಶ್ವ ಮತ್ತು ಮಹಾವೀರ ಇವರ ಮೂರ್ತಿಗಳೇ ವಿಶೇಷವಾಗಿರುವುವು. ಎಲ್ಲ ತೀರ್ಥಂಕರರ ಮೂರ್ತಿಲಕ್ಷಣಗಳೂ ಒಂದೇ ತೆರನಾಗಿರುತ್ತವೆ. ಅವರನ್ನು ನಿರ್ದೇಶಿಸಲು ಲಾಂಛನಗಳನ್ನು ಗಮನಿಸಬೇಕಷ್ಟೆ. ಆದಿನಾಥನಾದರೆ ವೃಷಭ, ಅಜಿತನಾದರೆ ಆನೆ, ಶಾಂಭವನಾದರೆ ಕುದುರೆ, ಪದ್ಮಪ್ರಭನಾದರೆ ಕೆಂದಾವರೆ, ಸುಪಾರ್ಶ್ವನಾದರೆ ಸ್ವಸ್ತಿಕ, ಚಂದ್ರಪ್ರಭನಾದರೆ ಚಂದ್ರ, ಪುಷ್ಪದಂತನಾದರೆ ಮಕರ, ವಾಸುಪೂಜ್ಯನಾದರೆ ಎಮ್ಮೆ, ವಿಮಲನಾಥನಾದರೆ ಹಂದಿ, ಶಾಂತಿನಾಥನಾದರೆ ಜಿಂಕೆ, ನೇಮಿನಾಥನಾದರೆ ಶಂಖ, ಪಾರ್ಶ್ವನಾಥನಾದರೆ ಏಳುಹೆಡೆ ಹಾವು, ಮಹಾವೀರನಾದರೆ ಸಿಂಹ, ಹೀಗೆ. ಉಳಿದಂತೆ ಅವರೆಲ್ಲರ ರೂಪ, ಭಂಗಿ, ಮುದ್ರೆ ಒಂದೇ ರೀತಿಯವು.

ಇವು ಸ್ಥಾನಕ, ಆಸೀನ ಎರಡೂ ಭಂಗಿಗಳಲ್ಲಿರುತ್ತವೆ. ಸ್ಥಾನಕವಾಗಿದ್ದಾಗ ಎರಡೂ ಕೈಗಳನ್ನು ಪಕ್ಕದಲ್ಲಿ ಇಳಿಬಿಟ್ಟು ನೆಟ್ಟಗೆ ನಿಂತಿರುವಂತೆ ಕಾಣುವುವು. ಇದಕ್ಕೆ ಕಾಯೋತ್ಸರ್ಗನಿಲುವೆನ್ನುವರು. ಕುಳಿತಿದ್ದಾಗ

ಚಿತ್ರ 171
ಕೇಸರಿನಾಥ ಋಷಭನ
ಪ್ರಾಚೀನ ಶಿಲ್ಪ
ಅಲಹಾಬಾದ್
ಮ್ಯೂಸಿಯಂನಲ್ಲಿದೆ



ಚಿತ್ರ 172
ಋಷಭ ಮತ್ತು ಮಹಾವೀರರ
ಸ್ಥಾನಕ ಮೂರ್ತಿಗಳು
ಒಂದೇ ಶಿಲಾಫಲಕದಲ್ಲಿ
ಒರಿಸ್ಸಾ ಪ್ರಾಂತ್ಯದ್ದು

ಧ್ಯಾನಮುದ್ರೆಯೊಂದೇ. ಈ ಭಂಗಿಯಲ್ಲಿ ಕೆಲವೊಮ್ಮೆ ಬುದ್ಧ, ತೀರ್ಥಂಕರರ ಮೂರ್ತಿಗಳು ತೀರ ಸದೃಶವಾಗಿರುತ್ತವೆ; ಅವುಗಳಲ್ಲಿ ಭೇದವನ್ನು ಗಮನಿಸಲಾರದ ವಿದ್ವಾಂಸರೂ ಇದ್ದಾರೆ. ಜಿನಮೂರ್ತಿಗಳು ಯಾವಾಗಲೂ ಪೂರ್ಣ ನಗ್ನವಾಗಿರುತ್ತವೆ; ಮತ್ತು ನಿರಾಭರಣವಾಗಿರುತ್ತವೆ; ಎದೆಯ ಮೇಲೆ ಶ್ರೀವತ್ಸ ಚಿಹ್ನೆ ಇರುವುದೂ ವಾಡಿಕೆ. ಆಸೀನವಾಗಲೀ, ಸ್ಥಾನಕವಾಗಲೀ ಜಿನಮೂರ್ತಿಗಳಿಗೆ ವ್ಯಾಖ್ಯಾನ ಮೊದಲಾದ ಇತರ ಯಾವ ಮುದ್ರೆಗಳೂ ಇರುವುದಿಲ್ಲ. ಪಾರ್ಶ್ವ ಮತ್ತು ಸುಪಾರ್ಶ್ವ ಈ ಇಬ್ಬರು ಜಿನರಿಗೆ ಮಾತ್ರ ನಾಗಾತಪತ್ರ (ಎಂದರೆ ಹಾವಿನ ಕೊಡೆ) ಇರುತ್ತದೆ. ಋಷಭನಿಗೆ ಜಟಾಮುಕುಟವನ್ನು ಅಳವಡಿಸುವುದುಂಟು; ಹೀಗಿದ್ದಾಗ ಅವನಿಗೆ ಕೇಸರೀಯನಾಥನೆಂದೂ ಕರೆಯುವುದುಂಟು. 'ಕೇಸರಿಯ'ನೆಂದರೆ ಸಿಂಹದಂತೆ ಕೂದಲುಳ್ಳವನು. ಮುದ್ಗಲನಿಗೆ ಸಾರಥಿಯಾಗಿ ನೆರವಾದ ಕೇಶೀ-ವೃಷಭನ ಪ್ರಸ್ತಾಪ ಋಗ್ವೇದದ ಹತ್ತನೆಯ ಮಂಡಲದಲ್ಲಿ ಬರುತ್ತದೆ.

ಕಕರ್ದವೇ ವೃಷಭೋ ಯುಕ್ತ ಆಸೀದ್
ಅವಾವಚೀತ್ ಸಾರಥಿರಸ್ಯ ಕೇಶೀ

(ಋಗ್ವೇದ, ೧೦,೧೦೨,೬)

ಎಲ್ಲ ತೀರ್ಥಂಕರರನ್ನೂ ಒಂದೇ ಶಿಲಾಫಲಕದಲ್ಲಿ ಕಡೆಯುವ ಸಾಹಸವನ್ನೂ ಅಲ್ಲಲ್ಲಿ ಮಾಡಿದ್ದಾರೆ; ಕೆಲವು ಬಸದಿಗಳಲ್ಲಿ ಚತುರ್ವಿಂಶತಿ ಜಿನರ ಪೂಜೆಯು ಒಟ್ಟಿಗೆ ನಡೆಯುವ ವ್ಯವಸ್ಥೆಯಿದೆ. ಮೂವರು ತೀರ್ಥಂಕರರನ್ನು (ಆದಿನಾಥ, ಪಾರ್ಶ್ವ, ಮಹಾವೀರ, ಹೀಗೆ) ಪೂಜಿಸುವ ತ್ರಿಕೂಟಾಚಲ ಬಸದಿಯಲ್ಲಿ ಮೂವರು ಮೂರ್ತಿಗಳು ಬೇರೆ ಬೇರೆ ಕೋಣೆಗಳಲ್ಲಿರುವುವು. ಇಬ್ಬರು ಜಿನರನ್ನು (ಸಾಮಾನ್ಯವಾಗಿ ಆದಿನಾಥ-ಮಹಾವೀರ) ಒಂದೇ ಫಲಕದಲ್ಲಿ ಸ್ಥಾನಕ ಮೂರ್ತಿಗಳಂತೆ ಕಡೆದ ನಿದರ್ಶನಗಳು ನೂರಾರಿವೆ. ಕಲ್ಲಿನ ನಾಲ್ಕೂ ಕಡೆ ನಾಲ್ವರು ಜಿನರ, ಅಥವಾ ಒಬ್ಬನೇ ಜಿನನ, ನಾಲ್ಕು ಬಿಂಬಗಳನ್ನು ಕಡೆದ ಶಿಲ್ಪಕ್ಕೆ 'ಸರ್ವತೋಭದ್ರ'ವೆಂದು ಹೆಸರು.

ಜಿನರ ಮೂರ್ತಿಗಳಲ್ಲದೆ, ಒಬ್ಬೊಬ್ಬ ಜಿನನಿಗೂ ವಿಶಿಷ್ಟವಾದಂತೆ ಯಕ್ಷಯಕ್ಷಿಣಿಯರನ್ನೂ ಶ್ರುತದೇವತೆಯರನ್ನೂ ಕಲ್ಪಿಸಿಕೊಂಡಿದ್ದು, ಇವುಗಳನ್ನೂ ಪೂಜೆಮಾಡಿ ಒಲಿಸಿಕೊಳ್ಳುವ ಕಾತರ ಜೈನರಲ್ಲಿದೆ. ಈ ದೃಷ್ಟಿಯಿಂದ ಧರಣೇಂದ್ರಯಕ್ಷ, ವೈಶ್ರವಣಯಕ್ಷ, ಅಂಬಿಕೆ, ಜ್ವಾಲಾಮಾಲಿನಿ, ವಾಗ್ವಾದಿನಿ, ಕೂಷ್ಮಾಂಡಿನಿ ಮೊದಲಾದ ಯಕ್ಷಿಯರ ಪುತ್ಥಳಿಗಳೂ ವ್ಯೆದಳೆದಿವೆ. ಇವರಿಗೆಲ್ಲ ನಿರ್ದಿಷ್ಟವಾದ

ಮೂರ್ತಿಲಕ್ಷಣಗಳೂ ಪೂಜಾಕಲ್ಪಗಳೂ ಇವೆ. ಹಲವು ಶಿಲ್ಪಗಳಲ್ಲಿ ಜಿನನ ಪಕ್ಕಗಳಲ್ಲಿಯೂ ಹಿನ್ನೆಲೆಯಲ್ಲಿಯೂ ಈ ಯಕ್ಷ-ಯಕ್ಷಿಯರನ್ನು ಕಾಣಿಸಿರುತ್ತಾರೆ. ಇವರಲ್ಲದೆ ಚಾಮರಗ್ರಾಹಿಣಿಯರೂ, ಸಿದ್ಧರೂ, ಪರಿಜನರೂ, ದೇವತೆಗಳೂ ಜಿನನ ಸುತ್ತ ಶಿಲ್ಪದಲ್ಲಿ ಮೂಡಿಬಂದಿರುತ್ತಾರೆ. ಜಿನನ ಜೀವಿತವೃತ್ತಾಂತವನ್ನು ತಿಳಿಸುವ ಶಿಲ್ಪಫಲಕಗಳೂ ಇವೆ. ಬೌದ್ಧಧರ್ಮದ ನೆಲೆಯಲ್ಲಿಯೂ ಈ ರೀತಿಯ ಚಿತ್ರಣ ಇದ್ದುದನ್ನು ನೆನಸಿಕೊಳ್ಳಬಹುದು. ಸಾಂಪ್ರದಾಯಿಕ ಧರ್ಮದ ದೇವತೆಗಳೂ ಸ್ವಲ್ಪ ಮಾರ್ಪಟ್ಟು ಜೈನರೂಪ ಧರಿಸಿ ಶಿಲ್ಪಗಳಲ್ಲಿ ಮೂಡಿಬಂದಿದ್ದಾರೆ.

ಜಿನರಲ್ಲದೆ ಜೈನರಲ್ಲಿ ಪೂಜೆಗೊಳ್ಳುವ ಸಂತರ ಶಿಲ್ಪದಲ್ಲಿ ಗೊಮ್ಮಟ (ಬಾಹುಬಲಿ), ಭರತ ಇವರು ಪ್ರಮುಖರು. ಇವರಿಬ್ಬರೂ ಮೊದಲ ತೀರ್ಥಂಕರನಾದ ಋಷಭನ ಮಕ್ಕಳು. ಚಕ್ರವರ್ತಿಯಾಗಿದ್ದ ಋಷಭ ರಾಜ್ಯವನ್ನು ತನ್ನ ಹಿರಿಯ ಮಗ ಭರತನಿಗೆ ಕೊಟ್ಟು ತಾನು ತಪಸ್ಸು ಮಾಡಲು ಕಾಡಿಗೆ ಹೊರಟಾಗ ಬಾಹುಬಲಿ ಪೋದನಪುರದ ಅರಸನಾಗಿದ್ದ. ಭರತನು ದಿಗ್ವಿಜಯಾಕಾಂಕ್ಷೆಯಿಂದ ಎಲ್ಲರನ್ನೂ ಗೆಲ್ಲುತ್ತಾ ಬರಲು ಬಾಹುಬಲಿ ಇವನಿಗೆ ಮಣಿಯಲೊಪ್ಪದೆ, ಇವರಿಬ್ಬರ ನಡುವೆ ಹೋರಾಟ ನಡೆಯಿತು. ಬಾಹುಬಲಿಯೇ ಗೆದ್ದನಾದರೂ ವಿರಕ್ತಿಯನ್ನು ತಳೆದು ರಾಜ್ಯವನ್ನೆಲ್ಲ ಭರತನಿಗೇ ಒಪ್ಪಿಸಿ, ತಾನು ನಿಲ್ಲಲು ಬೇಕಾದಷ್ಟು ಮಾತ್ರ ನೆಲವನ್ನು ಅವನಿಂದ ದಾನವಾಗಿ ಪಡೆದು, ಕಾಯೋತ್ಸರ್ಗವಿಧಿಯಲ್ಲಿ ತಪಸ್ಸುಮಾಡುತ್ತ ನಿಂತ. ಬಂಗಾರದಿಂದ ಅದ್ಭುತ ಪ್ರಮಾಣದಲ್ಲಿ ಮಾಡಿದ್ದ ಇವನ ಮೂರ್ತಿಯೊಂದು ಪೋದನಪುರದಲ್ಲಿದ್ದಿತೆಂದು ಪ್ರತೀತಿ ಬಲವಾಗಿದ್ದಿತು. ಈಗ ಹಲವೆಡೆ ಕಾಣಸಿಗುವ ಗೊಮ್ಮಟಮೂರ್ತಿಗಳಿಗೆ ಇದೇ ಮೂಲಕೃತಿ ಅಥವಾ ಸ್ಫೂರ್ತಿ.

ಕರ್ನಾಟಕ ರಾಜ್ಯದ ಶ್ರವಣಬೆಳಗೊಳದಲ್ಲಿರುವ ಗೊಮ್ಮಟ ಮೂರ್ತಿಯು ಜಗದ್ವಿಖ್ಯಾತವಾಗಿದೆ. ಇಷ್ಟು ಸುಂದರಾದ್ಭುತ ಶಿಲ್ಪಗಳು ಜಗತ್ತಿನಲ್ಲಿಯೇ ವಿರಳ. ಗೊಮ್ಮಟ ಮೂರ್ತಿಗಳು ಸಾಮಾನ್ಯವಾಗಿ ಕನ್ನಡನಾಡಿನಲ್ಲಿಯೇ ಇರುವುವು. ಶ್ರವಣಬೆಳಗೊಳ, ಕಾರ್ಕಳ, ವೇಣೂರು ಇಲ್ಲಿನ ಮೂರ್ತಿಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ಶ್ರವಣಬೆಳಗೊಳದ ಮೂರ್ತಿಯೇ ದೊಡ್ಡ ಪ್ರಮಾಣದ್ದು. ಪ್ರಾಚೀನವಾದುದು. ವೇಣೂರಿನ ಮೂರ್ತಿ 35 ಅಡಿ ಎತ್ತರ; ಆದದ್ದು 1604ರಲ್ಲಿ. ಕಾರ್ಕಳದ್ದು 41 ಅಡಿ 5 ಅಂಗುಲ ಎತ್ತರ, ರೂಪಗೊಂಡದ್ದು 1432ರಲ್ಲಿ. ಶ್ರವಣಬೆಳ್ಗೊಳದ್ದು ಕ್ರಿಸ್ತಾಬ್ದ 981ರ ಮಾರ್ಚಿ ತಿಂಗಳು 13ನೆಯ ತಾರಿಖು ಆಯಿತು ಎಂದು ಮಂಜೇಶ್ವರದ ಗೋವಿಂದ ಪೈಯವರ ನಿರ್ಣಯ.

ಚಿತ್ರ 173
ಶ್ರವಣಬೆಳ್ಗೊಳದ
ಗೊಮ್ಮಟ ಮೂರ್ತಿ

ಇದನ್ನು ಮಾಡಿಸಿದವನು ಗಂಗರಾಜ ರಾಚಮಲ್ಲ (974-984)ನ ದಂಡನಾಯಕನಾಗಿದ್ದ ಚಾವುಂಡರಾಯ. ಇಂದ್ರಗಿರಿ ಬೆಟ್ಟದ ಮೇಲೆ ಏಕಾಂಡವಾಗಿದ್ದ ಬಂಡೆಗಲ್ಲನ್ನೇ ಈ ದಿವ್ಯ ಸುಂದರ ಶಿಲ್ಪವನ್ನಾಗಿ ಮಾರ್ಪಡಿಸಿದ ಶಿಲ್ಪಿಗಳ ಹೆಸರು, ಅರಿಷ್ಟನೇಮಿಯನ್ನು ಬಿಟ್ಟು ಉಳಿದು ಬಂದಿಲ್ಲ. ಮೂರ್ತಿಯ ಬಲಗಡೆ ಪಾದಭಾಗದಲ್ಲಿ 'ಚಾವುಂಡರಾಜಂ ಮಾಡಿಸಿದಂ' ಎನ್ನುವ ಶಾಸನವಿದೆ. ತಮಿಳಿನಲ್ಲಿಯೂ ಮರಾಠಿಯಲ್ಲಿಯೂ ಇದೇಮಾತಿನ ಒಕ್ಕಣೆಯಿರುವುದು ಸ್ವಾರಸ್ಯವಾದುದು.

ಮೂರ್ತಿಯ ಪ್ರಮಾಣವನ್ನು ನಿಷ್ಕರ್ಷೆಮಾಡುವುದು ಸುಲಭವಲ್ಲ. ಹಲವಾರು ವಿಧಾನಗಳಿಂದ ಅಳತೆ ಮಾಡಿದಾಗ ಪ್ರಮಾಣವೈವಿಧ್ಯ ಕಾಣುವುದು ಸಹಜವೇ. ಈ ಕ್ಷೇತ್ರಕ್ಕೆ 1800ರಲ್ಲಿ ಬಂದ ಡ್ಯೂಕ್ ಆಫ್ ವೆಲಿಂಗ್‌ಡನ್ ಪ್ರಕಾರ ಇದರ ಎತ್ತರ 60 ಅಡಿ 3 ಅಂಗುಲ. ಅದೇ ಸುಮಾರಿಗೆ ಡಾ. ಬುಖಾನನ್ ಮಾಡಿದ ಅಳತೆಯ ಪ್ರಕಾರ 70 ಅಡಿ 3 ಅಂಗುಲ. ಲೋಕೋಪಯೋಗಿ ಅಧಿಕಾರಿಯಾಗಿದ್ದ ಜೆ. ಡಿ. ಲೆಗ್ಗ್ ಎಂಬುವನು ಮೂರ್ತಿಯ ಎತ್ತರ 71 ಅಡಿ ಎಂದು ನಿರ್ಧರಿಸಿದನು. 1865ರಲ್ಲಿ ಬೌರಿಂಗ್ ಸಾಹೇಬನ ಅಧಿಕಾರಿ ಇದನ್ನು ಅಳತೆ ಮಾಡಿದಾಗ 57 ಅಡಿ ಎಂದು ತೋರಿತು. ಲೂಯಿ ರೈಸ್ ಎನ್ನುವ ವಿದ್ವಾಂಸರ ಪ್ರಕಾರ 58 ಅಡಿ ಎತ್ತರ. ಮೂರ್ತಿಯ ಪಾದಪೀಠದ ಕಮಲವಿನ್ಯಾಸದಲ್ಲಿ ಶಿಲ್ಪಿಯು ತನ್ನ ಅಳತೆಗೋಲನ್ನು ಕಾಣಿಸಿದ್ದಾನೆ; ಇದು 3 ಅಡಿ 4 ಅಂಗುಲವಿದೆ. ಇದನ್ನು 18 ರಿಂದ ಗುಣಿಸಿದರೆ ಮೂರ್ತಿಯ ಪ್ರಮಾಣ ನಿಶ್ಚಿತವಾಗುತ್ತದೆ ಎಂದು ಸಂಪ್ರದಾಯದಿಂದ ಬಂದ ನಂಬಿಕೆ. ಇದರ ಪ್ರಕಾರ 60 ಅಡಿ ಎತ್ತರವಾಯಿತು.

ಬೌರಿಂಗ್ ಸಾಹೇಬನು ಮೈಸೂರಿನ ಮುಖ್ಯಾಧಿಕಾರಿಯಾಗಿದ್ದ ಸಮಯದಲ್ಲಿ 1865ರ ಜನವರಿ ಮೊದಲನೆಯ ದಿನ ಚನ್ನರಾಯಪಟ್ಟಣದ ಅಮಲ್ದಾರರು ಈ ಮೂರ್ತಿಯನ್ನು ಅಳತೆ ಮಾಡಿಸಿದರು; ಅದರ ಪ್ರಕಾರ ಮೂರ್ತಿಯ ಎತ್ತರ 57 ಅಡಿ. ವಿವರಗಳು ಹೀಗಿವೆ: ತಲೆಯಿಂದ ಕಿವಿಯ ಕೆಳಭಾಗದವರೆಗೆ 6′6′′, ಕಿವಿಯಿಂದ ಪಾದದವರೆಗೆ 50′, ಕಿವಿಯಿಂದ ಕತ್ತಿನ ಕೆಳಗೆ 2′6′′, ಕಿವಿಯಿಂದ ಕಂಕುಳಿನ ವರೆಗೆ 7′, ಕಿವಿಯಿಂದ ನಡುವಿನವರೆಗೆ 21′6′′, ನಡುವಿನ ಅಡ್ಡಗಲ 10′, ಹೆಗಲಿನ ಅಡ್ಡಗಲ 26′, ಕೆಳಹೊಟ್ಟೆಯ ಅಡ್ಡಗಲ 13′, ತೊಡೆಯ ಅರ್ಧ ಸುತ್ತಳತೆ 10′, ಮುಂಗಾಲಿನ ಅರ್ಧಸುತ್ತಳತೆ 6′4′′, ಕಾಲಿನ ಅಗಲ 4′6′′, ಕಾಲಿನ ಮುಂಭಾಗದ ಅಡ್ಡಳತೆ 9′, ಕಾಲಿನ ಹೆಬ್ಬೆರಳ ಉದ್ದ 2′9′′, ತೋರು ಬೆರಳಿನ ಉದ್ದ 3′6′′, ನಡುಬೆರಳಿನ ಉದ್ದ 5′3′′, ಉಂಗುರದ ಬೆರಳಿನ ಉದ್ದ 4′7′′, ಕಿರುಬೆರಳಿನ ಉದ್ದ 2′8′′. ಹಳೆಯ ಒಂದು ಸಂಸ್ಕೃತ ಶ್ಲೋಕಮಾಲೆಯಲ್ಲಿ ತಲೆಯಿಂದ ಕಾಲಿನವರೆಗೆ 36 1/2 ಮೊಳ, ಹೊಕ್ಕಳಿನಿಂದ ಕಾಲಿನವರೆಗೆ 20 ಮೊಳ, ಹೊಕ್ಕಳಿನಿಂದ ತಲೆಯವರೆಗೆ 16 1/2 ಮೊಳ, ಕಿವಿಯ ಉದ್ದ 2 ಮೊಳ, ಕಿವಿಯಿಂದ ಕಿವಿಗೆ 8 ಮೊಳ, ಕತ್ತಿನ ಎತ್ತರ 1 3/4 ಮೊಳ, ಕತ್ತಿನ ಸುತ್ತಳತೆ 10 3/4 ಮೊಳ, ಭುಜಗಳ ವಿಸ್ತಾರ 16 ಮೊಳ, ಸೊಂಟದ ಸುತ್ತಳತೆ 20 ಮೊಳ ಎಂದು ಮುಂತಾಗಿ ವಿವರಿಸಿದೆ.

ಅಂತೂ ಅದ್ಭುತಾಕೃತಿ ಇದು. ಎನ್ನುವುದರಲ್ಲಿ ಸಂಶಯವಿರದು. ಬೊಪ್ಪಣ ಪಂಡಿತನು ಈ ಮೂರ್ತಿಯನ್ನು ಬಣ್ಣಿಸುತ್ತ "ಮಣಿದುಂ ಪಾರದು ಮೇಲೆ ಪಕ್ಷಿನಿವಹಂ" (ಮರೆತೂ ಹಕ್ಕಿಗಳು ಇದರ ಮೇಲೆ ಹಾರವು) ಎಂದಿದ್ದಾನೆ; ಅಷ್ಟು ಉನ್ನತವಾದುದು. ಇಜಿಪ್ತ್ ದೇಶದಲ್ಲಿ ಬಿಟ್ಟರೆ ಜಗತ್ತಿನಲ್ಲಿಯೇ ಇಷ್ಟು ಉನ್ನತ ಗಂಭೀರವಾದ ಶಿಲಾಕೃತಿ ಇನ್ನೊಂದಿಲ್ಲ. ಎತ್ತರ ಎಂದಷ್ಟೇ ಅದರ ಗುಣವಲ್ಲ; ಮೂರ್ತಿ ಭವ್ಯವೂ ಹೌದು. ಹೀಗೆಂದೇ ಕವಿ ಅದನ್ನು 'ಸುಮನೋಹರ ಭಯಂಕರ' ಎಂದು ಬಣ್ಣಿಸಿದ್ದಾನೆ.

ಅತಿತುಂಗಾಕೃತಿಯಾದೊಡಾಗದದರೊಳ್ ಸೌಂದರ್ಯಮೌನ್ನತ್ಯಮುಂ।
ನುತ ಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮಂ॥
ನುತಸೌಂದರ್ಯಮು ಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ।
ಕ್ಷಿತಿಸಂಪೂಜ್ಯಮೋ ಗೊಮ್ಮಟೇಶ್ವರಜಿನ ಶ್ರೀರೂಪಮಾತ್ಮೋಪಮಂ॥

ಗೊಮ್ಮಟಮೂರ್ತಿಗೆ ನಡೆಯುವ ಮಹಾಮಸ್ತಕಾಭಿಷೇಕವು ಜಗದ್ವಿಖ್ಯಾತವಾದ ಸಂದರ್ಭ. ಮೊದಲನೆಯ ಅಭಿಷೇಕ ಕ್ರಿಸ್ತಾಬ್ದ 981ರಲ್ಲಿ ಆಯಿತು. ಅಂದಿನಿಂದ ಹನ್ನೆರಡು ವರ್ಷಗಳಿಗೊಮ್ಮೆ ಇದು ನಡೆಯುವ ಪದ್ಧತಿಯಿದೆ. 1634, 1677, 1925, 1940, 1953— ಈ ವರ್ಷಗಳಲ್ಲಿ ಜರುಗಿದ ಮಹಾಮಸ್ತಕಾಭಿಷೇಕಗಳು ಇತಿಹಾಸ ಪ್ರಸಿದ್ಧವಾಗಿವೆ. ಕಳೆದ ವರ್ಷ ಮಹಾವೈಭವದಿಂದ ಇದು ನಡೆದುದರ ನೆನಪು ಜನಗಳಲ್ಲಿ ಇನ್ನೂ ಉಳಿದಿದೆ.

ಜಗನ್ನಾಥ ಮೂರ್ತಿಗಳು

ಈ ದೇಶದ ಪ್ರಖ್ಯಾತಮೂರ್ತಿಗಳಲ್ಲಿ ಪುರಿ–ಜಗನ್ನಾಥನಿಗಿಂತ ಸ್ವಾರಸ್ಯವಾದ, ವಿಚಿತ್ರವಾದ ಮೂರ್ತಿ ಬಹುಶಃ ಇನ್ನೊಂದಿಲ್ಲ. ಅದರ ಹಿನ್ನೆಲೆಯೂ ಅಷ್ಟೇ ಸ್ವಾರಸ್ಯವಾದುದು. ಸಂಸ್ಕೃತಿಯ ಹಲವಾರು ನೆಲೆಗಳು ಇಲ್ಲಿ ಕಲೆತಿರುವುದನ್ನು ಕಾಣಬಹುದು. ಭಾರತದ ಚತುರ್ಧಾಮಕಲ್ಪನೆಯಲ್ಲಿ ಉತ್ತರದ ಬದರೀನಾಥ, ಪಶ್ಚಿಮದ ದ್ವಾರಕಾನಾಥ, ದಕ್ಷಿಣದ ರಾಮನಾಥ, ಪೂರ್ವದ ಜಗನ್ನಾಥ ಇವು ಸೇರುತ್ತವೆ. ಈ ಧಾಮಗಳಲ್ಲಿ ಜಗನ್ನಾಥವೇ ಶ್ರೇಷ್ಠವೆಂದೂ ನಂಬಿಕೆಯಿದೆ. ಈಗ ಒರಿಸ್ಸಾ ಪ್ರಾಂತ್ಯ ಮೊದಲಿಗೆ ಉತ್ಕಲ, ಓಡ್ರ, ಕಳಿಂಗ ಎನಿಸಿಕೊಳ್ಳುತ್ತಿದ್ದು, ಅಲ್ಲಿನ ಸಮುದ್ರತೀರದಲ್ಲಿರುವ ಪುರಿಯ ದೇವರು ಜಗನ್ನಾಥ, ಪುರುಷೋತ್ತಮ ಎಂದು ಪ್ರಸಿದ್ಧವಾಗಿದೆ. ಈ ಹೆಸರುಗಳು ಯಾವ ನಿರ್ದಿಷ್ಟ ದೇವತೆಗೂ ಅನ್ವಯವಾಗುವುದಿಲ್ಲವಾದರೂ, ಈಗ ಅದು ವಿಷ್ಣುವಿನ ಒಂದು ರೂಪವೆಂದು ಪ್ರಸಿದ್ಧವಾಗಿದೆ. ಕಾಲಿಕಾಪುರಾಣದಲ್ಲಿ 'ಜಗನ್ನಾಥಂ ಓಡ್ರೇಶಂ' ಎನ್ನುವ ಪ್ರಸ್ತಾಪವಿದ್ದು ಅದು ಮೊದಲಿಗೆ ಪ್ರಾದೇಶಿಕದೇವತೆಯಾಗಿದ್ದು, ಬರುಬರುತ್ತ ಅಖಿಲ ಭಾರತ ಪ್ರಖ್ಯಾತಿಯನ್ನು ಪಡೆಯಿತು.



ಚಿತ್ರ 174
ಪುರಿಜಗನ್ನಾಥ ದೇವತೆಗಳು
(ಬಲಭದ್ರ, ಸುಭದ್ರೆ, ಜಗನ್ನಾಥ, ಸುದರ್ಶನ)

ಕ್ಷೇತ್ರವೇನೋ ಜಗನ್ನಾಥವಾದರೂ ಅಲ್ಲಿ ಒಂದೇ ಕಟ್ಟೆಯ ಮೇಲೆ ಪೂಜೆಗೊಳ್ಳುವ ಮೂರ್ತಿಗಳು ಮೂರು, ಎರಡು ಗಂಡು ಒಂದು ಹೆಣ್ಣು. ಅವನ್ನು ಬಲಭದ್ರ (ಎಂದರೆ ಬಲರಾಮ, ಅಣ್ಣ), ಜಗನ್ನಾಥ (ಕೃಷ್ಣ, ತಮ್ಮ) ಮತ್ತು ಸುಭದ್ರೆ (ತಂಗಿ) ಎಂದು ನಿರ್ದೇಶಿಸುತ್ತಾರೆ. ಮೂರೂ ಮೂರ್ತಿಗಳು ಮರದಿಂದ ಮಾಡಿದುವು; ಒರಟು ಒರಟಾಗಿಯೇ ಕಡೆದಿರುವುವು. ಮೂರರಲ್ಲಿಯೂ ಮುಖವೊಂದು ಮಾತ್ರ ಎದ್ದು ಕಾಣುತ್ತದೆ, ಮೈಕೈಕಾಲುಗಳು ಕಾಣುವುದಿಲ್ಲ; ಇದ್ದರೂ ತಲೆಯ ಪ್ರಮಾಣಕ್ಕೆ ಏನೇನೂ ಸರಿಯಾಗಿಲ್ಲ. ಜಗನ್ನಾಥನೆನಿಸಿಕೊಳ್ಳುವ ಮೂರ್ತಿ 84 ಪವ ಎಂದರೆ ಅಂಗುಲ ಎತ್ತರವಾಗಿದೆ; ಅದರ ಮೇಲೆ ಕಪ್ಪುಬಣ್ಣ ಬಳಿದಿರುತ್ತಾರೆ ಅದರ ಕಣ್ಣುಗಳು ಗುಂಡಾಗಿದ್ದು, ತಾವರೆಯೆಲೆಯಂತೆ ಎನ್ನುವ ನಿರ್ದೇಶನವಿದೆ; ಚಂದ್ರ

ಸೂರ್ಯರಂತೆ ಎನ್ನುವ ಹೋಲಿಕೆಯೂ ಇದೆ; ಅಲ್ಲಿನವರು ಇದನ್ನು 'ಚಕಾದೋಲ' ಎಂದು ಕರೆಯುತ್ತಾರೆ. ಬಲಭದ್ರನೆನಿಸಿಕೊಳ್ಳುವ ಮೂರ್ತಿ ಇದಕ್ಕಿಂತ ಕೊಂಚ ಎತ್ತರ (85 ಪವ), ಅಣ್ಣನಾದುದರಿಂದಲೋ ಏನೋ. ಅದರ ಬಣ್ಣ ಬಿಳಿ; ಕುಮುದ ಪುಷ್ಪದಂತೆ, ಶಂಖದಂತೆ, ಚಂದ್ರನಂತೆ ಎಂದು ಹೇಳುತ್ತಾರೆ. ಇದಕ್ಕೆ ಸ್ಪಷ್ಟವಾದ ಕಾಲುಗಳ ನಿರ್ದೇಶನವಿಲ್ಲದೆ, 'ಗುಪ್ತಪಾದ' ಎಂದು ವರ್ಣನೆಯಿದೆ. ತಲೆಯ ಮೇಲೆ ಏಳು ಹೆಡೆಗಳ ಹಾವನ್ನೂ ಕಾಣಿಸುತ್ತಾರೆ. ಸುಭದ್ರೆಯ ಬಣ್ಣ ಹಳದಿ; ಎತ್ತರ 52 ಪವಗಳಷ್ಟು. ಇದಕ್ಕೆ ಕೈಕಾಲುಗಳೇನೂ ಕಾಣಿಸುವುದಿಲ್ಲ. ಈ ಮೂರ್ತಿಗಳನ್ನಿರಿಸುವ ಕಟ್ಟೆಗೆ ಮಹಾವೇದಿ ಅಥವಾ ರತ್ನ ವೇದಿಯೆಂದು ಹೆಸರು. ನಡುವೆ ಸುಭದ್ರೆಯನ್ನಿರಿಸಿ ಬಲಗಡೆ ಬಲಭದ್ರನನ್ನೂ ಎಡಗಡೆ ಜಗನ್ನಾಥನನ್ನೂ ಇರಿಸಿರುತ್ತಾರೆ. ಒಂದು ಕೊನೆಯಲ್ಲಿ, ಎಂದರೆ ಜಗನ್ನಾಥನ ಪಕ್ಕದಲ್ಲಿ ಸುದರ್ಶನವೆನಿಸಿಕೊಳ್ಳುವ 84 ಪವ ಎತ್ತರದ ಮರದ ಕಟ್ಟಿಗೆಯೊಂದನ್ನೂ ನಿಲ್ಲಿಸಿರುತ್ತಾರೆ. ಸುದರ್ಶನವೆಂದರೆ ಚಕ್ರ; ಆದರೆ ಇದು ಈ ಆಕಾರದಲ್ಲೇನು ಇಲ್ಲ. ಊರ್ಧ್ವಲಿಂಗಾಕಾರವಾಗಿದ್ದು, 'ಜಿತೇಂದ್ರಿಯ' ವೆಂಬ ವರ್ಣನೆಯನ್ನೂ ಪಡೆದಿದೆ. ಇವು ನಾಲ್ಕನ್ನೂ ಒಟ್ಟಿಗೆ 'ಚತುರ್ಧಾ ಮೂರ್ತಿ' ಯೆಂದು ವ್ಯವಹರಿಸುವ ವಾಡಿಕೆಯಿದೆ.

ಈ ಮೂರ್ತಿಗಳು ಹೀಗೇಕೆ ಒರಟಾಗಿ ಇವೆ? ಉತ್ಕಲದ ಶಿಲ್ಪದಲ್ಲಿ ನೈಪುಣ್ಯ, ನಾಜೂಕು, ಸೌಂದರ್ಯಗಳಿಗೇನು ಕೊರತೆಯಿಲ್ಲ. ಜಗನ್ನಾಥನ ಗುಡಿಯಲ್ಲಿಯೇ ಅದ್ಭುತ ಶಿಲ್ಪಗಳಿವೆ. ಆದರೆ ಗರ್ಭ ಗುಡಿಯಲ್ಲಿ ಪೂಜೆಗೊಳ್ಳುವ ಪ್ರಸಿದ್ಧಮೂರ್ತಿಗಳು ಆದಿವಾಸಿಗಳ, ಅನಾಗರಿಕರ ಆರಾಧ್ಯ ದೈವಗಳನ್ನು ಹೋಲುವುದು ಸೋಜಿಗವಲ್ಲವೆ? ಹಿನ್ನೆಲೆಯಲ್ಲಿ ಶಬರರೆಂಬ ಆದಿವಾಸಿಗಳೇ ಇದ್ದಾರೆ; ಈಗಲೂ ದೇವಾಲಯದ ನಿರ್ವಹಣೆಯಲ್ಲಿಯೂ ಪೂಜಾಕಲಾಪಗಳಲ್ಲಿಯೂ ಅವರ ಪಾತ್ರ ಪ್ರಮುಖವಾದುದೇ ಮೂರ್ತಿಶಿಲ್ಪಗಳನ್ನು ಸಿದ್ಧಪಡಿಸುವವರೂ ಅವರೇ; ಮೊದಲಾಕೃತಿಯನ್ನೇ ಕಟ್ಟುನಿಟ್ಟಾಗಿ ಅನುಸರಿಸು ತ್ತಾರಷ್ಟೆ. ಗುಡಿಯ ಶಬರ ಸೇವಕರಿಗೆ 'ದಯಿತ'ರೆಂದು ('ದಯಿತಾಪತಿ'ಯರೆಂದೂ) ಹೆಸರಿದೆ.

ಸಮುದ್ರತೀರವಾದ ಉತ್ಕಲದಲ್ಲಿ ಹಲವಾರು ಸಾಂಸ್ಕೃತಿಕ ವಿವರಗಳು ಬೆರೆತುಬಂದುದು ಸಹಜವೇ. ಜಗನ್ನಾಥ ಮಂದಿರದ ವ್ಯವಸ್ಥೆಯಲ್ಲಿ ಈಗೇನೋ ಮುಖ್ಯವಾಗಿ ವೈದಿಕಸಂಸ್ಕೃತಿಯ ಪ್ರಭಾವವೇ ಮೂಡಿ ಬಂದಿದೆಯಾದರೂ ಅದರಲ್ಲಿ ತಾಂತ್ರಿಕ, ಬೌದ್ಧ, ಜೈನ ಸಂಪ್ರದಾಯಗಳ ವಿವರಗಳನ್ನು ಗುರುತಿಸುವುದು ಸಾಧ್ಯ. ಕೃಷ್ಣನು ತನ್ನ ದೇಹವನ್ನಿಟ್ಟು ಬುದ್ಧಾವತಾರವನ್ನು ಹೀಗೆ ತಳೆದನೆಂದು ಪುರಾಣಗಳೇ ಹೇಳುತ್ತವೆ. ಬಲ ಭದ್ರನು ಅನಂತ–ನಾಗನೆಂದೂ ಅನಂತನಾಥತೀರ್ಥಂಕರನೆಂದೂ ಜೈನರ ವಿಶ್ವಾಸ. ತಾಂತ್ರಿಕವಿವರಗಳೇನೋ ಸ್ಪಷ್ಟವಾಗಿಯೇ ಇವೆ. ವೈಷ್ಣವದೇವತೆಗಳಾದರೂ ಪಂಚಮಕಾರಗಳ ನಿವೇದನೆ ನಡೆಯುತ್ತದೆ; ಆದರೆ ಮದ್ಯಕ್ಕೆ ಬದಲು ಹಿತ್ತಾಳೆ ಪಾತ್ರೆಯಲ್ಲಿ ಎಳನೀರು, ಮಾಂಸಕ್ಕೆ ಪ್ರತಿನಿಧಿಯಾಗಿ ಶುಂಠಿ, ಮುದ್ರೆಗೆ ಬದಲು ಹಿಟ್ಟು–ಸಕ್ಕರೆ ಪಾಯಸ, ಮತ್ಸ್ಯಕ್ಕೆ ಬದಲಾಗಿ ಇಂಗುಹಾಕಿದ ತರಕಾರಿ, ಮೈಥುನಕ್ಕೆ ಬದಲು ದೇವದಾಸಿಯ ರಿಂದ ನಡೆಯುವ 'ಉತ್ಕಚನೃತ್ಯ' ಇವನ್ನು ಅಳವಡಿಸಿಕೊಂಡಿದ್ದಾರೆ. ಅನಂಗತ್ರಯೋದಶಿಯಂದು ದೇವಾಲ ಯದಲ್ಲಿರುವ ಮೈಥುನಶಿಲ್ಪಗಳಿಗೆ ವಾಸ್ತವವಾಗಿ ಪೂಜೆ ನಡೆಯುತ್ತದೆ; ಮೊದಲಪೂಜೆ ಜಗಮೋಹನದ ಉತ್ತರಭಾಗದ ಹೊರಗೋಡೆಯ ಮೇಲಿರುವ ಅನಂಗಾತುರೆಯೆಂಬ ಶಿಲ್ಪಕ್ಕೆ! ಮೈಥುನಶಿಲ್ಪಗಳು ಯೋಗಿನಿಯರ ಪ್ರತಿಕೃತಿಗಳೆಂದು ಪ್ರತೀತಿ. ಇದು ವಜ್ರಯಾನ ಮೊದಲಾದ ತಾಂತ್ರಿಕ ಸಂಪ್ರದಾಯಗಳಲ್ಲಿ ಪ್ರಮುಖವಾಗಿ ಬರುವ ವಿವರ.

ಜಗನ್ನಾಥ ಅಲ್ಲಿ ಪ್ರಸಿದ್ಧನಾಗುವ ಮೊದಲೇ ಅಲ್ಲಿ ಪೂಜೆಗೊಳ್ಳುತ್ತಿದ್ದ ದೇವತೆ ವಿಮಲಾ (ವಿರಜಾ) ತಾಂತ್ರಿಕಶಕ್ತಿಯೇ; ಅಷ್ಟಾದಶಶಕ್ತಿಪೀಠಗಳಲ್ಲಿ 'ಉತ್ಕಲೇ ವಿರಜಾ ದೇವೀ' ಎಂದು ಪ್ರಖ್ಯಾತಿಯಿದ್ದಿತು. ದೇವಾಲಯದ ಆವರಣದಲ್ಲೇ ಈಕೆಯ ಗುಡಿಯಿದ್ದು ಈಕೆಯನ್ನು ಜಗನ್ನಾಥನ ಶಕ್ತಿಯೆಂದೇ ಕರೆಯುತ್ತಾರೆ. 'ವಿಮಲಾ ಭೈರವೀ ಯತ್ರ ಜಗನ್ನಾಥಸ್ತು ಭೈರವಃ' ಎಂಬ ಪ್ರತೀತಿಯೂ ಇದೆ. ವಿಮಲೆಯ ಸ್ಥಾನಕ ಶಿಲಾ-ಮೂರ್ತಿ ಚತುರ್ಭುಜವಾಗಿದ್ದು ಅಕ್ಷಮಾಲೆ, ವರದಮುದ್ರೆಗಳನ್ನು ಬಲಗೈಗಳಲ್ಲಿಯೂ ಮತ್ಸ್ಯಕನ್ನಿಕೆ, ಪಾನ ಪಾತ್ರೆಗಳನ್ನು ಎಡಗೈಗಳಲ್ಲಿಯೂ ಹಿಡಿದಿದ್ದಾಳೆ. ಮುಕ್ಕಣ್ಣೆಯಾದ ಈಕೆಯ ಎರಡೂ ಪಕ್ಕಗಳಲ್ಲಿ ಇಬ್ಬರು ಭಯಂಕರ ಹೆಂಗಳೆಯರು ಬೆತ್ತಲೆಯಾಗಿ ನಿಂತಿರುವ ಶಿಲ್ಪಗಳೂ ಇವೆ. ನವರಾತ್ರಿಯ ಮಹಾಷ್ಟಾಮಿಯ ಮೂರು ದಿನ ಇವಳೆದುರು ಪಶುಬಲಿಯೂ ನಡೆಯುತ್ತದೆ. ಸಪ್ತಮಿಯಿಂದ ನವಮಿಯವರೆಗೆ ಮೀನಿನ ಎಡೆಯನ್ನೂ ಇಡುತ್ತಾರೆ. ಪುರುಷೋತ್ತಮ ಕ್ಷೇತ್ರವನ್ನು ಪ್ರಸ್ತಾಪಿಸುವ ಮತ್ಸ್ಯಪುರಾಣ (ಪುರಾಣಗಳಲ್ಲಿ ತುಂಬ ಹಿಂದಿನದೆಂದು ಪ್ರತೀತಿ) ಜಗನ್ನಾಥ ದೇವರನ್ನು ಉಲ್ಲೇಖಿಸುವುದೇ ಇಲ್ಲ, ಅಲ್ಲಿ ಬರುವುದು ವಿಮಲೆಯ ಉಲ್ಲೇಖವೇ. ಜಗನ್ನಾಥನನ್ನು ವಿಷ್ಣುವೆಂದು ಬಗೆದಾಗಲೂ 'ಕಲೌ ಕಾಲೀ ಕಲೌ ಕೃಷ್ಣಃ ಕಲೌ ಗೋಪಾಲಃ ಕಾಲಿಕಾ' (ತಾರಾತಂತ್ರ) ಎಂದು ಜಗನ್ನಾಥನನ್ನೂ ಕಾಳಿಯನ್ನೂ ಸಮೀಕರಣಮಾಡಿರುವುದು ಸ್ವಾರಸ್ಯವಾಗಿದೆ.

ಇನ್ನು ಜಗನ್ನಾಥನೊಂದಿಗಿರುವ ಹೆಣ್ಣುಮೂರ್ತಿ ಸುಭದ್ರೆಯ ತಾತ್ಪರ್ಯವೂ ಸ್ವಾರಸ್ಯವಾದುದು. ಆಕೆಯನ್ನು ಏಕಾನಂಶೆಯೆಂದೂ ಕೃಷ್ಣನ ತಂಗಿಯೆಂದೂ ಕರೆದರೂ ಆಕೆಯನ್ನು ಕೃಷ್ಣನ ಶಕ್ತಿಯೆಂದೂ ಕರೆದಿದ್ದಾರೆ. 'ತಸ್ಯ ಶಕ್ತಿಸ್ವರೂಪೇಯಂ ಭಗಿನೀ ಸ್ತ್ರೀ ಪ್ರವರ್ತಿಕಾ' ಎಂದು ಸ್ಕಂದಪುರಾಣವೇ ಹೇಳುತ್ತದೆ. ಈಕೆಗೆ ಪೂಜೆ ನಡೆಯುವಾಗ 'ಓಂ ಹ್ರೀಂ ಭುವನೇಶ್ವರ್ಯೈ ನಮಃ' ಎಂದು ಭುವನೇಶ್ವರೀ ಮಂತ್ರವನ್ನೇ ಬಳಸುತ್ತಾರೆ. ದೇವಾಲಯದ ಆವರಣದಲ್ಲಿ ಲಕ್ಷ್ಮೀಸನ್ನಿಧಿಯೊಂದು ಪ್ರತ್ಯೇಕವಾಗಿದ್ದರೂ ರಥೋತ್ಸವ ಮುಂತಾದ ಸಂದರ್ಭಗಳಲ್ಲಿ ಜಗನ್ನಾಥನೊಂದಿಗೆ ಲಕ್ಷ್ಮಿ ಜಗಳವಾಡಿದ ಪ್ರಸಂಗಗಳನ್ನು ಪ್ರದರ್ಶಿಸಿ 'ಲಕ್ಷ್ಮೀ ನಾರಾಯಣ ಭೇಟಿ'ಯನ್ನು ಮಾಡಿಸುವ ವಿಧಿಗಳು ನಡೆಯುತ್ತವೆ. ಜಗನ್ನಾಥನ ಕಟ್ಟೆಯ ಮೇಲೆ ಲಕ್ಷ್ಮಿಗೆ ಸ್ಥಾನವಿಲ್ಲ. ತಿರುಮಲೆಯಲ್ಲಿಯೂ ವೇಂಕಟೇಶ್ವರ–ಲಕ್ಷ್ಮಿಯರ ವಿರಸದ ಕಥೆಗಳಿರುವುದನ್ನೂ ಬೆಟ್ಟದ ಮೇಲೆ ಏಕಮೂರ್ತಿ ಆಲಯವಿರುವುದನ್ನೂ ನೆನಸಿಕೊಳ್ಳಬಹುದು. ಇಷ್ಟಿದ್ದರೂ, ಸುಭದ್ರೆಯನ್ನೇ ಲಕ್ಷ್ಮಿಯೆಂದು ವ್ಯವಹರಿಸುವುದೂ ಉಂಟು; ಆಕೆಯ ರಥಕ್ಕೆ ಪದ್ಮಧ್ವಜವೆಂದೇ ಹೆಸರು; ಆಕೆಯ ಮೂರ್ತಿ ಸಿದ್ಧವಾಗುವುದು ಪದ್ಮಯಂತ್ರವನ್ನವಲಂಬಿಸಿಯೇ. ತಾಂತ್ರಿಕ ಹಿನ್ನೆಲೆಯಲ್ಲಿ ವೈಷ್ಣವನೆಲೆ ಮೂಡಿಬಂದುದು ಇಲ್ಲಿ ಸ್ಪಷ್ಟವಾಗುತ್ತದೆ.

ಪುರಾಣಪ್ರಸಿದ್ಧವಾದ ಕಥೆ ಹೀಗಿದೆ—ಇಂದ್ರದ್ಯುಮ್ನನೆಂಬ ಅವಂತಿಯ ರಾಜ ಕನಸಿನಲ್ಲಿ ಶಬರರ ದೇವರಾದ 'ನೀಲ ಮಾಧವ' ನನ್ನು ಕಂಡು ಆ ದೇವರಿರುವ ಎಡೆಯನ್ನು ಹುಡುಕಿ. ದೇವರನ್ನು ತರಲು ತನ್ನ ಪುರೋಹಿತ ವಿದ್ಯಾಪತಿಯನ್ನು ಕಳುಹಿಸಿದ. ಅವನು ಶಬರರ ಸೀಮೆಗೆ ಹೋಗಿ ಅವರ ಒಡೆಯ ವಿಶ್ವಾವಸುವಿನ ಗೆಳೆತನವನ್ನು ಸಾಧಿಸಿದನಂತರ, ಅವನಿಗೆ ಶಬರನಾಯಕನು ಕಾಡಿನೊಳಗೆ ಅಡಗಿದ್ದ ನೀಲಮಾಧವ ಮೂರ್ತಿಯನ್ನು ತೋರಿಸಿದ (ಗುಡಿಗೆ ಒಯ್ಯುವಾಗ ಅವನಿಗೆ ದಾರಿ ತಿಳಿಯದಿರಲೆಂದು ಕಣ್ಣು ಕಟ್ಟಿದ್ದರಂತೆ); ಅವನು ಅವಂತಿಗೆ ಹಿಂದಿರುಗಿ ಇಂದ್ರದ್ಯುಮ್ನನಿಗೆ ತಿಳಿಸಲು, ಇಂದ್ರದ್ಯುಮ್ನ ಇದನ್ನು ತರಿಸಿಕೊಳ್ಳುವ ಸನ್ನಾಹ ಮಾಡಲು ಮೂರ್ತಿ ಮರಳುದಿಣ್ಣೆಯಲ್ಲಿ ಮರೆಯಾಗಿ ಬಿಟ್ಟಿತು. ಕನಸಿನಲ್ಲಿ ದೇವರು ಕಾಣಿಸಿಕೊಂಡು ಮರದ

ದಿಮ್ಮಿಯೊಂದು ರೋಹಿಣೀ ಕುಂಡಕ್ಕೆ (ಜಗನ್ನಾಥಕ್ಷೇತ್ರದಲ್ಲಿ ಕಲ್ಪವೃಕ್ಷಕ್ಕೆ ಒಂದು ಮೈಲಿ ಪಶ್ಚಿಮಕ್ಕಿರುವ ಕೊಳ) ತೇಲಿಬರುವುದೆಂದೂ ಅದರಲ್ಲಿ ನೀಲಮಾಧವ ಮೂರ್ತಿಯ ಸಾನ್ನಿಧ್ಯವಿದೆಯೆಂದೂ ತಿಳಿದು ಬಂದಿತು. ಇಂದ್ರದ್ಯುಮ್ನನು ಆ ಕ್ಷೇತ್ರಕ್ಕೆ ಬಂದು ಅಶ್ವಮೇಧಯಾಗ ಮಾಡುವ ಸಂದರ್ಭದಲ್ಲಿ ನಾಲ್ಕು ಕೊಂಬೆಗಳಿದ್ದ ಮರದ ದಿಮ್ಮಿಯೊಂದು ಸಾಗರದಿಂದ ಕುಂಡಕ್ಕೆ ತೇಲಿ ಬಂದಿತು. ಅದರಿಂದ ಇಂದ್ರದ್ಯುಮ್ನನು ಜಗನ್ನಾಥ, ಬಲಭದ್ರ, ಸುಭದ್ರೆಯರ ಮೂರ್ತಿಗಳನ್ನು ಕಡೆಯಿಸಿ ರತ್ನವೇದಿಯ ಮೇಲಿರಿಸಿ, ಅನಂತರ ಗುಡಿಯನ್ನು ಕಟ್ಟಿಸಿದನು. ಕಥೆಯ ವಿವರಗಳು ಕೊಂಚ ಬೇರೆಬೇರೆಯಾಗಿದ್ದರೂ ಮುಖ್ಯವಾದ ಚೌಕಟ್ಟು ಇದೇ. ಸ್ಕಂದಪುರಾಣದ ಈ ನಿರೂಪಣೆಗೆ ಕೆಲವು ಪಾಠಾಂತರಗಳಿದ್ದು ಒಂದರಲ್ಲಿ ಇಂದ್ರದ್ಯುಮ್ನನಿಗೆ ಮೊದಲು ಕಂಚಿಯ ದೊರೆ ಗಾಲಮಾಧವನು ಈ ದೇವರನ್ನು ವಶಪಡಿಸಿಕೊಳ್ಳಲು ಶಬರಪಲ್ಲಿಯ ಮೇಲೆ ದಾಳಿಮಾಡಿ, ಜರಾಶಬರನೊಬ್ಬನನ್ನು ಬಿಟ್ಟು ಉಳಿದೆಲ್ಲ ಶಬರರನ್ನೂ ಕೊಂದುಬಿಡುತ್ತಾನೆ. ಅನಂತರ ಇಂದ್ರದ್ಯುಮ್ನ ರಾಜನು ಜರಾಶಬರನೊಂದಿಗೆ ಸ್ನೇಹವನ್ನು ಸಂಪಾದಿಸಿ, ಅವನ ನೆರವಿನಿಂದ 'ಮಹಾಮೇರು ಸದೃಶದಾರು'ವಿನಲ್ಲಿ ಕೃಷ್ಣನ ಮೂರ್ತಿಯನ್ನು ಪಡೆಯುತ್ತಾನೆ.

ಮುಖ್ಯವಾದ ವಿವರ ಇಷ್ಟೇ—ಮೊದಲಿಗೆ ಶಬರ ಜನರ ದೇವತೆ, ಸುಸಂಸ್ಕೃತರೆಂದುಕೊಂಡ ಜನ ಇವರೊಂದಿಗೆ ಕಾದಾಡಿ ಈ ದೇವತೆಯನ್ನು ತಮ್ಮದಾಗಿಸಿಕೊಂಡರು; ಅಥವಾ ಅವರೊಂದಿಗೆ ಗೆಳೆತನವನ್ನು ಪಡೆದುಕೊಂಡು ಅವರ ದೇವರನ್ನು ತಾವೂ ಗ್ರಹಿಸಿದರು. ಸ್ಕಂದಪುರಾಣದಲ್ಲಿ ಶಬರರ ದೇವತೆ, ಪದ್ಮಪುರಾಣದಲ್ಲಿ ಭಿಲ್ಲರ ದೇವತೆ—ಅಂತೂ ಪ್ರಾಚೀನಸ್ತರದ ಕೊಡುಗೆ; ಆರ್ಯಪರಿಗೃಹೀತವಾದರೂ ಮೂರ್ತಿಲಕ್ಷಣ ಹಾಗೆಯೇ ಉಳಿಯಿತು; ಪೂಜಾಕಲ್ಪದಲ್ಲಿ ಶಬರರ ಪಾತ್ರವೂ ಉಳಿಯಿತು. ಈಗ ಗುಡಿಯಲ್ಲಿ 'ದಯಿತ'ರೆನಿಸಿಕೊಳ್ಳುವ ಜನ ಇಂದ್ರದ್ಯುಮ್ನನ ಕಾಲದ ಜರಾಶಬರನ ವಂಶದವರೆಂದು ನಂಬಿಕೆ. ಈಗಲೂ ಇವರೇ ದೇವರನ್ನು 'ನೋಡಿಕೊಳ್ಳುವವರು'. ಆರ್ಯಸಂಸ್ಕೃತಿಯ ಹೊದಿಕೆ ಮೇಲೆ ಮುಚ್ಚಿದೆ ಅಷ್ಟೆ, ಒಳಗಿನ ವಿವರಗಳೆಲ್ಲ ಹಿಂದಿನವೇ.

ಮೂರ್ತಿಲಕ್ಷಣ ಇಷ್ಟು ವಿಕಾರವಾಗಿ, ವಿಚಿತ್ರವಾಗಿ, ಅಪುರೂಪವಾಗಿರುವುದಕ್ಕೆ ಸಮಾಧಾನಗಳನ್ನು ಹೆಣೆದಿದ್ದಾರೆ; ಅದು ಸಹಜವೇ. ಶಿಲ್ಪಶಾಸ್ತ್ರ ಇಷ್ಟು ಸಮೃದ್ಧವಾಗಿ ಬೆಳೆದಿದ್ದರೂ ಈ ಪ್ರಸಿದ್ಧದೇವತೆ ಹಾಗೆಯೇ ಉಳಿದಿರುವುದಕ್ಕೆ ವಿವರಣೆ ಬೇಡವೆ? ಇಂದ್ರದ್ಯುಮ್ನನು ಪಡೆದುಕೊಂಡುದು ದೇವತಾಸನ್ನಿಧಾನ ವಿದ್ದ ದಾರು; ಸಾಗರದಿಂದ ರೋಹಿಣೀಕುಂಡಕ್ಕೆ ತೇಲಿಬಂದುದು. ಅದನ್ನು ಎಳೆತಂದು ಚತುರಶಿಲ್ಪಿಗಳಿಂದ ಅದರಲ್ಲಿ ದೇವತಾಮೂರ್ತಿಗಳನ್ನು ಕಡೆಯಿಸಿದ. ಸಿದ್ಧವಾಗುವ ಮುನ್ನ ಶಿಲ್ಪಕಾರ್ಯವನ್ನು ಕಾಣಲಾಗದೆನ್ನು ನಿರ್ಬಂಧವಿದಿತು; ಉಳಿಗಳ ಸದ್ದು ಅಡಗಿದೊಡನೆ ಆತುರದಿಂದ ರಾಜ ಕೋಣೆಯ ಬಾಗಿಲು ತೆರೆಯಿಸಿದ ಇನ್ನೂ ಅರ್ಧಮರ್ಧ ಕೆಲಸ ಆಗಿ ಉಳಿದಿದ್ದ ಮೂರ್ತಿಗಳು, ರಾಜನು ನಿರ್ಬಂಧವನ್ನು ಮುರಿದ ಕಾರಣ ಹಾಗೆಯೇ ಉಳಿದುವು. ರಾಣೀ ಗುಂಡೀಚ ಎನ್ನುವವಳ ಆತುರ ಕಾರಣವೆಂದು ಇನ್ನೊಂದು ಕಥೆ. ಎಂದರ ಈ ಮೂರ್ತಿಗಳು ಅಪೂರ್ಣಕೃತಿಗಳು. ಎಷ್ಟು ಪೂರ್ಣವಾದರೂ ಶಿಲ್ಪಶಾಸ್ತ್ರಸಮ್ಮತವಾದ ರೂಪ ಅದರ ಮೂಡಿಬರುವುದು ಸಾಧ್ಯವೇ ಇಲ್ಲವೆಂದು ಯಾರಾದರೂ ಕಾಣಬಹುದು. ಗೌಡೀಯ ವೈಷ್ಣವರ ವಿವರ ಇನ್ನೊಂದು ರೀತಿಯದು. ನಂದನ ಅರಮನೆಯಲ್ಲಿ ಕೃಷ್ಣನ ಅಷ್ಟಮಹಿಷಿಯರಿಗೆ ಬೃಂದೆ ಕೃಷ್ಣನ ಬೃಂದಾವ ಲೀಲೆಗಳನ್ನು ಹೇಳುತ್ತಿದ್ದಳು; ಗಂಡಸರು ಯಾರೂ ಒಳಗೆ ಬರದಿರಲೆಂದು ಸುಭದ್ರೆ ಬಾಗಿಲು ಕಾಯುತ್ತಿದ್ದಳ ಅಷ್ಟರಲ್ಲಿ ಬಲರಾಮ, ಕೃಷ್ಣರು ಅಲ್ಲಿಗೆ ಬಂದರು, ಸುಭದ್ರೆ ಅವರನ್ನು ತಡೆದಳು. ಆದರೆ ಬಾಗಿಲ ಬಳಿಯೆ

ನಿಂತು ಅವರು ಕಥೆಗಳನ್ನು ಕೇಳುತ್ತಿದ್ದರು. ಗೋಪಿಕಾವಿರಹದ ಪ್ರಸ್ತಾಪವನ್ನು ಕೇಳುತ್ತ ಕೇಳುತ್ತ ಅವರಿಗೆ 'ಮಹಾಭಾವ' ಒದಗಿ, ಅವರ ದೇಹದಲ್ಲಿ ಸಾತ್ತ್ವಿಕ ವಿಕಾರಗಳು ನಡೆಯತೊಡಗಿದುವು. ಮುಖ ಮಾತ್ರ ಹಿಗ್ಗಿ, ಕಣ್ಣುಗಳು ಅರಳಿ, ಕೈಕಾಲುಗಳು ಕೃಶಿಸತೊಡಗಿದುವು; ಅಲ್ಲಿದ್ದ ಮೂರೂ ಮಂದಿಯು ಮೈ ಕರಗತೊಡಗಿತು. ರಾಧೆಯ ಘಟ್ಟ ಮುಟ್ಟುವವೇಳೆಗೆ ಅವರಿಗೆ ಈಗ ಕಾಣುವ ರೂಪ ಒದಗಿದ್ದಿತು! ಕಥೆಗಳು ಸ್ವಾರಸ್ಯವಾಗಿದ್ದರೂ, ಇಂದ್ರದ್ಯುಮ್ನನು ಮರದ ದಿಮ್ಮಿಯಿಂದ ಮೂರ್ತಿಗಳನ್ನು ಕಡೆಯಿಸಿದುದು ಜರಾಶಬರನ ಕೈಯಲ್ಲಿ ಎನ್ನುವುದು ಗಟ್ಟಿಯಾಗಿ ನಿಲ್ಲುವ ವಿವರ. ಈಗಲೂ ಮೂರ್ತಿಗಳನ್ನು ಕಡೆಯುವವರು ಈ ಆದಿವಾಸಿ ಜನರೇ. ಅವರ ಪದ್ಧತಿಯಂತೆ ರೂಪ ಅಂದಿಗೆ ಸಿದ್ಧವಾಯಿತು; ಸಂಪ್ರದಾಯ ಶಿಥಿಲವಾಗದೆ ಅದೇ ರೂಪ ಉಳಿದು ಬಂದಿತು.

ಜಗನ್ನಾಥ ಕ್ಷೇತ್ರದಲ್ಲಿನ ಸ್ವಾರಸ್ಯಗಳಲ್ಲಿ ಈ ಮೂರ್ತಿಗಳು ದಾರುಮಯವಾದುವು ಎಂಬುದೊಂದು. ಇವು ಮೂಲಮೂರ್ತಿಗಳಾದರೂ ವರ್ಷದಲ್ಲಿ ಎರಡು ಬಾರಿ (ಆಷಾಢ ಶುಕ್ಲ ದ್ವಿತೀಯಾದಲ್ಲಿ ನಡೆಯುವ ರಥಯಾತ್ರೆ ಮತ್ತು ಜ್ಯೇಷ್ಠ ಪೂರ್ಣಿಮಾದಲ್ಲಿ ನಡೆಯುವ ಸ್ನಾನಯಾತ್ರೆ) ಅವೇ ಗರ್ಭಗುಡಿಯಿಂದ ಹೊರಗೆ ಬರುತ್ತವೆ ಎಂಬುದಿನ್ನೊಂದು. 'ಚಲಾಚಲ' ಬೇರಗಳು ಎನ್ನಬಹುದು. ಮೇಲಾಗಿ, ಈ ಮೂರ್ತಿಗಳನ್ನು ಕಾಲಕಾಲಕ್ಕೆ ಹೊಸದಾಗಿ ಮಾಡಿಸುವ ಪದ್ಧತಿಯೂ ಇಲ್ಲಿದೆ. ವರ್ಷದ ಆಷಾಢಮಾಸದಲ್ಲಿ ಎರಡು ಹುಣ್ಣಿಮೆಗಳು ಬಂದಾಗ ಈ ವಿಧಿ ನಡೆಯುತ್ತದೆ; ಇದಕ್ಕೆ 'ನವಕಳೇವರ'ವೆಂದು ಹೆಸರು. ಸಾಮಾನ್ಯವಾಗಿ ಹನ್ನೆರಡು ಅಥವಾ ಹತ್ತೊಂಬತ್ತು ವರ್ಷಗಳಿಗೆ ಒಮ್ಮೆ ಈ ಸಂದರ್ಭ ಒದಗುತ್ತದೆ. ಕಳೆದ ನೂರು ವರ್ಷಗಳಲ್ಲಿ ಐದುಬಾರಿಯಷ್ಟೇ ನವಕಳೇವರ ವಿಧಿ ನಡೆದುದು; ಕಡೆಯದು 1969 ರಲ್ಲಿ ನಡೆಯಿತು, ಅದಕ್ಕೆ ಮೊದಲು ಹತ್ತೊಂಬತು ವರ್ಷಗಳ ಹಿಂದೆ ನಡೆದಿದ್ದಿತು. ಈ ವಿಧಿಯಲ್ಲಿ ರಾಜನ ಆಜ್ಞಾಪತ್ರ ಪಡೆದು ದಯಿತರೂ (ಎಂದರೆ ಶಬರ ಜನರು), ವಿದ್ಯಾಪತಿ (ಬ್ರಾಹ್ಮಣ ಪುರೋಹಿತ) ಮತ್ತಿತರರೂ ಬಡಗಿಗಳೊಂದಿಗೆ ನಾಲ್ಕು ಗುಂಪುಗಳಲ್ಲಿ ಹೊರಟು, ಕಕಟಪುರದ ಮಂಗಳಾ ದೇವಿಯ ಆಜ್ಞೆಯನ್ನು ಸ್ವಪ್ನದಲ್ಲಿ ಪಡೆದು ಕಾಡಿಗೆ ಹೋಗಿ ಅಲ್ಲಿ ಸೂಕ್ತವಾದ ಮರವೊಂದನ್ನು ಹುಡುಕುತ್ತಾರೆ. ನಿಂಬ ಜಾತಿಯ ಮರ ಪ್ರಶಸ್ತವಾದುದು; ಮರಕ್ಕೆ ನಾಲ್ಕು ಕೊಂಬೆಗಳು ಕ್ರಿಮಿಕೀಟಗಳಿಂದ ಅಥವಾ ಹಕ್ಕಿಗಳಿಂದ ಯಾವ ಗಾಸಿಗೂ ಒಳಗಾಗದಂತಿರಬೇಕು; ಮರದ ಬುಡದಲ್ಲಿ ಹಾವುಗಳು ಕಾಣಿಸಿಕೊಳ್ಳಬೇಕು; ಹತ್ತಿರ ನದಿಯೊಂದು ಹರಿಯುತ್ತಿರಬೇಕು; ಸ್ಮಶಾನ ದೂರ ಇರಬಾರದು. ಇಷ್ಟೆಲ್ಲ ವಿವರಗಳೂ ಒಂದಾದರೆ ಆ ಮರವೇ ಸರಿಯಾದುದೆಂದು ಆರಿಸಿಕೊಳ್ಳುತ್ತಾರೆ.

ಆಯ್ಕೆಯಾದೊಡನೆ 'ದಯಿತ' ರಲ್ಲಿ ಮುಂದಾಳು ಮರಕ್ಕೆ ಮಾಲೆ ಹಾಕುತ್ತಾನೆ; ಮೂರು ದಿನಗಳು ದಯಿತರು ಅಲ್ಲಿಯೇ ಕುಳಿತು ಧ್ಯಾನಮಾಡುತ್ತಾರೆ. ಅನಂತರ ಮರದೆದುರು ವನಯಾಗ ನಡೆಯುತ್ತದೆ. ವಿದ್ಯಾಪತಿಯು ಬಂಗಾರದ ಕೊಡಲಿಯನ್ನು ಮರಕ್ಕೆ ಮುಟ್ಟಿಸಿದನಂತರ ಬಡಗಿಗಳು ಮರವನ್ನು ಕಡಿದು, ನಾಲ್ಕು ದಿಮ್ಮಿಗಳನ್ನು ಸಿದ್ಧಪಡಿಸಿ ಅವನ್ನು ಬಂಡಿಗಳ ಮೇಲಿರಿಸಿ ಉತ್ಸವದಿಂದ ಊರಿಗೆ ತರುತ್ತಾರೆ. ತಂದು ಉತ್ತರದ್ವಾರದಿಂದ ದೇವಾಲಯ ಪ್ರವೇಶಮಾಡಿಸಿ 'ಕೈವಲ್ಯವೈಕುಂಠ' ವೆಂಬ ಸ್ಥಳದಲ್ಲಿರಿಸಿ, ದಾರು ಗೃಹವನ್ನು ಏರ್ಪಡಿಸಿ ಶಬರ ಬಡಗಿಗಳು ಗುಟ್ಟಾಗಿ ಮೂರ್ತಿಗಳನ್ನು ಕಡೆಯುತ್ತಾರೆ. ಮೂರ್ತಿಗಳು ಸಿದ್ಧವಾದ ನಂತರ ಕೃಷ್ಣಪಕ್ಷದ ಚತುರ್ದಶಿ ಅರ್ಧರಾತ್ರಿಯ ಸಮಯದಲ್ಲಿ 'ಘಟಪರಿವರ್ತನ' ಸಮಾರಂಭ ನಡೆಯುತ್ತದೆ. ಆಗ ಹಳೆಯ ಮೂರ್ತಿಗಳಲ್ಲಿದ್ದ 'ಬ್ರಹ್ಮ' ವನ್ನು ಹೊಸ ಮೂರ್ತಿಗಳಲ್ಲಿ ಸೇರಿಸುವ ರಹಸ್ಯ ವಿಧಿ ಜರುಗುತ್ತದೆ. ಹೀಗೆ 'ನವಕಳೇವರ' ಪೂಜಾಮೂರ್ತಿಯಾಗುತ್ತದೆ. ದಾರುಮಯ ಮೂರ್ತಿಯಲ್ಲಿ ಕೃಷ್ಣನ 'ಪಿಂಡ' ಇದೆ

ನಿಂತು ಅವರು ಕಥೆಗಳನ್ನು ಕೇಳುತ್ತಿದ್ದರು. ಗೋಪಿಕಾವಿರಹದ ಪ್ರಸ್ತಾಪವನ್ನು ಕೇಳುತ್ತ ಕೇಳುತ್ತ ಅವರಿಗೆ 'ಮಹಾಭಾವ' ಒದಗಿ, ಅವರ ದೇಹದಲ್ಲಿ ಸಾತ್ತ್ವಿಕ ವಿಕಾರಗಳು ನಡೆಯತೊಡಗಿದುವು. ಮುಖ ಮಾತ್ರ ಹಿಗ್ಗಿ, ಕಣ್ಣುಗಳು ಅರಳಿ, ಕೈಕಾಲುಗಳು ಕೃಶಿಸತೊಡಗಿದುವು; ಅಲ್ಲಿದ್ದ ಮೂರೂ ಮಂದಿಯ ಮೈ ಕರಗತೊಡಗಿತು. ರಾಧೆಯ ಘಟ್ಟ ಮುಟ್ಟುವವೇಳೆಗೆ ಅವರಿಗೆ ಈಗ ಕಾಣುವ ರೂಪ ಒದಗಿದ್ದಿತು! ಕಥೆಗಳು ಸ್ವಾರಸ್ಯವಾಗಿದ್ದರೂ, ಇಂದ್ರದ್ಯುಮ್ನನು ಮರದ ದಿಮ್ಮಿಯಿಂದ ಮೂರ್ತಿಗಳನ್ನು ಕಡೆಯಿಸಿದುದು ಜರಾಶಬರನ ಕೈಯಲ್ಲಿ ಎನ್ನುವುದು ಗಟ್ಟಿಯಾಗಿ ನಿಲ್ಲುವ ವಿವರ. ಈಗಲೂ ಮೂರ್ತಿಗಳನ್ನು ಕಡೆಯುವವರು ಈ ಆದಿವಾಸಿ ಜನರೇ. ಅವರ ಪದ್ಧತಿಯಂತೆ ರೂಪ ಅಂದಿಗೆ ಸಿದ್ಧವಾಯಿತು; ಸಂಪ್ರದಾಯ ಶಿಥಿಲವಾಗದೆ ಅದೇ ರೂಪ ಉಳಿದು ಬಂದಿತು.

ಜಗನ್ನಾಥ ಕ್ಷೇತ್ರದಲ್ಲಿನ ಸ್ವಾರಸ್ಯಗಳಲ್ಲಿ ಈ ಮೂರ್ತಿಗಳು ದಾರುಮಯವಾದುವು ಎಂಬುದೊಂದು. ಇವು ಮೂಲಮೂರ್ತಿಗಳಾದರೂ ವರ್ಷದಲ್ಲಿ ಎರಡು ಬಾರಿ (ಆಷಾಢ ಶುಕ್ಲ ದ್ವಿತೀಯಾದಲ್ಲಿ ನಡೆಯುವ ರಥಯಾತ್ರೆ ಮತ್ತು ಜ್ಯೇಷ್ಠ ಪೂರ್ಣಿಮಾದಲ್ಲಿ ನಡೆಯುವ ಸ್ನಾನಯಾತ್ರೆ) ಅವೇ ಗರ್ಭಗುಡಿಯಿಂದ ಹೊರಗೆ ಬರುತ್ತವೆ ಎಂಬುದಿನ್ನೊಂದು. 'ಚಲಾಚಲ' ಬೇರಗಳು ಎನ್ನಬಹುದು. ಮೇಲಾಗಿ, ಈ ಮೂರ್ತಿಗಳನ್ನು ಕಾಲಕಾಲಕ್ಕೆ ಹೊಸದಾಗಿ ಮಾಡಿಸುವ ಪದ್ಧತಿಯೂ ಇಲ್ಲಿದೆ. ವರ್ಷದ ಆಷಾಢಮಾಸದಲ್ಲಿ ಎರಡು ಹುಣ್ಣಿಮೆಗಳು ಬಂದಾಗ ಈ ವಿಧಿ ನಡೆಯುತ್ತದೆ; ಇದಕ್ಕೆ 'ನವಕಳೇವರ'ವೆಂದು ಹೆಸರು. ಸಾಮಾನ್ಯವಾಗಿ ಹನ್ನೆರಡು ಅಥವಾ ಹತ್ತೊಂಬತ್ತು ವರ್ಷಗಳಿಗೆ ಒಮ್ಮೆ ಈ ಸಂದರ್ಭ ಒದಗುತ್ತದೆ. ಕಳೆದ ನೂರು ವರ್ಷಗಳಲ್ಲಿ ಐದುಬಾರಿಯಷ್ಟೇ ನವಕಳೇವರ ವಿಧಿ ನಡೆದುದು; ಕಡೆಯದು 1969 ರಲ್ಲಿ ನಡೆಯಿತು, ಅದಕ್ಕೆ ಮೊದಲು ಹತ್ತೊಂಬತು ವರ್ಷಗಳ ಹಿಂದೆ ನಡೆದಿದ್ದಿತು. ಈ ವಿಧಿಯಲ್ಲಿ ರಾಜನ ಆಜ್ಞಾಪತ್ರ ಪಡೆದು ದಯಿತರೂ (ಎಂದರೆ ಶಬರ ಜನರು), ವಿದ್ಯಾಪತಿ (ಬ್ರಾಹ್ಮಣ ಪುರೋಹಿತ) ಮತ್ತಿತರರೂ ಬಡಗಿಗಳೊಂದಿಗೆ ನಾಲ್ಕು ಗುಂಪುಗಳಲ್ಲಿ ಹೊರಟು, ಕಕಟಪುರದ ಮಂಗಳಾ ದೇವಿಯ ಆಜ್ಞೆಯನ್ನು ಸ್ವಪ್ನದಲ್ಲಿ ಪಡೆದು ಕಾಡಿಗೆ ಹೋಗಿ ಅಲ್ಲಿ ಸೂಕ್ತವಾದ ಮರವೊಂದನ್ನು ಹುಡುಕುತ್ತಾರೆ. ನಿಂಬ ಜಾತಿಯ ಮರ ಪ್ರಶಸ್ತವಾದುದು; ಮರಕ್ಕೆ ನಾಲ್ಕು ಕೊಂಬೆಗಳು ಕ್ರಿಮಿಕೀಟಗಳಿಂದ ಅಥವಾ ಹಕ್ಕಿಗಳಿಂದ ಯಾವ ಗಾಸಿಗೂ ಒಳಗಾಗದಂತಿರಬೇಕು; ಮರದ ಬುಡದಲ್ಲಿ ಹಾವುಗಳು ಕಾಣಿಸಿಕೊಳ್ಳಬೇಕು; ಹತ್ತಿರ ನದಿಯೊಂದು ಹರಿಯುತ್ತಿರಬೇಕು; ಸ್ಮಶಾನ ದೂರ ಇರಬಾರದು. ಇಷ್ಟೆಲ್ಲ ವಿವರಗಳೂ ಒಂದಾದರೆ ಆ ಮರವೇ ಸರಿಯಾದುದೆಂದು ಆರಿಸಿಕೊಳ್ಳುತ್ತಾರೆ.

ಆಯ್ಕೆಯಾದೊಡನೆ 'ದಯಿತ' ರಲ್ಲಿ ಮುಂದಾಳು ಮರಕ್ಕೆ ಮಾಲೆ ಹಾಕುತ್ತಾನೆ; ಮೂರು ದಿನಗಳು ದಯಿತರು ಅಲ್ಲಿಯೇ ಕುಳಿತು ಧ್ಯಾನಮಾಡುತ್ತಾರೆ. ಅನಂತರ ಮರದೆದುರು ವನಯಾಗ ನಡೆಯುತ್ತದೆ. ವಿದ್ಯಾಪತಿಯು ಬಂಗಾರದ ಕೊಡಲಿಯನ್ನು ಮರಕ್ಕೆ ಮುಟ್ಟಿಸಿದನಂತರ ಬಡಗಿಗಳು ಮರವನ್ನು ಕಡಿದು, ನಾಲ್ಕು ದಿಮ್ಮಿಗಳನ್ನು ಸಿದ್ಧಪಡಿಸಿ ಅವನ್ನು ಬಂಡಿಗಳ ಮೇಲಿರಿಸಿ ಉತ್ಸವದಿಂದ ಊರಿಗೆ ತರುತ್ತಾರೆ. ತಂದು ಉತ್ತರದ್ವಾರದಿಂದ ದೇವಾಲಯ ಪ್ರವೇಶಮಾಡಿಸಿ 'ಕೈವಲ್ಯವೈಕುಂಠ' ವೆಂಬ ಸ್ಥಳದಲ್ಲಿರಿಸಿ, ದಾರು ಗೃಹವನ್ನು ಏರ್ಪಡಿಸಿ ಶಬರ ಬಡಗಿಗಳು ಗುಟ್ಟಾಗಿ ಮೂರ್ತಿಗಳನ್ನು ಕಡೆಯುತ್ತಾರೆ. ಮೂರ್ತಿಗಳು ಸಿದ್ಧವಾದ ನಂತರ ಕೃಷ್ಣಪಕ್ಷದ ಚತುರ್ದಶಿ ಅರ್ಧರಾತ್ರಿಯ ಸಮಯದಲ್ಲಿ 'ಘಟಪರಿವರ್ತನ' ಸಮಾರಂಭ ನಡೆಯುತ್ತದೆ. ಆಗ ಹಳೆಯ ಮೂರ್ತಿಗಳಲ್ಲಿದ್ದ 'ಬ್ರಹ್ಮ' ವನ್ನು ಹೊಸ ಮೂರ್ತಿಗಳಲ್ಲಿ ಸೇರಿಸುವ ರಹಸ್ಯ ವಿಧಿ ಜರುಗುತ್ತದೆ. ಹೀಗೆ 'ನವಕಳೇವರ' ಪೂಜಾಮೂರ್ತಿಯಾಗುತ್ತದೆ. ದಾರುಮಯ ಮೂರ್ತಿಯಲ್ಲಿ ಕೃಷ್ಣನ 'ಪಿಂಡ' ಇದೆ

ಯೆಂದು ನಂಬಿಕೆ. ಅನಂತರ ಹಳೆಯ ಮೂರ್ತಿಗಳನ್ನು ಗುಡಿಯೊಳಗೆ ಕೈವಲ್ಯವೈಕುಂಠದ ಬಾವಿಗಳಲ್ಲಿ ಮುಳುಗಿಸಿಬಿಡುತ್ತಾರೆ. ಕೃಷ್ಣನ ಶವಸಂಸ್ಕಾರವಾದುದು ಇಲ್ಲಿಯೇ ಎಂದು ಪ್ರತೀತಿಯಲ್ಲವೆ?

ಈ ವಿಧಿಗೆ ಹಿನ್ನೆಲೆಯಲ್ಲಿ ಒದಗಿಸಿರುವ ವಿವರ ಹೀಗೆ. ಕೃಷ್ಣನು ತನ್ನ ಅವತಾರಕಾರ್ಯ ಮುಗಿದ ಮೇಲೆ ದ್ವಾರಕೆಯ ಪ್ರಭಾಸದ ವನಪ್ರದೇಶದಲ್ಲಿ ಮಲಗಿದ್ದಾಗ ಗಿಡಗಂಟೆಗಳ ಮೂಲಕ ಅವನ ಪಾದಗಳಷ್ಟನ್ನೇ ನೋಡಿದ ಜರಾ-ಶಬರ ಅವು ಜಿಂಕೆಯ ಕಿವಿಗಳೆಂದು ಭ್ರಮಿಸಿ ಬಾಣವಿಟ್ಟು ಕೃಷ್ಣನನ್ನು ಕೊಂದನಷ್ಟೆ. ಮುಂದೆ ನಡೆಯುವ ಹಗರಣಕ್ಕೆ ಭಯಪಟ್ಟು ಅರ್ಜುನನೂ ಜರಾಶಬರನೂ ಕೃಷ್ಣನ ಕಳೇವರವನ್ನು ಪೂರ್ವಸಮುದ್ರ ತೀರಕ್ಕೆ ಎಳೆದುತಂದು ಅಲ್ಲಿ ಈಗಿನ ಜಗನ್ನಾಥಕ್ಷೇತ್ರದ 'ಕೈವಲ್ಯ ವೈಕುಂಠ' ವೆಂಬ ಸ್ಥಳದಲ್ಲಿ ಸುಡಲು ಮೊದಲಿಟ್ಟರು. ಶಬರರು ಕೃಷ್ಣನ ಜ್ಞಾತಿಗಳಾದುದರಿಂದ ಅವನ ಆಭರಣಗಳಲ್ಲೊಂದಾದ ಇಂದ್ರನೀಲಮಣಿಯನ್ನು ಅವನ ದೇಹದಿಂದ ತೆಗೆದಿರಿಸಿಕೊಂಡು ಅದನ್ನೇ ಪೂಜಿಸುತ್ತಿದ್ದರು. ಕೃಷ್ಣನ ದೇಹ ಅರ್ಧ ಸುಟ್ಟನಂತರ ಕೈಕಾಲುಗಳಿಲ್ಲದ ರುಂಡಮುಂಡಗಳನ್ನು ಸಮುದ್ರದೊಳಗೆ ಬಿಸಾಡಿದರು; ಇದೇ ಮುಂದೆ ರೋಹಿಣೀಕುಂಡಕ್ಕೆ ತೇಲಿಕೊಂಡು ಬಂದುದು. ಜರಾಶಬರನು ಸಮುದ್ರದಲ್ಲಿ ತೇಲಿಹೋಗುತ್ತಿದ್ದ ಕೃಷ್ಣನ ದೇಹವನ್ನು ಎಳೆದು ಕೊಂಡು ಬಂದು, ಅದನ್ನು ಶಬರಪಲ್ಲಿಗೊಯ್ದು ಅಲ್ಲಿ ಪೂಜೆಮಾಡುತ್ತಿದ್ದನೆಂದೂ ಒಂದು ವಿವರ. ಅಂತೂ ಜಗನ್ನಾಥನ ದಾರುಮಯಮೂರ್ತಿ ಕೃಷ್ಣನ ಕಳೇವರ; ಅದರಲ್ಲಿರುವ ಬ್ರಹ್ಮ ಕೃಷ್ಣನ 'ಇಂದ್ರನೀಲಮಣಿ' ಯೆಂದು ಹೇಳುತ್ತಾರೆ. ಈ ದೃಷ್ಟಿಯಿಂದಲೇ ಶಬರರು ಮೊದಲಿಗೆ ಪೂಜೆಮಾಡುತ್ತಿದ್ದು ಈಗ ಜಗನ್ನಾಥ ನಾಗಿರುವ ದೇವರ ಹೆಸರು 'ನೀಲಮಾಧವ'; ಜಗನ್ನಾಥನ ಗುಡಿಯಿರುವ ಸ್ಥಳಕ್ಕೂ 'ನೀಲಾಚಲ', 'ನೀಲಾದ್ರಿ', 'ನೀಲಗಿರಿ' ಎಂದೇ ಹೆಸರು. ಆದರೆ ಸಮುದ್ರತೀರದಲ್ಲಿಯೇ ಮಟ್ಟಸವಾದ ನೆಲದಮೇಲಿರುವ ಗುಡಿ ಅದು; ಅಲ್ಲಿ ಯಾವ ಬೆಟ್ಟವಾಗಲೀ ಗುಡ್ಡವಾಗಲೀ ಕಡೆಗೆ ಮರಳುದಿಣ್ಣೆಯಾಗಲೀ ಇಲ್ಲ. ಮೊದಲಿಗೆ ಶಬರಪಲ್ಲಿ ಯಲ್ಲಿದ್ದ ನೀಲಮಾಧವನ ಗುಡಿ ಗುಡ್ಡದ ಮೇಲಿದ್ದಿತೋ ಏನೋ.

ಅಂತೂ ಜಗನ್ನಾಥನಿಗೂ ಶಬರರಿಗೂ ಮೊದಲಿನಿಂದ ಇಂದಿನವರೆಗೂ ನಂಟು ಉಳಿದಿದೆ. ದೇವಾ ಲಯದ ಪೂಜಾವ್ಯವಸ್ಥೆಯಲ್ಲಿ ಅವರ ಪಾತ್ರ ಹಿರಿದಾದುದೇ. ಮುಖ್ಯವಾದ ಎರಡು ಉತ್ಸವಗಳೆಂದರೆ ರಥ ಯಾತ್ರೆ, ಸ್ನಾನಯಾತ್ರೆ. ಎರಡರಲ್ಲಿಯೂ ಶಬರ 'ದಯಿತ'ರು ಪ್ರಮುಖವಾಗಿ ಪಾಲ್ಗೊಳ್ಳುವರು. ರಥಯಾತ್ರೆಯ ಮುನ್ನ ದೇವರಿಗೆ ಶಬರವೇಷವನ್ನೇ ತೊಡಿಸುತ್ತಾರೆ; ರಥವನ್ನೇರುವ ಮೊದಲು ದೇವರಿಗೆ ಶಬರರು ತಮ್ಮ ಪ್ರಾಚೀನ ವಿಧಿಯಂತೆ ಸೊಪ್ಪು-ನಾರು-ಬೇರಿನ ತಾಯಿತಗಳನ್ನು ಕಟ್ಟಿ ರಕ್ಷಾಬಂಧನ ವಿಧಿಯನ್ನು ನಡೆಸುತ್ತಾರೆ. ದೇವರು ರಥವನ್ನೇರಿದಮೇಲೂ ವೈದಿಕವಿಧಿಗಳೇನು ನಡೆಯುವುದಿಲ್ಲ. ಜ್ಯೇಷ್ಠಮಾಸದ ಹುಣ್ಣಿಮೆ ನಡೆಯುವ ಸ್ನಾನಯಾತ್ರೆಯಲ್ಲಿ ಮಂಚಸ್ನಾನವಿಧಿ ಇಲ್ಲಿ ವಿಶಿಷ್ಟವಾದುದು. ಆಗ ದೇವರನ್ನು ರತ್ನವೇದಿಯಿಂದ ಹೊರತಂದು ಸ್ನಾನವೇದಿಯ ಮೇಲಿರಿಸಿ ಗುಡಿಯ ಉತ್ತರಭಾಗದಲ್ಲಿರುವ 'ಬಂಗಾರ ಬಾವಿ' (ಸೋನಾ ಕುವಾ) ಯಿಂದ ನೀರನ್ನು ತಂದು ಅಭಿಷೇಕಮಾಡುತ್ತಾರೆ. ಬೇರೆ ಯಾವ ಸಂದರ್ಭದಲ್ಲಿಯಾಗಲೀ ಈ ಬಾವಿಯ ನೀರನ್ನು ಬಳಸುವುದಿಲ್ಲ; ಉಳಿದಂತೆ ಆ ನೀರನ್ನು ಯಾರೂ ಮುಟ್ಟುವುದೂ ಇಲ್ಲ. ಸೂರ್ಯರಶ್ಮಿ ತಾಕದ, ಮನುಷ್ಯರ ಮೈ ಸೋಕದ ನೀರು ಪವಿತ್ರವೆಂದು, ನಿಗೂಢಶಕ್ತಿಸಂಪನ್ನವೆಂದು ಪ್ರಾಚೀನಕಲ್ಪನೆ. ಈ ಗುಡಿಯಲ್ಲಿ 'ಬಂಗಾರ ಬಾವಿ'ಯು ಹೀಗೆಯೇ ಇದೆ.

ಸ್ನಾನವಾದನಂತರ ದೇವರನ್ನು ಹದಿನೈದು ದಿನಗಳ ಕಾಲ ಶಬರರ ವಶಕ್ಕೆ ಬಿಡುತ್ತಾರೆ. ಆ ಅನವಸರ ಸಮಯದಲ್ಲಿ ಇತರರು ದೇವರನ್ನು ನೋಡುವ ಹಾಗಿಲ್ಲ; ದೇವಾಲಯದಲ್ಲಿ ವೈದಿಕ ಸಂಸ್ಕಾರಗಳು

ನಡೆಯುವುದಿಲ್ಲ. ಶಬರ 'ದಯಿತ'ರೇ ತಮ್ಮ ಪ್ರಾಚೀನ ಪದ್ಧತಿಯಂತೆ ಆರಾಧನೆ ನಡೆಸುತ್ತಾರೆ. ಮರದ ಮೂರ್ತಿಗಳ ಮೇಲೆ ಅಭಿಷೇಕ ನಡೆದಾಗ, ಬಣ್ಣ ತೊಳೆದುಹೋಗುವುದು ಸಹಜವೇ. ಮತ್ತೆ ಮೂರ್ತಿಗಳಿಗೆ ಬಣ್ಣ ಬಳಿಯುವ, ಅಲಂಕಾರಮಾಡುವ ಕೆಲಸ ಈ ಎರಡು ವಾರಗಳಲ್ಲಿ ನಡೆಯುತ್ತದೆ. ಹದಿನಾರನೆಯ ದಿನದಂದು ರತ್ನವೇದಿಯ ಮೇಲೆ ಮೂರೂ ದೇವತೆಗಳು ಸಾರ್ವಜನಿಕದರ್ಶನಕ್ಕೆ ಸಿದ್ಧರಾಗಿರುತ್ತಾರೆ. ಶಬರರು ದೇವರ ನೆಂಟರೆಂದೂ ಒಂದು ನಂಬಿಕೆಯಿದೆ. ಒಂದು ಸಂದರ್ಭದಲ್ಲಿ ಇವರು ದೇವರೊಡಗೂಡಿ 'ಜ್ಞಾತಿಸಾರ' ವೆಂಬ ನೆಂಟರೂಟವನ್ನೂ ನಡೆಸುತ್ತಾರೆ. ತಾವು ತಿಂದು ಎಂಜಲಾದುದನ್ನೂ ದೇವರ ಬಾಯಿಗಿಡುತ್ತಾರೆ; ಇದಕ್ಕೆ 'ಸಮರ್ಪಣ ಕ್ರಿಯಾ' ಎಂದೇ ಹೆಸರಿದೆ. ಅನವಸರದಲ್ಲಿ ಶಬರರು ದೇವರೊಂದಿಗೆ ಎಡೆಬಿಡದೆ ಇರುವಾಗ ಇದು ನಡೆಯುತ್ತದೆ. ನವಕಳೇಬರವಿಧಿಯಲ್ಲಿ ಹಳೆಯ ಮೂರ್ತಿಗಳನ್ನು ಕೈವಲ್ಯ ವೈಕುಂಠದ ಬಾವಿಗಳಲ್ಲಿ ಮುಳುಗಿಸಿದನಂತರ ಶಬರರು ಹತ್ತು ದಿನ ಸೂತಕ ಇದ್ದು ಹನ್ನೊಂದನೆಯ ದಿನ ಶುದ್ಧರಾಗುವ ವಾಡಿಕೆಯೂ ಇದೆ.

ವೈದಿಕಪ್ರಭಾವದ ಸಂಸ್ಕೃತಿ ಜಗನ್ನಾಥನ ಆರಾಧನೆಯನ್ನು ಕೈಕೊಂಡಮೇಲೆ ಅದಕ್ಕೆ ಪ್ರಣವತಾತ್ಪರ್ಯ ನಿಶ್ಚಯವೂ ನಡೆಯಿತು. ಇಲ್ಲಿ ನಡೆಯುವ ನ್ಯಾಸವಿಧಿಯಲ್ಲಿ ''ಓಂ ಅಕಾರಸತ್ತ್ವಗುಣಂ ಶುಕ್ಲವರ್ಣಂ ನಮಃ ನಾಭೌ; ಓಂ ಉಕಾರ ರಜೋಗುಣಂ ರಕ್ತವರ್ಣಂ ನಮಃ ಹೃದಯೇ; ಓಂ ಮಕಾರತಮೋಗುಣಂ ಕೃಷ್ಣ ವರ್ಣಂ ನಮಃ ಮೂರ್ಧ್ನಿ'' ಎನ್ನುವ ವಿವರಗಳಿವೆ. ಬಲಭದ್ರ ಅಕಾರ, ಸುಭದ್ರೆ ಉಕಾರ, ಜಗನ್ನಾಥ ಮಕಾರ ಮೂರೂ ಕೂಡಿ ಓಂಕಾರ; ಬೇಕೆಂದರೆ, ಅರ್ಧಮಾತ್ರೆಯ ಸುದರ್ಶನವನ್ನೂ ಸೇರಿಸಿ ಚತುಷ್ಪಾದೋಂಕಾರ ವೆನ್ನಬಹುದು. ದಿಟವಾಗಿ ರತ್ನವೇದಿಯ ಮೇಲೆ ಸುದರ್ಶನ ಪ್ರತೀಕವೂ ಇರುತ್ತದೆ. ಜಗನ್ನಾಥನನ್ನು 'ದಾರುಬ್ರಹ್ಮ'ನೆಂದು ವ್ಯವಹರಿಸಿ ವೈದಿಕ ಬಣ್ಣವನ್ನೂ ಬಳಿದಿದ್ದಾರೆ. ಪುರಾಣಯುಗದಲ್ಲಿ ಜಗನ್ನಾಥನು ಗರುಡಧ್ವಜನಾದ ವಿಷ್ಣುವೆಂದೂ, ಬಲಭದ್ರನು ತಾಳಧ್ವಜನಾದ ಶಿವನೆಂದೂ, ಸುಭದ್ರೆಯು ಪದ್ಮಧ್ವಜನಾದ ಬ್ರಹ್ಮನೆಂದೂ ತ್ರಿಮೂರ್ತಿನಿರ್ದೇಶನ ಒದಗಿತು. ಅರ್ಚನಾವಿಧಿಗಳಲ್ಲಿ ವೈದಿಕ, ತಾಂತ್ರಿಕ, ಪೌರಾಣಿಕ ವಿವರಗಳೂ, ಶೈವ, ಶಾಕ್ತ, ವೈಷ್ಣವ ಸಂಪ್ರದಾಯಗಳೂ ಸಮರಸವಾಗಿ ಬೆರೆತುಕೊಂಡು ಬಂದುವು.

ಕಾಳೀಪೂಜೆಯ ಹಿನ್ನೆಲೆ

ತಾಂತ್ರಿಕನೆಲೆಯಲ್ಲಿ ಆರಂಭವಾದ ಮಾತೃಪೂಜೆಯ ಪ್ರಾಚೀನ ವಿಧಿಗಳು ಇತಿಹಾಸದ ಒತ್ತಡದಿಂದಾಗಿ ಖಂಡತುಂಡಾಗಿ ಒಡೆದು ಜಾನಪದ ಚೌಕಟ್ಟಿನಲ್ಲಿ ಉಳಿದಿವೆಯೆಂದು ತಿಳಿದೆವಷ್ಟೆ. ಈ ನೆಲೆಯಲ್ಲಿ ಉಂಡೆಯಾಗಿಯೇ ಉಳಿದು ಬಂದಿರುವ ವಿವರವೆಂದರೆ ಕಾಳೀ ಪೂಜೆ. ಒಮ್ಮೆ ದೇಶದಲ್ಲೆಲ್ಲ ಹರಡಿದ್ದ ಈ ಪ್ರಕ್ರಿಯೆ ಈಗ ಮುಖ್ಯವಾಗಿ ಬಂಗಾಳ, ಒರಿಸ್ಸಾ, ಅಸ್ಸಾಮ, ಕೇರಳಗಳಲ್ಲಿ ಕಾಣಬರುತ್ತದೆ. ನವರಾತ್ರಿಯ ಸಮಯದಲ್ಲಿ ನಡೆಯುವ ಶರತ್ಕಾಲೀನ ದುರ್ಗಾಪೂಜೆ ಪ್ರಸಿದ್ಧವೇ, ವ್ಯಾಪಕವೇ. ಕಷ್ಟಗಳನ್ನು ಪರಿಹರಿಸುವವಳು, ದುರ್ಗಮನೆಂಬ ಅಸುರನನ್ನು ಕೊಂದವಳು, ದುರ್ಗತಿನಾಶಿನಿಯಾದವಳು ದುರ್ಗೆಯೆಂಬುದು ಈಗಿನ ತಾತ್ಪರ್ಯ. ಕಾಲೀವಿಲಾಸತಂತ್ರ, ರುದ್ರಯಾಮಳ ಮೊದಲಾದ ತಾಂತ್ರಿಕಗ್ರಂಥಗಳಲ್ಲಿ ದುರ್ಗಾಪೂಜೆಯ ವಿವರಗಳು ವಿಸ್ತಾರವಾಗಿ ಬರುತ್ತವೆ. ನಾಲ್ಕು, ಎಂಟು, ಹತ್ತು, ಹನ್ನೆರಡು ಅಥವ ಹದಿನಾರು ಕೈಗಳಿದ್ದು, ಶಂಖ, ಚಕ್ರ, ಬಿಲ್ಲು, ಬಾಣಗಳನ್ನು ಹಿಡಿದು ಸರ್ವಾಲಂಕಾರ ಭೂಷಿತೆಯಾಗಿ ಸಿಂಹದ ಮೇಲೆ ಮಹಿಷಮರ್ದಿನಿಯಾಗಿ ಕುಳಿತ ಅಥವಾ ನಿಂತ ದುರ್ಗೆಯ ಆಕಾರ ಪ್ರಚಲಿತವಾಗಿದೆ. ಬಂಗಾಳದ ಕಡೆ ದುರ್ಗಾಪೂಜೆಯಲ್ಲಿ ಇಂಥದೇ ಮೂರ್ತಿಯನ್ನು ಮಣ್ಣಿನಲ್ಲಿ ಮಾಡಿ, ಪೂಜಿಸಿ, ವಿಸರ್ಜನೆಮಾಡುವ ಪದ್ಧತಿಯಿದೆ. ಅಲ್ಲಿನ

ದುರ್ಗಾಮೂರ್ತಿಯ ಇಕ್ಕೆಲಗಳಲ್ಲಿ ಕಾರ್ತಿಕೇಯ, ಗಣೇಶ. ಲಕ್ಷ್ಮಿ. ಸರಸ್ವತಿಯರನ್ನೂ ಇರಿಸುತ್ತಾರೆ. ಇವರೆಲ್ಲ ಯುದ್ಧಸನ್ನದ್ಧರಾಗಿ ಹೊರಡುವಂತೆ ಚಿತ್ರಿಸಲಾಗುತ್ತದೆ. ಆದರೆ ಮನೆಮನೆಗಳಲ್ಲಿ ಇದೇ ಮೂರ್ತಿಯನ್ನು ನವರಾತ್ರಿಯಂದು ಪೂಜಿಸುವಾಗ ದುರ್ಗೆಯು ಮನೆಯಾತನ ಮಗಳೆಂದೂ, ವರ್ಷದಲ್ಲಿ ಮೂರು ದಿನಗಳು ತನ್ನ ಮಕ್ಕಳೊಂದಿಗೆ (ಮೇಲೆ ಕಾಣಿಸಿದ ನಾಲ್ವರು) ತನ್ನ ತಂದೆಯ ಮನೆಗೆ ಬಂದು ವಾಸಿಸುವಳೆಂದೂ ನಂಬಿಕೆಯಿದೆ; ವಿಸರ್ಜನೆಯ ದಿನ ಮನೆಯವರು ಅಳುತ್ತ ದೇವಿಯನ್ನು ಕಳುಹಿಸಿಕೊಡುವುದೂ ಇದೆ. ವಿಸರ್ಜನೆಯಾಗುವಾಗ ಮಾತ್ರ ಶಬರರ ಮಾದರಿಯ ಉತ್ಸವ (ಶಬರೋತ್ಸವ) ಜರುಗುತ್ತದೆ; ಹಿರಿಯರು, ಕಿರಿಯರು ಅಶ್ಲೀಲ ಗೀತಗಳನ್ನು ಹಾಡುತ್ತ, ಮಣ್ಣುಮರಳು ಎರಚಾಡುತ್ತ, ಒಬ್ಬರನ್ನೊಬ್ಬರು ಬಯ್ದಾಡುತ್ತ ದೇವಿಯನ್ನು ನೀರಿನಲ್ಲಿ ಮುಳುಗಿಸುತ್ತಾರೆ. ಶಬರೋತ್ಸವದಲ್ಲಿ ಕಾಳಿಯೊಂದಿಗೆ ಕನ್ನಿಕೆಯರೂ ಕುಲಟೆಯರೂ ಮೆರವಣಿಗೆ ಬರುವ ವಿಧಿಯಿದೆ. ಅನಂತರ ರಾವಣನ ಮೇಲೆ ರಾಮನು ಕಾದಾಡಿ ಗೆದ್ದ ಸಂದರ್ಭವನ್ನು ನೆನಸಿಕೊಂಡು 'ವಿಜಯಾ' ವಿಧಿಯು ಜರುಗುತ್ತದೆ. ಇದು ಕ್ರಿಸ್ತಾಬ್ದ ಹದಿನಾಲ್ಕು-ಹದಿನೈದನೆಯ ಶತಮಾನಗಳಿಂದಲೂ ಬಳಿಕೆಯಲ್ಲಿ ಬಂದಿರುವ ಉತ್ಸವ.

ಚಿತ್ರ 175
ದಕ್ಷಿಣಾ ಕಾಳೀ; ನವದ್ವೀಪದ ಮೃಣ್ಮಯ ಶಿಲ್ಪ

ದುರ್ಗೆಯ ಮೂರ್ತಿಶಿಲ್ಪದಲ್ಲಿ ಮಹಿಷಾಸುರನನ್ನು ಪ್ರತಿನಿಧಿಸುವ ಎಮ್ಮೆಯ ಮೈಯಿಂದ ತಲೆಯನ್ನು ಬೇರ್ಪಡಿಸಿ, ದೇವಿಯ ಬಲಗಾಲು ಸಿಂಹದ ಮೇಲೂ ಎಡಗಾಲು ಎಮ್ಮೆಯ ಮೈಮೇಲೂ ಊರಿರುವಂತೆ ಚಿತ್ರಿಸುತ್ತಾರೆ. ದೇವಿಯ ಅಷ್ಟಶಕ್ತಿಯರು, ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ, ಚಂಡವತೀ, ಚಂಡರೂಪಾ, ಅತಿಚಂಡಾ, ಇವರೂ ಸುತ್ತ ನೆರೆದಿರುವಂತೆ ಕಲ್ಪನೆಯಿದೆ. ಮೇಲೆ ಹೇಳಿದಂತೆ, ಗಣೇಶ, ಕಾರ್ತಿಕೇಯ, ಲಕ್ಷ್ಮೀ, ಸರಸ್ವತಿಯರನ್ನು ದೇವಿಯ ಮಕ್ಕಳೆಂದು ಚಿಕ್ಕ ಚಿಕ್ಕ ಮೂರ್ತಿಗಳಲ್ಲಿ ಕಾಣಿಸುತ್ತಾರೆ. ಲಕ್ಷ್ಮೀ–ಸರಸ್ವತಿಯರ ಬದಲು ಜಯೆ–ವಿಜಯೆಯರನ್ನೂ, ರಾಧಾಕೃಷ್ಣರನ್ನೂ ಇರಿಸುವ ಬೇರೆ ಬೇರೆ ಪದ್ಧತಿಗಳಿವೆ. ಶರತ್ಕಾಲೀನ ದುರ್ಗಾ ಪೂಜೆಯಾದ ಒಂದು ತಿಂಗಳ ತರುವಾಯ, ಆ ಕಡೆ ಕಾರ್ತಿಕಮಾಸದ ಶುಕ್ಲನವಮಿಯ ದಿನ ದುರ್ಗಾ–ಜಗದ್ಧಾತ್ರಿಯ ಪೂಜೆ ನಡೆಯುತ್ತದೆ. ಚತುರ್ಭುಜೆಯಾಗಿ ಸಿಂಹದ ಮೇಲೆ ಕುಳಿತ ಈ ದೇವತೆಗೆ ನಾಗಯಜ್ಞೋಪವೀತವಿರುವುದು ಸ್ವಾರಸ್ಯ. ಶಂಖ, ಚಕ್ರ, ಧನುರ್ಬಾಣಗಳನ್ನೇ ಧರಿಸಿರುವ ಈಕೆ ಉಡುವ ಬಟ್ಟೆ ಕೆಂಬಣ್ಣದ್ದು. ಜಾನಪದ ನೆಲೆಯಲ್ಲಿ ವನದುರ್ಗೆ, ಜಯದುರ್ಗೆ ಎಂಬ ದೇವತೆಗಳ ಪೂಜೆಯೂ ನಡೆಯುವುದು. ಇವರಿಬ್ಬರೂ ಭಯಂಕರಾಕಾರದ ದೇವತೆಗಳು; ಸಾಮಾನ್ಯವಾಗಿ ದುರ್ಗೆಯ ಮೂರ್ತಿಲಕ್ಷಣಗಳೇ ಇದ್ದರೂ ಕಾರ್ಮೋಡದಂತೆ ಕರಿಬಣ್ಣದವರಾಗಿದ್ದು ಪ್ರಳಯಸಂಹಾರಸಂದರ್ಭವನ್ನು ಸಂಕೇತಿಸುತ್ತಾರೆ. ಕೈಗಳಲ್ಲಿ ಧನುರ್ಬಾಣಗಳ ಬದಲು ತ್ರಿಶೂಲ-ಖಡ್ಗಗಳಿರುತ್ತವೆ. ಪೂಜೆಗೊಳ್ಳದಿದ್ದರೆ ದೇವಿಯನ್ನೇ ಗಾಸಿಪಡಿಸುವೆವೆಂಬ ಬೆದರಿಕೆಯನ್ನು ಭಕ್ತರು ದೇವಿಗೆ ನಿವೇದಿಸಿ, ಅವಳ ಮುಂದೆ ಅಶ್ಲೀಲ ಗೀತಗಳನ್ನು ಹಾಡಿ, ಬೆತ್ತಲೆ ಕುಣಿಯುವರು!

ನವದುರ್ಗೆಯರ ಕಲ್ಪನೆಯಿದ್ದಾಗ ಶೈಲಪುತ್ರೀ, ಚಂಡಘಂಟಾ, ಕೂಷ್ಮಾಂಡೀ, ಸ್ಕಂದಮಾತಾ, ಕಾತ್ಯಾಯನೀ, ಕಾಳರಾತ್ರೀ, ಮಹಾಗೌರೀ, ದೇವದೂತೀ, ಬ್ರಹ್ಮಚಾರಿಣೀ ಎಂಬ ಬೇರೆ ಬೇರೆ ದುರ್ಗಾಮೂರ್ತಿಗಳ ಬಳಕೆಯಿರುತ್ತದೆ; ಕೆಲವು ತಾಂತ್ರಿಕಗ್ರಂಥಗಳಲ್ಲಿ ಇವರ ಮೂರ್ತಿಲಕ್ಷಣಗಳೂ ಬರುತ್ತವೆ. ದುರ್ಗಾಪೂಜೆಯ ಮುನ್ನ ಪಂಚಮಿಯದಿನ ದೇವೀಬೋಧನ (ಎಚ್ಚರಗೊಳಿಸುವುದು). ಷಷ್ಠಿಯಂದು ಅಧಿವಾಸ ಇವು ನಡೆದು ಸಪ್ತಮಿಯಿಂದಲೇ ಪೂಜೆ ಆರಂಭವಾಗುತ್ತದೆಯಷ್ಟೆ. ಅಂದು ನವಪತ್ರಿಕಾಸ್ನಾನದ ವಿಧಿಯಲ್ಲಿ ಒಂಬತ್ತು ಬಗೆಯ ಗಿಡಗಳನ್ನು (ಕದಳೀ, ಕಚ್ವೀ, ಹರಿದ್ರಾ, ಜಯಂತೀ, ಬಿಲ್ವ, ದಾಡಿಮ, ಅಶೋಕ, ಮಾನ, ಬತ್ತ) ಒಟ್ಟಿಗೆ ಸೇರಿಸಿ ಅಪರಾಜಿತಾ ಬಳ್ಳಿಯಿಂದ ಕಟ್ಟಿ, ಮದುಮಗಳಂತೆ ಈ ಕಟ್ಟಿಗೆ ಸೀರೆಯುಡಿಸಿ ಅಭಿಷೇಕ ಮಾಡುವರು. ಇದು ನವದುರ್ಗಾ ಕಲ್ಪನೆಯ ನೆರಳಿನಲ್ಲಿಯೇ ಬೆಳೆದು ಬಂದ ವಿಧಿಯೆಂದು ತೋರುತ್ತದೆ.

ಕಾಳಿಯ ಕಲ್ಪನೆಯು ಇನ್ನೂ ಪ್ರಾಚೀನಸ್ತರದ್ದು. ಚಂಡ, ಮುಂಡರೆಂಬ ದೈತ್ಯರು ದೇವಿಯ ಮೇಲೆ ನುಗ್ಗಿ ಬರಲು, ಆಕೆ ಕೋಪದಿಂದ ಕಪ್ಪಾಗಲು ಆಕೆಯ ಹಣೆಯಿಂದ ಕಾಳಿ ಉದ್ಭವಿಸಿದಳೆಂದು ಮಾರ್ಕಂಡೇಯ ಪುರಾಣ ಹೇಳುತ್ತದೆ. ಭಯಾನಕವಾದ ಮುಖವಿದ್ದ ಈ ದೇವತೆಯ ಕೈಯಲ್ಲಿ ಕತ್ತಿ, ಗದೆ, ಪಾಶಗಳಿದ್ದುವು; ತಲೆಗಳ ಮಾಲೆ ಕೊರಳ ಸುತ್ತ ಇದ್ದಿತು; ಹುಲಿಯ ಚರ್ಮ ನಡುವಿನಲ್ಲಿದ್ದಿತು; ಕೆಂಬಣ್ಣದ ನಾಲಗೆ ಹೊರಚಾಚಿ ಹಾವಿನ ಹೆಡೆಯಂತೆ ಓಲಾಡುತ್ತಿದ್ದಿತು; ಕಣ್ಣುಗಳು ಕೆಂಪಗೆ ಉರಿಯುತ್ತಿದ್ದುವು; ಅವಳ ಕೂಗು ನಾಲ್ಕೂ ದಿಕ್ಕುಗಳಲ್ಲಿ ಮೊಳಗಿತು. ಈ ಕಾಳಿಯ ಒಂದು ರೂಪಭೇದ ಬಂಗಾಳದಲ್ಲಿ ವಿಶೇಷವಾಗಿ ಪ್ರಚಲಿತವಾಗಿದೆ, ಅದು 'ದಕ್ಷಿಣಾ ಕಾಳಿ'ಯದು. ಕಲ್ಕತ್ತೆಯ ಕಾಲಿಘಟ್ಟದಲ್ಲಿ ಸತಿಯ ದಕ್ಷಿಣಪಾದಾಂಗುಲಿ ಬಿದ್ದುದರಿಂದ ಇಲ್ಲಿನ ಕಾಳಿ ದಕ್ಷಿಣಾಕಾಳಿ. ಕಾರ್ಮೋಡದಂತೆ ಕರಿಯ ಮೈ, ಭಯಂಕರವಾದ ಮುಖ, ಕೋರೆದಾಡೆಗಳು, ಹೊರಚಾಚಿ ಇಳಿಬಿದ್ದ ರಕ್ತಸಿಕ್ತ ನಾಲಗೆ, ಕೊರಳ ಸುತ್ತ ರುಂಡಮಾಲೆ, ರುಂಡಗಳಿಂದ ಹೊರಚಿಮ್ಮುವ ರಕ್ತದಿಂದ ಕೆಂಬಣ್ಣವಾದ ಮೈ, ನಡುವಿನ ಸುತ್ತ ಕೈಗಳ ಪಟ್ಟಿ, ಬೆಳಗಿನ ಸೂರ್ಯನಂತೆ ಬೆಳಗುವ ಮೂರು ಕಣ್ಣುಗಳು, ಬೆತ್ತಲೆ ಮೈ; ಮೇಲೆ ಉಪವೀತದಂತೆ ಇಳಿಬಿದ್ದ ಬುಸುಗುಟ್ಟುವ ಹಾವುಗಳು ಶವದಂತೆ ಮಲಗಿದ ಶಿವನ ಎದೆಯ ಕುಳಿತ ಈ ದಿಗಂಬರಿಯ ಸುತ್ತಲೂ ಅರಚುತ್ತಿರುವ ಹೆಣ್ಣುತೋಳಗಳು, ಇದು ದಕ್ಷಿಣಾಕಾಳಿಯ ಚಿತ್ರ.

ಇತರ ಕಾಳೀ ಭೇದಗಳಲ್ಲಿ, ಶ್ಮಶಾನಕಾಳಿ, ಭದ್ರಕಾಳಿ, ರಕ್ಷಾಕಾಳಿ, ಸಿದ್ಧಕಾಳಿ, ಗುಹ್ಯಕಾಳಿ, ಮೊದಲಾದುವಿವೆ. ಭದ್ರಕಾಳಿಯದು ಸೌಮ್ಯಾಕೃತಿ; ಸುಂದರಿಯೂ ಹೌದು. ಈಕೆಯ ಮುಖ ಕಾಡುಕಪ್ಪೆಂದೂ, ಕಣ್ಣುಗಳು ಗುಳಿಯೊಳಗೆ ಅಡಗಿದಂತೆ ಇರುವುವೆಂದೂ, ಕೆದರಿದ ಕೂದಲು ಉಳ್ಳವಳೆಂದೂ, ಹಸಿವಿನಿಂದ ಕಂಗೆಟ್ಟವಳೆಂದೂ ಕಲ್ಪನೆಯಿದೆ. ಶ್ಮಶಾನಕಾಳಿಯ ವಾಸ ಶ್ಮಶಾನದಲ್ಲಿ; ಕೆದರಿದ ಕೂದಲು, ಕೃಶವಾದ ದೇಹ, ಕಪ್ಪು ಬಣ್ಣದ ಕರಾಳ ವರ್ಣ; ಒಂದು ಕೈಯಲ್ಲಿ ಪಾನಪಾತ್ರೆ, ಇನ್ನೊಂದರಲ್ಲಿ ಆಗತಾನೆ ತುಂಡರಿಸಿದ ತಲೆ; ಹಸಿಮಾಂಸವನ್ನು ಮೆಲ್ಲುತ್ತಿರುವಂತೆ ಬಾಯಿ; ದಿಗಂಬರಿ, ಮಧುಮತ್ತೆ. ಗುಹ್ಯಕಾಳಿಯೂ ಕರಾಳವದನಳೇ, ಹೊರಚಾಚಿದ ನಾಲಗೆಯುಳ್ಳವಳೇ, ಕೋರೆದಾಡೆಗಳಿಂದ ಕೂಡಿದವಳೇ; ಆದರೆ ನಗುಮುಖಿ. ಕೊರಳಲ್ಲಿ ನಾಗಾಭರಣ, ನಾಗೋಪವೀತ; ಆಸನವೂ ನಾಗಶಯ್ಯೆಯೇ; ತಲೆಯ ಮೇಲೆ ಸಹಸ್ರಮುಖದ ಆದಿಶೇಷನ ಕೊಡೆ; ಕಿವಿಗಳ ಕುಂಡಲಗಳು ಶವದ ಮೈಗಳು; ಪಕ್ಕದಲ್ಲಿ ಮಗುವಿನಂತೆ ಶಿವ. ಈಕೆಯು ದ್ವಿಭುಜಮೂರ್ತಿ; ಭಯಾನಕ ಲಕ್ಷಣಗಳಿದ್ದರೂ ಮುಖದ ಮೇಲಿನ ಮಂದಹಾಸ ಮುಖ್ಯವಾದುದು. ರಕ್ಷಾಕಾಳಿಗೆ ಮೇಲಿನ ಲಕ್ಷಣಗಳಲ್ಲಿ ಹಲವು ಇವೆ. ಆದರೆ ಈಕೆ ಚತುರ್ಭುಜೆ; ಕತ್ತಿ, ಕಮಲಗಳು, ಶೂಲ, ಕಪಾಲ ಇವು ಆಯುಧಗಳು. ಎಡಗಾಲು ಶವದ ಮೇಲೆ, ಬಲಗಾಲು ಸಿಂಹದ ಮೇಲೆ. ಮದ್ಯವನ್ನು ಕುಡಿಯುತ್ತ, ವೀರಾಟ್ಟಹಾಸದಿಂದ ನಗುವ ಈಕೆಗೆ ಮಹಾಕಾಳಿಯೆಂದೂ ಹೆಸರಿದೆ.

ಬಂಗಾಳದಲ್ಲಿ ಕಾಳೀಪೂಜೆ ವಿಶೇಷವಾದುದು; ಕಲ್ಕತ್ತಾ ಎಂಬ ಹೆಸರಿನ ಹಿನ್ನೆಲೆ ಕಾಳಿಘಟ್ಟವೆಂದೇ. ಅಲ್ಲಿನ ಕಾಳೀದೇವಾಲಯ ಇಂದಿಗೂ ಪ್ರಸಿದ್ಧವಾದುದು, ಜನಪ್ರಿಯವಾದುದು. ಅಲ್ಲಿನ ಜನರಿಗೆ ಕಾಳೀ ಮಾತೆಯ ಮೇಲಿರುವ ಮಮತೆಯೂ ಅಸ್ವಾದೃಶವಾದುದು. ಈಗ ಬಳಕೆಯಲ್ಲಿರುವ ಅಲ್ಲಿನ ದಶಭುಜ ಸಿಂಹವಾಹಿನಿ ಕಾಳೀಮೂರ್ತಿಯ ಪ್ರಾಚೀನತೆಯನ್ನು ಕುರಿತು ವಿವಾದವಿದೆ. ಮೊದಲಿಗೆ ಶಾಕ್ತಸಂಪ್ರದಾಯದವರು ಕಾಳೀಪೂಜೆಯನ್ನು ಘಟಕ್ಕೆ, ಕಳಶಕ್ಕೆ ಸಲ್ಲಿಸುತ್ತಿದ್ದರಂತೆ; ಮೂರ್ತಿಯ ಕಲ್ಪನೆ ಇರಲಿಲ್ಲವಂತೆ. ಈಗಲೂ ದುರ್ಗಾಪೂಜೆಯ ಸಂದರ್ಭದಲ್ಲಿ ವಾಸ್ತವವಾಗಿ ಪೂಜೆ ನಡೆಯುವುದು ಪೂರ್ಣಘಟಕ್ಕೇ. ಚಚ್ಚೌಕವಾದ ಮಣ್ಣಿನ ಮೇಲೆ ಐದು ಬಗೆಯ ಧಾನ್ಯಗಳನ್ನು ಹರಡಿ, ಅದರ ಮೇಲೆ ನೀರುತುಂಬಿದ ಮಣ್ಣಿನ ಗಡಿಗೆಯನ್ನಿರಿಸುತ್ತಾರೆ. ಗಡಿಗೆಯ ಮೇಲೆ ಕುಂಕುಮದಿಂದ ಮನುಷ್ಯಾಕಾರದ ಗೊಂಬೆಯನ್ನು ಬರೆದಿರುತ್ತಾರೆ; ಇದಕ್ಕೆ ಸಿಂದೂರಪುತ್ತಳಿಯೆಂದು ಹೆಸರು. ಗಡಿಗೆಯೊಳಗೆ ಮೊಸರು–ಅಕ್ಕಿ ಕಲೆಸಿ ಹಾಕಿ, ಗಡಿಗೆಯ ಕಂಠಕ್ಕೆ ಕೆಂಪುದಾರವನ್ನು ಕಟ್ಟಿ ಗಡಿಗೆಯ ಬಾಯಮೇಲೆ ಐದುಬಗೆಯ ಎಲೆಗಳನ್ನಿರಿಸುವರು; ಅದರ ಮೇಲೆ ಮಣ್ಣಿನ ತಟ್ಟೆಯೊಂದನ್ನು ಮುಚ್ಚಿ ಅದರಲ್ಲಿ ಅಕ್ಕಿಯ ಕಾಳು, ಅಡಿಕೆಯ ಚೂರನ್ನಿರಿಸಿ ಹಸಿರು ತೆಂಗಿನ ಇಡಿಗಾಯೊಂದನ್ನು ಇರಿಸುತ್ತಾರೆ; ತೆಂಗಿನಕಾಯಿಗೆ ಕುಂಕುಮವಿಡುತ್ತಾರೆ. ಇದೇ ಪೂರ್ಣಘಟ. ಇದರಲ್ಲಿ ಕಾಳಿಯನ್ನು ಆವಾಹನೆ ಮಾಡಿ, ಅದನ್ನೇ ಕಾಳಿಯ ಪ್ರತೀಕವೆಂದು ಪೂಜಿಸುತ್ತಾರೆ. ಪೂರ್ಣಘಟದಡಿಯಲ್ಲಿ ಮಣ್ಣಿನ ವೇದಿಕೆಯ ಮೇಲೆ ಸರ್ವತೋಭದ್ರಯಂತ್ರವನ್ನು ರಚಿಸುವ ವಾಡಿಕೆಯಿದೆ.

ಕಾಳಿಯ ಪ್ರಸ್ತುತ ಪ್ರತಿಮೆಯ ಕಲ್ಪನೆ ಮತ್ತು ಅದರ ಪೂಜೆಯನ್ನು ಬಳಕೆಗೆ ತಂದವರು ನವದ್ವೀಪದ ಕೃಷ್ಣಾನಂದ ಆಗಮವಾಗೀಶರೆಂಬ ಶಾಕ್ತ ತಾಂತ್ರಿಕ ಪಂಡಿತರೆಂದು ಹೇಳುತ್ತಾರೆ. ಇವರು ಕ್ರಿ. ಶ. 1600 ರ ಸುಮಾರಿಗಿದ್ದವರು; 'ತಂತ್ರಸಾರ'ವೆಂಬ ಸುಪ್ರಸಿದ್ಧ ಗ್ರಂಥವನ್ನು ರಚಿಸಿದವರು. ಅವರು ಕಾಳೀ ಉಪಾಸಕರಾಗಿದ್ದು ಮೊದಲಿಗೆ ಪೂರ್ಣಘಟದಲ್ಲಿಯೇ ಕಾಳಿಯ ಪೂಜೆಯನ್ನು ನಡೆಸುತ್ತಿದ್ದರಂತೆ; ಒಂದು ರಾತ್ರಿ ಅವರ ಕನಸಿನಲ್ಲಿ ಕಾಳಿ ಕಾಣಿಸಿಕೊಂಡು ತನ್ನ ಸಾಕಾರಮೂರ್ತಿಯನ್ನು ಜನರಲ್ಲಿ ಬಳಕೆಗೆ ತರಬೇಕೆಂದು ಅಪ್ಪಣೆಮಾಡಿದಳಂತೆ; ತನ್ನ ಮೂರ್ತಿಯಿರಬೇಕಾದ ಬಗೆಯು ಬೆಳಗಾಗುತ್ತಲೆ ತಿಳಿಯುವುದೆಂದು ಸೂಚಿಸಿದಳಂತೆ. ಅದರಂತೆ ಕೃಷ್ಣಾನಂದರು ಬೆಳಿಗ್ಗೆ ಎದ್ದು ಮನೆಯಿಂದ ಹೊರಗೆ ಬರುತ್ತಲೇ, ಎದುರಿಗೆ ಗೊಲ್ಲರ ಹುಡುಗಿಯೊಬ್ಬಳು ಬೆರಣಿ ತಟ್ಟುತ್ತ ನಿಂತಿದ್ದುದು ಕಾಣಿಸಿತಂತೆ. ಆಲೀಢ ಭಂಗಿಯಲ್ಲಿ (ಎಂದರೆ ಬಲಗಾಲನ್ನು ಕೊಂಚ ಬಾಗಿಸಿ ಮುಂದಿಟ್ಟು ಎಡಗಾಲನ್ನು ಓರೆಯಾಗಿ ಇರಿಸಿ) ಎಡಗೈಯಲ್ಲಿ ದೊಡ್ಡ ಸೆಗಣಿಯುಂಡೆಯೊಂದನ್ನು ಹಿಡಿದು ಬಲಗೈಯಲ್ಲಿ ಸಣ್ಣ ಸೆಗಣಿಯುಂಡೆಯೊಂದನ್ನು ಎತ್ತಿ ಗೋಡೆಗೆ ಹೊಡೆಯುವಂತೆ ಹಿಡಿದು ನಿಂತಿದ್ದಳಂತೆ. ಕೃಷ್ಣಾನಂದರು ಇವಳನ್ನೇ ನೋಡುತ್ತಾ ನಿಲ್ಲಲು ಆಕೆ ನಾಚಿಕೆಯಿಂದ ನಾಲಗೆಯನ್ನು ಹೊರಚಾಚಿದಳಂತೆ. ಕೃಷ್ಣಾನಂದರಿಗೆ ಈ ಆಕಾರವೇ ಕಾಳಿಯ ಸಾಕಾರಮೂರ್ತಿಗೆ ಮೊದಲಾಕೃತಿಯೆಂದು ಭಾಸವಾಗಿ, ಅದರಂತೆಯೇ ಮಣ್ಣಿನ ಗೊಂಬೆಯೊಂದನ್ನು ಮಾಡಿಟ್ಟುಕೊಂಡು ಮನೆಯಲ್ಲಿ ಪೂಜಿಸತೊಡಗಿದರಂತೆ. ದಿನವೂ ಹೊಸದಾಗಿ ಮಣ್ಣಿನ ಕಾಳಿಕಾ ಮೂರ್ತಿಯನ್ನು ಮಾಡಿ ಪೂಜಿಸಿ, ಮರುದಿನ ಬೆಳಿಗ್ಗೆ ಅದನ್ನು ವಿಸರ್ಜಿಸುವ ಪದ್ಧತಿಯನ್ನು ಅವರು ಬಳಕೆಗೆ ತಂದರಂತೆ. ಇವರ ಪ್ರಭಾವಕ್ಕೆ ಒಳಗಾಗಿದ್ದ ಕೃಷ್ಣಚಂದ್ರನೆಂಬ ನವದ್ವೀಪದ ದೊರೆಯು ಅದೇ ಬಗೆಯ ಬೃಹತ್ಪ್ರಮಾಣದ ಕಾಳಿಕಾಮೂರ್ತಿಗಳನ್ನು ಕಾರ್ತಿಕ ಅಮವಾಸ್ಯೆಯ ದಿನ ಊರಿನಲ್ಲಿ ಪೂಜೆಮಾಡುವ ಪದ್ಧತಿಯನ್ನು ಬಳಕೆಗೆ ತಂದನೆಂದು ಪ್ರತೀತಿಯಿದೆ. ನಾಡಿಯ ಜಿಲ್ಲೆಯಲ್ಲಿಯೇ ಪ್ರತಿವರ್ಷವೂ ಕಾಳಿಯ ಹತ್ತುಸಾವಿರಕ್ಕೂ ಹೆಚ್ಚು ಮೃಣ್ಮಯಮೂರ್ತಿಗಳು ಪೂಜೆಗೊಳ್ಳುತ್ತಿದ್ದುವಂತೆ. ಕಾಳಿಯ

ಮೃಣ್ಮಯಮೂರ್ತಿಯ ಪೂಜೆ ಹದಿನಾಲ್ಕನೆಯ ಶತಮಾನಕ್ಕೂ ಹಿಂದಿನದು; ವಿದ್ಯಾಪತಿಯ 'ದುರ್ಗಾಭಕ್ತಿ ತರಂಗಿಣಿ' ಯಲ್ಲಿಯೇ ಇದರ ಪ್ರಸ್ತಾಪವಿದೆ.

ತಾಂತ್ರಿಕಪ್ರಕ್ರಿಯೆಯಲ್ಲಿ ಕಾಳಿಕಾಭೇದ ಮೂರ್ತಿಶಿಲ್ಪದ ದೃಷ್ಟಿಯಿಂದ ಸ್ವಾರಸ್ಯವಾದುದು. ವಜ್ರ ಯಾನದ ಉಗ್ರತಾರೆಯಿರಲಿ, ಇತರ ಶಕ್ತಿಯರೂ ಕಾಳಿಕಾಸ್ವರೂಪದವರೇ. ಇವರ ಮೂರ್ತಿಲಕ್ಷಣಗಳನ್ನು ಕೆಲವು ತಂತ್ರಪ್ರಕರಣಗ್ರಂಥಗಳು ವಿವರಿಸುತ್ತವೆ. ಜಯದ್ರಥಯಾಮಳದಲ್ಲಿ ಶಕ್ತಿಯರನ್ನು ನಿರ್ದೇಶಿಸುವಾಗ ಕಾಳಿಕಾ, ಡಾಂಬರಕಾಳೀ, ರಕ್ಷಾಕಾಳೀ, ಇಂದೀವರಕಾಳಿಕಾ, ಧನದಕಾಳಿಕಾ, ರಮಣೀಕಾಳಿಕಾ, ಈಶಾನ ಕಾಳಿಕಾ, ಜೀವಕಾಳೀ, ವೀರ್ಯಕಾಳೀ, ಪ್ರಜ್ಞಾಕಾಳೀ, ಸಪ್ತಾರ್ಣಕಾಳೀ ಮೊದಲಾದ ಬಗೆಗಳಿವೆ. 'ತಂತ್ರಸಾರ' ದಲ್ಲಿ ದಕ್ಷಿಣಾಕಾಳೀ, ಶ್ಮಶಾನಕಾಳೀ, ಗುಹ್ಯಕಾಳೀ, ಭದ್ರಕಾಳೀ, ಸಿದ್ಧಕಾಳೀ, ಚಾಮುಂಡಾಕಾಳೀ, ಹಂಸಕಾಳೀ, ಕಾಮಕಲಾಕಾಳೀ ಮೊದಲಾದ ಭೇದಗಳನ್ನು ಹೇಳಿದೆ. ಇವಲ್ಲದೆ ಅಭಿನವಗುಪ್ತನು 'ತಂತ್ರಾಲೋಕ' ದಲ್ಲಿ ಸೃಷ್ಟಿ ಕಾಳೀ, ಸಂಹಾರಕಾಳೀ, ಸ್ಥಿತಿಕಾಳೀ, ರಕ್ತಕಾಳೀ, ಸುಕಾಳೀ, ಯಮಕಾಳೀ, ಮೃತ್ಯುಕಾಳೀ, ರುದ್ರಕಾಳೀ ಪರಮಾರಕಕಾಳೀ, ಮಾರ್ತಂಡಕಾಳೀ, ಕಾಲಾಗ್ನಿರುದ್ರಕಾಳೀ, ಮಹಾಭೈರವಘೋರಚಂಡಕಾಳೀ ಎಂಬ ಮೂರ್ತಿಭೇದಗಳನ್ನೂ ಹೇಳಿದ್ದಾನೆ. ಇವುಗಳ ಮೂರ್ತಿ ಲಕ್ಷಣಗಳೇನೋ ಅಷ್ಟು ಸ್ಪಷ್ಟವಾಗಿಲ್ಲ. ಜೈನರ ಶಾಸನದೇವತೆಗಳಲ್ಲಿಯೂ ಕಾಳಿಕಾ, ಮಹಾಕಾಳೀ, ಶ್ಯಾಮಾ, ಚಂಡಾ, ಬಲಾ, ಅಂಬಿಕಾ (ದುರ್ಗಾ) ಮೊದಲಾದ ಕಾಳೀಭೇದಗಳು ಕಾಣಿಸಿಕೊಳ್ಳುತ್ತವೆ; ಇವಕ್ಕೆ ಮಧ್ಯಯುಗದ ಮೂರ್ತಿಶಿಲ್ಪದಲ್ಲಿ ಲಕ್ಷಣಗಳು ನಿರ್ದಿಷ್ಟವಾಗಿವೆ.

ಮಹಾಶಿಲ್ಪೋಪನಿಷತ್ತು

ಇಲ್ಲಿ ಶಿಲ್ಪಿಗಳಿಗೆ ಪರಮಾಗಮಪ್ರಾಯವಾದ ಮಹಾಶಿಲ್ಪೋಪನಿಷತ್ತಿನ ಪಾಠವನ್ನು ಕೊಟ್ಟಿದೆ. ಇದು ಯಾಜುಷಾಥರ್ವಣವೆಂದು ಪ್ರತೀತಿ, ಆದರೆ ಅಷ್ಟೇನು ಪ್ರಾಚೀನವಾದುದಲ್ಲವೆಂದು ತೋರುತ್ತದೆ. ಇಲ್ಲಿನ ಪಾಠಕ್ಕೆ ಆಕರ ದುಗ್ಗಿರಾಲದ ವಡ್ಡೆಪಾಡಿ ನಿರಂಜನ ಶಾಸ್ತ್ರಿಗಳು ತೆಲುಗಿನಲ್ಲಿ ಸಂಗ್ರಹಿಸಿರುವ 'ವಿಶ್ವ ಕರ್ಮ ಬ್ರಾಹ್ಮಣವಂಶಾಗಮಮು' (ತೆನಾಲಿ, 1934) ಎನ್ನುವ ಗ್ರಂಥ (ಪುಟಗಳು 202–204).

ಅಥಮಹಾಶಿಲ್ಪೋಪನಿಷದಂ ವ್ಯಾಖ್ಯಾಸ್ಯಾಮಃ

ಸಕಲನಿಗಮಾಗಮಸಾರ ಪಾರಗಂ ಪರಿಪಕ್ವಭಾವಭರಮಾಚಾರ್ಯಂ ಪ್ರಣಮ್ಯ ಛಾತ್ರಃ ಪರಿಪೃಚ್ಛತಿ– ಭಗವನ್, ಮೇ ಮಹಾಶಿಲ್ಪತತ್ತ್ವ ರಹಸ್ಯಂ ಬ್ರೂಹೀತಿ । ತಗ್ಂಹೋವಾಚ —

ಅಣೋರಣೀಯನ್ಮಹತೋ ಮಹೀಯದತೋ ನ ವೇದಿತುಗ್ಂ ಶಿಲ್ಪರಹಸ್ಯಗ್ಂ ಶಕ್ನೋತಿ । ಭವ ತಸ್ಮಾತ್ಸಾವಧಾನಃ । ವಾಙ್ಮನೋಗೋಚರಾತೀತಾऽನಂತ–ದಿವ್ಯತೇಜೋಮಯೋ ನಿತ್ಯೋ ನಿರ್ವಿಕಲ್ಪೋ ನಿರಂಜನೋ ನಿರಾಖ್ಯಾತೋऽತಿಶುದ್ಧೋ ದೇವ ಏಕಃ ಪರಬ್ರಹ್ಮಾ ವಿರಾಜತೇ । ಸ ವಾ ಏವಾಖಿಲಾಜಾಂಡಕೋಟೀನಾಂ ಮೂಲ ಬೀಜಂ ಭವತಿ । ತಸ್ಮಾನ್ನ ದ್ವಿತೀಯೋऽಸ್ತಿ ಕಶ್ಚಿತ್ । ಸ ನಿರಾಕಾರೋऽಪಿ ಸಾಕಾರತ್ತ್ವಂವಿಧತ್ತೇ । ನಿರಾಕಾರಸಾಕಾರವಸ್ಯ ನೈಸರ್ಗಿಕೌ ವರ್ತೇತೇ । ಜಗದುದಯ ಕಾರಣಂ ತನ್ಮನೋ ಜಾಯತೇ । ಮನಃಸಂಕಲ್ಪಾತ್ಸರ್ವಂ ಜಗತ್ಸಂಕಲ್ಪಿತಂ ಭವತಿ । ತದೇವೈವಂ ಪ್ರಾರಭ್ಯತೇ ಜಗಚ್ಛಿಲ್ಪಂ । ಯ ಇಮಾ ವಿಶ್ವಾಭುವನಾನಿ ಜುಹ್ವದ್ ಋಷಿರ್ಹೋತಾ ನಿಷಸಾದ ಪಿತಾ ನಃ । ಸ ಆಶಿಷಾದ್ರವಿಣಮಿಚ್ಛ ಮಾನಃ ಪರಮಚ್ಛದೋ ವರ ಆವಿವೇಶ । ವಿಶ್ವಾನಿ ಸೃಷ್ಟ್ಯವನ ಪ್ರಲಯರೂಪಾಣಿ ಕರ್ಮಾಣಿ ಯಸ್ಯಾಸೌ ವಿಶ್ವಕರ್ಮಾಭವತಿ । ಯಸ್ಮಿನ್ನಿದಗ್ಂ ಸರ್ವಂ ಭುವನಂ ಜಜಾನ । ಯಸ್ಮಾದಿದಗ್ಂ ಸಮಸ್ತಗ್ಂ ಸಂಕಲ್ಪ

ರೂಪಗ್ಂ ಶಿಲಂ ಪ್ರಕಲ್ಪ್ಯತೇ । ಸ ವಿಶ್ವಕರ್ಮಾ ಪರಮಾತ್ಮಾ ಭವತಿ । ಆದಿಶಿಲ್ಪಕೃತ್ತತಸ್ಸಭವತಿ ।
ಮನಸಾ ಯತ್ಸೃಜ್ಯತೇ ವಿಶ್ವಕೃದಸ್ತತ್ಸರ್ವಗ್ಂ ಶಿಲ್ಪಮೇವ ಭವತಿ ॥

ಯತ್ತದ್ವಿಧಾನಮನುಬ್ರೂಹೀತಿ ಛಾತ್ರೇಣ ಪೃಷ್ಟೋ ದೇಶಿಕಸ್ಸಪುನರುವಾಚೇತಿ—

ಯದಾ ಸ ಪರಬ್ರಹ್ಮಣಃ ಸಂಕಲ್ಪೋದಯೋ ಭವತಿ ತದೈವಾಹಂಕಾರಃ ಪ್ರಜಾಯತೇ ।
ತಸ್ಮಾತ್ಪಂಚ ಚ ಭೂತಾನಿ । ಭೂತೇಭ್ಯ ಓಷಧಯಸ್ಸರ್ವೇ । ತೇಭ್ಯೋಽನ್ನಂ, ತತಃಸ್ಥಾವರ ಜಂಗಮಃ
ಪ್ರಪಂಚೋ ಭವತಿ । ಕಾರಣಂ ಭವತ್ಯತ್ರ ಚೋಪಾದಾನಮಾಕಾಶಾದೀನಿ । ಅಖಂಡೋಽಪಿ ದೀವ್ಯತೇಽ
ಯಮೇವ ಹೃತ್ಕೋಶೇಷು ಪರಿಚ್ಛಿನ್ನಜೀವತ್ವೇನ । ವ್ಯಾಪ್ನೋತಿ ಚಾಕಾಶವತ್ಸರ್ವಂ । ಅಲಂಚಕಾರ
ನಕ್ಷತ್ರಾದಿಭಿರಾಕಾಶಂ । ಶೈಲ ಕಾನನದ್ರುಮಾದಿಭಿಶ್ಚ ವಸುಂಧರಾಂ । ನಾನಾರ್ಥಭಾಜಂ ವಾಚಗ್ಂ ಶಿಲ್ಪ
ವಿಚಿತ್ರಸುಂದ ರಾಮಕರೋತ್ । ಏವಮೇವಾಲಂ ಕೃತವಾನ್ ಪದಾರ್ಥಾನಿ ವೈ ಸರ್ವಾಣಿ । ಸರ್ವಮೇತ
ದ್ಭವತಿ ವಿಶ್ವಕೃದಶ್ಶಿಲ್ಪಂ । ಯದಾತದಾಭವಜ್ಜಗದ್ವಿಜ್ಞಾನ ಶೂನ್ಯಗ್ಂ ಸೋಽಕಾಮಯತಾತ್ಮಾನಂ ಪಂಚಾಸ್ಯಂ ।
ತದೈವಾವಿರಾಸೀತ್ತ್ರಿವೃತ್ತ್ಯೈ । ತಸ್ಯೈವ ತೇಜೋಽಂಶಾದಭವನ್ ಬ್ರಹ್ಮಣೋ ಮನುರ್ಮಯಸ್ತ್ವಷ್ಟಾ
ಶಿಲ್ಪೀ ವಿಶ್ವಜ್ಞ ಇತಿ ಪಂಚ । ತಾನೇವಗ್ಂಹೋವಾಚ ವಿಶ್ವಕರ್ತಾ । ಪ್ರವರ್ತಯತು ಲೋಕಂ ಪಂಚಕರ್ಮ
ಭಿರಿತಿ । ಪ್ರವರ್ತತ ಇತ್ಯೇತೈಃ ಪಂಚಭಿರಿತಿ ಪ್ರಪಂಚೋಭವತಿ । ಯಜ್ಞ ಏವೇದಂ ಕರ್ಮ ಕ ಯಜ್ಞಃ
ಕರ್ಮೈವ । ಶೃಣುತ ತದ್ಯಥಾ ಸೃಷ್ಟಿಸ್ಥಿತಿಲಯತಿರೋಧಾನಾನುಗ್ರಹರೂಪಾಣೀತಿ । ಏತದ್ಭವತ್ಯೇವಂ
ವಿಶ್ವಕರ್ಮಣಃ । ಕುರ್ಯಾದೇವಮೇವ ಚ ಲೋಕಸ್ಯ । ದಾತಾರೋ ಭವಂತು ಜ್ಞಾನಸ್ಯ ವಿಜ್ಞಾನಸ್ಯ
ಚ ಶಿಲ್ಪಿನಃ । ಅಧಿಷ್ಠಾತಾಹಂ ಕರ್ಮಣಃ ಸಕಲಸ್ಯ ಯಜ್ಞರೂಪಃ । ವಿಲಸಿತಮೇವಂ ಮಯ್ಯೈವ ಜಗಚ್ಛಿಲ್ಪಸ್ಯ
ಕೌಶಲಂ । ಗುಹ್ಯಮಿದಮಧ್ಯಾತ್ಮಂ । ರಹಸ್ಯಂ ಭವತಿ ಪ್ರಾಣಿನಾಮಜ್ಞೇಯಂ । ತದೇತದ್ವಿವೃಣುತ
ಲೋಕಸ್ಯ । ಪ್ರಕಲ್ಪಯತ ಯಜ್ಞಗ್ಂ । ಶಿಲ್ಪೇನ । ಶಿಲ್ಪೇನೈವೇದಮುಪಬೃಂಹಿತಂ । ಯಜ್ಞೋಭವತಿ
ಲೋಕಾನಾಂ ನಿಃಶ್ರೇಯಸೇ । ಸಿಧ್ಯೇರನ್ ವಿವಿಧಾನ್ಯಪಿ ಕಾರ್ಯಾಣಿ । ಭವತಿ ಚ ತನ್ನಾನಾವಿಧಶಿಲ್ಪ ಬಹುಳಂ ।
ಶಿಲ್ಪಾದೃತೇ ಕಿಂಚಿತ್ಸತ್ರಮಿತಿ ನೋಚ್ಯತೇನೋಚ್ಯತ ಇತಿ । ತತೋಽವಶ್ಯಂ ವಿಸೃಜತ ವಿಸೃಜತೋಪಕರಣಾನಿ
ಜ್ಯೇಷ್ಠಾಃ । ಅಭ್ಯರ್ಚನೀಯೋಽಹಂ ಯಜ್ಞೇನೈವಲೋಕಸ್ಯ । ತಾನ್ಯೇವಂವೇದಿಕುಂಡರಥ ಪಾತ್ರಾದೀನ್ಯ
ಭ್ಯೂಹಯತ । ಕಾರಯತಾಧ್ವರಾನ್ ಸರ್ವೈರಪಿಲೋಕೈರನುಶ್ರುತಿಮಿತಿ । ಏಕೈಕಸ್ಯೈಕೈಕೋಧ್ಯಕ್ಷ ಇತಿ
ವೇದಸ್ಯ । ತತ್ರಾಥರ್ವಣಃ ಶಿಲ್ಪಭೂಯಿಷ್ಠಮತ್ಯಂತಂ । ಮಂತ್ರೇಣೈವ ಸ್ವರೂಪಾಣಿ ಪ್ರಕರ್ತವ್ಯಾನಿ ।
ಧ್ಯಾನೇನೈವ ಪಶ್ಯಂತಿ ತದ್ರೂಪಂ । ರೂಪೇಣೈವ ಧ್ಯಾಯಂತೇ ತದ್ದೈವತಂ । ರೂಪಮೇವತಚ್ಛಿಲ್ಪಂ ।
ತಾನ್ಯಯೋ ದಾರು–ಶಿಲಾ–ತಾಮ್ರ–ಹಿರಣ್ಯಾ ವಿಕಾರಾಣಿ । ಮೃದಾದೀನ್ಯಥವಾನಿ । ಯದ್ಯಸ್ಯೋಕ್ತಂ ತ
ದ್ವಿಕಾರಂ ತಸ್ಯ । ಆಯತನವಂತಿ ವೈ ಸರ್ವಾಣ್ಯಪಿ ದೈವತಾನಿ । ಏವಮೇವಾಪರಾಣ್ಯಪಿ ಶಿಲ್ಪವಿಲಸಿತಾನಿ
ಕರ್ಮಾಣಿ । ಭವನ್ತ್ಯೈತಾನಿಚ ಮೋಕ್ಷಪ್ರದಾನಿ । ಸಂಪದ್ಯೇರನ್ ಸರ್ವಕಲ್ಯಾಣಾನಿ ಲೋಕಾಃ । ಸಂಚಿನು
ಯಾತ್ಪುಣ್ಯಮೇಭಿಃ ಶಿಲ್ಪೈರಿತಿ । ಬ್ರಾಹ್ಮಣಾನಾಮೇತದ್ಭವತಿ ಶಿಲ್ಪಂ । ಯದ್ಯಬ್ರಾಹ್ಮಣೋಭವೇನ್ನಶಿಲ್ಪೀತಿ ॥

ಅಬ್ರವೀದೇವಂ ಪುನರಾಚಾರ್ಯಃ ಸರ್ವಜ್ಞಃ—ಯದಾಯದಾವಹೀಯತೇ ಲೋಕಾದಸ್ಮಾಗ್ಂ
ಶಿಲ್ಪರೂಪಂ । ತದೈವಾವಿರ್ಭೂಯತೇ ಭಗವಾನ್ವಿಶ್ವಕರ್ಮಾತ್ಮನಸ್ತೇಜಸಃ ಪ್ರಕಲ್ಪ್ಯಾಕಾರಾನ್ ।
ತಸ್ಮಾದೇವ ಪ್ರಜಾಪತ್ಯೋ ಋಷಯಃ ಪ್ರಜಾಯಂತೇ ಶಿಲ್ಪವಿಭವಃ । ತೇಭ್ಯ ಏವ ಪಾರಂಪರ್ಯಗ್ಂ
ಸಮಾಗತಂ ಭವತಿ ಶೈಲ್ಪಿಕಮಾಚಾರ್ಯತ್ವಂ ಚ । ದೇವಾನಾಮಪ್ಯಾಚಾರ್ಯಾಸ್ತ ಏವ ವಿಭ್ರಾಜಂತೇ

ಮಹಾಂತಃ । ನಿರುಕ್ತಾಸ್ತೇ ಭವಂತ್ಯಾದಿಕರ್ತಾರೋ ಲೋಕ ಪ್ರವರ್ತಕಾಃ । ತದ್ವಿಧಮೇವಗ್ಂ ಶಿಲ್ಪಿಂ ದೈವಂ ಮಾನುಷಂ ಚೇತಿ । ನಾ ಭಾ ನೇದಿಷ್ಠಾದೀನ್ಯತ್ರ ಪ್ರಥಮಾನಿ । ಅನ್ಯಾನಿ ಮಾನುಷಾಣೀತ್ಯುಚ್ಯಂತೇ । ದೇವ ಮೂರ್ತಿಃ ದೇವಾಯತನೇಷ್ವ್ಯಧಿಕಂ ಭವತಿ ಸರ್ವಂ ದೈವಮಿತಿ ಚಿತ್ರಗ್ಂ ಶಿಲ್ಪಂ । ಮಾನುಷಂ ಚೈವ ಭವತಿ ಶಸ್ತ್ರಾಸ್ತ್ರಯಂತ್ರಹಲಪ್ರಾಸಾದ ವಾಪ್ಯಾಭರಣಾದೀನೀತಿ । ತಯೋರೇವಗ್ಂ ಶಿಲ್ಪಯೋರ್ಭವಂತಿ ವಾಗೀಶ್ವರೀ ಮೇರ್ವಾದೀನ್ಯುಪಕರಣಾನಿ । ಏಭ್ಯೋದಶಭ್ಯ ಏವ ಕ್ರಿಯತೇ ಸರ್ವಂ ವೈಚಿತ್ರಗ್ಂ ಶಿಲ್ಪಂ । ಅತಃ ಶಿಲ್ಪಮಾಲಾನಿ ಸರ್ವಾಣಿ । ಪೂಜನೀಯಾನಿ ಸರ್ವೇಷಾಮತೋ ಭವಂತಿ ವೈ ಶಿಲ್ಪಾನಿ । ಏಭಿಃ ಸುಖಂ ಜೀವೇಯುರ್ಲೋಕಾಃ । ಏಭಿರಾಪ್ನುಯಾನ್ನಿಃಶ್ರೇಯಸಂ । ಏಭಿರ್ಭವಂತಿ ಜಗಂತಿ ಚಕ್ಷುಷ್ಮಂತಿ । ಏಭಿಃ ಪೂಜ್ಯಂತೇತ್ರ ವೇದಸಸ್ಥ್ಯಪಥಯಶ್ಚ । ಏಭಿಃ ಪೂರ್ಣಂ ಭವತ್ವಾನಂದಂ ಚ । ಏಭಿರ್ಮುಮುಕ್ಷವಃ ಪ್ರಾಪ್ನುವಂತಿ ಮೋಕ್ಷಂ । ಇತ್ಯೇವಂ ಭವತಿ ಶಿಲ್ಪಂ । ಶಿಲ್ಪಗ್ಂ ಹ್ಯಸ್ಮಿನ್ನಧಿಗಮ್ಯತೇ । ತಸ್ಮಾಜ್ಜಗತ್ಸರ್ಜನಂ ಭವತಿ ಶಿಲ್ಪಂ । ಯಜ್ಞೋ ಭವತು ಶಿಲ್ಪಂ । ಶಿಲ್ಪಂ ವೈ ಭವತು ಯಜ್ಞಃ ಪುಣ್ಯಂ ಭವತು ಶಿಲ್ಪಂ । ಜ್ಞಾನಂ ಭವತು ವಿಜ್ಞಾನಂಚ ಶಿಲ್ಪಂ । ಲೌಕಿಕಂ ಭವತು ವೈದಿಕಂ ಚಾಪಿ ಶಿಲ್ಪಂ । ಬ್ರಾಹ್ಮಣಾನಾಮೇವೇದಗ್ಂ ಶಿಲ್ಪಂ ಭವತು । ತತ್ತ್ವಂ ಭವತಿ ಶಿಲ್ಪಂ । ರಹಸ್ಯಂಭವತಿ ಶಿಲ್ಪಂ । ಜಗತ್ಸರ್ವಗ್ಂ ಶಿಲ್ಪಮೇವ ಭವತಿ । ತದೇವ ವಿಶ್ವವರ್ಧಕಂ ಭವತ್ವಿತ್ಯುಪನಿಷತ್ ॥

ಇತಿ ಯಾಜುಷಾಥರ್ವಣ ಮಹಾ ಶಿಲ್ಪೋಪನಿಷತ್ಸಮಾಪ್ತಾ.

ಸಾರಸ್ವತ ಋಣ

ಇಂಥ ಪುಸ್ತಕವೊಂದನ್ನು ಬರೆಯುವಲ್ಲಿ ನೆರವಾದ ಎಲ್ಲ ಆಕರಗಳನ್ನೂ ಪಟ್ಟಿಮಾಡುವುದು ಕಷ್ಟ. ವೇದ, ಆಗಮ, ಪುರಾಣ, ಶಿಲ್ಪಶಾಸ್ತ್ರ, ಸಾಹಿತ್ಯ ಎಲ್ಲವೂ ನೆರವಾಗಿವೆ. ಅವುಗಳನ್ನೆಲ್ಲ ವಿಂಗಡಿಸಿ ನಿರ್ದೇಶಿಸುವುದು ಆಗದ ಮಾತು. ಮುಖ್ಯವಾದುವನ್ನು ಅಲ್ಲಲ್ಲೇ ಕಂಸಗಳಲ್ಲಿ ಕಾಣಿಸಿದೆ. ಉಳಿದಂತೆ ನೂರಾರು ಲೇಖನಗಳು ನೆರವಾಗಿವೆ, ಅವೆಲ್ಲವನ್ನೂ ಇಲ್ಲಿ ಕಾಣಿಸಬೇಕಾದುದೂ ಇಲ್ಲ. ಹತ್ತಾರು ಪುಸ್ತಕಗಳಿಂದ ಕೆಲವಾರು ಸಂಗತಿಗಳನ್ನೂ ಅಭಿಪ್ರಾಯಗಳನ್ನೂ ಪಡೆದುಕೊಂಡುದಿದೆ. ಅಷ್ಟನ್ನು ಮಾತ್ರ ಕೆಳಗೆ ಕೊಟ್ಟಿದೆ.

ಪ್ರಪಂಚ ಸಾರಸಂಗ್ರಹ (ಗೀರ್ವಾಣೇಂದ್ರ ಸರಸ್ವತಿ), ಎರಡು ಭಾಗಗಳಲ್ಲಿ, ತಂಜಾವೂರು ಸರಸ್ವತೀ ಮಹಲ್, ತಂಜಾವೂರು 1963 (ಸಂಪಾದಕರು ಶ್ರೀ ಕೆ. ಎಸ್. ಸುಬ್ರಹ್ಮಣ್ಯಶಾಸ್ತ್ರಿ), ಸಂಸ್ಕೃತಗ್ರಂಥ.

Elements of Hindu Iconography (ಟಿ. ಎ. ಗೋಪೀನಾಥರಾಯರು), ಮೂರು ಸಂಪುಟಗಳಲ್ಲಿ, ಲಾ ಪ್ರಿಂಟಿಂಗ್ ಹೌಸ್, ಮದ್ರಾಸು, 1914

The Canons of Indian Art (ತಾರಾಪದ ಭಟ್ಟಾಚಾರ್ಯ), ಫರ್ಮಾ ಕೆ. ಎಲ್. ಮುಖೋಪಾಧ್ಯಾಯ, ಕಲ್ಕತ್ತಾ, 1947

Iconography of Buddhist and Brahmanical Sculptures in the Dacca Museum (ನಲಿನೀಕಾಂತ ಭಟ್ಟಸಾಲಿ), ಧಾಕಾ ಮ್ಯೂಸಿಯಂ ಕಮಿಟಿ, ಧಾಕಾ 1924

Principles of Indian Silpa Sastra (ಫಣೀಂದ್ರನಾಥ ಬಸು), ಪಂಜಾಬ್ ಓರಿಯಂಟಲ್ ಸೀರೀಸ್, 1926

Evolution of Hindu Sects (ಸುಧಾಕರ ಚಟ್ಟೋಪಾಧ್ಯಾಯ), ಮುನ್ಷಿರಾಮ್ ಮನೋಹರ ಲಾಲ್, ನ್ಯೂದೆಹಲಿ, 1970

The Golden Germ (F. D. Bosch), Mouton & Co., S-Gravenhage, 1960

History of Indian and Indonesian Art (ಆನಂದ ಕುಮಾರಸ್ವಾಮಿ), ಡೋವರ್ ಪಬ್ಲಿಕೇಷನ್ಸ್, ನ್ಯೂಯಾರ್ಕ್, 1965

A Survey of Indian Sculpture (ಎಸ್. ಸರಸ್ವತಿ), ಫರ್ಮಾ ಕೆ. ಎಲ್. ಮುಖೋಪಾ-ಧ್ಯಾಯ, ಕಲ್ಕತ್ತಾ, 1957

Maurya and Sunga Art (ನೀಹಾರರಂಜನ ರಾಯ್), ಕಲ್ಕತ್ತಾ 1965

The Temples of Kalinga (ಎಂ. ರಾಮರಾವ್), ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ ತಿರುಪತಿ, 1965

Early Chola Temples (ಎಸ್. ಆರ್. ಬಾಲಸುಬ್ರಹ್ಮಣ್ಯಂ), ಓರಿಯಂಟ್ ಲಾಂಗ್‌ಮನ್ ನ್ಯೂದೆಹಲಿ, 1971

Hindu Polytheism (Alain Danielou), ರೂಟ್ಲೆಜ್ ಮತ್ತು ಕೀಗನ್ ಪಾಲ್, ಲಂಡನ್, 1964

Some Aspects of the History of Hinduism (ಆರ್. ಎನ್. ದಾಂಡೇಕರ್), ಪೂನಾ ವಿಶ್ವವಿದ್ಯಾನಿಲಯ, 1967

New Light on the Indus Civilization (ಕೆ. ಎನ್ ಶಾಸ್ತ್ರಿ), ಎರಡು ಭಾಗಗಳಲ್ಲಿ, ಆತ್ಮಾ ರಾಮ್ ಸನ್ಸ್, ದೆಹಲಿ 1957

The Art Heritage of India (E. B. Havell), ತಾರಪೊರೆವಾಲಾ ಸನ್ಸ್, ಮುಂಬಯಿ, 1964

The Art of Indian Asia (Heinrich Zimmer), ಎರಡು ಭಾಗಗಳಲ್ಲಿ, ಬೊಲಿಂಗೆನ್ ಸೀರಿಸ್, ನ್ಯೂಯಾರ್ಕ್, 1955

The Many Worlds of Man (Jack Conrad) ಮೆಕ್ಮಿಲನ್, ಲಂಡನ್, 1967

"Distinction in Indian Iconography" (Klaus Bruhan) ದಕ್ಕನ್ ಕಾಲೇಜ್ ರಿಸರ್ಚ್ ಬುಲೆಟಿನ್, ಸುಶೀಲ ಕುಮಾರ ದೇ ಗೌರವ ಗ್ರಂಥ, ಪೂನಾ, 1960 (ಪು. 164–248)

Indian Images (ಬಿ. ಭಟ್ಟಾಚಾರ್ಯ), ಕಲ್ಕತ್ತಾ, 1921

Bronzes of South India (ಪಿ. ಆರ್. ಶ್ರೀನಿವಾಸನ್), ಮದ್ರಾಸ್ ಸರ್ಕಾರದ ವಸ್ತು ಸಂಗ್ರಹಾಲಯದ ಬುಲೆಟಿನ್, 1963

Indian Sculpture (F. H. Gravely ಮತ್ತು ಸಿ. ಶಿವರಾಮಮೂರ್ತಿ), ಮದ್ರಾಸ್ ಸರ್ಕಾರದ ವಸ್ತು ಸಂಗ್ರಹಾಲಯ, 1960

Icons in Bronze (ಡಿ. ಆರ್. ಥಪರ್), ಏಷ್ಯ ಪಬ್ಲಿಷಿಂಗ್ ಹೌಸ್, 1961

The Art of India/Stone Sculpture, ಏಷ್ಯಾ ಸೊಸೈಟಿ, ನ್ಯೂಯಾರ್ಕ್

Development of Hindu Iconography (ಜಿತೇಂದ್ರನಾಥ ಬನರ್ಜಿ), ಕಲ್ಕತ್ತಾ ವಿಶ್ವವಿದ್ಯಾನಿಲಯ

"Gandhara Stone Carvings" (Vera Horvath), Acta Orientalia, Academiae Scientiarum Hungaricae, Tomus xxvi, Fasc. 2–3, 1972, pp.315–326